ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಸಮಗ್ರ ಶ್ಲೋಕಗಳ ಕನ್ನಡಾನುವಾದ

ಶ್ರೀಮದಾನಂದತೀರ್ಥಭಗವತ್ಪಾದರ ತಾತ್ಪರ್ಯನಿರ್ಣಯ ಹಾಗೂ

ಶ್ರೀವಾದಿರಾಜಗುರುಸಾರ್ವಭೌಮರ ಲಕ್ಷಾಲಂಕಾರದೊಂದಿಗೆ

ಭಾಗ–28

ಶಾಂತಿಪರ್ವ – ಮೋಕ್ಷಧರ್ಮಪರ್ವ

ಪ್ರಕಾಶಕರು:

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ಭಾಗ-೨೮

ಶಾಂತಿಪರ್ವ - ಮೋಕ್ಷಧರ್ಮಪರ್ವ

ಸಮಗ್ರ ಶ್ಲೋಕಗಳ ಕನ್ನಡಾನುವಾದ

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜಗುರುಸಾರ್ವಭೌಮರ

ಲಕ್ಷಾಲಂಕಾರದೊಂದಿಗೆ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ಡಾ॥ ಬೆ.ನಾ. ವಿಜಯೀಂದ್ರಾಚಾರ್ಯ, ಮೈಸೂರು.

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ ಶಾಂತಿಪರ್ವ - ಮೋಕ್ಷಧರ್ಮಪರ್ವ-ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಈ ಕೃತಿಯು ತ್ರೈಲೋಕ್ಯಾಚಾರ್ಯ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಂದ ಪ್ರತಿಷ್ಠಿತನಾದ ಉಡುಪಿ ಶ್ರೀಕೃಷ್ಣನ ಸನ್ನಿಧಾನದಲ್ಲಿ ಪರಮಪೂಜ್ಯ ಶ್ರೀ ಶ್ರೀವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಶುಭಸಂದರ್ಭದಲ್ಲಿ ಅನೇಕ ಪೀಠಾಧಿಪತಿಗಳ ಮತ್ತು ಸಾಧಕರ ಸಮಕ್ಷಮದಲ್ಲಿ ಅನಾವರಣಗೊಂಡಿತು.

ಶಾಂತಿಪರ್ವ - ಮೋಕ್ಷಧರ್ಮಪರ್ವ- ಭಾಗ ೨೮

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-88813-32-7

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	XXIV + 684 = 708
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 500/-**
ಅನುವಾದಕರು	-	ಡಾ॥ ಬೆ.ನಾ. ವಿಜಯೀಂದ್ರಾಚಾರ್ಯ ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಸಂಸ್ಕೃತ ಶ್ಲೋಕ ಲಿಪ್ಯಂತರ	-	ಶ್ರೀ ಸುಬ್ಬಣ್ಣ, ಬೆಂಗಳೂರು
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಎಂ. ಶರತ್ ಚಂದ್ರ, ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್ ಮೈಸೂರು. ಮೊ : 7899779255
ಮುದ್ರಕರು	-	**ಪವನ್ ಪ್ರಿಂಟರ್ಸ್**, ಚಾಮರಾಜಪೇಟೆ, ಬೆಂಗಳೂರು ಮೊ : 9686489131
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಾಸಿಷ್ಠಕೃಷ್ಣ ಮಮ ದೇಹಿ ಕರಾವಲಂಬಮ್



ನವನವಗುಣಸಾಂದ್ರಂ ನೌಮಿ ಮಧ್ವಾಖ್ಯಚಂದ್ರಮ್



ಶ್ರೀಮದ್ವಾದಿರಾಜಕೇಸರಿಣೇ ನಮಃ



ವಿದ್ಯಾಮಾನ್ಯಾನ್ಮನೀನ್ನುಮಃ

ಜಗದ್ಗುರು ಶ್ರೀಮನ್ಮಧ್ವಾಚಾರ್ಯಮೂಲಮಹಾಸಂಸ್ಥಾನಮ್

ಪರಮಪೂಜ್ಯ ಶ್ರೀಶ್ರೀವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀ ಹೃಷೀಕೇಶತೀರ್ಥ ಸಂಸ್ಥಾನಮ್, ಶ್ರೀಪಲಿಮಾರು ಮಠ, ಉಡುಪಿ.

ಅನುಗ್ರಹ ಸಂದೇಶ

'ಭಾರತಂ ಸರ್ವಶಾಸ್ತ್ರೇಷು' ಎಂಬ ವಚನವು ಮೋಕ್ಷಧರ್ಮವನ್ನು ಚೆನ್ನಾಗಿ ಅಧ್ಯಯನ ಮಾಡಿದಾಗ ಮನದಟ್ಟಾಗುತ್ತದೆ. ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಭಗವದ್ಗೀತೆಗೆ ವ್ಯಾಖ್ಯಾನ ಮಾಡುತ್ತಾ ಮಹಾಭಾರತದ ಮೋಕ್ಷಧರ್ಮ ವಚನಗಳನ್ನೇ ಉದಾಹರಿಸಿರುತ್ತಾರೆ. ಅರ್ಥಾತ್ ಮಹಾಭಾರತದಲ್ಲಿಯೇ ವ್ಯಾಖ್ಯಾನ-ವ್ಯಾಖ್ಯೆಯ ಭಾಗಗಳನ್ನು ತುಂಬಾ ಸುಂದರವಾಗಿ ನಿರೂಪಿಸಿರುತ್ತಾರೆ. ಜೀವರ ಆತ್ಯಂತಿಕ ಸುಖಕ್ಕೆ ಕಾರಣವಾದ ತತ್ತ್ವ ಜ್ಞಾನವೆಂದರೆ ವಿಷ್ಣುಸರ್ವೋತ್ತಮತ್ವ ಜ್ಞಾನ. ವಿಷ್ಣುವಿನ ಸರ್ವೋತ್ತಮತ್ವವು ಭಗವದ್ಗೀತೆಯಲ್ಲಿ ಸ್ಫುಟವಾಗಿ, ವಿಸ್ತಾರವಾಗಿ ನಿರೂಪಿಸಲ್ಪಟ್ಟಿದೆ. ವಿಭೂತಿ ಯೋಗದಲ್ಲಿ ಕೃಷ್ಣನು ಅರ್ಜುನನಿಗೆ ತನ್ನ ವ್ಯಾಪ್ತರೂಪಗಳ ಬಗ್ಗೆ ವಿಸ್ತಾರವಾಗಿಯೇ ವಿವರಿಸಿದ್ದಾನೆ. **'ಆದಿತ್ಯಾನಾಮಹಂ ವಿಷ್ಣುಃ'**, **'ರುದ್ರಾಣಾಂ ಶಂಕರಃ'** **'ಮಹರ್ಷೀಣಾಂ ಭೃಗುಃ'** **'ಸರ್ವವೃಕ್ಷಾಣಾಂ ಅಶ್ವತ್ಥಃ'** **'ನಾಗಾನಾಂ ಅನಂತಃ'** **'ದೈತ್ಯಾನಾಂ ಪ್ರಹ್ಲಾದಃ'** **'ವೃಷ್ಣೀನಾಂ ವಾಸುದೇವಃ'** – ಹೀಗೆ ಕೃಷ್ಣ ತನ್ನ ವಿಭೂತಿ ರೂಪಗಳನ್ನು ಪ್ರತಿಪಾದಿಸಿರುತ್ತಾನೆ. ಈ ಕೃಷ್ಣನ ವಚನಗಳಿಗೆ ಶ್ರೀಮದಾಚಾರ್ಯರು ಮೋಕ್ಷಧರ್ಮದ ವಚನವನ್ನೇ ಪ್ರಮಾಣವನ್ನಾಗಿ ನೀಡಿರುತ್ತಾರೆ.

ಗತಿಶ್ಚ ಸರ್ವಭೂತಾನಾಂ ಪ್ರಜಾನಾಂ ಚಾಪಿ ಭಾರತ ।
ವ್ಯಾಪ್ತೌ ಮೇ ರೋದಸೀ ಪಾರ್ಥ ಕಾಂತಿಶ್ಚಾಭ್ಯಧಿಕಾ ಮಮ ॥
ಅಧಿಭೂತನಿವಿಷ್ಟಶ್ಚ ತದಿಚ್ಛುಶ್ಚಾಸ್ಮಿ ಭಾರತ ।
ಕ್ರಮಣಾಚ್ಚಾಪ್ಯಹಂ ಪಾರ್ಥ ವಿಷ್ಣುರಿತ್ಯಭಿಸಂಜ್ಞಿತಃ ॥

ಸಕಲ ಚೇತನರ ಮತ್ತು ಪಂಚಭೂತಗಳ ಪ್ರವೃತ್ತಿಗೆ ನಾನು ಕಾರಣ. ನನ್ನಿಂದ ಭೂಮ್ಯಾಕಾಶಗಳು ವ್ಯಾಪಿಸಲ್ಪಟ್ಟಿವೆ. ಅತ್ಯಧಿಕವಾದ ಸೌಂದರ್ಯ ನನ್ನಲ್ಲಿದೆ.

ಅಧಿಭೂತಗಳಲ್ಲಿ ಅಂತರ್ಯಾಮಿಯಾಗಿ ಪ್ರವೇಶಿಸಿದ್ದೇನೆ. ಅವುಗಳಿಗೆ ಜನ್ಮಾದಿಗಳನ್ನು ಬಯಸುತ್ತೇನೆ. ತ್ರಿವಿಕ್ರಮರೂಪದಿಂದ ತ್ರಿಲೋಕವನ್ನೂ ಆಕ್ರಮಿಸಿರುವೆನು. ಈ ಆರು ಕಾರಣಗಳಿಂದ ನನಗೆ ವಿಷ್ಣುವೆಂಬ ಹೆಸರಿದೆ, ಎಂದು ಮೋಕ್ಷಧರ್ಮದಲ್ಲಿದೆ.

ಹೀಗೆ **'ಆತಿತ್ಯಾನಾಮಹಂ ವಿಷ್ಣುಃ'** ಎಂಬುದಕ್ಕೆ ಶ್ರೀಮದಾಚಾರ್ಯರು ಮೋಕ್ಷಧರ್ಮದ ಆಧಾರವನ್ನು ನೀಡಿರುವ ವಿವರಣೆ. ಇದರಂತೆ 'ಮಹಾಯೋಗೇಶ್ವರೋ ಹರಿಃ' ಎಂಬ ಕೃಷ್ಣನ ವಚನಕ್ಕೆ ಸಂವಾದಿಯಾಗಿ ಮೋಕ್ಷಧರ್ಮದ ವಚನವನ್ನು ಹೀಗೆ ಉದಾಹರಿಸುತ್ತಾರೆ–

ಹರಿಃ ಸರ್ವಯಜ್ಞ ಭಾಗಹಾರಿತ್ವಾತ್-
ಇಡೋಪಹೂತಂ ಗೇಹೇಷು ಹರೇ ಭಾಗಂ ಕ್ರತುಷ್ವಹಂ ।
ವರ್ಣೋ ಮೇ ಹರಿತಃ ಶ್ರೇಷ್ಠಃ ತಸ್ಮಾದ್ಧರಿರಿತಿ ಸ್ಮೃತಃ ॥

ಸರ್ವಯಜ್ಞಗಳಲ್ಲೂ ಹವಿರ್ಭಾಗವನ್ನು ಸ್ವೀಕರಿಸುವುದರಿಂದ ಅವನು 'ಹರಿ'. 'ಯಜ್ಞಶಾಲೆಗಳಲ್ಲಿ ನಡೆಯುವ ಜ್ಯೋತಿಷ್ಟೋಮಾದಿ ಯಜ್ಞಗಳಲ್ಲಿ 'ಇಡಾ' ಎಂಬ ಮಂತ್ರಗಳಿಂದ ಕರೆದು ಕೊಡುವ ಸ್ವಭಾಗವನ್ನು ಸ್ವೀಕರಿಸುತ್ತೇನೆ. ಗೃಹಸ್ಥರ ಮನೆಗಳಲ್ಲಿ ಪಕ್ವಾನ್ನಗಳಲ್ಲಿ ಪಕ್ವಾನ್ನದಿಂದ ಮಾಡಲಾಗುವ ದೇವ, ಪಿತೃ, ಮನುಷ್ಯ, ಭೂತಯಜ್ಞಗಳಲ್ಲಿ ದಕ್ತವಾದ ಭಾಗವನ್ನು ಸ್ವೀಕರಿಸುತ್ತೇನೆ. ಮತ್ತು ನೀಲವರ್ಣಗಳಲ್ಲಿ ಶ್ರೇಷ್ಠವಾದ ನೀಲವರ್ಣ ನನ್ನದಾಗಿದೆ. ಆದುದರಿಂದ ನಾನು 'ಹರಿ' ಎನಿಸಿದ್ದೇನೆ.

ಇದರಂತೆ–

'ಸ್ಥಾನೇ ಹೃಷೀಕೇಶ ತವ ಪ್ರಕೀರ್ತ್ಯಾ
ಜಗತ್ ಪ್ರಹೃಷ್ಯತ್ಯನುರಜ್ಯತೇ ಚ ।
ರಕ್ಷಾಂಸಿ ಭೀತಾನಿ ದಿಶೋ ದ್ರವಂತಿ
ಸರ್ವೇ ನಮಸ್ಯಂತಿ ಚ ಸಿದ್ಧಸಂಘಾಃ ॥

ಎಂಬ ಶ್ಲೋಕಕ್ಕೆ ಆಚಾರ್ಯರು ನೀಡಿರುವ ವಿವರಣೆ ಮೋಕ್ಷಧರ್ಮದ ಆಧಾರದಲ್ಲಿಯೇ ಇದೆ. ಹೀಗೆ ಮೋಕ್ಷಧರ್ಮದ ನೂರಾರು ವಚನಗಳು ಪರತತ್ತ್ವದ ಪ್ರಮೇಯಗಳನ್ನು ಸ್ಫುಟವಾಗಿ ಪ್ರತಿಪಾದಿಸುವಲ್ಲಿ ಸಮರ್ಥಗಳಾಗಿವೆ.

ಇಂತಹ ಸಾರವತ್ತಾದ ಮೋಕ್ಷಧರ್ಮದ ವಿಚಾರಗಳನ್ನು ಸಜ್ಜನರಾದವರು ಸಂತತವೂ ಮನನ ಮಾಡುತ್ತಾ ಅಧ್ಯಾತ್ಮಿಕ ಸಾಧನೆಯ ಮೂಲಕ ಆತ್ಮೋನ್ನತಿಯನ್ನು ಹೊಂದಬೇಕಾಗಿದೆ. ಮೋಕ್ಷಧರ್ಮ ವಚನಗಳ ಮನನವು ನಿರಂತರವೂ ನಡೆಯಬೇಕಾಗಿದೆ. ಶ್ರೀಹರಿ-ವಾಯು-ಗುರುಗಳು ನಮ್ಮ-ನಿಮ್ಮೆಲ್ಲರಿಗೂ ಆಧ್ಯಾತ್ಮಿಕ ಸ್ಫೂರ್ತಿಯನ್ನು ಈ ಗ್ರಂಥಾಧ್ಯಯನದ ಮೂಲಕ ನೀಡಲೆಂದು ವಿಶೇಷವಾಗಿ ಪ್ರಾರ್ಥಿಸುತ್ತಾ ಈ ಗ್ರಂಥವನ್ನು ಅನುವಾದಿಸಿದ ಮೈಸೂರಿನ ವಿದ್ವಾಂಸರಾದ ಡಾ॥ ಬೆ.ನಾ. ವಿಜಯೀಂದ್ರಾಚಾರ್ಯರನ್ನು ಅಭಿನಂದಿಸುತ್ತಾ ಶ್ರೀಹರಿವಾಯುಗುರುಗಳು ಇಂತಹ ಸಾಧನೆಗಳನ್ನು ಇವರಿಂದ ಮಾಡಿಸಲಿ ಎಂದು ಪ್ರಾರ್ಥಿಸುತ್ತೇವೆ.

ಈ ಗ್ರಂಥವನ್ನು ಅಧ್ಯಯನ ಮಾಡುವ ಸಮಸ್ತ ಜಿಜ್ಞಾಸುಗಳಿಗೂ ಭಗವಂತನು ವಿಶೇಷವಾಗಿ ಅನುಗ್ರಹಿಸಲಿ.

ಶ್ರೀನಾರಾಯಣ ಸ್ಮರಣೆಗಳು

ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದಂಗಳವರು

ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಪ್ರಕಾಶಕರ ನುಡಿ

ಮೋಕ್ಷಧರ್ಮಪರ್ವದಲ್ಲಿ ಸುಮಾರು ಇನ್ನೂರು ಅಧ್ಯಾಯಗಳಿದ್ದು, ಹತ್ತು ಸಾವಿರಕ್ಕೂ ಅಧಿಕವಾದ ಶ್ಲೋಕಗಳಿಂದ ಕೂಡಿದೆ. 'ಯದಿಹಾಸ್ತಿ ತದನ್ಯತ್ರ' ಎಂಬ ವ್ಯಾಸರ ವಚನಕ್ಕೆ ಮೋಕ್ಷಧರ್ಮಪರ್ವವು ಕೈಗನ್ನಡಿಯಂತಿದೆ. ವಿಪ್ರ ಮತ್ತು ಸೇನಜಿತ್ ಇವರ ಸಂವಾದದಿಂದ ಆರಂಭವಾಗುವ ಮೋಕ್ಷಧರ್ಮಪರ್ವವು ಉಂಛವೃತ್ತಿ ಉಪಾಖ್ಯಾನದ ಮೂಲಕ ಕೊನೆಗೊಳ್ಳುತ್ತದೆ.

ಕಾಲದ ಅತಿಕ್ರಮಣಕ್ಕೆ ಅಂಜಿಕೊಂಡು ಸಾಧನೆಯನ್ನು ಮಾಡಿಕೊಳ್ಳಬೇಕು ಎಂದು ತಿಳಿಸಲು ಅನೇಕ ಸಂವಾದಗಳನ್ನು ಮೋಕ್ಷಧರ್ಮವು ಬೋಧಿಸುತ್ತದೆ. ವೈರಾಗ್ಯವೇ ಬದುಕಿನ ಭಾಗ್ಯವಾಗಲಿ ಎಂದು ಬೋಧಿಸಲು ಮಂಕಿಗೀತಾ, ಬೋಧ್ಯಗೀತಗಳನ್ನು ಅನುವಾದಿಸಿದೆ. ಪ್ರಪಂಚವು ಅನಿತ್ಯ ಎಂದು ತಿಳಿದು ವಿಷಯಪದಾರ್ಥಗಳಲ್ಲಿ ವಿರಕ್ತಿಯನ್ನು ಹೊಂದಲು ಪೂರಕವಾದ ಪ್ರಹ್ಲಾದ, ಅಜಗರ ಮುನಿಸಂವಾದವು ಪ್ರತಿಪಾದಿಸಲ್ಪಟ್ಟಿದೆ. ತತ್ತ್ವಜ್ಞಾನವೇ ಸುಖಸಾಧನವೆಂದು, ತಪಸ್ಸು-ದಾನಾದಿ ಸತ್ಕರ್ಮಗಳು ಸುಖಸಾಧನವೆಂದು ತಿಳಿಸುತ್ತಾ ಭಗವಂತನು ಮಾಡುವ ಸೃಷ್ಟಿಯ ವೈಚಿತ್ರ್ಯವನ್ನು, ಸಮಸ್ತ ಪ್ರಾಣಿಗಳ ಶರೀರದಲ್ಲಿ ಭಗವಂತನು ನಿಂತು ಮಾಡುವ ವ್ಯಾಪಾರಗಳನ್ನೂ, ಜೀವರ ಉತ್ಪತ್ತಿ, ಶರೀರ ಪ್ರಾಪ್ತಿ, ಭಗವಂತನ ನಿಯಾಮಕತ್ವ, ಬ್ರಾಹ್ಮಣಾದಿ ವರ್ಣ ಲಕ್ಷಣಗಳು, ಸ್ವರ್ಗ-ನರಕಗಳ ವರ್ಣನೆ, ಸುಖ-ದುಃಖಗಳ ವರ್ಣನೆ, ನಾಲ್ಕು ಆಶ್ರಮಧರ್ಮಗಳ ವರ್ಣನೆ, ಸದಾಚಾರದ ನಿರೂಪಣೆ, ಅಧ್ಯಾತ್ಮ ಪ್ರತಿಪಾದನೆ, ಧ್ಯಾನಯೋಗ, ಜಪಫಲ ಪ್ರತಿಪಾದನೆ - ಇವೆಲ್ಲವೂ ವಿಷದವಾಗಿ ಮೋಕ್ಷಧರ್ಮದಲ್ಲಿ ವಿವರಿಸಲ್ಪಟ್ಟಿವೆ. ಜಪಫಲವನ್ನು ಪ್ರತಿಪಾದಿಸುವ ಜಾಪಪೋಪಾಖ್ಯಾನವು ಮೋಕ್ಷಧರ್ಮದಲ್ಲಿ ಪ್ರಸಿದ್ಧವಾದುದು. ಇದರಂತೆ ಮನು-ಬೃಹಸ್ಪತಿ ಸಂವಾದ, ಬ್ರಹ್ಮದೇವರ ಮಕ್ಕಳ ವೈಭವ, ಭಗವಂತನ ವರಾಹ ಅವತಾರದ ಮಹಿಮೆ, ಗರುಡನಿಂದ ಭಗವಂತನ ಮಹಿಮೆಯ ಪ್ರತಿಪಾದನೆ, ಗುರು-ಶಿಷ್ಯ ಸಂವಾದದಲ್ಲಿ ಮೋಕ್ಷಸಾಧನ ಪ್ರತಿಪಾದನೆ, ತಪಸ್ಸು-ಉಪವಾಸಗಳ ಮಹತ್ವ ಪ್ರತಿಪಾದನೆ, ಬಲಿನಿಗ್ರಹದ ಕಥೆ, ವ್ಯಾಸ-ಶುಕ ಸಂವಾದ, ಜ್ಞಾನ-ಪ್ರಶಂಸೆ, ಯೋಗಿ ಪ್ರಶಂಸೆ, ನಾರದ-ಅಕಂಪನ ಉಪಾಖ್ಯಾನ, ತುಲಾಧಾರಕತೆ, ಚಿರಕಾರಿ ಉಪಾಖ್ಯಾನ, ಗೋ-ಕಪಿಲ ಸಂವಾದ, ಮೋಕ್ಷೋಪಾಯ ಪ್ರತಿಪಾದನ, ವೃತ್ರಗೀತಾ, ವೃತ್ರಯುದ್ಧ

ವರ್ಣನ, ಭಾರ್ಗವಚರಿತ್ರೆ, ಸಾಂಖ್ಯನಿರೂಪಣೆ, ಜನಕ–ವಸಿಷ್ಠಸಂವಾದ, ಯಾಜ್ಞವಲ್ಕ್ಯ ಜನಕಸಂವಾದ, ಸುಲಭಾ–ಜನಕ ಸಂವಾದ, ಶುಕ–ಜನಕ ಸಂವಾದ, ಶುಕ ಮಹಿಮಾ, ವ್ಯಾಸ ಮಹಿಮಾ, ಶ್ರೀಕೃಷ್ಣಮಹಿಮಾ, ನಾರದ–ನಾರಾಯಣ ಸಂವಾದ, ಬ್ರಹ್ಮ–ರುದ್ರ ಸಂವಾದ, ನಾಗ–ಬ್ರಾಹ್ಮಣ ಸಂವಾದ, ಉಂಛವೃತ್ತಿ ಬ್ರಾಹ್ಮಣನ ಕಥೆ – ಹೀಗೆ ಅನೇಕ ವಿಷಯ ವಿಭಾಗಗಳಿಂದ ಪರತತ್ತ್ವವನ್ನು ನಿರೂಪಿಸುವುದರಲ್ಲಿ ಅತ್ಯಂತ ಸಮರ್ಥವಾದ ಪರ್ವ ಮೋಕ್ಷಧರ್ಮಪರ್ವ ಎನಿಸಿದೆ. ಇಂತಹ ಮೋಕ್ಷಧರ್ಮಪರ್ವವನ್ನು ಸಂಶೋಧಿಸಿ ಅನುವಾದಿಸಿದ ಡಾ|| ಬೆ.ನಾ. ವಿಜಯೀಂದ್ರಾಚಾರ್ಯರಿಗೆ ತತ್ವ ಸಂಶೋಧನಾ ಸಂಸತ್ ವತಿಯಿಂದ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಪ್ರಾತಃಸ್ಮರಣೀಯರಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥರ ಪರಮಾನುಗ್ರಹದಿಂದ ಶ್ರೀಮನ್ಮಹಾಭಾರತದ ಶುದ್ಧಪಾಠದ ಮುದ್ರಣವೆಂಬ ಮಹತ್ಕಾರ್ಯವನ್ನು ಕೈಗೆತ್ತಿಕೊಂಡು, ಅದಕ್ಕೆ ಸಂಬಂಧಪಟ್ಟ ವಿದ್ವಾಂಸರನ್ನು ಒಟ್ಟುಗೂಡಿಸಿ, ಪ್ರಾಚೀನ ಹಸ್ತಪ್ರತಿಗಳ ಸಂಶೋಧನೆಯನ್ನು ಮಾಡಿಸಿ, ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸಮಾಜಕ್ಕೆ ದೊಡ್ಡ ಕೊಡುಗೆಯನ್ನು ನೀಡುತ್ತಿದ್ದಾರೆ ನಮ್ಮ ಗುರುಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರು. ಆ ನಿಟ್ಟಿನಲ್ಲಿ ಈಗ ಮೋಕ್ಷಧರ್ಮಪರ್ವದ ಭಾಗವನ್ನು ಅರ್ಥಸಹಿತ ಮೂರು ಸಂಪುಟದಲ್ಲಿ ಲೋಕಾರ್ಪಣೆ ಮಾಡುತ್ತಿದ್ದೇವೆ. ಪ್ರಾತಃಸ್ಮರಣೀಯರಾದ ಪರಮಪೂಜ್ಯ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರ ಮಹತ್ಸಂಕಲ್ಪವಾದ ಶ್ರೀಮಹಾಭಾರತ ಮುದ್ರಣವು ಅವರೇ ಹುಟ್ಟುಹಾಕಿದ ತತ್ವಸಂಶೋಧನ ಸಂಸತ್ತಿನಿಂದ ಆಗಬೇಕೆಂದು ಶ್ರೀಪಾದರು ಸಂಕಲ್ಪಿಸಿದ್ದಾರೆ. ಅದು ಕೂಡ ಶ್ರೀಪಾದರ ದ್ವಿತೀಯ ಶ್ರೀಕೃಷ್ಣಪೂಜಾ ಪರ್ಯಾಯದ ಶುಭಾವಸರದಲ್ಲಿ ಬಿಡುಗಡೆಗೊಳ್ಳುತ್ತಿರುವುದು ಯೋಗವೇ ಸರಿ. ಈ ನಮ್ಮ ಸಂಸ್ಥೆಯ ಎಲ್ಲಾ ವಿಷಯಗಳಲ್ಲಿ ತಮ್ಮ ಸಂಪೂರ್ಣ ಅನುಗ್ರಹವನ್ನು ಧಾರೆಯೆರೆದ ನಮ್ಮ ಸಂಸ್ಥೆಯ ಕುಲಪತಿಗಳಾದ ಶ್ರೀ ಶ್ರೀ ವಿದ್ಯಾಧೀಶ ತೀರ್ಥ ಶ್ರೀಪಾದರಿಗೆ ಹೃತ್ಪೂರ್ವಕ ಅನಂತ ನಮೋವಾಕ್ಯಗಳನ್ನು ಸಮರ್ಪಿಸುತ್ತಿದ್ದೇನೆ.

ಅದೇ ರೀತಿಯಲ್ಲಿ ಇಂತಹ ಅದ್ಭುತವಾದ ಈ ಕೃತಿ ಹೊರಬರಲು ಆರ್ಥಿಕವಾಗಿ ಎಲ್ಲರೀತಿಯ ಸಹಕಾರ ನೀಡಿರುವಂತಹ ನಮ್ಮ ಘನವೆತ್ತ ಕರ್ನಾಟಕ ಸರ್ಕಾರಕ್ಕೆ, ಅದರ ಎಲ್ಲಪದಾಧಿಕಾರಿಗಳಿಗೆ ಸಂಶೋಧನ ಸಂಸತ್‌ನ ಪರವಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಅದೇ ರೀತಿಯಲ್ಲಿ ಈ ಶ್ರೀಮಹಾಭಾರತ ಶುದ್ಧಪಾಠದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು, ಸಮರ್ಥವಾಗಿ ಆ ಯೋಜನೆ ಕಾರ್ಯಗತ ಆಗುವಲ್ಲಿ ಪೂರ್ಣಪ್ರಮಾಣದಲ್ಲಿ ಶ್ರಮಿಸುತ್ತಿರುವ ನಮ್ಮ ನಾಡಿನ ಖ್ಯಾತ ಪ್ರವಚನಕಾರರೂ, ವಿದ್ವಾಂಸರೂ ಆಗಿರುವಂತಹ ಡಾ॥ ಬೆ.ನಾ. ವಿಜಯೀಂದ್ರಾಚಾರ್ಯರಿಗೆ ಮತ್ತು ಇದಕ್ಕಾಗಿ ಶ್ರಮವಹಿಸಿದ ಎಲ್ಲಾವಿದ್ಮನ್ಮಣಿಗಳಿಗೆ ಸಂಸ್ಥೆಯ ಪರವಾಗಿ ಧನ್ಯವಾದಗಳು.

ಶ್ರೀಮಹಾಭಾರತದ ಮುದ್ರಣದ ಬೃಹತ್ ಯೋಜನೆಯಲ್ಲಿ ಈ ಇಳಿ ವಯಸ್ಸಿನಲ್ಲಿಯೂ ನಮ್ಮ ಜೊತೆಗೇ ಇದ್ದುಕೊಂಡು ಸಂಪೂರ್ಣ ಸಹಕಾರವನ್ನು ನೀಡುತ್ತಿರುವ ಶ್ರೀಯುತ ರಘುಪತಿ ತಂತ್ರಿ ಇವರಿಗೂ ಸಂಸ್ಥೆಯ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು. ಮೂಲ ಸಂಸ್ಕೃತ ಶ್ಲೋಕಗಳನ್ನು ದೋಷರಹಿತವಾಗಿ ಕನ್ನಡಕ್ಕೆ ಲಿಪ್ಯಂತರವನ್ನು ಮಾಡಿಕೊಟ್ಟುಹಾಗೂ ಪುಟ ಸಂಯೋಜನೆಯನ್ನು ಮಾಡಿದ ಶ್ರೀಯುತ ಶರತ್‌ಚಂದ್ರ ಎಂ., ಪವನ್ ಗ್ರಾಫಿಕ್ಸ್‌ಮತ್ತು ಪ್ರಿಂಟರ್ಸ್ ಅವರಿಗೂ ಸಂಸ್ಥೆಯ ಪರವಾಗಿ ಧನ್ಯವಾದಗಳು. ಹಾಗೆಯೇ ತಿದ್ದುಪಡಿಯಲ್ಲಿಸಹಕಾರ ಮಾಡಿಕೊಟ್ಟಿರುವ ಶ್ರೀಯುತ ಶ್ರೀವತ್ಸ ಆಚಾರ್ಯ (ಸಿದ್ಧಾಂತಿ) ಇವರಿಗೂ ಧನ್ಯವಾದಗಳು. ಹಾಗೆಯೇ ನಮಗೆ ಬೇಕಾದ ಕ್ಲಪ್ತ ಸಮಯದಲ್ಲಿಸುಂದರವಾಗಿ ಮುದ್ರಣವನ್ನು ಮಾಡಿಕೊಟ್ಟಿರುವ ಪವನ್ ಪ್ರಿಂಟರ್ಸ್‌ನ ಮಂಜುನಾಥ್‌ರವರಿಗೂ ನಮ್ಮ ಸಂಸ್ಥೆಯ ಪರವಾಗಿ ವಿಶೇಷ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ. ಈ ಕಾರ್ಯದಲ್ಲಿ ಶ್ರಮಿಸಿದ ಸಂಶೋಧನ ಮಂದಿರದ ಎಲ್ಲಾ ಕಾರ್ಯಕಾರಿಣಿ ವರ್ಗಕ್ಕೂ ಈ ಮೂಲಕ ಧನ್ಯವಾದಗಳನ್ನು ಸಮರ್ಪಿಸುತ್ತಿದ್ದೇನೆ.

ಈ ಮೋಕ್ಷಧರ್ಮಪರ್ವದ ಅಧ್ಯಯನವನ್ನು ಮಾಡಿ ತನ್ಮೂಲಕ ಸಾಧನೆ ಮಾರ್ಗವನ್ನು ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಭಗವಂತನನ್ನು ಒಲಿಸಿಕೊಳ್ಳುವುದರ ಬಗ್ಗೆ ಅವನ ಸಂಕಲ್ಪಕ್ಕೆ ಅನುಗುಣವಾಗಿ ಅವನ ಪ್ರೇರಣೆಯಂತೆ ಎಲ್ಲರೂ ಕೈ ಜೋಡಿಸುವ ಮೂಲಕ ಶ್ರೀಕೃಷ್ಣನ ಕೃಪಾಕಟಾಕ್ಷಕ್ಕೆ ಪಾತ್ರರಾಗೋಣ ಎಂದು ಅಪೇಕ್ಷಿಸುತ್ತಿದ್ದೇನೆ.

ಪ್ರಕಾಶಕರು
ಡಾ. ವಂಶೀಕೃಷ್ಣಾಚಾರ್ಯ ಪುರೋಹಿತ್
ನಿರ್ದೇಶಕರು, ತತ್ವಸಂಶೋಧನಸಂಸತ್,
ಶ್ರೀ ಪಲಿಮಾರು ಹೃಷೀಕೇಶ ಮಠ, ಉಡುಪಿ.

ಮೋಕ್ಷಧರ್ಮಪರ್ವ - ಭೂಮಿಕೆ

ಶಾಂತಿಪರ್ವದಲ್ಲಿ ಅತ್ಯಂತ ಶ್ರೇಷ್ಠವಾಗಿರುವ ಪರ್ವ ಮೋಕ್ಷಧರ್ಮಪರ್ವ. ವ್ಯಾಸರು ಶಾಂತಿಪರ್ವವನ್ನೇ ಸಮಗ್ರವಾಗಿ ಉದ್ದೇಶಿಸಿಕೊಂಡು 'ಶಾಂತಿಪರ್ವ ಮಹಾಫಲಃ' ಎಂದು ಅನುಕ್ರಮಣಿಕಾ ಪರ್ವದಲ್ಲಿಯೇ ತಿಳಿಸಿದ್ದಾರೆ. ಜೀವನದ ಮಹಾಫಲ ಶಾಂತಿಪರ್ವ ಎಂಬುದು ವ್ಯಾಸರ ಅಭಿಪ್ರಾಯ. ಮೋಕ್ಷಧರ್ಮಪರ್ವ ಎಂಬ ಹೆಸರೇ ಆ ಪರ್ವದಲ್ಲಿರುವ ವಿಷಯಗಳನ್ನು ತಿಳಿಸುತ್ತಿದೆ. ಯುಧಿಷ್ಠಿರನನ್ನು ನೆಪ ಮಾಡಿಕೊಂಡು ಸಾಧಕರಿಗೆ ಉತ್ತಮ ಪುರುಷಾರ್ಥಗಳನ್ನು ಬೋಧಿಸಿದ ಪರ್ವ ಮೋಕ್ಷಧರ್ಮಪರ್ವ. ಮೋಕ್ಷಧರ್ಮದ ಪ್ರಾರಂಭದಲ್ಲಿಯೇ ಒಂದು ಶ್ಲೋಕವಿದೆ. **'ಅಂತೇಷು ರೇಮಿರೇ ಧೀರಾಃ ನ ತೇ ಮಧ್ಯೇಷು ರೇಮಿರೇ । ಅಂತಃಪ್ರಾಪ್ತಿಂ ಸುಖಂಪ್ರಾಹುಃ ದುಃಖಮಂತರಮಂತಯೋಃ'** ಎಂದು. ಇದಕ್ಕೆ ಭಾವೀಸಮೀರ ವಾದಿರಾಜಗುರುಸಾರ್ವಭೌಮರು ಹೀಗೆ ವ್ಯಾಖ್ಯಾನಿಸಿರುತ್ತಾರೆ- ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಕೊನೆಯದ್ದಾದುದು ಮೋಕ್ಷ. ಜ್ಞಾನಿಗಳಾದವರು ಮೋಕ್ಷದ ವಿಷಯದಲ್ಲಿಯೇ ಸಂತೋಷವನ್ನು ಹೊಂದುತ್ತಾರೆ. ಪುರುಷಾರ್ಥಗಳಲ್ಲಿ ಹಿಂದಿನಿಂದ ಲೆಕ್ಕ ಮಾಡಿದಾಗ ಕೊನೆಯದ್ದು ಧರ್ಮ. ಆ ಧರ್ಮದಲ್ಲಿ ಜ್ಞಾನಿಗಳಾದವರು ಸಂತೋಷವನ್ನು ಹೊಂದುತ್ತಾರೆ. ಎಂದಿಗೂ ಅರ್ಥ-ಕಾಮಗಳ ಸಂತೋಷವನ್ನು ಸಾಧಕರು ಬಯಸಲಾರರು. ಧರ್ಮ-ಮೋಕ್ಷಗಳ ಪ್ರಾಪ್ತಿಯೇ ಸುಖ ಎನ್ನುತ್ತಾರೆ ವಿನಾ ಅರ್ಥ- ಕಾಮಗಳ ಪ್ರಾಪ್ತಿ ಎಂದಿಗೂ ಸುಖವೆನಿಸದು. ಈ ರೀತಿಯಾಗಿ ಜೀವರಿಗೆ ಬದುಕಿನ ಮೌಲ್ಯಗಳನ್ನು ಎಚ್ಚರಿಸುತ್ತಾ ಸಾಗುತ್ತದೆ ಮೋಕ್ಷಧರ್ಮ.

ದೇಹದಲ್ಲಿ ಬಂಧಿತನಾಗಿರುವ ಜೀವಾತ್ಮನು ಸಾಂಸಾರಿಕ ವಿಷಯಪದಾರ್ಥ-ಗಳಿಂದ ಆತ್ಮವಂಚನೆಗೆ ತುತ್ತಾಗುತ್ತಿದ್ದಾನೆ. ಈ ದೇಹಬಂಧನದ ಬಿಡುಗಡೆಗೆ ವಿಷಯ ಸಂಬಂಧದಿಂದ ಮೊದಲು ದೂರವಾಗಬೇಕು. ಇಪ್ಪತ್ತೈದು ತತ್ತ್ವಗಳಿಂದ ಕೂಡಿದ ಈ ಶರೀರಕ್ಕೆ ಭಗವಂತನೇ ನಿಯಾಮಕನಾಗಿದ್ದಾನೆ. ಅವನ ಅನುಗ್ರಹವಿಲ್ಲದೆ ಈ ಪಂಚಭೂತಗಳ ಸಂಬಂಧವು ಎಂದಿಗೂ ನಾಶವಾಗದು. ಶಾಸ್ತ್ರಾಧ್ಯಯನವನ್ನು ಮಾಡುವ ಅನೇಕರು ಶಾಸ್ತ್ರಾರ್ಥಗಳನ್ನು ಸರಿಯಾಗಿ ಅರಿಯದಿದ್ದಲ್ಲಿ ಜೀವ, ಪರಮಾತ್ಮರಿಗೆ ಅಭೇದವನ್ನೇ ಹೇಳುತ್ತಾರೆ. ಅವರಿಂದ ಬೋಧಿಸಲ್ಪಟ್ಟ ಅನೇಕರು ಅವರಂತೆ ಐಕ್ಯಚಿಂತನೆಯನ್ನು ಹೊಂದುತ್ತಾರೆ. ಉಪನಿಷತ್ತಿನಲ್ಲಿ **'ಅಂಧೇನೈವ ನೀಯಮಾನಾ ಯಥಾಂಧಾಃ'** ಎಂದು ಹೇಳಿದಂತೆ ಅಂಧಪರಂಪರೆಯಿಂದ ದುರ್ಮತಗಳ ಪ್ರವೃತ್ತಿಯು ಉಂಟಾಗುತ್ತಿದೆ. ಐಕ್ಯಕ್ಕೆ ಯಾವ ಶಾಸ್ತ್ರಗಳೂ

ಆಧಾರವಾಗಿಲ್ಲ. ಸ್ವಕಪೋಲ ಕಲ್ಪಿತವಾದ ಅಭಿಪ್ರಾಯವನ್ನು ಶಾಸ್ತ್ರದಲ್ಲಿ ತುಂಬಿಸುವ ಹುನ್ನಾರ ಐಕ್ಯವಾದಿಗಳಿಂದ ನಡೆದಿದೆ. ಆದ್ದರಿಂದ ಪರಮಾತ್ಮನ ದಾಸನಾದ ಜೀವನು ಎಂದಿಗೂ ಅವನೊಂದಿಗೆ ಐಕ್ಯವನ್ನು ಚಿಂತಿಸಬಾರದು ಎನ್ನುತ್ತಾರೆ ವ್ಯಾಸರು.

ಮಶಕೋದುಂಬರೇ ಯದ್ವದನ್ಯತ್ವಂ ತದ್ವದೇತಯೋಃ ।
ಮತ್ಸ್ಯೋऽಂಭಸಿ ಯಥಾ ತದ್ವದನ್ಯತ್ವಮುಪಲಭ್ಯತೇ ॥

ಅತ್ತಿಯ ಹಣ್ಣಿನಲ್ಲಿರುವ ಹುಳುವಿಗೂ, ಅತ್ತಿಯ ಹಣ್ಣಿಗೂ ಇರುವ ಆಧಾರ-ಆಧೇಯ ಭಾವದಂತೆ ಜೀವ-ಪರಮಾತ್ಮರಲ್ಲಿರುವ ಆಧಾರ-ಆಧೇಯ ಭಾವದಿಂದ ಭಿನ್ನತ್ವವನ್ನು ತಿಳಿಯಬೇಕು. ನೀರಿಗೂ ಮತ್ಸ್ಯಕ್ಕೂ ಇರುವ ಭೇದವನ್ನು ಜೀವ-ಪರಮಾತ್ಮರಲ್ಲಿ ತಿಳಿಯಬೇಕು.

ವ್ಯಾಖ್ಯಾನ ವಿಶೇಷ– ಅತ್ತಿ ಹಣ್ಣಿನಲ್ಲಿರುವ ನುಸಿಗಳಿಗೂ ಅತ್ತಿಯ ಹಣ್ಣಿಗೂ, ನೀರಿನಲ್ಲಿರುವ ಮತ್ಸ್ಯಕ್ಕೂ ನೀರಿಗೂ ಆಧಾರ-ಆಧೇಯ ಭಾವದಿಂದ ಭೇದವು ನಿರ್ಣಯವಾಗಿದೆ. ಮಶಕ-ಮತ್ಸ್ಯಗಳಂತೆ ಜೀವರಲ್ಲಿ ನಾನಾತ್ವವಿದೆ. ಔದುಂಬರ-ಜಲದಂತೆ ಆಧಾರಭೂತನಾದ ಬ್ರಹ್ಮನಲ್ಲಿ ಏಕತ್ವವನ್ನು, ಸ್ವಗತಭೇದವರ್ಜಿತತ್ವವನ್ನು ತಿಳಿದುಕೊಳ್ಳಬೇಕು. ಭೇದಾಭೇದ ಜ್ಞಾನವನ್ನು ನಿರಾಕರಿಸಲು ಹೀಗೆ ವ್ಯಾಸರು ತಿಳಿಸಿರುತ್ತಾರೆ. ಬುದ್ಧಿವಂತನು ಮಶಕ-ಔದುಂಬರಗಳಿಗೆ, ಜಲ-ಮತ್ಸ್ಯಗಳಿಗೆ ಭೇದಾಭೇದಗಳನ್ನು ಹೇಳುವುದಿಲ್ಲವಷ್ಟೆ? ಜೀವ-ಪರಮಾತ್ಮರಿಗೆ ಅತ್ಯಂತ ಭೇದವೇ ಇದೆ ಎಂದು ಸಮರ್ಥನೆ ಮಾಡಿದಾಗಲೂ ಭೇದಾಭೇದವೆಂಬ ವಾದವು ನಿರಾಕೃತವಾಗುತ್ತಿರಲು ಪ್ರತ್ಯೇಕವಾಗಿ ನಿರಾಕರಿಸಲು ಕಾರಣ 'ಏಕಮೇವಾದ್ವಿತೀಯಂ ಬ್ರಹ್ಮ' ಮೊದಲಾದ ಶ್ರುತಿಗಳನ್ನು ಪರರು ತಪ್ಪಾಗಿ ವ್ಯಾಖ್ಯಾನ ಮಾಡಿದ್ದರಿಂದ ಈ ಶ್ರುತಿಯು ಪರಬ್ರಹ್ಮನಲ್ಲಿ ಸಾವಕಾಶವಾಗಿದೆ ಎಂದು ಪರಮತವನ್ನು ನಿಷೇಧಿಸಲು ನಾನಾತ್ವ, ಏಕತ್ವಗಳನ್ನು ಹೇಳಿದ್ದಾರೆ. 'ನಾನಾತ್ವಂ ಏಕತ್ವಂ' ಎಂದು ದ್ವಂದ್ವಸಮಾಸವನ್ನು ಮಾಡಿ ಪುನಃ ಅದನ್ನೂ ಏಕೀಭಾವ ಮಾಡಿದರೆ 'ನಾನಾತ್ವೈಕತ್ವಂ' ಎಂಬ ಶಬ್ದನಿಷ್ಪತ್ತಿಯು ಸಾಧುವಾಗಿಯೇ ಇರುತ್ತದೆ ಎಂದು ತಿಳಿಯಬೇಕು. ಈ ರೀತಿಯಾದ ಸಮಾಸವನ್ನು ವ್ಯಾಸರು ಮಾಡಲು ಕಾರಣ ಬ್ರಹ್ಮಧರ್ಮಿಕ ಏಕತ್ವವು ಹೇಗೆ ಪಾರಮಾರ್ಥಿಕವೋ ಹಾಗೆ ಜೀವ-ಬ್ರಹ್ಮ ಭೇದವೂ ಪಾರಮಾರ್ಥಿಕವೇ ಎಂದು ತಿಳಿಸಲು ದ್ವಂದ್ವ ಸಮಾಸವನ್ನು ಏಕೀಭಾವಗೊಳಿಸಿದ್ದಾರೆ. ಆದ್ದರಿಂದ ಜೀವ-ಬ್ರಹ್ಮರ ತತ್ತ್ವವನ್ನು ಅವಲಂಬಿಸಿ ತಮ್ಮ ಮತವನ್ನು ಸ್ಥಾಪನೆ ಮಾಡುತ್ತಾ ಪರಮತವನ್ನು ದೂಷಿಸಿದ ಮುನಿಶ್ರೇಷ್ಠರಾದ ವಸಿಷ್ಠರು ಸಕಲ ಜ್ಞಾನಿಗಳಲ್ಲಿ ಶ್ರೇಷ್ಠರೆನಿಸಿದ್ದಾರೆ.

ಏವಮೇವಾವಗಂತವ್ಯಂ ನಾನಾತ್ವೈಕತ್ವಮೇತಯೋಃ ।
ಏತದ್ ವಿಮೋಕ್ಷ ಇತ್ಯುಕ್ತಮವ್ಯಕ್ತಜ್ಞಾನಸಂಹಿತಮ್ ॥

ಜೀವರಲ್ಲಿರುವ ನಾನಾತ್ವವನ್ನು, ಪರಮಾತ್ಮನಲ್ಲಿರುವ ಏಕತ್ವವನ್ನು ಈ ದೃಷ್ಟಾಂತದಿಂದ ತಿಳಿದುಕೊಳ್ಳಬೇಕು. ಈ ಅವ್ಯಕ್ತ ಜ್ಞಾನಸಂಹಿತೆಯನ್ನು ಸರಿಯಾಗಿ ತಿಳಿದಾಗಲೇ ಜೀವನು ಮುಕ್ತಿಯನ್ನು ಹೊಂದುತ್ತಾನೆ.

ರೇತೋ ಧಾತುರ್ವಟಕಣಿಕಾ ಘೃತಧೂಮಾಧಿವಾಸನಮ್ ।
ಜಾತಿಸ್ಮೃತಿರಯಸ್ಕಾಂತಃ ಸೂರ್ಯಕಾಂತೋऽಂಬುಭಕ್ಷಣಮ್ ॥

ಪ್ರೇತ್ಯ ಭೂತಾಪ್ಯಯಶ್ಚೈವ ದೇವತಾಭ್ಯುಪಯಾಚನಮ್ ।
ಮೃತೇ ಕರ್ಮನಿವೃತ್ತಿಶ್ಚ ಪ್ರಮಾಣಮಿತಿ ನಿಶ್ಚಯಃ ॥

ರೇತಸ್ಸು, ವಾತ-ಪಿತ್ತಾದಿ ಧಾತುಗಳು, ಆಲದ ಮರದ ಬೀಜ, ತುಪ್ಪ, ಹೊಗೆಯ ಮೂಲಿಕೆ, ಜನ್ಮಾಂತರ ಸ್ಮರಣೆ, ಅಯಸ್ಕಾಂತ, ಸೂರ್ಯಕಾಂತಮಣಿ, ಜಲಪಾನ, ಸತ್ತ ಬಳಿಕ ಶರೀರವು ಪಂಚಭೂತಗಳಲ್ಲಿ ಸೇರಿಕೊಳ್ಳುವುದು, ದೇವತಾಪ್ರಾರ್ಥನೆ, ಸತ್ತ ಬಳಿಕ ಶರೀರದಲ್ಲಿ ಕ್ರಿಯಾನಿವೃತ್ತಿ- ಇದರಿಂದ ಕಣ್ಣಿಗೆ ಕಾಣದ ಅಲೌಕಿಕ ವಿಷಯಗಳನ್ನು ಊಹಿಸಬಹುದು. ಆದ್ದರಿಂದ ನಾಸ್ತಿಕ್ಯವಾದವು ಸರಿಯಾದುದಲ್ಲ.

ವ್ಯಾಖ್ಯಾನ ವಿಶೇಷ- ಬ್ರಹ್ಮಸೂತ್ರದ ಶಾಸ್ತ್ರಯೋನಿತ್ವಾಧಿಕರಣದಲ್ಲಿ ಈ ಮೋಕ್ಷದಲ್ಲಿ ಬರುವ ವಚನಗಳನ್ನು ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಉಲ್ಲೇಖಿಸುತ್ತಾ ಅತೀಂದ್ರಿಯ ವಸ್ತುಗಳೇ ಇಲ್ಲವೆಂದ ಬಳಿಕ ಶಾಸ್ತ್ರದಿಂದ ಪರಮಾತ್ಮನ ಅಸ್ತಿತ್ವವು ಸಿದ್ಧವಾಗುವುದಿಲ್ಲ ಎಂಬ ಆಕ್ಷೇಪಕ್ಕೆ ಉತ್ತರವಾಗಿ ಆಸ್ತಿಕ್ಯವಾದವನ್ನು ಸಮರ್ಥಿಸುವ ಈ ಪ್ರಸಂಗವನ್ನು ಉಲ್ಲೇಖಿಸಿದ್ದಾರೆ.

ರೇತಸ್ಸು- ಸ್ತ್ರೀ ಶರೀರದಲ್ಲಿ ವಿಸರ್ಜಿತವಾದ ಪುರುಷನ ರೇತಸ್ಸಿನಿಂದ ಗರ್ಭಧಾರಣೆ ಆಗುತ್ತದೆ. ಆದರೆ ಇದು ಕಣ್ಣಿಗೆ ಕಾಣಿಸುವುದಿಲ್ಲ. ಮುಂದೆ ಈ ಸ್ತ್ರೀಯ ಗರ್ಭದಲ್ಲಿ ಶಿಶುವಿದೆ ಎಂಬುದನ್ನು ಸ್ಥೂಲೋದರತ್ವವೇ ಮೊದಲಾದ ಪ್ರಾಮಾಣಿಕ ಅನುಮಾನಗಳಿಂದ ನಿರ್ಣಯಿಸಿಕೊಳ್ಳುತ್ತೇವೆ. ಮೃತಶರೀರದಲ್ಲಿ ಗರ್ಭವು ಉತ್ಪನ್ನವಾಗುವುದಿಲ್ಲ. ಆದ್ದರಿಂದ ಶರೀರ ಭಿನ್ನನಾದ ಜೀವನಿದ್ದಾನೆಂಬುದು ನಿರ್ಣಯವಾಗುತ್ತದೆ. ಇಷ್ಟೇ ಅಲ್ಲದೆ ಎಲ್ಲಾ ಸ್ತ್ರೀ ಶರೀರದಲ್ಲಿಯೂ ಗರ್ಭಧಾರಣೆಯು ಆಗುವುದಿಲ್ಲ. ಆದ್ದರಿಂದ ಅದೃಷ್ಟ-ಈಶ್ವರಾದಿಗಳ ಸಿದ್ಧಿಯಾಗುತ್ತದೆ. ಕೆಲವರಲ್ಲಿ ಮಾತ್ರ ಗರ್ಭಧಾರಣೆ. ಕೆಲವರಲ್ಲಿ ಆಗುವುದಿಲ್ಲ ಎಂಬುದರಿಂದ ಭಗವಂತನೂ, ಪುಣ್ಯ-ಪಾಪಗಳೂ ಸಿದ್ಧವಾಗುತ್ತವೆ.

ರೇತೋಧಾತು- ವಾತ-ಪಿತ್ತ-ಕಫಗಳೆಂಬುವು ಮೂರು ಧಾತುಗಳು. ಈ ಧಾತುಗಳು ಅಪಥ್ಯಾಚರಣೆಯಿಂದ ಜೀವಿಸಿರುವ ಜೀವನ ಶರೀರದಲ್ಲಿ ಕೆರಳುತ್ತವೆ. ಈ ಧಾತುಗಳಾದರೂ ಪ್ರತ್ಯಕ್ಷದಿಂದ ತಿಳಿಯಲಾರವು, ಅನುಮಾನದಿಂದಲೇ ತಿಳಿಯಬೇಕು. ಮೃತಶರೀರದಲ್ಲಿ ಈ ಧಾತುಗಳ ಪರಿಣಾಮವು ಇರುವುದಿಲ್ಲ. ಆದ್ದರಿಂದ ಶರೀರಾತಿರಿಕ್ತ ಜೀವನಿದ್ದಾನೆ ಎಂಬುದು

ಸಿದ್ಧವಾಗುತ್ತದೆ. ಜೀವಂತವಾದ ಶರೀರದಲ್ಲಿಯೂ ಎಲ್ಲಕಡೆಯಲ್ಲಿಯೂ ಈ ಧಾತುಗಳ ವಿಕಾರವು ಉಂಟಾಗುವುದಿಲ್ಲ. ಕೆಲವು ಕಡೆ ಮಾತ್ರ ಈ ಧಾತುಗಳು ಕೆರಳುತ್ತವೆ. ಇದರಿಂದ ಈಶ್ವರ-ಅದೃಷ್ಟ ಎರಡೂ ಸಿದ್ಧವಾಗುತ್ತವೆ.

ವಟಕಣಿಕ– ಆಲದ ಬೀಜದಿಂದ ಆಲದ ಮರವು ಹುಟ್ಟುತ್ತದೆ. ಹುರಿದ ಬೀಜದಿಂದ ಮೊಳಕೆ ಬರುವುದಿಲ್ಲ. ಹುರಿಯದೇ ಇರುವ ಎಲ್ಲಾ ಬೀಜಗಳಿಂದಲೂ ಮರಗಳು ಹುಟ್ಟುವುದಿಲ್ಲ.

ಘೃತ– ತುಪ್ಪದಿಂದ ದೇಹವು ಬೆಳೆಯುತ್ತದೆ. ಮೃತಶರೀರವು ಬೆಳೆಯುವುದಿಲ್ಲ. ಜೀವಚ್ಛರೀರವು ಕೆಲವೊಂದು ಎಷ್ಟು ತುಪ್ಪ ತಿಂದರೂ ಪುಷ್ಟಿಯನ್ನು ಹೊಂದುವುದಿಲ್ಲ.

ಧೂಮಾದಿವಾಸನ– ಕೆಲವು ಮರಗಳು ಹೂಬಿಡಲು ಹೊಗೆ ಹಾಕಬೇಕಾಗುತ್ತದೆ. ಹೊಗೆ ಹಾಕಿದ ಬಳಿಕ ಆ ಮರದಲ್ಲಿ ಹೂ ಮೊದಲಾದವುಗಳು ಉಂಟಾಗುತ್ತವೆ. ಒಣಗಿದ ಮರದಲ್ಲಿ ಹೂಗಳು ಉಂಟಾಗುವುದಿಲ್ಲ. ಜೀವಂತವಾದ ಎಲ್ಲಾ ಮರಗಳಲ್ಲಿಯೂ ಹೂಗಳು ಉಂಟಾಗುವುದಿಲ್ಲ. ಇದರಿಂದ ಜೀವ, ಅದೃಷ್ಟಗಳು ಸಿದ್ಧವಾಗುತ್ತವೆ.

ಜಾತಿಸ್ಮೃತಿ– ಕೆಲವರಿಗೆ ತಪಸ್ಸೇ ಮೊದಲಾದ ಸಾಧನ ವಿಶೇಷಗಳಿಂದ ಪೂರ್ವಜನ್ಮದ ಸ್ಮರಣೆ ಉಂಟಾಗುತ್ತದೆ. ಮೃತನಾದ ವ್ಯಕ್ತಿಗೆ ಜಾತಿಸ್ಮರಣೆ ಇರುವುದಿಲ್ಲ. ಇರುವ ವ್ಯಕ್ತಿಗಳೆ ಎಲ್ಲರಿಗೂ ಉಂಟಾಗುವುದಿಲ್ಲ. ಆದ್ದರಿಂದ ಇಲ್ಲಿಯೂ ಈಶ್ವರ-ಪೂರ್ವಪುಣ್ಯಗಳನ್ನು ಕಾರಣವೆಂದು ಹೇಳಬೇಕು.

ಅಯಸ್ಕಾಂತ– ಅಯಸ್ಕಾಂತವು ಕಬ್ಬಿಣವನ್ನು ಸೆಳೆಯುತ್ತದೆ. ಅಚೇತನದಲ್ಲಿ ಇಂತಹ ವಿಚಿತ್ರವಾದ ಶಕ್ತಿಯು ಎಲ್ಲಿಯೂ ಕಂಡಿಲ್ಲ. ಆದ್ದರಿಂದ ಇಂಥ ವಿಶೇಷ ಶಕ್ತಿಯನ್ನು ತುಂಬಿದ ಭಗವಂತನನ್ನು ಇಲ್ಲಿಯೂ ಚಿಂತಿಸಬೇಕು. ಇದರಿಂದ ಈಶ್ವರನ ಸಿದ್ಧಿಯಾಗುತ್ತದೆ.

ಸೂರ್ಯಕಾಂತ– ಸೂರ್ಯಕಾಂತಶಿಲೆಯಿಂದ ಅಗ್ನಿಯು ಉತ್ಪತ್ತಿಯಾಗುತ್ತದೆ. ಕೇವಲ ಜಡಪದಾರ್ಥಗಳಲ್ಲಿ ಈ ಶಕ್ತಿಯು ಕಂಡಿರುವುದಿಲ್ಲ. ಈ ರೀತಿಯಾದ ಶಕ್ತಿಯ ವೈಚಿತ್ರ್ಯಕ್ಕೆ ಈಶ್ವರನು ಪ್ರೇರಕನಾಗಿದ್ದಾನೆಂದು ಇಲ್ಲಿಯೂ ಅಂಗೀಕರಿಸಬೇಕು.

ಅಂಬುಭಕ್ಷಣ– ನೀರು ಕುಡಿದಾಗ ಬಾಯಾರಿಕೆಯು ಪರಿಹಾರವಾಗುತ್ತದೆ. ಮೃತಶರೀರದಲ್ಲಿ ಹೀಗೆ ಆಗುವುದಿಲ್ಲ. ಆದ್ದರಿಂದ ಇದರಿಂದಲೂ ಜೀವನು ಸಿದ್ಧನಾಗುತ್ತಾನೆ.

ಪ್ರೇತ್ಯಭೂತಾಪ್ಯಯ– ಮೃತಶರೀರವು ಮಣ್ಣಾಗುತ್ತದೆ. ಮರಣಾನಂತರ ದೇಹದಲ್ಲಿರುವ ಪಂಚಭೂತಗಳು ನಾಶಹೊಂದುತ್ತವೆ. ಜೀವಚ್ಛರೀರದಲ್ಲಿ ಹೀಗಾಗುವುದಿಲ್ಲ. ನಾವು ಬಯಸಿದರೂ ಅದು ಮಣ್ಣಾಗುವುದಿಲ್ಲ.

ದೇವತಾಭ್ಯುಪಯಾಚನಮ್– ದೇವತಾ ಪ್ರಾರ್ಥನೆಯಿಂದ ಕೆಲವರಿಗೆ ಭಾಗ್ಯವು ದೊರೆಯುತ್ತದೆ. ಮೃತನಾದವನು ದೇವತಾ ಯಾಚನೆ ಮಾಡಲು ಸಾಧ್ಯವಿಲ್ಲ. ಇದರಿಂದ ದೇವತಾ ಸಿದ್ಧಿಯು, ಜೀವಸಿದ್ಧಿಯು ಉಂಟಾಗುತ್ತದೆ.

ಮೃತೇ ಕರ್ಮನಿವೃತ್ತಿ– ಮೃತಶರೀರದಲ್ಲಿ ಹಸ್ತಚಲನಾದಿ ಕರ್ಮವು ಉಂಟಾಗುವುದಿಲ್ಲ. ಜೀವಚ್ಛರೀರದಲ್ಲೇ ಉಂಟಾಗುತ್ತದೆ. ಇದರಿಂದ ಜೀವನ ಸಿದ್ಧಿಯಾಗುತ್ತದೆ.

ಮುನಿಶ್ರೇಷ್ಠರಾದ ವಸಿಷ್ಠರು ಜೀವಬ್ರಹ್ಮರಿಗೆ ಪರಸ್ಪರ ಪಾರಮಾರ್ಥಿಕವಾಗಿಯೇ ಭೇದವಿದೆ ಎಂಬುದನ್ನು ಮಹಾಭಾರತದಲ್ಲಿ ಸ್ಪಷ್ಟಪಡಿಸಿರುತ್ತಾರೆ. ಪರಮಾತ್ಮನಿಗೂ, ಜೀವಾತ್ಮರಿಗೂ ಮುಕ್ತಿಯಲ್ಲಿ ಸಾದೃಶ್ಯವಿದೆ. ಆ ಸಾದೃಶ್ಯವಾದರೂ ಅತ್ಯಂತ ಅಲ್ಪವಾದುದು. ಭಗವಂತನ ಕೆಲವೇ ಗುಣಗಳಿಂದ ಸಾದೃಶ್ಯವಿದೆ ಎನ್ನುವುದನ್ನು ಮಹಾಭಾರತದಲ್ಲಿ ಪ್ರತಿಪಾದಿಸಿದ್ದಾರೆ.

(1) ಮುಕ್ತಜೀವನು ನಾರಾಯಣನಂತೆ ಸಂಸಾರ ಮಲರಹಿತನಾಗಿರುತ್ತಾನೆ.

(2) ನಾರಾಯಣನು ಸಂಸಾರಿಗಳಿಂದ ಹೇಗೆ ಭಿನ್ನನೋ ಹಾಗೆ ಮುಕ್ತನೂ ಸಂಸಾರಿಗಳ ದೆಸೆಯಿಂದ ಭಿನ್ನತ್ವಧರ್ಮವುಳ್ಳವನು.

(3) ಮುಕ್ತಜೀವನು ನಾರಾಯಣನಂತೆ ಪುಣ್ಯಪಾಪಗಳಿಂದ ಮುಕ್ತನಾಗಿರುತ್ತಾನೆ.

(4) ಮುಕ್ತಜೀವನು ನಾರಾಯಣನಂತೆ ಪಾಪರಾಹಿತ್ಯ ಸ್ವಭಾವವುಳ್ಳವನಾಗಿರುತ್ತಾನೆ.

(5) ಮುಕ್ತಜೀವನು ನಾರಾಯಣನಂತೆ ಜನನ-ಮರಣ ದುಃಖಾದಿ ಸಂಸಾರ ಧರ್ಮಗಳಿಂದ ಮುಕ್ತನಾಗಿರುತ್ತಾನೆ.

(6) ಮುಕ್ತಜೀವನು ನಾರಾಯಣನಂತೆ ಸ್ವರೂಪಭೂತವಾದ ಜ್ಞಾನಾನಂದಾತ್ಮಕವಾದ, ನಿರ್ಮಲವಾದ ಶರೀರವುಳ್ಳವನಾಗಿರುತ್ತಾನೆ.

(7) ಮುಕ್ತಜೀವನು ನಾರಾಯಣನಂತೆ ಜಡಮಿಶ್ರವಲ್ಲದ ದೇಹ ಉಳ್ಳವನಾಗಿರುತ್ತಾನೆ.

(8) ಮುಕ್ತಜೀವನು ನಾರಾಯಣನಂತೆ ತನಗಿಂತಲೂ ಅಧಮರಾದ ಜೀವರಿಗೆ ನಿಯಾಮಕನಾಗಿರುತ್ತಾನೆ.

(9) ಮುಕ್ತಜೀವನು ನಾರಾಯಣನಂತೆ ಪ್ರಕೃತಿರಹಿತವಾದ ಶುದ್ಧ ಧರ್ಮ ಉಳ್ಳವನಾಗಿರುತ್ತಾನೆ.

ಈ ರೀತಿಯಾಗಿ ಮುಕ್ತಜೀವನಿಗೆ ಯೋಗ್ಯವಾದ ಒಂಬತ್ತೇ ವಿಧವಾದ ಸಾದೃಶ್ಯವನ್ನು ಮಹಾಭಾರತವು ನಿರೂಪಿಸಿರುತ್ತದೆ ಹೊರತು ಭಗವಂತನಲ್ಲಿರುವ ಸರ್ವೋತ್ತಮತ್ವವಾಗಲೀ, ಸರ್ವಕರ್ತೃತ್ವವಾಗಲೀ, ಸರ್ವಜ್ಞತ್ವವಾಗಲೀ, ಲಕ್ಷ್ಮೀಪತಿತ್ವವಾಗಲೀ ಜೀವನು ಎಂದಿಗೂ ಹೊಂದಲು ಸಾಧ್ಯವಿಲ್ಲ. ಇದರಂತೆ ಮಹಾಭಾರತದಲ್ಲಿ

ಜನಕರಾಜನ ಕಥಾ ಪ್ರಸಂಗದಲ್ಲಿ ವಿಸ್ತಾರವಾಗಿ ಚಾರ್ವಾಕ ಮತ, ಸಾಂಖ್ಯಮತ, ವೈಶೇಷಿಕ ಮತ, ಬೌದ್ಧ ಮತಗಳನ್ನು ನಿರಾಕರಿಸಿ, ಪಾಶುಪತ ಮತವನ್ನೂ ನಿರಾಕರಿಸಿ ಹರಿಸರ್ವೋತ್ತಮವನ್ನೇ ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ. ಇಷ್ಟೇ ಅಲ್ಲದೆ ನಾರದರು ತಿಳಿಸುವ 'ಧನ್ಯಾಶ್ಚಯೋ೯ಪಾಖ್ಯಾನ'ವು ಭಗವಂತನ ಸರ್ವೋತ್ತಮತ್ವವನ್ನೇ ಪ್ರತಿಪಾದಿಸುತ್ತಿದೆ. ಇದು ಮೋಕ್ಷಧರ್ಮದಲ್ಲಿ ಸ್ಫುಟವಾಗಿ ಇದೆ. ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ, ನಾರಾಯಣ ಎಂಬ ಐದು ರೂಪಗಳಿಂದ ಭಗವಂತನು ಜಗತ್ತಿನ ಸೃಷ್ಟ್ಯಾದಿಗಳನ್ನು ಹೇಗೆ ನಡೆಸುತ್ತಾನೆ ಎಂಬುದರ ವಿವರವು ಮೋಕ್ಷಧರ್ಮದಲ್ಲಿ ನಿರೂಪಿತವಾಗಿದೆ.

'ವಾಯುರ್ಭಿಮೋ ಭೀಮನಾದೋ ಮಹೋಜಾಃ ಸರ್ವೇಶಾಂ ಚ ಪ್ರಾಣಿನಾಂ ಪ್ರಾಣಭೂತಃ ಅನಾವೃತ್ತಿಃ ದೇಹಿನಾಂ ದೇಹಪಾತೇ ತಸ್ಮಾತ್ ವಾಯುರ್ದೇವದೇವೋ ವಿಶಿಷ್ಟಃ' ಎಂಬುದಾಗಿ ವಾಯುಜೀವೋತ್ತಮ ಎಂಬ ತತ್ತ್ವವನ್ನು ಸ್ಫುಟವಾಗಿ ಮಹಾಭಾರತವು ಪ್ರತಿಪಾದಿಸಿದೆ. ಸಮಸ್ತ ಧರ್ಮಸೂಕ್ಷ್ಮಗಳಿಂದ ಮೋಕ್ಷ ಯೋಗ್ಯವಾದ ತತ್ತ್ವವಿಚಾರಗಳಿಂದ ತುಂಬಿರುವ ಮೋಕ್ಷಧರ್ಮವು ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರಿಗೆ ಅತ್ಯಂತ ಇಷ್ಟವಾದ ಪರ್ವವೆನಿಸಿಕೊಂಡಿದೆ. ಗೀತಾಭಾಷ್ಯ, ಬ್ರಹ್ಮಸೂತ್ರಭಾಷ್ಯ, ಅನುವ್ಯಾಖ್ಯಾನಗಳಲ್ಲಿ ಹತ್ತಾರು ಕಡೆ ಮೋಕ್ಷಧರ್ಮವಚನವನ್ನೇ ಶ್ರೀಮದಾಚಾರ್ಯರು ಉದಾಹರಿಸಿರುತ್ತಾರೆ. ಈ ದೃಷ್ಟಿಯಿಂದಲೇ ವಾದಿರಾಜ ಗುರುಸಾರ್ವಭೌಮರು ಮೂರು ಸಾವಿರಕ್ಕಿಂತಲೂ ಅಧಿಕವಾದ ಶ್ಲೋಕಗಳಿಗೆ ಈ ಪರ್ವದಲ್ಲಿ ವ್ಯಾಖ್ಯಾನಿಸಿರುತ್ತಾರೆ. ಇಂತಹ ಶ್ರೇಷ್ಠವಾದ ಮೋಕ್ಷಧರ್ಮಪರ್ವವನ್ನು ಅರ್ಥ ಮಾಡಿಕೊಳ್ಳುವುದು, ವ್ಯಾಖ್ಯಾನಿಸುವುದು ಅತ್ಯಂತ ಕಠಿಣವಾದ ಕಾರ್ಯವಾಗಿದ್ದರೂ ಗುರುದೇವತಾ ಅನುಗ್ರಹದಿಂದ ಯಥಾಮತಿ, ಯಥಾಶಕ್ತಿ ಅನುವಾದಿಸಿರುತ್ತೇನೆ. ವಿದ್ವಾಂಸರಾದ ಸಜ್ಜನರು ಹಂಸಕ್ಷೀರ ನ್ಯಾಯದಂತೆ ಗುಣಾಂಶವನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತೇನೆ.

– ನಿಮ್ಮ ವಿಧೇಯ,

ಡಾ॥ ಬೆ.ನಾ. ವಿಜಯೀಂದ್ರಾಚಾರ್ಯ

ಮೈಸೂರು.

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ- ೨೮

ಶಾಂತಿಪರ್ವ - ಮೋಕ್ಷಧರ್ಮಪರ್ವ

ಪುಟ ಸಂ.

1. ಧರ್ಮರಾಜನ ಮನಸ್ಸಿಗೆ ಶಾಂತಿಯನ್ನು ನೀಡಲು ಭೀಷ್ಮರು ಸೇನಜಿತ ಮತ್ತು ಬ್ರಾಹ್ಮಣನ ಸಂವಾದವನ್ನು ಹೇಳಿದುದು 1

2. ಯುಧಿಷ್ಠಿರನನ್ನು ಕುರಿತು ಭೀಷ್ಮರು ಕಾಲದ ವೇಗದಲ್ಲಿ ಚಲಿಸುವ ವ್ಯಕ್ತಿಗಳು ಶ್ರೇಯೋಮಾರ್ಗವನ್ನು ಹೇಗೆ ಅನುಸರಿಸಿ ನಡೆಯಬೇಕೆಂಬುದನ್ನು ನಿರೂಪಿಸಿದುದು. ಇದಕ್ಕೆ ಪೂರಕವಾಗಿ ತಂದೆ-ಮಕ್ಕಳ ಸಂವಾದವನ್ನು ತಿಳಿಸಿದುದು 19

3. ಭೀಷ್ಮರು ಯುಧಿಷ್ಠಿರನನ್ನು ಕುರಿತು ದಾರಿದ್ರ್ಯವು ಶ್ರೇಯಸ್ಸಿಗೆ, ಐಶ್ವರ್ಯವು ಅನರ್ಥಕ್ಕೆ ಕಾರಣವೆಂಬುದನ್ನು ನಿರೂಪಿಸಲು ಶಮ್ಯಾಕಗೀತೆಯನ್ನು ನಿರೂಪಿಸಿದುದು 30

4. ಭೀಷ್ಮರು ಯುಧಿಷ್ಠಿರನಿಗೆ ವೈರಾಗ್ಯವೇ ಸುಖಸಾಧನ ಎನ್ನುವುದನ್ನು ನಿರೂಪಿಸುವುದಕ್ಕಾಗಿ ಮಂಕಿಗೀತೆಯನ್ನು, ಭೋಗ್ಯಗೀತೆಯನ್ನು ತಿಳಿಸಿದುದು 35

5. ಭೀಷ್ಮರು ಧರ್ಮರಾಜನಿಗೆ ಪ್ರಪಂಚವು ಅನಿತ್ಯವೆಂಬ ವಿಚಾರವನ್ನು, ಪರಮಾತ್ಮನ ಜ್ಞಾನವನ್ನು ಸಂಪಾದಿಸುತ್ತಾ ಅದಕ್ಕೆ ಪೂರಕವಾಗಿ ವೈರಾಗ್ಯವನ್ನು ಹೊಂದಬೇಕೆಂಬುದನ್ನು ತಿಳಿಸುತ್ತಾ, ಪ್ರಹ್ಲಾದ-ಅಜಗರಮುನಿಗೆ ನಡೆದ ಸಂವಾದವನ್ನು ತಿಳಿಸಿದುದು 51

6. ಭೀಷ್ಮರು ಯುಧಿಷ್ಠಿರನನ್ನು ಕುರಿತು ಪ್ರಜ್ಞೆಯೇ ಸುಖಸಾಧನಕ್ಕೆ ಕಾರಣವೆಂದು ತಿಳಿಸಲು ಶೃಗಾಲ-ಕಾಶ್ಯಪರ ಸಂವಾದವನ್ನು ಉದಾಹರಿಸಿದುದು 61

7. ಭೀಷ್ಮರು ಯಜ್ಞ-ದಾನ-ತಪಸ್ಸು ಮೊದಲಾದ ಸತ್ಕರ್ಮಗಳು ಪರಂಪರೆಯಿಂದ ಮೋಕ್ಷಸಾಧನವಾಗಿವೆ ಎಂಬುದನ್ನು ಯುಧಿಷ್ಠಿರನಿಗೆ ನಿರೂಪಿಸಿದುದು 74

8. ಭರದ್ವಾಜರಿಗೆ ಭೃಗುವು ಹೇಳಿದ ಜಗತ್ಸೃಷ್ಟ್ಯಾದಿ ಕರ್ತೃತ್ವವನ್ನು ಭೀಷ್ಮರು ಧರ್ಮರಾಜನಿಗೆ ತಿಳಿಸಿದುದು 79

9. ಬ್ರಹ್ಮನು ಮೇರುವಿನಲ್ಲಿ ಇದ್ದು ಜಲದಿಂದ ಆರಂಭಿಸಿ ಭೂಮಿಯ ತನಕ ಪಂಚಭೂತಗಳನ್ನು ಸೃಷ್ಟಿಸಿದ ಕ್ರಮ 87

10. ಪಂಚಭೂತಗಳಿಂದ ನಿರ್ಮಿಸಲ್ಪಟ್ಟ ಸಸ್ಯವರ್ಗಗಳು ಚೇತನಗಳಾದವು ಎಂಬುದನ್ನು ಭರದ್ವಾಜರಿಗೆ ಭೃಗುಗಳು ತಿಳಿಸಿದುದು 91

11. ಭೃಗುಋಷಿಗಳು ಭರದ್ವಾಜರನ್ನು ಕುರಿತು ಶರೀರದಲ್ಲಿ ಪ್ರಾಣಾಪಾನಾದಿಗಳ ಕಾರ್ಯಗಳ ಕುರಿತು ನಿರೂಪಿಸಿದುದು 101

12. ಭರದ್ವಾಜರು ದೇಹಾತಿರಿಕ್ತ ಆತ್ಮನಿಲ್ಲ ಎಂಬ ಪಕ್ಷವನ್ನು ಆಶ್ರಯಿಸಿ ಭೃಗುಋಷಿಗಳನ್ನು ಕುರಿತು ಪ್ರಶ್ನಿಸಿದುದು 106

13. ಭೃಗುವು ಶರೀರಕ್ಕಿಂತಲೂ ಬೇರೆಯಾದ ಜೀವನಿದ್ದಾನೆಂಬುದನ್ನು ಯುಕ್ತಿಬದ್ಧವಾಗಿ ಪ್ರತಿಪಾದಿಸಿದುದು 110

14. ಸೃಷ್ಟಿಯ ಆರಂಭದಲ್ಲಿ ಎಲ್ಲರೂ ಬ್ರಾಹ್ಮಣರಾಗಿಯೇ ಇದ್ದು ತಮ್ಮ ಇಷ್ಟಬಂದ ಆಚಾರದಲ್ಲಿ ರತರಾಗಿರುವುದರಿಂದ ವರ್ಣಭೇದಗಳನ್ನು ಹೊಂದಿದ್ದಾರೆಂದು ಭೃಗುವು ಭರದ್ವಾಜರಿಗೆ ಹೇಳಿದುದು 118

15. ಭೃಗುಗಳು ಭರದ್ವಾಜರಿಗೆ ಬ್ರಾಹ್ಮಣಾದಿ ವರ್ಣಗಳ ಲಕ್ಷಣಗಳನ್ನು ನಿರೂಪಿಸುತ್ತಾ, ವೈರಾಗ್ಯವೇ ಮೋಕ್ಷಕ್ಕೆ ಕಾರಣ ಎಂದು ನಿರೂಪಿಸಿದುದು 123

16. ಭೃಗುವು ಭರದ್ವಾಜರಿಗೆ ಸತ್ಯಾಸತ್ಯಗಳು ಸ್ವರ್ಗ-ನರಕಗಳಿಗೆ ಕಾರಣವೆಂದು, ಅಸತ್ಯದಿಂದುಂಟಾಗುವ ಅನರ್ಥವೇನೆಂಬುದನ್ನು, ಇಹ-ಪರಗಳಿಗಿರುವ ಭೇದವನ್ನು ನಿರೂಪಿಸಿದುದು 127

17. ಭೃಗುಋಷಿಗಳು ಭರದ್ವಾಜರಿಗೆ ವರ್ಣಾಶ್ರಮಧರ್ಮಗಳನ್ನು ನಿರೂಪಿಸಿದುದು 132

18. ವಾನಪ್ರಸ್ಥ-ಸಂನ್ಯಾಸಿಗಳ ಲಕ್ಷಣಗಳು. ಹಿಮವತ್‌ಪರ್ವತದ ಉತ್ತರದಲ್ಲಿರುವ ಪುಣ್ಯಾತ್ಮರಿಗೆ ದೊರೆಯುವ ಸ್ವರ್ಗಸಮಾನವಾದ ಲೋಕಗಳ ಬಗ್ಗೆ ಭೃಗುಋಷಿಗಳು ನಿರೂಪಿಸಿದುದು 139

19. ಭೀಷ್ಮರು ಯುಧಿಷ್ಠಿರನನ್ನು ಕುರಿತು ಸದಾಚಾರವನ್ನು ನಿರೂಪಿಸಿದುದು 148

20. ಭೀಷ್ಮರು ಯುಧಿಷ್ಠಿರನನ್ನು ಕುರಿತು ಅಧ್ಯಾತ್ಮವಿಚಾರವನ್ನು ನಿರೂಪಿಸಿದುದು 156

21. ಭೀಷ್ಮರು ಯುಧಿಷ್ಠಿರನನ್ನು ಕುರಿತು ಧ್ಯಾನಯೋಗವನ್ನು ಉಪದೇಶಿಸಿದುದು 176

22. ಭೀಷ್ಮರು ಯುಧಿಷ್ಠಿರನನ್ನು ಕುರಿತು ಜಪಫಲವನ್ನು, ಜಪಕ್ರಮವನ್ನು ನಿರೂಪಿಸಿದುದು 182

23. ಭೀಷ್ಮರು ಯುಧಿಷ್ಠಿರನಿಗೆ ಜಪಫಲಾದಿಗಳನ್ನು ತಿಳಿಸಿದುದು 188

24. ಜಾಪದಿಂದ ಉಂಟಾದ ನರಕಗಳು 191

25. ಜಾಪಕೋಪಾಖ್ಯಾನ 195

26. ಜಾಪಕೋಪಾಖ್ಯಾನ 227

27. ಜ್ಞಾನಯೋಗಾದಿಗಳ ಫಲವನ್ನು, ಭಗವತ್‌ಸ್ವರೂಪವನ್ನು ತಿಳಿಯುವ ಮಾರ್ಗವನ್ನು ಭೀಷ್ಮರು ಮನು-ಬೃಹಸ್ಪತಿಗಳ ಸಂವಾದದ ಮೂಲಕ ಧರ್ಮರಾಜನಿಗೆ ತಿಳಿಸಿದುದು 235

28. ಮನು-ಬೃಹಸ್ಪತಿಸಂವಾದದಲ್ಲಿ ಮೂಡಿಬಂದ ಸೃಷ್ಟಿಕ್ರಮವನ್ನು ಭೀಷ್ಮರು ನಿರೂಪಿಸಿದುದು 244

29. ಮನು-ಬೃಹಸ್ಪತಿ ಸಂವಾದ 253

30. ಪರಮಾತ್ಮನ ಸಾಕ್ಷಾತ್ಕಾರ, ಉಪಾಯ ಮತ್ತು ಅದರ ಮಹತ್ವ 260

31. ಪರಬ್ರಹ್ಮಪ್ರಾಪ್ತಿಗೆ ಉಪಾಯ 266

32. ಭೀಷ್ಮರು ಯುಧಿಷ್ಠಿರನನ್ನು ಕುರಿತು ಮನು-ಬೃಹಸ್ಪತಿ ಸಂವಾದದ ಅನುವಾದವನ್ನು ಮುಕ್ತಾಯಗೊಳಿಸಿದುದು 271

33. ಭೀಷ್ಮರು ಯುಧಿಷ್ಠಿರನನ್ನು ಕುರಿತು ನಿಬಂಧನನೆಂಬ ಮುನಿಯು ತನ್ನ ತಾಯಿಗೆ ಸಂಸಾರವನ್ನು ಅರಣ್ಯರೂಪವಾಗಿ ನಿರೂಪಿಸಿದ ಕಥೆಯನ್ನು ಹೇಳಿದುದು. ಅದರಂತೆ ನಾರದ, ಸಾವಿತ್ರೀ ಸಂವಾದವನ್ನು, ನಾರದರ ತಪಸ್ಸು, ವಿಷ್ಣುವಿಗೆ ನಾರದರಿಗೆ ಪ್ರತ್ಯಕ್ಷವಾದ ಬಗೆ - ಇವುಗಳನ್ನು ನಿರೂಪಿಸಿದುದು 285

34. ಭೀಷ್ಮರು ಯುಧಿಷ್ಠಿರನಿಗೆ ಭಗವಂತನ ಸೃಷ್ಟಿಯ ಪ್ರಕಾರವನ್ನೂ, ಭಗವಂತನ ಅವತಾರ ಕ್ರಮಗಳನ್ನೂ, ಶ್ರೀಕೃಷ್ಣನ ಸರ್ವೋತ್ತಮತ್ವವನ್ನೂ ನಿರೂಪಿಸಿದುದು 301

35. ಮರೀಚ್ಯಾದಿಗಳಲ್ಲಿರುವ ವಂಶಕ್ರಮವನ್ನೂ, ಬೇರೆ ಬೇರೆ ದಿಕ್ಕುಗಳಲ್ಲಿರುವ ಮಹರ್ಷಿಗಳನ್ನು ಭೀಷ್ಮರು ಯುಧಿಷ್ಠಿರನಿಗೆ ತಿಳಿಸಿದುದು 315

36. ಭೀಷ್ಮರು ಯುಧಿಷ್ಠಿರನನ್ನು ಕುರಿತು ಹರಿಯ ವರಾಹಾವತಾರ ಚರಿತ್ರೆಯನ್ನು ನಿರೂಪಿಸಿದುದು 322

37. ಭೀಷ್ಮರು ಯುಧಿಷ್ಠಿರನಿಗೆ ನಾರದರ ಕಥೆಯ ಮೂಲಕವಾಗಿ ಶ್ರೀಕೃಷ್ಣನ ತತ್ತ್ವವನ್ನು ನಿರೂಪಿಸಿದುದು 334

38. ವಿಷ್ಣುವು ನಾರದರಿಗೆ ಮನುಷ್ಯನು ತನ್ನ ಅವಸಾನಕಾಲದಲ್ಲಿ ಜಪಿಸುವ ಮಂತ್ರವನ್ನುಪದೇಶಿಸಿದ ವಿಷಯವನ್ನು ಭೀಷ್ಮನು ಯುಧಿಷ್ಠಿರನಿಗೆ ಹೇಳಿದುದು 351

39. ಭೀಷ್ಮಾಚಾರ್ಯರು ಗರುಡನು ತನಗೆ ತಿಳಿಸಿದ್ದ ಭಗವಂತನ ಮಹಿಮೆಯನ್ನು ಯುಧಿಷ್ಠಿರನಿಗೆ ತಿಳಿಸಿದುದು 369

40. ಭೀಷ್ಮರು ಯುಧಿಷ್ಠಿರನನ್ನು ಕುರಿತು ಗುರು-ಶಿಷ್ಯ ಸಂವಾದದಿಂದ ಅಧ್ಯಾತ್ಮ ತತ್ತ್ವವನ್ನು ತಿಳಿಸಿದುದು 385

41. ಜಗತ್ಸೃಷ್ಟ್ಯಾದಿ ಪ್ರತಿಪಾದಕ ಗುರು-ಶಿಷ್ಯ ಸಂವಾದವನ್ನು ಭೀಷ್ಮರು ಯುಧಿಷ್ಠಿರನನ್ನು ಕುರಿತು ಹೇಳಿದುದು 398

42. ನಿಷಿದ್ಧಾಚರಣೆಗಳ ತ್ಯಾಗ. ಸತ್ತ್ವ-ರಜಸ್ತಮೋಗುಣಗಳ ಕಾರ್ಯ ಮತ್ತು ಅವುಗಳ ಪರಿಣಾಮಗಳ ಬಗ್ಗೆ ನಡೆದ ಗುರು-ಶಿಷ್ಯರ ಸಂವಾದವನ್ನು ಭೀಷ್ಮರು ಯುಧಿಷ್ಠಿರನಿಗೆ ತಿಳಿಸಿದುದು 405

43. ಭೀಷ್ಮರು ಯುಧಿಷ್ಠಿರನನ್ನು ಕುರಿತು ಅಧ್ಯಾತ್ಮವನ್ನು ಅನುವಾದಿಸಿದುದು 417

44. ಬ್ರಹ್ಮಚರ್ಯ ಮತ್ತು ವೈರಾಗ್ಯದಿಂದ ಮುಕ್ತಿ ಕಥನವು 424

45. ಭೀಷ್ಮರು ಯುಧಿಷ್ಠಿರನನ್ನು ಕುರಿತು, ವೈರಾಗ್ಯವು ಮೋಕ್ಷಕ್ಕೆ ಕಾರಣವೆಂದು ತಿಳಿಸಿದುದು 431

46. ಭೀಷ್ಮರು ಗುರು-ಶಿಷ್ಯರ ಸಂವಾದದಲ್ಲಿ ತಿಳಿಸಲ್ಪಟ್ಟ ಪರಮಾತ್ಮನ ಸಾಕ್ಷಾತ್ಕರಿಸುವ ಮಾರ್ಗಗಳನ್ನು ಯುಧಿಷ್ಠಿರನಿಗೆ ತಿಳಿಸಿದುದು 439

47. ಪರಮಾತ್ಮನ ಜ್ಞಾನವನ್ನು ಪಡೆಯುವ ಮಾರ್ಗಗಳನ್ನು ಗುರು-ಶಿಷ್ಯರ ಸಂವಾದದ ಮೂಲಕ ಭೀಷ್ಮರು ಯುಧಿಷ್ಠಿರನಿಗೆ ಬೋಧಿಸಿದುದು 446

48. ಪಂಚಶಿಖಿನಿಗೂ ಜನಕನಿಗೂ ನಡೆದ ಸಂವಾದವನ್ನು, ನಾಸ್ತಿಕಮತ ಖಂಡನೆಯನ್ನು ಯುಧಿಷ್ಠಿರನಿಗೆ ಭೀಷ್ಮರು ತಿಳಿಸಿದುದು 457

49. ಭೀಷ್ಮರು ಯುಧಿಷ್ಠಿರನನ್ನು ಕುರಿತು ಪಂಚಶಿಖಿನು ಜನಕರಾಜನಿಗೆ ಹೇಳಿದ ಉಪದೇಶಗಳನ್ನು ತಿಳಿಸಿದುದು 471

51. ಪಂಚಶಿಖಿನು ಜನಕಮಹಾರಾಜನಿಗೆ ಮೋಕ್ಷತತ್ತ್ವವನ್ನು ಉಪದೇಶಿಸಿದ ಬಗೆಯನ್ನು ಯುಧಿಷ್ಠಿರನಿಗೆ ಭೀಷ್ಮರು ತಿಳಿಸಿದುದು 482

52. ಭೀಷ್ಮರು ಯುಧಿಷ್ಠಿರನನ್ನು ಕುರಿತು ಜನಕನ ಉಪಾಖ್ಯಾನವನ್ನು ಹೇಳಿದುದು 500

53. ಗೃಹಸ್ಥಾಶ್ರಮದಲ್ಲಿಯೂ ಮೋಕ್ಷಸಾಧನೆಯನ್ನು ಮಾಡಿಕೊಳ್ಳಬಹುದು ಎಂದು ತಿಳಿಸಲು ಭೀಷ್ಮರು ಯುಧಿಷ್ಠಿರನಿಗೆ ಸುವರ್ಚಲೋಪಾಖ್ಯಾನವನ್ನು ಹೇಳಿದುದು 505

54. ಭೀಷ್ಮರು ಯುಧಿಷ್ಠಿರನಿಗೆ ದಮದ ಮಹಿಮೆಯನ್ನು ಬೋಧಿಸಿದುದು 533

55. ಭೀಷ್ಮರು ಯುಧಿಷ್ಠಿರನನ್ನು ಕುರಿತು ವ್ರತ-ತಪಸ್ಸು-ಉಪವಾಸ-ಬ್ರಹ್ಮಚರ್ಯ-ಅತಿಥಿಸೇವೆ ಮೊದಲಾದವುಗಳ ಬಗ್ಗೆ ತಿಳಿಸಿದುದು 538

56. ಭೀಷ್ಮರು ಯುಧಿಷ್ಠಿರನನ್ನು ಕುರಿತು ಭಗವತ್ಸ್ವರೂಪನಿರೂಪವನ್ನು ನಿರೂಪಿಸುವ ಸನತ್ಕುಮಾರಮುನಿಗಳ ಸಂವಾದವನ್ನು ತಿಳಿಸಿದುದು 542

57. ಭೀಷ್ಮರು ಯುಧಿಷ್ಠಿರನನ್ನು ಕುರಿತು ತಪಃಶಬ್ದಕ್ಕೆ ಅನೇಕ ಅರ್ಥವನ್ನು ಹೇಳುವ ಮೂಲಕ ತಮ್ಮ ಮತದ ಪ್ರಕಾರ ತಪಃಶಬ್ದಕ್ಕೆ ಜ್ಞಾನವೆಂಬ ಅರ್ಥವನ್ನು ಹೇಳಿದುದು. ಜ್ಞಾನವು ಮೋಕ್ಷಸಾಧನವೆಂದು ದೃಷ್ಟಾಂತವನ್ನು ತಿಳಿಸಲು ಸುವರ್ಚಲಾ ಚರಿತ್ರವನ್ನು ಪುನಃ ಹೇಳಿದುದು 556

58. ಭೀಷ್ಮರು ಯುಧಿಷ್ಠಿರನನ್ನು ಕುರಿತು ಜ್ಞಾನವೇ ಮೋಕ್ಷಸಾಧನವೆಂದು ತಿಳಿಸಲು ಇಂದ್ರ-ಪ್ರಹ್ಲಾದರ ಸಂವಾದವನ್ನು ನಿರೂಪಿಸಿದುದು 565

59. ಇಂದ್ರ ಮತ್ತು ಬಲಿಯ ಸಂವಾದ. ಇಂದ್ರನು ತನ್ನನ್ನು ಅವಮಾನವಾಗುವಂತೆ ಮಾತನಾಡಿದ ಎಂದು ಕತ್ತೆ ರೂಪದಿಂದ ಬಲಿಯು ಆಗಮಿಸಿ, ಅವನಿಗೆ ಗರ್ವಭಂಗವಾಗುವಂತೆ ಉತ್ತರವನ್ನು ನೀಡಿದ ಪ್ರಸಂಗವನ್ನು ಯುಧಿಷ್ಠಿರನಿಗೆ ಭೀಷ್ಮರು ನಿರೂಪಿಸಿದುದು 581

60. ಇಂದ್ರ-ಬಲಿಯ ಸಂವಾದ. ಬಲಿಯು ಕಾಲದ ಮಹಿಮೆಯನ್ನು ಪ್ರತಿಪಾದಿಸುತ್ತಾ ಇಂದ್ರನನ್ನು ನಿಂದಿಸಿದುದು 588

61. ಇಂದ್ರನಿಗೆ ಲಕ್ಷ್ಮೀ ಮಾಡಿದ ಅನುಗ್ರಹ 602

62. ಭೀಷ್ಮರು ಯುಧಿಷ್ಠಿರನಿಗೆ ಇಂದ್ರ-ನಮುಚಿಗಳ ಸಂವಾದವನ್ನು ನಿರೂಪಿಸಿದುದು 611

63. ಭೀಷ್ಮರು ಯುಧಿಷ್ಠಿರನನ್ನು ಕುರಿತು, ವಿಪತ್ತಿನಲ್ಲಿ ಧೈರ್ಯವನ್ನು ಅವಲಂಬಿಸಲು ಸುಖ ಸಾಧನವನ್ನು ಪ್ರತಿಪಾದಿಸುವ ಬಲಿ-ಶಕ್ರರ ಸಂವಾದವನ್ನು ನಿರೂಪಿಸಿದುದು 617

64. ಗಂಗಾತೀರದಲ್ಲಿದ್ದ ಇಂದ್ರ-ನಾರದರ ಬಳಿಗೆ ಲಕ್ಷ್ಮ್ಯಾಯು ಬಂದು, ತಾನು ಸೇರಿರುವ ಪುರುಷನಲ್ಲಿ ಇರಬೇಕಾಗಿರುವ ಗುಣಗಳನ್ನು, ಕಾರಣಗಳಾದ ದೋಷಗಳನ್ನು ಅವರಿಗೆ ತಿಳಿಸಿದುದು 643

65. ಬ್ರಹ್ಮಜ್ಞಾನಿಗಳ ಲಕ್ಷಣಗಳನ್ನು ಕುರಿತು ದೇವಲಋಷಿಗೂ, ಜೈಗೀಷವ್ಯರಿಗೂ ನಡೆದ ಸಂವಾದ. ಶಿವ-ಪಾರ್ವತಿಯರು ಜೈಗೀಷವ್ಯರನ್ನು ಪರೀಕ್ಷಿಸಿದುದು 669

★ ★ ★ ★ ★

ಮಹಾಭಾರತ

ಮೋಕ್ಷಧರ್ಮಪರ್ವ

ಒಂದನೆಯ ಅಧ್ಯಾಯ

ಧರ್ಮರಾಜನ ಮನಸ್ಸಿಗೆ ಶಾಂತಿಯನ್ನು ನೀಡಲು ಭೀಷ್ಮರು ಸೇನಜಿತ ಮತ್ತು ಬ್ರಾಹ್ಮಣನ ಸಂವಾದವನ್ನು ಹೇಳಿದುದು.

ಯುಧಿಷ್ಠಿರಃ

ಧರ್ಮಾಃ ಪಿತಾಮಹೇನೋಕ್ತಾ ರಾಜಧರ್ಮಾಶ್ರಿತಾಃ ಶುಭಾಃ ।
ಧರ್ಮಮಾಶ್ರಮಿಣಾಂ ಶ್ರೇಷ್ಠಂ ವಕ್ತುಮರ್ಹಸಿ ಪಾರ್ಥಿವ ॥ ೧ ॥

ಯುಧಿಷ್ಠಿರ– ಪಿತಾಮಹನೇ, ಇಲ್ಲಿಯ ತನಕ ರಾಜಧರ್ಮಕ್ಕೆ ಸಂಬಂಧಿಸಿದ, ರಾಜರಿಗೆ ಶುಭಕರವಾದ ಅನೇಕ ಧರ್ಮಗಳನ್ನು ನೀನು ವಿವರಿಸಿರುವಿ. ಈಗ ಚತುರಾಶ್ರಮಿಗಳಿಗೆ ಶ್ರೇಷ್ಠವಾದ ಧರ್ಮವು ಯಾವುದೆಂಬುದನ್ನು ತಿಳಿಸು.

ಭೀಷ್ಮಃ

ಸರ್ವತ್ರ ವಿಹಿತೋ ಧರ್ಮಃ ಸ್ವರ್ಗ್ಯಃ ಸತ್ಯಫಲಂ ತಪಃ ।
ಬಹುದ್ವಾರಸ್ಯ ಧರ್ಮಸ್ಯ ನೇಹಾಸ್ತಿ ವಿಫಲಾ ಕ್ರಿಯಾ ॥ ೨ ॥

ಭೀಷ್ಮ– ಯುಧಿಷ್ಠಿರನೇ, ವೇದಗಳಲ್ಲಿ ಎಲ್ಲೆಡೆಯೂ ಸ್ವರ್ಗಫಲ ಸಾಧನವಾದ ಧರ್ಮವು ಹೇಳಲ್ಪಟ್ಟಿದೆ. ವೇದದಲ್ಲಿ ಸತ್ಯಫಲವು, ತಪಸ್ಸು ಹೇಳಲ್ಪಟ್ಟಿದೆ. ಧರ್ಮಕ್ಕೆ ಅನೇಕ ದ್ವಾರಗಳಿವೆ. ಧರ್ಮದ ಕಾರ್ಯವು ಎಂದಿಗೂ ವಿಫಲವಾಗುವುಗಳಲ್ಲ.

ಯಸ್ಮಿನ್ ಯಸ್ಮಿಂಸ್ತು ವಿಷಯೇ ಯೋ ಯೋ ಯಾತಿ ವಿನಿಶ್ಚಯಮ್ ।
ಸ ತಮೇವಾಭಿಜಾನಾತಿ ನಾನ್ಯಂ ಭರತಸತ್ತಮ ॥ ೩ ॥

ಯಾವ ವ್ಯಕ್ತಿಯು ಯಾವ ಯಾವ ವಿಷಯದಲ್ಲಿ ಅರ್ಥಾತ್ ಸ್ವರ್ಗಾದಿ ಫಲಗಳಲ್ಲಿ ತನ್ನ ಉದ್ದೇಶವನ್ನಿಡುತ್ತಾನೋ ಆ ಉದ್ದೇಶಕ್ಕೆ ಅನುಗುಣವಾದ ಮಾರ್ಗವನ್ನೇ ಹುಡುಕಿ ಆ ದಾರಿಯಲ್ಲಿ ಸಾಗುತ್ತಾನೆ. ಅವನಿಗೆ ಬೇರೆ ಮಾರ್ಗವು ದೃಷ್ಟಿಗೆ ಬೀಳದು.

ಯಥಾ ಯಥಾ ಚ ಪಶ್ಯೇತಿ ಲೋಕತಂತ್ರಮಸಾರವತ್ ।
ತಥಾ ತಥಾ ವಿರಾಗೋಽತ್ರ ಜಾಯತೇ ನಾತ್ರ ಸಂಶಯಃ ॥ ೪ ॥

ಲೋಕದಲ್ಲಿ ಸುಖಸಾಧನಗಳಾದ ವಸ್ತುಗಳು ಯಾವ ವಿಧವಾಗಿ ನಮಗೆ ಅಸಾರವಾಗಿ ಮನಸ್ಸಿಗೆ ತೋರುತ್ತವೋ ಅದೇ ರೀತಿಯಲ್ಲಿ ಅವುಗಳಲ್ಲಿ ವೈರಾಗ್ಯ ಹುಟ್ಟುತ್ತಾ ಬರುತ್ತದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಏವಂ ವ್ಯವಸಿತೇ ಲೋಕೇ ಬಹುದೋಷೇ ಯುಧಿಷ್ಠಿರ ।
ಆತ್ಮಮೋಕ್ಷನಿಮಿತ್ತಂ ವೈ ಯತೇತ ಮತಿಮಾನ್ ನರಃ ॥ ೫ ॥

ಧರ್ಮರಾಜನೇ, ನಮ್ಮ ಪುರುಷಾರ್ಥವೆನಿಸಿದ ಮೋಕ್ಷದ ವಿಷಯದಲ್ಲಿ ನಿನಗೆ ದುಃಖವಲ್ಲ. ಮೋಕ್ಷದ ವಿಷಯದಲ್ಲಿರುವ ಅಜ್ಞಾನವೇ ನಿನ್ನನ್ನು ದುಃಖಕ್ಕೆ ಈಡು ಮಾಡಿದೆ. ಧರ್ಮರಾಜನೇ, ಅನೇಕ ದೋಷಗಳಿಂದ ತುಂಬಿರುವ ಈ ಪ್ರಪಂಚದ ಸ್ಥಿತಿಯು ಹೀಗಿರುವುದರಿಂದ ಧೀಮಂತನಾದ ವ್ಯಕ್ತಿಯು ಎಲ್ಲ ಸುಖ ಸಾಧನಗಳಿಗಿಂತಲೂ ಉತ್ತಮ ಸುಖವಾದ ಮೋಕ್ಷಕ್ಕಾಗಿಯೇ ಪ್ರಯತ್ನವನ್ನು ಮಾಡಬೇಕು. ಅಶಾಶ್ವತವಾದ ಫಲಗಳನ್ನು ಉದ್ದೇಶಿಸಿಕೊಂಡು ಕಾರ್ಯದಲ್ಲಿ ಪ್ರವೃತ್ತನಾಗಬಾರದು.

ಯುಧಿಷ್ಠಿರಃ

ನಷ್ಟೇ ಧನೇ ವಾ ದಾರೇ ವಾ ಪುತ್ರೇ ಪಿತರಿ ವಾ ಮೃತೇ ।
ಯಯಾ ಬುದ್ಧ್ಯಾ ನುದೇಚ್ಛೋಕಂ ತನ್ಮೇ ಬ್ರೂಹಿ ಪಿತಾಮಹ ॥ ೬ ॥

ಯುಧಿಷ್ಠಿರ– ಎಲೈ ಪಿತಾಮಹನೇ, ತನ್ನಲ್ಲಿರುವ ಧನವನ್ನು ಮನುಷ್ಯನು ಕಳೆದುಕೊಂಡರೆ ಅಥವಾ ಹೆಂಡತಿಯನ್ನು, ಮಗನನ್ನು ಕಳೆದುಕೊಂಡರೆ, ತಂದೆಯು ಮೃತನಾದರೆ ಅವನು ತನಗೆ ಉಂಟಾಗಿರುವ ಆ ವಿಯೋಗದ ದುಃಖವನ್ನು ಹೇಗೆ ಪರಿಹರಿಸಿಕೊಳ್ಳಬೇಕು? ಎಂತಹ ಬುದ್ಧಿಯನ್ನು ಅವಲಂಬಿಸಿ ಆ ದುಃಖವನ್ನು ಶಾಂತಗೊಳಿಸಬಹುದು? ಅದನ್ನು ನನಗೆ ತಿಳಿಸಿ.

ಭೀಷ್ಮಃ

ನಷ್ಟೇ ಧನೇ ವಾ ದಾರೇ ವಾ ಪುತ್ರೇ ಪಿತರಿ ವಾ ಮೃತೇ ।
ಅಹೋ ದುಃಖಮಿತಿ ಧ್ಯಾಯನ್ ಶೋಕಸ್ಯಾಪಚಿತಿಂ ಚರೇತ್ ॥ ೭ ॥

ಭೀಷ್ಮ– ಧರ್ಮರಾಜನೇ, ಒಬ್ಬ ಮನುಷ್ಯನಿಗೆ ಧನವು ನಷ್ಟವಾದರೂ ಹೆಂಡತಿ, ಮಕ್ಕಳು ಮೊದಲಾದ ಬಂಧುಗಳು, ತಂದೆಯು ಮೃತನಾದರೂ ಅದನ್ನು ಹೆಚ್ಚು ಮನಸ್ಸಿಗೆ ಹಚ್ಚಿಕೊಳ್ಳಬಾರದು. ಇದೊಂದು ದುಃಖ ಸನ್ನಿವೇಶ ಒದಗಿತೆಂದು ತಿಳಿದು ಅದರ ಪರಿಹಾರಕ್ಕೆ ಬೇಕಾದ ಆಲೋಚನೆಯನ್ನು ಆಚರಿಸಬೇಕು. ಹೀಗೆ ಬೌದ್ಧಿಕವಾಗಿಯೇ ಈ ದುಃಖವನ್ನು ಪರಿಹರಿಸಿಕೊಳ್ಳಬೇಕು.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಯಥಾ ಸೇನಜಿತಂ ವಿಪ್ರಃ ಕಶ್ಚಿದಿತ್ಯಬ್ರವೀದ್ ವಚಃ ॥ ೮ ॥

ಇದೇ ವಿಷಯದಲ್ಲಿ ಒಬ್ಬ ಬ್ರಾಹ್ಮಣನಿಗೂ ಸೇನಜಿತ್ ಎಂಬ ರಾಜನಿಗೂ ನಡೆದ ಪುರಾತನವಾದ ಇತಿಹಾಸವನ್ನು ನಿನಗೆ ಹೇಳುತ್ತೇನೆ, ಕೇಳು.

ಪುತ್ರಶೋಕಾಭಿಸಂತಪ್ತಂ ರಾಜಾನಂ ಶೋಕವಿಹ್ವಲಮ್ ।
ವಿಷಣ್ಣವದನಂ ದೃಷ್ಟ್ವಾ ವಿಪ್ರೋ ವಚನಮಬ್ರವೀತ್ ॥ ೯ ॥

ಒಮ್ಮೆ ಬ್ರಾಹ್ಮಣನೊಬ್ಬನು ತನ್ನ ಸ್ನೇಹಿತನಾಗಿರುವ ಸೇನಜಿತ್ ಎಂಬುವನ ಬಳಿಗೆ ಆಗಮಿಸಿದನು. ಆ ಸಮಯದಲ್ಲಿ ಸೇನಜಿತ್ ತನ್ನ ಮಗನ ಮರಣದಿಂದ ದುಃಖ

ಪಡುತ್ತಾ ಏನೂ ತೋರದೆ ವಿಷಣ್ಣವದನನಾಗಿ ಕುಳಿತುಕೊಂಡಿರುವುದನ್ನು ನೋಡಿದ ಬ್ರಾಹ್ಮಣನು ಇಂತು ಅವನನ್ನುದ್ದೇಶಿಸಿ ಹೇಳಿದನು.

ಕಿಂ ನು ಖಿಲ್ವಸಿ ಮೂಢಸ್ತ್ವಂ ಶೋಚ್ಯಃ ಕಿಮನುಶೋಚಸಿ ।
ಯದಾ ತ್ವಾಮಪಿ ಶೋಚಂತಃ ಶೋಚ್ಯಾ ಯಾಸ್ಯಂತಿ ತಾಂ ಗತಿಮ್ ॥

ಅಯ್ಯಾ ! ಜಡನಂತೆ ನೀನು ಬುದ್ಧಿಶೂನ್ಯನಾಗಿ ಏಕೆ ಕುಳಿತಿರುವಿ? ಮೂಢನಾಗಿ ಯಾರಿಗಾಗಿ ದುಃಖಪಡುತ್ತಿರುವಿ? ನಿನ್ನನ್ನು ಕುರಿತು ಮತ್ತೊಬ್ಬರು ಶೋಕಿಸಬೇಕಾದ ಸ್ಥಿತಿಯಲ್ಲಿರುವಾಗ ನೀನು ಇನ್ನೊಬ್ಬರಿಗೋಸ್ಕರ ದುಃಖವನ್ನು ಏಕೆ ಪಡುತ್ತಿರುವಿ? ಇನ್ನು ಕೆಲವು ದಿನಗಳು ಉರುಳಿ ಹೋದರೆ ನಿನಗಾಗಿ ಬೇರೆಯವರು ದುಃಖಿಸಬೇಕಾಗುತ್ತದೆ. ಬಳಿಕ ಅವರು ನಿನ್ನ ಸ್ಥಿತಿಯನ್ನು ತಲುಪಿದಾಗ ಮತ್ತೊಬ್ಬರು ಅವರಿಗಾಗಿ ಶೋಕಿಸುತ್ತಾರೆ. ಎಲ್ಲರ ಸ್ಥಿತಿಯೂ ಹೀಗೆಯೇ ಇರುತ್ತದೆ.

ತ್ವಂ ಚೈವಾಹಂ ಚ ಯೇ ಚಾನ್ಯೇ ತ್ವಾಂ ರಾಜನ್ ಪರ್ಯುಪಾಸತೇ ।
ಸರ್ವೇ ತತ್ರ ಗಮಿಷ್ಯಾಮೋ ಯತ ಏವಾಗತಾ ವಯಮ್ ॥ ೧೧ ॥

ನೀನಾಗಲೀ, ನಾನಾಗಲೀ, ನಿನ್ನನ್ನು ಆಶ್ರಯಿಸಿರುವ ಇತರ ಜನರಾಗಲೀ ನಾವೆಲ್ಲರೂ ಎಲ್ಲಿಂದ ಆಗಮಿಸಿದ್ದೆವೋ ಅಲ್ಲಿಗೇ ನಿಶ್ಚಿತವಾಗಿಯೂ ತೆರಳುತ್ತೇವೆ ಎಂದು ಹೇಳಿದನು.

ಸೇನಜಿತ್

ಕಾ ಬುದ್ಧಿಃ ಕಿಂ ತಪೋ ವಿಪ್ರ ಕಃ ಸಮಾಧಿಸ್ತಪೋಧನ ।
ಕಿಂ ಜ್ಞಾನಂ ಕಿಂ ಶ್ರುತಂ ವಾ ತೇ ಯತ್ ಪ್ರಾಪ್ಯ ನ ವಿಷೀದಸಿ ॥ ೧೨ ॥

ಸೇನಜಿತ್– ಎಲೈ ಬ್ರಾಹ್ಮಣಶ್ರೇಷ್ಠನೇ, ತಪೋಧನನೇ, ಯಾವ ಮಾರ್ಗವನ್ನು ಅನುಸರಿಸಿದ್ದಲ್ಲಿ ನನ್ನ ಈ ಮನಸ್ಸಿನ ದುಃಖವು ಬಿಟ್ಟುಹೋಗುತ್ತದೋ ಅಂತಹ ಬುದ್ಧಿಯಾಗಲೀ, ತಪಸ್ಸಾಗಲೀ, ಸಮಾಧಿಯಾಗಲೀ, ಜ್ಞಾನವಾಗಲೀ, ವಿದ್ಯೆಯಾಗಲೀ ಇದ್ದರೆ ಅದನ್ನು ನನಗೆ ತಿಳಿಸಬೇಕು.

ಹೃಷ್ಯಂತಮವಸೀದಂತಂ ಸುಖದುಃಖವಿಪರ್ಯಯೇ ।
ಆತ್ಮಾನಮನುಶೋಚಾಮಿ ಯೋ ಮಮೈಷ ಹೃದಿ ಸ್ಥಿತಃ ॥ ೧೩ ॥

ಆಗಮಿಸಿದ ಸುಖವು ಕೈತಪ್ಪಿದಾಗ ಆತ್ಮನು ದುಃಖಕ್ಕೀಡಾಗುತ್ತಾನೆ. ಒದಗಿ ಬಂದ ದುಃಖವು ಪರಿಹಾರವಾಗಿ ಸುಖವು ಬಂದಾಗ ಸಂಭ್ರಮಿಸುತ್ತಾನೆ. ಈ ರೀತಿಯಾದ ಸುಖ-ದುಃಖಗಳನ್ನು ಹೊಂದುವ ಮನಸ್ಸನ್ನು ಪಡೆದುಕೊಂಡು ದುಃಖಕ್ಕೆ ಈಡಾಗಿರುತ್ತೇನೆ. ಇದಕ್ಕೆ ಪರಿಹಾರವನ್ನು ತಿಳಿಸು.

ಬ್ರಾಹ್ಮಣಃ

ಪಶ್ಯ ಭೂತಾನಿ ದುಃಖೇನ ವ್ಯತಿಷಕ್ತಾನಿ ಸರ್ವಶಃ ।
ಆತ್ಮಾಪಿ ಚಾಯಂ ನ ಮಮ ಸರ್ವಾ ವಾ ಪೃಥಿವೀ ಮಮ ॥ ೧೪ ॥

ಬ್ರಾಹ್ಮಣ– ಎಲೈ ಮಿತ್ರನೇ, ಸಮಸ್ತ ಪ್ರಾಣಿಗಳು ಭಿನ್ನ ಭಿನ್ನ ಅವಸ್ಥೆಗಳನ್ನು ಪಡೆದು ತಮ್ಮ-ತಮ್ಮ ಕರ್ಮಗಳಿಗೆ ಅನುಗುಣವಾಗಿ ದುಃಖದಲ್ಲೇ ಸಿಲುಕಿ ಸಂಕಟ ಪಡುತ್ತಿರುವುದನ್ನು ನೀನು ನೋಡುತ್ತಿರುವೆ. ಈ ದುಃಖವೆಂಬುದೆಲ್ಲಾ ನಾನು, ನನ್ನದು ಎಂಬ ಮೋಹದಿಂದ ಉಂಟಾಗುತ್ತದೆ. ಆದರೆ ನಾನು ಅಸ್ವತಂತ್ರನೆಂದು ತಿಳಿದಿರುತ್ತೇನೆ. ಅಸ್ವತಂತ್ರನಾದ ನಾನು ನನ್ನ ಅಧೀನವಲ್ಲವೆಂದ ಬಳಿಕ ಈ ಸಮಗ್ರ ಪೃಥಿವಿಯೂ ನನ್ನದಾಗಿರುವುದಿಲ್ಲ. ನನ್ನದು ಎಂಬ ಮೋಹವೇ ದುಃಖಕ್ಕೆ ಕಾರಣವಾಗಿದೆ.

ಯಥಾ ಮಮ ತಥಾನ್ಯೇಷಾಮಿತಿ ಬುದ್ಧ್ಯಾ ನ ಮೇ ವ್ಯಥಾ ।
ಏತಾಂ ಬುದ್ಧಿಮಹಂ ಪ್ರಾಪ್ಯ ನ ಪ್ರಹೃಷ್ಯೇ ನ ಚ ವ್ಯಥೇ ॥ ೧೫ ॥

ನನಗೆ ಹೇಗೆ ಅಸ್ವಾತಂತ್ರ್ಯವಿದೆಯೋ ಅದೇ ರೀತಿಯಾಗಿ ಮತ್ತೊಬ್ಬರೂ ಅಸ್ವತಂತ್ರರು ಎಂದು ತಿಳಿದಿರುವುದರಿಂದ ನಾನು ದುಃಖಕ್ಕೆ ತುತ್ತಾಗುವುದಿಲ್ಲ. ಈ ರೀತಿಯಾದ ಸಮಚಿತ್ತವನ್ನು ಹೊಂದಿರುವುದರಿಂದ ಜಗತ್ತಿನ ಸುಖ-ದುಃಖದ ವಿಷಯದಲ್ಲಿ ಸಂತೋಷವನ್ನಾಗಲೀ, ದುಃಖವನ್ನಾಗಲೀ ನಾನು ಹೊಂದುವುದಿಲ್ಲ.

ಯಥಾ ಕಾಷ್ಠಂ ಚ ಕಾಷ್ಠಂ ಚ ಸಮೇಯಾತಾಂ ಮಹೋದಧೌ ।
ಸಮೇತ್ಯ ಚ ವ್ಯಪೇಯಾತಾಂ ತದ್ವದ್ಭೂತಸಮಾಗಮಃ ॥ ೧೬ ॥

ಸಮುದ್ರದಲ್ಲಿ ನೀರಿನ ಹೊಡೆತಗಳಿಂದ ತೇಲಿಬರುವ ಎರಡು ಕಟ್ಟಿಗೆಗಳು ಒಂದೊಂದು ಬಾರಿ ಒಟ್ಟಾಗಿ ಬಂದು ಸೇರುತ್ತವೆ. ಇನ್ನೊಂದು ಅಲೆ ಬಡಿದಾಗ ಅದರಂತೆ ದೂರಕ್ಕೆ ಸರಿಯುತ್ತದೆ. ಅದೇ ರೀತಿಯಾಗಿ ಈ ಜಗತ್ತಿನಲ್ಲಿ ಪ್ರಾಣಿಗಳು

ಒಮ್ಮೊಮ್ಮೆ ಅನ್ಯೋನ್ಯ ಸಂಬಂಧದಿಂದ ಇರುತ್ತವೆ. ಕಾಲಕ್ರಮದಿಂದ ಅಗಲಿ ಹೋಗುತ್ತವೆ.

ಏವಂ ಪುತ್ರಾಶ್ಚ ಪೌತ್ರಾಶ್ಚ ಜ್ಞಾತಯೋ ಬಾಂಧವಾಸ್ತಥಾ ।
ತೇಷು ಸ್ನೇಹೋ ನ ಕರ್ತವ್ಯೋ ವಿಪ್ರಯೋಗೋ ಹಿ ತೈರ್ಧ್ರುವಮ್ ॥

ಇದೇ ರೀತಿಯಾಗಿ ಮಕ್ಕಳು, ಮೊಮ್ಮಕ್ಕಳು, ಜ್ಞಾತಿಗಳು, ಬಂಧುಗಳು ಎಂಬ ಈ ಸಂಗಗಳೆಲ್ಲವೂ ಸಮುದ್ರದ ಕಟ್ಟಿಗೆಯಂತೆಯೇ ಅಸ್ಥಿರ ಸಂಬಂಧವನ್ನು ಹೊಂದಿರುತ್ತವೆ. ಇವರ ಸಂಗ, ಇವರ ವಿಯೋಗ ಕಾಲಪ್ರವಾಹದಿಂದ ನಡೆದುಕೊಂಡು ಹೋಗುತ್ತಿರುತ್ತದೆ. ಆದ್ದರಿಂದ ಯಾರಲ್ಲಿಯೂ ತಮ್ಮವರೆಂಬ ಮೋಹವನ್ನು ಇಡಬಾರದು. ಅವರಿಗೂ ನಮಗೂ ಅಗಲಿಕೆ ಎಂಬುದು ನಿಶ್ಚಿತವಾದುದು.

ಅದರ್ಶನಾದಾಪತಿತಃ ಪುನಶ್ಚಾದರ್ಶನಂ ಗತಃ ।
ನ ತಾಸ್ತೌ ವೇದ ನ ತ್ವಂ ತಂ ಕಃ ಸನ್ ಕಮನುಶೋಚಸಿ ॥ ೧೮ ॥

ನಮಗೆ ಹಿಂದೆಂದೂ ತಿಳಿಯದ ಸ್ಥಳದಿಂದ ಅವರು ನಮ್ಮೊಡನೆ ಬಂದು ಸೇರಿರುವರು. ತಿರುಗಿ ನಮಗೆ ತಿಳಿಯದಂತೆ ಎಲ್ಲಿಯೋ ಸಾಗುತ್ತಾರೆ. ಅವರಿಗೆ ನೀನು ಕಾಣಿಸಲಾರೆ. ನಿನಗೆ ಅವರು ಕಾಣಿಸಲಾರರು. ಹೀಗಿರುವಾಗ ನೀನು ಯಾರು? ಯಾರಿಗೋಸ್ಕರ ದುಃಖಿಸುತ್ತೀಯೆ?

ತೃಷ್ಣಾರ್ತಿಪ್ರಭವಂ ದುಃಖಂ ದುಃಖಾರ್ತಿಪ್ರಭವಂ ಸುಖಮ್ ।
ಸುಖಾತ್ ಸಂಜಾಯತೇ ದುಃಖಮೇವಮೇತತ್ ಪುನಃ ಪುನಃ ।
ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಮ್ ॥ ೧೯ ॥

ಮತ್ತೊಂದು ರಹಸ್ಯವನ್ನು ತಿಳಿದುಕೊ. ಯಾವಾಗಲೂ ಸುಖದಿಂದಾಚೆಗೆ ದುಃಖವು ತೋರುತ್ತದೆ. ದುಃಖದಿಂದಾಚೆಗೆ ಸುಖವು ತೋರುತ್ತದೆ. ಇದರಿಂದ ಸುಖದಿಂದ ದುಃಖವು, ದುಃಖದಿಂದ ಸುಖವು ತೋರುವುದೆಂದೇ ತಿಳಿದುಕೊ. ಸುಖವನ್ನು ಹಿಂಬಾಲಿಸಿಕೊಂಡು ದುಃಖವು, ದುಃಖವನ್ನು ಹಿಂಬಾಲಿಸಿಕೊಂಡು ಸುಖವು ಬರುತ್ತದೆ. ಪುನಃ ಪುನಃ ಆಗಮಿಸುವ ಈ ಸುಖ-ದುಃಖಗಳು ಚಕ್ರದಂತೆ ತಿರುಗಿ ತಿರುಗಿ ಬರುತ್ತಿರುತ್ತವೆ.

ಸುಖಾತ್ ತ್ವಂ ದುಃಖಮಾಪನ್ನಃ ಪುನರಾಪತ್ಸ್ಯಸೇ ಸುಖಮ್ ।
ನ ನಿತ್ಯಂ ಲಭತೇ ದುಃಖಂ ನ ನಿತ್ಯಂ ಲಭತೇ ಸುಖಮ್ ॥ ೨೦ ॥

ರಾಜನೇ, ಸುಖದ ಬೆನ್ನನ್ನು ಅಂಟಿಕೊಂಡಿರುವ ದುಃಖವನ್ನು ಹೊಂದುವ ನೀನು ವಿಷಣ್ಣನಾಗಿರುವಿ. ಈ ದುಃಖದ ಬೆನ್ನಿನಲ್ಲೇ ಸುಖವು ಇರುವುದರಿಂದ ಪುನಃ ಸುಖವನ್ನು ಹೊಂದುತ್ತಿ. ನೀನು ಹೊಂದುವ ದುಃಖವೂ ನಿತ್ಯವಾದುದಲ್ಲ, ಸುಖವೂ ನಿತ್ಯವಾದುದಲ್ಲ. ಇವುಗಳನ್ನು ನಿತ್ಯವಾಗಿ ಹೊಂದಲು ಸಾಧ್ಯವಿಲ್ಲ.

ಶರೀರಮೇವಾಯತನಂ ಸುಖಸ್ಯ
ದುಃಖಸ್ಯ ಚಾಪ್ಯಾಯತನಂ ಶರೀರಮ್ ।
ಯದ್ಯಚ್ಛರೀರೇಣ ಕರೋತಿ ಕರ್ಮ
ತೇನೈವ ದೇಹೀ ಸಮುಪಾಶ್ನುತೇ ತತ್ ॥ ೨೧ ॥

ಅಲ್ಲದೇ ಸುಖ-ದುಃಖವೆರಡಕ್ಕೂ ಆದೇಯವಾದುದು ದೇಹವೇ ಹೊರತು ಆತ್ಮವಲ್ಲ. ಯಾವ ವ್ಯಕ್ತಿಯು ಯಾವ ರೀತಿಯಾದ ಶರೀರವನ್ನು ಹೊಂದಿದಾಗ ಯಾವ ಯಾವ ಕರ್ಮಗಳನ್ನು ಆಚರಿಸುತ್ತಾನೋ ಆಯಾ ಕರ್ಮಗಳನ್ನು ಶರೀರದಿಂದಲೇ ಅನುಭವಿಸುತ್ತಾನೆ.

ಜೀವಿತಂ ಚ ಶರೀರಂ ಚ ಜಾತ್ಯೈವ ಸಹ ಜಾಯತೇ ।
ಉಭೇ ಸಹ ವಿವರ್ಧೇತೇ ಉಭೇ ಸಹ ವಿನಶ್ಯತಃ ॥ ೨೨ ॥

ಲೋಕದಲ್ಲಿ ಬದುಕೆಂಬುದು ಶರೀರದ ಜೊತೆಗೆ ಆಗಮಿಸುತ್ತದೆ. ಅವೆರಡು ಒಟ್ಟಿಗೆ ಚಲಿಸುತ್ತಿರುತ್ತವೆ, ಒಟ್ಟಿಗೆ ನಾಶವಾಗುತ್ತವೆ.

ಸ್ನೇಹಪಾಶೈರ್ಬಹುವಿಧೈರಾವಿಷ್ಟವಿಷಯಾ ಜನಾಃ ।
ಅಕೃತಾರ್ಥಾವಸೀದಂತೇ ಜಲ್ಪೈಃ ಸೈಕತಸೇತವಃ ॥ ೨೩ ॥

ಪಕ್ವಬುದ್ಧಿಯಿಲ್ಲದ ಜನರು ಬಗೆಬಗೆಯ ಸ್ನೇಹಪಾಶಗಳಿಂದ ವಿಷಯ ಸುಖಗಳಿಗೆ ಸೆಳೆಯಲ್ಪಟ್ಟು ನೀರಲ್ಲಿ ಕಟ್ಟಿದ ಮರಳಿನ ಸೇತುವೆಗಳಂತೆ ಆ ಜಲಪ್ರವಾಹದಿಂದಲೇ ನಾಶವನ್ನು ಹೊಂದುತ್ತಾರೆ.

ಸ್ನೇಹೇನ ತೈಲವತ್ ಸರ್ವಂ ಸರ್ಗಚಕ್ರೇ ನಿಪೀಡ್ಯತೇ ।
ತಿಲಪೀಡೈರಿವಾಕ್ರಮ್ಯ ಕ್ಲೇಶೈರಜ್ಞಾನಸಂಭವೈಃ ॥ ೨೪ ॥

ಎಣ್ಣೆಗಾಗಿ ಗಾಣಿಗರು ಎಳ್ಳನ್ನು ಹಿಂಡುತ್ತಾರೆ. ಈ ಸ್ನೇಹವೆಂಬುದೇ ಎಣ್ಣೆಯಂತಿದೆ. ಈ ಸ್ನೇಹವೇ ಜನರನ್ನು ಕಷ್ಟಕ್ಕೆ ಗುರಿಮಾಡಿ ಅಜ್ಞಾನದಿಂದ ಉಂಟಾದ ಅನೇಕ ಕ್ಲೇಶಗಳನ್ನು ಹೆಚ್ಚಿಸುತ್ತದೆ. ಗಾಣದಲ್ಲಿ ಎಣ್ಣೆಯನ್ನು ಉಂಟುಮಾಡುವ ಚಕ್ರವು ಎಳ್ಳುಗಳನ್ನು ತಿಕ್ಕಿ-ತೀಡುವಂತೆ ಸ್ನೇಹವೆಂಬ ಭಾವನೆಯಿಂದ ಸಂಸಾರಚಕ್ರವು ಮನುಷ್ಯನನ್ನು ತಿಕ್ಕಿ-ತೀಡುತ್ತದೆ.

ಸಂಚಿನೋತ್ಯಶುಭಂ ಕರ್ಮ ಕಲತ್ರಾಪೇಕ್ಷಯಾ ನರಃ ।
ಏಕಃ ಕ್ಲೇಶಾನವಾಪ್ನೋತಿ ಪರತ್ರೇಹ ಚ ಮಾನವಃ ॥ ೨೫ ॥

ಮನುಷ್ಯನು ತನ್ನ ಹೆಂಡತಿ-ಮಕ್ಕಳಿಗಾಗಿಯೇ ಅಶುಭಕರ್ಮವನ್ನು ಮಾಡುತ್ತಾನೆ. ಇದರಿಂದ ಇಹದಲ್ಲಿಯೂ ಪರದಲ್ಲಿಯೂ ವಿಹ್ವಲಗಳನ್ನೇ ಅನುಭವಿಸುತ್ತಾನೆ.

ಪುತ್ರದಾರಕುಟುಂಬೇಷು ಪ್ರಸಕ್ತಾಃ ಸರ್ವಮಾನವಾಃ ।
ಶೋಕಪಂಕಾರ್ಣವೇ ಮಗ್ನಾ ಜೀರ್ಣಾ ವನಗಜಾ ಇವ ॥ ೨೬ ॥

ಸಾಮಾನ್ಯವಾಗಿ ಸಮಸ್ತರೂ ಹೆಂಡತಿ-ಮಕ್ಕಳಿಂದ ಕೂಡಿದ ಕುಟುಂಬಗಳಲ್ಲಿ ಅಧಿಕ ಆಸಕ್ತಿಯನ್ನಿಟ್ಟು, ದುಃಖವೆಂಬ ಸಮುದ್ರದಲ್ಲಿ ಬಿದ್ದು, ಶಕ್ತಿ ಇಲ್ಲದ ಮುದಿತನವನ್ನು ಹೊಂದಿದ ಕಾಡಾನೆಗಳು ಕೆಸರಿನಲ್ಲಿ ಸಿಲುಕಿ ಕಷ್ಟವನ್ನು ಹೊಂದುವಂತೆ ಕಷ್ಟಕ್ಕೆ ಈಡಾಗುತ್ತಾರೆ.

ಪುತ್ರನಾಶೇ ವಿತ್ತನಾಶೇ ಜ್ಞಾತಿಸಂಬಂಧಿನಾಮಪಿ ।
ಪ್ರಾಪ್ಯತೇ ಸುಮಹದ್ ದುಃಖಂ ದಾವಾಗ್ನಿಪ್ರತಿಮಂ ವಿಭೋ ॥ ೨೭ ॥

ಒಬ್ಬ ಮನುಷ್ಯನಿಗೆ ಪುತ್ರನು ನಾಶವನ್ನು ಹೊಂದಿದರೂ, ಧನವು ನಾಶವನ್ನು ಹೊಂದಿದರೂ, ಸಂಬಂಧಿಗಳು, ಜ್ಞಾತಿಗಳು ಮೃತರಾದರೂ, ಕಾಡ್ಗಿಚ್ಚಿನಲ್ಲಿ ಬೇಯುವ ವ್ಯಕ್ತಿಗಳಿಗೆ ಉಂಟಾಗುವ ದುಃಖಕ್ಕೆ ಸಮವಾದ ತೀವ್ರದುಃಖವನ್ನು ಬಹಳವಾಗಿ ಹೊಂದುತ್ತಾರೆ.

ದೈವಾಯತ್ತಮಿದಂ ಸರ್ವಂ ಸುಖದುಃಖೇ ಭವಾಭವೌ ।
ಅಸುಹೃತ್ ಸಸುಹೃಚ್ಚಾಪಿ ಸಶತ್ರುರ್ಮಿತ್ರವಾನಪಿ ।
ಸಪ್ರಜ್ಞಃ ಪ್ರಜ್ಞಯಾ ಹೀನೋ ದೈವೇನ ಲಭತೇ ಸುಖಮ್ ॥ ೨೮ ॥

ರಾಜನೇ, ಸುಖ-ದುಃಖಗಳು, ಜನನ-ಮರಣಗಳು ಇವುಗಳೆಲ್ಲವೂ ದೈವಾಧೀನವಾಗಿವೆ. ಒಬ್ಬನು ಅನೇಕ ಸ್ನೇಹಿತರೊಡನೆ ಕೂಡಿದ್ದರೂ ಸ್ನೇಹಿತನೊಂದಿಗೆ ಕೂಡದಿದ್ದರೂ, ಶತ್ರುವಿನಿಂದ ಕೂಡಿದ್ದರೂ, ಮಿತ್ರನಿಂದ ಕೂಡಿದ್ದರೂ, ಪ್ರಜ್ಞಾವಂತನಾಗಿದ್ದರೂ, ಬುದ್ಧಿಗೆಟ್ಟವನಾಗಿದ್ದರೂ, ದೈವಾಧೀನವಾಗಿಯೇ ಸುಖವನ್ನು ಹೊಂದಬೇಕೇ ವಿನಾ ಮಿತ್ರತ್ವಾದಿಗಳು ಸುಖ-ದುಃಖಗಳನ್ನು ತಂದೊಡ್ಡಲಾರವು.

ನಾಲಂ ಸುಖಾಯ ಸುಹೃದೋ ನಾಲಂ ದುಃಖಾಯ ಶತ್ರವಃ ।
ನ ಚ ಪ್ರಜ್ಞಾಲಮರ್ಥಾನಾಂ ನ ಸುಖಾನಾಮಲಂ ಧನಮ್ ॥ ೨೯ ॥

ಸ್ನೇಹಿತರಿಗೆ ಸುಖವನ್ನು ತಂದೊಡ್ಡಲು ಸಾಮರ್ಥ್ಯವಿರುವುದಿಲ್ಲ. ಶತ್ರುಗಳಿಗೆ ದುಃಖವನ್ನು ತಂದೊಡ್ಡಲು ಸಾಮರ್ಥ್ಯವಿರುವುದಿಲ್ಲ. ಸುಖ-ದುಃಖಗಳಿಗೆ ನೇತಾರನು ಆ ಭಗವಂತನೇ ಆಗಿರುತ್ತಾನೆ. ಪ್ರಜ್ಞೆಯಿಂದ ಧನವು ಒದಗಿಬರುವುದಿಲ್ಲ. ಧನವಿದ್ದ ಮಾತ್ರಕ್ಕೆ ಸುಖವೂ ದೊರೆಯಬೇಕೆಂಬ ನಿಯಮವಿಲ್ಲ. ಇವೆಲ್ಲವೂ ಭಗವಂತನ ಅಧೀನವಾಗಿಯೇ ಒದಗಿಬರುತ್ತವೆ.

ನ ಬುದ್ಧಿರ್ಧನಲಾಭಾಯ ನ ಜಾಡ್ಯಮಸಮೃದ್ಧಯೇ ।
ಲೋಕಪರ್ಯಾಯವೃತ್ತಾಂತಂ ಪ್ರಾಜ್ಞೋ ಜಾನಾತಿ ನೇತರಃ ॥ ೩೦ ॥

ಧನಲಾಭಕ್ಕೆ ಮನುಷ್ಯನ ಬುದ್ಧಿಯು ಕಾರಣವಲ್ಲ. ಬಡತನಕ್ಕೆ ಅವನ ಮೂರ್ಖತನವೂ ಕಾರಣವಲ್ಲ. ಲೋಕದ ಇಂತಹ ವಿಚಿತ್ರಗತಿಯನ್ನು ಜ್ಞಾನಿಯಾದವನು ತಿಳಿಯಬಲ್ಲನೇ ಹೊರತು ಸಾಮಾನ್ಯ ಮನುಷ್ಯನು ತಿಳಿಯಲಾರನು.

ಬುದ್ಧಿಮಂತಂ ಚ ಮೂಢಂ ಚ ಶೂರಂ ಭೀರುಂ ಜಡಂ ಕವಿಮ್ ।
ದುರ್ಬಲಂ ಬಲವಂತಂ ಚ ಭಾಗಿನಂ ಭಜತೇ ಸುಖಮ್ ॥ ೩೧ ॥

ಮನುಷ್ಯನು ಬುದ್ಧಿವಂತನೇ ಆಗಿರಲಿ, ಮೂರ್ಖನೇ ಆಗಿರಲಿ, ಶೂರನಾಗಿರಲಿ, ಹೇಡಿಯಾಗಿರಲಿ, ಜಡನಾಗಿರಲಿ, ಕವಿಯಾಗಿರಲಿ, ದುರ್ಬಲನಾಗಿರಲಿ, ಬಲಾಢ್ಯನಾಗಿರಲಿ ಬರಬೇಕಾದ ಸುಖವು ದೈವವಿದ್ದರೆ ಬಂದೇ ಬರುತ್ತದೆ.

ಧೇನುರ್ವತ್ಸಸ್ಯ ಗೋಪಸ್ಯ ಸ್ವಾಮಿನಸ್ತಸ್ಕರಸ್ಯ ಚ ।
ಪಯಃ ಪಿಬತಿ ಯಸ್ತಸ್ಯಾ ಧೇನುಸ್ತಸ್ಯೇತಿ ನಿಶ್ಚಯಃ ॥ ೩೨ ॥

ಹಸುವನ್ನು ಕರೆಯುವ ಗೊಲ್ಲನು ಆ ಹಸುವನ್ನು ತನ್ನದ್ದೆಂದು ಭಾವಿಸುತ್ತಾನೆ. ಅದನ್ನು ಕದಿಯುವ ಕಳ್ಳನು ತನ್ನದ್ದೆಂದು ಭಾವಿಸುತ್ತಾನೆ. ಇವರು ಆ ಹಸುವನ್ನು ತನ್ನದ್ದೆಂದು ಭಾವಿಸಿದರೂ ಹಸುವಿನ ಹಾಲನ್ನು ಯಾವನು ಕುಡಿಯುತ್ತಾನೋ ಆ ಹಸುವು ಅವನಿಗೇ ಸಂಬಂಧಿಸಿದ್ದು ಎಂಬುದು ನಿಶ್ಚಯವು. ಇದೇ ರೀತಿಯಾಗಿ ಮಕ್ಕಳು, ಮನೆ ಮೊದಲಾದ ಸಂಪತ್ತುಗಳನ್ನು ಯಾರು ಅನುಭವಿಸುತ್ತಾರೋ ಅವುಗಳು ಅವರ ಅಧೀನವಾಗಿವೆ ಎಂದು ಭಾವ.

ಯೇ ಚ ಮೂಢತಮಾ ಲೋಕೇ ಯೇ ಚ ಬುದ್ಧೇಃ ಪರಂ ಗತಾಃ ।
ತೇ ನರಾಃ ಸುಖಮೇಧಂತೇ ಕ್ಲಿಶ್ಯತ್ಯಂತರಿತೋ ಜನಃ ॥ ೩೩ ॥

ಲೋಕದಲ್ಲಿ ಯಾರು ಅತ್ಯಂತ ಮೂಢರಾಗಿರುವರೋ ಅವರು ಸುಖವನ್ನು ಹೊಂದುತ್ತಾರೆ. ತುಂಬಾ ಬುದ್ಧಿವಂತನೂ ಸುಖದಿಂದ ಅಭಿವೃದ್ಧಿಯನ್ನು ಹೊಂದುತ್ತಾನೆ. ಆದರೆ ಮೂರ್ಖನೂ ಅಲ್ಲದ, ಬುದ್ಧಿವಂತನೂ ಅಲ್ಲದ ಎಡಬಿಡಂಗಿಯು ದುಃಖಕ್ಕೆ ಈಡಾಗುತ್ತಾನೆ.

ಅಂತೇಷು ರೇಮಿರೇ ಧೀರಾ ನ ತೇ ಮಧ್ಯೇಷು ರೇಮಿರೇ ।
ಅಂತಪ್ರಾಪ್ತಿಂ ಸುಖಂ ಪ್ರಾಹುರ್ದುಃಖಮಂತರಮಂತಯೋಃ ॥ ೩೪ ॥

ಬುದ್ಧಿವಂತನಾದವನು ಧರ್ಮ-ಅರ್ಥ-ಕಾಮ-ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳಲ್ಲಿ ಮೊದಲನೆಯದ್ದು ಮತ್ತು ಕಡೆಯದ್ದು ಅರ್ಥಾತ್ ಧರ್ಮ-ಮೋಕ್ಷಗಳಲ್ಲಿಯೇ ಸಂತೋಷ ಹೊಂದುತ್ತಾನೆ ವಿನಾ ಅವೆರಡರಲ್ಲಿರುವ ಅರ್ಥ-ಕಾಮಗಳಿಗೆ ಮನಸ್ಸನ್ನಿಡುವುದಿಲ್ಲ. ಮೊದಲು ಹೇಳಿದ ಧರ್ಮ-ಮೋಕ್ಷವು ಸುಖವೆಂದು ನಡುವೆ ಹೇಳಿರುವ ಅರ್ಥ-ಕಾಮಗಳು ದುಃಖವೆಂದು ಪ್ರಾಜ್ಞರು ಹೇಳುತ್ತಾರೆ.

ವ್ಯಾಖ್ಯಾನ ವಿಶೇಷ– ಶ್ಲೋಕದಲ್ಲಿ 'ಅಂತೇಷು ರೇಮಿರೇ' ಎಂಬುದಾಗಿ ಬಹುವಚನ ಪ್ರಯೋಗವಿದೆ. ಮೋಕ್ಷವು ಒಂದೇ ಇರುವುದರಿಂದ, ಧರ್ಮವೂ ಒಂದೇ ಇರುವುದರಿಂದ ಕೊನೆಯವುಗಳಲ್ಲಿ ಸಂತೋಷವನ್ನು ಹೊಂದುತ್ತಾರೆ ಎಂದು ಬಹುವಚನ ಪ್ರಯೋಗವನ್ನು ವ್ಯಾಸರು

ಏಕೆ ಮಾಡಿದ್ದಾರೆ ಎಂಬುದಕ್ಕೆ ಗುರುರಾಜರು ಹೀಗೆ ಉತ್ತರಿಸಿದ್ದಾರೆ: ಮೋಕ್ಷದಲ್ಲಿಯೂ ಸಾರೂಪ್ಯ, ಸಾಮೀಪ್ಯ, ಸಾಲೋಕ್ಯ ಮುಂತಾಗಿ ಅನೇಕ ಭೇದವು ಇರುವುದರಿಂದ ಬಹುವಚನ ಪ್ರಯೋಗವನ್ನು ಮಾಡಿದ್ದಾರೆ. ಪುರುಷಾರ್ಥಗಳಲ್ಲಿ ಹಿಂದಿನಿಂದ ಗಣನೆ ಮಾಡಿದಾಗ ಧರ್ಮವು ಕೊನೆಯದ್ದಾಗುತ್ತದೆ. ಆ ಧರ್ಮವು ಅನೇಕ ವಿಧವಾಗಿರುವುದರಿಂದ ಬಹುವಚನ ಪ್ರಯೋಗವು ಕೂಡುತ್ತದೆ.

ಯೇ ತು ಬುದ್ಧಿಸುಖಂ ಪ್ರಾಪ್ತಾ ದ್ವಂದ್ವಾತೀತಾ ವಿಮತ್ಸರಾಃ ।
ತಾನ್ನೈವಾರ್ಥಾ ನ ಚಾನರ್ಥಾ ವ್ಯಥಯಂತಿ ಕದಾಚನ ॥ ೩೫ ॥

ಯಾರು ಧರ್ಮಕ್ಕಾಗಿ ದ್ವಂದ್ವದಿಂದ ಅತೀತರಾಗಿ, ಮಾತ್ಸರ್ಯರಹಿತರಾಗಿ ಬುದ್ಧಿಸುಖವನ್ನು ಹೊಂದಿರುತ್ತಾರೋ ಅವರು ಅನರ್ಥಕಾರಿಯಾದ ಅರ್ಥಗಳ ಪ್ರಾಪ್ತಿಯಿಂದ ದುಃಖವನ್ನು ಹೊಂದುವುದಿಲ್ಲ. ಅವರನ್ನು ಅರ್ಥ-ಕಾಮಗಳು ಪೀಡಿಸಲು ಶಕ್ತವಾಗುವುದಿಲ್ಲ.

ಸುಖಂ ಸ್ವಪಿತಿ ದುರ್ಮೇಧಾಃ ಸ್ವಾನಿ ಕರ್ಮಾಣ್ಯಚಿಂತಯನ್ ।
ಅವಿಜ್ಞಾನೇನ ಮಹತಾ ಕಂಬಲೇನೇವ ಸಂವೃತಃ ॥ ೩೬ ॥

ಕೇವಲ ಮೂಢನಾದವನು ತಾನು ಮಾಡುವ ಕರ್ಮವು ಎಷ್ಟು ನಿಕೃಷ್ಟವಾಗಿದೆ ಎಂದು ತಿಳಿಯದೇ ಕರಿಯ ಕಂಬಳಿಯಲ್ಲಿ ಮುಚ್ಚಲ್ಪಟ್ಟವನಂತೆ ಅಜ್ಞಾನದಿಂದ ಆವೃತನಾಗಿ ನಿಶ್ಚಿಂತೆಯಿಂದ ನಿದ್ರಿಸುತ್ತಾನೆ.

ಅಥ ಯೇ ಬುದ್ಧಿಮಪ್ರಾಪ್ತಾ ವ್ಯತಿಕ್ರಾಂತಾಶ್ಚ ಮೂಢತಾಮ್ ।
ತೇಽತಿವೇಲಂ ಪ್ರಹೃಷ್ಯಂತಿ ಸಂತಾಪಮುಪಯಾಂತಿ ಚ ॥ ೩೭ ॥

ಯಾವ ಬುದ್ಧಿಪರಿಪಾಕವಿಲ್ಲದವರೊ, ಅತ್ಯಂತ ಮೌಢ್ಯ ಹೊಂದಿದವರೊ ಅವರನ್ನು ಸುಖ-ದುಃಖಗಳು ಚೆನ್ನಾಗಿ ಪೀಡಿಸುತ್ತವೆ. ಇಂತಹ ಮೂರ್ಖರು ಸುಖ ಬಂದಾಗ ಸಂತೋಷವನ್ನು ಹೊಂದುತ್ತಾರೆ. ದುಃಖ ಬಂದಾಗ ಸಂತಾಪಕ್ಕೀಡಾಗುತ್ತಾರೆ. ಈ ಸುಖ-ದುಃಖ ಪ್ರಭಾವಕ್ಕೆ ಈಡಾಗಿ ಸಂಕಟಪಡುತ್ತಾರೆ.

ನಿತ್ಯಪ್ರಮುದಿತಾ ಮೂಢಾ ದಿವಿ ದೇವಗಣಾ ಇವ ।
ಅವಲೇಪೇನ ಮಹತಾ ಪರಿತೃಪ್ತಾ ವಿಚೇತಸಃ ॥ ೩೮ ॥

ಮೂರ್ಖರಾದ ಜನರು ಬಲಿಷ್ಠವಾದ ಅಹಂಕಾರದಿಂದ ಬೇರೆ ಏನನ್ನೂ ತಿಳಿಯಲಾರದೆ ತಮ್ಮ ಸ್ಥಿತಿಗೆ ತಾವು ತೃಪ್ತರಾಗಿ ದೇವಲೋಕದಲ್ಲಿ ಇರುವ ವ್ಯಕ್ತಿಗಳು ಸಂತೋಷದಿಂದ ಉನ್ಮತ್ತರಾಗಿರುವಂತೆ ಭೂಮಿಯಲ್ಲಿಯೂ ಸಂತೋಷದಲ್ಲಿ ಮುಳುಗಿರುತ್ತಾರೆ. ಅವರಿಗೆ ಆಗುವ ಹಾನಿಗಳನ್ನು ತಿಳಿಯುವುದಿಲ್ಲ.

ಸುಖಂ ದುಃಖಾಂತಮಾಲಸ್ಯಂ ದುಃಖಂ ದಾಕ್ಷ್ಯಂ ಸುಖೋದಯಮ್ ।
ಭೂತಿಶ್ಚೈವ ಶ್ರಿಯಾ ಸಾರ್ಧಂ ದಕ್ಷೇ ವಸತಿ ನಾಲಸೇ ॥ ೩೯ ॥

ಸುಖ ಎನ್ನುವುದು ಯಾವತ್ತಿಗೂ ದುಃಖದಲ್ಲಿಯೇ ಪರ್ಯವಸಾನವಾಗುತ್ತದೆ. ಉತ್ಸಾಹರಹಿತನಾದ ವ್ಯಕ್ತಿಯು ಕೊನೆಗೆ ದುಃಖಕ್ಕೆ ಈಡಾಗುತ್ತಾನೆ. ತಿಳಿವಳಿಕೆಯಿಂದ, ಧೈರ್ಯದಿಂದ ಮುಂದೆ ಸಾಗುವ ವ್ಯಕ್ತಿಯು ಸುಖವನ್ನು ಹೊಂದುತ್ತಾನೆ. ಅಂತಹ ದ್ವಿಜನಲ್ಲಿಯೇ ಐಶ್ವರ್ಯ, ವಿದ್ಯೆ ಎಲ್ಲವೂ ನೆಲೆಸಿಕೊಂಡಿರುತ್ತವೆ. ಸೋಮಾರಿಗಳಲ್ಲಿ ಇವು ನೆಲೆಸವು.

ವ್ಯಾಖ್ಯಾನ ವಿಶೇಷ– ಆಲಸ್ಯದಿಂದ ಆರಂಭದಲ್ಲಿ ಸುಖವಾದರೂ ಕೊನೆಗೆ ದುಃಖವಾಗುತ್ತದೆ. ಉತ್ಸಾಹಿಗೆ ಆರಂಭದಲ್ಲಿ ದುಃಖವಾದರೂ ಕೊನೆಗೆ ಸುಖವೇ ಆಗುತ್ತದೆ. ಕಾಷ್ಠಭಾರವನ್ನು ಹೊತ್ತು ನಡೆಯುವ ವ್ಯಕ್ತಿಗೆ ಯಾವ ದುಃಖವುಂಟಾಗುತ್ತದೋ ಆ ದುಃಖವು ಆಲಸಿಗೆ ಉಂಟಾಗುವುದಿಲ್ಲ. ಕರ್ತವ್ಯಗಳನ್ನು ಮಾಡದೆ ಆರಂಭದಲ್ಲಿ ಸುಖವನ್ನು ಅನುಭವಿಸುತ್ತಾನೆ. ಕೊನೆಯಲ್ಲಿ ತುತ್ತು ಹುಟ್ಟದೇ ಇದ್ದಾಗ ಪುತ್ರ–ಮಿತ್ರ– ಕಲತ್ರಾದಿಗಳಿಂದ ಮಹಾದುಃಖವನ್ನೇ ಅನುಭವಿಸುತ್ತಾನೆ. ಉತ್ಸಾಹಿಯಾದ ದಕ್ಷನು ಆರಂಭದಲ್ಲಿ ಕಾಷ್ಠಭಾರವನ್ನು ಹೊರುವ ದುಃಖವನ್ನು ಸ್ವಲ್ಪ ಮಟ್ಟಿಗೆ ಅನುಭವಿಸಿದರೂ ಕೊನೆಗೆ ಪುತ್ರ–ಮಿತ್ರ–ಕಲತ್ರಾದಿಗಳಿಂದ ಕೂಡಿಕೊಂಡು ಸಂತೃಪ್ತಿಯಿಂದ ಭೋಜನವನ್ನು ಮಾಡಿ ಮಹಾಸುಖವನ್ನೇ ಹೇಗೆ ಹೊಂದುತ್ತಾನೋ ಇದರಂತೆ ಜ್ಞಾನಸಾಧನಗಳಲ್ಲಿ ಪ್ರವೃತ್ತಿಯನ್ನು ಹೊಂದದೆ, ಜೀವರ ಕರ್ತವ್ಯಗಳನ್ನು ಅರಿಯದೆ, ಆಲಸಿಯಾಗಿ ಮೈಮರೆತ ವ್ಯಕ್ತಿಯು ತಾತ್ಕಾಲಿಕ ಸುಖವನ್ನು ಹೊಂದಿದರೂ ಮೃತ್ಯುವಿನ ಬಳಿಕ ದುಃಖಕ್ಕೆ ತುತ್ತಾಗುತ್ತಾನೆ. ಜ್ಞಾನಸಾಗರದಲ್ಲಿ ಪ್ರವೃತ್ತಿಯನ್ನು ಹೊಂದಿದ ವ್ಯಕ್ತಿಯು ಸ್ವಲ್ಪ ಬಾಹ್ಯ ಸುಖಗಳಿಂದ ವಂಚಿತನಾದರೂ ಕಾಲಕ್ರಮದಲ್ಲಿ ಮಹತ್ತರ ಸುಖವನ್ನೇ ಹೊಂದುತ್ತಾನೆ ಎಂದು ಅಭಿಪ್ರಾಯ.

ಸುಖಂ ವಾ ಯದಿ ವಾ ದುಃಖಂ ದ್ವೇಷ್ಯಂ ವಾ ಯದಿ ವಾ ಪ್ರಿಯಮ್।
ಪ್ರಾಪ್ತಂ ಪ್ರಾಪ್ತಮುಪಾಸೀತ ಹೃದಯೇನಾಪರಾಜಿತಃ ॥ ೪೦ ॥

ಸುಖವಾಗಲಿ-ದುಃಖವಾಗಲೀ, ಪ್ರಿಯವಾಗಲಿ-ಅಪ್ರಿಯವಾಗಲೀ, ತನ್ನ ಬದುಕಿನಲ್ಲಿ ಒದಗಿಬಂದಾಗ ಮನುಷ್ಯನು ಮನೋದಾರ್ಢ್ಯದಿಂದ ಎದುರಿಸಬೇಕು. ಎಂದಿಗೂ ಇವುಗಳಿಂದ ಧೃತಿಗೆಡದೆ ಏನೇನು ಸಂಕಷ್ಟಗಳು, ದುಃಖಗಳು ಒದಗಿ ಬರುತ್ತವೋ ಅವುಗಳನ್ನು ಬುದ್ಧಿಪೂರ್ವಕವಾಗಿ ಎದುರಿಸಬೇಕು.

ಶೋಕಸ್ಥಾನಸಹಸ್ರಾಣಿ ಹರ್ಷಸ್ಥಾನಶತಾನಿ ಚ ।
ದಿವಸೇ ದಿವಸೇ ಮೂಢಮಾವಿಶಂತಿ ನ ಪಂಡಿತಮ್ ॥ ೪೧ ॥

ಪ್ರತಿದಿನವೂ ಮನಸ್ಸಿಗೆ ಸಾವಿರಾರು ದುಃಖಕಾರಣಗಳು, ನೂರಾರು ಭಯ ಕಾರಣಗಳು ಬಂದೇ ಬರುತ್ತವೆ. ಆದರೆ ಅವುಗಳು ಮೂರ್ಖರನ್ನು ಹಿಡಿದು ಹಿಂಸಿಸುತ್ತವೆಯೇ ಹೊರತು ಪಂಡಿತನನ್ನು ಕುಗ್ಗಿಸಲಾರವು.

ಬುದ್ಧಿಮಂತಂ ಕೃತಪ್ರಜ್ಞಂ ಶುಶ್ರೂಷುಮನಸೂಯಕಮ್ ।
ದಾಂತಂ ಜಿತೇಂದ್ರಿಯಂ ಚಾಪಿ ಶೋಕೋ ನ ಸ್ಪೃಶತೇ ನರಮ್ ॥೪೨॥

ಧೀಮಂತನನ್ನು, ವಿವೇಕಿಯನ್ನು, ಗುರುಸೇವಾ ನಿರತನಾದವನನ್ನು, ಅಸೂಯಾ ರಹಿತನನ್ನು, ಜಿತೇಂದ್ರಿಯನನ್ನು, ಭಗವನ್ನಿಷ್ಠನನ್ನು ಎಂದಿಗೂ ಶೋಕವು ಮುಟ್ಟುವುದಿಲ್ಲ.

ಏತಾಂ ಬುದ್ಧಿಂ ಸಮಾಸ್ಥಾಯ ಗುಪ್ತಚಿತ್ತಶ್ಚರೇದ್ ಬುಧಃ ।
ಶುಕ್ಲಕೃಷ್ಣಗತಿಜ್ಞಂ ತಂ ದೇವಾಸುರವಿನಿರ್ಗಮಮ್ ।
ಉದಯಾಸ್ತಮಯಜ್ಞಂ ಹಿ ನ ಶೋಕಃ ಸ್ಪಷ್ಟುಮರ್ಹತಿ ॥ ೪೩ ॥

ಈ ರೀತಿಯಾದ ಸ್ಥಿರಬುದ್ಧಿಯನ್ನು ಹೊಂದಿ ಅಂತರ್ಮುಖಿಯಾಗಿ ಜ್ಞಾನಿಯಾದ ಸಾಧಕನು ಸಂಚರಿಸಬೇಕು. ಶುಕ್ಲ-ಕೃಷ್ಣಗತಿಗಳನ್ನು ಅರ್ಥಾತ್ ಅರ್ಚಿರಾದಿ, ಧೂಮಾದಿ ಮಾರ್ಗಗಳನ್ನು ಚೆನ್ನಾಗಿ ಅರಿತು ದೇವತೆಗಳಿಗೆ, ಅಸುರರಿಗೆ ಒದಗುವ ಮಾರ್ಗಗಳನ್ನೂ ಅರಿತಿರುವ, ದುಃಖವು ಯಾವುದರಿಂದ ಉಂಟಾಗುತ್ತದೆ, ದುಃಖವು ಯಾವುದರಿಂದ ಪರಿಹಾರವಾಗುತ್ತದೆ ಎಂದು ಅರಿತಿರುವ ವ್ಯಕ್ತಿಯನ್ನು ಶೋಕವು ಎಂದೂ ಮುಟ್ಟಲಾಗುವುದಿಲ್ಲ.

ಯನ್ನಿಮಿತ್ತೋ ಭವೇಚ್ಛೋಕಸ್ತ್ಯಾಜ್ಯೋ ವಾ ದುಃಖಮೇವ ವಾ ।
ಆಯಾಸೋ ವಾ ಯತೋ ಮೂಲಸ್ತದೇಕಾಂಗಮಪಿ ತ್ಯಜೇತ್ ॥ ೪೪ ॥

ಯಾವುದರ ನಿಮಿತ್ತದಿಂದ ಶೋಕ-ತಾಪ-ದುಃಖಗಳು ಉಂಟಾಗುತ್ತವೋ, ಯಾವುದರ ಕಾರಣದಿಂದ ಅಧಿಕವಾದ ಆಯಾಸವುಂಟಾಗುತ್ತದೋ ಅದು ಶರೀರದ ಒಂದು ಅಂಗವೇ ಆಗಿದ್ದರೂ ಬೆರಳಿಗೆ ಹಾವು ಕಚ್ಚಿದಾಗ ದೇಹದ ರಕ್ಷಣೆಯ ದೃಷ್ಟಿಯಿಂದ ಬೆರಳನ್ನೇ ತುಂಡುಮಾಡುವಂತೆ ಅದನ್ನು ತುಂಡರಿಸಬೇಕು (ತ್ಯಜಿಸಬೇಕು).

ಯದ್ ಯತ್ ತ್ಯಜತಿ ಕಾಮಾನಾಂ ತತ್ ಸುಖಸ್ಯಾಭಿಪೂರ್ಯತೇ ।
ಕಾಮಾನುಸಾರೀ ಪುರುಷಃ ಕಾಮಾನನು ವಿನಶ್ಯತಿ ॥ ೪೫ ॥

ಕಾಮಗಳಲ್ಲಿ ಯಾವ ಯಾವುದನ್ನು ಬಿಡುತ್ತಾ ಬರುತ್ತಾನೋ ಅದೆಲ್ಲ ಸುಖವನ್ನು ಹೆಚ್ಚಿಸಲು ಕಾರಣವಾಗುತ್ತದೆ. ಕಾಮಕ್ಕೆ ದಾರಿ ಮಾಡಿಕೊಟ್ಟಲ್ಲಿ ಅವುಗಳನ್ನು ಅನುಭವಿಸುತ್ತಾ ಆ ಕಾಮದಿಂದಲೇ ನಾಶವನ್ನು ಹೊಂದುತ್ತಾನೆ.

ಯಚ್ಚ ಕಾಮಸುಖಂ ಲೋಕೇ ಯಚ್ಚ ದಿವ್ಯಂ ಮಹತ್ ಸುಖಮ್ ।
ತೃಷ್ಣಾಕ್ಷಯಸುಖಸ್ಯೈತೇ ನಾರ್ಹತಃ ಷೋಡಶೀಂ ಕಲಾಮ್ ॥ ೪೬ ॥

ಲೋಕದಲ್ಲಿ ಕಾಮದಿಂದ ಉತ್ಪನ್ನವಾಗುವ ಸುಖ, ದೇವಲೋಕದ ಉತ್ತಮ ಸುಖಗಳು ಇವೆಲ್ಲವೂ ತೃಷ್ಣೆಯನ್ನು ಜಯಿಸುವುದರಿಂದ ಉಂಟಾಗುವ ಸುಖದ ಹದಿನಾರನೆಯ ಒಂದು ಕಲಾಮಾತ್ರಕ್ಕೂ ಸರಿ ಎನಿಸಲಾರವು.

ಪೂರ್ವದೇಹಕೃತಂ ಕರ್ಮ ಶುಭಂ ವಾ ಯದಿ ವಾಶುಭಮ್ ।
ಪ್ರಾಜ್ಞಂ ಮೂಢಂ ತಥಾ ಶೂರಂ ಭಜತೇ ಯಾದೃಶಂ ಕೃತಮ್॥ ೪೭ ॥

ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮವು ಒಳ್ಳೆಯದಾಗಿರಲಿ, ಕೆಟ್ಟದ್ದಾಗಿರಲಿ ಯಾರನ್ನೂ ಬಿಟ್ಟುಹೋಗುವುದಿಲ್ಲ. ಅವನು ಪ್ರಾಜ್ಞನಾಗಿರಲಿ, ಮೂಢನಾಗಿರಲಿ, ಶೂರನಾಗಿರಲಿ, ಭೀರು(ಹೇಡಿ)ವಾಗಿರಲಿ ಎಲ್ಲರನ್ನೂ ಪೂರ್ವದೇಹಕೃತಕರ್ಮವು ಹಿಂಬಾಲಿಸುತ್ತದೆ.

ಏವಮೇವ ಕಿಲೈತಾನಿ ಪ್ರಿಯಾಣ್ಯೇವಾಪ್ರಿಯಾಣಿ ಚ ।
ಜೀವೇಷು ಪರಿವರ್ತಂತೇ ದುಃಖಾನಿ ಚ ಸುಖಾನಿ ಚ ॥ ೪೮ ॥

ಈ ಕರ್ಮನಿಮಿತ್ತವಾಗಿಯೇ ಪ್ರಾಣಿಗಳಿಗೆ ಸುಖ-ದುಃಖಗಳು, ಇಷ್ಟಾನಿಷ್ಟಗಳು ಪುನಃ ಪುನಃ ಬರುತ್ತಲೇ ಇರುತ್ತವೆ.

ತದೇವಂ ಬುದ್ಧಿಮಾಸ್ಥಾಯ ಸುಖಂ ಜೀವೇದ್ಗುಣಾನ್ವಿತಃ ।
ಸರ್ವಾನ್ ಕಾಮಾನ್ ಜುಗುಪ್ಸೇತ ಸಂಗಾನ್ ಕುರ್ವೀತ ಪೃಷ್ಠತಃ ॥೪೯॥

ವೃತ್ತ ಏಷ ಹೃದಿ ಪ್ರೌಢೋ ಮೃತ್ಯುರೇಷ ಮನೋಭಯಃ ।
ಕ್ರೋಧೋ ನಾಮ ಶರೀರಸ್ಥೋ ದೇಹಿನಾಂ ಪ್ರೋಚ್ಯತೇ ಬುಧೈಃ ॥೫೦॥

ವಿವೇಕಿಯಾದವನು ಈ ಅಂಶವನ್ನು ತಿಳಿದುಕೊಂಡು ಕಷ್ಟಬಂದಾಗ ಕುಗ್ಗಬಾರದು. ಸಮಸ್ತ ಕಾಮಗಳನ್ನು ದಾಟಬೇಕು. ಕೋಪವನ್ನು ನಿಗ್ರಹಿಸಿಕೊಳ್ಳಬೇಕು. ಸಮಸ್ತ ವಿಷಯ ಸುಖಗಳಿಗೆ ಬೆನ್ನು ಹಾಕಿ ನಡೆಯಬೇಕು. ಕೋಪವೆಂಬುದು ಮನಸ್ಸಿನಲ್ಲಿ ಮೆಲ್ಲನೆ ಅಂಕುರಿಸುತ್ತಾ ವೃದ್ಧಿಯನ್ನು ಹೊಂದಿ ನಮಗೆ ಕಂಟಕವಾಗುತ್ತದೆ. ಆದ್ದರಿಂದ ಮನಸ್ಸಿನಲ್ಲಿ ಹುಟ್ಟುವ ಕಾಮ-ಕ್ರೋಧಗಳೇ ಜೀವರಿಗೆ ಮೃತ್ಯು ಎನಿಸಿವೆ. ಇವುಗಳನ್ನು ಶರೀರದಿಂದ ಹೊರಹಾಕಿದಲ್ಲಿ ಆ ವ್ಯಕ್ತಿಯು ಮೃತ್ಯುವನ್ನು ಗೆಲ್ಲಲು ಸಮರ್ಥನಾಗುತ್ತಾನೆ.

ಯದಾ ಸಂಹರತೇ ಕಾಮಾನ್ ಕೂರ್ಮೋಽಂಗಾನೀವ ಸರ್ವಶಃ ।
ತದಾತ್ಮಜ್ಯೋತಿರಾತ್ಮಾ ಚ ಆತ್ಮನ್ಯೇವ ಪ್ರಸೀದತಿ ॥ ೫೧ ॥

ಆಮೆಯು ತನ್ನ ಅವಯವಗಳನ್ನು ಬೇಕಾದಾಗ ಹೊರಗೆ ಚೆಲ್ಲುತ್ತದೆ. ಬೇಕಾದ ಒಳಗೆ ಸೆಳೆದುಕೊಳ್ಳುತ್ತದೆ. ಇದರಂತೆ ಮನುಷ್ಯನು ಕಾಮನೆಗಳಲ್ಲಿ ತನ್ನ ಹತೋಟಿಯನ್ನು ಸಾಧಿಸಿಕೊಂಡರೆ ಆಗ ಪರಮಾತ್ಮನ ವಿಷಯಕವಾದ ಜ್ಞಾನಪ್ರಕಾಶವನ್ನು ಹೊಂದುತ್ತಾನೆ. ಜ್ಯೋತಿಸ್ಥಾನೀಯನಾದ ಪರಮಾತ್ಮನನ್ನು ಹೃದಯದಲ್ಲಿ ಕಾಣಲು ಸಮರ್ಥನಾಗುತ್ತಾನೆ. ಅವನಿಂದ ತಾನು ಸುಖವನ್ನು ಹೊಂದುತ್ತಾನೆ.

ಕಿಂಚಿದೇವ ಮಮತ್ವೇನ ಯದಾ ಭವತಿ ಕಲ್ಪಿತಮ್ ।
ತದೇವ ಪರಿತಾಪಾರ್ಥಂ ಸರ್ವಂ ಸಂಪದ್ಯತೇ ತದಾ ॥ ೫೨ ॥

ಮನುಷ್ಯನು ಯಾವುದರಲ್ಲಿಯೇ ಆಗಲಿ ತನ್ನದು ಎಂಬ ಮಮತೆಯನ್ನು ಹುಟ್ಟಿಸಿಕೊಂಡರೆ ಆ ಮಮತೆಯೇ ಕೊನೆಯಲ್ಲಿ ಪರಿತಾಪವನ್ನೂ, ಕಾಲಕ್ರಮದಲ್ಲಿ ನಾಶವನ್ನೂ ಉಂಟುಮಾಡಲು ಕಾರಣವಾಗುತ್ತದೆ.

ನ ಬಿಭೇತಿ ಯದಾ ಚಾಯಂ ಯದಾ ಚಾಸ್ಮಾನ್ನ ಬಿಭ್ಯತಿ ।
ಯದಾ ನೇಚ್ಛತಿ ನ ದ್ವೇಷ್ಟಿ ಬ್ರಹ್ಮ ಸಂಪದ್ಯತೇ ತದಾ ॥ ೫೩ ॥

ಮನುಷ್ಯನು ಯಾವಾಗ ಬೇರೆಯವರಿಗೆ ಭಯವನ್ನು ಹುಟ್ಟಿಸದೆ, ಇತರರಿಂದ ತಾನೂ ಭಯಪಡದೆ ಇರುತ್ತಾನೋ, ಯಾವುದೇ ಪದಾರ್ಥಗಳಲ್ಲಿ ಇಚ್ಛಾ-ದ್ವೇಷಗಳಿಗೆ ತುತ್ತಾಗದೆ ಸ್ಥಿತಪ್ರಜ್ಞನಾಗಿರುತ್ತಾನೋ ಆಗಲೇ ಗುಣಪರಿಪೂರ್ಣನಾದ ಪರಬ್ರಹ್ಮನನ್ನು ಹೊಂದುತ್ತಾನೆ.

ಉಭೇ ಸತ್ಯಾನೃತೇ ತ್ಯಕ್ತ್ವಾ ಶೋಕಾನಂದೌ ಭಯಾಭಯೇ ।
ಪ್ರಿಯಾಪ್ರಿಯೇ ಪರಿತ್ಯಜ್ಯ ಪ್ರಶಾಂತಾತ್ಮಾ ಭವಿಷ್ಯಸಿ ॥ ೫೪ ॥

ಕಳ್ಳರಿಗೆ ಸತ್ಯವಚನಗಳನ್ನು ಹೇಳಬಾರದು. ಸಜ್ಜನರ ಮುಂದೆ ಸುಳ್ಳಾದ ಮಾತುಗಳನ್ನಾಡಬಾರದು. ಈ ಕ್ರಮದಲ್ಲಿ ಸತ್ಯ-ಅನೃತಗಳನ್ನು ತ್ಯಜಿಸಿ, ಶೋಕ-ಆನಂದಗಳನ್ನು, ಭಯಾಭಯಗಳನ್ನು, ಪ್ರಿಯಾಪ್ರಿಯಗಳನ್ನು ಸಮವಾಗಿ ಪರಿತ್ಯಜಿಸಿದ ವ್ಯಕ್ತಿಯು ಪ್ರಶಾಂತಾತ್ಮನೆನಿಸುತ್ತಾನೆ.

ಯದಾ ನ ಕುರುತೇ ಧೀರಃ ಸರ್ವಭೂತೇಷು ಪಾಪಕಮ್ ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಂಪದ್ಯತೇ ತದಾ ॥ ೫೫ ॥

ಯಾವಾಗ ಜ್ಞಾನಿಯಾದ ವ್ಯಕ್ತಿಯು ಯಾವ ಭೂತಗಳಲ್ಲಿಯೂ ಅನ್ಯಾಯವನ್ನು ಎಸಗುವುದಿಲ್ಲವೋ, ಮಾನಸಿಕವಾಗಿ, ದೈಹಿಕವಾಗಿ, ವಾಚನಿಕವಾಗಿ ಹಿಂಸೆಯನ್ನು ಪಡಿಸುವುದಿಲ್ಲವೋ ಅವನು ಪರಬ್ರಹ್ಮನನ್ನು ಹೊಂದುತ್ತಾನೆ.

ಯಾ ದುಸ್ತ್ಯಜಾ ದುರ್ಮತಿಭಿರ್ಯಾ ನ ಜೀರ್ಯತಿ ಜೀರ್ಯತಃ ।
ಯೋಽಸೌ ಪ್ರಾಣಾಂತಿಕೋ ರೋಗಸ್ತಾಂ ತೃಷ್ಣಾಂ ತ್ಯಜತಃ ಸುಖಮ್ ॥

ತೃಷ್ಣೆಎಂಬುದು ಅಧೀರರಾದ ಬುದ್ಧಿಯುಳ್ಳವ್ಯಕ್ತಿಗಳಿಗೆ ಬಿಡಲಾಗದು. ಮನುಷ್ಯನು ಎಷ್ಟೇ ವೃದ್ಧಾಪ್ಯವನ್ನು ಹೊಂದಿದರೂ ಅವನ ಹೃದಯದಲ್ಲಿರುವ ಆಸೆಗೆ ಮುಪ್ಪಿರುವುದಿಲ್ಲ. ಈ ಆಸೆಯು ಪ್ರಾಣಾಂತಿಕ ರೋಗ ಎನಿಸಿದೆ. ಮಹಾಕಠಿಣ ವ್ಯಾಧಿ ಎನಿಸಿದೆ. ಈ ತೃಷ್ಣೆಯನ್ನು ಬಿಟ್ಟವನಿಗೆ ನಿಜವಾದ ಸುಖವು ಉಂಟಾಗುತ್ತದೆ.

ಅತ್ರ ಪಿಂಗಲಯಾ ಗೀತಾ ಗಾಥಾಃ ಶ್ರೂಯಂತಿ ಪಾರ್ಥಿವ ।
ಯಥಾ ಸಾ ಕೃಚ್ಛ್ರಕಾಲೇಽಪಿ ಲೇಭೇ ಧರ್ಮಂ ಸನಾತನಮ್ ॥ ೫೭ ॥

ಇದೇ ವಿಷಯದಲ್ಲಿ ಪಿಂಗಲಾ ಎಂಬ ವೇಶ್ಯೆಯು ತನಗೆ ಬಹಳ ಸಂಕಟ ಬಂದ ಕಾಲದಲ್ಲಿಯೂ ಹೃದಯದಲ್ಲಿರುವ ಭಗವಂತನ ಅನುಗ್ರಹದಿಂದ ಶಾಶ್ವತ ಸುಖವನ್ನು ಸ್ಥಿರವಾದ ಬುದ್ಧಿಯ ಮೂಲಕ ಹೊಂದಿದ್ದಾಳೆ ಎಂಬುದನ್ನು ತಿಳಿಸುವ ಗಾಥೆಯನ್ನು ತಿಳಿಸುತ್ತೇನೆ, ಕೇಳು.

ಸಂಕೇತೇ ಪಿಂಗಲಾ ವೇಶ್ಯಾ ಕಾಂತೇನಾಸೀದ್ವಿನಾಕೃತಾ ।
ಅಥ ಕೃಚ್ಛ್ರಗತಾ ಶಾಂತಾಂ ಬುದ್ಧಿಮಾಸ್ಥಾಪಯತ್ತದಾ ॥ ೫೮ ॥

ಪಿಂಗಲಾ ಎಂಬ ವೇಶ್ಯೆಯು ಪ್ರಿಯಕರನಿಂದ ರಹಿತಳಾಗಿ ಬಹಳ ದಿನ ವಾಸಿಸಿದಳು. ಆಮೇಲೆ ಕಷ್ಟದಲ್ಲಿರುವ ಅವಳು ತನ್ನ ಬುದ್ಧಿಯನ್ನು ಸ್ಥಿರವಾಗಿ ಇಟ್ಟುಕೊಂಡಳು.

ಪಿಂಗಲಾ

ಉನ್ಮತ್ತಾಹಮನುನ್ಮತ್ತಂ ಕಾಂತಮನ್ವವಸಂ ಚಿರಮ್ ।
ಅಂತಿಕೇ ರಮಣಂ ಸಂತಂ ನೈನಮಧ್ಯಗಮಂ ಪುರಾ ॥ ೫೯ ॥

ಪಿಂಗಲಾ– ನನ್ನ ಹೃದಯದಲ್ಲೇ ಇರುವ, ಮನೋಹರನಾದ ಪರಮಾತ್ಮನಾದ ಕಾಂತನನ್ನು ಉನ್ಮತ್ತಳಾದ ನಾನು ಹಿಂದೆ ತಿಳಿಯಲಿಲ್ಲ. ಇನ್ನು ಮುಂದೆ ಬಹಳ ಕಾಲ ಅವನನ್ನೇ ಹೃದಯದಲ್ಲಿ ಧ್ಯಾನಿಸುತ್ತೇನೆ. ಅಜ್ಞಾನನಿದ್ರೆಯಿಂದ ನಾನು ಎಚ್ಚರಗೊಂಡಿದ್ದೇನೆ.

ಏಕಸ್ಥೂಣಂ ನವದ್ವಾರಮಪಿಧಾಸ್ಯಾಮ್ಯಗಾರಕಮ್ ।
ಕಾ ಹಿ ಕಾಂತಮಿಹಾಯಾಂತಮಯಂ ಕಾಂತೇತಿ ಮಂಸ್ಯತೇ ॥ ೬೦ ॥

ಈ ದೇಹವು ಬೆನ್ನಿನ ಪ್ರಧಾನವಾದ ಅಸ್ಥಿ ಎಂಬ ಸ್ತಂಭವನ್ನು ಆಶ್ರಯಿಸಿಕೊಂಡು ಇದೆ. ಒಂಬತ್ತು ದ್ವಾರಗಳಿಂದ ಕೂಡಿದೆ. ಇಂತಹ ಶರೀರದ ಬಾಗಿಲನ್ನು ಬಾಹ್ಯ ಕಾಮನೆಗಳಿಗೆ ತೆರೆಯದೆ ನನ್ನ ಹೃದಯದಲ್ಲಿರುವ ಭಗವಂತನಿಗೆ ಈ ದೇಹವನ್ನು

ಸಮರ್ಪಿಸುತ್ತೇನೆ. ಮೂಢಳಾದ ನಾನು ಕಾಮಿಸಬಾರದು, ವ್ಯಕ್ತಿಗಳನ್ನು ಕಾಂತರೆಂದು ತಪ್ಪಾಗಿ ತಿಳಿದು ಮೂರ್ಖಳಾದೆ. ಈಗ ಅಜ್ಞಾನವೆಂಬ ನಿದ್ರೆಯಿಂದ ಎಚ್ಚರಗೊಂಡಿರುತ್ತೇನೆ.

ಅಕಾಮಾಃ ಕಾಮರೂಪೇಣ ಧೂರ್ತಾ ನರಕರೂಪಿಣಃ ।
ಪುನರ್ನ ಯಭಯಿಷ್ಯಂತಿ ಪ್ರತಿಬುದ್ಧಾಸ್ಮಿ ಜಾಗೃಮಿ ॥ ೬೧ ॥

ಈಗ ಸ್ಥಿತಪ್ರಜ್ಞಳಾಗಿ ಜಾಗೃತಳಾಗಿರುವ ನನ್ನ ಈ ಶರೀರವನ್ನು ಧೂರ್ತರಾದ ನರಕರೂಪಿಗಳಾದ, ಕಾಮರೂಪಿಗಳಾದ ವ್ಯಕ್ತಿಗಳು ಮೈಥುನಗಳಿಂದ ವ್ಯಥೆಪಡಿಸಲು ಸಾಧ್ಯವಿಲ್ಲ.

ಅನರ್ಥೋಽಪಿ ಭವತ್ಯರ್ಥೋ ದೈವಾತ್ ಪೂರ್ವಕೃತೇನ ವಾ ।
ಸಂಬುದ್ಧಾಹಂ ನಿರಾಕಾರಾ ನಾಹಮದ್ಯಾಜಿತೇಂದ್ರಿಯಾ ॥ ೬೨ ॥

ದೈವಕೃಪೆಯಿಂದಲೋ, ಪೂರ್ವಕರ್ಮಪಾಪದಿಂದಲೋ ಮನುಷ್ಯನಿಗೆ ಉಂಟಾಗತಕ್ಕ ಅನರ್ಥವೇ ಇಂದು ಒಳ್ಳೆಯದಾಗಿ ಪರಿಣಮಿಸುತ್ತಿದೆ. ಈಗ ನಾನು ಎಚ್ಚರಗೊಂಡಿದ್ದೇನೆ. ವೇಶ್ಯಾಭಾವವನ್ನು ತೊರೆದಿದ್ದೇನೆ. ಇಂದು ನಾನು ಜಿತೇಂದ್ರಿಯಳು. ನನ್ನ ಮನಸ್ಸನ್ನು ಚಂಚಲಗೊಳಿಸಿಕೊಳ್ಳಲಾರೆ.

ಸುಖಂ ನಿರಾಶಃ ಸ್ವಪಿತಿ ನೈರಾಶ್ಯಂ ಪರಮಂ ಸುಖಮ್ ।
ಆಶಾಮನಾಶಾಂ ಕೃತ್ವಾ ಹಿ ಸುಖಂ ಸ್ವಪಿತಿ ಪಿಂಗಲಾ ॥ ೬೩ ॥

ಇನ್ನು ಮೇಲೆ ನಾನು ಇಂದ್ರಿಯಗಳಿಗೆ ದಾಸಿಯಾಗುವುದಿಲ್ಲ. ಆಸೆಯನ್ನು ತೊರೆದು ಸುಖವಾಗಿ ನಿದ್ರಿಸುತ್ತೇನೆ. ಆಸೆ ಇಲ್ಲದಿರುವುದೇ ಪರಮಸುಖವು. ಇನ್ನು ಮೇಲೆ ಲೌಕಿಕವಾದ ಆಸೆಯನ್ನು ತ್ಯಾಗ ಮಾಡಿ, ಭಗವಂತನ ಆಕಾಂಕ್ಷೆಯಿಂದಲೇ ಸುಖ ಪಡುವ ನಾನು ನಿರಂತರ ಸುಖವಾಗಿ ನಿದ್ರಿಸುತ್ತೇನೆ.

ಭೀಷ್ಮಃ

ಏತೈಶ್ಚಾನ್ಯೈ ಋಷ್ಯ ವಿಪ್ರಸ್ಯ ಹೇತುಮದ್ಭಿಃ ಪ್ರಭಾಷಿತೈಃ ।
ಪರ್ಯವಸ್ಥಾಪಿತೋ ರಾಜಾ ಸೇನಜಿನ್ಮುಮುದೇ ಸುಖಮ್ ॥ ೬೪ ॥

ಭೀಷ್ಮ– ಧರ್ಮರಾಜನೇ, ಬ್ರಾಹ್ಮಣನು ಹೀಗೆ ಅನೇಕ ಕಾರಣಗಳಿಂದ ಕೂಡಿದ ಮಾತುಗಳಿಂದ ರಾಜನನ್ನು ಸಮಾಧಾನಪಡಿಸಿದನು. ರಾಜನಾದರೂ ಪರಮಾತ್ಮನಲ್ಲಿ ನೆಲೆಗೊಂಡ ಮನಸ್ಸುಳ್ಳವನಾಗಿ, ಸಮಾಧಾನವನ್ನು ಪಡೆದು ನಿಶ್ಚಿಂತೆಯಿಂದ ಸುಖವನ್ನು ಹೊಂದಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಒಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎರಡನೆಯ ಅಧ್ಯಾಯ

ಯುಧಿಷ್ಠಿರನನ್ನು ಕುರಿತು ಭೀಷ್ಮರು ಕಾಲದ ವೇಗದಲ್ಲಿ ಚಲಿಸುವ ವ್ಯಕ್ತಿಗಳು ಶ್ರೇಯೋಮಾರ್ಗವನ್ನು ಹೇಗೆ ಅನುಸರಿಸಿ ನಡೆಯಬೇಕೆಂಬುದನ್ನು ನಿರೂಪಿಸಿದುದು. ಇದಕ್ಕೆ ಪೂರಕವಾಗಿ ತಂದೆ-ಮಕ್ಕಳ ಸಂವಾದವನ್ನು ತಿಳಿಸಿದುದು.

ಯುಧಿಷ್ಠಿರಃ

ಅತಿಕ್ರಾಮತಿ ಕಾಲೇऽಸ್ಮಿನ್ ಸರ್ವಭೂತಕ್ಷಯಾವಹೇ ।
ಕಿಂ ಶ್ರೇಯಃ ಪ್ರತಿಪದ್ಯೇತ ತನ್ಮೇ ಬ್ರೂಹಿ ಪಿತಾಮಹ ॥ ೧ ॥

ಯುಧಿಷ್ಠಿರ– ಪಿತಾಮಹನೇ, ಸಮಸ್ತ ಪ್ರಾಣಿಗಳಿಗೂ ನಾಶಕರವಾದ ಕಾಲವೆಂಬುದು ಕ್ಷಣ-ಕ್ಷಣವೂ ಕಳೆದುಹೋಗುತ್ತಲೇ ಇದೆ. ಈ ಕ್ಷಣಿಕವಾದ ಕಾಲದಲ್ಲಿ ಶ್ರೇಯಸ್ಸನ್ನು ಪಡೆಯುವ ಮಾರ್ಗವು ಯಾವುದೆಂಬುದನ್ನು ತಿಳಿಸಿರಿ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಪಿತುಃ ಪುತ್ರೇಣ ಸಂವಾದಂ ತನ್ನಿಬೋಧ ಯುಧಿಷ್ಠಿರ ॥ ೨ ॥

ಭೀಷ್ಮ– ಯುಧಿಷ್ಠಿರನೇ, ಈ ವಿಷಯದಲ್ಲಿ ಹಿಂದೆ ಒಬ್ಬ ತಂದೆಗೂ, ಮಗನಿಗೂ ನಡೆದ ಸಂವಾದರೂಪವಾದ ಇತಿಹಾಸ ಒಂದನ್ನು ಹೇಳುತ್ತಾರೆ. ಅದನ್ನು ಹೇಳುತ್ತೇನೆ, ಕೇಳು.

ದ್ವಿಜಾತೇಃ ಕಸ್ಯಚಿತ್ ಪಾರ್ಥ ಸ್ವಾಧ್ಯಾಯನಿರತಸ್ಯ ವೈ ।
ಬಭೂವ ಪುತ್ರೋ ಮೇಧಾವೀ ಮೇಧಾವೀ ನಾಮ ನಾಮತಃ ॥ ೩ ॥

ಒಬ್ಬ ವೇದಾಧ್ಯಯನ ನಿರತನಾದ ಬ್ರಾಹ್ಮಣನಿದ್ದನು. ಅವನಿಗೆ ಮೇಧಾವಿ ಎಂಬ ಒಬ್ಬ ಮಗನು, ಹೆಸರಿಗೆ ತಕ್ಕಂತೆ ಮೇಧಾವಿಯಾಗಿದ್ದನು.

ಸೋಽಬ್ರವೀತ್ ಪಿತರಂ ಪುತ್ರಃ ಸ್ವಾಧ್ಯಾಯಕರಣೇ ರತಮ್ ।
ಮೋಕ್ಷಧರ್ಮಾರ್ಥಕುಶಲೋ ಲೋಕತತ್ತ್ವವಿಚಕ್ಷಣಃ ॥ ೪ ॥

ಆ ಮೇಧಾವಿಯು ಮೋಕ್ಷಧರ್ಮ ವಿಚಾರದಲ್ಲಿ ಬಹಳ ವಿದ್ವಾಂಸನಾಗಿದ್ದನು. ಲೋಕತತ್ತ್ವಗಳನ್ನು ಚೆನ್ನಾಗಿ ಬಲ್ಲವನಾಗಿದ್ದನು. ಅವನು ಒಮ್ಮೆ ತಂದೆಯನ್ನು ಕುರಿತು ಹೀಗೆ ಹೇಳಿದನು.

ಧೀರಃ ಕಿಂ ಸ್ವಿತ್ತಾತ ಕುರ್ಯಾತ್ ಪ್ರಜಾನನ್
ಕ್ಷಿಪ್ರಂ ಹ್ಯಾಯುರ್ಭ್ರಶ್ಯತೇ ಮಾನವಾನಾಮ್ ।
ಪಿತಸ್ತದಾಚಕ್ಷ್ವ ಯಥಾರ್ಥಯೋಗಂ
ಮಮಾನುಪೂರ್ವ್ಯಾ ಯೇನ ಧರ್ಮಂ ಚರೇಯಮ್ ॥ ೫ ॥

ಜನಕನೇ, ಮನುಷ್ಯರ ಆಯುಸ್ಸು ಬಹಳ ವೇಗದಿಂದ ಕಳೆದುಹೋಗುತ್ತಿದೆ. ಅದನ್ನು ತಿಳಿದ ಮನುಷ್ಯನು ತನ್ನ ಶ್ರೇಯಸ್ಸಿಗಾಗಿ ಏನು ಮಾಡಬೇಕು? ಯಾವ ರೀತಿಯಲ್ಲಿ ಧರ್ಮವನ್ನು ನಡೆಸಬೇಕು? ಆ ಧರ್ಮಮಾರ್ಗವನ್ನು, ಅದರಿಂದ ದೊರಕುವ ಫಲವನ್ನು ನನಗೆ ತಿಳಿಸು ಎಂದು ಹೇಳಿದನು.

ಪಿತಾ

ವೇದಾನಧೀತ್ಯ ಬ್ರಹ್ಮಚರ್ಯೇಣ ಪುತ್ರ
ಪುತ್ರಾನಿಚ್ಛೇತ್ ಪಾವನಾರ್ಥಂ ಪಿತೄಣಾಮ್ ।
ಅಗ್ನೀನಾಧಾಯ ವಿಧಿವಚ್ಚೇಷ್ಟಯಜ್ಞೋ
ವನಂ ಪ್ರವಿಶ್ಯಾಥ ಮುನಿರ್ಭವೇತ್ ॥ ೬ ॥

ಪಿತಾ– ಮಗನೇ, ಮನುಷ್ಯನು ಮೊದಲು ಬ್ರಹ್ಮಚರ್ಯವನ್ನು ನಡೆಸಬೇಕು. ಅನಂತರ ತನ್ನ ಪಿತೃಗಳ ಉದ್ಧಾರಕ್ಕಾಗಿ ಗಾರ್ಹಸ್ಥ್ಯ ಧರ್ಮವನ್ನು ಆಶ್ರಯಿಸಿ

ಸಂತತಿಯನ್ನು ಪಡೆಯಬೇಕು. ಅಗ್ನ್ಯಾಧಾನವನ್ನು ಮಾಡಿ ಯಜ್ಞಗಳನ್ನು ವಿಧಿಬದ್ಧವಾಗಿ ನಡೆಸಬೇಕು. ಬಳಿಕ ಮುನಿಯಾಗಿ ವನವನ್ನು ಪ್ರವೇಶಿಸಿ ಶ್ರೇಯಸ್ಸನ್ನು ಸಾಧಿಸಬೇಕು.

ಪುತ್ರಃ

ಏವಮಭ್ಯಾಹತೇ ಲೋಕೇ ಸಮಂತಾತ್ ಪರಿವಾರಿತೇ ।
ಅಮೋಘಾಸು ಪತಂತೀಷು ಕಿಂ ಧೀರ ಇವ ಭಾಷಸೇ ॥ ೭ ॥

ಪುತ್ರ– ಜನಕನೇ, ಹೀಗೇಕೆ ಹೇಳುತ್ತಿರುವೆ? ಲೋಕವೆಲ್ಲಾ ಅನೇಕ ರೀತಿಯಲ್ಲಿ ನಾಶವನ್ನು ಹೊಂದುತ್ತಿದೆ. ಅನರ್ಥದಿಂದ ಆವರಿಸಲ್ಪಟ್ಟಿದೆ. ಅನಾಹುತಗಳಿಂದ ಸೆಳೆಯಲ್ಪಡುತ್ತಿದೆ. ಹೀಗಿರುವಾಗ ಮಹಾಧೀರನಂತೆ ಸುಖವಾಗಿ ಏನೇನೋ ಕಾರ್ಯಗಳನ್ನು ಬೋಧಿಸುತ್ತಿರುವೆಯಲ್ಲ ಎಂದನು.

ಪಿತಾ

ಕಥಮಭ್ಯಾಹತೋ ಲೋಕಃ ಕೇನ ವಾ ಪರಿವಾರಿತಃ ।
ಅಮೋಘಾಃ ಕಾಃ ಪತಂತೀಹ ಕಿಂ ನು ಭೀಷಯಸೀವ ಮಾಮ್ ॥ ೮ ॥

ಪಿತಾ– ಮಗನೇ, ಲೋಕವನ್ನು ಕೊಲ್ಲುತ್ತಿರುವುದು ಯಾವುದು? ಈ ಲೋಕವನ್ನು ಯಾವುದು ಆವರಿಸಿದೆ? ಯಾವುದರಿಂದ ಎಲ್ಲರೂ ಸೆಳೆತಕ್ಕೆ ತುತ್ತಾಗಿ ಅನಾಹುತಗಳಿಗೆ ತುತ್ತಾಗುತ್ತಿದ್ದಾರೆ? ಇದ್ಯಾವುದೂ ನನಗೆ ತೋರುತ್ತಿಲ್ಲ. ಸುಮ್ಮನೆ ನನ್ನನ್ನು ನೀನು ಏಕೆ ಹೆದರಿಸುತ್ತಿರುವಿ?

ಪುತ್ರಃ

ಮೃತ್ಯುನಾಭ್ಯಾಹತೋ ಲೋಕೋ ಜರಯಾ ಪರಿವಾರಿತಃ ।
ಅಹೋರಾತ್ರಾಃ ಪತಂತ್ಯೇತೇ ನನು ಕಸ್ಮಾನ್ನ ಬುಧ್ಯಸೇ ॥ ೯ ॥

ಪುತ್ರ– ಜಗತ್ತೆಲ್ಲವೂ ಪ್ರತಿದಿವಸವೂ ಮೃತ್ಯುವಿನಿಂದ ಕೊಲ್ಲಲ್ಪಡುತ್ತಿದೆ. ವೃದ್ಧಾಪ್ಯದಿಂದ ಗ್ರಸ್ತವಾಗಿದೆ. ಹಗಲು-ರಾತ್ರಿಗಳಲ್ಲಿ ಮೂರುವಿಧರಾದ ಜೀವರು ತಮ್ಮ ತಮ್ಮ ಯೋಗ್ಯತೆಗೆ ಅನುಗುಣವಾಗಿ ಪುಣ್ಯ-ಪಾಪಕರ್ಮಗಳನ್ನು ಆಚರಿಸುತ್ತಾ ಕಾಲ ನಿಯಮಕ್ಕೆ ಒಳಪಡುತ್ತಿದ್ದಾರೆ. ಹೀಗಿದ್ದರೂ ಇದು ನಿನಗೆ ತಿಳಿಯದೇ ಹೋಯಿತೆ?

ಯದಾಹಮೇತಜ್ಜಾನಾಮಿ ನ ಮೃತ್ಯುಸ್ತಿಷ್ಠತೀತಿ ಹ ।
ಸೋಽಹಂ ಕಥಂ ಪ್ರತೀಕ್ಷಿಷ್ಯೇ ಜಾಲೇನಾಪಿ ಹಿತಶ್ಚರನ್ ॥ ೧೦ ॥

ರಾತ್ರ್ಯಾಂ ರಾತ್ರ್ಯಾಂ ವ್ಯತೀತಾಯಾಮಾಯುರಲ್ಪತರಂ ಯದಾ ।
ಗಾಧೋದಕೇ ಮತ್ಸ್ಯ ಇವ ಸುಖಂ ವಿಂದೇತ ಕಸ್ತದಾ ।
ತದೈವ ವಂಧ್ಯಂ ದಿವಸಮಿತಿ ವಿದ್ಯಾದ್ ವಿಚಕ್ಷಣಃ ॥ ೧೧ ॥

ಬಲೆಯಲ್ಲಿ ಸಿಕ್ಕಿಬಿದ್ದಂತಿರುವ ನಾನು ಇದಕ್ಕೆಲ್ಲಾ ಹೇಗೆ ಭಯಪಡದಂತೆ ಇರಲಿ. ಒಂದೊಂದು ರಾತ್ರಿಯು ಕಳೆದಂತೆ ಆಯುಸ್ಸು ಸ್ವಲ್ಪಸ್ವಲ್ಪವಾಗಿ ತಗ್ಗಿಸುತ್ತಾ ಬರುತ್ತದೆ. ಕಳೆದುಹೋಗುವ ಹಗಲು ಹಾಗೆಯೇ ವ್ಯರ್ಥವಾಗಿ ಇರುತ್ತಿರಲು ವಿವೇಕವುಳ್ಳವನು ಯಾವನು ತಾನೇ ಇದನ್ನು ತಿಳಿಯದೇ ಇರುತ್ತಾನೆ? ಮೃತ್ಯುವು ನಿರಂತರ ಮೇಲೆ ಬಿದ್ದು ಬರುತ್ತಿರುವಾಗ ಯಾವ ಮನುಷ್ಯನು ತಾನೇ ತತ್ಕಾಲದ ಸುಖವನ್ನು ನಿರೀಕ್ಷಿಸಬಲ್ಲನು? ಆಳವಿಲ್ಲದ ನೀರಿನಲ್ಲಿ ಜೀವಿಸುವ ಮತ್ಸ್ಯಗಳ ಬದುಕು ಎಷ್ಟು ಅಸ್ಥಿರವೋ, ಮೃತ್ಯುವಿಗೆ ತುತ್ತಾಗುತ್ತಿರುವ ಜೀವರ ಬದುಕೂ ಇಷ್ಟೇ ಅಸ್ಥಿರ. ಜ್ಞಾನಿಯಾದವನು ಬಂಜೆಯಂತಿರುವ ಮೃತ್ಯುಸಂಬಂಧಿ ದಿವಸಗಳನ್ನು ಅರ್ಥಮಾಡಿಕೊಂಡಿರುತ್ತಾನೆ. ಎಲ್ಲ ಜೀವರಿಗೂ ನೂರು ವರ್ಷದ ಆಯುಷ್ಯ ಎಂಬ ನಿಯಮವು ಇಲ್ಲದಿರುವುದರಿಂದ ಪ್ರತಿದಿನವೂ ಮೃತ್ಯುವಿನ ಆಶಂಕೆಯನ್ನು ಮಾಡಲೇಬೇಕಾಗುತ್ತದೆ.

ಯಾಮೇವ ರಾತ್ರಿಂ ಪ್ರಥಮಾಂ ಗರ್ಭೋ ಭವತಿ ಮಾತರಮ್ ।
ತಾಮೇವ ರಾತ್ರಿಂ ಪ್ರಸ್ಥಾತಿ ಮರಣಾಯ ನಿವರ್ತತೇ ।
ಯಸ್ಯಾಂ ರಾತ್ರ್ಯಾಂ ವ್ಯತೀತಾಯಾಂ ನ ಕಿಂಚಿಚ್ಛುಭಮಾಚರೇತ್ ॥

ಯಾವ ಮೊದಲನೆಯ ರಾತ್ರಿಯಲ್ಲಿ ತಾಯಿಯ ಉದರವನ್ನು ಗರ್ಭವು ಪ್ರವೇಶಿಸುತ್ತದೋ ಅದೇ ರಾತ್ರಿಯೇ ಗರ್ಭಸ್ರಾವಕ್ಕೆ ಕಾರಣೀಭೂತವಾದ ಕರ್ಮವು ಆ ಜೀವನಿಗೆ ಉಂಟಾಗುತ್ತದೆ. ಉತ್ಪತ್ತಿಯನ್ನು ಹೊಂದಿದ ರಾತ್ರಿಯಲ್ಲಿಯೇ ಮರಣಕ್ಕೆ ಬೇಕಾದ ಕರ್ಮವು ಉತ್ಪನ್ನವಾಗುತ್ತದೆ. ಒಂದು ರಾತ್ರಿ ಕಳೆದಾಗ ಆ ದಿನಕ್ಕೆ ಸಂಬಂಧಿಸಿದ ಸತ್ಕರ್ಮದಿಂದಲೂ ವಂಚಿತನಾದಂತೆಯೇ.

ಅನವಾಪ್ತೇಷು ಕಾಮೇಷು ಮೃತ್ಯುರಭ್ಯೇತಿ ಮಾನವಮ್ ।
ಪುಷ್ಪಾಣೀವ ವಿಚಿನ್ವಂತಮನ್ಯತ್ರಗತಮಾನಸಮ್ ।
ವೃಕೀವೋರಣಮಾಸಾದ್ಯ ಮೃತ್ಯುರಾದಾಯ ಗಚ್ಛತಿ ॥ ೧೩ ॥

ಮನಸ್ಸಿನಲ್ಲಿ ಉತ್ಪನ್ನವಾಗುವ ಅನೇಕ ಕಾಮನೆಗಳನ್ನು ಹೊಂದುವ ಮೊದಲೇ ಮೃತ್ಯುವು ಮಾನವನನ್ನು ಸಮೀಪಿಸಿರುತ್ತದೆ. ಪುಷ್ಪಗಳನ್ನು ಹುಡುಕುತ್ತಿರುವ ವ್ಯಕ್ತಿಯ ಮನಸ್ಸು ಬೇರೆ ಕಡೆ ಲಗ್ನವಾದಾಗ ಅವನಿಗೆ ಒದಗುವ ಆಪತ್ತುಗಳು ತಿಳಿಯದಿರುವಂತೆ ಕಾಮನೆಗಳಲ್ಲಿ ಆಸಕ್ತನಾಗಿರುವ ವ್ಯಕ್ತಿಗೆ ಮೃತ್ಯುವಿನ ಅತಿಕ್ರಮಣವು ಗೊತ್ತಾಗುವುದಿಲ್ಲ. ಋತುಕಾಲದ ಹೆಣ್ಣುಮೇಕೆಯನ್ನು ಹುಡುಕುತ್ತಾ ಹೋಗುವ ಗಂಡುಮೇಕೆಯನ್ನು ಹಿಂದಿನಿಂದ ಬಂದ ತೋಳಗಳು ಥಟ್ಟನೆ ಕಚ್ಚಿಕೊಂಡು ಹೋಗುವಂತೆ, ತನ್ನ ಕರ್ಮಫಲಗಳನ್ನು ಹುಡುಕುತ್ತಾ ಮನಸ್ಸಿನಲ್ಲಿ ಏನನ್ನೋ ಎಣಿಸುತ್ತಿರುವ ಪುರುಷನನ್ನು ಅವನಿಗೆ ತಿಳಿಯದಂತೆ ಮೃತ್ಯುವು ಬಂದು ಎತ್ತಿಕೊಂಡು ಹೋಗುತ್ತದೆ.

ಅದ್ಯೈವ ಕುರು ಯಚ್ಛ್ರೇಯೋ ಮಾ ತ್ವಾ ಕಾಲೋऽತ್ಯಗಾದಯಮ್ ।
ಅಕೃತೇಷ್ವೇವ ಕಾರ್ಯೇಷು ಮೃತ್ಯುರ್ವೈ ಸಂಪ್ರಕರ್ಷತಿ ॥ ೧೪ ॥

ಆದ್ದರಿಂದ ಯಾವುದು ಶ್ರೇಯಸ್ಸು ಎಂಬುದಿದೆಯೋ ಅದನ್ನು ಕೂಡಲೇ ಆಚರಿಸಬೇಕು. ಜನಕನೇ, ಕಾಲವು ಈಗಲೇ ನಿನ್ನ ಮೇಲೆ ಬಿದ್ದು ನಿನ್ನನ್ನು ಅತಿಕ್ರಮಿಸುವುದಕ್ಕೆ ತವಕಿಸುತ್ತಿರುವಾಗ ಅದಕ್ಕೆ ಅವಕಾಶವನ್ನು ಕೊಡದೇ ಮೊದಲೇ ಸತ್ಕಾರ್ಯವನ್ನು ನಡೆಸು. ಶ್ರೇಯಃಕಾರ್ಯವನ್ನು ನಡೆಸುವುದಕ್ಕಿಂತ ಮೊದಲೇ ನಿನ್ನನ್ನು ಮೃತ್ಯುವು ಹಿಡಿದುಕೊಂಡು ಹೋಗಬಹುದು.

ಶ್ವಃಕಾರ್ಯಮದ್ಯ ಕುರ್ವೀತ ಪೂರ್ವಾಹ್ಣೇ ಚಾಪರಾಹ್ಣಿಕಮ್ ।
ನ ಹಿ ಪ್ರತೀಕ್ಷತೇ ಮೃತ್ಯುಃ ಕೃತಂ ವಾಸ್ಯ ನ ವಾ ಕೃತಮ್ ।
ಕೋ ಹಿ ಜಾನಾತಿ ಕಸ್ಯಾದ್ಯ ಮೃತ್ಯುಸೇನಾ ನಿವೇಕ್ಷ್ಯತೇ ॥ ೧೫ ॥

ಆದ್ದರಿಂದ ಮೃತ್ಯುವಿಗೆ ಅವಕಾಶ ನೀಡದಂತೆ ನಾಳೆಯ ಕಾರ್ಯವನ್ನು ಈಗಲೇ ಮುಗಿಸಬೇಕು. ಮಧ್ಯಾಹ್ನದ ಕಾರ್ಯಗಳನ್ನು ಪೂರ್ವಾಹ್ಣದಲ್ಲೇ ಮುಗಿಸಿಬಿಡಬೇಕು. ನೀನು ಕಾರ್ಯಗಳನ್ನು ಮುಗಿಸಿದೆಯೋ ಇಲ್ಲವೋ ಎಂಬುದನ್ನು ಮೃತ್ಯುವು

ನಿರೀಕ್ಷಿಸದು. ಯಾವನಿಗೆ ಯಾವಾಗ ಮೃತ್ಯುಕಾಲವು ಎಂಬುದನ್ನು ತಿಳಿಯಬಲ್ಲವರು ಯಾರಿದ್ದಾರೆ?

ಯುವೈವ ಧರ್ಮಶೀಲಃ ಸ್ಯಾದನಿಮಿತ್ತಂ ಹಿ ಜೀವಿತಮ್ ।
ಕೃತೇ ಧರ್ಮೇ ಭವೇತ್ ಕೀರ್ತಿರಿಹ ಪ್ರೇತ್ಯ ಚ ವೈ ಸುಖಮ್ ॥ ೧೬ ॥

ಯೌವನದೆಶೆಯಲ್ಲಿಯೇ ಧರ್ಮಶೀಲನಾಗಬೇಕು. ಜೀವಿತವು ಸ್ಥಿರವಾಗಿರುವುದಿಲ್ಲ. ಧರ್ಮವನ್ನು ಆಚರಿಸಿದರೆ ಇಹಲೋಕದಲ್ಲಿ ಕೀರ್ತಿಯೂ ಪರಲೋಕದಲ್ಲಿ ಸುಖವೂ ಉಂಟಾಗುತ್ತದೆ.

ಮೋಹೇನ ಹಿ ಸಮಾವಿಷ್ಟಃ ಪುತ್ರದಾರಾರ್ಥಮುದ್ಯತಃ ।
ಕೃತ್ವಾ ಕಾರ್ಯಮಕಾರ್ಯಂ ವಾ ಪುಷ್ಣಿಮೇಷಾಂ ಪ್ರಯಚ್ಛತಿ ॥ ೧೭ ॥

ಮೋಹವು ಹೆಚ್ಚಿದಷ್ಟು ಮನುಷ್ಯನು ಹೆಂಡತಿ-ಮಕ್ಕಳಿಗಾಗಿ ಕಷ್ಟಪಡುತ್ತಾನೆ. ಮಾಡಬಹುದಾದ, ಮಾಡಬಾರದಾದ ಕಾರ್ಯಗಳನ್ನೆಲ್ಲಾ ಮಾಡಿ ಅವರನ್ನು ಪೋಷಿಸುತ್ತಾನೆ.

ತಂ ಪುತ್ರಪಶುಸಮ್ಮತ್ತಂ ವ್ಯಾಸಕ್ತಮನಸಂ ನರಮ್ ।
ಸುಪ್ತಂ ವ್ಯಾಘ್ರಂ ಮಹೌಘೋ ವಾ ಮೃತ್ಯುರಾದಾಯ ಗಚ್ಛತಿ ॥ ೧೮ ॥

ಹೆಂಡತಿ-ಮಕ್ಕಳು-ಸಂಪತ್ತು ಇವುಗಳಲ್ಲೇ ಮೈಮರೆತ ಮನುಷ್ಯನನ್ನು ನಿದ್ದೆ ಮಾಡುವ ಮೃಗವನ್ನು ಹುಲಿಯು ಎತ್ತಿಕೊಂಡು ಹೋಗುವಂತೆ ಮೃತ್ಯುವು ಅಪಹರಿಸಿಕೊಂಡು ಹೋಗುತ್ತದೆ.

ಸಂಚಿನ್ವಾನಕಮೇವೈಕಂ ಕಾಮಾನಾಮವಿತೃಪ್ತಕಮ್ ।
ವ್ಯಾಘ್ರಃ ಪಶುಮಿವಾದಾಯ ಮೃತ್ಯುರಾದಾಯ ಗಚ್ಛತಿ ॥ ೧೯ ॥

ಅನೇಕ ಬಯಕೆಗಳನ್ನು ಹೊಂದಬೇಕೆಂದು ಅವಿತೃಪ್ತನಾಗಿ ಕಾಮನೆಗಳ ಬೆನ್ನನ್ನು ಹಿಡಿದಿರುವಾಗಲೇ ಹುಲಿಯು ಪಶುವನ್ನು ಹಿಡಿಯುವಂತೆ ಮೃತ್ಯುವು ಮನುಷ್ಯನನ್ನು ಎತ್ತಿಕೊಂಡು ಹೋಗುತ್ತದೆ.

ಇದಂ ಕೃತಮಿದಂ ಕಾರ್ಯಮಿದಮನ್ಯತ್ಕೃತಾಕೃತಮ್ ।
ಏವಮೀಹಾಸುಖಾಸಕ್ತಂ ಕೃತಾಂತಃ ಕುರುತೇ ವಶೇ ॥ ೨೦ ॥

ಈ ಕರ್ಮವನ್ನು ನಾನು ಮುಗಿಸಿದೆನು, ಇನ್ನು ಮುಂದೆ ಇದನ್ನು ಮಾಡಬೇಕು, ಈ ಕಾರ್ಯವು ಅರ್ಧದಲ್ಲಿ ನಿಂತಿದೆ ಎಂಬುದಾಗಿ ವಿಧವಿಧವಾಗಿ ಯೋಚಿಸುತ್ತಾ ಸುಖಗಳನ್ನು ಮನಸ್ಸಿನಲ್ಲಿ ಗುಣಿಸುತ್ತಿರುವಾಗಲೇ ಯಮನು ಬಂದು ಆ ಮನುಷ್ಯನನ್ನು ತನ್ನ ವಶವಾಗಿಸಿಕೊಳ್ಳುತ್ತಾನೆ.

ಕೃತಾನಾಂ ಫಲಮಪ್ರಾಪ್ತಂ ಕರ್ಮಣಾಂ ಫಲಸಂಗಿನಮ್ ।
ಕ್ಷೇತ್ರಾಪಣಗೃಹಾಸಕ್ತಂ ಮೃತ್ಯುರಾದಾಯ ಗಚ್ಛತಿ ॥ ೨೧ ॥

ಮನುಷ್ಯನು ತನ್ನ ವೃತ್ತಿಯನ್ನು ಆಶ್ರಯಿಸಿ ಫಲವನ್ನುಣ್ಣುತ್ತಲೋ, ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಲೋ, ಮನೆಯಲ್ಲಿ ಸುಖವಾಗಿ ಕಾಲಕಳೆಯುತ್ತಲೋ ಇರುವಾಗ ಅವನ ಕಾರ್ಯಕ್ಕೆ ಫಲವುಂಟಾಗುವುದಕ್ಕಿಂತ ಮೊದಲೇ ಕರ್ಮದ ಫಲಗಳಲ್ಲಿ ಆಸಕ್ತನಾದ ಅವನನ್ನು ಮೃತ್ಯುವು ಸ್ವೀಕರಿಸಿ ಹೊರಟು ಹೋಗುತ್ತದೆ.

ದುರ್ಬಲಂ ಬಲವಂತಂ ಚ ಶೂರಂ ಭೀರುಂ ಜಡಂ ಕವಿಮ್ ।
ಅಪ್ರಾಪ್ತಸರ್ವಕಾಮಾರ್ಥಂ ಮೃತ್ಯುರಾದಾಯ ಗಚ್ಛತಿ ॥ ೨೨ ॥

ವ್ಯಕ್ತಿಯು ದುರ್ಬಲನಾಗಿರಲಿ, ಬಲಾಢ್ಯನಾಗಿರಲಿ, ಶೂರನಾಗಿರಲಿ, ಭಯಶೀಲನಾಗಿರಲಿ, ಜಡನಾಗಿರಲಿ, ದೂರದೃಷ್ಟಿಯುಳ್ಳವನಾಗಿರಲಿ ಎಂತಹವನನ್ನೂ ಮೃತ್ಯುವು ಬಿಡುವುದಿಲ್ಲ. ಅವನ ಕೋರಿಕೆಗಳು, ಕಾರ್ಯಗಳು ಮುಗಿಯುವ ಮೊದಲೇ ಮೃತ್ಯುವು ಎಳೆದುಕೊಂಡು ಹೋಗುತ್ತದೆ.

ಮೃತ್ಯುರ್ಜರಾ ಚ ವ್ಯಾಧಿಶ್ಚ ದುಃಖಂ ಚಾನೇಕಕಾರಣಮ್ ।
ಅನುಷಕ್ತಂ ಯದಾ ದೇಹೇ ಕಿಂ ಸ್ವಸ್ಥ ಇವ ತಿಷ್ಠಸಿ ॥ ೨೩ ॥

ಜರಾ (ಮುಪ್ಪು), ಮೃತ್ಯು, ವ್ಯಾಧಿ, ಅನೇಕ ಕಾರಣಗಳಿಂದ ಉಂಟಾಗುವ ದುಃಖಗಳು ಇವೆಲ್ಲವೂ ನಿನ್ನ ದೇಹದಲ್ಲಿಯೇ ನೆಲೆಸಿರುವಾಗ ಹೇಗೆ ತಾನೆ ಸ್ವಸ್ಥಾತ್ಮನಂತೆ ನೀನು ಇರುತ್ತಿರುವಿ?

ಇದಂ ಮೇ ಸ್ಯಾದಿದಂ ಮೇ ಸ್ಯಾದಿತ್ಯೇವಂಮನಸೋ ನರಾನ್ ।
ಅನವಾಪ್ತೇಷು ಕಾಮೇಷು ಕೃತಾಂತಃ ಕುರುತೇ ವಶೇ ॥ ೨೪ ॥

ಈ ವಸ್ತುವು ನನಗೆ ಲಭಿಸಲಿ, ಇದು ನನ್ನ ವಶವಾಗಲಿ ಎಂದು ಮನುಷ್ಯನು ಮನಸ್ಸಿನಲ್ಲಿ ಸಂಕಲ್ಪಿಸುತ್ತಿರುವಾಗಲೇ ಆ ಕಾಮನೆಗಳು ಪೂರ್ಣವಾಗುವ ಮುನ್ನವೇ ಮನುಷ್ಯನು ಯಮನ ವಶನಾಗುತ್ತಾನೆ.

ಜಾತಮೇವಾಂತಕೋऽಂತಾಯ ಜರಾ ಚಾನ್ವೇತಿ ದೇಹಿನಮ್ ।
ಅನುಷಕ್ತಾ ದ್ವಯೇನೈತೇ ಭಾವಾಃ ಸ್ಥಾವರಜಂಗಮಾಃ ॥ ೨೫ ॥

ಪ್ರಾಣಿಯು ಹುಟ್ಟುವಾಗಲೇ ಆ ಜೀವವನ್ನು ಕೊನೆಗಾಣಿಸುವುದಕ್ಕಾಗಿ ಜರಾ-ಮರಣಗಳೆರಡು ಕಣ್ಬಟ್ಟು ಕಾದಿರುತ್ತವೆ. ಸ್ಥಾವರ-ಜಂಗಮವಿರುವ ಎಲ್ಲಾ ವಸ್ತುಗಳೂ ಜರಾ-ಮರಣಗಳಿಗೆ ಗುರಿಯಾಗಿಯೇ ಇರುತ್ತವೆ.

ಮೃತ್ಯೋರ್ವಾ ಗೃಹಮೇವೈತದ್ಯಾ ಗ್ರಾಮೇ ವಸತೋ ರತಿಃ ।
ದೇವಾನಾಮೇಷ ವೈ ಗೋಷ್ಠೋ ಯದರಣ್ಯಮಿತಿ ಶ್ರುತಿಃ ॥ ೨೬ ॥

ಗ್ರಾಮಗಳಲ್ಲಿ, ಪಟ್ಟಣಗಳಲ್ಲಿ ವಾಸಮಾಡಿರಬೇಕು. ಬಂಧು-ಬಾಂಧವರನ್ನೇ ಕೂಡಿಕೊಂಡಿರಬೇಕು ಎಂಬ ಆಸಕ್ತಿಯು ಮೃತ್ಯುವಿಗೆ ಮುಖ ಎನಿಸಿದೆ. ಇಂದ್ರಿಯಗಳೆಂಬ ಹಸುಗಳನ್ನು ಕಟ್ಟಿಡುವ ದನದ ಕೊಟ್ಟಿಗೆಯಂತಿರುವ ಈ ದೇಹವು ದೇವತೆಗಳ ಅರಣ್ಯವೆಂಬುದಾಗಿ ಶ್ರುತಿಯು ಹೇಳುತ್ತಿದೆ.

ನಿಬಂಧನೀ ರಜ್ಜುರೇಷಾ ಯಾ ಗ್ರಾಮೇ ವಸತೋ ರತಿಃ ।
ಉತ್ತೈಷ್ಣಾನಾಂ ಸುಕೃತೋ ಯಾಂತಿ ನೈನಾಂ ಉಂದಂತಿ ದುಷ್ಕೃತಃ ॥ ೨೭ ॥

ಗ್ರಾಮ-ನಗರಗಳಲ್ಲಿ ಗುಂಪುಗುಂಪಾಗಿ ವಾಸಮಾಡಬೇಕೆಂಬ ಆಸೆಯೇ ಮನುಷ್ಯನಿಗೆ ಹಸುವಿನಂತೆ ಕಟ್ಟುವ ಹಗ್ಗವೆನಿಸಿದೆ. ಪುಣ್ಯಾತ್ಮರು ಇಂತಹ ಬಲವಾದ ಕಟ್ಟುಗಳನ್ನು ಕಿತ್ತುಕೊಂಡು ಸಾಗುತ್ತಾರೆ. ಪಾಪಿಗಳು ಈ ಬಂಧನದಲ್ಲಿಯೇ ಸಿಕ್ಕಿ ಬೀಳುತ್ತಾರೆ.

ನ ಹಿಂಸಯತಿ ಯಃ ಪ್ರಾಣಾನ್ಮನೋವಾಕ್ಕಾಯಹೇತುಭಿಃ ।
ಜೀವಿತಾರ್ಥಾಪನಯನೈಃ ಕರ್ಮಭಿರ್ನ ಸ ಬಧ್ಯತೇ ॥ ೨೮ ॥

ಮಾತು-ಮನಸ್ಸು-ಕೃತಿಗಳಿಂದ ಪ್ರಾಣಿಹಿಂಸೆಯನ್ನು ಮಾಡದಿರುವ ವ್ಯಕ್ತಿಯು ಪ್ರಾಣನಾಶಕಗಳಾದ ಯಾವುದೇ ವಸ್ತುಗಳಿಂದಲೂ, ವ್ಯಕ್ತಿಗಳಿಂದಲೂ ಹಿಂಸೆಯನ್ನು ಅನುಭವಿಸುವುದಿಲ್ಲ.

ನ ಮೃತ್ಯುಸೇನಾಮಾಯಾಂತೀಂ ಜಾತು ಕಶ್ಚಿತ್ ಪ್ರಬಾಧತೇ ।
ಋತೇ ಸತ್ಯಮಸಂತ್ಯಾಜ್ಯಂ ಸತ್ಯೇ ಹ್ಯಮೃತಮಾಶ್ರಿತಮ್ ॥ ೨೯ ॥

ಮೃತ್ಯುವಿನ ಸೈನ್ಯಗಳೆನಿಸಿಕೊಂಡ ಜರಾ-ವ್ಯಾಧಿ ಎಂಬವು ಪುರುಷರ ಮೇಲೆ ಎರಗುತ್ತಿರುವಾಗ ತತ್ತ್ವಜ್ಞಾನವೆಂಬ ಸತ್ಯವೊಂದನ್ನು ಬಿಟ್ಟು ಬೇರೆ ಯಾವುದೂ ಅವುಗಳ ವಿರುದ್ಧ ಎದುರಿಸಿ ನಿಲ್ಲಲಾರದು. ಸತ್ಯದಲ್ಲಿಯೇ ಅಮೃತವು ನೆಲೆಸಿರುವುದು.

ತಸ್ಮಾತ್ ಸತ್ಯವ್ರತಾಚಾರಃ ಸತ್ಯಯೋಗಪರಾಯಣಃ ।
ಸತ್ಯಾರಾಮಃ ಸಮೋ ದಾಂತಃ ಸತ್ಯೇನೈವಾಂತಕಂ ಜಯೇತ್ ॥ ೩೦ ॥

ಆದ್ದರಿಂದ ಸತ್ಯವೆಂಬ ವ್ರತವನ್ನೇ ಆಶ್ರಯಿಸಬೇಕು. ಸತ್ಯವನ್ನು ಎಂದಿಗೂ ಮೀರಿ ವರ್ತಿಸಬಾರದು. ಸತ್ಯವನ್ನೇ ವೇದವೆಂದು ಆಧರಿಸಬೇಕು. ಹೀಗೆ ಸತ್ಯವನ್ನೇ ಆಧರಿಸುತ್ತಾ ದಮ ಎಂಬ ಇಂದ್ರಿಯನಿಗ್ರಹವನ್ನು ಸಾಧಿಸಿದವನು ಈ ಸತ್ಯದ ಬಲದಿಂದಲೇ ಅಂತಕ (ಯಮ)ನನ್ನು ಜಯಿಸುತ್ತಾನೆ.

ಅಮೃತಂ ಚೈವ ಮೃತ್ಯುಶ್ಚ ದ್ವಯಂ ದೇಹೇ ಪ್ರತಿಷ್ಠಿತಮ್ ।
ಮೃತ್ಯುಮಾಪದ್ಯತೇ ಮೋಹಾತ್ ಸತ್ಯೇನಾಪದ್ಯತೇऽಮೃತಮ್ ॥ ೩೧ ॥

ಮೃತ್ಯು-ಅಮೃತ ಎಂಬ ಎರಡು ಈ ದೇಹದಲ್ಲಿ ನೆಲೆಗೊಂಡಿವೆ. ಮೋಹದಿಂದ ಮೃತ್ಯುವು ತಲೆದೋರುತ್ತದೆ. ಸತ್ಯದಿಂದ ಅಮೃತವು ಗೋಚರಿಸುತ್ತದೆ.

ಸೋऽಹಂ ಹ್ಯಹಿಂಸ್ರಃ ಸತ್ಯಾರ್ಥೀ ಕಾಮಕ್ರೋಧಬಹಿಷ್ಕೃತಃ ।
ಸಮದುಃಖಸುಖಃ ಕ್ಷೇಮೀ ಮೃತ್ಯುಂ ಹಾಸ್ಯಾಮ್ಯಮರ್ಷವತ್ ॥ ೩೨ ॥

ಜನಕನೇ, ನಾನು ಎಲ್ಲರಂತೆ ಮೃತ್ಯುವಿಗೆ ಗುರಿ ಎನಿಸಿದ್ದರೂ ಕಾಮ-ಕ್ರೋಧಗಳನ್ನು ಜಯಿಸಿ, ಹಿಂಸೆಯನ್ನು ತೊರೆದು, ಸತ್ಯವನ್ನೇ ಹಿಡಿದು, ಸುಖ-ದುಃಖಗಳೆರಡನ್ನೂ ಸಮವಾಗಿ ನೋಡುತ್ತಾ ಮರಣವಿಲ್ಲದ ದೇವನಂತೆ ನಿರ್ಭಯವಾಗಿ ಸಂಚರಿಸುತ್ತಿದ್ದೇನೆ.

ಶಾಂತಿಯಜ್ಞರತೋ ದಾಂತೋ ಬ್ರಹ್ಮಯಜ್ಞೇ ಸ್ಥಿತೋ ಮುನಿಃ ।
ವಾಙ್ಮನಃಕರ್ಮಯಜ್ಞಶ್ಚ ಭವಿಷ್ಯಾಮ್ಯುದಗಾಯನೇ ॥ ೩೩ ॥

ಉತ್ತರಾಯಣ ಎಂಬ ಮುಕ್ತಿಮಾರ್ಗಕ್ಕಾಗಿ ನಾನು ದಮವನ್ನು ಸ್ವೀಕರಿಸಿ, ಶಾಂತಿಯಜ್ಞ ಎಂಬ ನಿವೃತ್ತಿಮಾರ್ಗವನ್ನು ಅನುಸರಿಸಿ, ಬ್ರಹ್ಮಯಜ್ಞ ಎಂಬ ವೇದಾಂತ

ತತ್ತ್ವವನ್ನು ಅವಲಂಬಿಸಿದ್ದೇನೆ. ಮಾತು, ಮನಸ್ಸು, ಕೃತಿಗಳಿಂದ ಆಚರಿಸುತ್ತಾ ಉತ್ತರಾಯಣವನ್ನು ನಿರೀಕ್ಷಿಸುತ್ತಿದ್ದೇನೆ.

ಪಶುಯಜ್ಞೈಃ ಕಥಂ ಹಿಂಸ್ಯೈರ್ಮಾದೃಶೋ ಯಷ್ಟುಮರ್ಹತಿ ।
ಅಂತವದ್ಭಿರುತ ಪ್ರಾಜ್ಞಃ ಕ್ಷತ್ರಯಜ್ಞೈಃ ಪಿಶಾಚವತ್ ॥ ೩೪ ॥

ಹಿಂಸಾಸ್ವಭಾವವುಳ್ಳ ಪಶುಯಜ್ಞದಿಂದಾಗಲೀ, ಅಶಾಶ್ವತಗಳಾದ, ಪಿಶಾಚಿಗಳಿಗೆ ಯೋಗ್ಯವಾದ ಕ್ಷತ್ರಯಜ್ಞದಿಂದಾಗಲೀ ನನ್ನಂತಹ ವ್ಯಕ್ತಿಯು ಕಾರ್ಯಗಳನ್ನು ಮಾಡಲು ಮನಸ್ಸು ಮಾಡನು.

ಯಸ್ಯ ವಾಙ್ಮನಸೀ ಸ್ಯಾತಾಂ ಸಮ್ಯಕ್ ಪ್ರಣಿಹಿತೇ ಸದಾ ।
ತಪಸ್ತ್ಯಾಗಶ್ಚ ಯೋಗಶ್ಚ ಸ ವೈ ಸರ್ವಮವಾಪ್ನುಯಾತ್ ॥ ೩೫ ॥

ಯಾರ ಮಾತು, ಮನಸ್ಸುಗಳು ದೃಢವಾಗಿ ಭಗವಂತನಲ್ಲಿ ಏಕಾಗ್ರಗೊಂಡಿರುತ್ತವೆಯೋ ಅಂತಹ ತಪಸ್ಸು, ತ್ಯಾಗ, ಯೋಗಗಳಿಂದ ಕೂಡಿದ ವ್ಯಕ್ತಿಯು ಎಲ್ಲ ವಿಧವಾದ ಫಲಗಳನ್ನು ಹೊಂದಲು ಅರ್ಹನಾಗುತ್ತಾನೆ.

ನಾಸ್ತಿ ವಿದ್ಯಾಸಮಂ ಚಕ್ಷುರ್ನಾಸ್ತಿ ವಿದ್ಯಾಸಮಂ ಬಲಮ್ ।
ನಾಸ್ತಿ ರಾಗಸಮಂ ದುಃಖಂ ನಾಸ್ತಿ ತ್ಯಾಗಸಮಂ ಸುಖಮ್ ॥ ೩೬ ॥

ವಿದ್ಯೆಗೆ ಸಮಾನವಾದ ಕಣ್ಣಿರುವುದಿಲ್ಲ. ವಿದ್ಯೆಗೆ ಸಮಾನವಾದ ಬಲವಿಲ್ಲ. ಆಸೆಗೆ ಸಮಾನವಾದ ದುಃಖವಿಲ್ಲ. ತ್ಯಾಗಕ್ಕೆ ಸಮಾನವಾದ ಸುಖವಿರುವುದಿಲ್ಲ.

ಆತ್ಮನ್ಯೇವಾತ್ಮನಾ ಜಾತ ಆತ್ಮನಿಷ್ಠೋಽಪ್ರಜೋಽಪಿ ವಾ ।
ಆತ್ಮನ್ಯೇವ ಭವಿಷ್ಯಾಮಿ ನ ಮಾಂ ತಾರಯತಿ ಪ್ರಜಾ ॥ ೩೭ ॥

ಜೀವಾತ್ಮನು ಪರಮಾತ್ಮನ ದೆಸೆಯಿಂದಲೇ ಜನ್ಮವನ್ನು ತಾಳಿರುತ್ತಾನೆ. ಸಂತಾನಹೀನನಾಗಿದ್ದರೂ ಪರಮಾತ್ಮನ ಅನುಗ್ರಹಕ್ಕೆ ಭಾಗಿಯಾಗುತ್ತಾನೆ. ಪ್ರಳಯ ಕಾಲದಲ್ಲಿಯೂ ಪರಮಾತ್ಮನನ್ನೇ ಹೊಂದುತ್ತಾನೆ. ಬಾಹ್ಯವಾದ ಪ್ರಜೆಗಳು ಪರಮಾತ್ಮನಲ್ಲಿ ಆಸಕ್ತನಾದ ವ್ಯಕ್ತಿಯನ್ನು ಉದ್ಧರಿಸಲಾರರು.

ನೈತಾದೃಶಂ ಬ್ರಾಹ್ಮಣಸ್ಯಾಸ್ತಿ ವಿತ್ತಂ
ಯಥೈಕತಾ ಸಮತಾ ಸತ್ಯತಾ ಚ ।

ಶೀಲೇ ಸ್ಥಿತಿರ್ದಂಡನಿಧಾನಮಾರ್ಜವಂ
ತತಸ್ತತಶ್ಚೋಪರಮಃ ಕ್ರಿಯಾಭ್ಯಃ ॥ ೩೮ ॥

ಬ್ರಾಹ್ಮಣನಿಗೆ ಏಕಾಂತವಾಸ, ಎಲ್ಲದರಲ್ಲಿಯೂ ಸಮದೃಷ್ಟಿ, ಸತ್ಯ, ಶೀಲ, ಮರ್ಯಾದೆ, ಅಹಿಂಸೆ, ಋಜುತ್ವ, ಕರ್ಮದಲ್ಲಿ ಉಪರಮ (ಆಸಕ್ತಿ), ಇವುಗಳೇ ಮುಖ್ಯವಾದ ಧನ ಎನಿಸಿವೆ. ಇದಕ್ಕೆ ಸಮಾನವಾದ ಧನವು ಇನ್ನೊಂದು ಇರುವುದಿಲ್ಲ.

ಕಿಂ ತೇ ಧನೈರ್ಬಾಂಧವೈರ್ವಾಪಿ ಕಿಂ ತೇ
ಕಿಂ ತೇ ದಾರೈರ್ಬ್ರಾಹ್ಮಣ ಯೋ ಮರಿಷ್ಯಸಿ ।
ಆತ್ಮಾನಮನ್ವಿಚ್ಛ ಗುಹಾಂ ಪ್ರವಿಷ್ಟಂ
ಪಿತಾಮಹಸ್ತೇ ಕ್ವ ಗತಃ ಪಿತಾ ಚ ॥ ೩೯ ॥

ಎಂದಿಗಾದರೂ ಒಮ್ಮೆ ಸಾಯುವ ನಿನಗೆ ಧನದಿಂದಾಗಲೀ, ಬಂಧುಗಳಿಂದಾಗಲೀ, ಭಾರ್ಯೆಯರಿಂದಾಗಲೀ ಏನು ಪ್ರಯೋಜನ? ಹೃದಯಗುಹೆಯಲ್ಲಿರುವ ಪರಮಾತ್ಮನನ್ನು ಧ್ಯಾನಿಸು. ನಿನ್ನ ತಂದೆಯಾಗಲೀ, ತಾತನಾಗಲೀ, ಮುತ್ತಾತನಾಗಲೀ ಈಗ ಎಲ್ಲಿದ್ದಾರೆಂದು ತಿಳಿದಿರುವೆಯಾ? ಎಂದನು.

ಭೀಷ್ಮಃ

ಪುತ್ರಸ್ಯೈತದ್ವಚಃ ಶ್ರುತ್ವಾ ತಥಾಕಾರ್ಷೀತ್ ಪಿತಾ ನೃಪ ।
ತಥಾ ತ್ವಮಪಿ ವರ್ತಸ್ವ ಸತ್ಯಧರ್ಮಪರಾಯಣಃ ॥ ೪೦ ॥

ಭೀಷ್ಮ– ಧರ್ಮರಾಜನೇ, ಮಗನು ಹೇಳಿದ ಈ ಮಾತನ್ನು ಕೇಳಿ ತಂದೆಯೂ ಅವನ ದಾರಿಯನ್ನು ಹಿಡಿದು ನೆಮ್ಮದಿಯಿಂದ ಇದ್ದನು. ನೀನು ಅವನಂತೆ ಸತ್ಯ-ಧರ್ಮಗಳಲ್ಲಿ ಆಸಕ್ತನಾಗಿ ಸತ್ಯ-ಧರ್ಮಗಳ ಮಾರ್ಗವನ್ನೇ ಅನುಸರಿಸು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂರನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ದಾರಿದ್ರ್ಯವು ಶ್ರೇಯಸ್ಸಿಗೆ, ಐಶ್ವರ್ಯವು ಅನರ್ಥಕ್ಕೆ ಕಾರಣವೆಂಬುದನ್ನು ನಿರೂಪಿಸಲು ಶಮ್ಯಾಕಗೀತೆಯನ್ನು ನಿರೂಪಿಸಿದುದು.

ಯುಧಿಷ್ಠಿರಃ

ಧನಿನೋ ವಾಧನಾ ಯೇ ಚ ವರ್ತಯಂತಿ ಸ್ವತಂತ್ರಿಣಃ ।
ಸುಖದುಃಖಾಗಮಸ್ತೇಷಾಂ ಕಃ ಕಥಂ ವಾ ಪಿತಾಮಹ ॥ ೧ ॥

ಯುಧಿಷ್ಠಿರ– ಪಿತಾಮಹರೇ, ಧನರಹಿತರೂ ಧನಾಢ್ಯರೂ ತಮಗೆ ಸಿಕ್ಕ ಸ್ಥಿತಿಯಲ್ಲಿ ಬದುಕನ್ನು ನಡೆಸುತ್ತಿದ್ದಾರೆ. ಅವರಿಗೆ ಸುಖ-ದುಃಖಗಳು ಬರುವ ಕಾರಣವೇನು? ಆ ಸುಖ-ದುಃಖಗಳು ಎಂತಹವುಗಳು ಎಂಬುದನ್ನು ತಿಳಿಸಿರಿ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಶಮ್ಯಾಕೇನ ವಿಮುಕ್ತೇನ ಗೀತಂ ಶಾಂತಿಗತೇನ ಹ ॥ ೨ ॥

ಭೀಷ್ಮ– ಯುಧಿಷ್ಠಿರನೇ, ಇದೇ ವಿಷಯದಲ್ಲಿ ಶಮ್ಯಾಕನೆಂಬುವನು ಶಾಂತಿ-ಮಾರ್ಗದಿಂದ ಮೋಕ್ಷವನ್ನು ಪಡೆದ ಇತಿಹಾಸವನ್ನು ಹಿಂದಿನವರು ಉದಾಹರಿಸುತ್ತಾರೆ.

ಅಬ್ರವೀನ್ಮಾಂ ಪುರಾ ಕಶ್ಚಿದ್ ಬ್ರಾಹ್ಮಣಸ್ತ್ಯಾಗಮಾಸ್ಥಿತಃ ।
ಕ್ಲಿಶ್ಯಮಾನಃ ಕುದಾರೇಣ ಕುಚ್ಛ್ರೇಲೇನ ಬುಭುಕ್ಷಯಾ ॥ ೩ ॥

ನನಗೆ ಅವರು ಹೇಳಿದಂತೆ ನಿನಗೆ ತಿಳಿಸುತ್ತೇನೆ. ಹಿಂದೆ ಶಮ್ಯಾಕನೆಂಬ ಬ್ರಾಹ್ಮಣನೊಬ್ಬನಿದ್ದನು. ಬಡತನದಿಂದ ಅವನು ಯಾವ ವಿಧವಾದ ಸುಖವನ್ನೂ ಹೊಂದಿರಲಿಲ್ಲ. ಕೈಹಿಡಿದ ಹೆಂಡತಿಯೂ ಕೆಟ್ಟವಳಾಗಿದ್ದಳು. ಉಡಲು ವಸ್ತ್ರವಿಲ್ಲ, ತಿನ್ನಲು ಅನ್ನವಿಲ್ಲ. ಇದರಿಂದ ಬಹುದುಃಖಿತನಾಗಿದ್ದನು.

ಉತ್ಪನ್ನಮಿಹ ಲೋಕೇ ವೈ ಜನ್ಮಪ್ರಭೃತಿ ಮಾನವಮ್ ।
ವಿವಿಧಾನ್ಯುಪವರ್ತಂತೇ ದುಃಖಾನಿ ಚ ಸುಖಾನಿ ಚ ॥ ೪ ॥

ಇದರಿಂದ ಅವನು ಹೀಗೆ ಚಿಂತಿಸಿದನು- ಭೂಮಿಯಲ್ಲಿ ಹುಟ್ಟಿದ ಮಾನವನಿಗೆ ಹಲವು ಬಗೆಯ ಸುಖ-ದುಃಖಗಳು ಹುಟ್ಟಿನಿಂದಲೇ ಬರುತ್ತಿರುತ್ತವೆ. ಇದಕ್ಕೆ ದೈವವು ಕಾರಣ.

ತಯೋರೇಕತರೇ ಮಾರ್ಗೇ ಯದ್ಯೇನಮಭಿಸಂನಯೇತ್ ।
ನ ಸುಖಂ ಪ್ರಾಪ್ಯ ಸಂಹೃಷ್ಯೇನ್ನ ದುಃಖಂ ಪ್ರಾಪ್ಯ ಸಂಜ್ವರೇತ್ ॥ ೫ ॥

ಈ ಸುಖ-ದುಃಖಗಳ ಮಾರ್ಗಗಳನ್ನು ಅರ್ಥೈಸಿಕೊಂಡಾಗ ಸುಖದಿಂದ ಸಂತೋಷವು, ದುಃಖದಿಂದ ವ್ಯಸನವು ಉಂಟಾಗುವುದಿಲ್ಲ.

ನ ವೈ ಚರಸಿ ಯಚ್ಛ್ರೇಯ ಆತ್ಮನೋ ವಾ ಯದೀಹಸೇ ।
ಅಕಾಮಾತ್ಮಾಪಿ ಹಿ ಸದಾ ಧುರಮುದ್ಯಮ್ಯ ಚೈವ ಹಿ ॥ ೬ ॥

ಮನುಷ್ಯನು ಒಂದು ದೊಡ್ಡ ಮೋಹದ ಭಾರವನ್ನು ಹೊತ್ತುಕೊಂಡು ಯಾವಾಗಲೂ ಸಂಚರಿಸುತ್ತಾನೆ. ಮನಸ್ಸಿನಲ್ಲಿ ಕಾಮವಿಲ್ಲದಿದ್ದರೂ ಈ ಮೋಹದ ಬಾಧೆಯು ಬಾಧಿಸುತ್ತದೆ. ಶ್ರೇಯಸ್ಸಿನ ದಾರಿಯನ್ನು ಹುಡುಕುವುದಿದ್ದಲ್ಲಿ ನಿನ್ನ ಮನಸ್ಸನ್ನು ನಿಯಮಿಸಬಾರದೇಕೆ?

ಅಕಿಂಚನಃ ಪರಿಪತನ್ ಸುಖಮಾಸ್ವಾದಯಿಷ್ಯಸಿ ।
ಅಕಿಂಚನಃ ಸುಖಂ ಶೇತೇ ಸಮುತ್ತಿಷ್ಠತಿ ಚೈವ ಹಿ ॥ ೭ ॥

ದರಿದ್ರನು ಯಾವುದೇ ಚಿಂತೆಗಳಿಲ್ಲದೆ ಸುಖವಾಗಿ ನಿದ್ರಿಸುತ್ತಾನೆ. ಸಿಕ್ಕಿದ್ದನ್ನು ಸುಖದಿಂದ ಆಸ್ವಾದಿಸುತ್ತಾನೆ. ಸುಖವಾಗಿಯೇ ಎಚ್ಚರಗೊಳ್ಳುತ್ತಾನೆ.

ಅಕಿಂಚನ್ಯಂ ಸುಖಂ ಲೋಕೇ ಪಥ್ಯಂ ಶಿವಮನಾಮಯಮ್ ।
ಅನಮಿತ್ರಮಥೋ ಹ್ಯೇತದ್ದುರ್ಲಭಂ ಸುಲಭಂ ಸತಾಮ್ ॥ ೮ ॥

ಅಕಿಂಚನತ್ವವು ಲೋಕದಲ್ಲಿ ಉತ್ತಮ ಸುಖವೆನಿಸಿದೆ. ಅದೇ ಹಿತಕರವು, ಅದೇ ಮಂಗಳಕರವೂ, ಅದರಲ್ಲಿ ಯಾವ ಆಧಿ-ವ್ಯಾಧಿಗಳಿಗೆ ಅವಕಾಶವಿರುವುದಿಲ್ಲ. ಶತ್ರುರಹಿತವಾದ ಈ ಸುಲಭಮಾರ್ಗವು ಸುದುರ್ಲಭವು. ನಿಷ್ಕಾಮಿಗಳಿಗೆ ಮಾತ್ರ ಇದು ಸುಲಭವು.

ಅಕಿಂಚನಸ್ಯ ಶುದ್ಧಸ್ಯ ಉಪಪನ್ನಸ್ಯ ಸರ್ವಶಃ ।
ಅವೇಕ್ಷಮಾಣಸ್ತ್ರೀಂಲ್ಲೋಕಾನ್ನ ತುಲ್ಯಮುಪಲಕ್ಷಯೇ ॥ ೯ ॥

ನಾನು ಅಂತಹ ಅಕಿಂಚನನೂ, ಶುದ್ಧನೂ, ವಿಷಯಸುಖಗಳನ್ನು ಪರಿತ್ಯಾಗ ಮಾಡಿದವನು ಆದ ಮನುಷ್ಯನಿಗೆ ಸಮಾನವಾದ ಸುಖಿಗಳನ್ನು ಇಲ್ಲಿಯವರೆಗೆ ಮೂರು ಲೋಕದಲ್ಲೂ ನೋಡಲಿಲ್ಲ.

ಅಕಿಂಚನ್ಯಂ ಚ ರಾಜ್ಯಂ ಚ ತುಲಯಾ ಸಮತೋಲಯಮ್ ।
ಅತ್ಯರಿಚ್ಯತ ದಾರಿದ್ರ್ಯಂ ರಾಜ್ಯಾದಪಿ ಗುಣಾಧಿಕಮ್ ॥ ೧೦ ॥

ನಾನು ತಕ್ಕಡಿಯಲ್ಲಿ ಒಂದುಕಡೆ ಅಕಿಂಚನತ್ವವನ್ನು ಮತ್ತೊಂದು ಕಡೆ ರಾಜ್ಯವನ್ನು ತೂಗಿ ನೋಡಿದೆನು. ರಾಜ್ಯಕ್ಕಿಂತಲೂ ಅಕಿಂಚನತ್ವದ ಭಾಗವೇ ಅನೇಕ ವಿಧದಲ್ಲಿ ಉನ್ನತವಾಗಿ ವಿಶೇಷ ಗುಣಯುಕ್ತವಾಗಿದೆ ಎಂದು ಬೌದ್ಧಿಕವಾಗಿ ತೂಗಿ ನೋಡಿದಾಗ ನನಗೆ ತಿಳಿಯಿತು.

ಅಕಿಂಚನ್ಯೇ ಚ ರಾಜ್ಯೇ ಚ ವಿಶೇಷಃ ಸುಮಹಾನಯಮ್ ।
ನಿತ್ಯೋದ್ವಿಗ್ನೋ ಹಿ ಧನವಾನ್ ಮೃತ್ಯೋರಾಸ್ಯಗತೋ ಯಥಾ ॥ ೧೧ ॥

ಅಕಿಂಚನತ್ವಕ್ಕೂ ರಾಜ್ಯದ ವೈಭವಕ್ಕೂ ನಡುವೆ ದೊಡ್ಡ ಅಂತರವಿದೆ. ಮಹತ್ತಾದ ತಾರತಮ್ಯವಿದೆ. ಧನವಂತನಾದ ರಾಜನು ಮೃತ್ಯುವಿನ ಹಲ್ಲುಗಳ ನಡುವೆ ಸಿಕ್ಕಿದಂತೆ ಯಾವಾಗಲೂ ಭಯದಿಂದ ದುಃಖದಿಂದ ಉದ್ವಿಗ್ನನಾಗಿರುತ್ತಾನೆ.

ನೈವಾಸ್ಯಾಗ್ನಿರ್ನ ಚಾದಿತ್ಯೋ ನ ಮೃತ್ಯುರ್ನ ಚ ದಸ್ಯವಃ ।
ಪ್ರಭವಂತಿ ಧನಜ್ಯಾನಿರ್ಮುಕ್ತಸ್ಯ ನಿರಾಶಿಷಃ ॥ ೧೨ ॥

ಅಕಿಂಚನನಿಗೆ ಯಾವ ಭಯವೂ ಇರುವುದಿಲ್ಲ. ಅಗ್ನಿಭಯ, ಶತ್ರುಭಯ, ಚೋರಭಯ, ಮರಣಭಯ ಎಲ್ಲವನ್ನೂ ಮೀರಿ ನಿಲ್ಲುತ್ತಾನೆ. ಅವನನ್ನು ಯಾರೂ ಏನೂ ಮಾಡಲಾರರು.

ತಂ ವೈ ಸದಾ ಕಾಮಚರಮನುಪಸ್ತೀರ್ಣಶಾಯಿನಮ್ ।
ಬಾಹೂಪಧಾನಂ ಶಾಮ್ಯಂತಂ ಪ್ರಶಂಸಂತಿ ದಿವೌಕಸಃ ॥ ೧೩ ॥

ಅವನು ಇಷ್ಟಬಂದಂತೆ ಸಂಚರಿಸಬಲ್ಲನು. ನೆಲದ ಮೇಲೆ ಮಲಗುವನು. ಅವನಿಗೆ ನೆಲವೇ ಹಾಸಿಗೆ, ತೋಳೇ ತಲೆದಿಂಬು, ನೆಮ್ಮದಿಯ ನಿದ್ರೆ. ಅಂತಹ ಪುರುಷನನ್ನು ದೇವತೆಗಳು ಕೊಂಡಾಡುತ್ತಾರೆ.

ಧನವಾನ್ ಕ್ರೋಧಲೋಭಾಭ್ಯಾಮಾವಿಷ್ಟೋ ನಷ್ಟಚೇತನಃ ।
ತಿರ್ಯಗೀಕ್ಷಃ ಶುಷ್ಕಮುಖಃ ಪಾಪಕೋ ಭ್ರುಕುಟೀಮುಖಃ ॥ ೧೪ ॥

ಧನವಂತನಿಗಾದರೂ ಕ್ರೋಧ-ಲೋಭಗಳು ಅವನ ಮನಸ್ಸನ್ನು ಯಾವಾಗಲೂ ಚಂಚಲದಲ್ಲಿಟ್ಟಿರುತ್ತವೆ. ಬುದ್ಧಿಯು ಸ್ಥಿಮಿತವಾಗಿರುವುದಿಲ್ಲ, ವಕ್ರದೃಷ್ಟಿ ಉಳ್ಳವನಾಗಿರುತ್ತಾನೆ, ಮುಖವು ಕುಂದಿರುತ್ತದೆ, ಪಾಪಬುದ್ಧಿಯುಳ್ಳವನಾಗಿರುತ್ತಾನೆ, ಕೋಪದಿಂದ ಹುಬ್ಬುಗಂಟಿಕ್ಕಿರುತ್ತಾನೆ.

ನಿರ್ದಶಂಶ್ಚಾಧರೋಷ್ಠಂ ಚ ಕ್ರುದ್ಧೋ ದಾರುಣಭಾಷಿತಾ ।
ಕಸ್ತಮಿಚ್ಛೇತ್ ಪರಿದ್ರಷ್ಟುಂ ದಾತುಮಿಚ್ಛತಿ ಚೇನ್ಮಹೀಮ್ ॥ ೧೫ ॥

ತುಟಿಗಳನ್ನು ಕಚ್ಚುತ್ತಿರುತ್ತಾನೆ, ಕಟುವಾಗಿ ಮಾತನಾಡುತ್ತಾನೆ, ಭೂಮಂಡಲವನ್ನೇ ಅವನು ಕೊಡಲು ಸಿದ್ಧನಾಗಿದ್ದರೂ ಅವನನ್ನು ನೋಡಲು ಜನರಿಗೆ ಮನಸ್ಸು ಬರುವುದಿಲ್ಲ.

ಶ್ರಿಯಾ ಹ್ಯಭೀಕ್ಷ್ಣಂ ಸಂವಾಸೋ ಮೋಹಯತ್ಯವಿಚಕ್ಷಣಮ್ ।
ಸಾ ತಸ್ಯ ಚಿತ್ತಂ ಹರತಿ ಶಾರದಾಭ್ರಮಿವಾನಿಲಃ ॥ ೧೬ ॥

ಐಶ್ವರ್ಯವೆಂಬುದು ಮತಿಭ್ರಷ್ಟರನ್ನು ಬಲವಾಗಿ ಮೋಹದಲ್ಲಿ ಸಿಲುಕಿಸುತ್ತದೆ. ಶರತ್ಕಾಲದ ಮೇಘವನ್ನು ಬಿರುಗಾಳಿಯು ಹೇಗೆ ಚದುರಿಸುತ್ತದೋ ಅದರಂತೆ ಐಶ್ವರ್ಯದ ಬುದ್ಧಿಯು ಅವನ ಮನಸ್ಸನ್ನು ಸುಲಭವಾಗಿ ತೂರುತ್ತದೆ.

ಅಥೈನಂ ರೂಪಮಾನಶ್ಚ ಧನಮಾನಶ್ಚ ವಿಂದತಿ ।
ಅಭಿಜಾತೋಽಸ್ಮಿ ಸಿದ್ಧೋಽಸ್ಮಿ ನಾಸ್ಮಿ ಕೇವಲಮಾನುಷಃ ।
ಇತ್ಯೇಭಿಃ ಕಾರಣೈಸ್ತಸ್ಯ ತ್ರಿಭಿಶ್ಚಿತ್ತಂ ಪ್ರಸಿಚ್ಯತೇ ॥ ೧೭ ॥

ಧನಿಕನು ಹೆಮ್ಮೆಯಿಂದ ಹೀಗೆ ಬೀಗುತ್ತಾನೆ- ನನ್ನಂತಹ ರೂಪವಂತನಿಲ್ಲ. ನನ್ನಂತಹ ಶ್ರೀಮಂತನಿಲ್ಲ. ಕುಲದಲ್ಲಿ ನನಗಿಂತ ಮಿಗಿಲಾದವನಿಲ್ಲ. ನನ್ನ ಮನಸ್ಸಿನಲ್ಲಿ

ಇಚ್ಛಿಸುವುದೆಲ್ಲ ಕೈಗೂಡುವುದು. ನಾನು ಕೇವಲ ಮನುಷ್ಯನಾಗಿಲ್ಲ, ಸಿದ್ಧ ಪುರುಷನಾಗಿದ್ದೇನೆ. ಈ ರೀತಿಯಾದ ಅನೇಕ ಮತಿವಿಭ್ರಮದಿಂದ ರೂಪಮದ, ಧನಮದ, ಕುಲಮದಗಳೆಂಬ ಮೂರು ದೋಷಗಳಿಂದ ಅವನ ಮನಸ್ಸು ವ್ಯಗ್ರವಾಗಿರುತ್ತದೆ.

ಸ ಪ್ರಸಿಕ್ತಮನಾ ಭೋಗಾನ್ ವಿಸೃಜ್ಯ ಪಿತೃಸಂಚಿತಾನ್ ।
ಪರಿಕ್ಷೀಣಃ ಪರಸ್ವಾನಾಮಾದಾನಂ ಸಾಧು ಮನ್ಯತೇ ॥ ೧೮ ॥

ಅವನಿಗೆ ವಿಷಯಸುಖದಲ್ಲಿ ಪುನಃ ಪುನಃ ಬುದ್ಧಿಯು ಪ್ರವೃತ್ತಿಯನ್ನು ಹೊಂದಿರುತ್ತದೆ. ತನ್ನ ಹಿರಿಯರು ಸಂಪಾದಿಸಿಟ್ಟ ಹಣವೆಲ್ಲಾ ಅಕಾರ್ಯಕ್ಕೆ ವಿನಿಯೋಗವಾಗುತ್ತದೆ. ಇದ್ದ ಹಣವನ್ನು ಕಳೆದುಕೊಂಡ ಆತನು ಮತ್ತೊಬ್ಬರ ಸಂಪತ್ತನ್ನು ಅಪಹರಿಸುವುದರಲ್ಲಿ ಆಲೋಚನೆ ಮಾಡುತ್ತಾನೆ. ಅಂತಹ ಅಕಾರ್ಯದಲ್ಲಿಯೂ ಅವನಿಗೆ ದೋಷಬುದ್ಧಿಯು ತೋರುವುದಿಲ್ಲ.

ತಮತಿಕ್ರಾಂತಮರ್ಯಾದಮಾದದಾನಂ ತತಸ್ತತಃ ।
ಪ್ರತಿಷೇಧಂತಿ ರಾಜಾನೋ ಲುಬ್ಧಾ ಮೃಗಮಿವೇಷುಭಿಃ ॥ ೧೯ ॥

ಹೀಗೆ ಅತಿಕ್ರಮಿಸಿ ಮತ್ತೊಬ್ಬರ ಸ್ವತ್ತಿಗೆ ಕೈ ಇಕ್ಕುವುದರಿಂದ ರಾಜದಂಡನೆಗೆ ತುತ್ತಾಗುತ್ತಾನೆ. ಬೇಟೆಗಾರನು ಜಿಂಕೆಯನ್ನು ಹೇಗೋ ಹಾಗೆ ಅವನನ್ನು ನಿರ್ಭಯವಾಗಿ ಶಿಕ್ಷಿಸುತ್ತಾನೆ.

ಏವಮೇತಾನಿ ದುಃಖಾನಿ ತಾನಿ ತಾನೀಹ ಮಾನವಮ್ ।
ವಿವಿಧಾನ್ಯುಪವರ್ತಂತೇ ಗಾತ್ರಸಂಸ್ಪರ್ಶಜಾನಿ ಚ ॥ ೨೦ ॥

ಅಂತಹ ವ್ಯಕ್ತಿಯು ತಾನು ಮಾಡಿದ ಮಹಾಪರಾಧಗಳಿಂದ ರಾಜರಿಂದ ಅಗ್ನಿದಾಹ, ಶಿರಶ್ಛೇದ ಮೊದಲಾದ ಕಠಿಣ ದಂಡನೆಗಳಿಗೆ ಗುರಿಯಾಗುತ್ತಾನೆ.

ತೇಷಾಂ ಪರಮದುಃಖಾನಾಂ ಬುದ್ಧ್ಯಾ ಭೈಷಜ್ಯಮಾಚರೇತ್ ।
ಲೋಕಧರ್ಮಂ ಸಮಾಜ್ಞಾಯ ಧ್ರುವಾಣಾಮಧ್ರುವೈಃ ಸಹ ॥ ೨೧ ॥

ಆದ್ದರಿಂದ ಮನುಷ್ಯನು ಲೌಕಿಕಗಳಾದ ಹೆಂಡತಿ-ಮಕ್ಕಳು ಮುಂತಾದವುಗಳಲ್ಲಿ ಅತಿಯಾದ ಅಭಿಮಾನವನ್ನು ತೊರೆದು ಶರೀರವು ಅಶಾಶ್ವತವೆಂದರಿತು ಪರಮ

ದುಃಖಕ್ಕೆ ಕಾರಣವಾಗುವ ಮೋಹದ ವಿಷಯಗಳಲ್ಲಿ ಚಿಕಿತ್ಸೆಯನ್ನು ನೀಡಬೇಕು. ಸ್ಥಿರವಾದ ಜೀವನು ಅಸ್ಥಿರವಾದ ಧನಕ್ಕೆ ತುತ್ತಾಗಬಾರದೆಂಬುದನ್ನು ಸರಿಯಾಗಿ ಆಲೋಚಿಸಿ ವಿರಕ್ತನಾಗಬೇಕು.

ನಾತ್ಯಕ್ತ್ವಾ ಸುಖಮಾಪ್ನೋತಿ ನಾತ್ಯಕ್ತ್ವಾ ವಿಂದತೇ ಪರಮ್ ।
ನಾತ್ಯಕ್ತ್ವಾ ಚಾಭಯಃ ಶೇತೇ ತ್ಯಕ್ತ್ವಾ ಸರ್ವಂ ಸುಖೀ ಭವ ॥ ೨೨ ॥

ತ್ಯಾಗವಿಲ್ಲದೆ ಸುಖವನ್ನು ಹೊಂದನು. ತ್ಯಾಗದಿಂದಲ್ಲದೆ ಪರಗತಿಯನ್ನು ಹೊಂದಲು ಸಾಧ್ಯವಿಲ್ಲ. ತ್ಯಾಗವಿಲ್ಲದೆ ಸುಖನಿದ್ರೆಯೂ ಇರುವುದಿಲ್ಲ. ಸರ್ವಸಂಗ ತ್ಯಾಗವೇ ನಿಜವಾದ ಸುಖವು - ಹೀಗೆ ಹೇಳಿದನು.

ಇತ್ಯೇತದ್ಧಾಸ್ತಿನಪುರೇ ಬ್ರಾಹ್ಮಣೇನೋಪವರ್ಣಿತಮ್ ।
ಶಮ್ಯಾಕೇನ ಪುರಾ ಮಹ್ಯಂ ತಸ್ಮಾತ್ತ್ಯಾಗಃ ಪರೋ ಮತಃ ॥ ೨೩ ॥

ಯುಧಿಷ್ಠಿರನೇ, ಹಿಂದೆ ಶಮ್ಯಾಕನೆಂಬ ಬ್ರಾಹ್ಮಣನು ಹಾಡಿದ ಇದೇ ಲೋಕ ಸಿದ್ಧವಾದ ಅರ್ಥಗಳನ್ನು ಹಸ್ತಿನಾವತಿಯಲ್ಲಿ ಬ್ರಾಹ್ಮಣನೊಬ್ಬನು ನನಗೆ ತಿಳಿಸಿದನು. ಇದರಿಂದ ತ್ಯಾಗವೇ ಎಲ್ಲಕ್ಕಿಂತಲೂ ಮೇಲಾದುದು ಎಂದು ನಾನು ನಿಶ್ಚಯಿಸಿ-ಕೊಂಡಿರುತ್ತೇನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಾಲ್ಕನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನಿಗೆ ವೈರಾಗ್ಯವೇ ಸುಖಸಾಧನ ಎನ್ನುವುದನ್ನು ನಿರೂಪಿಸುವುದಕ್ಕಾಗಿ ಮಂಕಿಗೀತೆಯನ್ನು, ಭೋಗ್ಯಗೀತೆಯನ್ನು ತಿಳಿಸಿದುದು.

ಯುಧಿಷ್ಠಿರಃ

ಈಹಮಾನಃ ಸಮಾರಂಭಾನ್ ಯದಿ ನಾಸಾದಯೇದ್ಧನಮ್ ।
ಧನತೃಷ್ಣಾಭಿಭೂತಶ್ಚ ಕಿಂ ಕುರ್ವನ್ ಸುಖಮಾಪ್ನುಯಾತ್ ॥ ೧ ॥

ಯುಧಿಷ್ಠಿರ– ಪಿತಾಮಹನೇ, ಒಬ್ಬ ವ್ಯಕ್ತಿಯು ಅನೇಕ ಕಾರ್ಯಗಳನ್ನು ಹಣದ ಆಸೆಯಿಂದ ಮಾಡಿದವನಾದರೂ ತಾನು ಬಯಸಿದ ಹಣವನ್ನು ಪಡೆಯದೆ ಹೋದಾಗ, ಹಣದ ಆಸೆಯು ತೀರದಿದ್ದಾಗ ಯಾವ ಕರ್ಮವನ್ನು ಮಾಡಿ ಸುಖವನ್ನು ಹೊಂದಿಯಾನು?

ಭೀಷ್ಮಃ

ಸರ್ವಸಾಮ್ಯಮನಾಯಾಸಃ ಸತ್ಯವಾಕ್ಯಂ ಚ ಭಾರತ ।
ನಿರ್ವೇದಶ್ಚಾವಿವಿತ್ಸಾ ಚ ಯಸ್ಯ ಸ್ಯಾತ್ಸ ಸುಖೀ ನರಃ ॥ ೨ ॥

ಭೀಷ್ಮ– ಧರ್ಮರಾಜನೇ, ಮಾನ-ಅವಮಾನಗಳು, ಕಷ್ಟ-ಸುಖಗಳು ಇವುಗಳಲ್ಲಿ ಸಮಾನವಾಗಿರುವುದು, ವಿಷಯಸುಖಕ್ಕಾಗಿ ಆಯಾಸ ಪಡದಿರುವುದು, ಸತ್ಯವಾದ ಮಾತುಗಳನ್ನಾಡುವುದು, ವೈರಾಗ್ಯವನ್ನು ಹೊಂದಿರುವುದು, ಕಾರ್ಯಗಳಲ್ಲಿ ಅತ್ಯಂತ ಆಸಕ್ತಿಯನ್ನಿಡದಿರುವುದು ಈ ರೀತಿಯಾದ ಗುಣಗಳನ್ನು ಯಾವಾತನು ಹೊಂದಿರುತ್ತಾನೋ ಅವನು ಸುಖವನ್ನು ಹೊಂದುತ್ತಾನೆ.

ಏತಾನ್ಯೇವ ಪದಾನ್ಯಾಹುಃ ಪಂಚ ವೃದ್ಧಾಃ ಪ್ರಶಾಂತಯೇ ।
ಏಷ ಸ್ವರ್ಗಶ್ಚ ಧರ್ಮಶ್ಚ ಸುಖಂ ಚಾನುತ್ತಮಂ ಸತಾಮ್ ॥ ೩ ॥

ಸರ್ವಸಾಮ್ಯ , ಅನಾಯಾಸ, ಸತ್ಯವಾಕ್ಯ , ನಿರ್ವೇದ, ಅವಿವಿತ್ಸ ಎಂಬ ಈ ಐದು ಪದಗಳನ್ನೇ ಮನಸ್ಸಿನ ಶಾಂತಿಗಾಗಿ ವೃದ್ಧರು ಹಿಂದೆ ಬೋಧಿಸಿರುತ್ತಾರೆ. ಈ ಐದು ಗುಣಗಳನ್ನು ಹೊಂದುವುದೇ ಸ್ವರ್ಗವನ್ನು ಹೊಂದಿದಂತೆ. ಸಾಟಿಯಿಲ್ಲದ ಸುಖ ಧರ್ಮಗಳಿಗೆ ಈ ಗುಣಗಳೇ ಸಜ್ಜನರಿಗೆ ಆಶ್ರಯವಾಗಿವೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ನಿರ್ವೇದಾನ್ಮಂಕಿನಾ ಗೀತಂ ತನ್ನಿಬೋಧ ಯುಧಿಷ್ಠಿರ ॥ ೪ ॥

ಇದೇ ವಿಷಯದಲ್ಲಿ ಮಂಕಿ ಎಂಬ ಬ್ರಾಹ್ಮಣನು ಒಂದು ಬಾರಿ ಆಶಾಭಂಗವನ್ನು ಹೊಂದಿ ನಿರ್ವೇದದಿಂದ ಹಾಡಿದ ಕೆಲವು ಗೀತೆಗಳಿವೆ. ಆ ಇತಿಹಾಸವನ್ನು ನಮ್ಮ ಹಿರಿಯರು ಏನು ತಿಳಿಸಿದ್ದಾರೋ ಅದನ್ನೇ ನಿನಗೆ ತಿಳಿಸುತ್ತೇನೆ.

ಈಹಮಾನೋ ಧನಂ ಮಂಕಿರ್ಭಗ್ನೇಹಶ್ಚ ಪುನಃ ಪುನಃ ।
ಕೇನಚಿದ್ಧನಶೇಷೇಣ ಕ್ರೀತವಾನ್ ದಮ್ಯಗೋಯುಗಮ್ ॥ ೫ ॥

ಹಿಂದೆ ಮಂಕಿ ಎಂಬ ಬ್ರಾಹ್ಮಣನು ಧನಸಂಪಾದನೆಗಾಗಿ ಪುನಃ ಪುನಃ ಅನೇಕ ವಿಧವಾದ ಪ್ರಯತ್ನಗಳನ್ನು ಮಾಡಿದನು. ಆದರೆ ಅವನ ಉದ್ದೇಶವು ಫಲಿಸುತ್ತಿರಲಿಲ್ಲ. ಆಶಾಭಂಗವನ್ನು ಹೊಂದುತ್ತಿದ್ದನು. ಒಮ್ಮೆ ಅವನು ತನ್ನಲ್ಲಿದ್ದ ಸ್ವಲ್ಪ ಹಣವನ್ನು ವಿನಿಯೋಗಿಸಿ ಆ ಹಣದಿಂದ ಎರಡು ತನ್ನ ನಿಯಂತ್ರಣಕ್ಕೆ ಒಳಪಡುವ ಹೋರಿಗಳನ್ನು ಕೊಂಡುಕೊಂಡನು.

ಸುಸಂಬದ್ಧೌ ತು ತೌ ದಮ್ಯೌ ದಮನಾಯಾಭಿನಿಃಸೃತೌ ।
ಆಸೀನಮುಷ್ಟ್ರಂ ಮಧ್ಯೇನ ಸಹಸೈವಾಭ್ಯಧಾವತಾಮ್ ॥ ೬ ॥

ಆ ಹೊಸ ಹೋರಿಗಳಿಗೆ ಅಭ್ಯಾಸ ಮಾಡಿಸುವುದಕ್ಕಾಗಿ ಅವುಗಳಿಗೆ ನೊಗವನ್ನು ಹೇರಿ ತೆಕ್ಕೆಹಾಕಿ ಕಂಠದೇಶವನ್ನು ಹಗ್ಗದಿಂದ ಕಟ್ಟಿ ಎಳೆಯಿಸಿಕೊಂಡು ಹೋಗುತ್ತಿದ್ದನು. ಇವೆರಡು ಹೋಗುತ್ತಿರುವಾಗ ನಡುದಾರಿಯಲ್ಲಿ ಒಂದು ಒಂಟೆಯು ಮಲಗಿತ್ತು. ಆ ಮಲಗಿದ ಒಂಟೆಯ ನಡುವೆಯೇ ಎರಡು ಹೋರಿಗಳು ಹೆದರಿ ಕೂಡಲೇ ಒಂಟೆಯ ಅಚೆ-ಈಚೆ ಓಡಿದವು.

ತಯೋಃ ಸಂಪ್ರಾಪ್ತಯೋರುಷ್ಟ್ರಃ ಸ್ಕಂಧದೇಶಮಮರ್ಷಣಃ ।
ಉತ್ಥಾಯೋತ್ಕ್ಷಿಪ್ಯ ತೌ ದಮ್ಯೌ ಪ್ರಸಸಾರ ಮಹಾಜವಃ ॥ ೭ ॥

ಹೀಗೆ ಹೋರಿಗಳು ಭಯದಿಂದ ಓಡಿ ಬರುವಾಗ ಅವುಗಳ ಮೇಲೆ ಏರಿಸಿದ್ದ ನೊಗವು ಒಂಟೆಯ ಕತ್ತಿಗೆ ತಾಗಿತು. ಮಲಗಿದ್ದ ಒಂಟೆಯು ಬೆದರಿ ಮೇಲಕ್ಕೆ ಎದ್ದು ಓಡಲಾರಂಭಿಸಿತು. ಆ ಹೋರಿಗಳೆರಡು ತನ್ನ ಬೆನ್ನ ಮೇಲೆ ನೇತಾಡುತ್ತಿರುವ ಹಾಗೆಯೇ ಆ ದೊಡ್ಡ ಒಂಟೆಯು ಭಯದಿಂದ ರೋಷದಿಂದ ಅತೀ ವೇಗದಿಂದ ಓಡಲಾರಂಭಿಸಿತು.

ಹ್ರಿಯಮಾಣೌ ತು ತೌ ದಮ್ಯೌ ತೇನೋಷ್ಟ್ರೇಣ ಪ್ರಮಾಥಿನಾ ।
ಮ್ರಿಯಮಾಣೌ ಚ ಸಂಪ್ರೇಕ್ಷ್ಯ ಮಂಕಿಸ್ತತ್ರಾಬ್ರವೀದಿದಮ್ ॥ ೮ ॥

ಮಂಕಿಯು ತನ್ನ ಎರಡು ಹೋರಿಗಳು ಒಂಟೆಯ ಕುತ್ತಿಗೆಗೆ ನೇತುಬಿದ್ದು ಧಾವಿಸುತ್ತಿರುವಾಗ ಅವುಗಳನ್ನು ನಿಯಂತ್ರಿಸಲು ಸಾಧ್ಯವಾಗದೆ ಆ ಎರಡು ಹೋರಿಗಳನ್ನು ಕಳೆದುಕೊಂಡನು. ತನ್ನ ವೈರಾಗ್ಯಕ್ಕೆ ಈ ಪ್ರಸಂಗವೇ ಕಾರಣವಾಯಿತು. ಆ ಪ್ರಸಂಗದಲ್ಲಿ ಮಂಕಿಯು ಹೀಗೆ ನುಡಿದನು.

ನ ಚೈವಾವಿಹಿತಂ ಶಕ್ಯಂ ದಕ್ಷೇಣಾಪೀಹಿತುಂ ಧನಮ್ ।
ಯುಕ್ತೇನ ಶ್ರದ್ಧಯಾ ಸಮ್ಯಗೀಹಾಂ ಸಮನುತಿಷ್ಠತಾ ॥ ೯ ॥

ದೈವವು ವಿಧಿಸದೇ ಇರುವ ಧನವನ್ನು ಪಡೆಯಲು ಯಾರಿಂದಲೂ ಎಂದಿಗೂ ಸಾಧ್ಯವಿಲ್ಲ. ಎಷ್ಟೇ ಶ್ರಮಪಟ್ಟರೂ, ಎಷ್ಟೇ ಆಸೆಪಟ್ಟರೂ ಅದು ದಕ್ಕುವುದಿಲ್ಲ. ಶ್ರದ್ಧೆಯಿಂದ, ಎಷ್ಟೇ ಉಪಾಯದಿಂದ ಕೆಲಸ ಮಾಡಿದರೂ ನಮಗೆ ಲಭ್ಯವಲ್ಲದ್ದನ್ನು ಪಡೆಯಲು ಸಮರ್ಥರಿಂದಲೂ ಸಾಧ್ಯವಾಗದು.

ಕೃತಸ್ಯ ಪೂರ್ವಂ ಚಾನರ್ಥೈರ್ಯುಕ್ತಸ್ಯಾಪ್ಯನುತಿಷ್ಠತಃ ।
ಇಮಂ ಪಶ್ಯತ ಸಂಗತ್ಯಾ ಮಮ ದೈವಮುಪಪ್ಲವಮ್ ॥ ೧೦ ॥

ಹಿಂದೆ ನಾನು ಅನೇಕ ಉಪಾಯಗಳನ್ನು ಮಾಡಿರುತ್ತೇನೆ. ಅನೇಕ ರೀತಿಯಲ್ಲಿ ಶ್ರಮವನ್ನು ಪಟ್ಟಿರುತ್ತೇನೆ. ಯಾವುದನ್ನೂ ನನ್ನಿಂದ ಪಡೆಯಲಾಗಲಿಲ್ಲ. ಕೊನೆಯದ್ದಾದ ಈ ಪ್ರಯತ್ನವು ದೈವದಿಂದ ಹತವಾಯಿತು. ಒಂಟೆಯ ಪಲಾಯನದಿಂದ ಹೋರಿಗಳನ್ನು ಕಳೆದುಕೊಂಡಿರುವ ನನ್ನ ದುರವಸ್ಥೆಯನ್ನು ನೀವೇ ನೋಡಿರಿ.

ಉದ್ಯಮ್ಯೋದ್ಯಮ್ಯ ಮೇ ದಮ್ಯೌ ವಿಷಮೇಣೈವ ಗಚ್ಛತಿ ।
ಅತಿಷ್ಠತ್ ಕಾಕತಾಲೀಯಮುನ್ಮಾಥೇನೇವ ಜಂಬುಕಮ್ ॥ ೧೧ ॥

ನನ್ನ ಹೋರಿಗಳೆರಡು ಹಾರುತ್ತಾ, ಬೀಳುತ್ತಾ ಒಂಟೆಯಿಂದ ಸೆಳೆಯಲ್ಪಡುತ್ತಿರುವುವಲ್ಲ. ಅಯ್ಯೋ! ನನ್ನ ಎರಡು ಹೋರಿಗಳು ವಿಷಮ ಮಾರ್ಗದಲ್ಲಿಯೇ ನನ್ನ ನಿಯಂತ್ರಣವನ್ನು ತಪ್ಪಿಸಿಕೊಂಡು ಹೋಗುತ್ತಿವೆ. ಕಾಡಿನಲ್ಲಿ ಯಂತ್ರದ ಬಲೆಯನ್ನು ಕಟ್ಟಿದಾಗ ಆಹಾರಕ್ಕೋಸ್ಕರ ಸಂಚರಿಸುತ್ತಿರುವ ಜಾಣಪ್ರಾಣಿ ಎನಿಸಿದ ಗುಳ್ಳೆನರಿಯು ಅಕಸ್ಮಾತ್ತಾಗಿ ಆ ಜಾಲದಲ್ಲಿ ಸಿಲುಕಿ ದುಃಖಪಡುವಂತೆ ಈ ಎರಡು ನನ್ನ ಹೋರಿಗಳನ್ನು ಪಳಗಿಸುವ ಪ್ರಸಂಗದಲ್ಲಿಯೇ ದಾರಿನಡುವೆ ಮಲಗಿದ ಒಂಟೆಗೆ ಸಿಲುಕಿ ಅಕಸ್ಮಾತ್ತಾಗಿ ಈ ದುಃಖವನ್ನು ಅನುಭವಿಸುತ್ತಿದ್ದೇನೆ.

ಮಣೀವೋಷ್ಟ್ರಸ್ಯ ಲಂಬೇತೇ ಪ್ರಿಯೌ ವತ್ಸತರೌ ಮಮ ।
ಶುದ್ಧಂ ಹಿ ದೈವಮೇವೇದಮತೋ ನೈವಾಸ್ತಿ ಪೌರುಷಮ್ ॥ ೧೨ ॥

ಆ ನನ್ನ ಮುದ್ದು ಹೋರಿಗಳೆರಡು ಒಂಟೆಯ ಕತ್ತಿಗೆ ಕಟ್ಟಿದ ಎರಡು ಮಣಿಗಳಂತೆ ಜೋಲಾಡುತ್ತಿವೆ. ಮುಖ್ಯವಾಗಿ ದೈವವೇ ಪ್ರಬಲವೆನಿಸಿದೆ. ಎಷ್ಟೇ ಹಠದಿಂದಲಾದರೂ ಪುರುಷಪ್ರಯತ್ನವು ಫಲಿಸದು.

ಯದಿ ವಾಪ್ಯುಪಪದ್ಯೇತ ಪೌರುಷಂ ನಾಮ ಕರ್ಹಿಚಿತ್ ।
ಅನಿಷ್ಟ್ವಮಾಣಂ ತದಪಿ ದೈವಮೇವಾವತಿಷ್ಠತೇ ॥ ೧೩ ॥

ಕೆಲವೊಮ್ಮೆ ಪೌರುಷವು ಫಲಸಾಧನವೆಂದು ಕಂಡುಬಂದರೂ ಅದು ದೈವದ ಅಧೀನವಾಗಿಯೇ ಇರುತ್ತದೆ.

ತಸ್ಮಾನ್ನಿರ್ವೇದ ಏವೇಹ ಗಂತವ್ಯಃ ಸುಖಮೀಪ್ಸತಾ ।
ಸುಖಂ ಸ್ವಪಿತಿ ನಿರ್ವಿಣ್ಣೋ ನಿರಾಶಶ್ಚಾರ್ಥಸಾಧನೇ ॥ ೧೪ ॥

ಆದ್ದರಿಂದ ಸುಖವನ್ನು ಪಡೆಯಬೇಕೆಂಬ ಮನುಷ್ಯನು ಲೋಕದಲ್ಲಿ ವೈರಾಗ್ಯ ಮಾರ್ಗವನ್ನೇ ಆಶ್ರಯಿಸಬೇಕು. ಧನಸಂಗ್ರಹದ ಆಸೆಯನ್ನು ತೊರೆದು ವಿರಕ್ತನಾಗಿರುವ ವ್ಯಕ್ತಿಯು ಯಾವುದೇ ಚಿಂತೆ ಇಲ್ಲದೆ ಸುಖವಾಗಿ ನಿದ್ರಿಸುತ್ತಾನೆ.

ಅಹೋ ಸಮ್ಯಕ್ ಶುಕೇನೋಕ್ತಂ ಸರ್ವತಃ ಪರಿಮುಚ್ಯತಾ ।
ಪ್ರತಿಷ್ಠತಾ ಮಹಾರಣ್ಯಂ ಜನಕಸ್ಯ ನಿವೇಶನಾತ್ ॥ ೧೫ ॥

ಅಹೋ ! ಶುಕಮುನಿಯು ತಾನು ತಂದೆಯ ಮನೆಯನ್ನು ತೊರೆದು ಸರ್ವಸಂಗವನ್ನು ತ್ಯಾಗಮಾಡಿ ಮಹಾರಣ್ಯಕ್ಕೆ ಹೋಗುವುದೇ ಶ್ರೇಯಸ್ಸಾಧನವೆಂದು ತೋರಿಸಿಕೊಟ್ಟಿದ್ದಾನೆ.

ಯಃ ಕಾಮಾನ್ ಪ್ರಾಪ್ನುಯಾತ್ ಸರ್ವಾನ್ ಯಶ್ಚೈನಾನ್ ಕೇವಲಾಂಸ್ತ್ಯಜೇತ್।
ಪ್ರಾಪಣಾತ್ ಸರ್ವಕಾಮಾನಾಂ ಪರಿತ್ಯಾಗೋ ವಿಶಿಷ್ಯತೇ ॥ ೧೬ ॥

ಅರಣ್ಯಕ್ಕೆ ಸಾಗುವ ಶುಕಮುನಿಯ ಅಭಿಪ್ರಾಯ ಇಂತಿದೆ: ಯಾವ ವ್ಯಕ್ತಿಯು ಸಮಸ್ತ ಕಾಮನೆಗಳನ್ನು ಅನುಭವಿಸಬೇಕು ಎಂದುಕೊಳ್ಳುತ್ತಾನೋ, ಯಾವ ವ್ಯಕ್ತಿಯು

ಮಂಕಿಯು ತನ್ನ ಎರಡು ಹೋರಿಗಳು ಒಂಟೆಯ ಕುತ್ತಿಗೆಗೆ ನೇತುಬಿದ್ದು ಧಾವಿಸುತ್ತಿರುವಾಗ ಅವುಗಳನ್ನು ನಿಯಂತ್ರಿಸಲು ಸಾಧ್ಯವಾಗದೆ ಆ ಎರಡು ಹೋರಿಗಳನ್ನು ಕಳೆದುಕೊಂಡನು. ತನ್ನ ವೈರಾಗ್ಯಕ್ಕೆ ಈ ಪ್ರಸಂಗವೇ ಕಾರಣವಾಯಿತು. ಆ ಪ್ರಸಂಗದಲ್ಲಿ ಮಂಕಿಯು ಹೀಗೆ ನುಡಿದನು.

ನ ಚೈವಾವಿಹಿತಂ ಶಕ್ಯಂ ದಕ್ಷೇಣಾಪೀಹಿತುಂ ಧನಮ್ ।
ಯುಕ್ತೇನ ಶ್ರದ್ಧಯಾ ಸಮ್ಯಗೀಹಾಂ ಸಮನುತಿಷ್ಠತಾ ॥ ೯ ॥

ದೈವವು ವಿಧಿಸದೇ ಇರುವ ಧನವನ್ನು ಪಡೆಯಲು ಯಾರಿಂದಲೂ ಎಂದಿಗೂ ಸಾಧ್ಯವಿಲ್ಲ. ಎಷ್ಟೇ ಶ್ರಮಪಟ್ಟರೂ, ಎಷ್ಟೇ ಆಸೆಪಟ್ಟರೂ ಅದು ದಕ್ಕುವುದಿಲ್ಲ. ಶ್ರದ್ಧೆಯಿಂದ, ಎಷ್ಟೇ ಉಪಾಯದಿಂದ ಕೆಲಸ ಮಾಡಿದರೂ ನಮಗೆ ಲಭ್ಯವಲ್ಲದ್ದನ್ನು ಪಡೆಯಲು ಸಮರ್ಥರಿಂದಲೂ ಸಾಧ್ಯವಾಗದು.

ಕೃತಸ್ಯ ಪೂರ್ವಂ ಚಾನರ್ಥೈರ್ಯುಕ್ತಸ್ಯಾಪ್ಯನುತಿಷ್ಠತಃ ।
ಇಮಂ ಪಶ್ಯತ ಸಂಗತ್ಯಾ ಮಮ ದೈವಮುಪಪ್ಲವಮ್ ॥ ೧೦ ॥

ಹಿಂದೆ ನಾನು ಅನೇಕ ಉಪಾಯಗಳನ್ನು ಮಾಡಿರುತ್ತೇನೆ. ಅನೇಕ ರೀತಿಯಲ್ಲಿ ಶ್ರಮವನ್ನು ಪಟ್ಟಿರುತ್ತೇನೆ. ಯಾವುದನ್ನೂ ನನ್ನಿಂದ ಪಡೆಯಲಾಗಲಿಲ್ಲ. ಕೊನೆಯದ್ದಾದ ಈ ಪ್ರಯತ್ನವು ದೈವದಿಂದ ಹತವಾಯಿತು. ಒಂಟೆಯ ಪಲಾಯನದಿಂದ ಹೋರಿಗಳನ್ನು ಕಳೆದುಕೊಂಡಿರುವ ನನ್ನ ದುರವಸ್ಥೆಯನ್ನು ನೀವೇ ನೋಡಿರಿ.

ಉದ್ಯಮ್ಯೋದ್ಯಮ್ಯ ಮೇ ದಮ್ಯೌ ವಿಷಮೇಣೈವ ಗಚ್ಛತಿ ।
ಅತಿಷ್ಠತ್ ಕಾಕತಾಲೀಯಮುನ್ಮಾಥೇನೇವ ಜಂಬುಕಮ್ ॥ ೧೧ ॥

ನನ್ನ ಹೋರಿಗಳೆರಡು ಹಾರುತ್ತಾ, ಬೀಳುತ್ತಾ ಒಂಟೆಯಿಂದ ಸೆಳೆಯಲ್ಪಡುತ್ತಿರುವುವಲ್ಲ. ಅಯ್ಯೋ! ನನ್ನ ಎರಡು ಹೋರಿಗಳು ವಿಷಮ ಮಾರ್ಗದಲ್ಲಿಯೇ ನನ್ನ ನಿಯಂತ್ರಣವನ್ನು ತಪ್ಪಿಸಿಕೊಂಡು ಹೋಗುತ್ತಿವೆ. ಕಾಡಿನಲ್ಲಿ ಯಂತ್ರದ ಬಲೆಯನ್ನು ಕಟ್ಟಿದಾಗ ಆಹಾರಕ್ಕೋಸ್ಕರ ಸಂಚರಿಸುತ್ತಿರುವ ಜಾಣಪ್ರಾಣಿ ಎನಿಸಿದ ಗುಳ್ಳೆನರಿಯು ಅಕಸ್ಮಾತ್ತಾಗಿ ಆ ಜಾಲದಲ್ಲಿ ಸಿಲುಕಿ ದುಃಖಪಡುವಂತೆ ಈ ಎರಡು ನನ್ನ ಹೋರಿಗಳನ್ನು ಪಳಗಿಸುವ ಪ್ರಸಂಗದಲ್ಲಿಯೇ ದಾರಿನಡುವೆ ಮಲಗಿದ ಒಂಟೆಗೆ ಸಿಲುಕಿ ಅಕಸ್ಮಾತ್ತಾಗಿ ಈ ದುಃಖವನ್ನು ಅನುಭವಿಸುತ್ತಿದ್ದೇನೆ.

ಮಣೀವೋಷ್ಟ್ರಸ್ಯ ಲಂಬೇತೇ ಪ್ರಿಯೌ ವತ್ಸತರೌ ಮಮ ।
ಶುದ್ಧಂ ಹಿ ದೈವಮೇವೇದಮತೋ ನೈವಾಸ್ತಿ ಪೌರುಷಮ್ ॥ ೧೨ ॥

ಆ ನನ್ನ ಮುದ್ದು ಹೋರಿಗಳೆರಡು ಒಂಟೆಯ ಕತ್ತಿಗೆ ಕಟ್ಟಿದ ಎರಡು ಮಣಿಗಳಂತೆ ಜೋಲಾಡುತ್ತಿವೆ. ಮುಖ್ಯವಾಗಿ ದೈವವೇ ಪ್ರಬಲವೆನಿಸಿದೆ. ಎಷ್ಟೇ ಹಠದಿಂದಲಾದರೂ ಪುರುಷಪ್ರಯತ್ನವು ಫಲಿಸದು.

ಯದಿ ವಾಪ್ಯುಪಪದ್ಯೇತ ಪೌರುಷಂ ನಾಮ ಕರ್ಹಿಚಿತ್ ।
ಅನಿಷ್ಟ್ವಮಾಣಂ ತದಪಿ ದೈವಮೇವಾವತಿಷ್ಠತೇ ॥ ೧೩ ॥

ಕೆಲವೊಮ್ಮೆ ಪೌರುಷವು ಫಲಸಾಧನವೆಂದು ಕಂಡುಬಂದರೂ ಅದು ದೈವದ ಅಧೀನವಾಗಿಯೇ ಇರುತ್ತದೆ.

ತಸ್ಮಾನ್ನಿರ್ವೇದ ಏವೇಹ ಗಂತವ್ಯಃ ಸುಖಮೀಪ್ಸತಾ ।
ಸುಖಂ ಸ್ವಪಿತಿ ನಿರ್ವಿಣ್ಣೋ ನಿರಾಶಶ್ಚಾರ್ಥಸಾಧನೇ ॥ ೧೪ ॥

ಆದ್ದರಿಂದ ಸುಖವನ್ನು ಪಡೆಯಬೇಕೆಂಬ ಮನುಷ್ಯನು ಲೋಕದಲ್ಲಿ ವೈರಾಗ್ಯ ಮಾರ್ಗವನ್ನೇ ಆಶ್ರಯಿಸಬೇಕು. ಧನಸಂಗ್ರಹದ ಆಸೆಯನ್ನು ತೊರೆದು ವಿರಕ್ತನಾಗಿರುವ ವ್ಯಕ್ತಿಯು ಯಾವುದೇ ಚಿಂತೆ ಇಲ್ಲದೆ ಸುಖವಾಗಿ ನಿದ್ರಿಸುತ್ತಾನೆ.

ಅಹೋ ಸಮ್ಯಕ್ ಶುಕೇನೋಕ್ತಂ ಸರ್ವತಃ ಪರಿಮುಚ್ಯತಾ ।
ಪ್ರತಿಷ್ಠತಾ ಮಹಾರಣ್ಯಂ ಜನಕಸ್ಯ ನಿವೇಶನಾತ್ ॥ ೧೫ ॥

ಅಹೋ ! ಶುಕಮುನಿಯು ತಾನು ತಂದೆಯ ಮನೆಯನ್ನು ತೊರೆದು ಸರ್ವಸಂಗವನ್ನು ತ್ಯಾಗಮಾಡಿ ಮಹಾರಣ್ಯಕ್ಕೆ ಹೋಗುವುದೇ ಶ್ರೇಯಸ್ಸಾಧನವೆಂದು ತೋರಿಸಿಕೊಟ್ಟಿದ್ದಾನೆ.

ಯಃ ಕಾಮಾನ್ ಪ್ರಾಪ್ನುಯಾತ್ ಸರ್ವಾನ್ ಯಶ್ಚೈನಾನ್ ಕೇವಲಾಂಸ್ತ್ಯಜೇತ್।
ಪ್ರಾಪಣಾತ್ ಸರ್ವಕಾಮಾನಾಂ ಪರಿತ್ಯಾಗೋ ವಿಶಿಷ್ಯತೇ ॥ ೧೬ ॥

ಅರಣ್ಯಕ್ಕೆ ಸಾಗುವ ಶುಕಮುನಿಯ ಅಭಿಪ್ರಾಯ ಇಂತಿದೆ: ಯಾವ ವ್ಯಕ್ತಿಯು ಸಮಸ್ತ ಕಾಮನೆಗಳನ್ನು ಅನುಭವಿಸಬೇಕು ಎಂದುಕೊಳ್ಳುತ್ತಾನೋ, ಯಾವ ವ್ಯಕ್ತಿಯು

ಸಮಸ್ತ ಕಾಮನೆಗಳನ್ನು ತೊರೆಯಬೇಕು ಎಂದುಕೊಳ್ಳುತ್ತಾನೋ ಇವರಿಬ್ಬರಲ್ಲಿ ಸಮಸ್ತ ಕಾಮನೆಗಳನ್ನು ಪಡೆದವನಿಗಿಂತಲೂ ಸಮಸ್ತ ಕಾಮನೆಗಳನ್ನು ತೊರೆದವನೇ ಶ್ರೇಷ್ಠನೆನಿಸುತ್ತಾನೆ.

ನಾಂತಂ ಸರ್ವವಿವಿತ್ಸಾನಾಂ ಗತಪೂರ್ವೋಽಸ್ತಿ ಕಶ್ಚನ ।
ಶರೀರೇ ಜೀವಿತೇ ಚೈವ ತೃಷ್ಣಾ ಮಂದಸ್ಯ ವರ್ಧತೇ ॥ ೧೭ ॥

ಅವನ ಮಾತು ಬಹಳ ಸಮಂಜಸವು. ಲೋಕದಲ್ಲಿ ಯಾವ ಮನುಷ್ಯನೂ ತನ್ನ ಕಾಮನೆಗಳ ಕೊನೆಯನ್ನು ಇಲ್ಲಿಯತನಕ ಮುಟ್ಟಿರುವುದಿಲ್ಲ. ಮನುಷ್ಯನಿಗೆ ದೇಹದಲ್ಲಿ, ಬದುಕಿನಲ್ಲಿ ಆಸೆಯು ಪುನಃ ಪುನಃ ಹೆಚ್ಚುತ್ತಲೇ ಹೋಗುತ್ತದೆ.

ನಿವರ್ತಸ್ವ ವಿವಿತ್ಸಾಭ್ಯಃ ಸಮ್ಯಗ್ ನಿರ್ವಿದ್ಯ ಮಾಮಕಃ ।
ಅಸಕೃಚ್ಚಾಸಿ ನಿಕೃತೋ ನ ಚ ನಿರ್ವಿದ್ಯಸೇ ತತೋ ॥ ೧೮ ॥

ಎಲೈ ಕಾಮನೆಗಳ ಹಿಂದೆ ಸಾಗುವ ಮನವೇ, ಇನ್ನು ಮೇಲೆ ನಿನ್ನ ಆಸೆಯನ್ನು ಸಾಕುಮಾಡು. ವಿರಕ್ತಿಯನ್ನು ಆಶ್ರಯಿಸು. ಶಾಂತಿಯಿಂದ ಇರು. ನೀನು ಅನೇಕ ಬಾರಿ ತೃಷ್ಣೆಯಿಂದ ಮೋಸಹೋಗಿ ಆಶಾಭಂಗಕ್ಕೆ ತುತ್ತಾಗಿದ್ದರೂ ಇನ್ನೂ ವಿರಕ್ತನಾಗಲಿಲ್ಲವೇಕೆ? ಎಂದು ಶುಕಮುನಿಯು ತನ್ನನ್ನೇ ಸಂಬೋಧಿಸಿಕೊಂಡು ಮನಸ್ಸಿಗೆ ಬೋಧಿಸಿದನು.

ಯದಿ ನಾಹಂ ವಿನಾಶ್ಯಸ್ತೇ ಯದ್ಯೇವಂ ರಮಸೇ ಮಯಾ ।
ಮಾ ಮಾಂ ಯೋಜಯ ಲೋಭೇನ ವೃಥಾ ತ್ವಂ ವಿತ್ತಕಾಮುಕ ॥ ೧೯ ॥

ಎಲೈ ಮನಸ್ಸೇ , ನೀನು ನನ್ನನ್ನು ಹಾಳುಗೆಡಹಬಾರದು ಎಂದು ಆಲೋಚಿಸಿದ್ದರೆ ನನ್ನೊಡನೆ ನೀನೂ ಸುಖವನ್ನು ಬಯಸುತ್ತಿಯಾದರೆ ವಿತ್ತಕಾಮುಕವಾದ ಎಲೈ ಮನಸ್ಸೇ, ಇಂತಹ ವ್ಯರ್ಥವಾದ ಲೋಭಕ್ಕೆ ನನ್ನನ್ನು ಸೆಳೆಯಬೇಡ.

ಸಂಚಿತಂ ಸಂಚಿತಂ ದ್ರವ್ಯಂ ನಷ್ಟಂ ತವ ಪುನಃ ಪುನಃ ।
ಕದಾ ವಿಮೋಕ್ಷ್ಯಸೇ ಮೂಢ ಧನೇಹಾಂ ಧನಕಾಮುಕ ॥ ೨೦ ॥

ನೀನು ಪುನಃ ಪುನಃ ಸೇರಿಸಿಟ್ಟ ಹಣವನ್ನು ಇಲ್ಲಿಯತನಕ ಎಷ್ಟೋ ಬಾರಿ ಕಳೆದುಕೊಂಡಿರುವೆ. ಆದರೂ ನಿನಗೆ ಧನದ ಆಸೆಯು ಬಿಡುತ್ತಿಲ್ಲ. ಈ ಆಸೆಯು

ಯಾವಾಗ ಬಿಟ್ಟುಹೋಗುತ್ತದೋ! ಧನ ಕಾಮುಕತೆ ಬುದ್ಧಿಹೀನತೆಯ ಮೂಢತನದಲ್ಲಿ ಬಿದ್ದಿರುವ ನೀನು ಎಂದು ಇದರಿಂದ ಹೊರಬರುತ್ತಿ?

ಅಹೋ ನು ಮಮ ಬಾಲಿಶ್ಯಂ ಯೋಽಹಂ ಕ್ರೀಡನಕಸ್ತವ ।
ಕಿಂ ನೈವ ಜಾತು ಪುರುಷಃ ಪರೇಷಾಂ ಪ್ರೇಷ್ಯತಾಮಿಯಾತ್ ॥ ೨೧ ॥

ಎಲೈ ಮನಸ್ಸೇ, ನಾನು ನಿನ್ನ ಮಕ್ಕಳಾಟದ ಕೈಗೊಂಬೆಯಾಗಿರುವೆನಲ್ಲ. ನೀನು ನನ್ನನ್ನು ಪ್ರತಿನಿತ್ಯವೂ ದಯೆಯಿಲ್ಲದೆ ಅನೇಕ ಕಷ್ಟಗಳಿಗೆ ಗುರಿ ಮಾಡುತ್ತಿರುವಿ. ಪರಾಧೀನನಾಗಿ ಸೇವೆ ಮಾಡುವ ಪುರುಷನು ಎಂದೂ ಸುಖವನ್ನು ಹೊಂದಲಾರನು. ಕಾಮನೆಯನ್ನು ತ್ಯಾಗ ಮಾಡಿದವನು ಯಾರಿಗೂ ದಾಸನಾಗಿರಬೇಕಾಗಿಲ್ಲ.

ನ ಪೂರ್ವೇ ನಾಪರೇ ಜಾತು ಕಾಮಾನಾಮಂತಮಾಪ್ನುವನ್ ।
ತ್ಯಕ್ತ್ವಾ ಸರ್ವಸಮಾರಂಭಾನ್ ಪ್ರತಿಬುದ್ಧೋಽಸ್ಮಿ ಜಾಗೃಮಿ ॥ ೨೨ ॥

ಇದಕ್ಕಿಂತ ಹಿಂದಿನ ಯಾವ ವ್ಯಕ್ತಿಗಳು ತಮ್ಮ ಬಯಕೆಗಳು ಕೊನೆಯನ್ನು ಪೂರ್ಣವಾಗಿ ಹೊಂದಿದವರಿಲ್ಲ. ಮುಂದೆ ಬರುವ ಯಾವ ವ್ಯಕ್ತಿಗಳೂ ಆ ಬಯಕೆಗಳ ಕೊನೆಯನ್ನು ಕಾಣಲಾರರು. ಈ ತತ್ತ್ವಚಿಂತನೆಯಿಂದ ನಾನು ಇಂದು ಚೆನ್ನಾಗಿ ಎಚ್ಚರ ಹೊಂದಿರುವೆನು. ನನ್ನ ಮನೋರಥಗಳನ್ನೆಲ್ಲ ಕೈಬಿಟ್ಟೆನು. ನನಗೆ ಈಗ ವಿವೇಕವು ಹುಟ್ಟಿತು.

ನೂನಂ ತೇ ಹೃದಯಂ ಕಾಮ ವಜ್ರಸಾರಮಯಂ ದೃಢಮ್ ।
ಯದನರ್ಥಶತಾವಿಷ್ಟಂ ಶತಧಾ ನ ವಿದೀರ್ಯತೇ ॥ ೨೩ ॥

ನಿಜವಾಗಿಯೂ ನನ್ನ ಹೃದಯವು ವಜ್ರಸಾರಮಯವಾಗಿ ಅತಿಕಠಿಣವಾದುದು. ನೂರಾರು ವಿಧವಾದ ಅನರ್ಥಗಳನ್ನು ಅನುಭವಿಸಿಯೂ ಇನ್ನೂ ನನ್ನ ಹೃದಯವು ಭೇದಿಸುತ್ತಿಲ್ಲವೆಂಬುದೇ ಆಶ್ಚರ್ಯ.

ತ್ಯಜಾಮಿ ಕಾಮ ತ್ವಾಂ ಚೈವ ಯಚ್ಚ ಕಿಂಚಿತ್ ಪ್ರಿಯಂ ತವ ।
ತವಾಹಂ ಸುಖಮನ್ವಿಚ್ಛನ್ನಾತ್ಮನ್ಯುಪಲಭೇ ಸುಖಮ್ ॥ ೨೪ ॥

ಎಲೈ ಕಾಮವೇ, ಇನ್ನು ಮೇಲೆ ನಿನ್ನನ್ನು ನಾನು ತಡೆದುಬಿಡುತ್ತೇನೆ. ನಿನಗೆ ಪ್ರಿಯವಾದುದೆಲ್ಲವನ್ನೂ ಈಗಾಗಲೇ ನೀಡಿರುತ್ತೇನೆ. ನಿನ್ನನ್ನು ನಾನು ಎಷ್ಟೆಷ್ಟು ತೃಪ್ತಿಗೊಳಿಸುತ್ತಿದ್ದರೂ ನನ್ನ ಆತ್ಮಕ್ಕೆ ನೀನು ಯಾವ ಸುಖವನ್ನೂ ಕಾಣಿಸಲಿಲ್ಲ.

ಕಾಮ ಜಾನಾಮಿ ತೇ ಮೂಲಂ ಸಂಕಲ್ಪಾತ್ ಕಿಲ ಜಾಯಸೇ ।
ನ ತ್ವಾಂ ಸಂಕಲ್ಪಯಿಷ್ಯಾಮಿ ಸಮೂಲೋ ನ ಭವಿಷ್ಯಸಿ ॥ ೨೫ ॥

ಎಲೈ ಕಾಮವೇ, ನಿನ್ನ ಮೂಲವೇನೆಂಬುದನ್ನು ನಾನು ಅರಿತಿರುವೆನು. ನಿನ್ನ ಸಂಕಲ್ಪದಿಂದಲೇ ನೀನು ಹುಟ್ಟುವವನು. ಆ ಸಂಕಲ್ಪವನ್ನು ಹುಟ್ಟಿಸುವವನು ನಾನೇ. ಇನ್ನು ಮೇಲೆ ನಿನಗೆ ಕಾರಣವಾದ ಆ ಸಂಕಲ್ಪವನ್ನೇ ನಾನು ಬಿಟ್ಟುಬಿಡುತ್ತೇನೆ. ಆಗ ಸಮೂಲವಾಗಿ ನಾಶಹೊಂದುತ್ತಿ.

ಈಹಾ ಧನಸ್ಯ ನ ಸುಖಾ ಲಬ್ಧ್ವಾ ಚಿಂತಾ ಚ ಭೂಯಸೀ ।
ಲಬ್ಧನಾಶೋ ಯಥಾ ಮೃತ್ಯುರ್ಲಬ್ಧಂ ಭವತಿ ವಾ ನ ವಾ ॥ ೨೬ ॥

ಧನದ ಆಸೆಯಲ್ಲಿ ಕಿಂಚಿತ್ತಾದರೂ ಸುಖವಿರುವುದಿಲ್ಲ. ಧನವು ದೊರೆತಷ್ಟು ಅದರಿಂದ ಚಿಂತೆಯು ಮೇಲಿಂದ ಮೇಲೆ ಅಧಿಕವಾಗುತ್ತಾ ಹೋಗುತ್ತದೆ. ಧನವು ಲಭಿಸಿದ ಮೇಲೆ ಎಂದಾದರೂ ಅದು ಕೈಬಿಟ್ಟು ಹೋದರೆ ಮರಣಸಮಾನವಾದ ದುಃಖವನ್ನು ತಂದೊಡ್ಡುತ್ತದೆ. ಆ ಸಂಪಾದಿಸಿದ ಹಣವು ಸ್ಥಿರವಾಗಿ ನಿಲ್ಲುವುದರಲ್ಲಿ ಸಂಶಯವೇ ಇದೆ.

ಪರೇತ್ಯ ಯೋ ನ ಲಭತೇ ತತೋ ದುಃಖತರಂ ನು ಕಿಮ್ ।
ನ ಚ ತುಷ್ಯತಿ ಲಬ್ಧೇನ ಭೂಯ ಏವ ಚ ಮಾರ್ಗತಿ ॥ ೨೭ ॥

ತನ್ನ ದೇಹವನ್ನೇ ಒಪ್ಪಿಸಿದ್ದರೂ ಆ ಧನವು ದೊರೆಯಲಾರದು. ಇದಕ್ಕಿಂತಲೂ ದುಃಖದ ಸಂಗತಿ ಏನು? ಬಯಸಿದ ಹಣವು ದೊರೆತರೂ ಮನುಷ್ಯನಿಗೆ ಅಷ್ಟರಲ್ಲಿ ತೃಪ್ತಿಯನ್ನುಂಟು ಮಾಡುವುದಿಲ್ಲ. ಇನ್ನೂ ಹೆಚ್ಚಾಗಿ ಪಡೆಯಬೇಕೆಂಬ ಆಸೆಯು ಅಭಿವೃದ್ಧವಾಗುತ್ತಲೇ ಇರುತ್ತದೆ.

ಅನುತರ್ಷುಲ ಏವಾರ್ಥಃ ಸ್ವಾದು ಗಾಂಗಮಿವೋದಕಮ್ ।
ಮದ್ವಿಲಾಪನಮೇತತ್ತು ಪ್ರತಿಬುದ್ಧೋಽಸ್ಮಿ ಸಂತ್ಯಜ ॥ ೨೮ ॥

ನೀರನ್ನು ಕುಡಿದಷ್ಟು ದಾಹವು ಹೆಚ್ಚುವಂತೆ ಧನವನ್ನು ಗಳಿಸಿದಷ್ಟು ಪುನಃ ಪುನಃ ತೃಷ್ಣೆಯು ಹೆಚ್ಚುತ್ತಲೇ ಇರುತ್ತದೆ. ಈ ಧನಾಸೆಯು ನಿರಂತರ ಪೀಡಿಸುತ್ತಾ ಹಾಳು-

ಗೆಡಹುವುದಕ್ಕಾಗಿಯೇ ಬಂದಂತಿದೆ. ಆದರೆ ದೈವದಿಂದ ಇದರ ಬಗ್ಗೆ ತಿಳಿವಳಿಕೆ ಹುಟ್ಟಿದೆ. ನಾನು ಈಗ ಎಚ್ಚರಗೊಂಡಿರುವೆನು. ಮಾತಿನಿಂದ ಮಾತ್ರವಲ್ಲದೆ ಬುದ್ಧಿಯಿಂದಲೂ ಈ ಧನವನ್ನು ನಿರಾಕರಿಸುತ್ತಿದ್ದೇನೆ.

ಯ ಇಮಂ ಮಾಮಕಂ ದೇಹಂ ಭೂತಗ್ರಾಮಃ ಸಮಾಶ್ರಿತಃ ।
ಮಯಾರ್ಥಿತೋ ಯಥಾ ಕಾಮ ವಸತಾಂ ವಾ ಯಥಾಸುಖಮ್ ॥

ಎಲೈ ಕಾಮವೇ, ನೀನು ನನ್ನನ್ನು ಬಿಟ್ಟು ಇನ್ನು ತೆರಳಬಹುದು. ಯಾವ ಈ ನನ್ನ ದೇಹವನ್ನು ಕಾರ್ಯ ಪದಾರ್ಥ ಪ್ರಪಂಚವು ಆಶ್ರಯಿಸಿದೆಯೋ ನನ್ನ ಪ್ರಾರ್ಥನೆಯಿಂದ ನೀವು ಮೊದಲಿದ್ದ ಕಡೆಗೆ ಸೇರಿರಿ. ಇಲ್ಲವೇ ಇದ್ದಲ್ಲಿ ಸುಖವಾಗಿರಿ.

ನ ಯುಷ್ಮಾಸ್ವಿಹ ಮೇ ಪ್ರೀತಿಃ ಕಾಮಲೋಭಾನುಸಾರಿಷು ।
ತಸ್ಮಾದುತ್ಸೃಜ್ಯ ಸರ್ವಾನ್ ವಃ ಸತ್ಯಮೇವಾಶ್ರಯಾಮ್ಯಹಮ್ ॥ ೩೦ ॥

ಕಾಮ-ಲೋಭಗಳನ್ನೇ ಅನುಸರಿಸುವ ರಜಸ್-ತಮೋಗುಣಗಳಿಂದ ತುಂಬಿದ ನಿಮ್ಮಲ್ಲಿ ನನಗೆ ಪ್ರೀತಿ ಇರುವುದಿಲ್ಲ. ನಿಮ್ಮೆಲ್ಲರನ್ನೂ ಬಿಟ್ಟ ಬಳಿಕ ನಾನು ಸತ್ವಗುಣವನ್ನೇ ಆಶ್ರಯಿಸುತ್ತೇನೆ.

ಸರ್ವಭೂತಾನ್ಯಹಂ ದೇಹೇ ಪಶ್ಯನ್ಮನಸಿ ಚಾತ್ಮನಃ ।
ಯೋಗೇ ಬುದ್ಧಿಂ ಶ್ರುತೇ ಸತ್ತ್ವಂ ಮನೋ ಬ್ರಹ್ಮಣಿ ಧಾರಯನ್ ॥೩೧॥

ಸಮಸ್ತ ಭೂತಗಳನ್ನು ನನ್ನ ದೇಹದಲ್ಲಿಯೂ, ಮನಸ್ಸಿನಲ್ಲಿಯೂ ಇರುವಂತೆಯೇ ಭಾವಿಸಿ ನನ್ನನ್ನು ಒಳಗಿಂದ ಪ್ರೀತಿಸುತ್ತಾ ಯೋಗದಲ್ಲಿ ಬುದ್ಧಿಯನ್ನು, ಶ್ರವಣಾದಿಗಳಲ್ಲಿ ನನ್ನ ಚಿತ್ತವನ್ನು, ಗುಣಪರಿಪೂರ್ಣನಾದ ಪರಬ್ರಹ್ಮನಲ್ಲಿ ನನ್ನ ಮನಸ್ಸನ್ನು ನೆಲೆಗೊಳಿಸುತ್ತೇನೆ.

ವಿಹರಿಷ್ಯಾಮ್ಯನಾಸಕ್ತಃ ಸುಖೀ ಲೋಕಾನ್ನಿರಾಮಯಃ ।
ಯಥಾ ಮಾ ತ್ವಂ ಪುನರ್ನೈವಂ ದುಃಖೇಷು ಪ್ರಣಿಧಾಸ್ಯಸಿ ॥ ೩೨ ॥

ಸಮಸ್ತ ಕಾಮನೆಗಳಿಂದಲೂ ದೂರನಾಗಿ, ಪರಬ್ರಹ್ಮನ ಚಿಂತನೆಯಲ್ಲಿಯೇ ವಿಹರಿಸುತ್ತಾ ಯಾವುದೇ ಲೋಕದ ಉಪದ್ರವವಿಲ್ಲದೆ ಸುಖದಿಂದ ವರ್ತಿಸುತ್ತೇನೆ.

ಇನ್ನು ಮುಂದೆ ಎಂದಿಗೂ ಇಂತಹ ದುಃಖದ ಕ್ರಿಯೆಗಳಲ್ಲಿ ನನ್ನ ಮನಸ್ಸನ್ನು ತೊಡಗಿಸಿಕೊಳ್ಳೆನು.

ತ್ವಯಾ ಹಿ ಮೇ ಪ್ರಣುನ್ನಸ್ಯ ಗತಿರನ್ಯಾ ನ ವಿದ್ಯತೇ ।
ತೃಷ್ಣಾಶೋಕಶ್ರಮಾಣಾಂ ಹಿ ತ್ವಂ ಕಾಮ ಪ್ರಭವಃ ಸದಾ ॥ ೩೩ ॥

ನಿನ್ನಿಂದ ನಾನು ಹೀಗೆ ಪೀಡಿಸಲ್ಪಡುತ್ತಿದ್ದರೆ ನನ್ನ ಬಿಡುಗಡೆಗೆ ದಾರಿಯೇ ಇಲ್ಲದಂತಾಗುತ್ತದೆ. ಎಲೈ ಕಾಮವೇ, ನೀನೇ ನನ್ನ ತೃಷ್ಣೆಗೂ, ಶೋಕಕ್ಕೂ, ಶ್ರಮಕ್ಕೂ ಉತ್ಪತ್ತಿ ಸ್ಥಾನವು.

ಧನನಾಶೋऽಧಿಕಂ ದುಃಖಂ ಮನ್ಯೇ ಸರ್ವಮಹತ್ತರಮ್ ।
ಜ್ಞಾತಯೋ ಹ್ಯವಮನ್ಯಂತೇ ಮಿತ್ರಾಣಿ ಚ ಧನಚ್ಯುತಮ್ ॥ ೩೪ ॥

ಧನನಾಶದಿಂದ ಹುಟ್ಟುವ ದುಃಖವು ಎಷ್ಟು ಪ್ರಬಲವೆಂಬುದನ್ನು ನಾನು ಈಗಾಗಲೇ ತಿಳಿದಿದ್ದೇನೆ. ಧನವನ್ನು ಕಳೆದುಕೊಂಡವನನ್ನು ಜ್ಞಾತಿಗಳು ಅವಮಾನಿಸುತ್ತಾರೆ. ಮಿತ್ರರು ಹೀಗಳೆಯುತ್ತಾರೆ.

ಅವಜ್ಞಾನಸಹಸ್ರೈಸ್ತು ದೋಷಾಃ ಕಷ್ಟತರಾಧನೇ ।
ಧನೇ ಸುಖಕಲಾ ಯಾ ಚ ಸಾಪಿ ದುಃಖೈರ್ವಿಧೀಯತೇ ॥ ೩೫ ॥

ಧನಹೀನನಾದವನು ಎಲ್ಲಿಗೆ ಹೋದರೂ ಸಾವಿರಾರು ಅವಮಾನಗಳನ್ನು ಎದುರಿಸಬೇಕಾಗುತ್ತದೆ. ಅತ್ಯಂತ ಕಷ್ಟತರವಾದ ಕಠಿಣ ದೋಷಗಳು ತಲೆದೋರುತ್ತವೆ. ಧನದಿಂದ ಉತ್ಪನ್ನವಾಗುವ ಅಲ್ಪಸುಖವಾದರೂ ದುಃಖದಿಂದ ಸಹಿತವಾಗಿಯೇ ಇರುತ್ತದೆ.

ಧನಮಸ್ಯೇತಿ ಪುರುಷಂ ಪುರಾ ನಿಘ್ನಂತಿ ದಸ್ಯವಃ ।
ಕ್ಲಿಶ್ಯಂತಿ ವಿವಿಧೈರ್ದಂಡೈರ್ನಿತ್ಯಮುದ್ವೇಜಯಂತಿ ಚ ॥ ೩೬ ॥

ಈ ವ್ಯಕ್ತಿಯಲ್ಲಿ ಧನವಿದೆ ಎಂದು ತಿಳಿದಾಗ ಆ ವ್ಯಕ್ತಿಯನ್ನು ಕಳ್ಳರು ಬಂದು ಪೀಡಿಸುತ್ತಾರೆ, ಹೊಡೆಯುತ್ತಾರೆ. ನಾನಾ ಬಗೆಯಿಂದ ಹಿಂಸಿಸುತ್ತಾರೆ, ಹೆದರಿಸುತ್ತಾರೆ. ನಿತ್ಯವೂ ಉದ್ವೇಗಕ್ಕೆ ಕಾರಣವಾಗುವಂತೆ ಮಾಡುವುದು ಈ ಧನವು.

ಮಂದಲೋಲುಪತಾ ದುಃಖಮಿತಿ ಬುದ್ಧಂ ಚಿರಾನ್ಮಯಾ ।
ಯದ್ಯದಾಲಂಬಸೇ ಕಾಮ ತತ್ತದೇವಾನುರುದ್ಧ್ಯಸೇ ॥ ೩೭ ॥

ಈ ಧನವು ಬದುಕಿನಲ್ಲಿ ಅಧಿಕವಾದ ದುಃಖವನ್ನೇ ಕೊಡುತ್ತದೆ ಎಂಬುದು ನನಗೆ ಚೆನ್ನಾಗಿ ತಿಳಿಯಿತು. ಎಲೈ ಕಾಮವೇ, ನಿನಗೆ ಸ್ವಲ್ಪ ಅವಕಾಶವನ್ನು ಕೊಟ್ಟರೂ ಅದರ ಹಿಂದೆ ನನ್ನನ್ನೂ ಸೆಳೆದುಕೊಂಡು ಹೋಗುತ್ತಿ.

ಅತತ್ತ್ವಜ್ಞೋಽಸಿ ಬಾಲಶ್ಚ ದುಸ್ತೋಷೋಽಪೂರಣೋಽನಲಃ ।
ನೈವ ತ್ವಂ ವೇತ್ಥ ಸುಲಭಂ ನೈವ ತ್ವಂ ವೇತ್ಥ ದುರ್ಲಭಮ್ ॥ ೩೮ ॥

ನೀನು ಯಥಾರ್ಥಜ್ಞಾನವುಳ್ಳವನಲ್ಲ. ಬಾಲಕನಂತೆ ವರ್ತಿಸುತ್ತಿ. ನಿನ್ನನ್ನು ತೃಪ್ತಿಗೊಳಿಸುವುದು ಅತ್ಯಂತ ಕಷ್ಟವು. ಅಗ್ನಿಯನ್ನು ತೃಪ್ತಿಗೊಳಿಸಲು ಹೋಗುವ ಮನುಷ್ಯನು ಉರಿಯುವ ಬೆಂಕಿಗೆ ತುಪ್ಪ ಸುರಿದಂತೆ ನಿನ್ನನ್ನು ತೃಪ್ತಿಗೊಳಿಸಲು ಹೊರಟವನು ಮೂರ್ಖನಾಗುತ್ತಾನೆ. ನೀನು ಶಾಂತನಾಗುವುದಿಲ್ಲ. ನೀನು ಯಾವುದಾದರೂ ಒಂದನ್ನು ಬಯಸಿದರೆ ಅದನ್ನು ಸುಲಭ ಎಂದು ತಿಳಿಯುವುದಿಲ್ಲ. ದುರ್ಲಭ ಎಂಬುದನ್ನೂ ತಿಳಿಯುವುದಿಲ್ಲ.

ಪಾತಾಲಮಿವ ದುಷ್ಪೂರೋ ಮಾಂ ದುಃಖೈರ್ಯೋಕ್ತುಮಿಚ್ಛಸಿ ।
ನಾಹಮದ್ಯ ಸಮಾವೇಷ್ಟುಂ ಶಕ್ಯಃ ಕಾಮ ಪುನಸ್ತ್ವಯಾ ॥ ೩೯ ॥

ನೀನು ಪಾತಾಳದಂತೆ ಮಹಾ ಹೊಟ್ಟೆಬಾಕ. ಎಷ್ಟು ತುಂಬಿದರೂ ತೃಪ್ತಿ ಇರುವುದಿಲ್ಲ. ನನ್ನನ್ನು ನೀನು ದುಃಖದಲ್ಲಿ ಮುಳುಗಿಸುವುದಕ್ಕಾಗಿಯೇ ನಿರೀಕ್ಷಿಸುತ್ತಿರುವಿ. ಇಂತಹ ನಿನ್ನನ್ನು ನಾನು ಇನ್ನೆಂದಿಗೂ ಆಶ್ರಯಿಸಲಾರೆ.

ನಿರ್ವೇದಮಹಮಾಸಾದ್ಯ ದ್ರವ್ಯನಾಶಾದ್ಯದೃಚ್ಛಯಾ ।
ನಿರ್ವೃತಿಂ ಪರಮಾಂ ಪ್ರಾಪ್ಯ ನಾದ್ಯ ಕಾಮಾನ್ ವಿಚಿಂತಯೇ ॥ ೪೦ ॥

ಈ ದಿನ ನನ್ನ ದ್ರವ್ಯವು ಸಂಪೂರ್ಣವಾಗಿ ನಾಶವಾಗಿ ನನ್ನ ವೈರಾಗ್ಯಕ್ಕೆ ಕಾರಣವಾಯಿತು. ಇನ್ನೆಂದಿಗೂ ನಾನು ಕಾಮನೆಗಳನ್ನು ಮನಸ್ಸಿನಲ್ಲಿಯೂ ಚಿಂತಿಸುವುದಿಲ್ಲ.

ಅತಿಕ್ಲೇಶಾನ್ ಸಹಾಮೀಹ ನಾಹಂ ಬುಧ್ಯಾಮ್ಯಬುದ್ಧಿಮಾನ್ ।
ನಿಕೃತೋ ಧನನಾಶೇನ ಶಯೇ ಸರ್ವಾಂಗವಿಜ್ವರಃ ॥ ೪೧ ॥

ಇದುವರೆಗೂ ನಿನ್ನಿಂದ ಅನೇಕ ಕಷ್ಟಗಳನ್ನು ಹೊಂದಿರುತ್ತೇನೆ. ಇಷ್ಟು ಕಷ್ಟಗಳನ್ನು ಅನುಭವಿಸಿದ ಬಳಿಕ ತಿಳಿವಳಿಕೆಯನ್ನು ಹೊಂದಿರುತ್ತೇನೆ ಮತ್ತೂ ನಿನ್ನನ್ನು ಅನುಸರಿಸಲು ನಾನು ಬುದ್ಧಿಹೀನನಲ್ಲ. ನಾನು ಗಳಿಸಿದ ಧನವೆಲ್ಲಾ ಈಗ ನಷ್ಟವಾಗಿದೆ. ಇನ್ನು ವೈರಾಗ್ಯವನ್ನೇ ಅವಲಂಬಿಸಿ ಸುಖವಾಗಿ ನಿದ್ರಿಸುತ್ತೇನೆ.

ಪರಿತ್ಯಜಾಮಿ ಕಾಮ ತ್ವಾಂ ಹಿತ್ವಾ ಸರ್ವಮನೋಗತೀಃ ।
ನ ತ್ವಂ ಮಯಾ ಪುನಃ ಕಾಮ ನಸ್ಯೋತೇನೇವ ರಂಸ್ಯಸೇ ॥ ೪೨ ॥

ನನ್ನ ಮನಸ್ಸಿನ ಸಕಲವಿಧ ಆಸೆಗಳನ್ನೂ ಬಿಟ್ಟಿರುತ್ತೇನೆ. ಮೂಗುದಾರವನ್ನು ಬಿಗಿದ ಎತ್ತಿನಂತೆ ನೀನು ನನ್ನನ್ನು ಇನ್ನು ಮುಂದೆ ಭಾವಿಸಬೇಡ. ನಿನ್ನ ಅತಿಕ್ರಮಣಕ್ಕೆ ನಾನು ತುತ್ತಾಗಲಾರೆ.

ಕ್ಷಮಿಷ್ಯೇಽಕ್ಷಮಮಾಣಾನಾಂ ನ ಹಿಂಸಿಷ್ಯೇ ಚ ಹಿಂಸಿತಃ ।
ದ್ವೇಷ್ಯಮುಕ್ತಃ ಪ್ರಿಯಂ ವಕ್ಷ್ಯಾಮ್ಯನಾದೃತ್ಯ ತದಪ್ರಿಯಮ್ ॥ ೪೩ ॥

ಇನ್ನು ಮುಂದೆ ನಾನು ನನ್ನನ್ನು ಹಿಂಸಿಸಿದವರನ್ನು ಪ್ರತಿಯಾಗಿ ಹಿಂಸಿಸೆನು. ನನ್ನನ್ನು ಕ್ಷಮಿಸದಿದ್ದರೂ ಅವರ ವಿಷಯದಲ್ಲಿ ನಾನು ಕ್ಷಮಿಸುತ್ತೇನೆ. ನನ್ನನ್ನು ನಿಂದಿಸಿದವರನ್ನು ನಿಂದಿಸದೆ ಪ್ರಿಯವಾದ ಮಾತುಗಳನ್ನೇ ಆಡುತ್ತೇನೆ. ಬೇರೆಯವರ ಅಪ್ರಿಯವಾಕ್ಯಗಳನ್ನು ಮನಸ್ಸಿಗೆ ತಂದುಕೊಳ್ಳುವುದಿಲ್ಲ.

ತೃಪ್ತಃ ಸ್ವಸ್ಥೇಂದ್ರಿಯೋ ನಿತ್ಯಂ ಯಥಾಲಬ್ಧೇನ ವರ್ತಯನ್ ।
ನ ಸಕಾಮಂ ಕರಿಷ್ಯಾಮಿ ತ್ವಾಮಹಂ ಶತ್ರುಮಾತ್ಮನಃ ॥ ೪೪ ॥

ನಿತ್ಯವೂ ತೃಪ್ತನಾಗಿ ಇಂದ್ರಿಯಗಳನ್ನು ನಿಗ್ರಹಿಸಿಕೊಂಡು ಸಿಕ್ಕಿದ್ದರಲ್ಲಿ ಜೀವನ ಕಳೆಯುತ್ತಾ ವರ್ತಿಸುತ್ತೇನೆ. ಎಲೈ ಕಾಮವೇ, ನನಗೆ ಶತ್ರುವಾದ ನಿನ್ನ ಕೋರಿಕೆಯನ್ನು ಇನ್ನು ಮೇಲೆ ನಾನು ಈಡೇರಿಸುತ್ತೇನೆಂದು ತಿಳಿಯಬೇಡ.

ನಿರ್ವೇದಂ ನಿರ್ವೃತಿಂ ತೃಪ್ತಿಂ ಶಾಂತಿಂ ಸತ್ಯಂ ದಮಂ ಕ್ಷಮಾಮ್ ।
ಸರ್ವಭೂತದಯಾಂ ಚೈವ ವಿದ್ಧಿ ಮಾಂ ಶರಣಾಗತಮ್ ॥ ೪೫ ॥

ಎಲೈ ಕಾಮವೇ, ಇನ್ನು ನಾನು ವಿರಕ್ತಿ, ಶಾಂತಿ, ತೃಪ್ತಿ, ಸತ್ಯ, ದಮ, ಕ್ಷಮೆ, ಸರ್ವಭೂತದಯೆ - ಈ ಗುಣಗಳನ್ನೇ ಆಶ್ರಯಿಸಿರುವವನಾಗಿ ತಿಳಿ.

ತಸ್ಮಾತ್ ಕಾಮಶ್ಚ ಲೋಭಶ್ಚ ತೃಷ್ಣಾ ಕಾರ್ಪಣ್ಯಮೇವ ಚ ।
ತ್ಯಜಂತು ಮಾಂ ಪ್ರತಿಷ್ಠಂತಂ ಸತ್ತ್ವಸ್ಥೋ ಹ್ಯಸ್ಮಿ ಸಾಂಪ್ರತಮ್ ॥ ೪೬

ಬಿಡುಗಡೆಯ ಮಾರ್ಗದಲ್ಲಿ ಸಾಗುತ್ತಿರುವ ನನ್ನನ್ನು ಕಾಮವಾಗಲೀ, ಲೋಭವಾಗಲೀ, ಆಸೆಯಾಗಲೀ, ಕಾರ್ಪಣ್ಯವಾಗಲೀ ಮುಟ್ಟಲಾರವು. ನಾನು ಕಾಮ-ಕ್ರೋಧಾದಿಗಳನ್ನು ಮೀರಿ ಸತ್ವಗುಣವನ್ನು ಆಶ್ರಯಿಸಿಕೊಂಡು ಈಗ ಇರುತ್ತೇನೆ.

ಪ್ರಹಾಯ ಕಾಮಂ ಲೋಭಂ ಚ ಕ್ರೋಧಂ ಪಾರುಷ್ಯಮೇವ ಚ ।
ನಾದ್ಯ ಲೋಭವಶಂ ಪ್ರಾಪ್ತೋ ದುಃಖಂ ಪ್ರಾಪ್ಸ್ಯಾಮ್ಯನಾತ್ಮವಾನ್ ॥

ಇನ್ನು ಮುಂದೆ ಕಾಮ, ಲೋಭ, ಕ್ರೋಧ, ಕಾಠಿಣ್ಯಗಳಿಗೆ ನಾನು ತುತ್ತಾಗುವುದಿಲ್ಲ. ಲೋಭಕ್ಕೆ ವಶನಾಗಿ ಎಂದಿಗೂ ಆತ್ಮಗ್ಲಾನಿಯನ್ನು ಉಂಟುಮಾಡಿಕೊಳ್ಳುವುದಿಲ್ಲ. ದುಃಖಕ್ಕೆ ತುತ್ತಾಗುವುದಿಲ್ಲ.

ಯದ್ಯತ್ ತ್ಯಜತಿ ಕಾಮಾನಾಂ ತತ್ ಸುಖಸ್ಯಾಭಿಪೂರ್ಯತೇ ।
ಕಾಮಸ್ಯ ವಶಗೋ ನಿತ್ಯಂ ದುಃಖಮೇವ ಪ್ರಪದ್ಯತೇ ॥ ೪೮ ॥

ಮನುಷ್ಯನು ಕಾಮವನ್ನು ಬಿಡುತ್ತಾ ಬಂದಂತೆ ಸುಖವನ್ನು ಹೆಚ್ಚಿಸಿಕೊಳ್ಳುತ್ತಾನೆ. ಕಾಮವಶನಾದವನು ಯಾವಾಗಲೂ ದುಃಖವನ್ನೇ ಹೆಚ್ಚಿಸಿಕೊಳ್ಳುತ್ತಾನೆ.

ಕಾಮಾನ್ ವ್ಯುದಸ್ಯ ಧುನುತೇ ಯತ್ಕಿಂಚಿತ್ ಪುರುಷೋ ರಜಃ ।
ಕಾಮಕ್ರೋಧೋದ್ಭವಂ ದುಃಖಮಹ್ರೀರರತಿರೇವ ಚ ॥ ೪೯ ॥

ಕಾಮಕ್ಕೆ ಸಂಬಂಧಪಟ್ಟದ್ದೆಲ್ಲವೂ ರಜೋಗುಣನಿಮಿತ್ತವಾಗಿದೆ. ಅದೆಲ್ಲವೂ ತ್ಯಾಜ್ಯವು. ದುಃಖ, ಲಜ್ಜೆ ಇಲ್ಲದಿರುವುದು, ಅತೃಪ್ತಿ ಇವೆಲ್ಲವೂ ಕಾಮ-ಕ್ರೋಧಗಳಿಂದಲೇ ಉತ್ಪತ್ತಿಯನ್ನು ಹೊಂದುತ್ತವೆ.

ಏಷ ಬ್ರಹ್ಮಪ್ರವಿಷ್ಟೋಽಹಂ ಗ್ರೀಷ್ಮೇ ಶೀತಮಿವ ಹ್ರದಮ್ ।
ಶಾಮ್ಯಾಮಿ ಪರಿನಿರ್ವಾಮಿ ಸುಖಮಾಸೇ ಚ ಕೇವಲಮ್ ॥ ೫೦ ॥

ಆಹಾ! ನಾನು ಧನ್ಯನು. ಈಗ ನಾನು ಕಾಮವನ್ನು ಬಿಟ್ಟಿದ್ದೇನೆ. ತೀವ್ರವಾದ ಕಡು ಬಿಸಿಲಿನಲ್ಲಿ ಬಳಲಿದವನು ತಂಪಾದ ನೀರಿನ ಮಡುವನ್ನು ಆಶ್ರಯಿಸಿದಂತೆ ನನ್ನನ್ನು ಘಾಸಿಗೊಳಿಸುವ ಕಾಮವನ್ನು ತ್ಯಾಗ ಮಾಡಿ ಪರಬ್ರಹ್ಮನೆಂಬ ತಂಪಾದ ಹ್ರದವನ್ನು (ಕೊಳ)ಆಶ್ರಯಿಸಿದ್ದೇನೆ. ಕರ್ಮಗಳನ್ನು ದಾಟಿದ್ದೇನೆ, ದುಃಖಗಳನ್ನು ನೀಗಿದ್ದೇನೆ. ಕೇವಲ ಸುಖದಲ್ಲಿ ಇದ್ದೇನೆ.

ಯಚ್ಚ ಕಾಮಸುಖಂ ಲೋಕೇ ಯಚ್ಚ ದಿವ್ಯಂ ಮಹತ್ ಸುಖಮ್ ।
ತೃಷ್ಣಾಕ್ಷಯಸುಖಸ್ಯೈತೇ ನಾರ್ಹತಃ ಷೋಡಶೀಂ ಕಲಾಮ್ ॥ ೫೧ ॥

ಲೋಕದಲ್ಲಿ ಕಾಮದಿಂದ ಸಿಗುವ ಸುಖವಾಗಲೀ, ದೇವಲೋಕದ ಮಹಾಸುಖವಾಗಲೀ, ತೃಷ್ಣೆಯನ್ನು ತ್ಯಾಗ ಮಾಡುವುದರಿಂದ ಉಂಟಾಗುವ ಸುಖದ ಹದಿನಾರನೆಯ ಒಂದು ಕಲೆಗೂ (ಅಂಶಕ್ಕೂ) ಸಾಟಿಯಾಗದು.

ಆತ್ಮನಾ ಸಪ್ತಮಂ ಕಾಮಂ ಹತ್ವಾ ಶತ್ರುಮಿವೋತ್ತಮಮ್ ।
ಪ್ರಾಪ್ಯಾವಧ್ಯಂ ಬ್ರಹ್ಮಪುರಂ ರಾಜೇವ ಸ್ಯಾಮಹಂ ಸುಖೀ ॥ ೫೨ ॥

ಹಸಿವು, ನೀರಡಿಕೆ, ಜರಾ, ಮರಣ, ವ್ಯಾಧಿ, ಉತ್ಪತ್ತಿ ಮೊದಲಾದ ಷಡೂರ್ಮಿಗಳೊಡನೆ ಏಳನೆಯದ್ದಾದ ಕಾಮನೆಯ ಮನಸ್ಸನ್ನು ಶತ್ರುವೆಂದು ಕೊಂದು ಈಗ ನಾನು ಅವಧ್ಯವಾದ ಬ್ರಹ್ಮಪುರವನ್ನು ಸೇರಿ ಅಲ್ಲಿ ರಾಜನಂತೆ ಸುಖದಿಂದ ವಾಸಿಸುತ್ತಿದ್ದೇನೆ.

ಏತಾಂ ಬುದ್ಧಿಂ ಸಮಾಸ್ಥಾಯ ಮಂಕಿನಿರ್ವೇದಮಾಗತಃ ।
ಸರ್ವಾನ್ ಕಾಮಾನ್ ಪರಿತ್ಯಜ್ಯ ಪ್ರಾಪ್ಯ ಬ್ರಹ್ಮ ಮಹತ್ ಸುಖಮ್ ॥

ಎಲೈ ಧರ್ಮರಾಜನೇ, ಮಂಕಿ ಎಂಬ ಬ್ರಾಹ್ಮಣನು ಶುಕಮುನಿಯಿಂದ ಬೋಧಿತವಾದ ಈ ವೈರಾಗ್ಯಬುದ್ಧಿಯನ್ನು ಆಶ್ರಯಿಸಿ ಎಲ್ಲದರಲ್ಲಿಯೂ ವಿರಕ್ತನಾಗಿ, ಸಮಸ್ತ ಕಾಮನೆಗಳನ್ನು ತೊರೆದು ಪರಮ ಸುಖವೆನಿಸಿದ ಪರಬ್ರಹ್ಮನನ್ನೇ ಪಡೆದನು.

ದಮ್ಯನಾಶಕೃತೇ ಮಂಕಿರಮರತ್ವಂ ಕಿಲಾಗಮತ್ ।
ಅಚ್ಛಿನತ್ ಕಾಮಮೂಲಂ ಸ ತೇನ ಪ್ರಾಪ ಮಹತ್ ಸುಖಮ್ ॥೫೪॥

ತನ್ನ ಎರಡು ಹೋರಿಗಳನ್ನು ಕಳೆದುಕೊಂಡದ್ದೇ ಮೂಲವಾಗಿ ವೈರಾಗ್ಯವನ್ನು ಪಡೆದುಕೊಂಡು ಅದರಿಂದ ಮಂಕಿಯು ಅಮೃತತ್ವವನ್ನು ಪಡೆದನು. ಕಾಮವನ್ನು ಬೇರು ಸಹಿತ ಕಿತ್ತುಹಾಕಿದುದರಿಂದ ಉತ್ತಮಗತಿಯನ್ನು ಹೊಂದುವಂತಾಯಿತು.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಗೀತಂ ವಿದೇಹರಾಜೇನ ಜನಕೇನ ಪ್ರಶಾಮ್ಯತಾ ॥ ೫೫ ॥

ಇದೇ ವಿಷಯದಲ್ಲಿ ವಿದೇಹರಾಜನಾದ ಜನಕನು ಶಾಂತಿಯನ್ನಾಶ್ರಯಿಸಿ ಮೋಕ್ಷದ ದೃಷ್ಟಿಯಿಂದ ಹಾಡಿದ ಗೀತೆಯನ್ನು ಉದಾಹರಿಸುತ್ತಾರೆ.

ಅನಂತಂ ಬತ ಮೇ ವಿತ್ತಂ ಯಸ್ಯ ಮೇ ನಾಸ್ತಿ ಕಿಂಚನ ।
ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ದಹ್ಯತಿ ಕಿಂಚನ ॥ ೫೬ ॥

ಈ ಗೀತಾರ್ಥವಾದರೂ- 'ನನ್ನ ಧನವಾದರೂ ಅಪಾರವಾದುದು. ಆದರೆ ಧನದ ಒಂದು ಕಣವೂ ನನ್ನದ್ದಲ್ಲ. ಈ ಮಿಥಿಲಾಪಟ್ಟಣವೇ ಪೂರ್ಣವಾಗಿ ಸುಟ್ಟುಹೋದರೂ ನನಗೆ ಸಂಬಂಧಿಸಿದ ಯಾವ ಒಂದು ಪದಾರ್ಥವೂ ಸುಟ್ಟುಹೋಗುವುದಿಲ್ಲ'.

ಅತ್ರೈವೋದಾಹರಂತೀಮಂ ಬೋಧ್ಯಸ್ಯ ಪದಸಂಚಯಮ್ ।
ನಿರ್ವೇದಂ ಪ್ರತಿ ವಿನ್ಯಸ್ತಂ ಪ್ರತಿಬೋಧ ಯುಧಿಷ್ಠಿರ ॥ ೫೭ ॥

ಇದೇ ವೈರಾಗ್ಯದ ವಿಷಯದಲ್ಲಿ ಬೋಧ್ಯನೆಂಬುವನು ಹೇಳಿದ ರಮಣೀಯ ಪದಪುಂಜಗಳನ್ನು ಹೀಗೆ ಉದಾಹರಿಸುತ್ತಾರೆ. ಯುಧಿಷ್ಠಿರನೇ ಅದನ್ನು ತಿಳಿಸುತ್ತೇನೆ, ಕೇಳು.

ಬೋಧ್ಯಂ ದಾಂತಮೃಷಿಂ ರಾಜಾ ನಹುಷಃ ಪರ್ಯಪೃಚ್ಛತ ।
ನಿರ್ವೇದಾಚ್ಛಾಂತಿಮಾಪನ್ನಂ ಶಾಂತಂ ಪ್ರಜ್ಞಾನತರ್ಪಿತಮ್ ॥ ೫೮ ॥

ಉಪದೇಶಂ ಮಹಾಪ್ರಾಜ್ಞ ಶಮಸ್ಯೋಪದಿಶಸ್ವ ಮೇ ।
ಕಾಂ ಬುದ್ಧಿಂ ಸಮನುಧ್ಯಾಯ ಶಾಂತಶ್ಚರಸಿ ನಿರ್ವೃತಃ ॥ ೫೯ ॥

ಒಮ್ಮೆ ಯಯಾತಿರಾಜನು ಶಾಂತನೂ, ಶಾಸ್ತ್ರವಿದನೂ ಆದ ಬೋಧ್ಯನೆಂಬ ಋಷಿಯನ್ನು ನೋಡಿ ಹೀಗೆ ಪ್ರಶ್ನಿಸಿದನು. ಎಲೈ ಮಹಾಪ್ರಾಜ್ಞನೇ, ಅತ್ಯಂತ

ಶಾಂತಿಯನ್ನು ಹೊಂದಿರುವ ನೀನು ನನಗೂ ಶಾಂತಿಯನ್ನು ಉಪದೇಶಿಸು. ಯಾವ ಬುದ್ಧಿಯಿಂದ ಶಾಂತಿಯನ್ನು ಹಿಡಿದು ಸುಖವನ್ನು ಹೊಂದಿರುವೆಯೋ ಅದನ್ನೂ ನನಗೆ ತಿಳಿಸು.

ಬೋಧ್ಯಃ

ಉಪದೇಶೇನ ವರ್ತಾಮಿ ನಾನುಶಾಸ್ಮೀಹ ಕಂಚನ ।
ಲಕ್ಷಣಂ ತಸ್ಯ ವಕ್ಷ್ಯೇಽಹಂ ತತ್ ಸ್ವಯಂ ಪ್ರವಿಮೃಶ್ಯತಾಮ್ ॥ ೬೦ ॥

ಬೋಧ್ಯ– ಮಹಾರಾಜನೇ, ನಾನು ಇನ್ನೊಬ್ಬರ ಉಪದೇಶದಂತೆ ನಡೆದುಕೊಳ್ಳುತ್ತಿದ್ದೇನೆ ಹೊರತು ಬೇರೆ ಯಾರಿಗೂ ಯಾವಾಗಲೂ ಬಹಳವಾದ ಉಪದೇಶಗಳನ್ನು ಮಾಡಿದವನಲ್ಲ. ನೀನು ಉಪದೇಶಿಸುವ ವಸ್ತುಗಳನ್ನು ತಿಳಿಸುತ್ತೇನೆ. ಉಪದೇಶಿಸುವ ಗುರುಗಳು ಯಾರು ಎಂದು ತಿಳಿಸುತ್ತೇನೆ. ಅಂತಹ ವ್ಯಕ್ತಿಗಳನ್ನು ನಿನ್ನ ಬುದ್ಧಿಯಿಂದಲೇ ವಿಮರ್ಶಿಸಿ ಅಲ್ಲಿಂದ ತಿಳಿಯಬೇಕಾದ ತತ್ವವೇನೆಂಬುದನ್ನು ನೀನೇ ತಿಳಿದುಕೊ.

ಪಿಂಗಲಾ ಕುರರಃ ಸರ್ಪಃ ಸಾರಂಗಾನ್ವೇಷಣಂ ವನೇ ।
ಇಷುಕಾರಃ ಕುಮಾರೀ ಚ ಷಡೇತೇ ಗುರವೋ ಮಮ ॥ ೬೧ ॥

ಪಿಂಗಲಾ ಎಂಬ ವೇಶ್ಯೆ, ಕುರರ ಪಕ್ಷಿ, ಸರ್ಪ, ಕಾಡು ದುಂಬಿ, ಬಾಣಗಾರ, ಕುಮಾರಿ ಎಂಬ ಆರು ಮಂದಿ ನನಗೆ ಗುರುಗಳಾಗಿದ್ದಾರೆ.

ವ್ಯಾಖ್ಯಾನ ವಿಶೇಷ– ಪಿಂಗಲೆಯು ಗ್ರಾಮ್ಯಭೋಗಗಳ ಆಸೆಯನ್ನು ಬಿಡಬೇಕು ಎನ್ನುವ ವಿಷಯದಲ್ಲಿ ಗುರುವಾಗಿದ್ದಾಳೆ. ಕುರರ ಪಕ್ಷಿಯು ತನಗೆ ಆಯಾಸವನ್ನುಂಟು ಮಾಡುವ ಕರ್ಮಗಳನ್ನು ಮಾಡಬಾರದು ಎನ್ನುವ ವಿಷಯದಲ್ಲಿ ಗುರುವಾಗಿದೆ. ಹೀಗೆ ಬೇರೆ ವ್ಯಕ್ತಿಗಳ ಗುರುತ್ವವನ್ನು ಅರ್ಥಮಾಡಿಕೊಳ್ಳಬೇಕು. ಈ ರೀತಿಯಾಗಿ ಬೋಧ್ಯರು ಗುರುಗಳ ಆದೇಶವಿಲ್ಲದೆ ಇದ್ದುದರಿಂದ ಯಯಾತಿಗೆ ತಾನು ಉಪದೇಶಿಸದೆ ತನಗೆ ಸಂಬಂಧಪಟ್ಟ ಗುರುಗಳನ್ನು ಮಾತ್ರ ತಿಳಿಸುತ್ತಾನೆ ಹೊರತು ಅವರಿಂದ ಏನನ್ನು ಕಲಿತೆ ಎಂಬುದನ್ನು ಯಯಾತಿಗೆ ಹೇಳುವುದಿಲ್ಲ.

ಇಷ್ಟು ಅಭಿಪ್ರಾಯವು ಲಕ್ಷಾಲಂಕಾರದಲ್ಲಿ ಹೇಳಲ್ಪಟ್ಟಿದೆ. ಈ ಅಧ್ಯಾಯದಲ್ಲಿ ಮತ್ತೂ ಹತ್ತು ಶ್ಲೋಕಗಳನ್ನು ಅಧಿಕವಾಗಿ ಕೆಲವರು ಸೇರಿಸಿದ್ದಾರೆ. ಆದರೆ ಅರವತ್ತನೆಯ ಶ್ಲೋಕದಲ್ಲಿ 'ತತ್ ಸ್ವಯಂ ಪ್ರವಿಮೃಶ್ಯತಾಮ್' ಈ ವ್ಯಕ್ತಿಗಳಿಂದ ಲಭಿಸುವ ಉಪದೇಶವೇನೆಂಬುದನ್ನು ನೀನೇ ವಿಮರ್ಶಿಸಿಕೊ

ಬೋಧ್ಯರು ಹೇಳಿದ ಬಳಿಕ ಈ ಗುರುಗಳಿಂದ ಬರುವ ಈ ಉಪದೇಶವನ್ನು ವಿವರಿಸುವ ಶ್ಲೋಕಗಳು ಇಲ್ಲಿ ಅಪ್ರಸ್ತುತವೆನಿಸುತ್ತವೆ, ಅಧಿಕವೆನಿಸುತ್ತವೆ. ಈ ವಿಷಯದ ಬಗ್ಗೆ ಹೆಚ್ಚಿನ ಅಭಿಪ್ರಾಯವನ್ನು ಭಾಗವತದ ಏಕಾದಶಸ್ಕಂಧದಲ್ಲಿ ನೋಡಬಹುದು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐದನೆಯ ಅಧ್ಯಾಯ

ಭೀಷ್ಮರು ಧರ್ಮರಾಜನಿಗೆ ಪ್ರಪಂಚವು ಅನಿತ್ಯವೆಂಬ ವಿಚಾರವನ್ನು, ಪರಮಾತ್ಮನ ಜ್ಞಾನವನ್ನು ಸಂಪಾದಿಸುತ್ತಾ ಅದಕ್ಕೆ ಪೂರಕವಾಗಿ ವೈರಾಗ್ಯವನ್ನು ಹೊಂದಬೇಕೆಂಬುದನ್ನು ತಿಳಿಸುತ್ತಾ, ಪ್ರಹ್ಲಾದ-ಅಜಗರಮುನಿಗೆ ನಡೆದ ಸಂವಾದವನ್ನು ತಿಳಿಸಿದುದು.

ಯುಧಿಷ್ಠಿರಃ

ಕೇನ ವೃತ್ತೇನ ವೃತ್ತಜ್ಞ ಏತಶೋಕಶ್ಚರೇನ್ಮಹೀಮ್ ।
ಕಿಂ ಚ ಕುರ್ವನ್ನರೋ ಲೋಕೇ ಪ್ರಾಪ್ನೋತಿ ಪರಮಾಂ ಗತಿಮ್ ॥ ೧ ॥

ಯುಧಿಷ್ಠಿರ– ಪಿತಾಮಹನೇ, ಮನುಷ್ಯನು ಯಾವ ನಡತೆಯನ್ನು ಅವಲಂಬಿಸಿದರೆ ದುಃಖವನ್ನು ಪರಿಹರಿಸಿಕೊಂಡು ಭೂಮಿಯಲ್ಲಿ ಶಾಂತಿಯಿಂದ ಜೀವನ ನಡೆಸುತ್ತಾನೋ ಮತ್ತು ಯಾವ ಕಾರ್ಯದಿಂದ ಉತ್ತಮ ಗತಿಯನ್ನು ಹೊಂದುತ್ತಾನೋ ಅದನ್ನು ತಿಳಿಸಿರಿ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಪ್ರಹ್ಲಾದಸ್ಯ ಚ ಸಂವಾದಂ ಮುನೇರಾಜಗರಸ್ಯ ಚ ॥ ೨ ॥

ಭೀಷ್ಮ– ಎಲೈ ಮಹಾರಾಜನೇ, ಇದೇ ವಿಷಯದಲ್ಲಿ ಪ್ರಹ್ಲಾದರಾಜನಿಗೂ ಮತ್ತು ಅಜಗರಮುನಿಗೂ ನಡೆದ ಸಂವಾದವಿದೆ. ಪುರಾತನವಾದ ಇತಿಹಾಸವನ್ನು ಈ ನಿನ್ನ ಪ್ರಶ್ನೆಗೆ ನಿದರ್ಶನವಾಗಿ ಹೇಳುತ್ತೇನೆ.

ಚರಂತಂ ಬ್ರಾಹ್ಮಣಂ ಕಂಚಿತ್ ಕಲ್ಯಚಿತ್ತಮನಾಮಯಮ್ ।
ಪಪ್ರಚ್ಛ ರಾಜನ್ ಪ್ರಹ್ಲಾದೋ ಬುದ್ಧಿಮಾನ್ ಪ್ರಾಜ್ಞಸಮ್ಮತಃ ॥ ೩ ॥

ಒಂದು ಬಾರಿ ಧೀಮಂತನಾದ ಪ್ರಹ್ಲಾದರಾಜನು ರಾಗ-ದ್ವೇಷಗಳಿಗೆ ತುತ್ತಾಗದ, ಸಮಗ್ರವಾದ ಮನಸ್ಸನ್ನು ಹೊಂದಿರುವ, ಲೋಕಸಂಚಾರ ಮಾಡುತ್ತಿರುವ ಒಬ್ಬ ಬ್ರಾಹ್ಮಣನನ್ನು ಕಂಡು ಹೀಗೆ ಪ್ರಶ್ನೆ ಮಾಡುತ್ತಾನೆ.

ಸ್ವಸ್ಥಃ ಶಕ್ತೋ ಮೃದುರ್ದಾಂತೋ ನಿರ್ವಿತ್ತೋಽನಸೂಯಕಃ ।
ಸುವಾಗ್ ಬಹುಮತೋ ಲೋಕೇ ಪ್ರಾಜ್ಞಶ್ಚರಸಿ ಬಾಲವತ್ ॥ ೪ ॥

ಎಲೈ ವಿಪ್ರೋತ್ತಮನೇ, ನೀನು ಯಾವುದೇ ಉದ್ವಿಗ್ನವಿಲ್ಲದ ಮನಸ್ಸುಳ್ಳವನಾಗಿರುವಿ, ಶಕ್ತನಾಗಿರುವಿ. ಮೃದುಸ್ವಭಾವದವನು, ಇಂದ್ರಿಯನಿಗ್ರಹವುಳ್ಳವನು ಆಗಿರುವಿ. ಯಾವ ಕಾರ್ಯಗಳಲ್ಲಿಯೂ ಅತಿಯಾದ ಆಸೆಗಳಿಲ್ಲ. ಇತರರಲ್ಲಿ ಹೊಟ್ಟೆಕಿಚ್ಚಿರುವುದಿಲ್ಲ. ಪ್ರಿಯವಾಕ್ಯವನ್ನೇ ಹೇಳುತ್ತಿರುವಿ. ಎಲ್ಲರಿಗೂ ಘನ್ಯನಾಗಿರುವಿ. ಇಂತಹ ಪ್ರಾಜ್ಞನಾದ ನೀನು ಮಕ್ಕಳಂತೆ ಸಂಚರಿಸುತ್ತಿರುವಿ.

ನೈವ ಪ್ರಾರ್ಥಯಸೇ ಲಾಭಂ ನಾಲಾಭೇಷ್ವನುಶೋಚಸಿ ।
ನಿತ್ಯತೃಪ್ತ ಇವ ಬ್ರಹ್ಮನ್ನ ಕಿಂಚಿದವಮನ್ಯಸೇ ॥ ೫ ॥

ನೀನು ಲಾಭವನ್ನು ಬಯಸುತ್ತಿಲ್ಲ, ನಷ್ಟಕ್ಕಾಗಿ ದುಃಖಿಸುತ್ತಿಲ್ಲ. ಲೋಕದಲ್ಲಿ ಏನನ್ನೂ ಬಯಸದೆ ನಿತ್ಯತೃಪ್ತನಾಗಿ ಬಾಳುತ್ತಿರುವೆ. ಯಾರನ್ನೂ ಕೀಳಾಗಿ ಕಾಣುತ್ತಿಲ್ಲ.

ಸ್ರೋತಸಾ ಹ್ರಿಯಮಾಣಾಸು ಪ್ರಜಾಸ್ವವಿಮನಾ ಇವ ।
ಧರ್ಮಕಾಮಾರ್ಥಕಾರ್ಯೇಷು ಕೂಟಸ್ಥ ಇವ ಲಕ್ಷ್ಯಸೇ ॥ ೬ ॥

ಲೋಕವೆಲ್ಲವೂ ಕಾಮಪ್ರವಾಹದಲ್ಲಿ ತಡೆಯಿಲ್ಲದಂತೆ ಹೊಡೆದುಕೊಂಡು ಹೋಗುತ್ತಿರುವಾಗ ನೀನು ಮಾತ್ರ ಧರ್ಮ-ಕಾಮಾರ್ಥಕಾರ್ಯಗಳಲ್ಲಿ ಆಕಾಶದಂತೆ ಅಸಂಗನಾಗಿ ಕಾಣಿಸುತ್ತಿರುವಿ.

ನಾನುತಿಷ್ಠಸಿ ಧರ್ಮಾರ್ಥೌ ನ ಕಾಮೇ ಚಾಪಿ ವರ್ತಸೇ ।
ಇಂದ್ರಿಯಾರ್ಥಾನನಾದೃತ್ಯ ಮುಕ್ತಶ್ಚರಸಿ ಸಾಕ್ಷಿವತ್ ॥ ೭ ॥

ಧರ್ಮವನ್ನಾಗಲೀ, ಅರ್ಥವನ್ನಾಗಲೀ, ಕಾಮವನ್ನಾಗಲೀ ನೀನು ಬಯಸುವಂತೆ ಕಾಣುತ್ತಿಲ್ಲ. ಇಂದ್ರಿಯಗಳಿಗೆ ಬೇಕಾದ ಪದಾರ್ಥಗಳನ್ನು ಧಿಕ್ಕರಿಸಿ ಮುಕ್ತನಂತೆ ಸಂಚರಿಸುತ್ತಿರುವಿ. ಸ್ವರೂಪ ಪ್ರಜ್ಞೆಯಿಂದಲೇ ಸಂಚರಿಸುತ್ತಿರುವಿ.

ಕಾ ನು ಪ್ರಾಜ್ಞ ಶ್ರುತಂ ವಾ ಕಿಂ ವೃತ್ತಿರ್ವಾ ಕಾ ನು ತೇ ಮುನೇ ।
ಕ್ಷಿಪ್ರಮಾಚಕ್ಷ್ವ ಮೇ ಬ್ರಹ್ಮನ್ ಶ್ರೇಯೋ ಯದಿಹ ಮನ್ಯಸೇ ॥ ೮ ॥

ಈ ಗುಣಗಳೆಲ್ಲಾ ನಿನಗೆ ಹೇಗೆ ಬಂದವು? ನಿನ್ನ ಪ್ರಜ್ಞೆ ಎಂತಹದ್ದು? ನಿನ್ನ ವಿದ್ಯೆ ಏನು? ನಿನ್ನ ವೃತ್ತಿ ಏನು? ಬ್ರಾಹ್ಮಣನೇ, ತಡಮಾಡದೆ ನನಗೂ ಈ ರಹಸ್ಯವನ್ನು ತಿಳಿಸು. ನನಗೇನಾದರೂ ಇದರಿಂದ ಶ್ರೇಯಸ್ಸುಂಟಾಗುವುದಾದರೆ ಉಪದೇಶಿಸು.

ಅನುಯುಕ್ತಃ ಸ ಮೇಧಾವೀ ಲೋಕಧರ್ಮವಿಧಾನವಿತ್ ।
ಉವಾಚ ಶ್ಲಕ್ಷ್ಣಯಾ ವಾಚಾ ಪ್ರಹ್ಲಾದಮನಪಾರ್ಥಯಾ ॥ ೯ ॥

ಲೋಕಧರ್ಮವನ್ನು ಚೆನ್ನಾಗಿ ಅರಿತಿರುವ ಮೇಧಾವಿಯೂ ಆದ ಅಜಗರ ಬ್ರಾಹ್ಮಣನು ಪ್ರಹ್ಲಾದನನ್ನು ಕುರಿತು ಮಧುರವಾದ ಮಾತುಗಳಿಂದ ಹೀಗೆ ಹೇಳಿದನು.

ಪಶ್ಯನ್ ಪ್ರಹ್ಲಾದ ಭೂತಾನಾಮುತ್ಪತ್ತಿಮನಿಮಿತ್ತತಃ ।
ಹ್ರಾಸಂ ವೃದ್ಧಿಂ ವಿನಾಶಂ ಚ ನ ಪ್ರಹೃಷ್ಯೇ ನ ಚ ವ್ಯಥೇ ॥ ೧೦ ॥

ಸ್ವಭಾವಾದೇವ ಸಂದೃಶ್ಯ ವರ್ತಮಾನಾಃ ಪ್ರವೃತ್ತಯಃ ।
ಸ್ವಭಾವನಿರತಾಃ ಸರ್ವಾಃ ಪರಿತಪ್ಯೇ ನ ಕೇನಚಿತ್ ॥ ೧೧ ॥

ಪ್ರಹ್ಲಾದನೇ, ನೋಡು. ಭೂತಗಳ ಜನ್ಮ-ವೃದ್ಧಿ-ಕ್ಷಯಗಳು, ಅವುಗಳ ನಾಶವು ನಾವ್ಯಾರೂ ಕಾರಣವಾಗದಿದ್ದರೂ ನಡೆಯುತ್ತಲೇ ಇವೆ. ಇದನ್ನು ತಿಳಿದ ನಾನು ದುಃಖಿಸುವುದೂ ಇಲ್ಲ, ಸಂತೋಷಿಸುವುದೂ ಇಲ್ಲ. ಸಮಸ್ತ ಪ್ರಾಣಿಗಳ ಪ್ರವೃತ್ತಿಗಳೆಲ್ಲವೂ ಅವುಗಳ ಸ್ವಭಾವಕ್ಕೆ ತಕ್ಕಂತೆ ಉಂಟಾಗುತ್ತವೆ. ಲೋಕದಲ್ಲಿ ಎಲ್ಲ ವಸ್ತುಗಳು ತಮ್ಮ ತಮ್ಮ ಸ್ವಭಾವವನ್ನು ಆಶ್ರಯಿಸಿಕೊಂಡು ಇವೆಯೇ ಹೊರತು ಯಾರೂ ಈ ಸ್ವಭಾವವಾದವುಗಳಿಗೆ ಕಾರಣಕರ್ತರಾಗಿರುವುದಿಲ್ಲ.

ಪಶ್ಯನ್ ಪ್ರಹ್ಲಾದ ಸಂಯೋಗಾನ್ ವಿಪ್ರಯೋಗಪರಾಯಣಾನ್ ।
ಸಂಚಯಾಂಶ್ಚ ವಿನಾಶಾಂತಾನ್ನ ಕ್ವಚಿದ್ ವಿದಧೇ ಮನಃ ॥ ೧೨ ॥

ಪ್ರಹ್ಲಾದನೇ, ಕೆಲವೊಂದು ವಸ್ತುಗಳು ಕೂಡುವಿಕೆಗೆ ಸಿದ್ಧವಾಗಿವೆ. ಕೆಲವೊಂದು ವಸ್ತುಗಳು ಅಗಲುವಿಕೆಗೆ ಸಿದ್ಧವಾಗಿವೆ. ನಶ್ವರವಾದ ಈ ಜಗತ್ತಿನಲ್ಲಿ ನಾವು ಕೂಡಿಟ್ಟ ಭೌತಿಕ ಪದಾರ್ಥಗಳೆಲ್ಲವೂ ಇಂದಲ್ಲ ನಾಳೆ ನಾಶವನ್ನು ಹೊಂದುತ್ತವೆ. ಆದ್ದರಿಂದ ಯಾವುದರಲ್ಲಿಯೂ ನನ್ನ ಮನಸ್ಸನ್ನು ಸಂಯೋಜಿಸಿಕೊಂಡಿಲ್ಲ.

ಅಂತವಂತಿ ಚ ಭೂತಾನಿ ಗುಣಯುಕ್ತಾನಿ ಪಶ್ಯತಃ ।
ಉತ್ಪತ್ತಿನಿಧನಜ್ಞಸ್ಯ ಕಿಂ ಕಾರ್ಯಮವಶಿಷ್ಯತೇ ॥ ೧೩ ॥

ಗುಣಬದ್ಧವಾದ ಪ್ರತಿಯೊಂದು ಜಂತುವಿಗೂ ನಾಶವು ಸಿದ್ಧವಾಗಿದೆ. ಈ ಪ್ರಾಣಿಗಳ ಉತ್ಪತ್ತಿ-ವಿನಾಶಗಳನ್ನು ಚೆನ್ನಾಗಿ ಅರ್ಥೈಸಿಕೊಂಡ ನನಗೆ ಲೋಕದಲ್ಲಿ ನಡೆಸಬೇಕಾದ ಕಾರ್ಯ ಯಾವುದೂ ಉಳಿದಿರುವುದಿಲ್ಲ.

ಜಲಜಾನಾಮಪಿ ಹ್ಯಂತಂ ಪರ್ಯಾಯೇಣೋಪಲಕ್ಷಯೇ ।
ಮಹತಾಮಪಿ ಕಾಯಾನಾಂ ಸೂಕ್ಷ್ಮಾಣಾಂ ಚ ಮಹೋದಧೌ ॥ ೧೪ ॥

ಮಹೋದಧಿಯಲ್ಲಿ ಸಂಚರಿಸುವ ಮಹಾಪ್ರಾಣಿಗಳು, ಅತ್ಯಂತ ಸೂಕ್ಷ್ಮ ಪ್ರಾಣಿಗಳು ಅವುಗಳ ಆಯುಷ್ಯಕ್ಕೆ ತಕ್ಕಂತೆ ಸಾಯುವುದನ್ನು ನಾನು ಕಾಣುತ್ತಿದ್ದೇನೆ.

ಜಂಗಮಸ್ಥಾವರಾಣಾಂ ಚ ಭೂತಾನಾಮಸುರಾಧಿಪ ।
ಪಾರ್ಥಿವಾನಾಮಪಿ ವ್ಯಕ್ತಂ ಮೃತ್ಯುಂ ಪಶ್ಯಾಮಿ ಸರ್ವಶಃ ॥ ೧೫ ॥

ಈ ಪೃಥಿವಿಯಲ್ಲಿ ಇರುವ ಜಂಗಮಗಳಾಗಲೀ, ಸ್ಥಾವರಗಳಾಗಲೀ, ಸಮಸ್ತ ಭೂತಗಳಿಗಾಗಲೀ ಮೃತ್ಯುವು ನಿಶ್ಚಯ ಎಂಬುದನ್ನು ನಿತ್ಯವೂ ನಾವು ನೋಡುತ್ತಿದ್ದೇವೆ.

ಅಂತರಿಕ್ಷಚರಾಣಾಂ ಚ ದಾನವೋತ್ತಮ ಪಕ್ಷಿಣಾಮ್ ।
ಉತ್ತಿಷ್ಠತಿ ಯಥಾಕಾಲಂ ಮೃತ್ಯುರ್ಬಲವತಾಮಪಿ ॥ ೧೬ ॥

ಅಂತರಿಕ್ಷದಲ್ಲಿ ಸಂಚರಿಸುವ ಪಕ್ಷಿಗಳಿಗೂ, ದೇವ-ದಾನವರಿಗೂ ಆಯಾ ಕಾಲವನ್ನು ಅನುಸರಿಸಿ ಮೃತ್ಯುವು ಆಕ್ರಮಿಸುತ್ತದೆ. ಎಂತಹ ಬಲಾಢ್ಯರನ್ನೂ ಈ ಮೃತ್ಯುವು ಬಿಡುವುದಿಲ್ಲ.

ದಿವಿ ಸಂಚರಮಾಣಾನಿ ಹ್ರಸ್ವಾನಿ ಚ ಮಹಾಂತಿ ಚ ।
ಜ್ಯೋತೀಂಷಿ ಚ ಯಥಾಕಾಲಂ ಪತಮಾನಾನಿ ಲಕ್ಷಯೇ ॥ ೧೭ ॥

ಆಕಾಶದಲ್ಲಿ ಸಂಚರಿಸುವ ಸಣ್ಣ ಗಾತ್ರದ, ದೊಡ್ಡ ಗಾತ್ರದ ನಕ್ಷತ್ರಗಳು ಕಾಲವು ಪ್ರಾಪ್ತವಾದೊಡನೆ ಬಿದ್ದುಹೋಗುವುದನ್ನು ನಾವು ನೋಡುತ್ತಿರುವೆವು.

ಇತಿ ಭೂತಾನಿ ಸಂಪಶ್ಯನ್ನನುಪಕ್ತಾನಿ ಮೃತ್ಯುನಾ ।
ಸರ್ವಸಾಮಾನ್ಯತೋ ವಿದ್ವಾನ್ ಕೃತಕೃತ್ಯಃ ಸುಖಂ ಸ್ವಪೇ ॥ ೧೮ ॥

ಹೀಗೆ ಸಮಸ್ತ ಭೂತಗಳು ಸಮಾನವಾಗಿ ಮೃತ್ಯುವಿಗೆ ತುತ್ತಾಗುತ್ತಿರುವುದನ್ನು ತಿಳಿದ ನಾನು ಸಮಗ್ರ ಪ್ರಪಂಚವು ಒಂದೇ ವಿಧವಾದ ಜನನ-ಮರಣ ಸ್ವಭಾವವುಳ್ಳದ್ದನ್ನಾಗಿ ಅರ್ಥೈಸಿಕೊಂಡಿದ್ದೇನೆ. ಆದ್ದರಿಂದ ನನ್ನ ಕಾರ್ಯದಲ್ಲಿ ಕೃತಕೃತ್ಯನಾಗಿ ಪ್ರತಿದಿನವೂ ಸುಖವಾಗಿಯೇ ನಿದ್ರಿಸುತ್ತೇನೆ.

ಸುಮಹಾಂತಮಪಿ ಗ್ರಾಸಂ ಗ್ರಸೇ ಲಬ್ಧಂ ಯದೃಚ್ಛಯಾ ।
ಶಯೇ ಪುನರಭುಂಜಾನೋ ದಿವಸಾನಿ ಬಹೂನ್ಯಪಿ ॥ ೧೯ ॥

ಭಗವತ್ಸಂಕಲ್ಪದಂತೆ ಆಹಾರವು ದೊರಕಿದಾಗ ಅಂತಹ ಶ್ರೇಷ್ಠವಾದ ಆಹಾರವನ್ನು ಸ್ವೀಕರಿಸುತ್ತೇನೆ. ಆಹಾರವಿಲ್ಲದೆಯೇ ಹಲವು ದಿನಗಳಾದರೂ ಸುಮ್ಮನೆ ಇರುತ್ತೇನೆ. ಒಟ್ಟಿನಲ್ಲಿ ಸುಖವಾಗಿ ನಿದ್ರಿಸುತ್ತೇನೆ.

ಆಸ್ರವತ್ಯಪಿ ಮಾಮನ್ನಂ ಪುನರ್ಬಹುಗುಣಂ ಬಹು ।
ಪುನರಲ್ಪಗುಣಂ ಸ್ತೋಕಂ ಪುನರ್ನೈವೋಪಪದ್ಯತೇ ॥ ೨೦ ॥

ಕೆಲವರು ತಾವಾಗಿಯೇ ನನಗೆ ಮೃಷ್ಟಾನ್ನಗಳನ್ನು ತಂದು ನೀಡುತ್ತಾರೆ. ಕೆಲವೊಮ್ಮೆ ಸ್ವಲ್ಪ ತರುತ್ತಾರೆ. ಕೆಲವೊಮ್ಮೆ ಅನ್ನವೇ ದೊರಕುವುದಿಲ್ಲ.

ಕಣಾನ್ ಕದಾಚಿತ್ ಖಾದಾಮಿ ಪಿಣ್ಯಾಕಮಪಿ ಚ ಗ್ರಸೇ ।
ಭಕ್ಷಯೇ ಶಾಲಿಮಾಂಸಾನಿ ಭಕ್ಷಾಂಶ್ಚೋಚ್ಚಾವಚಾನ್ ಪುನಃ ॥ ೨೧ ॥

ಕೆಲವೊಮ್ಮೆ ಪುಡಿನುಚ್ಚುಗಳನ್ನೇ ತಿನ್ನುತ್ತೇನೆ. ಕೆಲವೊಮ್ಮೆ ಹಿಂಡಿಯನ್ನಾದರೂ ತಿನ್ನುತ್ತೇನೆ. ಕೆಲವೊಮ್ಮೆ ಶಾಲ್ಯನ್ನವನ್ನು ಉಣ್ಣುತ್ತೇನೆ. ಕೆಲವೊಮ್ಮೆ ಮಾಂಸವೂ ದೊರಕುವುದಿದೆ. ಒಮ್ಮೊಮ್ಮೆ ಹಲವು ಬಗೆಯ ಭಕ್ಷ್ಯಗಳು ಲಭಿಸುತ್ತವೆ. ಹೀಗೆ ದೈವಿಕವಾಗಿ ಸಿಗುವ ಶ್ರೇಷ್ಠ-ಕನಿಷ್ಠ ಆಹಾರಗಳನ್ನು ಸ್ವೀಕರಿಸಿ ತೃಪ್ತನಾಗಿದ್ದೇನೆ.

ಶಯೇ ಕದಾಚಿತ್ ಪರ್ಯಂಕೇ ಭೂಮಾವಪಿ ಪುನಃ ಶಯೇ ।
ಪ್ರಾಸಾದೇಽಪಿ ಚ ಮೇ ಶಯ್ಯಾ ಕದಾಚಿದುಪಪದ್ಯತೇ ॥ ೨೨ ॥

ಕೆಲವೊಮ್ಮೆ ಮಂಚದಲ್ಲಿ ಮಲಗುತ್ತೇನೆ, ಕೆಲವೊಮ್ಮೆ ಭೂಮಿಯಲ್ಲಿ ಮಲಗುತ್ತೇನೆ. ಕೆಲವು ವೇಳೆ ಉಪ್ಪರಿಗೆ ಮನೆಗಳಲ್ಲಿ ಮಲಗುತ್ತೇನೆ.

ಧಾರಯಾಮಿ ಚ ಚೀರಾಣಿ ಶಾಣಕ್ಷೌಮಾಜಿನಾನಿ ಚ ।
ಮಹಾರ್ಹಾಣಿ ಚ ವಾಸಾಂಸಿ ಧಾರಯಾಮ್ಯಹಮೇಕದಾ ॥ ೨೩ ॥

ನ ಸನ್ನಿಪತಿತಂ ಧರ್ಮ್ಯಮುಪಭೋಗಂ ಯದೃಚ್ಛಯಾ ।
ಪ್ರತ್ಯಾಚಕ್ಷೇ ನ ಚಾಪ್ಯೇನಮನುರುದ್ಧ್ಯೇ ಸುದುರ್ಲಭಮ್ ॥ ೨೪ ॥

ಕೆಲವೊಮ್ಮೆ ನಾರುಮಡಿಯನ್ನು ಉಟ್ಟುಕೊಳ್ಳುತ್ತೇನೆ. ಕೆಲವೊಮ್ಮೆ ಗೋಣಿಯ ವಸ್ತ್ರವನ್ನು ಧರಿಸುತ್ತೇನೆ. ಕೆಲವೊಮ್ಮೆ ರೇಷ್ಮೆ ವಸ್ತ್ರವನ್ನೂ, ಕೆಲವೊಮ್ಮೆ ಕೃಷ್ಣಾಜಿನವನ್ನೂ, ಕೆಲವೊಮ್ಮೆ ಅತ್ಯಂತ ಬೆಲೆಬಾಳುವ ವಸ್ತ್ರಗಳನ್ನೂ ಧರಿಸುತ್ತೇನೆ. ದೈವಿಕವಾಗಿ ಲಭಿಸಿದ ಯಾವ ವಸ್ತ್ರಗಳನ್ನೂ ನಾನು ನಿರಾಕರಿಸುವುದಿಲ್ಲ. ದುರ್ಲಭವಾದ ವಸ್ತುವಿಗೆ ಆಸೆಯನ್ನೂ ಪಡುವುದಿಲ್ಲ.

ಅಚಲಮನಿಧನಂ ಶಿವಂ ವಿಶೋಕಂ
ಶುಚಿಮತುಲಂ ವಿದುಷಾಂ ಮತೇ ನಿವಿಷ್ಟಮ್ ।
ಅನಭಿಮತಮಸೇವಿತಂ ಚ ಮೂಢೈ-
ರ್ವ್ರತಮಿದಮಾಜಗರಂ ಶುಚಿಶ್ಚರಾಮಿ ॥ ೨೫ ॥

ಈ ನನ್ನ ವ್ರತಕ್ಕೆ ಅಜಗರವ್ರತವೆಂದು ಹೆಸರು. ಇದಕ್ಕೆ ಎಂದೂ ನಾಶವಿಲ್ಲ. ಇದು ಸ್ಥಿರವಾಗಿರುವ, ಮಂಗಳಕರವಾದ, ಶೋಕರಹಿತವಾದ, ಶುದ್ಧವಾದ, ಅಸಮಾನವಾದ, ವಿದ್ವಾಂಸರಿಂದ ಅಭಿನಂದನೀಯವಾದ ವ್ರತವಾಗಿದೆ. ಮೂಢನಿಗೆ ಇದು ಅಸಮ್ಮತವಾಗಿ, ಅಸಾಧ್ಯವಾಗಿ ತೋರಬಹುದು. ನಾನು ಶುದ್ಧಮನಸ್ಸಿನಿಂದ ಈ ಅಜಗರ ವ್ರತವನ್ನು ಧರಿಸುತ್ತಿದ್ದೇನೆ.

ಅಚಲಿತಮತಿರಚ್ಯುತಃ ಸ್ವಧರ್ಮಾತ್
ಪರಿಮಿತಸಂಸರಣಃ ಪರಾವರಜ್ಞಃ ।

ವಿಗತಭಯಕಷಾಯಲೋಭಮೋಹೋ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥ ೨೬ ॥

ನಾನು ಸ್ಥಿರಚಿತ್ತನಾಗಿ, ಸ್ವಧರ್ಮಕ್ಕೆ ಚ್ಯುತಿಬಾರದಂತೆ, ಶೋಕ, ಮೋಹ, ಭಯ, ಕ್ರೋಧಗಳನ್ನೆಲ್ಲಾ ದಾಟಿ ಪರಿಮಿತವಾದ ವಸ್ತುಗಳಿಂದಲೇ ಜೀವನವನ್ನು ಸಾಗಿಸುತ್ತಾ ಸರ್ವೋತ್ತಮನಾದ ಭಗವಂತನನ್ನು, ಅಮರರಾದ ಜೀವರನ್ನು ಅರ್ಥೈಸಿಕೊಂಡು ಈ ಅಜಗರವ್ರತವನ್ನು ಶುದ್ಧನಾಗಿ ಆಚರಿಸುತ್ತಿದ್ದೇನೆ.

ಅನಿಯತಫಲಭಕ್ಷ್ಯಭೋಜ್ಯಪೇಯಂ
ವಿಧಿಪರಿಣಾಮವಿಭಕ್ತದೇಶಕಾಲಮ್ ।
ಹೃದಯಸುಖಮಸೇವಿತಂ ಕದರ್ಯೈ-
ರ್ವ್ರತಮಿದಮಾಜಗರಂ ಶುಚಿಶ್ಚರಾಮಿ ॥ ೨೭ ॥

ನನಗೆ ಹಣ್ಣು, ಭಕ್ಷ್ಯ, ಭೋಜ್ಯ, ಪಾನೀಯಗಳಲ್ಲಿ ಹೀಗೆ ಇರಬೇಕೆಂಬ ನಿಯಮವಿಲ್ಲ. ಎಲ್ಲವನ್ನೂ ವಿಧಿಪರಿಣಾಮವೆಂದೇ ತಿಳಿದು ಸ್ವೀಕರಿಸುತ್ತೇನೆ. ದೇಶ-ಕಾಲ ವಿಭೇದಗಳನ್ನು ಹಚ್ಚಿಕೊಳ್ಳುವುದಿಲ್ಲ. ಹೃದಯಕ್ಕೆ ಸುಖಕರವಾದ ಅಲ್ಪಮನಸ್ಸಿನ ಮನುಷ್ಯರಿಗೆ ಸೇವಿಸಲು ಅಸಾಧ್ಯವಾದ ಶುದ್ಧವಾದ ಈ ವ್ರತವನ್ನು ಶುಚಿಯಾಗಿ ಆಚರಿಸಿಕೊಂಡು ಬರುತ್ತಿದ್ದೇನೆ.

ಇದಮಿದಮಿತಿ ತೃಷ್ಣಯಾಭಿಭೂತಂ
ಜನಮನವಾಪ್ತಧನಂ ವಿಷೀದಮಾನಮ್ ।
ನಿಪುಣಮನುನಿಶಾಮ್ಯ ತತ್ತ್ವಬುದ್ಧ್ಯಾ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥ ೨೮ ॥

ಅತಿಯಾದ ಆಸೆಗೆ ತುತ್ತಾದ ಜನರು ನಮಗೆ ಇದು ಬೇಕು, ಅದು ಬೇಕು ಎಂದು ನಾನಾ ವಸ್ತುಗಳಿಗಾಗಿ ಆಸೆಯಿಂದ ದುಡಿಮೆಯನ್ನು ಮಾಡುತ್ತಾರೆ. ಇಷ್ಟ ವಸ್ತುವು ದೊರೆಯದಿದ್ದಾಗ ದುಃಖಿತರಾಗುತ್ತಾರೆ. ನಾನು ತೀಕ್ಷ್ಣವಾದ ಜ್ಞಾನದಿಂದ ಇವೆಲ್ಲವನ್ನೂ ಪರಿಶೀಲಿಸಿ ಅಜಗರವ್ರತವನ್ನು ಶುದ್ಧವಾಗಿ ಆಚರಿಸುತ್ತಿದ್ದೇನೆ.

ಬಹುವಿಧಮನುದೃಶ್ಯ ಚಾರ್ಥಹೇತೋಃ
ಕೃಪಣಮಿಹಾರ್ಯಮನಾರ್ಯಮಾಶ್ರಯಂತಮ್ ।

ಉಪಶಮರುಚಿರಾತ್ಮವಾನ್ ಪ್ರಶಾಂತೋ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥ ೨೯ ॥

ಧನದ ಮೋಹಕ್ಕೆ ತುತ್ತಾದ ಅಧಮಜನರು ಧನದ ಆಸೆಗಾಗಿ ಒಳ್ಳೆಯವರು ಕೆಟ್ಟವರು ಎಂಬ ಭೇದವನ್ನೇ ತಿಳಿಯದೆ ಅವರನ್ನು ಆಶ್ರಯಿಸುತ್ತಿರುವುದನ್ನು ನೋಡಿದ ನನಗೆ ಅಂತಹ ಕ್ರಿಯೆಗಳಿಂದ ಜಿಗುಪ್ಸೆ ಉಂಟಾಗಿ ಕೇವಲ ಶಾಂತಿಯಲ್ಲಿಯೇ ಆಸಕ್ತಿ ಹುಟ್ಟಿರುವುದು. ಆದ್ದರಿಂದ ಪರಮಾತ್ಮನ ಪ್ರಜ್ಞೆಯಿಂದಲೇ ಈ ಅಜಗರ ವ್ರತವನ್ನು ಆಚರಿಸುತ್ತಿದ್ದೇನೆ.

ಸುಖಮಸುಖಮನರ್ಥಮರ್ಥಲಾಭಂ
ರತಿಮರತಿಂ ಮರಣಂ ಚ ಜೀವಿತಂ ಚ ।
ವಿಧಿನಿಯತಮವೇಕ್ಷ್ಯ ತತ್ತ್ವತೋऽಹಂ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥ ೩೦ ॥

ಸುಖ-ದುಃಖಗಳು, ಪದಾರ್ಥಗಳ ಲಾಭ-ನಷ್ಟಗಳು, ಪ್ರಿಯ-ಅಪ್ರಿಯಗಳು, ಜೀವಿತ-ಮರಣಗಳು ಇವೆಲ್ಲವೂ ವಿಧಿನಿಯಮ ಎಂಬುದನ್ನು ತತ್ವದೃಷ್ಟಿಯಿಂದ ತಿಳಿದಿರುವ ನಾನು ಈ ಅಜಗರವ್ರತವನ್ನು ಶುಚಿಯಾಗಿ ಆಚರಿಸುತ್ತಿದ್ದೇನೆ.

ಉಪಗತಭಯರಾಗಮೋಹದರ್ಪೋ
ಧೃತಿಮತಿಬುದ್ಧಿಸಮನ್ವಿತಃ ಪ್ರಶಾಂತಃ ।
ಉಪಗತಫಲಭೋಗಿನೋ ನಿಶಾಮ್ಯ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥ ೩೧ ॥

ರಾಗ-ಮೋಹ-ಭಯ-ದರ್ಪಾದಿಗಳನ್ನು ಬಿಟ್ಟು ಧೈರ್ಯವನ್ನು, ದೃಢ ಬುದ್ಧಿಯನ್ನು, ಸದ್ವಿವೇಚನೆಯನ್ನು ಹೊಂದಿದ ನಾನು ಶಾಂತನಾಗಿದ್ದೇನೆ. ಹೆಬ್ಬಾವುಗಳು ತಮ್ಮ ಬಳಿ ಬಂದ ಪ್ರಾಣಿಗಳನ್ನು ಮಾತ್ರ ಭೋಗಿಸುತ್ತವೆ. ತಾವಾಗಿಯೇ ಆಹಾರಕ್ಕಾಗಿ ಸಂಚರಿಸುವುದಿಲ್ಲ ಎಂಬ ವಿಚಾರವನ್ನು ತಿಳಿದು ಅವುಗಳಂತೆ ಬದುಕಬೇಕೆಂದು ಈ ಅಜಗರವ್ರತವನ್ನು ಆಶ್ರಯಿಸಿ ಈ ವ್ರತದಲ್ಲಿ ಸಂಚರಿಸುತ್ತಿದ್ದೇನೆ.

ಅನಿಯತಶಯನಾಸನಃ ಪ್ರಕೃತ್ಯಾ
ದಮನಿಯಮವ್ರತಸತ್ಯಶೌಚಯುಕ್ತಃ ।

ಅಪಗತಫಲಸಂಚಯಃ ಪ್ರಹೃಷ್ಟೋ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥ ೩೨ ॥

ನನಗೆ ಹಾಸಿಗೆ, ಆಸನ ಈ ರೀತಿಯಾಗಿ ಇರಬೇಕೆಂಬ ನಿಯಮವಿಲ್ಲ. ಸಹಜವಾಗಿಯೇ ದಮ, ನಿಯಮ, ಸತ್ಯ, ಶೌಚ ಮುಂತಾದ ವ್ರತಗಳನ್ನು ಆಶ್ರಯಿಸಿ ಕರ್ಮಫಲಗಳನ್ನು ಗಳಿಸಬೇಕೆಂಬ ಆಸೆಯೂ ಇಲ್ಲದೆ ಸಂತುಷ್ಟಚಿತ್ತನಾಗಿ ಈ ವ್ರತವನ್ನು ಆಚರಿಸುತ್ತಿರುವೆನು.

ಅಭಿಗತಮಸುಖಾರ್ಥಮೀಹನಾರ್ಥೈ-
ರುಪಗತಬುದ್ಧಿರವೇಕ್ಷ್ಯ ಚಾತ್ಮಸಂಸ್ಥಃ ।
ತೃಷಿತಮನಿಯತಂ ಮನೋ ನಿಯಂತುಂ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥ ೩೩ ॥

ಮನಸ್ಸು ಬಾಹ್ಯವಾದ ಕಾಮನೆಗಳಿಗೆ ಆಸಕ್ತಿಯನ್ನು ತೋರುತ್ತದೆ. ಆತ್ಮತತ್ವವನ್ನು ಅರಿಯದೆ ಪುತ್ರ-ಮಿತ್ರ-ಕಳತ್ರಾದಿಗಳಲ್ಲಿ ಆಸಕ್ತವಾಗಿ ದುಃಖಕ್ಕೆ ತುತ್ತಾಗುತ್ತದೆ. ಬಯಕೆಗಳ ಅಧೀನವಾಗಿ ಸಾಗುವ ಚಂಚಲವಾದ ಮನಸ್ಸು ಅಸ್ಥಿರವೆನಿಸಿದೆ. ಅಂತಹ ಮನಸ್ಸಿನ ಸ್ಥಿತಿಯನ್ನು ನೋಡಿ ವಿವೇಕದಿಂದ ಆ ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸಲು ಈ ಅಜಗರವ್ರತವನ್ನು ಆಚರಿಸುತ್ತಿದ್ದೇನೆ.

ನ ಹೃದಯಮನುರುದ್ಧ್ಯತೇ ಮನೋ ವಾ
ಪ್ರಿಯಸುಖದುರ್ಲಭತಾಮನಿತ್ಯತಾಂ ಚ ।
ತದುಭಯಮುಪಲಕ್ಷಯನ್ನಿವಾಹಂ
ವ್ರತಮಿದಮಾಜಗರಂ ಶುಚಿಶ್ಚರಾಮಿ ॥ ೩೪ ॥

ನನ್ನ ಮನಸ್ಸು ಹೃದಯದಲ್ಲಿರುವ ಪರಮಾತ್ಮನನ್ನು ಧ್ಯಾನಿಸುತ್ತಿರುವುದರಿಂದ ವಿಷಯ ಭೋಗಾದಿಗಳಿಂದ ತಡೆಯನ್ನು ಹೊಂದುತ್ತಿಲ್ಲ. ನಾವು ಬಯಸುವ ಸುಖಗಳು ಅನೇಕ ಬಾರಿ ದುರ್ಲಭವೂ ಅನಿತ್ಯವೂ ಆಗಿರುತ್ತವೆ ಎಂಬುದನ್ನು ತಿಳಿದೇ ನಾನು ಈ ಅಜಗರವ್ರತವನ್ನು ಆಚರಿಸುತ್ತಿರುವೆನು.

ಅಸುಲಭಮುಪಗಮ್ಯ ಚಾರ್ಥಲಾಭಂ
ಧೃತಿಮತಿಬುದ್ಧಿಪರಾಕ್ರಮೈರುಪೇತಮ್

ಬುಧಮನುಜನಿಷೇವಿತಂ ಸಮರ್ಥೈ-
ರ್ವ್ರತಮಿದಮಾಜಗರಂ ಶುಚಿಶ್ಚರಾಮಿ ॥ ೩೫ ॥

ಅರ್ಥಪ್ರಾಪ್ತಿಯು ತುಂಬಾ ದುಃಖದಿಂದ ಕೂಡಿದೆ ಎಂಬುದನ್ನು ಅರ್ಥ ಮಾಡಿಕೊಂಡಿರುವ ನಾನು ಧೈರ್ಯದ ಬುದ್ಧಿಯಿಂದ ಅವಲಂಬಿತವಾದ ಪರಾಕ್ರಮದಿಂದ ಕೂಡಿರುವ ಜ್ಞಾನಿಗಳು ಸೇವಿಸುವ ಈ ಅಜಗರವ್ರತವನ್ನು ಸಮರ್ಥವಾಗಿ ಆಚರಿಸುತ್ತಿದ್ದೇನೆ.

ಬಹು ಕಥಿತಮಿದಂ ಹಿ ಬುದ್ಧಿಮದ್ಭಿಃ
ಕವಿಭಿರಭಿಪ್ರಥಯದ್ಭಿರಾತ್ಮಕೀರ್ತಿಮ್ ।
ಇದಮಿದಮಿತಿ ತತ್ರ ತತ್ರ ತತ್ತತ್
ಸ್ವಪರಮತೈರ್ಗಹನಂ ಪ್ರತರ್ಕಯದ್ಭಿಃ ॥ ೩೬ ॥

ಪ್ರಹ್ಲಾದನೇ, ಲೋಕದಲ್ಲಿ ಮಹಾಧೀಮಂತರಾದ ದೂರದೃಷ್ಟಿಯುಳ್ಳ ವಿದ್ವಾಂಸರು ಕೀರ್ತಿಯ ಉದ್ದೇಶದಿಂದ ತಮ್ಮ ಮತಗಳನ್ನು ಸ್ಥಾಪಿಸಲು, ಪರಮತಗಳನ್ನು ನಿಂದಿಸಲು ಅನೇಕ ತರ್ಕಗಳನ್ನು ಮಾಡುತ್ತಾರೆ. ಅರ್ಥವಾಗದೆ ಇರುವ ವಿಷಯಗಳಲ್ಲಿ ತರ್ಕಿಸುತ್ತಾ ಕಲಹದಿಂದ ಕೂಡಿರುವ ಕ್ಲೇಶದಾಯಕವಾದ ಕರ್ಮವನ್ನೂ ಮಾಡುತ್ತಿರುತ್ತಾರೆ. ನಾನಾದರೂ ಸಮಸ್ತ ದೋಷನಿವಾರಕವಾದ ಇಂತಹ ವ್ರತವನ್ನು ಆಶ್ರಯಿಸಿ ಸುಖವಾಗಿದ್ದೇನೆ.

ತದಹಮನುನಿಶಾಮ್ಯ ವಿಪ್ರಯಾತಃ
ಪೃಥಗಭಿಪನ್ನಮಿಹಾಬುಧೈರ್ಮನುಷ್ಯೈಃ ।
ಅನವಸಿತಮನಂತದೋಷಪಾರಂ
ನೃಷು ವಿಹರಾಮಿ ವಿನೀತರೋಷತೃಷ್ಣಃ ॥ ೩೭ ॥

ನಾನಾದರೂ ಈ ವ್ರತವು ಅಜ್ಞಾನನಿವಾರಕವಾದುದೆಂದು ತಿಳಿದು, ಅಜ್ಞಾನಿ ಜನರಿಗೆ ಈ ವಿಚಾರಗಳು ಬೇರೆ ವಿಧವಾಗಿ ತಿಳಿಯುತ್ತವೆಂದು ನಿಶ್ಚಯಿಸಿಕೊಂಡು ಸಮಸ್ತ ದೋಷಗಳನ್ನು ನಿವಾರಿಸುವ ಈ ಅಜಗರವ್ರತವನ್ನು ಶಾಶ್ವತವೆಂದು ತಿಳಿದು ರೋಷ-ತೃಷ್ಣಾದಿ ದೋಷಗಳಿಗೆ ತುತ್ತಾಗದೆ ಇದನ್ನು ಆಶ್ರಯಿಸಿ ಮನುಷ್ಯರ ಮಧ್ಯದಲ್ಲಿಯೇ ಸುಖವಾಗಿ ವಿಹರಿಸುತ್ತೇನೆ.

ಭೀಷ್ಮಃ

ಅಜಗರಚರಿತಂ ವ್ರತಂ ಮಹಾತ್ಮಾ
ಯ ಇಹ ನರೋಽನುಚರೇದ್ ವಿನೀತರಾಗಃ ।
ಅಪಗತಭಯಮನ್ಯುಲೋಭಮೋಹಃ
ಸ ಖಲು ಸುಖೀ ವಿಹರೇದಿಮಂ ವಿಹಾರಮ್ ॥ ೩೮ ॥

ಭೀಷ್ಮ– ಧರ್ಮರಾಜನೇ, ಈ ಅಜಗರ ಚರಿತ್ರೆಯನ್ನು ಭೂಮಿಯಲ್ಲಿ ಯಾರು ರಾಗ-ದ್ವೇಷಗಳಿಲ್ಲದೆ ಅನುಸರಿಸುತ್ತಾರೋ ಅವರು ಅಜಗರಮುನಿಯಂತೆ ಭಯ-ಲೋಭಾದಿಗಳಿಗೆ ತುತ್ತಾಗದೆ ಸುಖವಾಗಿ ವಿಹರಿಸುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಐದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಆರನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಪ್ರಜ್ಞೆಯೇ ಸುಖಸಾಧನಕ್ಕೆ ಕಾರಣವೆಂದು ತಿಳಿಸಲು ಶೃಗಾಲ-ಕಾಶ್ಯಪರ ಸಂವಾದವನ್ನು ಉದಾಹರಿಸಿದುದು.

ಯುಧಿಷ್ಠಿರಃ

ಬಾಂಧವಾಃ ಕರ್ಮ ವಿತ್ತಂ ವಾ ಪ್ರಜ್ಞಾ ವೇಹ ಪಿತಾಮಹ ।
ನರಸ್ಯ ಕಾ ಪ್ರತಿಷ್ಠಾ ಸ್ಯಾದೇತತ್ ಪೃಷ್ಟೋ ವದಸ್ವ ಮೇ ॥ ೧ ॥

ಯುಧಿಷ್ಠಿರ– ಪಿತಾಮಹನೇ, ಮನುಷ್ಯನಿಗೆ ಮುಖ್ಯವಾದ ಆಶ್ರಯವು ಯಾವುದು? ಬಂದುಗಳೇ, ಧರ್ಮವೇ, ಧನವೇ ಅಥವಾ ಅವನ ಪ್ರಜ್ಞೆಯೇ? ಇದರ ಬಗ್ಗೆ ನನಗೆ ತಿಳಿಸು.

ಭೀಷ್ಮಃ

ಪ್ರಜ್ಞಾ ಪ್ರತಿಷ್ಠಾ ಭೂತಾನಾಂ ಪ್ರಜ್ಞಾ ಲಾಭಃ ಪರೋ ಮತಃ ।
ಪ್ರಜ್ಞಾ ನೈಃಶ್ರೇಯಸೀ ಲೋಕೇ ಪ್ರಜ್ಞಾ ಸ್ವರ್ಗೋ ಮತಃ ಸತಾಮ್ ॥೨॥

ಭೀಷ್ಮ- ಕುಮಾರನೇ, ಪ್ರಜ್ಞೆಯೇ ಪ್ರಾಣಿಗಳಿಗೆ ಮುಖ್ಯವಾದ ಆಶ್ರಯವು. ಪ್ರಜ್ಞೆಯೇ ಪರಮಲಾಭವು. ಪ್ರಜ್ಞೆಯೇ ಪರಮಶ್ರೇಯಸ್ಸು. ಪ್ರಜ್ಞೆಯೇ ಸಜ್ಜನರಿಗೆ ಸಮ್ಮತವಾದ ಸ್ವರ್ಗವು.

ಪ್ರಜ್ಞಯಾ ಪ್ರಾಪಿತಾರ್ಥೋ ಹಿ ಬಲಿರೈಶ್ವರ್ಯಸಂಕ್ಷಯೇ ।
ಪ್ರಹ್ಲಾದೋ ನಮುಚಿರ್ಮಂಕಿಸ್ತಸ್ಯಾಃ ಕಿಂ ವಿದ್ಯತೇ ಪರಮ್ ॥ ೩ ॥

ಹಿಂದೆ ಬಲಿಚಕ್ರವರ್ತಿ, ಪ್ರಹ್ಲಾದ, ನಮುಚಿ, ಮಂಕಿ ಮುಂತಾದ ಮಹಾತ್ಮರೆಲ್ಲರೂ ತಮ್ಮ ಐಶ್ವರ್ಯವೆಲ್ಲವೂ ನಾಶಹೊಂದಿದಾಗ ಪ್ರಜ್ಞೆಯಿಂದಲೇ ತಮ್ಮ ಇಷ್ಟಾರ್ಥವನ್ನು ಪಡೆದಿದ್ದಾರೆ. ಪ್ರಜ್ಞೆಗಿಂತ ಶ್ರೇಷ್ಠವಾದುದು ಮತ್ತೊಂದಿಲ್ಲ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಇಂದ್ರಕಾಶ್ಯಪಸಂವಾದಂ ತನ್ನಿಬೋಧ ಯುಧಿಷ್ಠಿರ ॥ ೪ ॥

ಯುಧಿಷ್ಠಿರನೇ, ಇದೇ ವಿಷಯದಲ್ಲಿ ಹಿಂದೆ ಕಶ್ಯಪನಿಗೂ, ಇಂದ್ರನಿಗೂ ನಡೆದ ಸಂವಾದ ರೂಪವಾದ ಇತಿಹಾಸವನ್ನು ಉದಾಹರಿಸುತ್ತಾರೆ. ಅದನ್ನು ಹೇಳುತ್ತೇನೆ, ಕೇಳು.

ವೈಶ್ಯಃ ಕಶ್ಚಿದೃಷಿಂ ತಾತ ಕಾಶ್ಯಪಂ ಸಂಶಿತವ್ರತಮ್ ।
ರಥೇನ ಪಾತಯಾಮಾಸ ಶ್ರೀಮಾನ್ ದೃಪ್ತಸ್ತಪಸ್ವಿನಮ್ ॥ ೫ ॥

ಒಬ್ಬ ಮಹಾಧನಿಕನಾದ ವೈಶ್ಯನಿದ್ದನು. ಅವನು ತನ್ನ ಐಶ್ವರ್ಯಮದದಿಂದ ಕೊಬ್ಬಿ ತನ್ನ ರಥವನ್ನು ಓಡಿಸುತ್ತಿರುವಾಗ ಅಜಾಗ್ರತೆಯಿಂದ ಮಹಾತಪಸ್ವಿಯಾದ ಕಾಶ್ಯಪನೆಂಬ ಋಷಿಕುಮಾರನ ಮೇಲೆ ರಥವನ್ನು ಚಲಾಯಿಸಿದನು.

ಆರ್ತಃ ಸ ಪತಿತಃ ಕ್ರುದ್ಧಸ್ತ್ಯಕ್ತ್ವಾ ತ್ವಾನಮಥಾಬ್ರವೀತ್ ।
ಮರಿಷ್ಯಾಮ್ಯಧನಸ್ಯೇಹ ಜೀವಿತಾರ್ಥೋ ನ ವಿದ್ಯತೇ ॥ ೬ ॥

ಇದರಿಂದ ದುಃಖಿತನಾಗಿ ಆ ಬಡಬ್ರಾಹ್ಮಣನು ಕೆಳಗೆ ಬಿದ್ದನು. ತನ್ನ ಸ್ಥಿತಿಗಾಗಿ ದುಃಖ-ಕೋಪಗಳಿಂದ ಕುದಿಯುತ್ತಾ ಮುಂದೆ ತನ್ನ ಬದುಕಿನಲ್ಲಿ ಆಸೆಯನ್ನು ಬಿಟ್ಟು ಅಳಲಾರಂಭಿಸಿದನು. ಲೋಕದಲ್ಲಿ ನನ್ನಂತೆ ದರಿದ್ರನಿಗೆ ಬದುಕಿನಿಂದ ಏನೂ ಪ್ರಯೋಜನವಿಲ್ಲ. ನಾನು ಬದುಕಿ ಏನಾಗಬೇಕು? ನಾನು ಪ್ರಾಣತ್ಯಾಗ ಮಾಡುತ್ತೇನೆ.

ತಥಾ ಮುಮೂರ್ಷುಮಾಸೀನಮಕೂಜಂತಮಚೇತಸಮ್ ।
ಇಂದ್ರಃ ಶೃಗಾಲರೂಪೇಣ ಬಭಾಷೇ ಕ್ರುದ್ಧಮಾನಸಮ್ ॥ ೭ ॥

ಪ್ರಜ್ಞೆ ತಪ್ಪಿ ನೆಲದಲ್ಲಿ ಬಿದ್ದು ಮಾತನಾಡಲಾಗದೆ ಸಾಯುವ ಸ್ಥಿತಿಯಲ್ಲಿದ್ದ ಬ್ರಾಹ್ಮಣನ ದುರವಸ್ಥೆಯನ್ನು ಕಂಡು ಇಂದ್ರನು ಒಂದು ನರಿ ರೂಪದಿಂದ ಬಂದು ಕ್ರುದ್ಧ ಮನಸ್ಸಿನಿಂದ ಕೂಡಿರುವ ಬ್ರಾಹ್ಮಣನನ್ನು ಕುರಿತು ಹೀಗೆ ಹೇಳಿದನು.

ಮನುಷ್ಯಯೋನಿಮಿಚ್ಛಂತಿ ಸರ್ವಭೂತಾನಿ ಸರ್ವಶಃ ।
ಮನುಷ್ಯತ್ವೇ ಚ ವಿಪ್ರತ್ವಂ ಸರ್ವ ಏವಾಭಿನಂದತಿ ॥ ೮ ॥

ಬ್ರಾಹ್ಮಣನೇ, ಎಲ್ಲಾ ಪ್ರಾಣಿಗಳು ಲೋಕದಲ್ಲಿ ಹೇಗಾದರೂ ತಮಗೆ ಮನುಷ್ಯ ಜನ್ಮವು ಬಂದರೆ ಸಾಕೆಂದು ಬಯಸುತ್ತವೆ. ಅದರಲ್ಲಿಯೂ ನಿನ್ನಂತೆ ಬ್ರಾಹ್ಮಣಜನ್ಮಕ್ಕೆ ಎಲ್ಲರೂ ಆಸೆಪಡುತ್ತಾರೆ.

ಮನುಷ್ಯೋ ಬ್ರಾಹ್ಮಣಶ್ಚಾಸಿ ಶ್ರೋತ್ರಿಯಶ್ಚಾಸಿ ಕಾಶ್ಯಪ ।
ಸುದುರ್ಲಭಮವಾಪ್ಯೈತದದೋಷಾನ್ ಮರ್ತುಮಿಚ್ಛಸಿ ॥ ೯ ॥

ಎಲೈ ಕಾಶ್ಯಪನೇ, ನೀನು ಬ್ರಾಹ್ಮಣನಾಗಿ ಹುಟ್ಟಿರುವಿ. ಬ್ರಾಹ್ಮಣರಲ್ಲಿಯೂ ಶ್ರೋತ್ರಿಯನೆನಿಸಿರುವೆ. ಇಂತಹ ದುರ್ಲಭವಾದ ಜನ್ಮವನ್ನು ಪಡೆದಿರುವ ನೀನು ಬುದ್ಧಿಗೆಟ್ಟು, ಬಡತನದ ಜೀವನವೇ ಬೇಡವೆಂದು ಹೇಳಿ ಸಾಯುವುದಕ್ಕೆ ಆಸೆಪಡುತ್ತಿರುವಿಯಲ್ಲ!

ಸರ್ವೇ ಲಾಭಾಃ ಸಾಭಿಮಾನಾ ಇತಿ ಸತ್ಯಾ ಬತ ಶ್ರುತಿಃ ।
ಸಂತೋಷಣೀಯರೂಪೋಽಸಿ ಲೋಭಾದ್ ಯದಭಿಮನ್ಯಸೇ ॥ ೧೦ ॥

ಲೋಕದಲ್ಲಿ ಎಲ್ಲ ರೀತಿಯ ಲಾಭಗಳು ಅಭಿಮಾನದ ದೋಷಕ್ಕೆ ತುತ್ತಾಗುತ್ತದೆ ಎಂಬ ಶ್ರುತಿವಾಕ್ಯವು ಸತ್ಯವಾದುದು. ನಿನಗಾದರೂ ಅಭಿಮಾನವೇ ಇಲ್ಲದಂತಿದೆ. ನೀನು ಅಭಿಮಾನವನ್ನು ಹೊಂದಿದವನಾಗಿದ್ದಲ್ಲಿ ಅತ್ಯಂತ ಸಂತೋಷವನ್ನು ಪಡೆಯುವ ಸ್ಥಿತಿಯನ್ನು ಹೊಂದುತ್ತಿ.

ಅಹೋ ಸಿದ್ಧಾರ್ಥತಾ ತೇಷಾಂ ಯೇಷಾಂ ಸಂತೀಹ ಪಾಣಯಃ ।
ಪಾಣಿಮದ್ಭ್ಯಃ ಸ್ಪೃಹಾಸ್ಮಾಕಂ ಯಥಾ ತವ ಧನಸ್ಯ ವೈ ॥ ೧೧ ॥

ಓ ಬ್ರಾಹ್ಮಣ! ನನ್ನ ಸ್ಥಿತಿಯನ್ನು ನೋಡು. ನನಗೆ ಕೈಗಳಿಲ್ಲ. ಲೋಕದಲ್ಲಿ ಕೈಯುಳ್ಳವರ ಭಾಗ್ಯವು ನನಗೆ ಬರಬಾರದೆ ಎಂದು ಎಷ್ಟೋ ಬಾರಿ ಆಸೆಪಟ್ಟಿದ್ದೇನೆ. ನಾಲ್ಕು ಕಾಲುಳ್ಳ ಪ್ರಾಣಿಗಳಿಗೆ ಪುರುಷರಂತೆ ಕೈಗಳು ಬೇಕು ಎಂಬ ಅಪೇಕ್ಷೆಯು ಯಾವಾಗಲೂ ಇರುತ್ತದೆ. ನೀನು ಹಣಕ್ಕಾಗಿ ಎಷ್ಟು ಆಸೆಪಡುತ್ತೀಯೋ ಅದಕ್ಕಿಂತಲೂ ಅಧಿಕವಾದ ಆಸೆಯು ನನಗೆ ಕೈಗಳು ಸಿಗಬೇಕೆಂದು ಇದೆ.

ನ ಪಾಣಿಲಾಭಾದಧಿಕೋ ಲಾಭಃ ಕಶ್ಚನ ವಿದ್ಯತೇ ।
ಅಪಾಣಿತ್ವಾದ್ವಯಂ ಬ್ರಹ್ಮನ್ ಕಂಟಕಾನ್ನೋದ್ಧರಾಮಹೇ ॥ ೧೨ ॥

ಲೋಕದಲ್ಲಿ ಕೈಗಳನ್ನು ಪಡೆಯುವುದಕ್ಕಿಂತ ಅಧಿಕವಾದ ಲಾಭವು ಬೇರೆ ಇರುವುದಿಲ್ಲ. ನಮಗೆ ಕೈಗಳು ಇಲ್ಲದಿದುದರಿಂದ ಕಾಲಿನಲ್ಲಿ ಸಿಕ್ಕಿದ ಮುಳ್ಳುಗಳನ್ನು ಕಿತ್ತಿಕೊಳ್ಳಲಾರೆವು.

ಅಥ ಯೇಷಾಂ ಪುನಃ ಪಾಣೇ ದೇವದತ್ತೌ ದಶಾಂಗುಲೀ ।
ಉದ್ಧರಂತಿ ಕೃಮೀನಂಗಾದ್ದಶಮಾನಾನ್ ಕಷಂತಿ ಚ ॥ ೧೩ ॥

ಯಾರಿಗೆ ಕೈಗಳಿವೆಯೋ ಅವರು ತಮ್ಮ ಕೈಗಳಿಂದ ದೇವದತ್ತವಾದ ಹತ್ತು ಬೆರಳುಗಳಿಂದ ದೇಹಕ್ಕೆ ಅಂಟಿದ ಕ್ರಿಮಿಗಳನ್ನು, ಕಚ್ಚುವ ಕೀಟಗಳನ್ನು ಕಿತ್ತಿ ತೆಗೆಯಬಹುದು. ನಮಗೆ ಕೈಗಳಿಲ್ಲದೆ ಇರುವುದರಿಂದ ಆ ಅದೃಷ್ಟವು ಇರುವುದಿಲ್ಲ.

ಹಿಮವರ್ಷಾತಪಾನಾಂ ಚ ಪರಿತ್ರಾಣಾನಿ ಕುರ್ವತೇ ।
ಚೇಲಮನ್ನಂ ಸುಖಂ ಶಯ್ಯಾಂ ನಿವಾತಂ ಚೋಪಭುಂಜತೇ ॥ ೧೪ ॥

ಚಳಿ, ಮಳೆ, ಬಿಸಿಲು ಇವುಗಳ ಬಾಧೆ ಇಲ್ಲದಂತೆ ಆಚ್ಛಾದನೆಗಳನ್ನು ಕೈಗಳಿಂದ ನಿರ್ಮಿಸಿಕೊಳ್ಳಬಹುದು. ಒಳ್ಳೆಯ ಬಟ್ಟೆಗಳನ್ನುಡಬಹುದು. ಮೃಷ್ಟಾನ್ನವನ್ನು ತಯಾರಿಸಿ ಉಣ್ಣಬಹುದು. ಒಳ್ಳೆಯ ಹಾಸಿಗೆಯನ್ನು, ಉತ್ತಮ ನಿವಾಸಗಳನ್ನು ಮಾಡಿಕೊಂಡು ಸುಖವನ್ನು ಅನುಭವಿಸಬಹುದು.

ಅಧಿಷ್ಠಾಯ ಚ ಗಾಂ ಲೋಕೇ ಭುಂಜತೇ ವಾಹಯಂತಿ ಚ ।
ಉಪಾಯೈರ್ಬಹುಭಿಶ್ಚೈವ ವಶ್ಯಾನಾತ್ಮನಿ ಕುರ್ವತೇ ॥ ೧೫ ॥

ಹಸುಗಳ ಹಾಲನ್ನು ಕರೆದುಕೊಂಡು ಕುಡಿಯಬಹುದು. ಇತರ ಮೃಗಗಳಿಂದ ಅನುಭವಿಸಬಹುದಾದ ಸುಖಗಳನ್ನೂ ಅನುಭವಿಸಬಹುದು. ಅವುಗಳ ಮೇಲೆ ಏರಿ ನಡೆಯಬಹುದು. ಭಾರವನ್ನು ಹೊರಿಸಬಹುದು. ಬಂಡಿಗಳನ್ನು ಎಳೆಸಬಹುದು.

ಯೇ ಖಿಲ್ವಜಿಹ್ವಾಃ ಕೃಪಣಾ ಅಲ್ಪಪ್ರಾಣಾ ಅಪಾಣಯಃ ।
ಸಹಂತೇ ತಾನಿ ದುಃಖಾನಿ ದಿಷ್ಟ್ಯಾ ತ್ವಂ ನ ತಥಾ ಮುನೇ ॥ ೧೬ ॥

ಇಂತಹ ಸೌಕರ್ಯಗಳಿಲ್ಲದ ನನ್ನಂತಹವರಿಗೆ ಯಾವ ಸುಖವಿದೆ? ಮಾತನಾಡಲು ನಾಲಿಗೆಯಿಲ್ಲ, ಕೆಲಸ ಮಾಡಲು ಕೈಗಳಿಲ್ಲ, ನನ್ನಂತಹ ಬಡಜಂತುಗಳು ಇಂತಹ ದುಃಖಗಳನ್ನು ಸಹಿಸಿಕೊಂಡಿರಬೇಕಲ್ಲವೆ! ಭಾಗ್ಯವಶದಿಂದ ನಿನಗೆ ಆ ಸ್ಥಿತಿಯಿಲ್ಲ. ಅದೃಷ್ಟದಿಂದ ಮನುಷ್ಯನಾಗಿ ಹುಟ್ಟಿರುವಿ.

ದಿಷ್ಟ್ಯಾ ತ್ವಂ ನ ಸೃಗಾಲೋ ವೈ ನ ಕೃಮಿರ್ನ ಚ ಮೂಷಕಃ ।
ನ ಸರ್ಪೋ ನ ಚ ಮಂಡೂಕೋ ನ ಚಾನ್ಯಃ ಪಾಪಯೋನಿಜಃ ॥ ೧೭॥

ದುರದೃಷ್ಟದಿಂದ ನೀನು ನರಿಯಾಗಿ ಹುಟ್ಟಲಿಲ್ಲ. ಕ್ರಿಮಿಯಾಗಿ ಹುಟ್ಟಲಿಲ್ಲ. ಹಾವು, ಕಪ್ಪೆ ಮುಂತಾಗಿ ಪಾಪಯೋನಿಗಳಲ್ಲಿ ಹುಟ್ಟುವ ಜಂತುವಾಗಿಯೂ ಹುಟ್ಟಲಿಲ್ಲ.

ಏತಾವತಾಪಿ ಲಾಭೇನ ತೋಷ್ಟುಮರ್ಹಸಿ ಕಾಶ್ಯಪ ।
ಕಿಂ ಪುನರ್ಯೋಽಸಿ ಸತ್ತ್ವಾನಾಂ ಸರ್ವೇಷಾಂ ಬ್ರಾಹ್ಮಣೋತ್ತಮಃ॥೧೮॥

ಎಲೈ ಕಾಶ್ಯಪನೇ, ನಿನಗೆ ಲಭಿಸಿರುವ ಭಾಗ್ಯಕ್ಕೆ ನೀನು ಎಷ್ಟು ಸಂತೋಷಪಡಬೇಕಿದೆ! ಅದರಲ್ಲಿಯೂ ನೀನು ಬ್ರಾಹ್ಮಣನಾಗಿ ಜನ್ಮವನ್ನು ತಾಳಿರುವಿ. ಇದಕ್ಕೆ ಎಷ್ಟು ಸಂತೋಷ ಹೊಂದಿದರೂ ಸಾಲದು.

ಇಮೇ ಮಾಂ ಕೃಮಯೋಽದಂತಿ ತೇಷಾಮುದ್ಧರಣಾಯ ಮೇ ।
ನಾಸ್ತಿ ಶಕ್ತಿರಪಾಣಿತ್ವಾತ್ ಪಶ್ಯಾವಸ್ಥಾಮಿಮಾಂ ಮಮ ॥ ೧೯ ॥

ನನ್ನನ್ನು ನೋಡು. ಮೈಮೇಲೆ ಬಿದ್ದು ಕಚ್ಚುತ್ತಿರುವ ಹುಳಗಳು ಎಷ್ಟಿವೆ ಎಂದು ವೀಕ್ಷಿಸು. ಕೈಗಳಿಲ್ಲದ ನನಗೆ ಅವುಗಳನ್ನು ಓಡಿಸಲು ಸಾಧ್ಯವಿಲ್ಲ. ನನ್ನ ಈ ದುರವಸ್ಥೆಯನ್ನು ನೀನೇ ನೋಡು.

ಅಕಾರ್ಯಮಿತಿ ಚೈವೇಮಂ ನಾತ್ಮಾನಂ ಸಂತ್ಯಜಾಮ್ಯಹಮ್ ।
ನೇತಃ ಪಾಪೀಯಸೀಂ ಯೋನಿಂ ಪತೇಯಮಪರಾಮಿತಿ ॥ ೨೦ ॥

ಇಂತಹ ಸ್ಥಿತಿಯಲ್ಲಿಯೂ ಸಾಯುವುದಕ್ಕೆ ಆಸೆಪಡುವುದು ಉಚಿತವಲ್ಲ ಎಂದು, ಒಂದು ವೇಳೆ ಸತ್ತರೂ ಇದಕ್ಕಿಂತ ಹೀನವಾದ ಶರೀರವು ಒದಗಿಬರುತ್ತದೋ ಎಂಬ ಭಯದಿಂದ ಈ ಶರೀರವನ್ನು ಬಿಡಲು ಇಷ್ಟಪಡುತ್ತಿಲ್ಲ.

ಮಧ್ಯೇ ವೈ ಪಾಪಯೋನೀನಾಂ ಸಾರ್ಗಾಲೀಯಾಮಹಂ ಗತಃ ।
ಪಾಪೀಯಸ್ಯೋ ಬಹುತರಾ ಇತೋಽನ್ಯಾಃ ಪಾಪಯೋನಯಃ ॥ ೨೧ ॥

ಪಾಪಕರ್ಮದಿಂದಾಗಿ ನಾನು ಸೃಗಾಲಸಂಬಂಧಿಯಾದ ನರಿಯಾಗಿ ಹುಟ್ಟನ್ನು ಪಡೆದಿದ್ದೇನೆ. ಇದಕ್ಕಿಂತಲೂ ಅತ್ಯಂತ ಪಾಪಿಷ್ಠವಾದ ಕೆಟ್ಟ ಜನ್ಮಗಳು ಎಷ್ಟೋ ಇವೆ.

ಜಾತ್ಯೈವೈಕೇ ಸುಖಿತರಾಃ ಸಂತ್ಯನ್ಯೇ ಭೃಶದುಃಖಿತಾಃ ।
ನೈಕಾಂತಸುಖಮೇವೇಹ ಕ್ವಚಿತ್ ಪಶ್ಯಾಮಿ ಕಸ್ಯಚಿತ್ ॥ ೨೨ ॥

ಲೋಕದಲ್ಲಿ ಕೆಲವರು ಹುಟ್ಟಿನಿಂದಲೇ ಸುಖಭಾಗಿಗಳಾಗಿ ಹುಟ್ಟುತ್ತಾರೆ. ಕೆಲವರು ಹುಟ್ಟಿನಿಂದಲೇ ಪರಮದುಃಖಿತರಾಗಿ ಇರುತ್ತಾರೆ. ಒಟ್ಟಿನಲ್ಲಿ ಯಾರಿಗೂ ಅವಿಚ್ಛಿನ್ನವಾದ ಸುಖವು ದೊರೆಯುವುದಿಲ್ಲ. ಅಂತಹವರನ್ನು ಯಾರನ್ನೂ ಕಾಣಲು ಸಾಧ್ಯವಿಲ್ಲ.

ಮನುಷ್ಯಾ ಹ್ಯಾಢ್ಯತಾಂ ಪ್ರಾಪ್ಯ ರಾಜ್ಯಮಿಚ್ಛಂತ್ಯನಂತರಮ್ ।
ರಾಜ್ಯಾದ್ದೇವತ್ವಮಿಚ್ಛಂತಿ ದೇವತ್ವಾದಿಂದ್ರತಾಮಪಿ ॥ ೨೩ ॥

ಮನುಷ್ಯನಿಗೆ ಅಲ್ಪಸ್ವಲ್ಪ ಧನವಿದ್ದಾಗ ಅವನು ರಾಜ್ಯವನ್ನು ಬಯಸುತ್ತಾನೆ. ರಾಜನಾದವನು ದೇವತ್ವವನ್ನು ಬಯಸುತ್ತಾನೆ. ದೇವತ್ವವನ್ನು ಪಡೆದವನು ಇಂದ್ರ ಪದವಿಯೇ ಬೇಕೆನ್ನುತ್ತಾನೆ.

ಭವೇಸ್ತ್ವಂ ಯದ್ಯಪಿ ತ್ವಾಢ್ಯೋ ನ ರಾಜ್ಯಂ ನ ಚ ದೈವತಮ್ ।
ದೇವತ್ವಂ ಪ್ರಾಪ್ಯ ಚೇಂದ್ರತ್ವಂ ನೈವ ತುಷ್ಯೇಸ್ತಥಾ ಸತಿ ॥ ೨೪ ॥

ಎಲೈ ಕಾಶ್ಯಪನೇ, ಯದ್ಯಪಿ ನೀನು ಧನಿಕನಾದರೂ ಅದರಿಂದ ನೀನು ತೃಪ್ತಿಯನ್ನು ಹೊಂದಲಾರೆ. ಜನ್ಮತಃ ಬ್ರಾಹ್ಮಣನಾಗಿರುವ ನೀನು ರಾಜ್ಯ ದೇವತಾ ಸಂಬಂಧಿಲೋಕ ಹೊಂದಿದರೂ ಇಂದ್ರತ್ವವನ್ನು ಹೊಂದಿದರೂ ತೃಪ್ತಿಯುಂಟಾಗದು.

ನ ತೃಪ್ತಿಃ ಪ್ರಿಯಲಾಭೇಽಸ್ತಿ ತೃಷ್ಣಾ ನಾದ್ಧಿಃ ಪ್ರಶಾಮ್ಯತಿ ।
ಸಂಪ್ರಜ್ವಲತಿ ಸಾ ಭೂಯಃ ಸಮಿದ್ಭಿರಿವ ಪಾವಕಃ ॥ ೨೫ ॥

ಎಷ್ಟೇ ಉನ್ನತಿ ಪದವಿ ಬಂದರೂ ಆಸೆಯು ತೀರದು. ಪ್ರಿಯವಸ್ತುವನ್ನು ಪಡೆದ ಮಾತ್ರಕ್ಕೆ ಯಾರೂ ತೃಪ್ತಿಯನ್ನು ಹೊಂದರು. ದಾಹವೆಂಬುದು ನೀರನ್ನು ಕುಡಿದಷ್ಟು ಹೆಚ್ಚುವಂತೆ, ಸೌದೆಯು ಉರಿದಷ್ಟು ಬೆಂಕಿಯು ಜ್ವಲಿಸುವಂತೆ ತೃಷ್ಣೆಯು ಇಷ್ಟವಸ್ತುವನ್ನು ತಂದಂತೆಲ್ಲಾ ಉದ್ದೀಪಿಸುತ್ತಲೇ ಹೋಗುತ್ತದೆ.

ಅಸ್ತ್ಯೇವ ತ್ವಯಿ ಶೋಕೋ ವೈ ಹರ್ಷಶ್ಚಾಸ್ತಿ ತಥಾ ತ್ವಯಿ ।
ಸುಖದುಃಖೇ ತಥಾ ಚೋಭೇ ತತ್ರ ಕಾ ಪರಿದೇವನಾ ॥ ೨೬ ॥

ಎಲೈ ಕಶ್ಯಪನೇ, ದುಃಖವೆಂಬುದನ್ನು ಈಗ ನಿನ್ನಲ್ಲಿ ನೋಡುತ್ತಿದ್ದೇನೆ. ಸಂತೋಷವೂ ನಿನ್ನಲ್ಲೇ ಇದೆ. ಸುಖ-ದುಃಖಗಳೆರಡೂ ನಿನ್ನಲ್ಲಿರುವಾಗ ಏಕೆ ವ್ಯಸನ ಪಡುತ್ತಿ ?

ಪರಿಚ್ಛಿದ್ಯೈವ ಕಾಮಾನಾಂ ಸರ್ವೇಷಾಂ ಚೈವ ಕರ್ಮಣಾಮ್ ।
ಮೂಲಂ ರುಂಧೀಂದ್ರಿಯಗ್ರಾಮಂ ಶಕುಂತಾನಿವ ಪಂಜರೇ ॥ ೨೭ ॥

ಪಕ್ಷಿಗಳು ಗೂಡಿನಲ್ಲಿ ತಮ್ಮ ಮರಿಗಳನ್ನು ಅಡಗಿಸಿರುವಂತೆ ಎಲ್ಲ ಕಾಮಗಳಿಗೂ, ಕರ್ಮಗಳಿಗೂ ಮೂಲವಾದ ಬುದ್ಧಿಯನ್ನು, ಇಂದ್ರಿಯಗಳನ್ನು ತನ್ನ ಶರೀರದಲ್ಲಿಯೇ ಅಡಗಿಸಿಟ್ಟವನಿಗೆ ಯಾವ ಭಯವೂ ಇರುವುದಿಲ್ಲ.

ನ ಖಲ್ವಪ್ಯರಸಜ್ಞಸ್ಯ ಕಾಮಃ ಕ್ವಚನ ಜಾಯತೇ ।
ಸಂಸ್ಪರ್ಶಾದ್ದರ್ಶನಾದ್ವಾಪಿ ಶ್ರವಣಾದ್ವಾಪಿ ಜಾಯತೇ ॥ ೨೮ ॥

ರಸವನ್ನು ತಿಳಿಯದವನಿಗೆ ರಸದಲ್ಲಿ ಆಸೆ ಹುಟ್ಟದು. ದರ್ಶನ, ಸ್ಪರ್ಶನ, ಶ್ರವಣಾದಿಗಳಿಂದ ಆಯಾ ಇಂದ್ರಿಯಗಳಿಂದ ಕಾಮವು ಅಭಿವೃದ್ಧಿಯನ್ನು ಹೊಂದುತ್ತದೆ.

ನ ತ್ವಂ ಸ್ಮರಸಿ ವಾರುಣ್ಯಃ ಲ(ಖ)ಟ್ವಾಂಗಾನಾಂ ಚ ಪಕ್ಷಿಣಾಮ್ ।
ತಾಭ್ಯಾಂ ಚಾಭ್ಯಧಿಕೋ ಭಕ್ಷ್ಯೋ ನ ಕಶ್ಚಿದ್ ವಿದ್ಯತೇ ಕ್ವಚಿತ್ ॥ ೨೯ ॥

ನೀನು ವಾರುಣಿ ಎಂಬ ಮದ್ಯದ ರುಚಿಯನ್ನು ತಿಳಿದವನಲ್ಲ. ಲಟ್ವಾಂಗ (ಹೋರಸಿನ ಹಕ್ಕಿ) ಎಂಬ ಪಕ್ಷಿಯ ಮಾಂಸದ ಸವಿಯನ್ನು ಉಂಡವನಲ್ಲ. ಅವುಗಳ

ರುಚಿಯೆಷ್ಟೆಂಬುದನ್ನು ಊಹಿಸಲು ನಿನಗೆ ಸಾಧ್ಯವಿಲ್ಲ. ಅವೆರಡಕ್ಕಿಂತಲೂ ಉತ್ತಮವಾದ ಪಾನೀಯವಾಗಲೀ, ಭಕ್ಷ್ಯವಾಗಲೀ ಬೇರೆಲ್ಲೂ ಸಿಕ್ಕಲಾರದು. ಆದರೆ ಅಂತಹದರ ಆಸೆ ನಿನಗಿರುವುದಿಲ್ಲ.

ಯಾನಿ ಚಾನ್ಯಾನಿ ದೂರೇಷು ಭಕ್ಷ್ಯಭೋಜ್ಯಾನಿ ಕಾಶ್ಯಪ ।
ಯೇಷಾಮಭುಕ್ತಪೂರ್ವಂ ತೇ ತೇಷಾಮಸ್ಪೃತಿರೇವ ಚ ॥ ೩೦ ॥

ಅದರಂತೆ ಇತರ ಮನುಷ್ಯರು ತಿಳಿದಿರುವ ಭಕ್ಷ್ಯ-ಭೋಜ್ಯಗಳ ಚಿಂತೆಯೇ ನಿನಗಿರುವುದಿಲ್ಲ. ಏಕೆಂದರೆ ಯಾವಾಗಲೂ ನೀನು ಅವುಗಳ ರುಚಿಯನ್ನು ನೋಡಿ ತಿಳಿದವನಲ್ಲ. ಆದ್ದರಿಂದ ಅವುಗಳ ಸ್ಥಿತಿಯೇ ನಿನ್ನಲ್ಲಿರುವುದಿಲ್ಲ.

ಅಪ್ರಾಶನಮಸಂಸ್ಪರ್ಶಮಸಂದರ್ಶನಮೇವ ಚ ।
ಪುರುಷಸ್ಯೈಷ ನಿಯಮೋ ಮನ್ಯೇ ಶ್ರೇಯೋ ನ ಸಂಶಯಃ ॥ ೩೧ ॥

ತಿನ್ನದಿರುವುದು, ನೋಡದಿರುವುದು, ಮುಟ್ಟದಿರುವುದು ಇವುಗಳೇ ಮನುಷ್ಯನಿಗೆ ದೊಡ್ಡ ವ್ರತವಾಗಿರಬೇಕು. ಇದೇ ಶ್ರೇಯಸ್ಕರವೆಂದು ನಾನು ತಿಳಿಯುತ್ತೇನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಪಾಣಿಮಂತೋ ಧನೈರ್ಯುಕ್ತಾ ಬಲವಂತೋ ನ ಸಂಶಯಃ ।
ಮನುಷ್ಯಾ ಮಾನುಷ್ಯೈರೇವ ದಾಸತ್ವಮುಪಪಾದಿತಾಃ ॥ ೩೨ ॥

ಕೈಗಳುಳ್ಳ ಪ್ರಾಣಿಗಳು ಬಲಾಢ್ಯರು, ಧನವಂತರೂ ಆಗಿರುತ್ತಾರೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಮನುಷ್ಯರು ಮನುಷ್ಯರಿಂದಲೇ ದಾಸ್ಯದಲ್ಲಿ ಇಡಲ್ಪಟ್ಟಿದ್ದಾರೆ.

ವಧಬಂಧಪರಿಕ್ಲೇಶೈಃ ಕ್ಲಿಶ್ಯಂತೇ ಚ ಪುನಃ ಪುನಃ ।
ತೇ ಖಿಲ್ವಪಿ ರಮಂತೇ ಚ ಮೋದಂತೇ ಚ ಹಸಂತಿ ಚ ॥ ೩೩ ॥

ಆಗಾಗ ಕೊಲೆ, ಬಂಧನ ಮುಂತಾದ ಬಾಧೆಗಳಿಗೂ ಪುನಃ ಪುನಃ ತುತ್ತಾಗುತ್ತಾರೆ. ಹೀಗೆ ಮತ್ತೊಬ್ಬರನ್ನು ಪೀಡಿಸಿ ಕೆಲವರು ವಿನೋದದಿಂದ ಆಟವಾಡುತ್ತಾ ಸಂತೋಷ ಪಡುತ್ತಾರೆ, ನಗುತ್ತಾರೆ.

ಅಪರೇ ಬಾಹುಬಲಿನಃ ಕೃತವಿದ್ಯಾ ಮನಸ್ವಿನಃ ।
ಜುಗುಪ್ಸಿತಾಂ ಸುಕೃಪಣಾಂ ಪಾಪಾಂ ವೃತ್ತಿಮುಪಾಸತೇ ॥ ೩೪ ॥

ಇನ್ನು ಕೆಲವರು ಒಳ್ಳೆಯ ಬಾಹುಬಲವುಳ್ಳವರಾಗಿ, ವಿದ್ಯಾನಿಪುಣರಾಗಿ, ಮನಶ್ಶಕ್ತಿ ಉಳ್ಳವರಾಗಿ ಅಸಹ್ಯಕರವಾದ, ಹೀನವಾದ ಪಾಪಕರ್ಮದಲ್ಲೇ ನಿರತರಾಗಿರುತ್ತಾರೆ.

ಉತ್ಸಹಂತೇ ಚ ತೇ ವೃತ್ತಿಮನ್ಯಾಮಪ್ಯುಪಸೇವಿತುಮ್ ।
ಸ್ವಕರ್ಮಣಾ ತು ನಿಯತಂ ಭವಿತವ್ಯಂ ತು ತತ್ತಥಾ ॥ ೩೫ ॥

ಕೆಲವರು ಇದಕ್ಕಿಂತಲೂ ಅಧಿಕವಾದ ಕೆಟ್ಟಕರ್ಮಗಳನ್ನು ಮಾಡಲು ಉತ್ಸಾಹ ಉಳ್ಳವರಾಗಿರುತ್ತಾರೆ. ಇವರೆಲ್ಲರೂ ತಮ್ಮ ಪೂರ್ವಕರ್ಮಕ್ಕೆ ಕಟ್ಟುಬಿದ್ದು ದೈವವಿಧಿಯು ನಡೆಸಿದಂತೆ ನಡೆಯುತ್ತಾರೆ.

ನ ಪುಲ್ಕಸೋ ನ ಚಂಡಾಲ ಆತ್ಮಾನಂ ತ್ಯಕ್ತುಮಿಚ್ಛತಿ ।
ಅಸಂತುಷ್ಟಃ ಸ್ವಯಾ ಯೋನ್ಯಾ ಮಾಯಾಂ ಪಶ್ಯಸ್ವ ಯಾದೃಶೀಮ್ ॥

ಕ್ಷತ್ರಿಯಸ್ತ್ರೀಯಲ್ಲಿ ಶೂದ್ರನಿಂದ ಹುಟ್ಟಿದ ಪುಲ್ಕಸನಾಗಲೀ, ಚಂಡಾಲನಾಗಲೀ ತನ್ನ ಶರೀರವನ್ನು ಬಿಡಲು ಇಷ್ಟಪಡುವುದಿಲ್ಲ. ಅವರವರ ಯೋನಿಗಳಲ್ಲಿ ಅಸಂತೋಷವಿದ್ದರೂ ಬದುಕಲು ಬಯಸುತ್ತಾರೆ. ಇದು ಭಗವಂತನ ಮಾಯೆ. ಇದನ್ನು ನೀನೇ ಅರ್ಥೈಸಿಕೊ.

ದೃಷ್ಟ್ವಾ ಕೃಶಾನ್ ಪಕ್ಷಹತಾನ್ ಮನುಷ್ಯಾನಾಮಯಾವಿನಃ ।
ಸುಸಂಪೂರ್ಣಃ ಸ್ವಯಾ ಯೋನ್ಯಾ ಲಬ್ಧಲಾಭೋಽಸಿ ಕಾಶ್ಯಪ ॥ ೩೭ ॥

ಕಾಶ್ಯಪನೇ, ಕೈಯಿಲ್ಲದೆ ಎಷ್ಟೋ ಮಂದಿ ವ್ರಣದಿಂದ ಉತ್ಪನ್ನವಾದ ಕ್ರಿಮಿಗಳನ್ನು ತೆಗೆಯಲಾರರು. ರೋಗಗ್ರಸ್ಥರಾದ ಮನುಷ್ಯರಲ್ಲಿಯೇ ಎಷ್ಟೋ ಜನರಿಗೆ ಈ ಸ್ಥಿತಿ ಇದೆ. ಆದರೆ ಎರಡು ಕೈಗಳನ್ನು ಚೆನ್ನಾಗಿ ಹೊಂದಿರುವ, ಯಾವ ರೋಗಗಳಿಂದಲೂ ಬಾಧ್ಯನಾಗದಿರುವ, ಉತ್ತಮ ಬ್ರಾಹ್ಮಣನಾಗಿರುವ ನೀನು ಶ್ರೇಷ್ಠವಾದ ಅದೃಷ್ಟವನ್ನೇ ಹೊಂದಿರುವಿ ಎಂದು ಭಾವಿಸುತ್ತೇನೆ.

ಯದಿ ಬ್ರಾಹ್ಮಣ ದೇಹಸ್ತೇ ನಿರಾತಂಕೋ ನಿರಾಮಯಃ ।
ಅಂಗಾನಿ ಚ ಸಮಗ್ರಾಣಿ ನ ಚ ಲೋಕೇಷು ಧಿಕ್ಕೃತಃ ॥ ೩೮ ॥

ಕಾಶ್ಯಪನೇ, ನಿನ್ನ ದೇಹವು ಯಾವುದೇ ಕುಂದುಗಳಿಲ್ಲದೆ ಪೂರ್ಣವಾಗಿದೆ. ಸಮಗ್ರವಾಗಿ ಪಡೆಯಬೇಕಾದ ಅಂಗಗಳನ್ನೆಲ್ಲ ಚೆನ್ನಾಗಿ ಪಡೆದಿರುತ್ತಿ. ಯಾವ ಲೋಕದ ಜನರೂ ನಿನ್ನನ್ನು ಧಿಕ್ಕರಿಸಿಲ್ಲ.

ನ ಕೇನಚಿತ್ ಪ್ರವಾದೇನ ಸತ್ಯೇನೈವಾಪಹಾರಿಣಾ ।
ಧರ್ಮಾಯೋತ್ತಿಷ್ಠ ವಿಪ್ರರ್ಷೇ ನಾತ್ಮಾನಂ ತ್ಯಕ್ತುಮರ್ಹಸಿ ॥ ೩೯ ॥

ಜಾತಿಯಿಂದ ನಿಂದಿಸುವಂತಹ ಯಾವ ಅಪವಾದಗಳೂ ಲೋಕದಲ್ಲಿ ನಿನಗಿರುವುದಿಲ್ಲ. ಆದ್ದರಿಂದ ನಿನ್ನ ಶರೀರದಿಂದ ಜುಗುಪ್ಸೆಯನ್ನು ಪಡೆಯುವುದು ಯೋಗ್ಯವಲ್ಲ. ಬ್ರಹ್ಮರ್ಷಿಯೇ ಎದ್ದೇಳು, ನಿನ್ನ ಧರ್ಮವನ್ನು ಆಚರಿಸು. ದೇಹತ್ಯಾಗದ ಮನಸ್ಸನ್ನು ಎಂದಿಗೂ ಮಾಡಬೇಡ.

ಯದಿ ಬ್ರಹ್ಮನ್ ಶೃಣೋಷ್ಯೇತಚ್ಛ್ರದ್ದಧಾಸಿ ಚ ಮೇ ವಚಃ ।
ವೇದೋಕ್ತಸ್ಯ ಚ ಧರ್ಮಸ್ಯ ಫಲಂ ಮುಖ್ಯಮವಾಪ್ಸ್ಯಸಿ ॥ ೪೦ ॥

ಬ್ರಹ್ಮರ್ಷಿಯೇ, ನನ್ನ ಮಾತಿನಲ್ಲಿ ವಿಶ್ವಾಸವನ್ನಿಡುವುದಾಗಿದ್ದಲ್ಲಿ ನೀನು ವೇದೋಕ್ತವಾದ ಧರ್ಮಗಳ ಮುಖ್ಯಫಲವನ್ನು ಖಂಡಿತವಾಗಿಯೂ ಪಡೆಯುತ್ತಿ.

ಸ್ವಾಧ್ಯಾಯಮಗ್ನಿಸಂಸ್ಕಾರಮಪ್ರಮತ್ತೋಽನುಪಾಲಯ ।
ಸತ್ಯಂ ದಮಂ ಚ ದಾನಂ ಚ ಸ್ಪರ್ಧಿಷ್ಠಾ ಮಾ ಚ ಕೇನಚಿತ್ ॥ ೪೧ ॥

ನೀನು ಎಂದಿಗೂ ತಪ್ಪದೆ ಅಧ್ಯಯನ, ಅಗ್ನಿಹೋತ್ರ, ಸತ್ಯ, ದಾನ, ದಮಾದಿಗಳನ್ನು ಅನುಷ್ಠಾನ ಮಾಡು. ಯಾರಲ್ಲಿಯೂ ಮತ್ಸರಿಸಬೇಡ. ಯಾರ ಜೊತೆಗೂ ಸ್ಪರ್ಧೆಗೆ ಇಳಿಯಬೇಡ.

ಯೇ ಕೇಚನ ಸ್ವಧ್ಯಯನಾಃ ಪ್ರಾಪ್ತಾ ಯಜನಯಾಜನಮ್ ।
ಕಥಂ ತೇ ಜಾತು ಶೋಚೇಯುರ್ಧ್ಯಾಯೇಯುರ್ವಾಪ್ಯಶೋಭನಮ್ ॥

ಯಾರು ನಿನ್ನಂತೆ ವೇದಾಧ್ಯಯನ ಪರಾಯಣರಾಗಿ, ಯಜನ-ಯಾಜನ ಕಾರ್ಯಗಳಿಗೆ ಅರ್ಹರೆನಿಸುತ್ತಾರೋ ಅಂತಹ ಬ್ರಾಹ್ಮಣರು ಯಾವುದಕ್ಕೂ ಶೋಕಿಸಬೇಕಾದುದಿಲ್ಲ. ಅವರು ತಮಗೆ ತಾವು ಕೇಡನ್ನೂ ಬಯಸಬೇಕಾದುದಿಲ್ಲ.

ಇಚ್ಛಂತಸ್ತೇ ವಿಹಾರಾಯ ಸುಖಂ ಮಹದವಾಪ್ನುಯುಃ ।
ಉತ ಜಾತಾಃ ಸುನಕ್ಷತ್ರೇ ಸುತೀರ್ಥಾಃ ಸುಮುಹೂರ್ತಜಾಃ ॥ ೪೩ ॥

ಒಳ್ಳೆಯ ತಿಥಿಯಲ್ಲಿ, ಉತ್ತಮ ನಕ್ಷತ್ರದಲ್ಲಿ, ಸುಮುಹೂರ್ತದಲ್ಲಿ ಜನ್ಮವನ್ನು ತಳೆದ ನಿನ್ನಂತಹವರು ತಮ್ಮ ಶಕ್ತಿಗೆ ಅನುಗುಣವಾಗಿ ಯಜ್ಞ-ದಾನಾದಿ ಸತ್ಕರ್ಮಗಳನ್ನು ಮಾಡಿ ಸತ್ಸಂತಾನದಲ್ಲಿಯೂ ಆಸೆಯುಳ್ಳವರಾಗಿ ಪ್ರಯತ್ನಿಸಿದಾಗ ಉತ್ತಮವಾದ ಸುಖವನ್ನೇ ಹೊಂದುತ್ತಾರೆ.

ನಕ್ಷತ್ರೇಷ್ವಾಸುರೇಷ್ವನ್ಯೇ ದುಸ್ತೀರ್ಥಾ ದುರ್ಮುಹೂರ್ತಜಾಃ ।
ಸಂಪತಂತ್ಯಾಸುರೀಂ ಯೋನಿಂ ಯಜ್ಞಪ್ರಸವವರ್ಜಿತಾಮ್ ॥ ೪೪ ॥

ಇದಕ್ಕೆ ವಿರುದ್ಧವಾಗಿ ಕೆಟ್ಟನಕ್ಷತ್ರದಲ್ಲಿ, ಕೆಟ್ಟ ತಿಥಿಯಲ್ಲಿ, ಅಸನ್ಮುಹೂರ್ತದಲ್ಲಿ ಹುಟ್ಟಿದವರು ಹಿಂದೆ ತಿಳಿಸಿದಂತೆ ಸತ್ಕರ್ಮಗಳಲ್ಲಿ ಆಸಕ್ತಿ ಇಲ್ಲದಿದ್ದಲ್ಲಿ ಆಸುರಿ ಜನ್ಮವನ್ನೇ ಹೊಂದುತ್ತಾರೆ.

ಅಹಮಾಸಂ ಪಂಡಿತಕೋ ಹೈತುಕೋ ವೇದನಿಂದಕಃ ।
ಆನ್ವೀಕ್ಷಿಕೀಂ ತರ್ಕವಿದ್ಯಾಮನುರಕ್ತೋ ನಿರರ್ಥಿಕಾಮ್ ॥ ೪೫ ॥

ನಾನು ಹಿಂದಿನ ಜನ್ಮದಲ್ಲಿ ಕೇವಲ ಕುತ್ಸಿತವಾದ ಪಾಂಡಿತ್ಯವುಳ್ಳವನಾಗಿದ್ದೆ. ತರ್ಕ ಬದ್ಧವಾಗಿ ವೇದಗಳ ವಿಷಯದಲ್ಲಿ ವಿಚಾರ ಮಾಡುತ್ತಿದ್ದೆ. ತರ್ಕದಿಂದ ವೇದಗಳು ದೂಷಿತವಾಗಿವೆ ಎಂದು ವೇದಪ್ರಾಮಾಣ್ಯವನ್ನು ನಂಬದೆ ನಿಂದಿಸುತ್ತಿದ್ದೆ. ನಿರರ್ತಕವಾದ ಆನ್ವೀಕ್ಷಕಿ ಎಂಬ ತರ್ಕವಿದ್ಯೆಯಲ್ಲಿ ಆದರವುಳ್ಳವನಾಗಿದ್ದೆ.

ಹೇತುವಾದಾನ್ ಪ್ರವದಿತಾ ವಕ್ತಾ ಸಂಸತ್ಸು ಹೇತುಮತ್ ।
ಆಕ್ರೋಷ್ಟಾ ಚಾಭಿವಕ್ತಾ ಚ ಬ್ರಹ್ಮಯಜ್ಞೇಷು ವೈ ದ್ವಿಜಾನ್ ॥ ೪೬ ॥

ದೊಡ್ಡ ವಿದ್ವತ್ಸಭೆಗಳಲ್ಲಿ ಯಾವಾಗಲೂ ಶಾಸ್ತ್ರಪ್ರಮಾಣವನ್ನು ನಿರಾಕರಿಸಿ ಹೇತು ವಾದಗಳನ್ನೇ ಆರಂಭಿಸುತ್ತಿದ್ದೆ. ಅಂತಹ ವಾದವಿಧಿಗಳಲ್ಲಿ ವೇದನಿಧಿಗಳನ್ನು ಧಿಕ್ಕರಿಸುತ್ತಾ ಅದೇ ವಿಚಾರದಲ್ಲಿ ಬ್ರಾಹ್ಮಣರೊಡನೆ ಬಹಳವಾಗಿ ವಾದಿಸುತ್ತಿದ್ದೆ.

ನಾಸ್ತಿಕಃ ಸರ್ವಶಂಕೀ ಚ ಮೂರ್ಖಃ ಪಂಡಿತಮಾನಿಕಃ ।
ಯಸ್ಯೇಯಂ ಫಲನಿರ್ವೃತ್ತಿಃ ಸೃಗಾಲತ್ವಂ ಮಮ ದ್ವಿಜ ॥ ೪೭ ॥

ನಾಸ್ತಿಕನೂ, ಮೂರ್ಖನೂ, ಎಲ್ಲ ವಿಷಯಗಳಲ್ಲಿಯೂ ಶಂಕೆಯುಳ್ಳವನೂ, ಪಂಡಿತ ಎಂಬ ದುರಭಿಮಾನವುಳ್ಳವನೂ ಆದ ನಾನು ಇದಕ್ಕೆಲ್ಲ ಫಲವಾಗಿ ನರಿಯ ಜನ್ಮವನ್ನು ಹೊಂದಿದ್ದೇನೆ.

ವ್ಯಾಖ್ಯಾನ ವಿಶೇಷ– ಈ ಪ್ರಕರಣದಲ್ಲಿ ಇಂದ್ರದೇವರು, ನಾವು ಹಿಂದಿನ ಜನ್ಮದಲ್ಲಿ ಕುತರ್ಕಗಳನ್ನು ಮಾಡಿದ ಪರಿಣಾಮದಿಂದ ತಮೋರೂಪವಾದ ಈ ಯೋನಿಯನ್ನು ಹೊಂದಿದ್ದೇನೆ ಎಂದು ಹೇಳಿಕೊಂಡಿದ್ದಾರೆ. ಆದರೆ ಅನೇಕ ಯಥಾರ್ಥವಚನಗಳನ್ನೂ ಇಲ್ಲಿ ಆಡಿದ್ದಾರೆ. ಒಂದು ವೇಳೆ ಕುತರ್ಕಗಳ ಪರಿಣಾಮವಾದ ಅಜ್ಞಾನವೇ ಇಂದ್ರದೇವರಲ್ಲಿ ಇದ್ದ ಪಕ್ಷದಲ್ಲಿ ಈ ಯಥಾರ್ಥ ಜ್ಞಾನದ ಉಪದೇಶವು ಹೇಗೆ ಹೊರಹೊಮ್ಮಿತು ಎಂಬ ಪ್ರಶ್ನೆಯು ಉತ್ಪನ್ನವಾಗುತ್ತದೆ. ಇದಕ್ಕೆ ವಾದಿರಾಜರು ಭಾಗವತದ ಆಧಾರದಲ್ಲಿ ಉತ್ತರಿಸಿದ್ದಾರೆ.

ಈ ರೀತಿಯಾಗಿ ಭಾಗವತದಲ್ಲಿ ಪೃಥು ಚಕ್ರವರ್ತಿಯ ಯಜ್ಞ ಪ್ರಕರಣದಲ್ಲಿ ಇಂದ್ರದೇವರು ಪಾಖಂಡ ವೇಷವನ್ನು ಧರಿಸಿ ಕುದುರೆಯನ್ನು ಅಪಹರಿಸುತ್ತಿರಲು ಬಹುವಿಧವಾದ ಪಾಖಂಡ ರೂಪಗಳನ್ನು ನಿರ್ದುಷ್ಟವಾದ ಋತ್ತುಗಳನ್ನು ಸ್ವಯಂ ಇಂದ್ರದೇವರೇ ಆಚರಿಸಿದರೂ ಅದಕ್ಕೆ ಫಲವಾಗಿ ಈ ರೀತಿಯಾದ ನರಿ ಜನ್ಮವು ಬಂದಿದೆ. ಆದರ ಪಶ್ಚಾತ್ತಾಪದಿಂದಲೇ ಇಂದ್ರದೇವರು ಇಲ್ಲಿ ಹೀಗೆ ಹೇಳಿದ್ದಾರೆ ಎಂದು ಭಾವಿಸಬೇಕು. ಇಂದ್ರದೇವರು ಎಲ್ಲಿಯೂ ದುರ್ವಾದಗಳನ್ನು ಮಂಡಿಸುವಂತಹ ವೇದವಿರುದ್ಧವಾಗಿ ನಡೆದುಕೊಳ್ಳುವಂತಹ ಚರ್ಯೆಯುಳ್ಳವರಾಗಿರಲಿಲ್ಲ. ದುರ್ವಾದವನ್ನು ಮಂಡಿಸುವಂತಹ ವೇಷವನ್ನು ನೆಪಮಾತ್ರದಿಂದ ಧರಿಸಿದ ಕಾರಣದಿಂದ ಇಂತಹ ನರಿಜನ್ಮವನ್ನು ಹೊಂದಿದ್ದೇನೆ ಎಂಬುದು ಪ್ರಕೃತ ಅರ್ಥ. ಆದ್ದರಿಂದ ಯಾರು ವೇದಗಳನ್ನು ಸರ್ವಾತ್ಮನಾ ನಾಸ್ತಿಕಬುದ್ಧಿಯಿಂದ, ಕುತರ್ಕಗಳಿಂದ ನಿಂದಿಸುತ್ತಾರೋ ಅವರಿಗೆ ತಮಸ್ಸೇ ಫಲವಾಗುತ್ತದೆ ಎಂದು ಹೇಳಬೇಕು. ಇಂದ್ರದೇವರಿಗೆ ಈ ರೀತಿ ವಾದಗಳನ್ನು ಮಂಡಿಸಿದಾಗ ಇಂತಹ ದುಷ್ಫಲವು ಏಕಾಗಲಿಲ್ಲ ಎಂಬ ಪ್ರಶ್ನೆಗೆ ಉತ್ತರವಾಗಿ ಭಾಗವತವನ್ನು ಸಂವಾದವಾಗಿ ರಾಜರು ಉಲ್ಲೇಖಿಸಿದ್ದಾರೆ. ಇಂದ್ರದೇವರು ದೇವಕಾರ್ಯನಿಮಿತ್ತ ಪೃಥುಚಕ್ರವರ್ತಿಯ ಯಜ್ಞಾಶ್ವವನ್ನು ಅಪಹರಿಸಲು ಪಾಖಂಡವೇಷವನ್ನು ಮಾತ್ರ ಧರಿಸಿದ್ದಾರೆ. ಅಸುರಜನರ ಮೋಹಕ್ಕೋಸ್ಕರ ಲೀಲೆಯಿಂದ ಒಂದು ಬಾರಿ ಈ ಪಾಖಂಡ ವೇಷವನ್ನು ಬಾಹ್ಯವಾಗಿ ಧರಿಸಿದಾಗಲೂ ಇಂತಹ ವೇಷಧಾರಣೆಗೆ ನರಿಜನ್ಮವು ಪ್ರಾಪ್ತವಾದ ಬಳಿಕ ಮನಃಪೂರ್ವಕವಾಗಿ ಯಾವಾಗಲೂ ವೇದನಿಂದನೆ ಮಾಡುವ ಕೆಟ್ಟ ಅಧರ್ಮದ ಆಚರಣೆಗಳನ್ನು ಅಳವಡಿಸಿಕೊಂಡಲ್ಲಿ ಅಂತಹ ವ್ಯಕ್ತಿಗಳಿಗೆ ಅಂಧಂತಮಸ್ಸಿನಲ್ಲಿಯೇ ಪತನವಾಗುತ್ತದೆ ಎಂದು ಹೇಳಬೇಕೇನು? ಎಂಬ ಕೈಮುತ್ಯನ್ಯಾಯವನ್ನು ತಿಳಿಸುವ ದೃಷ್ಟಿಯ ತಾತ್ಪರ್ಯಗಳು ಈ ಪ್ರಕರಣದಲ್ಲಿವೆ ಎಂದು ಅರ್ಥೈಸಿಕೊಳ್ಳಬೇಕು.

ಅಪಿ ಜಾತು ತಥಾ ತತ್ ಸ್ಯಾದಹೋರಾತ್ರಶತೈರಪಿ ।
ಯದಹಂ ಮಾನುಷೀಂ ಯೋನಿಂ ಸೃಗಾಲಃ ಪ್ರಾಪ್ನುಯಾಂ ಪುನಃ ॥೪೮॥

ಈ ನರಿಜನ್ಮವನ್ನು ಹೊಂದಿದ ನಾನು ಹೀಗೆಯೇ ನೂರಾರು ಜನ್ಮಗಳನ್ನು ಕಳೆದ ಮೇಲೆಯಾದರೂ ಎಂದಿಗಾದರೂ ಒಮ್ಮೆ ಪುನಃ ನಿನ್ನಂತೆ ಮನುಷ್ಯಜನ್ಮವು ಬರುತ್ತದೇನೋ ಎಂದು ಕಾದು ಕುಳಿತಿದ್ದೇನೆ.

ಸಂತುಷ್ಟಶ್ಚಾಪ್ರಮತ್ತಶ್ಚ ಯಜ್ಞದಾನತಪೋರತಿಃ ।
ಜ್ಞೇಯಜ್ಞಾತಾ ಭವೇಯಂ ವೈ ವರ್ಜ್ಯವರ್ಜಯಿತಾ ತಥಾ ॥ ೪೯ ॥

ಹಾಗೆನಾದರೂ ದೊರಕಿದ ಪಕ್ಷದಲ್ಲಿ ನಾನು ಎಷ್ಟೋ ತೃಪ್ತಿಯನ್ನು ಹೊಂದುತ್ತೇನೆ. ಹಿಂದಿನಂತೆ ಅಸತ್ಕರ್ಮಗಳಲ್ಲಿ ಪ್ರವೃತ್ತಿಯನ್ನು ಮಾಡದೆ ಯಜ್ಞ-ದಾನಾದಿ ಸತ್ಕರ್ಮಗಳಲ್ಲಿ ಆಸಕ್ತನಾಗುತ್ತೇನೆ. ತಿಳಿಯಬೇಕಾದ್ದನ್ನು ತಿಳಿದುಕೊಂಡು ಬಿಡಬೇಕಾದ್ದನ್ನು ಬಿಟ್ಟು ಬಿಡುತ್ತೇನೆ ಎಂದು ನುಡಿಯಿತು.

ತತಃ ಸ ಮುನಿರುತ್ಥಾಯ ಕಾಶ್ಯಪಸ್ತಮುವಾಚ ಹ ।
ಅಹೋ ಬತಾಸಿ ಕುಶಲೋ ಬುದ್ಧಿಮಾನಿತಿ ವಿಸ್ಮಿತಃ ॥ ೫೦ ॥

ಸಮವೈಕ್ಷತ ತಂ ವಿಪ್ರೋ ಜ್ಞಾನದೀರ್ಘೇಣ ಚಕ್ಷುಷಾ ।
ದದರ್ಶ ಚೈನಂ ದೇವಾನಾಮಿಂದ್ರಂ ದೇವಂ ಶಚೀಪತಿಮ್ ॥ ೫೧ ॥

ಈ ಮಾತನ್ನು ಕೇಳಿದ ಮೇಲೆ ಕಾಶ್ಯಪನೆಂಬ ಬ್ರಾಹ್ಮಣನು ನೆಲದಿಂದ ಮೇಲೆದ್ದು ನರಿಯನ್ನು ಕುರಿತು ಹೇಳುತ್ತಾನೆ: ಅಹೋ! ಏನಾಶ್ಚರ್ಯವು. ಎಲೈ ನರಿಯೇ, ನೀನು ಮಹಾನಿಪುಣನೂ, ಬುದ್ಧಿವಂತನೂ ಆಗಿರುವಿ ಎಂದು, ಆಶ್ಚರ್ಯದಿಂದ ಬಹಳ ಕಾಲ ನೋಡುತ್ತಿರುವಾಗ ಜ್ಞಾನದೃಷ್ಟಿಯಿಂದ ನೋಡುತ್ತಿರುವ ಆತನಿಗೆ ಆ ನರಿಯು ಶಚೀಪತಿಯಾದ ದೇವೇಂದ್ರನೆಂಬುದು ಅರಿವಿಗೆ ಬಂದಿತು.

ತತಃ ಸಂಪೂಜಯಾಮಾಸ ಕಾಶ್ಯಪೋ ಹರಿವಾಹನಮ್ ।
ಅನುಜ್ಞಾತಶ್ಚ ತೇನಾಥ ಪ್ರವಿವೇಶ ಸ್ವಮಾಶ್ರಮಮ್ ॥ ೫೨ ॥

ಬಳಿಕ ಕಾಶ್ಯಪನು ಕುದುರೆಯೇ ವಾಹನವಾಗಿಯುಳ್ಳ ಇಂದ್ರನನ್ನು ಬಹಳವಾಗಿ ಪೂಜಿಸಿ ಅವನ ಅನುಮತಿಯನ್ನು ಪಡೆದು ಅಲ್ಲಿಂದ ತಿರುಗಿ ತನ್ನ ಆಶ್ರಮಕ್ಕೆ ಹೊರಟನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಷಷ್ಠೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಆರನೆಯ ಅಧ್ಯಾಯ ಮುಗಿಯಿತು.

ಏಳನೆಯ ಅಧ್ಯಾಯ

ಭೀಷ್ಮರು ಯಜ್ಞ-ದಾನ-ತಪಸ್ಸು ಮೊದಲಾದ ಸತ್ಕರ್ಮಗಳು ಪರಂಪರೆಯಿಂದ ಮೋಕ್ಷಸಾಧನವಾಗಿವೆ ಎಂಬುದನ್ನು ಯುಧಿಷ್ಠಿರನಿಗೆ ನಿರೂಪಿಸಿದುದು.

ಯುಧಿಷ್ಠಿರಃ

ಯದ್ಯಸ್ತಿ ದತ್ತಮಿಷ್ಟಂ ವಾ ತಪಸ್ತಪ್ತಂ ತಥೈವ ಚ ।
ಗುರೂಣಾಂ ಚಾಪಿ ಶುಶ್ರೂಷಾ ತನ್ಮೇ ಬ್ರೂಹಿ ಪಿತಾಮಹ ॥ ೧ ॥

ಯುಧಿಷ್ಠಿರ– ಪಿತಾಮಹನೇ, ಯಜ್ಞ, ದಾನ, ತಪಸ್ಸು, ಗುರುಶುಶ್ರೂಷೆ ಮೊದಲಾದವುಗಳಿಗೆ ಉತ್ತಮವಾದ ಫಲವೇನೆಂಬುದನ್ನು ನನಗೆ ತಿಳಿಸಿ.

ಭೀಷ್ಮಃ

ಆತ್ಮನಾನರ್ಥಯುಕ್ತೇನ ಪಾಪೇ ನಿವಿಶತೇ ಮನಃ ।
ಸ ಕರ್ಮ ಕಲುಷಂ ಕೃತ್ವಾ ಕ್ಲೇಶೇ ಮಹತಿ ಧೀಯತೇ ॥ ೨ ॥

ಭೀಷ್ಮ– ನಾನು ಈ ಲೋಕಗತಿಯನ್ನು ಹೇಗೆ ಅರಿತಿದ್ದೇನೋ ಹಾಗೆ ಪರಲೋಕ ವಿಚಾರವನ್ನೂ ತಿಳಿದಿದ್ದೇನೆ. ಈ ಲೋಕದಲ್ಲಿ ದುಷ್ಕರ್ಮಗಳನ್ನು ಮಾಡುವ ಪುರುಷರು ಯಾವ ರೀತಿಯಾದ ದುಃಖವನ್ನು ಅನುಭವಿಸುತ್ತಾರೆ ಎಂಬುದನ್ನು ತಿಳಿಸುತ್ತೇನೆ.

ದುರ್ಭಿಕ್ಷಾದೇವ ದುರ್ಭಿಕ್ಷಂ ಕ್ಲೇಶಾತ್ ಕ್ಲೇಶಂ ಭಯಾದ್ ಭಯಮ್ ।
ಮೃತೇಭ್ಯಃ ಪ್ರಮೃತಂ ಯಾಂತಿ ದರಿದ್ರಾಃ ಪಾಪಕಾರಿಣಃ ॥ ೩ ॥

ಪಾಪ ಮಾಡಿದವರು ದರಿದ್ರರಾಗಿ ಹುಟ್ಟುತ್ತಾರೆ. ಅವರಿಗೆ ದುರ್ಭಿಕ್ಷದ ಮೇಲೆ ದುರ್ಭಿಕ್ಷವು ಹುಟ್ಟುತ್ತದೆ. ಕಷ್ಟದ ಹಿಂದೆ ಕಷ್ಟವು, ಭಯದ ಮೇಲೆ ಭಯವು, ಪುನಃ ಪುನಃ ಜನನ-ಮರಣಗಳು ಉಂಟಾಗುತ್ತಿರುತ್ತವೆ.

ಉತ್ಸವಾದುತ್ಸವಂ ಯಾಂತಿ ಸ್ವರ್ಗಾತ್ ಸ್ವರ್ಗಂ ಸುಖಾತ್ ಸುಖಮ್ ।
ಶ್ರದ್ಧಾನಾಶ್ಚ ದಾಂತಾಶ್ಚ ಧನಾಢ್ಯಾಃ ಶುಭಕಾರಿಣಃ ॥ ೪ ॥

ಸತ್ಕರ್ಮದಲ್ಲಿ ನಿರತರಾದವರು ಆಸ್ತಿಕರಾಗಿ ಸತ್ವಗುಣದಲ್ಲೇ ಪ್ರವರ್ತಿಸುತ್ತಾ ಶ್ರೀಮಂತರಾಗಿ ಹುಟ್ಟಿ ಮೇಲಿಂದ ಮೇಲೆ ಸುಖಗಳನ್ನೂ, ಸಂತೋಷಗಳನ್ನೂ,

ಸದ್ಗತಿಗಳನ್ನು ಪಡೆಯುತ್ತಾರೆ. ಶ್ರದ್ಧೆಯುಳ್ಳವರಾಗಿ, ಇಂದ್ರಿಯನಿಗ್ರಹವುಳ್ಳವರಾಗಿ, ಶ್ರೀಮಂತರಾಗಿ ಶುಭಕರ್ಮಿಗಳಾಗಿ ಉತ್ಪನ್ನರಾಗುತ್ತಾರೆ.

ವ್ಯಾಲಕುಂಜರದುರ್ಗೇಷು ಸರ್ಪಚೋರಭಯೇಷು ಚ ।
ಹಸ್ತವಾಮೇನ ಗಚ್ಛಂತಿ ನಾಸ್ತಿಕಾಃ ಕಿಮತಃ ಪರಮ್ ॥ ೫ ॥

ನಾಸ್ತಿಕರಾದವರು ಮಾಡಬಾರದ ಕಾರ್ಯಗಳಿಗೆ ಕೈಹಾಕಿ ಸರ್ಪ, ಚೋರರ ಬಾಧೆಗಳಿಂದ ಭಯಂಕರವಾದ ಪ್ರದೇಶಗಳಿಗೆ ಅಟ್ಟಲ್ಪಡುತ್ತಾರೆ. ಕ್ರೂರ ಮೃಗಗಳಿಂದಲೂ, ದುಷ್ಟಗಜಗಳಿಂದಲೂ ದುರ್ಗಮಗಳಾಗಿರುವ ಪ್ರದೇಶಗಳಿಗೆ ಅಟ್ಟಲ್ಪಡುತ್ತಾರೆ. ಅಪರಾಧಕ್ಕೆ ಅನುಗುಣವಾಗಿ ಯಮಭಟರಿಂದ ಎಡಗೈಯಿಂದ ಪೆಟ್ಟುಗಳನ್ನು ತಿನ್ನುತ್ತಾ ಅನರ್ಥದ ದಾರಿಯಲ್ಲಿ ಸಾಗುತ್ತಾರೆ. ಇದಕ್ಕಿಂತ ಹೆಚ್ಚೇನು ಹೇಳೋಣ?

ಪ್ರಿಯದೇವಾತಿಥೇಯಾಶ್ಚ ವದಾನ್ಯಾಃ ಪ್ರಿಯಸಾಧವಃ ।
ಕ್ಷೇಮ್ಯಮಾತ್ಮವತಾಂ ಮಾರ್ಗಮಾಸ್ಥಿತಾ ಹಸ್ತದಕ್ಷಿಣಮ್ ॥ ೬ ॥

ಯಾರು ದೈವಭೀತರಾಗಿ, ಅತಿಥಿಗಳಲ್ಲಿ ಆದರವುಳ್ಳವರಾಗಿ, ದಾನಶೀಲರಾಗಿ, ಸಾಧುಗಳಲ್ಲಿ ಪ್ರೀತಿಯುಳ್ಳವರಾಗಿ ಇರುತ್ತಾರೋ ಇಂತಹ ಸಜ್ಜನರು ದೇವತೆಗಳಿಂದ ಬಲಗೈಯಿಂದ ಸ್ವಾಗತಕ್ಕೆ ಅರ್ಹತೆಯನ್ನು ಉಳ್ಳವರಾಗಿ ಉತ್ತಮ ಸ್ಥಿತಿಗಳನ್ನು ಹೊಂದುತ್ತಾರೆ.

ಪುಲಾಕಾ ಇವ ಧಾನ್ಯೇಷು ಪುತ್ತಿಕಾ ಇವ ಪಕ್ಷಿಷು ।
ತದ್ವಿಧಾಸ್ತೇ ಮನುಷ್ಯೇಷು ಯೇಷಾಂ ಧರ್ಮೋ ನ ಕಾರಣಮ್ ॥ ೭ ॥

ಧರ್ಮವನ್ನು ಕ್ಷೇಮಕಾರಣ ಎಂದು ಯಾರು ತಿಳಿಯುವುದಿಲ್ಲವೋ ಅಂತಹ ಮನುಷ್ಯರು ಧಾನ್ಯಗಳ ನಡುವೆ ಇರುವ ಶುದ್ಧಧಾನ್ಯಗಳಲ್ಲಿ, ಜೊಳ್ಳುಗಳಂತೆ, ಪಕ್ಷಿಗಳ ಮಧ್ಯದಲ್ಲಿ ಸೊಳ್ಳೆಗಳಂತೆ, ದುರ್ಗಂಧಭರಿತವಾದ ಪಕ್ಷಿಜಾತಿಗಳಂತೆ ಪರಿಗಣಿಸಲ್ಪಡುತ್ತಾರೆ.

ಸುಶೀಘ್ರಮಪಿ ಧಾವಂತಂ ವಿಧಾನಮನುಧಾವತಿ ।
ಶೇತೇ ಸಹ ಶಯಾನೇನ ಯೇನ ಯೇನ ಯಥಾ ಕೃತಮ್ ॥ ೮ ॥

ಉಪತಿಷ್ಠತಿ ತಿಷ್ಠಂತಂ ಗಚ್ಛಂತಮನುಗಚ್ಛತಿ ।
ಕರೋತಿ ಕುರ್ವತಃ ಕರ್ಮ ಛಾಯೇವಾನುವಿಧೀಯತೇ ॥ ೯ ॥

ಯಾವ ಮನುಷ್ಯನು ಯಾವ ಯಾವ ಕರ್ಮವನ್ನು ಯಾವ ರೀತಿಯಾಗಿ ಆಚರಿಸುತ್ತಾನೋ ಆಯಾ ಕರ್ಮಗಳು ಮನುಷ್ಯನನ್ನು ಬಿಡದೆ ಬೆನ್ನಟ್ಟಿ ಬರುತ್ತವೆ. ಈ ಕರ್ಮಗಳು ಅವನು ಕುಳಿತಲ್ಲಿ, ನಿಂತಲ್ಲಿ ಹಿಂಬಾಲಿಸುತ್ತವೆ. ಓಡಿದಷ್ಟೂ ಓಡಿ ಬರುತ್ತವೆ. ಮಲಗಿದಾಗ ಮಲಗುತ್ತವೆ. ಪ್ರಾರಬ್ಧವೆಂಬುದು ಆಯಾ ಮನುಷ್ಯನ ನೆರಳಿನಂತೆ ಹಿಂಬಾಲಿಸುತ್ತದೆ.

ಯೇನ ಯೇನ ಯಥಾ ಯದ್ಯತ್ ಪುರಾ ಕರ್ಮ ಸಮಾಚಿತಮ್ ।
ತತ್ತದೇವ ನರೋ ಭುಂಕ್ತೇ ನಿತ್ಯಂ ವಿಹಿತಮಾತ್ಮನಾ ॥ ೧೦ ॥

ಯಾವ ಯಾವ ಮನುಷ್ಯನು ಯಾವ ಯಾವ ವಿಧವಾದ ಕರ್ಮಗಳನ್ನು ಹಿಂದಿನ ಜನ್ಮದಲ್ಲಿ ಹೇಗೆ ಆಚರಿಸಿರುತ್ತಾನೋ ಅದೇ ರೀತಿಯಾದ ಕರ್ಮಫಲಗಳನ್ನು, ಜನ್ಮಾಂತರದಲ್ಲಿ ತಾನು ಮಾಡಿದಂತೆ ನಿತ್ಯವೂ ಅನುಭವಿಸುತ್ತಾನೆ.

ಸ್ವಕರ್ಮಫಲವಿಕ್ಷಿಪ್ತಂ ವಿಧಾನಪರಿರಕ್ಷಿತಮ್ ।
ಭೂತಗ್ರಾಮಮಿಮಂ ಕಾಲಃ ಸಮಂತಾತ್ ಪರಿಕರ್ಷತಿ ॥ ೧೧ ॥

ಪ್ರಾಣಿಗಳು ಮಾಡಿದ ಕರ್ಮಗಳಿಗೆ ತಕ್ಕ ಸ್ವರ್ಗಾದಿ ಫಲಗಳನ್ನು ದೈವವು ಭದ್ರವಾಗಿ ಕಾಪಾಡಿಕೊಂಡಿರುತ್ತದೆ. ಕಾಲವೆಂಬುದು ಆಯಾ ಸಮಯಕ್ಕೆ ಸರಿಯಾಗಿ ಪ್ರಾಣಿ ವರ್ಗವನ್ನು ಸೆಳೆದುಕೊಂಡು ಹೋಗಿ ಆಯಾ ಫಲಗಳನ್ನು ಉಣಿಸುತ್ತದೆ.

ಅಚೋದ್ಯಮಾನಾನಿ ಯಥಾ ಪುಷ್ಪಾಣಿ ಚ ಫಲಾನಿ ಚ ।
ಸ್ವಕಾಲಂ ನಾತಿವರ್ತಂತೇ ತಥಾ ಕರ್ಮ ಪುರಾಕೃತಮ್ ॥ ೧೨ ॥

ಯಾರ ಪ್ರೇರಣೆಯೂ ಇಲ್ಲದೆ ವೃಕ್ಷಗಳು ತಮ್ಮ ಋತುಕಾಲಗಳಲ್ಲಿ ಪುಷ್ಪ-ಫಲಗಳನ್ನು ಹೊಂದುವಂತೆ ಕರ್ಮಗಳು ಆಯಾ ಕಾಲಕ್ಕೆ ಫಲವನ್ನು ತೋರಿಸುತ್ತವೆ.

ಸಮ್ಮಾನಶ್ಚಾವಮಾನಶ್ಚ ಲಾಭಾಲಾಭೌ ಕ್ಷಯೋದಯೌ ।
ಪ್ರವೃತ್ತಾ ವಿನಿವರ್ತಂತೇ ವಿಧಾನಾಂತೇ ಪುನಃ ಪುನಃ ॥ ೧೩ ॥

ಹಿಂದೆ ಮಾಡಿದ ಕರ್ಮಫಲಗಳನ್ನು ಅನುಭವಿಸಿದ ಮೇಲೆ ಯಾರಿಗೂ ಮಾನಾವಮಾನಗಳಾಗಲಿ, ಲಾಭ-ನಷ್ಟಗಳಾಗಲಿ, ವೃದ್ಧಿ-ಕ್ಷಯವಾಗಲಿ ತೋರಲು ಅವಕಾಶವಿರುವುದಿಲ್ಲ. ಕರ್ಮಫಲದ ಜೊತೆಗೆ ಅವೂ ತೀರಿಹೋಗುತ್ತವೆ.

ಆತ್ಮನಾ ವಿಹಿತಂ ದುಃಖಮಾತ್ಮನಾ ವಿಹಿತಂ ಸುಖಮ್ ।
ಗರ್ಭಶಯ್ಯಾಮುಪಾದಾಯ ಭುಜ್ಯತೇ ಪೌರ್ವದೇಹಿಕಮ್ ॥ ೧೪ ॥

ಪ್ರತಿಯೊಬ್ಬ ಪ್ರಾಣಿಯೂ ತಾನು ತಾಯಿಗರ್ಭದಲ್ಲಿ ಇರುವಾಗಲಿನಿಂದಲೇ ಪೂರ್ವದಲ್ಲಿಮಾಡಿದ ಕರ್ಮಗಳಿಗೆ ತಕ್ಕ ಸುಖ-ದುಃಖಗಳನ್ನು ಅನುಭವಿಸುತ್ತಿರುತ್ತಾನೆ.

ಬಾಲೋ ಯುವಾ ಚ ವೃದ್ಧಶ್ಚ ಯತ್ ಕರೋತಿ ಶುಭಾಶುಭಮ್ ।
ತಸ್ಯಾಂ ತಸ್ಯಾಮವಸ್ಥಾಯಾಂ ಭುಂಕ್ತೇ ಜನ್ಮನಿ ಜನ್ಮನಿ ॥ ೧೫ ॥

ಒಬ್ಬನು ಬಾಲ್ಯದಲ್ಲಿಯಾಗಲೀ, ಯೌವನದಲ್ಲಿಯಾಗಲೀ, ವೃದ್ಧಾಪ್ಯದಲ್ಲೇ ಆಗಲಿ ಶುಭಾಶುಭಕರ್ಮಗಳನ್ನು ಹೇಗೆ ನಡೆಸುತ್ತಾನೋ ಅದರಂತೆ ಅವನ ಮುಂದಿನ ಜನ್ಮದಲ್ಲಿ ಆಯಾ ಅವಸ್ಥೆಯಲ್ಲಿಯೇ ಅವುಗಳು ಅನುಭವಕ್ಕೆ ಬರುತ್ತವೆ.

ಯಥಾ ಧೇನುಸಹಸ್ರೇಷು ವತ್ಸೋ ವಿಂದತಿ ಮಾತರಮ್ ।
ತಥಾ ಪೂರ್ವಕೃತಂ ಕರ್ಮ ಕರ್ತಾರಮನುಗಚ್ಛತಿ ॥ ೧೬ ॥

ಸಾವಿರಾರು ಹಸುಗಳಿರುವ ಮಂದೆಯಲ್ಲಿ ಕರುವು ತನ್ನ ತಾಯಿಯನ್ನು ಗುರುತು ಹಿಡಿದು ಓಡುವಂತೆ ಪೂರ್ವಕರ್ಮವು ಮುಂದಿನ ಜನ್ಮದಲ್ಲಿ ಹುಟ್ಟಿದ ಕರ್ತೃವನ್ನು ಕಂಡುಹಿಡಿದು ಹಿಂಬಾಲಿಸುತ್ತದೆ.

ಸಂಶ್ಲಿಷ್ಟಮಗ್ರತೋ ವಸ್ತ್ರಂ ಪಶ್ಚಾಚ್ಛುದ್ಧ್ಯತಿ ಕರ್ಮಣಾ ।
ಉಪವಾಸೈಃ ಪ್ರತಪ್ತಾನಾಂ ದೀರ್ಘಂ ಸುಖಮನಂತಕಮ್ ॥ ೧೭ ॥

ಬಹಳ ಮುದುರಿ ಕೊಳೆಯಾದ ವಸ್ತುವು, ಬೆವರಿನಿಂದ ಮಲಿನವಾದ ವಸ್ತ್ರವು ನೀರಿನಿಂದ ಶುದ್ಧವಾಗುವಂತೆ ಹಿಂದೆ ಮಾಡಿದ ದುಷ್ಕರ್ಮವು ಮುಂದಿನ ಪುಣ್ಯ ಕರ್ಮಗಳಿಂದ ಪರಿಹಾರವಾಗಿ ಮನುಷ್ಯನು ಶುದ್ಧಿಯನ್ನು ಹೊಂದುತ್ತಾನೆ.

ದುಷ್ಕರ್ಮಾಪಿ ತಥಾ ಪಶ್ಚಾತ್ ಪೂಯತೇ ಪುಣ್ಯಕರ್ಮಣಾ ।
ತಪಸಾ ತಪ್ಯತೇ ದೇಹಸ್ತಪಸಾ ವಿಂದತೇ ಮಹತ್ ।
ದೀರ್ಘಕಾಲೇನ ತಪಸಾ ಸೇವಿತೇನ ತಪೋವನೇ ।
ಧರ್ಮನಿರ್ಧೂತಪಾಪಾನಾಂ ಸಂಸಿದ್ಧ್ಯಂತೇ ಮನೋರಥಾಃ ॥ ೧೮ ॥

ದುಷ್ಕರ್ಮಿಯಾಗಿದ್ದರೂ ಆಮೇಲೆ ಮಾಡಿದ ಪುಣ್ಯಕರ್ಮಗಳಿಂದ ಪವಿತ್ರನಾಗುತ್ತಾನೆ. ತಪಸ್ಸಿನಿಂದ ದೇಹವು ಶುದ್ಧವಾಗುತ್ತದೆ. ತಪಸ್ಸಿನಿಂದಲೇ ಮಹತ್ತಾದ್ದನ್ನು ಹೊಂದುತ್ತಾನೆ. ದೀರ್ಘಕಾಲವಾದ ತಪಸ್ಸುಗಳನ್ನು ತಪೋವನಗಳಲ್ಲಿ ಅನುಷ್ಠಾನ ಮಾಡಿದ ಬಳಿಕ ಧರ್ಮಾಚರಣೆಯಿಂದ ಪಾಪಗಳು ಪರಿಹಾರವಾಗಿ ಮನೋರಥಗಳು ಸಿದ್ಧಿಸುತ್ತವೆ.

ಶಕುನೀನಾಮಿವಾಕಾಶೇ ಮತ್ಸ್ಯಾನಾಮಿವ ಚೋದಕೇ ।
ಪದಂ ಯಥಾ ನ ದೃಶ್ಯೇತ ತಥಾ ಜ್ಞಾನವಿದಾಂ ಗತಿಃ ॥ ೧೯ ॥

ಆಕಾಶದಲ್ಲಿ ಪಕ್ಷಿಗಳು ಸಂಚರಿಸುವಾಗ ಅವುಗಳು ಹೋಗುವ ದಾರಿಯನ್ನು ಹೇಗೆ ಕಂಡುಕೊಳ್ಳಲು ಸಾಧ್ಯವಿಲ್ಲವೋ, ನೀರಿನಲ್ಲಿ ಸಂಚರಿಸುವ ಮತ್ಸ್ಯಗಳು ಹೋಗುವ ದಾರಿಯು ಹೇಗೆ ಅರಿಯದೋ ಹಾಗೆ ಧರ್ಮಜ್ಞರ ಗತಿಯನ್ನು ಕಂಡುಕೊಳ್ಳುವುದು ಬಹಳ ಕಷ್ಟ.

ಅಲಮನ್ಯೈರುಪಾಲಂಭೈಃ ಕೀರ್ತಿತೈಶ್ಚ ವ್ಯತಿಕ್ರಮೈಃ ।
ಪೇಶಲಂ ಚಾನುರೂಪಂ ಚ ಕರ್ತವ್ಯಂ ಹಿತಮಾತ್ಮನಃ ॥ ೨೦ ॥

ಈ ವಿಷಯದಲ್ಲಿ ಇನ್ನೂ ಹೆಚ್ಚು ಆಕ್ಷೇಪವಿಷಯಗಳು ಸಾಕು. ತಪ್ಪುಗಳನ್ನು ತಿಳಿಸುವುದೂ ಸಾಕು. ಮನುಷ್ಯನು ತನ್ನ ಯೋಗ್ಯವಾದ ದಾರಿಯನ್ನು ತಿಳಿದು ಆತ್ಮಕ್ಕೆ ಯಾವುದು ಹಿತವೋ ಅದನ್ನು ನಡೆಸಬೇಕು ಎಂದು ಹೇಳಿದರು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಏಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಎಂಟನೆಯ ಅಧ್ಯಾಯ

ಭರದ್ವಾಜರಿಗೆ ಭೃಗುವು ಹೇಳಿದ ಜಗತ್ಸೃಷ್ಟ್ಯಾದಿ ಕರ್ತೃತ್ವವನ್ನು
ಭೀಷ್ಮರು ಧರ್ಮರಾಜನಿಗೆ ತಿಳಿಸಿದುದು.

ಯುಧಿಷ್ಠಿರಃ

ಕುತಃ ಸೃಷ್ಟಮಿದಂ ವಿಶ್ವಂ ಜಗತ್ ಸ್ಥಾವರಜಂಗಮಮ್ ।
ಪ್ರಲಯೇ ಚ ಕಮಭ್ಯೇತಿ ತನ್ಮೇ ಬ್ರೂಹಿ ಪಿತಾಮಹ ॥ ೧ ॥

ಯುಧಿಷ್ಠಿರ– ಪಿತಾಮಹನೇ, ಚರಾಚರಾತ್ಮಕವಾದ ಈ ಪ್ರಪಂಚವು ಯಾರಿಂದ, ಎಲ್ಲಿಂದ ಸೃಷ್ಟಿಸಲ್ಪಟ್ಟಿತು? ಪ್ರಳಯಕಾಲದಲ್ಲಿ ಇದು ಎಲ್ಲಿಗೆ ಸೇರುತ್ತದೆ? ಈ ವಿಷಯವನ್ನು ತಿಳಿಸಿರಿ.

ಸಸಾಗರಃ ಸಗಗನಃ ಸಶೈಲಃ ಸಬಲಾಹಕಃ ।
ಸಭೂಮಿಃ ಸಾಗ್ನಿಪವನೋ ಲೋಕೋऽಯಂ ಕೇನ ನಿರ್ಮಿತಃ ॥ ೨ ॥

ಸಮುದ್ರಗಳು, ಪರ್ವತಗಳು, ಮೇಘಗಳು, ಮೋಡಗಳು, ಭೂಮಿ, ಅಗ್ನಿ, ಗಾಳಿ ಇವುಗಳಿಂದ ಕೂಡಿದ ಈ ಲೋಕವನ್ನು ಯಾರು ಸೃಷ್ಟಿಸಿದ್ದಾರೆ?

ಕಥಂ ಸೃಷ್ಟಾನಿ ಭೂತಾನಿ ಕಥಂ ವರ್ಣವಿಭಕ್ತಯಃ ।
ಶೌಚಾಶೌಚಂ ಕಥಂ ತೇಷಾಂ ಧರ್ಮಾಧರ್ಮಾವಥೋ ಕಥಮ್ ॥ ೩ ॥

ಭೂತಗಳ ಸೃಷ್ಟಿಯ ಪ್ರಕಾರವೇನು? ಬ್ರಾಹ್ಮಣಾದಿ ವರ್ಣವಿಭಾಗಗಳು ಹೇಗೆ ಉಂಟಾದವು? ಆ ವರ್ಣಗಳಿಗೆ ಶುಚಿತ್ವವು, ಅಶುಚಿತ್ವವು ಹೇಗೆ ಉಂಟಾಯಿತು? ಧರ್ಮಾಧರ್ಮಗಳ ವಿಧಿಗಳೇನು?

ಕೀದೃಶೋ ಜೀವತಾಂ ಜೀವಃ ಕ್ವ ವಾ ಗಚ್ಛಂತಿ ಯೇ ಮೃತಾಃ ।
ಅಸ್ಮಾಲ್ಲೋಕಾದಮುಂ ಲೋಕಂ ಸರ್ವಂ ಶಂಸತು ನೋ ಭವಾನ್ ॥೪॥

ಬದುಕಿರುವ ಪ್ರಾಣಿಗಳ ಜೀವಸ್ವರೂಪವು ಯಾವ ರೀತಿಯದ್ದು? ಸತ್ತವರು ಎಲ್ಲಿಗೆ ಹೋಗುತ್ತಾರೆ? ಈ ಲೋಕದಿಂದ ಅವರು ಪರಲೋಕಕ್ಕೆ ಹೇಗೆ ಹೋಗುತ್ತಾರೆ? ಇವೆಲ್ಲವನ್ನೂ ನನಗೆ ತಿಳಿಸಿರಿ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಭೃಗುಣಾಭಿಹಿತಂ ಶ್ರೇಷ್ಠಂ ಭರದ್ವಾಜಾಯ ಪೃಚ್ಛತೇ ॥ ೫ ॥

ಭೀಷ್ಮ– ಕುಮಾರನೇ, ಹಿಂದೆ ಭೃಗುಮುನಿಯು ಭರದ್ವಾಜರಿಗೆ ಹೇಳಿದ ಕಥಾ ರೂಪವಾದ ಇತಿಹಾಸವೊಂದನ್ನು ಉದಾಹರಿಸುತ್ತಾರೆ.

ಕೈಲಾಸಶಿಖರೇ ದೃಷ್ಟ್ವಾ ದೀಪ್ಯಮಾನಮಿವೌಜಸಾ ।
ಭೃಗುಂ ಮಹರ್ಷಿಮಾಸೀನಂ ಭರದ್ವಾಜೋಽನ್ವಪೃಚ್ಛತ ॥ ೬ ॥

ಹಿಂದೆ ಭೃಗುಮಹರ್ಷಿಯು ಕೈಲಾಸಶಿಖರದಲ್ಲಿ ಮಹಾತೇಜಸ್ವಿಯಾಗಿ ಕುಳಿತಿರುವಾಗ ಭರದ್ವಾಜರು ನಿನ್ನಂತೆ ಇದೇ ವಿಷಯವಾಗಿ ಅವರ ಬಳಿ ಪ್ರಶ್ನಿಸಿದರು.

ಸಸಾಗರಃ ಸಗಗನಃ ಸಶೈಲಃ ಸಬಲಾಹಕಃ ।
ಸಭೂಮಿಃ ಸಾಗ್ನಿಪವನೋ ಲೋಕೋಽಯಂ ಕೇನ ನಿರ್ಮಿತಃ ॥ ೭ ॥

ಭೃಗುಋಷಿಯೇ, ಸಮುದ್ರ, ಆಕಾಶ, ಅಗ್ನಿ, ಪರ್ವತ, ವಾಯು, ಭೂಮಿ ಇವುಗಳಿಂದ ಕೂಡಿದ ಲೋಕವು ಯಾರಿಂದ ನಿರ್ಮಿತವಾಗಿದೆ?

ಕಥಂ ಸೃಷ್ಟಾನಿ ಭೂತಾನಿ ಕಥಂ ವರ್ಣವಿಭಕ್ತಯಃ ।
ಶೌಚಾಶೌಚಂ ಕಥಂ ತೇಷಾಂ ಧರ್ಮಾಧರ್ಮಾವಥೋ ಕಥಮ್ ॥ ೮ ॥

ಭೂತಸೃಷ್ಟಿಯ ಕ್ರಮ, ವರ್ಣವಿಭಾಗ, ಶೌಚಾಶೌಚ, ಧರ್ಮಾಧರ್ಮ ಇವುಗಳೆಲ್ಲವೂ ಯಾರಿಂದ ನಿರ್ಮಿತವಾದವು?

ಕೀದೃಶೋ ಜೀವತಾಂ ಜೀವಃ ಕ್ವ ವಾ ಗಚ್ಛಂತಿ ಯೇ ಮೃತಾಃ ।
ಪರಲೋಕಮಿಮಂ ಚಾಪಿ ಸರ್ವಂ ಶಂಸತು ನೋ ಭವಾನ್ ॥ ೯ ॥

ಜೀವರ ಸ್ವರೂಪ, ಮೃತರಾದವರು ಹೋಗುವ ಸ್ಥಳ, ಇಹಲೋಕದ ಪರಲೋಕದ ಸ್ವರೂಪ ಇವೆಲ್ಲವನ್ನೂ ನನಗೆ ತಿಳಿಸು.

ಏವಂ ಸ ಭಗವಾನ್ ಪೃಷ್ಟೋ ಭರದ್ವಾಜೇನ ಸಂಶಯಮ್ ।
ಮಹರ್ಷಿರ್ಬ್ರಹ್ಮಸಂಕಾಶಃ ಸರ್ವಂ ತಸ್ಮೈ ತತೋಽಬ್ರವೀತ್ ॥ ೧೦ ॥

ಈ ರೀತಿಯಾಗಿ ಬ್ರಹ್ಮಸಮಾನನಾದ ಭೃಗುವು ಭರದ್ವಾಜರಿಂದ ಈ ಪ್ರಶ್ನೆಗಳನ್ನು ಕೇಳಿಸಿಕೊಂಡು ಉತ್ತರಿಸಲು ತೊಡಗಿದನು.

ಮಾನಸೋ ನಾಮ ವಿಖ್ಯಾತಃ ಶ್ರುತಪೂರ್ವೋ ಮಹರ್ಷಿಭಿಃ ।
ಅನಾದಿನಿಧನೋ ದೇವಸ್ತಥಾಭೇದ್ಯೋಽಜರಾಮರಃ ॥ ೧೧ ॥

ಆದಿಪುರುಷನಾದ ನಾರಾಯಣನನ್ನು ಋಷಿಗಳು ಮಾನಸ ಪುರುಷನೆಂದು ಕರೆಯುತ್ತಾರೆ. ಮಾನಸ ಪುರುಷ ಎಂದೇ ಅವನಿಗೆ ಪ್ರಸಿದ್ಧಿಯು. ಅವನಿಗೆ ಆದ್ಯಂತಗಳಿಲ್ಲ. ಅವನು ಶಸ್ತ್ರಗಳಿಂದ ತುಂಡಾಗುವವನಲ್ಲ. ಜರಾ-ಮರಣಗಳು ಉಳ್ಳವನಲ್ಲ.

ಅವ್ಯಕ್ತ ಇತಿ ವಿಖ್ಯಾತಃ ಶಾಶ್ವತೋಽಥಾಕ್ಷರೋಽವ್ಯಯಃ ।
ಯತಃ ಸೃಷ್ಟಾನಿ ಭೂತಾನಿ ಜಾಯಂತೇ ಚ ಮ್ರಿಯಂತಿ ಚ ॥ ೧೨ ॥

ಅವನು ಅವ್ಯಕ್ತನೆಂದೂ, ಅಕ್ಷಯ, ಅವ್ಯಯ, ಶಾಶ್ವತನೆಂದೂ ಪ್ರಸಿದ್ಧಿ ಹೊಂದಿದ್ದಾನೆ. ಭೂತಗಳೆಲ್ಲವೂ ಅವನಿಂದಲೇ ಹುಟ್ಟಿ, ಅವನಲ್ಲೇ ಲಯ ಹೊಂದುತ್ತವೆ.

ಸೋಽಸೃಜತ್ ಪ್ರಥಮಂ ದೇವೋ ಮಹಾಂತಂ ನಾಮ ನಾಮತಃ ।
ಆಕಾಶಮಿತಿ ವಿಖ್ಯಾತಂ ಸರ್ವಭೂತಧರಃ ಪ್ರಭುಃ ॥ ೧೩ ॥

ಅವನು ಮೊದಲು ಮಹತ್ತೆಂಬ ತತ್ತ್ವವನ್ನು ಸೃಷ್ಟಿಸಿದನು. ಮಹತ್ತು ಅಹಂಕಾರ ತತ್ತ್ವವನ್ನು ಸೃಷ್ಟಿಸಿತು. ಅದರ ಮೂಲಕ ಆಕಾಶವು ಸೃಷ್ಟವಾಯಿತು. ಇದೇ ಸರ್ವಭೂತಗಳಿಗೆ ಧಾರಕವಾಗಿದೆ.

ಆಕಾಶಾದಭವದ್ ವಾರಿ ಸಲಿಲಾದಗ್ನಿಮಾರುತೌ ।
ಅಗ್ನಿಮಾರುತಸಂಯೋಗಾತ್ತತಃ ಸಮಭವನ್ಮಹೀ ॥ ೧೪ ॥

ಆಕಾಶದಿಂದ ಜಲ, ಜಲದಿಂದ ಅಗ್ನಿ-ವಾಯುಗಳು, ಅವೆರಡರ ಸಂಪರ್ಕದಿಂದ ಭೂಮಿಯು ಹುಟ್ಟಿತು.

ತತಸ್ತೇಜೋಮಯಂ ದಿವ್ಯಂ ಪದ್ಮಂ ಸೃಷ್ಟಂ ಸ್ವಯಂಭುವಾ ।
ತಸ್ಮಾತ್ ಪದ್ಮಾತ್ ಸಮಭವದ್ ಬ್ರಹ್ಮಾ ವೇದಮಯೋ ನಿಧಿಃ ॥ ೧೫ ॥

ಬಳಿಕ ಮಾನಸ ಪುರುಷನು ತೇಜೋಮಯವಾದ ದಿವ್ಯ ಕಮಲ ಒಂದನ್ನು ಸೃಷ್ಟಿಸಿದನು. ಆ ಕಮಲದಿಂದ ವೇದನಿಧಿಯಾದ ಸ್ವಯಂಭು ಎನಿಸಿದ ಚತುರ್ಮುಖ ಬ್ರಹ್ಮನು ಹುಟ್ಟಿದನು.

ಅಹಂಕಾರ ಇತಿ ಖ್ಯಾತಃ ಸರ್ವಭೂತಾತ್ಮಭೂತಕೃತ್ ।
ಬ್ರಹ್ಮಾ ವೈ ಸುಮಹಾತೇಜಾ ಯ ಏತೇ ಪಂಚ ಧಾತವಃ ॥ ೧೬ ॥

ಅವನು ಹುಟ್ಟಿದ ಕೂಡಲೇ ಸಮಸ್ತ ಪ್ರಾಣಿಗಳಿಗೂ ಪ್ರೇರಕವಾದ ಅಹಂಕಾರ ಎಂಬ ಶಬ್ದದಿಂದ ಅಹಂಕಾರತತ್ತ್ವಪ್ರೇರಕನಾಗಿ ಖ್ಯಾತನಾದನು. ಸಮಸ್ತ ಜೀವರಾಶಿಗಳಿಗೂ ಪಾಂಚಭೌತಿಕ ದೇಹವನ್ನು ನಿರ್ಮಿಸುವವನು ಇವನೇ. ಮಹಾತೇಜಸ್ವಿಯಾದ ಈ ಚತುರ್ಮುಖ ಬ್ರಹ್ಮನೇ ಈ ಪಂಚಭೂತಗಳಿಗೆ ನಿಯಾಮಕನಾಗಿದ್ದಾನೆ.

ಶೈಲಾಸ್ತಸ್ಯಾಸ್ಥಿಸಂಜ್ಞಾಸ್ತು ಮೇದೋ ಮಾಂಸಂ ಚ ಮೇದಿನೀ ।
ಸಮುದ್ರಾಸ್ತಸ್ಯ ರುಧಿರಮಾಕಾಶಮುದರಂ ತಥಾ ॥ ೧೭ ॥

ನಮ್ಮ ಕಣ್ಣಿಗೆ ಕಾಣುವ ಪರ್ವತಗಳೇ ವಿಶ್ವರೂಪ ಎನಿಸಿದ ಪದ್ಮನಾಭನ ಅಸ್ಥಿಗಳು. ಭೂಮಿಯೇ ಅವನ ಮೇದಸ್ಸು, ಮಾಂಸಗಳು. ಸಮುದ್ರವೇ ಅವನ ರಕ್ತವು. ಆಕಾಶವೇ ಅವನ ಜಠರವು.

ಪವನಶ್ಚೈವ ನಿಃಶ್ವಾಸಸ್ತೇಜೋऽಗ್ನಿರ್ಮನ್ಯುಗಾಃ ಸಿರಾಃ ।
ಅಗ್ನೀಷೋಮೌ ತು ಚಂದ್ರಾರ್ಕೌ ನಯನೇ ತಸ್ಯ ವಿಶ್ರುತೇ ॥ ೧೮ ॥

ವಾಯುವು ಅವನ ಉಸಿರು. ಅಗ್ನಿಯು ಅವನ ತೇಜಸ್ಸು. ನದಿಗಳು ಅವನ ನಾಡಿಗಳು. ಸೂರ್ಯಚಂದ್ರರು ಅವನ ಕಣ್ಣುಗಳು.

ನಭಶ್ಚೋರ್ಧ್ವಂ ಶಿರಸ್ತಸ್ಯ ಕ್ಷಿತಿಃ ಪಾದೌ ದಿಶೋ ಭುಜೌ ।
ದುರ್ವಿಜ್ಞೇಯೋ ಹ್ಯನಂತತ್ವಾತ್ ಸಿದ್ಧೈರಪಿ ನ ಸಂಶಯಃ ॥ ೧೯ ॥

ಆಕಾಶವು ಅವನ ಶಿರಸ್ಸು. ಭೂಮಿಯು ಅವನ ಪಾದಗಳು. ದಿಕ್ಕುಗಳು ಅವನ ಭುಜಗಳು. ಅವನು ಅನಂತನಾದುದರಿಂದ ಆ ಅನಂತತತ್ವನಾದ ಅವನನ್ನು ತಿಳಿಯಲು ಸಿದ್ಧರಿಗೂ ಸಾಧ್ಯವಿಲ್ಲ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಸ ಏವ ಭಗವಾನ್ ವಿಷ್ಣುರನಂತ ಇತಿ ವಿಶ್ರುತಃ ।
ಸರ್ವಭೂತಾತ್ಮಭೂತಸ್ಥೋ ದುರ್ವಿಜ್ಞೇಯೋಽಕೃತಾತ್ಮಭಿಃ ॥ ೨೦ ॥

ಅಂತಹ ಭಗವಂತನೇ ಷಡ್ಗುಣೈಶ್ವರ್ಯಸಂಪನ್ನನಾದ ವಿಷ್ಣುವೇ ಅನಂತ ಎಂದು ಖ್ಯಾತನಾಗಿದ್ದಾನೆ. ಸಮಸ್ತ ಜೀವರ ಅಂತರ್ಯಾಮಿಯಾಗಿರುವ ಈ ವಿಷ್ಣುವು ಸತ್ಕರ್ಮಗಳನ್ನು ಆಚರಿಸದವರಿಗೆ ತಿಳಿಯದವನಾಗಿದ್ದಾನೆ.

ಅಹಂಕಾರಸ್ಯ ಯಃ ಸ್ರಷ್ಟಾ ಸರ್ವಭೂತಭವಾಯ ವೈ ।
ಯತಃ ಸಮಭವದ್ ವಿಶ್ವಂ ಪೃಷ್ಟೋಽಹಂ ಯದಿಹ ತ್ವಯಾ ॥ ೨೧ ॥

ಸಮಸ್ತ ಭೂತಗಳ ಉತ್ಪತ್ತಿಗಳಿಗೆ ಬೇಕಾದ ಅಹಂಕಾರತತ್ತ್ವವು ಅವನಿಂದ ಸೃಷ್ಟವಾಯಿತು. ಜಗತ್ತೆಲ್ಲವೂ ಅವನಿಂದಲೇ ಉತ್ಪನ್ನವಾಯಿತು.

ಭರದ್ವಾಜಃ

ಗಗನಸ್ಯ ದಿಶಾಂ ಚೈವ ಭೂತಲಸ್ಯಾನಿಲಸ್ಯ ಚ ।
ಕಾನ್ಯತ್ರ ಪರಿಮಾಣಾನಿ ಸಂಶಯಂ ಉಂಧಿ ಮೇಽರ್ಥತಃ ॥ ೨೨ ॥

ಭರದ್ವಾಜ– ಭೃಗುಶ್ರೇಷ್ಠನೇ, ಆಕಾಶ, ದಿಕ್ಕು, ಭೂಮಿ, ವಾಯು ಇವುಗಳ ಅಳತೆ ಏನೆಂಬುದನ್ನು ನನಗೆ ತಿಳಿಸು. ನನ್ನ ಸಂಶಯವನ್ನು ಪರಿಹರಿಸು.

ಭೃಗುಃ

ಅನಂತಮೇತದಾಕಾಶಂ ಸಿದ್ಧಚಾರಣಸೇವಿತಮ್ ।
ರಮ್ಯಂ ನಾನಾಶ್ರಯಾಕೀರ್ಣಂ ಯಸ್ಯಾಂತೋ ನಾಧಿಗಮ್ಯತೇ ॥ ೨೩ ॥

ಭೃಗು– ನೀನು ನೋಡುತ್ತಿರುವ ಈ ಆಕಾಶಕ್ಕೆ ಅನಂತ ಎಂದು ಹೆಸರು. ಇದಕ್ಕೆ ಕೊನೆಯೇ ಇಲ್ಲ, ಮೊದಲೂ ಇಲ್ಲ. ಸಿದ್ಧ-ಚಾರಣರಿಗೆ ನಿವಾಸವಾಗಿ ರಮ್ಯವಾಗಿ ಎಲ್ಲ ಕಡೆಯೂ ವ್ಯಾಪ್ತವಾಗಿರುವ ಇದರ ಕೊನೆಯನ್ನು ಯಾರಿಂದಲೂ ನೋಡಲಾಗದು.

ಊರ್ಧ್ವಂ ಗತೇರಧಸ್ತಾತ್ತು ಚಂದ್ರಾದಿತ್ಯೌ ನ ದೃಶ್ಯತಃ ।
ತತ್ರ ದೇವಾಃ ಸ್ವಯಂ ದೀಪ್ತಾ ಭಾಸ್ವರಾಶ್ಚಾಗ್ನಿವರ್ಚಸಃ ॥ ೨೪ ॥

ಚಂದ್ರ-ಸೂರ್ಯರು ಈ ಆಕಾಶದ ಕೆಳಭಾಗವನ್ನಾಗಲೀ, ಮೇಲ್ಭಾಗವನ್ನಾಗಲೀ ತಮ್ಮ ಕಿರಣಗಳನ್ನು ಚೆಲ್ಲುವಷ್ಟು ದೂರದವರೆಗೆ ನೋಡುವವರೇ ಹೊರತು ಅದರಿಂದಾಚೆಗೆ ಅವರಿಂದಲೂ ನೋಡಲಾಗದು. ಸೂರ್ಯ-ಚಂದ್ರರ ಕಿರಣಗಳೂ ಮುಟ್ಟಲಾಗದ ಆಕಾಶದ ಭಾಗಗಳಲ್ಲಿ ಸೂರ್ಯಾಗ್ನಿಗಳಂತೆ ಸ್ವಪ್ರಕಾಶದಿಂದ ಬೆಳಗುತ್ತಿರುವ ದೇವತೆಗಳಿದ್ದಾರೆ.

ತೇ ಚಾಪ್ಯಂತಂ ನ ಪಶ್ಯಂತಿ ನಭಸಃ ಪ್ರಥಿತೌಜಸಃ ।
ದುರ್ಗಮತ್ವಾದನಂತತ್ವಾದಿತಿ ಮೇ ವಿದ್ಧಿ ಮಾನದ ॥ ೨೫ ॥

ಅವರು ಈ ಆಕಾಶದ ಕೊನೆಯನ್ನು ಕಂಡವರಲ್ಲ. ಅದು ಅನಂತವಾಗಿ ಎಂತಹ ವ್ಯಕ್ತಿಗಳಿಗೂ ದುರ್ಗಮವಾಗಿರುವುದರಿಂದ ಯಾರೂ ಅದರ ಕೊನೆಯನ್ನು ಕಂಡವರಿಲ್ಲವೆಂದು ಶ್ರುತಿಗಳು ಹೇಳುತ್ತಿವೆ.

ಉಪರಿಷ್ಟೋಪರಿಷ್ಟಾತ್ತು ಪ್ರಜ್ವಲದ್ಭಿಃ ಸ್ವಯಂಪ್ರಭೈಃ ।
ನಿರುದ್ಧಮೇತದಾಕಾಶಮಪ್ರಮೇಯಂ ಸುರೈರಪಿ ॥ ೨೬ ॥

ಭೂಮಿಯ ಮೇಲೆ ಮೇಲ್ಭಾಗದಲ್ಲಿ ಪ್ರಜ್ವಲಿತವಾದ ಸ್ವಯಂ ಪ್ರಭೆಗಳಿಂದ ಆಕಾಶವು ಆವೃತವಾಗಿದೆ. ಈ ಅಗಣಿತ ಆಕಾಶವನ್ನು ದೇವತೆಗಳಿಂದಲೂ ತಿಳಿಯಲಾಗಿಲ್ಲ.

ಪೃಥಿವ್ಯಂತೇ ಸಮುದ್ರಾಸ್ತು ಸಮುದ್ರಾಂತೇ ತಮಃ ಸ್ಮೃತಮ್ ।
ತಮಸೋಽಂತೇ ಜಲಂ ಪ್ರಾಹುರ್ಜಲಸ್ಯಾಂತೇಽಗ್ನಿರೇವ ಚ ॥ ೨೭ ॥

ಈ ಭೂಮಿಯಿಂದಾಚೆಗೆ ಸಮುದ್ರಗಳಿವೆ. ಸಮುದ್ರದ ಕೊನೆಗೆ ದೊಡ್ಡ ತಮಸ್ಸಿದೆ. ತಮಸ್ಸಿನಿಂದಾಚೆ ತಿರುಗಿ ಜಲವಿದೆ. ಜಲದಿಂದಾಚೆಗೆ ಅಗ್ನಿಯು ಇದೆ.

ರಸಾತಲಾಂತೇ ಸಲಿಲಂ ಜಲಾಂತೇ ಪನ್ನಗಾಧಿಪಃ ।
ತದಂತೇ ಪುನರಾಕಾಶಮಾಕಾಶಾಂತೇ ಪುನರ್ಜಲಮ್ ॥ ೨೮ ॥

ಭೂಮಿಯ ಕೆಳಗೆ ರಸಾತಲದ ಕೊನೆಯಲ್ಲಿ ಜಲವೂ, ಆ ಜಲದಿಂದಾಚೆಗೆ ಮಹಾಸರ್ಪಗಳು, ಅದರಿಂದಾಚೆ ಆಕಾಶವು, ಆಮೇಲೆ ಪುನಃ ಜಲವು ಹೀಗೆ ನೀರು ಆಕಾಶ ಒಂದರ ಮೇಲೊಂದು ಎಡೆಬಿಡದೆ ವ್ಯಾಪಕವಾಗಿವೆ.

ಏವಮಂತಂ ಭಗವತಃ ಪ್ರಮಾಣಂ ಸಲಿಲಸ್ಯ ಚ ।
ಅಗ್ನಿಮಾರುತತೋಯೇಭ್ಯೋ ದುಜ್ಞೇಯಂ ದೈವತೈರಪಿ ॥ ೨೯ ॥

ಈ ರೀತಿಯಾಗಿ ಆಕಾಶ ಮತ್ತು ಜಲದ ಅಳತೆಯನ್ನು ಇಷ್ಟು ಮಾತ್ರ ತಿಳಿಯಬಹುದಾಗಿದೆ. ಅಗ್ನಿ-ವಾಯು-ಜಲ ಇವುಗಳ ಕೊನೆಯನ್ನು ದೇವತೆಗಳಿಂದಲೂ ತಿಳಿಯಲು ಸಾಧ್ಯವಿಲ್ಲ.

ಅಗ್ನಿಮಾರುತತೋಯಾನಾಂ ವರ್ಣಾಃ ಕ್ಷಿತಿತಲಸ್ಯ ಚ ।
ಆಕಾಶಸದೃಶಾ ಹ್ಯೇತೇ ಭಿದ್ಯಂತೇ ತತ್ತ್ವದರ್ಶನಾತ್ ॥ ೩೦ ॥

ಅಗ್ನಿ, ವಾಯು, ಭೂಮಿ, ನೀರು ಇವುಗಳ ಸ್ವರೂಪಗಳೆಲ್ಲವೂ ಒಂದೇ ವಿಧವಾಗಿದೆ. ಆಕಾಶದಂತೆ ವ್ಯಾಪಕವಾಗಿಯೇ ಇದೆ. ತತ್ತ್ವದರ್ಶನವುಳ್ಳವರಿಗೆ ಭಿನ್ನವಾಗಿ ತೋರುತ್ತದೆ.

ಪಠಂತಿ ಚೈವ ಮುನಯಃ ಶಾಸ್ತ್ರೇಷು ವಿವಿಧೇಷು ಚ ।
ತ್ರೈಲೋಕ್ಯೇ ಸಾಗರೇ ಚೈವ ಪ್ರಮಾಣಂ ವಿಹಿತಂ ಯಥಾ ।
ಅದೃಶ್ಯಾಯ ತ್ವಗಮ್ಯಾಯ ಕಃ ಪ್ರಮಾಣಮುದಾಹರೇತ್ ॥ ೩೧ ॥

ನಾನಾ ಶಾಸ್ತ್ರಗಳಲ್ಲಿ ಮಹರ್ಷಿಗಳು ಮೂರುಲೋಕದ ಮತ್ತು ಸಮುದ್ರದ ಅಳತೆಯನ್ನು ವಿಮರ್ಶಿಸಿದ್ದಾರೆ. ಆದರೆ ಅವುಗಳು ಅದೃಶ್ಯವೂ, ಅಗಮ್ಯವೂ ಆದ ವಸ್ತುಗಳಾಗಿರುವುದರಿಂದ ಅವುಗಳ ಅಳತೆಯನ್ನು ಯಾರಿಂದಲೂ ತಿಳಿದು ಹೇಳುವುದು ಸಾಧ್ಯವಿರುವುದಿಲ್ಲ.

ವ್ಯಾಖ್ಯಾನ ವಿಶೇಷ– ಇಂತಹ ಭೂತಗಳನ್ನು ನಿರ್ಮಿಸಿದ ಭಗವಂತನ ಇತಿ-ಮಿತಿಯನ್ನು ಯಾರಿಂದಲೂ ತಿಳಿಸಲು ಸಾಧ್ಯವಿಲ್ಲ ಎನ್ನಬೇಕೇ ವಿನಾ ಪಂಚಭೂತಗಳಿಗೆ ಅಭಿಮಾನಿದೇವತೆಗಳಿರುವುದರಿಂದ ಪಂಚಭೂತಗಳ ಇತಿ-ಮಿತಿಯನ್ನು ತಿಳಿಸಲು ಯಾರಿಂದಲೂ ಸಾಧ್ಯವಿಲ್ಲ ಎನ್ನಬಾರದು. ಪರಮಾತ್ಮನು ಅದೃಶ್ಯನೂ, ಅಪ್ರಮೇಯನೂ, ಅಗಮ್ಯನೂ ಆಗಿದ್ದಾನೆ ಹೊರತು ಆಕಾಶವಲ್ಲ. ಒಂದು ವೇಳೆ ಪಂಚಭೂತಗಳಿಗೇ ಈ ವ್ಯಾಪ್ತಿಯನ್ನು ಹೇಳಿದರೆ ಮುಂದಿನ ವಾಕ್ಯವೃಂದಗಳ ವಿರೋಧವು ಉಂಟಾಗುತ್ತದೆ.

ಸಿದ್ಧಾನಾಂ ದೇವತಾನಾಂ ಚ ಯದಾ ಪರಿಮಿತಾ ಗತಿಃ ।
ತದಾ ಗೌಣಮನಂತಸ್ಯ ನಾಮಾನಂತೇತಿ ವಿಶ್ರುತಮ್ ।
ನಾಮಧೇಯಾನುರೂಪಸ್ಯ ಮಾನಸಸ್ಯ ಮಹಾತ್ಮನಃ ॥ ೩೨ ॥

ಸಿದ್ಧರೂ, ದೇವತೆಗಳೂ ಹೋಗುವ ದಾರಿಯಾದ ಆಕಾಶದ ಭಾಗದ ಅಳತೆಯನ್ನು ತಿಳಿಯುವುದು ಒಂದು ವೇಳೆ ಸಾಧ್ಯವಾಗಬಹುದು. ಆದರೆ ಮಾನಸಪುರುಷನಾದ ಭಗವಂತನ ಇತಿ-ಮಿತಿಯನ್ನು ಹೇಳುವುದು ಯಾರಿಂದಲೂ ಸಾಧ್ಯವಾಗುವುದಿಲ್ಲ. ಅನಂತ ಎಂಬ ಹೆಸರಿಗೆ ತಕ್ಕಂತೆ ಅನಂತತ್ವವನ್ನೇ ಹೊಂದಿರುವವನು ವಿಷ್ಣುವು.

ಯದಾ ತು ದಿವ್ಯಂ ತದ್ರೂಪಂ ಹ್ರಸತೇ ವರ್ಧತೇ ಪುನಃ ।
ಕೋಽನ್ಯಸ್ತದ್ವೇದಿತುಂ ಶಕ್ತೋ ಯೋಽಪಿ ಸ್ಯಾತ್ತದ್ವಿಧೋಽಪರಃ ॥ ೩೩ ॥

ಇಷ್ಟಬಂದಂತೆ ಸಂಕೋಚ-ವೃದ್ಧಿಗಳನ್ನು ಹೊಂದುವಂತಹ ಅವನ ದಿವ್ಯರೂಪವನ್ನು ಅವನೇ ಬಲ್ಲನೇ ಹೊರತು ಬೇರೆ ಯಾರಿಂದಲೂ ತಿಳಿಯಲಾಗದು.

ತತಃ ಪುಷ್ಕರತಃ ಸೃಷ್ಟಃ ಸರ್ವಜ್ಞೋ ಮೂರ್ತಿಮಾನ್ ಪ್ರಭುಃ ।
ಬ್ರಹ್ಮಾ ಧರ್ಮಮಯಃ ಪೂರ್ವಃ ಪ್ರಜಾಪತಿರನುತ್ತಮಃ ॥ ೩೪ ॥

ಹಿಂದೆ ಹೇಳಿದ ನಾಭಿಕಮಲದಿಂದ ಸರ್ವಜ್ಞನೂ, ಧರ್ಮಮೂರ್ತಿಯೂ ಆದ ಬ್ರಹ್ಮನೆಂಬ ಪ್ರಜಾಪತಿಯು ಹುಟ್ಟಿದನು.

ಭರದ್ವಾಜಃ

ಪುಷ್ಕರಾದ್ ಯದಿ ಸಂಭೂತೋ ಜ್ಯೇಷ್ಠಂ ಭವತಿ ಪುಷ್ಕರಮ್ ।
ಬ್ರಹ್ಮಾಣಂ ಪೂರ್ವಜಂ ಚಾಹ ಭವಾನ್ ಸಂದೇಹ ಏವ ಮೇ ॥ ೩೫ ॥

ಭರದ್ವಾಜ– ಮಹರ್ಷಿಯೇ, ಬ್ರಹ್ಮನು ಕಮಲದಿಂದ ಹುಟ್ಟಿದನು ಎಂದ ಬಳಿಕ ಕಮಲವೇ ಮೊದಲು ಹುಟ್ಟಿದಂತಾಯಿತಲ್ಲವೇ? ಬ್ರಹ್ಮನನ್ನು ಮೊದಲು ಹುಟ್ಟಿದವನೆಂದು ಹೇಳುವುದೇಕೆ? ಈ ಸಂದೇಹವನ್ನು ಪರಿಹರಿಸಬೇಕು.

ಭೃಗುಃ

ಮಾನಸಸ್ಯೇಹ ಯಾ ಮೂರ್ತಿರ್ಬ್ರಹ್ಮತ್ವಂ ಸಮುಪಾಗತಾ ।
ತಸ್ಯಾಸನವಿಧಾನಾರ್ಥಂ ಪೃಥಿವೀ ಪದ್ಮಮುಚ್ಯತೇ ॥ ೩೬ ॥

ಭೃಗು– ಭರದ್ವಾಜನೇ ಕೇಳು. ಈ ಭೂಮಿಯನ್ನೇ ಆದಿಪುರುಷನಾದ ಚತುರ್ಮುಖ ಬ್ರಹ್ಮನಿಗೆ ಆಸನವನ್ನಾಗಿಸಲು ಭೂಮಿಯನ್ನು ಪದ್ಮ ಎನ್ನುತ್ತಾರೆ. ಮಾನಸಪುರುಷನಾದ

ಭಗವಂತನು ಚತುರ್ಮುಖ ಬ್ರಹ್ಮನ ಅಂತರ್ಯಾಮಿಯಾಗಿ ಇರುವುದರಿಂದ ಅವನ ಅಪೇಕ್ಷೆಯಿಂದ ಬ್ರಹ್ಮತ್ವವನ್ನು ಹೇಳುತ್ತಾರೆ.

ಕರ್ಣಿಕಾ ತಸ್ಯ ಪದ್ಮಸ್ಯ ಮೇರುರ್ಗಗನಮುಚ್ಛ್ರಿತಃ ।
ತಸ್ಯ ಮಧ್ಯೇ ಸ್ಥಿತೋ ಲೋಕಾನ್ ಸೃಜತೇ ಜಗತಃ ಪ್ರಭುಃ ॥ ೩೭ ॥

ಮೇರುವು ಆಕಾಶದವರೆಗೆ ಉನ್ನತವಾಗಿ ಆ ಕಮಲಕ್ಕೆ ಕರ್ಣಿಕೆಯಾಯಿತು. ಆ ಕರ್ಣಿಕೆಯ ನಡುವೆ ಉತ್ಪನ್ನನಾದ ಪ್ರಭುವಾದ ಬ್ರಹ್ಮನು ಅನೇಕ ಲೋಕಗಳನ್ನು,

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಎಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಒಂಬತ್ತನೆಯ ಅಧ್ಯಾಯ

ಬ್ರಹ್ಮನು ಮೇರುವಿನಲ್ಲಿ ಇದ್ದು ಜಲದಿಂದ ಆರಂಭಿಸಿ ಭೂಮಿಯ ತನಕ ಪಂಚಭೂತಗಳನ್ನು ಸೃಷ್ಟಿಸಿದ ಕ್ರಮ.

ಭರದ್ವಾಜಃ

ಪ್ರಜಾವಿಸರ್ಗಂ ವಿವಿಧಂ ಕಥಂ ಸ ಸೃಜತೇ ಪ್ರಭುಃ ।
ಮೇರುಮಧ್ಯೇ ಸ್ಥಿತೋ ಬ್ರಹ್ಮಾ ತದ್ ಬ್ರೂಹಿ ದ್ವಿಜಸತ್ತಮ ॥ ೧ ॥

ಭರದ್ವಾಜ– ಓ ಮಹರ್ಷಿಯೇ, ಮೇರುಪರ್ವತದ ಮಧ್ಯದಲ್ಲಿರುವಂತಹ ಬ್ರಹ್ಮನು ಪ್ರಜೆಗಳನ್ನು ಸೃಷ್ಟಿಸಿದ ರೀತಿ ಏನು ಎಂಬುದನ್ನು, ಅದರ ಅನೇಕ ಪ್ರಕಾರಗಳನ್ನು ನನಗೆ ತಿಳಿಸಬೇಕು.

ಭೃಗುಃ

ಪ್ರಜಾವಿಸರ್ಗಂ ವಿವಿಧಂ ಮಾನಸೋ ಮನಸಾಸೃಜತ್ ।
ಸಂಧುಕ್ಷಣಾರ್ಥಂ ಭೂತಾನಾಂ ಸೃಷ್ಟಂ ಪ್ರಥಮತೋ ಜಲಮ್ ॥ ೨ ॥

ಭೃಗು– ಭರದ್ವಾಜನೇ ಕೇಳು. ಭಗವಂತನ ಅರ್ಥಾತ್ ನಾರಾಯಣನ ಸಂಕಲ್ಪದಿಂದ ಅವತೀರ್ಣನಾದ, ಬ್ರಹ್ಮಾಂಡದ ಹೊರವಲಯದಲ್ಲಿರುವ ನೀರಿನಲ್ಲಿ ಮಲಗಿರುವ ಎರಡನೆಯ ಪುರುಷನಾಮಕನಾದ ವಿಷ್ಣುವು ಮಾನಸಪುರುಷ ಎನಿಸಿದ್ದಾನೆ. ಅಂತಹ ಮಾನಸಪುರುಷನಾಮಕನಾದ ಭಗವಂತನು ಪ್ರಾಣಿಗಳ ಸೃಷ್ಟಿಗಾಗಿ ಸಂಕಲ್ಪಿಸಿ ಅವುಗಳ ರಕ್ಷಣೆಗೆ ಕಾರಣವಾದ ನೀರನ್ನು ಮೊದಲು ಸೃಷ್ಟಿಸಿದನು.

ಯತ್ಪ್ರಾಣಾಃ ಸರ್ವಭೂತಾನಾಂ ವರ್ಧಂತೇ ಯೇನ ಚ ಪ್ರಜಾಃ ।
ಪರಿತ್ಯಕ್ತಾಶ್ಚ ನಶ್ಯಂತಿ ತೇನೇದಂ ಸರ್ವಮಾವೃತಮ್ ॥ ೩ ॥

ಯಾವ ಜಲವು ಸಕಲ ಭೂತಗಳಿಗೂ ಜೀವನವೆನಿಸಿದೆಯೋ, ಯಾವ ಜಲದಿಂದ ಸಮಸ್ತ ಪ್ರಜೆಗಳು ವೃದ್ಧಿಯನ್ನು ಹೊಂದುತ್ತಾರೋ, ಯಾವ ಜಲವಿಲ್ಲದಿದ್ದಲ್ಲಿ ಪ್ರಾಣಿಗಳು ಮರಣವನ್ನಪ್ಪುತ್ತಾರೋ ಅಂತಹ ಜಲದಿಂದಲೇ ಪ್ರಪಂಚವು ವ್ಯಾಪ್ತವಾಯಿತು.

ಪೃಥಿವೀ ಪರ್ವತಾ ಮೇಘಾ ಮೂರ್ತಿಮಂತಶ್ಚ ಯೇ ಪರೇ ।
ಸರ್ವಂ ತದ್ವಾರುಣಂ ಜ್ಞೇಯಮಾಪಸ್ತಸ್ತಂಭಿರೇ ಪುನಃ ॥ ೪ ॥

ಪೃಥಿವಿ, ಪರ್ವತಗಳು, ಮೇಘಗಳು, ಮೂರ್ತಿಮತ್ತಾದ ಇತರ ವಸ್ತುಗಳು ಎಲ್ಲವೂ ಜಲದಿಂದಲೇ ಉತ್ಪನ್ನವಾದವುಗಳೆಂದು ತಿಳಿ. ಈ ಎಲ್ಲ ಪದಾರ್ಥಗಳು ನೀರಿನ ಘನೀಭಾವದಿಂದಲೇ ಉಂಟಾಗಿವೆ.

ಭರದ್ವಾಜಃ

ಕಥಂ ಸಲಿಲಮುತ್ಪನ್ನಂ ಕಥಂ ಚೈವಾಗ್ನಿಮಾರುತೌ ।
ಕಥಂ ಚ ಮೇದಿನೀ ಸೃಷ್ಟೇತ್ಯತ್ರ ಮೇ ಸಂಶಯೋ ಮಹಾನ್ ॥ ೫ ॥

ಭರದ್ವಾಜ– ಭೃಗುಗಳೇ, ಹಾಗಿದ್ದಲ್ಲಿ ನೀರು ಹೇಗೆ ಹುಟ್ಟಿತು? ಅಗ್ನಿ-ವಾಯುಗಳ ಉತ್ಪತ್ತಿ ಹೇಗಾಯಿತು? ಭೂಮಿಯು ಹೇಗೆ ಸೃಷ್ಟಿಸಲ್ಪಟ್ಟಿತು? ಈ ವಿಷಯದಲ್ಲಿರುವ ನನ್ನ ಸಂಶಯವನ್ನು ಪರಿಹರಿಸಿ.

ಭೃಗುಃ

ಬ್ರಹ್ಮಕಲ್ಪೇ ಪುರಾ ಬ್ರಹ್ಮನ್ ಬ್ರಹ್ಮರ್ಷೀಣಾಂ ಸಮಾಗಮೇ ।
ಲೋಕಸಂಭವಸಂದೇಹಃ ಸಮುತ್ಪನ್ನೋ ಮಹಾತ್ಮನಾಮ್ ॥ ೬ ॥

ಭೃಗು– ಬ್ರಾಹ್ಮಣಶ್ರೇಷ್ಠನೇ, ಹಿಂದೆ ಒಂದು ಕಾಲದಲ್ಲಿ ಬ್ರಹ್ಮಕಲ್ಪದಲ್ಲಿ ಬ್ರಹ್ಮರ್ಷಿಗಳು ಸಭೆ ಸೇರಿದಾಗ ಅವರಿಗೂ ಈ ಲೋಕಸೃಷ್ಟಿಯ ಬಗ್ಗೆ ಇಂತಹುದೇ ಸಂಶಯವುಂಟಾಯಿತು.

ತೇऽತಿಷ್ಠನ್ ಧ್ಯಾನಮಾಲಂಬ್ಯ ಮೌನಮಾಸ್ಥಾಯ ನಿಶ್ಚಲಾಃ ।
ತ್ಯಕ್ತಾಹಾರಾಃ ಪವನಪಾ ದಿವ್ಯಂ ವರ್ಷಶತಂ ದ್ವಿಜಾಃ ॥ ೭ ॥

ಈ ಜ್ಞಾನದ ಪ್ರಾಪ್ತಿಗಾಗಿ ಅವರು ಲೋಕದ ಆಹಾರಗಳನ್ನು ಬಿಟ್ಟು, ಮೌನ ವ್ರತಧಾರಿಗಳಾಗಿ, ವಾಯುಭಕ್ಷಕರಾಗಿ ದೇವಲೋಕದ ನೂರು ಸಂವತ್ಸರಗಳವರೆಗೆ ನಿಶ್ಚಲಧ್ಯಾನದಲ್ಲಿ ಆಸಕ್ತರಾದರು.

ತೇಷಾಂ ಧರ್ಮಮಯೀ ವಾಣೀ ಸರ್ವೇಷಾಂ ಶ್ರೋತ್ರಮಾಗಮತ್ ।
ದಿವ್ಯಾ ಸರಸ್ವತೀ ತತ್ರ ಸಂಬಭೂವ ನಭಸ್ತಲಾತ್ ॥ ೮ ॥

ಕೊನೆಗೆ ವೇದವಚನಗಳಂತೆ ಆಕಾಶದಿಂದ ಒಂದು ಅಶರೀರವಾಣಿಯು ಕಿವಿಗೆ ಕೇಳಿಸಿತು.

ಪುರಾ ಸ್ತಿಮಿತನಿಃಶಬ್ದಮಾಕಾಶಮಚಲೋಪಮಮ್ ।
ನಷ್ಟಚಂದ್ರಾರ್ಕಪವನಂ ಪ್ರಸುಪ್ತಮಿವ ಸಂಬಭೌ ॥ ೯ ॥

ಮೊದಲು ಅನಂತವಾದ ಆಕಾಶವು ನಿಶ್ಚಲವಾಗಿ ಶಬ್ದರಹಿತವಾಗಿದ್ದಿತು. ಸೂರ್ಯ-ಚಂದ್ರ-ನಕ್ಷತ್ರ ಯಾವವೂ ಇಲ್ಲದೆ ಅದು ನಿದ್ರಿಸುವಂತೆ ಕಾಣಿಸುತ್ತಿತ್ತು.

ತತಃ ಸಲಿಲಮುತ್ಪನ್ನಂ ತಮಸೀವಾಪರಂ ತಮಃ ।
ತಸ್ಮಾಚ್ಚ ಸಲಿಲೋತ್ಪೀಡಾದುದತಿಷ್ಠತ ಮಾರುತಃ ॥ ೧೦ ॥

ಇಷ್ಟರಲ್ಲಿ ಅಂಧಕಾರದ ಮಧ್ಯದಲ್ಲಿ ಮತ್ತೊಂದು ತಮಸ್ಸು ಕಾಣಿಸುವಂತೆ ಕಪ್ಪಾದ ಆಕಾಶದಲ್ಲಿ ಜಲವು ಉತ್ಪನ್ನವಾಯಿತು. ಆ ನೀರಿನ ಅಲೆಗಳ ತಿಕ್ಕಾಟದಿಂದ ವಾಯುವು ಉತ್ಪನ್ನವಾಯಿತು.

ಯಥಾ ಭಾಜನಮಚ್ಛಿದ್ರಂ ನಿಃಶಬ್ದಮಿವ ಲಕ್ಷ್ಯತೇ ।
ತಚ್ಚಾಂಭಸಾ ಪೂರ್ಯಮಾಣಂ ಸಶಬ್ದಂ ಕುರುತೇऽನಿಲಃ ॥ ೧೧ ॥

ತೂತಿಲ್ಲದ ಗಡಿಗೆಯು ಮೊದಲು ನಿಶ್ಶಬ್ದವಾಗಿದ್ದು ಆದರಲ್ಲಿ ನೀರನ್ನು ಹಾಕಿದಾಗ ಗಾಳಿಯು ಉತ್ಪನ್ನವಾಗಿ ದೊಡ್ಡ ಶಬ್ದವು ಉಂಟಾಗುವಂತೆ ಆಕಾಶದಲ್ಲಿ ನೀರು ತುಂಬಿದಾಗ ಗಾಳಿಯು ಪ್ರಬಲವಾದ ಶಬ್ದದ ಜೊತೆಗೆ ಆ ಜಲವನ್ನು ಭೇದಿಸಿಕೊಂಡು ಮೇಲೆದ್ದಿತು.

ತಥಾ ಸಲಿಲಸಂರುದ್ಧೇ ನಭಸೋಽಂತೇ ನಿರಂತರೇ ।
ಭಿತ್ತ್ವಾರ್ಣವತಲಂ ವಾಯುಃ ಸಮುತ್ಪತತಿ ಘೋಷವಾನ್ ॥ ೧೨ ॥

ಆ ರೀತಿಯಲ್ಲಿ ಘೋಷದಿಂದ ಸಹಿತವಾಗಿ ಗಾಳಿಯು ಉತ್ಪನ್ನವಾಗಿ ಆಕಾಶವನ್ನೆಲ್ಲಾ ಆವರಿಸಿ ನಿರಂತರವೂ ಬೀಸಲಾರಂಭಿಸಿತು.

ಸ ಏಷ ಚರತೇ ವಾಯುರರ್ಣವೋತ್ಪೀಡಸಂಭವಃ ।
ಆಕಾಶಸ್ಥಾನಮಾಸಾದ್ಯ ಪ್ರಶಾಂತಿಂ ನಾಧಿಗಚ್ಛತಿ ॥ ೧೩ ॥

ಸಮುದ್ರದ ಜಲಘರ್ಷಣದಿಂದ ಉಂಟಾದ ಗಾಳಿಯ ಶಬ್ದದಂತೆ ಮೊದಲು ಉತ್ಪನ್ನವಾದ ವಾಯುವು ಮಹಾಘೋಷದಿಂದಲೇ ಮೇಲೆ ಎದ್ದಿತು. ಆ ಗಾಳಿಯು ಆಕಾಶವನ್ನು ಆಶ್ರಯಿಸಿಕೊಂಡು ನಿರಂತರವೂ ಬೀಸುತ್ತಿದೆ.

ತಸ್ಮಿನ್ ವಾಯ್ವಂಬುಸಂಘರ್ಷೇ ದೀಪ್ತತೇಜಾ ಮಹಾಬಲಃ ।
ಪ್ರಾದುರ್ಭವತ್ಯೂರ್ಧ್ವಶಿಖಃ ಕೃತ್ವಾ ವಿತಿಮಿರಂ ನಭಃ ॥ ೧೪ ॥

ನೀರು ಮತ್ತು ಗಾಳಿ ಇವುಗಳ ಸಂಘರ್ಷದಿಂದ ಪ್ರಬಲವಾದ ತೇಜಸ್ಸುಳ್ಳ ಅಗ್ನಿಯು ಉತ್ಪನ್ನವಾಯಿತು. ಕತ್ತಲೆಯಿಂದ ಕೂಡಿದ ಆಕಾಶಕ್ಕೆ ಬೆಳಕನ್ನುಂಟು ಮಾಡಿತು.

ಅಗ್ನಿಃ ಪವನಸಂಯುಕ್ತಃ ಖಾತ್ ಸಮುತ್ಪತತೇ ಜಲಮ್ ।
ಅಗ್ನಿರ್ಮಾರುತಸಂಯೋಗಾದ್ ಘನತ್ವಮುಪಪದ್ಯತೇ ॥ ೧೫ ॥

ಗಾಳಿಯಿಂದ ಪ್ರೇರಿತವಾದ ಬೆಂಕಿಯು ಆಕಾಶದಲ್ಲಿ ಉತ್ಪನ್ನವಾದ ನೀರನ್ನು ಗಟ್ಟಿಯಾಗಿ ಮಾಡುತ್ತಾ ಬಂದಿತು. ಅಗ್ನಿ-ವಾಯುಗಳ ಸಂಬಂಧದಿಂದ ಪೃಥಿವಿ, ಉಪಾದಾನ, ರಸರೇಣುಗಳ ಜೊತೆಗೆ ಸೇರಿದ ಜಲವು ಘನವಾಗುತ್ತಾ, ನಿಬಿಡ (ದಟ್ಟ) ವಾಗುತ್ತಾ ಕ್ರಮವಾಗಿ ಭೂಮಿಯ ಸ್ವರೂಪವನ್ನು ಹೊಂದಿತು.

ತಸ್ಯಾಕಾಶೇ ನಿಪತಿತಃ ಸ್ನೇಹಸ್ತಿಷ್ಠತಿ ಯೋऽಪರಃ ।
ಸ ಸಂಘಾತತ್ವಮಾಪನ್ನೋ ಭೂಮಿತ್ವಮುಪಗಚ್ಛತಿ ॥ ೧೬ ॥

ಅಗ್ನಿ-ವಾಯುಗಳ ಸಂಯೋಗದಿಂದ ಘನೀಭೂತವಾದ ಆಕಾಶದ ನಡುವೆ ವ್ಯಾಪಿಸಿದ ಜಲದಲ್ಲಿ ಸ್ನೇಹಗುಣವು ಉಂಟಾಯಿತು. ಅದೇ ನಿಬಿಡ (ದಟ್ಟ)ವಾಗುತ್ತಾ ಭೂಮಿಯ ಸ್ವರೂಪವನ್ನು ಹೊಂದಿತು.

ರಸಾನಾಂ ಸರ್ವಗಂಧಾನಾಂ ಸ್ನೇಹಾನಾಂ ಪ್ರಾಣಿನಾಂ ತಥಾ ।
ಭೂಮಿರ್ಯೋನಿರಿಹ ಜ್ಞೇಯಾ ಯಸ್ಯಾಂ ಸರ್ವಂ ಪ್ರಸೂಯತೇ ॥೧೭॥

ಭೂಮಿ ಎಂಬುದು ಎಲ್ಲ ರಸಗಳಿಗೂ, ಸಮಸ್ತ ಗಂಧಗಳಿಗೂ, ಸ್ನೇಹಕ್ಕೂ, ಎಲ್ಲ ಪ್ರಾಣಿಗಳಿಗೂ ಕಾರಣಭೂತವಾಗಿ ಎಲ್ಲ ಭೂತಗಳ ಉತ್ಪತ್ತಿ ಸ್ಥಾನವಾಗಿ ಇದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಒಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತನೆಯ ಅಧ್ಯಾಯ

ಪಂಚಭೂತಗಳಿಂದ ನಿರ್ಮಿಸಲ್ಪಟ್ಟ ಸಸ್ಯವರ್ಗಗಳು ಚೇತನಗಳಾದವು ಎಂಬುದನ್ನು ಭರದ್ವಾಜರಿಗೆ ಭೃಗುಗಳು ತಿಳಿಸಿದುದು.

ಭರದ್ವಾಜಃ

ಏತೇ ತೇ ಧಾತವಃ ಪಂಚ ಬ್ರಹ್ಮಾ ಯಾನಸೃಜತ್ ಪುರಾ ।
ಆವೃತಾ ಯೈರಿಮೇ ಲೋಕಾ ಮಹಾಭೂತಾಭಿಸಂಜ್ಞಿತೈಃ ॥ ೧ ॥

ಯದಾಸೃಜತ್ ಸಹಸ್ರಾಣಿ ಭೂತಾನಾಂ ಸ ಮಹಾಮತಿಃ ।
ಪಂಚಾನಾಮೇವ ಭೂತತ್ವಂ ಕಥಂ ಸಮುಪಪದ್ಯತೇ ॥ ೨ ॥

ಭರದ್ವಾಜ– ಮಹಾನುಭಾವರೇ, ಬ್ರಹ್ಮನು ಅನೇಕ ಪ್ರಾಣಿಗಳನ್ನು ಸೃಷ್ಟಿ ಮಾಡಿದಾಗ ಅವನಿಂದ ಮೊದಲು ಸೃಷ್ಟಿಗೊಂಡ ಲೋಕಗಳನ್ನೆಲ್ಲ ವ್ಯಾಪಿಸಿರುವ ಭೂಮಿ ಮೊದಲಾದ ಐದು ಧಾತುಗಳಿಗೆ ಮಾತ್ರ ಮಹಾಭೂತಗಳೆಂದು ಹೇಳುತ್ತಾರೆ. ಇವುಗಳಿಗೆ ಹೀಗೆ

ಹೆಸರು ಏಕೆ ಬಂತೆಂದು ನನಗೆ ತಿಳಿಸಿ. ಸಾವಿರಾರು ಭೂತಗಳನ್ನು ಸೃಷ್ಟಿಸಿದರೂ ಐದು ಭೂತಗಳಿಗೇ ಮಹತ್ವ ಬಂದದ್ದು ಯಾವ ಕಾರಣದಿಂದ?

ಭೃಗುಃ

ಅಮಿತಾನಾಂ ಮಹಾಶಬ್ದೋ ಯಾಂತಿ ಭೂತಾನಿ ಸಂಭವೇ ।
ತತಸ್ತೇಷಾಂ ಮಹಾಭೂತಶಬ್ದೋಽಯಮುಪಪದ್ಯತೇ ॥ ೩ ॥

ಭೃಗು– ಬ್ರಹ್ಮನು ಸಾವಿರಾರು ಪ್ರಾಣಿಗಳನ್ನು ಪಂಚಭೂತಗಳ ಆಧಾರದಲ್ಲಿಯೇ ಸೃಷ್ಟಿಸುತ್ತಾನೆ. ಆದ್ದರಿಂದ ಮಹತ್ ಶಬ್ದವು ಈ ಪಂಚಭೂತಗಳಿಗೇ ಯೋಗ್ಯವಾಗಿದೆ. ಅನಂತಾನಂತ ಪ್ರಾಣಿಗಳ ದೇಹಗಳಿಗೆ ಪಂಚಭೂತಗಳೇ ಉಪಾದಾನ ಕಾರಣಗಳಾಗಿರುವುದರಿಂದ ಇವುಗಳನ್ನು ಮಹಾಭೂತ ಎನ್ನುವ ಶಬ್ದದಿಂದ ಕರೆಯುವುದು ಯೋಗ್ಯವಾಗಿದೆ.

ಚೇಷ್ಟಾ ವಾಯುಃ ಖಮಾಕಾಶಮೂಷ್ಮಾಗ್ನಿಃ ಸಲಿಲಂ ದ್ರವಃ ।
ಪೃಥಿವೀ ಚಾತ್ರ ಸಂಘಾತಃ ಶರೀರಂ ಪಾಂಚಭೌತಿಕಮ್ ॥ ೪ ॥

ಈ ಪಂಚಮಹಾಭೂತಗಳಲ್ಲಿ ಪ್ರಾಣಿಗಳ ಶರೀರದಲ್ಲಿ ಐದು ವಿಧ ಶ್ವಾಸರೂಪದಿಂದ ಚೇಷ್ಟೆಯನ್ನು ಮಾಡುವ ವಾಯುವು ದೇಹದ ಒಳಗಡೆ ಖಾಲಿ ಭಾಗದಲ್ಲಿರುವ ಆಕಾಶವು, ದೇಹದಲ್ಲಿರುವ ಉಷ್ಣವೇ ಅಗ್ನಿಯೂ, ಅದರಲ್ಲಿರುವ ದ್ರವಾಂಶವೇ ನೀರು, ದೇಹದಲ್ಲಿರುವ ಅಸ್ಥಿ-ಮಾಂಸಗಳೇ ಭೂಮಿಯು, ಕೈ-ಕಾಲು-ತಲೆ ಮೊದಲಾದ ಅಂಗಗಳಿಂದ ಕೂಡಿದ ಈ ಶರೀರವು ಪಾಂಚಭೌತಿಕವೆನಿಸಿದೆ.

ಇತ್ಯೇತೈಃ ಪಂಚಭಿರ್ಭೂತೈರ್ಯುಕ್ತಂ ಸ್ಥಾವರಜಂಗಮಮ್ ।
ಶ್ರೋತ್ರಂ ಘ್ರಾಣಂ ರಸಃ ಸ್ಪರ್ಶೋ ದೃಷ್ಟಿಶ್ಚೇಂದ್ರಿಯಸಂಜ್ಞಿತಾಃ ॥ ೫ ॥

ಈ ರೀತಿಯಾಗಿ ಸ್ಥಾವರ-ಜಂಗಮಗಳೆಲ್ಲವೂ ಪಂಚಭೂತಗಳಿಂದಲೇ ನಿರ್ಮಿತವಾಗಿವೆ. ಇಂದ್ರಿಯ ಎಂಬ ಹೆಸರಿನಿಂದ ಕರೆಯುವ ಮೂಗು, ನಾಲಿಗೆ, ಕಣ್ಣು, ಚರ್ಮ, ಕಿವಿ ಎಂಬವು ಕ್ರಮವಾಗಿ ಪಂಚಭೂತಗಳಿಗೆ ಸಂಬಂಧಿಸಿವೆ.

ಭರದ್ವಾಜಃ

ಪಂಚಭಿರ್ಯದಿ ಭೂತೈಸ್ತು ಯುಕ್ತಾಃ ಸ್ಥಾವರಜಂಗಮಾಃ ।
ಸ್ಥಾವರಾಣಾಂ ನ ದೃಶ್ಯಂತೇ ಶರೀರೇ ಪಂಚ ಧಾತವಃ ॥ ೬ ॥

ಭರದ್ವಾಜ– ಭೃಗುಗಳೇ, ಸ್ಥಾವರ-ಜಂಗಮಗಳೆಲ್ಲವೂ ಪಂಚಭೂತಗಳಿಂದಲೇ ಸೃಷ್ಟಿಯಾಗಿದ್ದಲ್ಲಿ ಸ್ಥಾವರಶರೀರದಲ್ಲಿ ಪ್ರಾಣಿಶರೀರದಂತೆ ಆ ಪಂಚಭೂತಗಳು ಸ್ಪಷ್ಟವಾಗಿ ಏಕೆ ಕಾಣಿಸುವುದಿಲ್ಲ?

ಅನೂಷ್ಮಣಾಮಚೇಷ್ಟಾನಾಂ ಘನಾನಾಂ ಚೈವ ತತ್ತ್ವತಃ ।
ವೃಕ್ಷಾಣಾಂ ನೋಪಲಭ್ಯಂತೇ ಶರೀರೇ ಪಂಚ ಧಾತವಃ ॥ ೭ ॥

ಒಂದು ವೃಕ್ಷವನ್ನು ಪರೀಕ್ಷಿಸಿ ನೋಡಿದಾಗ ಅದರಲ್ಲಿ ನಮ್ಮ ದೇಹದಲ್ಲಿ ಕಾಣುವ ಬಿಸಿಯು ಕಾಣಿಸುವುದಿಲ್ಲ. ನಮ್ಮ ದೇಹದಂತೆ ಚೇಷ್ಟೆಯೂ ಕಾಣಿಸುವುದಿಲ್ಲ. ಕೇವಲ ಘನಪದಾರ್ಥವಾಗಿ ಕಾಣಿಸುತ್ತದೆ. ಪಂಚಭೂತಗಳ ಸಂಬಂಧವು ಕಾಣಿಸದಿರಲು ವಾಯು ಮೊದಲಾದ ಸಂಚಾರವೂ ಕಾಣಿಸದಿರಲು ಕಾರಣವೇನು?

ನ ಶೃಣ್ವಂತಿ ನ ಪಶ್ಯಂತಿ ನ ಗಂಧರಸವೇದಿನಃ ।
ನ ಚ ಸ್ಪರ್ಶಂ ವಿಜಾನಂತಿ ತೇ ಕಥಂ ಪಾಂಚಭೌತಿಕಾಃ ॥ ೮ ॥

ಆ ವೃಕ್ಷಗಳು ಕೇಳಲಾರವು, ನೋಡಲಾರವು, ಮೂಸಲಾರವು, ರಸವನ್ನು ಸವಿಯಲಾರವು, ಸ್ಪರ್ಶಜ್ಞಾನವನ್ನು ಹೊಂದಿರುವುದಿಲ್ಲ. ಇವುಗಳನ್ನು ಪಂಚ-ಭೂತಗಳೆಂದು ಹೇಗೆ ಕರೆಯುವುದು?

ಅದ್ರವತ್ವಾದನಗ್ನಿತ್ವಾದಭೌಮತ್ವಾದವಾಯುತಃ ।
ಆಕಾಶಸ್ಯಾಪ್ರಮೇಯತ್ವಾದ್ ವೃಕ್ಷಾಣಾಂ ನಾಸ್ತಿ ಭೌತಿಕಮ್ ॥ ೯ ॥

ದ್ರವತ್ವ, ಉಷ್ಣತ್ವ ಮುಂತಾದ ಯಾವ ಗುಣಗಳೂ ಕಾಣದಿರುವುದರಿಂದ ಅವುಗಳನ್ನು ಪಂಚಭೂತ ಮನೆಗಳೆಂದು ಹೇಳಲಾಗದು. ದೇಹದಲ್ಲಿ ವಾಯುವಿನ ಸಂಚಾರವಿರುವಂತೆ ಇವುಗಳಲ್ಲಿ ವಾಯುಸಂಚಾರ ಕಾಣಿಸುವುದಿಲ್ಲ. ನಮ್ಮ ದೇಹದ ಮಧ್ಯಭಾಗದ ಛಿದ್ರದಲ್ಲಿ ಆಕಾಶದ ಚಿಂತನೆ ನಡೆಸುವಂತೆ ವೃಕ್ಷಾದಿಗಳ ಮಧ್ಯಭಾಗದಲ್ಲಿ ಛಿದ್ರವೂ ಕಾಣಿಸುವುದಿಲ್ಲ.

ಭೃಗುಃ

ಘನಾನಾಮಪಿ ವೃಕ್ಷಾಣಾಮಾಕಾಶೋಽಸ್ತಿ ನ ಸಂಶಯಃ ।
ತೇಷಾಂ ಪುಷ್ಪಫಲೇ ವ್ಯಕ್ತಿರ್ನಿತ್ಯಂ ಸಮುಪಲಭ್ಯತೇ ॥ ೧೦ ॥

ಭೃಗು– ಭರದ್ವಾಜನೇ, ವೃಕ್ಷಗಳು ಕಠಿಣವಾಗಿ ಕಾಣಿಸುತ್ತಿವೆ. ಅವುಗಳನ್ನು ತುಂಡರಿಸಿದಾಗ ದೇಹದಿಂದ ನೀರು ಸ್ರುರಿಯುತ್ತದೆ. ಮರದ ದಿಮ್ಮೆಗಳನ್ನು ಮಥಿಸಿದಾಗ ಅಗ್ನಿಯು ಉತ್ಪನ್ನವಾಗುತ್ತದೆ. ಅವುಗಳಲ್ಲಿ ಆಕಾಶದ ರಂಧ್ರಗಳು ಇಲ್ಲವೆಂದು ತಿಳಿಯಬಾರದು. ಅಲ್ಲಲ್ಲಿ ಆಕಾಶದ ರಂಧ್ರಗಳು ಮರಗಳಲ್ಲೂ ಇವೆ. ಆ ರಂಧ್ರಗಳಿಂದಲೇ ಪುಷ್ಪ-ಫಲಗಳು ಉತ್ಪನ್ನವಾಗುತ್ತವೆ. ಪುಷ್ಪ-ಫಲಗಳ ಅಭಿವ್ಯಕ್ತಿಯಿಂದಲೇ ಮರಗಳಲ್ಲಿ ಆಕಾಶವೂ ಇದೆ, ಗಾಳಿಯ ಸಂಚಾರವೂ ಇದೆ ಎಂದು ತಿಳಿಯಬೇಕು.

ಊಷ್ಮತೋ ಗ್ಲಾನಪರ್ಣಾನಾಂ ತ್ವಕ್ಫಲಂ ಪುಷ್ಪಮೇವ ಚ ।
ಮ್ಲಾಯತೇ ಚೈವ ಶೀತೇ ನ ಸ್ಪರ್ಶಸ್ತೇನಾತ್ರ ವಿದ್ಯತೇ ॥ ೧೧ ॥

ವೃಕ್ಷಗಳಲ್ಲಿ ಉಷ್ಣದ ಆಧಿಕ್ಯದ ಸಂಬಂಧವಿರುವುದರಿಂದ ಬಿಸಿಲಿನ ಬೇಗೆಯಿಂದ ಬಣ್ಣ ಕೆಟ್ಟು ಮರಗಳು ಬಾಡಿಹೋಗುತ್ತವೆ. ಅದರ ಎಲೆ, ಹೂ, ಹಣ್ಣು, ತೊಗಟೆ ಮುಂತಾದವುಗಳೆಲ್ಲ ಒಣಗಿ ಬೀಳುವುದು ಔಷ್ಣ್ಯದಿಂದಲೇ. ಹೀಗೆ ಒಣಗುವುದರಿಂದ ಸ್ಪರ್ಶಜ್ಞಾನವೂ ಅವುಗಳಿಗಿದೆ ಎಂದು ಸ್ಪಷ್ಟವಾಗುತ್ತದೆ.

ವಾಯ್ವಗ್ನ್ಯಶನಿನಿಷ್ಪೇಷೈಃ ಫಲಪುಷ್ಪಂ ವಿಶೀರ್ಯತೇ ।
ಶ್ರೋತ್ರೇಣ ಗೃಹ್ಯತೇ ಶಬ್ದಸ್ತಸ್ಮಾಚ್ಛೃಣ್ವಂತಿ ಪಾದಪಾಃ ॥ ೧೨ ॥

ಇಷ್ಟೇ ಅಲ್ಲದೆ ಬೆಂಕಿ, ಗಾಳಿ, ಸಿಡಿಲು ಮುಂತಾದವುಗಳ ಶಬ್ದದಿಂದ ಕೆಲವೊಮ್ಮೆ ಅವುಗಳಲ್ಲಿ ತುಂಬಿದ ಹೂವು, ಹಣ್ಣುಗಳು ಉದುರಿಬೀಳುತ್ತವೆ. ಇದರಿಂದ ವೃಕ್ಷಗಳಿಗೆ ಶಬ್ದಗ್ರಹಣ ಶಕ್ತಿ ಇದೆ, ಇಂದ್ರಿಯಗಳು ಇವೆ ಎಂಬುದು ಸ್ಪಷ್ಟವಾಗುತ್ತದೆ.

ವಲ್ಲೀ ವೇಷ್ಟಯತೇ ವೃಕ್ಷಂ ಸರ್ವತಶ್ಚೈವ ಗಚ್ಛತಿ ।
ನ ಹ್ಯದೃಷ್ಟೇಶ್ಚ ಮಾರ್ಗೋऽಸ್ತಿ ತಸ್ಮಾತ್ ಪಶ್ಯಂತಿ ಪಾದಪಾಃ ॥ ೧೩ ॥

ಬಳ್ಳಿಗಳು ಹತ್ತಿರದಲ್ಲಿರುವ ಮರವನ್ನು ಕಂಡುಕೊಂಡು, ಅದರ ಆಶ್ರಯವನ್ನು ಹಿಡಿದು ಹಬ್ಬುತ್ತವೆ. ಇದರಿಂದ ಅವುಗಳಿಗೆ ಕಣ್ಣುಗಳು ಇವೆ ಎಂದು ತಿಳಿಯುತ್ತದೆ. ಕಣ್ಣಿಲ್ಲದವರಿಗೆ ದಾರಿ ತಿಳಿಯಲಾರದಷ್ಟೆ! ಆದ್ದರಿಂದ ಮರ-ಗಿಡಗಳು ನೋಡುತ್ತವೆ.

ಪುಣ್ಯಾಪುಣ್ಯೈಸ್ತಥಾ ಗಂಧೈರ್ಧೂಪೈಶ್ಚ ವಿವಿಧೈರಪಿ ।
ಅರೋಗಾಃ ಪುಷ್ಪಿತಾಃ ಸಂತಿ ತಸ್ಮಾಜ್ಜಿಘ್ರಂತಿ ಪಾದಪಾಃ ॥ ೧೪ ॥

ನಾನಾ ವಿಧವಾದ ಧೂಪಗಳ, ಸುಗಂಧ-ದುರ್ಗಂಧಗಳಿಂದ, ಕಸ್ತೂರ್ಯಾದಿ ಪರಿಮಳಗಳಿಂದ, ಮದಿರಾದಿ ದುರ್ಗಂಧಗಳಿಂದ ವೃಕ್ಷಗಳಿಗೆ ಅಂಟಿದ ರೋಗಗಳು ಪರಿಹಾರವಾಗಿ ಅವುಗಳು ಪುಷ್ಪ-ಫಲಗಳನ್ನು ಬಿಡುವುದೂ ಇದೆ. ಆದ್ದರಿಂದ ಗಿಡಗಳಿಗೆ ಘ್ರಾಣೇಂದ್ರಿಯ ಶಕ್ತಿ ಇದೆ ಎಂದು ತಿಳಿಯಬಹುದು.

ಪಾದ್ಯೈಃ ಸಲಿಲಪಾನಂ ಚ ವ್ಯಾಧೀನಾಂ ಚಾಪಿ ದರ್ಶನಾತ್ ।
ವ್ಯಾಧಿಪ್ರತಿಕ್ರಿಯತ್ವಾಚ್ಚ ವಿದ್ಯತೇ ರಸನಂ ದ್ರುಮೇ ॥ ೧೫ ॥

ಗಿಡಗಳು ಬೇರುಗಳಿಂದ ನೀರನ್ನು ಕುಡಿಯುತ್ತವೆ. ತುಂಬಾ ನೀರನ್ನು ಪಾನ ಮಾಡಿದ ಅವುಗಳಿಗೆ ಜಲೀಯರೋಗಪೀಡೆಯೂ ಉಂಟಾಗುತ್ತದೆ. ಆ ರೋಗಗಳಿಗೆ ಚಿಕಿತ್ಸೆಯೂ ಮಾಡಲ್ಪಡುತ್ತದೆ. ಇದರಿಂದ ಲವಣ ರಸಗಳನ್ನು ಬೇರಿಗೆ ಹಾಕುವುದರಿಂದ ರೋಗಗಳು ಪರಿಹಾರವಾಗುವ ಪ್ರಕ್ರಿಯೆಯೂ ಕಂಡುಬಂದಿರುವುದರಿಂದ ಸಸ್ಯ ವರ್ಗಗಳಿಗೂ ರುಚಿಯನ್ನು ನೋಡುವ ರಸನೇಂದ್ರಿಯಗಳು ಇವೆ ಎಂದು ತಿಳಿಯಬಹುದು.

ವಕ್ತ್ರೇಣೋತ್ಪಲನಾಲೇನ ಯಥೋರ್ಧ್ವಂ ಜಲಮಾದದೇತ್ ।
ತಥಾ ಪವನಸಂಯುಕ್ತಃ ಪಾದ್ಯೈಃ ಪಿಬತಿ ಪಾದಪಃ ॥ ೧೬ ॥

ತಾವರೆಯ ದಂಟಿನ ನಾಳದ ಕೊನೆಯನ್ನು ನೀರಿನಲ್ಲಿಟ್ಟು ಬಾಯಿಂದ ಗಾಳಿಯನ್ನು ಸೆಳೆದುಕೊಂಡಾಗ ಆ ನಾಳದ ಮೂಲಕವಾಗಿ ನೀರನ್ನು ನಾವು ಬಾಯಿಂದ ಹೀರುವಂತೆ ಗಿಡಗಳೂ ಕೂಡ ಗಾಳಿಯ ಸಹಾಯದಿಂದ ಬೇರಿನ ಮೂಲಕವಾಗಿ ನೀರನ್ನು ಹೀರುತ್ತವೆ. ಇದರಿಂದ ಒಳಗಡೆಯೂ ಖಾಲಿ ಭಾಗಗಳಿವೆ, ಆಕಾಶ ಭಾಗಗಳಿವೆ. ವಾಯು-ಆಕಾಶಗಳ ಸಂಚಾರವು ವೃಕ್ಷಗಳ ಒಳಗೆ ಇವೆ ಎಂಬುದು ಅರ್ಥವಾಗುತ್ತದೆ. ಪಾದಗಳಿಂದ ನೀರನ್ನು ಪಾನ ಮಾಡುವುದರಿಂದಲೇ ಪಾದಪ ಎನಿಸಿವೆಯಷ್ಟೆ?

ಗ್ರಹಣಾತ್ ಸುಖದುಃಖಸ್ಯ ಉನ್ನಸ್ಯ ಚ ವಿರೋಹಣಾತ್ ।
ಜೀವಂ ಪಶ್ಯಾಮಿ ವೃಕ್ಷಾಣಾಮಚೈತನ್ಯಂ ನ ವಿದ್ಯತೇ ॥ ೧೭ ॥

ಸಸ್ಯವರ್ಗಗಳಿಗೂ ಕಷ್ಟ-ಸುಖಗಳ ಅನುಭವವಿದೆ. ಅವುಗಳನ್ನು ಕಡಿದ ಬಳಿಕ ಪುನಃ ಚಿಗುರಿ ಬೆಳೆಯುತ್ತವೆ. ಇವುಗಳಿಂದ ಅವುಗಳಿಗೆ ಜೀವವಿದೆ ಎಂಬುದು ಸ್ಪಷ್ಟವಾಗುತ್ತದೆ. ಆದ್ದರಿಂದ ಅವು ಅಚೇತನಗಳಲ್ಲ.

ತೇನ ತಜ್ಜಲಮಾದತ್ತಂ ಜರಯತ್ಯಗ್ನಿಮಾರುತೌ ।
ಆಹಾರಪರಿಣಾಮಾಚ್ಚ ಸ್ನೇಹೋ ವೃದ್ಧಿಶ್ಚ ಜಾಯತೇ ॥ ೧೮ ॥

ಬೇರಿನ ಮೂಲಕವಾಗಿ ನೀರನ್ನು ಸೆಳೆದುಕೊಂಡಷ್ಟು ಅಗ್ನಿ-ವಾಯುಗಳ ಸಂಬಂಧದಿಂದ ಆ ನೀರನ್ನು ಜೀರ್ಣಮಾಡಿಕೊಳ್ಳುತ್ತವೆ. ಅದರಿಂದಾಗಿ ಹುಲುಸಾಗಿ, ಸಮೃದ್ಧವಾಗಿ ವೃಕ್ಷಗಳು ಬೆಳೆಯುತ್ತವೆ. ಆಹಾರದ ಸ್ವೀಕಾರದಿಂದ ಅವುಗಳ ಬಣ್ಣ, ಅವುಗಳ ತೊಗಟೆಯಲ್ಲಿನುಣುಪು, ಬೆಳವಣಿಗೆ ಇವುಗಳೆಲ್ಲವೂ ಕಾಣುತ್ತವೆ.

ಜಂಗಮಾನಾಂ ಚ ಸರ್ವೇಷಾಂ ಶರೀರೇ ಪಂಚ ಧಾತವಃ ।
ಪ್ರತ್ಯೇಕಶಃ ಪ್ರಭಿದ್ಯಂತೇ ಯೈಃ ಶರೀರಂ ಏಚೇಷ್ಟತೇ ॥ ೧೯ ॥

ಸಮಸ್ತ ಜಂಗಮ ಶರೀರಗಳಲ್ಲಿ ಪಂಚಧಾತುಗಳಿವೆ. ಆದರೆ ಒಂದೊಂದರಲ್ಲಿಯೂ ಆ ಪಂಚಭೂತಗಳ ಪ್ರಮಾಣವು ಭಿನ್ನ ಭಿನ್ನವಾಗಿ ಮೇಲನವನ್ನು ಹೊಂದಿದೆ. ಈ ಧಾತುಗಳಿಂದಲೇ ಜಂಗಮಗಳಿಗೆ ಚೇಷ್ಟಾಶಕ್ತಿಯು ಉಂಟಾಗುತ್ತದೆ.

ತ್ವಕ್ಚ ಮಾಂಸಂ ತಥಾಸ್ಥೀನಿ ಮಜ್ಜಾ ಸ್ನಾಯು ಚ ಪಂಚಮಮ್ ।
ಇತ್ಯೇತದಿಹ ಸಂಖ್ಯಾತಂ ಶರೀರೇ ಪೃಥಿವೀಮಯಮ್ ॥ ೨೦ ॥

ದೇಹದಲ್ಲಿರುವ ಚರ್ಮ, ಮಾಂಸ, ಎಲುಬು, ಮಜ್ಜಾ, ಸ್ನಾಯು ಎಂಬ ಐದು ಪೃಥಿವೀಮಯವಾದ ಧಾತುಗಳು.

ತೇಜೋऽಗ್ನಿತಸ್ತಥಾ ಕ್ರೋಧಶ್ಚಕ್ಷುರೂಷ್ಮಾ ತಥೈವ ಚ ।
ಅಗ್ನಿರ್ಜರಯತೇ ಚಾಪಿ ಪಂಚಾಗ್ನೇಯಾಃ ಶರೀರಿಣಃ ॥ ೨೧ ॥

ತೇಜಸ್ಸು, ಕೋಪ, ಕಣ್ಣು, ದೇಹದೊಳಗೆ ಉಷ್ಣತೆ, ಆಹಾರವನ್ನು ಜೀರ್ಣಿಸುವ ಜಾಠರಾಗ್ನಿ ಇವು ಐದು ಪ್ರಾಣಿಯ ದೇಹದಲ್ಲಿರುವ ಐದು ಅಗ್ನಿಯ ಅಂಶಗಳು.

ಶ್ರೋತ್ರಂ ಘ್ರಾಣಮಥಾಸ್ಯಂ ಚ ಹೃದಯಂ ಕೋಷ್ಠಮೇವ ಚ ।
ಆಕಾಶಾತ್ ಪ್ರಾಣಿನಾಮೇತೇ ಶರೀರೇ ಪಂಚ ಧಾತವಃ ॥ ೨೨ ॥

ಕಿವಿ, ಮೂಗು, ಬಾಯಿ, ಹೃದಯ, ಜಠರ ಎಂಬ ಐದು ಪ್ರಾಣಿಗಳಲ್ಲಿರುವ ಆಕಾಶದ ಅಂಶಗಳು.

ಶ್ಲೇಷ್ಮಾ ಪಿತ್ತಮಥ ಸ್ವೇದೋ ವಸಾ ಶೋಣಿತಮೇವ ಚ ।
ಇತ್ಯಾಪಃ ಪಂಚಧಾ ದೇಹೇ ಭವಂತಿ ಪ್ರಾಣಿನಾಂ ಸದಾ ॥ ೨೩ ॥

ಶ್ಲೇಷ್ಮಾ, ಪಿತ್ತ, ಬೆವರು, ವಸ= ಕೆನ್ನೀರು, ರಕ್ತ - ಈ ಐದು ದೇಹದಲ್ಲಿರುವ ಜಲಾಂಶಗಳು.

ಪ್ರಾಣಾತ್ ಪ್ರಾಣಯತೇ ಪ್ರಾಣೇ ವ್ಯಾನಾದ್ವ್ಯಾಯಚ್ಛತೇ ತಥಾ ।
ಗಚ್ಛತ್ಯಪಾನೋಽವಾಕ್ಚೈವ ಸಮಾನೋ ಹೃದ್ಯವಸ್ಥಿತಃ ॥ ೨೪ ॥

ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಎಂಬ ಐದು ದೇಹದಲ್ಲಿರುವ ವಾಯುವಿನ ಅಂಶಗಳು. ಇವುಗಳಲ್ಲಿ ಇಂದ್ರಿಯಗಣಗಳನ್ನು ಜೀವಂತಗೊಳಿಸುವ ವಾಯುವು ಪ್ರಾಣವಾಯು. ಶರೀರದ ಎಪ್ಪತ್ತೆರಡು ಸಾವಿರ ನಾಡಿಗಳನ್ನು ವಿಕಸನಗೊಳಿಸುವುದು ವ್ಯಾನವಾಯು. ಗುದಸ್ಥಾನದಲ್ಲಿ ಅಧೋಮುಖವಾಗಿ ಬರುವುದು ಅಪಾನ ವಾಯುವು. ಹೃದಯದಲ್ಲಿರುವುದು ಸಮಾನವಾಯುವು.

ಉದಾನಾದುಚ್ಛ್ವಸಿತಿ ಚ ಪ್ರತಿಭೇದಾಚ್ಚ ಭಾಷತೇ ।
ಇತ್ಯೇತೇ ವಾಯವಃ ಪಂಚ ಚೇಷ್ಟಯಂತೀಹ ದೇಹಿನಮ್ ॥ ೨೫ ॥

ಶ್ವಾಸಕೋಶದಿಂದ ಆರಂಭಿಸಿ ನೆತ್ತಿಯ ತನಕ ಸಂಚರಿಸುವ ಗಾಳಿಯು ಉದಾನ ವಾಯುವು. ಇವೆಲ್ಲವನ್ನೂ ಸೇರಿಸಿಕೊಂಡು ವಾಯುವನ್ನು ಶ್ರುತಿಯು ಕೊಂಡಾಡುತ್ತದೆ. ಹೀಗೇ ಪಂಚವಾಯುಗಳು ಜೀವವನು ಚೇಷ್ಟೆಗೊಳಿಸುತ್ತವೆ.

ಭೂಮೇರ್ಗಂಧಗುಣಾನ್ ವೇತ್ತಿ ರಸಂ ಚಾದ್ಭ್ಯಃ ಶರೀರವಾನ್ ।
ಜ್ಯೋತಿಃ ಪಶ್ಯತಿ ಚಕ್ಷುರ್ಭ್ಯಾಂ ಸ್ಪರ್ಶಂ ವೇತ್ತಿ ಚ ವಾಯುನಾ ॥ ೨೬ ॥

ಇಂದ್ರಿಯರೂಪದಿಂದಿರುವ ಭೂತತ್ತ್ವದಿಂದ ಗಂಧಗುಣವನ್ನೂ, ಜಲತತ್ತ್ವದಿಂದ ರಸವನ್ನೂ, ಅಗ್ನಿ ತತ್ತ್ವದಿಂದ ರೂಪವನ್ನೂ, ವಾಯು ತತ್ತ್ವದಿಂದ ಸ್ಪರ್ಶವನ್ನೂ, ಆಕಾಶದಿಂದ ಶಬ್ದವನ್ನೂ ಗ್ರಹಿಸುತ್ತಾರೆ.

ತಸ್ಯ ಗಂಧಸ್ಯ ವಕ್ಷ್ಯಾಮಿ ವಿಸ್ತರಾಭಿಹಿತಾನ್ ಗುಣಾನ್ ।
ಇಷ್ಟಶ್ಚಾನಿಷ್ಟಗಂಧಶ್ಚ ಮಧುರಃ ಕಟುರೇವ ಚ ॥ ೨೭ ॥

ಗಂಧವೆಂಬ ಭೂತತ್ತ್ವದ ಮುಖ್ಯಗುಣದಲ್ಲಿರುವ ಪ್ರಭೇದಗಳನ್ನು ತಿಳಿಸುತ್ತೇನೆ. ಒಳ್ಳೆಯ ಅನ್ನದ ಪರಿಮಳವು ಇಷ್ಟವಾದ ಗಂಧ ಎನಿಸಿದೆ. ಅಮೇಧ್ಯ ಗಂಧವು ಅನಿಷ್ಟ ಗಂಧ ಎನಿಸಿದೆ. ಬೆಲ್ಲ ಮೊದಲಾದವುಗಳಲ್ಲಿರುವ ಪರಿಮಳವು ಮಧುರ ಗಂಧ ಎನಿಸಿದೆ. ಮೆಣಸಿನಕಾಯಿ ಮೊದಲಾದ ಗಂಧವು ಕಟುವೆನಿಸಿದೆ.

ನಿರ್ಹಾರೀ ಸಂಹತಃ ಸ್ನಿಗ್ಧೋ ರೂಕ್ಷೋ ವಿಶದ ಏವ ಚ ।
ಏವಂ ನವವಿಧೋ ಜ್ಞೇಯಃ ಪಾರ್ಥಿವೋ ಗಂಧವಿಸ್ತರಃ ॥ ೨೮ ॥

ಲವಣಾದಿ ಗಂಧವು ನಿರ್ಹಾರಿ ಎನಿಸಿದೆ. ಸಕ್ಕರೆ ಮೊದಲಾದವುಗಳಿಂದ ಮಿಶ್ರಿತವಾದ ಗಂಧವು ಸಂಹತ ಎನಿಸಿದೆ. ತುಪ್ಪ, ಚಂದನಾದಿಗಳ ಗಂಧವು ಸ್ನಿಗ್ಧ ಎನಿಸಿದೆ. ಸಾಸಿವೆ ಮೊದಲಾದವುಗಳ ಗಂಧವು ರೂಕ್ಷ ಎನಿಸಿದೆ. ಕುಸುಮದ ಗಂಧವು ವಿಶದ ಎನಿಸಿದೆ. ಈ ರೀತಿಯಾಗಿ ಒಂಬತ್ತು ಗಂಧದ ಗುಣಗಳು ಪೃಥಿವಿಯ ವಿಸ್ತಾರವೆಂದು ತಿಳಿಯಬೇಕು.

ಶಬ್ದಃ ಸ್ಪರ್ಶಶ್ಚ ರೂಪಂ ಚ ರಸಶ್ಚಾಪಾಂ ಗುಣಾಃ ಸ್ಮೃತಾಃ ।
ರಸಜ್ಞಾನಂ ತು ವಕ್ಷ್ಯಾಮಿ ತನ್ಮೇ ನಿಗದತಃ ಶೃಣು ॥ ೨೯ ॥

ತ್ವಗಿಂದ್ರಿಯದಿಂದ ಸ್ಪರ್ಶವನ್ನು ತಿಳಿಯುತ್ತಾರೆ. ಇದರಿಂದ ಶಬ್ದ, ಸ್ಪರ್ಶ, ರೂಪ, ರಸ ಎಲ್ಲವೂ ಭೂಮಿಯಲ್ಲಿರುವ ಗುಣಗಳು ಎಂದು ಹೇಳುತ್ತಾರೆ. ಜಲತತ್ತ್ವದ ಮುಖ್ಯವಾದ ರಸವೆಂಬ ಗುಣದ ಬಗ್ಗೆ ವಿದ್ವಾಂಸರು ಹೇಳುವುದನ್ನು ವಿವರಿಸುತ್ತೇನೆ, ಕೇಳು.

ರಸೋ ಬಹುವಿಧಃ ಪ್ರೋಕ್ತಃ ಸೂರಿಭಿಃ ಪ್ರಥಿತಾತ್ಮಭಿಃ ।
ಮಧುರೋ ಲವಣಸ್ತಿಕ್ತಃ ಕಷಾಯೋऽಮ್ಲಃ ಕಟುಸ್ತಥಾ ।
ಏಷ ಷಡ್ವಿಧವಿಸ್ತಾರೋ ರಸೋ ವಾರಿಮಯಃ ಸ್ಮೃತಃ ॥ ೩೦ ॥

ರಸವು ಹಲವು ಬಗೆಯಾಗಿದೆ ಎಂದು ಜ್ಞಾನಿಗಳು ತಿಳಿಸುತ್ತಾರೆ. ಮಧುರ, ಲವಣ, ತಿಕ್ತ (ಒಗರು), ಕಷಾಯ (ಕಹಿ), ಆಮ್ಲ (ಹುಳಿ), ಕಟು ಎಂದು ಆರುವಿಧವಾಗಿ ನೀರಿನ ಉತ್ಪನ್ನವಾದ ರಸವನ್ನು ವಿವರಿಸುತ್ತಾರೆ.

ಶಬ್ದಃ ಸ್ಪರ್ಶಶ್ಚ ರೂಪಂ ಚ ತ್ರಿಗುಣಂ ಜ್ಯೋತಿರುಚ್ಯತೇ ।
ಜ್ಯೋತಿಃ ಪಶ್ಯತಿ ರೂಪಾಣಿ ರೂಪಂ ಚ ಬಹುಧಾ ಸ್ಮೃತಮ್ ॥ ೩೧ ॥

ತೇಜಸ್ಸೆಂಬ ತತ್ತ್ವವು ಶಬ್ದ-ಸ್ಪರ್ಶ-ರೂಪವೆಂಬ ಮೂರುಗುಣವುಳ್ಳದ್ದು. ತೇಜಸ್ಸಿನ ಶಕ್ತಿಯಿಂದಲೇ ರೂಪವನ್ನು ನೋಡಲು ಸಮರ್ಥನಾಗುತ್ತಾನೆ. ಆ ರೂಪವು ಅನೇಕ ವಿಧವಾಗಿದೆ.

ಹ್ರಸ್ವೋ ದೀರ್ಘಸ್ತಥಾ ಸ್ಥೂಲಶ್ಚತುರಸ್ರೋಽಣು ವೃತ್ತವಾನ್ ।
ಶುಕ್ಲಃ ಕೃಷ್ಣಸ್ತಥಾ ರಕ್ತೋ ನೀಲಃ ಪೀತೋಽರುಣಸ್ತಥಾ ।
ಏವಂ ದ್ವಾದಶವಿಸ್ತಾರೋ ಜ್ಯೋತೀರೂಪಗುಣಃ ಸ್ಮೃತಃ ॥ ೩೨ ॥

ಹ್ರಸ್ವವಸ್ತುವಿನಲ್ಲಿರುವ ರೂಪವು ಹ್ರಸ್ವ ಎನಿಸಿದೆ. ದೀರ್ಘವಸ್ತುವಿನಲ್ಲಿರುವ ರೂಪವು ದೀರ್ಘವೆನಿಸಿದೆ. ಸ್ಥೂಲ, ಚತುರಸ್ರ, ಅಣು, ವರ್ತುಲ ಎಂಬ ಆರು ಆಕಾರಗಳು. ಬಿಳಿ, ಕಪ್ಪು, ಕೆಂಪು, ನೀಲಿ, ಹಳದಿ, ಅರುಣ ಎಂಬ ಆರು ಬಗೆಯ ಬಣ್ಣಗಳು. ಈ ರೀತಿಯಾಗಿ ಜ್ಯೋತಿರೂಪಗುಣವು ಹನ್ನೆರಡು ಬಗೆಯಾಗಿ ವಿಸ್ತಾರ ಹೊಂದಿದೆ.

ಶಬ್ದಸ್ಪರ್ಶೌ ತು ವಿಜ್ಞೇಯೌ ದ್ವಿಗುಣೋ ವಾಯುರುಚ್ಯತೇ ।
ವಾಯವ್ಯಸ್ತು ಗುಣಃ ಸ್ಪರ್ಶಃ ಸ್ಪರ್ಶಶ್ಚ ಬಹುಧಾ ಸ್ಮೃತಃ ॥ ೩೩ ॥

ವಾಯುವಿನಲ್ಲಿ ಶಬ್ದ-ಸ್ಪರ್ಶ ಎಂಬ ಎರಡೇ ಗುಣಗಳು. ವಾಯುವಿನ ಸ್ಪರ್ಶ ಗುಣದಲ್ಲಿ ಅನೇಕ ವಿಧಗಳಿವೆ ಎಂದು ಹೇಳುತ್ತಾರೆ.

ಕಠಿನಶ್ಚಿಕ್ಕಣಃ ಶ್ಲಕ್ಷ್ಣಃ ಪಿಚ್ಛಲೋ ಮೃದುದಾರುಣಃ ।
ಉಷ್ಣಃ ಶೀತಃ ಸುಖೋ ದುಃಖಃ ಸ್ನಿಗ್ಧೋ ವಿಶದ ಏವ ಚ ।
ಏವಂ ದ್ವಾದಶವಿಸ್ತಾರೋ ವಾಯವ್ಯೋ ಗುಣ ಉಚ್ಯತೇ ॥ ೩೪ ॥

ಒರಟು, ಮೃದು, ನಯ, ಘನ, ಜಿಡ್ಡು, ಕಠಿಣ, ಉಷ್ಣ, ಶೀತ, ಸುಖ, ದುಃಖ, ಸ್ನಿಗ್ಧ, ವಿಶದ ಎಂದು ಹನ್ನೆರಡು ಗುಣಗಳ ವಿಸ್ತಾರವನ್ನು ವಾಯುವಿನ ಗುಣ ಎಂದು ಹೇಳುತ್ತಾರೆ.

ತತ್ಕೈಕಗುಣಮಾಕಾಶಂ ಶಬ್ದ ಇತ್ಯೇವ ತತ್ ಸ್ಮೃತಮ್ ।
ತಸ್ಯ ಶಬ್ದಸ್ಯ ವಕ್ಷ್ಯಾಮಿ ವಿಸ್ತರಂ ವಿವಿಧಾತ್ಮಕಮ್ ॥ ೩೫ ॥

ಆಕಾಶವೆಂಬುದು ಶಬ್ದವೆಂಬ ಒಂದೇ ಗುಣವುಳ್ಳದ್ದು. ಆಕಾಶಜನ್ಯವಾದ ಶಬ್ದದಲ್ಲಿ ಅನೇಕ ವಿಧವಿದೆ. ಅದನ್ನು ಹೇಳುತ್ತೇನೆ.

ಷಡ್ಜಂ ಋಷಭಗಾಂಧಾರೌ ಮಧ್ಯಮಃ ಪಂಚಮಸ್ತಥಾ ।
ಧೈವತಶ್ಚಾಪಿ ವಿಜ್ಞೇಯಸ್ತಥಾ ಚಾಪಿ ನಿಷಾದಕಃ ॥ ೩೬ ॥

ಷಡ್ಜ, ಋಷಭ, ಗಾಂಧಾರ, ಮಧ್ಯಮ, ಪಂಚಮ, ಧೈವತ, ನಿಷಾದ ಎಂಬುದಾಗಿ ಏಳು ಭೇದಗಳಿವೆ.

ಏಷ ಸಪ್ತವಿಧಃ ಪ್ರೋಕ್ತೋ ಗುಣ ಆಕಾಶಲಕ್ಷಣಃ ।
ತೈಸ್ತಯೈರ್ಣ ತು ಸರ್ವತ್ರ ಸ್ಥಿತೋಽಪಿ ಪಟಹಾದಿಷು ॥ ೩೭ ॥

ಈ ಏಳು ವಿಧ ಗುಣಗಳು ಆಕಾಶದ ಲಕ್ಷಣವು. ಶಬ್ದವೆಂಬುದು ಭೇರಿ ಮೊದಲಾದ ವಾದ್ಯಗಳಲ್ಲಿ ಸ್ಪಷ್ಟವಾಗಿ ಕೇಳಿಬಂದರೂ ಅದು ಸರ್ವವ್ಯಾಪಿಯು.

ಮೃದಂಗಭೇರೀಶಂಖಾನಾಂ ಸ್ತನಯಿತ್ನೋ ರಥಸ್ಯ ಚ ।
ಯಃ ಕಶ್ಚಿಚ್ಛ್ರೂಯತೇ ಶಬ್ದಃ ಪ್ರಾಣಿನೋಽಪ್ರಾಣಿನೋಽಪಿ ವಾ ॥ ೩೮ ॥

ಮೃದಂಗ, ಭೇರೀ, ಶಂಖ, ಮೇಘ, ರಥ ಮೊದಲಾದ ಸಜೀವ, ನಿರ್ಜೀವಗಳಿಂದ ಕೇಳಿ ಬರುವ ಎಲ್ಲಾ ಶಬ್ದಗಳು

ಏತೇಷಾಮೇವ ಸರ್ವೇಷಾಂ ವಿಷಯೇ ಸಂಪ್ರಕೀರ್ತಿತಃ ।
ಏವಂ ಬಹುವಿಧಾಕಾರಃ ಶಬ್ದ ಆಕಾಶಸಂಭವಃ ॥ ೩೯ ॥

ಈ ಎಲ್ಲಾ ಶಬ್ದಗಳು ಷಡ್ಜಾದಿ ಸ್ವರಗಳಲ್ಲಿಯೇ ಸೇರಿದವುಗಳೆಂದು ತಿಳಿ. ಆಕಾಶದಿಂದ ಹುಟ್ಟುವ ಶಬ್ದವು ಹೀಗೆ ಅನೇಕ ಆಕಾರದಿಂದ ಕೂಡಿದೆ.

ಆಕಾಶಜಂ ಶಬ್ದಮಾಹುರೇಭಿರ್ವಾಯುಗುಣೈಃ ಸಹ ।
ಅವ್ಯಾಹತೈಶ್ಚೇತಯತೇ ನ ವೇತ್ತಿ ವಿಷಮಾಗತೈಃ ॥ ೪೦ ॥

ಆಕಾಶದಿಂದ ಉತ್ಪನ್ನವಾಗುವ ಶಬ್ದವು ವಾಯುವಿನ ಗುಣಗಳಾದ ಹಲವು ಬಗೆಯ ಸ್ಪರ್ಶಗಳಲ್ಲಿ ತಡೆಯಲ್ಪಡದೆ ಹೊರಬಿದ್ದರೆ ಅದು ಕಿವಿಗೆ ವಿಧವಿಧವಾಗಿ ಕೇಳಿಸುತ್ತದೆ. ಅದೇ ಸ್ಪರ್ಶವು ಅಡ್ಡಬಂದಾಗ ಶಬ್ದವು ಕೇಳಿಸದು.

ಆಪ್ಯಾಯಂತೇ ಚ ತೇ ನಿತ್ಯಂ ಧಾತವಸ್ತೈಸ್ತು ಧಾತುಭಿಃ ।
ಆಪೋಽಗ್ನಿರ್ಮಾರುತಶ್ಚೈವ ನಿತ್ಯಂ ಜಾಗ್ರತಿ ದೇಹಿಷು ॥ ೪೧ ॥

ಸಮಸ್ತ ಪ್ರಾಣಿಗಳು ಶರೀರದೊಳಗಿನ ಪಂಚಭೂತಗಳಿಂದ ಮೇಲಿಂದ ಮೇಲೆ ವೃದ್ಧಿ ಹೊಂದುತ್ತವೆ. ಪ್ರಾಣಿಗಳ ದೇಹದಲ್ಲಿ ಅಗ್ನಿ-ಜಲ-ವಾಯುಗಳೆಂಬ ಭೂತಗಳು ಯಾವಾಗಲೂ ಜಾಗೃತವಾಗಿಯೇ ಇರುತ್ತವೆ. ಇವುಗಳೇ ದೇಹಕ್ಕೆ ಆಧಾರವಾಗಿ ಪಂಚಪ್ರಾಣಗಳಲ್ಲಿಯೂ ವ್ಯಾಪಿಸಿ ದೇಹಗಳಲ್ಲಿ ನೆಲೆಗೊಂಡಿವೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ದಶಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಹತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೊಂದನೆಯ ಅಧ್ಯಾಯ

ಭೃಗುಋಷಿಗಳು ಭರದ್ವಾಜರನ್ನು ಕುರಿತು ಶರೀರದಲ್ಲಿ ಪ್ರಾಣಾಪಾನಾದಿಗಳ ಕಾರ್ಯಗಳ ಕುರಿತು ನಿರೂಪಿಸಿದುದು.

ಭರದ್ವಾಜಃ

ಪಾರ್ಥಿವಂ ಧಾತುಮಾಶ್ರಿತ್ಯ ಶಾರೀರೋಽಗ್ನಿಃ ಕಥಂ ಭವೇತ್ ।
ಅವಕಾಶವಿಶೇಷೇಣ ಕಥಂ ವರ್ತಯತೇಽನಿಲಃ ॥ ೧ ॥

ಭರದ್ವಾಜ– ಮಹಾತ್ಮನೇ, ದೇಹದ ಪಾರ್ಥಿವ ಭಾಗದಲ್ಲಿ ಅಗ್ನಿ ಇರುತ್ತದೆಂದು ಹಿಂದೆ ಹೇಳಿರುವಿ. ಆ ಅಗ್ನಿಯು ಹೇಗೆ ದೇಹದಲ್ಲಿ ಸೇರಿದೆ? ವಾಯುವೆಂಬ ಭೂತವು ಶರೀರದ ಅವಕಾಶದಲ್ಲಿ ಅರ್ಥಾತ್ ಆಕಾಶದಲ್ಲಿ ಹೇಗೆ ಸೇರಿಕೊಂಡು ಶರೀರವನ್ನು ಪ್ರವೃತ್ತಿ ಹೊಂದುವಂತೆ ಮಾಡುತ್ತದೆ? ಇದನ್ನು ತಿಳಿಸಿರಿ.

ಭೃಗುಃ

ವಾಯೋರ್ಗತಿಮಹಂ ಬ್ರಹ್ಮನ್ ಕೀರ್ತಯಿಷ್ಯಾಮಿ ತೇಽನಘ ।
ಪ್ರಾಣೇನಾಮನಿಲೋ ದೇಹಾನ್ ಯಥಾ ಚೇಷ್ಟಯತೇ ಬಲೀ ॥ ೨ ॥

ಭೃಗು– ಭರದ್ವಾಜರೇ, ವಾಯುಗತಿಯನ್ನು, ಅದು ದೇಹವನ್ನು ಚೇಷ್ಟಿಸುವ ಕ್ರಮವನ್ನು ತಿಳಿಸುತ್ತೇನೆ, ಕೇಳಿರಿ.

ಶ್ರಿತೋ ಮೂರ್ಧಾನಮಗ್ನಿಸ್ತು ಶರೀರಂ ಪರಿಪಾಲಯನ್ ।
ಪ್ರಾಣೋ ಮೂರ್ಧನಿ ಚಾಗ್ನೌ ಚ ವರ್ತಮಾನೋ ವಿಚೇಷ್ಟತೇ ॥ ೩ ॥

ಸಮಸ್ತ ಜೀವರ ತಲೆಯಲ್ಲಿ ಅಗ್ನಿ ಎಂಬ ಜೀವಾತ್ಮನು ಸೇರಿಕೊಂಡು ಶರೀರವನ್ನು ರಕ್ಷಿಸುತ್ತಿರುವುದು. ಪ್ರಾಣವಾಯುವೆಂಬುದು ತಲೆಯನ್ನಾಶ್ರಯಿಸಿರುವ ಆ ಅಗ್ನಿಗಳಲ್ಲಿದ್ದುಕೊಂಡು ಅನೇಕ ವಿಧವಾದ ಚೇಷ್ಟೆಗಳನ್ನು ಮಾಡಿಸುತ್ತದೆ.

ಸ ಜಂತುಃ ಸರ್ವಭೂತಾತ್ಮಾ ಪುರುಷಃ ಸ ಸನಾತನಃ ।
ಮನೋ ಬುದ್ಧಿರಹಂಕಾರೋ ಭೂತಾನಿ ವಿಷಯಾಶ್ಚ ಸಃ ॥ ೪ ॥

ಆ ಪ್ರಾಣವಾಯುವು ಸಮಸ್ತ ಜಂತುಗಳನ್ನು ನಿಯಮನ ಮಾಡುವುದರಿಂದ ಜಂತು ಎನಿಸಿಕೊಂಡಿದೆ. ಸಮಸ್ತ ಭೂತಗಳಿಗೂ ಆತ್ಮನೆನಿಸಿದ ಸನಾತನ ಪುರುಷನು ಆಗಿದೆ. ಆ ಪ್ರಾಣವೇ ಸಮಸ್ತ ಭೂತಗಳು, ಮನಸ್ಸು, ಬುದ್ಧಿ, ಅಹಂಕಾರ, ಇಂದ್ರಿಯ ಗೋಚರವಾದ ವಿಷಯಗಳೂ ಆಗಿದೆ.

ಏವಂ ತ್ವಿಹ ಸ ಸರ್ವತ್ರ ಪ್ರಾಣೇನ ಪರಿಪಾಲ್ಯತೇ ।
ಪೃಷ್ಠತಶ್ಚ ಸಮಾನೇನ ಸ್ವಾಂ ಸ್ವಾಂ ಗತಿಮುಪಾಶ್ರಿತಃ ॥ ೫ ॥

ಸಮಸ್ತ ಪ್ರಾಣಿಯು ಪ್ರಾಣವಾಯುವಿಂದ ರಕ್ಷಿತವಾಗಿ ಅದರ ಅನುಗ್ರಹದಿಂದಲೇ ವ್ಯಾಪಾರ ಮಾಡುತ್ತವೆ. ಸಮಾನವಾಯುವು ಶರೀರದ ನಡುವೆ ಸೇರಿಕೊಂಡಿದೆ. ಇದರ ಬಲದಿಂದಲೇ ಇಂದ್ರಿಯಗಳು ತಮ್ಮ ತಮ್ಮ ಕ್ರಿಯೆಗಳನ್ನು ನಡೆಸುತ್ತವೆ.

ಬಸ್ತಿಮೂಲಂ ಗುದಂ ಚೈವ ಪಾವಕಂ ಚ ಸಮಾಶ್ರಿತಃ ।
ವಹನ್ಮೂತ್ರಂ ಪುರೀಷಂ ಚಾಪ್ಯಪಾನಃ ಪರಿವರ್ತತೇ ॥ ೬ ॥

ಅಪಾನವೆಂಬ ವಾಯುವು ನಾಭಿಯ ಕೆಳಭಾಗದಲ್ಲಿ ಗುದಪ್ರದೇಶವನ್ನು ಆಶ್ರಯಿಸಿಕೊಂಡು ಅಲ್ಲಿರುವ ಅಗ್ನಿಯನ್ನಾಶ್ರಯಿಸಿ ದೇಹದ ಕಶ್ಮಲ, ಜಲ, ಮಲಗಳನ್ನು ಹೊರಗೆ ಬೀಳುವಂತೆ ಪ್ರೇರಿಸುತ್ತದೆ.

ಪ್ರಯತ್ನೇ ಕರ್ಮಣಿ ಬಲೇ ಯ ಏಕಸ್ತ್ರಿಷು ವರ್ತತೇ ।
ಉದಾನ ಇತಿ ತಂ ಪ್ರಾಹುರಧ್ಯಾತ್ಮವಿದುಷೋ ಜನಾಃ ॥ ೭ ॥

ಉದಾನವೆಂಬ ವಾಯುವು ಶರೀರದಲ್ಲಿ ಪ್ರಯತ್ನ, ಕರ್ಮ, ಬಲ ಎಂಬ ಮೂರು ಕಾರ್ಯಗಳಲ್ಲಿ ಒಂದೊಂದಕ್ಕೂ ಪ್ರೇರಕವೆಂದು ಶರೀರ ಶಾಸ್ತ್ರಜ್ಞರು ಹೇಳುತ್ತಾರೆ.

ಸಂಧಿಷ್ವಪಿ ಚ ಸರ್ವೇಷು ಸನ್ನಿವಿಷ್ಟಸ್ತಥಾನಿಲಃ ।
ಶರೀರೇಷು ಮನುಷ್ಯಾಣಾಂ ವ್ಯಾನ ಇತ್ಯುಪದಿಶ್ಯತೇ ॥ ೮ ॥

ವ್ಯಾನವೆಂಬ ವಾಯುವು ಪ್ರಾಣಿಶರೀರಗಳ ಒಂದೊಂದು ಕೀಲುಗಳಲ್ಲಿಯೂ ಪ್ರವೇಶಿಸಿ ವರ್ತಿಸತಕ್ಕದ್ದು.

ವ್ಯಾಖ್ಯಾನ ವಿಶೇಷ– ೧. ಚರ್ಮ, ರಕ್ತ, ಮಾಂಸ, ಮೇಧಸ್ಸು, ಮಜ್ಜೆ, ಅಸ್ಥಿ, ಶುಕ್ಲ ಎಂಬ ಸಪ್ತಧಾತುಗಳು ವಾತ, ಪಿತ್ತ, ಕಫ ಎಂಬ ಮೂರು ದೋಷಗಳು.

೨. ವಾತ, ಪಿತ್ತ, ಕಫ ಎಂಬ ಮೂರು ದೋಷಗಳಲ್ಲಿ ರಕ್ತದ ಮಲವು ಕಫ ಎಂದು ಕರೆಸಿಕೊಳ್ಳುತ್ತದೆ. ಪಿತ್ತವು ಮಾಂಸದ ಮಲ. ಮೇಧಸ್ಸಿನ ಮಲ ಬೆವರು. ಎಲುಬಿನ ಮಲ ಕೂದಲು, ಉಗುರು ಮುಂತಾದವು ಎಂದು ಚರಕ ಸಂಹಿತೆಯಲ್ಲಿದೆ.

ಧಾತುಷ್ವಗ್ನಿಸ್ತು ವಿತತಃ ಸಮಾನೇನ ಸಮೀರಿತಃ ।
ರಸಾನ್ ಧಾತೂಂಶ್ಚ ದೋಷಾಂಶ್ಚ ವರ್ತಯನ್ನವತಿಷ್ಠತಿ ॥ ೯ ॥

ಅಗ್ನಿಯು ಸಮಾನವೆಂಬ ವಾಯುವಿನಿಂದ ಪ್ರೇರಿತವಾಗಿ ಅವುಗಳಲ್ಲಿ ವ್ಯಾಪಿಸಿ ಅನ್ನರಸಗಳನ್ನು ಪಾಕ ಮಾಡುವುದು. ಅವುಗಳಲ್ಲಿರುವ ಸಾರಾಸಾರಗಳನ್ನು ಬೇರ್ಪಡಿಸಿ ಸಪ್ತಧಾತುಗಳಿಗೆ ಬೇಕಾದ ಸಾರವನ್ನು ಒದಗಿಸಿ ಬೇಡವಾದ ಅಸಾರ ಭಾಗಗಳನ್ನು ಪ್ರತ್ಯೇಕಿಸುವುದು ಅದರ ವ್ಯಾಪಾರವಾಗಿದೆ.

ಅಪಾನಪ್ರಾಣಯೋರ್ಮಧ್ಯೇ ಪ್ರಾಣಾಪಾನಸಮಾಹಿತಃ ।
ಸಮನ್ವಿತಃ ಸ್ವಧಿಷ್ಠಾನಃ ಸಮ್ಯಕ್ಪಚತಿ ಪಾವಕಃ ॥ ೧೦ ॥

ಪ್ರಾಣಾಪಾನಗಳ ನಡುವೆ ಎಂದರೆ ನಾಭಿಪ್ರದೇಶದಲ್ಲಿರುವ ಅಗ್ನಿಯು ಆ ಎರಡು ವಾಯುಗಳ ಸಹಾಯದಿಂದ ಆಹಾರವನ್ನು ಪಚನವಾಗುವಂತೆ ಮಾಡುತ್ತದೆ.

ಆಸ್ಯಂ ಹಿ ಪಾಯುಸಂಯುಕ್ತಮಂತೇ ಸ್ಯಾದ್ಗುದಸಂಜ್ಞಿತಮ್ ।
ಸ್ರೋತಸೋಽಸ್ಮಾತ್ ಪ್ರಜಾಯಂತೇ ಸರ್ವಸ್ರೋತಾಂಸಿ ದೇಹಿನಾಮ್ ॥

ಬಾಯಿಂದ ಗುದದ್ವಾರದವರೆಗೆ ಒಂದು ನಾಳವಿದೆ. ಆ ನಾಳವೇ ಪ್ರಾಣವಾಯುವು ಸಂಚರಿಸುವ ಮಾರ್ಗವು. ಇದರ ತಳಭಾಗವೇ ಗುದವೆಂದು ಕರೆಸಿಕೊಳ್ಳುತ್ತದೆ. ಬಾಯಲ್ಲಿ ಉತ್ಪನ್ನವಾಗುವ ಜೊಲ್ಲುರಸದ ಜಲಪ್ರವಾಹವು ದೇಹದಲ್ಲಿರುವ ನಾಡಿಗಳ ಪ್ರತಿಸಂಧಿಗಳಲ್ಲಿಯೂ ಹರಿಯುತ್ತದೆ. ಕ್ಷಣಕ್ಷಣಗಳಲ್ಲಿಯೂ ಉತ್ಪನ್ನವಾಗುವ ಈ ರಸದಿಂದಲೇ ಸಮಸ್ತ ನಾಡಿಗಳು ಚೈತನ್ಯವನ್ನು ಹೊಂದಿರುತ್ತವೆ.

ಪ್ರಾಣಾನಾಂ ಸನ್ನಿಪಾತಾಚ್ಚ ಸನ್ನಿಪಾತಃ ಪ್ರಜಾಯತೇ ।
ಊಷ್ಮಾ ಚಾಗ್ನಿರಿತಿ ಜ್ಞೇಯೋ ಯೋಽನ್ನಂ ಪಚತಿ ದೇಹಿನಾಮ್ ॥೧೨॥

ಪ್ರಾಣವಾಯುವು ಸಮಸ್ತ ನಾಡಿಗಳಲ್ಲಿಯೂ ಪ್ರವೇಶಿಸಿ ಎಲ್ಲವನ್ನೂ ಏಕೀಕರಿಸುತ್ತದೆ. ಪ್ರಾಣವಾಯುವಿನಲ್ಲಿಯೇ ಸನ್ನಿಹಿತವಾಗಿರುವ ಅಗ್ನಿಯು ಉಷ್ಣವೆಂದು ಕರೆಯಲ್ಪಟ್ಟು ಅದೇ ಅನ್ನವನ್ನು ಪಕ್ವವಾಗುವಂತೆ ಮಾಡುತ್ತದೆ.

ಅಗ್ನಿವೇಗವಹಃ ಪ್ರಾಣೋ ಗುದಾಂತೇ ಪ್ರತಿಹನ್ಯತೇ ।
ಸ ಊರ್ಧ್ವಮಾಗಮ್ಯ ಪುನಃ ಸಮುತ್‌ಕ್ಷಿಪತಿ ಪಾವಕಮ್ ॥ ೧೩ ॥

ಈ ಅಗ್ನಿವೇಗದ ಬಲದಿಂದ ಪ್ರಾಣವಾಯುವು ತಲೆಯಿಂದ ಗುದದ್ವಾರದವರೆಗೆ ಸಂಚರಿಸಿ ಪುನಃ ಮೇಲ್ಭಾಗದಲ್ಲಿ ತಿರುಗಿ ಬರುತ್ತದೆ.

ಪಕ್ವಾಶಯಸ್ತ್ವಧೋ ನಾಭೇರೂರ್ಧ್ವಮಾಮಾಶಯಃ ಸ್ಥಿತಃ ।
ನಾಭಿಮಧ್ಯೇ ಶರೀರಸ್ಯ ಸರ್ವೇ ಪ್ರಾಣಾಃ ಸಮಾಹಿತಾಃ ॥ ೧೪ ॥

ಬಳಿಕ ತನ್ನಲ್ಲಿರುವ ಆ ಅಗ್ನಿಯನ್ನು ಕೆಳಕ್ಕೆ ದೂಡುವುದು, ನಾಭಿಯ ಕೆಳಗೆ ಆಹಾರವನ್ನು ಪಕ್ವಮಾಡುವ ಪಕ್ವಾಶಯ ಇದೆ. ಜಠರಾಗ್ನಿಯಿಂದ ಹಿಟ್ಟಿನಂತೆ ಮಾಡಲ್ಪಟ್ಟ ಕಶ್ಮಲರೂಪವಾದ ಮಲವನ್ನು ಗುದಪ್ರದೇಶಕ್ಕೆ ಕೊಂಡೊಯ್ಯುತ್ತದೆ. ಅದರ ಮೇಲೆ ಆಮಾಶಯವೆಂದು ಕರೆಯಲ್ಪಡುವ ಆಹಾರವನ್ನು ಗ್ರಹಿಸತಕ್ಕ ಸ್ಥಾನವಿದೆ. ನಾಭಿಯ ನಡುಭಾಗದಲ್ಲಿ ಶರೀರಕ್ಕೆ ಬೇಕಾದ ಎಲ್ಲಾ ಪ್ರಾಣಗಳೂ ನೆಲೆಸಿವೆ.

ಪ್ರಸೃತಾ ಹೃದಯಾತ್ ಸರ್ವೇ ತಿರ್ಯಗೂರ್ಧ್ವಮಧಸ್ತಥಾ ।
ವಹಂತ್ಯನ್ನರಸಾನ್ನಾಡ್ಯೋ ದಶ ಪ್ರಾಣೈಃ ಪ್ರಚೋದಿತಾಃ ॥ ೧೫ ॥

ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯ ಎಂಬ ಹತ್ತು ಪ್ರಾಣವಾಯುಗಳಿಂದ ಪ್ರೇರಿತಗಳಾಗಿ ದೇಹದೊಳಗಿನ ನಾಡಿಗಳು ಹೃದಯದಿಂದ ನಾನಾ ಭಾಗದಲ್ಲಿ ಹೊರಟು ಎಲ್ಲ ರಸಗಳನ್ನು ಮೇಲಕ್ಕೆ, ಕೆಳಕ್ಕೆ, ಪಾರ್ಶ್ವಗಳಿಗೂ ಸಾಗಿಸುತ್ತವೆ.

ಏಷ ಮಾರ್ಗೋಽಥ ಯೋಗಾನಾಂ ಯೇನ ಗಚ್ಛಂತಿ ತತ್ ಪದಮ್ ।
ಜಿತಕ್ಲಮಾಸನಾ ಧೀರಾ ಮೂರ್ಧನ್ಯಾತ್ಮಾನಮಾದಧುಃ ॥ ೧೬ ॥

ಮುಖ್ಯಪ್ರಾಣನು ಯೋಗದ ಮಾರ್ಗಗಳ ಗುರಿಯಾಗಿದ್ದಾನೆ. ಇವನನ್ನು ಆಶ್ರಯಿಸಿಕೊಂಡೇ ಬ್ರಹ್ಮಪದವನ್ನು ಹೊಂದುತ್ತಾರೆ. ಯೋಗಿಗಳು ಎಲ್ಲಾ ಶ್ರಮಗಳನ್ನು ಜಯಿಸಿ ಸುಖ-ದುಃಖಗಳನ್ನು ಸಮವಾಗಿ ಕಾಣುತ್ತಾ ತಮ್ಮ ತಲೆಯಲ್ಲಿ ಭಗವಂತನನ್ನೇ ಚಿಂತಿಸುತ್ತಾ ಇವನ ಅನುಗ್ರಹದಿಂದ ಉತ್ತಮ ಬ್ರಹ್ಮಪದವನ್ನು ಹೊಂದುತ್ತಾರೆ.

ಏವಂ ಸರ್ವೇಷು ವಿಹಿತಃ ಪ್ರಾಣಾಪಾನೇಷು ದೇಹಿನಾಮ್ ।
ತಸ್ಮಿನ್ ಸ್ಥಿತೋ ನಿತ್ಯಮಗ್ನಿಃ ಸ್ಥಾಲ್ಯಾಮಿವ ಸಮಾಹಿತಃ ॥ ೧೭ ॥

ಹೀಗೆ ಪ್ರಾಣಿ ಶರೀರದಲ್ಲಿರುವ ಪ್ರಾಣಾಪಾನಾದಿ ವಾಯುಗಳೆಲ್ಲರೂ ಅಗ್ನಿಯಿಂದ ನೆಲೆಗೊಂಡು ಸ್ಥಾಲಿಯಲ್ಲಿ ಕಾಪಾಡಿಕೊಂಡು ಇಟ್ಟಿರುವ ಅಗ್ನಿಯಂತೆ ಯಾವಾಗಲೂ ಪ್ರಕಾಶಿಸುತ್ತಿರುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಹನ್ನೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹನ್ನೆರಡನೆಯ ಅಧ್ಯಾಯ

ಭರದ್ವಾಜರು ದೇಹಾತಿರಿಕ್ತ ಆತ್ಮನಿಲ್ಲ ಎಂಬ ಪಕ್ಷವನ್ನು ಆಶ್ರಯಿಸಿ ಭೃಗುಋಷಿಗಳನ್ನು ಕುರಿತು ಪ್ರಶ್ನಿಸಿದುದು.

ಭರದ್ವಾಜಃ

ಯದಿ ಪ್ರಾಣಾಯತೇ ವಾಯುರ್ವಾಯುರೇವ ವಿಚೇಷ್ಟತೇ ।
ಶ್ವಸಿತ್ಯಾಭಾಷತೇ ಚೈವ ತಸ್ಮಾಜ್ಜೀವೋ ನಿರರ್ಥಕಃ ॥ ೧ ॥

ಭರದ್ವಾಜ– ಭೃಗುಋಷಿಗಳೇ, ಸಮಸ್ತ ಜೀವರನ್ನು ಜೀವಿಸುವಂತೆ ಮಾಡುವವನು ಪ್ರಾಣವಾಯುವು. ಪ್ರಾಣವುಳ್ಳ ಚೇತನರನ್ನು ಚೇಷ್ಟೆ ಹೊಂದುವಂತೆ ಮಾಡುವುದು, ಉಸಿರಾಡುವುದು, ಮಾತನಾಡುವುದು ಈ ಎಲ್ಲ ಕಾರ್ಯಗಳೆಲ್ಲವೂ ಪ್ರಾಣನಿಂದಲೇ ನಡೆಯುವುದಾದರೆ ಜೀವ ಎಂಬ ಈ ದೇಹದಲ್ಲಿರುವ ವಸ್ತುವು ವ್ಯರ್ಥವಲ್ಲವೆ?

ಯದ್ಯೂಷ್ಮಭಾವ ಆಗ್ನೇಯೋ ವಹ್ನಿನಾ ಪಚ್ಯತೇ ಯದಿ ।
ಅಗ್ನಿರ್ಜರಯತೇ ಚೈವ ತಸ್ಮಾಜ್ಜೀವೋ ನಿರರ್ಥಕಃ ॥ ೨ ॥

ದೇಹದ ಉಷ್ಣವೇ ಅಗ್ನಿರೂಪವಾಗಿದ್ದು ಅದು ಆಹಾರವನ್ನು ಪಚನ ಮಾಡಿ ಜೀರ್ಣ ಮಾಡುತ್ತದೆ. ಅಗ್ನಿಯೇ ಜೀರ್ಣ ಮಾಡುವುದಾದರೆ ಆ ಕಾರಣದಿಂದಲೇ ಜೀವ ಎಂಬುದು ನಿರರ್ಥಕ ಎನಿಸುವುದಿಲ್ಲವೇ?

ಜಂತೋಃ ಪ್ರೀಣಯಮಾಣಸ್ಯ ಜೀವೋ ನೈವೋಪಲಭ್ಯತೇ ।
ವಾಯುರೇವ ಜಹಾತ್ಯೇನಮೂಷ್ಮಭಾವಶ್ಚ ನಶ್ಯತಿ ॥ ೩ ॥

ಜೀವ ಸಾಯುವಾಗ ಅದರ ದೇಹದಿಂದ ಜೀವನು ಬಿಟ್ಟುಹೋಗುವುದನ್ನು ನಾವು ನೋಡೆವು. ಉಸಿರಾಟ ನಿಂತ ಕ್ರಮವನ್ನು ತಿಳಿದು ಈ ದೇಹವನ್ನು ಪ್ರಾಣವಾಯುವು ಬಿಟ್ಟುಹೋಯಿತು ಎಂದು ತಿಳಿಯಬಹುದು. ಆದ್ದರಿಂದ ಪ್ರಾಣ ಹೋಯಿತು ಎಂದೇ ಹೇಳುವ ವಾಡಿಕೆಯಿದೆ. ಕೂಡಲೇ ದೇಹದಲ್ಲಿರುವ ಬಿಸಿ ಅಂಶವು ಶಾಂತವಾಗುವುದನ್ನು ತಿಳಿಯುತ್ತೇವೆ. ದೇಹವು ತಣ್ಣಗಾಗುವುದು ಅನುಭವಕ್ಕೆ ಬರುತ್ತದೆ.

ಯದಿ ವಾತೋಪಮೋ ಜೀವಃ ಸಂಶ್ಲೇಷೋ ಯದಿ ವಾಯುನಾ ।
ವಾಯುಮಂಡಲವದ್ದಶ್ಯೋ ಗಚ್ಛೇತ್ ಸಹ ಮರುದ್ಗಣೈಃ ॥ ೪ ॥

ಈ ಜೀವವೆಂಬುದು ಪ್ರಾಣನಿಗಿಂತ ಬೇರೆಯಾಗಿದೆಯಾ? ಅಥವಾ ಪ್ರಾಣದ ಸಂಬಂಧವನ್ನು ಹೊಂದಿಕೊಂಡು ಇರುವುದೋ? ಅದು ಪ್ರತ್ಯೇಕವಾಗಿದ್ದರೆ ಹೊರಗೆ ಹೋಗುವಾಗ ವಾಯುಮಂಡಲದಲ್ಲಿ ಸುಳಿ-ಗಾಳಿಯಂತೆ ಪ್ರತ್ಯೇಕವಾಗಿ ಕಾಣಿಸಬೇಕಲ್ಲವೇ?

ಶ್ಲೇಷ್ಮೋ ಯದಿ ಚ ವಾತೇನ ಯದಿ ತಸ್ಮಾತ್ ಪ್ರಣಶ್ಯತಿ ।
ಮಹಾರ್ಣವವಿಮುಕ್ತತ್ವಾದನ್ಯತ್ ಸಲಿಲಭಾಜನಮ್ ॥ ೫ ॥

ಕೂಪೇ ವಾ ಸಲಿಲಂ ದದ್ಯಾತ್ ಪ್ರದೀಪಂ ವಾ ಹುತಾಶನೇ ।
ತನ್ನಶ್ಯತ್ಯುಭಯಂ ತದ್ವಜ್ಜೀವೋ ವಾತಾನಲಾತ್ಮಕಃ ।
ಪ್ರಕ್ಷಿಪ್ತಂ ನಶ್ಯತಿ ಕ್ಷಿಪ್ರಂ ಯಥಾ ನಶ್ಯತ್ಯಸೌ ತಥಾ ॥ ೬ ॥

ಒಂದು ವೇಳೆ ಪ್ರಾಣವಾಯುವಿನ ಜೊತೆಗೇ ಜೀವನೂ ಸೇರಿಕೊಂಡಿದ್ದಾನೆ ಎಂದಾದಲ್ಲಿ ಪ್ರಾಣವಾಯುವು ನಶಿಸಿದೊಡನೆ ಜೀವವು ನಾಶಹೊಂದಿರಬೇಕಲ್ಲವೆ? ಬಾವಿಯ ನೀರಿನಲ್ಲಿ ಬೆರೆತ ಇದರ ಜಲವೂ, ಅಗ್ನಿಯಲ್ಲಿ ಸೇರಿದ ದೀಪಜ್ವಾಲೆಯು ಅವುಗಳ ಜೊತೆಯಲ್ಲಿ ಬೆರೆತು ಅವುಗಳ ಜೊತೆಯಲ್ಲೇ ನಾಶ ಹೊಂದುವಂತೆ ಜೀವನು ಪ್ರಾಣವಾಯುವಿನ ಜೊತೆ ಬೆರೆತು ಅವು ನಾಶವಾದಾಗ ಜೀವನು ನಾಶವಾಗಬೇಕಾಗುತ್ತದೆ. ಸಮುದ್ರದಿಂದ ಹೊರಬಂದ ನೀರು ನದಿ, ತಟಾಕ ಮೊದಲಾದವುಗಳನ್ನು ತುಂಬುತ್ತದೆ. ಅದರಂತೆ ಮಹಾವಾಯುವಿನ ಒಂದೊಂದು ಅಂಶಗಳು ನಾನಾದೇಹವನ್ನು ಪ್ರವೇಶಿಸಿ ಜೀವಭಾವವನ್ನು ಹೊಂದುತ್ತವೆ ಎಂದು ಹೇಳಬಾರದೇಕೆ? ಸಮುದ್ರದಲ್ಲಿ ಮುಳುಗಿಸಿದ ನೀರಿನ ಪಾತ್ರೆಯು ಅದರೊಳಗೆ ನೀರನ್ನು ಮುಳುಗಿಸಿದಾಗ ಮಾತ್ರ ನೀರಿನಲ್ಲಿದ್ದು ಮೇಲೆ ತೆಗೆದಾಗ ಬೇರೆಯಾಗಿ ಕಾಣುವಂತೆ ಜೀವನು ಪ್ರಾಣಾಗ್ನಿಗಿಂತ ಬೇರೆಯಾಗಿ ಕಾಣಿಸಬೇಕಲ್ಲವೇ?

ಪಂಚಸಾಧಾರಣೇ ಹ್ಯಸ್ಮಿನ್ ಶರೀರೇ ಜೀವಿತಂ ಕುತಃ ।
ಯೇಷಾಮನ್ಯತರತ್ಯಾಗಾಚ್ಚತುರ್ಣಾಂ ನಾಸ್ತಿ ಸಂಗ್ರಹಃ ॥ ೭ ॥

ಪಂಚಭೂತಗಳಿಂದ ನಿರ್ಮಿತವಾಗಿರುವ ಈ ಶರೀರದಲ್ಲಿ ಜೀವಾತ್ಮ ಎಂದರೆ ಯಾವುದು? ದೇಹದೊಳಗಿನ ಪಂಚಭೂತಗಳಲ್ಲಿ ಒಂದು ಅಗಲಿ ಹೋದರೂ ಉಳಿದ

ಹನ್ನೆರಡನೆಯ ಅಧ್ಯಾಯ

ಭರದ್ವಾಜರು ದೇಹಾತಿರಿಕ್ತ ಆತ್ಮನಿಲ್ಲ ಎಂಬ ಪಕ್ಷವನ್ನು ಆಶ್ರಯಿಸಿ ಭೃಗುಋಷಿಗಳನ್ನು ಕುರಿತು ಪ್ರಶ್ನಿಸಿದುದು.

ಭರದ್ವಾಜಃ

ಯದಿ ಪ್ರಾಣಾಯತೇ ವಾಯುರ್ವಾಯುರೇವ ವಿಚೇಷ್ಟತೇ ।
ಶ್ವಸಿತ್ಯಾಭಾಷತೇ ಚೈವ ತಸ್ಮಾಜ್ಜೀವೋ ನಿರರ್ಥಕಃ ॥ ೧ ॥

ಭರದ್ವಾಜ– ಭೃಗುಋಷಿಗಳೇ, ಸಮಸ್ತ ಜೀವರನ್ನು ಜೀವಿಸುವಂತೆ ಮಾಡುವವನು ಪ್ರಾಣವಾಯುವು. ಪ್ರಾಣವುಳ್ಳ ಚೇತನರನ್ನು ಚೇಷ್ಟೆ ಹೊಂದುವಂತೆ ಮಾಡುವುದು, ಉಸಿರಾಡುವುದು, ಮಾತನಾಡುವುದು ಈ ಎಲ್ಲ ಕಾರ್ಯಗಳೆಲ್ಲವೂ ಪ್ರಾಣನಿಂದಲೇ ನಡೆಯುವುದಾದರೆ ಜೀವ ಎಂಬ ಈ ದೇಹದಲ್ಲಿರುವ ವಸ್ತುವು ವ್ಯರ್ಥವಲ್ಲವೆ?

ಯದ್ಯೂಷ್ಮಭಾವ ಆಗ್ನೇಯೋ ವಹ್ನಿನಾ ಪಚ್ಯತೇ ಯದಿ ।
ಅಗ್ನಿರ್ಜರಯತೇ ಚೈವ ತಸ್ಮಾಜ್ಜೀವೋ ನಿರರ್ಥಕಃ ॥ ೨ ॥

ದೇಹದ ಉಷ್ಣವೇ ಅಗ್ನಿರೂಪವಾಗಿದ್ದು ಅದು ಆಹಾರವನ್ನು ಪಚನ ಮಾಡಿ ಜೀರ್ಣ ಮಾಡುತ್ತದೆ. ಅಗ್ನಿಯೇ ಜೀರ್ಣ ಮಾಡುವುದಾದರೆ ಆ ಕಾರಣದಿಂದಲೇ ಜೀವ ಎಂಬುದು ನಿರರ್ಥಕ ಎನಿಸುವುದಿಲ್ಲವೇ?

ಜಂತೋಃ ಪ್ರೀಣಯಮಾಣಸ್ಯ ಜೀವೋ ನೈವೋಪಲಭ್ಯತೇ ।
ವಾಯುರೇವ ಜಹಾತ್ಯೇನಮೂಷ್ಮಭಾವಶ್ಚ ನಶ್ಯತಿ ॥ ೩ ॥

ಜೀವ ಸಾಯುವಾಗ ಅದರ ದೇಹದಿಂದ ಜೀವನು ಬಿಟ್ಟುಹೋಗುವುದನ್ನು ನಾವು ನೋಡೆವು. ಉಸಿರಾಟ ನಿಂತ ಕ್ರಮವನ್ನು ತಿಳಿದು ಈ ದೇಹವನ್ನು ಪ್ರಾಣವಾಯುವು ಬಿಟ್ಟುಹೋಯಿತು ಎಂದು ತಿಳಿಯಬಹುದು. ಆದ್ದರಿಂದ ಪ್ರಾಣ ಹೋಯಿತು ಎಂದೇ ಹೇಳುವ ವಾಡಿಕೆಯಿದೆ. ಕೂಡಲೇ ದೇಹದಲ್ಲಿರುವ ಬಿಸಿ ಅಂಶವು ಶಾಂತವಾಗುವುದನ್ನು ತಿಳಿಯುತ್ತೇವೆ. ದೇಹವು ತಣ್ಣಗಾಗುವುದು ಅನುಭವಕ್ಕೆ ಬರುತ್ತದೆ.

ಯದಿ ವಾತೋಪಮೋ ಜೀವಃ ಸಂಶ್ಲೇಷೋ ಯದಿ ವಾಯುನಾ ।
ವಾಯುಮಂಡಲವದ್ದೃಶ್ಯೋ ಗಚ್ಛೇತ್ ಸಹ ಮರುದ್ಗಣೈಃ ॥ ೪ ॥

ಈ ಜೀವವೆಂಬುದು ಪ್ರಾಣನಿಗಿಂತ ಬೇರೆಯಾಗಿದೆಯಾ? ಅಥವಾ ಪ್ರಾಣದ ಸಂಬಂಧವನ್ನು ಹೊಂದಿಕೊಂಡು ಇರುವುದೋ? ಅದು ಪ್ರತ್ಯೇಕವಾಗಿದ್ದರೆ ಹೊರಗೆ ಹೋಗುವಾಗ ವಾಯುಮಂಡಲದಲ್ಲಿ ಸುಳಿ-ಗಾಳಿಯಂತೆ ಪ್ರತ್ಯೇಕವಾಗಿ ಕಾಣಿಸಬೇಕಲ್ಲವೇ?

ಶ್ಲೇಷೋ ಯದಿ ಚ ವಾತೇನ ಯದಿ ತಸ್ಮಾತ್ ಪ್ರಣಶ್ಯತಿ ।
ಮಹಾರ್ಣವವಿಮುಕ್ತತ್ವಾದನ್ಯತ್ ಸಲಿಲಭಾಜನಮ್ ॥ ೫ ॥

ಕೂಪೇ ವಾ ಸಲಿಲಂ ದದ್ಯಾತ್ ಪ್ರದೀಪಂ ವಾ ಹುತಾಶನೇ ।
ತನ್ನಶ್ಯತ್ಯುಭಯಂ ತದ್ವಜ್ಜೀವೋ ವಾತಾನಲಾತ್ಮಕಃ ।
ಪ್ರಕ್ಷಿಪ್ತಂ ನಶ್ಯತಿ ಕ್ಷಿಪ್ರಂ ಯಥಾ ನಶ್ಯತ್ಯಸೌ ತಥಾ ॥ ೬ ॥

ಒಂದು ವೇಳೆ ಪ್ರಾಣವಾಯುವಿನ ಜೊತೆಗೇ ಜೀವನೂ ಸೇರಿಕೊಂಡಿದ್ದಾನೆ ಎಂದಾದಲ್ಲಿ ಪ್ರಾಣವಾಯುವು ನಶಿಸಿದೊಡನೆ ಜೀವವು ನಾಶಹೊಂದಿರಬೇಕಲ್ಲವೆ? ಬಾವಿಯ ನೀರಿನಲ್ಲಿ ಬೆರೆತ ಇದರ ಜಲವೂ, ಅಗ್ನಿಯಲ್ಲಿ ಸೇರಿದ ದೀಪಜ್ವಾಲೆಯು ಅವುಗಳ ಜೊತೆಯಲ್ಲಿ ಬೆರೆತು ಅವುಗಳ ಜೊತೆಯಲ್ಲೇ ನಾಶ ಹೊಂದುವಂತೆ ಜೀವನು ಪ್ರಾಣವಾಯುವಿನ ಜೊತೆ ಬೆರೆತು ಅವು ನಾಶವಾದಾಗ ಜೀವನು ನಾಶವಾಗಬೇಕಾಗುತ್ತದೆ. ಸಮುದ್ರದಿಂದ ಹೊರಬಂದ ನೀರು ನದಿ, ತಟಾಕ ಮೊದಲಾದವುಗಳನ್ನು ತುಂಬುತ್ತದೆ. ಅದರಂತೆ ಮಹಾವಾಯುವಿನ ಒಂದೊಂದು ಅಂಶಗಳು ನಾನಾದೇಹವನ್ನು ಪ್ರವೇಶಿಸಿ ಜೀವಭಾವವನ್ನು ಹೊಂದುತ್ತವೆ ಎಂದು ಹೇಳಬಾರದೇಕೆ? ಸಮುದ್ರದಲ್ಲಿ ಮುಳುಗಿಸಿದ ನೀರಿನ ಪಾತ್ರೆಯು ಅದರೊಳಗೆ ನೀರನ್ನು ಮುಳುಗಿಸಿದಾಗ ಮಾತ್ರ ನೀರಿನಲ್ಲಿದ್ದು ಮೇಲೆ ತೆಗೆದಾಗ ಬೇರೆಯಾಗಿ ಕಾಣುವಂತೆ ಜೀವನು ಪ್ರಾಣಾಗ್ನಿಗಿಂತ ಬೇರೆಯಾಗಿ ಕಾಣಿಸಬೇಕಲ್ಲವೇ?

ಪಂಚಸಾಧಾರಣೇ ಹ್ಯಸ್ಮಿನ್ ಶರೀರೇ ಜೀವಿತಂ ಕುತಃ ।
ಯೇಷಾಮನ್ಯತರತ್ಯಾಗಾಚ್ಚತುರ್ಣಾಂ ನಾಸ್ತಿ ಸಂಗ್ರಹಃ ॥ ೭ ॥

ಪಂಚಭೂತಗಳಿಂದ ನಿರ್ಮಿತವಾಗಿರುವ ಈ ಶರೀರದಲ್ಲಿ ಜೀವಾತ್ಮ ಎಂದರೆ ಯಾವುದು? ದೇಹದೊಳಗಿನ ಪಂಚಭೂತಗಳಲ್ಲಿ ಒಂದು ಅಗಲಿ ಹೋದರೂ ಉಳಿದ

ನಾಲ್ಕಕ್ಕೂ ಅಲ್ಲಿ ಅಸ್ತಿತ್ವವು ಇರುವುದಿಲ್ಲ. ಶರೀರರೂಪದ ಸಂಗ್ರಹವು, ಸಮುದಾಯವು ನಾಶ ಹೊಂದುತ್ತದೆ.

ನಶ್ಯಂತ್ಯಾಪೋ ಹ್ಯನಾಹಾರಾದ್ ವಾಯುರುಚ್ಛ್ವಾಸನಿಗ್ರಹಾತ್ ।
ನಶ್ಯತೇ ಕೋಷ್ಠಭೇದಾತ್ ಖಮಗ್ನಿರ್ನಶ್ಯತ್ಯಭೋಜನಾತ್ ॥ ೮ ॥

ಆಹಾರವಿಲ್ಲದೆ ದೇಹದಲ್ಲಿರುವ ನೀರು ಒಣಗಿ ಹೋಗುತ್ತದೆ. ಉಸಿರಿಗೆ ಅಡ್ಡಿಮಾಡಿದಾಗ ದೇಹದಲ್ಲಿರುವ ಶ್ವಾಸವಾಯುವು ನಿಂತುಹೋಗುತ್ತದೆ. ಉದರವನ್ನು ಸೀಳುವುದರಿಂದ ಆಕಾಶತತ್ತ್ವವು ನಾಶವಾಗುತ್ತದೆ. ಆಹಾರವಿಲ್ಲದಿದ್ದಾಗ ಅಗ್ನಿಗೆ ಆಶ್ರಯವಿಲ್ಲದೆ ಅಗ್ನಿತತ್ತ್ವವು ನಾಶವಾಗುತ್ತದೆ.

ವ್ಯಾಧಿವ್ರಣಪರಿಕ್ಲೇಶೈರ್ಮೇದಿನೀ ಚೈವ ಶೀರ್ಯತೇ ।
ಪೀಡಿತೇಽನ್ಯತರೇ ಹ್ಯೇಷಾಂ ಸಂಘಾತೋ ಯಾತಿ ಪಂಚಧಾ ॥ ೯ ॥

ರೋಗ-ವ್ರಣಾದಿಗಳಿಂದ ಪೃಥಿವಿ ಎಂಬ ತತ್ತ್ವವು ದೇಹದಲ್ಲಿ ನಾಶವನ್ನು ಹೊಂದುತ್ತದೆ. ಪಂಚಭೂತಗಳಲ್ಲಿ ಒಂದಕ್ಕೆ ಅಪಾಯ ಒದಗಿದರೂ ಪಂಚಭೂತಗಳ ಕಟ್ಟು ನಾಶವಾಗಿ ದೇಹವು ಮೃತಿಯನ್ನು ಹೊಂದುತ್ತದೆ.

ತಸ್ಮಿನ್ ಪಂಚತ್ವಮಾಪನ್ನೇ ಜೀವಃ ಕಿಮನುಧಾವತಿ ।
ಕಿಂ ವೇದಯತಿ ವಾ ಜೀವಃ ಕಿಂ ಶೃಣೋತಿ ಬ್ರವೀತಿ ವಾ ॥ ೧೦ ॥

ಹೀಗೆ ಪಂಚಭೂತಗಳು ಪ್ರತ್ಯೇಕಿಸಿದಾಗ ಜೀವನು ಮೃತಿಯನ್ನು ಹೊಂದಿದಾಗ ಜೀವನು ಯಾವುದನ್ನು ಅನುಸರಿಸಿಕೊಂಡು ಹೋಗುತ್ತಾನೆ? ಏನನ್ನು ತಿಳಿಯುತ್ತಾನೆ? ಕೇಳುವುದಾದರೂ ಯಾವುದು? ಏನು ನುಡಿಯುತ್ತಾನೆ?

ಏಷಾ ಗೌಃ ಪರಲೋಕಸ್ಥಂ ತಾರಯಿಷ್ಯತಿ ಮಾಮಿತಿ ।
ಯೋ ದತ್ತ್ವಾ ಮ್ರಿಯತೇ ಜಂತುಃ ಸಾ ಗೌಃ ಕಂ ತಾರಯಿಷ್ಯತಿ ॥ ೧೧॥

ಬ್ರಾಹ್ಮಣನೊಬ್ಬನಿಗೆ ಒಂದು ಗೋವನ್ನು ದಾನ ಮಾಡುವಾಗ ಆ ಗೋವು ಪರಲೋಕದಲ್ಲಿ ತನ್ನನ್ನು ಉದ್ಧರಿಸಲಿ ಎಂದು ಹೇಳುತ್ತಾರೆ. ಹಾಗೆ ದಾನ ಮಾಡಲ್ಪಟ್ಟ ಹಸುವು ತಾನೇ ಮೃತ್ಯುವನ್ನು ಹೊಂದುವಾಗ ಬೇರೆಯವರನ್ನು ಉದ್ಧರಿಸುವುದು ಹೇಗೆ?

ಗೌಶ್ಚ ಪ್ರತಿಗ್ರಹೀತಾ ಚ ದಾತಾ ಚೈವ ಸಮಂ ಯದಾ ।
ಇಹೈವ ವಿಲಯಂ ಯಾಂತಿ ಕುತಸ್ತೇಷಾಂ ಸಮಾಗಮಃ ॥ ೧೨ ॥

ಗೋವನ್ನು ಕೊಟ್ಟವನು, ತೆಗೆದುಕೊಂಡವನು, ಗೋವು ಈ ಮೂವರು ಮೃತ ಹೊಂದುವುದರಲ್ಲಿ ಸಮಾನರೇ ಆಗಿರುವಾಗ ಅವರಿಗೆ ಪರಸ್ಪರ ಸಂಬಂಧ ಎಲ್ಲಿರುತ್ತದೆ?

ವಿಹಗೈರುಪಯುಕ್ತಸ್ಯ ಶೈಲಾಗ್ರಾತ್ ಪತಿತಸ್ಯ ವಾ ।
ಅಗ್ನಿನಾ ಚೋಪಯುಕ್ತಸ್ಯ ಕುತಃ ಸಂಜೀವನಂ ಪುನಃ ॥ ೧೩ ॥

ಛಿನ್ನಸ್ಯ ಯದಿ ವೃಕ್ಷಸ್ಯ ನ ಮೂಲಂ ಪ್ರತಿರೋಹತಿ ।
ಬೀಜಾನ್ಯಸ್ಯ ಪ್ರವರ್ತಂತೇ ಮೃತಃ ಕ್ವ ಪುನರೇಷ್ಯತಿ ॥ ೧೪ ॥

ಮೃಗ-ಪಕ್ಷಿಗಳಿಂದ ತಿನ್ನಲ್ಪಟ್ಟ ದೇಹವುಳ್ಳ ವ್ಯಕ್ತಿಯು, ಬೆಟ್ಟದಿಂದ ಕೆಳಗೆ ಬಿದ್ದು ತಲೆ ಒಡೆದುಕೊಂಡು ಸತ್ತವನು, ಬೆಂಕಿಯಲ್ಲಿ ಬಿದ್ದವನು ಇವರೆಲ್ಲರಿಗೂ ದೇಹವು ಹೋದ ಮೇಲೆ ಪುನಃ ಎಲ್ಲಿಂದ ದೇಹವು ಬರುತ್ತದೆ? ಒಂದು ಗಿಡದ ಬೇರನ್ನೇ ಸುಟ್ಟುಹಾಕಿದರೂ ಆ ಗಿಡವು ಮತ್ತೆ ಹುಟ್ಟದಿದ್ದರೂ ಆ ಗಿಡದ ಶೇಷವಾದ ಬೀಜದಿಂದ ಇನ್ನೊಂದು ಗಿಡವು ಹುಟ್ಟಬಹುದು. ಆದರೆ ಮೃತದೇಹವು ನಿಶ್ಶೇಷವಾಗಿ ದಗ್ಧವಾದ ಮೇಲೆ ತಿರುಗಿ ಹುಟ್ಟುವುದು ಎಂದರೆ ಏನು?

ಬೀಜಮಾತ್ರಂ ಪುರಾ ಸೃಷ್ಟಂ ಯದೇತತ್ ಪರಿವರ್ತತೇ ।
ಮೃತಾ ಮೃತಾಃ ಪ್ರಣಶ್ಯಂತಿ ಬೀಜಾದ್ ಬೀಜಂ ಪ್ರವರ್ತತೇ ॥ ೧೫ ॥

ಮೊದಲು ಬೀಜವು ಸೃಷ್ಟಿಸಲ್ಪಟ್ಟು ಆ ಬೀಜಗಳೇ ತಿರುಗಿ ತಿರುಗಿ ಮೊರೆತು ಪ್ರಪಂಚವಾಗಿ ಕಾಣಿಸುತ್ತಿದೆ. ಆದರೆ ಮೃತನಾದವನು ತಿರುಗಿ ಬರುವುದೆಂದರೆ ಹೇಗೆ ಎನ್ನುವುದು ಅರ್ಥವಾಗುತ್ತಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ದ್ವಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಹನ್ನೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿಮೂರನೆಯ ಅಧ್ಯಾಯ

ಭೃಗುವು ಶರೀರಕ್ಕಿಂತಲೂ ಬೇರೆಯಾದ ಜೀವನಿದ್ದಾನೆಂಬುದನ್ನು ಯುಕ್ತಿಬದ್ಧವಾಗಿ ಪ್ರತಿಪಾದಿಸಿದುದು.

ಭೃಗುಃ

ನ ಪ್ರಣಾಶೋಽಸ್ತಿ ಜೀವಾನಾಂ ದತ್ತಸ್ಯ ಚ ಕೃತಸ್ಯ ಚ ।
ಯಾತಿ ದೇಹಾಂತರಂ ಪ್ರಾಣೀ ಶರೀರಂ ತು ವಿಶೀರ್ಯತೇ ॥ ೧ ॥

ಭೃಗು– ಭರದ್ವಾಜರೇ, ಜೀವಾತ್ಮನಿಗೆ ನಾಶವಿಲ್ಲ. ಕೊಟ್ಟ ದಾನಕ್ಕೂ ನಾಶವಿಲ್ಲ. ನಡೆಸಿದ ಕರ್ಮಗಳಿಗೂ ಕೊನೆಯಿಲ್ಲ. ಸಾಯುವಾಗ ಆಯಾ ಶರೀರವು ಮಾತ್ರ ನಾಶ ಹೊಂದುತ್ತದೆ. ಜೀವನು ಬೇರೆ ಶರೀರವನ್ನು ಪ್ರವೇಶಿಸುತ್ತಾನೆ.

ನ ಶರೀರಾಶ್ರಿತೋ ಜೀವಸ್ತಸ್ಮಿನ್ನಷ್ಟೇ ಪ್ರಣಶ್ಯತಿ ।
ಯಥಾ ಸಮಿತ್ಸು ದಗ್ಧಾಸು ನ ಪ್ರಣಶ್ಯತಿ ಪಾವಕಃ ॥ ೨ ॥

ಸೌದೆಯು ಉರಿದುಹೋದರೂ ಆ ಕಟ್ಟಿಗೆಯಲ್ಲಿರುವ ಅಗ್ನಿಯು ನಾಶ ಹೊಂದುವುದಿಲ್ಲ. ಅದರಂತೆ ಶರೀರವು ನಾಶ ಹೊಂದಿದರೂ ಆ ಶರೀರವನ್ನು ಆಶ್ರಯಿಸಿದ ಜೀವನು ನಾಶಹೊಂದುವುದಿಲ್ಲ. ಸಮಿತ್ತುಗಳು ಸುಟ್ಟಾಗ ಸಮಿತ್ತಿನಲ್ಲಿರುವ ವಾಯುವಿನಿಂದ ಕೊಂಡೊಯ್ಯಲ್ಪಟ್ಟ ಅಗ್ನಿಯು ಸೂಕ್ಷ್ಮರೂಪದಿಂದ ಆಕಾಶವನ್ನು ಕುರಿತು ಹೋಗುವಂತೆ ಈ ದೇಹವನ್ನು ತೊರೆದ ಜೀವನು ಮತ್ತೊಂದು ಶರೀರವನ್ನು ಹೊಂದುತ್ತಾನೆ ಎಂದು ಅಭಿಪ್ರಾಯ.

ಭರದ್ವಾಜಃ

ಅಗ್ನೇರ್ಯಥಾ ತಥಾ ತಸ್ಯ ಯದಿ ನಾಶೋ ನ ವಿದ್ಯತೇ ।
ಇಂಧನಸ್ಯೋಪಯೋಗಾಂತೇ ಸ ಚಾಗ್ನಿರ್ನೋಪಲಭ್ಯತೇ ॥ ೩ ॥

ಭರದ್ವಾಜ– ಕಟ್ಟಿಗೆಯು ಉರಿದು ಹೋದಮೇಲೆ ಅದರಲ್ಲಿದ್ದ ಅಗ್ನಿಯು ಕಾಣಿಸುವುದಿಲ್ಲ. ಆದ್ದರಿಂದ ಅಗ್ನಿಯೂ ಕಟ್ಟಿಗೆಯಿಂದ ನಾಶವಾಗಿದೆ ಎಂದು ಏಕೆ ಹೇಳಬಾರದು?

ನಶ್ಯತೀತ್ಯೇವ ಜಾನಾಮಿ ಶಾಂತಮಗ್ನಿಮನಿಂಧನಮ್ ।
ಗತಿರ್ಯಸ್ಯ ಪ್ರಮಾಣಂ ವಾ ಸಂಸ್ಥಾನಂ ವಾ ನ ದೃಶ್ಯತೇ ॥ ೪ ॥

ಅಗ್ನಿಯು ಕಟ್ಟಿಗೆಯಿಂದ ಆಕಾಶಕ್ಕೆ ಹೋಗುವುದು ನಮಗೆ ತಿಳಿಯುವುದಿಲ್ಲ. ಅದು ಕಟ್ಟಿಗೆಯಲ್ಲಿಯೇ ಇದೆ ಎಂಬುದಕ್ಕೆ ಪ್ರಮಾಣವಿಲ್ಲ. ಆ ಅಗ್ನಿಯಿದ್ದ ಸ್ಥಳವು ನಮಗೆ ತಿಳಿಯುವುದಿಲ್ಲ. ಹೀಗಿದ್ದಮೇಲೆ ನಷ್ಟವಾಗಿದೆ ಎಂದೇ ತಿಳಿಯಬೇಕಲ್ಲವೇ?

ಭೃಗುಃ

ಸಮಿಧಾಮುಪಯೋಗಾಂತೇ ಸ್ವಲಿಂಗೈರುಪಲಭ್ಯತೇ ।
ಆಕಾಶಾನುಗತತ್ವಾದ್ಧಿ ದುರ್ಗ್ರಹಃ ಸ ನಿರಾಶ್ರಯಃ ॥ ೫ ॥

ಭೃಗು– ಭರದ್ವಾಜರೇ, ನೀರು ತಿಳಿದಂತಲ್ಲ. ಜೀವನಿಗೆ ನಾಶವಿರುವುದಿಲ್ಲ. ಕಟ್ಟಿಗೆಯೊಳಗಿನ ಅಗ್ನಿಗೂ ನಾಶವಿಲ್ಲ. ಕಟ್ಟಿಗೆಯ ಮಥನದಿಂದ ಕಟ್ಟಿಗೆಯಲ್ಲಿ ಲೀನವಾದ ಅಗ್ನಿಯು ಅಭಿವ್ಯಕ್ತಿಯನ್ನು ಹೊಂದುತ್ತದೆ. ಆ ಅಗ್ನಿಗೆ ಬೇರೆ ಆಶ್ರಯಸ್ಥಾನವಿಲ್ಲದ್ದರಿಂದ ಅದು ವಾಯುವಿನ ಜೊತೆಗೆ ಆಕಾಶದಲ್ಲಿ ಸೇರಿ ಅದೃಶ್ಯವಾಗಿರುತ್ತದೆ. ಅದನ್ನು ಕಂಡುಕೊಳ್ಳಲು ನಮ್ಮಿಂದ ಸಾಧ್ಯವಿಲ್ಲ.

ತಥಾ ಶರೀರಸಂತ್ಯಾಗೇ ಜೀವೋ ಹ್ಯಾಕಾಶವತ್ ಸ್ಥಿತಃ ।
ನ ಗೃಹ್ಯತೇ ಸುಸೂಕ್ಷ್ಮತ್ವಾದ್ಯಥಾ ಜ್ಯೋತಿರ್ನ ಸಂಶಯಃ ॥ ೬ ॥

ಇದರಂತೆ ಜೀವಾತ್ಮನು ಶರೀರವನ್ನು ತೊರೆದಮೇಲೆ ಆಕಾಶವನ್ನು ಸೇರುತ್ತಾನೆ. ಆ ಜೀವನು ಸೂಕ್ಷ್ಮನಾದುದರಿಂದ ಅಗ್ನಿಯಂತೆ ಕಣ್ಣಿಗೆ ಕಾಣಿಸಲಾರನು.

ಪ್ರಾಣಾನ್ ಧಾರಯತೇ ಹ್ಯಗ್ನಿಃ ಸ ಜೀವ ಉಪಧೀಯತೇ ।
ವಾಯುಸಂಧಾರಣೋ ಹ್ಯಗ್ನಿರ್ನಶ್ಯತ್ಯುಚ್ಛ್ವಾಸನಿಗ್ರಹಾತ್ ॥ ೭ ॥

ಇಂದ್ರಿಯಗಳನ್ನು ಧರಿಸುವ ಶಕ್ತಿ ಅಗ್ನಿಯಲ್ಲಿದೆ. ಆ ಅಗ್ನಿಯೇ ಜೀವ ಎಂದು ತಿಳಿದುಕೊ. ಜೀವ ಇದ್ದಾಗಲೇ ಅಗ್ನಿಯು ನಿಶ್ಚಯವಾಗುತ್ತದೆ. ಶರೀರದೊಳಗಿನ ಅಗ್ನಿಯು ಪ್ರಾಣವಾಯುವಿನಿಂದ ಧರಿಸಲ್ಪಟ್ಟಿದೆ. ಆ ವಾಯುವು ನಾಶವಾದೊಡನೆ ಅಗ್ನಿಯೂ ನಾಶವಾಗುತ್ತದೆ.

ತಸ್ಮಿನ್ನಷ್ಟೇ ಶರೀರಾಗ್ನೌ ಶರೀರಂ ತದಚೇತನಮ್ ।
ಪತಿತಂ ಯಾತಿ ಭೂಮಿತ್ವಮಯನಂ ತಸ್ಯ ಹಿ ಕ್ಷಿತಿಃ ॥ ೮ ॥

ಶರೀರದೊಳಗಿನ ಅಗ್ನಿಯು ನಾಶವಾದ ಕೂಡಲೇ ಶರೀರವು ಅಚೇತನವಾಗಿ ಕೆಳಗೆ ಬಿದ್ದು ಮಣ್ಣಾಗುತ್ತದೆ. ಅಂದರೆ ಪೃಥಿವಿಯಲ್ಲಿ ಸೇರಿಹೋಗುತ್ತದೆ. ಪಾರ್ಥಿವ ಶರೀರಕ್ಕೆ ಪೃಥಿವಿಯೇ ಆಶ್ರಯವು.

ಜಂಗಮಾನಾಂ ಹಿ ಸರ್ವೇಷಾಂ ಸ್ಥಾವರಾಣಾಂ ತಥೈವ ಚ ।
ಆಕಾಶಂ ಪವನೋऽಭ್ಯೇತಿ ಜ್ಯೋತಿಸ್ತಮನುಗಚ್ಛತಿ ।
ತತ್ರ ತ್ರಯಾಣಾಮೇಕತ್ವಂ ದ್ವಯಂ ಭೂಮೌ ಪ್ರತಿಷ್ಠಿತಮ್ ॥ ೯ ॥

ಸ್ಥಾವರ-ಜಂಗಮ ಪ್ರಾಣಿಗಳಲ್ಲಿರುವ ವಾಯುವು ಆಕಾಶದಲ್ಲಿ ಸೇರಿ ಹೋಗುತ್ತದೆ. ಆ ಶರೀರದಲ್ಲಿರುವ ಅಗ್ನಿಯು ವಾಯುವನ್ನೇ ಹಿಂಬಾಲಿಸುತ್ತದೆ. ಆಕಾಶ, ಅಗ್ನಿ, ವಾಯು, ಮೂರು ಒಟ್ಟಾಗಿ ಸೇರಿಕೊಳ್ಳುವ ಸ್ವಭಾವವುಳ್ಳವುಗಳು. ಉಳಿದ ಭೂತಗಳೆರಡು ನೀರು, ಭೂಮಿಗಳು ಭೂಮಿಯ ರೂಪಕ್ಕೆ ದೇಹದಲ್ಲಿರುವ ಪೃಥಿವಿಭಾಗವು, ಜಲಭಾಗವು ಸೇರಿಹೋಗುತ್ತವೆ.

ಯತ್ರ ಖಂ ತತ್ರ ಪವನಸ್ತತ್ರಾಗ್ನಿರ್ಯತ್ರ ಮಾರುತಃ ।
ಅಮೂರ್ತಯಸ್ತೇ ವಿಜ್ಞೇಯಾ ಆಪೋ ಮೂರ್ತಾಸ್ತಥಾ ಕ್ಷಿತಿಃ ॥ ೧೦ ॥

ಎಲ್ಲಿ ಆಕಾಶವಿದೆಯೋ ಅಲ್ಲಿ ವಾಯುವಿದೆ. ವಾಯುವಿರುವ ಸ್ಥಳದಲ್ಲಿ ಅಗ್ನಿ ಇದೆ. ಇವೆರಡು ಅಮೂರ್ತವಾದುದರಿಂದ ಕಣ್ಣಿಗೆ ಕಾಣಿಸವು. ಜಲಭೂತವಸ್ತುಗಳು ಮೂರ್ತವಾದುದರಿಂದ ಕಣ್ಣಿಗೆ ಕಾಣಿಸುತ್ತವೆ.

ಭರದ್ವಾಜಃ

ಯದ್ಯಗ್ನಿಮಾರುತೌ ಭೂಮಿಃ ಖಮಾಪಶ್ಚ ಶರೀರಿಷು ।
ಜೀವಃ ಕಿಂಲಕ್ಷಣಸ್ತತ್ರೇತ್ಯೇತದಾಚಕ್ಷ್ವ ಮೇऽನಘ ॥ ೧೧ ॥

ಭರದ್ವಾಜ– ಮಹರ್ಷಿಗಳೇ, ಪ್ರಾಣಿಗಳ ಶರೀರದಲ್ಲಿ ಅಗ್ನಿ, ವಾಯು, ಭೂಮಿ, ಆಕಾಶ, ಜಲ ಎಂಬ ಪಂಚಭೂತಗಳೂ ಸೇರಿಕೊಂಡಿರುತ್ತವೆ. ಜೀವನೂ ಆ ಶರೀರದಲ್ಲಿ ಸೇರಿರುವುದಾದರೆ ಆ ಜೀವನ ಲಕ್ಷಣಗಳೇನು ಎಂದು ತಿಳಿಸಿರಿ.

ಪಂಚಾತ್ಮಕೇ ಪಂಚರತೌ ಪಂಚವಿಜ್ಞಾನಸಂಯುತೇ ।
ಶರೀರೇ ಪ್ರಾಣಿನಾಂ ಜೀವಂ ಜ್ಞಾತುಮಿಚ್ಛಾಮಿ ಯಾದೃಶಮ್ ॥ ೧೨ ॥

ಪಂಚೇಂದ್ರಿಯಗಳಿಂದ ಕೂಡಿದ, ಪಂಚಭೂತಾತ್ಮಕನಾದ, ಪಂಚೇಂದ್ರಿಯ ವಿಷಯಗಳಿಗಾಗಿ ಆಶಿಸುವ ಶರೀರದಲ್ಲಿ ಜೀವನು ಹೇಗೆ ನೆಲೆಸಿದ್ದಾನೆ ಎಂಬುದನ್ನು ನನಗೆ ತಿಳಿಸಿರಿ.

ಮಾಂಸಶೋಣಿತಸಂಘಾತೇ ಮೇದಃಸ್ನಾಯ್ವಸ್ಥಿಸಂಚಯೇ ।
ಭಿದ್ಯಮಾನೇ ಶರೀರೇ ತು ಜೀವೋ ನೈವೋಪಲಭ್ಯತೇ ॥ ೧೩ ॥

ಮಾಂಸ, ರಕ್ತ, ಮೇದಸ್ಸು, ಅಸ್ಥಿ, ಸ್ನಾಯು ಎಂಬ ಅನೇಕ ಧಾತುಗಳಿಂದ ನಿರ್ಮಿತವಾದ ಶರೀರವೇ ಭಿನ್ನವಾದ ಬಳಿಕ ನಾಶವಾಗುವ ಈ ಶರೀರದಲ್ಲಿ ಜೀವನು ನಿಶ್ಚಿತವಾಗಿಯೂ ಕಾಣಿಸುವುದಿಲ್ಲ.

ಯದ್ಯಜೀವಂ ಶರೀರಂ ತು ಪಂಚಭೂತಸಮನ್ವಿತಮ್ ।
ಶಾರೀರೇ ಮಾನಸೇ ದುಃಖೇ ಕಸ್ತಾಂ ವೇದಯತೇ ರುಜಮ್ ॥ ೧೪ ॥

ಶರೀರಸಂಬಂಧವಿಲ್ಲದಿದ್ದಾಗ ಶಾರೀರಿಕ, ಮಾನಸಿಕ ದುಃಖಗಳು ಜೀವನ ಅನುಭವಕ್ಕೆ ಬರುವುದಿಲ್ಲ. ಜೀವನಿಲ್ಲದ ಆ ದುಃಖವನ್ನು ಅನುಭವಿಸಿ ತಿಳಿಯುವವರು ಯಾರು?

ಶೃಣೋತಿ ಕಥಿತಂ ಜೀವಃ ಕರ್ಣಾಭ್ಯಾಂ ನ ಶೃಣೋತಿ ತತ್ ।
ಮಹರ್ಷೇ ಮನಸಿ ವ್ಯಗ್ರೇ ತಸ್ಮಾಜ್ಜೀವೋ ನಿರರ್ಥಕಃ ॥ ೧೫ ॥

ಜೀವನು ಈ ಶರೀರದಲ್ಲಿ ನಿಯತಸ್ಥಿತಿಯಲ್ಲಿದ್ದಾಗ ಬೇರೆಯವರು ಹೇಳಿದ್ದನ್ನು ಕಿವಿಗಳಿಂದ ಕೇಳಿಸಿಕೊಳ್ಳುತ್ತಾನೆ. ಅದೇ ಜೀವನ ಮನಸ್ಸು ಇತರ ವಿಷಯದಲ್ಲಿ ಆಸಕ್ತವಾದಾಗ ಬೇರೆಯವರು ಹೇಳಿದ್ದನ್ನು ಕೇಳಿಸಿಕೊಳ್ಳದು. ಆದ್ದರಿಂದ ಎಲ್ಲದಕ್ಕೂ ಮನಸ್ಸು ಪ್ರಧಾನವೇ ಹೊರತು ಜೀವನು ನಿರರ್ಥಕನೇ ಆಗುತ್ತಾನಲ್ಲವೆ?

ಸರ್ವಂ ಪಶ್ಯತಿ ಯದ್ದೃಶ್ಯಂ ಮನೋಯುಕ್ತೇನ ಚಕ್ಷುಷಾ ।
ಮನಸಿ ವ್ಯಾಕುಲೇ ತದ್ಧಿ ಪಶ್ಯನ್ನಪಿ ನ ಪಶ್ಯತಿ ॥ ೧೬ ॥

ಮನಸ್ಸಿರುವಾಗಲೇ ಕಣ್ಣಿಗೆ ಬಿದ್ದದ್ದನ್ನೆಲ್ಲಾ ನೋಡಿ ತಿಳಿಯುತ್ತಾನೆ. ಮನಸ್ಸು ಬೇರೆ ಕಡೆ ಮಗ್ನವಾದಾಗ ಕಣ್ಣಿನಿಂದ ನೋಡಿದರೂ ಅದನ್ನು ತಿಳಿಯುವುದಿಲ್ಲ.

ವ್ಯಾಖ್ಯಾನ ವಿಶೇಷ– 'ಮನಸಿ ವ್ಯಾಕುಲೇ' ಎಂಬಲ್ಲಿ ಜೀವನು ನಿದ್ರಾವಶನಾಗಿ ಸ್ವರೂಪಭೂತವಾದ ಆನಂದಾನುಭವಕ್ಕೆ ವಶನಾದವನಾಗಿ ಸ್ವರೂಪಭೂತವಾದ ಮನಸ್ಸಿನಲ್ಲಿ ಸ್ವರೂಪ ಸುಖವನ್ನೇ ಅನುಭವಿಸುತ್ತಿರುವಾಗ ಒಳಗೆ ಅನುಭವಿಸುತ್ತಿರುವ ಜೀವನು ಹೊರಗೆ ಇರುವ ಪದಾರ್ಥಗಳನ್ನು ನೋಡುವುದಿಲ್ಲ. ಪುನಃ ಎಚ್ಚರಗೊಂಡ ಬಳಿಕ ಚಿದ್ರೂಪಿಯಾದ ಜೀವನು ಸಾಮಾನ್ಯ ವಿಶೇಷ ಜ್ಞಾನಗಳನ್ನು ಬಾಹ್ಯವಾಗಿ ಹೊಂದುತ್ತಾನೆ. ಈ ಕರ್ಮವನ್ನು ನಾನು ಮಾಡಿದೆ ಎಂದು ಮತ್ತೊಬ್ಬರಿಗೆ ಹೇಳುತ್ತಾನೆ. ಅಜ್ಞಾನಿಯಾದ ವ್ಯಕ್ತಿಗೆ ತಾನು ತಿಳಿದ ಅರ್ಥವನ್ನು ವಿವರಿಸುತ್ತಾನೆ. ಇದರಿಂದ ಜೀವನಿದ್ದಾನೋ ಇಲ್ಲವೋ ಎಂಬುದನ್ನು ನೀನೇ ಹೇಳು.

ನ ಪಶ್ಯತಿ ನ ಚ ಬ್ರೂತೇ ನ ಶೃಣೋತಿ ನ ಜಿಘ್ರತಿ ।
ನ ಚ ಸ್ಪರ್ಶರಸೌ ವೇತ್ತಿ ನಿದ್ರಾವಶಗತಃ ಪುನಃ ॥ ೧೭ ॥

ಜೀವನು ನಿದ್ರಾವಶನಾದಾಗ, ಮನಸ್ಸು ಆತ್ಮನಲ್ಲಿ ಉಪರತವಾದಾಗ ಬಾಹ್ಯ ಪದಾರ್ಥಗಳನ್ನು ನೋಡುವುದಿಲ್ಲ. ಬಾಹ್ಯವಿಷಯಗಳ ಬಗ್ಗೆ ಕೇಳಿಸಿಕೊಳ್ಳುವುದಿಲ್ಲ, ಮೂಗಿನಿಂದ ಆಘ್ರಾಣಿಸುವುದಿಲ್ಲ, ಸ್ಪರ್ಶರಸಗಳನ್ನೂ ತಿಳಿಯುವುದಿಲ್ಲ. ಪುನಃ ಜಾತವಶವನ್ನು ಹೊಂದಿದ ಬಳಿಕ ನೋಡುತ್ತಾನೆ, ಕೇಳಿಸಿಕೊಳ್ಳುತ್ತಾನೆ, ಆಘ್ರಾಣಿಸುತ್ತಾನೆ, ಮುಟ್ಟುತ್ತಾನೆ ಮತ್ತು ರಸವನ್ನು ಸ್ವೀಕರಿಸುತ್ತಾನೆ. ಮನಸ್ಸು ಇವುಗಳಲ್ಲಿ ರತವಾದಾಗ ಸಂತೋಷದ ವಿಷಯಗಳ ವ್ಯಾಪಾರಗಳನ್ನು ಮಾಡುತ್ತಾನೆ. ಇದರಿಂದ ಮನಸ್ಸು ಉಪರತವಾದಾಗ ಬಾಹ್ಯಪ್ರಜ್ಞೆಯಿರುವುದಿಲ್ಲ. ಮನಸ್ಸು ಜಾಗೃತವಾದಾಗ ಬಾಹ್ಯ ಪ್ರಜ್ಞೆಯನ್ನು ಹೊಂದುತ್ತಾನೆ. ಈ ಅನ್ವಯವ್ಯತಿರೇಕ ವ್ಯಾಪ್ತಿಯಿಂದ ಬಾಹ್ಯಪ್ರಜ್ಞೆಗೆ ಮನಸ್ಸೇ ಕಾರಣ ಎಂದು ಸ್ಪಷ್ಟವಾಗುತ್ತಿದೆ.

ಹೃಷ್ಯತಿ ಕ್ರುಧ್ಯತಿ ಚ ಕಃ ಶೋಚತ್ಯುದ್ವಿಜತೇ ಚ ಕಃ ।
ಇಚ್ಛತಿ ಧ್ಯಾಯತಿ ದ್ವೇಷ್ಟಿ ವಾಚಮೀರಯತೇ ಚ ಕಃ ॥ ೧೮ ॥

ಶರೀರದಲ್ಲಿ ಶೋಕ, ಕ್ರೋಧ, ಸಂತೋಷಗಳನ್ನು ಅನುಭವಿಸುವುದು ಯಾವುದು? ಅಪೇಕ್ಷೆಗಳು, ಇಚ್ಛಾ-ದ್ವೇಷಗಳು, ಮಾತನಾಡುವ ಶಕ್ತಿ ಯಾವುದರ ಧರ್ಮವಾಗಿದೆ ಎಂದು ಪ್ರಶ್ನಿಸಿದರು.

ಭೃಗುಃ

ನ ಪಂಚಸಾಧಾರಣಮತ್ರ ಕಿಂಚಿ-
ಚ್ಛರೀರಮೇಕೋ ವಹತೇಽಂತರಾತ್ಮಾ ।
ಸ ವೇತ್ತಿ ಗಂಧಾಂಶ್ಚ ರಸಾನ್ ಶ್ರುತಿಂ ಚ
ಸ್ಪರ್ಶಂ ಚ ರೂಪಂ ಚ ಗುಣಾಶ್ಚ ಯೇಽನ್ಯೇ ॥ ೧೯ ॥

ಭೃಗು– ಭರದ್ವಾಜರೇ, ಪಂಚೇಂದ್ರಿಯಗಳಿಗೆ ಮನಸ್ಸು ಆಧಾರವಾಗಿದ್ದರೂ ಹರ್ಷ-ಶೋಕಾದಿಗಳಿಗೆ ಅದು ಕರ್ತೃವಲ್ಲ. ಪಂಚಭೂತಗಳಿಗೆ ಶರೀರವು ಸಾಧಾರಣವಾಗಿದ್ದರೂ ಶರೀರವು ಕರ್ತೃವಲ್ಲ. ಶರೀರದಲ್ಲಿರುವ ಜೀವನೇ ಮನಸ್ಸಿನ ಮೂಲಕವಾಗಿ ರೂಪ, ರಸ, ಗಂಧಗಳನ್ನು ತಿಳಿಯಬಲ್ಲನು. ಗಂಧ-ರಸಗಳನ್ನು ತಿಳಿಯುವವನು ಜೀವನೇ ಆಗಿದ್ದಾನೆ ಎಂದು ತಿಳಿಯುವ ವಿಷಯದಲ್ಲಿ ಶ್ರುತಿಯು ಮೂಲವಾಗಿದೆ.

ಪಂಚಾತ್ಮಕೇ ಪಂಚಗುಣಪ್ರದರ್ಶೀ
ಸ ಸರ್ವಗಾತ್ರಾನುಗತೋಽಂತರಾತ್ಮಾ ।
ಸ ವೇತ್ತಿ ದುಃಖಾನಿ ಸುಖಾನಿ ಚಾತ್ರ
ತದ್ವಿಪ್ರಯೋಗಾತ್ತು ನ ವೇತ್ತಿ ದೇಹಃ ॥ ೨೦ ॥

ಆತ್ಮವು ಪಂಚಭೂತಾತ್ಮಕವಾದ ಶರೀರದ ಎಲ್ಲ ಅವಯವಗಳಲ್ಲಿಯೂ ವ್ಯಾಪಿಸಿದೆ. ಪಂಚಗುಣಗಳಿಂದ ಕೂಡಿದ ಆ ಮನಸ್ಸಿನ ಕಾರಣಗಳಿಗೆಲ್ಲಾ ತಾನು ಸಾಕ್ಷಿಯಾಗಿ ನೋಡುತ್ತಿದೆ. ಶರೀರಕ್ಕೆ ಸಂಬಂಧಿಸಿದ ಸುಖ-ದುಃಖಗಳನ್ನು ತಿಳಿಯುತ್ತದೆ. ಆತ್ಮವು ಮನಸ್ಸಿನ ಸಂಬಂಧವನ್ನು ತಪ್ಪಿಸಿಕೊಂಡಾಗ ಯಾವುದನ್ನೂ ತಿಳಿಯಲಾರದು.

ಯದಾ ನ ರೂಪಂ ನ ಸ್ಪರ್ಶೋ ನೋಷ್ಮಭಾವಶ್ಚ ಪಾವಕೇ ।
ತದಾ ಶಾಂತೇ ಶರೀರಾಗ್ನೌ ದೇಹಂ ತ್ಯಕ್ತ್ವಾ ಸ ನಶ್ಯತಿ ॥ ೨೧ ॥

ಆತ್ಮವು ಶರೀರವನ್ನು ಬಿಟ್ಟು ಹೋದಾಗ ದೇಹದಲ್ಲಿ ರೂಪ-ಸ್ಪರ್ಶ ಜ್ಞಾನ ಇರುವುದಿಲ್ಲ. ಉಷ್ಣವಾಗಲಿ ಇರುವುದಿಲ್ಲ. ಶರೀರಾಗ್ನಿಯು ಶಾಂತವಾದ ಬಳಿಕ ಆತ್ಮವು ಬಿಟ್ಟುಹೋಗಿರುವುದರಿಂದ ದೇಹವು ನಾಶವನ್ನು ಹೊಂದುತ್ತದೆ.

ಅಮ್ಮಯಂ ಸರ್ವಮೇವೇದಮಾಪೋ ಮೂರ್ತಿಃ ಶರೀರಿಣಾಮ್ ।
ತತ್ರಾತ್ಮಾ ಮಾನಸೋ ಬ್ರಹ್ಮಾ ಸರ್ವಭೂತೇಷು ಲೋಕಕೃತ್ ॥ ೨೨ ॥

ಜಗತ್ತೆಲ್ಲವೂ ಜಲಮಯವಾಗಿದೆ. ಶರೀರವನ್ನು ಧರಿಸಿರುವ ಶರೀರಧಾರಿಗಳ ರೂಪವು ಜಲಪ್ರಧಾನವಾಗಿಯೇ ಇದೆ. ಲೋಕವನ್ನು ನಿರ್ಮಾಣ ಮಾಡುವ ಪರಬ್ರಹ್ಮನು ಸಮಸ್ತ ಜೀವರ ಸೂಕ್ಷ್ಮಶರೀರದಲ್ಲಿ ಸನ್ನಿಹಿತನಾಗಿರುತ್ತಾನೆ. (ಮನಸ್ಸಿನ ಸಂಕಲ್ಪಗಳು ಸನ್ನಿಹಿತನಾದ ಭಗವಂತನಿಂದಲೇ ಆಯಾ ಕಾಲಕ್ಕೆ ಉತ್ಪನ್ನವಾಗುತ್ತವೆ).

ಆತ್ಮಾನಂ ತಂ ವಿಜಾನೀಹಿ ತಂ ವೈ ತಸ್ಯ ವಿಧಾಯಕಮ್ ।
ತಸ್ಮಿನ್ ಯಃ ಸಂಶ್ರಿತೋ ದೇಹೇ ಹ್ಯಬ್ಬಿಂದುರಿವ ಪುಷ್ಕರೇ ॥ ೨೩ ॥

ಜೀವಾತ್ಮನನ್ನು ನಿಯಮನ ಮಾಡುವ ಪರಮಾತ್ಮನು ಈ ಶರೀರದಲ್ಲಿದ್ದಾನೆಂದು ತಿಳಿದುಕೊ. ಆ ಪರಮಾತ್ಮನನ್ನು ಆಶ್ರಯಿಸಿಕೊಂಡು ಜೀವಾತ್ಮನು ಇದ್ದಾನೆ. ಪರಮಾತ್ಮನಾದರೂ ತಾವರೆ ಎಲೆಯ ಮೇಲಿನ ನೀರಿನ ಬಿಂದುವಿನಂತೆ ಅಸಂಗನಾಗಿ ಇದ್ದಾನೆ.

ಕ್ಷೇತ್ರಜ್ಞಂ ತಂ ವಿಜಾನೀಹಿ ನಿತ್ಯಂ ಲೋಕಹಿತಾತ್ಮಕಮ್ ।
ತಮೋ ರಜಶ್ಚ ಸತ್ತ್ವಂ ಚ ವಿದ್ಧಿ ಜೀವಗುಣಾನಿಮಾನ್ ॥ ೨೪ ॥

ಆ ಪರಮಾತ್ಮನು ಕ್ಷೇತ್ರಜ್ಞನಾಗಿದ್ದಾನೆ ಎಂದು ತಿಳಿದುಕೊ. ನಿತ್ಯವೂ ಸಮಸ್ತ ಲೋಕಗಳಿಗೆ ಹಿತವನ್ನು ಬಯಸುವವನಾಗಿದ್ದಾನೆ. ಸತ್ವ-ರಜಸ್-ತಮೋಗುಣಗಳು ಜೀವನಿಗೆ ಸಂಬಂಧಿಸಿದುದಾಗಿ ತಿಳಿದುಕೊ.

ಸಚೇತನಂ ಜೀವಗುಣಂ ವದಂತಿ
ಸ ಚೇಷ್ಟತೇ ಚೇಷ್ಟಯತೇ ಚ ಸರ್ವಮ್ ।
ತತಃ ಪರಂ ಕ್ಷೇತ್ರವಿದಂ ವದಂತಿ
ಪ್ರಾವರ್ತಯದ್ಯೋ ಭುವನಾನಿ ಸಪ್ತ ॥ ೨೫ ॥

ಸಚೇತನವಾದ ಶರೀರವು ಆ ಜೀವನಿಗೆ ಅಧೀನವಾಗಿದೆ. ಜೀವನು ತಾನು ಚೇಷ್ಟೆ ಮಾಡುತ್ತಾ ಇತರೆ ವಸ್ತುಗಳನ್ನು ಚೇಷ್ಟಿಸುವಂತೆ ಮಾಡುತ್ತಾನೆ. ದೇಹತತ್ತ್ವವನ್ನು ತಿಳಿದವರು ಏಳು ಲೋಕಗಳನ್ನು ಪ್ರವರ್ತಿಸುವ ವಿಲಕ್ಷಣನಾದ ಪರಮಾತ್ಮನನ್ನು ಜೀವಾತ್ಮನಿಗಿಂತ ಬೇರೆಯಾಗಿಯೇ ತಿಳಿದಿರುತ್ತಾರೆ.

ನ ಜೀವನಾಶೋಽಸ್ತಿ ಹಿ ದೇಹಭೇದೇ
ಮಿಥ್ಯೈತದಾಹುರ್ಮೃತ ಇತ್ಯಬುದ್ಧಾಃ ।
ಜೀವಸ್ತು ದೇಹಾಂತರಿತಃ ಪ್ರಯಾತಿ
ದಶಾರ್ಧತೈವಾಸ್ಯ ಶರೀರಭೇದಃ ॥ ೨೬ ॥

ಶರೀರವು ನಾಶವಾದರೂ ಜೀವನಿಗೆ ನಾಶವಿರುವುದಿಲ್ಲ. ತಿಳಿಯದಿರುವ ಮೂರ್ಖರು ಜೀವನೇ ಮೃತನಾದನೆಂದು ತಿಳಿಯುತ್ತಾರೆ. ಇದು ಅವರ ಭ್ರಮೆ. ಜೀವನು ಒಂದು ದೇಹವನ್ನು ಬಿಟ್ಟರೂ ಮತ್ತೊಂದು ದೇಹವನ್ನು ಸೇರುತ್ತಾನೆ. ಮೊದಲಿನ ಶರೀರವನ್ನು ಬಿಡುವುದಕ್ಕೇ ಮರಣ ಎಂದು ಹೇಳುತ್ತಾರೆ.

ಏವಂ ಸರ್ವೇಷು ಭೂತೇಷು ಗೂಢಶ್ಚರತಿ ಸಂವೃತಃ ।
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ತತ್ತ್ವದರ್ಶಿಭಿಃ ॥ ೨೭ ॥

ಈ ರೀತಿಯಾಗಿ ಸಮಸ್ತ ಭೂತಗಳಲ್ಲಿಯೂ ಪರಮಾತ್ಮನು ಅಂತರ್ಯಾಮಿಯಾಗಿ ಸಂಚರಿಸುತ್ತಾನೆ. ತತ್ತ್ವದರ್ಶಿಗಳ, ಸೂಕ್ಷ್ಮವಾದ, ಶ್ರೇಷ್ಠವಾದ ಬುದ್ಧಿಯಿಂದ ಮಾತ್ರ ತಿಳಿಯಲ್ಪಡುತ್ತಾನೆ.

ತಂ ಪೂರ್ವಾಪರರಾತ್ರೇಷು ಯುಂಜಾನಃ ಸತತಂ ಬುಧಃ ।
ಲಘ್ವಾಹಾರೋ ವಿಶುದ್ಧಾತ್ಮಾ ಪಶ್ಯತ್ಯಾತ್ಮಾನಮಾತ್ಮನಿ ॥ ೨೮ ॥

ಅಂತಹ ಪರಮಾತ್ಮನನ್ನು ಸ್ವಲ್ಪವೇ ಆಹಾರವನ್ನು ಸ್ವೀಕರಿಸುತ್ತಾ ಶುದ್ಧ ಮನಸ್ಸಿನಿಂದ ನೋಡುತ್ತಾರೆ. ಯೋಗಿಗಳು ಮಲಗುವ ಮುನ್ನ ನಿದ್ರೆಯ ನಂತರ ಈ ಅವಸ್ಥೆಗಳಿಗೆ ನಿಯಾಮಕನನ್ನಾಗಿ ಭಗವಂತನನ್ನು ಸ್ಮರಿಸುತ್ತಾರೆ.

ಚಿತ್ತಸ್ಯ ಹಿ ಪ್ರಸಾದೇನ ಹಿತ್ವಾ ಕರ್ಮ ಶುಭಾಶುಭಮ್ ।
ಪ್ರಸನ್ನಾತ್ಮಾತ್ಮನಿ ಸ್ಥಿತ್ವಾ ಸುಖಮಕ್ಷಯಮಶ್ನುತೇ ॥ ೨೯ ॥

ಆ ಪರಮಾತ್ಮನ ಪೂರ್ಣಾನುಗ್ರಹದಿಂದ ಅಪರೋಕ್ಷ ಜ್ಞಾನವನ್ನು ಸಂಪಾದಿಸಿಕೊಂಡು ಶುಭಾಶುಭಕರ್ಮಗಳನ್ನು ನೀಗಿ ಶುದ್ಧ ಮನಸ್ಸಿನಿಂದ, ಪರಮಾತ್ಮನ ಅನುಗ್ರಹದಿಂದ ಅಕ್ಷಯವಾದ ಸುಖವನ್ನು ಹೊಂದುತ್ತಾರೆ.

ಮಾನಸೋಽಗ್ನಿಃ ಶರೀರೇಷು ಜೀವ ಇತ್ಯಭಿಧೀಯತೇ ।
ಸೃಷ್ಟಿಃ ಪ್ರಜಾಪತೇರೇಷಾ ಭೂತಾಧ್ಯಾತ್ಮವಿನಿಶ್ಚಯೇ ॥ ೩೦ ॥

ನಿಮ್ಮಿಂದ ಹೇಳಲ್ಪಟ್ಟ ಮನಸ್ಸು ಎಂದರೆ ಜೀವನಲ್ಲ. ಮನಸ್ಸಿಗೆ ಸಂಬಂಧಿಸಿದ ಅದು ಅಗ್ನಿ. ಕರ-ಚರಣಾದಿ ವ್ಯಾಪಾರಗಳನ್ನು ಮಾಡುವುದರಿಂದ ಅಗ್ನಿಶಬ್ದ ವಾಚ್ಯನಾದವನು ಜೀವನಾಗಿದ್ದಾನೆ. ಈ ಪ್ರಪಂಚದ ಸೃಷ್ಟಿಯ ವಿಷಯದಲ್ಲಿ ತತ್ತ್ವಜ್ಞಾನಿಗಳು ಚತುರ್ಮುಖ ಬ್ರಹ್ಮನ ಸೃಷ್ಟಿಯ ಕ್ರಮ ಇದೆಂದು ನಿರ್ಣಯಿಸಿದ್ದಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ತ್ರಯೋದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಹದಿಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನಾಲ್ಕನೆಯ ಅಧ್ಯಾಯ

ಸೃಷ್ಟಿಯ ಆರಂಭದಲ್ಲಿ ಎಲ್ಲರೂ ಬ್ರಾಹ್ಮಣರಾಗಿಯೇ ಇದ್ದು ತಮ್ಮ ಇಷ್ಟಬಂದ ಆಚಾರದಲ್ಲಿ ರತರಾಗಿರುವುದರಿಂದ ವರ್ಣಭೇದಗಳನ್ನು ಹೊಂದಿದ್ದಾರೆಂದು ಭೃಗುವು ಭರದ್ವಾಜರಿಗೆ ಹೇಳಿದುದು.

ಭೃಗುಃ

ಅಸೃಜದ್ ಬ್ರಾಹ್ಮಣಾನೇವ ಪೂರ್ವಂ ಬ್ರಹ್ಮಾ ಪ್ರಜಾಪತಿಃ ।
ಆತ್ಮತೇಜೋಭಿನಿರ್ವೃತ್ತಾನ್ ಭಾಸ್ಕರಾಗ್ನಿಸಮಪ್ರಭಾನ್ ॥ ೧ ॥

ಭೃಗು– ಭರದ್ವಾಜರೇ, ಚತುರ್ಮುಖ ಬ್ರಹ್ಮನು ಸೃಷ್ಟಿಯ ಆರಂಭದಲ್ಲಿ ಬ್ರಹ್ಮನಿಷ್ಠರಾದ ಬ್ರಾಹ್ಮಣರನ್ನು ಸೃಷ್ಟಿಸಿದನು. ಬ್ರಹ್ಮತೇಜಸ್ಸಿನಿಂದ ಹುಟ್ಟಿದ ಅವರು ಸೂರ್ಯಾಗ್ನಿಗಳಿಗೆ ಸಮಾನವಾದ ತೇಜಸ್ಸನ್ನು ಹೊಂದಿದರು.

ತತಃ ಸತ್ಯಂ ಚ ಧರ್ಮಂ ಚ ತಪೋ ಬ್ರಹ್ಮ ಚ ಶಾಶ್ವತಮ್ ।
ಆಚಾರಂ ಚೈವ ಶೌಚಂ ಚ ಸ್ವರ್ಗಾಯ ವಿದಧೇ ಪ್ರಭುಃ ॥ ೨ ॥

ಬಳಿಕ ಚತುರ್ಮುಖ ಬ್ರಹ್ಮನು ಸತ್ಯ, ಧರ್ಮ, ತಪಸ್ಸು, ವೇದಗಳು, ಆ ವೇದಗಳ ಮೂಲಕ ಶೌಚಾಚಾರಗಳನ್ನು ನಿತ್ಯಸುಖದ ಪ್ರಾಪ್ತಿಗಾಗಿ ಸೃಷ್ಟಿಮಾಡಿದನು.

ದೇವದಾನವಗಂಧರ್ವದೈತ್ಯಾಸುರಮಹೋರಗಾಃ ।
ಯಕ್ಷರಾಕ್ಷಸನಾಗಾಶ್ಚ ಪಿಶಾಚಾ ಮನುಜಾಸ್ತಥಾ ॥ ೩ ॥

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಶೂದ್ರಾಶ್ಚ ದ್ವಿಜಸತ್ತಮ ।
ಯೇ ಚಾನ್ಯೇ ಭೂತಸಂಘಾನಾಂ ಸಂಘಾಸ್ತಾಂಶ್ಚಾಪಿ ನಿರ್ಮಮೇ॥ ೪ ॥

ದೇವ, ದಾನವ, ಗಂಧರ್ವ, ದೈತ್ಯ, ರಾಕ್ಷಸ, ಮಹೋರಗ, ಯಕ್ಷ, ರಾಕ್ಷಸ, ನಾಗ, ಪಿಶಾಚ, ಮನುಷ್ಯರೆಂಬ ವರ್ಗಗಳನ್ನೂ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವರ್ಣಪ್ರಭೇದಗಳನ್ನೂ, ಇತರ ಹಲವು ಪ್ರಾಣಿ ಸಮೂಹಗಳನ್ನೂ ನಿರ್ಮಿಸಿದನು.

ಬ್ರಾಹ್ಮಣಾನಾಂ ಸಿತೋ ವರ್ಣಃ ಕ್ಷತ್ರಿಯಾಣಾಂ ತು ಲೋಹಿತಃ ।
ವೈಶ್ಯಾನಾಂ ಪೀತಕೋ ವರ್ಣಃ ಶೂದ್ರಾಣಾಮಸಿತಸ್ತಥಾ ॥ ೫ ॥

ಬ್ರಾಹ್ಮಣರಿಗೆ ಬಿಳಿ ವರ್ಣವೂ, ಕ್ಷತ್ರಿಯರಿಗೆ ಕೆಂಪು ವರ್ಣವೂ, ವೈಶ್ಯರಿಗೆ ಹಳದಿ, ಶೂದ್ರರಿಗೆ ಕಪ್ಪು ವರ್ಣವೆಂದು ವಿಧಿಸಿದನು.

ಭರದ್ವಾಜಃ

ಚಾತುರ್ವರ್ಣ್ಯಸ್ಯ ವರ್ಣೇನ ಯದಿ ವರ್ಣೋ ವಿಭಜ್ಯತೇ ।
ಸರ್ವೇಷಾಂ ಖಲು ವರ್ಣಾನಾಂ ದೃಶ್ಯತೇ ವರ್ಣಸಂಕರಃ ॥ ೬ ॥

ಭರದ್ವಾಜ– ಮಹರ್ಷಿಯೇ, ನಾಲ್ಕು ವರ್ಣದವರ ಜಾತಿಯು ಬಣ್ಣದಿಂದಲೇ ವಿಭಾಗಿಸಲ್ಪಡುತ್ತದೆ ಎನ್ನುವುದಾದರೆ ಎಲ್ಲ ವರ್ಣಗಳೂ ಅಲ್ಲಲ್ಲಿ ಮಿಶ್ರಣವಾದಂತೆ ವರ್ಣಸಂಕರವು ಕಾಣುತ್ತದಲ್ಲವೇ?

ಕಾಮಃ ಕ್ರೋಧೋ ಭಯಂ ಲೋಭಃ ಶೋಕಶ್ಚಿಂತಾ ಕ್ಷುಧಾ ಶ್ರಮಃ ।
ಸರ್ವೇಷಾಂ ನಃ ಪ್ರಭವತಿ ಕಸ್ಮಾದ್ವರ್ಣೋ ವಿಭಜ್ಯತೇ ॥ ೭ ॥

ಲೋಕದಲ್ಲಿ ಕಾಮ, ಕ್ರೋಧ, ಭಯ, ಲೋಭ, ಶೋಕ, ಚಿಂತೆ, ಹಸಿವು, ಬಾಯಾರಿಕೆ, ಶ್ರಮ ಈ ಎಲ್ಲ ಧರ್ಮಗಳು ಇತರ ವರ್ಣಗಳಂತೆ ಬ್ರಾಹ್ಮಣರಿಗೂ ಸರ್ವಸಾಮಾನ್ಯವಾಗಿವೆ. ಹೀಗಿರುವಾಗ ವರ್ಣಭೇದವನ್ನು ತಿಳಿಯುವ ಬಗೆ ಹೇಗೆ?

ಸ್ವೇದಮೂತ್ರಪುರೀಷಾಣಿ ಶ್ಲೇಷ್ಮಾ ಪಿತ್ತಂ ಸಶೋಣಿತಮ್ ।
ತನುಃ ಕ್ಷರತಿ ಸರ್ವೇಷಾಂ ಕಸ್ಮಾದ್ವರ್ಣೋ ವಿಭಜ್ಯತೇ ॥ ೮ ॥

ದೇಹದಲ್ಲಿ ಮಲ-ಮೂತ್ರಗಳು, ಬೆವರು, ಶ್ಲೇಷ್ಮಾ, ಪಿತ್ತ, ರಕ್ತ ಮೊದಲಾದವುಗಳು ಎಲ್ಲಾ ಪ್ರಾಣಿಗಳಲ್ಲಿಯೂ ಸಮಾನವಾಗಿವೆ. ಎಲ್ಲರ ಶರೀರವೂ ಅನೇಕ ಕಶ್ಮಲಗಳನ್ನು ಸುರಿಸುತ್ತದೆ. ಹೀಗಿರಲು ವರ್ಣವನ್ನು ಯಾವ ಧರ್ಮದ ಆಧಾರದಿಂದ ವಿಭಾಗಿಸಬಹುದು?

ಜಂಗಮಾನಾಮಸಂಖ್ಯೇಯಾಃ ಸ್ಥಾವರಾಣಾಂ ಚ ಜಾತಯಃ ।
ತೇಷಾಂ ವಿವಿಧವರ್ಣಾನಾಂ ಕುತೋ ವರ್ಣವಿನಿಶ್ಚಯಃ ॥ ೯ ॥

ಸ್ಥಾವರ-ಜಂಗಮಗಳಲ್ಲಿ ಅಸಂಖ್ಯಾತವಾದ ಎಷ್ಟೋ ಜಾತಿಗಳಿವೆ. ಅವುಗಳಲ್ಲಿ ವರ್ಣಗಳನ್ನು ನಿಶ್ಚಯ ಮಾಡುವ ಬಗೆ ಹೇಗೆ?

ಭೃಗುಃ

ನ ವಿಶೇಷೋऽಸ್ತಿ ವರ್ಣಾನಾಂ ಸರ್ವಂ ಬ್ರಾಹ್ಮಮಿದಂ ಜಗತ್ ।
ಬ್ರಹ್ಮಣಾ ಪೂರ್ವಸೃಷ್ಟಂ ಹಿ ಕರ್ಮಭಿರ್ವರ್ಣತಾಂ ಗತಮ್ ॥ ೧೦ ॥

ಭೃಗು– ಭರದ್ವಾಜರೇ, ಆರಂಭದಲ್ಲಿ ವರ್ಣಗಳಲ್ಲಿ ಹೆಚ್ಚು ಕಡಿಮೆ ಇಲ್ಲದಂತೆ ಬ್ರಹ್ಮನಿಂದ ಎಲ್ಲರೂ ಸಮಾನವಾಗಿಯೇ ಸೃಷ್ಟಿಸಲ್ಪಟ್ಟರು. ಆದರೆ ತಮ್ಮ ತಮ್ಮ ಕರ್ಮ ಪ್ರಭೇದಗಳಿಂದ ಬೇರೆ ಬೇರೆ ವರ್ಣಪ್ರಭೇದಗಳನ್ನು ಪಡೆದರು.

ಕಾಮಭೋಗಪ್ರಿಯಾಸ್ತೀಕ್ಷ್ಣಾಃ ಕ್ರೋಧನಾಃ ಪ್ರಿಯಸಾಹಸಾಃ ।
ತ್ಯಕ್ತಸ್ವಧರ್ಮಾ ರಕ್ತಾಂಗಾಸ್ತೇ ದ್ವಿಜಾಃ ಕ್ಷತ್ರತಾಂ ಗತಾಃ ॥ ೧೧ ॥

ವಿಷಯಭೋಗಗಳ ಆಸೆಯಿಂದ ಕ್ರೌರ್ಯದಿಂದ, ಕೋಪಸ್ವಭಾವದಿಂದ, ಸಾಹಸದಲ್ಲಿರುವ ಪ್ರೀತಿಯಿಂದ ಬ್ರಾಹ್ಮಣಸ್ವಭಾವವನ್ನು ಬಿಟ್ಟು ರಜೋಗುಣವನ್ನು ಹೊಂದಿದ ಕೆಲವರು ಕೆಂಪು ಬಣ್ಣವುಳ್ಳ ಕ್ಷತ್ರಿಯರೆನಿಸಿಕೊಂಡರು.

ಗೋಷು ವೃತ್ತಿಂ ಸಮಾಧಾಯ ಪೀತಾಃ ಕೃಷ್ಯುಪಜೀವಿನಃ ।
ಸ್ವಧರ್ಮಂ ನಾನುತಿಷ್ಠಂತಿ ತೇ ದ್ವಿಜಾ ವೈಶ್ಯತಾಂ ಗತಾಃ ॥ ೧೨ ॥

ಬ್ರಾಹ್ಮಣರಲ್ಲಿಯೇ ಕೆಲವರು ಪಶುಪಾಲನೆ, ಕೃಷಿ, ವಾಣಿಜ್ಯಗಳಿಂದ ಬದುಕುವವರಾಗಿ ಸ್ವಧರ್ಮವನ್ನು ನಡೆಸದೆ ವೈಶ್ಯರಾಗಿ ಪರಿವರ್ತಿತರಾದರು. ಇವರೆಲ್ಲರೂ ಪೀತವರ್ಣದವರೆಂದು ಕರೆಸಿಕೊಳ್ಳುತ್ತಾರೆ.

ಹಿಂಸಾನೃತಪ್ರಿಯಾ ಲುಬ್ಧಾಃ ಸರ್ವಕರ್ಮೋಪಜೀವಿನಃ ।
ಕೃಷ್ಣಾಃ ಶೌಚಪರಿಭ್ರಷ್ಟಾಸ್ತೇ ದ್ವಿಜಾಃ ಶೂದ್ರತಾಂ ಗತಾಃ ॥ ೧೩ ॥

ಬ್ರಾಹ್ಮಣರಲ್ಲಿ ಶೌಚಾಚಾರಗಳನ್ನು ಬಿಟ್ಟವ್ಯಕ್ತಿಗಳು ಹಣದ ಆಸೆಯಿಂದ ಇಷ್ಟಬಂದ ಜೀವನದ ಉದ್ಯೋಗವನ್ನು ಹಿಡಿದು ಹಿಂಸೆ, ಅಸತ್ಯ ಮುಂತಾದವುಗಳಲ್ಲಿ ನಡೆದುಕೊಳ್ಳುತ್ತಾ ಬಣ್ಣದಿಂದ ಕಪ್ಪಾಗಿ ಶೂದ್ರರೆನಿಸಿಕೊಂಡರು.

ಇತ್ಯೇತೈಃ ಕರ್ಮಭಿರ್ವ್ಯಸ್ತಾ ದ್ವಿಜಾ ವರ್ಣಾಂತರಂ ಗತಾಃ ।
ಧರ್ಮೋ ಯಜ್ಞಕ್ರಿಯಾ ಚೈಷಾಂ ನಿತ್ಯಂ ನ ಪ್ರತಿಷಿಧ್ಯತೇ ॥ ೧೪ ॥

ಹೀಗೆ ತಮ್ಮ ಕಾರ್ಯಪ್ರವೃತ್ತಿಗಳಿಂದ ಬೇರೆ ಬೇರೆಯಾಗಿ ಚದುರಿ ಬೇರೆ ಬೇರೆ ವರ್ಣದವರಾಗಿದ್ದಾರೆ. ಧರ್ಮವು, ಯಾಗಕಾರ್ಯವು ಎಂದಿಗೂ ಇವರಿಗೆ ನಿಷಿದ್ಧವೆನಿಸಿರಲಿಲ್ಲ.

ವರ್ಣಾಶ್ಚತ್ವಾರ ಏತೇ ಹಿ ಯೇಷಾಂ ಬ್ರಾಹ್ಮೀ ಸರಸ್ವತೀ ।
ವಿಹಿತಾ ಬ್ರಹ್ಮಣಾ ಪೂರ್ವಂ ಲೋಭಾತ್ತ ಜ್ಞಾನತಾಂ ಗತಾಃ ॥ ೧೫ ॥

ಮೊದಲು ಬ್ರಹ್ಮದೇವರಿಂದ ಇವರೆಲ್ಲರಿಗೂ ಸಮಾನವಾಗಿ ವೇದವೆಂಬ ಉಪದೇಶವಾಕ್ಯಗಳು ಅನುಗ್ರಹಿಸಲ್ಪಟ್ಟಿದ್ದರೂ ಪರಬ್ರಹ್ಮನಿಗೆ ಸಂಬಂಧಿಸಿದ ವೇದ-ಪುರಾಣಾದಿ ವಿದ್ಯೆಗಳನ್ನು ಬಿಟ್ಟು ಲೋಭವಶದಿಂದ ವೇದಾರ್ಥಗಳನ್ನು ತಿಳಿಯದ ಸ್ಥಿತಿಗೆ ಬಂದರು.

ಬ್ರಾಹ್ಮಣಾ ಧರ್ಮತಂತ್ರಸ್ಥಾಸ್ತಪಸ್ತೇಷಾಂ ನ ನಶ್ಯತಿ ।
ಬ್ರಹ್ಮ ಧಾರಯತಾಂ ನಿತ್ಯಂ ವ್ರತಾನಿ ನಿಯಮಾಂಸ್ತಥಾ ॥ ೧೬ ॥

ಬ್ರಾಹ್ಮಣರು ಯಾವಾಗಲೂ ಧರ್ಮಶಾಸ್ತ್ರದಲ್ಲಿ ವೇದಪ್ರತಿಪಾದಕವಾದ ಶಾಸ್ತ್ರಗಳಲ್ಲಿ ಸ್ಥಿರವಾಗಿ ನಿಂತರು. ವ್ರತ-ನಿಯಮಗಳನ್ನು ಬಿಡದಿದ್ದರಿಂದ ಬ್ರಹ್ಮಜ್ಞಾನಕ್ಕೆ ಅರ್ಹರಾದರು. ವ್ರತ-ನಿಯಮಗಳನ್ನು, ವೇದಗಳನ್ನು ನಿತ್ಯವೂ ಧರಿಸಿದರು.

ಬ್ರಹ್ಮ ಚೈತತ್ ಪುರಾ ಸೃಷ್ಟಂ ಯೇ ನ ಜಾನಂತ್ಯತದ್ವಿದಃ ।
ತೇಷಾಂ ಬಹುವಿಧಾಸ್ತ್ವನ್ಯಾಸ್ತತ್ರ ತತ್ರ ಹಿ ಜಾತಯಃ ॥ ೧೭ ॥

ಪ್ರಪಂಚದ ಸೃಷ್ಟಿಯಲ್ಲಿ ಏನೆಲ್ಲ ಕಾಣುತ್ತದೋ ಅದೆಲ್ಲವೂ ಭಗವಂತನಿಂದಲೇ ಸೃಷ್ಟವಾಗಿದೆ. ಅಜ್ಞಾನಿಗಳಿಗೆ ಇದು ತಿಳಿಯುವುದಿಲ್ಲ. ಈ ಜ್ಞಾನವನ್ನು ಹೊಂದದೆ ಇರುವ ಅನೇಕರು ಬೇರೆ ಬೇರೆ ಜಾತಿಯವರು ಹೀನಜಾತಿಯವರು ಎನಿಸಿಕೊಂಡರು.

ಪಿಶಾಚಾ ರಾಕ್ಷಸಾಃ ಪ್ರೇತಾ ಬಹುಧಾ ಮ್ಲೇಚ್ಛಜಾತಯಃ ।
ಪ್ರನಷ್ಟಜ್ಞಾನವಿಜ್ಞಾನಾಃ ಸ್ವಚ್ಛಂದಾಚಾರಚೇಷ್ಟಿತಾಃ ॥ ೧೮ ॥

ಜ್ಞಾನವನ್ನು ಕಳೆದುಕೊಂಡು ಸ್ವಚ್ಛಂದವಾಗಿ ವರ್ತಿಸಿದ ವ್ಯಕ್ತಿಗಳು ರಾಕ್ಷಸ, ಪ್ರೇತ, ಪಿಶಾಚಿಗಳ ಜನ್ಮದಲ್ಲಿಯೂ ಮ್ಲೇಚ್ಛಜಾತಿಯಲ್ಲಿಯೂ ಹುಟ್ಟನ್ನು ಪಡೆದರು.

ಪ್ರಜಾ ಬ್ರಾಹ್ಮಣಸಂಸ್ಕಾರಾಃ ಸ್ವಧರ್ಮಕೃತನಿಶ್ಚಯಾಃ ।
ಋಷಿಭಿಃ ಸ್ವೇನ ತಪಸಾ ಸೃಜ್ಯಂತೇ ಚಾಪರೇ ಪರೈಃ ॥ ೧೯ ॥

ಮೊದಲಿಗೆ ಬ್ರಹ್ಮನ ಸಂಕಲ್ಪದಿಂದ ಹುಟ್ಟಿದ ಮಹರ್ಷಿಗಳು ತಮ್ಮ ತಪಸ್ಸಿನಿಂದ ಸ್ವಕರ್ಮಗಳಲ್ಲಿ, ತಪಸ್ಸಿನಲ್ಲಿಯೂ, ವೇದೋಕ್ತ ಸಂಸ್ಕಾರಗಳಲ್ಲಿಯೂ ಶ್ರದ್ಧೆಯಿಂದ ನಿರತರಾಗಿ ಮುಂದಿನ ಋಷಿಗಳನ್ನು ಸೃಷ್ಟಿಸುತ್ತಾರೆ.

ಆದಿದೇವಸಮುದ್ಭೂತಾ ಬ್ರಹ್ಮಮೂಲಾಕ್ಷಯಾವ್ಯಯಾ ।
ಸಾ ಸೃಷ್ಟಿರ್ಮಾನಸೀ ನಾಮ ಧರ್ಮತಂತ್ರಪರಾಯಣಾ ॥ ೨೦ ॥

ಧರ್ಮಾನುಷ್ಠಾನವೇ ವೇದವೇ ಆಧಾರವಾಗಿ ಉಳ್ಳ ಆದಿಸೃಷ್ಟಿಯು ಬ್ರಹ್ಮನ ಮಾನಸ ಸೃಷ್ಟಿ ಎನಿಸಿದೆ. ಆ ಸೃಷ್ಟಿಯು ಬ್ರಹ್ಮನಿಂದ ಆರಂಭಿಸಿ ಬ್ರಹ್ಮನಲ್ಲೇ ಕೊನೆಗೊಳ್ಳುತ್ತದೆ. ಯೋಗಾನುಷ್ಠಾನವೇ ಆಶ್ರಯವಾಗಿ ಉಳ್ಳದ್ದು ಆದಿಸೃಷ್ಟಿಯು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಚತುರ್ದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಹದಿನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೈದನೆಯ ಅಧ್ಯಾಯ

ಭೃಗುಗಳು ಭರದ್ವಾಜರಿಗೆ ಬ್ರಾಹ್ಮಣಾದಿ ವರ್ಣಗಳ ಲಕ್ಷಣಗಳನ್ನು ನಿರೂಪಿಸುತ್ತಾ, ವೈರಾಗ್ಯವೇ ಮೋಕ್ಷಕ್ಕೆ ಕಾರಣ ಎಂದು ನಿರೂಪಿಸಿದುದು.

ಭರದ್ವಾಜಃ

ಬ್ರಾಹ್ಮಣಃ ಕೇನ ಭವತಿ ಕ್ಷತ್ರಿಯೋ ವಾ ದ್ವಿಜೋತ್ತಮ ।
ವೈಶ್ಯಃ ಶೂದ್ರಶ್ಚ ವಿಪ್ರರ್ಷೇ ತದ್ ಬ್ರೂಹಿ ವದತಾಂ ವರ ॥ ೧ ॥

ಭರದ್ವಾಜ– ಮಹಾತ್ಮರಾದ ಭೃಗುಗಳೇ, ಯಾವ ಕರ್ಮದಿಂದ ಬ್ರಾಹ್ಮಣ ಎನಿಸುತ್ತಾನೆ? ಇದರಂತೆ ಕ್ಷತ್ರಿಯ, ವೈಶ್ಯ, ಶೂದ್ರರು ಆಯಾ ವರ್ಣದವರೆನಿಸುತ್ತಾರೆ ಎಂದು ನನಗೆ ತಿಳಿಸಿ.

ಭೃಗುಃ

ಜಾತಕರ್ಮಾದಿಭಿರ್ಯಸ್ತು ಸಂಸ್ಕಾರೈಃ ಸಂಸ್ಕೃತಃ ಶುಚಿಃ ।
ವೇದಾಧ್ಯಯನಸಂಪನ್ನಃ ಷಟ್ಸು ಕರ್ಮಸ್ವವಸ್ಥಿತಃ ॥ ೨ ॥

ಭೃಗು– ಯಾವ ವ್ಯಕ್ತಿಯು ಜಾತಕರ್ಮಾದಿ ಹದಿನಾರು ಸಂಸ್ಕಾರಗಳನ್ನು ಪಡೆದು ಸಂಸ್ಕೃತನಾಗುತ್ತಾನೋ, ಶುಚಿಯಾಗಿ ಇದ್ದು ವೇದಾಧ್ಯಯನ ಸಂಪನ್ನನಾಗುತ್ತಾನೋ, ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪ್ರತಿಗ್ರಹ ಎಂಬ ಕರ್ಮಗಳಲ್ಲಿ ನಿರತನಾಗಿರುತ್ತಾನೋ;

ಶೌಚಾಚಾರಸ್ಥಿತಃ ಸಮ್ಯಗ್ ವಿಘಸಾಶೀ ಗುರುಪ್ರಿಯಃ ।
ನಿತ್ಯವ್ರತೀ ಸತ್ಯಪರಃ ಸ ವೈ ಬ್ರಾಹ್ಮಣ ಉಚ್ಯತೇ ॥ ೩ ॥

ಶೌಚಾಚಾರಗಳಲ್ಲಿ ನಿರತನಾಗಿರುವ, ಅತಿಥಿ ಉಂಡ ಬಳಿಕ ಊಟವನ್ನು ಮಾಡುವ, ಗುರುಗಳಿಗೆ ಪ್ರೀತಿಪಾತ್ರನಾದ, ನಿತ್ಯವ್ರತ, ಸತ್ಯಸಂಧ ಇವುಗಳನ್ನು ಹೊಂದಿರುವ ವ್ಯಕ್ತಿಯು ಬ್ರಾಹ್ಮಣನೆನಿಸುತ್ತಾನೆ.

ಸತ್ಯಂ ದಾನಂ ದಮೋऽದ್ರೋಹ ಆನೃಶಂಸ್ಯಂ ಕ್ಷಮಾ ಘೃಣಾ ।
ತಪಶ್ಚ ದೃಶ್ಯತೇ ಯತ್ರ ಸ ಬ್ರಾಹ್ಮಣ ಇತಿ ಸ್ಮೃತಃ ॥ ೪ ॥

ಸತ್ಯ, ದಾನ, ದಯೆ, ದಮ, ಅದ್ರೋಹ, ಆನೃಶಂಸ್ಯ, ಕ್ಷಮಾ, ಕರುಣೆ, ತಪಸ್ಸು ಎಲ್ಲಿ ಕಾಣುತ್ತವೋ ಅವನನ್ನು ಬ್ರಾಹ್ಮಣ ಎನ್ನಬಹುದು.

ಕ್ಷತ್ರಜಂ ಸೇವತೇ ಕರ್ಮ ವೇದಾಧ್ಯಯನಸಮ್ಮತಃ ।
ದಾನಾದಾನರತಿರ್ಯಶ್ಚ ಸ ವೈ ಕ್ಷತ್ರಿಯ ಉಚ್ಯತೇ ॥ ೫ ॥

ಕ್ಷತ್ರಿಯಜಾತಿಗೆ ವಿಹಿತವಾದ ಯುದ್ಧರೂಪವಾದ ಕರ್ಮವನ್ನು ಯಾವನು ಮಾಡುತ್ತಾನೋ, ವೇದಾಧ್ಯಯನ ಪರನಾಗಿದ್ದಾನೋ, ಬ್ರಾಹ್ಮಣರಿಗೆ ದಾನ ಮಾಡುತ್ತಾನೋ ಪ್ರಜೆಗಳಿಗೆ ಪ್ರಿಯನೆನಿಸುತ್ತಾನೋ ಅವನು ಕ್ಷತ್ರಿಯನೆಂದು ಕರೆಸಿಕೊಳ್ಳುತ್ತಾನೆ.

ಕೃಷಿಗೋರಕ್ಷ್ಯವಾಣಿಜ್ಯಂ ಯೋ ವಿಶತ್ಯನಿಶಂ ಶುಚಿಃ ।
ವೇದಾಧ್ಯಯನಸಂಪನ್ನಃ ಸ ವೈಶ್ಯ ಇತಿ ಸಂಜ್ಞಿತಃ ॥ ೬ ॥

ಕೃಷಿ, ವಾಣಿಜ್ಯ, ಗೋರಕ್ಷಣೆ ಈ ಕಾರ್ಯಗಳಲ್ಲಿ ಶುದ್ಧವಾಗಿ ನಡೆಯುತ್ತಾ ವೇದಾಧ್ಯಯನ ಸಂಪನ್ನನಾದ ವ್ಯಕ್ತಿಯು ವೈಶ್ಯ ಎಂಬ ಹೆಸರಿನಿಂದ ಕರೆಸಿಕೊಳ್ಳುತ್ತಾನೆ.

ಸರ್ವಭಕ್ಷರತಿರ್ನಿತ್ಯಂ ಸರ್ವಕರ್ಮಕರೋऽಶುಚಿಃ ।
ತ್ಯಕ್ತವೇದಸ್ತ್ವನಾಚಾರಃ ಸ ವೈ ಶೂದ್ರ ಇತಿ ಸ್ಮೃತಃ ॥ ೭ ॥

ಸಿಕ್ಕಿದ್ದನ್ನು ಭುಂಜಿಸುತ್ತಾ, ಇಚ್ಛೆಬಂದಂತೆ ಕಾರ್ಯಗಳನ್ನು ನಗುತ್ತಾ, ವೇದಾಧ್ಯಯನ, ಶೌಚಾಚಾರವಿಲ್ಲದೆ ಬದುಕುವ ವ್ಯಕ್ತಿಯು ಶೂದ್ರ ಎನಿಸಿಕೊಳ್ಳುತ್ತಾನೆ.

ಶೂದ್ರೇ ಚೈತದ್ಭವೇಲ್ಲಕ್ಷ್ಯಂ ದ್ವಿಜೇ ಚೈತನ್ನ ವಿದ್ಯತೇ ।
ನ ವೈ ಶೂದ್ರೋ ಭವೇಚ್ಛೂದ್ರೋ ಬ್ರಾಹ್ಮಣೋ ನ ಚ ಬ್ರಾಹ್ಮಣಃ ॥ ೮ ॥

ಮೇಲೆ ಬ್ರಾಹ್ಮಣನಿಗೆ ಹೇಳಿದ ಸತ್ಯ, ದಯೆ ಮೊದಲಾದ ಗುಣಗಳು ಶೂದ್ರನಲ್ಲಿಯೂ ಇರುವುದುಂಟು, ಬ್ರಾಹ್ಮಣನಲ್ಲಿ ಇಲ್ಲದಿರುವುದುಂಟು. ಆ ಗುಣಗಳಿದ್ದ ಶೂದ್ರನು ಶೂದ್ರನೆನಿಸುವುದಿಲ್ಲ, ಗುಣಗಳಿಲ್ಲದ ಬ್ರಾಹ್ಮಣನು ಬ್ರಾಹ್ಮಣನೂ ಆಗುವುದಿಲ್ಲ.

ಸರ್ವೋಪಾಯೈಸ್ತು ಲೋಭಸ್ಯ ಕ್ರೋಧಸ್ಯ ಚ ವಿನಿಗ್ರಹಃ ।
ಏತತ್ ಪವಿತ್ರಂ ಜ್ಞಾತವ್ಯಂ ತಥಾ ಚೈವಾತ್ಮಸಂಯಮಃ ॥ ೯ ॥

ಯಾವ ವರ್ಣದವರೇ ಆಗಲಿ, ಲೋಭ-ಮೋಹಗಳನ್ನು ಸಮಸ್ತ ಉಪಾಯಗಳಿಂದ ನಿಗ್ರಹಿಸಬೇಕು. ಇವುಗಳ ನಿಗ್ರಹವೇ ಆತ್ಮಸಂಯಮಕ್ಕೂ, ಜ್ಞಾನಕ್ಕೂ ದೊರೆತ ಫಲವೆಂದು ಭಾವಿಸಬೇಕು.

ನಿತ್ಯಂ ಕ್ರೋಧಾತ್ತಪೋ ರಕ್ಷೇಚ್ಛ್ರಿಯಂ ರಕ್ಷೇತ ಮತ್ಸರಾತ್ ।
ವಿದ್ಯಾಂ ಮಾನಾವಮಾನಾಭ್ಯಾಮಾತ್ಮಾನಂ ತು ಪ್ರಮಾದತಃ ॥ ೧೦ ॥

ಕ್ರೋಧದಿಂದ ಮನುಷ್ಯನು ತನ್ನ ಸಂಪತ್ತನ್ನು, ಮತ್ಸರದಿಂದ ತಪಸ್ಸನ್ನೂ, ಮಾನಾವಮಾನಗಳಿಂದ ವಿದ್ಯೆಯನ್ನೂ ಪ್ರಮಾದದಿಂದ ತನ್ನನ್ನು ಹಾಳು ಮಾಡಿಕೊಳ್ಳದಂತೆ, ಎಚ್ಚರದಿಂದ ಇವುಗಳಿಂದ ರಕ್ಷಿಸಬೇಕು.

ಯಸ್ಯ ಸರ್ವೇ ಸಮಾರಂಭಾ ನಿರಾಶೀರ್ಬಂಧನಾಸ್ತಿ ಹ ।
ತ್ಯಾಗೇ ಯಸ್ಯ ಹುತಂ ಸರ್ವಂ ಸ ತ್ಯಾಗೀ ಸ ಚ ಬುದ್ಧಿಮಾನ್ ॥೧೧॥

ಯಾವ ಮನುಷ್ಯನ ಸಮಸ್ತ ಪ್ರಯತ್ನಗಳು ಆಸೆಗೆ ತುತ್ತಾಗಿ ಇರುವುದಿಲ್ಲವೋ, ಯಾವನು ಮಾಡುವ ಯಜ್ಞ-ದಾನಾದಿಗಳು ಫಲಾಭಿಲಾಷೆಯಿಂದ ಕೂಡಿರುವುದಿಲ್ಲವೋ ಅವನೇ ತ್ಯಾಗಿಯೂ, ಅವನೇ ಬುದ್ಧಿವಂತನು.

ಅಹಿಂಸ್ರಃ ಸರ್ವಭೂತಾನಾಂ ಮೈತ್ರ್ಯಾಯಣಗತಶ್ಚರೇತ್ ।
ಅವಿಸ್ರಂಭೇ ನ ಗಂತವ್ಯಂ ವಿಸ್ರಂಭೇ ಧಾರಯೇನ್ಮನಃ ॥ ೧೨ ॥

ಯಾವ ಪ್ರಾಣಿಗಳಿಗೂ ಹಿಂಸಿಸದ, ಎಲ್ಲಾ ಪ್ರಾಣಿಗಳಲ್ಲಿಯೂ ಮೈತ್ರೀಭಾವವನ್ನು ಹೊಂದುವ, ಪರಿಗ್ರಹವನ್ನೆಲ್ಲಾ ನೀಗಿರುವ, ಬುದ್ಧಿಯಿಂದ ಇಂದ್ರಿಯಗಳನ್ನು ಜಯಿಸಿರುವ ವ್ಯಕ್ತಿಯು ಸಾಧಕನಾಗುತ್ತಾನೆ. ಆದ್ದರಿಂದ ಪ್ರಯತ್ನಪೂರ್ವಕವಾಗಿ ಮನಸ್ಸಿನಿಂದ ಇಂದ್ರಿಯನಿಗ್ರಹವನ್ನು ಸಾಧಿಸಿಕೊಳ್ಳಬೇಕು.

ಪರಿಗ್ರಹಾನ್ ಪರಿತ್ಯಜ್ಯ ಭವೇದ್ ಬುದ್ಧ್ಯಾ ಜಿತೇಂದ್ರಿಯಃ ।
ಅಶೋಕಂ ಸ್ಥಾನಮಾತಿಷ್ಠೇದಿಹ ಚಾಮುತ್ರ ಚಾಭಯಮ್ ॥ ೧೩ ॥

ಪರಿಗ್ರಹವನ್ನು ತ್ಯಜಿಸಿ, ಜಿತೇಂದ್ರಿಯವಾದ ಬುದ್ಧಿಯಿಂದ ಎಂದೂ ಮನಸ್ಸಿನಲ್ಲಿ ಸುಖ-ದುಃಖಗಳಿಗೆ ಅವಕಾಶ ನೀಡದ ವ್ಯಕ್ತಿಯು ಇಹ-ಪರಗಳಲ್ಲಿ ಸುಖವನ್ನು ಹೊಂದುತ್ತಾನೆ.

ತಪೋನಿತ್ಯೇನ ದಾಂತೇನ ಮುನಿನಾ ಸಂಯತಾತ್ಮನಾ ।
ಅಜಿತಂ ಜೇತುಕಾಮೇನ ಭಾವ್ಯಂ ಸಂಗೇಷ್ವಸಂಗಿನಾ ॥ ೧೪ ॥

ನಿತ್ಯವೂ ತಪೋನಿರತನಾಗಿ, ಭಗವನ್ನಿಷ್ಠವಾದ ಬುದ್ಧಿಯಿಂದ ಮೌನಿಯಾಗಿ, ಇಂದ್ರಿಯಗಳನ್ನು ನಿಗ್ರಹಿಸಿಕೊಂಡು ಸಂಗಗಳಲ್ಲಿ ಸಂಬಂಧವಿಲ್ಲದಂತೆ ನಿತ್ಯವೂ ಜಯಶೀಲನಾಗಿ ಇರಲು ಬಯಸಬೇಕು.

ಇಂದ್ರಿಯೈರ್ಗ್ರಹ್ಯತೇ ಯದ್ಯತ್ತತ್ತದ್ವ್ಯಕ್ತಮಿತಿ ಸ್ಥಿತಿಃ ।
ಅವ್ಯಕ್ತಮಿತಿ ವಿಜ್ಞೇಯಂ ಲಿಂಗಗ್ರಾಹ್ಯಮತೀಂದ್ರಿಯಮ್ ॥ ೧೫ ॥

ಇಂದ್ರಿಯಗಳಿಗೆ ಗೋಚರವಾಗುವ ಪದಾರ್ಥಗಳು ವ್ಯಕ್ತವೆನಿಸುತ್ತವೆ. ಇಂದ್ರಿಯಗಳನ್ನು ಮೀರಿ ಇರುವ ಅತೀಂದ್ರಿಯವಾದವುಗಳು ಯುಕ್ತಿಗಳಲ್ಲಿ ತಿಳಿಯಲು ಅರ್ಹವಾದವುಗಳು ಅತೀಂದ್ರಿಯವೆನಿಸುತ್ತವೆ. ಇಂತಹ ಅವ್ಯಕ್ತನೆನಿಸಿದ ಡಂಭನನ್ನು ತಿಳಿಯಲು ಯತ್ನಿಸಬೇಕು.

ಮನಃ ಪ್ರಾಣೇ ನಿಗೃಹ್ಣೀಯಾತ್ ಪ್ರಾಣಂ ಬ್ರಹ್ಮಣಿ ಧಾರಯೇತ್ ।
ನಿರ್ವೇದಾದೇವ ನಿರ್ವಾಯಾತ್ ನ ಚ ಕಿಂಚಿದ್ ವಿಚಿಂತಯೇತ್ ।
ಸುಖಂ ವೈ ಬ್ರಾಹ್ಮಣೋ ಬ್ರಹ್ಮ ಸ ವೈ ತೇನಾಧಿಗಚ್ಛತಿ ॥ ೧೬ ॥

ಮನಸ್ಸನ್ನು ಪ್ರಾಣದಲ್ಲಿಯೂ, ಪ್ರಾಣವನ್ನು ಬ್ರಹ್ಮನಲ್ಲಿಯೂ ನೆಲೆಗೊಳಿಸಬೇಕು. ಬೇರೆ ಏನನ್ನೂ ಚಿಂತಿಸಬಾರದು. ವಿರಕ್ತನಾಗಿ ತೀರ್ಥಕ್ಷೇತ್ರ ಯಾತ್ರೆಗಳನ್ನು ಆಚರಿಸಬೇಕು. ಮನಸ್ಸಿನಲ್ಲಿ ಯಾವ ಸಂಗವನ್ನು ಇಟ್ಟುಕೊಳ್ಳದೆ ಪರಬ್ರಹ್ಮನನ್ನೇ ಚಿಂತಿಸಬೇಕು. ಸುಖಸ್ವರೂಪನಾದವನು ಪರಬ್ರಹ್ಮನೇ ಆಗಿದ್ದಾನೆ. ಯಾರು ಅವನನ್ನು ಚಿಂತಿಸುತ್ತಾರೋ ಅಂತಹ ಪರಬ್ರಹ್ಮನನ್ನೇ ಅವನು ಹೊಂದುತ್ತಾನೆ.

ಶೌಚೇನ ಸತತಂ ಯುಕ್ತಸ್ತಥಾಚಾರಸಮನ್ವಿತಃ ।
ಸಾನುಕ್ರೋಶಶ್ಚ ಭೂತೇಷು ತದ್ದ್ವಿಜಾದಿಷು ಲಕ್ಷಣಮ್ ॥ ೧೭ ॥

ಶೌಚ, ಸದಾಚಾರ, ಭೂತದಯೆ ಇವುಗಳು ಬ್ರಾಹ್ಮಣನ ಮುಖ್ಯಲಕ್ಷಣಗಳಾಗಿವೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಹದಿನೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನಾರನೆಯ ಅಧ್ಯಾಯ

ಭೃಗುವು ಭರದ್ವಾಜರಿಗೆ ಸತ್ಯಾಸತ್ಯಗಳು ಸ್ವರ್ಗ-ನರಕಗಳಿಗೆ ಕಾರಣವೆಂದು, ಅಸತ್ಯದಿಂದುಂಟಾಗುವ ಅನರ್ಥವೇನೆಂಬುದನ್ನು, ಇಹ-ಪರಗಳಿಗಿರುವ ಭೇದವನ್ನು ನಿರೂಪಿಸಿದುದು.

ಭೃಗುಃ

ಸತ್ಯಂ ಬ್ರಹ್ಮ ತಪಃ ಸತ್ಯಂ ಸತ್ಯಂ ಸೃಜತಿ ಚ ಪ್ರಜಾಃ ।
ಸತ್ಯೇನ ಧಾರ್ಯತೇ ಲೋಕಃ ಸ್ವರ್ಗಂ ಸತ್ಯೇನ ಗಚ್ಛತಿ ॥ ೧ ॥

ಭೃಗು- ಭರದ್ವಾಜರೇ, ಸತ್ಯವೇ ಬ್ರಹ್ಮ ಎನಿಸಿದೆ. ಸತ್ಯವೇ ತಪಸ್ಸು. ಪ್ರಜೆಗಳನ್ನು ಸೃಷ್ಟಿಸಿ ಲೋಕವನ್ನು ಧರಿಸುವುದು ಸತ್ಯವೇ ಆಗಿದೆ. ಸತ್ಯದಿಂದಲೇ ಸ್ವರ್ಗವು ಮನುಷ್ಯನಿಗೆ ಲಭಿಸುತ್ತದೆ.

ಅನೃತಂ ತಮಸೋ ರೂಪಂ ತಮಸಾ ನೀಯತೇ ಹ್ಯಧಃ ।
ತಮೋಗ್ರಸ್ತಾ ನ ಪಶ್ಯಂತಿ ಪ್ರಕಾಶಂ ತಮಸಾವೃತಮ್ ॥ ೨ ॥

ಅಸತ್ಯವೆಂಬುದು ತಮೋರೂಪವಾದುದು. ಈ ಅಸತ್ಯವು ಮನುಷ್ಯರನ್ನು ಅಧೋಗತಿಗೆ ಕೊಂಡೊಯ್ಯುತ್ತದೆ. ಆ ಅಂಧಂತಮಸ್ಸಿನಲ್ಲಿ ಸಿಕ್ಕಿಬಿದ್ದವರು ಪುಣ್ಯ ಲೋಕಗಳನ್ನು, ಉತ್ತಮ ಜ್ಞಾನಗಳನ್ನು ಅಜ್ಞಾನಾವೃತರಾಗಿ ಕಾಣಲಾರರು.

ಸ್ವರ್ಗಃ ಪ್ರಕಾಶ ಇತ್ಯಾಹುರ್ನರಕಂ ತಮ ಏವ ಚ ।
ಸತ್ಯಾನೃತಾತ್ತದುಭಯಂ ಪ್ರಾಪ್ಯತೇ ಜಗತೀಚರೈಃ ॥ ೩ ॥

ಇದರಿಂದ ಪ್ರಕಾಶವನ್ನೇ ಸ್ವರ್ಗವೆಂದೂ, ಕತ್ತಲನ್ನೇ ನರಕವೆಂದು ತತ್ತ್ವಜ್ಞರು ಹೇಳುತ್ತಾರೆ. ಪ್ರಾಣಿಗಳಿಗೆ ಸತ್ಯಾಸತ್ಯಗಳೇ ಸ್ವರ್ಗ-ನರಕಗಳಿಗೆ ಮಾರ್ಗಗಳಾಗಿವೆ.

ತತ್ರ ತ್ವೇವಂವಿಧಾ ವೃತ್ತಿರ್ಲೋಕೇ ಸತ್ಯಾನೃತಾ ಭವೇತ್ ।
ಧರ್ಮಾಧರ್ಮೌ ಪ್ರಕಾಶಶ್ಚ ತಮೋ ದುಃಖಂ ಸುಖಂ ತಥಾ ॥ ೪ ॥

ಲೋಕದಲ್ಲಿ ಸತ್ಯಾಸತ್ಯಗಳೇ ಕ್ರಮವಾಗಿ ಅನ್ಯೋನ್ಯ ವಿರುದ್ಧಗಳಾದ ಧರ್ಮಾಧರ್ಮಗಳಿಗೂ, ಸುಖ-ದುಃಖಗಳಿಗೂ, ತೇಜಸ್ಸು-ತಮಸ್ಸುಗಳಿಗೂ ಕಾರಣವಾಗಿವೆ.

ತತ್ರ ಯತ್ ಸತ್ಯಂ ಸ ಧರ್ಮೋ ಯೋ ಧರ್ಮಃ ಸ
ಪ್ರಕಾಶೋ ಯಃ ಪ್ರಕಾಶಸ್ತತ್ ಸುಖಮಿತಿ ।
ತತ್ರ ಯದನೃತಂ ಸೋಽಧರ್ಮೋ ಯೋಽಧರ್ಮ-
ಸ್ತತ್ತಮೋ ಯತ್ತಮಸ್ತದ್ದುಃಖಮಿತಿ ॥ ೫ ॥

ಯಾವುದು ಸತ್ಯವೋ ಅದು ಧರ್ಮವೆನಿಸಿದೆ. ಯಾವುದು ಧರ್ಮವೋ ಅದೇ ಪ್ರಕಾಶವೆನಿಸಿದೆ. ಯಾವುದು ಪ್ರಕಾಶರೂಪವಾದ ತತ್ತ್ವಜ್ಞಾನವೋ ಅದೇ ಸುಖವೆನಿಸಿದೆ. ಅದರಂತೆ ಯಾವುದು ಅನೃತವೋ ಅದು ಅಧರ್ಮವೆನಿಸಿದೆ. ಯಾವುದು ಅಧರ್ಮವೋ ಅದೇ ತಮಸ್ಸೆನಿಸಿದೆ. ಆ ತಮೋರೂಪವಾದ ಅಜ್ಞಾನವೇ ದುಃಖವೆನಿಸಿದೆ.

ಶಾರೀರೈರ್ಮಾನಸೈರ್ದುಃಖೈಃ ಸುಖೈಶ್ಚಾಪ್ಯಸುಖೋದಯೈಃ ।
ಲೋಕಸೃಷ್ಟಿಂ ಪ್ರಪಶ್ಯಂತೋ ನ ಮುಹ್ಯಂತಿ ವಿಚಕ್ಷಣಾಃ ॥ ೬ ॥

ವಿದ್ವಾಂಸರು ಲೋಕದ ದೃಷ್ಟಿಯೆಲ್ಲವೂ ಶಾರೀರಿಕ, ಮಾನಸಿಕವಾದ ದುಃಖ ಪ್ರಚುರಕವಾದುದೆಂದೂ, ಸುಖವು ದುಃಖದಲ್ಲೇ ಪರ್ಯವಸಾನವಾಗುತ್ತದೆಂದೂ ಚೆನ್ನಾಗಿ ತಿಳಿದುಕೊಂಡು ಯಾವುದರಲ್ಲಿಯೂ ಮೋಹವನ್ನು ಹೊಂದುವುದಿಲ್ಲ.

ತತ್ರ ದುಃಖವಿಮೋಕ್ಷಾರ್ಥಂ ಪ್ರಯತೇತ ವಿಚಕ್ಷಣಃ ।
ಸುಖಂ ಹ್ಯನಿತ್ಯಂ ಭೂತಾನಾಮಿಹ ಲೋಕೇ ಪರತ್ರ ಚ ॥ ೭ ॥

ವಿವೇಕಿಯಾದವನು ಈ ಮಾನವ ಜನ್ಮದಲ್ಲಿ ಒದಗಿಬರುವ ದುಃಖದಿಂದ ತನ್ನನ್ನು ಪೂರ್ಣವಾಗಿ ಬಿಡಿಸಿಕೊಳ್ಳಲು ಪ್ರಯತ್ನಿಸಬೇಕು. ಇಹಲೋಕದಲ್ಲಿಯಾಗಲೀ, ಪರಲೋಕದಲ್ಲಿಯಾಗಲೀ ಪ್ರಾಣಿಗಳಿಗೆ ಲಭಿಸುವ ಸುಖವು ಯಾವಾಗಲೂ ಅಶಾಶ್ವತವಾಗಿದೆ.

ರಾಹುಗ್ರಸ್ತಸ್ಯ ಸೋಮಸ್ಯ ಯಥಾ ಜ್ಯೋತ್ಸ್ನಾ ನ ಭಾಸತೇ ।
ತಥಾ ತಮೋಭಿಭೂತಾನಾಂ ಭೂತಾನಾಂ ಭ್ರಶ್ಯತೇ ಸುಖಮ್ ॥ ೮ ॥

ರಾಹುವಿನಿಂದ ನುಂಗಲ್ಪಟ್ಟ ಚಂದ್ರನ ಕಾಂತಿಯು ಹೇಗೆ ಪ್ರಕಾಶಕ್ಕೆ ಬರುವುದಿಲ್ಲವೋ, ಇದರಂತೆ ಅಜ್ಞಾನವು ಆವರಿಸಿದ ಮನುಷ್ಯನ ಸುಖವು ನಶಿಸಿ ಹೋಗುತ್ತದೆ.

ತತ್ಪಲು ದ್ವಿವಿಧಂ ಸುಖಮುಚ್ಯತೇ ಶಾರೀರಂ ಮಾನಸಂ ಚ
ಇಹ ಖಲ್ವಮುಷ್ಮಿಂಶ್ಚ ಲೋಕೇ ಸರ್ವಾರಂಭಪ್ರವೃತ್ತಯಃ ಸುಖಾರ್ಥಾ ಅಭಿಧೀಯಂತೇ।
ನ ಹ್ಯತಸ್ತ್ರಿವರ್ಗಫಲಂ ವಿಶಿಷ್ಟತರಮಸ್ತಿ ಸ ಏಷ ಕಾಮ್ಯೋ ಗುಣವಿಶೇಷೋ
ಧರ್ಮಾರ್ಥಯೋರಾರಂಭಃ ತದ್ಧೇತುರಸ್ಯೋತ್ಪತ್ತಿಃ ಸುಖಪ್ರಯೋಜನಾ ॥

ವಿಷಯ ಸುಖಗಳಲ್ಲಿ ಶಾರೀರಿಕವೆಂದು, ಮಾನಸಿಕವೆಂದು ಎರಡು ವಿಧವಿದೆ. ಇಹದಲ್ಲಿಯಾಗಲೀ, ಪರಲೋಕದಲ್ಲಿಯಾಗಲೀ ನಡೆಸುವ ಎಲ್ಲಾ ಪ್ರಯತ್ನಗಳು ಸುಖಕ್ಕೋಸ್ಕರವಾಗಿಯೇ ಎಂದು ವೇದಗಳು ಹೇಳುತ್ತವೆ. ಧರ್ಮಾರ್ಥ ಕಾಮಗಳೆಂಬ ತ್ರಿವರ್ಗಗಳ ಫಲದಲ್ಲಿ ಈ ಸುಖಕ್ಕಿಂತ ಬೇರೆಯಾದ ವಿಶೇಷ ಇರುವುದಿಲ್ಲ. ಸುಖವೇ ಯಾವಾಗಲೂ ಎಲ್ಲರಿಗೂ ಆದರಣೀಯವಾಗಿದೆ. ಆತ್ಮನಲ್ಲಿರುವ ಕಾಮ್ಯಗುಣವೂ ಈ ಸುಖವೇ ಆಗಿದೆ. ಇದಕ್ಕಾಗಿಯೇ ಜನರು ಧರ್ಮಾರ್ಥಗಳನ್ನು ಬಯಸುತ್ತಾರೆ. ಕಾರಣ ಈ ಧರ್ಮಾರ್ಥಗಳಿಂದಲೇ ಸುಖದ ಉತ್ಪತ್ತಿಯಾಗುತ್ತದೆ. ಆದ್ದರಿಂದ ಎಲ್ಲರ ಪ್ರಯತ್ನಗಳು ಸುಖವನ್ನುದ್ದೇಶಿಸಿಯೇ ನಡೆಯುತ್ತವೆ.

ಭರದ್ವಾಜಃ

ಯದೇತದ್ ಭವತಾಭಿಹಿತಂ ಸುಖಾನಾಂ ಪರಮಾಃ ಸ್ತ್ರಿಯ ಇತಿ
ತನ್ನ ಗೃಹ್ಣೀಮಃ । ನ ಹ್ಯೇಷಾಮೃಷೀಣಾಂ ಮಹತಿ ಸ್ಥಿತಾನಾಮಪ್ರಾಪ್ಯ
ಏಷ ಗುಣವಿಶೇಷೋ । ನ ಚೈನಮಭಿಲಷಂತಿ ಶ್ರೂಯತೇ ಚ
ಭಗವಾಂಸ್ತ್ರಿಲೋಕಕೃದ್ ಬ್ರಹ್ಮಾ । ಪ್ರಭುರೇಕಾಕೀ ತಿಷ್ಠತಿ ಬ್ರಹ್ಮಚಾರೀ ನ
ಕಾಮಸುಖೇಷ್ವಾತ್ಮಾನಮವದಧಾತಿ । ಅಪಿ ಚ ಭಗವಾನ್ ವಿಶ್ವೇಶ್ವರ
ಉಮಾಪತಿಃ ಕಾಮಮಭಿವರ್ತಮಾನಮನಂಗತ್ವೇನ ಶಮಮನಯತ್ ।
ತಸ್ಮಾದ್ ಬ್ರೂಮೋ ನ ಮಹಾತ್ಮಭಿರಯಂ ಪ್ರತಿಗೃಹೀತೋ ನ ತ್ವೇಷ
ತಾವದ್ ವಿಶಿಷ್ಟೋ ಗುಣ ಇತಿ ನೈತದ್ಭಗವತಃ ಪ್ರೇಷ್ಯಾಮಿ । ಭಗವತಾ
ತೂಕ್ತಂ ಸುಖಾನಾಂ ಪರಮಾಃ ಸ್ತ್ರಿಯ ಇತಿ ಲೋಕಪ್ರಾವೃದೋಽಪಿ ಚ
ಭವತಿ ದ್ವಿವಿಧಃ ಫಲೋದಯಃ ಸುಕೃತಾತ್ ಸುಖಮವಾಪ್ಯತೇ
ದುಷ್ಕೃತಾದ್ ದುಃಖಮಿತಿ ಅತ್ರೋಚ್ಯತಾಮ್ ॥೧೦॥

ಭರದ್ವಾಜ– ಭೃಗುಮಹರ್ಷಿಯೇ, ನೀವು ಸ್ತ್ರೀ ಸುಖವನ್ನೇ ಪರಮಾರ್ಥವೆಂದು ಹೇಳಿದ್ದೀರಿ. ಆದರೆ ನಾನು ಇದನ್ನು ಒಪ್ಪುವುದಿಲ್ಲ. ಯಾವ ಸುಖವನ್ನು ಕಾಮಿಸಲು ಯೋಗ್ಯವೆಂದು ಹೇಳಿದೆಯೋ ಅದನ್ನು ಋಷಿಗಳು ಅನಾದರಿಸುತ್ತಾರೆ. ಅವರು ಅದಕ್ಕಾಗಿ ಪ್ರಯತ್ನಿಸುವುದೂ ಇಲ್ಲ. ಇಷ್ಟೇ ಅಲ್ಲದೆ ಸೃಷ್ಟಿಕರ್ತನಾದ, ಪ್ರಭುವಾದ ಬ್ರಹ್ಮನು ಇದ್ಯಾವುದನ್ನೂ ಬಯಸದೆ ಏಕಾಕಿಯಾಗಿ ತಪೋನಿರತನಾಗಿದ್ದನೆಂದು ಕೇಳುತ್ತೇವೆ. ಅವನು ಯಾವ ಸುಖದಲ್ಲಿಯೂ ಮನಸ್ಸನ್ನಿಡದೆ ಬ್ರಹ್ಮಚಾರಿಯಾಗಿದ್ದನು ಎಂದು ಹೇಳುತ್ತಾರೆ. ಉಮಾಪತಿಯಾದ ವಿಶ್ವೇಶ್ವರನು ತನ್ನನ್ನು ಎದುರಿಸಲು ಆಗಮಿಸಿದ ಮನ್ಮಥನನ್ನು ಭಸ್ಮ ಮಾಡಿ ಅನಂಗನಾಗಿ ಮಾಡಿದನು. ಆದ್ದರಿಂದ ನೀವು ಹೇಳಿದ ಸುಖವೆಂಬುದು ಮಹಾತ್ಮರಾದವರಿಗೆ ಆದರಣೀಯವಾದುದಾಗಿ ತೋರುವುದಿಲ್ಲ. ಆತ್ಮನಿಗೆ ಇದು ವಿಶೇಷ ಗುಣವೂ ಅಲ್ಲ. ನೀವು ತಿಳಿಸಿದ ಸ್ತ್ರೀ ಸುಖವೇ ಪರಮಾರ್ಥವೆಂಬ ಮಾತಿನಲ್ಲಿ ನನಗೆ ವಿಶ್ವಾಸವಿಲ್ಲ. ಸುಕೃತ-ದುಷ್ಕೃತಗಳೆರಡು ಸುಖ-ದುಃಖಗಳಿಗೆ ಕಾರಣವೆಂದು ಫಲಗಳನ್ನು ಎರಡು ವಿಧವಾಗಿ ಹೇಳಿದ್ದು ಲೋಕದ ರೂಢಿಯನ್ನು ಅನುಸರಿಸಿ ಎಂದು ನಾನು ಅರಿತಿದ್ದೇನೆ. ಇದರಲ್ಲಿ ನಿಮ್ಮ ಅಭಿಪ್ರಾಯವನ್ನು ತಿಳಿಸಿರಿ.

ಭೃಗು

ಅನೃತಾತ್ ಖಲು ತಮಃ ಪ್ರಾದುರ್ಭೂತಂ ತಮೋಗ್ರಸ್ತಾ ಅಧರ್ಮ-
ಮೇವಾನುವರ್ತಂತೇ ನ ಧರ್ಮಮ್ । ಕ್ರೋಧಲೋಭಮೋಹ
ಮಾನಾನೃತಾದಿಭಿರವಚ್ಛನ್ನಾ ನ ಖಲ್ವಸ್ಮಿಂಲ್ಲೋಕೇ ನ ಚಾಮುತ್ರ
ಸುಖಮಾಪ್ನುವಂತಿ । ವಿವಿಧವ್ಯಾಧಿಗಣೋಪತಾಪೈರವಕೀರ್ಯಂತೇ
ವಧಬಂಧರೋಗಪರಿಕ್ಲೇಶಾದಿಭಿಶ್ಚ ಕ್ಷುತ್ಪಿಪಾಸಾಶ್ರಮಕೃತೈರುಪತಾಪೈ-
ರುಪತಪ್ಯಂತೇ । ಚಂಡವಾತಾತ್ಯುಷ್ಣಾತಿಶೀತಕೃತೈಶ್ಚ ಪ್ರತಿಭಯೈಃ ಶಾರೀರೈ-
ರ್ದುಃಖೈರುಪತಪ್ಯಂತೇ ಬಂಧುಧನವಿನಾಶ ವಿಪ್ರಯೋಗಕೃತೈಶ್ಚ ॥ ೧೧ ॥

ಮಾನಸೈಃ ಶೋಕೈರಭಿಭೂಯಂತೇ ಜರಾಮೃತ್ಯುಕೃತೈಶ್ಚಾನ್ಯೈರಿತಿ ॥೧೨॥

ಭೃಗು– ಭರದ್ವಾಜರೇ, ಈ ವಿಷಯದ ನಿರ್ಣಯತತ್ತ್ವವನ್ನು ತಿಳಿಸುತ್ತೇನೆ: ಅನೃತವೆಂಬುದು ತಮಸ್ಸಿಗೆ ಕಾರಣ. ತಮಸ್ಸಿನಿಂದ ಗೃಹಸ್ಥರಾದವರು ಅಧರ್ಮಕ್ಕೆ

ಹೋಗುತ್ತಾರೆಯೇ ಹೊರತು ಅವರಿಗೆ ಧರ್ಮದಲ್ಲಿ ಪ್ರವೃತ್ತಿಯು ಹುಟ್ಟುವುದಿಲ್ಲ. ಅಜ್ಞಾನವಶರಾದ ಅವರು ಕ್ರೋಧ-ಲೋಭ-ಮೋಹ-ಮದ ಮುಂತಾದ ದೋಷಗಳಿಂದ ಆಸ್ಪಂದಿತರಾಗಿ ಇಹ-ಪರ ಸುಖಗಳೆರಡನ್ನೂ ಕೆಡಿಸಿಕೊಳ್ಳುತ್ತಾರೆ. ವ್ಯಾಧಿಗಳಿಗೆ ತುತ್ತಾಗುತ್ತಾರೆ. ರೋಗ-ವ್ರಣಾದಿ ಬಾಧೆಗಳಿಗೆ ಗುರಿಯಾಗುತ್ತಾರೆ. ಕೊಲೆ ಮಾಡುವುದು, ಬಂಧನಕ್ಕೆ ತುತ್ತಾಗುವುದು, ಹಸಿವು-ಬಾಯಾರಿಕೆಗಳಿಂದ ಬಳಲುವುದು, ಚಳಿ-ಗಾಳಿ-ಮಳೆ ಮುಂತಾದವುಗಳ ಭಯಕ್ಕೆ, ಬಾಧೆಗೆ ಈಡಾಗುವುದು. ಬಂಧು ವಿಯೋಗ, ಧನ ನಾಶ ಮೊದಲಾದ ಮಾನಸಿಕ ದುಃಖಗಳಿಗೂ, ಜರಾ-ಮರಣಾದಿ ದುಃಖಗಳಿಗೂ ತುತ್ತಾಗುತ್ತಾರೆ.

ಯಸ್ತ್ವೇತೈಃ ಶಾರೀರೈರ್ಮಾನಸೈರ್ದುಃಖೈರ್ನ ಸ್ಪೃಶ್ಯತೇ ಸ ಸುಖಂ ವೇದ।
ನ ಚೈತೇ ದೋಷಾಃ ಸ್ವರ್ಗೇ ಪ್ರಾದುರ್ಭವಂತಿ ತತ್ರ ಭವತಿ ಖಲು ॥

ಇಂತಹ ಶಾರೀರಿಕ, ಮಾನಸಿಕ ಸಂಬಂಧವನ್ನು ಹೊಂದದವರೇ ಸುಖಿಗಳು. ಅವರು ಸುಖವೆಂದರೆ ಏನೆಂಬುದನ್ನು ನಿಜವಾಗಿ ತಿಳಿಯುತ್ತಾರೆ. ಸ್ವರ್ಗದಲ್ಲಿ ಮೇಲೆ ಹೇಳಿದ ಆಧಿ (ಮಾನಸಿಕ ರೋಗಾದಿ)-ವ್ಯಾಧಿ (ದೈಹಿಕ ರೋಗಾದಿ) ಮೊದಲಾದ ದೋಷಗಳು ಉಂಟಾಗುವುದಿಲ್ಲ. ಅಲ್ಲಿ ಒಳ್ಳೆಯ ಸುಖವೇ ಉಂಟಾಗುತ್ತದೆ.

ಸುಸುಖಃ ಪವನಃ ಸ್ವರ್ಗೇ ಗಂಧಶ್ಚ ಸುರಭಿಸ್ತಥಾ ।
ಕ್ಷುತ್ಪಿಪಾಸಾ ಶ್ರಮೋ ನಾಸ್ತಿ ನ ಜರಾ ನ ಚ ಪಾಪಕಮ್ ॥ ೧೪ ॥

ಸ್ವರ್ಗದಲ್ಲಿ ಸುಖಕರವಾದ ಸುಗಂಧವಾಯುವು ಯಾವಾಗಲೂ ಬೀಸುತ್ತಿರುತ್ತದೆ. ಅಲ್ಲಿದ್ದವರಿಗೆ ಹಸಿವು-ನೀರಡಿಕೆಗಳ ಶ್ರಮವು ಇರುವುದಿಲ್ಲ. ಜರಾ-ಮರಣಗಳು ಇರುವುದಿಲ್ಲ. ಪಾಪದ ಸಂಬಂಧವೂ ಇರುವುದಿಲ್ಲ.

ನಿತ್ಯಮೇವ ಸುಖಂ ಸ್ವರ್ಗೇ ಸುಖಂ ದುಃಖಮಿಹೋಭಯಮ್ ।
ನರಕೇ ದುಃಖಮೇವಾಹುಃ ಸಮಂ ತು ಪರಮಂ ಪದಮ್ ॥ ೧೫ ॥

ಸ್ವರ್ಗದಲ್ಲಿ ನಿತ್ಯವೂ ಸುಖವೇ ಉಂಟಾಗುತ್ತದೆ. ಇಹಲೋಕದಲ್ಲಿ ಸುಖ-ದುಃಖಗಳೆರಡೂ ಮಿಶ್ರವಾಗಿವೆ. ನರಕದಲ್ಲಿ ಯಾವಾಗಲೂ ದುಃಖವೇ ತುಂಬಿರುವುದು. ಆದ್ದರಿಂದ ಸುಖವೆಂಬುದೇ ಉತ್ತಮಸ್ಥಾನವು. ಈ ಸುಖ-ದುಃಖಗಳಿಂದ ರಹಿತವಾದ ವಿಷ್ಣುವಿನ ಪದವೇ ಉತ್ತಮಸ್ಥಾನವು.

ಪೃಥಿವೀ ಸರ್ವಭೂತಾನಾಂ ಜನಿತ್ರೀ ತದ್ವಿಧಾಃ ಸ್ತ್ರಿಯಃ ।
ಪುಮಾನ್ ಪ್ರಜಾಪತಿಸ್ತತ್ರ ಶುಕ್ರಂ ತೇಜೋಮಯಂ ವಿದುಃ ॥ ೧೬ ॥

ಈ ಭೂಮಿಯು ಸಮಸ್ತ ಭೂತಗಳಿಗೆ ಉತ್ಪತ್ತಿಸ್ಥಾನವೆನಿಸಿದೆ. ಈ ಭೂಮಿಯಲ್ಲಿ ಸೃಷ್ಟಿಗಾಗಿಯೇ ಸ್ತ್ರೀಯರು ಇದ್ದಾರೆ. ಆ ಪರಲೋಕದಲ್ಲಿ ಪುರುಷನು ಪ್ರಜಾಪತಿಯಾದ ಬ್ರಹ್ಮನೆನಿಸಿದ್ದಾನೆ. ತೇಜೋಮಯವಾದ ಶುಕ್ಲ ಉಳ್ಳವನು.

ಇತ್ಯೇತಲ್ಲೋಕನಿರ್ಮಾಣಂ ಬ್ರಹ್ಮಣಾ ವಿಹಿತಂ ಪುರಾ ।
ಪ್ರಜಾ ವಿಪರಿವರ್ತಂತೇ ಸ್ವೈಃ ಸ್ವೈಃ ಕರ್ಮಭಿರಾವೃತಾಃ ॥ ೧೭ ॥

ಬ್ರಹ್ಮನು ಇದೇ ವಿಧದಿಂದ ಲೋಕನಿರ್ಮಾಣವನ್ನು ಹಿಂದೆ ಮಾಡಿದ್ದಾನೆ. ಪ್ರಜೆಗಳು ತಮ್ಮ ತಮ್ಮ ಕರ್ಮಕ್ಕೆ ಅನುಗುಣವಾಗಿ ಸುಖ-ದುಃಖಗಳಲ್ಲಿ ತೊಳಲುತ್ತಿದ್ದಾರೆ.

ವ್ಯಾಖ್ಯಾನ ವಿಶೇಷ– ಈ ಪ್ರಕರಣದಲ್ಲಿ ನಿತ್ಯಸುಖ ಸ್ವರ್ಗದಲ್ಲಿದೆ, ನಿತ್ಯ ದುಃಖ ನರಕದಲ್ಲಿದೆ ಎಂದು ಹೇಳಿದ್ದಾರೆ. ಇಲ್ಲಿ ಸ್ವರ್ಗ-ನರಕಗಳೆಂದರೆ ಮೋಕ್ಷ-ಅಂಧಂತಮಸ್ಸುಗಳೆಂದು ಅರ್ಥ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಷೋಡಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಹದಿನಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೇಳನೆಯ ಅಧ್ಯಾಯ

ಭೃಗುಋಷಿಗಳು ಭರದ್ವಾಜರಿಗೆ ವರ್ಣಾಶ್ರಮಧರ್ಮಗಳನ್ನು ನಿರೂಪಿಸಿದುದು.

ಭರದ್ವಾಜಃ

ದಾನಸ್ಯ ಕಿಂ ಫಲಂ ಪ್ರಾಹುರ್ಧರ್ಮಸ್ಯ ಚರಿತಸ್ಯ ಚ ।
ತಪಸಶ್ಚ ಸುತಪ್ತಸ್ಯ ಸ್ವಾಧ್ಯಾಯಸ್ಯ ಹುತಸ್ಯ ಚ ॥ ೧ ॥

ಭರದ್ವಾಜ– ಮಹಾತ್ಮರಾದ ಭೃಗುಗಳೇ, ದಾನದ ಫಲವೇನು? ಧರ್ಮದ ಫಲವೇನು? ಇದರಂತೆ ಶೀಲ, ತಪಸ್ಸು, ಅಧ್ಯಯನ, ಹೋಮ ಮೊದಲಾದವುಗಳಿಗೆ ಯಾವ ಯಾವ ಫಲಗಳು ದೊರೆಯುತ್ತವೆ?

ಭೃಗುಃ

ಹುತೇನ ಶಾಮ್ಯತೇ ಪಾಪಂ ಸ್ವಾಧ್ಯಾಯೇ ಶಾಂತಿರುತ್ತಮಾ ।
ದಾನೇನ ಭೋಗ ಇತ್ಯಾಹುಸ್ತಪಸಾ ಸರ್ವಮಾಪ್ನುಯಾತ್ ॥ ೨ ॥

ಭೃಗು– ಭರದ್ವಾಜರೇ, ಹೋಮದಿಂದ ಪಾಪವು ಪರಿಹಾರವಾಗುತ್ತದೆ. ವೇದಾಧ್ಯಯನದಿಂದ ಶಾಂತಿಯು, ದಾನದಿಂದ ಭೋಗಗಳು, ತಪಸ್ಸಿನಿಂದ ಎಲ್ಲವೂ ಲಭಿಸುತ್ತವೆ.

ದಾನಂ ತು ದ್ವಿವಿಧಂ ಪ್ರಾಹುಃ ಪರತ್ರಾರ್ಥಮಿಹೈವ ಚ ।
ಸದ್ಭ್ಯೋ ಯದ್ದೀಯತೇ ಕಿಂಚಿತ್ತತ್ ಪರತ್ರೋಪತಿಷ್ಠತಿ ॥ ೩ ॥

ದಾನದಲ್ಲಿ ಎರಡು ಬಗೆ ಇದೆ. ಪರಲೋಕಕ್ಕಾಗಿ ಮಾಡುವ ದಾನ. ಇಹಲೋಕದ ಸುಖಕ್ಕಾಗಿ ಮಾಡುವ ದಾನ. ಸತ್ಪಾತ್ರರಲ್ಲಿ ಮಾಡಿದ ದಾನವು ಎಷ್ಟೇ ಅಲ್ಪವಾಗಿದ್ದರೂ ಪರಲೋಕ ಸುಖಕ್ಕೆ ಸಾಧನವಾಗುತ್ತದೆ.

ಅಸತ್ಸು ದೀಯತೇ ಯತ್ತು ತದ್ದಾನಮಿಹ ಭುಜ್ಯತೇ ।
ಯಾದೃಶಂ ದೀಯತೇ ದಾನಂ ತಾದೃಶಂ ಫಲಮಾಪ್ಯತೇ ॥ ೪ ॥

ಅಸಜ್ಜನರಿಗೆ ಮಾಡಿದ ದಾನವು ಇಹಲೋಕದ ಫಲದಲ್ಲಿಯೇ ಮುಗಿಯುತ್ತದೆ. ಆಯಾ ದಾನಕ್ಕೆ ತಕ್ಕಂತೆ ಫಲಗಳು ಲಭಿಸುತ್ತವೆ.

ಭರದ್ವಾಜಃ

ಕಿಂ ಕಸ್ಯ ಧರ್ಮಚರಣಂ ಕಿಂ ವಾ ಧರ್ಮಸ್ಯ ಲಕ್ಷಣಮ್ ।
ಧರ್ಮಃ ಕತಿವಿಧೋ ವಾಪಿ ತದ್ಭವಾನ್ವಕ್ತುಮರ್ಹತಿ ॥ ೫ ॥

ಭರದ್ವಾಜ– ಮಹರ್ಷಿಗಳೇ, ಧರ್ಮವು ಎಷ್ಟು ವಿಧ? ಯಾವ ಯಾವ ವರ್ಣಾಶ್ರಮಗಳಲ್ಲಿ ಎಂತಹ ಧರ್ಮಗಳನ್ನು ಆಚರಿಸಬೇಕು? ಅದನ್ನು ತಿಳಿಸಿರಿ.

ಭೃಗುಃ

ಸ್ವಧರ್ಮಚರಣೇ ಯುಕ್ತಾ ಯೇ ಭವಂತಿ ಮನೀಷಿಣಃ ।
ತೇಷಾಂ ಧರ್ಮಫಲಾವಾಪ್ತಿರ್ನೇತರೇಷಾಂ ಕಥಂಚನ ॥ ೬ ॥

ಭೃಗು– ಯಾವ ಬುದ್ಧಿವಂತರು ತಮ್ಮ ಧರ್ಮಾಚರಣೆಗಳನ್ನು ಶ್ರದ್ಧೆಯಿಂದ ಆಚರಿಸುತ್ತಾರೋ ಅವರಿಗೆ ಆಯಾ ಧರ್ಮಗಳ ಫಲವು ಲಭಿಸುತ್ತದೆ. ಇಲ್ಲದಿದ್ದಲ್ಲಿ ಅವರು ತಾವೇ ಭ್ರಾಂತರಾಗಿ ಅನರ್ಥಕ್ಕೆ ತುತ್ತಾಗುತ್ತಾರೆ.

ಭರದ್ವಾಜಃ

ಯದೇತಚ್ಚಾತುರಾಶ್ರಮ್ಯಂ ಬ್ರಹ್ಮರ್ಷಿವಿಹಿತಂ ಪುರಾ ।
ತೇಷಾಂ ಸ್ವೇ ಸ್ವೇ ಯ ಆಚಾರಾಸ್ತಾನ್ಮೇ ವಕ್ತುಮಿಹಾರ್ಹಸಿ ॥ ೭ ॥

ಭರದ್ವಾಜ– ಪೂರ್ವಕಾಲದ ಬ್ರಹ್ಮರ್ಷಿಗಳು ಬೇರೆ ಬೇರೆ ಆಶ್ರಮಕ್ಕೆ ತಕ್ಕಂತೆ ವಿಧಿಸಿರುವ ಆಚಾರ-ವಿಚಾರಗಳನ್ನು ನನಗೆ ತಿಳಿಸಲು ಯೋಗ್ಯರಾಗಿದ್ದೀರಿ.

ಭೃಗುಃ

ಪೂರ್ವಮೇವ ಭಗವತಾ ಲೋಕಹಿತಮನುತಿಷ್ಠತಾ
ಧರ್ಮಸಂರಕ್ಷಣಾರ್ಥಮಾಶ್ರಮಾಶ್ಚತ್ವಾರೋಽಭಿನಿರ್ದಿಷ್ಟಾಃ, ತತ್ರ
ಗುರುಕುಲವಾಸಮೇವ ತಾವತ್ ಪ್ರಥಮಮಾಶ್ರಮಮುದಾಹರಂತಿ,
ಸಮ್ಯಗತ್ರ ಶೌಚಸಂಸ್ಕಾರವಿನಯನಿಯಮಪ್ರಣೀತೋ, ವಿನೀತಾತ್ಮಾ
ಉಭೇ ಸಂಧ್ಯೇ ಭಾಸ್ಕರಾಗ್ನಿದೈವತಾನ್ಯುಪಸ್ಥಾಯ, ವಿಹಾಯ ತಂದ್ರಾಲಸ್ಯೇ
ಗುರೋರಭಿವಾದನವೇದಾಭ್ಯಾಸಶ್ರವಣಪವಿತ್ರೀಕೃತಾಂತರಾತ್ಮಾ
ತ್ರಿಷವಣಮುಪಸ್ಪೃಶ್ಯ ಬ್ರಹ್ಮಚರ್ಯಾಗ್ನಿಪರಿಚರಣಗುರುಶುಶ್ರೂಷಾನಿತ್ಯೋ
ಭೈಕ್ಷಾದಿಸರ್ವನಿವೇದಿತಾಂತರಾತ್ಮಾ ಗುರುವಚನನಿರ್ದೇಶಾನುಷ್ಠಾನಾ-
ಪ್ರತಿಕೂಲೋ ಗುರುಪ್ರಸಾದಲಬ್ಧಸ್ವಾಧ್ಯಾಯತತ್ಪರಃ ಸ್ಯಾತ್ ॥ ೮ ॥

ಭೃಗು– ಭರದ್ವಾಜರೇ, ಬ್ರಹ್ಮನು ಧರ್ಮರಕ್ಷಣೆಯನ್ನು ಲೋಕಕ್ಕೆ ಹಿತವನ್ನು ಮಾಡುವ ದೃಷ್ಟಿಯಿಂದ ಮಾಡಿರುತ್ತಾನೆ. ಬೇರೆ ಬೇರೆ ನಾಲ್ಕು ಆಶ್ರಮಧರ್ಮಗಳನ್ನು ಮೊದಲೇ ಉಪದೇಶಿಸಿದ್ದಾನೆ. ಅವುಗಳಲ್ಲಿ ಗುರುಕುಲವಾಸವೆಂಬ ಬ್ರಹ್ಮಚರ್ಯೆಯು ಮೊದಲನೆಯ ಆಶ್ರಮದ ಧರ್ಮವು. ಈ ಆಶ್ರಮದಲ್ಲಿರುವ ವ್ಯಕ್ತಿಯು ಶೌಚ, ಸಂಸ್ಕಾರ, ವ್ರತ, ವಿನಯ, ನಿಯಮ, ಇವುಗಳಿಂದ ವಿನೀತಾತ್ಮನಾಗಿ ಶುದ್ಧಿಯನ್ನು ಉಂಟುಮಾಡಿಕೊಳ್ಳಬೇಕು. ಎರಡು ಸಂಧಿಗಳಲ್ಲಿ ಸೂರ್ಯಾಗ್ನಿಗಳನ್ನು, ಇತರ ದೇವತೆಗಳನ್ನು ಉಪಾಸನೆ ಮಾಡಬೇಕು. ನಿದ್ರೆ, ಆಲಸ್ಯಗಳನ್ನು ತೊರೆದಿರಬೇಕು.

ಗುರುವಿಗೆ ನಮಸ್ಕಾರ ಮಾಡುವುದರಲ್ಲಿ ಆಸಕ್ತನಾಗಿರಬೇಕು. ವೇದಗಳನ್ನು ಅಭ್ಯಾಸ ಮಾಡುವುದು, ವೇದಗಳ ವಿಚಾರ ಮಾಡುವುದು ಇವುಗಳಿಂದ ಅಂತರಾತ್ಮವನ್ನು ಶುದ್ಧಿಗೊಳಿಸಬೇಕು. ತ್ರಿಕಾಲ ಸ್ನಾನ, ಬ್ರಹ್ಮಚರ್ಯ, ಅಗ್ನಿಹೋತ್ರ, ಗುರುಶುಶ್ರೂಷೆ, ಪ್ರತಿದಿನವೂ ಭಿಕ್ಷೆಯನ್ನು ಎತ್ತುವುದು, ಭಿಕ್ಷೆಯಿಂದ ತಂದ ಪದಾರ್ಥಗಳನ್ನು ಗುರುವಿನ ಮುಂದೆ ಸಮರ್ಪಿಸುವುದು- ಇವೆಲ್ಲ ಮೊದಲನೆಯ ಆಶ್ರಮದ ಧರ್ಮಗಳು. ಇದರಂತೆ ಗುರುಕುಲವಾಸ ಮಾಡುತ್ತಾ, ಗುರುಗಳು ಹೇಳಿದ್ದನ್ನು ತಿರುಗಿ ಮಾತನಾಡದೆ ಮನಃಪೂರ್ವಕವಾಗಿ ನಡೆಸುವುದು, ಸ್ವಾಧ್ಯಾಯ ತತ್ಪರನಾಗಿರುವುದು ಬ್ರಹ್ಮಚರ್ಯದ ಧರ್ಮವೆನಿಸಿದೆ.

ಭವತಿ ಚಾತ್ರ ಶ್ಲೋಕಃ
ಗುರುಂ ಯಸ್ತು ಸಮಾರಾಧ್ಯ ದ್ವಿಜೋ ವೇದಮವಾಪ್ನುಯಾತ್ ।
ತಸ್ಯ ಸ್ವರ್ಗಫಲಾವಾಪ್ತಿಃ ಸಿದ್ಧ್ಯತೇ ಚಾಸ್ಯ ಮಾನಸಮ್ ॥ ೯ ॥

ಇದಕ್ಕೆ ಸಂಬಂಧಿಸಿದ ಪ್ರಮಾಣದ ಮಾತು ಇಂತಿದೆ- 'ಗುರುವನ್ನು ಆರಾಧಿಸಿ ಅವನಿಂದ ವೇದವನ್ನು ಪಡೆಯತಕ್ಕ ಬ್ರಾಹ್ಮಣನಿಗೆ ಮನಃಶುದ್ಧಿ ಉಂಟಾಗುತ್ತದೆ ಮಾತ್ರವಲ್ಲದೆ ಅವನಿಗೆ ಸ್ವರ್ಗವು ಲಭಿಸುತ್ತದೆ' ಎಂಬುದು ಈ ಶ್ಲೋಕಾರ್ಥವು.

ಗಾರ್ಹಸ್ಥ್ಯಂ ಖಲು ದ್ವಿತೀಯಮಾಶ್ರಮಂ ವದಂತಿ । ತಸ್ಯ ಸಮುದಾಚಾರಲಕ್ಷಣಂ ಸರ್ವಮನುವ್ಯಾಖ್ಯಾಸ್ಯಾಮಃ । ಸಮಾವೃತ್ತಾನಾಂ ಸದಾರಾಣಾಂ ಸಹಧರ್ಮಚರ್ಯಾಫಲಾರ್ಥಿನಾಂ ಗೃಹಾಶ್ರಮೋ ವಿಧೀಯತೇ । ಧರ್ಮಾರ್ಥಕಾಮಾವಾಪ್ತಿರ್ಹ್ಯತ್ರ ತ್ರಿವರ್ಗಸಾಧನಮವೇಕ್ಷ್ಯ ಗರ್ಹಿತೇನ ಕರ್ಮಣಾ ಧನಾನ್ಯಾದಾಯ ಸ್ವಾಧ್ಯಾಯಪ್ರಕರ್ಷೋಪಲಬ್ಧೇನ ಬ್ರಹ್ಮರ್ಷಿನಿರ್ಮಿತೇನ ವಾ ಅದ್ರಿಸಾರಗತೇನ ವಾ ಹವ್ಯನಿಯಮಾಭ್ಯಾಸದೈವತಪ್ರಸಾದೋಪಲಬ್ಧೇನ ವಾ ಧನೇನ ಗೃಹಸ್ಥೋ ಗಾರ್ಹಸ್ಥ್ಯಂ ಪ್ರವರ್ತಯೇತ್ । ತದ್ಧಿ ಸರ್ವಾಶ್ರಮಾಣಾಂ ಮೂಲಮುದಾಹರಂತಿ । ಗುರುಕುಲವಾಸಿನಃ ಪರಿವ್ರಾಜಕಾ ಯೇ ಚಾನ್ಯೇ ಸಂಕಲ್ಪಿತವ್ರತನಿಯಮಧರ್ಮಾನುಷ್ಠಾಯಿನ-ಸ್ತೇಷಾಮಪ್ಯತ ಏವ । ಭಿಕ್ಷಾಬಲಿಸಂವಿಭಾಗಾಃ ಪ್ರವರ್ತಂತೇ ॥ ೧೦ ॥

ಗಾರ್ಹಸ್ಥ್ಯವನ್ನು ಎರಡನೆಯ ಆಶ್ರಮವೆಂದು ಹೇಳುತ್ತಾರೆ. ಅದರ ಲಕ್ಷಣಗಳನ್ನು, ಆಚಾರಗಳನ್ನು ವಿವರಿಸುತ್ತೇನೆ: ಬ್ರಹ್ಮಚರ್ಯದಲ್ಲಿ ಗುರುಕುಲವಾಸವನ್ನು ಮುಗಿಸಿ ಬಳಿಕ ಸಮಾವರ್ತನವೆಂಬ ಸಂಸ್ಕಾರವನ್ನು ಮಾಡಿಕೊಳ್ಳಬೇಕು. ನಂತರ ವಿವಾಹಿತನಾಗಿ ಸದಾಚಾರಸಂಪನ್ನನಾಗಿ ಭಾರ್ಯೆಯಿಂದ ಕೂಡಿಕೊಂಡು ಜೀವನ ನಡೆಸುವ ವ್ಯಕ್ತಿಯು ಧರ್ಮಗಳ ಫಲವನ್ನು ಹೊಂದುತ್ತಾನೆ. ಈ ರೀತಿಯಾದ ಕರ್ತವ್ಯಗಳಿಗಾಗಿ ಗೃಹಸ್ಥಾಶ್ರಮವು ವಿಧಿಸಲ್ಪಟ್ಟಿದೆ. ಗೃಹಸ್ಥಧರ್ಮದಲ್ಲಿ ಧರ್ಮ-ಅರ್ಥ-ಕಾಮವೆಂಬ ತ್ರಿವರ್ಗಗಳನ್ನು ದಾಟಿಸುವ ಸೌಲಭ್ಯವಿದೆ. ನಿಂದನೆಗೆ ಯೋಗ್ಯವಲ್ಲದ ಕಾರ್ಯಗಳಿಂದ ವೇದಾಧ್ಯಯನದಲ್ಲಿ ತನಗೆ ಉಂಟಾದ ಮಹತ್ತರ ಬಲದಿಂದ, ಬ್ರಹ್ಮರ್ಷಿಗಳಿಂದ ಆಚರಿಸಲ್ಪಟ್ಟ ಜೀವನಮಾರ್ಗದಿಂದ, ಹವ್ಯ-ಕವ್ಯನಿಯಮಗಳಿಂದಲೂ, ದೇವಪೂಜೆಯಿಂದ ಪ್ರಾಪ್ತವಾದ ಅಥವಾ ಯೋಗ್ಯವಾಗಿ ಲಬ್ಧವಾದ ಧನದಿಂದ ಗೃಹಸ್ಥನು ಗಾರ್ಹಸ್ಥ್ಯಧರ್ಮವನ್ನು ನಡೆಸಬೇಕು. ಈ ಗೃಹಸ್ಥಾಶ್ರಮವನ್ನು ಎಲ್ಲಾ ಆಶ್ರಮಗಳಿಗೂ ಆಧಾರವೆಂದು ಹೇಳುತ್ತಾರೆ. ಗುರುಕುಲವಾಸ ಮಾಡುವ ಬ್ರಹ್ಮಚಾರಿಗಳಿಗೂ ಪರಿವ್ರಾಜಕರೆನಿಸಿದ ಸಂನ್ಯಾಸಿಗಳಿಗೂ ತಮ್ಮ ತಮ್ಮ ಸಂಕಲ್ಪದಂತೆ ವ್ರತಗಳನ್ನು, ನಿಯಮಗಳನ್ನು, ಧರ್ಮಗಳನ್ನು ಅನುಷ್ಠಾನ ಮಾಡುವವರಿಗೆ ಗೃಹಸ್ಥಾಶ್ರಮದಲ್ಲಿರುವ ವ್ಯಕ್ತಿಗಳಿಂದಲೇ ಭಿಕ್ಷೆ, ಬಲಿ, ದಾನಾದಿಗಳು ಎಲ್ಲವೂ ಲಭಿಸುವುದರಿಂದ ಎಲ್ಲ ಆಶ್ರಮಿಗಳಿಗೂ ಗೃಹಸ್ಥನು ಆಶ್ರಯನೆನಿಸಿದ್ದಾನೆ.

ವಾನಪ್ರಸ್ಥಾನಾಂ ದ್ರವ್ಯೋಪಸ್ಕಾರ ಇತಿ ಪ್ರಾಯಶಃ ಖಲ್ವೇತೇ ಸಾಧವಃ ಸಾಧುಪಥ್ಯದರ್ಶನಾಃ ವಾಧ್ಯಾಯಪ್ರಸಂಗಿನಸ್ತೀರ್ಥಾಭಿಗಮನದೇಶ-ದರ್ಶನಾರ್ಥಂ ಪೃಥಿವೀಂ ಪರ್ಯಟಂತಿ ತೇಷಾಂ ವಾಕ್ಪ್ರದಾನ-ಸೌಮುಖ್ಯಶಕ್ತ್ಯಾಸನಶಯನಾಭ್ಯವಹಾರಸತ್ಕ್ರಿಯಾಶ್ಚೇತಿ ॥ ೧೧ ॥

ವಾನಪ್ರಸ್ಥವೆಂಬ ಮೂರನೆಯ ಆಶ್ರಮದಲ್ಲಿರುವ ವ್ಯಕ್ತಿಗಳಿಗೆ ಧನವಾಗಲೀ, ಇತರ ವಸ್ತುಗಳಾಗಲೀ ಅಪೇಕ್ಷಿಸಲು ಯೋಗ್ಯವಾದುವಲ್ಲ. ಇವರು ಸಾಧುಗಳಾಗಿ ಸಾತ್ವಿಕ ಆಹಾರವನ್ನು ಸ್ವೀಕರಿಸುತ್ತಾ ವೇದಾಧ್ಯಯನ, ತೀರ್ಥಯಾತ್ರೆ, ಪುಣ್ಯಕ್ಷೇತ್ರ ದರ್ಶನ ಎಂಬ ಈ ಕ್ರಿಯೆಗಳಲ್ಲಿಯೇ ನಿತ್ಯವೂ ನಿರತರಾಗಿ ಸಂಚರಿಸಬೇಕು. ಇಂತಹವರನ್ನು ಕಂಡ ಗೃಹಸ್ಥನು ಅವರೆದುರು ಹೋಗಿ ಅವರನ್ನು ಆದರದಿಂದ ನಮಸ್ಕರಿಸಿ ಅಸೂಯೆ

ಇಲ್ಲದೆ ಒಳ್ಳೆಯ ಮಾತುಗಳಿಂದ ಆದರಿಸಬೇಕು. ಅವರಿಗೆ ಸಾಧ್ಯವಾದುದನ್ನು ದಾನ ಮಾಡಬೇಕು. ಉತ್ತಮವಾದ ಹಾಸಿಗೆ, ಆಸನಗಳನ್ನು, ಒಳ್ಳೆಯ ಆಹಾರಗಳನ್ನು ಒಪ್ಪಿಸಬೇಕು. ಇದು ಗೃಹಸ್ಥನ ಕರ್ತವ್ಯವಾಗಿದೆ. ಇದೇ ವಿಷಯದಲ್ಲಿ ಒಂದು ಶ್ಲೋಕವಿದೆ.

ಭವತಿ ಚಾತ್ರ ಶ್ಲೋಕಃ
ಅತಿಥಿರ್ಯಸ್ಯ ಭಗ್ನಾಶೋ ಗೃಹಾತ್ ಪ್ರತಿನಿವರ್ತತೇ ।
ಸ ದತ್ತ್ವಾ ದುಷ್ಕೃತಂ ತಸ್ಮೈ ಪುಣ್ಯಮಾದಾಯ ಗಚ್ಛತಿ ॥ ೧೨ ॥

ಯಾವ ಗೃಹಸ್ಥನ ಮನೆಗೆ ಬಂದ ಅತಿಥಿಯು ತನ್ನ ಇಷ್ಟಾರ್ಥವನ್ನು ಪಡೆಯದೆ ಹಿಂದಿರುಗುತ್ತಾನೋ ಅವನು ತನ್ನ ಪಾಪಗಳನ್ನೆಲ್ಲಾ ಗೃಹಸ್ಥನಿಗೆ ಕೊಟ್ಟು ಗೃಹಸ್ಥನ ಪುಣ್ಯವನ್ನು ತೆಗೆದುಕೊಂಡು ಹೋಗುತ್ತಾನೆ ಎಂಬುದು ಶ್ಲೋಕದ ಅಭಿಪ್ರಾಯ.

ಅಪಿ ಚಾತ್ರ ಯಜ್ಞಕ್ರಿಯಾಭಿರ್ದೇವತಾಃ ಪ್ರೀಯಂತೇ ।
ನಿವಾಪೇನ ಪಿತರೋ ವೇದಾಭ್ಯಾಸಶ್ರವಣಧಾರಣೇನ ಋಷಯಃ ।
ಅಪತ್ಯೋತ್ಪಾದನೇನ ಪ್ರಜಾಪತಿರಿತಿ ॥ ೧೩ ॥

ಇದಲ್ಲದೆ ಗೃಹಸ್ಥಾಶ್ರಮದಲ್ಲಿರುವ ವ್ಯಕ್ತಿಗಳು ಯಾಗಗಳಿಂದ ದೇವತೆಗಳನ್ನೂ, ತರ್ಪಣಾದಿಗಳಿಂದ ಪಿತೃಗಳನ್ನೂ, ವೇದದ ಅಧ್ಯಯನದಿಂದ ಶ್ರವಣಧಾರಣದಿಂದ ಋಷಿಗಳನ್ನೂ, ಸಂತಾನಪ್ರಾಪ್ತಿಯಿಂದ ಪ್ರಜಾಪತಿಗಳನ್ನು ತೃಪ್ತಿಪಡಿಸಬೇಕು. ಈ ವಿಷಯದಲ್ಲಿಯೂ ಎರಡು ಶ್ಲೋಕಗಳಿವೆ.

ಶ್ಲೋಕೌ ಚಾತ್ರ ಭವತಃ
ವತ್ಸಲಾಃ ಸರ್ವಭೂತಾನಾಂ ವಾಚ್ಯಾಃ ಶ್ರೋತ್ರಸುಖಾ ಗಿರಃ ।
ಪರಿವಾದೋಪಘಾತೌ ಚ ಪಾರುಷ್ಯಂ ಚಾತ್ರ ಗರ್ಹಿತಮ್ ॥ ೧೪ ॥

ಎಲ್ಲಾ ಪ್ರಾಣಿಗಳಿಗೂ ಹಿತವಾದ ಕಿವಿಗಿಂಪಾದ ಮಾತುಗಳನ್ನೇ ಗೃಹಸ್ಥನಾದವನು ನುಡಿಯಬೇಕು. ಇತರರನ್ನು ನಿಂದಿಸುವುದು, ಅವರಲ್ಲಿ ತಪ್ಪುಗಳನ್ನು ಹೇಳುವುದು, ಕಠಿಣವಾಗಿ ಮಾತನಾಡುವುದು ಎಂದಿಗೂ ಕೂಡದು.

ಅವಜ್ಞಾನಮಹಂಕಾರೋ ದಂಭಶ್ಚೈವ ವಿಗರ್ಹಿತಃ ।
ಅಹಿಂಸಾ ಸತ್ಯಮಕ್ರೋಧಃ ಸರ್ವಾಶ್ರಮಗತಂ ತಪಃ ॥ ೧೫ ॥

ಇತರರಲ್ಲಿ ಅವಮರ್ಯಾದೆ, ಅಹಂಕಾರ, ಡಂಭ ಇವೆಲ್ಲ ನಿಂದ್ಯವಾದವುಗಳು. ಅಹಿಂಸೆ, ಅಕ್ರೋಧ, ಸತ್ಯಸಂಧತೆ ಇವು ಎಲ್ಲಾ ಆಶ್ರಮದವರಿಗೂ ಸಾಮಾನ್ಯವಾದ ತಪೋರೂಪವಾದ ಧರ್ಮವೆನಿಸಿವೆ.

ಅಪಿ ಚಾತ್ರ
ಮಾಲ್ಯಾಭರಣವಸ್ತ್ರಾಭ್ಯಂಗಗಂಧೋಪಭೋಗನೃತ್ತಗೀತವಾದಿತ್ರಶ್ರುತಿಸುಖ-
ನಯನಾಭಿರಾಮಸಂದರ್ಶನಾನಾಂ ಪ್ರಾಪ್ತಿರ್ಭಕ್ಷ್ಯಭೋಜ್ಯಪೇಯಲೇಹ್ಯ-
ಚೋಷ್ಯಾಣಾಮಭ್ಯವಹಾರ್ಯಾಣಾಂ ವಿವಿಧಾನಾಮುಪಭೋಗಃ
ಸ್ವದಾರವಿಹಾರಸಂತೋಷಃ ಕಾಮಸುಖಾವಾಪ್ತಿರಿತಿ ॥ ೧೬ ॥

ಗೃಹಸ್ಥಾಶ್ರಮದಲ್ಲಿರುವ ವ್ಯಕ್ತಿಗಳಿಗೆ ಸುಗಂಧ, ಮಾಲ್ಯ, ವಸ್ತ್ರ, ಅಭ್ಯಂಗ ಮೊದಲಾದವುಗಳು ನಿಷಿದ್ಧವೆನಿಸುವುದಿಲ್ಲ. ಆಟ-ಪಾಠಗಳು, ಇಂಪಾದ ವಾದ್ಯಗಳು, ಅಂದವಾದ ನೋಟಗಳು, ಭಕ್ಷ್ಯ-ಭೋಜ್ಯ-ಪೇಯ-ಚೋಷ್ಯ-ಲೇಹ್ಯ ಮೊದಲಾದ ಆಹಾರಗಳು, ಮನಬಂದಂತೆ ಯೋಗ್ಯಪ್ರದೇಶಗಳಲ್ಲಿ ಸಂಚರಿಸುವುದು, ಈ ಎಲ್ಲ ತರಹದ ಸಂತೋಷಗಳನ್ನು ಅನುಭವಿಸಬಹುದು. ಗೃಹಸ್ಥನಿಗೆ ಕಾಮ ಸುಖಗಳ ಲಾಭವೂ ಇದೆ. ಇದೇ ವಿಷಯದಲ್ಲಿ ಶ್ಲೋಕಗಳಿವೆ.

ಶ್ಲೋಕೌ ಚಾತ್ರ ಭವತಃ
ತ್ರಿವರ್ಗಗುಣನಿರ್ವೃತ್ತಿರ್ಯಸ್ಯ ನಿತ್ಯಂ ಗೃಹಾಶ್ರಮೇ ।
ಸ ಸುಖಾನ್ಯನುಭೂಯೇಹ ಶಿಷ್ಟಾನಾಂ ಗತಿಮಾಪ್ನುಯಾತ್ ॥ ೧೭ ॥

ಯಾವ ವ್ಯಕ್ತಿಯು ಗೃಹಸ್ಥಾಶ್ರಮದಲ್ಲಿರುವಾಗ ಧರ್ಮಾರ್ಥಕಾಮಗಳೆಂಬ ತ್ರಿವರ್ಗಗಳ ಜೊತೆಗೆ ಮೂರು ಗುಣಗಳಿಂದ ಅತೀತವಾದ ಮೋಕ್ಷವನ್ನು ಸಾಧಿಸಲು ಪ್ರಯತ್ನಿಸುತ್ತಾನೋ ಅವನು ಈ ಸಮಸ್ತ ಸುಖಗಳನ್ನು ಅನುಭವಿಸಿ ಬಳಿಕ ಶಿಷ್ಟರಿಗೆ ದೊರಕುವ ಉತ್ತಮವಾದ ಗತಿಯನ್ನು ಹೊಂದಬಲ್ಲನು.

ಉಂಛವೃತ್ತಿರ್ಗೃಹಸ್ಥೋ ಯಃ ಸ್ವಧರ್ಮಚರಣೇ ರತಃ ।
ತ್ಯಕ್ತಕಾಮಸುಖಾರಂಭಸ್ತಸ್ಯ ಸ್ವರ್ಗೋ ನ ದುರ್ಲಭಃ ॥ ೧೮ ॥

ಯಾವ ಗೃಹಸ್ಥನು ಉಂಛವೃತ್ತಿಯಿಂದಾದರೂ ಜೀವಿಸುತ್ತಾ ಸ್ವಧರ್ಮವನ್ನು ಮೀರಿ ನಡೆಯದೆ ಕಾಮಸುಖವನ್ನು ಬಿಟ್ಟಿದ್ದಾನೋ ಅವನಿಗೆ ಸ್ವರ್ಗವು ದುರ್ಲಭವಾದುದಲ್ಲ ಎಂಬುದು ಈ ಶ್ಲೋಕಾಭಿಪ್ರಾಯ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಸಪ್ತದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಹದಿನೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹದಿನೆಂಟನೆಯ ಅಧ್ಯಾಯ

ವಾನಪ್ರಸ್ಥ-ಸಂನ್ಯಾಸಿಗಳ ಲಕ್ಷಣಗಳು. ಹಿಮವತ್‌ಪರ್ವತದ ಉತ್ತರದಲ್ಲಿರುವ ಪುಣ್ಯಾತ್ಮರಿಗೆ ದೊರೆಯುವ ಸ್ವರ್ಗಸಮಾನವಾದ ಲೋಕಗಳ ಬಗ್ಗೆ ಭೃಗುಋಷಿಗಳು ನಿರೂಪಿಸಿದುದು.

ಭೃಗುಃ

ವಾನಪ್ರಸ್ಥಾಃ ಖಲು ಋಷಿಧರ್ಮಮನುಸರಂತಃ ಪುಣ್ಯಾನಿ ತೀರ್ಥಾನಿ ನದೀಪ್ರಸ್ರವಣಾನಿ ಸುವಿವಿಕ್ತೇಷ್ವರಣ್ಯೇಷು ಮೃಗಮಹಿಷವರಾಹಸೃಮರ-ಗಜಾಕೀರ್ಣೇಷು ತಪಸ್ಯಂತೋऽನುಸಂಚರಂತಿ । ತ್ಯಕ್ತಗ್ರಾಮ್ಯ-ವಸ್ತ್ರಾಹಾರೋಪಭೋಗಾ ವನ್ಯೌಷಧಿಮೂಲಫಲಪರ್ಣಪರಿಮಿತವಿಚಿತ್ರ-ನಿಯತಾಹಾರಾಃ ಸ್ಥಾನಾಸನಿನೋ ಭೂಮಿಪಾಷಾಣಸಿಕತಾಶಕರಾವಾಲುಕಾ-ಭಸ್ಮಶಾಯಿನಃ ಕಾಶಕುಶಚರ್ಮವಲ್ಕಲಸಂವೃತಾಂಗಾಃ ಕೇಶಶ್ಮಶ್ರುನಖ-ರೋಮಧಾರಿಣೋ ನಿಯತಕಾಲೋಪಸ್ಪರ್ಶನಾ ಅಸ್ಕನ್ನಹೋಮಬಲಿ-ಕಾಲಾನುಷ್ಠಾಯಿನಃ ಸಮಿತ್ಕುಶಕುಸುಮೋಪಹಾರ ಹೋಮಾರ್ಜನ-ಲಬ್ಧವಿಶ್ರಾಮಾಃ ಶೀತೋಷ್ಣಪವನನಿಷ್ಪತ್ತಿವಿಭಿನ್ನಸರ್ವತ್ವಚೋ ಮಯೋಗಚರ್ಯಾವಿಹಿತಧರ್ಮಾನುಷ್ಠಾನಹೃತಮಾಂಸಶೋಣಿತಾ-ಸ್ತ್ವಗಸ್ಥಿಭೂತಾ ಧೃತಿಪರಾಃ ಸತ್ತ್ವಯೋಗಾಚ್ಛರೀರಾಣ್ಯುದ್ವಹಂತಿ ॥ ೧ ॥

ಭೃಗು- ಎಲೈ ಭರದ್ವಾಜರೇ ಕೇಳಿ. ವಾನಪ್ರಸ್ಥರು ಋಷಿಧರ್ಮವನ್ನು ಅನುಸರಿಸುತ್ತಾ ಪುಣ್ಯತೀರ್ಥಗಳನ್ನೂ, ಪುಣ್ಯನದಿಗಳನ್ನೂ ಸೇವಿಸುತ್ತಿರುತ್ತಾರೆ.

ಏಕಾಂತವಾದ ಅರಣ್ಯಗಳಲ್ಲಿ ಸಂಚರಿಸುತ್ತಾ ಜಿಂಕೆ, ಎಮ್ಮೆ, ಹಂದಿ, ಹುಲಿ, ಕಡವೆ, ಆನೆ ಮೊದಲಾದ ವನಮೃಗಗಳಿಂದ ತುಂಬಿರುವ ಜನರಹಿತವಾದ ಅರಣ್ಯಗಳಲ್ಲಿ ತಪಸ್ಸನ್ನು ಮಾಡುತ್ತಿರುವರು. ಅವರು ಗ್ರಾಮ್ಯಜನರು ಬಯಸುವ ವಸ್ತ್ರ, ಆಹಾರ, ಭೋಗವಸ್ತುಗಳನ್ನು ಎಂದೂ ಬಯಸುವುದಿಲ್ಲ. ಕಾಡಿನಲ್ಲಿ ಸಿಕ್ಕುವ ಹಸಿರು ಎಲೆ, ಗೆಡ್ಡೆ-ಗೆಣಸು ಮೊದಲಾದವುಗಳನ್ನು ಮಿತವಾಗಿ ನಿಯಮದಿಂದ ಸೇವಿಸುತ್ತಾರೆ. ಅವರಿಗೆ ನೆಲವೇ ಶಯನ, ಆಸನಗಳು. ನೆಲದ ಮೇಲೋ, ಬಂಡೆಗಳ ಮೇಲೋ, ಮರಳಿನ ಮೇಲೋ, ನೊರಜು ಕಲ್ಲುಗಳ ಮೇಲೆಯೋ, ಭೂಮಿಯ ಮೇಲೆಯೋ ಮಲಗುತ್ತಾರೆ. ದರ್ಭೆಗಳನ್ನು, ಜಿಂಕೆಯ ಚರ್ಮಗಳನ್ನು, ಮರದ ತೊಗಟೆಯನ್ನು, ನಾರುಗಳನ್ನು ಮೈಗೆ ಮರೆಮಾಡಿಕೊಳ್ಳುತ್ತಾರೆ. ತಲೆಕೂದಲು, ಗಡ್ಡ-ಮೀಸೆ, ಮೈಮೇಲಿನ ಕೂದಲುಗಳನ್ನು ತೆಗೆಸದೆ ಹಾಗೆ ಜೀವಿಸಿರುತ್ತಾರೆ. ಕಾಲಕಾಲಕ್ಕೆ ಸ್ನಾನಗಳನ್ನು, ಬಲಿ-ಹೋಮಗಳನ್ನು ನಡೆಸುತ್ತಾರೆ. ಪ್ರತಿದಿನವೂ ಸಮಿತ್ತು, ದರ್ಭೆ, ಹೂವು, ಇವುಗಳನ್ನು ಸಂಗ್ರಹಿಸಿಕೊಂಡು ಯಜ್ಞವೇದಿಕೆಯನ್ನು ಶುದ್ಧೀಕರಿಸಿ ಹೋಮ ಕಾರ್ಯಗಳನ್ನು ನಡೆಸಿ ಬಳಿಕ ವಿಶ್ರಾಂತಿಯನ್ನು ಹೊಂದುತ್ತಾರೆ. ಅವರು ಚಳಿ, ಮಳೆ, ಗಾಳಿ, ಬಿಸಿಲು ಇವುಗಳನ್ನು ಲಕ್ಷಿಸದೆ ಅವುಗಳನ್ನು ಸಹಿಸಿಕೊಂಡು ಜೀವನ ನಡೆಸುವುದರಿಂದ ಅವರ ದೇಹದ ಚರ್ಮವೆಲ್ಲವೂ ಒಣಗಿ ಜೀರ್ಣವಾಗಿ ಉದುರುತ್ತಿರುತ್ತದೆ. ಹೀಗಿದ್ದರೂ ವ್ರತೋಪವಾಸ- ನಿಯಮಗಳಲ್ಲಿ ಯೋಗಾಭ್ಯಾಸಗಳಲ್ಲಿ, ಅನುಷ್ಠಾನಗಳಲ್ಲಿ ನಿರತರಾಗಿರುತ್ತಾರೆ. ಅವರ ದೇಹದ ರಕ್ತ, ಮಾಂಸ, ಅಸ್ಥಿ, ಚರ್ಮ ಎಲ್ಲವೂ ಒಣಗಿ ಸುಕ್ಕಿಹೋಗಿರುತ್ತವೆ. ಅವರು ದೇಹಸುಖವನ್ನು ಲಕ್ಷ್ಯ ಮಾಡದೆ ದೃಢಮನಸ್ಸಿನಿಂದ ಸತ್ವಗುಣದಿಂದ ದೇಹಯಾತ್ರೆಯನ್ನು ನಡೆಸುತ್ತಾರೆ. ಇವರ ವಿಷಯವಾಗಿ ಒಂದು ಶ್ಲೋಕವಿದೆ.

ಯಸ್ತ್ವೇತಾಂ ನಿಯತಶ್ಚರ್ಯಾಂ ಬ್ರಹ್ಮರ್ಷಿವಿಹಿತಾಂ ಚರೇತ್ ।
ಸ ದಹೇದಗ್ನಿವದ್ದೋಷಾಂಜಯೇಲ್ಲೋಕಾಂಶ್ಚ ದುರ್ಜಯಾನ್ ॥ ೨ ॥

ಯಾರು ವಾನಪ್ರಸ್ಥನಿಯಮವನ್ನು ಧರಿಸಿ ಬ್ರಹ್ಮರ್ಷಿಗಳ ವಿಧಿಯಂತೆ ಜೀವನವನ್ನು ನಡೆಸುತ್ತಾರೋ ಅವರು ಅಗ್ನಿಯಂತೆ ಸಮಸ್ತ ದೋಷಗಳನ್ನೂ ಸುಟ್ಟು ಯಾರಿಂದಲೂ ಜಯಿಸಲು ಸಾಧ್ಯವಿಲ್ಲದ ಉತ್ತಮಲೋಕಗಳನ್ನು ಹೊಂದುತ್ತಾರೆ ಎಂಬುದು ಶ್ಲೋಕಾರ್ಥವು.

ಪರಿವ್ರಾಜಕಾನಾಂ ಪುನರಾಚಾರಸ್ತದ್ಯಥಾ । ವಿಮುಚ್ಯಾಗ್ನಿಧನಕಲತ್ರ-ಪರಿಬರ್ಹಸಂಗಾನಾತ್ಮನಃ ಸ್ನೇಹಪಾಶಾನವಧೂಯ ಪರಿವ್ರಜಂತಿ ಸಮಕಾಂಚನಾಸ್ತ್ರಿವರ್ಗಪ್ರವೃತ್ತೇಷ್ವಾರಂಭೇಷ್ವಸಕ್ತಬುದ್ಧಯೋಽರಿಮಿತ್ರೋದಾಸೀನೇಷು ತುಲ್ಯವೃತ್ತಯಃ ಸ್ಥಾವರಜರಾಯುಜಾಂಡಜ ಸ್ವೇದಜೋದ್ಭಿಜ್ಜಾನಾಂ ಭೂತಾನಾಂ ವಾಙ್ಮನಃಕರ್ಮಭಿರನಭಿದ್ರೋಹಿಣೋಽನಿಕೇತಾಃ ಪರ್ವತಪುಲಿನವೃಕ್ಷಮೂಲದೇವತಾಯತನಾನ್ಯನುಚರಂತೋ ವಾಸಾರ್ಥಮುಪೇಯುರ್ನಗರಂ ಗ್ರಾಮಂ ವಾ ನಗರೇ ಪಂಚರಾತ್ರಿಕಾ ಗ್ರಾಮ್ಯೈಕರಾತ್ರಿಕಾಃ । ಪ್ರವಿಶ್ಯ ಚ ಪ್ರಾಣಧಾರಣಮಾತ್ರಾರ್ಥಂ ದ್ವಿಜಾತೀನಾಂ ಭವನಾನ್ಯಸಂಕೀರ್ಣಕರ್ಮಣಾಮುಪತಿಷ್ಠೇಯುಃ ಪಾತ್ರಪತಿತಾಯಾಚಿತಭೈಕ್ಷಾಃ ಕಾಮಕ್ರೋಧದರ್ಪಮೋಹಲೋಭಕಾರ್ಪಣ್ಯದಂಭ ಪರಿವಾದಾಭಿಮಾನಹಿಂಸಾನಿವೃತ್ತಾ ಇತಿ ॥

ಸಂನ್ಯಾಸಿಗಳ ಆಚಾರವನ್ನು ಹೇಳುತ್ತೇನೆ, ಕೇಳು. ಸಂನ್ಯಾಸಿಗಳಿಗೆ ಅಗ್ನಿಹೋತ್ರ ವಿಧಿಯು ಇರುವುದಿಲ್ಲ. ಅವರು ಧನ-ಸಂಪಾದಿಸಬಾರದು. ಹೆಂಡತಿ-ಮಕ್ಕಳನ್ನು ಹೊಂದಿರಬಾರದು. ಉಡುಗೆ, ತೊಡುಗೆ, ಹಾಸಿಗೆ, ಹೊದ್ದಿಕೆ ಇದ್ಯಾವುದನ್ನೂ ಹೊಂದಿರಬಾರದು. ಆಸನವನ್ನು ಹೊಂದಿರಬಾರದು. ಸಮಸ್ತ ಭೋಗಗಳನ್ನು ಮೀರಿ, ಸ್ನೇಹಪಾಶವನ್ನು ಕಡಿದು, ಕಲ್ಲು-ಮಣ್ಣು-ಹೆಂಟೆ-ಬಂಗಾರವೆಂಬ ಭೇದವನ್ನು ತಿಳಿಯದೆ ಸಮವಾಗಿ ಎಲ್ಲವನ್ನೂ ಕಾಣುತ್ತಾ ಸಂಚರಿಸುತ್ತಿರುವರು. ಧರ್ಮ-ಅರ್ಥ-ಕಾಮ ಎಂಬ ತ್ರಿವರ್ಗಗಳಿಗೆ ಸಂಬಂಧಿಸಿದ ಕಾರ್ಯಗಳಿಗೆ ಮನಸ್ಸನ್ನು ಮಾಡದೆ, ಶತ್ರು-ಮಿತ್ರ-ಉದಾಸೀನ ಎಂಬ ಭೇದಬುದ್ಧಿಯನ್ನು ಮಾಡದೆ, ಎಲ್ಲರನ್ನೂ ಸಮದೃಷ್ಟಿಯಿಂದ ನೋಡುತ್ತಾರೆ. ಅವರು ಮಾತು-ಮನಸ್ಸು-ಕೃತಿಗಳಿಂದ ಜರಾಯುಜ-ಸ್ವೇದಜ-ಅಂಡಜ-ಉದ್ಭಿಜಗಳೆಂಬ ಭೂತಗಳಿಗೆ ಎಂದೂ ದ್ವೇಷ ಎಣಿಸಲಾರರು. ಇವರಿಗೆ ಮನೆ ಎಂಬುದಿರುವುದಿಲ್ಲ. ಬೆಟ್ಟಗಳಲ್ಲಿಯೂ, ಸಮುದ್ರ-ನದಿ ತೀರಗಳಲ್ಲಿಯೂ, ಮರದ ಪೊಟರೆಗಳಲ್ಲಿಯೂ, ದೇವಾಲಯಗಳಲ್ಲಿಯೂ ಕಾಲವನ್ನು ಕಳೆಯುತ್ತಾರೆ. ತಮ್ಮ ದೇಹಯಾತ್ರೆಗಾಗಿ ಆಗಾಗ ನಗರಗಳಿಗೆ, ಪಟ್ಟಣಗಳಿಗೆ, ಗ್ರಾಮಗಳಿಗೆ ಹೋಗುತ್ತಾರೆ. ಆದರೆ ಒಂದು ಗ್ರಾಮದಲ್ಲಿ ಒಂದು ರಾತ್ರಿ ಮಾತ್ರ ತಂಗುತ್ತಾರೆ. ನಗರಗಳಲ್ಲಿ ಐದು ರಾತ್ರಿಗಳ ಬಳಿಕ ನಿಲ್ಲಲಾರರು. ಅಂತಹ ಗ್ರಾಮ, ನಗರಗಳಿಗೆ

ಹೋದಾಗಲೂ ಪ್ರಾಣಧಾರಣೆಗೆ ಮಾತ್ರ ಸ್ವಕರ್ಮಗಳಲ್ಲಿ ನಿರತರಾದ ಶುದ್ಧರಾದ ಬ್ರಾಹ್ಮಣರ ಮನೆಗೆ ಭಿಕ್ಷೆಗಾಗಿ ಹೋಗಬೇಕು. ಭಿಕ್ಷೆಗೆ ಹೋದಾಗಲೂ ತಾವಾಗಿಯೇ ಬಾಯ್ಬಿಟ್ಟು ಯಾವುದನ್ನೂ ಕೇಳದೆ ಅವರವರು ಇಷ್ಟಪಟ್ಟು ತಮ್ಮ ಪಾತ್ರೆಗೆ ತಂದು ಹಾಕಿದ ಭಿಕ್ಷೆಯನ್ನು ಸ್ವೀಕರಿಸಬೇಕು. ಕಾಮ-ಕ್ರೋಧ-ಲೋಭ-ಮೋಹ-ಕಾರ್ಪಣ್ಯ-ಡಂಭ- ನಿಂದೆ-ಅಭಿಮಾನ-ಹಿಂಸೆ ಎಂಬ ಈ ದುರ್ಗುಣಗಳನ್ನೆಲ್ಲಾ ಬಿಟ್ಟಿರಬೇಕು. ಈ ವಿಷಯದಲ್ಲಿ ಶ್ಲೋಕಗಳಿವೆ.

ಭವತಿ ಚಾತ್ರ ಶ್ಲೋಕಃ
ಅಭಯಂ ಸರ್ವಭೂತೇಭ್ಯೋ ದತ್ತ್ವಾ ಚರತಿ ಯೋ ಮುನಿಃ ।
ನ ತಸ್ಯ ಸರ್ವಭೂತೇಭ್ಯೋ ಭಯಮುತ್ಪದ್ಯತೇ ಕ್ವಚಿತ್ ॥ ೪ ॥

ಯಾವ ಮುನಿಯು ಎಲ್ಲಾ ಪ್ರಾಣಿಗಳಿಗೂ ಭಯವಿಲ್ಲದಂತೆ ನಡೆಯುತ್ತಿರುವನೋ ಅವನಿಗೆ ಯಾವ ಪ್ರಾಣಿಯಿಂದಲೂ, ಎಲ್ಲಿಯೂ, ಯಾವ ಭಯವೂ ಇರುವುದಿಲ್ಲ.

ಕೃತ್ವಾಗ್ನಿಹೋತ್ರಂ ಸ್ವಶರೀರಸಂಸ್ಥಂ
ಶಾರೀರಮಗ್ನಿಂ ಸ್ವಮುಖೇ ಜುಹೋತಿ ।
ಯೋ ಭೈಕ್ಷಚರ್ಯೋಪಗತೈರ್ಹವಿರ್ಭಿ-
ಶ್ಚಿತಾಗ್ನಿನಾಂ ಸ ವ್ಯತಿಯಾತಿ ಲೋಕಾನ್ ॥ ೫ ॥

ಯಾವ ವಿದ್ವಾಂಸನು ತನ್ನ ದೇಹದಲ್ಲಿರುವ ಅಗ್ನಿಯಲ್ಲಿ ಅಗ್ನಿಹೋತ್ರ ವಿಧಿಯನ್ನು ಆಚರಿಸುತ್ತಾನೋ ಎಂದರೆ ಅಗ್ನಿಯಲ್ಲಿ ಬೇಡಿತಂದ ಭೈಕ್ಷ್ಯವೆಂಬ ಹವಿಸ್ಸನ್ನು ತನ್ನ ಬಾಯಿಯ ಮೂಲಕ ಹೋಮ ಮಾಡುತ್ತಾನೋ ಅದರ ಫಲದಿಂದ ಪುಣ್ಯ ಲೋಕಗಳನ್ನು ಹೊಂದುತ್ತಾನೆ.

ಮೋಕ್ಷಾಶ್ರಮಂ ಯಃ ಕುರುತೇ ಯಥೋಕ್ತಂ
ಶುಚಿಃ ಸುಸಂಕಲ್ಪಿತಬುದ್ಧಿಯುಕ್ತಃ ।
ಅನಿಂಧನಂ ಜ್ಯೋತಿರಿವ ಪ್ರಶಾಂತಂ
ಸ ಬ್ರಹ್ಮಲೋಕಂ ಶ್ರಯತೇ ದ್ವಿಜಾತಿಃ ॥ ೬ ॥

ಯಾವ ದ್ವಿಜನು ಶುಚಿಯಾಗಿ ಮನಸ್ಸಿನಲ್ಲಿ ಯಾವ ಆಸೆಗಳನ್ನು ಇಟ್ಟುಕೊಳ್ಳದೆ ಬುದ್ಧಿಯಿಂದ ಇಂಧನವಿಲ್ಲದ ಬೆಂಕಿಯಂತೆ ಶಾಂತನಾಗಿ ಮೋಕ್ಷಸಾಧನವನ್ನು ಅನುಷ್ಠಾನ ಮಾಡುತ್ತಾನೋ ಅವನು ಬ್ರಹ್ಮಲೋಕವನ್ನು ಹೊಂದುತ್ತಾನೆ.

ಭರದ್ವಾಜಃ

ಅಸ್ಮಾಲ್ಲೋಕಾತ್ ಪರೋ ಲೋಕಃ ಶ್ರೂಯತೇ ನೋಪಲಭ್ಯತೇ ।
ತಮಹಂ ಜ್ಞಾತುಮಿಚ್ಛಾಮಿ ತದ್ಭವಾನ್ವಕ್ತುಮರ್ಹತಿ ॥ ೭ ॥

ಭರದ್ವಾಜ– ಮಹರ್ಷಿಗಳೇ, ಈ ಲೋಕದಿಂದ ಆಚೆಗೆ ಬೇರೊಂದು ಪುಣ್ಯಲೋಕ ಇರುವುದಾಗಿ ಕೇಳಿದ್ದೇನೆ. ಆದರೆ ಅದನ್ನು ನೋಡಲಾರೆವು. ಅದರ ವಿಚಾರವೇನೆಂದು ನೀವು ನನಗೆ ತಿಳಿಸಬೇಕು.

ಭೃಗುಃ

ಉತ್ತರೇ ಹಿಮವತಾಪ್ಯರ್ದ್ವೇ ಪುಣ್ಯೇ ಸರ್ವಗುಣಾನ್ವಿತೇ ।
ಪುಣ್ಯಃ ಕ್ಷೇಮ್ಯಶ್ಚ ಕಾಮ್ಯಶ್ಚ ಸ ವರೋ ಲೋಕ ಉಚ್ಯತೇ ॥ ೮ ॥

ಭೃಗು– ಭರದ್ವಾಜರೇ, ಈ ನಿನ್ನ ಅಭಿಪ್ರಾಯವು ವಸ್ತುಸ್ಥಿತಿಯಾಗಿದೆ. ಇಲ್ಲಿಗೆ ಉತ್ತರದಲ್ಲಿರುವ ಹಿಮವಂತ ಪರ್ವತದಿಂದ ಆಚೆಗೆ ಪುಣ್ಯಕರವೂ, ಸಮಸ್ತ ಗುಣಗಳಿಂದ ಕೂಡಿದುದೂ ಆದ ಪ್ರದೇಶವಿದೆ. ಅದು ಪವಿತ್ರವೂ, ಕ್ಷೇಮಕರವೂ, ಎಲ್ಲ ಸಾಧಕರಿಂದಲೂ ಅಪೇಕ್ಷಿಸುವ ಪ್ರದೇಶವಾಗಿದೆ. ಅದನ್ನೇ ಉತ್ತಮವಾದ ಲೋಕ ಎನ್ನುತ್ತಾರೆ.

ತತ್ರ ಹ್ಯಪಾಪಕರ್ಮಾಣಃ ಶುಚಯೋಽತ್ಯಂತನಿರ್ಮಲಾಃ ।
ಲೋಭಮೋಹಪರಿತ್ಯಕ್ತಾ ಮಾನವಾ ನಿರುಪದ್ರವಾಃ ॥ ೯ ॥

ಅಲ್ಲಿ ಮನುಷ್ಯರು ಪಾಪಕರ್ಮಗಳ ಸಂಬಂಧವಿಲ್ಲದೆ ಶುದ್ಧರಾಗಿ ನಿರ್ಮಲ-ಚಿತ್ತರಾಗಿ ಇರುತ್ತಾರೆ. ಲೋಭ-ಮೋಹಗಳಿಂದ ಮುಕ್ತರಾಗಿ, ಯಾವ ಭೂತಗಳಿಗೂ ಉಪದ್ರವಕಾರಿಗಳಾಗದೆ ಇರುತ್ತಾರೆ.

ಸ ಸ್ವರ್ಗಸದೃಶೋ ದೇಶಸ್ತತ್ರ ಹ್ಯುಕ್ತಾಃ ಶುಭಾ ಗುಣಾಃ ।
ಕಾಲೇ ಮೃತ್ಯುಃ ಪ್ರಭವತಿ ಸ್ಪೃಶಂತಿ ವ್ಯಾಧಯೋ ನ ಚ ॥ ೧೦ ॥

ಆ ಲೋಕವು ಸ್ವರ್ಗಸದೃಶವಾದ ಶುಭಗುಣಗಳಿಂದ ಕೂಡಿದ ದೇಶವಾಗಿದೆ. ಮೃತ್ಯುವೆಂಬುದು ಅಕಾಲದಲ್ಲಿ ಬರುವುದಿಲ್ಲ. ವ್ಯಾಧಿಗಳು ಅಲ್ಲಿರುವ ವ್ಯಕ್ತಿಗಳನ್ನು ಮುಟ್ಟುವುದಿಲ್ಲ.

ನ ಲೋಭಃ ಪರದಾರೇಷು ಸ್ವದಾರನಿರತೋ ಜನಃ ।
ನ ಚಾನ್ಯೋನ್ಯವಧಸ್ತತ್ರ ದ್ರವ್ಯೇಷು ನ ಚ ವಿಸ್ಮಯಃ ।
ಪರೋಕ್ಷಧರ್ಮೋ ನೈವಾಸ್ತಿ ಸಂದೇಹೋ ನಾಪಿ ಜಾಯತೇ ॥ ೧೧ ॥

ಅಲ್ಲಿನ ಜನರು ತಮ್ಮ ತಮ್ಮ ಪತ್ನಿಯರಲ್ಲಿ ದೃಢವಾದ ಪ್ರೇಮವುಳ್ಳವರು. ಇತರ ಸ್ತ್ರೀಯರನ್ನು ಕಣ್ಣೆತ್ತಿಯೂ ನೋಡುವುದಿಲ್ಲ. ಅಲ್ಲಿ ಒಬ್ಬರು ಇನ್ನೊಬ್ಬರನ್ನು ಘಾಸಿಸುವುದು, ಒಬ್ಬರ ಸ್ವತ್ತಿಗೆ ಇನ್ನೊಬ್ಬರು ಅಪೇಕ್ಷೆ ಪಡುವುದು ಮುಂತಾದ ದೋಷಗಳನ್ನು ಹೊಂದಿರುವುದಿಲ್ಲ. ಅಲ್ಲಿ ಅಧರ್ಮದ ಪ್ರಸಕ್ತಿಯೇ ಇಲ್ಲ. ಯಾವ ಸಂಶಯಗಳಿಗೂ ಅವಕಾಶವಿಲ್ಲ.

ಕೃತಸ್ಯ ತು ಫಲಂ ತತ್ರ ಪ್ರತ್ಯಕ್ಷಮುಪಲಭ್ಯತೇ ।
ಶಯ್ಯಾಯಾನಾಸನೋಪೇತಾಃ ಪ್ರಾಸಾದಭವನಾಶ್ರಯಾಃ ॥
ಸರ್ವಕಾಮೈರ್ವೃತಾಃ ಕೇಚಿದ್ಧೇಮಾಭರಣಭೂಷಿತಾಃ ॥ ೧೨ ॥

ಅಲ್ಲಿ ನಡೆಸುವ ಕರ್ಮಗಳಿಗೆ ಫಲವು ಪ್ರತ್ಯಕ್ಷವಾಗಿಯೇ ಲಭಿಸುತ್ತದೆ. ಕೆಲವರು ಉತ್ತಮವಾಹನಗಳಿಂದಲೂ, ಆಸನಗಳಿಂದಲೂ, ದಿವ್ಯ ಆಹಾರಗಳಿಂದಲೂ ಭೋಗವನ್ನು ಹೊಂದುತ್ತಾ ಉಪ್ಪರಿಗೆಯ ಭವನಗಳಲ್ಲಿ ಸರ್ವಕಾಮಗಳಿಂದ ಸಮೃದ್ಧಿಯನ್ನು ಪಡೆದು ಹೇಮಾಭರಣಭೂಷಿತರಾಗಿ ಶೋಭಿಸುತ್ತಾರೆ.

ಪ್ರಾಣಧಾರಣಮಾತ್ರಂ ತು ಕೇಷಾಂಚಿದುಪಪದ್ಯತೇ ।
ಶ್ರಮೇಣ ಮಹತಾ ಕೇಚಿತ್ಕುರ್ವಂತಿ ಪ್ರಾಣಧಾರಣಮ್ ॥ ೧೩ ॥

ಇನ್ನು ಕೆಲವರು ಪ್ರಾಣಧಾರಣೆಗೆ ಸಾಕಾಗುವಷ್ಟು ಆಹಾರವನ್ನು ಮಾತ್ರ ಸ್ವೀಕರಿಸುವುದೂ ಇದೆ. ಕೆಲವರು ಬಹಳ ಶ್ರಮಪಟ್ಟು ಪ್ರಾಣಧಾರಣೆ ಎಂಬ ಯೋಗವನ್ನು ಆಚರಿಸುತ್ತಿರುತ್ತಾರೆ.

ಇಹ ಧರ್ಮಪರಾಃ ಕೇಚಿತ್ಕೇಚಿನ್ನೈಕೃತಿಕಾ ನರಾಃ ।
ಸುಖಿತಾ ದುಃಖಿತಾಃ ಕೇಚಿನ್ನಿರ್ಧನಾ ಧನಿನೋಽಪರೇ ॥ ೧೪ ॥

ಈ ಲೋಕದಲ್ಲಿಯೂ ಕೆಲವರು ಧರ್ಮಪರಾಯಣರು ಇದ್ದಾರೆ, ಕೆಲವರು ವಂಚಕರೂ ಇದ್ದಾರೆ. ಸುಖಿಗಳೂ ಇದ್ದಾರೆ, ದುಃಖಿಗಳೂ ಇದ್ದಾರೆ. ಧನಿಗಳಿದ್ದಾರೆ, ದರಿದ್ರರೂ ಇದ್ದಾರೆ.

ಇಹ ಶ್ರಮೋ ಭಯಂ ಮೋಹಃ ಕ್ಷುಧಾ ತೀವ್ರಾ ಚ ಜಾಯತೇ ।
ಲೋಭಶ್ಚಾರ್ಥಕೃತೋ ನೃಣಾಂ ಯೇನ ಮುಹ್ಯಂತಿ ಪಂಡಿತಾಃ ॥ ೧೫ ॥

ಇಲ್ಲಿ ಶ್ರಮ, ಭಯ, ಮೋಹ, ಬಳಲುವಿಕೆ, ಹಸಿವು, ನಿದ್ರೆ ಇವೆಲ್ಲ ಮನುಷ್ಯರನ್ನು ಪೀಡಿಸುತ್ತವೆ. ಇಲ್ಲಿನ ಮನುಷ್ಯರಿಗೆ ಹಣದ ಆಸೆಯು ಪ್ರಬಲವಾಗಿರುತ್ತದೆ. ಈ ಹಣದ ಆಸೆಯು ಪಂಡಿತರ ಬುದ್ಧಿಯನ್ನು ಕೆಡಿಸುತ್ತದೆ.

ಇಹ ಚಿಂತಾ ಬಹುವಿಧಾ ಧರ್ಮಾಧರ್ಮಸ್ಯ ಕರ್ಮಣಃ ।
ಯಸ್ತದ್ವೇದೋಭಯಂ ಪ್ರಾಜ್ಞಃ ಪಾಪ್ಮನಾ ನ ಸ ಲಿಪ್ಯತೇ ॥ ೧೬ ॥

ಇಲ್ಲಿ ಧರ್ಮಪರರೂ, ಅಧರ್ಮರತರೂ ಇಬ್ಬರೂ ಸೇರಿರುತ್ತಾರೆ. ಅವರ ಪ್ರವೃತ್ತಿಗಳು ವಿಧವಿಧವಾಗಿರುತ್ತವೆ. ಈ ಎರಡು ಬಗೆಯ ಅಭಿಪ್ರಾಯಗಳನ್ನು ವಿಮರ್ಶಿಸಿ ಪ್ರಾಜ್ಞರು ಪಾಪಕ್ಕೆ ತುತ್ತಾಗುವಂತಹ ಪ್ರಸಂಗವು ಬರುವುದಿಲ್ಲ.

ಸೋಪಧಂ ನಿಕೃತಿಃ ಸ್ತೇಯಂ ಪರಿವಾದೋಽಭ್ಯಸೂಯತಾ ।
ಪರೋಪಘಾತೋ ಹಿಂಸಾ ಚ ಪೈಶುನ್ಯಮನೃತಂ ತಥಾ ॥ ೧೭ ॥

ಏತಾನಾಸೇವತೇ ಯಸ್ತು ತಪಸ್ತಸ್ಯ ಪ್ರಹೀಯತೇ ।
ಯಸ್ತ್ವೇತಾನ್ನಾಚರೇದ್ ವಿದ್ವಾಂಸ್ತಪಸ್ತಸ್ಯಾಭಿವರ್ಧತೇ ॥ ೧೮ ॥

ಮೋಸ, ಕಳ್ಳತನ, ನಿಂದೆ, ಅಸೂಯೆ, ಪರಪೀಡೆ, ಹಿಂಸೆ, ಚಾಡಿಕೋರತನ, ಅಸತ್ಯ ಈ ದುರ್ಗುಣಗಳನ್ನು ಯಾರು ಸೇವಿಸುತ್ತಾರೋ ಅವರು ಮಾಡಿದ ತಪಸ್ಸು ನಿರರ್ಥಕವಾಗುತ್ತದೆ. ಇವೆಲ್ಲವನ್ನೂ ಬಿಟ್ಟು ಧೀಮಂತನಾದವನ ತಪಸ್ಸು ಮೇಲೆ ಮೇಲೆ ಅಭಿವೃದ್ಧಿಯನ್ನು ಹೊಂದುತ್ತದೆ.

ಕರ್ಮಭೂಮಿರಿಯಂ ಲೋಕ ಇಹ ಕೃತ್ವಾ ಶುಭಾಶುಭಮ್ ।
ಶುಭೈಃ ಶುಭಮವಾಪ್ನೋತಿ ಕೃತ್ವಾಶುಭಮತೋಽನ್ಯಥಾ ॥ ೧೯ ॥

ನಾವು ವಾಸ ಮಾಡುವ ಈ ಲೋಕವು ಕರ್ಮಭೂಮಿ ಎನಿಸುತ್ತದೆ. ಈ ಲೋಕದಲ್ಲಿ ಧರ್ಮಕಾರ್ಯಗಳನ್ನು, ಅಧರ್ಮಕಾರ್ಯಗಳನ್ನು ಆಚರಿಸುವಾಗ ಬಹುವಿಧವಾದ ಪುಣ್ಯ-ಪಾಪಗಳ ಸಂಬಂಧವಿದೆ. ಶುಭಕರ್ಮಗಳಿಂದ ಮಂಗಳವನ್ನು, ಅಶುಭಕರ್ಮಗಳಿಂದ ಅಮಂಗಳವನ್ನು ಹೊಂದುತ್ತಾನೆ.

ಇಹ ಪ್ರಜಾಪತಿಃ ಪೂರ್ವಂ ದೇವಾಃ ಸರ್ಷಿಗಣಾಸ್ತಥಾ ।
ಇಷ್ಟ್ವೇಷ್ಟತಪಸಃ ಪೂತಾ ಬ್ರಹ್ಮಲೋಕಮುಪಾಶ್ರಿತಾಃ ॥ ೨೦ ॥

ಪ್ರಜಾಪತಿ ಎನಿಸಿದ ಬ್ರಹ್ಮನು, ದೇವತೆಗಳು, ಮಹರ್ಷಿಗಳು ಇಲ್ಲಿಯೇ ಹಿಂದೆ ಯಜ್ಞಗಳನ್ನು, ತಪಸ್ಸುಗಳನ್ನು ನಡೆಸಿ ಬ್ರಹ್ಮಲೋಕವನ್ನು ಹೊಂದಿರುತ್ತಾರೆ.

ಉತ್ತರಃ ಪೃಥಿವೀಭಾಗಃ ಸರ್ವಪುಣ್ಯತಮಃ ಶುಭಃ ।
ಇಹತ್ಯಾಸ್ತತ್ರ ಜಾಯಂತೇ ಯೇ ವೈ ಪುಣ್ಯಕೃತೋ ಜನಾಃ ॥ ೨೧ ॥

ಈ ಭೂಮಿಯ ಉತ್ತರಭಾಗವು ಅತ್ಯಂತ ಶುಭಕರವಾಗಿ ಎಲ್ಲ ರೀತಿಯಲ್ಲೂ ಪುಣ್ಯತಮ ಎನಿಸಿದೆ. ಎಲ್ಲಕ್ಕಿಂತಲೂ ಪುಣ್ಯಮಾಡಿದವರು ಅದರ ಫಲದಿಂದ ಆ ಪ್ರದೇಶದಲ್ಲಿ ಹುಟ್ಟುತ್ತಾರೆ. ಈ ಪುಣ್ಯಕರ್ಮದಿಂದ ಪುಣ್ಯಭೂಮಿಯಲ್ಲಿ ಉತ್ತತ್ತಿಯನ್ನು ಹೊಂದುತ್ತಾರೆ.

ಅಸತ್ಕರ್ಮಾಣಿ ಕುರ್ವಂತಸ್ತಿರ್ಯಗ್ಯೋನಿಷು ಚಾಪರೇ ।
ಕ್ಷೀಣಾಯುಷಸ್ತಥೈವಾನ್ಯೇ ನಶ್ಯಂತಿ ಪೃಥಿವೀತಲೇ ॥ ೨೨ ॥

ಇಲ್ಲಿ ಅಸತ್ಕರ್ಮಗಳನ್ನು ನಡೆಸಿದವರು ತಿರ್ಯಗ್ಯೋನಿಗಳಲ್ಲಿ (ನೀಚಜೀವಿ) ಹುಟ್ಟುತ್ತಾರೆ. ಕೆಲವರು ಅಲ್ಪಾಯುಷಿಗಳಾಗಿ ನಾಶ ಹೊಂದುತ್ತಾರೆ.

ಅನ್ಯೋನ್ಯಭಕ್ಷಣೇ ಸಕ್ತಾ ಲೋಭಮೋಹಸಮನ್ವಿತಾಃ ।
ಇಹೈವ ಪರಿವರ್ತಂತೇ ನ ತೇ ಯಾಂತ್ಯುತ್ತರಾಂ ದಿಶಮ್ ॥ ೨೩ ॥

ಇಂತಹ ಪಾಪಜನ್ಮವುಳ್ಳವರು ಒಬ್ಬರನ್ನೊಬ್ಬರು ಲೋಭ-ಮೋಹಗಳಿಂದ ಕೂಡಿದವರಾಗಿ ಹೊಡೆದು ತಿನ್ನುವುದರಲ್ಲಿಯೇ ಆಸಕ್ತರಾಗಿರುತ್ತಾರೆ. ಇಲ್ಲಿಯೇ ಪುನಃ

ಪುನಃ ಜನನ-ಮರಣಗಳೆಂಬ ಅಲೆಯಲ್ಲಿ ತೇಲುತ್ತಿರುತ್ತಾರೆ. ಇವರೆಂದಿಗೂ ಉತ್ತರ ದಿಕ್ಕಿಗೆ ಹೋಗಲು ಸಾಧ್ಯವಿಲ್ಲ.

ಯೇ ಗುರೂನುಪಸೇವಂತೇ ನಿಯತಾ ಬ್ರಹ್ಮಚಾರಿಣಃ ।
ಪಂಥಾನಂ ಸರ್ವಲೋಕಾನಾಂ ತೇ ಜಾನಂತಿ ಮನೀಷಿಣಃ ॥ ೨೪ ॥

ಯಾರು ನಿಯತಬ್ರಹ್ಮಚಾರಿಗಳಾಗಿ ಗುರುಗಳನ್ನು ಸೇವಿಸುತ್ತಾರೋ ಅಂತಹ ಜ್ಞಾನಿಗಳು ಸಮಸ್ತ ಲೋಕದ ಜ್ಞಾನಿಗಳನ್ನು ಬಲ್ಲವರಾಗಿರುತ್ತಾರೆ.

ಇತ್ಯುಕ್ತೋಽಯಂ ಮಯಾ ಧರ್ಮಃ ಸಂಕ್ಷೇಪಾದ್ ಬ್ರಹ್ಮನಿರ್ಮಿತಃ ।
ಧರ್ಮಾಧರ್ಮೌ ಹಿ ಲೋಕಸ್ಯ ಯೋ ವೈ ವೇತ್ತಿ ಸ ಬುದ್ಧಿಮಾನ್ ॥

ಬ್ರಹ್ಮನಿಂದ ವಿಧಿಸಲ್ಪಟ್ಟ ಧರ್ಮಗಳನ್ನು ನಿಮಗೆ ಸಂಕ್ಷಿಪ್ತವಾಗಿ ವಿವರಿಸಿದ್ದೇನೆ. ಧರ್ಮಾಧರ್ಮಗಳನ್ನು ಈ ಲೋಕದಲ್ಲಿ ತಿಳಿದವನೇ ವಿದ್ವಾಂಸನೆನಿಸುತ್ತಾನೆ.

ಭೀಷ್ಮಃ

ಇತ್ಯುಕ್ತೋ ಭೃಗುಣಾ ರಾಜನ್ ಭರದ್ವಾಜಃ ಪ್ರತಾಪವಾನ್ ।
ಭೃಗುಂ ಪರಮಧರ್ಮಾತ್ಮಾ ವಿಸ್ಮಿತಃ ಪ್ರತ್ಯಪೂಜಯತ್ ॥ ೨೬ ॥

ಭೀಷ್ಮ– ಭೃಗುವಿನ ಮಾತನ್ನು ಕೇಳಿ ಮಹಾತಪಸ್ವಿಯಾದ ಭರದ್ವಾಜನು ವಿಸ್ಮಿತನಾದನು. ಧರ್ಮರಾಜನೇ, ಭರದ್ವಾಜರು ಭೃಗು ಋಷಿಗಳನ್ನು ಬಹಳವಾಗಿ ಪೂಜಿಸಿದರು.

ಏಷ ತೇ ಪ್ರಭವೋ ರಾಜನ್ ಜಗತಃ ಸಂಪ್ರಕೀರ್ತಿತಃ ।
ನಿಖಿಲೇನ ಮಹಾಪ್ರಾಜ್ಞ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೨೭ ॥

ಭೃಗುಋಷಿಗಳು ಹೇಳಿದ ಈ ಪ್ರಪಂಚದ ಉತ್ಪತ್ತಿಪ್ರಕಾರವನ್ನು ನಾನು ವಿವರಿಸಿದ್ದೇನೆ. ಇನ್ನೂ ಕೇಳಬೇಕಾದ ಅಂಶಗಳೇನಾದರೂ ಇದ್ದಲ್ಲಿ ಕೇಳಬಹುದು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಅಷ್ಟಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಹದಿನೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಹತ್ತೊಂಬತ್ತನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಸದಾಚಾರವನ್ನು ನಿರೂಪಿಸಿದುದು

ಯುಧಿಷ್ಠಿರಃ

ಆಚಾರಸ್ಯ ವಿಧಿಂ ತಾತ ಪ್ರೋಚ್ಯಮಾನಂ ತ್ವಯಾನಘ ।
ಶ್ರೋತುಮಿಚ್ಛಾಮಿ ಧರ್ಮಜ್ಞ ಸರ್ವಜ್ಞೋ ಹ್ಯಸಿ ಮೇ ಮತಃ ॥ ೧ ॥

ಯುಧಿಷ್ಠಿರ– ಆಗ ಧರ್ಮರಾಜನು ಭೀಷ್ಮನನ್ನು ಕುರಿತು 'ತಾತಾ! ನೀನು ಸರ್ವಜ್ಞನು. ಸಕಲಧರ್ಮಸೂತ್ರಗಳನ್ನೂ ತಿಳಿದವನು. ಆದುದರಿಂದ ಮನುಷ್ಯನ ಸದಾಚಾರಗಳನ್ನು ಕುರಿತು ನನಗೆ ವಿವರಿಸಬೇಕು'.

ಭೀಷ್ಮಃ

ದುರಾಚಾರಾ ದುರ್ವಿಚೇಷ್ಟಾ ದುಷ್ಪಜ್ಞಾಃ ಪ್ರಿಯಸಾಹಸಾಃ ।
ಅಸಂತೋ ಹ್ಯಭಿವಿಖ್ಯಾತಾಃ ಸಂತಶ್ಚಾಚಾರಲಕ್ಷಣಾಃ ॥ ೨ ॥

ಭೀಷ್ಮ– ಯುಧಿಷ್ಠಿರಾ! ಕೇಳು. ಲೋಕದಲ್ಲಿ ಕೆಟ್ಟನಡತೆ, ಕೆಟ್ಟಕಾರ್ಯಗಳು, ಕೆಟ್ಟಬುದ್ಧಿ, ಸಾಸಹಕೃತ್ಯಗಳಲ್ಲಿಯೇ ಪ್ರೀತಿ, ಇವು ಯಾರಲ್ಲಿ ಕಾಣುವುವೋ ಅವರು ಅಸತ್ತುಗಳು. ಸತ್ಪುರುಷರಿಗಾದರೋ ಸದಾಚಾರಗಳೇ ಲಕ್ಷಣಗಳು. ಆ ಸದಾಚಾರಗಳು ಎಂತಹುದೆಂಬುದನ್ನು ತಿಳಿಸುವೆನು, ಕೇಳು.

ಪುರೀಷಂ ಯದಿ ವಾ ಮೂತ್ರಂ ಯೇ ನ ಕುರ್ವಂತಿ ಮಾನವಾಃ ।
ರಾಜಮಾರ್ಗೇ ಗವಾಂ ಮಧ್ಯೇ ಧಾನ್ಯಮಧ್ಯೇ ಚ ತೇ ಶುಭಾಃ ॥ ೩ ॥

ರಾಜಮಾರ್ಗಗಳಲ್ಲಿ, ದನದ ಕೊಟ್ಟಿಗೆಗಳಲ್ಲಿ, ಧಾನ್ಯಗಳು ಪಕ್ವವಾಗಿರುವ ಹೊಲ ಗದ್ದೆಗಳಲ್ಲಿ, ದೇವಾಲಯಗಳಲ್ಲಿ, ಅಗ್ನಿಹೋತ್ರಶಾಲೆಗಳಲ್ಲಿ, ಜಲಾಶಯದ ತೀರ ಪ್ರದೇಶಗಳಲ್ಲಿ ಮೂತ್ರ, ಮಲ, ವಿಸರ್ಜನೆಗಳನ್ನು ಮಾಡದವರು ಸತ್ಪುರುಷರು.

ಶೌಚಮಾವಶ್ಯಕಂ ಕೃತ್ವಾ ದೇವತಾನಾಂ ಚ ತರ್ಪಣಮ್ ।
ಧರ್ಮಮಾಹುರ್ಮನುಷ್ಯಾಣಾಮುಪಸ್ಪೃಶ್ಯ ನದೀಂ ತರೇತ್ ॥ ೪ ॥

ಪ್ರತಿದಿನವೂ ಅವಶ್ಯಕವಾದ ಶುದ್ಧಿಕಾರ್ಯವನ್ನು ಮಾಡಿಕೊಂಡು ಎಂದರೆ, ಸ್ನಾನಾಚಮನಗಳನ್ನು ಮಾಡಿ ದೇವತೆಗಳನ್ನರ್ಚಿಸಬೇಕು. ಪುಣ್ಯನದಿಯಲ್ಲಿಳಿದು ಸ್ನಾನ

ಮಾಡುವುದಕ್ಕೆ ಮೊದಲು ಶುದ್ಧಾಚಮನವನ್ನು ಮಾಡಬೇಕು. ಇವು ಮನುಷ್ಯನಿಗೆ ಸದ್ಧರ್ಮವು.

ಸೂರ್ಯಂ ಸದೋಪತಿಷ್ಠೇತ ನ ಸ್ವಪ್ಯಾದ್ ಭಾಸ್ಕರೋದಯೇ ।
ಸಾಯಂ ಪ್ರಾತರ್ಜಪನ್ ಸಂಧ್ಯಾಂ ತಿಷ್ಠೇತ್ ಪೂರ್ವಾಂ ತಥಾಪರಾಮ್ ॥

ಯಾವಾಗಲೂ ತಪ್ಪದೆ ಸೂರ್ಯೋಪಾಸನೆ ಮಾಡಬೇಕು. ಸೂರ್ಯೋದಯ ಕಾಲದಲ್ಲಿ ನಿದ್ರಿಸುತ್ತಿರಬಾರದು. ಬೆಳಗಿನ ಹೊತ್ತು ಪೂರ್ವಾಭಿಮುಖವಾಗಿಯೂ, ಸಂಜೆಯಲ್ಲಿ ಪಶ್ಚಿಮಾಭಿಮುಖವಾಗಿಯೂ ಕುಳಿತು ಗಾಯತ್ರಿಯನ್ನು ಜಪಿಸಬೇಕು.

ಪಂಚಾದ್ಯೋ ಭೋಜನಂ ಕುರ್ಯಾತ್ ಪ್ರಾಙ್ಮುಖೋ ಮೌನಮಾಸ್ಥಿತಃ ।
ನ ನಿಂದೇದನ್ನಭಕ್ಷ್ಯಾಂಶ್ಚ ಸ್ವಾದ್ವಸ್ವಾದು ಚ ಭಕ್ಷಯೇತ್ ॥ ೬ ॥

ಕೈಗಳು, ಕಾಲುಗಳು, ಮುಖವೆಂಬ ಐದು ಅವಯವಗಳನ್ನು ಶುದ್ಧವಾಗಿ ತೊಳೆದುಕೊಂಡು, ಪೂರ್ವಾಭಿಮುಖವಾಗಿ ಕುಳಿತು ಮೌನದಿಂದ ಭೋಜನ ಮಾಡಬೇಕು. ತಾನು ಭುಂಜಿಸ್ತಕ್ಕ ಅನ್ನವನ್ನೂ, ಭಕ್ಷ್ಯವನ್ನೂ, ನಿಂದಿಸದೆ, ಅವೇ ತನಗೆ ಅತ್ಯಂತ ರುಚಿಕರಗಳೆಂದು ಭಾವಿಸಿ ಭುಂಜಿಸಬೇಕು.

ನಾರ್ದ್ರಪಾದಃ ಸಮುತ್ತಿಷ್ಠೇನ್ನಾರ್ದ್ರಪಾಣಿಃ ಸ್ವಪೇನ್ನಿಶಿ ।
ದೇವರ್ಷಿನಾರದಪ್ರೋಕ್ತಮೇತದಾಚಾರಲಕ್ಷಣಮ್ ॥ ೭ ॥

ಮಲಗಿದ್ದಾಗ ಯಾರಾದರೂ ಕಾಲುಗಳಿಗೆ ನೀರು ಹಾಕಿದಲ್ಲಿ ಒದ್ದೆ ಕಾಲಿನಿಂದ ಏಳಬಾರದು. ನೆನೆದ ಕೈಗಳಿಂದ ರಾತ್ರಿಯಲ್ಲಿ ನಿದ್ರಿಸಬಾರದು. ದೇವರ್ಷಿಯಾದ ನಾರದನು, ಆಚಾರಲಕ್ಷಣಗಳನ್ನು, ಹೀಗೆಂದು ಹೇಳಿರುವನು.

ಶುಚಿಕಾಮಮನಾಹಂ ಚ ದೇವಗೋಷ್ಠಂ ಚತುಷ್ಪಥಮ್ ।
ಬ್ರಾಹ್ಮಣಂ ಧಾರ್ಮಿಕಂ ಚೈವ ನಿತ್ಯಂ ಕುರ್ಯಾತ್ ಪ್ರದಕ್ಷಿಣಮ್ ॥ ೮ ॥

ಪ್ರತಿನಿತ್ಯವೂ ಹೋಮಾಗ್ನಿಯನ್ನೂ, ಎತ್ತನ್ನೂ, ದೇವಾಲಯಗಳನ್ನೂ, ದನಗಳ ಮುಂದೆಯನ್ನೂ, ಚತುಷ್ಪಥವನ್ನೂ, ಧಾರ್ಮಿಕನಾದ ಬ್ರಾಹ್ಮಣನನ್ನೂ ಪ್ರದಕ್ಷಿಣ ಮಾಡಬೇಕು.

ಹತ್ತೊಂಬತ್ತನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಸದಾಚಾರವನ್ನು ನಿರೂಪಿಸಿದುದು

ಯುಧಿಷ್ಠಿರಃ

ಆಚಾರಸ್ಯ ವಿಧಿಂ ತಾತ ಪ್ರೋಚ್ಯಮಾನಂ ತ್ವಯಾನಘ ।
ಶ್ರೋತುಮಿಚ್ಛಾಮಿ ಧರ್ಮಜ್ಞ ಸರ್ವಜ್ಞೋ ಹ್ಯಸಿ ಮೇ ಮತಃ ॥ ೧ ॥

ಯುಧಿಷ್ಠಿರ– ಆಗ ಧರ್ಮರಾಜನು ಭೀಷ್ಮನನ್ನು ಕುರಿತು 'ತಾತಾ! ನೀನು ಸರ್ವಜ್ಞನು. ಸಕಲಧರ್ಮಸೂತ್ರಗಳನ್ನೂ ತಿಳಿದವನು. ಆದುದರಿಂದ ಮನುಷ್ಯನ ಸದಾಚಾರಗಳನ್ನು ಕುರಿತು ನನಗೆ ವಿವರಿಸಬೇಕು'.

ಭೀಷ್ಮಃ

ದುರಾಚಾರಾ ದುರ್ವಿಚೇಷ್ಟಾ ದುಷ್ಪಜ್ಞಾಃ ಪ್ರಿಯಸಾಹಸಾಃ ।
ಅಸಂತೋ ಹ್ಯಭಿವಿಖ್ಯಾತಾಃ ಸಂತಶ್ಚಾಚಾರಲಕ್ಷಣಾಃ ॥ ೨ ॥

ಭೀಷ್ಮ– ಯುಧಿಷ್ಠಿರಾ! ಕೇಳು. ಲೋಕದಲ್ಲಿ ಕೆಟ್ಟನಡತೆ, ಕೆಟ್ಟಕಾರ್ಯಗಳು, ಕೆಟ್ಟಬುದ್ಧಿ, ಸಾಸಹಕೃತ್ಯಗಳಲ್ಲಿಯೇ ಪ್ರೀತಿ, ಇವು ಯಾರಲ್ಲಿ ಕಾಣುವುವೋ ಅವರು ಅಸತ್ತುಗಳು. ಸತ್ಪುರುಷರಿಗಾದರೋ ಸದಾಚಾರಗಳೇ ಲಕ್ಷಣಗಳು. ಆ ಸದಾಚಾರಗಳು ಎಂತಹುದೆಂಬುದನ್ನು ತಿಳಿಸುವೆನು, ಕೇಳು.

ಪುರೀಷಂ ಯದಿ ವಾ ಮೂತ್ರಂ ಯೇ ನ ಕುರ್ವಂತಿ ಮಾನವಾಃ ।
ರಾಜಮಾರ್ಗೇ ಗವಾಂ ಮಧ್ಯೇ ಧಾನ್ಯಮಧ್ಯೇ ಚ ತೇ ಶುಭಾಃ ॥ ೩ ॥

ರಾಜಮಾರ್ಗಗಳಲ್ಲಿ, ದನದ ಕೊಟ್ಟಿಗೆಗಳಲ್ಲಿ, ಧಾನ್ಯಗಳು ಪಕ್ವವಾಗಿರುವ ಹೊಲ ಗದ್ದೆಗಳಲ್ಲಿ, ದೇವಾಲಯಗಳಲ್ಲಿ, ಅಗ್ನಿಹೋತ್ರಶಾಲೆಗಳಲ್ಲಿ, ಜಲಾಶಯದ ತೀರ ಪ್ರದೇಶಗಳಲ್ಲಿ ಮೂತ್ರ, ಮಲ, ವಿಸರ್ಜನೆಗಳನ್ನು ಮಾಡದವರು ಸತ್ಪುರುಷರು.

ಶೌಚಮಾವಶ್ಯಕಂ ಕೃತ್ವಾ ದೇವತಾನಾಂ ಚ ತರ್ಪಣಮ್ ।
ಧರ್ಮಮಾಹುರ್ಮನುಷ್ಯಾಣಾಮುಪಸ್ಪೃಶ್ಯ ನದೀಂ ತರೇತ್ ॥ ೪ ॥

ಪ್ರತಿದಿನವೂ ಅವಶ್ಯಕವಾದ ಶುದ್ಧಿಕಾರ್ಯವನ್ನು ಮಾಡಿಕೊಂಡು ಎಂದರೆ, ಸ್ನಾನಾಚಮನಗಳನ್ನು ಮಾಡಿ ದೇವತೆಗಳನ್ನರ್ಚಿಸಬೇಕು. ಪುಣ್ಯನದಿಯಲ್ಲಿಳಿದು ಸ್ನಾನ

ಮಾಡುವುದಕ್ಕೆ ಮೊದಲು ಶುದ್ಧಾಚಮನವನ್ನು ಮಾಡಬೇಕು. ಇವು ಮನುಷ್ಯನಿಗೆ ಸದ್ಧರ್ಮವು.

ಸೂರ್ಯಂ ಸದೋಪತಿಷ್ಠೇತ ನ ಸ್ವಪ್ಯಾದ್ ಭಾಸ್ಕರೋದಯೇ ।
ಸಾಯಂ ಪ್ರಾತರ್ಜಪನ್ ಸಂಧ್ಯಾಂ ತಿಷ್ಠೇತ್ ಪೂರ್ವಾಂ ತಥಾಪರಾಮ್ ॥

ಯಾವಾಗಲೂ ತಪ್ಪದೆ ಸೂರ್ಯೋಪಾಸನೆ ಮಾಡಬೇಕು. ಸೂರ್ಯೋದಯ ಕಾಲದಲ್ಲಿ ನಿದ್ರಿಸುತ್ತಿರಬಾರದು. ಬೆಳಗಿನ ಹೊತ್ತು ಪೂರ್ವಾಭಿಮುಖವಾಗಿಯೂ, ಸಂಜೆಯಲ್ಲಿ ಪಶ್ಚಿಮಾಭಿಮುಖವಾಗಿಯೂ ಕುಳಿತು ಗಾಯತ್ರಿಯನ್ನು ಜಪಿಸಬೇಕು.

ಪಂಚಾದ್ಯೋ ಭೋಜನಂ ಕುರ್ಯಾತ್ ಪ್ರಾಙ್ಮುಖೋ ಮೌನಮಾಸ್ಥಿತಃ ।
ನ ನಿಂದೇದನ್ನಭಕ್ಷ್ಯಾಂಶ್ಚ ಸ್ವಾದ್ವಸ್ವಾದು ಚ ಭಕ್ಷಯೇತ್ ॥ ೬ ॥

ಕೈಗಳು, ಕಾಲುಗಳು, ಮುಖವೆಂಬ ಐದು ಅವಯವಗಳನ್ನು ಶುದ್ಧವಾಗಿ ತೊಳೆದುಕೊಂಡು, ಪೂರ್ವಾಭಿಮುಖವಾಗಿ ಕುಳಿತು ಮೌನದಿಂದ ಭೋಜನ ಮಾಡಬೇಕು. ತಾನು ಭುಂಜಿಸ್ತಕ್ಕ ಅನ್ನವನ್ನೂ, ಭಕ್ಷ್ಯವನ್ನೂ, ನಿಂದಿಸದೆ, ಅವೇ ತನಗೆ ಅತ್ಯಂತ ರುಚಿಕರಗಳೆಂದು ಭಾವಿಸಿ ಭುಂಜಿಸಬೇಕು.

ನಾರ್ದ್ರಪಾದಃ ಸಮುತ್ತಿಷ್ಠೇನ್ನಾರ್ದ್ರಪಾಣಿಃ ಸ್ವಪೇನ್ನಿಶಿ ।
ದೇವರ್ಷಿನಾರದಪ್ರೋಕ್ತಮೇತದಾಚಾರಲಕ್ಷಣಮ್ ॥ ೭ ॥

ಮಲಗಿದ್ದಾಗ ಯಾರಾದರೂ ಕಾಲುಗಳಿಗೆ ನೀರು ಹಾಕಿದಲ್ಲಿ ಒದ್ದೆ ಕಾಲಿನಿಂದ ಏಳಬಾರದು. ನೆನೆದ ಕೈಗಳಿಂದ ರಾತ್ರಿಯಲ್ಲಿ ನಿದ್ರಿಸಬಾರದು. ದೇವರ್ಷಿಯಾದ ನಾರದನು, ಆಚಾರಲಕ್ಷಣಗಳನ್ನು, ಹೀಗೆಂದು ಹೇಳಿರುವನು.

ಶುಚಿಕಾಮಮನಾಹಂ ಚ ದೇವಗೋಷ್ಠಂ ಚತುಷ್ಪಥಮ್ ।
ಬ್ರಾಹ್ಮಣಂ ಧಾರ್ಮಿಕಂ ಚೈವ ನಿತ್ಯಂ ಕುರ್ಯಾತ್ ಪ್ರದಕ್ಷಿಣಮ್ ॥ ೮ ॥

ಪ್ರತಿನಿತ್ಯವೂ ಹೋಮಾಗ್ನಿಯನ್ನೂ, ಎತ್ತನ್ನೂ, ದೇವಾಲಯಗಳನ್ನೂ, ದನಗಳ ಮುಂದೆಯನ್ನೂ, ಚತುಷ್ಪಥವನ್ನೂ, ಧಾರ್ಮಿಕನಾದ ಬ್ರಾಹ್ಮಣನನ್ನೂ ಪ್ರದಕ್ಷಿಣ ಮಾಡಬೇಕು.

ಅತಿಥೀನಾಂ ಚ ಸರ್ವೇಷಾಂ ಪ್ರೇಷ್ಯಾಣಾಂ ಸ್ವಜನಸ್ಯ ಚ ।
ಸಾಮಾನ್ಯಂ ಭೋಜನಂ ಭೃತ್ಯೈಃ ಪುರುಷಸ್ಯ ಪ್ರಶಸ್ಯತೇ ॥ ೯ ॥

ಅತಿಥಿಗಳು, ಕೆಲಸಗಾರರು, ಬಂಧುಗಳು ಇವರಿಗೆಲ್ಲ ತನಗೆ ಸಮಾನವಾಗಿಯೇ ಭೋಜನವನ್ನಿಕ್ಕಬೇಕೇ ಹೊರತು ಭೇದವನ್ನು ತೋರಿಸಬಾರದು. ಭೋಜನ ವಿಷಯದಲ್ಲಿ ತಾನು ತನ್ನ ಭೃತ್ಯರಿಗೆ ಸಮಾನವಾಗಿಯೇ ಇರಬೇಕಾದುದು ಮನುಷ್ಯನಿಗೆ ಉತ್ತಮಗುಣವೆಂದು ಗ್ರಹಿಸಲ್ಪಡುವುದು.

ಸಾಯಂ ಪ್ರಾತರ್ಮನುಷ್ಯಾಣಾಮಶನಂ ದೇವನಿರ್ಮಿತಮ್ ।
ನಾಂತರಾ ಭೋಜನಂ ದೃಷ್ಟಮುಪವಾಸೀ ತಥಾ ಭವೇತ್ ॥ ೧೦ ॥

ಮನುಷ್ಯನಿಗೆ ದಿನಕ್ಕೆ ಎರಡುಸಾರಿ ಎಂದರೆ, ಹಗಲು ಮತ್ತು ರಾತ್ರಿ ಈ ಎರಡು ಹೊತ್ತುಗಳಲ್ಲಿ ಮಾತ್ರವೇ ಭೋಜನವು ಯುಕ್ತವೆಂದು ವೇದವಿಧಿಯುಂಟು. ಇದು ಹೊರತು ನಡುವೆ ಭೋಜನವು ವಿಧಿಸಲ್ಪಡಲಿಲ್ಲ. ಈ ಎರಡನೇ ಭೋಜನಗಳಲ್ಲಿರತಕ್ಕ ಉಪವಾಸದ ಫಲವನ್ನು ಹೊಂದುವರು.

ಹೋಮಕಾಲೇ ತಥಾ ಜುಹ್ವನ್ನೃತುಕಾಲೇ ತಥಾ ವ್ರಜನ್ ।
ಅನನ್ಯಸ್ತ್ರೀಜನಃ ಪ್ರಾಜ್ಞೋ ಬ್ರಹ್ಮಚಾರೀ ತಥಾ ಭವೇತ್ ॥ ೧೧ ॥

ಹೋಮಕಾಲದಲ್ಲಿ ಹೋಮ ಮಾಡುವುದು. ಋತುಕಾಲಗಳಲ್ಲಿ ಮಾತ್ರ ಸ್ವಪತ್ನಿಯಲ್ಲಿ ಸೇರುವುದು, ಪರಸ್ತ್ರೀಯರ ಸಂಬಂಧವಿಲ್ಲದಿರುವುದು, ಈ ನಿಯಮ ಉಳ್ಳವರು ಬ್ರಹ್ಮಚರ್ಯೆಯ ಫಲವನ್ನು ಹೊಂದುವರು.

ಅಮೃತಂ ಬ್ರಾಹ್ಮಣೋಚ್ಛಿಷ್ಟಂ ಜನನ್ಯಾ ಹೃದಯಂ ಕೃತಮ್ ।
ಉಪಾಸೀತ ಜನಃ ಸತ್ಯಂ ಸತ್ಯಂ ಸಂತ ಉಪಾಸತೇ ॥ ೧೨ ॥

ಬ್ರಾಹ್ಮಣರು ತಿಂದು ಮಿಕ್ಕ ಅನ್ನವು ಅಮೃತಸಮಾನವು. ಅದು ತಾಯಿಯ ಹೃದಯದಂತೆ ಹಿತಕರವಾದುದು. ಅದು ಜನರಿಗೆ ಅತ್ಯಂತ ಗೌರವಾರ್ಹವಾದುದು. ಅಂತಹ ಶೇಷಾನ್ನವನ್ನು ಭುಂಜಿಸುವುದರಿಂದ ಬ್ರಹ್ಮಪ್ರಾಪ್ತಿಯುಂಟು.

ಲೋಷ್ಟಮರ್ದೀ ತೃಣಚ್ಛೇದೀ ನಖಖಾದೀ ತು ಯೋ ನರಃ ।
ನಿತ್ಯೋಚ್ಛಿಷ್ಟಃ ಶಂಕುಶುಕೋ ನೇಹಾಯುರ್ವಿಂದತೇ ಮಹತ್ ॥ ೧೩ ॥

ಕೈಯಿಂದ ನೆಲದ ಮಣ್ಣನ್ನು ಕೆರೆಯುವುದು, ಹುಲ್ಲನ್ನು ಕೈಯಿಂದ ಕೀಳುವುದು, ಉಗುರನ್ನು ಕಚ್ಚುತ್ತಿರುವುದು, ಯಾವಾಗಲೂ ಎಂಜಲು ಮಾಡುವುದು, ಕಾಮ ಲೋಭಗಳಿಗೆ ವಶನಾಗಿರುವುದು, ಇಂತಹವರು ದೀರ್ಘಾಯುಷ್ಮಂತರಾಗಿರಲಾರರು.

ಯಜುಷಾ ಸಂಸ್ಕೃತಂ ಮಾಂಸಂ ನಿವೃತ್ತೋ ಮಾಂಸಭಕ್ಷಣಾತ್ ।
ನ ಭಕ್ಷಯೇದ್ ವೃಥಾ ಮಾಂಸಂ ಪೃಷ್ಠಮಾಂಸಂ ಚ ವರ್ಜಯೇತ್ ॥

ಮಾಂಸಭಕ್ಷಣವನ್ನು ಬಿಟ್ಟವನು ಯಜುರ್ಮಂತ್ರಗಳಿಂದ ಸಂಸ್ಕರಿಸಲ್ಪಟ್ಟ ಮಾಂಸವನ್ನಾದರೂ ಎಂದೂ ತಿನ್ನಬಹುದು. ಯಾರೂ ಯಜ್ಞಸಂಸ್ಕೃತವಲ್ಲದ ಮಾಂಸವನ್ನು ಸುಮ್ಮನೆ ಭುಜಿಸಲೇಬಾರದು.

ಸ್ವದೇಶೇ ಪರದೇಶೇ ವಾ ಅತಿಥಿಂ ನೋಪವಾಸಯೇತ್ ।
ಕಾಮ್ಯಂ ಕರ್ಮಫಲಂ ಲಬ್ಧ್ವಾ ಗುರೂಣಾಮುಪಪಾದಯೇತ್ ॥ ೧೫ ॥

ತಾನು ತನ್ನ ಮನೆಯಲ್ಲಿಯಾಗಲಿ, ತಾನು ಹೋದ ಬೇರೆ ಕಡೆಗಳಲ್ಲಿಯಾಗಲಿ, ಅತಿಥಿಗಳನ್ನು ಉಪವಾಸವಿರಿಸಬಾರದು. ಭಿಕ್ಷೆ ಮೊದಲಾದ ಕಾಮ್ಯಕರ್ಮಗಳ ಫಲಗಳಲ್ಲಿ ತಾನು ಪಡೆದುದನ್ನು ಮೊದಲು ತನ್ನ ಗುರುವಿಗೆ ಅರ್ಪಿಸಬೇಕು.

ಗುರುಭ್ಯ ಆಸನಂ ದೇಯಂ ಕರ್ತವ್ಯಂ ಚಾಭಿವಾದನಮ್ ।
ಗುರೂನಭ್ಯರ್ಚ್ಯ ಯುಜ್ಯಂತೇ ಆಯುಷಾ ಯಶಸಾ ಶ್ರಿಯಾ ॥ ೧೬ ॥

ಗುರುವನ್ನು ಕಂಡೊಡನೆ ಆಸನವನ್ನು ಕೊಟ್ಟು ಅಭಿವಾದನ ಮಾಡಬೇಕು. ಗುರುಪೂಜೆಯು ಆಯುಸ್ಸನ್ನೂ, ಯಶಸ್ಸನ್ನೂ, ಸಂಪತ್ತನ್ನೂ ಹೆಚ್ಚಿಸುವುದು.

ನೇಕ್ಷೇತಾದಿತ್ಯಮುದ್ಯಂತಂ ನ ಚ ನಗ್ನಾಂ ಪರಸ್ತ್ರಿಯಮ್ ।
ಮೈಥುನಂ ಸಮಯೇ ಧರ್ಮ್ಯಂ ಗುಹ್ಯಂ ಚೈವ ಸಮಾಚರೇತ್ ॥೧೭॥

ಉದಿಸುವ ಸೂರ್ಯನನ್ನೂ, ಬೆತ್ತಲೆಯಾಗಿರುವ ಸ್ತ್ರೀಯನ್ನೂ, ಕಣ್ಣೆತ್ತಿ ನೋಡಬಾರದು. ಋತುಕಾಲದಲ್ಲಿ ಮಾತ್ರವೇ ಪತ್ನೀ ಸಮಾಗಮವು ಧರ್ಮಯುಕ್ತವು. ಅದನ್ನು ಯಾವಾಗಲೂ ಅತಿರಹಸ್ಯವಾಗಿಯೇ ನಡೆಸಬೇಕು.

ತೀರ್ಥಾನಾಂ ಹೃದಯಂ ತೀರ್ಥಂ ಶುಚೀನಾಂ ಹೃದಯಂ ಶುಚಿಃ ।
ಸರ್ವಮಾರ್ಯಕೃತಂ ಶೌಚಂ ವಾಲಸಂಸ್ಪರ್ಶನಾನಿ ಚ ॥ ೧೮ ॥

ತೀರ್ಥಗಳ ರಹಸ್ಯವೆಲ್ಲ ಧರ್ಮದ ಮನದಲ್ಲಡಗಿರುವುದು. ಶುಚಿತ್ವದ ರಹಸ್ಯವು ಅಗ್ನಿಯಲ್ಲಿರುವುದು. ಶಿಷ್ಟರ ಕಾರ್ಯವು ಎಂತಹುದಾಗಿದ್ದರೂ, ಶುಚಿ. ಗೋಪುಚ್ಛ ಸ್ಪರ್ಶನಾದಿಗಳೂ ಕೂಡ ಧರ್ಮಯುಕ್ತವಾದ ಸದಾಚಾರಗಳೇ.

ದರ್ಶನೇ ದರ್ಶನೇ ನಿತ್ಯಂ ಸುಖಪ್ರಶ್ನಮುದಾಹರೇತ್ ।
ಸಾಯಂ ಪ್ರಾತಶ್ಚ ವಿಪ್ರಾಣಾಂ ಪ್ರದಿಷ್ಟಮಭಿವಾದನಮ್ ॥ ೧೯ ॥

ಇತರರನ್ನು ನೋಡಿದಾಗಲೆಲ್ಲ ಸುಖಪ್ರಶ್ನೆಯನ್ನು ಮಾಡುವುದೂ, ಬೆಳಗ್ಗೆ, ಸಂಧ್ಯಾಕಾಲಗಳಲ್ಲಿ ಬ್ರಾಹ್ಮಣರಿಗೆ ಅಭಿವಾದನ ಮಾಡುವುದೂ ಸದಾಚಾರಗಳೆಂದು ವಿಧಿಸಲ್ಪಟ್ಟಿದೆ.

ದೇವಗೋಷ್ಠೇ ಗವಾಂ ಮಧ್ಯೇ ಬ್ರಾಹ್ಮಣಾನಾಂ ಕ್ರಿಯಾಪಥೇ ।
ಸ್ವಾಧ್ಯಾಯೇ ಭೋಜನೇ ಚೈವ ದಕ್ಷಿಣಂ ಪಾಣಿಮುದ್ಧರೇತ್ ॥ ೨೦ ॥

ದೇವಾಲಯಗಳಲ್ಲಿ, ದನದ ಕೊಟ್ಟಿಗೆಗಳಲ್ಲಿ, ಬ್ರಾಹ್ಮಣರಿಗೆ ವಿಧಿಸಲ್ಪಟ್ಟ ಕ್ರಿಯೆಗಳನ್ನು ನಡೆಸುವ ಸಮಯಗಳಲ್ಲಿ, ವೇದಾಧ್ಯಯನ ಕಾಲಗಳಲ್ಲಿ, ಭೋಜನ ಕಾಲದಲ್ಲಿ ಈ ಸಮಯಗಳೊಳಗೆಲ್ಲ ಬ್ರಾಹ್ಮಣನು ಬಲಗೈಯಿಂದ ಭೂಮಿಯನ್ನು ಮುಟ್ಟಿ ಅಲ್ಲಿರುವ ಪುಣ್ಯಧೂಳನ್ನು ಎತ್ತಿ ತಲೆಯಲ್ಲಿಟ್ಟುಕೊಳ್ಳಬೇಕು.

ಪಣ್ಯಾನಾಂ ಶೋಭನಂ ಪಣ್ಯಂ ಕೃಷೀಣಾಂ ಯುಧ್ಯತಾಂ ಕೃಷಿಃ ।
ಬಹುಕಾರಂ ಚ ಸಸ್ಯಾನಾಂ ವಾಹ್ಯೇ ವಾಹ್ಯಂ ತಥಾ ಗವಾಮ್॥ ೨೧ ॥

ಉತ್ತಮ ಬ್ರಾಹ್ಮಣರನ್ನು ಹಗಲು ಮತ್ತು ಸಂಜೆಯ ಹೊತ್ತಿನಲ್ಲಿ ನಮಸ್ಕರಿಸಿ ಪೂಜಿಸುವುದರಿಂದ, ವೈಶ್ಯರಿಗೆ ವ್ಯಾಪಾರ ಪದಾರ್ಥಗಳೂ, ಕೃಷಿಮಾಡತಕ್ಕದವರಿಗೆ ಒಳ್ಳೇ ಬೆಳೆಯೂ ವೃದ್ಧಿಹೊಂದುವುವು. ಅಲ್ಲದೆ ಅಂತಹವರಿಗೆ ಧಾನ್ಯ ಸಮೃದ್ಧಿಯೂ ಹೆಚ್ಚುವುದು.

ವ್ಯಾಖ್ಯಾನ ವಿಶೇಷ– ಮಾರಾಟದ ವಸ್ತುಗಳನ್ನು ಕಂಡು 'ಶೋಭನಂ ಪಣ್ಯಮಸ್ತು' ಎಂದು; ಕೃಷಿಯನ್ನು ಕಂಡು 'ಯುಧ್ಯತಾಂ ಕೃಷಿಃ' ಎಂದು; ಸಸ್ಯಗಳನ್ನು ಕಂಡು 'ಬಹ್ವಸ್ತು' ಎಂದು; ಗಾಡಿಹೊತ್ತ ಎತ್ತುಗಳನ್ನು ಕಂಡು 'ಸುವಾಹ್ಯಮಸ್ತು' ಎಂದು; ಭೋಜನದಲ್ಲಿ 'ಸಂಪನ್ನಂ' ಎಂದು; ಜಲಪಾನದಲ್ಲಿ 'ತೃಪ್ತಿರಭೂತ್' ಎಂದು; ಪಾಯಸ ಹುಗ್ಗಿ ತಿನ್ನುವಾಗ 'ಕ್ಷೀರಘೃತಾದಿನಾ ಸುಶೃತಮಭೂತ್' ಎಂದು; ಮಂಡನದಲ್ಲಿ 'ಆಯುಷ್ಯಮಸ್ತು' ಎಂದೂ ಹೇಳಬೇಕು.

ಸಂಪನ್ನಂ ಭೋಜನೇ ನಿತ್ಯಂ ಪಾನೀಯೇ ತರ್ಪಣಂ ತಥಾ ।
ಸುಶೃತಂ ಪಾಯಸೇ ಬ್ರೂಯಾದ್ಯವಾಗ್ವಾಂ ಕೃಸರೇ ತಥಾ ॥ ೨೨ ॥

ಅತಿಥಿಗಳಿಗೆ ಭೋಜನವನ್ನಿಡುವಾಗ ಭೋಜನ ಮಾಡಿಸುವವನು ಸಂಪನ್ನವೇ (ಸಾಕಾಯಿತೇ) ಎಂದು ಕೇಳಬೇಕು. ಭುಜಿಸುವವನು ಅದಕ್ಕೆ ಪ್ರತ್ಯುತ್ತರವಾಗಿ 'ಸುಸಂಪನ್ನಂ' ಎಂದು ಹೇಳಬೇಕು. ಹಾಗೆಯೇ ಪಾನೀಯವನ್ನು ಕೊಡುವಾಗ ಕೊಡುವವನು 'ತೃಪ್ತಿಯೇ' ಎಂದು ಕೇಳಬೇಕು. ಪಾಯಸ, ಗಂಜಿ, ಚಿತ್ರಾನ್ನ ಎಂಬೀ ಪದಾರ್ಥಗಳನ್ನು ಅತಿಥಿಗೆ ಇಕ್ಕಿದಾಗ, 'ಶೃತವೇ' (ಚೆನ್ನಾಗಿ ಬಡಿಸಲ್ಪಟ್ಟಿತೇ) ಎಂದು ಕೇಳಬೇಕು.

ಶ್ಮಶ್ರುಕರ್ಮಣಿ ಸಂಪ್ರಾಪ್ತೇ ಕ್ಷುತೇ ಸ್ನಾನೇऽಥ ಭೋಜನೇ ।
ವ್ಯಾಧಿತಾನಾಂ ಚ ಸರ್ವೇಷಾಮಾಯುಷ್ಯಮಭಿನಂದನಮ್ ॥ ೨೩ ॥

ಕ್ಷೌರ ಮಾಡಿಸಿಕೊಳ್ಳುವವನು, ಸೀನುವವನು, ಸ್ನಾನ ಮಾಡುವವನು, ಭೋಜನ ಮಾಡುವವನು, ರೋಗಿಗಳು ಇವರನ್ನು ಕಂಡಾಗ 'ಆಯುಷ್ಯಂ' ಎಂದು ಹೇಳುವುದು ಕ್ಷೇಮಕರವು.

ಪ್ರತ್ಯಾದಿತ್ಯಂ ನ ಮೇಹೇತ ನ ಪಶ್ಯೇದಾತ್ಮನಃ ಶಕೃತ್ ।
ಸುತಸ್ತ್ರಿಯಾ ಚ ಶಯನಂ ಸಹಭೋಜ್ಯಂ ಚ ವರ್ಜಯೇತ್ ॥ ೨೪ ॥

ಸೂರ್ಯನಿಗಿದಿರಾಗಿ ಮೂತ್ರ ವಿಸರ್ಜನೆ ಮಾಡಬಾರದು. ತನ್ನ ಮಲವನ್ನು ತಾನು ನೋಡಬಾರದು. ಮಕ್ಕಳೊಡನೆಯೂ, ಸ್ತ್ರೀಯರೊಡನೆಯೂ ಸಹಪಂಕ್ತಿಯಲ್ಲಿ ಭೋಜನಕ್ಕೆ ಕುಳ್ಳಿರಬಾರದು.

ತ್ವಂಕಾರಂ ನಾಮಧೇಯಂ ಚ ಜ್ಯೇಷ್ಠಾನಾಂ ಪರಿವರ್ಜಯೇತ್ ।
ಅವರಾಣಾಂ ಸಮಾನಾನಾಮುಭಯೇಷಾಂ ನ ದುಷ್ಯತಿ ॥ ೨೫ ॥

ತನಗಿಂತಲೂ ದೊಡ್ಡವರನ್ನು 'ನೀನು' ಎಂದಾಗಲಿ, ಹೆಸರನ್ನು ಹಿಡಿದಾಗಲಿ ಮಾತಾಡಿಸಬಾರದು. ತನಗಿಂತಲೂ ಚಿಕ್ಕವರಲ್ಲಿ ಮತ್ತು ಸಮಾನ ವಯಸ್ಕರಲ್ಲಿ ಹಾಗೆ ಹೇಳುವುದರಿಂದ ದೋಷವಿಲ್ಲ.

ಹೃದಯಂ ಪಾಪವೃತ್ತಾನಾಂ ಪಾಪಮಾಖ್ಯಾತಿ ವೈ ಕೃತಮ್ ।
ಜ್ಞಾನಪೂರ್ವಂ ವಿನಶ್ಯಂತಿ ಗೂಹಮಾನಾ ಮಹಾಜನೇ ॥ ೨೬ ॥

ಜ್ಞಾನಪೂರ್ವಂ ಕೃತಂ ಪಾಪಂ ಧಾದಯಂತ್ಯಬಹುಶ್ರುತಾಃ ।
ನೈನಂ ಮನುಷ್ಯಾಃ ಪಶ್ಯಂತಿ ಪಶ್ಯಂತಿ ತ್ರಿದಿವೌಕಸಃ ॥ ೨೭ ॥

ಪಾಪಿಷ್ಠರ ಹೃದಯವನ್ನು ಅವರ ಮುಖಲಕ್ಷಣವೇ ಹೊರಪಡಿಸುವುದು. ಅಂತಹ ಪಾಪಿಗಳು ತಮ್ಮ ಅಕೃತ್ಯವನ್ನು ಜನಗಳಿಗೆ ತಿಳಿಯದಂತೆ ಮರೆಸಿಟ್ಟು, ಅದರಿಂದ ಕೆಟ್ಟು ಹೋಗುವರು. ಮನುಷ್ಯರು ಅದನ್ನು ಕಂಡುಕೊಳ್ಳಲಾರದಿದ್ದರೂ, ದೇವತೆಗಳು ಅದನ್ನು ತಪ್ಪದೆ ಕಂಡುಕೊಳ್ಳುವರು.

ಪಾಪೇನ ಹಿ ಕೃತಂ ಪಾಪಂ ಪಾಪಮೇವಾನುವರ್ತತೇ ।
ಧಾರ್ಮಿಕೇಣ ಕೃತೋ ಧರ್ಮಃ ಕರ್ತಾರಮನುವರ್ತತೇ ॥ ೨೮ ॥

ಪಾಪಬುದ್ಧಿಯಿಂದ ಮುಚ್ಚಿಟ್ಟ ಧರ್ಮವು ಹೊಸಧರ್ಮವನ್ನು ದಾರಿಕೊಡುವುದು. ಧರ್ಮಬುದ್ಧಿಯಿಂದ ಮುಚ್ಚಿಟ್ಟ ಧರ್ಮವು ಹೊಸ ಧರ್ಮವನ್ನು ಹೆಚ್ಚಿಸುವುದು.

ಪಾಪಂ ಕೃತಂ ನ ಸ್ಮರತೀಹ ಮೂಢೋ
ವಿವರ್ತಮಾನಸ್ಯ ತದೇತಿ ಕರ್ತುಃ ।
ರಾಹುರ್ಯಥಾ ಚಂದ್ರಮುಪೈತಿ ಚಾಪಿ
ತಥಾऽಬುಧಂ ಪಾಪಮುಪೈತಿ ಕರ್ಮ ॥ ೨೯ ॥

ಲೋಕದಲ್ಲಿ ಮೂಢನಾದವನು ತಾನು ಮಾಡಿದ ಪಾಪವನ್ನು ನೆನೆಸದೆಯೇ ಇದ್ದರೂ, ಆ ಪಾಪವು ಶಾಸ್ತ್ರವಿರುದ್ಧವಾಗಿ ನಡೆದ ಆ ಪಾಪಿಯನ್ನು ಬೆನ್ನಟ್ಟದೆಬಿಡದು. ರಾಹುವು ಚಂದ್ರನನ್ನು ಹಿಡಿಯುವಂತೆ ಪಾಪವು ಅಜ್ಞರಾದ ಮೂಢರನ್ನು ಹಿಡಿದು ನುಂಗುವುದು.

ಆಶಯಾ ಸಂಚಿತಂ ದ್ರವ್ಯಂ ಯತ್ಕಾಲೇ ನೇಹ ಭುಜ್ಯತೇ ।
ತದ್ ಬುಧಾ ನ ಪ್ರಶಂಸಂತಿ ಮರಣಂ ನ ಪ್ರತೀಕ್ಷತೇ ॥ ೩೦ ॥

ಲೋಭದಿಂದ ಕೂಡಿಟ್ಟಹಣವು ದುಃಖಮಯವಾಗಿಯೇ ಅನುಭವಿಸಲ್ಪಡುವುದು. ಪ್ರಾಜ್ಞರು ಅಂತಹ ಧನವನ್ನು ಆದರಿಸಲಾರರು. ಮರಣವೆಂಬುದೂ ಆ ಧನವನ್ನು ಇದಿರು ನೋಡುತ್ತಾ ನಿಂತಿರುವುದಲ್ಲ.

ಮಾನಸಂ ಸರ್ವಭೂತಾನಾಂ ಧರ್ಮಮಾಹುರ್ಮನೀಷಿಣಃ ।
ತಸ್ಮಾತ್ ಸರ್ವೇಷು ಭೂತೇಷು ಮನಸಾ ಶಿವಮಾಚರೇತ್ ॥ ೩೧ ॥

ಪ್ರಾಜ್ಞರು ಧರ್ಮವನ್ನು ಮಾನಸವೆಂದು ಹೇಳಿದರು. ಆದುದರಿಂದ ಎಲ್ಲಾ ಪ್ರಾಣಿಗಳ ವಿಷಯದಲ್ಲಿ ಮನಸ್ಸಿನಿಂದಲೇ ಕ್ಷೇಮವನ್ನು ಕೋರಬಹುದು. ಧರ್ಮವನ್ನು ಮಾಡುವುದಕ್ಕೆ ಬೇರೊಬ್ಬರ ಸಹಾಯವೂ ಬೇಕಾದುದಿಲ್ಲ.

ಏಕ ಏವ ಚರೇದ್ಧರ್ಮಂ ನಾಸ್ತಿ ಧರ್ಮೇ ಸಹಾಯತಾ ।
ಕೇವಲಂ ವಿಧಿಮಾಸಾದ್ಯ ಸಹಾಯಃ ಕಿಂ ಕರಿಷ್ಯತಿ ॥ ೩೨ ॥

ತಾನು ಏಕಾಕಿಯಾಗಿಯೇ ನಡೆಸಬಹುದು. ಮನಸ್ಸಿನಲ್ಲಿ ಧರ್ಮಬುದ್ಧಿ ಇಲ್ಲದೆ, ಬರೀ ವಿಧಿಯನ್ನು ಮಾತ್ರ ಹಿಡಿದು ನಡೆಸಿದ ಧರ್ಮವಿಷಯದಲ್ಲಿ ಸಹಾಯವು ತಾನೇ ಏನನ್ನು ಮಾಡಬಲ್ಲದು.

ದೇವಾ ಯೋನಿರ್ಮನುಷ್ಯಾಣಾಂ ದೇವಾನಾಮಮೃತಂ ದಿವಿ ।
ಪ್ರೇತ್ಯಭಾವೇ ಸುಖಂ ಧರ್ಮಾಚ್ಛಶ್ವತ್ತೈರುಪಭುಜ್ಯತೇ ॥ ೩೩ ॥

ಧರ್ಮವೇ ಮನುಷ್ಯನಿಗೆ ಉತ್ಪತ್ತಿಕಾರಣವು. ಧರ್ಮವೇ ದೇವತೆಗಳಿಗೆ ಸ್ವರ್ಗದಲ್ಲಿ ಅಮೃತವೆನಿಸುವುದು. ಮೃತಿಹೊಂದಿದಮೇಲೆಯೂ ಮನುಷ್ಯನು ಧರ್ಮದಿಂದಲೇ ಶಾಶ್ವತಸುಖವನ್ನು ಅನುಭವಿಸುವನು' ಎಂದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಏಕೋನವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಹತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಅಧ್ಯಾತ್ಮವಿಚಾರವನ್ನು ನಿರೂಪಿಸಿದುದು.

ಯುಧಿಷ್ಠಿರಃ

ಅಧ್ಯಾತ್ಮಂ ನಾಮ ಯದಿದಂ ಪುರುಷಸ್ಯೇಹ ಚಿಂತ್ಯತೇ ।
ಯದಧ್ಯಾತ್ಮಂ ಯತಶ್ಚೈತತ್ತನ್ಮೇ ಬ್ರೂಹಿ ಪಿತಾಮಹ ॥ ೧ ॥

ಯುಧಿಷ್ಠಿರ– ಪಿತಾಮಹನೇ, ಲೋಕದಲ್ಲಿ ಪುರುಷರು ಅಧ್ಯಾತ್ಮ ಎಂಬುದಾಗಿ ಏನನ್ನು ಚಿಂತಿಸುತ್ತಾರೋ ಈ ಅಧ್ಯಾತ್ಮವು ಯಾರಿಂದ ನಿರೂಪಿಸಲ್ಪಟ್ಟಿದೆ? ಅಧ್ಯಾತ್ಮವೆಂದರೆ ಏನು? ಇದರ ಸ್ವರೂಪವನ್ನು ನನಗೆ ತಿಳಿಸಿರಿ.

ಕುತಃ ಸೃಷ್ಟಮಿದಂ ಸರ್ವಂ ಬ್ರಹ್ಮನ್ ಸ್ಥಾವರಜಂಗಮಮ್ ।
ಪ್ರಲಯೇ ಚ ಕಮಭ್ಯೇತಿ ತನ್ಮೇ ವಕ್ತುಮಿಹಾರ್ಹಸಿ ॥ ೨ ॥

ಈ ಅಧ್ಯಾತ್ಮವು ಯಾರಿಂದ ಸೃಷ್ಟವಾಯಿತು? ಸ್ಥಾವರ-ಜಂಗಮಾತ್ಮಕವಾದ ಈ ಪ್ರಪಂಚವು ಹೇಗೆ ಸೃಷ್ಟಿಸಲ್ಪಟ್ಟಿತು? ಪ್ರಳಯದಲ್ಲಿ ಎಲ್ಲಿಗೆ ಹೋಗಿ ಸೇರುತ್ತದೆ? ಇದನ್ನು ನನಗೆ ಹೇಳಲು ಅರ್ಹರಾಗಿದ್ದೀರಿ.

ಭೀಷ್ಮಃ

ಅಧ್ಯಾತ್ಮಮಿತಿ ಮಾಂ ಪಾರ್ಥ ಯದೇತದನುಪೃಚ್ಛಸಿ ।
ತದ್ ವ್ಯಾಖ್ಯಾಸ್ಯಾಮಿ ತೇ ತಾತ ಶ್ರೇಯಸ್ಕರತಮಂ ಶುಭಮ್ ॥ ೩ ॥

ಭೀಷ್ಮ– ಧರ್ಮರಾಜನೇ, ಅಧ್ಯಾತ್ಮ ವಿಚಾರದ ಬಗ್ಗೆ ಏನು ಪ್ರಶ್ನಿಸುತ್ತಿರುವೆಯೋ ಅತ್ಯಂತ ಶ್ರೇಯಸ್ಸನ್ನುಂಟು ಮಾಡುವ ಮಂಗಳಕರವಾದ ಈ ವಿಚಾರವನ್ನು ಕುರಿತು ವಿವರಿಸುತ್ತೇನೆ.

ಸೃಷ್ಟಿಪ್ರಳಯಸಂಯುಕ್ತಮಾಚಾರ್ಯೈಃ ಪರಿದರ್ಶಿತಮ್ ।
ಯಜ್ಜ್ಞಾತ್ವಾ ಪುರುಷೋ ಲೋಕೇ ಪ್ರೀತಿಂ ಸೌಖ್ಯಂ ಚ ವಿಂದತಿ ।
ಫಲಲಾಭಶ್ಚ ತಸ್ಯ ಸ್ಯಾತ್ ಸರ್ವಭೂತಹಿತಂ ಚ ತತ್ ॥ ೪ ॥

ಪ್ರಪಂಚದ ಸೃಷ್ಟಿ-ಪ್ರಳಯಗಳನ್ನು ಕುರಿತು ಆರಂಭದಲ್ಲಿಯೇ ಪೂರ್ವಾಚಾರ್ಯರು ಸಾಕಷ್ಟು ವಿಚಾರಗಳನ್ನು ತಿಳಿಸಿರುತ್ತಾರೆ. ಅದನ್ನು ತಿಳಿದ ಮನುಷ್ಯನು ಲೋಕದಲ್ಲಿ

ಭಗವಂತನ ಪ್ರೀತಿಗೆ ಪಾತ್ರನಾಗಿ ಸುಖವನ್ನು ಹೊಂದುತ್ತಾನೆ. ಈ ಜ್ಞಾನದಿಂದ ಉತ್ತಮ ಫಲವಿದೆ. ಸಮಸ್ತ ಭೂತಗಳಿಗೆ ಹಿತಕರವಾಗಿರುವ ಚಿಂತನೆಯಿದು.

ಆತ್ಮಾನಮಮಲಂ ರಾಜನ್ನಾವೃತ್ಯೈವಂ ವ್ಯವಸ್ಥಿತಮ್ ।
ತಸ್ಮಿನ್ ಪ್ರಕಾಶತೇ ನಿತ್ಯಂ ತಮಃ ಸೋಮೋ ಯಥೈವ ತತ್ ॥ ೫ ॥

ತದ್ ವಿದ್ವನ್ನಷ್ಟಪಾಪ್ಮೈಷ ಬ್ರಹ್ಮಭೂಯಾಯ ಕಲ್ಪತೇ ।
ಅಂಡಾವರಣಭೂತಾನಾಂ ಪರ್ಯಂತಂ ಹಿ ಯಥಾ ತಮಃ ॥ ೬ ॥

ಪ್ರಳಯಕಾಲದಲ್ಲಿ ಪರಮಾತ್ಮನನ್ನು ವ್ಯಾಪಿಸಿಕೊಂಡು ದುರ್ಗಾದೇವಿಯು ಇರುತ್ತಾಳೆ. ಇವಳ ರೂಪ ನೀಲವಾಗಿದೆ. ಪ್ರಳಯ ಸಮುದ್ರ ಜಲರೂಪದಲ್ಲಿ ಸರ್ವತ್ರ ಭಗವಂತನನ್ನು ವ್ಯಾಪಿಸಿ ದುರ್ಗೆಯು ಇರುತ್ತಾಳೆ. ಈ ಪ್ರಳಯ ಕಾಲದಲ್ಲಿ ಭಗವಂತನ ಸ್ವರೂಪವು ಆಕಾಶದಲ್ಲಿ ಚಂದ್ರನ ಸ್ವರೂಪವು ಹೇಗೆ ಬೆಳಗುತ್ತದೋ ಹಾಗೆ ಬೆಳಗುತ್ತದೆ, 'ಆದಿತ್ಯವರ್ಣಂ ತಮಸಸ್ತು ಪಾರೇ' ಎಂದು ಶ್ರುತಿ ತಿಳಿಸಿದಂತೆ. ಯಾವನು ಈ ಭಗವಂತನ ಸ್ವರೂಪವನ್ನು ಚೆನ್ನಾಗಿ ತಿಳಿಯಬಲ್ಲನೋ ಅವನು ಸಮಸ್ತ ಪಾಪಗಳಿಂದ ಮುಕ್ತನಾಗಿ ಪರಮಾತ್ಮನನ್ನು ಹೊಂದುತ್ತಾನೆ. ಈ ಭಗವಂತನನ್ನು ಆವರಿಸಿದ ದುರ್ಗೆಯು ಇಪ್ಪತ್ನಾಲ್ಕು ತತ್ವಗಳ ಅವಸ್ಥಾನವು ಎಲ್ಲಿದೆಯೋ ಅಲ್ಲಿಯತನಕವೂ ಅರ್ಥಾತ್ ಬ್ರಹ್ಮಾಂಡಾವರಣಗಳಿಗಿಂತಲೂ ಹೊರಗಡೆಯೂ ವ್ಯಾಪಿಸಿ ಇದೆ. ಅಂತಹ ಪ್ರಳಯ ಸಮುದ್ರದ ಜಲದಲ್ಲಿ ಭಗವಂತನು ವಟಪತ್ರಶಾಯಿಯಾಗಿ ಇರುತ್ತಾನೆ.

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಂಚಮಮ್ ।
ಮಹಾಭೂತಾನಿ ಭೂತಾನಾಂ ಸರ್ವೇಷಾಂ ಪ್ರಭವಾಪ್ಯಯೌ ॥ ೭ ॥

ಪೃಥಿವೀ ಮೊದಲಾದ ಪಂಚಮಹಾಭೂತಗಳೇ ಎಲ್ಲಾ ಪ್ರಾಣಿಗಳಿಗೂ ಉತ್ಪತ್ತಿ, ಲಯಗಳಿಗೆ ಕಾರಣವೆನಿಸಿವೆ.

ಯತಃ ಸೃಷ್ಟಾನಿ ತತ್ರೈವ ತಾನಿ ಯಾಂತಿ ಪುನಃ ಪುನಃ ।
ಮಹಾಭೂತಾನಿ ಭೂತೇಭ್ಯಃ ಸಾಗರಸ್ಯೋರ್ಮಯೋ ಯಥಾ ॥ ೮ ॥

ಸಮುದ್ರಗಳಲ್ಲಿ ಅಲೆಗಳು ಮೇಲೆದ್ದು ಪುನಃ ಆ ಅಲೆಗಳು ಸಮುದ್ರ ಜಲದಲ್ಲಿಯೇ ಅಡಗಿಹೋಗುವಂತೆ ಪಂಚಮಹಾಭೂತಗಳು ತಮ್ಮ ಉತ್ಪತ್ತಿ ಸ್ಥಾನವೆನಿಸಿದ ಪ್ರಕೃತ್ಯಾತ್ಮಕ ತತ್ತ್ವ ಸೂಕ್ಷ್ಮ ರೂಪಗಳಾದ ಪಂಚಭೂತಗಳಲ್ಲಿಯೇ ಲಯ ಹೊಂದುತ್ತವೆ.

ಪ್ರಸಾರ್ಯ ಚ ಯಥಾಂಗಾನಿ ಕೂರ್ಮಃ ಸಂಹರತೇ ಪುನಃ ।
ತದ್ವದ್ಭೂತಾನಿ ಭೂತಾತ್ಮಾ ಸೃಷ್ಟ್ವಾ ಸಂಹರತೇ ಪುನಃ ॥ ೯ ॥

ಆಮೆಯು ತನ್ನ ಅವಯವಗಳನ್ನು ಬೇಕಾದಾಗ ಹೊರಗೆ ತಂದು ಪುನಃ ತನ್ನೊಳಗೆ ಸೇರಿಸಿಕೊಳ್ಳುವಂತೆ ಸಮಸ್ತ ಭೂತಗಳಿಗೂ ಅಂತರ್ಯಾಮಿಯಾದ ಪರಮಾತ್ಮನು ಈ ಪಂಚಭೂತಗಳನ್ನು ಸೃಷ್ಟಿಸಿ ಕೊನೆಯಲ್ಲಿ ಇವುಗಳನ್ನು ತನ್ನಲ್ಲಿಯೇ ಅಡಗಿಸಿ-ಕೊಳ್ಳುತ್ತಾನೆ.

ಸ ತೇಷಾಂ ಗುಣಸಂಘಾತಃ ಶರೀರೇ ಭರತರ್ಷಭ ।
ಸತತಂ ಪ್ರವಿಲೀಯಂತೇ ಗುಣಾಸ್ತೇ ಪ್ರಭವಂತಿ ಚ ॥ ೧೦ ॥

ಶರೀರದಲ್ಲಿ ಪಂಚಮಹಾಭೂತಗಳ ಗುಣಗಳು ಒಟ್ಟಾಗಿ ಸೇರಿಕೊಂಡಿವೆ. ಅವು ಯಾವಾಗಲೂ ಉತ್ಪತ್ತಿಯನ್ನೂ, ಲಯವನ್ನೂ ಹೊಂದುತ್ತಿರುತ್ತವೆ.

ಯದ್ವಿನಾ ನೈವ ಶೃಣುತೇ ನ ಪಶ್ಯತಿ ನ ದೀಪ್ಯತೇ ।
ಯದಧೀನಂ ಯತಸ್ತಸ್ಮಾದಧ್ಯಾತ್ಮಮಿತಿ ಕಥ್ಯತೇ ॥ ೧೧ ॥

ಈ ಶರೀರದಲ್ಲಿ ಯಾವುದಿಲ್ಲದಿದ್ದರೆ ಕೇಳಲಾಗುವುದಿಲ್ಲವೋ, ಯಾವುದಿಲ್ಲದಿದ್ದರೆ ನೋಡಲಾಗುವುದಿಲ್ಲವೋ, ಮತ್ತೊಂದನ್ನು ಬೆಳಗಲಾಗುವುದಿಲ್ಲವೋ ಇವುಗಳೆಲ್ಲವೂ ಯಾರನ್ನು ಆಶ್ರಯಿಸಿಕೊಂಡಿವೆಯೋ ಅದನ್ನೇ ಅಧ್ಯಾತ್ಮ ಎಂದು ಕರೆಯುತ್ತಾರೆ.

ಜ್ಞಾನಂ ತದೇಕರೂಪಾಖ್ಯಂ ನಾನಾಪ್ರಜ್ಞಾನ್ವಿತಂ ತದಾ ।
ನ ತೇ ವಾಚಾऽನುರೂಪಂ ಸ್ಯಾದ್ ಯಯಾ ರಾಸವಿವರ್ಜಿತಮ್ ॥

ಈ ಅಧ್ಯಾತ್ಮವೆನಿಸಿದ ಭಗವತ್‌ಸ್ವರೂಪವು ಏಕವೆನಿಸಿದೆ. ಅನೇಕ ಬಗೆಯ ಪ್ರಜ್ಞೆಗಳಿಂದ ವ್ಯಾಪ್ತವಾಗಿದೆ. ಇದರ ಸ್ವರೂಪವನ್ನು ಹೀಗೇ ಎಂದು ನಿರೂಪಿಸಲು ಯಾರಿಂದಲೂ ಸಾಧ್ಯವಿಲ್ಲ. ನನ್ನ ನಿನ್ನ ಮಾತುಗಳು ಆ ಸ್ವರೂಪವನ್ನು ನಿರ್ಣಯಿಸುವುದರಲ್ಲಿ ಅಶಕ್ತಗಳಾಗಿವೆ.

ಆಕಾಶಾತ್ ಖಲು ಯಾಜ್ಯೇಷು ಭವಂತಿ ಸುಮಹಾಗುಣಾಃ ।
ಇತಿ ತನ್ಮಯಮೇವೈತತ್ ಸರ್ವಂ ಸ್ಥಾವರಜಂಗಮಮ್ ॥ ೧೩ ॥

ಸೃಷ್ಟಿಯನ್ನು ಪಡೆದ ಪದಾರ್ಥಗಳಲ್ಲಿ ಶಬ್ದವೇ ಮೊದಲಾದ ಗುಣಗಳು ಆಕಾಶದಿಂದ ಉತ್ಪತ್ತಿಯನ್ನು ಹೊಂದುತ್ತವೆ. ಇದೇ ರೀತಿ ಸ್ಥಾವರ-ಜಂಗಮಾತ್ಮಕವಾದ ಈ ಜಗತ್ತೆಲ್ಲವೂ ಅದರಲ್ಲಿಯೇ ಲಯವನ್ನು ಹೊಂದುತ್ತವೆ.

ಪ್ರಳಯೇ ಚ ತಮಭ್ಯೇತಿ ತಸ್ಮಾದುತ್ಸೃಜತೇ ಪುನಃ ।
ಮಹಾಭೂತೇಷು ಭೂತಾತ್ಮಾ ಸೃಷ್ಟ್ವಾ ಸಂಹರತೇ ಪುನಃ ॥ ೧೪ ॥

ಪ್ರಳಯ ಕಾಲದಲ್ಲಿ ಆ ಭಗವಂತನಲ್ಲಿ ಲಯ ಹೊಂದಿದ ಪದಾರ್ಥಗಳು ಸೃಷ್ಟಿ ಕಾಲದಲ್ಲಿ ಅವನಿಂದಲೇ ಉತ್ಪತ್ತಿಯನ್ನು ಹೊಂದುತ್ತವೆ. ಸಮಸ್ತ ಭೂತಗಳ ಅಂತರ್ಯಾಮಿ ಎನಿಸಿದ ಪರಮಾತ್ಮನು ಪಂಚಮಹಾಭೂತಗಳನ್ನು ಹಿಂದಿನಂತೆ ಸೃಷ್ಟಿಸಿ ಪುನಃ ಅವುಗಳನ್ನು ಉಪಸಂಹರಿಸುತ್ತಾನೆ.

ಮಹಾಭೂತಾನಿ ಪಂಚೈವ ಸರ್ವಭೂತೇಷು ಭೂತಕೃತ್ ।
ಅಕರೋತ್ತೇಷು ವೈಷಮ್ಯಂ ತತ್ತು ಜೀವೋಽನು ಪಶ್ಯತಿ ॥ ೧೫ ॥

ಪಂಚಭೂತಗಳನ್ನು ಸೃಷ್ಟಿಸುವ ಪರಮಾತ್ಮನು ಆ ಪಂಚಭೂತಗಳಲ್ಲಿಯೂ ವಿಷಮತೆಯನ್ನು ಉಂಟುಮಾಡಿ ಸಮಸ್ತ ಪ್ರಾಣಿಗಳ ಶರೀರವನ್ನು ಆವಿಷ್ಕರಿಸುತ್ತಾನೆ. ಎಂದರೆ ಪಾರ್ಥಿವ ಶರೀರದಲ್ಲಿ ಪೃಥಿವಿಯ ಅಂಶವನ್ನು ಹೆಚ್ಚಾಗಿ ಸೇರಿಸುತ್ತಾನೆ. ತೈಜಸ ಶರೀರದಲ್ಲಿ ತೇಜಸ್ಸನ್ನು ಹೆಚ್ಚಾಗಿ ಸೇರಿಸುತ್ತಾನೆ. ಜಲೀಯ ಶರೀರದಲ್ಲಿ ನೀರಿನ ಅಂಶವನ್ನು ಹೆಚ್ಚಾಗಿ ಸೇರಿಸುತ್ತಾನೆ. ಉಳಿದವರ ಶರೀರದಲ್ಲಿ ಸ್ವಲ್ಪ, ಸ್ವಲ್ಪ ಪ್ರಮಾಣದಲ್ಲಿ ಸೇರಿಸುತ್ತಾನೆ. ಇದನ್ನೇ ವೈಷಮ್ಯ ಎಂದಿದ್ದಾರೆ. ಈ ರೀತಿಯಾಗಿ ಸೃಷ್ಟಿಸಿದ ಶರೀರದಿಂದ ಜೀವನು ತನ್ನ ವ್ಯಾಪಾರಗಳನ್ನು ಮಾಡುತ್ತಾನೆ.

ಶಬ್ದಃ ಶ್ರೋತ್ರಂ ತಥಾ ಖಾನಿ ತ್ರಯಮಾಕಾಶಯೋನಿಜಮ್ ।
ವಾಯೋಸ್ತ್ವಕ್ಸ್ಪರ್ಶಚೇಷ್ಟಾಶ್ಚ ವಾಗಿತ್ಯೇತಚ್ಚತುಷ್ಟಯಮ್ ॥ ೧೬ ॥

ಶಬ್ದ ಕವಿಯ ಒಳಗಡೆ ಇರುವ ತಮಟೆಯಲ್ಲಿ ಅಂತರ್ಗತವಾದ ಸೂಕ್ಷ್ಮವಾದ ಆಕಾಶ, ಶ್ರೋತ್ರೇಂದ್ರಿಯ ಇವುಗಳು ಆಕಾಶದಿಂದ ಹುಟ್ಟುತ್ತವೆ. ಸ್ಪರ್ಶ, ಚೇಷ್ಟೆ, ತ್ವಕ್ಕು, ವಾಕ್ಕು ಈ ನಾಲ್ಕು ವಾಯುವಿನಿಂದ ಸೃಷ್ಟಿಯನ್ನು ಹೊಂದುತ್ತವೆ.

ರೂಪಂ ಚಕ್ಷುಸ್ತಥಾ ಪಾಕಸ್ತ್ರಿವಿಧಂ ತೇಜ ಉಚ್ಯತೇ ।
ರಸಃ ಕ್ಲೇದಶ್ಚ ಜಿಹ್ವಾ ಚ ತ್ರಯೋ ಜಲಗುಣಾಃ ಸ್ಮೃತಾಃ ॥ ೧೭ ॥

ರೂಪ, ನೇತ್ರ, ಉದರದಲ್ಲಿ ಆಗುವ ಜೀರ್ಣತೆ - ಈ ಮೂರು ತೇಜಸ್ಸಿನಿಂದ ಉಂಟಾಗುತ್ತವೆ. ರಸ, ಒದ್ದೆ, ನಾಲಿಗೆ - ಈ ಮೂರು ಜಲೀಯಗುಣಗಳು ಎನಿಸಿವೆ.

ಘ್ರೇಯಂ ಘ್ರಾಣಂ ಶರೀರಂ ಚ ತೇ ತು ಭೂಮಿಗುಣಾಸ್ತ್ರಯಃ ।
ಮಹಾಭೂತಾನಿ ಪಂಚೈವ ಷಷ್ಠಂ ತು ಮನ ಉಚ್ಯತೇ ॥ ೧೮ ॥

ಇಂದ್ರಿಯಾಣಿ ಮನಶ್ಚೈವ ವಿಜ್ಞಾನಾನ್ಯಸ್ಯ ಭಾರತ ।
ಸಪ್ತಮೀ ಬುದ್ಧಿರಿತ್ಯಾಹುಃ ಕ್ಷೇತ್ರಜ್ಞಃ ಪುನರಷ್ಟಮಃ ॥ ೧೯ ॥

ವಾಸನೆ, ಮೂಗು, ಶರೀರ ಎಂಬ ಮೂರು ಭೂಮಿಯ ಗುಣಗಳೆನಿಸಿವೆ. ಐದು ಪಂಚಮಹಾಭೂತಗಳು. ಆರನೆಯದ್ದೆನಿಸಿದ ಮನಸ್ಸು ಇಂದ್ರಿಯಗಳು, ಜೀವನ ಜ್ಞಾನ ಸಾಧನಗಳು. ಏಳನೆಯದ್ದೆನಿಸಿದ ಬುದ್ಧಿ. ಎಂಟನೆಯದ್ದು ಕ್ಷೇತ್ರಜ್ಞನೆನಿಸಿದೆ.

ಚಕ್ಷುರಾಲೋಚನಾಯೈವ ಸಂಶಯಂ ಕುರುತೇ ಮನಃ ।
ಬುದ್ಧಿರಧ್ಯವಸಾನಾಯ ಕ್ಷೇತ್ರಜ್ಞಃ ಸಾಕ್ಷಿವತ್ ಸ್ಥಿತಃ ॥ ೨೦ ॥

ಕಣ್ಣು ಮೊದಲಾದ ಇಂದ್ರಿಯಗಳೆಲ್ಲ ಪದಾರ್ಥವನ್ನು ನೋಡುವ ವ್ಯಾಪಾರವನ್ನು ಮಾಡುತ್ತವೆ. ಮನಸ್ಸು ಆ ವಸ್ತುಗಳ ವಿಷಯದಲ್ಲಿ ಸಂಶಯವನ್ನು ಹುಟ್ಟಿಸುತ್ತದೆ. ಬುದ್ಧಿಯು ಮನಸ್ಸಿನಲ್ಲಿ ಬಂದ ವಿಚಾರವನ್ನು ನಿರ್ಣಯ ಮಾಡಿ ತಿಳಿಸುತ್ತದೆ. ಕ್ಷೇತ್ರಜ್ಞನು ಇದಕ್ಕೆಲ್ಲ ಸಾಕ್ಷಿಯಾಗಿ ನೋಡುತ್ತಿರುತ್ತಾನೆ.

ಚಿಚ್ಛಕ್ತ್ಯಧಿಷ್ಠಿತಾ ಬುದ್ಧಿಶ್ಚೇತನೇತ್ಯಭಿವಿಶ್ರುತಾ ।
ಚೇತನಾನಂತರೋ ಜೀವಸ್ತದಾ ವೇತ್ತಿ ಚ ಲಕ್ಷ್ಯತೇ ॥ ೨೧ ॥

ಜ್ಞಾನವೆಂಬ ಶಕ್ತಿಯಿಂದ ಕೂಡಿಕೊಂಡಿರುವ ಬುದ್ಧಿಯು ಚೇತನ ಎಂದು ಕರೆಯಲ್ಪಡುತ್ತದೆ. ಮನಸ್ಸು, ಬುದ್ಧಿ, ಅಹಂಕಾರ, ಚಿತ್ತ, ಚೇತನ ಎಂದು ಐದು ವಿಧವುಳ್ಳ ಮನಸ್ಸನ್ನು ಜೀವನು ತನ್ನ ಸಮೀಪದಲ್ಲೇ ಇರುವುದರಿಂದ ತನ್ನ ಸಾಕ್ಷಿಯಿಂದ ಚೆನ್ನಾಗಿ ಅವುಗಳನ್ನು ನೋಡುತ್ತಾನೆ. ಆದರೆ ಅವುಗಳಿಂದ ಜೀವನು ನೋಡಲ್ಪಡುವವನಲ್ಲ.

ನೋತ್ಸೃಜನ್ ವಿಸೃಜಂಶ್ಚೈವ ಶರೀರಂ ದೃಶ್ಯತೇ ತಮಃ ।
ತಸ್ಮಿಂಶ್ಚೇತೋಪಲಭ್ಯಃ ಸ್ಯಾತ್ ತಮೋ ವಾಚ್ಛಾದಯಂತ್ಯುತ ॥ ೨೨ ॥

ಜೀವನು ಇಂತಹ ಪಂಚಭೂತಾತ್ಮಕವಾದ ಶರೀರವನ್ನು ಹೊಂದುತ್ತಿರುತ್ತಾನೆ, ಬಿಡುತ್ತಿರುತ್ತಾನೆ. ಹೀಗಿದ್ದರೂ ಈ ದೇಹದಲ್ಲಿರುವ ಶರೀರವನ್ನು ನೋಡುತ್ತಿರುತ್ತಾನೆ, ಪರಮಾತ್ಮನನ್ನು ಜೀವನು ಅಜ್ಞಾನಾವೃತನಾಗಿ ನೋಡುವುದಿಲ್ಲ. ಆದರೆ ಪರಮಾತ್ಮನು ಈ ಜೀವಾತ್ಮನನ್ನು ನೋಡುತ್ತಿರುತ್ತಾನೆ. ಯಾವಾಗ ಈ ಜೀವನಿಗೆ ಪರಮಾತ್ಮನ ದರ್ಶನಕ್ಕೆ ಪ್ರತಿಬಂಧಕವಾದ ಅಜ್ಞಾನವು ಅಪಸರಣವನ್ನು ಹೊಂದುತ್ತದೋ ಆಗ ಆ ಪರಮಾತ್ಮನನ್ನು ಜೀವನು ನೋಡಬಹುದು. ಈ ಪಂಚಭೂತ ಶರೀರದಲ್ಲಿ ಎಲ್ಲವನ್ನೂ ನೋಡುತ್ತಾನೆ. ಪರಮಾತ್ಮನ ದರ್ಶನವೇ ದುರ್ಲಭವಾದುದು ಎಂದು ಭಾವ.

ಚಕ್ಷುರಾಲೋಕನಾಯೈವ ಸಂಶಯಂ ಕುರುತೇ ಮನಃ ।
ಬುದ್ಧಿರಧ್ಯವಸಾಯಾಯ ಕ್ಷೇತ್ರಜ್ಞಃ ಸಾಕ್ಷಿವತ್ ಸ್ಥಿತಃ ॥ ೨೩ ॥

'ಪಾತಾಳ ಮೇತಸ್ಯ ಹಿ ಪಾದಮೂಲಂ' ಎಂದು ಭಾಗವತದಲ್ಲಿ ನಿರೂಪಿಸಿದಂತೆ ಪರಮಾತ್ಮನು ತನ್ನ ಪಾದತಳಕ್ಕಿಂತ ಮೇಲ್ಭಾಗದಲ್ಲಿರುವ ಚತುರ್ದಶ ಲೋಕಾತ್ಮಕವಾದ ಜಗತ್ತನ್ನು ತ್ರಿವಿಕ್ರಮ ಅವತಾರದಲ್ಲಿ ತನ್ನ ಪಾದದಿಂದ ಕೆಳಗೆ ಇದೆ ಎಂಬುದಾಗಿ ನೋಡುತ್ತಾನೆ. ಬೇರೆ ಸಮಯದಲ್ಲಿ ಮೇಲ್ಭಾಗದಲ್ಲಿದೆ ಎಂದು ನೋಡುತ್ತಾನೆ. ಅಥವಾ ತನ್ನ ಶರೀರದಲ್ಲಿ ಈ ಜಗತ್ತನ್ನು ಮೇಲೆ ಕೆಳಗೆ ವ್ಯಾಪಿಸಿರುವಂತೆ ನೋಡುತ್ತಾನೆ. ಹೀಗೆ ನೋಡುವ ಪರಮಾತ್ಮನಿಂದಲೇ ಈ ಜಗತ್ತು, ಈ ಶರೀರವು ವ್ಯಾಪ್ತವಾಗಿದೆ ಎಂಬುದನ್ನು ತಿಳಿದುಕೊ.

ಊರ್ಧ್ವಂ ಪಾದತಳಾಭ್ಯಾಂ ಯದವಾಗೂರ್ಧ್ವಂ ಚ ಪಶ್ಯತಿ ।
ಏತೇನ ಸರ್ವಮೇವೇದಂ ವಿದ್ಧ್ಯಭಿವ್ಯಾಪ್ತಮಂತರಮ್ ॥ ೨೪ ॥

ಈ ಲೋಕದಲ್ಲಿರುವ ಪುರುಷನು ಸಮಸ್ತ ಇಂದ್ರಿಯಗಳನ್ನು ಸಂಪೂರ್ಣವಾಗಿ ನಿಗ್ರಹಿಸಿಕೊಳ್ಳಬೇಕು. ಸತ್ವ, ರಜಸ್, ತಮೋಗುಣಗಳನ್ನು ಜಯಿಸಬೇಕು. ಈ ಮೂರು ಗುಣಗಳು ಆ ಪರಮಾತ್ಮನನ್ನೇ ಆಶ್ರಯಿಸಿಕೊಂಡಿವೆ.

ಪುರುಷೇ ಚೇಂದ್ರಿಯಾಣೀಹ ವೇದಿತವ್ಯಾನಿ ಕೃತ್ಸ್ನಶಃ ।
ತಮೋ ರಜಶ್ಚ ಸತ್ತ್ವಂ ಚ ವಿದ್ಧಿ ಭಾವಾಂಸ್ತದಾಶ್ರಯಾನ್ ॥ ೨೫ ॥

ಮನುಷ್ಯನು ಸಮಸ್ತ ಜಗತ್ತಿನಲ್ಲಿ ವಾಸ ಮಾಡುವ ಪ್ರಾಣಿಗಳ ಹುಟ್ಟು-ಸಾವುಗಳನ್ನು ತನ್ನ ಬುದ್ಧಿಯಿಂದ ವಿಮರ್ಶಿಸಿ ತಿಳಿದುಕೊಂಡಾಗ ಅವನಿಗೆ ಕಾಲಕ್ರಮದಿಂದ ಉತ್ತಮ ರೀತಿಯಾದ ಶಾಂತಿಯ ಲಾಭವು ಆಗುತ್ತದೆ.

ಏತಾಂ ಬುದ್ಧ್ವಾ ನರೋ ಬುದ್ಧ್ಯಾ ಭೂತಾನಾಮಾಗತಿಂ ಗತಿಮ್ ।
ಸಮವೇಕ್ಷ್ಯ ಶನೈಶ್ಚೈವ ಲಭತೇ ಶಮಮುತ್ತಮಮ್ ॥ ೨೬ ॥

ಬುದ್ಧಿಯು ರೂಪ-ರಸ ಮೊದಲಾದ ಗುಣಗಳ ಸಮೀಪಕ್ಕೆ ಜೀವಾತ್ಮನನ್ನು ರಾಗದಿಂದ ಜೀವನನ್ನು ಸೆಳೆಯಲ್ಪಟ್ಟು ಸಾಗುತ್ತದೆ. ಮನಸ್ಸೇ ಮೊದಲಾದ ಆರು ಇಂದ್ರಿಯಗಳು ಬುದ್ಧಿಯ ಅಧೀನಗಳಾಗಿಯೇ ವ್ಯಾಪಾರವನ್ನು ಮಾಡುತ್ತವೆ. ಈ ಪದಾರ್ಥವು ನನಗೆ ದೊರಕೀತು ಎಂದು ಬುದ್ಧಿಯು ಹುಟ್ಟಿದಾಗ ಕಣ್ಣೇ ಮೊದಲಾದ ಇಂದ್ರಿಯಗಳು ಆ ವಸ್ತುವಿನ ಬಳಿ ಸಾಗುತ್ತವೆ. ಈ ರೀತಿಯಾದ ಅಪೇಕ್ಷೆಗಳು ಬುದ್ಧಿಯಲ್ಲಿ ಹುಟ್ಟದಿದ್ದಲ್ಲಿ ಬುದ್ಧಿಯನ್ನೇ ನಿಗ್ರಹಿಸಿಕೊಂಡಲ್ಲಿ ಇಂದ್ರಿಯಗಳ ಬಾಹ್ಯ ಚಲನೆಯು ಉಂಟಾಗುವುದಿಲ್ಲ. ಸಮಸ್ತ ಇಂದ್ರಿಯಗಳ ವ್ಯಾಪಾರವೂ ಬುದ್ಧಿಯ ಅಧೀನವಾಗಿಯೇ ನಡೆಯುತ್ತದೆ.

ಗುಣಾಂತೇ ನೀಯತೇ ಬುದ್ಧಿರ್ಬುದ್ಧಿರೇವೇಂದ್ರಿಯಾಣ್ಯಪಿ ।
ಮನಃಷಷ್ಠಾನಿ ಸರ್ವಾಣಿ ಬುದ್ಧ್ಯಭಾವೇ ಕುತೋ ಗುಣಾಃ ॥ ೨೭ ॥

ಇತಿ ತನ್ಮಯಮೇವೈತತ್ ಸರ್ವಂ ಸ್ಥಾವರಜಂಗಮಮ್ ।
ಪ್ರಲೀಯತೇ ಚೋದ್ಭವತಿ ತಸ್ಮಾನ್ನಿರ್ದಿಶ್ಯತೇ ತಥಾ ॥ ೨೮ ॥

ಸ್ಥಾವರ-ಜಂಗಮಾತ್ಮಕವಾದ ಜಗತ್ತೆಲ್ಲವೂ ಈ ಬುದ್ಧಿಯ ಅಧೀನವಾಗಿಯೇ ಸಾಗುತ್ತದೆ. ಜಗತ್ತಿನ ಉತ್ಪತ್ತಿ-ಲಯಗಳಿಗೂ ಬುದ್ಧಿಯೇ ಮೂಲವು.

ಯೇನ ಪಶ್ಯತಿ ತಚ್ಚಕ್ಷುಃ ಶೃಣೋತಿ ಶ್ರೋತ್ರಮುಚ್ಯತೇ ।
ಜಿಘ್ರತಿ ಘ್ರಾಣಮಿತ್ಯಾಹೂ ರಸಂ ಜಾನಾತಿ ಜಿಹ್ವಯಾ ॥ ೨೯ ॥

ಮನುಷ್ಯನು ಯಾವ ಬುದ್ಧಿಯಿಂದ ನೋಡುತ್ತಾನೋ ಅದೇ ಚಕ್ಷುಸ್ಸು. ಯಾವ ಬುದ್ಧಿಯಿಂದ ಕೇಳುತ್ತಾನೋ ಅದೇ ಶ್ರೋತ್ರೇಂದ್ರಿಯ. ಯಾವ ಬುದ್ಧಿಯಿಂದ ಆಘ್ರಾಣಿಸುತ್ತಾನೋ ಅದೇ ಘ್ರಾಣೇಂದ್ರಿಯ. ಯಾವ ಬುದ್ಧಿಯಿಂದ ರಸವನ್ನು ಆಸ್ವಾದಿಸುತ್ತಾನೋ ಅದೇ ಜಿಹ್ವೆ ಎನಿಸಿದೆ.

ತ್ವಚಾ ಸ್ಪೃಶತಿ ಚ ಸ್ಪರ್ಶಾನ್ ಬುದ್ಧಿರ್ವಿಕ್ರಿಯತೇಽಸಕೃತ್ ।
ಯೇನ ಸಂಕಲ್ಪಯತ್ಯರ್ಥಂ ಕಿಂಚಿದ್ಭವತಿ ತನ್ಮನಃ ॥ ೩೦ ॥

ಯಾವ ಬುದ್ಧಿಯಿಂದ ಸ್ಪರ್ಶಜ್ಞಾನವನ್ನು ಹೊಂದುತ್ತಾನೋ ಅದೇ ಸ್ಪರ್ಶ ಎನಿಸಿದೆ. ಹೀಗೆ ಹಲವು ಇಂದ್ರಿಯಗಳ ರೂಪವಾಗಿ ವಿಕಾರವಾಗಿ ಬುದ್ಧಿಯೇ ಕೆಲಸ ಮಾಡುತ್ತದೆ. ಬುದ್ಧಿಯು ಯಾವುದಾದರೂ ಒಂದು ವಿಷಯವನ್ನು ಉದ್ದೇಶಿಸಿ ಸಂಕಲ್ಪಿಸಿಕೊಂಡಾಗ ಅದು ಮನಸ್ಸು ಎನಿಸುತ್ತದೆ.

ಅಧಿಷ್ಠಾನಾನಿ ಬುದ್ಧೇರ್ಹಿ ಪೃಥಗರ್ಥಾನಿ ಪಂಚಧಾ ।
ಪಂಚೇಂದ್ರಿಯಾಣಿ ಯಾನ್ಯಾಹುಸ್ತಾನ್ಯದೃಶ್ಯೋಽಧಿತಿಷ್ಠತಿ ॥ ೩೧ ॥

ಹೀಗೆ ಬುದ್ಧಿಗೆ ಐದು ಆಧಾರಗಳಿವೆ. ಅವುಗಳ ಪ್ರಯೋಜನಗಳು ರೂಪ, ರಸ ಮೊದಲಾಗಿ ಬೇರೆ ಬೇರೆಯಾಗಿವೆ. ಅವುಗಳನ್ನೇ ಪಂಚೇಂದ್ರಿಯಗಳು ಎನ್ನುತ್ತಾರೆ. ಬುದ್ಧಿತತ್ತ್ವವು ಅವುಗಳನ್ನು ಕಣ್ಣಿಗೆ ಕಾಣಿಸದಂತೆ ನಿಯಮಿಸುತ್ತಿದೆ.

ಪುರುಷಾಧಿಷ್ಠಿತಾ ಬುದ್ಧಿಸ್ತ್ರಿಷು ಭಾವೇಷು ವರ್ತತೇ ।
ಕದಾಚಿಲ್ಲಭತೇ ಪ್ರೀತಿಂ ಕದಾಚಿದನುಶೋಚತಿ ॥ ೩೨ ॥

ಆ ಬುದ್ಧಿಯು ಪುರುಷರನ್ನು ಸತ್ವ, ರಜ, ತಮ ಎಂಬ ಜೀವರಲ್ಲಿ ಪ್ರವರ್ತಿಸುತ್ತದೆ. ಉತ್ತಮ ಜೀವರಲ್ಲಿ ಸಾತ್ವಿಕ ಸ್ವಭಾವದಿಂದ, ಮಧ್ಯಮ ಜೀವರಲ್ಲಿ ರಾಜಸ ಸ್ವಭಾವದಿಂದ, ಅಧಮ ಜೀವರಲ್ಲಿ ತಾಮಸ ಸ್ವಭಾವದಿಂದ ಪ್ರವೃತ್ತಿಯನ್ನು ಹೊಂದುತ್ತದೆ. ಧರ್ಮವನ್ನು ಆಚರಿಸುವ ಈ ಬುದ್ಧಿಯು ತಾಮಸ ವ್ಯಾಪಾರವನ್ನು ಮಾಡುವುದಿಲ್ಲ. ಈ ಬುದ್ಧಿಯನ್ನಾಶ್ರಯಿಸಿಯೇ ಒಮ್ಮೆ ಉತ್ತಮ ಜೀವನು ಮುಕ್ತಿಯನ್ನು ಹೊಂದುತ್ತಾನೆ. ಅಧಮ ಜೀವನು ಅಂಧಂತಮಸ್ಸನ್ನು ಹೊಂದುತ್ತಾನೆ.

ನ ಸುಖೇನ ನ ದುಃಖೇನ ಕದಾಚಿದಪಿ ವರ್ತತೇ ।
ಏವಂ ನರಾಣಾಂ ಮನಸಿ ತ್ರಿಷು ಭಾವೇಷ್ವವಸ್ಥಿತಾ ॥ ೩೩ ॥

ಮಧ್ಯಮ ಜೀವನು ಕೇವಲ ಸುಖದಿಂದಾಗಲೀ, ಕೇವಲ ದುಃಖದಿಂದಾಗಲೀ ಇರುವುದಿಲ್ಲ. ಮಧ್ಯಮ ಜೀವನಲ್ಲಿ ಬುದ್ಧಿಯು ಸುಖ-ದುಃಖಗಳ ಮೂಲಕ ನಿಯಮನ ಮಾಡುತ್ತದೆ. ಈ ರೀತಿಯಾಗಿ ಮನುಷ್ಯನಲ್ಲಿಯೇ ಮೂರು ವಿಧವಾದ ಅರ್ಹತೆಗಳಿರುತ್ತವೆ.

ಸೇಯಂ ಭಾವಾತ್ಮಿಕಾ ಭಾವಾಂಸ್ತ್ರೀನೇತಾನ್ನಾತಿವರ್ತತೇ ।
ಸರಿತಾಂ ಸಾಗರೋ ಭರ್ತಾ ಮಹಾವೇಲಾಮಿವೋರ್ಮಿಮಾನ್ ॥೩೪॥

ಅವಿಭಾಗಗತಾ ಬುದ್ಧಿರ್ಭಾವೇ ಮನಸಿ ವರ್ತತೇ ।
ಪ್ರವರ್ತಮಾನಂ ಹಿ ರಜಸ್ತದ್ಭಾವಮನುವರ್ತತೇ ॥ ೩೫ ॥

ಎಲ್ಲಾ ವಸ್ತುವಿನ ಸ್ವರೂಪದಲ್ಲಿರುವ ಬುದ್ಧಿಯು ಆಗಾಗ ಸಮುದ್ರವು ಉಕ್ಕಿ ಅಲೆಗಳ ಸಮುದಾಯದಿಂದ ತನ್ನ ಮೇರೆಯನ್ನು ಮೆಟ್ಟಿ ಮೇಲೆ ಮೇಲೆ ಬರುವಂತೆ ಕೆಲವೊಮ್ಮೆ ಮೂರು ಸ್ವಭಾವಗಳನ್ನು ಅತಿಕ್ರಮಿಸಿ ಈ ಬುದ್ಧಿಯು ವ್ಯಾಪಾರ ಮಾಡುತ್ತದೆ. ಪಂಚೇಂದ್ರಿಯಗಳ ಮೂಲಕ ಐದು ರೀತಿಯಲ್ಲಿ ಹೊರಗೆ ಕಾಣದೇ ಇರುವ ಬುದ್ಧಿಯು ಮನಸ್ಸಿನಲ್ಲಿ ಅಡಗಿ ಇರುತ್ತದೆ. ಕಾರ್ಯಪ್ರವರ್ತಕವಾದ ರಜೋಗುಣವು ಬುದ್ಧಿಯನ್ನು ಆವರಿಸಿದಾಗ ಇಂದ್ರಿಯಗಳ ದ್ವಾರಾ ಬುದ್ಧಿಯು ವ್ಯಾಪಾರವನ್ನು ಮಾಡುತ್ತದೆ.

ಇಂದ್ರಿಯಾಣಿ ಹಿ ಸರ್ವಾಣಿ ಪ್ರದರ್ಶಯತಿ ಸಾ ಸದಾ ।
ಪ್ರೀತಿಃ ಸತ್ತ್ವಂ ರಜಃ ಶೋಕಸ್ತಮೋ ಮೋಹಶ್ಚ ತೇ ತ್ರಯಃ ॥ ೩೬ ॥

ಇಂದ್ರಿಯಗಳು ವಿಷಯದ ಕಡೆ ಧಾವಿಸಿದಾಗ ಅದರಿಂದ ಪ್ರೀತಿರೂಪವಾದ ಸತ್ವವೂ, ಅಜ್ಞಾನ ರೂಪವಾದ ತಮಸ್ಸೂ, ಶೋಕರೂಪವಾದ ರಜಸ್ಸು ಎಂಬ ಮೂರು ಗುಣಗಳು ಪ್ರವೃತ್ತಿಯನ್ನು ಹೊಂದುತ್ತವೆ. ಹೀಗೆ ಪ್ರೀತಿ, ಶೋಕ, ಮೋಹ ಎಂಬುವು ಅದರ ಫಲವೆನಿಸಿವೆ.

ಯೇ ಯೇ ಚ ಭಾವಾ ಲೋಕೇಽಸ್ಮಿನ್ ಸರ್ವೇಷ್ವೇತೇಷು ತೇ ತ್ರಿಷು ।
ಇತಿ ಬುದ್ಧಿಗತಿಃ ಸರ್ವಾ ವ್ಯಾಖ್ಯಾತಾ ತವ ಭಾರತ ॥ ೩೭ ॥

ಇಂದ್ರಿಯಾಣಿ ಚ ಸರ್ವಾಣಿ ವಿಜೇತವ್ಯಾನಿ ಧೀಮತಾ ।
ಸತ್ತ್ವಂ ರಜಸ್ತಮಶ್ಚೈವ ಪ್ರಾಣಿನಾಂ ಸಂಶ್ರಿತಾಃ ಸದಾ ॥ ೩೮ ॥

ಧರ್ಮರಾಜನೇ, ಲೋಕದಲ್ಲಿ ಇರುವ ಪದಾರ್ಥಗಳೆಲ್ಲ ಈ ಮೂರು ಗುಣಗಳಲ್ಲಿಯೇ ಅಡಕವಾಗಿವೆ. ಇದಕ್ಕೆ ಮೂಲವಾದದ್ದು ಬುದ್ಧಿಯು. ಈ ರೀತಿಯಾಗಿ ಬುದ್ಧಿಯ ಗತಿಗಳನ್ನು ನಾನು ನಿನಗೆ ವಿವರಿಸಿದ್ದೇನೆ. ಧರ್ಮರಾಜನೇ, ಧೀಮಂತನಾದವನು ಈ ಇಂದ್ರಿಯಗಳನ್ನು ನಿಗ್ರಹಿಸಿಕೊಳ್ಳಬೇಕು.

ತ್ರಿವಿಧಾ ವೇದನಾ ಚೈವ ಸರ್ವಸತ್ತ್ವೇಷು ದೃಶ್ಯತೇ ।
ಸಾತ್ತ್ವಿಕೀ ರಾಜಸೀ ಚೈವ ತಾಮಸೀ ಚೇತಿ ಭಾರತ ॥ ೩೯ ॥

ಸತ್ತ್ವ, ರಜಸ್ಸು, ತಮಸ್ಸು ಇವುಗಳು ಯಾವಾಗಲೂ ಪ್ರಾಣಿಗಳನ್ನು ಆಶ್ರಯಿಸಿಕೊಂಡಿವೆ. ಪ್ರತಿ ಪ್ರಾಣಿಗಳಲ್ಲಿಯೂ ಕೂಡ ಸಾತ್ವಿಕ, ರಾಜಸ, ತಾಮಸ ಎಂಬ ಭಾವಗಳು, ಸಂವೇದನೆಗಳು ಕಾಣಿಸುತ್ತವೆ.

ಸುಖಸ್ಪರ್ಶಃ ಸತ್ತ್ವಗುಣೋ ದುಃಖಸ್ಪರ್ಶೋ ರಜೋಗುಣಃ ।
ತಮೋಗುಣೇನ ಸಂಯುಕ್ತೌ ಭವತೋಽವ್ಯವಹಾರಿಕೌ ॥ ೪೦ ॥

ಸತ್ವಗುಣದಲ್ಲಿ ಸುಖದ ಸ್ಪರ್ಶವಿದೆ. ರಜೋಗುಣದಲ್ಲಿ ದುಃಖದ ಸಂಬಂಧವಿದೆ. ಈ ಎರಡು ತಮೋಗುಣದ ಜೊತೆಗೆ ಸೇರಿದಾಗ ಕೇವಲ ಯಥಾರ್ಥವಾದ ಸುಖ, ದುಃಖಗಳನ್ನು ಪಡೆಯದೆ ಇವುಗಳ ಭ್ರಮೆಯನ್ನು ಹೊಂದುತ್ತಾನೆ. ತಮೋಗುಣದ ಆಧಿಕ್ಯದಿಂದ ಸತ್ತ್ವ, ರಜೋಗುಣಗಳ ಸ್ಥಿತಿಯನ್ನು ಪಡೆಯದ ಜೀವನು ನಿದ್ರೆಯಿಂದ ಸ್ತಂಭೀಭೂತನಾಗಿ ಯಾವುದನ್ನೂ ನೋಡಲು ಸಮರ್ಥನಾಗಿರುವುದಿಲ್ಲ.

ತತ್ರ ಯತ್ ಪ್ರೀತಿಸಂಯುಕ್ತಂ ಕಾಯೇ ಮನಸಿ ವಾ ಭವೇತ್ ।
ವರ್ತತೇ ಸಾತ್ತ್ವಿಕೋ ಭಾವ ಇತ್ಯವೇಕ್ಷೇತ ತತ್ತದಾ ॥ ೪೧ ॥

ಜೀವರಲ್ಲಿ ದೇಹದಲ್ಲಿಯಾಗಲೀ, ಮನಸ್ಸಿನಲ್ಲಿಯಾಗಲೀ ಪ್ರೀತಿಯಿಂದ ಕೂಡಿದ ಸಂತೋಷವು ಉಂಟಾದಾಗ ಅದನ್ನು ಆ ಸಮಯದಲ್ಲಿ ಸಾತ್ವಿಕಭಾವ ಎಂದು ತಿಳಿಯಬೇಕು.

ಅಥ ಯದ್ದುಃಖಸಂಯುಕ್ತಮತುಷ್ಟಿಕರಮಾತ್ಮನಃ ।
ಪ್ರವೃತ್ತಂ ರಜ ಇತ್ಯೇವ ತನ್ನಸಂರಭ್ಯ ಚಿಂತಯೇತ್ ॥ ೪೨ ॥

ಮನುಷ್ಯನಿಗೆ ಅಸಂತೋಷವುಂಟಾಗುವ ಪ್ರಸಂಗಗಳು ಒದಗಿದಾಗ, ಮನಸ್ಸು ದುಃಖದಿಂದ ಕೂಡಿದಾಗ ಇದು ರಜೋಗುಣದ ಕಾರ್ಯವೆಂದು ಅರಿತು ಇಂತಹದ್ದನ್ನು ಪಡೆದಾಗ ಚಿಂತೆಗೀಡಾಗಬಾರದು.

ಅಥ ಯನ್ಮೋಹಸಂಯುಕ್ತಮವ್ಯಕ್ತಮಿವ ಯದ್ಭವೇತ್ ।
ಅಪ್ರತರ್ಕ್ಯಮವಿಜ್ಞೇಯಂ ತಮಸ್ತದುಪಧಾರಯೇತ್ ॥ ೪೩ ॥

ಯಾವಾಗ ಏನೂ ತಿಳಿಯದೆ ಇರುವ ಜೀವನು ಮೋಹಕ್ಕೆ ತುತ್ತಾಗುತ್ತಾನೋ ಎಲ್ಲ ವಿಚಾರಗಳು ಅಸ್ಪಷ್ಟವಾಗುತ್ತವೋ, ಊಹೆ ಮಾಡಲಾಗದ, ತಿಳಿಯದೇ ಇರುವ ಆ ಅವಸ್ಥೆಯನ್ನು ತಮಸ್ಸಿನ ವ್ಯಾಪಾರವೆಂದು ತಿಳಿದು ಚಿಂತೆಯಿಂದ ಮುಕ್ತನಾಗಬಹುದು.

ಪ್ರಹರ್ಷಃ ಪ್ರೀತಿರಾನಂದಃ ಸುಖಂ ಸಂಶಾಂತಚಿತ್ತತಾ ।
ಕಥಂಚಿದಭಿವರ್ತಂತ ಇತ್ಯೇತೇ ಸಾತ್ತ್ವಿಕಾ ಗುಣಾಃ ॥ ೪೪ ॥

ಸಂತೋಷ, ಪ್ರೀತಿ, ಆನಂದ, ಸುಖ, ಶಾಂತಿ ಎಂಬವುಗಳು ಎಲ್ಲಿಯಾದರೂ ಅಭಿವೃದ್ಧಿಯನ್ನು ಹೊಂದಿದಾಗ ಅವುಗಳನ್ನು ಸಾತ್ವಿಕ ಗುಣ ಎಂದು ಚಿಂತಿಸಬೇಕು.

ಅತುಷ್ಟಿಃ ಪರಿತಾಪಶ್ಚ ಶೋಕೋ ಲೋಭಸ್ತಥಾಕ್ಷಮಾ ।
ಲಿಂಗಾನಿ ರಜಸಸ್ತಾನಿ ದೃಶ್ಯಂತೇ ಹೇತ್ವಹೇತುಭಿಃ ॥ ೪೫ ॥

ಅಸಂತುಷ್ಟಿ, ಪರಿತಾಪ, ಶೋಕ, ಅತಿಯಾದ ಆಸೆ, ಅಸಹನೆ ಇವುಗಳು ಉತ್ಪನ್ನವಾದಾಗ ಇವುಗಳು ಪರಲೋಕದ ಪುಣ್ಯಕ್ಕೆ ಪ್ರತಿಬಂಧಕಗಳಾದ ರಾಜಸ ಗುಣಗಳು ಎಂದು ಚಿಂತಿಸಬೇಕು.

ಅಭಿಮಾನಸ್ತಥಾ ಮೋಹಃ ಪ್ರಮಾದಃ ಸ್ವಪ್ನತಂದ್ರಿತಾ ।
ಕಥಂಚಿದಭಿವರ್ತಂತೇ ವಿವಿಧಾಸ್ತಾಮಸಾ ಗುಣಾಃ ॥ ೪೬ ॥

ಅಭಿಮಾನ, ಅವಿವೇಕ, ಅಜಾಗರೂಕತೆ, ನಿದ್ರೆ, ಸೋಮಾರಿತನ ಇವೆಲ್ಲವೂ ತಾಮಸಗುಣಗಳೆಂದು ಚಿಂತಿಸಬೇಕು.

ದೂರಗಂ ಬಹುಧಾಗಾಮಿ ಪ್ರಾರ್ಥನಾಸಂಶಯಾತ್ಮಕಮ್ ।
ಮನಃ ಸುನಿಯತಂ ಯಸ್ಯ ಸ ಸುಖೀ ಪ್ರೇತ್ಯ ಚೇಹ ಚ ॥ ೪೭ ॥

ಬಹುದೂರಕ್ಕೆ ಸಾಗುವ ಬಹುವಿಧವಾಗಿ ಸುತ್ತುವ ಸ್ವಭಾವವುಳ್ಳ ಆಸೆ ಮತ್ತು ಸಂಶಯದಿಂದ ತುಂಬಿದ ಮನಸ್ಸನ್ನು ಯಾವನು ಸ್ಥಿರವಾಗಿ ನಿಲ್ಲಿಸುತ್ತಾನೋ ಅವನು ಇಹ-ಪರಗಳಲ್ಲಿ ಸುಖಿಯಾಗಿರುತ್ತಾನೆ.

ಸತ್ತ್ವಕ್ಷೇತ್ರಜ್ಞಯೋರೇತದಂತರಂ ಪಶ್ಯ ಸೂಕ್ಷ್ಮಯೋಃ ।
ಸೃಜತೇ ತು ಗುಣಾನೇಕ ಏಕೋ ನ ಸೃಜತೇ ಗುಣಾನ್ ॥ ೪೮ ॥

ಈ ಗುಣಗಳ ಸಂಬಂಧವಿಲ್ಲದೆ ಜೀವರನ್ನು ನಿಯಮಿಸುವ ಅಂತರ್ಯಾಮಿಯಾದ ಪರಮಾತ್ಮನಿಗೂ, ಸತ್ವ ಶಬ್ದದಿಂದ ಕರೆಯಲ್ಪಟ್ಟ ಪ್ರಾಣಿಸಮೂಹಕ್ಕೂ ಇರುವ ಸೂಕ್ಷ್ಮವಾದ ಅಂತರವನ್ನು ನೀನೇ ನೋಡು. ಕ್ಷೇತ್ರಜ್ಞನೆನಿಸಿದ ಪರಮಾತ್ಮನು ಒಬ್ಬನೇ ಸ್ವತಂತ್ರನಾಗಿ ನಿಂತು ಈ ಗುಣಗಳನ್ನು ಸೃಷ್ಟಿಸುತ್ತಾನೆ. ಅವನ ಅಧೀನನಾಗಿರುವ ಜೀವನು ಅಸ್ವತಂತ್ರನಾಗಿ ಏನನ್ನೂ ಸೃಷ್ಟಿಸಲಾರನು.

ವ್ಯಾಖ್ಯಾನ ವಿಶೇಷ– ಕೆಲವರು 'ಸತ್ತ್ವಕ್ಷೇತ್ರಜ್ಞಯೋರೇತತ್' ಎನ್ನುವುದಕ್ಕೆ ಸತ್ವಗುಣಕ್ಕೂ, ಕ್ಷೇತ್ರಜ್ಞನಿಗೂ ಇರುವ ಅಂತರವನ್ನು ಸೂಕ್ಷ್ಮವಾಗಿ ನೋಡು ಎಂದು ವ್ಯಾಖ್ಯಾನಿಸುತ್ತಾ ಬುದ್ಧಿಯೂ, ಕ್ಷೇತ್ರಜ್ಞನು ಒಂದೇ ಆಗಿದೆ ಎಂದು ವಿವರಿಸಿದ್ದಾರೆ. ಸತ್ತ್ವಗುಣಕ್ಕೂ, ಕ್ಷೇತ್ರಜ್ಞನಿಗೂ ಅಂತರವನ್ನಾಗಲೀ, ಅರ್ಥಾತ್ ಭೇದವನ್ನಾಗಲೀ ಐಕ್ಯವನ್ನಾಗಲೀ ಇಲ್ಲಿ ಹೇಳುವುದು ಅಪ್ರಸ್ತುತವಾಗುತ್ತದೆ. ಹಿಂದೆ ಮೂರುಗುಣಗಳನ್ನು ಪ್ರಸ್ಥಾಪಿಸಿ ಒಂದೇ ಗುಣವನ್ನು ಸ್ವೀಕರಿಸಿ ಅಂತರವನ್ನು ಹೇಳುವುದು ಯುಕ್ತಿಬದ್ಧವಾಗಿರುವುದಿಲ್ಲ. ೫೦ನೇ ಶ್ಲೋಕದಲ್ಲಿ 'ಸಂಪ್ರಯುಕ್ತೌ ತಥೈವ ತೌ' ಎಂದು ಇರುವುದರಿಂದ ಜೀವ–ಪರಮಾತ್ಮರಿಗೆ ಭೇದವನ್ನೇ ಹೇಳಿದ್ದಾರೆ. ಸತ್ತ್ವಗುಣವೆಂದು ಸ್ವೀಕರಿಸಿದರೆ ಮುಂದೆ ಹೇಳಿದ ವಾಕ್ಯದ ವಿರೋಧವು ಉಂಟಾಗುತ್ತದೆ. ಸಂಪ್ರಯುಕ್ತೌ ಎಂದರೆ ನಿತ್ಯವೂ ಸಂಬಂಧವನ್ನು ಹೊಂದಿರುವ ಜೀವ–ಪರಮಾತ್ಮರು ಎಂದು ಅರ್ಥವು. ಜೀವನಿಗೆ ಸತ್ತ್ವಗುಣದ ಸಂಬಂಧವು ನಿತ್ಯವೂ ಇರುವುದಿಲ್ಲ. ಆದ್ದರಿಂದ ಪ್ರಕರಣ ವಿರೋಧ ಬರುವುದರಿಂದ ಸತ್ತ್ವ ಶಬ್ದಕ್ಕೆ ಪ್ರಾಣಿಸಮೂಹ ಎಂದೇ ಅರ್ಥ ಮಾಡಬೇಕೇ ಹೊರತು ಸತ್ತ್ವಗುಣವೆಂದು ಅರ್ಥ ಮಾಡಬಾರದು. ಕ್ಷೇತ್ರಜ್ಞ ಶಬ್ದಕ್ಕೆ ಜೀವನೆಂದು ಅರ್ಥಮಾಡಬಾರದು. 'ಕ್ಷೇತ್ರಜ್ಞಂ ಚಾಪಿ ಮಾಂ ವಿದ್ಧಿ' ಎಂದು ಗೀತೆಯಲ್ಲಿ ಕೃಷ್ಣನು ಹೇಳಿದಂತೆ ಕ್ಷೇತ್ರಜ್ಞನು ಪರಮಾತ್ಮನೇ ಆಗಿದ್ದಾನೆ.

ಮಶಕೋದುಂಬರೌ ಚಾಪಿ ಸಂಪ್ರಯುಕ್ತೌ ಯಥಾ ಸದಾ ।
ಅನ್ಯೋನ್ಯಮನ್ಯೌ ಚ ಯಥಾ ಸಂಪ್ರಯೋಗಸ್ತಥಾ ತಯೋಃ ॥ ೪೯ ॥

ಅತ್ತಿಹಣ್ಣು, ಅತ್ತಿಹಣ್ಣಿನಲ್ಲಿರುವ ನುಸಿ ಇವೆರಡು ಒಂದಾಗಿ ಸೇರಿದಂತೆ ಕಂಡು ಬಂದರೂ ಅವುಗಳು ಹೇಗೆ ಬೇರೆ ಬೇರೆಯಾಗಿವೆಯೋ ಅದರಂತೆ ಸ್ವಭಾವದಿಂದಲೇ ಬೇರ್ಪಟ್ಟಿರುವ ಜೀವ-ಪರಮಾತ್ಮರು ಒಂದೇ ಶರೀರದಲ್ಲಿ ನೆಲೆಸಿದ್ದರೂ ಪರಸ್ಪರ ಭಿನ್ನರಾಗಿಯೇ ಇದ್ದಾರೆ.

ಪೃಥಗ್ಭೂತೌ ಪ್ರಕೃತ್ಯಾ ತೌ ಸಂಪ್ರಯುಕ್ತೌ ಚ ಸರ್ವದಾ ।
ಯಥಾ ಮತ್ಸ್ಯೋದಕಂ ಚೈವ ಸಂಪ್ರಯುಕ್ತೌ ತಥೈವ ತೌ ॥ ೫೦ ॥

ನೀರು ಮತ್ತು ಮೀನು ಯಾವಾಗಲೂ ನಿತ್ಯಸಂಬಂಧವನ್ನು ಹೊಂದಿದ್ದರೂ ಅವುಗಳಲ್ಲಿ ಒಂದಕ್ಕೊಂದು ಭಿನ್ನತೆಯೇ ಹೇಗೆ ಇದೆಯೋ ಅದರಂತೆ ಜೀವರಿಗೂ ಪರಮಾತ್ಮನಿಗೂ ನಿತ್ಯ ಸಂಬಂಧವಿದ್ದರೂ ಭಿನ್ನತೆಯನ್ನು ತಿಳಿಯಬೇಕು.

ನ ಗುಣಾ ವಿದುರಾತ್ಮಾನಂ ಸ ಗುಣಾನ್ ವೇತ್ತಿ ಸರ್ವಶಃ ।
ಪರಿದ್ರಷ್ಟಾ ಗುಣಾನಾಂ ಚ ಸಂಸ್ರಷ್ಟಾ ಮನ್ಯತೇ ಸದಾ ॥ ೫೧ ॥

ಪರಮಾತ್ಮನಲ್ಲಿರುವ ಗುಣಗಳನ್ನು ಜೀವಾತ್ಮನು ತಿಳಿಯಲಾರನು. ಆದರೆ ಜೀವಾತ್ಮನಲ್ಲಿರುವ ಗುಣಗಳನ್ನು ಪರಮಾತ್ಮನು ತಿಳಿದಿರುತ್ತಾನೆ. ಅಸ್ವತಂತ್ರರಾದ ಜೀವರು ಯಾವತ್ತೂ ಪರಮಾತ್ಮನನ್ನು ತಿಳಿಯಲಾರರು. ಹೀಗಿದ್ದರೂ ಜೀವನು ನಾನು ಎಲ್ಲಾ ಗುಣಗಳನ್ನು ನೋಡುತ್ತೇನೆ, ಸೃಷ್ಟಿಸುತ್ತೇನೆ ಎಂದು ತಪ್ಪಾಗಿ ತಿಳಿಯುತ್ತಾನೆ. ಪರಮಾತ್ಮನು ಎಲ್ಲಾ ಗುಣಗಳನ್ನು ನಾನೇ ಸೃಷ್ಟಿಸುತ್ತೇನೆ, ನೋಡುತ್ತೇನೆ ಎಂದು ಯಥಾರ್ಥವಾಗಿ ತಿಳಿಯುತ್ತಾನೆ.

ಇಂದ್ರಿಯೈಸ್ತು ಪ್ರದೀಪಾರ್ಥಂ ಕುರುತೇ ಬುದ್ಧಿಸಪ್ತಮೈಃ ।
ನಿರ್ವಿಚೇಷ್ಟೈರಜಾನದ್ಭಿಃ ಪರಮಾತ್ಮಾ ಪ್ರದೀಪವತ್ ॥ ೫೨ ॥

ಯಾವಾಗ ಸಾಧಕನು ಪಂಚಜ್ಞಾನೇಂದ್ರಿಯಗಳು, ಮನಸ್ಸು ಇವುಗಳ ಸಹಕಾರದಿಂದ ಕೂಡಿದ ಬಲಿಷ್ಠವಾದ ಬುದ್ಧಿಯಿಂದ ಬಾಹ್ಯವಾದ ವಿಷಯ ಸುಖಗಳನ್ನು ಚಿಂತಿಸದೆ, ಅಂತರಂಗದಲ್ಲಿ ಭಗವಂತನ ಪ್ರಸಾದಸಿದ್ಧಿಗೋಸ್ಕರ

ಇಂದ್ರಿಯಗಳನ್ನು ನಿಯಮಿಸಿಕೊಂಡು ಪರಮಾತ್ಮನನ್ನೇ ಎಲ್ಲಾ ಇಂದ್ರಿಯಗಳಿಂದ ನೋಡಲು ಪ್ರಯತ್ನಿಸುತ್ತಾನೋ ಅಂತಹ ಸಾತ್ವಿಕನಿಗೆ ಪರಮಾತ್ಮನು ಅಂತರಂಗದಲ್ಲಿ ಬೆಳಕಿನಂತೆ ಗೋಚರಿಸುತ್ತಾನೆ.

ಸೃಜತೇ ಹಿ ಗುಣಾನ್ ಸತ್ತ್ವಂ ಕ್ಷೇತ್ರಜ್ಞಃ ಪರಿಪಶ್ಯತಿ ।
ಸಂಪ್ರಯೋಗಸ್ತಯೋರೇಷ ಸತ್ತ ಕ್ಷೇತ್ರಜ್ಞಯೋರ್ಧ್ರುವಃ ॥ ೫೩ ॥

ಭಗವಂತನು ಪ್ರಾಣಿ ಸಮುದಾಯವನ್ನು, ಆಯಾ ಪ್ರಾಣಿಗಳಿಗೆ ಯೋಗ್ಯವಾದ ಸತ್ತ್ವಾದಿ ಗುಣಗಳನ್ನು ಸೃಷ್ಟಿಮಾಡುತ್ತಾನೆ. ಅವರನ್ನು ಚೆನ್ನಾಗಿ ಪರಿಪಾಲಿಸಲು ಗಮನ ಹರಿಸುತ್ತಾನೆ. ಈ ಪ್ರಾಣಿಸಮೂಹಕ್ಕೂ ಪರಮಾತ್ಮನಿಗೂ ಸಂಬಂಧವು ನಿತ್ಯವಾದುದು.

ವ್ಯಾಖ್ಯಾನ ವಿಶೇಷ– ಇಲ್ಲಿ ಸತ್ತ್ವ ಮತ್ತು ಕ್ಷೇತ್ರಜ್ಞ ಎಂಬ ಶಬ್ದಗಳಿಂದ ಪ್ರಾಣಿಸಮುದಾಯ ಮತ್ತು ಪರಮಾತ್ಮನನ್ನು ಗ್ರಹಿಸಬೇಕು. ಸತ್ತ್ವಗುಣದ ಸಂಬಂಧವು ಮೋಕ್ಷದ ಅವಸ್ಥೆಯಲ್ಲಿ ಇಲ್ಲದಿರುವುದರಿಂದ ನಿತ್ಯಸಂಬಂಧವು ಪ್ರಾಣಿಸಮೂಹದ ಜೊತೆಗೆ ಹೊಂದಿಕೆಯಾಗುತ್ತದೆ. 'ಸತ್ತ ಕ್ಷೇತ್ರಯೋರ್ಧ್ರುವಃ' ಎಂಬ ಮಾತಿನಿಂದ ಕ್ಷೇತ್ರಜ್ಞ-ಸತ್ತ್ವಗಳ ಸಂಬಂಧವು ಶಾಶ್ವತ ಎಂದು ಹೇಳಿದ್ದರಿಂದ ಜೀವ-ಪರಮಾತ್ಮರ ಸಂಬಂಧವು ನಿತ್ಯ ಎಂಬ ಅರ್ಥವು ಸ್ಪುಟವಾಗಿ ಗೋಚರವಾಗುತ್ತದೆ.

ಆಶ್ರಯೋ ನಾಸ್ತಿ ಸತ್ತ್ವಸ್ಯ ಕ್ಷೇತ್ರಜ್ಞಸ್ಯ ಚ ಕಶ್ಚನ ।
ಸತ್ತ್ವಂ ಮನಸ್ತು ಸೃಜತಿ ನ ಗುಣಾನ್ ವೈ ಕದಾಚನ ॥ ೫೪ ॥

ಪ್ರಾಣಿಸಮುದಾಯವು ಮಶಕಗಳು ಔದುಂಬರ ಫಲವನ್ನೂ, ಮತ್ಸ್ಯಗಳು ನೀರನ್ನು ಆಶ್ರಯಿಸಿದಂತೆ ಪರಮಾತ್ಮನನ್ನು ಆಶ್ರಯಿಸಿದೆ ಎಂದು ಹೇಳಿದ್ದರಿಂದ ಪ್ರಾಣಿ ಸಮೂಹಕ್ಕೆ ಆಶ್ರಯವು ಇಲ್ಲ ಎಂದರೆ ಪರಮಾತ್ಮನನ್ನು ಬಿಟ್ಟು ಬೇರೆ ಆಶ್ರಯವೂ ಇಲ್ಲ ಎಂದು ಅರ್ಥ. ಕ್ಷೇತ್ರಜ್ಞನಾದ ಪರಮಾತ್ಮನು ಯಾವ ಆಶ್ರಯವನ್ನೂ ಹೊಂದಿರುವುದಿಲ್ಲ. ಸ್ವಯಂ ತಾನಾಗಲೀ, ಬೇರೆಯವರಾಗಲಿ ಅವನಿಗೆ ಆಶ್ರಯನೆನಿಸುವುದಿಲ್ಲ. 'ಕಂ ಸ್ವಿದಾಸಿ ವಧಿಷ್ಠಾನಂ' ಎಂದು ಪರಮಾತ್ಮನಿಗೆ ಯಾವುದೇ ರೀತಿಯಾದ ಆಶ್ರಯದ ಅಗತ್ಯವಿಲ್ಲ ಎಂದು ಶ್ರುತಿ ಹೇಳಿದೆ. ಜೀವಸಮೂಹವು ರೂಪಾದಿ ಗುಣಗಳನ್ನು ಸೃಷ್ಟಿಸಲು ಸಮರ್ಥವಲ್ಲ. ಮನಸ್ಸು ಎಂದಿಗೂ ರೂಪಾದಿ ಗುಣಗಳನ್ನು ಸೃಷ್ಟಿಸುವುದಿಲ್ಲ. ಆದ್ದರಿಂದ ಯಾವಾಗ ಜೀವನು ಪರಮಾತ್ಮನನ್ನು

ಆಶ್ರಯಿಸಿ ತಾನು ಸೃಷ್ಟಿಸದ, ತನ್ನ ಮನಸ್ಸೇ ಮೊದಲಾದ ಇಂದ್ರಿಯಾದಿ ಮೊದಲಾದ ರೂಪಾದಿ ಗುಣಗಳ ವ್ಯಾಪಾರವನ್ನು ಅರ್ಥಾತ್ ಸ್ನೇಹಪಾಶಗಳನ್ನು ನಿಯಂತ್ರಿಸಿ-ಕೊಳ್ಳುತ್ತಾನೋ ಆಗ ಜೀವರಿಗೆ, ಸತ್ತ್ವನಾಮಕ ಜೀವಸಮೂಹಕ್ಕೆ ಪರಮಾತ್ಮನು ಹೃದಯದಲ್ಲಿ ಪ್ರಕಟನಾಗುತ್ತಾನೆ.

ರಶ್ಮೀಂಸ್ತೇಷಾಂ ಸ ಮನಸಾ ಯದಾ ಸಮ್ಯಙ್ನಿಯಿಚ್ಛತಿ ।
ತದಾ ಪ್ರಕಾಶತೇಽಸ್ಯಾತ್ಮಾ ಘಟೇ ದೀಪೋ ಜ್ವಲನ್ನಿವ ॥ ೫೫ ॥

ಯಾವಾಗ ಪ್ರಾಣಿಸಮುದಾಯವು ಇಂದ್ರಿಯದ್ವಾರದಿಂದ ಹೊರಡುವ ಗುಣಗಳೆಂಬ ಕಿರಣಗಳನ್ನು ಮನಸ್ಸಿನಲ್ಲಿಯೇ ನಿಗ್ರಹಿಸಿಕೊಳ್ಳುತ್ತದೋ ಆಗ ಘಟದೀಪದಂತೆ ಪರಮಾತ್ಮನು ಜೀವರ ಹೃದಯದಲ್ಲಿಯೇ ಬೆಳಗುತ್ತಾನೆ.

ತ್ಯಕ್ತ್ವಾ ಯಃ ಪ್ರಕೃತಂ ಕರ್ಮ ನಿತ್ಯಮಾತ್ಮರತಿರ್ಮುನಿಃ ।
ಸರ್ವಭೂತಾತ್ಮಭೂತಃ ಸ್ಯಾತ್ಸ ಗಚ್ಛೇತ್ ಪರಮಾಂ ಗತಿಮ್ ॥ ೫೬ ॥

ಯಾವನು ಕರ್ಮಗಳನ್ನೆಲ್ಲ ನೀಗಿ ಪರಮಾತ್ಮನಲ್ಲಿಯೇ ಪ್ರೇಮವುಳ್ಳವನಾಗಿ ಮನನಶೀಲನಾಗಿರುತ್ತಾನೋ ಅವನು ಕರ್ಮತ್ಯಾಗದಿಂದ ಎಲ್ಲ ಪ್ರಾಣಿಗಳಲ್ಲಿ ಅಂತರ್ಯಾಮಿಯಾದ ಪರಮಾತ್ಮನನ್ನು ತಿಳಿದು ಉತ್ತಮ ಗತಿಯನ್ನು ಹೊಂದುತ್ತಾನೆ.

ಯಥಾ ವಾರಿಚರಃ ಪಕ್ಷೀ ಲಿಪ್ಯಮಾನೋ ನ ಲಿಪ್ಯತೇ ।
ಏವಮೇವ ಕೃತಪ್ರಜ್ಞೋ ಭೂತೇಷು ಪರಿವರ್ತತೇ ॥ ೫೭ ॥

ಯಾವ ರೀತಿಯಾಗಿ ನೀರಿನಲ್ಲಿದ್ದರೂ ಹಂಸಪಕ್ಷಿಯು ನೀರಿನಲ್ಲಿ ನೆನೆಯುವುದಿಲ್ಲವೋ ಹಾಗೆಯೇ ಜೀವರ ಜೊತೆಗೇ ಸಂಚರಿಸುತ್ತಿರುವ ಸಾಧಕನು ಪರಮಾತ್ಮನ ತತ್ತ್ವಜ್ಞಾನವನ್ನು ಪಡೆದ ಫಲದಿಂದಾಗಿ ಪ್ರಾಣಿಗಳ ಸಮುದಾಯದಲ್ಲಿದ್ದರೂ ಸಂಗರಹಿತನಾಗಿರುತ್ತಾನೆ.

ಏವಂಸ್ವಭಾವಮೇವೈತತ್ ಸ್ವಬುದ್ಧ್ಯಾ ವಿಹರೇನ್ನರಃ ।
ಅಶೋಚನ್ನಪ್ರಹೃಷ್ಯಂಶ್ಚ ಚರೇದ್ ವಿಗತಮತ್ಸರಃ ॥ ೫೮ ॥

ಹೀಗೆ ಸಂಗರಹಿತವಾದ ಸ್ವಭಾವವುಳ್ಳ ಜೀವಾತ್ಮನು ಪರಮಾತ್ಮನ ಸ್ವರೂಪವನ್ನು ತನ್ನ ಬುದ್ಧಿಯಿಂದ ತಿಳಿದು ಆನಂದವನ್ನು ಹೊಂದಬೇಕು. ಅವನಿಗೆ ದುಃಖ, ಸಂತೋಷ, ಮತ್ಸರಗಳು ಎಂದಿಗೂ ಹುಟ್ಟಲಾರವು.

ಸ್ವಭಾವಸಿದ್ಧ್ಯಾ ಸಂಸಿದ್ಧಾನ್ ಸ ನಿತ್ಯಂ ಸೃಜತೇ ಗುಣಾನ್ ।
ಊರ್ಣನಾಭಿರ್ಯಥಾ ಸ್ರಷ್ಟಾ ವಿಜ್ಞೇಯಾಸ್ತಂತುವದ್ ಗುಣಾಃ॥ ೫೯ ॥

ಹೀಗೆ ಪರಮಾತ್ಮತತ್ತ್ವವನ್ನು ತಿಳಿದ ಜ್ಞಾನಿಯು ಜೇಡರ ಹುಳವು ತನ್ನಲ್ಲಿಯೇ ತನಗೆ ಬೇಕಾದ ನೂಲಿನ ಎಳೆಗಳನ್ನು ಉಂಟುಮಾಡುವಂತೆ ತನಗೆ ಬೇಕಾದ ಅಪೇಕ್ಷೆಗಳನ್ನು ತನ್ನಲ್ಲಿಯೇ ಪಡೆಯಬಲ್ಲನು. ಗುಣಗಳನ್ನು ಊರ್ಣನಾಭಿಯ ತಂತುಗಳಂತೆ ಚಿಂತಿಸಬೇಕು. ಊರ್ಣನಾಭಿಯುವೊ (ಜೇಡವು) ತನ್ನ ನೂಲಿನಿಂದ ಹೇಗೆ ಬಂಧನಕ್ಕೆ ತುತ್ತಾಗುವುದಿಲ್ಲ ಹಾಗೆ ವಿಷಯಗಳಿಂದ ಜ್ಞಾನಿಯು ಬದ್ಧನಾಗುವುದಿಲ್ಲ.

ಪ್ರಧ್ವಸ್ತಾ ನ ನಿವರ್ತಂತೇ ನಿವೃತ್ತಿರ್ನೋಪಲಭ್ಯತೇ ।
ಪ್ರತ್ಯಕ್ಷೇಣ ಪರೋಕ್ಷಂ ತದನುಮಾನೇನ ಸಿಧ್ಯತಿ ॥ ೬೦ ॥

ಲಿಂಗದೇಹದಿಂದ ಬಿಡುಗಡೆಯನ್ನು ಹೊಂದಿರುವ ಉತ್ತಮ, ಅಧಮ ಜೀವರು ಪುನಃ ಪ್ರವೃತ್ತಿಯನ್ನು ಹೊಂದುವುದಿಲ್ಲ. **'ನ ಚ ಪುನರಾವರ್ತತೇ ನ ಚ ಪುನರಾವರ್ತತೇ'** ಎಂದು ಶ್ರುತಿಯು ಹೇಳುತ್ತಿದೆ. **'ಅಂಧೇತಮಸಿಮಗ್ನಾನಾಂ ನ ತೇಷಾಂ ಪುನರುತ್ಥಿತಿಃ'** ಎಂದು ಸ್ಮೃತಿಯೂ ಇದೆ. ಮೋಕ್ಷಕ್ಕೆ ಹೋದವರು ಮರಳಿ ಸಂಸಾರಕ್ಕೆ ಬರುವುದಿಲ್ಲ. ಅಂಧಂತಮಸ್ಸಿಗೆ ಹೋದವರು ಸಂಸಾರಕ್ಕೆ ಬರುವುದಿಲ್ಲ. ಕೆಲವು ಪಂಡಿತರು ಲಿಂಗದೇಹದಿಂದ ಬಿಡುಗಡೆ ಹೊಂದಿರುವ ಮಧ್ಯಮ ಜೀವರು ಪುನಃ ಸುಖ-ದುಃಖಾತ್ಮಕವಾದ ಸಂಸಾರಕ್ಕೆ ಆಗಮಿಸುತ್ತಾರೆ ಎಂದು ತಿಳಿದಿದ್ದಾರೆ. ಈ ವಿಚಾರಗಳನ್ನು ಪ್ರತ್ಯಕ್ಷ ಸಹಕೃತವಾದ ಅನುಮಾನಗಳಿಂದ, ಶ್ರುತಿವಚನದಿಂದ ನಿರ್ಣಯಿಸಿಕೊಳ್ಳಬೇಕು.

ಏವಮೇಕೇ ವ್ಯವಸ್ಯಂತಿ ನಿವೃತ್ತಿರಿತಿ ಚಾಪರೇ ।
ಉಭಯಂ ಸಂಪ್ರಧಾರ್ಯೈತದಧ್ಯವಸ್ಯೇದ್ ಯಥಾಮತಿ ॥ ೬೧ ॥'

ಕೆಲವು ಯೋಗಜ್ಞರು ಮಧ್ಯಮ ಜೀವರ ಲಿಂಗದೇಹವು ನಾಶವಾಗುತ್ತದೆ ಎಂದು ಹೇಳುತ್ತಾರೆ, ಕೆಲವರು ನಾಶವಾಗುವುದಿಲ್ಲ ಎಂದು ಹೇಳುತ್ತಾರೆ. ಈ ಎರಡು ವಿಚಾರಗಳನ್ನು ಕೇಳಿಸಿಕೊಂಡು ವಿಮರ್ಶಿಸಿ ಅವೆರಡರಲ್ಲಿ ಸರಿಯಾದುದು ಯಾವುದೆಂದು ಸುಬುದ್ಧಿಯಿಂದ ನಿಶ್ಚಯಿಸಿಕೊಳ್ಳಬೇಕು.

ಇತೀಮಂ ಹೃದಯಗ್ರಂಥಿಂ ಬುದ್ಧಿಭೇದಮಯಂ ದೃಢಮ್ ।
ವಿಮುಚ್ಯ ಸುಖಮಾಸೀತ ನ ಶೋಚೇಚ್ಛಿನ್ನಸಂಶಯಃ ॥ ೬೨ ॥

ಹೀಗೆ ಬಿಡಿಸಲಾಗದೇ ಇರುವ ಗಂಟಿನಂತಿರುವ ಸಂಶಯವನ್ನು ಮನಸ್ಸಿಗೆ ಹುಟ್ಟಿಸಿ ಬುದ್ಧಿಗೆ ಕದಡಿಸುವ ವಿಷಯವನ್ನು ನಿರ್ಧರಿಸಿಕೊಂಡವರೆ ಸುಖದಿಂದ ಇರುತ್ತಾರೆ. ಸಂಶಯದಿಂದ ನಿವೃತ್ತರಾದವರು ಎಂದಿಗೂ ದುಃಖಿಸುವುದಿಲ್ಲ.

ಮಲಿನಾಃ ಪ್ರಾಪ್ನುಯುಃ ಶುದ್ಧಿಂ ಯಥಾ ಪೂರ್ಣಾಂ ನದೀಂ ನರಾಃ ।
ಅವಗಾಹ್ಯ ಸುವಿದ್ವಾಂಸೋ ವಿದ್ಧಿ ಜ್ಞಾನಮಿದಂ ತಥಾ ॥ ೬೩ ॥

ಮಲಿನನಾದ ವ್ಯಕ್ತಿಯು ತುಂಬಿ ಹರಿಯುವ ನದಿಯಲ್ಲಿ ಸ್ನಾನ ಮಾಡಿ ಶುದ್ಧನಾಗುವಂತೆ ಅಜ್ಞಾನದಿಂದ ಮಲಿನನಾದ ವ್ಯಕ್ತಿಯು ಪರಮಾತ್ಮನೆಂಬ ಜ್ಞಾನದ ನದಿಯಲ್ಲಿ ಮುಳುಗಿ ಶುದ್ಧನಾಗಬಹುದು.

ಮಹಾನದೀಂ ಹಿ ಪಾರಜ್ಞಸ್ತಪ್ಯತೇ ನ ತರನ್ಯಥಾ ।
ಏವಂ ಯೇ ವಿದುರಧ್ಯಾತ್ಮಂ ಕೈವಲ್ಯಂ ಜ್ಞಾನಮುತ್ತಮಮ್ ॥ ೬೪ ॥

ಮಹಾನದಿಯಲ್ಲಿ ಈಜಲು ತಿಳಿದು ಬಿದ್ದವನು ದಡವನ್ನು ಮುಟ್ಟಲು ಪ್ರಯಾಸವನ್ನು ಪಡದೆ ಸುಖವಾಗಿಯೇ ಹೇಗೆ ದಡವನ್ನು ಮುಟ್ಟುತ್ತಾನೋ ಇದೇ ರೀತಿಯಾಗಿ ಅಧ್ಯಾತ್ಮ ಎನಿಸಿದ, ಕೈವಲ್ಯ ಎನಿಸಿದ ಪರಮಾತ್ಮನ ಉತ್ತಮವಾದ ಜ್ಞಾನವನ್ನು ಯಾರು ಹೊಂದಿದ್ದಾರೋ ಅವರು ಸಂಸಾರ ಎಂಬ ದಡವನ್ನು ಮುಟ್ಟಲು ಪ್ರಯಾಸ ಹೊಂದುವುದಿಲ್ಲ.

ನತು ತಪ್ಯತಿ ತತ್ತ್ವಜ್ಞಃ ಫಲೇ ಜ್ಞಾತೇ ತರತ್ಯುತ ।
ಏತಾಂ ಬುದ್ಧ್ವಾ ನರಃ ಸರ್ವಾಂ ಭೂತಾನಾಮಾಗತಿಂ ಗತಿಮ್ ।
ಅವೇಕ್ಷ್ಯ ಚ ಶನೈರ್ಬುದ್ಧ್ಯಾ ಲಭತೇ ಶಂ ಪರಂ ತತಃ ॥ ೬೫ ॥

ಪರಮಾತ್ಮತತ್ತ್ವವನ್ನು ಚೆನ್ನಾಗಿ ಅರಿತವನು ಈ ಸಾಂಸಾರಿಕ ತಾಪಗಳಿಗೆ ತುತ್ತಾಗುವುದಿಲ್ಲ. ಜೀವನದ ಫಲ ಯಾವುದು ಎಂದು ಅರ್ಥ ಮಾಡಿಕೊಂಡ ಬಳಿಕ ಸಂಸಾರದ ಬಂಧನವನ್ನು ದಾಟುತ್ತಾನೆ. ಈ ರೀತಿಯಾಗಿ ಮಾನವನು, ಬುದ್ಧಿಯಿಂದ ಸಮಸ್ತ ಜೀವರ ಆಗತಿ, ಗತಿಗಳನ್ನು ಪರಮಾತ್ಮನ ದೆಸೆಯಿಂದ ಎಂದು ಚೆನ್ನಾಗಿ ಶ್ರುತಿ-

ಸ್ಮೃತಿಗಳಿಂದ ನಿರ್ಣಯಿಸಿಕೊಂಡಲ್ಲಿ ಕ್ರಮವಾಗಿ ನಿರ್ಣೀತವಾದ ಆ ಬುದ್ಧಿಯ ಸಹಕಾರದಿಂದ ಉತ್ತಮವಾದ ಸುಖವನ್ನು ಹೊಂದುತ್ತಾನೆ.

ತ್ರಿವರ್ಗೋ ಯಸ್ಯ ವಿದಿತಃ ಪ್ರಾಗ್ಜ್ಯೋತಿಃ ಸ ವಿಮುಚ್ಯತೇ ।
ಅನಿಷ್ಟ್ವಾ ಮನಸಾ ಯುಕ್ತಸ್ತತ್ತ್ವದರ್ಶೀ ನಿರುತ್ಸುಕಃ ॥ ೬೬ ॥

ಯಾರಿಗೆ ಧರ್ಮಾರ್ಥಕಾಮಗಳೆಂಬುವು ಅನಿತ್ಯವಾದವುಗಳೆಂದು ತಿಳಿದಿದೆಯೋ, ಪರಮಾತ್ಮನ ಸ್ವರೂಪವು ಅರ್ಥವಾಗಿದೆಯೋ ಅಂತಹ ವ್ಯಕ್ತಿಯು ಮುಕ್ತನಾಗುತ್ತಾನೆ. ತನ್ನ ಮನಸ್ಸಿನಿಂದ ಬಾಹ್ಯಸುಖಗಳನ್ನು ನಿಗ್ರಹಿಸಿಕೊಂಡ, ತತ್ತ್ವದರ್ಶಿಯಾದ ಆ ವ್ಯಕ್ತಿಯು ಪರಮಾತ್ಮನನ್ನು ಹುಡುಕಿ ಮುಕ್ತನಾಗುತ್ತಾನೆ.

ನ ಚಾತ್ಮಾ ಶಕ್ಯತೇ ದ್ರಷ್ಟುಮಿಂದ್ರಿಯೇಷು ವಿಭಾಗಶಃ ।
ತತ್ರ ತತ್ರ ವಿಸೃಷ್ಟೇಷು ದುರ್ಜಯೇಷ್ವಕೃತಾತ್ಮಭಿಃ ॥ ೬೭ ॥

ಯಾವನು ದುರ್ನಿವಾರಗಳಾದ ಇಂದ್ರಿಯಗಳನ್ನು ನಿಗ್ರಹಿಸಿಕೊಂಡಿಲ್ಲವೋ ಅವನಿಗೆ ಅಂತಹ ನಿಗ್ರಹವಿಲ್ಲದ ಇಂದ್ರಿಯಗಳಿಂದ ಪರಮಾತ್ಮನನ್ನು ನೋಡಲಾಗುವುದಿಲ್ಲ. ಆಯಾ ವಿಷಯಪದಾರ್ಥಗಳಲ್ಲಿ ಇಂದ್ರಿಯಗಳ ರತಿಯು ಹುಟ್ಟುವುದರಿಂದ ಇಂದ್ರಿಯಗಳ ಜಯವನ್ನು ಸಂಪಾದಿಸದೆ ಕರ್ತವ್ಯವನ್ನು ಮಾಡಲಾಗದ ವ್ಯಕ್ತಿಗೆ ಪರಮಾತ್ಮನು ಗೋಚರಿಸುವುದಿಲ್ಲ.

ಏತದ್ ಬುದ್ಧ್ವಾ ಭವೇದ್ ಬುದ್ಧಃ ಕಿಮನ್ಯದ್ ಬುದ್ಧಲಕ್ಷಣಮ್ ।
ಪ್ರತಿಗೃಹ್ಯ ಚ ನಿಹ್ನೋತಿ ಹ್ಯನ್ಯಥಾ ಚ ಪ್ರದೃಶ್ಯತೇ ॥ ೬೮ ॥

ಯಾವನು ಪರಮಾತ್ಮನ ಜ್ಞಾನವನ್ನು ಬುದ್ಧಿಯಿಂದ ಹೊಂದಿರುತ್ತಾನೋ ಅವನೇ ಜ್ಞಾನಿ ಎನಿಸುತ್ತಾನೆ. ಇದಕ್ಕಿಂತ ಹೊರತು ಜ್ಞಾನಕ್ಕೆ ಬೇರೆ ಲಕ್ಷಣವಿರುವುದಿಲ್ಲ. ಸಂಸಾರದೆಸೆಯಲ್ಲಿ ಜ್ಞಾನಿಯಾದ ವ್ಯಕ್ತಿಯು ಪ್ರಪಂಚದ ಪ್ರತಿಯೊಂದು ಪದಾರ್ಥವನ್ನು ನಿಸ್ಸಾರವೆಂದು ಅರಿತು ನಿರಾಕರಿಸುತ್ತಾನೆ. ಎಲ್ಲಿ ದುಃಖವಿಲ್ಲವೋ ಅಂತಹ ಜಾಗಕ್ಕೆ ಹೋಗಬೇಕೆಂದು ಬಯಸುತ್ತಾನೆ. ಸಂಸಾರದಲ್ಲಿ ನಿರಂತರವೂ ಪ್ರತಿ ಸ್ಥಳದಲ್ಲಿಯೂ ದುಃಖಕ್ಕೆ ಭಾಗಿಯಾಗುವುದರಿಂದ ಭಾಗವನ್ನು ಹೊಂದಲು ಜ್ಞಾನಿಯಾದವನು ಬಯಸುವುದಿಲ್ಲ.

ನ ಸರ್ಪೇತಿ ಚ ಯಂ ಪ್ರಾಹುಃ ಸರ್ವತ್ರ ಪ್ರತಿಹನ್ಯತೇ ।
ಧೂಮೇನ ಚಾಪ್ರಸನ್ನೋಽಗ್ನಿರ್ಯಥಾಽರ್ಕಂ ನ ಪ್ರವರ್ತಯೇತ್ ॥

ಇಲ್ಲಿಗೆ ಆಗಮಿಸಬೇಡ ಎಂದು ಹೇಳುವಂತೆ ಜ್ಞಾನಿಯಾದ ವ್ಯಕ್ತಿಯು ಈ ಸಂಸಾರದ ಯಾವ ಜಾಗಕ್ಕೂ ಆಗಮಿಸುವುದು ಬೇಡ ಎಂದೇ ಭಾವಿಸುತ್ತಾನೆ. ಸಂಸಾರದ ಪ್ರತೀ ಸ್ಥಳದಲ್ಲಿಯೂ ದುಃಖವನ್ನೇ ನೋಡಿ ಇಲ್ಲಿಗೆ ಬರಬಾರದು ಎಂದು ಭಾವಿಸುತ್ತಾನೆ. ಹೊಗೆಯಿಂದ ಆವೃತವಾದ ಬೆಂಕಿಯಲ್ಲಿ ಅಗ್ನಿಯ ಕಾಂತಿಯು ಹೇಗೆ ಕಾಣಿಸುವುದಿಲ್ಲವೋ ಅದರಂತೆ ಮೋಡ ಕವಿದಾಗ ಸೂರ್ಯಪ್ರಕಾಶವು ಹೇಗೆ ಕಾಣಿಸುವುದಿಲ್ಲವೋ ಅದರಂತೆ ಅಜ್ಞಾನವಿದ್ದಾಗ ಜೀವನಿಗೆ ಬುದ್ಧಿಯು ಪ್ರಕಾಶಿಸಲಾರದು. ಪರಮಾತ್ಮನನ್ನು ತಿಳಿಸಲಾರದು.

ವ್ಯಾಖ್ಯಾನ ವಿಶೇಷ– ಭಗವಂತನ ಅನುಗ್ರಹದಿಂದ ಅಜ್ಞಾನವು ಏಕೆ ಪರಿಹಾರವಾಗದು? ಎಂದರೆ ಹೇಳುತ್ತಾರೆ– ಧೂಮದಿಂದ ಆಚ್ಛಾದಿತವಾದ ಅಗ್ನಿಯು ಪ್ರಕಾಶಿತವಾದ ಅಗ್ನಿಯಂತೆ ಹೇಗೆ ತೋರುವುದಿಲ್ಲವೋ ಅದರಂತೆ ಅಜ್ಞಾನಾವೃತನಾದ ಜೀವನು ಪರಮಾತ್ಮನನ್ನು ತಿಳಿಯುವುದಿಲ್ಲ ಎಂದು ಭಾವ.

ಧಿಷ್ಣ್ಯಾಧಿಪೇ ಪ್ರಸನ್ನೇ ತು ಸ್ಥಿತಿಮೇತಾಂ ನಿರೀಕ್ಷತೇ ।
ಅತಿಕ್ಷೂರಾಚ್ಚ ಸೂಕ್ಷ್ಮತ್ವಾತ್ ಪ್ರಧಾನಂ ನ ಪ್ರಕಾಶತೇ ॥ ೭೦ ॥

ವೈಕುಂಠಲೋಕಕ್ಕೆ ಅಧಿಪತಿಯಾದ ಪರಮಾತ್ಮನು ಪ್ರಸನ್ನನಾಗಲು ಮುಕ್ತಿಯನ್ನು ಹೊಂದುವ ಸ್ಥಿತಿಯನ್ನು ಜೀವನು ನಿರೀಕ್ಷಿಸುತ್ತಾನೆ. ಮುಕ್ತಿಮಾರ್ಗವು ಅತ್ಯಂತ ಸೂಕ್ಷ್ಮವಾದುದರಿಂದ ಇಂದ್ರಿಯಗಳಿಗೆ ಅಗೋಚರವಾದುದರಿಂದ ಪರಮಾತ್ಮನ ಅನುಗ್ರಹವಿಲ್ಲದೆ ಗೋಚರಿಸದು.

ಪ್ರಪದ್ಯ ತಚ್ಚುತ್ತಾಹ್ನಾನಿ ಚಿನ್ಮಯಂ ಸ್ವೀಕೃತಂ ವಿನಾ ।
ವಿಜ್ಞಾಯ ತದ್ಧಿ ಮನ್ಯಂತೇ ಕೃತಕೃತ್ಯಾ ಮನೀಷಿಣಃ ॥ ೭೧ ॥

ಆದ್ದರಿಂದ ಜ್ಞಾನಿಗಳು ಧ್ಯಾನಿಸಲು ಯೋಗ್ಯನಾದ ಪರಮಾತ್ಮನನ್ನು ಸಾಧಕನಾದ ನಾನು ಧ್ಯಾನಿಸದೆ, ಅನೇಕ ದಿನಗಳನ್ನು ಆಯುಷ್ಯ ಜಲವನ್ನು ಭಿನ್ನಘಟದಲ್ಲಿ ತುಂಬಿದ ನೀರಿನಂತೆ ವ್ಯರ್ಥಮಾಡಿಕೊಂಡೆ ಎಂದು ವೈರಾಗ್ಯವನ್ನು ಹೊಂದಿದ ಸಾಧಕನು

ಪರಲೋಕಗಮನವನ್ನು ಗುರುಮುಖದಿಂದ ತಿಳಿದು ಕೃತಕೃತ್ಯನಾಗಿ ಪರಮಾತ್ಮನ ಸ್ವರೂಪವನ್ನು ತಿಳಿದುಕೊಳ್ಳುತ್ತಾನೆ.

ನ ಭವತಿ ವಿದುಷಾಂ ತತೋ ಭಯಂ
ಯದವಿದುಷಾಂ ಸುಮಹದ್ಭಯಂ ಭವೇತ್ ।
ನ ಹಿ ಗತಿರಧಿಕಾಸ್ತಿ ಕಸ್ಯಚಿತ್
ಸತಿ ಹಿ ಗುಣೇ ಪ್ರವದಂತ್ಯತುಲ್ಯತಾಮ್ ॥ ೭೨ ॥

ಅಜ್ಞಾನಿಗಳಿಗೆ ಯಾವುದು ಭಯವನ್ನುಂಟು ಮಾಡುತ್ತದೋ ಅದು ಜ್ಞಾನಿಗಳಿಗೆ ಭಯವನ್ನು ಹುಟ್ಟಿಸದು. ಯಾರಿಗೆ ಜ್ಞಾನಾದಿ ಗುಣಗಳಿಲ್ಲವೋ ಅವರಿಗೆ ಉತ್ತಮವಾದ ಪರಲೋಕದ ಗತಿಯು ದೊರೆಯುವುದಿಲ್ಲ. ಜ್ಞಾನಾದಿ ಗುಣಗಳು ಇದ್ದವರಿಗೆ ಕೊನೆಯೇ ಇಲ್ಲದ ಪರಮಪದಗತಿಯು ಇದೆ ಎಂದು ಜ್ಞಾನಿಗಳು ಹೇಳುತ್ತಾರೆ.

ಯಃ ಕರೋತ್ಯನಭಿಸಂಧಿಪೂರ್ವಕಂ
ತಚ್ಚ ನಿರ್ಹ್ಯದತಿ ಯತ್ ಪುರಾ ಕೃತಮ್ ।
ನಾಪ್ರಿಯಂ ತದುಭಯಂ ಕುತಃ ಪ್ರಿಯಂ
ತಸ್ಯ ತಜ್ಜನಯತೀಹ ಕುರ್ವತಃ ॥ ೭೩ ॥

ಯಾರು ಭಗವಂತನಲ್ಲಿ ಭಕ್ತಿಯಿಲ್ಲದೆ ಕರ್ಮಗಳನ್ನು ಆಚರಿಸುತ್ತಾರೋ ಆ ಕರ್ಮಗಳು ಪುಣ್ಯವನ್ನು ನಾಶಮಾಡುತ್ತವೆ. ಆಮುಷ್ಮಿಕ ಫಲವನ್ನು ನಾಶಮಾಡುತ್ತವೆ. ಐಹಿಕ, ಆಮುಷ್ಮಿಕ ಫಲಗಳನ್ನು ನೀಡಲು ಅಭಕ್ತಿಪೂರ್ವಕವಾದ ಫಲಗಳು ಸಮರ್ಥವಾಗುವುದಿಲ್ಲ. ಭಕ್ತಿಯಿಲ್ಲದೆ ಕರ್ಮವನ್ನು ಮಾಡುವ ವ್ಯಕ್ತಿಗಳ ವಿಷಯದಲ್ಲಿ ಪರಮಾತ್ಮನು ಪ್ರಿಯ ಎನಿಸಿದ ಮುಕ್ತಿ ಪದವಿಯನ್ನು ಹೇಗೆ ತಾನೆ ನೀಡಿಯಾನು?

ಲೋಕ ಆತುರಜನಾನ್ ವಿರಾವಿಣ-
ಸ್ತತ್ತದೇವ ಬಹು ಪಶ್ಯ ಶೋಚತಃ ।
ತತ್ರ ಪಶ್ಯ ಕುಶಲಾನಶೋಚತೋ
ಯೇ ವಿದುಸ್ತದುಭಯಂ ಪದಂ ಸದಾ ॥ ೭೪ ॥

ಲೋಕದಲ್ಲಿ ಎಷ್ಟೋ ಸಂಸಾರಿಗಳು ಹೆಂಡತಿ, ಮಕ್ಕಳು, ಧನ ಮೊದಲಾದವುಗಳನ್ನು ಕಳೆದುಕೊಂಡಾಗ ಬಹಳವಾಗಿ ದುಃಖಿಸುತ್ತಾರೆ. ಜ್ಞಾನಿಗಳಾದವರು ದುಃಖಿಸದೆ ಇರುತ್ತಾರೆ. ಅಸಾರವೆಂದು ತಿಳಿದವರಿಗೆ ದುಃಖವಿಲ್ಲ, ಸಾರವೆಂದು ತಿಳಿದವರಿಗೆ ದುಃಖವಿದೆ. ಆದ್ದರಿಂದ ತಾವು ಪಡೆಯಬೇಕಾದ ಸುಖವನ್ನು ಪಡೆಯಲಿಲ್ಲವೆಂದು ಉಚ್ಚಕಂಠದಿಂದ ರೋದನ ಮಾಡುತ್ತಿರುವ ಮನುಷ್ಯರನ್ನು ತಿಳಿದು, ಜ್ಞಾನಿಗಳನ್ನು ವಿಮರ್ಶಿಸಿ ನೋಡಿ ನಿನ್ನ ಬದುಕಿಗೆ ಕ್ಷೇಮವಾದ ಮಾರ್ಗ ಯಾವುದು ಎಂಬುದನ್ನು ನಿರ್ಣಯಿಸಿಕೊ. ಯಾರು ಮುಕ್ತಿದಾತೃವಾದ ಪರಮಾತ್ಮನ ಪಾದವನ್ನು ವಿಮರ್ಶಿಸಿ ನೋಡಿದ್ದಾರೋ ಅವರಿಗೆ ಎಂದೂ ದುಃಖವುಂಟಾಗದು. ಯಾರು ಸಾರಾಸಾರಗಳನ್ನು ತಿಳಿದಿದ್ದಾರೋ ಅವರಿಗೆ ದುಃಖವಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಇಪ್ಪತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂದನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಧ್ಯಾನಯೋಗವನ್ನು ಉಪದೇಶಿಸಿದುದು.

ಭೀಷ್ಮಃ

ಹಂತ ವಕ್ಷ್ಯಾಮಿ ತೇ ಪಾರ್ಥ ಧ್ಯಾನಯೋಗಂ ಚತುರ್ವಿಧಮ್ ।
ಯಂ ಜ್ಞಾತ್ವಾ ಶಾಶ್ವತೀಂ ಸಿದ್ಧಿಂ ಗಚ್ಛಂತಿ ಪರಮರ್ಷಯಃ ॥ ೧ ॥

ಭೀಷ್ಮ– ಧರ್ಮರಾಜನೇ, ಪುರಾತನ ಋಷಿಗಳು ಯಾವುದರಿಂದ ಶಾಶ್ವತವಾದ ಸಿದ್ಧಿಯನ್ನು ಪಡೆದಿರುವರೋ ಅಂತಹ ನಾಲ್ಕು ವಿಧವಾದ ಧ್ಯಾನಯೋಗವನ್ನು ನಿನಗೆ ತಿಳಿಸುತ್ತೇನೆ.

ಯಥಾ ಸ್ವನುಷ್ಠಿತಂ ಧ್ಯಾನಂ ತಥಾ ಕುರ್ವಂತಿ ಯೋಗಿನಃ ।
ಮಹರ್ಷಯೋ ಜ್ಞಾನತೃಪ್ತಾ ನಿರ್ವಾಣಗತಮಾನಸಾಃ ॥ ೨ ॥

ಯೋಗಿಗಳು ಭಗವಂತನಲ್ಲಿಯೇ ನೆಟ್ಟ ಮನಸ್ಸುಳ್ಳವರಾಗಿ ಧ್ಯಾನವು ಹೇಗೆ ಅನುಷ್ಠಾನ ಮಾಡಿದರೆ ಪೂರ್ಣವಾಗುತ್ತದೋ ಆ ಬಗೆಯಲ್ಲಿ ಧ್ಯಾನವನ್ನು ಮಾಡುತ್ತಾರೆ.

ಶ್ವಾಸಾಭಿಮಾನಿಯಾದ ಮುಖ್ಯಪ್ರಾಣನಲ್ಲಿ ಏಕಾಗ್ರತೆಯಿಂದ ಮನಸ್ಸನ್ನಿಟ್ಟು ಪ್ರಾಣಾಯಾಮವನ್ನು ಮಾಡಿ ಧ್ಯಾನಯೋಗದಿಂದ ಮನಃಪರಿಪಾಕವನ್ನು ಹೊಂದುತ್ತಾರೆ.

ನಾವರ್ತಂತೇ ಪುನಃ ಪಾರ್ಥ ಮುಕ್ತಾಃ ಸಂಸಾರದೋಷತಃ ।
ಜನ್ಮದೋಷಪರಿಕ್ಷೀಣಾಃ ಸ್ವಭಾವೇ ಪರ್ಯವಸ್ಥಿತಾಃ ॥ ೩ ॥

ಈ ರೀತಿಯಾಗಿ ಮನಃಪರಿಪಾಕವನ್ನು ಹೊಂದಿದ ಸಾಧಕರು ಸಂಸಾರವೆಂಬ ದುಃಖದಿಂದ ಮುಕ್ತರಾಗಿ ಪುನರ್ಜನ್ಮವೆಂಬ ದೋಷವನ್ನು ಪರಿಹರಿಸಿಕೊಂಡು ಪರಮಾತ್ಮನಲ್ಲಿಯೇ ತೃಪ್ತಿಯನ್ನು ಹೊಂದಿರುತ್ತಾರೆ.

ನಿರ್ದ್ವಂದ್ವಾ ನಿತ್ಯಸತ್ತ್ವಸ್ಥಾ ವಿಮುಕ್ತಾ ನಿತ್ಯಮಾಶ್ರಿತಾಃ ।
ಅಸಂಗೀನ್ಯವಿಭಾಗೀನಿ ಮನಃಶಾಂತಿಕರಾಣಿ ಚ ॥ ೪ ॥

ಅಂತಹ ಸಾಧಕರು ಸುಖ-ದುಃಖಗಳನ್ನು ಜಯಿಸಿ ನಿತ್ಯವೂ ಸತ್ವ ಎನಿಸಿದ ಭಗವಂತನಲ್ಲಿಯೇ ಮನಸ್ಸುಳ್ಳವರಾಗಿ ವಿಮುಕ್ತರಾಗಿ ಭಗವಂತನನ್ನೇ ಆಶ್ರಯಿಸಿ ಇರುತ್ತಾರೆ.

ತತ್ರ ಸ್ವಾಧ್ಯಾಯಸಂಶ್ಲಿಷ್ಟಮೇಕಾಗ್ರಂ ಧಾರಯೇನ್ಮನಃ ।
ಪಿಂಡೀಕೃತ್ಯೇಂದ್ರಿಯಗ್ರಾಮಮಾಸೀನಃ ಕಾಷ್ಠವನ್ಮುನಿಃ ॥ ೫ ॥

ಮನಸ್ಸಿಗೆ ಯಾವುದೇ ಸಂಗವಿಲ್ಲದಂತೆ ಅರ್ಥಾತ್ ದುಃಖವಿಲ್ಲದಂತೆ ಅನುಭವಿಸುವ ನಾಲ್ಕು ವಿಧವಾದ ಸಾಧಕರ ಮುಕ್ತಿಲಕ್ಷಣವನ್ನು ನಿನಗೆ ಹೇಳುತ್ತೇನೆ. ತೈಲಧಾರೆಯಲ್ಲಿ ವಿಚ್ಛೇದವು ಹೇಗೆ ಇರುವುದಿಲ್ಲವೋ ಆ ರೀತಿಯಾಗಿ ನಿರಂತರವೂ ಚ್ಯುತಿ ಇಲ್ಲದ ಮನಶ್ಶಾಂತಿಕಾರಕಗಳಾದ ನಾಲ್ಕು ವಿಧವಾದ ಮುಕ್ತಿ ಲಕ್ಷಣವನ್ನು ಮುಂದೆ ಹೇಳುತ್ತೇನೆ.

ಶಬ್ದಂ ನ ವಿಂದೇಚ್ಛ್ರೋತ್ರೇಣ ಸ್ಪರ್ಶಂ ತ್ವಚಾ ನ ವೇದಯೇತ್ ।
ರೂಪಂ ನ ಚಕ್ಷುಷಾ ವಿದ್ಯಾಜ್ಜಿಹ್ವಯಾ ನ ರಸಾಂಸ್ತಥಾ ॥ ೬ ॥

ಸಾಧಕನು ಮನಸ್ಸನ್ನು ಸ್ವಾಧ್ಯಾಯ, ಅಧ್ಯಯನದಲ್ಲಿ ನೆಲೆಗೊಳಿಸಿ ಇಂದ್ರಿಯಗಳನ್ನು ಒಂದೇ ಕಡೆ ಧ್ಯಾನದಲ್ಲಿ ನಿಗ್ರಹಿಸಿಕೊಂಡು ಜಿತಾಸನನಾಗಿ ಕುಳಿತು ಕಟ್ಟಿಗೆಯಂತೆ ಯಾವ

ವಿಷಯಸಂಬಂಧವೂ ಇಲ್ಲದೆ ಮನಸ್ಸನ್ನು ಏಕಾಗ್ರಗೊಳಿಸಿಕೊಳ್ಳಬೇಕು. ಶ್ರೋತ್ರೇಂದ್ರಿಯದಿಂದ ಲೋಕವಿಷಯಕವಾದ ಶಬ್ದಗಳನ್ನು ಕೇಳಿಸಿಕೊಳ್ಳಬಾರದು. ತ್ವಗಿಂದ್ರಿಯದಿಂದ ಬಾಹ್ಯಸ್ಪರ್ಶಗಳಿಗೆ ತುತ್ತಾಗಬಾರದು. ಕಣ್ಣಿನಿಂದ ಬಾಹ್ಯ ರೂಪವನ್ನಾಗಲಿ, ಜಿಹ್ವೆಯಿಂದ ಬಾಹ್ಯ ರಸಗಳ ಆಸಕ್ತಿಯನ್ನಾಗಲಿ ತಾಳಬಾರದು.

ಘ್ರೇಯಾಣ್ಯಪಿ ಚ ಸರ್ವಾಣಿ ಜಹ್ಯಾದ್ ಧ್ಯಾನೇನ ಯೋಗವಿತ್ ।
ಪಂಚವರ್ಗಪ್ರಮಾಥೀನಿ ನೇಚ್ಛೇಚ್ಚೈತಾನಿ ವೀರ್ಯವಾನ್ ॥ ೭ ॥

ಯೋಗಜ್ಞಾನಿಯಾದ ವ್ಯಕ್ತಿಯು ಪರಿಪಕ್ವದ ಧ್ಯಾನಾವಸ್ಥೆಯನ್ನು ಹೊಂದುತ್ತಾ ಆಘ್ರಾಣಿಸಲು ಯೋಗ್ಯವಾದ ಬಾಹ್ಯ ವಿಷಯಗಳನ್ನು ತ್ಯಾಗ ಮಾಡಬೇಕು. ಹೀಗೆ ಶಬ್ದ-ಸ್ಪರ್ಶಾದಿ ಮನಸ್ಸನ್ನು ಶಿಥಿಲಗೊಳಿಸುವ ಪಂಚವರ್ಗವೆನಿಸಿದ ವಿಷಯಗಳಲ್ಲಿ ಧ್ಯಾನದ ಬಲದಿಂದ ಮನಸ್ಸನ್ನು ನಿಗ್ರಹಿಸಿಕೊಳ್ಳಬೇಕು.

ತತೋ ಮನಸಿ ಸಂಸಜ್ಯ ಪಂಚವರ್ಗಂ ವಿಚಕ್ಷಣಃ ।
ಸಮಾದಧ್ಯಾನ್ಮನೋ ಭ್ರಾಂತಮಿಂದ್ರಿಯೈಃ ಸಹ ಪಂಚಭಿಃ ॥ ೮ ॥

ಧ್ಯಾನಿಯಾದ ವ್ಯಕ್ತಿಯು ಶಬ್ದಸ್ಪರ್ಶಾದಿ ವಿಷಯದಲ್ಲಿ ಮನಸ್ಸನ್ನು ನಿಗ್ರಹಿಸಿಕೊಂಡು ಪಂಚೇಂದ್ರಿಯಗಳಿಂದ ಕೂಡಿಕೊಂಡು ಭ್ರಾಂತವಾಗುವ ಮನಸ್ಸನ್ನು ಪರಮಾತ್ಮನಲ್ಲಿ ನೆಲೆಗೊಳಿಸಿಕೊಳ್ಳಬೇಕು.

ವಿಸಂಚಾರಿ ನಿರಾಲಂಬಂ ಪಂಚದ್ವಾರಂ ಚ ಲೋಚನಮ್ ।
ಪೂರ್ವೇ ಧ್ಯಾನಪಥೇ ಧೀರಃ ಸಮಾದಧ್ಯಾನ್ಮನೋಽಂತರಮ್ ॥ ೯ ॥

ವಿಷಯಗಳ ಕಡೆ ಓಡುವ ಸ್ವಭಾವವುಳ್ಳ ವಶವಲ್ಲದ, ಅಸ್ಥಿರ ವಸ್ತುಗಳಲ್ಲಿ ಸ್ಥಿರವಾಗಿ ಉಳ್ಳ, ಇಂದ್ರಿಯಗಳ ಬೆನ್ನನ್ನೇ ಹಿಂಬಾಲಿಸುವ ಮನಸ್ಸನ್ನು ಮೊಟ್ಟ ಮೊದಲು ಧ್ಯಾನ ಮಾರ್ಗಕ್ಕೆ ತಿರುಗಿಸಿ ಧ್ಯಾನಮಾರ್ಗದಲ್ಲಿ ನೆಲೆಗೊಳಿಸಿಕೊಳ್ಳಬೇಕು.

ಇಂದ್ರಿಯಾಣಿ ಮನಶ್ಚೈವ ಯದಾ ಪಿಂಡೀಕರೋತ್ಯಯಮ್ ।
ಏಷ ಧ್ಯಾನಪಥಃ ಪೂರ್ವೋ ಮಯಾ ಸಮನುವರ್ಣಿತಃ ॥ ೧೦ ॥

ಇಂದ್ರಿಯಗಳನ್ನು, ಮನಸ್ಸನ್ನು ಹಿಂತಿರುಗಿಸಿ ಮನಸ್ಸು, ಇಂದ್ರಿಯಗಳಿಂದ ಏಕಾಗ್ರತೆಯಿಂದ ನಡೆಸುವ ಧ್ಯಾನವೇ ಮೊದಲನೆಯ ಗತಿ. ಈ ಧ್ಯಾನಪಥದ ಬಗ್ಗೆ ಹಿಂದೆ ನಾನು ವರ್ಣಿಸಿರುತ್ತೇನೆ.

ತಸ್ಯ ತತ್ ಪೂರ್ವಸಂರುದ್ಧಮ್ ಆತ್ಮಷಷ್ಠಂ ಮನೋಽಂತರಾ ।
ಸ್ಫುರಿಷ್ಯತಿ ಸಮುದ್ಭ್ರಾಂತಂ ವಿದ್ಯುದಂಬುಧರೇ ಯಥಾ ॥ ೧೧ ॥

ಪಂಚೇಂದ್ರಿಯಗಳು ಮತ್ತು ಆರನೆಯದೆನಿಸಿದ ಮನಸ್ಸು ಇವುಗಳ ಒಡಗೂಡಿದ ಮನುಷ್ಯನ ಮನಸ್ಸು ಮೊದಲನೆಯ ಧ್ಯಾನಮಾರ್ಗವನ್ನು ಅವಲಂಬಿಸಿದ ಮೇಲೂ ಮೇಘದಿಂದ ಮಿಂಚು ಹೇಗೆ ಚಲಿಸುತ್ತದೋ ಹಾಗೆ ಮಧ್ಯ-ಮಧ್ಯದಲ್ಲಿ ಧ್ಯಾನ ಮಾರ್ಗದಿಂದ ವಿಚಲಿತವಾಗುತ್ತದೆ.

ಜಲಬಿಂದುರ್ಯಥಾ ಲೋಲಃ ಪರ್ಣಸ್ಥಃ ಸರ್ವತಶ್ಚಲಃ ।
ಏವಮೇವಾಸ್ಯ ತಚ್ಚಿತ್ತಂ ಭವತಿ ಧ್ಯಾನವರ್ತ್ಮನಿ ॥ ೧೨ ॥

ತಾವರೆ ಎಲೆಯ ಮೇಲಿನ ನೀರಿನ ಬಿಂದುವಿನಂತೆ ಧ್ಯಾನಾಸಕ್ತವಾದ ಮನುಷ್ಯನ ಮನಸ್ಸು ಒಂದೇ ಕಡೆ ಸ್ಥಿರವಾಗಿ ನಿಲ್ಲದೆ ಅತ್ತಿತ್ತ ಚಲಿಸುತ್ತಿರುತ್ತದೆ.

ಸಮಾಹಿತಂ ಕ್ಷಣಂ ಕಿಂಚಿದ್ಧ್ಯಾನವರ್ತ್ಮನಿ ತಿಷ್ಠತಿ ।
ಪುನರ್ವಾಯುಪಥಂ ಭ್ರಾಂತಂ ಮನೋ ಭವತಿ ವಾಯುವತ್॥ ೧೩ ॥

ಆಗಾಗ ಕ್ಷಣಕಾಲದವರೆಗೆ ಮನಸ್ಸು ಧ್ಯಾನಮಗ್ನವಾಗಿರುತ್ತದೆ. ಅದು ಪ್ರಾಣವಾಯುವು ಹೇಗೋ ಪುನಃ ವಾಯುವಿನಂತೆ ಅಸ್ಥಿರವಾಗುತ್ತದೆ. ಮನಸ್ಸು ವಿಚಲಿತವಾಗುತ್ತದೆ.

ಅನಿರ್ವೇದೋ ಗತಕ್ಲೇಶೋ ಗತತಂದ್ರೀರಮತ್ಸರಃ ।
ಸಮಾದಧ್ಯಾತ್ ಪುನಶ್ಚೇತೋ ಧ್ಯಾನೇನ ಧ್ಯಾನಯೋಗವಿತ್ ॥ ೧೪ ॥

ಅಂತಹ ಸಮಯದಲ್ಲಿ ಧ್ಯಾನಯೋಗವನ್ನು ಬಲ್ಲವನು ದುಃಖ-ಸ್ನೇಹ-ಮಾತ್ಸರ್ಯ ಮುಂತಾದ ಯಾವ ದೋಷಗಳು ಇಲ್ಲದವನಾಗಿ ಮನಸ್ಸನ್ನು ಪುನಃ ಪುನಃ ಧ್ಯಾನದಲ್ಲಿ ತಿರುಗಿಸಿ ನೆಲೆಗೊಳಿಸಿಡಬೇಕು.

ವಿಚಾರಶ್ಚ ವಿತರ್ಕಶ್ಚ ವಿವೇಕಶ್ಚೋಪಜಾಯತೇ ।
ಮುನೇಃ ಸಮಾದಧಾನಸ್ಯ ಪ್ರಥಮಂ ಧ್ಯಾನಮಾದಿತಃ ॥ ೧೫ ॥

ಧ್ಯಾನಮಾರ್ಗವನ್ನು ಅನುಸರಿಸುವ ಯೋಗಿಗೆ ಕ್ರಮವಾಗಿ ವಿಚಾರ, ವಿತರ್ಕ, ವಿವೇಕ ಮುಂತಾದವುಗಳು ಹುಟ್ಟುತ್ತವೆ. ಅವು ಮನಸ್ಸಿಗೆ ತೋರುವಾಗಲೆಲ್ಲ ಅದರಿಂದ ಧೃತಿಗೆಡದೆ ದೃಢವಾದ ಧ್ಯಾನವನ್ನು ಅವಲಂಬಿಸಬೇಕು.

ಮನಸಾ ಕ್ಲಿಶ್ಯಮಾನಸ್ತು ಸಮಾಧಾನಂ ಚ ಕಾರಯೇತ್ ।
ನ ನಿರ್ವೇದಂ ಮುನಿರ್ಗಚ್ಛೇತ್ಕುರ್ಯಾದೇವಾತ್ಮನೋ ಹಿತಮ್ ॥ ೧೬ ॥

ಮಾನಸಿಕವಾಗಿ ದುಃಖವಾಗುತ್ತಿದ್ದರೂ ಆ ದುಃಖವನ್ನು ಸ್ಥಿತಪ್ರಜ್ಞನಾಗಿ ದಾಟಿ ಅದರಿಂದ ಕಳವಳಗೊಳ್ಳದೆ ತನ್ನ ಹಿತವನ್ನು ಬಯಸಿ ಧ್ಯಾನದ ಏಕಾಗ್ರತೆಯನ್ನೇ ಹೊಂದಬೇಕು.

ಪಾಂಸುಭಸ್ಮಕರೀಷಾಣಾಂ ಯಥಾ ವೈ ರಾಶಯಶ್ಚಿತಾಃ ।
ಸಹಸಾ ವಾರಿಣಾ ಸಿಕ್ತಾ ನ ಯಾಂತಿ ಪರಿಭಾವನಾಮ್ ॥ ೧೭ ॥

ಕಿಂಚಿತ್ ಸ್ನಿಗ್ಧಂ ಯಥಾ ಚ ಸ್ಯಾಚ್ಚುಷ್ಕಚೂರ್ಣಮಭಾವಿತಮ್ ।
ಕ್ರಮಶಸ್ತು ಶನೈರ್ಗಚ್ಛೇತ್ ಸರ್ವಂ ತತ್ ಪರಿಭಾವನಮ್ ॥ ೧೮ ॥

ಏವಮೇವೇಂದ್ರಿಯಗ್ರಾಮಂ ಶನೈಃ ಸಂಪರಿಭಾವಯೇತ್ ।
ಸಂಹರೇತ್ತಮಶಶ್ಚೈವ ಸ ಸಮ್ಯಕ್ ಪ್ರಶಮಿಷ್ಯತಿ ॥ ೧೯ ॥

ಧೂಳು, ಬೂದಿ, ಒಣಗಿದ ಗೋಮಯಚೂರ್ಣ ಇವುಗಳನ್ನು ರಾಶಿ ಹಾಕಿ ನೆನೆಸಿಟ್ಟರೂ ಅದು ಕೂಡಲೇ ಪಿಷ್ಟಭಾವವನ್ನು ಹೊಂದಲಾರದು. ನೆನೆಸಿಹಾಕಿ ಬಹಳ ಕಾಲವಾದ ಬಳಿಕ ಕ್ರಮವಾಗಿ ಅದರಲ್ಲಿ ಸ್ನೇಹಭಾವವು ಉಂಟಾಗುತ್ತಾ ಉಂಡೆ ಮಾಡಲು ಸಾಧ್ಯವಾಗುತ್ತದೆ. ಇದರಂತೆ ಬೇರೆ ಬೇರೆಯಾಗಿರುವ ಇಂದ್ರಿಯಗಳನ್ನು ಮೆಲ್ಲನೆ ಒಂದಾಗಿ ಮನಸ್ಸಿನಲ್ಲಿ ನಿಯಂತ್ರಿಸಿಕೊಳ್ಳಬೇಕು. ಕಾಲಕ್ರಮದಿಂದ ಆ ಎಲ್ಲಾ ಇಂದ್ರಿಯಗಳನ್ನು ಒಂದೇ ವಿಷಯದಲ್ಲಿ ನೆಲೆಗೊಳಿಸಿಕೊಳ್ಳಬೇಕು. ಇಂತಹ ವ್ಯಕ್ತಿಯೇ ಮನಶ್ಶಾಂತಿಯನ್ನು ಪಡೆಯಲು ಸಾಧ್ಯವಾಗುತ್ತದೆ.

ಸ್ವಯಮೇವ ಮನಶ್ಚೈವ ಪಂಚವರ್ಗಶ್ಚ ಭಾರತ ।
ಪೂರ್ವಂ ಧ್ಯಾನಪಥಂ ಪ್ರಾಪ್ಯ ನಿತ್ಯಯೋಗೇನ ಶಾಮ್ಯತಿ ॥ ೨೦ ॥

ಮನಸ್ಸನ್ನು, ಪಂಚೇಂದ್ರಿಯಗಳನ್ನು ಹೀಗೆ ಮೊದಲನೆಯ ಧ್ಯಾನಮಾರ್ಗದಲ್ಲಿ ಇರಿಸಿ ನಿತ್ಯಯೋಗದಿಂದ ಶಾಂತಿಯನ್ನು ಸಾಧಿಸಬೇಕು.

ನ ತತ್ ಪುರುಷಕಾರೇಣ ನ ಚ ದೈವೇನ ಕೇನಚಿತ್ ।
ಸುಖಮೇಷ್ಯತಿ ತತ್ತಸ್ಯ ಯದೇವಂ ಸಂಯತಾತ್ಮನಃ ॥ ೨೧ ॥

ಈ ಧ್ಯಾನಯೋಗವನ್ನು ಕೇವಲ ಅದೃಷ್ಟದಿಂದಲಾಗಲೀ, ಪುರುಷಪ್ರಯತ್ನದಿಂದ ಆಗಲಿ ಸಾಧಿಸಲು ಸಾಧ್ಯವಿಲ್ಲ. ಇದನ್ನು ಚೆನ್ನಾಗಿ ಸಾಧಿಸಿದವನೇ ಧ್ಯಾನಯೋಗದ ಸುಖವನ್ನು ಹೊಂದುತ್ತಾನೆ.

ವ್ಯಾಖ್ಯಾನ ವಿಶೇಷ– ಕೇವಲ ದೈವದಿಂದಾಗಲಿ, ಕೇವಲ ಪುರುಷನ ಪ್ರಯತ್ನದಿಂದಾಗಲೀ ಧ್ಯಾನಸುಖವನ್ನು ಹೊಂದಲಾರನು. ಆದ್ದರಿಂದ ಧ್ಯಾನದ ಮೊದಲನೆಯ ಮೆಟ್ಟಿಲು ವಿಷಯಪದಾರ್ಥಗಳಲ್ಲಿ ಅನಾಸಕ್ತಿ. ಎರಡನೆಯ ಮೆಟ್ಟಿಲು ಸಮಸ್ತ ಇಂದ್ರಿಯಗಳನ್ನು ಮನಸ್ಸಿನಲ್ಲಿಯೇ ಏಕಾಗ್ರಗೊಳಿಸಿಕೊಳ್ಳುವುದು. ಮೂರನೆಯ ಮೆಟ್ಟಿಲು ಪ್ರಾಣಾಯಾಮದಿಂದ ಪಾಪಪುರುಷನನ್ನು ಉಚ್ಚಾಟನೆ ಮಾಡುವುದು. ನಾಲ್ಕನೆಯ ಮೆಟ್ಟಿಲು ನಿಶ್ಚಲವಾದ, ನಿರ್ಮಲವಾದ ಮನಸ್ಸಿನಿಂದ ನಾನಾ ವೇದಶಾಖೆಗಳಲ್ಲಿ ಹೇಳಿದ ಭಗವಂತನ ಗುಣಗಳನ್ನು ಅನುಸಂಧಾನ ಮಾಡುವುದು ಎಂದು ಮೋಕ್ಷದ ನಾಲ್ಕು ಗತಿಗಳ ಬಗ್ಗೆ ವಿವರಿಸಿದಂತಾಯಿತು.

ಸುಖೇನ ತೇನ ಸಂಯುಕ್ತೋ ರಂಸ್ಯತೇ ಧ್ಯಾನಕರ್ಮಣಿ ।
ಗಚ್ಛಂತಿ ಯೋಗಿನೋ ಹ್ಯೇವಂ ನಿರ್ವಾಣಂ ತನ್ನಿರಾಮಯಮ್ ॥೨೨॥

ಧ್ಯಾನಯೋಗದ ಸುಖದಲ್ಲಿರುವವನು ಆ ಧ್ಯಾನದಲ್ಲಿಯೇ ಸಂತೋಷವನ್ನು ಹೊಂದುತ್ತಾನೆ. ಯೋಗಿಗಳು ಇದೇ ಮಾರ್ಗದಿಂದ ದುಃಖರಹಿತವಾದ, ನಿತ್ಯಸುಖ ಸಂಪನ್ನವಾದ ಮೋಕ್ಷವನ್ನು ಹೊಂದಿರುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಏಕವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಇಪ್ಪತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆರಡನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಜಪಫಲವನ್ನು, ಜಪಕ್ರಮವನ್ನು ನಿರೂಪಿಸಿದುದು.

ಯುಧಿಷ್ಠಿರಃ

ಚಾತುರಾಶ್ರಮ್ಯಮುಕ್ತಂ ತೇ ರಾಜಧರ್ಮಾಸ್ತಥೈವ ಚ ।
ನಾನಾಶ್ರಯಾಶ್ಚ ಬಹವ ಇತಿಹಾಸಾಃ ಪೃಥಗ್ವಿಧಾಃ ॥ ೧ ॥

ಯುಧಿಷ್ಠಿರ– ನೀನು ನಾಲ್ಕು ಆಶ್ರಮಧರ್ಮಗಳನ್ನು, ರಾಜಧರ್ಮಗಳನ್ನು, ವಿವಿಧ ವಿಷಯಗಳನ್ನು ಕುರಿತು ಹಲವು ಇತಿಹಾಸಗಳನ್ನು ನನಗೆ ತಿಳಿಸಿರುತ್ತಿ.

ಶ್ರುತಾಸ್ತ ತ್ತಃ ಕಥಾಶ್ಚೈವ ಧರ್ಮಯುಕ್ತಾ ಮಹಾಮತೇ ।
ಸಂದೇಹೋऽಸ್ತಿ ತು ಕಶ್ಚಿನ್ಮೇ ತದ್ಭವಾನ್ವಕ್ತುಮರ್ಹತಿ ॥ ೨ ॥

ನಿನ್ನಿಂದ ಧರ್ಮಯುಕ್ತವಾದ ಅನೇಕ ಕಥೆಗಳನ್ನು ಕೇಳಿರುತ್ತೇನೆ. ಆದರೆ ನನಗೆ ಇನ್ನೂ ಕೆಲವು ಸಂಶಯವಿವೆ. ಅವುಗಳನ್ನು ಪರಿಹರಿಸಲು ನೀನು ಉತ್ತರಿಸಬೇಕು.

ಜಾಪಕಾನಾಂ ಫಲಾವಾಪ್ತಿಂ ಶ್ರೋತುಮಿಚ್ಛಾಮಿ ಭಾರತ ।
ಕಿಂ ಫಲಂ ಜಪತಾಮುಕ್ತಂ ಕ್ವ ವಾ ತಿಷ್ಠಂತಿ ಜಾಪಕಾಃ ॥ ೩ ॥

ಜಪಿಸುವಂತಹ ಮಂತ್ರಗಳ ಬಗ್ಗೆ, ಜಪದ ಫಲಗಳ ಬಗ್ಗೆ ನನಗೆ ತಿಳಿಸಬೇಕು. ಮಂತ್ರಜಪಗಳಿಗೆ ಲಭಿಸುವ ಫಲಗಳೇನು? ಮಂತ್ರಜಪಿಸುವ ವ್ಯಕ್ತಿಗಳು ಯಾವ ಗತಿಯನ್ನು ಹೊಂದುತ್ತಾರೆ?

ಜಪಸ್ಯ ಚ ವಿಧಿಂ ಕೃತ್ಸ್ನಂ ವಕ್ತುಮರ್ಹಸಿ ಮೇऽನಘ ।
ಜಾಪಕಾ ಇತಿ ಕಿಂ ಚೈತತ್ ಸಾಂಖ್ಯಯೋಗಕ್ರಿಯಾವಿಧಿಃ ॥ ೪ ॥

ಜಪದ ವಿಧಿಗಳನ್ನು ಸಮಗ್ರವಾಗಿ ನಿರ್ದುಷ್ಟನಾದ ನೀನು ನನ್ನನ್ನು ಕುರಿತು ಹೇಳುವವನಾಗಿರುತ್ತಿ. ಜಾಪಕನು ಸಾಂಖ್ಯಯೋಗಗಳನ್ನು, ಕರ್ಮಯೋಗಗಳನ್ನು ಅನುಷ್ಠಾನ ಮಾಡಿದಂತಾಗುತ್ತಾನೆಯೇ? ಮಾನಸಿಕ ಯಜ್ಞಗಳನ್ನು ನಡೆಸಿದಂತಾಗುತ್ತಾನೆಯೇ?

ಕಿಂ ಯಜ್ಞವಿಧಿರೇವೈಷ ಕಿಮೇತಜ್ಜಪ್ಯಮುಚ್ಯತೇ ।
ಏತನ್ಮೇ ಸರ್ವಮಾಚಕ್ಷ್ವ ಸರ್ವಜ್ಞೋ ಹ್ಯಸಿ ಮೇ ಮತಃ ॥ ೫ ॥

ನನ್ನ ಪಾಲಿನ ಸರ್ವಜ್ಞನೇ, ಜಪವಿಷಯದ ಅರ್ಥವೇನು? ಜಪವಿಷಯವಾದ ಅಂಶಗಳನ್ನೆಲ್ಲ ನನಗೆ ಹೇಳಿ ನನ್ನ ಸಂಶಯವನ್ನು ಪರಿಹರಿಸು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಯಮಸ್ಯ ಯತ್ ಪುರಾ ವೃತ್ತಂ ಕಾಲಸ್ಯ ಬ್ರಾಹ್ಮಣಸ್ಯ ಚ ॥ ೬ ॥

ಭೀಷ್ಮ– ಧರ್ಮಪುತ್ರನೇ, ಈ ವಿಷಯದಲ್ಲಿ ಹಿಂದೆ ಯಮನಿಗೂ, ಕಾಲಕ್ಕೂ, ಮೃತ್ಯುವಿಗೂ, ಕುರುರಾಜನಿಗೂ ಬ್ರಾಹ್ಮಣನೊಡನೆ ನಡೆದ ಧರ್ಮನಿಮಿತ್ತವಾದ ಸಂವಾದವನ್ನು ಹೇಳುತ್ತಾರೆ.

ಸನ್ನ್ಯಾಸ ಏವ ವೇದಾಂತೇ ವರ್ತತೇ ಜಪನಂ ಪ್ರತಿ ।
ವೇದವಾದಾಭಿನಿರ್ವೃತ್ತಾ ಶಾಂತಿರ್ಬ್ರಹ್ಮಣ್ಯವಸ್ಥಿತೌ ।
ಮಾರ್ಗೌ ತಾವಪ್ಯುಭಾವೇತೌ ಸಂಶ್ರಿತೌ ನ ಚ ಸಂಶ್ರಿತೌ ॥ ೭ ॥

ವೇದಾಂತದಲ್ಲಿ ಜಪಕ್ಕೆ ಸಂನ್ಯಾಸವನ್ನೇ ಹೇಳಿದ್ದಾರೆ. ಕರ್ಮನಿವೃತ್ತಿಯನ್ನು ಹೇಳುವ ವೇದವಾದಗಳೆಲ್ಲ ಕೇವಲ ಬ್ರಹ್ಮ ಎಂಬ ವಸ್ತುವನ್ನೇ ವಿಷಯೀಕರಿಸುತ್ತಿವೆ. ಪರಿಪಕ್ವ ಬುದ್ಧಿಯುಳ್ಳ ಸಂನ್ಯಾಸಿಗಳು ವೈದಿಕಸಾಂಖ್ಯಯೋಗಗಳನ್ನು ಆಶ್ರಯಿಸಿರುತ್ತಾರೆ. ಅವೈದಿಕವಾದ ಸಾಂಖ್ಯಯೋಗಮಾರ್ಗವನ್ನು ಎಂದಿಗೂ ಆಶ್ರಯಿಸುವುದಿಲ್ಲ.

ಯಥಾ ಸಂಶ್ರೂಯತೇ ರಾಜನ್ ಕಾರಣಂ ಚಾತ್ರ ವಕ್ಷ್ಯತೇ ।
ಮನಃಸಮಾಧಿರತ್ರಾಪಿ ತಥೇಂದ್ರಿಯಜಯಃ ಸ್ಮೃತಃ ॥ ೮ ॥

ಜಪದ ಬಗ್ಗೆ ನೀನು ಏನು ಪ್ರಶ್ನೆಗಳನ್ನು ಕೇಳಿರುವೆಯೋ, ಈ ಯೋಗಮಾರ್ಗಗಳ ಬಗ್ಗೆ ಏನು ಕೇಳಿಸಿಕೊಂಡಿರುವೆಯೋ ಇದಕ್ಕೆ ಕಾರಣವನ್ನು ನಾನು ಹೇಳುತ್ತೇನೆ. ಈ ಜಪಯೋಗದಲ್ಲಿಯೂ ಮನಸ್ಸಮಾಧಿ ಎಂದರೆ ಇಂದ್ರಿಯಜಯವು ಮುಖ್ಯವಾಗಿಯೇ ಹೇಳಲ್ಪಟ್ಟಿದೆ.

ಸತ್ಯಮಗ್ನಿಪರೀಚಾರೋ ವಿವಿಕ್ತಾನಾಂ ಚ ಸೇವನಮ್ ।
ಧ್ಯಾನಂ ತಪೋ ದಮಃ ಕ್ಷಾಂತಿರನಸೂಯಾ ಮಿತಾಶನಮ್ ॥ ೯ ॥

ವಿಷಯಪ್ರತಿಸಂಹಾರೋ ಮಿತಜಲ್ಪಸ್ತಥಾ ಶಮಃ ।
ಏಷ ಪ್ರವರ್ತಕೋ ಧರ್ಮೋ ನಿವೃತ್ತಕಮಥೋ ಶೃಣು ॥ ೧೦ ॥

ಸತ್ಯ, ಅಗ್ನ್ಯುಪಾಸನೆ, ಏಕಾಂತವಾಸ, ಧ್ಯಾನ, ತಪಸ್ಸು, ಇಂದ್ರಿಯನಿಗ್ರಹ, ಕ್ಷಮೆ, ಅಸೂಯೆ ಇಲ್ಲದಿರುವಿಕೆ, ಅಲ್ಪಾಹಾರ ಸೇವನೆ, ವಿಷಯವಿರಕ್ತಿ, ಮಿತಭಾಷಣ, ಕ್ಷಮಾ ಈ ಎಲ್ಲಾ ಗುಣಗಳು ಜಪಯಜ್ಞಕ್ಕೆ ಯೋಗ್ಯವಾದ ಫಲವನ್ನುಂಟು ಮಾಡಲು ಕಾರಣವಾಗಿವೆ. ಜಪಯಜ್ಞಕ್ಕೆ ಕಾರಣಭೂತವಾದ ಆಚಾರಗಳನ್ನು ತಿಳಿಸುತ್ತೇನೆ, ತಿಳಿದುಕೊ.

ಯಥಾ ನಿವರ್ತತೇ ಕರ್ಮ ಜಪತೋ ಬ್ರಹ್ಮಚಾರಿಣಃ ।
ಏತತ್ ಸರ್ವಮಶೇಷೇಣ ಯಥೋಕ್ತಂ ಪರಿವರ್ಜಯೇತ್ ।
ತ್ರಿವಿಧಂ ಮಾರ್ಗಮಾಸಾದ್ಯ ವ್ಯಕ್ತಾವ್ಯಕ್ತಮನಾಶ್ರಯಮ್ ॥ ೧೧ ॥

ಜಪಯಜ್ಞ ಮಾಡುವ ಬ್ರಹ್ಮಚಾರಿಗೆ ಕರ್ಮತ್ಯಾಗ ಪೂರ್ವಕವಾಗಿ ನಿವೃತ್ತಿ ಮಾರ್ಗಕ್ಕೆ ಸಾಧನವಾದ ಧರ್ಮವೇನೆಂಬುದನ್ನು ತಿಳಿಸುತ್ತೇನೆ. ಜಪ-ಯಜ್ಞನಿರತನಾದ ಬ್ರಹ್ಮಚಾರಿಯು ನಿವರ್ತಕವಾದ ಕರ್ಮಗಳನ್ನು ಸೇವಿಸಬಾರದು. ಅರ್ಥಾತ್ ದುರ್ಜನರ ಸಂಗವನ್ನು ಮಾಡಿದಲ್ಲಿ ಜಪಿಸಲು ಸಾಧ್ಯವಾಗುವುದಿಲ್ಲ. ಪುತ್ರ-ಮಿತ್ರ-ಕಳತ್ರಾದಿಗಳ ಅತ್ಯಂತ ಸ್ನೇಹವು ಧ್ಯಾನಕ್ಕೆ ಪೂರಕವಾಗಿರುವುದಿಲ್ಲ. ಧನಾದಿಗಳ ಆಸೆಯು ಜಪದಲ್ಲಿ ಆಸಕ್ತಿಯನ್ನು ಹುಟ್ಟಿಸುವುದಿಲ್ಲ. ಸತ್ಪದಾರ್ಥಗಳಲ್ಲಿ ದ್ವೇಷ, ದುರ್ವಿಷಯಗಳಲ್ಲಿ ಸಂತೋಷವೂ ಧ್ಯಾನಕ್ಕೆ ಪ್ರತಿಬಂಧಕವಾಗುತ್ತದೆ. ಈ ಪ್ರವರ್ತಕ-ನಿವರ್ತಕಗಳನ್ನು ಅರಿತು ಹಿತವಾದುದನ್ನೇ ಸ್ವೀಕರಿಸಬೇಕು. ಸ್ಥೂಲ-ಸೂಕ್ಷ್ಮ ಎಂಬ ಎರಡು ಯೋಗಮಾರ್ಗಗಳ ಜೊತೆ ಯಾವುದನ್ನೂ ಆಶ್ರಯಿಸದಿರುವಿಕೆ ಎಂಬ ಅನಾಶ್ರಯ ಯೋಗಮಾರ್ಗವು ಇದೆ. ಈ ಯೋಗ ಮಾರ್ಗಗಳ ಸಹಾಯದಿಂದ ಅಹಿತವಾದುದನ್ನು ತ್ಯಾಗ ಮಾಡಬೇಕು.

ನ ಜಪೋ ನ ಚ ವೈ ಧ್ಯಾನಂ ನೇಚ್ಛಾ ನ ದ್ವೇಷಹರ್ಷಣೌ ।
ಯುಜ್ಯತೇ ನೃಪಶಾರ್ದೂಲ ಸುಸಂವೇದ್ಯಂ ಹಿ ತತ್ ಕಿಲ ॥ ೧೨ ॥

ಮೋಕ್ಷಗತಿಗೆ ಜಪವೇ ಅಥವಾ ಧ್ಯಾನವೇ, ಮನಸ್ಸಿನ ಸಂಕಲ್ಪಗಳೇ ನೇರವಾಗಿ ಕಾರಣವಾಗುವವುಗಳಲ್ಲ. ದ್ವೇಷ-ಹರ್ಷಗಳು ಕಾರಣವಲ್ಲ. ಮೋಕ್ಷಗತಿಯ ವಿವರವು ಅತ್ಯಂತ ಸೂಕ್ಷ್ಮವಾದದ್ದು.

ಜಪಮಾವರ್ತಯೇನ್ನಿತ್ಯಂ ಜಪನ್ ವೈ ಬ್ರಹ್ಮಚಾರಿಕಮ್ ।
ತದರ್ಥಬುದ್ಧ್ಯಾ ಸಂಯಾತಿ ಮನಸಾ ಜಾಪಕಃ ಪರಮ್ ॥ ೧೩ ॥

ಯಾವಾಗಲೂ ಜಪವನ್ನು ಆವೃತ್ತಿ ಮಾಡುತ್ತಿರಬೇಕು. ಬ್ರಹ್ಮಚರ್ಯೆಗೆ ಯೋಗ್ಯವಾದ ಮಂತ್ರವನ್ನು ಪುರಶ್ಚರಣ ಮಾಡುವ ವ್ಯಕ್ತಿಯು ಪರಮಾತ್ಮನಲ್ಲಿಯೇ ಬುದ್ಧಿಯನ್ನಿಟ್ಟು ಆ ಜಪವನ್ನು ಅನುಷ್ಠಾನ ಮಾಡಿದರೆ ಪರಮಾತ್ಮನನ್ನು ಹೊಂದುತ್ತಾನೆ.

ಯಥಾ ಸಂಶ್ರೂಯತೇ ಜಾಪ್ಯೋ ಯೇನ ವೈ ಜಾಪಕೋ ಭವೇತ್ ।
ಸಂಹಿತಾ ಪ್ರಣವೇನೈವ ಸಾವಿತ್ರೀ ಚ ಪರಾ ಮತಾ ।
ಯದನ್ಯದುಚಿತಂ ಶುದ್ಧಂ ವೇದಸ್ಮೃತ್ಯುಪಪಾದಿತಮ್ ॥ ೧೪ ॥

ಜಪ ಮಾಡುವವನು ಜಪದ ನಿಯಮ, ವಿಧಿಗಳನ್ನು ಅನುಸರಿಸಿದರೆ ಇಂದ್ರಿಯ ಜಯಾದಿ ಸಾಧನೆಗಳಿಂದ ಮನಃಶುದ್ಧಿಯನ್ನು ತಂದುಕೊಂಡು ಪ್ರಣವ ಸಹಿತವಾದ ಗಾಯತ್ರಿಯನ್ನು ಜಪಿಸುವುದೇ ಶ್ರೇಷ್ಠವಾದ ಕರ್ಮವೆನಿಸಿದೆ. ಶ್ರುತಿಗಳಲ್ಲಿ, ಸಂಹಿತೆಗಳಲ್ಲಿ, ಸ್ಮೃತಿಗಳಲ್ಲಿಯೂ ಶುದ್ಧವಾದ ಬೇರೆ ಯಾವ ಉತ್ತಮ ಮಂತ್ರಗಳನ್ನು ಹೇಳಿದ್ದಾರೋ ಅವುಗಳನ್ನು ಸಾಧನಗಳನ್ನಾಗಿ ಗಳಿಸಿಕೊಳ್ಳಬೇಕು.

ಕುಶೋಚ್ಚಯನಿಷಣ್ಣಃ ಸನ್ ಕುಶಹಸ್ತಃ ಕುಶೈಃ ಶಿಖೀ ।
ಚೀರೈಃ ಪರಿವೃತಸ್ತಸ್ಮಿನ್ ಮಧ್ಯೇ ಛನ್ನಃ ಕುಶೈಸ್ತಥಾ ॥ ೧೫ ॥

ಜಪ ಮಾಡುವವನು ದರ್ಭೆಯ ಆಸನದಲ್ಲಿ ಕುಳಿತು ಕೈಯಲ್ಲಿ ದರ್ಭೆಗಳನ್ನು ಹಿಡಿದು, ಕುಶಗಳನ್ನು ತಲೆಗೆ ಸುತ್ತಿಕೊಂಡು, ಸುತ್ತಲೂ ದರ್ಭೆಗಳನ್ನು ಹರಡಿ, ಕುಶವಸ್ತ್ರವನ್ನೇ ಧರಿಸಿರಬೇಕು.

ವಿಷಯೇಭ್ಯೋ ನಮಸ್ಕುರ್ಯಾದ್ ವಿಷಯಾನ್ನ ಚ ಭಾವಯೇತ್ ।
ಸಾಮ್ಯಮುತ್ಪಾದ್ಯ ಮನಸೋ ಮನಸ್ಯೇವ ಮನೋ ದಧತ್ ॥ ೧೬ ॥

ಬಾಹ್ಯವಿಷಯಗಳ ಸಂಬಂಧವನ್ನು ಮನಸ್ಸಿಗೆ ತಂದುಕೊಳ್ಳಬಾರದು. ವಿಷಯಗಳಿಂದ ವಿಮುಖನಾಗಿ ಅವುಗಳನ್ನು ದೂರೀಕರಿಸಿಕೊಂಡು ತನ್ನ ಮನಸ್ಸನ್ನು ಮನಸ್ಸಿನಲ್ಲಿಯೇ ದೃಢಗೊಳಿಸಿಕೊಂಡಿರಬೇಕು.

ತದ್ಧಿಯಾ ಧ್ಯಾಯತಿ ಬ್ರಹ್ಮ ಜಪನ್ ವೈ ಸಂಹಿತಾಂ ಹಿತಾಮ್ ।
ಸನ್ನ್ಯಸ್ಯತ್ಯಥ ವಾ ತಾಂ ವೈ ಸಮಾಧೌ ಪರ್ಯವಸ್ಥಿತಃ ॥ ೧೭ ॥

ಈ ವಿಧವಾಗಿ ನಡೆಯತಕ್ಕ ಜಾಪಕನು ಗಾಯತ್ರೀಮಂತ್ರವನ್ನು ಜಪಿಸುತ್ತಾ ತನ್ನ ಬುದ್ಧಿಯು ಪರಮಾತ್ಮನೊಬ್ಬನನ್ನೇ ವಿಷಯೀಕರಿಸುವಂತೆ ಮಾಡುತ್ತಾನೆ. ಬಳಿಕ ಆ ಸಾಧಕನು ಸ್ಥಿರವಾದ ಸಮಾಧಿಯೋಗದಲ್ಲಿ ಮಗ್ನನಾಗಿರುತ್ತಾನೆ.

ಧ್ಯಾನಮುತ್ಪಾದಯತ್ಯತ್ರ ಸಂಹಿತಾಬಲಸಂಶ್ರಯಾತ್ ।
ಶುದ್ಧಾತ್ಮಾ ತಪಸಾ ದಾಂತೋ ನಿವೃತ್ತದ್ವೇಷಕಾಮವಾನ್ ॥ ೧೮ ॥

ಗಾಯತ್ರಿಮಂತ್ರಬಲವನ್ನು ಆಶ್ರಯಿಸುವುದರಿಂದ ಜಾಪಕನಿಗೆ ಧ್ಯಾನಯೋಗವು ತಾನಾಗಿಯೇ ಸಿದ್ಧಿಸುವುದು. ಧೀರನಾದ ಅವನು ಶುದ್ಧಾತ್ಮನಾಗಿ ತಪಸ್ಸಿನಿಂದ ಇಂದ್ರಿಯ ಜಯವನ್ನು ಸಂಪಾದಿಸಿಕೊಂಡು ದ್ವೇಷ, ಕಾಮಗಳಿಂದ ನಿವೃತ್ತಿಯನ್ನು ಹೊಂದುತ್ತಾನೆ.

ಅರಾಗಮೋಹೋ ನಿರ್ದ್ವಂದ್ವೋ ನ ಶೋಚತಿ ನ ಸಜ್ಜತೇ ।
ನ ಕರ್ತಾಕರಣೀಯಾನಾಂ ನ ಕಾರ್ಯಾಣಾಮಿತಿ ಸ್ಥಿತಿಃ ॥ ೧೯ ॥

ರಾಗ-ಮೋಹಗಳಿಗೆ ತುತ್ತಾಗದ, ಸುಖ-ದುಃಖಗಳಿಗೆ ಬಲಿಯಾಗದ ಆ ಸಾಧಕನು ಬಾಹ್ಯವಾದ ಸುಖ-ದುಃಖಗಳಲ್ಲಿ ಎಂದೂ ಯುಕ್ತನಾಗುವುದಿಲ್ಲ. ಅಂತಹವನು ಮಾಡಿದ ಕಾರ್ಯಗಳಿಗೆ ತಾನು ಕರ್ತನೆಂದಾಗಲೀ, ಅದರ ಫಲವನ್ನು ತಾನು ಅನುಭವಿಸುವುದೆಂದಾಗಲೀ ತಿಳಿಯದಿರುವ ಸ್ಥಿತಿಯನ್ನು ಹೊಂದುತ್ತಾನೆ.

ನ ಚಾಹಂಕಾರಯೋಗೇನ ಮನಃ ಪ್ರಸ್ಥಾಪಯೇತ್ ಕ್ವಚಿತ್ ।
ನ ಚಾತ್ಮಗ್ರಹಣೇ ಯುಕ್ತೋ ನಾವಮಾನೀ ನ ಚಾಕ್ರಿಯಃ ॥ ೨೦ ॥

ಅಹಂಕಾರದಿಂದ ಮನಸ್ಸನ್ನು ಯಾವುದರಲ್ಲಿಯೂ ಸಂಯೋಜಿಸಿಕೊಳ್ಳಬಾರದು. ಸಾಧಕನಾದ ಇವನಿಗೆ ಧನಾರ್ಜನೆಯಲ್ಲಿ ಪ್ರವೃತ್ತಿಯುಂಟಾಗದು. ಮತ್ತೊಬ್ಬರನ್ನು ಅಪಮಾನಿಸುವ ಸ್ವಭಾವವನ್ನು ಹೊಂದುವುದಿಲ್ಲ. ಸತ್ಕರ್ಮಗಳಿಲ್ಲದೆ ವರ್ತಿಸುವುದಿಲ್ಲ. ಅಭಿಮಾನಕ್ಕೆ ತುತ್ತಾಗುವುದಿಲ್ಲ.

ಧ್ಯಾನಕ್ರಿಯಾಪರೋ ಯುಕ್ತೋ ಧ್ಯಾನವಾನ್ ಧ್ಯಾನನಿಶ್ಚಯಃ ।
ಧ್ಯಾನೇ ಸಮಾಧಿಮುತ್ಪಾದ್ಯ ತದಪಿ ತ್ಯಜತಿ ಕ್ರಮಾತ್ ॥ ೨೧ ॥

ಧ್ಯಾನದಲ್ಲಿಯೇ ಸದಾ ಆಸಕ್ತನಾಗಿರುತ್ತಾನೆ. ಧ್ಯಾನವುಳ್ಳವನಾಗಿ, ಧ್ಯಾನದಲ್ಲೇ ಅಚಲವಾದ ನಿಶ್ಚಯವುಳ್ಳವನಾಗಿ, ಧ್ಯಾನಸಮಾಧಿಯನ್ನು ಹೊಂದಿ ಕ್ರಮವಾಗಿ ಬ್ರಹ್ಮನನ್ನು ಧ್ಯಾನಿಸುತ್ತಾ ಎಲ್ಲವನ್ನೂ ಮರೆಯುತ್ತಾನೆ.

ಸ ವೈ ತಸ್ಯಾಮವಸ್ಥಾಯಾಂ ಸರ್ವತ್ಯಾಗಕೃತಃ ಸುಖೀ ।
ನಿರೀಹಸ್ತ್ಯಜತಿ ಪ್ರಾಣಾನ್ ಬ್ರಾಹ್ಮೀಂ ಸಂಶ್ರಯತೇ ತನುಮ್ ॥ ೨೨ ॥

ಆ ಸ್ಥಿತಿಯಲ್ಲಿ ಅವನು ಸರ್ವತ್ಯಾಗದಿಂದ ಲಭಿಸಬಹುದಾದ ಉತ್ತಮ ಸುಖವನ್ನು ಅನುಭವಿಸುತ್ತಾನೆ. ಅವನು ಬಾಹ್ಯ ಇಚ್ಛಾರಹಿತನಾಗಿ ಪ್ರಾಣಗಳನ್ನು ಮೀರಿ ಕಾಲಾಂತರದಲ್ಲಿ ಸಾಧಕವಾದ ಬ್ರಾಹ್ಮಣಸಂಬಂಧಿಯಾದ ಶರೀರವನ್ನು ಹೊಂದುತ್ತಾನೆ.

ಅಥ ವಾ ನೇಚ್ಛತೇ ತತ್ರ ಬ್ರಹ್ಮಕಾಯನಿಷೇವಣಮ್ ।
ಉತ್ತಾಮತಿ ಚ ಮಾರ್ಗಸ್ಥೋ ನೈವ ಕ್ವಚನ ಜಾಯತೇ ॥ ೨೩ ॥

ಅಂತಹ ಬ್ರಾಹ್ಮಣ ಶರೀರವನ್ನು ಹೊಂದಿದರೂ ಆ ಶಾರೀರಿಕ ಮೋಹವುಳ್ಳವನಾಗಿ ಜನ್ಮಾಂತರ ಸಂಸ್ಕಾರದಿಂದ ದೇವಯಾನ ಎಂಬ ಬ್ರಹ್ಮಮಾರ್ಗವನ್ನು ಅನುಸರಿಸಿ ಜ್ಞಾನಮುಖದ ಧ್ಯಾನದಿಂದ ಊರ್ಧ್ವಗಮನವನ್ನು ಹೊಂದುತ್ತಾನೆ. ಇನ್ನೆಂದಿಗೂ ಈ ಸಂಸಾರದಲ್ಲಿ ಅವನು ಹುಟ್ಟುವುದಿಲ್ಲ.

ಆತ್ಮಬುದ್ಧಿಂ ಸಮಾಸ್ಥಾಯ ಶಾಂತೀಭೂತೋ ನಿರಾಮಯಃ ।
ಅಮೃತಂ ವಿರಜಃಶುದ್ಧಮಾತ್ಮಾನಂ ಪ್ರಪದ್ಯತೇ ॥ ೨೪ ॥

ಅವನು ಪರಮಾತ್ಮನ ವಿಷಯಕವಾದ ಜ್ಞಾನವನ್ನು ಹೊಂದಿದವನಾಗಿ ಶೋಕ-ಮೋಹಾದಿಗಳನ್ನು ತೊರೆದವನಾಗಿ, ಶಾಂತಾತ್ಮನಾಗಿ ಅಮೃತವೂ, ವಿರಜವೂ, ಶುದ್ಧವೂ ಆದ ಪರಮಾತ್ಮನನ್ನೇ ಹೊಂದುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ದ್ವಾವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಇಪ್ಪತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ಮೂರನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನಿಗೆ ಜಪಫಲಾದಿಗಳನ್ನು ತಿಳಿಸಿದುದು.

ಯುಧಿಷ್ಠಿರಃ

ಗತೀನಾಮುತ್ತಮಾ ಪ್ರಾಪ್ತಿಃ ಕಥಿತಾ ಜಾಪಕೇಷ್ವಿಹ ।
ಏಕೈವೈಷಾ ಗತಿಸ್ತೇಷಾಮುತ ಯಾಂತ್ಯಪರಾಮಪಿ ॥ ೧ ॥

ಯುಧಿಷ್ಠಿರ– ಪಿತಾಮಹನೇ, ಜಾಪಕರಿಗೆ ಗತಿಗಳಲ್ಲೇ ಉತ್ತಮವಾದ ಗತಿಯು ಲಭಿಸುತ್ತದೆ ಎಂದು ಹೇಳಿದೆಯಷ್ಟೆ! ಅವರು ಆ ಜಪಫಲಗಳಿಂದ ಒಂದೇ ಗತಿಯನ್ನು ಹೊಂದುತ್ತಾರೋ ಅಥವಾ ಅವರಿಗೆ ಬೇರೆ ಗತಿಗಳು ಇವೆಯೋ?

ಭೀಷ್ಮಃ

ಶೃಣುಷ್ವಾವಹಿತೋ ರಾಜಂಜಾಪಕಾನಾಂ ಗತಿಂ ವಿಭೋ ।
ಯಥಾ ಗಚ್ಛಂತಿ ನಿರಯಮನೇಕಂ ಪುರುಷರ್ಷಭ ॥ ೨ ॥

ಭೀಷ್ಮ– ರಾಜನೇ, ಸಮಾಧಾನಚಿತ್ತದಿಂದ ಕೇಳು. ಜಪಮಾಡುವವರಿಗೆ ಲಭಿಸಬಹುದಾದ ಎಲ್ಲ ಗತಿಗಳನ್ನು, ಜಪದ ನ್ಯೂನತೆಯಿಂದ ಅವರು ಹೊಂದಬಹುದಾದ ಅನೇಕ ನರಕಗಳನ್ನು ನಿನಗೆ ತಿಳಿಸುತ್ತೇನೆ.

ಯಥೋಕ್ತಮೇತತ್ ಪೂರ್ವಂ ಯೋ ನಾನುತಿಷ್ಠತಿ ಜಾಪಕಃ ।
ಏಕದೇಶಕ್ರಿಯಶ್ಚಾತ್ರ ನಿರಯಂ ಸ ನಿಗಚ್ಛತಿ ॥ ೩ ॥

ಜಪಕ್ಕಾಗಿ ಸಂಕಲ್ಪಿಸಿದವನು ಹಿಂದೆ ಹೇಳಿದ ನಿಯಮಗಳನ್ನು ಅನುಷ್ಠಾನ ಮಾಡದೆ ಅದರ ಸ್ವಲ್ಪಭಾಗವನ್ನು ಮಾತ್ರ ಕ್ರಮವಾಗಿ ನಡೆಸಿದರೂ ಉಳಿದದ್ದನ್ನು ಪೂರ್ಣವಾಗಿ ಮಾಡದ ಕಾರಣ ನರಕಕ್ಕೆ ಹೋಗುತ್ತಾನೆ.

ಅವಮಾನೇನ ಕುರುತೇ ನ ತುಷ್ಯತಿ ನ ಶೋಚತಿ ।
ಈದೃಶೋ ಜಾಪಕೋ ಯಾತಿ ನಿರಯಂ ನಾತ್ರ ಸಂಶಯಃ ॥ ೪ ॥

ಮತ್ತು ಜಪದ ವಿಧಿಯಲ್ಲಿ ಪೂರ್ಣವಾದ ನಂಬಿಕೆಯಿಲ್ಲದೆ, ಜಪದಿಂದ ಸಂತೋಷವನ್ನು ಹೊಂದುವುದಿಲ್ಲ, ದುಃಖವನ್ನೂ ಹೊಂದುವುದಿಲ್ಲ. ಜಪತ್ಯಾಗದಿಂದ ದುಃಖಿತನಾಗುವುದಿಲ್ಲ. ಇಂತಹ ಜಾಪಕನು ಅನಾದರ ಮಾಡಿದ ಕಾರಣದಿಂದ ನರಕಭಾಗಿಯಾಗುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಅಹಂಕಾರಕೃತಶ್ಚೈವ ಸರ್ವೇ ನಿರಯಗಾಮಿನಃ ।
ಪರಾವಮಾನೀ ಪುರುಷೋ ಭವಿತಾ ನಿರಯೋಪಗಃ ॥ ೫ ॥

ಅಹಂಕಾರದಿಂದ ಜಪಮಾಡುವ ವ್ಯಕ್ತಿಯು ನಿರಯಗಾಮಿಯಾಗುತ್ತಾನೆ. ಅಹಂಕಾರದಿಂದ ಮತ್ತೊಬ್ಬರನ್ನು ಅಪಮಾನಿಸುವ ವ್ಯಕ್ತಿಯು ನರಕಕ್ಕೆ ಹೋಗುತ್ತಾನೆ.

ಅಭಿಧ್ಯಾಪೂರ್ವಕಂ ಜಪ್ಯಂ ಕುರುತೇ ಯಶ್ಚ ಮೋಹಿತಃ ।
ಯತ್ಸಾಭಿಧ್ಯಾಂ ಸ ಕುರುತೇ ತಂ ವೈ ನಿರಯಮೃಚ್ಛತಿ ॥ ೬ ॥

ಯಾವನು ವಿಷಯಗಳನ್ನೇ ಚಿಂತಿಸುತ್ತಾ ವಿಷಯಗಳಲ್ಲಿ ಮೋಹಿತನಾಗಿ ಜಪವನ್ನು ಅನುಷ್ಠಾನ ಮಾಡುತ್ತಾನೋ, ಯಾವುದೋ ಫಲಾಪೇಕ್ಷೆಯಿಂದ ಜಪದ ಉದ್ದೇಶವನ್ನು ಅರಿಯದೆ ಜಪವನ್ನು ಮಾಡುತ್ತಾನೋ ಆ ಮಾಡಿದ ಅನುಷ್ಠಾನವು ಅವನನ್ನು ನರಕಕ್ಕೆ ತಳ್ಳುತ್ತದೆ.

ಅಥೈಶ್ವರ್ಯಪ್ರವೃತ್ತಃ ಸಂಜಾಪಕಸ್ತತ್ರ ರಜ್ಯತೇ ।
ಸ ಏವ ನಿರಯಸ್ತಸ್ಯ ನಾಸೌ ತಸ್ಮಾತ್ ಪ್ರಮುಚ್ಯತೇ ॥ ೭ ॥

ಯಾವನು ಐಶ್ವರ್ಯಗಳಲ್ಲಿ (ಅಣಿಮಾದಿ ಐಶ್ವರ್ಯಗಳಲ್ಲಿ) ಆಸೆಯಿಟ್ಟುಕೊಂಡು ಜಪವನ್ನು ಮಾಡುತ್ತಾನೋ, ಆ ಐಶ್ವರ್ಯದಲ್ಲೇ ಏಕಾಗ್ರತೆಯನ್ನು ಹೊಂದಿದ ಕಾರಣದಿಂದಾಗಿ ಉದ್ದಿಷ್ಟವಾದ ಫಲವನ್ನು ಪಡೆಯದೆ ಕೊನೆಗೆ ನರಕಕ್ಕೆ ಹೋಗುತ್ತಾನೆ.

ರಾಗೇಣ ಜಾಪಕೋ ಜಪ್ಯಂ ಕುರುತೇ ತತ್ರ ಮೋಹಿತಃ ।
ಯತ್ರಾಸ್ಯ ರಾಗಃ ಪತತಿ ತತ್ರ ತತ್ರೋಪಜಾಯತೇ ॥ ೮ ॥

ಮೋಹದಿಂದ ಜಪವನ್ನು ಮಾಡುವ ವ್ಯಕ್ತಿಯು ಆ ಫಲದಲ್ಲಿಯೇ ಮೋಹಿತನಾಗಿರುತ್ತಾನಾದ್ದರಿಂದ ಎಲ್ಲಿ ಅವನಿಗೆ ರಾಗವು ಉತ್ಪತ್ತಿಯಾಗುತ್ತದೋ ಅಂತಹ ರಾಗ-ಮೋಹಗಳನ್ನು ಜಪಿಸಿದ ಫಲವಾಗಿ ಅಂತಹ ಪುತ್ರ-ಕಳತ್ರ-ಧನ-ಧಾನ್ಯಾದಿಗಳ ಮಧ್ಯದಲ್ಲಿಯೇ ಜನ್ಮವನ್ನು ಹೊಂದುತ್ತಾನೆ. ಕಳತ್ರ-ಧನ-ಧಾನ್ಯಾದಿಗಳು ಅವನಿಗೆ ಲಭಿಸುತ್ತವೆ. ಉದ್ದಿಷ್ಟವಾದ ಫಲವು ಸಿಗುವುದಿಲ್ಲ.

ದುರ್ಬುದ್ಧಿರಕೃತಪ್ರಜ್ಞಶ್ಚಲೇ ಮನಸಿ ತಿಷ್ಠತಿ ।
ಚಲಾಮೇವ ಗತಿಂ ಯಾತಿ ನಿರಯಂ ವಾಧಿಗಚ್ಛತಿ ॥ ೯ ॥

ಉದ್ದಿಷ್ಟಫಲಕ್ಕಾಗಿ ಜಪ ಮಾಡುವವನು ದುರ್ಬುದ್ಧಿಯುಳ್ಳವನಾಗಿ, ಚಪಲ ಮನಸ್ಕನಾಗಿ, ಅವನು ಉದ್ದೇಶಿಸಿದ ಫಲದಲ್ಲಿಯೂ ಕೊರತೆಯುಂಟಾಗಿ ಅವನಿಗೆ ನರಕವುಂಟಾಗುತ್ತದೆ.

ಅಕೃತಪ್ರಜ್ಞಕೋ ಬಾಲೋ ಮೋಹಂ ಗಚ್ಛತಿ ಜಾಪಕಃ ।
ಸ ಮೋಹಾನ್ನಿರಯಂ ಯಾತಿ ತತ್ರ ಗತ್ವಾನುಶೋಚತಿ ॥ ೧೦ ॥

ಪ್ರಜ್ಞಾಹೀನನೂ, ಬಾಲಿಶನೂ ಆದ ಜಾಪಕನು ನಡುವೆ ಮೋಹಕ್ಕೆ ತುತ್ತಾಗಿ ಅದರಿಂದ ನರಕಕ್ಕೆ ಹೋಗಿ ಅನುತಾಪವನ್ನು ಪಡುವಂತಾಗುತ್ತದೆ.

ದೃಢಗ್ರಾಹೀ ಕರೋಮೀತಿ ಜಪ್ಯಂ ಜಪತಿ ಜಾಪಕಃ ।
ನ ಸಂಪೂರ್ಣೋ ನ ವಾ ಯುಕ್ತೋ ನಿರಯಂ ಸೋऽಧಿಗಚ್ಛತಿ ॥೧೧॥

ಯಾರಿಗೆ ಮನಸ್ಸಿನಲ್ಲಿ ವೈರಾಗ್ಯವು ಪೂರ್ಣವಾಗಿಲ್ಲವೋ, ಬಲಾತ್ಕಾರದಿಂದ ಭೋಗಗಳನ್ನು ನೀಗುವ ಸಂಕಲ್ಪವನ್ನು ಮಾತ್ರ ದೃಢವಾಗಿ ಮಾಡಿ ಜಪ ಮಾಡಿದರೂ ಅವನು ನರಕಕ್ಕೇ ಭಾಗಿಯಾಗುತ್ತಾನೆ.

ಯುಧಿಷ್ಠಿರಃ

ಅನಿಮಿತ್ತಂ ಪರಂ ಯತ್ತದವ್ಯಕ್ತಂ ಬ್ರಹ್ಮಣಿ ಸ್ಥಿತಮ್ ।
ತದ್ಭೂತೋ ಜಾಪಕಃ ಕಸ್ಮಾತ್ಸ ಶರೀರಮಥಾವಿಶೇತ್ ॥ ೧೨ ॥

ಯುಧಿಷ್ಠಿರ– ವೇದಗಳಲ್ಲಿ ಅವ್ಯಕ್ತನಾದ ಪರಬ್ರಹ್ಮನು ಪ್ರತಿಪಾದ್ಯನಾಗಿದ್ದಾನೆ. ಅಂತಹ ಪರಬ್ರಹ್ಮನಲ್ಲಿಯೇ ನೆಲೆಗೊಂಡಿರುವ ಅವನ ಸ್ವರೂಪವನ್ನೇ ಜಪಿಸುವ ಜಾಪಕನು ಪುನಃ ತಿರುಗಿ ಲೋಕದಲ್ಲಿ ಈ ಶರೀರವನ್ನು ಹೊಂದುತ್ತಾನೆ ಎಂದರೆ ಹೇಗೆ? ಜಾಪಕನು ಪರಬ್ರಹ್ಮನ ಸದನವನ್ನು ಹೊಂದುತ್ತಾನೋ ಅಥವಾ ಮಹದ್ಭಯವಾದ ನರಕವನ್ನೇ ಹೊಂದುತ್ತಾನೋ? ಏನು ನಿಮ್ಮ ಅಭಿಪ್ರಾಯ?

ಭೀಷ್ಮಃ

ದುಷ್ಪ್ರಜ್ಞಾನೇನ ನಿರಯಾ ಬಹವಃ ಸಮುದಾಹೃತಾಃ ।
ಪ್ರಶಸ್ತಂ ಜಾಪಕತ್ವಂ ಚ ದೋಷಾಶ್ಚೈತೇ ತದಾತ್ಮಕಾಃ ॥ ೧೩ ॥

ಭೀಷ್ಮ– ಧರ್ಮರಾಜನೇ, ದುಷ್ಪ್ರಜ್ಞೆಯೇ ಜಾಪಕರನ್ನು ಅನೇಕ ನರಕಗಳಿಗೆ ತಳ್ಳುತ್ತದೆ. ಜಾಪಕತ್ವವು ಪ್ರಶಸ್ತವಾಗಿದೆ. ಆದರೆ ಮೇಲೆ ಹೇಳಿದ ದೋಷಗಳೆಲ್ಲಾ ಆ ಜಪದ ಜೊತೆಗೆ ಸೇರಿದಾಗ ನರಕಕ್ಕೆ ಕಾರಣವಾಗುತ್ತವೆ. ಆದ್ದರಿಂದ ಜಾಗರೂಕನಾಗಿ ಜಪಿಸಬೇಕು ಎಂದು ನನ್ನ ಅಭಿಪ್ರಾಯ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ತ್ರಯೋವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಇಪ್ಪತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ನಾಲ್ಕನೆಯ ಅಧ್ಯಾಯ

ಜಾಪದಿಂದ ಉಂಟಾದ ನರಕಗಳು.

ಯುಧಿಷ್ಠಿರಃ

ಕೀದೃಶಂ ನಿರಯಂ ಯಾತಿ ಜಾಪಕೋ ವರ್ಣಯಸ್ವ ಮೇ ।
ಕೌತೂಹಲಂ ಹಿ ಮೇ ಜಾತಂ ತದ್ಭವಾನ್ವಕ್ತುಮರ್ಹತಿ ॥ ೧ ॥

ಯುಧಿಷ್ಠಿರ– ಪಿತಾಮಹನೇ, ಜಾಪಕನು ಯಾವ ರೀತಿಯಾದ ನರಕವನ್ನು ಹೊಂದುತ್ತಾನೆ ಎಂಬುದನ್ನು ನನಗೆ ವರ್ಣಿಸು. ಜಾಪಕನೂ ನರಕವನ್ನು ಹೊಂದುತ್ತಾನೆ ಎಂಬ ವಿಷಯವು ನನ್ನ ಮನಸ್ಸಿನಲ್ಲಿ ಕುತೂಹಲ ಹುಟ್ಟಿಸಿದೆ. ಇದರ ಬಗ್ಗೆ ಹೇಳಲು ನೀನು ಅರ್ಹನಾಗಿರುತ್ತಿ.

ವ್ಯಾಖ್ಯಾನ ವಿಶೇಷ- ಸ್ವಲ್ಪ ಅಂಗವೈಕಲ್ಯದಿಂದ ಕೂಡಿದ ದಿವ್ಯಮಂತ್ರ ಜಾಪಕನು ಯಾವ ಮಂತ್ರವನ್ನು ಹೊಂದುತ್ತಾನೆ? ಕುಂಭೀಪಾಕ ಮೊದಲಾದ ನರಕಗಳನ್ನು ನಿಶ್ಚಿತವಾಗಿ ಹೊಂದುವುದಿಲ್ಲ. ಕಾರಣ, ಪಾಪಿಗಳಿಗೇ ಲಭಿಸುವಂತಹ ನರಕವು ಇದಾಗಿದೆ. ಆದ್ದರಿಂದ ನೀನು ಹೇಳಿದ ನರಕ ಯಾವುದು ಎಂಬುದು ಧರ್ಮರಾಜನ ಪ್ರಶ್ನೆಯ ಅಂತರಂಗ. ಸಿದ್ಧಾಂತವಾದರೂ ಋಷಿ, ಛಂದಸ್ಸು, ದೇವತೆ, ನ್ಯಾಸ, ಧ್ಯಾನ ಇವುಗಳಿಂದ ಸಹಿತವಾಗಿ ಏಕಾಗ್ರದಿಂದ ಮಾಡುವ ದಿವ್ಯಮಂತ್ರ ಜಪವು ವಿಷ್ಣುಲೋಕಕ್ಕೆ ಕಾರಣವಾಗುತ್ತದೆ. ಮನೋದೋಷದಿಂದ, ಸ್ವಲ್ಪ ಅಂಗ ವೈಕಲ್ಯದಿಂದ ಕೂಡಿಕೊಂಡು ಮಹಾಮಂತ್ರವನ್ನು ಜಪಿಸುವವರಿಗೆ ಬ್ರಹ್ಮಲೋಕವೇ ಮೊದಲಾದ ಅಸ್ಥಿರ ಲೋಕಗಳು ಲಭಿಸುತ್ತದೆ. ಆದ್ದರಿಂದ ಅದೇ ಪುಣ್ಯಲೋಕವನ್ನು ನಿರಯಾ ಎಂದು ವೈರಾಗ್ಯ ಹುಟ್ಟಿಸಲು ಮಹಾಭಾರತದಲ್ಲಿ ವ್ಯಾಸರು ತಿಳಿಸುತ್ತಾರೆ. 'ಅಯನಂ ನಿರ್ಗತಂ ಏಷು ತೇ ನಿರಯಾಃ' ಎಂಬ ವ್ಯುತ್ಪತ್ತಿಯಿಂದ ನಿತ್ಯಸ್ಥಿತಿಯನ್ನು ಪಡೆಯದಿರುವ ಲೋಕಗಳು ಎಂದಷ್ಟೆ ನಿರಯ ಶಬ್ದಕ್ಕೆ ಅರ್ಥವಾಗುತ್ತದೆ.

ಭೀಷ್ಮಃ

ಧರ್ಮಸ್ಯಾಂಶಃ ಪ್ರಸೂತೋಽಸಿ ಧರ್ಮಿಷ್ಠೋಽಸಿ ಸ್ವಭಾವತಃ ।
ಧರ್ಮಮೂಲಾಶ್ರಯಂ ವಾಕ್ಯಂ ಶೃಣುಷ್ವಾವಹಿತೋಽನಘ ॥ ೨ ॥

ಭೀಷ್ಮ- ಧರ್ಮರಾಜನೇ, ನೀನು ಧರ್ಮಪುರುಷನ ಅಂಶದಿಂದ ಹುಟ್ಟಿದವನು. ಇಷ್ಟೇ ಅಲ್ಲದೆ ಸಹಜವಾಗಿ ಎಲ್ಲ ಧರ್ಮಗಳನ್ನೂ ಬಲ್ಲವನು. ಆದರೂ ಧರ್ಮ ಸಂಬಂಧವಾದ ನಾನು ಹೇಳುವ ವಿಷಯಗಳನ್ನು ಸಾವಧಾನವಾಗಿ ಕೇಳು.

ಅಮೂನಿ ಯಾನಿ ಸ್ಥಾನಾನಿ ದೇವಾನಾಂ ಪರಮಾತ್ಮನಾಮ್ ।
ನಾನಾಸಂಸ್ಥಾನವರ್ಣಾನಿ ನಾನಾರೂಪಫಲಾನಿ ಚ ॥ ೩ ॥

ಪರಲೋಕವೆನಿಸುವ ದೇವತಾಸ್ಥಾನಗಳು ಅನೇಕ ಇವೆ. ಮಹಾತ್ಮರಾದ ದೇವತೆಗಳ ಸನ್ನಿವೇಶಗಳು, ವರ್ಣಗಳು, ರೂಪಗಳು, ಅವುಗಳೊಳಗಿನ ಫಲಗಳು ಅನೇಕ ವಿಧವಾಗಿರುತ್ತವೆ.

ದಿವ್ಯಾನಿ ಕಾಮಚಾರೀಣಿ ವಿಮಾನಾನಿ ಸಭಾಸ್ತಥಾ ।
ಆಕ್ರೀಡಾ ವಿವಿಧಾ ರಾಜನ್ ಪದ್ಮಿನ್ಯಶ್ಚಾಮಲೋದಕಾಃ ॥ ೪ ॥

ಅಲ್ಲಲ್ಲಿ ದಿವ್ಯಸ್ಥಾನಗಳಿವೆ. ಕಾಮಚಾರಿಗಳಾದ ದಿವ್ಯವಿಮಾನಗಳಿದ್ದಾವೆ. ದಿವ್ಯ ಸಭೆಗಳೂ ಇವೆ. ವಿಹಾರ ಸ್ಥಾನಗಳಿವೆ. ಸ್ವಚ್ಛಜಲಗಳುಳ್ಳ ಕಮಲಗಳಿಂದ ತುಂಬಿದ ದಿವ್ಯಸರೋವರಗಳಿವೆ.

ಚತುರ್ಣಾಂ ಲೋಕಪಾಲಾನಾಂ ಶುಕ್ರಸ್ಯಾಥ ಬೃಹಸ್ಪತೇಃ ।
ಮರುತಾಂ ವಿಶ್ವದೇವಾನಾಂ ಸಾಧ್ಯಾನಾಮಶ್ವಿನೋರಪಿ ॥ ೫ ॥

ರುದ್ರಾದಿತ್ಯವಸೂನಾಂ ಚ ತಥಾನ್ಯೇಷಾಂ ದಿವೌಕಸಾಮ್ ।
ಏತೇ ವೈ ನಿರಯಾಸ್ತಾತ ಸ್ಥಾನಸ್ಯ ಪರಮಾತ್ಮನಃ ॥ ೬ ॥

ಅಲ್ಲಿ ನಾಲ್ಕು ದಿಕ್ಪಾಲಕರಿಗೆ ಸೇರಿದ ಬೇರೆ ಬೇರೆ ಲೋಕಗಳೂ ಇವೆ. ಹಾಗೆಯೇ ಶುಕ್ರ, ಬೃಹಸ್ಪತಿ, ಮರುತ್ತುಗಳು, ವಿಶ್ವೇದೇವತೆಗಳು, ಸಾಧ್ಯರು, ಅಶ್ವಿನೀದೇವತೆಗಳು, ರುದ್ರರು, ಆದಿತ್ಯರು, ವಸುಗಳು, ಇನ್ನೂ ಬೇರೆ ದೇವತೆಗಳ ಸ್ಥಾನಗಳೂ ಇವೆ. ಆದರೆ ಅಲ್ಲಿನ ಸುಖಭಾಗಿಗಳನ್ನು, ಸನ್ನಿವೇಶಗಳನ್ನು ಪರಮಾತ್ಮನ ಸ್ಥಾನದ ಜೊತೆಗೆ ಹೋಲಿಸಿದಾಗ ಇವುಗಳು ನರಕವೆಂದೇ ಕರೆಸಿಕೊಳ್ಳುತ್ತವೆ. ಈ ಅಭಿಪ್ರಾಯದಲ್ಲಿ ನರಕಭಾಗಿಗಳಾಗುತ್ತಾರೆ ಎಂದು ಹೇಳಿದ್ದೇನೆ.

ಅಭಯಂ ಚಾನಿಮಿತ್ತಂ ಚ ನ ಚ ಕ್ಲೇಶಭಯಾವೃತಮ್ ।
ದ್ವಾಭ್ಯಾಂ ಯುಕ್ತಂ ತ್ರಿಭಿರ್ಮುಕ್ತಮಷ್ಟಾಭಿಸ್ತ್ರಿಭಿರೇವ ಚ ॥ ೭ ॥

ಪರಮಾತ್ಮನ ಸ್ಥಾನವಾದರೂ ಭಯರಹಿತವಾದುದು. ಆ ಸ್ಥಾನಕ್ಕೆ ಎಂದೂ ಉತ್ಪತ್ತಿ ಎಂಬುದಿರುವುದಿಲ್ಲ, ನಿತ್ಯವಾದುದು. ಅಜ್ಞಾನಾದಿ ಕ್ಲೇಶಗಳ ಭಯವು ಇರುವುದಿಲ್ಲ. ಜನನ-ಮರಣಗಳಾಗಲಿ ಇರುವುದಿಲ್ಲ. ಸತ್ವ-ರಜಸ್-ತಮೋಗುಣಗಳಿಂದ ಮುಕ್ತವಾದುದು. ಅಷ್ಟಮದಗಳಿಂದ, ಸೃಷ್ಟಿ-ಸ್ಥಿತಿ-ಸಂಹಾರಗಳಿಂದ, ತೇಜಸ್ಸು-ನೀರು-ಅನ್ನ ಎಂಬ ಉಪಾದಾನ ಕಾರಣಗಳಿಂದ ರಹಿತವಾದುದು.

ಚತುರ್ಲಕ್ಷಣವರ್ಜಂ ತು ಚತುಷ್ಕಾರಣವರ್ಜಿತಮ್ ।
ಅಪ್ರಹರ್ಷಮನಾನಂದಮಶೋಕಂ ವಿಗತಕ್ಲಮಮ್ ॥ ೮ ॥

ಕಾಲಂ ಸಂವಹತೇ ತತ್ರ ನ ಕಾಲಸ್ತತ್ರ ವೈ ಪ್ರಭುಃ ।
ಸ ಕಾಲಸ್ಯ ಪ್ರಭೂ ರಾಜನ್ ಸ್ವರ್ಗಸ್ಯಾಪಿ ತಥೇಶ್ವರಃ ॥ ೯ ॥

ಬ್ರಹ್ಮನ ಸ್ಥಾನವಾದರೂ ಸಾರೂಪ್ಯಾದಿ ಚತುರ್ವಿಧ ಮುಕ್ತಲಕ್ಷಣ ವರ್ಜಿತವಾದುದು. ಚತುರ್ವಿಧ ಜ್ಞಾನಗಳೆಂಬ ಕಾರಣದಿಂದ ವರ್ಜಿತವಾದುದು.

ಮೋಕ್ಷದಂತೆ ಪ್ರಕೃಷ್ಟ ಚಿತ್ತೋಲಾಸರಹಿತವಾದುದು. ಸ್ವರೂಪದಿಂದ ಅನುಭವ ರಹಿತವಾದುದು. ಯಾವುದೇ ಆಯಾಸವಿಲ್ಲದುದು. ಇಂತಹ ಬ್ರಹ್ಮನ ಸ್ಥಾನವನ್ನು ಯಮನು ನಿಯಮಿಸುವುದಿಲ್ಲ. ಅವನು ಅಲ್ಲಿ ಪ್ರಭುವಾಗಲಾರ. ಕಾಲಕ್ಕೆಲ್ಲ ಪ್ರಭುವಾದ ನಾರಾಯಣನ ಸ್ಥಾನಕ್ಕೆ ಯಾರೂ ನಿಯಾಮಕರು ಇರುವುದಿಲ್ಲ. ಮಹಾತ್ಮರಾದ ಜಾಪಕರು ಹೊಂದುವಂತಹ ಪರಬ್ರಹ್ಮನ ಸ್ಥಾನವು ಈ ರೀತಿಯಾದುದು.

ಆತ್ಮಕೇವಲತಾಂ ಪ್ರಾಪ್ತಸ್ತತ್ರ ಗತ್ವಾ ನ ಶೋಚತಿ ।
ಈದೃಶಂ ಪರಮಂ ಸ್ಥಾನಂ ನಿರಯಾಸ್ತೇ ಚ ತಾದೃಶಾಃ ॥ ೧೦ ॥

ಪರಮಾತ್ಮನ ಇಂತಹ ಸ್ಥಾನವನ್ನು ಹಿರಣ್ಯಗರ್ಭನು ಧ್ಯಾನಬಲದಿಂದಲೇ ಹೊಂದಿರುತ್ತಾನೆ. ಮನಸ್ಸಿನಲ್ಲಿ ಪರಮಾತ್ಮನನ್ನೇ ಧ್ಯಾನಿಸುವ ವ್ಯಕ್ತಿಗಳಿಗೆ ಈ ಭಗವಂತನ ಸ್ಥಾನವು ಲಭಿಸುತ್ತವೆ. ಪರಬ್ರಹ್ಮನ ಸ್ಥಾನವು ಈ ರೀತಿಯಾಗಿದ್ದರೆ ಉಳಿದ ಎಲ್ಲಾ ಲೋಕಗಳು ಈ ರೀತಿಯಾದ ವ್ಯವಸ್ಥೆ ಇಲ್ಲದಿರುವುದರಿಂದ ನಿರಯಗಳೆಂದೇ ಕರೆಯಲ್ಪಡುತ್ತದೆ. ಹಿರಣ್ಯಗರ್ಭನಿಗೂ ಸಾಯುಜ್ಯಪ್ರಾಪ್ತಿಗೆ ಕಾರಣವಾದ ಸ್ಥಾನವನ್ನು ದಿವ್ಯಮಂತ್ರಗಳ ಧ್ಯಾನದಿಂದ ಹೊಂದಬೇಕು.

ಏತೇ ತೇ ನಿರಯಾಃ ಪ್ರೋಕ್ತಾಃ ಸರ್ವ ಏವ ಯಥಾತಥಮ್ ।
ತಸ್ಯ ಸ್ಥಾನವರಸ್ಯೇಹ ಸರ್ವೇ ನಿರಯಸಂಜ್ಞಿತಾಃ ॥ ೧೧ ॥

ಭಗವಂತನ ಸ್ಥಾನಕ್ಕಿಂತ ಬೇರೆಯಾದ ಉಳಿದ ಸ್ಥಾನಗಳು ಹಿಂದೆ ತಿಳಿಸಿದಂತೆ ನಿರಯ ಎಂದೇ ಕರೆಸಿಕೊಳ್ಳುತ್ತವೆ. ಭಗವಂತನ ಸ್ಥಾನಕ್ಕಿಂತ ಅವರ (ಕಡಿಮೆ)ಗಳಾದ ಉಳಿದ ಸ್ವರ್ಗಾದಿ ಲೋಕಗಳೆಲ್ಲವೂ ನರಕಸಮಾನಗಳಾದುದರಿಂದ ನಿರಯ ಎಂಬ ಶಬ್ದದಿಂದಲೇ ಕರೆಸಿಕೊಳ್ಳುತ್ತವೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಚತುರ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಇಪ್ಪತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೈದನೆಯ ಅಧ್ಯಾಯ

ಜಾಪಕೋಪಾಖ್ಯಾನ

ಯುಧಿಷ್ಠಿರಃ

ಕಾಲಮೃತ್ಯುಯಮಾನಾಂ ಚ ಬ್ರಾಹ್ಮಣಸ್ಯ ಚ ಸತ್ತಮ ।
ವಿವಾದೋ ವ್ಯಾಹೃತಃ ಪೂರ್ವಂ ತದ್ಭವಾನ್ ವಕ್ತುಮರ್ಹತಿ ॥ ೧ ॥

ಯುಧಿಷ್ಠಿರ– ಪಿತಾಮಹನೇ, ಇದಕ್ಕೆ ಮೊದಲು ನೀನು ಕಾಲ, ಯಮ, ಮೃತ್ಯುಗಳಿಗೂ, ಇಕ್ಷ್ವಾಕುವಿಗೂ, ಬ್ರಾಹ್ಮಣನಿಗೂ ಇದೇ ವಿಚಾರವಾಗಿ ವಿವಾದಗಳು ನಡೆದಿವೆ ಎಂದು ಹೇಳಿದೆಯಲ್ಲವೇ? ಆ ವಿವಾದಗಳನ್ನು ನನಗೆ ಪೂರ್ಣವಾಗಿ ವಿವರಿಸು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಇಕ್ಷ್ವಾಕೋಃ ಸೂರ್ಯಪುತ್ರಸ್ಯ ಯದ್ವೃತ್ತಂ ಬ್ರಾಹ್ಮಣಸ್ಯ ಚ ॥ ೨ ॥

ಕಾಲಸ್ಯ ಮೃತ್ಯೋಶ್ಚ ತಥಾ ಯದ್ವೃತ್ತಂ ತನ್ನಿಬೋಧ ಮೇ ।
ಯಥಾ ಸ ತೇಷಾಂ ಸಂವಾದೋ ಯಸ್ಮಿನ್ ಸ್ಥಾನೇಽಪಿ ಚಾಭವತ್ ॥

ಭೀಷ್ಮ– ರಾಜನೇ, ಆ ಐದುಜನರ ವಿವಾದರೂಪವಾದ ಇತಿಹಾಸವೊಂದನ್ನು ಹಿರಿಯರು ಉದಾಹರಿಸಿದ್ದಾರೆ. ಸೂರ್ಯಪುತ್ರನಾದ ಇಕ್ಷ್ವಾಕುರಾಜನಿಗೂ ಬ್ರಾಹ್ಮಣನಿಗೂ ನಡೆದ, ಆ ಸಂವಾದವನ್ನು ಕಾಲಕ್ಕೂ, ಮೃತ್ಯುವಿಗೂ ನಡೆದ ವಿವಾದವನ್ನು ತಿಳಿಸುತ್ತೇನೆ. ಯಾವಾಗ, ಯಾವ ಕಾರಣಕ್ಕಾಗಿ, ಯಾವ ಧರ್ಮಸೂಕ್ಷ್ಮವನ್ನುದ್ದೇಶಿಸಿ ನಡೆದಿದೆಯೋ ಅದೆಲ್ಲವನ್ನೂ ನಿನಗೆ ಹೇಳುತ್ತೇನೆ.

ಬ್ರಾಹ್ಮಣೋ ಜಾಪಕಃ ಕಶ್ಚಿದ್ಧರ್ಮವೃತ್ತೋ ಮಹಾಯಶಾಃ ।
ಷಡಂಗವಿನ್ಮಹಾಪ್ರಾಜ್ಞಃ ಪೈಪ್ಪಲಾದಿಃ ಸ ಕೌಶಿಕಃ ॥ ೪ ॥

ಹಿಂದೆ ಯಶಸ್ವಿಯೂ, ಧಾರ್ಮಿಕನೂ ಆದ ಒಬ್ಬ ಬ್ರಾಹ್ಮಣನಿದ್ದನು. ಅವನು ಸದಾ ಜಪಶೀಲನೂ, ಪ್ರಾಜ್ಞನೂ, ಷಡಂಗಗಳನ್ನು ಅರಿತವನೂ ಆಗಿದ್ದನು. ಅವನು ಕುಶಿಕವಂಶದ ಪಿಪ್ಪಲಾದ ಎಂಬ ಜ್ಞಾನಿಯ ಮಗನಾಗಿದ್ದನು.

ತಸ್ಯಾಪರೋಕ್ಷಂ ವಿಜ್ಞಾನಂ ಷಡಂಗೇಷು ತಥೈವ ಚ ।
ವೇದೇಷು ಚೈವ ನಿಷ್ಣಾತೋ ಹಿಮವತ್ಪಾದಸಂಶ್ರಯಃ ॥ ೫ ॥

ಅವನಿಗೆ ವೇದಗಳಲ್ಲಿಯೂ, ವೇದಗಳಿಗೆ ಸಂಬಂಧಿಸಿದ ಷಡಂಗಗಳಲ್ಲಿಯೂ ಅಪರೋಕ್ಷಜ್ಞಾನವಿದ್ದಿತು. ಅವನು ಹಿಮವತ್‌ಗಿರಿಯ ತಪ್ಪಲಿನಲ್ಲಿ ವಾಸಿಸುತ್ತಿದ್ದನು.

ಸೋಽಂತ್ಯಂ ಬ್ರಾಹ್ಮಂ ತಪಸ್ತೇಪೇ ಸಂಹಿತಾಂ ಸಂಯತೋ ಜಪನ್ ।
ತಸ್ಯ ವರ್ಷಸಹಸ್ರಂ ತು ನಿಯಮೇನ ತಥಾ ಗತಮ್ ॥ ೬ ॥

ಅವನು ಬಹಳ ನಿಯಮದಿಂದ ಗಾಯತ್ರಿಮಂತ್ರವನ್ನು ಜಪಿಸುತ್ತಾ ಬ್ರಹ್ಮಪ್ರಾಪ್ತಿಗಾಗಿ ತಪಸ್ಸನ್ನು ಮಾಡುತ್ತಿದ್ದನು. ಹೀಗೆ ತಪಸ್ಸನ್ನು ಮಾಡುತ್ತಾ ಸಾವಿರ ವರ್ಷಗಳು ನಿಯಮ ಬದ್ಧವಾಗಿಯೇ ಕಳೆದುಹೋದವು.

ಸ ದೇವ್ಯಾ ದರ್ಶಿತಃ ಸಾಕ್ಷಾತ್ ಪ್ರೀತಾಸ್ಮೀತಿ ತದಾ ಕಿಲ ।
ಜಪ್ಯಮಾವರ್ತಯಂಸ್ತೂಷ್ಣೀಂ ನ ಚ ತಾಂ ಕಿಂಚಿದಬ್ರವೀತ್ ॥ ೭ ॥

ಸಾವಿರವರ್ಷಗಳ ಬಳಿಕ ಆ ಛಂದೋಭಿಮಾನಿ ಗಾಯತ್ರಿದೇವಿಯು ಅವನಿಗೆ ಪ್ರತ್ಯಕ್ಷಳಾಗಿ ವಿಪ್ರೋತ್ತಮನೇ, ನಾನು ನಿನಗೆ ಪ್ರಸನ್ನಳಾಗಿರುತ್ತೇನೆ ಎಂದು ಹೇಳಿದಳು. ಹೀಗೆ ಹೇಳಿದಾಗಲೂ ಬ್ರಾಹ್ಮಣನು ಜಪದಲ್ಲಿಯೇ ಆಸಕ್ತನಾಗಿದ್ದನು. ಆ ಗಾಯತ್ರೀ ದೇವಿಯೊಡನೆ ಮಾತನ್ನೇ ಆಡದೆ ಸುಮ್ಮನಿದ್ದನು.

ತಸ್ಯಾನುಕಂಪಯಾ ದೇವೀ ಪ್ರೀತಾ ಸಮಭವತ್ತದಾ ।
ವೇದಮಾತಾ ತತಸ್ತಸ್ಯ ತಜ್ಜಪ್ಯಂ ಸಮಪೂಜಯತ್ ॥ ೮ ॥

ಅವನ ಸ್ಥಿರವಾದ ಬುದ್ಧಿಯನ್ನು ನೋಡಿದ ಗಾಯತ್ರೀದೇವಿಯು ಅವನಲ್ಲಿ ಅನುಕಂಪವನ್ನು ತಾಳಿದವಳಾಗಿ ಸಂತುಷ್ಟಳಾಗಿ ಅವನ ಜಪವನ್ನು ಮನಸ್ಸಿನಲ್ಲಿಯೇ ಕೊಂಡಾಡುತ್ತಾ ಅಲ್ಲಿಯೇ ನಿರೀಕ್ಷಿಸುತ್ತಾ ನಿಂತಳು.

ಚತುರ್ಭಿರಕ್ಷರೈರ್ಯುಕ್ತಾ ಸೋಮಪಾನೇಽಕ್ಷರಾಷ್ಟಕಾ ।
ಜಗದ್ಬೀಜಸಮಾಯುಕ್ತಾ ಚತುರ್ವಿಂಶಾಕ್ಷರಾತ್ಮಿಕಾ ॥ ೯ ॥

ತತ್ಸವಿತುಃ ಎಂಬ ನಾಲ್ಕು ಅಕ್ಷರಗಳಿಂದ ಕೂಡಿದ, ಸೋಮಪಾನಕ್ಕೆ ಸಂಬಂಧಿಸಿದ ಅಷ್ಟಾಕ್ಷರಗಳಿಂದ ಕೂಡಿದ ಭೂರ್ಭುವಸ್ಸ್ಃ ಎಂಬ ಮೂರು ಲೋಕಗಳನ್ನು

ಹೇಳುವ ಜಗದ್ಬೀಜವಾಚಕ ಎಂಬ ಚತುರ್ವಿಂಶತಿ ಅಕ್ಷರಗಳಿಂದ ಕೂಡಿದ ಗಾಯತ್ರಿಯನ್ನು ಆ ಬ್ರಾಹ್ಮಣನು ಜಪಿಸುತ್ತಿದ್ದನು.

ವ್ಯಾಖ್ಯಾನ ವಿಶೇಷ– ಗಾಯತ್ರಿಗೆ ಸಂಬಂಧಿಸಿದಂತೆ ನಾಲ್ಕು ಅಕ್ಷರಗಳು ಸೋಮಪಾನ ಮಂತ್ರಕ್ಕೆ ಸಂಬಂಧಿಸಿದ ಅಷ್ಟಾಕ್ಷರಗಳು ಎಂದರೆ ಏನು ಎಂಬುದನ್ನು ಗುರುರಾಜರು ಇಲ್ಲಿ ಚಿಂತಿಸಿದ್ದಾರೆ. ಜಗದ್ಬೀಜಸಮಾಯುಕ್ತಾ ಎಂದರೆ ಭೂಃ ಭುವಃ ಸ್ವಃ ಎಂಬ ಮೂರುಲೋಕಗಳನ್ನು ವ್ಯಾಹೃತಿಯು ಹೇಳುವುದರಿಂದ ವ್ಯಾಹೃತಿ ಎಂಬ ಬೀಜದಿಂದ ಗಾಯತ್ರಿಯು ಕೂಡಿದೆ ಎಂದು ಅರ್ಥ. ಗಾಯತ್ರಿಯನ್ನು ಜಪಿಸುವ ಆರಂಭದಲ್ಲಿ ಭೂಃ ಭುವಃ ಸ್ವಃ ವ್ಯಾಹೃತಿ ಎಂಬ ಮೂರು ಪದಗಳಿಂದಲೇ ಭೂಮಿಯೇ ಮೊದಲಾದ ಸಪ್ತಲೋಕದ ತನಕ ಇರುವ ಲೋಕಗಳು ಹೇಳಲ್ಪಡುತ್ತವೆ. ಹೀಗೆ ಸಪ್ತವ್ಯಾಹೃತಿ ಪಾದಗಳಿಂದ ಕೂಡಿದ ಚತುರ್ವಿಂಶಾಕ್ಷರಾತ್ಮಕವಾದುದು ಗಾಯತ್ರಿಯು. 'ಚತುರ್ಭಿರಕ್ಷರೈಃ ಸೋಮಪಾನೇ ಅಷ್ಟರಾಷ್ಟಕಾ ಜಗದ್ಬೀಜಸಮಾಯುಕ್ತಾ' ಎಂಬ ಮೂರು ವಿಷಯಗಳು ಗಾಯತ್ರಿಗೆ ಸಂಬಂಧಿಸಿದವುಗಳು. 'ಸೋಮಪಾನೇ ಅಷ್ಟರಾಕ್ಷಃ' ಎಂದರೆ 'ತತ್ಸವಿತುರ್ವರೇಣ್ಯಂ ಭೋಜನಂ ಶ್ರೇಷ್ಠಂ ಸರ್ವಧಾತಮಂ ತುರಂ ಭಗಸ್ಯ ಧೀಮಹಿ' ಎಂಬ ಸೋಮಪಾನಕ್ಕೆ ಸಂಬಂಧಿಸಿದ ಶ್ರುತಿವಾಕ್ಯವನ್ನು ಗಾಯತ್ರಿಗೆ ಸಂಬಂಧಿಸಿದಂತೆ ಚಿಂತಿಸಬೇಕು. ಕ್ರೀಡಾದಿ ಗುಣವಿಶಿಷ್ಟನಾದ ಭಗವಂತನಿಗೆ ಭೋಜನಯೋಗ್ಯವಾದ ಸೋಮರಸವನ್ನು ನಾವು ಪ್ರಾರ್ಥಿಸುತ್ತೇವೆ. ಯಾವ ಸೋಮರಸವನ್ನು ಪ್ರಾರ್ಥಿಸುವುದರಿಂದ ಪವಿತ್ರವಾದ ಅಂತಃಕರಣವುಳ್ಳ ನಾವು ಸಕಲ ಜಗತ್‌ಶ್ರೇಷ್ಠನೆನಿಸಿದ, ಅತಿಶಯವಾಗಿ ಎಲ್ಲವನ್ನೂ ಧರಿಸಿದ ತುರಂ= ಒಂದೇ ಹಗಲು ರಾತ್ರಿಗಳಲ್ಲಿ ಮೇರುವಿಗೆ ಪ್ರದಕ್ಷಿಣೆ ಮಾಡಿದ ಮೇರುವಿನಿಂದ ಕೂಡಿದ, ಭಗಸ್ಯ= ಭಾಗ್ಯಾಧಿಕನಾಗಿರುವುದರಿಂದ ಭಗನಾಮಕನಾದ ಸೂರ್ಯಾಂತರ್ಗತ ನಾರಾಯಣರೂಪವನ್ನು ಧ್ಯಾನ ಮಾಡುತ್ತೇವೆ. ಯಜ್ಞಾದಿ ಕರ್ಮಗಳು ಭಗವದ್ಧ್ಯಾನಕ್ಕೆ ಅಂಗವೇ ಆಗಿವೆ ಎಂಬುದು ಶ್ರುತಿಯ ತಾತ್ಪರ್ಯವಾಗಿದೆ. ಈ ರೀತಿಯಾಗಿ ಸೋಮಪಾನದ ಶ್ರುತಿಯ ಅರ್ಥವನ್ನು ಆಲೋಚಿಸಿದಾಗ ಈ ಶ್ರುತಿಯು ಸೋಮಪಾನ ಮಂತ್ರ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಆದ್ದರಿಂದ ಸೋಮಪಾನ ಮಾಡುವ ಮಂತ್ರವು ಇದು. ಈ ಮಂತ್ರದಲ್ಲಿ ತತ್ಸವಿತುಃ ಎಂಬುದಾಗಿ ನಾಲ್ಕು ಅಕ್ಷರಗಳು ಆರಂಭದಲ್ಲಿ ಪ್ರವಿಷ್ಟವಾಗಿವೆ. ಗಾಯತ್ರೀಮಂತ್ರದ ಅಕ್ಷರವು ಈ ಸೋಮಪಾನ ಮಾಡುವ ಮಂತ್ರದಲ್ಲಿ ಪ್ರವೇಶ ಮಾಡಿರುವುದರಿಂದಲೇ ಆ ಸೋಮಪಾನ ಮಂತ್ರವು ಗಾಯತ್ರೀಮಂತ್ರಾರ್ಥ ಸಮಾನವಾಯಿತು. ವಯಂ ಎಂದು ಈ ಮಂತ್ರದಲ್ಲಿರುವ ಪದವು ಗಾಯತ್ರೀ ಮಂತ್ರದಲ್ಲಿರುವ ವರೇಣ್ಯಂ ಎಂಬ ಪದದಲ್ಲಿರುವ ಆದ್ಯಂತ ಅಕ್ಷರಗಳನ್ನು ಸೇರಿಸಿಕೊಂಡು ಹೇಳಿದ ಪದವಾಗಿದೆ. ವರೇಣ್ಯ ಎಂಬುದರ ಆದ್ಯಕ್ಷರವು ವಕಾರವಾಗಿದೆ. ಕೊನೆಯ ಅಕ್ಷರವು ಯಕಾರವಾಗಿದೆ. ಆ ವರೇಣ್ಯಂ ಎಂಬ ಶಬ್ದವೇ ಇಲ್ಲಿ ವಯಂ ಎಂದು ಹೇಳಲ್ಪಟ್ಟಿದೆ. ದೇವಸ್ಯ ಎಂಬ ಗಾಯತ್ರಿಯ ಶಬ್ದವನ್ನೇ ಇಲ್ಲಿಯೂ ಹೇಳಲಾಗಿದೆ. ಧೀಮಹಿ ಎಂಬ ಗಾಯತ್ರೀ

ಮಂತ್ರದ ಅಕ್ಷರತ್ರಯಗಳಿಂದ ಕೂಡಿದ ಶಬ್ದವನ್ನೇ ಇಲ್ಲಿ ಹೇಳಲಾಗಿದೆ. ಹೀಗೆ ಇದೇ ಮಂತ್ರದಲ್ಲಿ ದೇವಸ್ಯ , ಧೀಮಹಿ, ವಯಂ ಎಂಬುದಾಗಿ ಗಾಯತ್ರಿಯ ಅಷ್ಟಾಕ್ಷರಗಳು ಸೇರಿಕೊಂಡಿವೆ ಎಂದೂ ಅರ್ಥ. ಹೀಗೆ ಗಾಯತ್ರಿಮಂತ್ರದಲ್ಲಿರುವ ಇಪ್ಪತ್ನಾಲ್ಕು ಅಕ್ಷರಗಳಲ್ಲಿ ಹನ್ನೆರಡು ಅಕ್ಷರಗಳು ಯಾವುದೇ ವಿಕಾರವಿಲ್ಲದೆ ಈ ಸೋಮಪಾನದಲ್ಲಿ ಸೇರಿಕೊಂಡಿವೆ. ತತ್ಸವಿತುಃ ಎಂದು ನಾಲ್ಕು ಅಕ್ಷರಗಳು, ವಯಂ ಎಂದು ಎರಡು ಅಕ್ಷರ, ದೇವಸ್ಯ ಎಂದು ಮೂರು ಅಕ್ಷರ, ಧೀಮಹಿ ಎಂದು ಮೂರು ಅಕ್ಷರಗಳು. ಒಟ್ಟು ಹನ್ನೆರಡು ಅಕ್ಷರಗಳಿಂದ ಕೂಡಿದ ಗಾಯತ್ರೀತುಲ್ಯವಾದ ಮಂತ್ರವೆನಿಸಿದೆ. ಹೀಗೆ ಸೋಮಪಾನದ ಸಮಯದಲ್ಲಿಯೂ ಗಾಯತ್ರಿಯಿಂದ ಅಭಿಮಂತ್ರಿತವಾದ ಸೋಮರಸವನ್ನೇ ಜ್ಞಾನಿಗಳು ಪಾನ ಮಾಡುತ್ತಾರೆ. ಇಂತಹ ಗಾಯತ್ರಿಯನ್ನು ಆ ಬ್ರಾಹ್ಮಣನು ಜಪಿಸುತ್ತಿದ್ದನು.

ಸಮಾಪ್ತಜಪ್ಯಸ್ತೂತ್ಥಾಯ ಶಿರಸಾ ಪಾದಯೋಸ್ತಥಾ ।
ಪಪಾತ ದೇವ್ಯಾ ಧರ್ಮಾತ್ಮಾ ವಚನಂ ಚೇದಮಬ್ರವೀತ್ ॥ ೧೦ ॥

ಸ್ವಲ್ಪ ಹೊತ್ತಿಗೆ ತನ್ನ ಜಪವು ಪೂರ್ಣವಾಗಲು ಬ್ರಾಹ್ಮಣನು ಮೇಲೆ ಎದ್ದುನಿಂತು ಗಾಯತ್ರಿಯನ್ನು ನೋಡಿ ಅವಳ ಪಾದಗಳಿಗೆ ತಲೆಬಾಗಿ ನಮಸ್ಕರಿಸುತ್ತಾ ಈ ರೀತಿಯಾಗಿ ಹೇಳಿದನು.

ದಿಷ್ಟ್ಯಾ ದೇವಿ ಪ್ರಸನ್ನಾ ತ್ವಂ ದರ್ಶನಂ ಚಾಗತಾ ಮಮ ।
ಯದಿ ವಾಪಿ ಪ್ರಸನ್ನಾಸಿ ಜಪ್ಯೇ ಮೇ ರಮತಾಂ ಮನಃ ॥ ೧೧ ॥

ತಾಯಿ, ನನ್ನ ಅದೃಷ್ಟದಿಂದ ನೀನು ಪ್ರಸನ್ನಳಾಗಿ ದರ್ಶನವನ್ನು ಕೊಟ್ಟಿರುವಿ. ನೀನು ಅನುಗ್ರಹಿಸುವುದಾದರೆ ನನ್ನ ಮನಸ್ಸನ್ನು ಯಾವಾಗಲೂ ಜಪದಲ್ಲಿಯೇ ರಮಿಸುವಂತೆ ಮಾಡು ಎಂದು ಪ್ರಾರ್ಥಿಸಿದನು.

ಸಾವಿತ್ರೀ

ಕಿಂ ಪ್ರಾರ್ಥಯಸಿ ವಿಪ್ರರ್ಷೇ ಕಿಂ ಚೇಷ್ಟಂ ಕರವಾಣಿ ತೇ ।
ಪ್ರಬ್ರೂಹಿ ಜಪತಾಂ ಶ್ರೇಷ್ಠ ಸರ್ವಂ ತತ್ತೇ ಭವಿಷ್ಯತಿ ॥ ೧೨ ॥

ಸಾವಿತ್ರೀ– ಬ್ರಹ್ಮರ್ಷಿಯೇ, ನಿನ್ನ ಇಷ್ಟಾರ್ಥಗಳು ಏನೆಂದು ಹೇಳು. ನಿನ್ನ ಜಪದ ಉದ್ದಿಷ್ಟವು ಯಾವುದಿದ್ದರೂ ಅವೆಲ್ಲವೂ ಕೈಗೂಡುತ್ತವೆ. ಅದೆಲ್ಲವನ್ನು ನೆರವೇರಿಸುತ್ತೇನೆ.

ಭೀಷ್ಮಃ

ಇತ್ಯುಕ್ತಃ ಸ ತದಾ ದೇವ್ಯಾ ವಿಪ್ರಃ ಪ್ರೋವಾಚ ಧರ್ಮವಿತ್ ।
ಜಪ್ಯಂ ಪ್ರತಿ ಮಮೇಚ್ಛೇಯಂ ವರ್ಧತ್ವಿತಿ ಪುನಃ ಪುನಃ ॥ ೧೩ ॥

ಮನಸಶ್ಚ ಸಮಾಧಿರ್ಮೇ ವರ್ಧೇತಾಹರಹಃ ಶುಭೇ ।
ತತ್ತಥೇತಿ ತತೋ ದೇವೀ ಮಧುರಂ ಪ್ರತ್ಯಭಾಷತ ॥ ೧೪ ॥

ಇದಂ ಚೈವಾಪರಂ ಪ್ರಾಹ ದೇವೀ ತತ್ ಪ್ರಿಯಕಾಮ್ಯಯಾ ।
ನಿರಯಂ ನೈವ ಯಾತಾಸಿ ಯತ್ರ ಯಾತಾ ದ್ವಿಜರ್ಷಭಾಃ ॥ ೧೫ ॥

ಭೀಷ್ಮ– ಈ ರೀತಿಯಾಗಿ ಗಾಯತ್ರೀದೇವಿಯೇ ಹೇಳಿದರೂ ಧರ್ಮಜ್ಞನಾದ ಬ್ರಾಹ್ಮಣನು, ಜಪದಲ್ಲಿಯೇ ನನಗಿರುವ ಆಸೆಯು ಮತ್ತೂ ಮತ್ತೂ ವೃದ್ಧಿಯನ್ನು ಹೊಂದುತ್ತಿರಲಿ. ಮನಸ್ಸಿನ ಸಮಾಧಿ ದೆಸೆಯು ದಿನದಿನಕ್ಕೆ ವರ್ಧಿಸುತ್ತಿರಲಿ ಎಂದು ಪ್ರಾರ್ಥಿಸಿದನು. ಅದಕ್ಕೆ ಉತ್ತರವಾಗಿ ಸಾವಿತ್ರಿಯು ನಿನ್ನ ಉದ್ದೇಶದಂತೆಯೇ ಆಗಲಿ ಎಂದು ಹೇಳಿ, ಪುನಃ ಮಧುರವಾದ ಮಾತನ್ನು ಬ್ರಾಹ್ಮಣನಿಗೆ ಸಂತೋಷವಾಗಲೆಂದು ಹೇಳಿದಳು. ಮಹರ್ಷಿಯೇ, ನೀನು ಇನ್ನು ಮೇಲೆ ನಿನ್ನಂತಹ ಬ್ರಾಹ್ಮಣನು ಹೋಗುವ ನರಕಕ್ಕೆ ಹೋಗಲಾರೆ.

ಯಾಸ್ಯಸಿ ಬ್ರಹ್ಮಣಃ ಸ್ಥಾನಮನಿಮಿತ್ತಮನಿಂದಿತಮ್ ।
ಸಾಧಯೇ ಭವಿತಾ ಚೈತದ್ ಯತ್ತ್ವಯಾಹಮಿಹಾರ್ಥಿತಾ ॥ ೧೬ ॥

ನೀನು ಸ್ವತಃಸಿದ್ಧವೂ, ದೋಷರಹಿತವೂ ಆಗಿರುವ ಅನಿಂದಿತವಾದ ಬ್ರಹ್ಮಸ್ಥಾನವನ್ನೇ ಹೊಂದುತ್ತಿ. ನೀನು ಜಪದ ಅಭಿವೃದ್ಧಿಯನ್ನೇ ಕೇಳಿರುವುದರಿಂದ ಸಂತುಷ್ಟಳಾದ ನಾನು ನಿನಗೆ ವೈಕುಂಠ ಪದವಿಯನ್ನೇ ಸೇರುವಂತೆ ಅನುಗ್ರಹಿಸಿರುತ್ತೇನೆ. ನನ್ನನ್ನು ಕುರಿತು ನೀನು ಏನು ಪ್ರಾರ್ಥಿಸಿದೆಯೋ ಅದು ನಿನಗೆ ಸಿದ್ಧಿಸಲಿ.

ನಿಯತೋ ಜಪ ಚೈಕಾಗ್ರೋ ಧರ್ಮಸ್ತ್ವಾಂ ಸಮುಪೈಷ್ಯತಿ ।
ಕಾಲೋ ಮೃತ್ಯುರ್ಯಮಶ್ಚೈವ ಸಮಾಯಾಸ್ಯಂತಿ ತೇಽಂತಿಕಮ್ ।
ಭವಿತಾ ಚ ವಿವಾದೋಽತ್ರ ತವ ತೇಷಾಂ ಚ ಧರ್ಮತಃ ॥ ೧೭ ॥

ನೀನು ಏಕಾಗ್ರಚಿತ್ತದಿಂದ ಜಪವನ್ನಾಚರಿಸುತ್ತಿರು. ಧರ್ಮವು ತಾನಾಗಿ ಬಂದು ನಿನ್ನನ್ನು ಸೇರುತ್ತದೆ. ಕಾಲನೂ, ಮೃತ್ಯುವೂ, ಯಮನೂ ನಿನ್ನ ಬಳಿ ಬರುತ್ತಾರೆ. ನಿನಗೂ ಅವರಿಗೂ ಧರ್ಮವಿಷಯದಲ್ಲಿ ವಿವಾದವು ನಡೆಯುತ್ತದೆ.

ಏವಮುಕ್ತ್ವಾ ಭಗವತೀ ಜಗಾಮ ಭವನಂ ಸ್ವಕಮ್ ।
ಬ್ರಾಹ್ಮಣೋಽಪಿ ಜಪನ್ನಾಸ್ತೇ ದಿವ್ಯಂ ವರ್ಷಶತಂ ತದಾ ॥ ೧೮ ॥

ಧರ್ಮರಾಜನೇ, ಭಗವತಿಯಾದ ಗಾಯತ್ರೀದೇವಿಯು ಈ ರೀತಿಯಾಗಿ ಬ್ರಾಹ್ಮಣನನ್ನು ಕುರಿತು ಹೇಳಿ ತನ್ನ ಸ್ಥಾನಕ್ಕೆ ಹೊರಟುಹೋದಳು. ಈಚೆ ಬ್ರಾಹ್ಮಣನು ಇಂದ್ರಿಯಗಳನ್ನು ನಿಗ್ರಹಿಸಿಕೊಂಡು ನೂರು ದಿವ್ಯವರ್ಷಗಳವರೆಗೆ ಜಪದಲ್ಲಿಯೇ ಆಸಕ್ತನಾಗಿದ್ದನು.

ಸಮಾಪ್ತೇ ನಿಯಮೇ ತಸ್ಮಿನ್ನಥ ವಿಪ್ರಸ್ಯ ಧೀಮತಃ ।
ಸಾಕ್ಷಾತ್ ಪ್ರೀತಸ್ತದಾ ಧರ್ಮೋ ದರ್ಶಯಾಮಾಸ ತಂ ದ್ವಿಜಮ್ ॥ ೧೯

ಅವನ ಜಪನಿಯಮವು ಮುಗಿಯುವ ಕಾಲಕ್ಕೆ ಸರಿಯಾಗಿ ಧರ್ಮದೇವನು ಅವನ ಮುಂದೆ ಪ್ರತ್ಯಕ್ಷನಾದನು.

ಧರ್ಮಃ

ದ್ವಿಜಾತೇ ಪಶ್ಯ ಮಾಂ ಧರ್ಮಮಹಂ ತ್ವಾಂ ದ್ರಷ್ಟುಮಾಗತಃ ।
ಜಪ್ಯಸ್ಯ ಚ ಫಲಂ ಯತ್ತೇ ಸಂಪ್ರಾಪ್ತಂ ತಚ್ಚ ಮೇ ಶೃಣು ॥ ೨೦ ॥

ಧರ್ಮ– ಎಲೈ ಬ್ರಾಹ್ಮಣನೇ, ನಾನು ಧರ್ಮದೇವತೆಯು. ನಿನ್ನನ್ನು ನೋಡುವುದಕ್ಕಾಗಿ ಬಂದಿದ್ದೇನೆ. ನೀನು ಮಾಡಿದ ಜಪಕ್ಕೆ ಫಲವು ಸಿದ್ಧಿಸಿದೆ. ಸಿದ್ಧಿಸಿದ ಆ ಜಪದ ಫಲವೇನೆಂಬುದನ್ನು ಕೇಳಿಸಿಕೊ.

ಜಿತಾ ಲೋಕಾಸ್ತ್ವಯಾ ಸರ್ವೇ ಯೇ ದಿವ್ಯಾ ಯೇ ಚ ಮಾನುಷಾಃ ।
ದೇವಾನಾಂ ನಿರಯಾನ್ ಸಾಧೋ ಸರ್ವಾನುತ್ತಮ್ಯ ಯಾಸ್ಯಸಿ ॥ ೨೧ ॥

ನಿನ್ನ ಜಪದ ಫಲದಿಂದ ದಿವ್ಯ ಮಾನುಷಲೋಕಗಳನ್ನೆಲ್ಲಾ ಜಯಿಸಿರುವೆ. ದೇವತೆಗಳ ನಿರಯ ಎನಿಸಿದ ಸ್ಥಾನಗಳನ್ನೆಲ್ಲಾ ಮೀರಿ ಉತ್ತಮವಾದ ಮೇಲಿನ ಸ್ಥಾನಕ್ಕೆ ನೀನು ಹೋಗುತ್ತಿ.

ಪ್ರಾಣತ್ಯಾಗಂ ಕುರು ಮುನೇ ಗಚ್ಛ ಲೋಕಾನ್ ಯಥೇಪ್ಸಿತಾನ್ ।
ತ್ಯಕ್ತ್ವಾತ್ಮನಃ ಶರೀರಂ ಚ ತತೋ ಲೋಕಾನವಾಪ್ಸ್ಯಸಿ ॥ ೨೨ ॥

ಇನ್ನು ನೀನು ಪ್ರಾಣವನ್ನು ಬಿಟ್ಟು ಹೊರಡು. ನೀನು ಇಷ್ಟಪಟ್ಟ ಲೋಕಗಳಿಗೆಲ್ಲ ಹೋಗಬಹುದು. ನೀನು ನಿನ್ನ ಶರೀರವನ್ನು ತ್ಯಜಿಸಿದ ಕೂಡಲೇ ಪುಣ್ಯಲೋಕವನ್ನು ಹೊಂದುತ್ತಿ ಎಂದನು.

ಬ್ರಾಹ್ಮಣಃ

ಕೃತಂ ಲೋಕೈರ್ಹಿ ಮೇ ಧರ್ಮ ಗಚ್ಛ ಚ ತ್ವಂ ಯಥಾಸುಖಮ್ ।
ಬಹುದುಃಖಸುಖಂ ದೇಹಂ ನೋತ್ಸೃಜೇಯಮಹಂ ವಿಭೋ ॥ ೨೩ ॥

ಬ್ರಾಹ್ಮಣ– ಧರ್ಮನೇ, ನೀನು ಹೇಳಿದ ಲೋಕಗಳೇನೂ ನನಗೆ ಬೇಕಾಗಿರುವುದಿಲ್ಲ. ನೀನು ಬಂದ ದಾರಿಯನ್ನು ಹಿಡಿದು ಹೊರಡು. ಅನೇಕ ಸುಖ-ದುಃಖಗಳನ್ನು ಸೈರಿಸಿದ ಈ ದೇಹವನ್ನು ನಾನು ಬಿಡಲಾರೆನು ಎಂದನು.

ಧರ್ಮಃ

ಅವಶ್ಯಂ ಭೋಃ ಶರೀರಂ ತೇ ತ್ಯಕ್ತವ್ಯಂ ಮುನಿಪುಂಗವ ।
ಸ್ವರ್ಗ ಆರೋಹ್ಯತಾಂ ವಿಪ್ರ ಕಿಂ ವಾ ತೇ ರೋಚತೇಽನಘ ॥ ೨೪ ॥

ಧರ್ಮ– ಓ ಬ್ರಾಹ್ಮಣನೇ, ನೀನು ಮನಸ್ಸನ್ನು ದೃಢಮಾಡಿಕೊಂಡು ಅವಶ್ಯವಾಗಿ ಈ ಶರೀರವನ್ನು ಬಿಟ್ಟುಬಿಡು. ಇದರ ಬಂಧವು ನಿನಗೇಕೆ? ಹಠ ಹಿಡಿಯಬೇಡ, ಸ್ವರ್ಗವನ್ನು ಸೇರುವವನಾಗು. ಇಲ್ಲದಿದ್ದಲ್ಲಿ ನಿನ್ನ ಇಷ್ಟವೇನೆಂಬುದನ್ನಾದರೂ ನನಗೆ ತಿಳಿಸು ಎಂದನು.

ಬ್ರಾಹ್ಮಣಃ

ನ ರೋಚಯೇ ಸ್ವರ್ಗವಾಸಂ ವಿನಾ ದೇಹಾದಹಂ ವಿಭೋ ।
ಗಚ್ಛ ಧರ್ಮ ನ ಮೇ ಶ್ರದ್ಧಾ ಸ್ವರ್ಗಂ ಗಂತುಂ ವಿನಾತ್ಮನಾ ॥ ೨೫ ॥

ಬ್ರಾಹ್ಮಣ– ಧರ್ಮನೇ, ನೀನು ಈ ಶರೀರವನ್ನು ಬಿಡಬೇಕೆಂದು ಏಕೆ ನಿರ್ಬಂಧಿಸುವೆ? ನನಗೆ ಸ್ವರ್ಗವೂ ಇಷ್ಟವಾಗುವುದಿಲ್ಲ. ಧರ್ಮಸಾಧನವಾದ ಈ

ಶರೀರವೇ ಇಷ್ಟವಾಗಿದೆ. ಧರ್ಮನೇ, ನೀನು ಹೊರಡು. ಈ ಶರೀರವನ್ನು ತ್ಯಜಿಸಿ ಸ್ವರ್ಗಕ್ಕೆ ಹೋಗುವ ಶ್ರದ್ಧೆಯು ನನಗಿರುವುದಿಲ್ಲ.

ಧರ್ಮಃ

ಅಲಂ ದೇಹೇ ಮನಃ ಕೃತ್ವಾ ತ್ಯಕ್ತ್ವಾ ದೇಹಂ ಸುಖೀ ಭವ ।
ಗಚ್ಛ ಲೋಕಾನರಜಸೋ ಯತ್ರ ಗತ್ವಾ ನ ಶೋಚಸಿ ॥ ೨೬ ॥

ಧರ್ಮ– ಬ್ರಾಹ್ಮಣನೇ, ಈ ಶರೀರಕ್ಕೆ ಆಸೆಪಡುವುದರಿಂದ ಏನೂ ಪ್ರಯೋಜನವಿಲ್ಲ. ಈ ಶರೀರವನ್ನು ಬಿಟ್ಟರೆ ನಿನಗೆ ಸುಖವಿದೆ. ರಜೋಗುಣ ರಹಿತವಾದ ಲೋಕಗಳಿಗೆ ಹೋಗಿ ನೀನು ಅಲ್ಲಿ ದುಃಖಸಂಬಂಧವೇ ಇಲ್ಲದೆ ಇರಬಹುದು.

ಬ್ರಾಹ್ಮಣಃ

ರಮೇ ಜಪನ್ಮಹಾಭಾಗ ಕೃತಂ ಲೋಕೈಃ ಸನಾತನೈಃ ।
ಸಶರೀರೇಣ ಗಂತವ್ಯೋ ಮಯಾ ಸ್ವರ್ಗೋ ನ ವಾ ವಿಭೋ ॥ ೨೭ ॥

ಬ್ರಾಹ್ಮಣ– ಮಹಾಭಾಗನೇ, ನನಗೆ ಈ ಜಪದಲ್ಲಿಯೇ ಎಲ್ಲಕ್ಕಿಂತಲೂ ಅಧಿಕವಾದ ಸಂತೋಷವಿರುತ್ತದೆ. ನನಗೆ ಬ್ರಾಹ್ಮಣ ಶರೀರವನ್ನು ಬಿಟ್ಟು ಯಾವ ಲೋಕಗಳೂ ಬೇಕಾಗುವುದಿಲ್ಲ. ಈ ಶರೀರದೊಡನೆಯೇ ಸ್ವರ್ಗಕ್ಕೆ ಹೋಗ- ಬಹುದಾಗಿದ್ದರೆ ಹೇಳು. ಬೇರೆ ವಿಧವನ್ನು ನಾನು ಒಪ್ಪುವುದಿಲ್ಲ.

ಧರ್ಮಃ

ಯದಿ ತ್ವಂ ನೇಚ್ಛಸಿ ತ್ಯಕ್ತುಂ ಶರೀರಂ ಪಶ್ಯ ವೈ ದ್ವಿಜ ।
ಏಷ ಕಾಲಸ್ತಥಾ ಮೃತ್ಯುರ್ಯಮಶ್ಚ ತ್ವಾಮುಪಾಗತಾಃ ॥ ೨೮ ॥

ಧರ್ಮ– ಬ್ರಾಹ್ಮಣನೇ, ನಿನಗೇನೋ ಈ ಶರೀರದಲ್ಲಿ ಅಪಾರಸ್ನೇಹವಿರುವುದು. ಅದನ್ನು ನೀನು ಬಿಡದೆ ಹೋದರೆ ಈಗಲೇ ಕಾಲವೂ, ಮೃತ್ಯುವೂ, ಯಮನೂ ನಿನ್ನ ಬಳಿಗೆ ಬರುತ್ತಾರೆ ಎಂದು ಹೇಳಿದನು.

ಭೀಷ್ಮಃ

ಅಥ ವೈವಸ್ವತಃ ಕಾಲೋ ಮೃತ್ಯುಶ್ಚ ತ್ರಿತಯಂ ವಿಭೋ ।
ಬ್ರಾಹ್ಮಣಂ ತಂ ಮಹಾಭಾಗಮುಪಾಗಮ್ಯೇದಮಬ್ರುವನ್ ॥ ೨೯ ॥

ಭೀಷ್ಮ- ಧರ್ಮನು ಹೇಳಿದಂತೆ ವಿವಸ್ವಾನ್ ಎನಿಸಿದ ಕಾಲನು, ಮೃತ್ಯುವು, ಯಮನು ಎಂಬ ಮೂವರು ಆ ಬ್ರಾಹ್ಮಣನಿಗೆ ಕಾಣಿಸಿಕೊಂಡರು. ಅವರು ಮಹಾಭಾಗನಾದ ಬ್ರಾಹ್ಮಣನ ಸಮೀಪಕ್ಕೆ ಆಗಮಿಸಿ ಅವನನ್ನು ಕುರಿತು ಹೀಗೆ ಹೇಳಿದರು.

ತಪಸೋಽಸ್ಯ ಸುತಪ್ತಸ್ಯ ತಥಾ ಸುಚರಿತಸ್ಯ ಚ ।
ಫಲಪ್ರಾಪ್ತಿಸ್ತವ ಶ್ರೇಷ್ಠಾ ಯಮೋಽಹಂ ತ್ವಾಮುಪಬ್ರುವೇ ॥ ೩೦ ॥

ವಿಪ್ರೋತ್ತಮನೇ, ನೀನು ತಪಸ್ಸನ್ನು ಬಹಳ ಸಂತೋಷದಿಂದ ನಡೆಸಿ ಚೆನ್ನಾಗಿ ದೇಹವನ್ನು ದಂಡಿಸಿ ಉತ್ತಮ ಚರಿತನಾಗಿರುವಿ. ಇಂತಹ ತಪಸ್ಸಿಗೆ ಉತ್ತಮವಾದ ಫಲವು ನಿನಗೆ ಲಭಿಸಿದೆ. ನಾನು ಯಮನು. ನಿನ್ನ ಅರ್ಹತೆಯನ್ನು ತಿಳಿದು ಹೇಳುತ್ತಿದ್ದೇನೆ ಎಂದನು.

ಯಥಾವದಸ್ಯ ಜಪ್ಯಸ್ಯ ಫಲಂ ಪ್ರಾಪ್ತಸ್ತ್ವಮುತ್ತಮಮ್ ।
ಕಾಲಸ್ತೇ ಸ್ವರ್ಗಮಾರೋಢುಂ ಕಾಲೋಽಹಂ ತ್ವಾಮುಪಾಗತಃ ॥ ೩೧ ॥

ಬಳಿಕ ಕಾಲನು ಆ ಬ್ರಾಹ್ಮಣನನ್ನು ಕುರಿತು, ಬ್ರಾಹ್ಮಣನೇ ನಿನ್ನ ಜಪಕ್ಕೆ ಉತ್ತಮವಾದ ಫಲವು ಲಭಿಸಿದೆ. ಸ್ವರ್ಗವನ್ನು ಹೊಂದಲು ಇದು ಯೋಗ್ಯಕಾಲವು. ಕಾಲನಾದ ನಾನೇ ಬಂದು ನಿನ್ನನ್ನು ಕುರಿತು ಈ ವಿಷಯವನ್ನು ತಿಳಿಸುತ್ತಿದ್ದೇನೆ ಎಂದನು.

ಮೃತ್ಯುಂ ಮಾ ವಿದ್ಧಿ ಧರ್ಮಜ್ಞ ರೂಪಿಣಂ ಸ್ವಯಮಾಗತಮ್ ।
ಕಾಲೇನ ಚೋದಿತಂ ವಿಪ್ರ ತ್ವಾಮಿತೋ ನೇತುಮದ್ಯ ವೈ ॥ ೩೨ ॥

ಬಳಿಕ ಧರ್ಮಜ್ಞನೇ, ನಾನು ಮೃತ್ಯುವೆಂದು ತಿಳಿ. ನಿನ್ನನ್ನು ಇಲ್ಲಿಂದ ಕರೆದುಕೊಂಡು ಈಗಲೇ ಹೊರಡಲು ಕಾಲನು ನನ್ನನ್ನು ನಿಯಮಿಸಿ ಕಳುಹಿಸಿದ್ದಾನೆ ಎಂದು ಹೇಳಿದನು.

ಬ್ರಾಹ್ಮಣಃ

ಸ್ವಾಗತಂ ಸೂರ್ಯಪುತ್ರಾಯ ಕಾಲಾಯ ಚ ಮಹಾತ್ಮನೇ ।
ಮೃತ್ಯವೇ ಚಾಥ ಧರ್ಮಾಯ ಕಿಂ ಕಾರ್ಯಂ ಕರವಾಣಿ ವಃ ॥ ೩೩ ॥

ಬ್ರಾಹ್ಮಣ– ಸೂರ್ಯಪುತ್ರನಾದ ಯಮನೇ, ಮಹಾತ್ಮನಾದ ಕಾಲಪುರುಷನೇ, ಮೃತ್ಯುದೇವತೆಯೇ, ನಿಮಗೆ ಸ್ವಾಗತವು. ನಿಮಗೆ ಆಗಬೇಕಾದ ಕಾರ್ಯವೇನಿದ್ದರೂ ನಾನು ಸಿದ್ಧನಿದ್ದೇನೆ. ಏನು ಮಾಡಲಿ ಎಂದು ತಿಳಿಸಿರಿ.

ಭೀಷ್ಮಃ

ಅರ್ಘ್ಯಂ ಪಾದ್ಯಂ ಚ ದತ್ತ್ವಾ ಸ ತೇಭ್ಯಸ್ತತ್ರ ಸಮಾಗಮೇ ।
ಅಬ್ರವೀತ್ ಪರಮಪ್ರೀತಃ ಸ್ವಶಕ್ಯಾ ಕಿಂ ಕರೋಮಿ ವಃ ॥ ೩೪ ॥

ಭೀಷ್ಮ– ಈ ರೀತಿಯಾಗಿ ಹೇಳಿ ಬ್ರಾಹ್ಮಣನು ಆ ಮೂವರಿಗೆ ಅರ್ಘ್ಯ-ಪಾದ್ಯಗಳನ್ನು ಕೊಟ್ಟನು. ಅವರನ್ನು ಕಂಡು ಸಂತುಷ್ಟನಾಗಿ ಬ್ರಾಹ್ಮಣನು, ನನ್ನ ಶಕ್ತಿಗನುಗುಣವಾಗಿ ನಿಮ್ಮ ಇಷ್ಟವನ್ನು ನೆರವೇರಿಸಲು ಸಿದ್ಧನಾಗಿದ್ದೇನೆ. ನನ್ನಿಂದೇನಾಗಬೇಕು? ಎಂದು ಕೇಳಿದನು.

ತಸ್ಮಿನ್ನೇವಾಥ ಕಾಲೇ ತು ತೀರ್ಥಯಾತ್ರಾಮುಪಾಗತಃ ।
ಇಕ್ಷ್ವಾಕುರಗಮತ್ತತ್ರ ಸಮೇತಾ ಯತ್ರ ತೇ ವಿಭೋ ॥ ೩೫ ॥

ಈ ರೀತಿಯಾಗಿ ಹೇಳುತ್ತಿರುವಾಗಲೇ ತೀರ್ಥಯಾತ್ರೆಗಾಗಿ ಸಂಚರಿಸುತ್ತಿದ್ದ ಇಕ್ಷ್ವಾಕು ಮಹಾರಾಜನು ಆ ನಾಲ್ವರೂ ಸೇರಿದ್ದ ಸ್ಥಳಕ್ಕೆ ಆಗಮಿಸಿದನು.

ಸರ್ವಾನೇವ ತು ರಾಜರ್ಷಿಃ ಸಂಪೂಜ್ಯಾಭಿಪ್ರಣಮ್ಯ ಚ ।
ಕುಶಲಪ್ರಶ್ನಮಕರೋತ್ ಸರ್ವೇಷಾಂ ರಾಜಸತ್ತಮಃ ॥ ೩೬ ॥

ಆ ರಾಜನು ಅವರೆಲ್ಲರಿಗೂ ನಮಸ್ಕರಿಸಿ ಅವರನ್ನು ಪೂಜಿಸಿ ಅವರ ಬಳಿ ಕುಶಲ ಪ್ರಶ್ನೆಯನ್ನು ಕೇಳಿದನು.

ತಸ್ಮೈ ಸೋಽಥಾಸನಂ ದತ್ತ್ವಾ ಪಾದ್ಯಮರ್ಘ್ಯಂ ತಥೈವ ಚ ।
ಅಬ್ರವೀದ್ ಬ್ರಾಹ್ಮಣೋ ವಾಕ್ಯಂ ಕೃತ್ವಾ ಕುಶಲಸಂವಿದಮ್ ॥ ೩೭ ॥

ಬಳಿಕ ಆ ಬ್ರಾಹ್ಮಣನು ಇಕ್ಷ್ವಾಕು ಮಹಾರಾಜನಿಗೆ ಅರ್ಘ್ಯ-ಪಾದ್ಯಾದಿಗಳನ್ನು ನೀಡಿ ಸತ್ಕರಿಸಿ, ಕುಶಲಪ್ರಶ್ನೆಯನ್ನು ಮಾಡಿದನು.

ಸ್ವಾಗತಂ ತೇ ಮಹಾರಾಜ ಬ್ರೂಹಿ ಯದ್ ಯದಿಹೇಚ್ಛಸಿ ।
ಸ್ವಶಕ್ಯಾ ಕಿಂ ಕರೋಮೀಹ ತದ್ಬವಾನ್ ಪ್ರಬ್ರವೀತು ಮೇ ॥ ೩೮ ॥

ಮಹಾರಾಜನೇ, ನಿನಗೆ ಸ್ವಾಗತವು. ನೀನು ಬಂದ ಉದ್ದೇಶವೇನು? ನನ್ನ ಶಕ್ತಿಗನುಗುಣವಾಗಿ ನಿನಗೆ ಮಾಡಬೇಕಾದ ಕಾರ್ಯವೇನು ಎಂದು ತಿಳಿಸು ಎಂದು ರಾಜನಿಗೆ ಹೇಳಿದನು.

ರಾಜಾ

ರಾಜಾಹಂ ಬ್ರಾಹ್ಮಣಶ್ಚ ತ್ವಂ ಯದಿ ಷಟ್ಕರ್ಮಸಂಸ್ಥಿತಃ ।
ದದಾಮಿ ವಸು ಕಿಂಚಿತ್ತೇ ಪ್ರಾರ್ಥಿತಂ ತದ್ ವದಸ್ವ ಮೇ ॥ ೩೯ ॥

ರಾಜಾ– ವಿಪ್ರೋತ್ತಮನೇ, ನೀನು ದಾನ, ಪ್ರತಿಗ್ರಹ ಮೊದಲಾದ ಆರು ಕರ್ಮಗಳಿಗೆ ಅಧಿಕಾರವುಳ್ಳ ಬ್ರಾಹ್ಮಣನಾಗಿರುವಿ. ನಾನು ಕ್ಷತ್ರಿಯನಾದ ರಾಜ. ಆದ್ದರಿಂದ ನಿನ್ನಲ್ಲಿ ನಾನು ಪಡೆಯಬೇಕಾದುದೇನೂ ಇರುವುದಿಲ್ಲ. ನಿನಗೆ ಬೇಕಾದರೆ ಧನವನ್ನು ಕೊಡುತ್ತೇನೆ, ಕೇಳು ಅಥವಾ ನಿನಗೆ ಇಷ್ಟವಾದುದನ್ನು ಕೇಳು ಎಂದು ಹೇಳಿದನು.

ಬ್ರಾಹ್ಮಣಃ

ದ್ವಿವಿಧಾ ಬ್ರಾಹ್ಮಣಾ ರಾಜನ್ ಧರ್ಮಶ್ಚ ದ್ವಿವಿಧಃ ಸ್ಮೃತಃ ।
ಪ್ರವೃತ್ತಶ್ಚ ನಿವೃತ್ತಶ್ಚ ನಿವೃತ್ತೋಽಸ್ಮಿ ಪ್ರತಿಗ್ರಹಾತ್ ॥ ೪೦ ॥

ಬ್ರಾಹ್ಮಣ– ರಾಜೇಂದ್ರನೇ, ನೀನು ಹೇಳುವುದು ಸರಿಯೇ. ಆದರೆ ಬ್ರಾಹ್ಮಣರಲ್ಲಿ ಎರಡು ವಿಧವಿದೆ. ಅವರ ಧರ್ಮದಲ್ಲಿ ಪ್ರವೃತ್ತಿ, ನಿವೃತ್ತಿಗಳೆಂಬ ಭೇದವಿದೆ. ನಾನಾದರೂ ಪ್ರತಿಗ್ರಹಾದಿಗಳನ್ನೆಲ್ಲಾ ಬಿಟ್ಟಿರುವ ನಿವೃತ್ತಿಧರ್ಮದಲ್ಲಿರುವ ಬ್ರಾಹ್ಮಣನಾಗಿದ್ದೇನೆ.

ತೇಭ್ಯಃ ಪ್ರಯಚ್ಛ ದಾನಾನಿ ಯೇ ಪ್ರವೃತ್ತಾ ನರಾಧಿಪ ।
ಅಹಂ ನ ಪ್ರತಿಗೃಹ್ಣಾಮಿ ಕಿಮಿಷ್ಟಂ ಕಿಂ ದದಾನಿ ತೇ ।
ಬ್ರೂಹಿ ತ್ವಂ ನೃಪತಿಶ್ರೇಷ್ಠ ತಪಸಾ ಸಾಧಯಾಮಿ ಕಿಮ್ ॥ ೪೧ ॥

ರಾಜನೇ, ನೀನು ಕೊಡಲು ಬಯಸಿದರೆ ಪ್ರವೃತ್ತಿಧರ್ಮದಲ್ಲಿ ರತರಾದವರಿಗೆ ನೀಡಬಹುದು. ಅಂತಹವರು ನಿನ್ನಿಂದ ಪ್ರತಿಗ್ರಹವನ್ನು ಹೊಂದಿಯಾರು! ನಾನು ನಿನ್ನಿಂದ ಏನನ್ನೂ ಸ್ವೀಕರಿಸುವುದಿಲ್ಲ. ನನ್ನ ತಪೋಬಲದಿಂದ ನಿನಗೇ ಬೇಕಾದ್ದನ್ನು ಸಾಧಿಸಿಕೊಡಬಲ್ಲೆ. ರಾಜನೇ ನಿನಗಿಷ್ಟವಾದುದು ಏನೆಂದು ಹೇಳು, ನೀಡುತ್ತೇನೆ ಎಂದು ಹೇಳಿದನು.

ರಾಜಾ

ಕ್ಷತ್ರಿಯೋಽಹಂ ನ ಜಾನಾಮಿ ದೇಹೀತಿ ವಚನಂ ಕ್ವಚಿತ್ ।
ಪ್ರಯಚ್ಛ ಯುದ್ಧಮಿತ್ಯೇವಂ ವಾದಿನಃ ಸ್ಮೋ ದ್ವಿಜೋತ್ತಮ ॥ ೪೨ ॥

ರಾಜಾ– ಬ್ರಾಹ್ಮಣನೇ, ನಾನು ಕ್ಷತ್ರಿಯನಾಗಿದ್ದೇನೆ. ಕ್ಷತ್ರಿಯನಾದ ನನ್ನ ಬಾಯಿಂದ ದೇಹಿ ಎಂಬ ಶಬ್ದದ ಉಚ್ಚಾರಣೆಯು ಇಲ್ಲಿಯ ತನಕ ಬಂದಿರುವುದಿಲ್ಲ. ನನಗೆ ಏನಾದರೂ ಕೊಡುವವರು ಇದ್ದರೆ ಅವರ ಬಳಿ ಯುದ್ಧವನ್ನೇ ಕೊಡು ಎಂದು ಹೇಳುವುದೊಂದನ್ನೇ ನಾನು ಬಲ್ಲವನಾಗಿದ್ದೇನೆ.

ಬ್ರಾಹ್ಮಣಃ

ತುಷ್ಯಸಿ ತ್ವಂ ಸ್ವಧರ್ಮೇಣ ತಥಾ ತುಷ್ಟಾ ವಯಂ ನೃಪ ।
ಅನ್ಯೋನ್ಯಸ್ಯೋತ್ತರಂ ನಾಸ್ತಿ ಯದಿಷ್ಟಂ ತತ್ ಸಮಾಚರ ॥ ೪೩ ॥

ಬ್ರಾಹ್ಮಣ– ರಾಜೇಂದ್ರನೇ, ಅದು ಸರಿಯೇ. ನೀನು ಸ್ವಧರ್ಮದಲ್ಲಿ ಸಂತುಷ್ಟನಾಗಿರುವಂತೆ ನಾನೂ ನನ್ನ ಧರ್ಮದಲ್ಲಿ ತೃಪ್ತನಾಗಿದ್ದೇನೆ. ಆದ್ದರಿಂದ ನಮ್ಮಲ್ಲಿ ಉತ್ತರ-ಪ್ರತ್ಯುತ್ತರಗಳಿಗೆ ಅವಕಾಶವೇ ಇರುವುದಿಲ್ಲ. ನಿನಗೆ ಇಷ್ಟಬಂದಂತೆ ನಡೆದುಕೊ ಎಂದನು.

ರಾಜಾ

ಸ್ವಶಕ್ತ್ಯಾಹಂ ದದಾನೀತಿ ತ್ವಯಾ ಪೂರ್ವಂ ಪ್ರಭಾಷಿತಮ್ ।
ಯಾಚೇ ತ್ವಾಂ ದೀಯತಾಂ ಮಹ್ಯಂ ಜಪ್ಯಸ್ಯಾಸ್ಯ ಫಲಂ ದ್ವಿಜ ॥ ೪೪ ॥

ರಾಜ– ವಿಪ್ರೋತ್ತಮನೇ, ಮೊದಲು ನೀನು ನನಗೆ ನಿನ್ನ ಶಕ್ತ್ಯನುಗುಣವಾಗಿ ನೀಡುತ್ತೇನೆ ಎಂದೆಯಲ್ಲವೆ? ನಿನ್ನ ಬಳಿ ನಾನು ಒಂದನ್ನು ಕೇಳುತ್ತೇನೆ. ನೀನು ಇಲ್ಲಿಯ ತನಕ ಜಪಿಸಿದ ಆ ಜಪದ ಫಲವನ್ನು ನನಗೆ ಕೊಟ್ಟುಬಿಡು ಎಂದನು.

ಬ್ರಾಹ್ಮಣಃ

ಯುದ್ಧಂ ಮಮ ಸದಾ ವಾಣೇ ಯಾಚತೀತಿ ವಿಕತ್ಥಸೇ ।
ನ ಚ ಯುದ್ಧಂ ಮಯಾ ಸಾರ್ಧಂ ಕಿಮರ್ಥಂ ಯಾಚಸೇ ಪುನಃ ॥

ಬ್ರಾಹ್ಮಣ– ರಾಜನೇ, ನೀನು ಇಷ್ಟರತನಕ ನನ್ನ ಬಾಯಿಂದ ಯುದ್ಧ ಯಾಚನೆ ಹೊರತಾಗಿ ಬೇರೆ ವಿಧವಾದ ದೇಹಿ ಎಂಬ ಯಾಚನೆಯ ಶಬ್ದಗಳು ಹೊರಟಿಲ್ಲ ಎಂದು ಜಂಭದಿಂದ ಹೇಳಿಕೊಂಡಿರುವೆ. ನನ್ನ ಬಳಿ ಯುದ್ಧಕ್ಕೆ ಪ್ರಸಕ್ತಿಯಿಲ್ಲ. ಅದಿಲ್ಲದ ಬಳಿಕ ಪುನಃ ನೀನು ಯಾಕೆ ಯಾಚಿಸುತ್ತಿರುವೆ ಎಂದು ಕೇಳಿದನು.

ರಾಜಾ

ವಾಗ್ವಜ್ರಾ ಬ್ರಾಹ್ಮಣಾಃ ಪ್ರೋಕ್ತಾಃ ಕ್ಷತ್ರಿಯಾ ಬಾಹುಜೀವಿನಃ ।
ವಾಗ್ಯುದ್ಧಂ ತದಿದಂ ತೀವ್ರಂ ಮಮ ವಿಪ್ರ ತ್ವಯಾ ಸಹ ॥ ೪೬ ॥

ರಾಜ– ಬ್ರಾಹ್ಮಣೋತ್ತಮನೇ, ಬ್ರಾಹ್ಮಣರು ಮಾತಿನಲ್ಲಿ ವಜ್ರಾಯುಧದ ಬಲ ಉಳ್ಳವರು. ಕ್ಷತ್ರಿಯರು ಬಾಹುಬಲದಿಂದ ಜೀವಿಸುವವರು. ಈಗ ನಿನ್ನೊಡನೆ ನನಗೆ ತೀವ್ರವಾದ ವಾಗ್ಯುದ್ಧವೇ ನಡೆದಂತಾಯಿತಲ್ಲವೇ ಎಂದನು.

ಬ್ರಾಹ್ಮಣಃ

ಸೈವಾದ್ಯಾಪಿ ಪ್ರತಿಜ್ಞಾ ಮೇ ಸ್ವಶಕ್ತ್ಯಾ ಕಿಂ ಪ್ರದೀಯತಾಮ್ ।
ಬ್ರೂಹಿ ದಾಸ್ಯಾಮಿ ರಾಜೇಂದ್ರ ವಿಭವೇ ಸತಿ ಮಾಚಿರಮ್ ॥ ೪೭ ॥

ಬ್ರಾಹ್ಮಣ– ರಾಜನೇ, ಹಾಗೆ ಭಾವಿಸಬೇಡ. ಇದು ನಿಜವಾಗಿ ನನ್ನ ಪ್ರತಿಜ್ಞೆ. ನನ್ನ ಶಕ್ತಿಗೆ ಅನುಸಾರವಾಗಿ ಏನು ಕೊಡಬೇಕೆಂಬುದನ್ನು ಬೇಗನೆ ಹೇಳು. ಕೊಡಲು ಸಾಮರ್ಥ್ಯವಿದ್ದಾಗ ತಡಮಾಡದೆ ಕೊಡಬೇಕೆಂದು ಧರ್ಮವಿದೆ ಎಂದು ಹೇಳಿದನು.

ರಾಜಾ

ಯತ್ತದ್ವರ್ಷಶತಂ ಪೂರ್ಣಂ ಜಪ್ಯಂ ವೈ ಜಪತಾ ತ್ವಯಾ ।
ಫಲಂ ಪ್ರಾಪ್ತಂ ತತ್ ಪ್ರಯಚ್ಛ ಮಮ ದಿತ್ಸುರ್ಭವಾನ್ ಯದಿ॥ ೪೮ ॥

ರಾಜ– ಬ್ರಾಹ್ಮಣನೇ, ಹಾಗಿದ್ದಲ್ಲಿ ನೀನು ಸಹಸ್ರ ಸಂವತ್ಸರಗಳಿಂದ ನಡೆಸಿದ ತೀವ್ರವಾದ ಜಪದ ಫಲಗಳನ್ನೇ ನನಗೆ ಕೊಟ್ಟುಬಿಡು. ಕೊಡುವ ಇಚ್ಛೆ ಇದ್ದರೆ ಇದನ್ನು ನಾನು ಬಯಸುತ್ತೇನೆ ಎಂದನು.

ಬ್ರಾಹ್ಮಣಃ

ಪರಮಂ ಗೃಹ್ಯತಾಂ ತಸ್ಯ ಫಲಂ ಯಜ್ಜಪಿತಂ ಮಯಾ ।
ಅರ್ಧಂ ತ್ವಮವಿಚಾರೇಣ ಫಲಂ ತಸ್ಯ ಸಮಾಪ್ನುಹಿ ॥ ೪೯ ॥

ಬ್ರಾಹ್ಮಣ– ರಾಜನೇ, ಹಾಗಿದ್ದರೆ ನಾನು ಮಾಡಿದ ಜಪದ ಉತ್ತಮ ಫಲ ಯಾವುದೋ ಅದನ್ನು ನೀನು ಸ್ವೀಕರಿಸು. ನನ್ನ ಜಪದ ಫಲದಲ್ಲಿ ಅರ್ಧಭಾಗವನ್ನಾದರೂ ಸ್ವೀಕರಿಸು.

ಅಥವಾ ಸರ್ವಮೇವೇಹ ಜಪ್ಯಕಂ ಮಾಮಕಂ ಫಲಮ್ ।
ರಾಜನ್ ಪ್ರಾಪ್ನುಹಿ ಕಾಮಂ ತ್ವಂ ಯದಿ ಸರ್ವಮಿಹೇಚ್ಛಸಿ ॥ ೫೦ ॥

ಅಥವಾ ನನ್ನ ಜಪದ ಫಲನ್ನೆಲ್ಲಾ ಸಂಪೂರ್ಣವಾಗಿ ಬೇಕಾದರೂ ನೀನು ನಿನ್ನ ಇಚ್ಛೆಯಂತೆ ಸ್ವೀಕರಿಸಬಹುದು.

ರಾಜಾ

ಕೃತಂ ಸರ್ವೇಣ ಭದ್ರಂ ತೇ ಜಪ್ಯಂ ಯದ್ಯಾಚಿತಂ ಮಯಾ ।
ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಕಿಂ ಚ ತಸ್ಯ ಫಲಂ ವದ ॥ ೫೧ ॥

ರಾಜ– ಬ್ರಾಹ್ಮಣೋತ್ತಮನೇ, ನಿನಗೆ ಮಂಗಳವಾಗಲಿ. ನಿನ್ನ ಜಪಫಲವೇನೂ ನನಗೆ ಬೇಕಾದುದಿಲ್ಲ. ನಾನು ಹೋಗಿಬರುತ್ತೇನೆ. ಆದರೆ ನಿನ್ನ ಜಪದ ಫಲವೇನೆಂದು ಮಾತ್ರ ನನಗೆ ತಿಳಿಸಿದರೆ ಸಾಕು.

ಬ್ರಾಹ್ಮಣಃ

ಫಲಪ್ರಾಪ್ತಿಂ ನ ಜಾನಾಮಿ ದತ್ತಂ ಯಜ್ಜಪಿತಂ ಮಯಾ ।
ಅಯಂ ಧರ್ಮಶ್ಚ ಕಾಲಶ್ಚ ಯಮೋ ಮೃತ್ಯುಶ್ಚ ಸಾಕ್ಷಿಣಃ ॥ ೫೨ ॥

ಬ್ರಾಹ್ಮಣ– ನನಗೆ ಲಭಿಸಿದ ಜಪದ ಫಲವೇನೆಂಬುದನ್ನು ನಾನು ಕಾಣೆನು. ನಾನು ಪಡೆದದ್ದನ್ನು ನಿನಗೆ ಕೊಟ್ಟುಬಿಡುತ್ತೇನೆ. ಇದಕ್ಕೆ ನನ್ನ ಬಳಿ ಇರುವ ಈ ಧರ್ಮ, ಕಾಲ, ಯಮರು, ಮೃತ್ಯುವು ಸಾಕ್ಷಿಯಾಗಿರಲಿ.

ರಾಜಾ

ಅಜ್ಞಾತಮಸ್ಯ ಧರ್ಮಸ್ಯ ಫಲಂ ಮೇ ಕಿಂ ಕರಿಷ್ಯತಿ ।
ಪ್ರಾಪ್ನೋತು ತತ್ಫಲಂ ವಿಪ್ರೋ ನಾಹಮಿಚ್ಛೇ ಸಸಂಶಯಮ್ ॥ ೫೩ ॥

ರಾಜ– ಬ್ರಾಹ್ಮಣನೇ, ನೀನು ಇಲ್ಲಿಯತನಕ ಅನುಷ್ಠಾನ ಮಾಡಿದ ಧರ್ಮಕ್ಕೆ ಫಲವೇನೆಂಬುದನ್ನೇ ತಿಳಿಯದಿದ್ದ ಬಳಿಕ ಅದನ್ನು ಪಡೆದು ನನಗೇನು ಪ್ರಯೋಜನ? ಅದರ ಫಲವನ್ನು ತಿಳಿಸದಿದ್ದ ಬಳಿಕ ಅದನ್ನು ನೀನೇ ಅನುಭವಿಸು. ಸಂಶಯಾಸ್ಪದವಾದ ಫಲವನ್ನು ನಾನು ಬಯಸುವುದಿಲ್ಲ.

ಬ್ರಾಹ್ಮಣಃ

ನಾದದೇ ಪರದತ್ತಂ ವೈ ದತ್ತಂ ವಾ ಚಾಫಲಂ ಮಯಾ ।
ವಾಕ್ಯಂ ಪ್ರಮಾಣಂ ರಾಜರ್ಷೇ ಮಮಾಪಿ ತವ ಚೈವ ಹಿ ॥ ೫೪ ॥

ಬ್ರಾಹ್ಮಣ– ರಾಜನೇ, ನೀನು ಆಡಿದ ಮಾತಿಗೆ ತಪ್ಪುತ್ತಿರುವಿ. ಮತ್ತೊಬ್ಬರಿಗೆ ಕೊಟ್ಟದ್ದನ್ನು ನಾನು ಹಿಂದಿರುಗಿ ಸ್ವೀಕರಿಸಲಾರೆನು. ನಮ್ಮಿಬ್ಬರ ಮಾತುಗಳೇ ಇಲ್ಲಿ ಪ್ರಮಾಣವಾಗಿವೆ.

ಸಕೃದಂಶೋ ನಿಪತತಿ ಸಕೃತ್ ಕನ್ಯಾ ಪ್ರದೀಯತೇ ।
ಸಕೃದೇವ ದದಾನೀತಿ ತ್ರೀಣ್ಯೇತಾನಿ ಸಕೃತ್ ಸಕೃತ್ ।
ನಾಭಿಸಂಧಿರ್ಮಯಾ ಜಾಪ್ಯೇ ಕೃತಪೂರ್ವಃ ಕಥಂಚನ ।
ಜಪ್ಯಸ್ಯ ರಾಜಶಾರ್ದೂಲ ಕಥಂ ಜ್ಞಾಸ್ಯಾಮ್ಯಹಂ ಫಲಮ್ ॥ ೫೫ ॥

ರಾಜನೆ, ಭಾಗವನ್ನು ಪಡೆಯುವುದು ಒಂದೇ ಬಾರಿ, ಕನ್ಯೆಯನ್ನು ನೀಡುವುದು ಒಂದೇ ಬಾರಿ, ಕೊಡುವುದೆಂದು ಬಾಯಿಂದ ಆಡುವುದು ಒಂದೇ ಬಾರಿ, ಇವು ಮೂರು ಒಂದೊಂದು ಸಾರಿ ಹೇಳಿದ ಮೇಲೆ ಅದು ನಡೆಯಿತೆಂದೇ ಅರ್ಥ. ನಾನು ಜಪವನ್ನು ಮಾಡುವುದಕ್ಕಿಂತ ಮೊದಲು ಅದರ ಫಲವೇನೆಂದು ಯಾವತ್ತೂ ಚಿಂತಿಸಲಿಲ್ಲ. ಆದ್ದರಿಂದ ನನಗಾದರೂ ಅದು ತಿಳಿಯುವುದು ಹೇಗೆ?

ದದಸ್ವೇತಿ ತ್ವಯಾ ಚೋಕ್ತಂ ದದಾಮೀತಿ ತಥಾ ಮಯಾ ।
ನ ವಾಚಂ ದೂಷಯಿಷ್ಯಾಮಿ ಸತ್ಯಂ ರಕ್ಷ ಸ್ಥಿರೋ ಭವ ॥ ೫೬ ॥

ಬ್ರಾಹ್ಮಣಃ

ಪರಮಂ ಗೃಹ್ಯತಾಂ ತಸ್ಯ ಫಲಂ ಯಜ್ಜಪಿತಂ ಮಯಾ ।
ಅರ್ಧಂ ತ್ವಮವಿಚಾರೇಣ ಫಲಂ ತಸ್ಯ ಸಮಾಪ್ನುಹಿ ॥ ೪೯ ॥

ಬ್ರಾಹ್ಮಣ– ರಾಜನೇ, ಹಾಗಿದ್ದರೆ ನಾನು ಮಾಡಿದ ಜಪದ ಉತ್ತಮ ಫಲ ಯಾವುದೋ ಅದನ್ನು ನೀನು ಸ್ವೀಕರಿಸು. ನನ್ನ ಜಪದ ಫಲದಲ್ಲಿ ಅರ್ಧಭಾಗವನ್ನಾದರೂ ಸ್ವೀಕರಿಸು.

ಅಥವಾ ಸರ್ವಮೇವೇಹ ಜಪ್ಯಕಂ ಮಾಮಕಂ ಫಲಮ್ ।
ರಾಜನ್ ಪ್ರಾಪ್ನುಹಿ ಕಾಮಂ ತ್ವಂ ಯದಿ ಸರ್ವಮಿಹೇಚ್ಛಸಿ ॥ ೫೦ ॥

ಅಥವಾ ನನ್ನ ಜಪದ ಫಲನ್ನೆಲ್ಲಾ ಸಂಪೂರ್ಣವಾಗಿ ಬೇಕಾದರೂ ನೀನು ನಿನ್ನ ಇಚ್ಛೆಯಂತೆ ಸ್ವೀಕರಿಸಬಹುದು.

ರಾಜಾ

ಕೃತಂ ಸರ್ವೇಣ ಭದ್ರಂ ತೇ ಜಪ್ಯಂ ಯದ್ಯಾಚಿತಂ ಮಯಾ ।
ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಕಿಂ ಚ ತಸ್ಯ ಫಲಂ ವದ ॥ ೫೧ ॥

ರಾಜ– ಬ್ರಾಹ್ಮಣೋತ್ತಮನೇ, ನಿನಗೆ ಮಂಗಳವಾಗಲಿ. ನಿನ್ನ ಜಪಫಲವೇನೂ ನನಗೆ ಬೇಕಾದುದಿಲ್ಲ. ನಾನು ಹೋಗಿಬರುತ್ತೇನೆ. ಆದರೆ ನಿನ್ನ ಜಪದ ಫಲವೇನೆಂದು ಮಾತ್ರ ನನಗೆ ತಿಳಿಸಿದರೆ ಸಾಕು.

ಬ್ರಾಹ್ಮಣಃ

ಫಲಪ್ರಾಪ್ತಿಂ ನ ಜಾನಾಮಿ ದತ್ತಂ ಯಜ್ಜಪಿತಂ ಮಯಾ ।
ಅಯಂ ಧರ್ಮಶ್ಚ ಕಾಲಶ್ಚ ಯಮೋ ಮೃತ್ಯುಶ್ಚ ಸಾಕ್ಷಿಣಃ ॥ ೫೨ ॥

ಬ್ರಾಹ್ಮಣ– ನನಗೆ ಲಭಿಸಿದ ಜಪದ ಫಲವೇನೆಂಬುದನ್ನು ನಾನು ಕಾಣೆನು. ನಾನು ಪಡೆದದ್ದನ್ನು ನಿನಗೆ ಕೊಟ್ಟುಬಿಡುತ್ತೇನೆ. ಇದಕ್ಕೆ ನನ್ನ ಬಳಿ ಇರುವ ಈ ಧರ್ಮ, ಕಾಲ, ಯಮರು, ಮೃತ್ಯುವು ಸಾಕ್ಷಿಯಾಗಿರಲಿ.

ರಾಜಾ

ಅಜ್ಞಾತಮಸ್ಯ ಧರ್ಮಸ್ಯ ಫಲಂ ಮೇ ಕಿಂ ಕರಿಷ್ಯತಿ ।
ಪ್ರಾಪ್ನೋತು ತತ್ಫಲಂ ವಿಪ್ರೋ ನಾಹಮಿಚ್ಛೇ ಸಸಂಶಯಮ್ ॥ ೫೩ ॥

ರಾಜ– ಬ್ರಾಹ್ಮಣನೇ, ನೀನು ಇಲ್ಲಿಯತನಕ ಅನುಷ್ಠಾನ ಮಾಡಿದ ಧರ್ಮಕ್ಕೆ ಫಲವೇನೆಂಬುದನ್ನೇ ತಿಳಿಯದಿದ್ದ ಬಳಿಕ ಅದನ್ನು ಪಡೆದು ನನಗೇನು ಪ್ರಯೋಜನ? ಅದರ ಫಲವನ್ನು ತಿಳಿಸದಿದ್ದ ಬಳಿಕ ಅದನ್ನು ನೀನೇ ಅನುಭವಿಸು. ಸಂಶಯಾಸ್ಪದವಾದ ಫಲವನ್ನು ನಾನು ಬಯಸುವುದಿಲ್ಲ.

ಬ್ರಾಹ್ಮಣಃ

ನಾದದೇ ಪರದತ್ತಂ ವೈ ದತ್ತಂ ವಾ ಚಾಫಲಂ ಮಯಾ ।
ವಾಕ್ಯಂ ಪ್ರಮಾಣಂ ರಾಜರ್ಷೇ ಮಮಾಪಿ ತವ ಚೈವ ಹಿ ॥ ೫೪ ॥

ಬ್ರಾಹ್ಮಣ– ರಾಜನೇ, ನೀನು ಆಡಿದ ಮಾತಿಗೆ ತಪ್ಪುತ್ತಿರುವಿ. ಮತ್ತೊಬ್ಬರಿಗೆ ಕೊಟ್ಟದ್ದನ್ನು ನಾನು ಹಿಂದಿರುಗಿ ಸ್ವೀಕರಿಸಲಾರೆನು. ನಮ್ಮಿಬ್ಬರ ಮಾತುಗಳೇ ಇಲ್ಲಿ ಪ್ರಮಾಣವಾಗಿವೆ.

ಸಕೃದಂಶೋ ನಿಪತತಿ ಸಕೃತ್ ಕನ್ಯಾ ಪ್ರದೀಯತೇ ।
ಸಕೃದೇವ ದದಾನೀತಿ ತ್ರೀಣ್ಯೇತಾನಿ ಸಕೃತ್ ಸಕೃತ್ ।
ನಾಭಿಸಂಧಿರ್ಮಯಾ ಜಾಪ್ಯೇ ಕೃತಪೂರ್ವಃ ಕಥಂಚನ ।
ಜಪ್ಯಸ್ಯ ರಾಜಶಾರ್ದೂಲ ಕಥಂ ಜ್ಞಾಸ್ಯಾಮ್ಯಹಂ ಫಲಮ್ ॥ ೫೫ ॥

ರಾಜನೆ, ಭಾಗವನ್ನು ಪಡೆಯುವುದು ಒಂದೇ ಬಾರಿ, ಕನ್ಯೆಯನ್ನು ನೀಡುವುದು ಒಂದೇ ಬಾರಿ, ಕೊಡುವುದೆಂದು ಬಾಯಿಂದ ಆಡುವುದು ಒಂದೇ ಬಾರಿ, ಇವು ಮೂರು ಒಂದೊಂದು ಸಾರಿ ಹೇಳಿದ ಮೇಲೆ ಅದು ನಡೆಯಿತೆಂದೇ ಅರ್ಥ. ನಾನು ಜಪವನ್ನು ಮಾಡುವುದಕ್ಕಿಂತ ಮೊದಲು ಅದರ ಫಲವೇನೆಂದು ಯಾವತ್ತೂ ಚಿಂತಿಸಲಿಲ್ಲ. ಆದ್ದರಿಂದ ನನಗಾದರೂ ಅದು ತಿಳಿಯುವುದು ಹೇಗೆ?

ದದಸ್ವೇತಿ ತ್ವಯಾ ಚೋಕ್ತಂ ದದಾಮೀತಿ ತಥಾ ಮಯಾ ।
ನ ವಾಚಂ ದೂಷಯಿಷ್ಯಾಮಿ ಸತ್ಯಂ ರಕ್ಷ ಸ್ಥಿರೋ ಭವ ॥ ೫೬ ॥

ನೀನು ನನಗೆ ಕೊಡು ಎಂದು ಹೇಳಿದಾಗ ನಾನು ಕೊಡುತ್ತೇನೆ ಎಂದು ಹೇಳಿದೆನು. ಆ ಮಾತನ್ನು ನಾನು ಸುಳ್ಳು ಮಾಡಲಾರೆ. ನೀನು ಸತ್ಯವನ್ನು ರಕ್ಷಿಸು. ಸ್ಥಿರವಾಗಿ ನಿಂತು ನನ್ನ ಜಪದ ಫಲವನ್ನು ಸ್ವೀಕರಿಸು.

ಅಥೈವಂ ವದತೋ ಮೇಽದ್ಯ ವಚನಂ ನ ಕರಿಷ್ಯಸಿ ।
ಮಹಾನಧರ್ಮೋ ಭವಿತಾ ತವ ರಾಜನ್ ಮೃಷಾಕೃತಃ ॥ ೫೭ ॥

ಒಂದು ವೇಳೆ ನೀನು ಮಾತಿಗೆ ತಪ್ಪಿದರೆ ಅಸತ್ಯದೋಷಕ್ಕೆ ಭಾಗಿಯಾಗುತ್ತಿ. ನಿನಗಾಗಲೀ, ನನಗಾಗಲೀ ಈಗ ಆಡಿದ ಮಾತಿಗೆ ತಪ್ಪುವುದು ಸಮಂಜಸವಲ್ಲ.

ನ ಯುಕ್ತಂ ತು ಮೃಷಾ ವಾಣೀ ತ್ವಯಾ ವಕ್ತುಮರಿಂದಮ ।
ತಥಾ ಮಯಾಪ್ಯಭ್ಯಧಿಕಂ ಮೃಷಾ ವಕ್ತುಂ ನ ಶಕ್ಯತೇ ॥ ೫೮ ॥

ಶತ್ರುಸಂಹಾರಕನೇ, ಸುಳ್ಳು ಮಾತನ್ನಾಡುವುದು ನಿನಗೆ ಯೋಗ್ಯವಾದುದಲ್ಲ. ಅದರಂತೆ ನನ್ನಿಂದಲೂ ಧರ್ಮವನ್ನು ಮೀರಿ ಸುಳ್ಳನ್ನು ಹೇಳುವುದು ಶಕ್ಯವಾಗುವುದಿಲ್ಲ.

ಸಂಶ್ರುತಂ ಚ ಮಯಾ ಪೂರ್ವಂ ದದಾನೀತ್ಯವಿಚಾರಿತಮ್ ।
ತದ್ ಗೃಹ್ಣೀಷ್ವಾವಿಚಾರೇಣ ಯದಿ ಸತ್ಯೇ ಸ್ಥಿತೋ ಭವಾನ್ ॥ ೫೯ ॥

ನಾನು ಏನೂ ವಿಚಾರ ಮಾಡದೆ ನೀನು ಕೇಳಿದ ಕೂಡಲೇ ಕೊಡುತ್ತೇನೆ ಎಂದು ಪ್ರತಿಜ್ಞೆ ಮಾಡಿದೆನು. ನೀನು ಸತ್ಯದಲ್ಲಿ ಸ್ಥಿರವಾಗಿ ನಿಲ್ಲುವವನಾಗಿದ್ದರೆ ವಿಚಾರ ಮಾಡದೆ ಅದನ್ನು ಸ್ವೀಕರಿಸಲೇಬೇಕು.

ಇಹಾಗಮ್ಯ ಹಿ ಮಾಂ ರಾಜಂಜಾಪ್ಯಂ ಫಲಮಯಾಚಥಾಃ ।
ತನ್ಮನ್ನಿಸೃಷ್ಟಂ ಗೃಹ್ಣೀಷ್ವ ಭವ ಸತ್ಯೇ ಸ್ಥಿರೋಽಪಿ ಚ ॥ ೬೦ ॥

ಇಲ್ಲಿಗೆ ನನ್ನ ಬಳಿ ಆಗಮಿಸಿ ನೀನು ನನ್ನ ಜಪದ ಫಲವನ್ನು ಬೇಡಿಕೊಂಡಿರುತ್ತಿ. ಅದರಂತೆ ಆ ಜಪದ ಫಲವನ್ನು ಸ್ವೀಕರಿಸು, ನಾನು ಕೊಡುತ್ತೇನೆ ಎಂದು ಹೇಳಿರುತ್ತೇನೆ. ನಾವಿಬ್ಬರೂ ನುಡಿದಂತೆ ನಡೆದುಕೊಳ್ಳಬೇಕು. ಸತ್ಯದಲ್ಲಿ ಸ್ಥಿರವಾಗಿ ನಿಲ್ಲಬೇಕು.

ನಾಯಂ ಲೋಕೋಽಸ್ತಿ ನ ಪರೋ ನ ಚ ಪೂರ್ವಾನ್ ಸ ತಾರಯೇತ್ ।
ಕುತ ಏವಾವರಾನ್ ರಾಜನ್ ಮೃಷಾವಾದಪರಾಯಣಃ ॥ ೬೧ ॥

ಸುಳ್ಳನ್ನಾಡುವವರಿಗೆ ಇಹಲೋಕವೂ ಇಲ್ಲ, ಪರಲೋಕವೂ ಇರುವುದಿಲ್ಲ. ಸುಳ್ಳನ್ನಾಡುವ ವ್ಯಕ್ತಿಗಳು ತಮ್ಮ ಪೂರ್ವಜರನ್ನು ಉದ್ಧರಿಸಲಾರರು. ಇನ್ನು ಅವರ ಮುಂದಿನ ಸಂತತಿಗೆ ಸದ್ಗತಿ ಸಿಗುವುದು ಸಾಧ್ಯವೇ ಇರುವುದಿಲ್ಲ.

ನ ಯಜ್ಞಾಧ್ಯಯನೇ ದಾನಂ ನಿಯಮಾಸ್ತಾರಯಂತಿ ಹಿ ।
ತಥಾ ಸತ್ಯಂ ಪರೇ ಲೋಕೇ ಯಥಾ ವೈ ಪುರುಷರ್ಷಭ ॥ ೬೨ ॥

ಯಜ್ಞ, ದಾನ, ಅಧ್ಯಯನ, ಶೀಲ ಮೊದಲಾದವು ಯಾವುವೂ ಸದ್ಗತಿಗೆ ಹೇಗೆ ಸಾಧ್ಯವಾಗುತ್ತವೋ ಅದರಂತೆ ಸಾಧನವಾಗಲಾರವು.

ತಪಾಂಸಿ ಯಾನಿ ಚೀರ್ಣಾನಿ ಚರಿಷ್ಯಸಿ ಚ ಯತ್ತಪಃ ।
ಸಮಾಃ ಶತೈಃ ಸಹಸ್ರೈಶ್ಚ ತತ್ ಸತ್ಯಾನ್ನ ವಿಶಿಷ್ಯತೇ ॥ ೬೩ ॥

ನೀನು ಇಲ್ಲಿಯತನಕ ನಡೆಸಿದ ತಪಸ್ಸಾಗಲೀ, ಇನ್ನು ಮುಂದೆ ಸಾವಿರಾರು ವರ್ಷಗಳ ಕಾಲ ನಡೆಸುವ ತಪಸ್ಸಾಗಲೀ ಸತ್ಯಕ್ಕಿಂತ ಅತಿಶಯವಾಗಲಾರವು.

ಸತ್ಯಮೇಕಾಕ್ಷರಂ ಬ್ರಹ್ಮ ಸತ್ಯಮೇಕಾಕ್ಷರಂ ತಪಃ ।
ಸತ್ಯಮೇಕಾಕ್ಷರೋ ಯಜ್ಞಃ ಸತ್ಯಮೇಕಾಕ್ಷರಂ ಶ್ರುತಮ್ ॥ ೬೪ ॥

ಸತ್ಯವೇ ಪರಬ್ರಹ್ಮ ಎನಿಸಿದೆ. ಸತ್ಯವೇ ಪರಮ ತಪಸ್ಸು ಎನಿಸಿದೆ. ಸತ್ಯವೇ ಪರಮ ಯಜ್ಞ ಎನಿಸಿದೆ. ಸತ್ಯವೇ ಪರಮ ಶ್ರುತವು.

ಸತ್ಯಂ ವೇದೇಷು ಜಾಗರ್ತಿ ಫಲಂ ಸತ್ಯೇ ಪರಂ ಸ್ಮೃತಮ್ ।
ಸತ್ಯಾದ್ಧರ್ಮೋ ದಮಶ್ಚೈವ ಸರ್ವಂ ಸತ್ಯೇ ಪ್ರತಿಷ್ಠಿತಮ್ ॥ ೬೫ ॥

ವೇದಗಳಲ್ಲಿ ಸತ್ಯವೇ ಬೆಳಗುತ್ತಿದೆ. ಉತ್ತಮಫಲಗಳು ಸತ್ಯದಲ್ಲಿಯೇ ನೆಲೆಗೊಂಡಿವೆ. ತಪಸ್ಸು, ದಮ, ಧರ್ಮ ಎಲ್ಲವೂ ಸತ್ಯದಲ್ಲಿಯೇ ನೆಲೆಗೊಂಡಿವೆ.

ಸತ್ಯಂ ವೇದಾಸ್ತಥಾಂಗಾನಿ ಸತ್ಯಂ ಯಜ್ಞಸ್ತಥಾ ವಿಧಿಃ ।
ವ್ರತಚರ್ಯಾಸ್ತಥಾ ಸತ್ಯಮೋಂಕಾರಃ ಸತ್ಯಮೇವ ಚ ॥ ೬೬ ॥

ವೇದ-ವೇದಾಂಗಗಳು, ಯಜ್ಞಗಳು, ಯಜ್ಞವಿಧಿಗಳು, ವ್ರತಚರ್ಯಗಳು ಎಲ್ಲವೂ ಸತ್ಯದಲ್ಲಿಯೇ ಅಡಕವಾಗಿವೆ. ಸತ್ಯವೇ ಓಂಕಾರವು.

ಪ್ರಾಣಿನಾಂ ಜನನಂ ಸತ್ಯಂ ಸತ್ಯಂ ಸಂತತಿರೇವ ಚ ।
ಸತ್ಯೇನ ವಾಯುರಭ್ಯೇತಿ ಸತ್ಯೇನ ತಪತೇ ರವಿಃ ॥ ೬೭ ॥

ಸತ್ಯೇನ ಚಾಗ್ನಿರ್ದಹತಿ ಸ್ವರ್ಗಃ ಸತ್ಯೇ ಪ್ರತಿಷ್ಠಿತಃ ।
ಸತ್ಯಂ ಯಜ್ಞಸ್ತಪೋ ವೇದಾಃ ಸ್ತೋಭಾ ಮಂತ್ರಾಃ ಸರಸ್ವತೀ ॥ ೬೮ ॥

ಪ್ರಾಣಿಗಳ ಜನ್ಮಭೂಮಿ ಸತ್ಯವೇ ಆಗಿದೆ. ಪ್ರಾಣಿಗಳ ಸಂತತಿಯು ಸತ್ಯವೇ. ಸತ್ಯದಿಂದಲೇ ಗಾಳಿ ಬೀಸುತ್ತಿದೆ, ಸೂರ್ಯತಪಿಸುತ್ತಿದ್ದಾನೆ, ಅಗ್ನಿಯು ಉರಿಯುತ್ತಿದೆ. ಸತ್ಯದಲ್ಲಿಯೇ ಸ್ವರ್ಗವು ನಿಂತಿದೆ. ಸಾಮಗಾನದಲ್ಲಿ ಹೇಳಲ್ಪಡುವ ಹುಂ, ಹಾ, ವಾ ಇತ್ಯಾದಿ ಸ್ತೋಭ ಎನಿಸಿದ ಪದವಿಶೇಷಗಳು, ಮಂತ್ರಗಳು, ಸರಸ್ವತಿ ಎಲ್ಲರೂ ಸತ್ಯದಲ್ಲಿಯೇ ಸನ್ನಿಹಿತರಾಗಿದ್ದಾರೆ.

ತುಲಾಮಾರೋಪಿತೋ ಧರ್ಮಃ ಸತ್ಯಂ ಚೈವೇತಿ ನಃ ಶ್ರುತಮ್ ।
ಸಮಾಂ ಕಕ್ಷಾಂ ಧಾರಯತೋ ಯತಃ ಸತ್ಯಂ ತತೋऽಧಿಕಮ್॥ ೬೯ ॥

ಸತ್ಯ, ಧರ್ಮ ಎರಡನ್ನು ತಕ್ಕಡಿಯಲ್ಲಿಟ್ಟು ತೂಗಿದಾಗ ಸತ್ಯವೇ ಭಾರದಿಂದ ಕುಗ್ಗಿತೆಂದು ನಾನು ತಿಳಿದಿದ್ದೇನೆ.

ಯತೋ ಧರ್ಮಸ್ತತಃ ಸತ್ಯಂ ಸರ್ವಂ ಸತ್ಯೇನ ವರ್ಧತೇ ।
ಕಿಮರ್ಥಮನೃತಂ ಕರ್ಮ ಕರ್ತುಂ ರಾಜಂಸ್ತ್ವಮಿಚ್ಛಸಿ ॥ ೭೦ ॥

ಧರ್ಮವಿದ್ದಲ್ಲಿ ಸತ್ಯವು. ಸತ್ಯದಿಂದಲೇ ಎಲ್ಲವೂ ವೃದ್ಧಿ ಹೊಂದುತ್ತದೆ. ಹೀಗಿರುವಾಗ ಸತ್ಯವನ್ನೇಕೆ ಬಿಟ್ಟುನೀನು ಹೋಗುತ್ತಿರುವಿ? ಸತ್ಯವನ್ನು ಬಿಟ್ಟುಸುಳ್ಳಿನ ಮಾರ್ಗದ ಕರ್ಮವನ್ನು ಯಾಕೆ ಆಚರಿಸಲು ಇಚ್ಛಿಸುತ್ತಿರುವಿ?

ಸತ್ಯೇ ಕುರು ಸ್ಥಿರಂ ಭಾವಂ ಮಾ ರಾಜನ್ನನೃತಂ ಕೃಥಾಃ ।
ಕಸ್ಮಾತ್ತ್ವಮನೃತಂ ವಾಕ್ಯಂ ದೇಹೀತಿ ಕುರುಷೇऽಶುಭಮ್ ॥ ೭೧ ॥

ಸತ್ಯದಲ್ಲಿ ಸ್ಥಿರಭಾವವನ್ನು ಹೊಂದು. ರಾಜನೇ, ಅನೃತಕ್ಕೆ ಸ್ಥಾನವನ್ನು ನೀಡಬೇಡ. ದೇಹಿ ಎಂದು ಕೇಳಿದ ಬಳಿಕ ಯಾವ ಕಾರಣದಿಂದ ನೀನು ಅನೃತವಾಕ್ಯವನ್ನು ಉಚ್ಚರಿಸಿ ಆ ಶಬ್ದವನ್ನು ಅಮಂಗಳ ಮಾಡುತ್ತಿರುವಿ?

ಯದಿ ಜಪ್ಯಫಲಂ ದತ್ತಂ ಮಯಾ ನೇಷಿಷ್ಯಸೇ ನೃಪ ।
ಸ್ವಧರ್ಮೇಭ್ಯಃ ಪರಿಭ್ರಷ್ಟೋ ಲೋಕಾನನುಚರಿಷ್ಯಸಿ ॥ ೭೨ ॥

ನಾನು ಕೊಟ್ಟದ್ದನ್ನು ನೀನು ಬೇಡವೆಂದು ಹೇಳಿದರೆ ಧರ್ಮಭ್ರಷ್ಟನಾಗುತ್ತಿ. ಉತ್ತಮ ಲೋಕಗಳನ್ನು ಹೊಂದಲು ನೀನು ಅನರ್ಹನಾಗುತ್ತಿ.

ಸಂಶ್ರುತ್ಯ ಯೋ ನ ದಿತ್ಸೇತ ಯಾಚಿತ್ವಾ ಯಶ್ಚ ನೇಚ್ಛತಿ ।
ಉಭಾವಾನೃತಿಕಾವೇತೌ ನ ಮೃಷಾ ಕರ್ತುಮರ್ಹಸಿ ॥ ೭೩ ॥

ಕೊಡುತ್ತೇನೆಂದು ಹೇಳಿ ಕೊಡದಿದ್ದವನು, ಕೊಡು ಎಂದು ಕೇಳಿ ಸ್ವೀಕರಿಸದಿದ್ದವನು ಇಬ್ಬರೂ ಅನೃತವಾದಿಗಳೇ ಆಗುತ್ತಾರೆ. ಅಂತಹ ಅನೃತಕ್ಕೆ ನೀನು ಪಾತ್ರನಾಗಬೇಡ.

ರಾಜಾ

ಯೋದ್ಧವ್ಯಂ ರಕ್ಷಿತವ್ಯಂ ಚ ಕ್ಷತ್ರಧರ್ಮಃ ಕಿಲ ದ್ವಿಜ ।
ದಾತಾರಃ ಕ್ಷತ್ರಿಯಾಃ ಪ್ರೋಕ್ತಾ ಗೃಹ್ಣೀಯಾಂ ಭವತಃ ಕಥಮ್ ॥ ೭೪ ॥

ರಾಜ– ವಿಪ್ರೋತ್ತಮನೇ, ಯುದ್ಧಮಾಡುವುದು, ದೇಶ ರಕ್ಷಿಸುವುದು ಕ್ಷತ್ರ ಧರ್ಮ ಎನಿಸಿದೆಯಷ್ಟೆ! ದಾನ ಮಾಡಲು ಅರ್ಹರಾದ ಕ್ಷತ್ರಿಯರು ನಿನ್ನಿಂದ ಸ್ವೀಕರಿಸಲು ಹೇಗೆ ಅರ್ಹರಾಗುತ್ತಾರೆ? ನೀನೇ ಹೇಳು.

ಬ್ರಾಹ್ಮಣಃ

ನ ಛಂದಯಾಮಿ ತೇ ರಾಜನ್ನಪಿ ತೇ ಗೃಹಮಾವ್ರಜಮ್ ।
ಇಹಾಗಮ್ಯ ತು ಯಾಚಿತ್ವಾ ನ ಗೃಹ್ಣೀಷೇ ಪುನಃ ಕಥಮ್ ॥ ೭೫ ॥

ಬ್ರಾಹ್ಮಣ– ರಾಜನೇ, ನಿನ್ನ ಧರ್ಮಕ್ಕನುಗುಣವಾಗಿ ನಾನು ವರ್ತಿಸಿದೆ. ನಿನ್ನನ್ನು ತೆಗೆದುಕೊಳ್ಳಬೇಕೆಂದು ನಾನೇನು ನಿರ್ಬಂಧಿಸಲಿಲ್ಲ. ನಿನ್ನ ಬಳಿ ಬಂದು ನಾನೇನು ಕೊಡಲು ಬಯಸಲಿಲ್ಲ. ನೀನೇ ಇಲ್ಲಿಗೆ ಆಗಮಿಸಿ ನಿರ್ಬಂಧ ಪೂರ್ವಕವಾಗಿ ಯಾಚಿಸಿ ಈಗ ಬೇಡವೆಂದು ಹೇಳುವುದು ಧರ್ಮವಾಗುತ್ತದೆಯೇ?

ಧರ್ಮಃ

ಅವಿವಾದೋಽಸ್ತು ಯುವಯೋರ್ವಿತ್ತಂ ಮಾಂ ಧರ್ಮಮಾಗತಮ್ ।
ದ್ವಿಜೋ ದಾನಫಲೈರ್ಯುಕ್ತೋ ರಾಜಾ ಸತ್ಯಫಲೇನ ಚ ॥ ೭೬ ॥

ಧರ್ಮ– ನಿಮ್ಮಿಬ್ಬರಿಗೆ ವೃಥಾ ವಿವಾದವೇಕೆ? ನಾನೇ ಸಾಕ್ಷಾತ್ ಧರ್ಮವೆಂದು ತಿಳಿಯಿರಿ. ಬ್ರಾಹ್ಮಣನಾದ ನಿನಗೆ ದಾನ ಮಾಡಿದ ಫಲವು ಬರುತ್ತದೆ. ರಾಜನಾದ ನಿನಗೆ ಸತ್ಯದಲ್ಲಿನೆಲೆಗೊಂಡ ಫಲವು ಉಂಟಾಗಲಿ.

ಸ್ವರ್ಗಃ

ಸ್ವರ್ಗಂ ಮಾಂ ವಿದ್ಧಿ ರಾಜೇಂದ್ರ ರೂಪಿಣಂ ಸ್ವಯಮಾಗತಮ್ ।
ಅವಿವಾದೋಽಸ್ತು ಯುವಯೋರುಭೌ ತುಲ್ಯಫಲೌ ಯುವಾಮ್ ॥

ಸ್ವರ್ಗ– ರಾಜೇಂದ್ರನೇ, ಪ್ರತ್ಯಕ್ಷವಾಗಿ ಆಗಮಿಸಿದ ನನ್ನನ್ನು ಸ್ವರ್ಗ ಎಂದು ತಿಳಿ. ನಿಮ್ಮಿಬ್ಬರಿಗೆ ವಿವಾದವು ಉಂಟಾಗದಿರಲಿ. ನೀವಿಬ್ಬರೂ ಫಲದಲ್ಲಿ ಸಾಮ್ಯವನ್ನು ಹೊಂದಿರಿ.

ರಾಜಾ

ಕೃತಂ ಸ್ವರ್ಗೇಣ ಮೇ ಕಾರ್ಯಂ ಗಚ್ಛ ಸ್ವರ್ಗ ಯಥಾಸುಖಮ್ ।
ವಿಪ್ರೋ ಯದೀಚ್ಛತೇ ದಾತುಂ ಪ್ರಯಚ್ಛತು ಚ ಮೇ ಧನಮ್ ॥ ೭೮ ॥

ರಾಜ– ನನಗೆ ಸ್ವರ್ಗದಿಂದ ಆಗಬೇಕಾದುದ್ದೇನೂ ಇಲ್ಲ. ನೀನು ನಿನ್ನ ದಾರಿಯನ್ನು ಹಿಡಿದು ಹೊರಡು. ಈ ಬ್ರಾಹ್ಮಣನು ನನಗೆ ದಾನವನ್ನು ಮಾಡಿ ಅದರಿಂದ ಸ್ವರ್ಗ ಫಲವನ್ನು ಪಡೆಯಬೇಕೆಂದಿದ್ದರೆ ನಾನು ನಡೆಸಿದ ಕರ್ಮಫಲವನ್ನೆಲ್ಲಾ ಅವನಿಗೆ ನೀಡುತ್ತೇನೆ. ಅದರಿಂದ ಅವನು ಸ್ವರ್ಗಕ್ಕೆ ಹೋಗಲಿ.

ಬ್ರಾಹ್ಮಣಃ

ಬಾಲ್ಯೇ ಯದಿ ಸ್ಯಾದಜ್ಞಾನಾನ್ಮಯಾ ಹಸ್ತಃ ಪ್ರಸಾರಿತಃ ।
ನಿವೃತ್ತಿಲಕ್ಷಣಂ ಧರ್ಮಮುಪಾಸೇ ಸಂಹಿತಾಂ ಜಪನ್ ॥ ೭೯ ॥

ಬ್ರಾಹ್ಮಣ– ಎಲೈ ರಾಜನೇ, ಒಂದು ವೇಳೆ ನಾನು ಬಾಲ್ಯದಲ್ಲಿ ತಿಳಿಯದೆ ಪ್ರತಿಗ್ರಹಕ್ಕಾಗಿ ಕೈ ನೀಡಿದ್ದರೂ ಇರಬಹುದು. ಈಗ ಗಾಯತ್ರೀ ಜಪವನ್ನು ಹಿಡಿದು ನಿವೃತ್ತಿ ಧರ್ಮದಲ್ಲಿನಿರತನಾಗಿದ್ದೇನೆ. ನನಗೆ ಯಾವ ಬಯಕೆಗಳೂ ಇರುವುದಿಲ್ಲ.

ನಿವೃತ್ತಂ ಮಾಂ ಚಿರಂ ರಾಜನ್ ವಿಪ್ರಂ ಲೋಭಯಸೇ ಕಥಮ್ ।
ಸ್ವೇನ ಕಾರ್ಯಂ ಕರಿಷ್ಯಾಮಿ ತತ್ತೋ ನೇಚ್ಛೇ ಫಲಂ ನೃಪ ।
ತಪಃಸ್ವಾಧ್ಯಾಯಶೀಲೋಽಹಂ ನಿವೃತ್ತಶ್ಚ ಪ್ರತಿಗ್ರಹಾತ್ ॥ ೮೦ ॥

ನಿವೃತ್ತಿ ಧರ್ಮದಲ್ಲಿ ನಿರತನಾಗಿರುವ ನನಗೆ ಪ್ರಲೋಭನೆಗಳನ್ನೇಕೆ ಒಡ್ಡುತ್ತಿರುವಿ? ನನ್ನ ಕಾರ್ಯ ಯಾವುದೋ ಅದನ್ನೇ ನಾನು ನಡೆಸಿದ್ದೇನೆ. ನೀನು ಸಂಪಾದಿಸಿಟ್ಟ ಫಲವನ್ನು ನಾನು ಬಯಸುವುದಿಲ್ಲ. ತಪಸ್ಸು, ಸ್ವಾಧ್ಯಾಯ ಇವುಗಳಲ್ಲೇ ಆಸಕ್ತನಾದ ನಾನು ಪ್ರತಿಗ್ರಹವನ್ನು ಯಾವಾಗಲೋ ಬಿಟ್ಟಿರುತ್ತೇನೆ.

ರಾಜಾ

ಯದಿ ವಿಪ್ರ ನಿಸೃಷ್ಟಂ ತೇ ಜಪ್ಯಸ್ಯ ಫಲಮುತ್ತಮಮ್ ।
ಆವಯೋರ್ಯತ್ಫಲಂ ಕಿಂಚಿತ್ ಸಹಿತಂ ನೌ ತದಸ್ತ್ವಿಹ ॥ ೮೧ ॥

ರಾಜ– ಎಲೈ ಬ್ರಾಹ್ಮಣನೇ, ನೀನು ನಿನ್ನ ಅನುತ್ತಮವಾದ ಜಪದ ಫಲವನ್ನು ಕೊಡುವುದಾದರೆ ನಾವಿಬ್ಬರು ಸಂಪಾದಿಸಿದ ಫಲಗಳನ್ನು ಒಟ್ಟು ಮಾಡಿ ಹಂಚಿಕೊಳ್ಳುತ್ತೇವೆ. ನಿನ್ನ ಜಪಫಲದಲ್ಲಿ ಅರ್ಧ ನನಗೆ. ನನ್ನ ಕರ್ಮಫಲದಲ್ಲಿ ಅರ್ಧ ನಿನಗೆ ಸೇರುವಂತಾಗಲಿ.

ದ್ವಿಜಾಃ ಪ್ರತಿಗ್ರಹೇ ಯುಕ್ತಾ ದಾತಾರೋ ರಾಜವಂಶಜಾಃ ।
ಯದಿ ಧರ್ಮಃ ಶ್ರುತೋ ವಿಪ್ರ ಸಹೈವ ಫಲಮಸ್ತು ನೌ ॥ ೮೨ ॥

ನಿಮ್ಮಂತಹ ಬ್ರಾಹ್ಮಣರಿಗೆ ಪ್ರತಿಗ್ರಹದಲ್ಲಿ ಅಧಿಕಾರವಿದೆ. ರಾಜರಿಗೆ ಯಾವಾಗಲೂ ದಾನವನ್ನು ಮಾಡುವ ಅಧಿಕಾರವಿರುತ್ತದೆ. ಆದ್ದರಿಂದ ನಮ್ಮ ಉಭಯ ಕುಲಕ್ಕೂ ವಿಹಿತವಾದ ಧರ್ಮದ ಫಲಗಳನ್ನು ಸೇರಿಸಿ ಇಬ್ಬರೂ ಸಮಾನ ಫಲ ಹೊಂದಿದವರಾಗಿ ವರ್ತಿಸೋಣ.

ಮಾ ವಾ ಭೂತ್ ಸಹಭೋಜ್ಯಂ ನೌ ಮದೀಯಂ ಫಲಮಾಪ್ನುಹಿ ।
ಪ್ರತೀಚ್ಛ ಮತ್ಕೃತಂ ಧರ್ಮಂ ಯದಿ ತೇ ಮಯ್ಯನುಗ್ರಹಃ ॥ ೮೩ ॥

ಒಂದು ವೇಳೆ ಫಲದಲ್ಲಿ ಸಮಾನವಾಗಿರಲು ನಿನಗೆ ಇಷ್ಟವಿಲ್ಲದ ಪಕ್ಷದಲ್ಲಿ ನಾನು ಸಂಪಾದಿಸಿದ ಕರ್ಮಫಲಗಳನ್ನು ನೀನೇ ಸ್ವೀಕರಿಸು. ಹೀಗೆ ಮಾಡಿದಲ್ಲಿ ನಿನ್ನ ಅನುಗ್ರಹ ಎಂದು ಭಾವಿಸುತ್ತೇನೆ. ನನ್ನ ಧರ್ಮವನ್ನೇ ನೀನು ಸ್ವೀಕರಿಸಬಹುದು.

ಭೀಷ್ಮಃ

ತತೋ ವಿಕೃತವೇಷೌ ದ್ವೌ ಪುರುಷೌ ಸಮುಪಸ್ಥಿತೌ ।
ಗೃಹೀತ್ವಾನ್ಯೋನ್ಯಮಾವೇಷ್ಟ್ಯ ಕುಚೇಲಾವೂಚತುರ್ವಚಃ ॥ ೮೪ ॥

ಭೀಷ್ಮ– ಧರ್ಮರಾಜನೇ, ಇದೇ ಸಮಯದಲ್ಲಿ ವಿಕೃತವೇಷವುಳ್ಳ ಇಬ್ಬರು ಪುರುಷರು ಆ ಸ್ಥಳಕ್ಕೆ ಆಗಮಿಸಿದರು. ಅವರಿಬ್ಬರು ಹರಿದು ಹೋದ ಬಟ್ಟೆಗಳನ್ನು ಧರಿಸಿದ್ದರು. ಇಬ್ಬರೂ ಪರಸ್ಪರ ಒಬ್ಬರನ್ನೊಬ್ಬರು ಎಳೆದಾಡುತ್ತಾ ಜಗಳವಾಡುತ್ತಾ ಬಂದರು.

ನ ಮೇ ಧಾರಯಸೀತ್ಯೇಕೋ ಧಾರಯಾಮೀತಿ ಚಾಪರಃ ।
ಇಹಾಸ್ತಿ ನೌ ವಿವಾದೋಽಯಮಯಂ ರಾಜಾನುಶಾಸಕಃ ॥ ೮೫ ॥

ಅವರಲ್ಲಿ ಒಬ್ಬನು ನಾನು ನೀಡಿದ್ದನ್ನು ಏಕೆ ಧರಿಸಲಿಲ್ಲ ಎಂದು ಪ್ರಶ್ನಿಸುತ್ತಿದ್ದನು. ಮತ್ತೊಬ್ಬನು ನಾನೇಕೆ ಧರಿಸಲಿ? ಧರಿಸುವುದಿಲ್ಲ ಎನ್ನುತ್ತಿದ್ದನು. ಹೀಗೆ ಒಬ್ಬರಿಗೊಬ್ಬರು ವಿವಾದವನ್ನೆಬ್ಬಿಸಿಕೊಂಡು ರಾಜನ ಮುಂದೆ ಬಂದು, ನಮ್ಮನ್ನೆಲ್ಲ ನಿಯಮಿಸುವ ರಾಜನು ಇಲ್ಲೇ ಇದ್ದಾನೆ. ಅವನ ಮುಂದೆ ಹೇಳುತ್ತೇವೆ ಎಂದರು.

ಸತ್ಯಂ ಬ್ರವೀಮ್ಯಹಮಿದಂ ನ ಮೇ ಧಾರಯತೇ ಭವಾನ್ ।
ಅನೃತಂ ವದಸೀಹ ತ್ವಮೃಣಂ ತೇ ಧಾರಯಾಮ್ಯಹಮ್ ॥ ೮೬ ॥

ಅದರಲ್ಲಿ ಮೊದಲನೆಯವನು ನನ್ನ ಮಾತು ಸತ್ಯವು. ನೀನು ಕೊಟ್ಟ ವಸ್ತುವು ನನ್ನಲ್ಲಿ ಇದ್ದಲ್ಲಿ ನಿನ್ನ ಋಣವನ್ನು ನಾನು ಧರಿಸಿದಂತಾಗುತ್ತದೆ. ಆದರೆ ನಾನು ನಿನ್ನಿಂದ ಯಾವುದನ್ನೂ ಸ್ವೀಕರಿಸಿಲ್ಲ. ನೀನು ಸುಳ್ಳನ್ನು ಹೇಳುತ್ತಿರುವೆ. ನಿನಗೆ ನಾನು ಋಣಿಯಾಗಿರುವುದಿಲ್ಲ ಎಂದು ಹೇಳಿದನು.

ತಾವುಭೌ ಭೃಶಸಂತಪ್ತೌ ರಾಜಾನಮಿದಮೂಚತುಃ ।
ಪರೀಕ್ಷ್ಯತಾಂ ಯಥಾ ಸ್ಯಾವ ನಾವಾಮಿಹ ವಿಗರ್ಹಿತೌ ॥ ೮೭ ॥

ಕೊನೆಗೆ ಅವರಿಬ್ಬರೂ ರಾಜನ ಬಳಿ ಆಗಮಿಸಿ ರಾಜನೇ, ನಮ್ಮಿಬ್ಬರ ನ್ಯಾಯವನ್ನು ವಿಚಾರಿಸಿ ನಮ್ಮನ್ನು ನಿರ್ದೋಷಿಗಳನ್ನಾಗಿ ನೀನು ಮಾಡಬೇಕು. ನಾವು ಹೇಗೆ ನಿರ್ದೋಷಿಗಳಾಗುತ್ತೇವೆ ಎಂಬುದನ್ನು ನೀನೇ ಪರೀಕ್ಷಿಸಿ ನಿರ್ಧರಿಸು.

ವಿರೂಪಃ

ವಿಕೃತಸ್ಯ ನರವ್ಯಾಘ್ರ ಧಾರಯಾಮೀಹ ಗೋಫಲಮ್ ।
ದದತಶ್ಚ ನ ಗೃಹ್ಣಾಮಿ ವಿಕೃತೋ ಮೇ ಮಹೀಪತೇ ॥ ೮೮ ॥

ವಿರೂಪ– ಮಹಾರಾಜನೇ ಕೇಳು. ಇವನು ನನ್ನ ಮಿತ್ರನಾದ ವಿಕೃತನು. ನಾನು ಇವನಿಗೆ ಒಂದು ಗೋದಾನದ ಫಲವನ್ನು ಸಾಲ ತೀರಿಸಬೇಕಾಗಿದೆ. ಆದರೆ ಆ ವಿಕೃತನು ಗೋದಾನದ ಋಣರೂಪದಲ್ಲಿರುವ ಫಲವನ್ನು ತೆಗೆದುಕೊಳ್ಳದೆ ನಿರಾಕರಿಸುತ್ತಿದ್ದಾನೆ.

ವಿಕೃತಃ

ನ ಮೇ ಧಾರಯತೇ ಕಿಂಚಿದ್ ವಿರೂಪೋಽಯಂ ನರಾಧಿಪ ।
ಮಿಥ್ಯಾ ಬ್ರವೀತ್ಯಯಂ ಹಿ ತ್ವಾ ಮಿಥ್ಯಾಭಾಸಂ ನರಾಧಿಪ ॥ ೮೯ ॥

ವಿಕೃತ– ರಾಜೇಂದ್ರನೇ, ಈ ವಿರೂಪನು ನನಗೇನೂ ಸಾಲ ಕೊಡಬೇಕಾಗಿರುವುದಿಲ್ಲ. ಇವನು ಸತ್ಯವಚನದಂತೆ ಸುಳ್ಳನ್ನೇ ಹೇಳುತ್ತಿದ್ದಾನೆ ಎಂದು ಹೇಳಿದನು.

ರಾಜಾ

ವಿರೂಪ ಕಿಂ ಧಾರಯತೇ ಭವಾನಸ್ಯ ವದಸ್ವ ಮೇ ।
ಶ್ರುತ್ವಾ ತಥಾ ಕರಿಷ್ಯಾಮೀತ್ಯೇವಂ ಮೇ ಧೀಯತೇ ಮತಿಃ ॥ ೯೦ ॥

ರಾಜ– ಹೇ ವಿರೂಪನೇ, ಇವನಿಗೆ ಯಾವ ಭಾಗದಲ್ಲಿ ಋಣಿಯಾಗಿರುವೆ ವಿವರವಾಗಿ ತಿಳಿಸಿದರೆ ಯೋಗ್ಯವಾದ ತೀರ್ಮಾನವನ್ನು ನೀಡುತ್ತೇನೆ ಎಂದನು.

ವಿರೂಪಃ

ಶೃಣುಷ್ವಾವಹಿತೋ ರಾಜನ್ ಯಥೈತದ್ಧಾರಯಾಮ್ಯಹಮ್ ।
ವಿಕೃತಸ್ಯಾಸ್ಯ ರಾಜರ್ಷೇ ನಿಖಿಲೇನ ನರರ್ಷಭ ॥ ೯೧ ॥

ಅನೇನ ಧರ್ಮಪ್ರಾಪ್ತ್ಯರ್ಥಂ ಶುಭಾ ದತ್ತಾ ಪುರಾನಘ ।
ಧೇನುರ್ವಿಪ್ರಾಯ ರಾಜರ್ಷೇ ತಪಃಸ್ವಾಧ್ಯಾಯಶೀಲಿನೇ ॥ ೯೨ ॥

ತಸ್ಯಾಶ್ಚಾಯಂ ಮಯಾ ರಾಜನ್ ಫಲಮಭ್ಯೇತ್ಯ ಯಾಚಿತಃ ।
ವಿಕೃತೇನ ಚ ಮೇ ದತ್ತಂ ವಿಶುದ್ಧೇನಾಂತರಾತ್ಮನಾ ॥ ೯೩ ॥

ವಿರೂಪ– ಮಹಾರಾಜನೇ, ಆ ವಿವರವನ್ನೆಲ್ಲ ತಿಳಿಸುತ್ತೇನೆ, ಕೇಳು. ಹಿಂದೆ ಈ ವಿಕೃತನು ತಪಸ್ಸ್ವಾಧ್ಯಾಯಶೀಲನಾದ ಬ್ರಾಹ್ಮಣನಾದ ನನಗೆ ಉತ್ತಮವಾದ ಒಂದು ಗೋವನ್ನು ದಾನ ಮಾಡಿದನು. ಬಳಿಕ ನಾನು ಇವನಲ್ಲಿಗೆ ಹೋಗಿ ಆ ಗೋದಾನದ

ಫಲವನ್ನು ಬೇಡಿದೆನು. ಅದರಂತೆಯೇ ಶುದ್ಧವಾದ ಮನಸ್ಸಿನಿಂದ ನನಗೆ ಆ ಫಲವನ್ನು ಕೊಟ್ಟುಬಿಟ್ಟನು.

ತತೋ ಮೇ ಸುಕೃತಂ ಕರ್ಮ ಕೃತಮಾತ್ಮವಿಶುದ್ಧಯೇ ।
ಗಾವೌ ಹಿ ಕಪಿಲೇ ಕೃತ್ವಾ ವತ್ಸಲೇ ಬಹುದೋಹನೇ ॥ ೯೪ ॥

ಬಳಿಕ ಪಾಪನಿವೃತ್ತಿಗಾಗಿ ಕೆಲವು ಪುಣ್ಯಕರ್ಮಗಳನ್ನು ನಾನು ನಡೆಸಿದೆನು. ಆ ದಾನವನ್ನು ಪಡೆದ ಕಪಿಲ ಹಸುವಿನಿಂದ ಹುಟ್ಟಿದ ಎರಡು ಕರುಗಳಿಂದ ಬಹಳಷ್ಟು ಹಾಲನ್ನು ಸ್ವೀಕರಿಸಿ ಹೆಚ್ಚಾಗಿ ಹಾಲನ್ನು ಕರೆಯುತ್ತಿದ್ದ ಆ ಹಸುಗಳನ್ನು ಉಂಛವೃತ್ತಿಯಲ್ಲಿ ನಿರತನಾದ ವಿಕೃತನಿಗೆ ದಾನ ಮಾಡಿದೆನು.

ತೇ ಚೋಂಛವೃತ್ತಯೇ ರಾಜನ್ಮಯಾ ಸಮಪವರ್ಜಿತೇ ।
ಯಥಾವಿಧಿ ಯಥಾಶ್ರದ್ಧಂ ತದಸ್ಯಾಹಂ ಪುನಃ ಪ್ರಭೋ ॥ ೯೫ ॥

ವಿಧಿಬದ್ಧವಾಗಿ ಶ್ರದ್ಧೆಯಿಂದ ಆ ಗೋದಾನ ಫಲವನ್ನು ಈತನಿಗೆ ಕೊಡಬೇಕೆಂದು ಪುನಃ ಪುನಃ ಬೇಡಿಕೊಳ್ಳುತ್ತಿದ್ದೇನೆ.

ಇಹಾದ್ಯ ವೈ ಗೃಹೀತ್ವಾ ತತ್ ಪ್ರಯಚ್ಛೇ ದ್ದ್ವಿಗುಣಂ ಫಲಮ್ ।
ಏಕಸ್ಯಾಃ ಪುರುಷವ್ಯಾಘ್ರ ಕಃ ಶುದ್ಧಃ ಕೋಽತ್ರ ದೋಷವಾನ್ ॥ ೯೬ ॥

ಯಾರು ವಸ್ತುವನ್ನು ಸ್ವೀಕರಿಸುತ್ತಾನೋ ಅದನ್ನು ಪುನಃ ಮತ್ತೊಬ್ಬರಿಗೆ ನೀಡಿದಾಗ ಅದರ ಫಲವು ಎರಡು ಪಟ್ಟಾಗುತ್ತದೆ. ಇಲ್ಲಿರುವ ಸಂಗತಿ ಇಷ್ಟೆ. ಮೊದಲು ದಾನವನ್ನು ಸ್ವೀಕರಿಸಿದ ನಾನು ಈತನಿಗೆ ದಾನ ಮಾಡಲು ಮುಂದಾದಾಗ ಇವನು ನಿರಾಕರಿಸುತ್ತಿದ್ದಾನೆ. ನಮ್ಮೀರ್ವರಲ್ಲಿ ಶುದ್ಧನ್ಯಾರು, ದೋಷಿಯಾರು ಎಂದು ನೀನೇ ನಿರ್ಣಯವನ್ನು ನೀಡು.

ಏವಂ ವಿವದಮಾನೌ ಸ್ವಸ್ತ್ವಾಮಿಹಾಭ್ಯಾಗತೌ ನೃಪ ।
ಕುರು ಧರ್ಮಮಧರ್ಮಂ ವಾ ವಿನಯೇ ನೌ ಸಮಾಧಯ ॥ ೯೭ ॥

ಇದಕ್ಕಾಗಿಯೇ ವಾದ ಮಾಡುತ್ತಾ ನಿನ್ನಲ್ಲಿಗೆ ಬಂದಿದ್ದೇವೆ. ಧರ್ಮವೋ, ಅಧರ್ಮವೋ ನೀನು ಹೇಳಿದ ತೀರ್ಮಾನಕ್ಕೆ ನಾವು ಒಳಪಡುತ್ತೇವೆ. ನಮ್ಮೀರ್ವರಲ್ಲಿ ಸಮಾಧಾನವನ್ನು ನೆಲೆಸುವಂತೆ ಮಾಡು.

ಯದಿ ನೇಚ್ಛತಿ ಮೇ ದಾನಂ ಯಥಾ ದತ್ತಮನೇನ ವೈ ।
ಭವಾನತ್ರ ಸ್ಥಿರೋ ಭೂತ್ವಾ ಮಾರ್ಗೇ ಸ್ಥಾಪಯತು ಪ್ರಭುಃ ॥ ೯೮ ॥

ಇವನು ಕೊಟ್ಟ ದಾನವನ್ನು ಸ್ವೀಕರಿಸಿದೆ. ಆದರೆ ನಾನು ಕೊಟ್ಟ ದಾನವನ್ನು ಇವನು ಸ್ವೀಕರಿಸುತ್ತಿಲ್ಲ. ರಾಜನಾದ ನೀನೇ ನ್ಯಾಯವನ್ನು ನಿರ್ಣಯಿಸಿ ಸರಿಯಾದ ಮಾರ್ಗದಲ್ಲಿ ನಮ್ಮನ್ನು ನಿಲ್ಲಿಸಬೇಕು.

ರಾಜಾ

ದೀಯಮಾನಂ ನ ಗೃಹ್ಣಾಸಿ ಋಣಂ ಕಸ್ಮಾತ್ತ್ವಮದ್ಯ ವೈ ।
ಯಥೈವ ತೇಽಭ್ಯನುಜ್ಞಾತಂ ತಥಾ ಗೃಹ್ಣೀಷ್ವ ಮಾಚಿರಮ್ ॥ ೯೯ ॥

ರಾಜ– ಅಯ್ಯಾ ಬ್ರಾಹ್ಮಣನೇ, ನಿನಗೆ ಕೊಡಬೇಕಾದ ಸಾಲವನ್ನು ಹಿಂತಿರುಗಿ ಕೊಟ್ಟರೆ ನೀನೇಕೆ ತೆಗೆದುಕೊಳ್ಳುತ್ತಿಲ್ಲ? ಹಿಂದೆ ನೀನು ಕೊಟ್ಟಂತೆ ನೀನು ಸ್ವೀಕರಿಸುವುದು ಧರ್ಮವಾಗಿದೆ ಎಂದು ಹೇಳಿದನು.

ವಿಕೃತಃ

ದೀಯತಾಮಿತ್ಯನೇನೋಕ್ತಂ ದದಾನೀತಿ ತಥಾ ಮಯಾ ।
ನಾಯಂ ಮೇ ಧಾರಯತ್ಯತ್ರ ಗಮ್ಯತಾಂ ಯತ್ರ ವಾಂಛತಿ ॥ ೧೦೦ ॥

ವಿಕೃತ– ರಾಜನೇ, ಈ ವಿಷಯವು ಹಾಗಲ್ಲ. ಇವನು ನನ್ನಲ್ಲಿ ಋಣ ಎಂದು ಹೇಳಿಕೊಂಡಿದ್ದಾನೆ. ನಾನು ಅವನಿಗೆ ಕೊಡಬೇಕಾದರೆ ಇವನು ನನ್ನ ಋಣ ಎಂದು ಭಾವಿಸಿಲ್ಲ. ಆದ್ದರಿಂದ ಇವನೆಂದಿಗೂ ಸಾಲಗಾರನಲ್ಲ. ಅವನು ನನಗೆ ಕೊಡದೆ ಹೊರಟು ಹೋಗಲಿ.

ರಾಜಾ

ದದತೋಽಸ್ಯ ನ ಗೃಹ್ಣಾಸಿ ವಿಷಮಂ ಪ್ರತಿಭಾತಿ ಮೇ ।
ದಂಡ್ಯೋ ಹಿ ತ್ವಂ ಮಮ ಮತೋ ನಾಸ್ಯತ್ರ ಖಲು ಸಂಶಯಃ ॥೧೦೧॥

ರಾಜ– ಬ್ರಾಹ್ಮಣನೇ, ಅವನಾಗಿ ಕೊಡುತ್ತಿರುವಾಗ ನೀನು ನಿರಾಕರಿಸುತ್ತಿರುವುದು ನನಗೆ ಸರಿಯಾಗಿ ತೋರುತ್ತಿಲ್ಲ. ಇದರಲ್ಲಿ ಸ್ವೀಕರಿಸದ ನೀನು ನಿಸ್ಸಂದೇಹವಾಗಿ ದೋಷಿ

ಎಂದು ತೋರುತ್ತಿದೆ. ಆದ್ದರಿಂದ ನೀನೇ ಶಿಕ್ಷೆಗೆ ಅರ್ಹನಾಗಿದ್ದಿ. ಇದರಲ್ಲಿ ಯಾವ ಸಂಶಯವೂ ಇಲ್ಲ.

ವಿಕೃತಃ

ಮಯಾಸ್ಯ ದತ್ತಂ ರಾಜರ್ಷೇ ಗೃಹ್ಣೀಯಾಂ ತತ್ ಕಥಂ ಪುನಃ ।
ಕಾಮಮತ್ರಾಪರಾಧೋ ಮೇ ದಂಡ್ಯಮಾಜ್ಞಾಪಯ ಪ್ರಭೋ ॥ ೧೦೨ ॥

ವಿಕೃತ– ರಾಜೇಂದ್ರನೇ, ನಾನು ಇವನಿಗೆ ದಾನವಾಗಿ ಕೊಟ್ಟ ಮೇಲೆ ಅದನ್ನು ಹಿಂದಿರುಗಿ ತೆಗೆದುಕೊಳ್ಳುವುದು ಹೇಗೆ? ನನ್ನ ಅಪರಾಧವಿಲ್ಲ ಎಂದು ಭಾವಿಸಿದ್ದೇನೆ. ದೋಷವಿದ್ದಲ್ಲಿ ನೀನು ನನ್ನನ್ನು ದಂಡಿಸು.

ವಿರೂಪಃ

ದೀಯಮಾನಂ ಯದಿ ಮಯಾ ನೇಷ್ಯಸಿ ಕಥಂಚನ ।
ನಿಯಂಸ್ಯತಿ ತ್ವಾ ನೃಪತಿರಯಂ ಧರ್ಮಾನುಶಾಸಕಃ ॥ ೧೦೩ ॥

ವಿರೂಪ– ನಾನು ಕೊಡಲು ಸಿದ್ಧವಾಗಿರುವಾಗಲೂ ನೀನು ಸ್ವೀಕರಿಸಲು ನಿರಾಕರಿಸುತ್ತಿದ್ದಿ. ಆದ್ದರಿಂದ ಧರ್ಮನಿಯಂತ್ರಣವೆನಿಸಿದ ಈ ರಾಜನ ದಂಡಕ್ಕೆ ನೀನೇ ಪಾತ್ರನಾಗಬೇಕು.

ವಿಕೃತಃ

ಯಂ ಮಯಾ ಯಾಚಿತೇನೇಹ ದತ್ತಂ ಕಥಮಿಹಾದ್ಯ ತತ್ ।
ಗೃಹ್ಣೀಯಾಂ ಗಚ್ಛತು ಭವಾನಭ್ಯನುಜ್ಞಾಂ ದದಾನಿ ತೇ ॥ ೧೦೪ ॥

ವಿಕೃತ– ವಿರೂಪನೇ, ನಾನು ಬೇಡದಿದ್ದಾಗಲೂ ದಾನ ಮಾಡಲು ನೀನು ಏಕೆ ಬರುತ್ತಿರುವಿ? ದಾನವಾಗಿ ಕೊಟ್ಟದ್ದನ್ನು ನಾನು ಹೇಗೆ ಸ್ವೀಕರಿಸಲಿ? ನಾನಾಗಿ ನಿನಗೆ ಮನಃಪೂರ್ವಕವಾಗಿ ಕೊಟ್ಟಿದ್ದೇನೆ. ಆದ್ದರಿಂದ ಹೊರಟು ಹೋಗು.

ಬ್ರಾಹ್ಮಣಃ

ಶ್ರುತಮೇತತ್ತ್ವಯಾ ರಾಜನ್ನನಯೋಃ ಕಥಿತಂ ದ್ವಯೋಃ ।
ಪ್ರತಿಜ್ಞಾತಂ ಮಯಾ ಯತ್ತೇ ತದ್ಗೃಹಾಣಾವಿಚಾರಿತಮ್ ॥ ೧೦೫ ॥

ಬ್ರಾಹ್ಮಣ– ರಾಜನೇ, ಇವರಿಬ್ಬರ ಮಾತನ್ನು ನೀನು ಕೇಳಿಸಿಕೊಂಡೆ. ಇನ್ನು ನಾನು ನಿನಗೆ ಕೊಡುವುದಾಗಿ ನಾನು ಪ್ರತಿಜ್ಞೆ ಮಾಡಿದುದನ್ನು ನೀನೂ ನಿಸ್ಸಂದೇಹವಾಗಿ ತೆಗೆದುಕೊಳ್ಳಬಹುದಲ್ಲವೇ? ನೀನೇ ಈ ನಿರ್ಣಯವನ್ನು ಕೊಟ್ಟಿರುತ್ತಿಯಷ್ಟೆ? ಆದ್ದರಿಂದ ಸ್ವೀಕರಿಸು ಎಂದನು.

ರಾಜಾ

ಪ್ರಸ್ತುತಂ ಸುಮಹತ್ ಕಾರ್ಯಮಾವಯೋರ್ಗಹ್ವರಂ ಯಥಾ ।
ಜಾಪಕಸ್ಯ ದೃಢೀಕಾರಃ ಕಥಮೇತದ್ಭವಿಷ್ಯತಿ ॥ ೧೦೬ ॥

ಯದಿ ತಾವನ್ನ ಗೃಹ್ಣಾಮಿ ಬ್ರಾಹ್ಮಣೇನಾಪವರ್ಜಿತಮ್ ।
ಕಥಂ ನ ಲಿಪ್ಯೇಯಮಹಂ ದೋಷೇಣ ಮಹತಾದ್ಯ ವೈ ॥ ೧೦೭ ॥

ರಾಜ– ಇವರಿಬ್ಬರ ಬ್ರಾಹ್ಮಣರ ವಿವಾದವು ಬಹಳ ಕಠಿಣವಾದ, ಅಗಾಧವಾದ ಸಮಸ್ಯೆಯಾಗಿದೆ. ಇವರಿಬ್ಬರ ಸಮಸ್ಯೆಯನ್ನು ಬಿಡಿಸಲಾಗುತ್ತಿಲ್ಲ. ಈ ಜಾಪಕ ಬ್ರಾಹ್ಮಣನು ಹಠವನ್ನು ಬಿಡುತ್ತಿಲ್ಲ. ಇವನು ಕೊಟ್ಟದ್ದನ್ನು ನಾನು ಸ್ವೀಕರಿಸದಿದ್ದರೆ ಮಹಾಪಾಪವು ಬಂದೇ ಬರುತ್ತದೆ. ಇದಕ್ಕೇನು ಮಾಡಲಿ? ಈ ದೋಷದಿಂದ ಲಿಪ್ತನಾಗದಿರುವಂತೆ ನಾನೇನು ಮಾಡಲಿ ಎಂದು ಚಿಂತಾಗ್ರಸ್ಥನಾದನು.

ಭೀಷ್ಮಃ

ತೌ ಚೋವಾಚ ಸ ರಾಜರ್ಷಿಃ ಕೃತಕಾರ್ಯೌ ಗಮಿಷ್ಯಥಃ ।
ನೇದಾನೀಂ ಮಾಮಿಹಾಸಾದ್ಯ ರಾಜಧರ್ಮೋ ಭವೇನ್ನೃಷಾ ॥ ೧೦೮ ॥

ಸ್ವಧರ್ಮಃ ಪರಿಪಾಲ್ಯಶ್ಚ ರಾಜ್ಞಾಮೇಷ ವಿನಿಶ್ಚಯಃ ।
ವಿಪ್ರಧರ್ಮಶ್ಚ ಸುಗುರುರ್ಮಾಮನಾತ್ಮಾನಮಾವಿಶತ್ ॥ ೧೦೯ ॥

ಭೀಷ್ಮ– ಆ ಪ್ರಸಂಗದಲ್ಲಿ ಆಲೋಚಿಸಿ ರಾಜನು ಆ ಇಬ್ಬರು ಪುರುಷರನ್ನು ನೋಡಿ ನಿಮ್ಮ ವಿವಾದವು ಪರಿಹಾರವಾದಂತಾಯಿತು. ನಿಮ್ಮಿಬ್ಬರ ವಿಷಯದಲ್ಲಿ ರಾಜನಾದ ನಾನು ತೀರ್ಮಾನಿಸಿದ್ದೇನೆ. ಆದರೆ ನನ್ನ ರಾಜಧರ್ಮವು ತಪ್ಪಬಾರದು. ನನಗೆ ಅದನ್ನು ರಕ್ಷಿಸಬೇಕಾದದ್ದು ಕರ್ತವ್ಯವಾಗಿದೆ. ಆದರೆ ಬುದ್ಧಿಹೀನನಾದ ನನ್ನನ್ನು ಕಠಿಣವಾದ ಬ್ರಾಹ್ಮಣನ ಪ್ರತಿಗ್ರಹವು ಬಂಧಿಸುತ್ತಿದೆಯಲ್ಲ! ನಾನೇನು ಮಾಡಲಿ? ಎಂದು ಹೇಳಿದನು.

ಬ್ರಾಹ್ಮಣಃ

ಗೃಹಾಣ ಧಾರಯೇಽಹಂ ತೇ ಯಾಚಿತಂ ತೇ ಶ್ರುತಂ ಮಯಾ ।
ನ ಚೇದ್ ಗ್ರಹೀಷ್ಯಸೇ ರಾಜನ್ ಶಪಿಷ್ಯೇ ತ್ವಾಂ ನ ಸಂಶಯಃ ॥೧೧೦॥

ಬ್ರಾಹ್ಮಣ– ರಾಜನೇ, ನೀನು ಮೊದಲು ಕೊಡು ಎಂದು ಕೇಳಿದೆ. ನಾನೂ ಕೊಡುತ್ತೇನೆಂದು ಪ್ರತಿಜ್ಞೆ ಮಾಡಿದೆ. ಈಗ ಸಾಲತೀರಿಸಬೇಕಾದವನು ನಾನು. ನೀನು ತೆಗೆದುಕೊಳ್ಳದಿದ್ದರೆ ನನ್ನ ಶಾಪಕ್ಕೆ ತಪ್ಪದೇ ಗುರಿಯಾಗುತ್ತಿ ಎಂದನು.

ರಾಜಾ

ಧಿಗ್ ರಾಜಧರ್ಮಂ ಯಸ್ಯಾಯಂ ಕಾರ್ಯಸ್ಯೇಹ ವಿನಿಶ್ಚಯಃ ।
ಇತ್ಯರ್ಥಂ ಮೇ ಗ್ರಹೀತವ್ಯಂ ಕಥಂ ತುಲ್ಯಂ ಭವೇದಿತಿ ॥ ೧೧೧ ॥

ರಾಜ– ಈ ರಾಜಧರ್ಮಕ್ಕೆ ಧಿಕ್ಕಾರವಿರಲಿ. ಇಂತಹ ಧರ್ಮಸಂಕಟವು ಒದಗಿ ಬಂದಿದೆ. ಏನು ಮಾಡಬೇಕೆಂದು ನಿರ್ಣಯಿಸಲು ನನ್ನಿಂದಾಗುತ್ತಿಲ್ಲ. ನಮ್ಮಿಬ್ಬರ ಪ್ರತಿಗ್ರಹವು ಸಮಾನವಾಗಿದ್ದರೆ ರಾಜಧರ್ಮ ಸಮ್ಮತವೆಂದು ಸ್ವೀಕರಿಸಬಹುದಿತ್ತು.

ಏಷ ಪಾಣಿರಪೂರ್ವಂ ಭೋ ನಿಕ್ಷೇಪಾರ್ಥಂ ಪ್ರಸಾರಿತಃ ।
ಯನ್ಮೇ ಧಾರಯಸೇ ವಿಪ್ರ ತದಿದಾನೀಂ ಪ್ರದೀಯತಾಮ್ ॥ ೧೧೨ ॥

ಬ್ರಾಹ್ಮಣನೇ, ಪ್ರತಿಗ್ರಹಕ್ಕಾಗಿ ನನ್ನ ಪಾಣಿಯನ್ನು ಎಂದಿಗೂ ನೀಡಿರಲಿಲ್ಲ. ಇದೋ ಈಗ ನಿನ್ನಲ್ಲಿ ಪ್ರತಿಗ್ರಹಕ್ಕಾಗಿ ನೀಡುತ್ತಿದ್ದೇನೆ. ನನಗಾಗಿ ನೀನು ಯಾವ ವಿಷಯದಲ್ಲಿ ಸಾಲಗಾರ ಎಂದು ಎಣಿಸಿ ದಾನ ಮಾಡಲು ಮುಂದಾಗಿರುತ್ತೀಯೋ ಅದನ್ನು ಕೊಟ್ಟುಬಿಡು.

ಬ್ರಾಹ್ಮಣಃ

ಸಂಹಿತಾಂ ಜಪತಾ ಯಾವಾನ್ಮಯಾ ಕಶ್ಚಿದ್ಗುಣಃ ಕೃತಃ ।
ತತ್ ಸರ್ವಂ ಪ್ರತಿಗೃಹ್ಣೀಷ್ವ ಯದಿ ಕಿಂಚಿದಿಹಾಸ್ತಿ ಮೇ ॥ ೧೧೩ ॥

ಬ್ರಾಹ್ಮಣ– ರಾಜೇಂದ್ರನೇ, ಗಾಯತ್ರೀ ಜಪದಿಂದ ನನಗೇನಾದರೂ ಫಲವು ಲಭಿಸಿರುವುದಾದರೆ ಅದೆಲ್ಲವೂ ನಿನಗೆ ಸೇರಲಿ. ಅದೆಲ್ಲವನ್ನೂ ನೀನೇ ಸ್ವೀಕರಿಸು ಎಂದನು.

ರಾಜಾ

ಜಲಮೇತನ್ನಿಪತಿತಂ ಮಮ ಪಾಣೌ ದ್ವಿಜೋತ್ತಮ ।
ಸಮಮಸ್ತು ಸಹೈವಾಸ್ತು ಪ್ರತಿಗೃಹ್ಣಾತು ವೈ ಭವಾನ್ ॥ ೧೧೪ ॥

ರಾಜ– ಬ್ರಾಹ್ಮಣೋತ್ತಮನೇ, ನಿನ್ನ ಜಪದ ಫಲವನ್ನು ದಾನ ಮಾಡಲು ನನ್ನ ಕೈಯಲ್ಲಿ ದಾನಜಲವನ್ನು ಹಾಕಿರುವಿ. ನಮ್ಮಿಬ್ಬರಲ್ಲಿ ದಾನ-ಪ್ರತಿಗ್ರಹಗಳು ಸಮಾನವಾಗಿರಬೇಕು. ಆದ್ದರಿಂದ ನೀನು ಕೊಟ್ಟಾಯಿತು. ನನ್ನಿಂದ ಏನನ್ನಾದರೂ ಸ್ವೀಕರಿಸು.

ವಿರೂಪಃ

ಕಾಮಕ್ರೋಧೌ ವಿದ್ಧಿ ನೌ ತ್ವಮಾವಾಭ್ಯಾಂ ಕಾರಿತೋ ಭವಾನ್ ।
ಜಿಜ್ಞಾಸಮಾನೌ ಯುವಯೋರ್ಮನೋऽಚ್ಛಂ ತು ದ್ವಿಜೋತ್ತಮ॥೧೧೫॥

ವಿರೂಪ– ರಾಜೇಂದ್ರನೇ, ನೀನು ಕಳವಳವನ್ನು ಹೊಂದಬೇಡ. ನಮ್ಮಿಬ್ಬರನ್ನು ಕಾಮ-ಕ್ರೋಧವೆಂದು ತಿಳಿ. ನಿಮ್ಮಿಬ್ಬರ ಸ್ವಚ್ಛ ಮನಸ್ಸನ್ನು ಪರೀಕ್ಷಿಸುವುದಕ್ಕಾಗಿ ಹೀಗೆ ನಾವು ಮಾಡಿದೆವು.

ನಾಯಂ ಧಾರಯತೇ ಕಿಂಚಿಜ್ಜಿಜ್ಞಾಸಾ ತ್ವತ್ಕೃತೇ ಕೃತಾ ।
ಕಾಲೋ ಧರ್ಮಸ್ತಥಾ ಮೃತ್ಯುಃ ಕಾಮಕ್ರೋಧೌ ತಥಾ ಯುವಾಮ್ ॥

ನಿಮ್ಮಿಬ್ಬರ ಧರ್ಮದ ದಾರ್ಢ್ಯವನ್ನು ಪರೀಕ್ಷಿಸಲು ಇಂತಹ ಜಿಜ್ಞಾಸೆಯಿಂದ ವಿಕೃತ ವೇಷದಲ್ಲಿ ಬಂದಿದ್ದೇವೆ. ಪರಸ್ಪರ ನಿಮ್ಮಿಬ್ಬರ ವಿವಾದವನ್ನು ಕಾಲಪುರುಷನು, ಧರ್ಮನು, ಮೃತ್ಯುವು, ಕಾಮಕ್ರೋಧಗಳು ಅರ್ಥಾತ್ ಇದರ ಅಭಿಮಾನಿಗಳು ನೋಡಿದ್ದಾರೆ. ಜಗತ್ತೆಲ್ಲವೂ ನೋಡುತ್ತಿದೆ.

ಸರ್ವಮನ್ಯೋನ್ಯನಿಕಷೇ ನಿಕೃಷ್ಟಂ ಪಶ್ಯತೇ ತವ ।
ಗಚ್ಛ ಲೋಕಾನ್ ಜಿತಾನ್ ಸ್ವೇನ ಕರ್ಮಣಾ ಯತ್ರ ವಾಂಛಸಿ ॥೧೧೭॥

ನಿಮ್ಮಿಬ್ಬರಿಗೂ ಸಮಾನವಾದ ಫಲಗಳೇ ದೊರೆಯುವಂತಾಗಲಿ. ನಿಮ್ಮಿಬ್ಬರಿಗೂ ಪುಣ್ಯಲೋಕಗಳು ಸಮಾನವಾಗಿರಲಿ. ಈ ವಿಕೃತನೆಂಬ ವ್ಯಕ್ತಿಯು ನನಗೆ

ಕೊಡಬೇಕಾದುದೇನೂ ಇಲ್ಲ. ನಿಮ್ಮಿಬ್ಬರ ಧರ್ಮದ ಜಿಜ್ಞಾಸೆಯಿಂದ ಹೀಗೆ ವರ್ತಿಸಿದ್ದೇವೆ. ನಾವೆಲ್ಲರೂ ನಿಮ್ಮ ಧರ್ಮದ ನಿರ್ಣಯಕ್ಕೋಸ್ಕರವೇ ಆಗಮಿಸಿದವರನ್ನಾಗಿ ತಿಳಿಯಿರಿ. ನಿಮ್ಮ ಸತ್ಕರ್ಮದ ಫಲವಾಗಿ ಸಮಸ್ತ ಲೋಕಗಳನ್ನು ಸಂಚರಿಸಿರಿ.

ಸರ್ವೇಷಾಮುಪರಿ ಸ್ಥಾನಂ ಬ್ರಹ್ಮಣೋऽವ್ಯಕ್ತಜನ್ಮನಃ ।
ಯುವಯೋಃ ಸ್ಥಾನಮತುಲಂ ನಿರ್ದ್ವಂದ್ವಮಮಲಾತ್ಮಕಮ್ ।
ಸರ್ವೇ ಗಚ್ಛಾಮ ಯತ್ರ ಸ್ವಾನ್ ಸ್ವಾಂಲ್ಲೋಕಾಂಶ್ಚ ತಥಾ ವಯಮ್ ॥

ಪುನರ್ಜನ್ಮರಹಿತವಾದ ಪರಬ್ರಹ್ಮನ ಸ್ಥಾನವು ಎಲ್ಲಕ್ಕಿಂತಲೂ ಮಿಗಿಲಾದುದು. ಅದಕ್ಕೆ ಎಣೆಯಿಲ್ಲ. ದ್ವಂದ್ವರಹಿತವಾಗಿದೆ, ನಿರ್ಮಲವಾಗಿದೆ. ಆ ಸ್ಥಾನವು ನಿಮ್ಮಿಬ್ಬರಿಗೂ ಲಭಿಸಲಿ. ನಾವು ನಮ್ಮ ಲೋಕಗಳಿಗೆ ತೆರಳುತ್ತೇವೆ. ನೀವು ನಿಮ್ಮ ಇಷ್ಟದಂತೆ ನಿಮ್ಮ ಕರ್ಮದಿಂದ ಜಯಿಸಿದ ಉತ್ತಮ ಲೋಕಕ್ಕೆ ಹೋಗಿ ನೆಲೆಸಿರಿ.

ತತೋ ಧರ್ಮಯಮಾದ್ಯಾಸ್ತೇ ವಾಕ್ಯಮೂಚುರ್ನೃಪದ್ವಿಜೌ ।
ಅಸ್ಮಾಕಂ ಯಃ ಸ್ಮೃತೋ ಮೂರ್ಧಾ ಬ್ರಹ್ಮಲೋಕಮಿತಿ ಸ್ಮೃತಮ್ ॥

ತತ್ರಸ್ಥೌ ಹಿ ಭವಂತೌ ಹಿ ಯುವಾಭ್ಯಾಂ ನಿರ್ಜಿತಾ ವಯಮ್ ।
ಯುವಯೋಃ ಕಾಮ ಆಪನ್ನಸ್ತತ್ಕಾಮ್ಯಮವಿಶಂಕಯಾ ॥ ೧೨೦ ॥

ಹೀಗೆ ಹೇಳಿದ ಬಳಿಕ ಧರ್ಮ-ಯಮಾದಿಗಳೆಲ್ಲರೂ ಮತ್ತೊಮ್ಮೆ ರಾಜನು, ಬ್ರಾಹ್ಮಣನನ್ನು ನೋಡಿ ಮಹಾತ್ಮರೇ ನಮಗೆಲ್ಲಾ ಶಿರಸ್ಥಾನದಲ್ಲಿರುವ ಬ್ರಹ್ಮಲೋಕವೆಂದು ಪ್ರಖ್ಯಾತವಾದ ಉತ್ತಮ ಸ್ಥಾನವನ್ನು ನೀವು ಸೇರುತ್ತೀರಿ. ನೀವಿಬ್ಬರು ನಮ್ಮ ಐದೂ ಜನರನ್ನು ಜಯಿಸಿದ್ದೀರಿ. ನೀವು ಬಯಸಿದ ಲೋಕಗಳಿಗೆಲ್ಲಾ ನಿಸ್ಸಂದೇಹವಾಗಿ ಸಾಗಬಹುದು. ನಿಮಗೆಲ್ಲವೂ ಸಿದ್ಧಿಸಿದೆ.

ಭೀಷ್ಮಃ

ಜಾಪಕಾನಾಂ ಫಲಾವಾಪ್ತಿರ್ಮಯಾ ತೇ ಸಂಪ್ರಕೀರ್ತಿತಾ ।
ಗತಿಃ ಸ್ಥಾನಂ ಚ ಲೋಕಾಶ್ಚ ಜಾಪಕೇನ ಯಥಾ ಜಿತಾಃ ॥ ೧೨೧ ॥

ಭೀಷ್ಮ– ಧರ್ಮಪುತ್ರನೇ, ಜಪಶೀಲರಿಗೆ ಲಭಿಸುವ ಫಲಗಳು, ಅವರು ಹೋಗುವ ಗತಿಗಳು, ಜಯಿಸುವ ಲೋಕಗಳು- ಇವೆಲ್ಲವನ್ನೂ ನಿನಗೆ ತಿಳಿಸಿದ್ದೇನೆ.

ಪ್ರಯಾತಿ ಸಂಹಿತಾಧ್ಯಾಯೀ ಬ್ರಾಹ್ಮಣಂ ಪರಮೇಷ್ಠಿನಮ್ ।
ಅಥ ವಾಗ್ನಿಂ ಸಮಾಯಾತಿ ಸೂರ್ಯಮಾವಿಶತೇಽಪಿ ವಾ ॥ ೧೨೨ ॥

ಗಾಯತ್ರಿಮಂತ್ರವನ್ನು ಜಪಿಸುವವರು ಪರಬ್ರಹ್ಮಸ್ಥಾನವನ್ನೇ ಹೊಂದುತ್ತಾರೆ. ಅವರು ಇಚ್ಛೆಪಟ್ಟರೆ ಅಗ್ನಿಲೋಕವನ್ನೂ, ಸೂರ್ಯಲೋಕವನ್ನೂ ಹೊಂದಬಹುದು.

ಸ ತೈಜಸೇನ ಭಾವೇನ ಯದಿ ತತ್ರಾಶ್ನುತೇ ರತಿಮ್ ।
ಗುಣಾಂಸ್ತೇಷಾಂ ಸಮಾದತ್ತೇ ರಾಗೇಣ ಪ್ರತಿಮೋಹಿತಃ ॥ ೧೨೩ ॥

ಅವರು ಅಲ್ಲಿಗೆ ತೇಜೋರೂಪದಿಂದ ಹೋಗಿ ರಮಣ ಮಾಡುತ್ತಾ ಆ ಲೋಕದಲ್ಲಿರುವ ಎಲ್ಲಾ ಸುಖಗಳನ್ನು ಆಸಕ್ತಿಯಿಂದ ಅನುಭವಿಸುತ್ತಾರೆ.

ಏವಂ ಸೋಮೇ ತಥಾ ವಾಯೌ ಭೂಮ್ಯಾಕಾಶಶರೀರಗಃ ।
ಸರಾಗಸ್ತತ್ರ ವಸತಿ ಗುಣಾಂಸ್ತೇಷಾಂ ಸಮಾಚರನ್ ॥ ೧೨೪ ॥

ಇದರಂತೆ ಅವರು ಜಪದ ಫಲದಿಂದ ಸೋಮಲೋಕವನ್ನು, ವಾಯು-ಲೋಕವನ್ನು, ಭೂಮ್ಯಾಕಾಶಗಳಲ್ಲಿಯೂ ಆಸಕ್ತರಾಗಿ ಅಲ್ಲಿನ ಗುಣಗಳನ್ನು ತಮ್ಮಲ್ಲಿ ಹೊಂದುತ್ತಾರೆ.

ಅಥ ತತ್ರ ವಿರಾಗೀ ಸ ಗಚ್ಛತಿ ತ್ವಥ ಸಂಶಯಮ್ ।
ಪರಮವ್ಯಯಮಿಚ್ಛನ್ ಸ ತಮೇವಾವಿಶತೇ ಪುನಃ ॥ ೧೨೫ ॥

ಇಲ್ಲಿ ಇದ್ದಾಗ ಅಲ್ಲಿನ ಸೌಖ್ಯಗಳೆಲ್ಲವೂ ಅಶಾಶ್ವತವಾದವುಗಳು ಎಂದು ನಿಶ್ಚಯ ಬುದ್ಧಿಯನ್ನು ಹೊಂದಿ, ವೈರಾಗ್ಯವನ್ನು ಹೊಂದಿದ ಅವರು ಅದಕ್ಕಿಂತಲೂ ಶ್ರೇಷ್ಠವಾದ ನಾಶರಹಿತವಾದ ಪರಮಪದಕ್ಕೆ ಹೋಗುತ್ತಾರೆ.

ಅಮೃತಾಚ್ಚಾಮೃತಂ ಪ್ರಾಪ್ತಃ ಶೀತೀಭೂತೋ ನಿರಾತ್ಮವಾನ್ ।
ಬ್ರಹ್ಮಭೂತಃ ಸ ನಿರ್ದ್ವಂದ್ವಃ ಸುಖೀ ಶಾಂತೋ ನಿರಾಮಯಃ ॥ ೧೨೬ ॥

ಅಮೃತಕ್ಕೂ ಅಮೃತಪ್ರಾಯವಾದ ಆ ಉತ್ತಮಸ್ಥಾನವನ್ನು ಹೊಂದಿದ ಬಳಿಕ ಆಸೆ, ಅಹಂಕಾರಗಳೆಲ್ಲ ನೀಗುತ್ತವೆ. ದ್ವಂದ್ವರಹಿತವಾಗಿ ಪರಮಾತ್ಮನಲ್ಲಿ ಆಸಕ್ತರಾಗಿ ನಿರಾಮಯರಾಗಿ ಶಾಂತಿ-ಸೌಖ್ಯಗಳಿಂದ ರಮಿಸುತ್ತಾರೆ.

ಬ್ರಹ್ಮಸ್ಥಾನಮನಾವರ್ತಮೇಕಮಕ್ಷರಸಂಜ್ಞಕಮ್ ।
ಅದುಃಖಮಜರಂ ಶಾಂತಂ ಸ್ಥಾನಂ ತತ್ ಪ್ರತಿಪದ್ಯತೇ ॥ ೧೨೭ ॥

ಆ ಪರಬ್ರಹ್ಮನ ಸ್ಥಾನವನ್ನು ಪಡೆದ ಬಳಿಕ ಪುನರಾವರ್ತಿಯು ಇರುವುದಿಲ್ಲ. ಆ ಸ್ಥಾನವು ಅಸಮಾನವಾದುದು, ನಾಶರಹಿತವಾದುದು, ದುಃಖರಹಿತವಾದುದು, ಅಚಲವಾದುದು, ಶಾಂತವಾದುದು. ಅಂತಹ ಸ್ಥಾನವನ್ನು ಹೊಂದುತ್ತಾರೆ.

ಚತುರ್ಭಿರ್ಲಕ್ಷಣೈರ್ಹೀನಂ ತಥಾ ಸಷೋಡಶೈಃ ।
ಪುರುಷಂ ಸಮತಿಕ್ರಮ್ಯ ಆಕಾಶಂ ಪ್ರತಿಪದ್ಯತೇ ॥ ೧೨೮ ॥

ಆ ಪರಮಪದವಾದರೂ ಅಂಡಜ, ಸ್ವೇದಜ, ಉದ್ಭಿಜ, ಜರಾಯುಜ ಎಂಬ ನಾಲ್ಕು ಲಕ್ಷಣಗಳಿಂದ ಕೂಡಿದ ಸಂಸಾರದಿಂದ ದೂರವಾಗಿದೆ. ಏಕಾದಶ ಇಂದ್ರಿಯಗಳು, ಪಂಚಭೂತಗಳೆಂಬ ಷೋಡಶ ಕಲಾರಹಿತವಾಗಿದೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎಂಬ ಅರಿಷಡ್ವರ್ಗದಿಂದ ದೂರವಾಗಿದೆ. ಇವುಗಳಿಂದ ದೂರವಾದ ಪರಬ್ರಹ್ಮನನ್ನು ಹೊಂದಿ ಸಮಸ್ತ ದಿಕ್ಕುಗಳಲ್ಲೂ ಬೆಳಗುವ ಆಕಾಶಪದವಾಚ್ಯನಾದ ಪರಮಾತ್ಮನನ್ನು ಪ್ರತೀಕಾಲನೆನಿಸಿದ ಜೀವನು ಗಾಯತ್ರೀ ಮಂತ್ರದ ಫಲವಾಗಿ ಹೊಂದುತ್ತಾನೆ.

ಅಥ ವೇಚ್ಛತಿ ರಾಗಾತ್ಮಾ ಸರ್ವಂ ತದಧಿತಿಷ್ಠತಿ ।
ಯಚ್ಚ ಪ್ರಾರ್ಥಯತೇ ತಚ್ಚ ಮನಸಾ ಪ್ರತಿಪದ್ಯತೇ ॥ ೧೨೯ ॥

ಅಥವಾ ಅವನು ಬಯಸಿದ ಬೇರೆ ಎಲ್ಲಾ ಕಾಮನೆಗಳನ್ನು ಹೊಂದುತ್ತಾನೆ. ಯಾವುದ್ಯಾವುದನ್ನು ಮನಸ್ಸಿನಲ್ಲಿ ಚಿಂತಿಸುತ್ತಾನೋ ಅವೆಲ್ಲವನ್ನೂ ಹೊಂದುವ ಫಲವನ್ನು ಗಾಯತ್ರೀಮಂತ್ರದ ಫಲದಿಂದ ಹೊಂದುತ್ತಾನೆ.

ಅಥ ವಾ ವೀಕ್ಷತೇ ಲೋಕಾನ್ ಸರ್ವಾನ್ನಿರಯಸಂಸ್ಥಿತಾನ್ ।
ನಿಃಸ್ಪೃಹಃ ಸರ್ವತೋ ಮುಕ್ತಸ್ತತ್ರೈವ ರಮತೇ ಸುಖೀ ॥ ೧೩೦ ॥

ಅಥವಾ ಸಮಸ್ತ ಲೋಕಗಳನ್ನು ನಿರಯಲೋಕಗಳು ಎಂದು ಭಾವಿಸಿ, ನಿಸ್ಪೃಹನಾಗಿ, ಎಲ್ಲ ವಿಷಯಪದಾರ್ಥಗಳಿಂದ ಮುಕ್ತನಾಗಿ ವೈಕುಂಠಲೋಕದಲ್ಲಿ ಭಗವಂತನಿಂದಲೇ ಸಂಬಂಧವನ್ನು ಹೊಂದಿ ಸುಖಿಯಾಗಿ ರಮಣಮಾಡುತ್ತಾನೆ.

ಏವಮೇಷಾ ಮಹಾರಾಜ ಜಾಪಕಸ್ಯ ಗತಿರ್ಯಥಾ ।
ಏತತ್ತೇ ಸರ್ವಮಾಖ್ಯಾತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೧೩೧ ॥

ಧರ್ಮರಾಜನೇ, ಜಾಪಕನು ಹೊಂದಿದ ಗತಿ ಎಂಬುದನ್ನು ತಿಳಿಸುವ ಮೂಲಕ ಗಾಯತ್ರೀಮಂತ್ರದ ಮಹಿಮೆಯನ್ನೂ, ನರಕಗಳೆಂದರೆ ಏನು ಎಂಬುದನ್ನು ವಿಸ್ತಾರವಾಗಿ ವಿವರಿಸಿದ್ದೇನೆ. ಪುನಃ ಮತ್ತೇನು ಕೇಳಲು ಇಚ್ಛೆಯುಳ್ಳವನಾಗಿರುವಿ?

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಪಂಚವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಇಪ್ಪತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತಾರನೆಯ ಅಧ್ಯಾಯ

ಜಾಪಕೋಪಾಖ್ಯಾನ

ಯುಧಿಷ್ಠಿರಃ

ಕಿಮುತ್ತರಂ ತದಾ ತೌ ಸ್ಮ ಚಕ್ರತುಸ್ತೇನ ಭಾಷಿತೇ ।
ಬ್ರಾಹ್ಮಣೋ ವಾಥ ವಾ ರಾಜಾ ತನ್ಮೇ ಬ್ರೂಹಿ ಪಿತಾಮಹ ॥ ೧ ॥

ಯುಧಿಷ್ಠಿರ– ಪಿತಾಮಹನೇ, ವಿರೂಪನು ಹಾಗೆ ಹೇಳಿದ ಬಳಿಕ ಇಕ್ಷ್ವಾಕು ರಾಜ ಮತ್ತು ಬ್ರಾಹ್ಮಣನು ಏನು ಮಾಡಿದರು? ಯಾವ ಉತ್ತರವನ್ನು ಅವನಿಗೆ ನೀಡಿದರು? ಅದನ್ನು ನನಗೆ ತಿಳಿಸಿರಿ.

ಅಥ ವಾ ತೌ ಗತೌ ತತ್ರ ಯದೇತತ್ ಕೀರ್ತಿತಂ ತ್ವಯಾ ।
ಸಂವಾದೋ ವಾ ತಯೋಃ ಕೋಽಭೂತ್ ಕಿಂ ವಾ ತೌ ತತ್ರ ಚಕ್ರತುಃ ॥

ಅಥವಾ ಅವರು ಯಾವ ಗತಿಯನ್ನು ಹೊಂದಿದರು? ಅವರಿಬ್ಬರಲ್ಲಿ ನಡೆದ ಸಂವಾದಗಳೇನು? ನೀವು ಹೇಳಿದ ಆ ಕಥೆಯಲ್ಲಿರುವ ನನ್ನ ಜಿಜ್ಞಾಸೆಯನ್ನು ಪೂರ್ಣ

ಮಾಡಿರಿ. ಇಕ್ಷ್ವಾಕು ರಾಜನು ಮತ್ತು ಬ್ರಾಹ್ಮಣನು ಬಳಿಕ ಏನು ಮಾಡಿದರು ಎಂದು ತಿಳಿಯಲು ಕುತೂಹಲವಿದೆ.

ಭೀಷ್ಮಃ

ತಥೇತ್ಯೇವಂ ಪ್ರತಿಶ್ರುತ್ಯ ಧರ್ಮಂ ಸಂಪೂಜ್ಯ ಚಾಭಿಭೋ ।
ಯಮಂ ಕಾಲಂ ಚ ಮೃತ್ಯುಂ ಚ ಸ್ವರ್ಗಂ ಸಂಪೂಜ್ಯ ಚಾರ್ಹತಃ ॥ ೩ ॥

ಭೀಷ್ಮ– ಬಳಿಕ ಬ್ರಾಹ್ಮಣನು ಹಾಗೆಯೇ ಆಗಲೆಂದು ಕಾಲ, ಧರ್ಮ, ಮೃತ್ಯು ದೇವತೆಗಳನ್ನು, ಸ್ವರ್ಗವನ್ನು ಪೂಜಿಸಿ, ನೀವು ಹೇಳಿದಂತೆ ಆಗಲಿ ಎಂದನು.

ಪೂರ್ವಂ ಯೇ ಚಾಪರೇ ತತ್ರ ಸಮೇತಾ ಬ್ರಾಹ್ಮಣರ್ಷಭಾಃ ।
ಸರ್ವಾನ್ ಸಂಪೂಜ್ಯ ಶಿರಸಾ ರಾಜಾನಂ ಸೋಽಬ್ರವೀದ್ವಚಃ ॥ ೪ ॥

ಅಲ್ಲಿ ನೆರೆದಿದ್ದ ಇತರ ಬ್ರಾಹ್ಮಣರನ್ನು ಪೂಜಿಸಿ ರಾಜನನ್ನು ನೋಡಿ, ರಾಜನಿಗೆ ಹೀಗೆ ಹೇಳಿದನು.

ಫಲೇನಾನೇನ ಸಂಯುಕ್ತೋ ರಾಜರ್ಷೇ ಗಚ್ಛ ಪುಣ್ಯತಾಮ್ ।
ಭವತಾ ಚಾಭ್ಯನುಜ್ಞಾತೋ ಜಪೇಯಂ ಭೂಯ ಏವ ಹಿ ॥ ೫ ॥

ರಾಜರ್ಷಿಯೇ, ನನ್ನ ಜಪಫಲದಿಂದ ನೀನು ಉತ್ತಮಫಲವನ್ನು ಹೊಂದು. ನನಗೆ ತಿರುಗಿ ಇದೇ ಜಪದಲ್ಲಿರಲು ಅನುಮತಿಯನ್ನು ನೀಡು. ನಿನ್ನ ಅನುಮತಿಯಿಂದ ನಾನು ಪುನಃ ಜಪದಲ್ಲೇ ನಿರತನಾಗುತ್ತೇನೆ.

ವರಶ್ಚ ಮಮ ಪೂರ್ವಂ ಹಿ ದೇವ್ಯಾ ದತ್ತೋ ಮಹಾಬಲ ।
ಶ್ರದ್ಧಾ ತೇ ಜಪತೋ ನಿತ್ಯಂ ಭವಿತೇತಿ ವಿಶಾಂ ಪತೇ ॥ ೬ ॥

ಹಿಂದೆ ಇದೇ ಜಪದಲ್ಲಿ ನಿತ್ಯಶ್ರದ್ಧೆ ಉಂಟಾಗಲಿ ಎಂದು ಸಾವಿತ್ರೀ ದೇವಿಯು ನನಗೆ ವರವನ್ನು ಕೊಟ್ಟಿರುವಳು.

ರಾಜಾ

ಯದ್ಯೇವಮಫಲಾ ಸಿದ್ಧಿಃ ಶ್ರದ್ಧಾ ಚ ಜಪಿತುಂ ತವ ।
ಗಚ್ಛ ವಿಪ್ರ ಮಯಾ ಸಾರ್ಧಂ ಜಾಪಕಂ ಫಲಮಾಪ್ನುಹಿ ॥ ೭ ॥

ರಾಜ– ಎಲೈ ವಿಪ್ರೋತ್ತಮನೇ, ನನಗೆ ಜಪದ ಫಲವನ್ನು ಕೊಟ್ಟಿದ್ದರಿಂದ ಇಲ್ಲಿಯ ತನಕ ಮಾಡಿದ ನಿನ್ನ ಜಪದ ಫಲವು ನಾಶವಾಯಿತೆಂದು ನೀನು ಪುನಃ ಜಪವನ್ನು ಮಾಡಲು ಸಂಕಲ್ಪಿಸಿದ್ದಲ್ಲಿ, ನೀನು ನನಗೆ ಕೊಟ್ಟ ಜಪದ ಫಲದಲ್ಲಿ ನನ್ನೊಡನೆ ನೀನೂ ಅರ್ಧವನ್ನು ಅನುಭವಿಸು. ನನ್ನ ಜೊತೆಗೆ ಆಗಮಿಸಿ ನಿನ್ನ ಜಪದ ಫಲವನ್ನು ಹೊಂದುವವನಾಗು.

ಬ್ರಾಹ್ಮಣಃ

ಕೃತಃ ಪ್ರಯತ್ನಃ ಸುಮಹಾನ್ ಸರ್ವೇಷಾಂ ಸನ್ನಿಧಾವಿಹ ।
ಸಹ ತುಲ್ಯಫಲೌ ಚಾವಾಂ ಗಚ್ಛಾವೋ ಯತ್ರ ನೌ ಗತಿಃ ॥ ೮ ॥

ಬ್ರಾಹ್ಮಣ– ರಾಜೇಂದ್ರನೇ, ಹಿಂದೆ ನೀನು ನಾನು ಜಪದ ಫಲವನ್ನು ಕೊಡುವುದರ ಮೊದಲೇ ನಿನ್ನ ಕರ್ಮಫಲವನ್ನು ಕೊಡುವುದಕ್ಕೆ ಎಷ್ಟೋ ಪ್ರಯತ್ನವನ್ನು ಮಾಡಿರುವೆ. ನಾವಿಬ್ಬರೂ ಇನ್ನೊಂದು ಜನ್ಮದಲ್ಲಿ ಸಮಾನವಾದ ಫಲವನ್ನು ಹೊಂದಿ ಸ್ವರ್ಗಕ್ಕೆ ಹೋಗೋಣ.

ಭೀಷ್ಮಃ

ವ್ಯವಸಾಯಂ ತಯೋಸ್ತತ್ರ ವಿದಿತ್ವಾ ತ್ರಿದಶೇಶ್ವರಃ ।
ಸಹ ದೇವೈರುಪಯಯೌ ಲೋಕಪಾಲೈಸ್ತಥೈವ ಚ ॥ ೯ ॥

ಭೀಷ್ಮ– ಇವರ ಈ ನಿಶ್ಚಯವಾದ ಅಭಿಪ್ರಾಯವನ್ನು ತಿಳಿದ ದೇವೇಂದ್ರನು ಎಲ್ಲಾ ದಿಕ್ಪಾಲಕರಿಂದ, ದೇವತೆಗಳಿಂದ ಒಡಗೂಡಿ ಅವರು ಇರುವ ಸ್ಥಳಕ್ಕೆ ಆಗಮಿಸಿದನು.

ಸಾಧ್ಯಾ ವಿಶ್ವೇಽಥ ಮರುತೋ ವಾಕ್ಯಾನಿ ಸುಮಹಾಂತಿ ಚ ।
ನದ್ಯಃ ಶೈಲಾಃ ಸಮುದ್ರಾಶ್ಚ ತೀರ್ಥಾನಿ ವಿವಿಧಾನಿ ಚ ॥ ೧೦ ॥

ತಪಾಂಸಿ ಸಂಯೋಗವಿಧಿರ್ವೇದಾಃ ಸ್ತೋಭಾಃ ಸರಸ್ವತೀ ।
ನಾರದಃ ಪರ್ವತಶ್ಚೈವ ವಿಶ್ವಾವಸುರ್ಹಹಾ ಹುಹೂಃ ।
ತುಂಬುರುಪ್ರಮುಖಾಶ್ಚೈವ ಹಾಹಾ ಹೂಹೂಸ್ತಥೈವ ಚ ।
ಆಜಗಾಮ ಚ ದೇವೇಶೋ ಬ್ರಹ್ಮಾ ವೇದಮಯೋಽವ್ಯಯಃ ॥ ೧೧ ॥

ಸಾಧ್ಯರು, ವಿಶ್ವೇದೇವತೆಗಳು, ಮರುತ್ತುಗಳು ಇವರೆಲ್ಲರೂ ಭಾರತ, ಪುರಾಣಾದಿ ಪೌರುಷೇಯ ವಾಕ್ಯಗಳ ಅಭಿಮಾನಿ ದೇವತೆಗಳು, ನದ್ಯಭಿಮಾನಿಗಳು, ಸಮುದ್ರಾಭಿಮಾನಿಗಳು, ವಿವಿಧ ತೀರ್ಥಾಭಿಮಾನಿ ದೇವತೆಗಳು, ಸಮಸ್ತ ತಪಸ್ಸುಗಳು, ಸಮೀಚೀನವಾದ ಯೋಗವಿಧಿಗಳು, ವೇದಗಳು, ಸಾಮಗಾನದಲ್ಲಿ ಬರುವ ಹಾ ಊ ಇತ್ಯಾದಿ ಸ್ತೋಭಾಕ್ಷರಗಳ ಅಭಿಮಾನಿದೇವತೆಗಳು, ಸರಸ್ವತೀ ದೇವಿ, ನಾರದರು, ಪರ್ವತ ಎಂಬ ಮುನಿ, ವಿಶ್ವಾವಸು, ಹಹಾ, ಹುಹೂ, ತುಂಬುರು ಮುಂತಾದ ಪ್ರಮುಖರಾದವರು, ಹಾಹಾ-ಹುಹೂ ಗಂಧರ್ವರ ಜೊತೆಗೆ ಆಗಮಿಸಿದರು. ನಾಶರಹಿತನಾದ, ದೇವೇಶನಾದ ಚತುರ್ಮುಖಬ್ರಹ್ಮನೂ ಅಲ್ಲಿಗೆ ಆಗಮಿಸಿದನು.

ಗಂಧರ್ವಶ್ಚಿತ್ರಸೇನಶ್ಚ ಪರಿವಾರಗಣೈರ್ಯುತಃ ।
ನಾಗಾಃ ಸಿದ್ಧಾಶ್ಚ ಮುನಯೋ ದೇವದೇವಃ ಪ್ರಜಾಪತಿಃ ।
ವಿಷ್ಣುಃ ಸಹಸ್ರಶೀರ್ಷಶ್ಚ ದೇವೋಽಚಿಂತ್ಯಃ ಸಮಾಗಮತ್ ॥ ೧೨ ॥

ಗಂಧರ್ವರು, ಚಿತ್ರಸೇನನು, ಪರಿವಾರ ಗಣಗಳಿಂದ ಸಹಿತರಾಗಿ ಆಗಮಿಸಿದರು. ನಾಗರು, ಸಿದ್ಧರು, ಮುನಿಗಳು, ದೇವದೇವನಾದ ಪ್ರಜಾಪತಿಯು, ಅಚಿಂತ್ಯ ಮಹಿಮನೂ, ಸಹಸ್ರಶೀರ್ಷನೂ ಆದ ವಿಷ್ಣುವು ಎಲ್ಲರೂ ಅಲ್ಲಿಗೆ ಬಂದು ಸೇರಿದರು.

ಅವಾದ್ಯಂತಾಂತರಿಕ್ಷೇ ಚ ಭೇರ್ಯಸ್ತೂರ್ಯಾಣಿ ಚಾಭಿಭೋ ।
ಪುಷ್ಪವರ್ಷಾಣಿ ದಿವ್ಯಾನಿ ತತ್ರ ತೇಷಾಂ ಮಹಾತ್ಮನಾಮ್ ।
ನನೃತುಶ್ಚಾಪ್ಸರಃಸಂಘಾಸ್ತತ್ರ ತತ್ರ ಸಮಂತತಃ ॥ ೧೩ ॥

ಈ ಸಂಭ್ರಮದ ಸಮಯದಲ್ಲಿ ಅಂತರಿಕ್ಷದಿಂದ ದಿವ್ಯವಾದ ವಾದ್ಯಘೋಷಗಳು ಮೊಳಗಿದವು. ದೇವತೆಗಳು ಪುಷ್ಪವೃಷ್ಟಿಯನ್ನು ಸುರಿದರು. ಅಪ್ಸರೆಯರು ನರ್ತಿಸಿದರು. ಎಲ್ಲರೂ ಸಾಮೂಹಿಕವಾಗಿ ಸಂಭ್ರಮಿಸಿದರು.

ಅಥ ಸ್ವರ್ಗಸ್ತಥಾ ರೂಪೀ ಬ್ರಾಹ್ಮಣಂ ವಾಕ್ಯಮಬ್ರವೀತ್ ।
ಸಂಸಿದ್ಧಸ್ತ್ವಂ ಮಹಾಭಾಗ ತ್ವಂ ಚ ಸಿದ್ಧಸ್ತಥಾ ನೃಪ ॥ ೧೪ ॥

ಆದೇ ಪ್ರಸಂಗದಲ್ಲಿ ಮೂರ್ತಿಮತ್ತಾದ ಸ್ವರ್ಗವು ಬ್ರಾಹ್ಮಣನನ್ನೂ, ರಾಜನನ್ನು ನೋಡಿ ನೀವಿಬ್ಬರೂ ಯೋಗಸಿದ್ಧಿಯನ್ನು ಹೊಂದಿದಿರಿ ಎಂದು ಹೇಳಿತು.

ಅಥ ತೌ ಸಹಿತೌ ರಾಜನ್ನನ್ಯೋನ್ಯೇನ ವಿಧಾನತಃ ।
ವಿಷಯಪ್ರತಿಸಂಹಾರಮುಭಾವೇವ ಪ್ರಚಕ್ರತುಃ ॥ ೧೫ ॥

ಪ್ರಾಣಾಪಾನೌ ತಥೋದಾನಂ ಸಮಾನಂ ವ್ಯಾನಮೇವ ಚ ।
ಏವಂ ತಾನ್ಮನಸಿ ಸ್ಥಾಪ್ಯ ದಧತುಃ ಪ್ರಾಣಯೋರ್ಮನಃ ॥ ೧೬ ॥

ಧರ್ಮಪುತ್ರನೇ, ಬ್ರಾಹ್ಮಣನೂ ರಾಜನು ಹೀಗೆ ಪರಸ್ಪರವಾಗಿ ತಮಗೆ ಕ್ಷೇಮವನ್ನು ಆಚರಿಸಿಕೊಂಡು ಪ್ರಪಂಚದ ವಿಷಯದಿಂದ ಎಲ್ಲಾ ಇಂದ್ರಿಯಗಳನ್ನು ನಿಗ್ರಹಿಸಿಕೊಂಡು ಪ್ರಾಣಾದಿ ಪಂಚವಾಯುಗಳನ್ನು ಹೃದಯದಲ್ಲಿ ನಿಲ್ಲಿಸಿ, ಮನಸ್ಸನ್ನು ಪ್ರಾಣಾಪಾನವೆಂಬ ವಾಯುವಿನಲ್ಲಿ ನೆಲೆಗೊಳಿಸಿದರು.

ಉಪಸ್ಥಿತಕೃತೌ ತತ್ರ ನಾಸಿಕಾಗ್ರಮಧೋ ಭ್ರುವೌ ।
ಕುಂಕುಣ್ಯಾಂ ಚೈವ ಮನಸಾ ಶನೈರ್ಧಾರಯತಃ ಸ್ಮ ತೌ ॥ ೧೭ ॥

ನಿಶ್ಚೇಷ್ಟಾಭ್ಯಾಂ ಶರೀರಾಭ್ಯಾಂ ಸ್ಥಿರದೃಷ್ಟೀ ಸಮಾಹಿತೌ ।
ಜಿತಾಸನೌ ತಥಾಧಾಯ ಮೂರ್ಧನ್ಯಾತ್ಮಾನಮೇವ ಚ ॥ ೧೮ ॥

ವಾಯುಗಳನ್ನು ನಿಗ್ರಹಿಸಿಕೊಂಡು ಮೂಗಿನ ತುದಿಯಲ್ಲಿ ಬೀರಲ್ಪಟ್ಟ ದೃಷ್ಟಿಗಳಾಗಿ, ಹುಬ್ಬಿಗೂ ದೃಷ್ಟಿಗೂ ಮಧ್ಯದಲ್ಲಿರುವ ಸಂಧಿಸ್ಥಾನದಲ್ಲಿ ಪ್ರಾಣವಾಯುವಿನ ಜೊತೆಗೆ ಮನಸ್ಸನ್ನು ತಂದು ಸೇರಿಸಿದರು. ಹೀಗೆ ಅವರೀರ್ವರೂ ಯೋಗದಲ್ಲಿ ನಿರತರಾಗಿರಲು ಸ್ಥಿರವಾದ ದೃಷ್ಟಿಯಿಂದ ಭಗವಂತನನ್ನೇ ಧ್ಯಾನಿಸುತ್ತಾ ದೇಹದಿಂದ ನಿಶ್ಚೇಷ್ಟರಾದರು. ಆಸನಜಯವನ್ನು ಸಂಪಾದಿಸಿ ಸಮಾಧಿಯಿಂದ ತಮ್ಮ ಪ್ರಾಣವನ್ನು ಸುಷುಮ್ನೆಯ ಮೂಲಕ ಮೂರ್ಧಸ್ಥಾನಕ್ಕೆ ಸೇರಿಸಿದರು.

ತಾಲುದೇಶಮಥೋದ್ದಾಲ್ಯ ಬ್ರಾಹ್ಮಣಸ್ಯ ಮಹಾತ್ಮನಃ ।
ಜ್ಯೋತಿರ್ಜ್ವಾಲಾ ಸುಮಹತೀ ಜಗಾಮ ತ್ರಿದಿವಂ ತದಾ ॥ ೧೯ ॥

ತಲೆಯ ಮಧ್ಯದ ಕೆಳಭಾಗದಲ್ಲಿರುವ ತಾಲುದೇಶದಲ್ಲಿ ಪ್ರಾಣವನ್ನು ನೇಮಿಸಿಕೊಂಡು ಇರುತ್ತಿರಲು ಮಹಾತ್ಮನಾದ ಬ್ರಾಹ್ಮಣನ ಆತ್ಮವು ಜ್ವಲಿಸುವ ಜ್ಯೋತಿಯ ಆಕಾರವನ್ನು ತಾಳಿ ಆ ಪ್ರಸಂಗದಲ್ಲಿ ಸ್ವರ್ಗವನ್ನು ಹೊಂದಿತು.

ಹಾಹಾಕಾರಸ್ತತೋ ದಿಕ್ಷು ಸರ್ವಾಸು ಸುಮಹಾನಭೂತ್ ।
ತಜ್ಜ್ಯೋತಿಃ ಸ್ತೂಯಮಾನಂ ಸ್ಮ ಬ್ರಹ್ಮಾಣಂ ಪ್ರಾವಿಶತ್ತದಾ ॥ ೨೦ ॥

ಆ ಪ್ರಸಂಗದಲ್ಲಿ ಸಮಸ್ತ ದಿಕ್ಕುಗಳಲ್ಲಿ ದೊಡ್ಡ ಹಾಹಾಕಾರವು ಉಂಟಾಯಿತು. ಬ್ರಾಹ್ಮಣನ ನಡುನೆತ್ತಿಯನ್ನು ಜ್ವಲಿಸಿಕೊಂಡು ಹೊರಟ ಜ್ಯೋತಿಯು ಎಲ್ಲಾ ದೇವತೆಗಳ ಸ್ತುತಿವಾಕ್ಯಗಳೊಡನೆ ಪರಬ್ರಹ್ಮನಲ್ಲಿ ಸೇರಿತು.

ತತಃ ಸ್ವಾಗತಮಿತ್ಯಾಹ ತತ್ತೇಜಃ ಸ ಪಿತಾಮಹಃ ।
ಪ್ರಾದೇಶಮಾತ್ರಂ ಪುರುಷಂ ಪ್ರತ್ಯುದ್ಗಮ್ಯ ವಿಶಾಂಪತೇ ॥ ೨೧ ॥

ಆ ತೇಜಸ್ಸು ಆಗಮಿಸುವಾಗ ಪಿತಾಮಹನೆನಿಸಿದ ಬ್ರಹ್ಮನು ಅದನ್ನು ಕುರಿತು ಸ್ವಾಗತ ಎಂದು ಹೇಳಿ ಪ್ರಾದೇಶ ಪರಿಮಿತಿಯುಳ್ಳ ಆ ದಿವ್ಯಾಕೃತಿಯನ್ನು ಸತ್ಕರಿಸಿದನು.

ಭೂಯಶ್ಚೈವಾಪರಂ ಪ್ರಾಹ ವಚನಂ ಮಧುರಂ ಸ್ಮ ಸಃ ।
ಜಾಪಕೈಸ್ತುಲ್ಯಫಲತಾ ಯೋಗಾನಾಂ ನಾತ್ರ ಸಂಶಯಃ ॥ ೨೨ ॥

ಪುನಃ ಮಧುರವಾದ ವಚನವನ್ನು ಆ ದಿವ್ಯಾಕೃತಿಯನ್ನು ಕುರಿತು ಹೇಳಿದನು. ಜಪಶೀಲರಿಗೂ, ಯೋಗಿಗಳಿಗೂ ಸಮಾನವಾದ ಫಲವುಂಟು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಯೋಗಸ್ಯ ತಾವದೇತೇಭ್ಯಃ ಫಲಂ ಪ್ರತ್ಯಕ್ಷದರ್ಶನಮ್ ।
ಜಾಪಕಾನಾಂ ವಿಶಿಷ್ಟಂ ತು ಪ್ರತ್ಯುತ್ಥಾನಂ ಸಮಾಧಿಕಮ್ ॥ ೨೩ ॥

ಉಷ್ಯತಾಂ ಮಯಿ ಚೇತ್ಯುಕ್ತ್ವಾ ಚೇತಯತ್ಸ ತತಃ ಪುನಃ ।
ಅಥಾಸ್ಯ ಪ್ರವಿವೇಶಾಸ್ಯಂ ಬ್ರಾಹ್ಮಣೋ ವಿಗತಜ್ವರಃ ॥ ೨೪ ॥

ಯೋಗಫಲವು ಇಲ್ಲಿಯೇ ಪ್ರತ್ಯಕ್ಷವಾಗಿದೆ. ಜಾಪಕರಲ್ಲಿ ಇರುವ ವೈಶಿಷ್ಟ್ಯವೇನೆಂದರೆ ಜಾಪಕರಿಗೆ ಬ್ರಹ್ಮದೇವರೇ ಎದ್ದು ಬಂದು ಸ್ವಾಗತವನ್ನು ಹೇಳುತ್ತಾರೆ ಎಂಬುದು. ಈ ರೀತಿಯಾದ ಪ್ರಿಯವಾಕ್ಯಗಳನ್ನು ನುಡಿದು, ಇನ್ನು ಮುಂದೆ ನೀನು ನನ್ನ ಬಳಿಯೇ ಸುಖವಾಗಿ ವಾಸಿಸು ಎನ್ನುತ್ತಾ ಪರಬ್ರಹ್ಮನು ತನ್ನ ಬಾಯನ್ನು ತೆರೆದನು. ಕೂಡಲೇ ಬ್ರಾಹ್ಮಣನು ಯಾವುದೇ ಸಂಶಯವಿಲ್ಲದೆ ಬ್ರಹ್ಮನ ಮುಖವನ್ನು ಪ್ರವೇಶಿಸಿದನು.

ರಾಜಾಪ್ಯೇತೇನ ವಿಧಿನಾ ಭಗವಂತಂ ಪಿತಾಮಹಮ್ ।
ಯಥೈವ ದ್ವಿಜಶಾರ್ದೂಲಸ್ತಥೈವ ಪ್ರಾವಿಶತ್ತದಾ ॥ ೨೫ ॥

ಇದೇ ಕ್ರಮದಿಂದ ರಾಜನೂ ಬ್ರಹ್ಮನ ಮುಖದಲ್ಲಿ ಪ್ರವೇಶಿಸಿದನು.

ಸ್ವಯಂಭುವಮಥೋ ದೇವಾ ಅಭಿವಾದ್ಯ ತತೋಽಬ್ರುವನ್ ।
ಜಾಪಕಾರ್ಥಮಯಂ ಯತ್ನಸ್ತದರ್ಥಂ ವಯಮಾಗತಾಃ ॥ ೨೬ ॥

ಅಲ್ಲಿ ನೆರೆದಿದ್ದ ದೇವತೆಗಳೆಲ್ಲರೂ ಬ್ರಹ್ಮದೇವನಿಗೆ ವಂದಿಸಿ ಜಪಮಾಡಿದವರಲ್ಲಿ ಬ್ರಹ್ಮದೇವರು ಹೇಗೆ ಎದ್ದುನಿಂತು ಗೌರವಿಸುತ್ತಾರೆಂಬುದನ್ನು ನೋಡಲು ನಾವು ಇಲ್ಲಿಗೆ ಆಗಮಿಸಿದೆವು. ಜಾಪಕರಿಗಿರುವ ವಿಶೇಷವನ್ನು ತೋರಲು ನಮ್ಮ ಈ ಆಗಮನದ ಪ್ರಯತ್ನವು ನಡೆದಿದೆ.

ಕೃತಪೂಜಾವಿಮೌ ತುಲ್ಯಂ ತ್ವಯಾ ತುಲ್ಯಫಲಾವಿಮೌ ।
ಯೋಗಜಾಪಕಯೋರ್ದೃಷ್ಟಂ ಫಲಂ ಸುಮಹದದ್ಯ ವೈ ।
ಸರ್ವಾಂಲ್ಲೋಕಾನತೀತ್ಯೈತೌ ಗಚ್ಛೇತಾಂ ಯತ್ರ ವಾಂಛಿತಮ್ ॥ ೨೭ ॥

ಈ ಪ್ರಸಂಗದಲ್ಲಿ ಬ್ರಾಹ್ಮಣನಿಗೂ, ರಾಜನಿಗೂ ಸಮಾನವಾದ ಫಲವನ್ನುಂಟು ಮಾಡಿ ಇಬ್ಬರನ್ನೂ ಸಮಸ್ಥಾನದಲ್ಲಿ ಕುಳ್ಳಿರಿಸಿ ಸಮಾನವಾದ ಪೂಜೆಯನ್ನೇ ಮಾಡಿದಂತಾಗಿದೆ. ಯೋಗಿಗಳಿಗೂ, ಜಾಪಕರಿಗೂ ಉಂಟಾಗುವ ಮಹಾಫಲವನ್ನು ನಾವು ಪ್ರತ್ಯಕ್ಷವಾಗಿ ನೋಡಿದಂತಾಯಿತು. ಈ ಮಹಾತ್ಮರು ಸಮಸ್ತ ಲೋಕಗಳನ್ನು ಸಂಚರಿಸುತ್ತಾ ತಮ್ಮ ಇಷ್ಟಬಂದ ಗತಿಗೆ ಹೋಗಲು ಅರ್ಹರಾಗಿದ್ದಾರೆ ಎಂದನು.

ಬ್ರಹ್ಮಾ

ಮಹಾಸ್ಮೃತಿಂ ಪಠೇದ್ಯಸ್ತು ತಥೈವಾನುಸ್ಮೃತಿಂ ಶುಭಾಮ್ ।
ತಾವಪ್ಯೇತೇನ ವಿಧಿನಾ ಗಚ್ಛೇತಾಂ ಮತ್ಸಲೋಕತಾಮ್ ॥ ೨೮ ॥

ಬ್ರಹ್ಮಾ– ದೇವತೆಗಳೇ, ಯಾರು ಜಾಪಕಬ್ರಾಹ್ಮಣನ ಚರಿತ್ರೆ ಎಂಬ ಈ ಮಹಾಸ್ಮೃತಿಯನ್ನು, ಅವನಿಗೆ ಅನುಕೂಲವಾಗಿರುವ ಇಕ್ಷ್ವಾಕು ರಾಜನ ಚರಿತ್ರೆ ಎಂಬ ಅನುಸ್ಮೃತಿಯನ್ನು ಅಧ್ಯಯನ ಮಾಡಿದರೂ ಇದೇ ರೀತಿಯಾದ ವಿಧಿಯಿಂದ ನನ್ನ ಲೋಕವನ್ನೇ ಹೊಂದುತ್ತಾರೆ.

ಯಶ್ಚ ಯೋಗೇ ಭವೇದ್ಭಕ್ತಃ ಸೋಽಪಿ ನಾಸ್ಯತ್ರ ಸಂಶಯಃ ।
ವಿಧಿನಾನೇನ ದೇಹಾಂತೇ ಮಮ ಲೋಕಾನವಾಪ್ನುಯಾತ್ ।
ಗಮ್ಯತಾಂ ಸಾಧಯಿಷ್ಯಾಮಿ ಯಥಾಸ್ಥಾನಾನಿ ಸಿದ್ಧಯೇ ॥ ೨೯ ॥

ಯೋಗಭಕ್ತಿಯುಳ್ಳವರು ತಮ್ಮ ದೇಹಾವಸಾನ ಸಮಯದಲ್ಲಿ ಇದೇ ವಿಧದಿಂದ ನನ್ನ ಲೋಕಗಳನ್ನು ಹೊಂದುತ್ತಾರೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ನೀವು ನಿಮ್ಮ ಕಾರ್ಯಗಳಿಗಾಗಿ ನಿಮ್ಮ ಸ್ಥಾನಕ್ಕೆ ಹೊರಡಿರಿ ಎಂದು ಆದೇಶಿಸಿದನು.

ಭೀಷ್ಮಃ

ಇತ್ಯುಕ್ತ್ವಾ ಸ ತದಾ ದೇವಸ್ತತ್ರೈವಾಂತರಧೀಯತ ।
ಆಮಂತ್ರ್ಯ ತಂ ತತೋ ದೇವಾ ಯಯುಃ ಸ್ವಂ ಸ್ವಂ ನಿವೇಶನಮ್ ॥

ಭೀಷ್ಮ– ಈ ರೀತಿಯಾದ ಬ್ರಹ್ಮನ ಮಾತನ್ನು ಕೇಳಿಸಿಕೊಂಡ ದೇವತೆಗಳು ಅಲ್ಲಿಯೇ ಅದೃಶ್ಯರಾದರು. ಬ್ರಹ್ಮನನ್ನು ತಮ್ಮ ಸ್ಥಾನಕ್ಕೆ ಆಗಮಿಸಬೇಕೆಂದು ಆಹ್ವಾನಿಸಿ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು.

ತೇ ಚ ಸರ್ವೇ ಮಹಾತ್ಮಾನೋ ಧರ್ಮಂ ಸತ್ಕೃತ್ಯ ತತ್ರ ವೈ ।
ಪೃಷ್ಠತೋಽನುಯಯೂ ರಾಜನ್ ಸರ್ವೇ ಸುಪ್ರೀತಮಾನಸಾಃ ॥ ೩೧ ॥

ಮಹಾತ್ಮರಾದ ಅವರೆಲ್ಲರೂ ಧರ್ಮವನ್ನು ಸತ್ಕರಿಸಿ ಪ್ರೀತರಾಗಿ ಅವನನ್ನು ಹಿಂಬಾಲಿಸಿ ಹೊರಟರು. ಅವರೆಲ್ಲರೂ ಸಂತುಷ್ಟವಾದ ಮನಸ್ಸುಳ್ಳವರಾಗಿದ್ದರು.

ಏತತ್ಫಲಂ ಜಾಪಕಾನಾಂ ಗತಿಶ್ಚೈವ ಪ್ರಕೀರ್ತಿತಾ ।
ಯಥಾಶ್ರುತಂ ಮಹಾರಾಜ ಕಿಂ ಭೂಯಃ ಶ್ರೋತುಮಿಚ್ಛಸಿ ॥ ೩೨ ॥

ಜಪಶೀಲರಿಗೆ ಲಭಿಸುವ ಫಲವು, ಅವರಿಗೆ ದೊರೆಯುವ ಸದ್ಗತಿಯು ಈ ತರವಾಗಿದೆ. ನಾನು ಕೇಳಿದಂತೆ ಹೇಳಿದ್ದೇನೆ. ಮತ್ತೇನು ಕೇಳಬಯಸುತ್ತಿ ಹೇಳು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಷಡ್‌ವಿಶೋಂಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಇಪ್ಪತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೇಳನೆಯ ಅಧ್ಯಾಯ

ಜ್ಞಾನಯೋಗಾದಿಗಳ ಫಲವನ್ನು, ಭಗವತ್‌ಸ್ವರೂಪವನ್ನು ತಿಳಿಯುವ ಮಾರ್ಗವನ್ನು ಭೀಷ್ಮರು ಮನು-ಬೃಹಸ್ಪತಿಗಳ ಸಂವಾದದ ಮೂಲಕ ಧರ್ಮರಾಜನಿಗೆ ತಿಳಿಸಿದುದು.

ಯುಧಿಷ್ಠಿರಃ

ಕಿಂ ಫಲಂ ಜ್ಞಾನಯೋಗಸ್ಯ ವೇದಾನಾಂ ನಿಯಮಸ್ಯ ಚ ।
ಭೂತಾತ್ಮಾ ವಾ ಕಥಂ ಜ್ಞೇಯಸ್ತನ್ಮೇ ಬ್ರೂಹಿ ಪಿತಾಮಹ ॥ ೧ ॥

ಯುಧಿಷ್ಠಿರ– ತಾತನೇ, ಜ್ಞಾನಯೋಗಕ್ಕೆ ಫಲವೇನು? ವೇದನಿಯಮವೆನಿಸಿದ ಅಗ್ನಿಹೋತ್ರಾದಿಗಳಿಗೆ ಲಭಿಸುವ ಫಲವೇನು? ಭೂತಾತ್ಮನನ್ನು ತಿಳಿಯುವ ಉಪಾಯವೇನು? ಇವೆಲ್ಲವನ್ನೂ ನನಗೆ ತಿಳಿಸು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಮನೋಃ ಪ್ರಾಜಾಪತೇರ್ವಾದಂ ಮಹರ್ಷೇಶ್ಚ ಬೃಹಸ್ಪತೇಃ ॥ ೨ ॥

ಭೀಷ್ಮ– ಧರ್ಮರಾಜನೇ, ಇದೇ ವಿಷಯದಲ್ಲಿ ಹಿಂದೆ ಮನು-ಬೃಹಸ್ಪತಿಗೆ ನಡೆದ ಸಂವಾದರೂಪವಾದ ಇತಿಹಾಸವನ್ನು ಹೇಳುತ್ತಾರೆ.

ಪ್ರಜಾಪತಿಂ ಶ್ರೇಷ್ಠತಮಂ ಪೃಥಿವ್ಯಾಂ
ದೇವರ್ಷಿಸಂಘಪ್ರವರೋ ಮಹರ್ಷಿಃ ।
ಬೃಹಸ್ಪತಿಃ ಪ್ರಶ್ನಮಿಮಂ ಪುರಾಣಂ
ಪಪ್ರಚ್ಛ ಶಿಷ್ಯೋಽಥ ಗುರುಂ ಪ್ರಣಮ್ಯ ॥ ೩ ॥

ಹಿಂದೆ ದೇವಗುರುವಾದ ಬೃಹಸ್ಪತಿಯು ತನಗೆ ಗುರುವಾದ ಚೇಷ್ಟತಮನಾದ ಮನುಪ್ರಜಾಪತಿಯ ಬಳಿಗೆ ಹೋಗಿ ನಮಸ್ಕರಿಸಿ ಗುರುವಿನ ಬಳಿ ಶಿಷ್ಯತ್ವವನ್ನು ಹೊಂದಿ ಈ ರೀತಿಯಾದ ಪ್ರಶ್ನೆಯನ್ನು ಕೇಳಿದನು.

ಯತ್ ಕಾರಣಂ ಮಂತ್ರವಿಧಿಃ ಪ್ರವೃತ್ತೋ
ಜ್ಞಾನೇ ಫಲಂ ಯತ್ ಪ್ರವದಂತಿ ವಿಪ್ರಾಃ ।

ಯನ್ಮಂತ್ರಶಬ್ದೈರಕೃತ ಪ್ರಕಾಶಂ
ತದುಚ್ಯತಾಂ ಮೇ ಭಗವನ್ ಯಥಾವತ್ ॥ ೪ ॥

ಆಚಾರ್ಯಪುರುಷರೇ, ಯಾವ ಕಾರಣದಿಂದ ವೇದೋಕ್ತವಾದ ಮಂತ್ರವಿಧಿಗಳು ಪ್ರವೃತ್ತಿಯನ್ನು ಹೊಂದಿವೆ? ಜ್ಞಾನಕ್ಕೆ ದೊರೆಯುವ ಫಲವೇನೆಂದು ಜ್ಞಾನಿಗಳು ತಿಳಿಸುತ್ತಾರೆ? ಯಾವುದನ್ನು ಮಂತ್ರಶಬ್ದವೆನಿಸಿದ ವೇದಗಳಿಂದ ಪ್ರಸಿದ್ಧಿಪಡಿಸಿದ್ದಾರೆ. ಪೂಜ್ಯರಾದ ನೀವು ಇವೆಲ್ಲವನ್ನೂ ಯಥಾವತ್ತಾಗಿ ಹೇಳಿರಿ.

ಯದರ್ಥಶಾಸ್ತ್ರಾಗಮಮಂತ್ರವಿದ್ಭಿ-
ರ್ಯಜ್ಞೈರನೇಕೈರ್ವರಗೋಪ್ರದಾನೈಃ ।
ಫಲಂ ಮಹದ್ಭಿರ್ಯದುಪಾಸ್ಯತೇ ಚ
ತತ್ಕಿಂ ಕಥಂ ವಾ ಭವಿತಾ ಕ್ವ ವಾ ತತ್ ॥ ೫ ॥

ಅರ್ಥಶಾಸ್ತ್ರ, ಆಗಮ, ಮಂತ್ರಾದಿಗಳನ್ನೆಲ್ಲಾ ತಿಳಿದ ಮಹಾತ್ಮರು ಯಜ್ಞ-ದಾನಾದಿಗಳನ್ನು ನಡೆಸಿ ಪಡೆಯುವ ಫಲ ಯಾವುದು? ಆ ಫಲವು ಎಲ್ಲಿಂದ ಲಭಿಸುತ್ತದೆ? ಹೇಗೆ ಲಭಿಸುತ್ತದೆ?

ಮಹೀ ಮಹೀಜಾಃ ಪವನೋऽಂತರಿಕ್ಷಂ
ಜಲೌಕಸಶ್ಚೈವ ಜಲಂ ದಿವಂ ಚ ।
ದಿವೌಕಸಶ್ಚೈವ ಯತಃ ಪ್ರಸೂತಾ-
ಸ್ತದುಚ್ಯತಾಂ ಮೇ ಭಗವನ್ ಪುರಾಣಮ್ ॥ ೬ ॥

ಈ ಭೂಮಿಯು, ಭೂಮಿಯಲ್ಲಿ ಹುಟ್ಟುವ ಪದಾರ್ಥಗಳು, ಗಾಳಿ, ಅಂತರಿಕ್ಷ, ನೀರು, ನೀರಿನೊಳಗಿರುವ ಜಂತುಗಳು, ದೇವಲೋಕ, ದೇವಲೋಕದಲ್ಲಿರುವ ದೇವತೆಗಳು ಇವರೆಲ್ಲರೂ ಯಾರ ದೆಸೆಯಿಂದ ಹುಟ್ಟನ್ನು ಪಡೆದಿದ್ದಾರೆ? ಈ ಪ್ರಾಚೀನವಾದ ಇತಿಹಾಸವನ್ನು ಪೂಜ್ಯರೇ, ನನಗೆ ತಿಳಿಸಿರಿ.

ಜ್ಞಾನಂ ಯತಃ ಪ್ರಾರ್ಥಯತೇ ನರೋ ವೈ
ತತಸ್ತದರ್ಥಾ ಭವತಿ ಪ್ರವೃತ್ತಿಃ ।
ನ ಚಾಪ್ಯಹಂ ವೇದ ಪರಂ ಪುರಾಣಂ
ಮಿಥ್ಯಾಪ್ರವೃತ್ತಿಂ ಚ ಕಥಂ ನು ಕುರ್ಯಾಮ್ ॥ ೭ ॥

ಮನುಷ್ಯನಾದವನು ಪ್ರಾರ್ಥಿಸಬೇಕಾದದ್ದು ಜ್ಞಾನವನ್ನಷ್ಟೆ! ಆದ್ದರಿಂದ ಎಲ್ಲಾ ಪ್ರವೃತ್ತಿಗಳು ಜ್ಞಾನಕ್ಕಾಗಿಯೇ. ನನಗಾದರೂ ಸರ್ವೋತ್ತಮನಾದ, ಪುರಾಣ ಪುರುಷನಾದ ಆ ಭಗವಂತನ ಐಶ್ವರ್ಯ-ಶಕ್ತಿಗಳು ಯಾವುದೂ ತಿಳಿದಿರುವುದಿಲ್ಲ. ಹೀಗೆ ತಿಳಿಯಲಾರದ ವಿಚಾರದಲ್ಲಿ ಸುಮ್ಮನೆ ಪ್ರವೃತ್ತಿಯನ್ನು ಹೇಗೆ ನಾನು ಹೊಂದಲು ಸಾಧ್ಯ ?

ಋಕ್ಸಾಮಸಂಘಾಂಶ್ಚ ಯಜೂಂಷಿ ಚಾಹಂ
ಛಂದಾಂಸಿ ನಕ್ಷತ್ರಗತಿಂ ನಿರುಕ್ತಮ್ ।
ಅಧೀತ್ಯ ಚ ವ್ಯಾಕರಣಂ ಸಕಲ್ಪಂ
ಶಿಕ್ಷಾಂ ಚ ಭೂತಪ್ರಕೃತಿಂ ನ ವೇದ್ಮಿ ॥ ೮ ॥

ಋಗ್ವೇದ, ಸಾಮವೇದ ಮೊದಲಾದ ವೇದಸಮುದಾಯವು, ಛಂದಸ್ಸು, ಯಜುರ್ವೇದ, ಜ್ಯೋತಿಷ್ಯ, ನಿರುಕ್ತ, ವ್ಯಾಕರಣ, ಕಲ್ಪಸೂತ್ರ, ಶಿಕ್ಷೆಗಳೆಂಬ ವೇದಾಂಗಗಳನ್ನೆಲ್ಲ ನಾನು ಅಧ್ಯಯನ ಮಾಡಿದ್ದೇನೆ.

ಸ ಮೇ ಭವಾನ್ ಶಂಸತು ಸರ್ವಮೇತ-
ಜ್ಜ್ಞಾನೇ ಫಲಂ ಕರ್ಮಣಿ ವಾ ಯದಸ್ತಿ ।
ಯಥಾ ಚ ದೇಹಾಚ್ಚ್ಯವತೇ ಶರೀರೀ
ಪುನಃ ಶರೀರಂ ಚ ಯಥಾಭ್ಯುಪೈತಿ ॥ ೯ ॥

ಆದರೆ ಈ ಜ್ಞಾನಗಳ ಫಲವೇನು ಎನ್ನುವುದನ್ನು ಸರಿಯಾಗಿ ತಿಳಿದಿರುವುದಿಲ್ಲ. ಕರ್ಮದ ಫಲವೇನು ಎಂಬುದನ್ನೂ ತಿಳಿದಿರುವುದಿಲ್ಲ. ಅದೆಲ್ಲವನ್ನೂ ಹೇಳಲು ನೀವು ಅರ್ಹರಾಗಿರುತ್ತೀರಿ. ಜೀವನು ಈ ದೇಹವನ್ನು ತ್ಯಜಿಸಿದ ಬಳಿಕ ಪುನಃ ಶರೀರವನ್ನು ಹೇಗೆ ಹೊಂದುತ್ತಾನೆ ಎಂಬ ವಿಚಾರವನ್ನು ತಿಳಿಸಿರಿ.

ಮನುಃ

ಯದ್ಯತ್ ಪ್ರಿಯಂ ಯಸ್ಯ ಸುಖಂ ತದಾಹು-
ಸ್ತದೇವ ದುಃಖಂ ಪ್ರವದಂತ್ಯನಿಷ್ಟಮ್ ।
ಇಷ್ಟಂ ಚ ಮೇ ಸ್ಯಾದಿತರಚ್ಚ ನ ಸ್ಯಾ-
ದೇತತ್ಕೃತೇ ಕರ್ಮವಿಧಿಃ ಪ್ರವೃತ್ತಃ ।

ಇಷ್ಟಂ ತ್ವನಿಷ್ಟಂ ಚ ನ ಮಾಂ ಭಜೇತೇ-
ತ್ಯೇತತ್ಕೃತೇ ಜ್ಞಾನವಿಧಿಃ ಪ್ರವೃತ್ತಃ ॥ ೧೦ ॥

ಮನು– ಬೃಹಸ್ಪತಿಯೇ ಕೇಳು. ಲೋಕದಲ್ಲಿ ಒಬ್ಬನಿಗೆ ಯಾವುದು ಪ್ರಿಯವೋ ಅದೇ ಸುಖವೆನಿಸುತ್ತದೆ. ಅಪ್ರಿಯವಾದುದು ಅವನಿಗೆ ದುಃಖವೆನಿಸುತ್ತದೆ. ಸಾಂಸಾರಿಕ ಸುಖಗಳು ನನಗೆ ಇರಲಿ, ಸಾಂಸಾರಿಕ ದುಃಖಗಳು ನನಗೆ ಬೇಡ. ಈ ರೀತಿಯಾಗಿ ಸಾಂಸಾರಿಕ ಸುಖ-ದುಃಖಗಳ ಉದ್ದೇಶವನ್ನು ಹಿಡಿದು ಕರ್ಮಗಳು ಪ್ರವೃತ್ತವಾಗಿವೆ. ಈ ಸಾಂಸಾರಿಕವಾದ ಇಷ್ಟಾನಿಷ್ಟಗಳು ನನಗೆ ಬೇಡ ಎಂದು ತಿಳಿಸುವ ದೃಷ್ಟಿಯಿಂದ ಜ್ಞಾನವಿಧಿಯು ಪ್ರವೃತ್ತಿಯನ್ನು ಹೊಂದಿದೆ.

ಕಾಮಾತ್ಮಕಾಶ್ಛಂದಸಿ ಕರ್ಮಯೋಗಾ
ಏಭಿರ್ವಿಮುಕ್ತಃ ಪರಮಶ್ನುವೀತ ।
ನಾನಾವಿಧೇ ಕರ್ಮಪಥೇ ಸುಖಾರ್ಥೀ
ನರಃ ಪ್ರವೃತ್ತೋ ನ ಪರಂ ಪ್ರಯಾತಿ ।
ಫಲಂ ಹಿ ತತ್ ಕರ್ಮಪಥಾದಪೇತಂ
ನಿರಾಶಿಷಂ ಬ್ರಹ್ಮಪರಂ ಹ್ಯವಶ್ಯಮ್ ॥ ೧೧ ॥

ವೇದೋಕ್ತಕರ್ಮದ ವಿಧಿಗಳೆಲ್ಲಾ ಲೌಕಿಕವಾದ ಆಸೆಯುಳ್ಳವರಿಗೆ ಸಂಬಂಧಿಸಿವೆ. ಈ ಆಸೆಯನ್ನು ಮೀರಿದವರು ಗುಣಪರಿಪೂರ್ಣನಾದ ಪರಮಾತ್ಮನ ಮೂಲಕ ಸುಖವನ್ನು ಅನುಭವಿಸುತ್ತಾರೆ. ಅವನನ್ನು ಮರೆತು ಲೌಕಿಕ ಸುಖಾಭಿಲಾಷೆಯಿಂದ ಕರ್ಮಮಾರ್ಗವನ್ನು ಅನುಸರಿಸುವವನು ನರಕಕ್ಕೆ ಹೋಗುತ್ತಾನೆ. ಸಮಸ್ತ ಲೌಕಿಕ ಆಸೆಗಳನ್ನು ತೊರೆದ ಪುರುಷನು ಪರಬ್ರಹ್ಮನನ್ನು ಹೊಂದಿ ಕರ್ಮಫಲಗಳನ್ನು ತ್ಯಜಿಸುತ್ತಾನೆ.

ಪ್ರಜಾಃ ಸೃಷ್ಟ್ವಾ ಮನಸಾ ಕರ್ಮಣಾ ಚ
ದ್ವಾವಪ್ಯೇತೌ ಸತ್ಪಥೌ ಲೋಕಜುಷ್ಟೌ ।
ದೃಷ್ಟ್ವಾ ಕರ್ಮ ಶಾಶ್ವತಂ ಚಾಂತವಚ್ಚ
ಮನಸ್ತ್ಯಾಗಃ ಕಾರಣಂ ನಾನ್ಯದಸ್ತಿ ॥ ೧೨ ॥

ಲೋಕದ ಪ್ರಜೆಗಳ ಸೃಷ್ಟಿಯು ಮನಸ್ಸು, ಕರ್ಮವಿಧಿ ಇವೆರಡರ ಸಂಬಂಧದಿಂದ ಉಂಟಾಗಿದೆ. ಲೋಕದಲ್ಲಿ ಮಾನ್ಯವಾದ ಇವೆರಡು ಸತ್ಪಥಗಳೇ ಎನಿಸಿವೆ. ಕರ್ಮದ ಫಲವು ಅಶಾಶ್ವತವೆನಿಸಿದೆ. ಫಲಾಕಾಂಕ್ಷೆಯಿಲ್ಲದೆ ನಡೆಸಿದ ಫಲವು ಶಾಶ್ವತವೆನಿಸಿದೆ. ಆದ್ದರಿಂದ ಶಾಶ್ವತಫಲಗಳಿಗೆ ಮನಸ್ಸಿನ ಕಾಮನಾತ್ಯಾಗಗಳೇ ಮುಖ್ಯಕಾರಣವೆನಿಸಿವೆ. ಬೇರೇನೂ ಅಲ್ಲ.

ಸ್ವೇನಾತ್ಮನಾ ಚಕ್ಷುರಿವ ಪ್ರಣೇತಾ
ನಿಶಾತ್ಯಯೇ ತಮಸಾ ಸಂವೃತಾತ್ಮಾ ।
ಜ್ಞಾನಂ ತು ವಿಜ್ಞಾನಗುಣೇನ ಯುಕ್ತಂ
ಕರ್ಮಾಶುಭಂ ಪಶ್ಯತಿ ವರ್ಜನೀಯಮ್ ॥ ೧೩ ॥

ಕತ್ತಲೆಯು ಕಳೆದುಹೋದಾಗ ಪ್ರಾಣಿಗಳನ್ನು ಚಕ್ಷುರಿಂದ್ರಿಯವು ತಾನಾಗಿಯೇ ಸರಿಯಾದ ದಾರಿಯಲ್ಲಿ ನಡೆಸಿಕೊಂಡು ಹೋಗುವಂತೆ ಜ್ಞಾನವು ಪರಮಾತ್ಮನ ವಿಜ್ಞಾನವೆಂಬ ಗುಣವನ್ನು ಹೊಂದಿದ ಬಳಿಕ ಅಶುಭವಾದ ಕರ್ಮ ಯಾವುದು, ಶುಭಕರ್ಮ ಯಾವುದು ಎಂಬುದನ್ನು ಸರಿಯಾಗಿ ತಿಳಿಸಿಕೊಡುತ್ತದೆ.

ಸರ್ಪಾನ್ ಕುಶಾಗ್ರಾಣಿ ತಥೋದಪಾನಂ
ಜ್ಞಾತ್ವಾ ಮನುಷ್ಯಾಃ ಪರಿವರ್ಜಯಂತಿ ।
ಅಜ್ಞಾನತಸ್ತತ್ರ ಪತಂತಿ ಮೂಢಾ
ಜ್ಞಾನೇ ಫಲಂ ಪಶ್ಯ ಯಥಾ ವಿಶಿಷ್ಟಮ್ ॥ ೧೪ ॥

ಕಣ್ಣಿದ್ದ ಮನುಷ್ಯರು ದಾರಿಯಲ್ಲಿ ಸಿಗುವ ಹಾವು, ಮುಳ್ಳು, ಬಾವಿ ಮೊದಲಾದವುಗಳನ್ನು ಕಂಡುಕೊಂಡು ಅದನ್ನು ತಪ್ಪಿಸಿಕೊಂಡು ಹೋಗುತ್ತಾರೆ. ಕಣ್ಣಿದ್ದರೂ ವಿವೇಕವಿಲ್ಲದ ಮೂರ್ಖರು ಅವುಗಳ ಮೇಲೆ ಕಾಲಿಟ್ಟು ಅಪಾಯಕ್ಕೆ ತುತ್ತಾಗುತ್ತಾರೆ. ಜ್ಞಾನದ ಫಲವು ವಿಶಿಷ್ಟವಾದುದು ಎನ್ನುವುದನ್ನು ಅರ್ಥಮಾಡಿಕೊ.

ಕೃತ್ಸ್ನಸ್ತು ಮಂತ್ರೋ ವಿಧಿವತ್ ಪ್ರಯುಕ್ತೋ
ಯಜ್ಞಾ ಯಥೋಕ್ತಾಸ್ತ್ವಥ ದಕ್ಷಿಣಾಶ್ಚ ।
ಅನ್ನಪ್ರದಾನಂ ಮನಸಃ ಸಮಾಧಿಃ
ಪಂಚಾತ್ಮಕಂ ಕರ್ಮಫಲಂ ವದಂತಿ ॥ ೧೫ ॥

ವಿಧ್ಯುಕ್ತವಾಗಿ ಜಪಿಸಿದ ಮಂತ್ರಗಳು, ಯಜ್ಞಗಳು, ದಕ್ಷಿಣೆಗಳು, ಅನ್ನದಾನಗಳು, ಮನಸ್ಸಿನ ಸಮಾಧಿ ಎಂಬ ಈ ಐದು ಫಲಪ್ರದಗಳಾದ ಸತ್ಕರ್ಮಗಳೇ ಆಗಿವೆ.

ಗುಣಾತ್ಮಕಂ ಕರ್ಮ ವದಂತಿ ವೇದಾ-
ಸ್ತಸ್ಮಾನ್ಮಂತ್ರೋ ಮಂತ್ರಪೂರ್ವಂ ಹಿ ಕರ್ಮ ।
ವಿಧಿರ್ವಿಧೇಯಂ ಮನಸೋಪಪತ್ತಿಃ
ಫಲಸ್ಯ ಭೋಕ್ತಾ ತು ಯಥಾ ಶರೀರೀ ॥ ೧೬ ॥

ವೇದಗಳು ಗುಣಾತ್ಮಕವಾದ ಕರ್ಮವನ್ನು ಹೇಳುತ್ತಿವೆ. ಪೂರ್ವಜನ್ಮದಲ್ಲಿ ಮಾಡಿದ ಕರ್ಮಗಳ ಫಲದಿಂದ ಈ ಜನ್ಮದಲ್ಲಿ ವೇದಮಂತ್ರಗಳು ದೊರೆಯುತ್ತವೆ. ಪುನಃ ಈ ಜನ್ಮದಲ್ಲಿ ಮಂತ್ರಪೂರ್ವಕವಾಗಿ ಮಾಡಿದ ಕರ್ಮವು ಜನ್ಮಾಂತರದ ಕರ್ಮಫಲಗಳಿಗೆ ಕಾರಣವಾಗುತ್ತದೆ. ಕರ್ಮಗಳಿಗೆ ಫಲವೇನೆಂಬುದು ಮನಸ್ಸನ್ನನುಸರಿಸಿದೆ. ಮನಸ್ಸಿಗನುಗುಣವಾದ ಫಲವನ್ನು ಜೀವನು ಅನುಭವಿಸುತ್ತಾನೆ.

ಶಬ್ದಾಶ್ಚ ರೂಪಾಣಿ ರಸಾಶ್ಚ ಪುಣ್ಯಾಃ
ಸ್ಪರ್ಶಾಶ್ಚ ಗಂಧಾಶ್ಚ ಶುಭಾಸ್ತಥೈವ ।
ನರೋಽತ್ರ ಹಿ ಸ್ಥಾನಗತಃ ಪ್ರಭುಃ ಸ್ಯಾ-
ದೇತತ್ಫಲಂ ಸಿಧ್ಯತಿ ಕರ್ಮಲೋಕೇ ॥ ೧೭ ॥

ಆದ್ದರಿಂದ ಮನುಷ್ಯನು ಅನುಭವಿಸುವ ಶಬ್ದ, ರೂಪ, ರಸ, ಗಂಧ, ಸ್ಪರ್ಶ - ಈ ಎಲ್ಲ ಶುಭಸುಖಗಳು ಹಿಂದೆ ನಡೆಸಿದ ಅವನ ಕರ್ಮವನ್ನು ಅನುಸರಿಸಿ ಒದಗುತ್ತವೆ. ಪುಣ್ಯಕರ್ಮಗಳಿಂದ ಲಭಿಸುವ ಸ್ವರ್ಗಾದಿಗಳಲ್ಲಿ ಅನುಭವಿಸುವ ಫಲಗಳು ಈ ಲೋಕದಲ್ಲಿಯೂ ರೂಪ-ರಸ-ಗಂಧಾದಿಗಳ ಮೂಲಕ ಲಭಿಸುತ್ತವೆ.

ಯದ್ಯಚ್ಛರೀರೇಣ ಕರೋತಿ ಕರ್ಮ
ಶರೀರಯುಕ್ತಃ ಸಮುಪಾಶ್ನುತೇ ತತ್ ।
ಶರೀರಮೇವಾಯತನಂ ಸುಖಸ್ಯ
ದುಃಖಸ್ಯ ಚಾಪ್ಯಾಯತನಂ ಶರೀರಮ್ ॥ ೧೮ ॥

ಶರೀರವನ್ನು ಅವಲಂಬಿಸಿಕೊಂಡು ಯಾವ ಯಾವ ವಿಧವಾದ ಕರ್ಮಗಳನ್ನು ಆಚರಿಸುತ್ತಾನೋ ಆ ಕರ್ಮದ ಫಲಗಳನ್ನು ದಿವ್ಯಶರೀರವನ್ನು ಹೊಂದಿಕೊಂಡೇ ಅನುಭವಿಸುತ್ತಾನೆ. ಸುಖ-ದುಃಖಗಳಿಗೆ ಆಶ್ರಯವಾದುದು ಶರೀರವೇ ಆಗಿದೆ.

ವಾಚಾ ತು ಯತ್ ಕರ್ಮ ಕರೋತಿ ಕಿಂಚಿ-
ದ್ವಾಚೈವ ಸರ್ವಂ ಸಮುಪಾಶ್ನುತೇ ತತ್ ।
ಮನಸ್ತು ಯತ್ ಕರ್ಮ ಕರೋತಿ ಕಿಂಚಿ-
ನ್ಮನಃಸ್ಥ ಏವಾಯಮುಪಾಶ್ನುತೇ ತತ್ ॥ ೧೯ ॥

ಮನುಷ್ಯನು ವಾಕ್ಯದಿಂದ ನಡೆಸಿದ ಕರ್ಮದ ಫಲವನ್ನು ವಾಕ್‌ನಿಂದಲೇ ಅನುಭವಿಸುತ್ತಾನೆ. ಮನಸ್ಸಿನಿಂದ ಮಾಡಿದ ಕರ್ಮವನ್ನು ಮನಸ್ಸಿನಿಂದಲೇ ಅನುಭವಿಸುತ್ತಾನೆ.

ಯಥಾಗುಣಂ ಕರ್ಮಗಣಂ ಫಲಾರ್ಥೀ
ಕರೋತ್ಯಯಂ ಕರ್ಮಫಲೇ ನಿವಿಷ್ಟಃ ।
ತಥಾ ತಥಾಯಂ ಗುಣಸಂಪ್ರಯುಕ್ತಃ
ಶುಭಾಶುಭಂ ಕರ್ಮಫಲಂ ಭುನಕ್ತಿ ॥ ೨೦ ॥

ಫಲವನ್ನು ಉದ್ದೇಶಿಸಿ ಒಬ್ಬನು ಯಾವ ವಿಧವಾದ ಗುಣವುಳ್ಳ ಕರ್ಮಗಳನ್ನು ನಡೆಸುತ್ತಾನೋ ಆಯಾ ಗುಣವುಳ್ಳ ಶುಭಾಶುಭ ಫಲಗಳನ್ನು ಆ ಕರ್ಮಕ್ಕೆ ಅನುಗುಣವಾಗಿಯೇ ಅನುಭವಿಸುತ್ತಾನೆ.

ಮತ್ಸ್ಯೋ ಯಥಾ ಸ್ರೋತ ಇವಾಭಿಪಾತೀ
ತಥಾ ಕೃತಂ ಪೂರ್ವಮುಪೈತಿ ಕರ್ಮ ।
ಶುಭೇ ತ್ವಸೌ ತುಷ್ಯತಿ ದುಷ್ಕೃತೇ ತು
ನ ತುಷ್ಯತೇ ವೈ ಪರಮಃ ಶರೀರೀ ॥ ೨೧ ॥

ಮತ್ಸ್ಯವೊಂದು ಪ್ರವಾಹವನ್ನು ಅನುಸರಿಸಿ ಹೋಗುವಂತೆ ಮನುಷ್ಯನು ತನ್ನ ಪ್ರಾರಬ್ಧಕರ್ಮವನ್ನು ಹಿಂಬಾಲಿಸಿಕೊಂಡು ಹೋಗುತ್ತಾನೆ. ಶುಭಫಲವು ದೊರೆತಾಗ ಸಂತುಷ್ಟನಾಗುತ್ತಾನೆ. ದುಷ್ಕರ್ಮಜನ್ಯವಾದ ದುಷ್ಫಲವು ದೊರೆತಾಗ ಕುಗ್ಗುತ್ತಾನೆ. ಈ ಜೀವನು ಶರೀರದ ಸಂಬಂಧದಿಂದ ಹೀಗೆ ಸುಖ-ದುಃಖಗಳನ್ನು ಅನುಭವಿಸುತ್ತಾನೆ.

ಯತೋ ಜಗತ್ ಸರ್ವಮಿದಂ ಪ್ರಸೂತಂ
ಜ್ಞಾತ್ವಾತ್ಮವಂತೋ ವ್ಯತಿಯಾಂತಿ ಯತ್ತತ್ ।
ಯನ್ಮಂತ್ರಶಬ್ದೈರಕೃತಪ್ರಕಾಶಂ
ತದುಚ್ಯಮಾನಂ ಶೃಣು ಮೇ ಪರಂ ಯತ್ ॥ ೨೨ ॥

ಯಾವ ಭಗವಂತನ ದೆಸೆಯಿಂದ ಈ ಜಗತ್ತೆಲ್ಲವೂ ಸೃಷ್ಟಿಯನ್ನು ಹೊಂದಿದೆಯೋ, ಈ ಪ್ರಪಂಚದ ಬಂಧನಗಳನ್ನು ಯಾವ ಪರಮಾತ್ಮನ ಜ್ಞಾನದಿಂದ ಜ್ಞಾನಿಗಳು ದಾಟಿ ಹೋಗುತ್ತಾರೋ, ಯಾವ ಪರಬ್ರಹ್ಮ ವಸ್ತುವು ವೇದಮಂತ್ರಗಳಲ್ಲೇ ಇರುವ ಆಕಾಶ, ಪ್ರಾಣ ಮೊದಲಾದ ಶಬ್ದಗಳಿಂದ ಹೇಳಲ್ಪಟ್ಟರೂ ಶಬ್ದಗಳು ಅನ್ಯತ್ರ ಪ್ರಸಿದ್ಧವಾಗಿ ಪರಮಾತ್ಮನನ್ನು ತಿಳಿಸುವುದರಲ್ಲಿ ಅಸಮರ್ಥವಾಗಿವೆಯೋ ಅಂತಹ ಪರಬ್ರಹ್ಮ ವಸ್ತುವನ್ನು ವೇದಾರ್ಥನಿರ್ಣಾಯಕಗಳಾದ ಬ್ರಹ್ಮಮೀಮಾಂಸಾ ಶಾಸ್ತ್ರಗಳಿಂದಲೇ ತಿಳಿಯಬೇಕಾಗಿದೆ. ಅಂತಹ ಪರಬ್ರಹ್ಮ ವಸ್ತುವಿನ ಬಗ್ಗೆ ತಿಳಿಸುತ್ತೇನೆ, ಕೇಳಿಸಿಕೊ.

ರಸೈರ್ವಿಯುಕ್ತಂ ವಿವಿಧೈಶ್ಚ ಗಂಧೈ-
ರಶಬ್ದಮಸ್ಪರ್ಶಮರೂಪವಚ್ಚ ।
ಅಗ್ರಾಹ್ಯಮವ್ಯಕ್ತಮವರ್ಣಮೇಕಂ
ಪಂಚಪ್ರಕಾರಂ ಸಸೃಜೇ ಪ್ರಜಾನಾಮ್ ॥ ೨೩ ॥

ಆ ಪರಬ್ರಹ್ಮನೆಂಬ ವಸ್ತುವು ಪ್ರಾಕೃತರಸಗಳ ಮೂಲಕ ತಿಳಿಯಲಾರದು. ವಿವಿಧವಾದ ಪ್ರಾಕೃತ ಗಂಧಗಳಿಂದಲೂ ವಿದುರವಾಗಿಹುದು. ಸಂಸಾರ-ವಿಚಾರಗಳನ್ನು ಮಾಡುವ ಶಬ್ದಗಳಿಂದ ಅತ್ಯಂತ ದೂರವಾದುದು. ಪ್ರಾಕೃತವಾದ ಹಸ್ತವೇ ಮೊದಲಾದವುಗಳಿಂದ ಮುಟ್ಟಲು ಅಶಕ್ಯವಾದುದು. ಪ್ರಾಕೃತರೂಪರಹಿತವಾದುದು. ಪ್ರಾಕೃತವಾದ ಕಣ್ಣಿಗೆ ಕಾಣಿಸದು. ಅವ್ಯಕ್ತವೆನಿಸಿದುದು. ಪ್ರಾಕೃತವರ್ಣ, ಪ್ರಾಕೃತ ರೂಪದಿಂದ ರಹಿತವಾದುದು. ಇಂತಹ ಪರಬ್ರಹ್ಮ ವಸ್ತುವು ರೂಪ, ರಸಾದಿ ಪಂಚ ವಿಷಯಗಳನ್ನು ಪ್ರಜೆಗಳಿಗೋಸ್ಕರ ಸೃಷ್ಟಿಸಿದೆ.

ವ್ಯಾಖ್ಯಾನ ವಿಶೇಷ– ಭಗವಂತನಲ್ಲಿ ಕೆಲವರು ಅರೂಪವನ್ನೇ ಹೇಳುತ್ತಾರೆ. ಭಗವಂತನು ಸರ್ವಾತ್ಮನಾ ರೂಪರಹಿತನು ಎಂದು ಹೇಳಬಾರದು. ಇದಕ್ಕೆ ಭಗವದ್ಗೀತೆಯ ವಿರೋಧವಿದೆ. ಸರ್ವಥಾ ರೂಪವಿಲ್ಲವೆಂದರೆ ಕೃಷ್ಣನೇ ಗೀತೆಯಲ್ಲಿ '**ದರ್ಶಯಾಮಾಸ ಪಾರ್ಥಾಯ ಪರಮಂ**

ರೂಪಮೈಶ್ವರಮ್ । ಅನೇಕ ವಕ್ತನಯನಂ ಅನೇಕಾದ್ಭುತದರ್ಶನಮ್ । ಅನೇಕ ದಿವ್ಯಾಭರಣಂ ದಿವ್ಯಾನೇಕೋದ್ಯತಾಯುಧಮ್ । ದಿವ್ಯಮಾಲ್ಯಾ ಬರಧರಂ ದಿವ್ಯಗಂಧಾನುಲೇಪನಮ್' ಇತ್ಯಾದಿಯಾಗಿ ಭಗವಂತನ ಅಪ್ರಾಕೃತರೂಪವನ್ನು ವರ್ಣಿಸಿರುತ್ತಾನೆ.

ನ ಸ್ತ್ರೀ ಪುಮಾನ್ ವಾಪಿ ನಪುಂಸಕಂ ಚ
ನ ಸನ್ನ ಚಾಸತ್ತದಸಚ್ಚ ತನ್ನ ।
ಪಶ್ಯಂತಿ ಯದ್ ಬ್ರಹ್ಮವಿದೋ ಮನುಷ್ಯಾ-
ಸ್ತದಕ್ಷರಂ ನ ಕ್ಷರತೀತಿ ವಿದ್ಧಿ ॥ ೨೪ ॥

ಭಗವಂತನು ಲೋಕದ ಸ್ತ್ರೀಯರಲ್ಲಿ ಒಬ್ಬ ಸ್ತ್ರೀಯಾಗಿ ಇರುವುದಿಲ್ಲ. ಭಗವಂತನು ಲೋಕದ ನಪುಂಸಕರಂತೆ ನಪುಂಸಕನಲ್ಲ. ಭಗವಂತನು ಸತ್ ಎಂದರೆ ಕಾರಣರೂಪ ಮಹದಾದಿಗಳಂತಿಲ್ಲ. ಅಸತ್ ಎಂದರೆ ಕಾರ್ಯರೂಪವಾದ ಬ್ರಹ್ಮಾಂಡಾದಿಗಳಂತೆಯೂ ಇರುವುದಿಲ್ಲ. ಭಗವಂತನು ಸದಸತ್ ಎನಿಸುವುದಿಲ್ಲ ಎಂದರೆ ಕಾರಣ-ಕಾರ್ಯರೂಪವಾದ ಪ್ರಕೃತಿಯಂತೆಯೂ ಇರುವುದಿಲ್ಲ. ಬ್ರಹ್ಮಜ್ಞಾನಿಗಳು ಸಮಸ್ತ ಜಗತ್ತಿಗಿಂತ ಭಗವಂತನನ್ನು ವಿಲಕ್ಷಣನೆಂದೇ ಭಾವಿಸುತ್ತಾರೆ. ಇಂತಹ ಭಗವಂತನು ಎಂದಿಗೂ ನಾಶವೇ ಇಲ್ಲದ ಅಕ್ಷರಪುರುಷನೆಂದು ತಿಳಿದುಕೊ.

ವ್ಯಾಖ್ಯಾನ ವಿಶೇಷ– ಭಗವಂತನಿಗೆ ಸ್ತ್ರೀರೂಪವೂ ಇದೆ, ಪುರುಷರೂಪವೂ ಇದೆ, ನಪುಂಸಕರೂಪವೂ ಇದೆ. ಸ್ತ್ರೀರೂಪ ಇಲ್ಲ ಎಂದು ಹೇಳಿದರೆ 'ಸ್ತ್ರಿಯಃ ಸತೀಸ್ತಾಂ ಪುವೇ ಪುಂಸ ಆಹುಃ' ಎಂಬ ಶ್ರುತಿಯ ವಿರೋಧವು ಬರುತ್ತದೆ. ಭಗವಂತನು ಸ್ತ್ರೀಯರಲ್ಲಿರುವ ದೋಷಗಳಿಂದ ಆಕರ್ಷಿತನಾಗಿರುವುದಿಲ್ಲ ಎಂದು ತಿಳಿಸಲು ನಪುಂಸಕ ರೂಪದಿಂದಲೂ ಇದ್ದಾನೆ. ಸ್ತ್ರೀಯರು ಯಾವ ಗುಣಗಳಿಗೆ ಆಕರ್ಷಿತರಾಗುತ್ತಾರೋ ಅಂತಹ ದುರ್ಗುಣಗಳ ಆಕರ್ಷಣೆಯು ಪರಮಾತ್ಮನ ಮನಸ್ಸಿನಲ್ಲಿರುವುದಿಲ್ಲ ಇತ್ಯಾದಿ ವಿವರಣೆಯನ್ನು ಶ್ರೀಮಧ್ವಾಚಾರ್ಯರು ತೈತ್ತಿರೀಯ ಭಾಷ್ಯದಲ್ಲಿ ಹೇಳಿರುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಸಪ್ತವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಇಪ್ಪತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೆಂಟನೆಯ ಅಧ್ಯಾಯ

ಮನು-ಬೃಹಸ್ಪತಿಸಂವಾದದಲ್ಲಿ ಮೂಡಿಬಂದ ಸೃಷ್ಟಿಕ್ರಮವನ್ನು
ಭೀಷ್ಮರು ನಿರೂಪಿಸಿದುದು.

ಮನುಃ

ಅಕ್ಷರಾತ್ತು ತತೋ ವಾಯುರ್ವಾಯೋಜ್ಯೋತಿಸ್ತತೋ ಜಲಮ್ ।
ಜಲಾತ್ ಪ್ರಸೂತಾ ಜಗತೀ ಜಗತ್ಯಾಂ ಜಾಯತೇ ಜಗತ್ ॥ ೧ ॥

ಭೀಷ್ಮ- ಆ ಅಕ್ಷರನೆನಿಸಿದ ಪರಬ್ರಹ್ಮನಿಂದ ಆಕಾಶವು ಉತ್ಪನ್ನವಾಯಿತು. ಆಕಾಶದಿಂದ ವಾಯುವು, ವಾಯುವಿನಿಂದ ಅಗ್ನಿಯು, ಅಗ್ನಿಯಿಂದ ಜಲವು, ಜಲದಿಂದ ಈ ಭೂಮಿಯು, ಭೂಮಿಯಿಂದ ಸ್ಥಾವರ-ಜಂಗಮಾತ್ಮಕವಾದ ಜಗತ್ತು ಹುಟ್ಟಿತು.

ಇಮೇ ಶರೀರೈರ್ಜಲಮೇವ ಗತ್ವಾ
ಜಲಾಚ್ಚ ತೇಜಃ ಪವನೋऽಂತರಿಕ್ಷಮ್ ।
ಖಾದ್ವೈ ನಿವರ್ತಂತಿ ನಭಾವಿನಸ್ತೇ
ಯೇ ಭಾವಿನಸ್ತೇ ಪರಮಾಪ್ನುವಂತಿ ॥ ೨ ॥

ಈ ಸ್ಥಾವರ-ಜಂಗಮಗಳ ಶರೀರಗಳಿಂದ ಕೂಡಿದ ಜೀವರು ಕೊನೆಗೊಮ್ಮೆ ಸಂಕರ್ಷಣನ ಮುಖದಿಂದ ಹೊರಹೊಮ್ಮುವ ಅಗ್ನಿಯಿಂದ ಭಸ್ಮೀಭೂತವಾದ ಶರೀರವುಳ್ಳವರಾಗಿ, ವಿಲೋಮಕ್ರಮದಿಂದ ತಮ್ಮ ತಮ್ಮ ಉತ್ಪತ್ತಿ ಸ್ಥಾನಗಳಲ್ಲಿ ಲಯವನ್ನು ಹೊಂದುತ್ತಾರೆ. ಎಂದರೆ ಪಾರ್ಥಿವಶರೀರವು ಜಲತತ್ತ್ವದಲ್ಲಿಯೂ, ಜಲವು ಅಗ್ನಿಯಲ್ಲಿಯೂ, ಅಗ್ನಿಯು ವಾಯುವಿನಲ್ಲಿಯೂ, ವಾಯುವು ಆಕಾಶದಲ್ಲಿಯೂ ಲಯ ಹೊಂದುತ್ತದೆ. ಯಾರು ಉತ್ಪತ್ತಿಯನ್ನು ಹೊಂದಲು ಅರ್ಹರಾಗಿದ್ದಾರೋ ಅವರು ಆಕಾಶದಿಂದ ಮಳೆಗಳ ಮೂಲಕ ಪುನಃ ಈ ಭೂಮಿಗೆ ಆಗಮಿಸುತ್ತಾರೆ. ಯಾರು ಸಾಧಕರಾಗಿ ಮುಕ್ತರಾಗಿದ್ದರೋ ಅವರು ಪುನಃ ಈ ಭೂಮಿಗೆ ಆಗಮಿಸುವುದಿಲ್ಲ.

ನೋಷ್ಣಂ ನ ಶೀತಂ ಮೃದು ನಾಪಿ ತೀಕ್ಷ್ಣಂ
ನಾಮ್ಲಂ ಕಷಾಯಂ ಮಧುರಂ ನ ತಿಕ್ತಮ್ ।

ನ ಶಬ್ದವನ್ನಾಪಿ ಚ ಗಂಧವತ್ತ-
ನ್ನ ರೂಪವತ್ತತ್ ಪರಮಸ್ವಭಾವಮ್ ॥ ೩ ॥

ಈ ಜಗತ್‌ಸೃಷ್ಟಿಕರ್ತೃವೆನಿಸಿದ ಪರಬ್ರಹ್ಮವಸ್ತುವು ಪ್ರಾಕೃತಿಕವಾದ ಔಷ್ಣ್ಯಾದಿ ದೋಷಗಳಿಂದ ರಹಿತವಾಗಿದೆ. ಪರಬ್ರಹ್ಮನು ಶೀತವೂ ಅಲ್ಲ, ಉಷ್ಣವೂ ಅಲ್ಲ, ಜಗತ್ತಿನಂತೆ ಮೃದುವೂ ಅಲ್ಲ, ಕಠಿಣವೂ ಅಲ್ಲ, ಕಹಿಯೂ ಅಲ್ಲ, ಸಿಹಿಯೂ ಅಲ್ಲ. ಅವನು ಅಪ್ರಾಕೃತನಾದ್ದರಿಂದ ಅತ್ಯಂತ ಶ್ರೇಷ್ಠವಾದ ಗಂಧ-ರಸಾದಿ ಸ್ವಭಾವ ಉಳ್ಳವನಾಗಿದ್ದಾನೆ. ಆದ್ದರಿಂದ ಬಾಹ್ಯವಾದ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳಂತೆ ಪರಮಸ್ವಭಾವನಾದ ಪರಮಾತ್ಮನನ್ನು ತಿಳಿಯಬಾರದು.

ಸ್ಪರ್ಶಂ ತನುರ್ವೇದ ರಸಂ ತು ಜಿಹ್ವಾ
ಘ್ರಾಣಂ ಚ ಗಂಧಾನ್ ಶ್ರವಣೇ ಚ ಶಬ್ದಾನ್ ।
ರೂಪಾಣಿ ಚಕ್ಷುರ್ನ ಚ ತತ್ಪರಂ ಯದ್-
ಗೃಹ್ಣಂತ್ಯನಧ್ಯಾತ್ಮವಿದೋ ಮನುಷ್ಯಾಃ ॥ ೪ ॥

ಮನುಷ್ಯರ ಶರೀರದಲ್ಲಿ ವ್ಯಾಪಿಸಿದ ತ್ವಗಿಂದ್ರಿಯವು ಸ್ಪರ್ಶಜ್ಞಾನವನ್ನು ಹೊಂದುತ್ತದೆ. ಜಿಹ್ವೆಯು ರಸವನ್ನು, ಘ್ರಾಣವು ಗಂಧವನ್ನು, ಕಿವಿಗಳು ಶಬ್ದವನ್ನು, ಚಕ್ಷುಸ್ಸು ರೂಪಗಳನ್ನು ಗ್ರಹಿಸುತ್ತದೆ. ಅಧ್ಯಾತ್ಮವನ್ನು ತಿಳಿಯದ ಮನುಷ್ಯನು ಇದೆಲ್ಲದಕ್ಕಿಂತಲೂ ಅತಿಶಯವಾದ ಪರಬ್ರಹ್ಮವಸ್ತುವನ್ನು ಈ ಇಂದ್ರಿಯಗಳ ಮೂಲಕ ಗ್ರಹಿಸಲಾರನು. ಪರಬ್ರಹ್ಮ ವಸ್ತುವು ಇಂದ್ರಿಯವಸ್ತುವಿಗೆ ಅಗೋಚರವಾಗಿ ಅಧ್ಯಾತ್ಮ ವಸ್ತುವಿನಿಂದಲೇ ಗೋಚರವಾಗುವುದಾಗಿದೆ.

ನಿವರ್ತಯಿತ್ವಾ ರಸನಂ ರಸೇಭ್ಯೋ
ಘ್ರಾಣಂ ಚ ಗಂಧಾಚ್ಛ್ರವಣೇ ಚ ಶಬ್ದಾತ್ ।
ಸ್ಪರ್ಶಾತ್ತನುಂ ರೂಪಗುಣಾತ್ತು ಚಕ್ಷು-
ಸ್ತತಃ ಪರಂ ಪಶ್ಯತಿ ಸ್ವಂ ಸ್ವಭಾವಮ್ ॥ ೫ ॥

ಮನುಷ್ಯನು ನಾಲಿಗೆಯನ್ನು ಬಾಹ್ಯವಾದ ರಸಗಳ ಆಸಕ್ತಿಯಿಂದ ದೂರೀಕರಿಸಿದ ಮೇಲೆ, ಘ್ರಾಣೇಂದ್ರಿಯವನ್ನು ಲೌಕಿಕ ಆಸಕ್ತಿಯಿಂದ ಹಿಂದಿರುಗಿಸಿದ ಬಳಿಕ, ಕಿವಿಗಳನ್ನು

ಲೌಕಿಕ ಶಬ್ದಗಳನ್ನು ಕೇಳುವುದರಿಂದ ನಿವೃತ್ತಿಗೊಳಿಸಿದ ಬಳಿಕ, ತ್ವಗಿಂದ್ರಿಯವನ್ನು ಸ್ಪರ್ಶ ಸುಖದಿಂದ, ಚಕ್ಷುರಿಂದ್ರಿಯವನ್ನು ಬಾಹ್ಯರೂಪಗುಣಗಳ ಆಸಕ್ತಿಯಿಂದ ದೂರ ಮಾಡಿದ ಬಳಿಕ ದಿವ್ಯ-ಗಂಧ-ರಸಾದಿಗಳ ಸ್ವಭಾವವುಳ್ಳ ಆ ಪರಬ್ರಹ್ಮ ವಸ್ತುವನ್ನು ನೋಡುತ್ತಾನೆ.

ಯತೋ ಗೃಹೀತ್ವಾ ಹಿ ಕರೋತಿ ಯಚ್ಚ
ಯಸ್ಮಿಂಶ್ಚ ತಾಮಾರಭತೇ ಪ್ರವೃತ್ತಿಮ್ ।
ಯಸ್ಮಿಂಶ್ಚ ಯದ್ಯೇನ ಚ ಯಶ್ಚ ಕರ್ತಾ
ತತ್ ಕಾರಣಂ ಸ್ತ್ವಂ ತಮುಪೇಯಮಾಹುಃ ॥ ೬ ॥

ಯಾವ ಭಗವಂತನ ಪ್ರೇರಣೆಯಿಂದ ಕೈ ಮೊದಲಾದವುಗಳಲ್ಲಿ ಪದಾರ್ಥಗಳನ್ನು ಹಿಡಿದುಕೊಂಡು ಮನುಷ್ಯನು ಕಾರ್ಯಗಳನ್ನು ಮಾಡುತ್ತಾನೋ, ಯಾವ ಕಾರ್ಯಗಳನ್ನು ಆರಂಭಿಸಲು ಭಗವಂತನ ಪ್ರಸನ್ನತೆಯು ಕಾರಣವಾಗಿರುತ್ತದೆಯೋ, ಅವನ ಅನುಗ್ರಹದಿಂದಲೇ ಕರ್ಮಗಳನ್ನು ಮಾಡುತ್ತಾನೋ, ಕರ್ಮಗಳನ್ನು ಮಾಡುವಾಗ ಅವನನ್ನೇ ಉದ್ದೇಶವಾಗಿಟ್ಟುಕೊಂಡು ಮಾಡುತ್ತಾನೋ, ಈ ಜಗತ್ತೆಲ್ಲವೂ ಯಾರಿಂದ ನಿರ್ಮಿತವಾಗಿದೆಯೋ, ಯಾವ ಪರಬ್ರಹ್ಮನು ಜಗತ್ಕರ್ತ ಎನಿಸಿದ್ದಾನೋ, ಸರ್ವಪ್ರವೃತ್ತಿಗಳಿಗೂ ಕಾರಣನೆನಿಸಿದ್ದಾನೋ ಅಂತಹ ಪರಬ್ರಹ್ಮನು ನಮಗೆ ಸಂಬಂಧಿಸಿದ ಪದಾರ್ಥ ಎನಿಸಿದ್ದಾನೆ. ಅವನನ್ನು ಜೀವಾತ್ಮರು ಈ ಬದುಕಿನಲ್ಲಿ ಹೊಂದಬೇಕು ಎಂದು ಜ್ಞಾನಿಗಳು ಹೇಳುತ್ತಾರೆ. ಸ್ವಾಮಿಯಾದ ಅವನನ್ನು ಭೃತ್ಯರಾದ ನಾವು ಹೊಂದಬೇಕೇ ವಿನಾ ಎಂದಿಗೂ ಐಕ್ಯಚಿಂತನೆಯನ್ನು ಹೊಂದಬಾರದು ಎಂದು ಹೇಳುತ್ತಾರೆ.

ಯಚ್ಚಾಭಿಭೂಃ ಸಾಧಕಂ ವ್ಯಾಪಕಂ ಚ
ಯನ್ಮಂತ್ರವಚ್ಚಂಸ್ಯತೇ ಚೈವ ಲೋಕೇ ।
ಯಃ ಸರ್ವಹೇತುಃ ಪರಮಾರ್ಥಕಾರೀ
ತತ್ ಕಾರಣಂ ಕಾರ್ಯಮತೋ ಯದನ್ಯತ್ ॥ ೭ ॥

ಯಾವ ಪರಬ್ರಹ್ಮ ವಸ್ತುವು ಎಲ್ಲವನ್ನೂ ಮೀರಿ ನಿಂತಿದೆಯೋ, ಸಾಧಕವೂ ವ್ಯಾಪಕವೂ ಆಗಿದೆಯೋ, ಲೋಕದಲ್ಲಿ ಮಂತ್ರದಂತೆ ಪ್ರಶಂಸೆಗೆ ಪಾತ್ರವಾಗಿದೆಯೋ

ಆ ಪರಬ್ರಹ್ಮವಸ್ತುವನ್ನು ಎಲ್ಲದಕ್ಕೂ ಕಾರಣವನ್ನಾಗಿ ತಿಳಿಯಬೇಕು. ಪರಮ ಸತ್ಯವಾದ ಜಗತ್ತನ್ನು ನಿರ್ಮಿಸಿದುದು ಎಂದು ತಿಳಿಯಬೇಕು. ಪರಮಾತ್ಮನಿಗಿಂತ ಭಿನ್ನವಾದ ಬ್ರಹ್ಮಾದಿ ಕಾರ್ಯಪ್ರಪಂಚವೇನಿದೆಯೋ ಇದಕ್ಕೆ ಭಗವಂತನೇ ಕಾರಣನು. ಪ್ರಪಂಚಕ್ಕಿಂತ ಭಿನ್ನನು ಎಂದು ತಿಳಿಯಬೇಕು.

ಯಥಾ ಚ ಕಶ್ಚಿತ್ ಸುಕೃತೈರ್ಮನುಷ್ಯಃ
ಶುಭಾಶುಭಂ ಪ್ರಾಪ್ನುತೇऽಥಾವಿರೋಧಾತ್ ।
ಏವಂ ಶರೀರೇಷು ಶುಭಾಶುಭೇಷು
ಸ್ವಕರ್ಮಭಿರ್ಜ್ಞಾನಮಿದಂ ನಿಬದ್ಧಮ್ ॥ ೮ ॥

ಒಬ್ಬ ಪುರುಷನು ತಾನು ಮಾಡಿದ ಸತ್ಕರ್ಮದ ಫಲವಾಗಿ ಶುಭವನ್ನೂ, ಅಸತ್ಕರ್ಮದ ಫಲವಾಗಿ ಅಶುಭವನ್ನೂ ಹೇಗೆ ಸ್ವೀಕರಿಸುತ್ತಾನೋ ಇದೇ ರೀತಿಯಾಗಿ ಶುಭಾಶುಭ ಕರ್ಮಗಳಲ್ಲಿ ನಿಬದ್ಧವಾದ ಶರೀರದಲ್ಲಿರುವ ಜೀವನು ತಾನು ಮಾಡಿದ ನಿವೃತ್ತರೂಪಕರ್ಮಗಳಿಂದ ಈ ಪರಮಾತ್ಮನ ಜ್ಞಾನವನ್ನು ಹೊಂದಬಲ್ಲನು.

ಯಥಾ ಪ್ರದೀಪಃ ಪುರತಃ ಪ್ರದೀಪ್ತಃ
ಪ್ರಕಾಶಮನ್ಯಸ್ಯ ಕರೋತಿ ದೀಪ್ಯನ್ ।
ತಥೇಹ ಪಂಚೇಂದ್ರಿಯದೀಪವೃಕ್ಷಾ
ಜ್ಞಾನಪ್ರದೀಪ್ತಾಃ ಪರವಂತ ಏವ ॥ ೯ ॥

ಯಥಾ ಹಿ ರಾಜ್ಞೋ ಬಹವೋ ಹ್ಯಮಾತ್ಯಾಃ
ಪೃಥಕ್ ಪ್ರಮಾಣಂ ಪ್ರವದಂತಿ ಯುಕ್ತಾಃ ।
ತದ್ವಚ್ಛರೀರೇಷು ಭವಂತಿ ಪಂಚ
ಜ್ಞಾನೈಕದೇಶಃ ಪರಮಃ ಸ ತೇಭ್ಯಃ ॥ ೧೦ ॥

ಯಾವ ರೀತಿಯಾಗಿ ದೀಪದ ಬೆಳಕು ಮುಂದೆ ಇರುವ ಪದಾರ್ಥಗಳನ್ನು ಬೆಳಗುತ್ತಾ ಮತ್ತೊಂದು ಪದಾರ್ಥವನ್ನು ಬೆಳಗುವಂತೆ ಮಾಡುತ್ತದೋ, ಅದೇ ರೀತಿ ಪಂಚೇಂದ್ರಿಯ ಎಂಬ ದೀಪದಿಂದ ಸಹಿತವಾದ ದೇಹವೆಂಬ ವೃಕ್ಷವು ದೇಹದ ಒಳಗೆ ಇರುವ ಪರಮಾತ್ಮನನ್ನು ಪ್ರಕಾಶನಗೊಳಿಸುವ ಸಾಮರ್ಥ್ಯವನ್ನು ಹೊಂದಿದೆ. ರಾಜನಿಗೆ

ಅಧೀನರಾದ ಮಂತ್ರಿಗಳು, ಅವನಿಗೆ ಅನುಗುಣವಾದ ಮಂತ್ರಾಲೋಚನೆಯನ್ನು ಮಾಡಿ ಹೇಗೆ ಹೇಳುತ್ತಾರೋ, ಅದರಂತೆ ದೇಹದಲ್ಲಿರುವ ಇಂದ್ರಿಯಗಳು ಜ್ಞಾನಕ್ಕೆ ಅಧೀನವಾಗಿವೆ. ಆ ಇಂದ್ರಿಯಗಳಿಂದ ಉತ್ಪನ್ನವಾಗುವ ಜ್ಞಾನದಿಂದ ಸರ್ವೋತ್ತಮನಾದ ಭಗವಂತನೇ ತಿಳಿಯಲು ಯೋಗ್ಯನಾಗಿದ್ದಾನೆ.

ಯಥಾರ್ಚಿಷೋಽಗ್ನೇಃ ಪವನಸ್ಯ ವೇಗಾ
ಮರೀಚಯೋಽರ್ಕಸ್ಯ ನದೀಷು ಚಾಪಃ ।
ಗಚ್ಛಂತಿ ಚಾಯಾಂತಿ ಚ ತನ್ಯಮಾನಾ-
ಸ್ತದ್ವಚ್ಛರೀರಾಣಿ ಶರೀರಿಣಾಂ ತು ॥ ೧೧ ॥

ಬೆಂಕಿಗೆ ಜ್ವಾಲೆಗಳು, ವಾಯುವಿಗೆ ವೇಗವು, ಸೂರ್ಯನಿಗೆ ಕಿರಣಗಳು, ನದಿಗಳಿಗೆ ಜಲವು ಹೇಗೆ ಹೆಜ್ಜೆ ಹೆಜ್ಜೆಗೂ ಗತಿಸಿದಷ್ಟು ಪುನಃ ಪುನಃ ಆ ಗುಣಗಳು ಬರುತ್ತಾ ಇರುತ್ತವೋ ಅದರಂತೆ ಪ್ರಾಣಿಗಳಿಗೆ ಶರೀರಗಳು ಹಾಗೆಯೇ ಪುನಃ ಪುನಃ ಬರುತ್ತಿರುತ್ತವೆ.

ಯಥಾ ಚ ಕಶ್ಚಿತ್ ಪರಶುಂ ಗೃಹೀತ್ವಾ
ಧೂಮಂ ನ ಪಶ್ಯೇಜ್ಜ್ವಲನಂ ಚ ಕಾಷ್ಠೇ ।
ತದ್ವಚ್ಛರೀರೋದರಪಾಣಿಪಾದಂ
ಛಿತ್ತ್ವಾ ನ ಪಶ್ಯಂತಿ ತತೋ ಯದನ್ಯತ್ ॥ ೧೨ ॥

ಒಬ್ಬನು ಒಂದು ಕೊಡಲಿಯನ್ನು ಹಿಡಿದು ಕಟ್ಟಿಗೆಯೊಂದನ್ನು ಸೀಳಿದಾಗ ಆ ಕಟ್ಟಿಗೆಯಲ್ಲಿರುವ ಹೊಗೆಯಾಗಲೀ, ಬೆಂಕಿಯಾಗಲೀ ಕಾಣಿಸುವುದಿಲ್ಲ. ಆದರೆ ಆ ಕಟ್ಟಿಗೆಯಲ್ಲಿ ಬೆಂಕಿ ಇರುವುದು ಪರಮಸತ್ಯ. ಇದರಂತೆ ಕಟ್ಟಿಗೆಯಂತಿರುವ ದೇಹದಲ್ಲಿ ಕೈ-ಕಾಲು-ಹೊಟ್ಟೆ ಮುಂತಾದವುಗಳನ್ನು ಸೀಳಿದಾಗ ಅಲ್ಲಿರುವ ಪರಮಾತ್ಮನು ಕಾಣಿಸಲಾರ. ಆದರೆ ಈ ಶರೀರಾವಯವಗಳ ಅಂತರ್ಯಾಮಿಯಾಗಿ ಜ್ಯೋತಿ ರೂಪನಾದ ಪರಮಾತ್ಮನು ಕಟ್ಟಿಗೆಯಲ್ಲಿ ಬೆಂಕಿ ಇರುವಂತೆ ಇರುವುದಂತೂ ಸತ್ಯ.

ತಾನ್ಯೇವ ಕಾಷ್ಠಾನಿ ಯಥಾ ವಿಮಥ್ಯ
ಧೂಮಂ ಚ ಪಶ್ಯೇಜ್ಜ್ವಲನಂ ಚ ಯೋಗಾತ್ ।

ತದ್ವತ್ ಸುಬುದ್ಧಿಃ ಸಮಮಿಂದ್ರಿಯತ್ವಾದ್
ಬುಧಃ ಪರಂ ಪಶ್ಯತಿ ತತ್ತ್ವಭಾವಮ್ ॥ ೧೩ ॥

ಅದೇ ಕಟ್ಟಿಗೆಯನ್ನು ಚೆನ್ನಾಗಿ ಮಥಿಸಿದಾಗ ಅದರಿಂದ ಹೊಗೆಯ ಜೊತೆಗೆ ಬೆಂಕಿಯು ಹೊರಹೊಮ್ಮುವುದನ್ನು ಕಾಣುತ್ತೇವೆ. ಇದರಂತೆಯೇ ಉತ್ತಮ ಬುದ್ಧಿಯುಳ್ಳವನು ತನ್ನ ಇಂದ್ರಿಯಗಳಿಂದ ಮಥನ ಮಾಡಿ ಪರಮಾತ್ಮ ತತ್ತ್ವವನ್ನು ಕಟ್ಟಿಗೆಯಲ್ಲಿ ಅಡಕವಾದ ಬೆಂಕಿಯನ್ನು ಮಥನದಿಂದ ಕಾಣುವಂತೆ ಮಾಡುತ್ತಾನೆ.

ಯಥಾತ್ಮನೋಽಂಗಂ ಪತಿತಂ ಪೃಥಿವ್ಯಾಂ
ಸ್ವಪ್ನಾಂತರೇ ಪಶ್ಯತಿ ಚಾತ್ಮನೋಽನ್ಯತ್ ।
ಶ್ರೋತ್ರಾದಿಯುಕ್ತಃ ಸುಮನಾಃ ಸುಬುದ್ಧಿ-
ರ್ಲಿಂಗಾತ್ತಥಾ ಗಚ್ಛತಿ ಲಿಂಗಮನ್ಯತ್ ॥ ೧೪ ॥

ಒಬ್ಬನು ತನ್ನ ಕನಸಿನಲ್ಲಿ ತನ್ನ ದೇಹವೇ ತನ್ನಿಂದ ಬೇರೆಯಾಗಿ ಕಾಣಿಸಿದೆ ಎನ್ನುವುದನ್ನು ನೋಡುತ್ತಾನೆ. ಕಿವಿ ಮೊದಲಾದ ಇಂದ್ರಿಯಗಳೊಡನೆ, ಮನಸ್ಸಿನೊಡನೆ, ಬುದ್ಧಿಯೊಡನೆಯೂ ಕೂಡಿ ಮನುಷ್ಯನು ಮರಣದ ಬಳಿಕ ತನ್ನ ದೇಹವು ತನ್ನಿಂದ ದೂರವಾಗಿದೆ ಎನ್ನುವುದನ್ನು ನೋಡುತ್ತಾನೆ. ಹಿಂದಿನ ದೇಹಕ್ಕಿಂತ ಮುಂದಿನ ದೇಹವು ಬೇರೆ ಎನ್ನುವುದನ್ನು ನೋಡುತ್ತಾನೆ. ಇದರಂತೆ ಜ್ಞಾನಿಯಾದವನು ತನ್ನಿಂದ ಭಿನ್ನನಾದ ಪರಮಾತ್ಮನನ್ನು ನೋಡುತ್ತಾನೆ.

ಉತ್ಪತ್ತಿವೃದ್ಧಿಕ್ಷಯಸನ್ನಿಪಾತೈ-
ರ್ನ ಯುಜ್ಯತೇಽಸೌ ಪರಮಃ ಶರೀರೀ ।
ಅನೇನ ಲಿಂಗೇನ ತು ಲಿಂಗಮನ್ಯದ್
ಗಚ್ಛತ್ಯದೃಷ್ಟಃ ಪ್ರತಿಸಂಧಿಯೋಗಾತ್ ॥ ೧೫ ॥

ಜೀವನು ತಾನು ಮಾಡಿದ ಕರ್ಮಗಳ ಫಲವಾಗಿ ಉತ್ಪತ್ತಿಯನ್ನು, ದೈಹಿಕವಾದ ವೃದ್ಧಿಯನ್ನೂ, ದೇಹದ ಕ್ಷಯವನ್ನೂ, ಪುನಃ ಉತ್ಪತ್ತಿಯನ್ನು - ಹೀಗೆ ಇವುಗಳನ್ನು ಹೊಂದುತ್ತಲೇ ಇರುತ್ತಾನೆ. ಆದರೆ ಉತ್ತಮನಾದ ದೇಹಾಂತರ್ಯಾಮಿಯಾದ ನಾರಾಯಣನು ಈ ಜೀವರಂತೆ ಉತ್ಪತ್ತಿ-ವೃದ್ಧಿ-ಕ್ಷಯ ಸನ್ನಿಪಾತಗಳಿಂದ ಬವಣೆ

ಪಡುವಂತೆ ದುಃಖಿತನಾಗಲಾರ. ಜೀವನಲ್ಲಿರುವ ವಿರುದ್ಧ ಧರ್ಮಗಳು ಅರ್ಥಾತ್ ಉತ್ಪತ್ಯಾದಿ ರಾಹಿತ್ಯಗಳು ಪರಮಾತ್ಮನಲ್ಲಿವೆ. ಆದ್ದರಿಂದ ಎಂದಿಗೂ ಜೀವನು ಪರಬ್ರಹ್ಮನಾಗಲಾರ. ಜೀವನು ಜನನಾದಿ ದೋಷಗ್ರಸ್ಥನಾಗಿದ್ದಾನೆ. ಪರಮಾತ್ಮನು ಜನನಾದಿ ದೋಷಗಳಿಂದ ದೂರನಾಗಿದ್ದಾನೆ. ಹೀಗೆ ವಿರುದ್ಧ ಧರ್ಮಾಕ್ರಾಂತರಾದ ಜೀವ-ಪರಮಾತ್ಮನಿಗೆ ಐಕ್ಯವು ಹೊಂದುವುದಿಲ್ಲ. ಈ ಜೀವನು ಕರ್ಮಫಲಾನುಸಾರವಾಗಿ ಈ ದೇಹವನ್ನು ಮರಣಕಾಲದಲ್ಲಿ ತ್ಯಜಿಸಿ ಬೇರೆ ರೂಪದಿಂದ ಇನ್ನೊಂದು ದೇಹವನ್ನು ಕುರಿತು ಹೋಗುತ್ತಾನೆ. ಯಾವ ಬಂಧು-ಬಾಂಧವರಿಗೂ ಈ ಜೀವನ ಕರ್ಮವಾಗಲಿ, ಅವನ ಗಮನವಾಗಲಿ ತಿಳಿಯುವುದಿಲ್ಲ. ಒಂದು ವೇಳೆ ಈ ಜೀವಾತ್ಮನು ಪರಮಾತ್ಮನಿಂದ ಅಭಿನ್ನನಾಗಿದ್ದಲ್ಲಿ ಪೂರ್ವದೇಹ ವಿಯೋಗ ಎಂಬ ನಾಶವು, ಉತ್ತರ ದೇಹ ಸ್ವೀಕಾರವೆಂಬ ಜನ್ಮವು ಹೊಂದಿಕೆಯಾಗುವುದಿಲ್ಲ ಎಂದು ಭಾವ.

ನ ಚಕ್ಷುಷಾ ಪಶ್ಯತಿ ರೂಪಮಾತ್ಮನೋ
ನ ಚಾಪಿ ಸಂಸ್ಪರ್ಶಮುಪೈತಿ ಕಿಂಚಿತ್ ।
ನ ಚಾಪಿ ತೈಃ ಸಾಧಯತೇऽಥ ಕಾರ್ಯಂ
ತೇ ತಂ ನ ಪಶ್ಯಂತಿ ಸ ಪಶ್ಯತೇ ತಾನ್ ॥ ೧೬ ॥

ಈ ಜೀವಾತ್ಮನು ಪರಮಾತ್ಮನ ರೂಪವನ್ನು ತನ್ನ ಈ ಪ್ರಾಕೃತ ಕಣ್ಣಿನಿಂದ ನೋಡಲಾರ. ಈ ಜೀವಾತ್ಮನು ಪರಮಾತ್ಮನ ರೂಪವನ್ನು ಸ್ಪರ್ಶದಿಂದ ತಿಳಿಯಲಾರ. ಯಾವ ಇಂದ್ರಿಯಗಳೂ ತಮ್ಮ ವ್ಯಾಪಾರಗಳ ಮೂಲಕ ಆ ಪರಬ್ರಹ್ಮ ವಸ್ತುವನ್ನು ತಿಳಿಸಿಕೊಡಲಾರವು. ಆದರೆ ಆ ಪರಬ್ರಹ್ಮನು ಈ ಜೀವಾತ್ಮರ ಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡುತ್ತಿದ್ದಾನೆ. ಆದ್ದರಿಂದ ಸರ್ವಜ್ಞನಾದ ಪರಮಾತ್ಮನಿಗೂ, ಅಸರ್ವಜ್ಞರಾದ ಜೀವರಿಗೂ ಭೇದವೇ ಇದೆ ಎಂದು ತಿಳಿಯಬೇಕು.

ಯಥಾ ಸಮೀಪೇ ಜ್ವಲತೋऽನಲಸ್ಯ
ಸಂತಾಪಜಂ ರೂಪಮುಪೈತಿ ಕಿಂಚಿತ್ ।
ನ ಚಾಂತರಂ ರೂಪಗುಣಂ ಬಿಭರ್ತಿ
ತಥೈವ ತದ್ದೃಶ್ಯತೇ ರೂಪಮಸ್ಯ ॥ ೧೭ ॥

ಅಗ್ನಿಸ್ಥಂಭನ ಶಕ್ತಿಯನ್ನು ಹೊಂದಿದ ಒಬ್ಬ ಪುರುಷನು ಉರಿಯುತ್ತಿರುವ ಬೆಂಕಿಯ ಸಮೀಪಕ್ಕೆ ಹೋಗಿ ಆ ಬೆಂಕಿಯ ಮಧ್ಯದಲ್ಲಿ ತನ್ನ ಶರೀರವನ್ನು ಇಟ್ಟರೂ ಆ ಬೆಂಕಿಯು ತನ್ನ ಶಕ್ತಿಯಿಂದ ಸ್ಥಂಭನ ವಿದ್ಯೆಯನ್ನು ಬಲ್ಲವನನ್ನು ಸುಟ್ಟು ಅವನ ಶರೀರದ ರೂಪವನ್ನು ವ್ಯತ್ಯಾಸಗೊಳಿಸಲಾಗುವುದಿಲ್ಲ. ಇದರಂತೆ ಪರಮಾತ್ಮನು ನಮ್ಮೆಲ್ಲರ ಅಂತರ್ಯಾಮಿಯಾಗಿ ಇದ್ದಾನೆ. ಅನೇಕ ವಿಧವಾದ ದುಃಖಗಳಿಂದ ಸಂತಾಪವನ್ನು ಹೊಂದುತ್ತಿರುವ ಜೀವನ ಹೃದಯದಲ್ಲಿ ಪರಮಾತ್ಮನು ಸನ್ನಿಹಿತನಾಗಿದ್ದರೂ ಅಗ್ನಿಸ್ಥಂಭನ ವಿದ್ಯೆಯನ್ನು ಬಲ್ಲವನಂತೆ ತನ್ನ ಸಾಮರ್ಥ್ಯಾತಿಶಯದಿಂದ ಈ ಜೀವನು ಅನುಭವಿಸುವ ಸಾಂಸಾರಿಕ ದುಃಖಗಳನ್ನು ಹೊಂದುವುದಿಲ್ಲ. ನಮ್ಮ ಸಂಗದಿಂದ ಅವನ ರೂಪವು ಬದಲಾಗುವುದಿಲ್ಲ.

ಯಥಾ ಮನುಷ್ಯಃ ಪರಿಮುಚ್ಯ ಕಾಯ-
ಮದೃಶ್ಯಮನ್ಯದ್ ವಿಶತೇ ಶರೀರಮ್ ।
ವಿಸೃಜ್ಯ ಭೂತೇಷು ಮಹತ್ಸು ದೇಹಂ
ತದಾಶ್ರಯಂ ಚೈವ ಬಿಭರ್ತಿ ರೂಪಮ್ ॥ ೧೮ ॥

ಯಾವ ರೀತಿಯಾಗಿ ಮನುಷ್ಯನು ಕರ್ಮಜನಿತವಾದ ಶರೀರವನ್ನು ಕಾಲಿಕವಾಗಿ ತೊರೆದು ಬೇರೆ ಶರೀರವನ್ನು ಹೊಂದುತ್ತಾನೋ, ಪೂರ್ವ ಶರೀರವನ್ನು ತ್ಯಜಿಸಿದಾಗ ಆ ಶರೀರದ ಪಂಚಭೂತಗಳು ತಮ್ಮ ಮೂಲರೂಪವನ್ನು ಹೋಗಿ ಸೇರುತ್ತವೋ, ಈ ಜೀವನು ರೂಪಾಂತರವನ್ನು ಹೊಂದುತ್ತಾನೋ ಅದರಂತೆ ಸಮಸ್ತ ಜೀವರು ಪಂಚಭೂತಗಳು ತಮ್ಮ ಮೂಲರೂಪವನ್ನು ಆಶ್ರಯಿಸುವಂತೆ ಎಲ್ಲಾ ಜೀವರು ಪರಮಾತ್ಮನನ್ನೇ ಆಶ್ರಯಿಸುತ್ತಾರೆ.

ಖಂ ವಾಯುಮಗ್ನಿಂ ಸಲಿಲಂ ತಥೋರ್ವೀಂ
ಸಮಂತತೋऽಭ್ಯಾವಿಶತೇ ಶರೀರೀ ।
ನಾನ್ಯಾಶ್ರಯಾಃ ಕರ್ಮಸು ವರ್ತಮಾನಾಃ
ಶ್ರೋತ್ರಾದಯಃ ಪಂಚ ಗುಣಾನ್ ಶ್ರಯಂತೇ ॥ ೧೯ ॥

ಜೀವನು ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ ಎಂಬ ಪಂಚಭೂತಗಳನ್ನೇ ಎಲ್ಲಿ ಹೋದರೂ ಹೊಂದುತ್ತಾನೆ. ಈ ಜೀವರಿಗೆ ದೇಹಕ್ಕಿಂತ ಬೇರೆಯಾದ ಆಶ್ರಯವು

ಇರುವುದಿಲ್ಲ. ತಮ್ಮ ತಮ್ಮ ವ್ಯಾಪಾರಗಳನ್ನು ಮಾಡುವ ಶ್ರೋತ್ರವೇ ಮೊದಲಾದ ಪಂಚಜ್ಞಾನೇಂದ್ರಿಯಗಳು, ಅವುಗಳಿಗೆ ನೆಲೆಯಾದ ಶಬ್ದ-ಸ್ಪರ್ಶಾದಿ ಗುಣಗಳನ್ನು ಆಶ್ರಯಿಸುತ್ತವೆ.

ಶ್ರೋತ್ರಂ ಖತೋ ಘ್ರಾಣಮಥೋ ಪೃಥಿವ್ಯಾ-
ಸ್ತೇಜೋಮಯಂ ರೂಪಮಥೋ ವಿಪಾಕಃ ।
ಜಲಾಶ್ರಯಃ ಸ್ವೇದ ಕ್ತೋ ರಸಶ್ಚ
ವಾಯ್ವಾತ್ಮಕಃ ಸ್ಪರ್ಶಕೃತೋ ಗುಣಶ್ಚ ॥ ೨೦ ॥

ಕಿವಿಯು ಆಕಾಶಗುಣವಾದ ಶಬ್ದವನ್ನೂ, ಮೂಗು ಭೂಮಿಯ ಗುಣವಾದ ಗಂಧವನ್ನೂ, ಕಣ್ಣು ತೇಜೋಗುಣವಾದ ರೂಪವನ್ನೂ, ನಾಲಿಗೆಯು ಜಲಗುಣವಾದ ರಸವನ್ನೂ, ತ್ವಕ್ ವಾಯುಗುಣವಾದ ಸ್ಪರ್ಶವನ್ನೂ ಆಶ್ರಯಿಸಿಕೊಂಡಿದೆ.

ಮಹತ್ಸು ಭೂತೇಷು ವಸಂತಿ ಪಂಚ
ಪಂಚೇಂದ್ರಿಯಾರ್ಥಾಶ್ಚ ತಥೇಂದ್ರಿಯೇಷು ।
ಸರ್ವಾಣಿ ಚೈತಾನಿ ಮನೋನುಗಾನಿ
ಬುದ್ಧಿಂ ಮನೋಽನ್ವೇತಿ ಮತಿಃ ಸ್ವಭಾವಮ್ ॥ ೨೧ ॥

ಈ ಐದುಗುಣಗಳು ಪಂಚಮಹಾಭೂತಗಳನ್ನು ಆಶ್ರಯಿಸಿಕೊಂಡಿವೆ. ಪಂಚ ಜ್ಞಾನೇಂದ್ರಿಯಗಳು ಮನಸ್ಸನ್ನೂ, ಮನಸ್ಸು ಬುದ್ಧಿಯನ್ನೂ, ಬುದ್ಧಿಯು ತನ್ನ ಕಾರಣವಾದ ಆತ್ಮಸ್ವಭಾವವನ್ನು ಅನುಸರಿಸಿಕೊಂಡಿದೆ.

ಶುಭಾಶುಭಂ ಕರ್ಮ ಕೃತಂ ಯದಸ್ಯ
ತದೇವ ಪ್ರತ್ಯಾದದತೇ ಸ್ವದೇಹೇ ।
ಮನೋಽನುವರ್ತಂತಿ ಪರಾವರಾಣಿ
ಜಲೌಕಸಃ ಸ್ರೋತ ಇವಾನುಕೂಲಮ್ ॥ ೨೨ ॥

ಜೀವನು ಹಿಂದಿನ ಜನ್ಮದಲ್ಲಿ ಮಾಡಿದ ಶುಭಾಶುಭಕರ್ಮಗಳನ್ನು ಈ ಜನ್ಮದಲ್ಲಿ ಪಡೆದ ದೇಹದಲ್ಲಿ ಮತ್ತೆ ಸ್ವೀಕರಿಸುತ್ತಾನೆ. ನೀರಿನಲ್ಲಿ ಸಂಚರಿಸುವ ಜಲಚರಪ್ರಾಣಿಗಳು ಪ್ರವಾಹವನ್ನನುಸರಿಸಿ ಹೋಗುವಂತೆ ಈ ದೇಹಗತವಾದ ಇಂದ್ರಿಯಗಳು ಅಥವಾ ಕರ್ಮಗಳು ಮನಸ್ಸನ್ನನುಸರಿಸಿ ನಡೆಯುತ್ತವೆ.

ಚಲಂ ಯಥಾ ದೃಷ್ಟಿಪಥಂ ಪರೈತಿ
ಸೂಕ್ಷ್ಮಂ ಮಹದ್ರೂಪಮಿವಾಭಿಪಾತಿ ।
ಸ್ವರೂಪಮಾಲೋಚಯತೇ ಚ ಧೀರೋ
ಪರಂ ತಥಾ ಬುದ್ಧಿಪಥಂ ಪರೈತಿ ॥ ೨೩ ॥

ಸೂಕ್ಷ್ಮವಾದ ಜೀವನ ರೂಪವು ಪ್ರಕಾಶದಿಂದಾಗಿ ಮಹತ್ತಾಗಿ ತೋರುತ್ತದೆ. ಅಪರೋಕ್ಷಜ್ಞಾನವನ್ನು ಪಡೆದ ಬಳಿಕ ಸೂಕ್ಷ್ಮವಾದ ಜೀವನು ಅಪರೋಕ್ಷಜ್ಞಾನಿಗಳಿಗೆ ಪ್ರಕಾಶರೂಪನಾಗಿ ಮಹತ್ತಾಗಿ ತೋರುತ್ತಾನೆ. ಇದರಂತೆ ಅಪರೋಕ್ಷಜ್ಞಾನಿಯು ತನ್ನಲ್ಲಿ ಅಂತರ್ಯಾಮಿಯಾಗಿರುವ ಪರಮಾತ್ಮನ ಸ್ವರೂಪವನ್ನು ತನ್ನ ಜ್ಞಾನಮಾರ್ಗದಿಂದ ಚೆನ್ನಾಗಿ ತಿಳಿಯುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಅಷ್ಟಾವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಇಪ್ಪತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಇಪ್ಪತ್ತೊಂಬತ್ತನೆಯ ಅಧ್ಯಾಯ

ಮನು-ಬೃಹಸ್ಪತಿ ಸಂವಾದ

ಮನುಃ

ಯದಿಂದ್ರಿಯೈಸ್ತೂಪಕೃತಾನ್ ಪುರಸ್ತಾತ್
ಪ್ರಾಪ್ತಾನ್ ಗುಣಾನ್ ಸಂಸ್ಮರತೇ ಚಿರಾಯ ।
ತೇಷ್ವಿಂದ್ರಿಯೇಷೂಪಹತೇಷು ಪಶ್ಚಾತ್
ಸ ಬುದ್ಧಿರೂಪಃ ಪರಮಃ ಸ್ವಭಾವಃ ॥ ೧ ॥

ಮನು– ಬೃಹಸ್ಪತಿಯೇ, ಇಂದ್ರಿಯಗಳೊಡನೆ ಬೆರೆತ ಮನಸ್ಸು ಹಿಂದೆ ಅನುಭವಿಸಿದ ವಿಷಯಗಳನ್ನು ಬಹಳ ಕಾಲದ ಬಳಿಕ ಪುನಃ ಸ್ಮರಿಸುತ್ತದೆ. ಆ ಇಂದ್ರಿಯಗಳೆಲ್ಲವೂ ತಮ್ಮ ಬಾಹ್ಯವಾದ ವ್ಯಾಪಾರವನ್ನು ನಿಲ್ಲಿಸಿದಾಗ ಮನಸ್ಸಿನ ಏಕಾಗ್ರತೆಯಿಂದ ಬುದ್ಧಿಯಲ್ಲಿ ಪರಮಸ್ವಭಾವನೆನಿಸಿದ ಪರಮಾತ್ಮನು ಗೋಚರನಾಗುತ್ತಾನೆ.

ಯಥೇಂದ್ರಿಯಾರ್ಥಾನ್ ಯುಗಪತ್ ಸಮಸ್ತಾ-
ನ್ನಾವೇಕ್ಷತೇ ಕೃತ್ಸ್ನಮತುಲ್ಯಕಾಲಮ್ ।
ಯಥಾಬಲಂ ಸಂಚರತೇ ಸ ವಿದ್ವಾಂ-
ಸ್ತಸ್ಮಾತ್ಸ ಏಕಃ ಪರಮಃ ಶರೀರೀ ॥ ೨ ॥

ಯಾವ ರೀತಿಯಾಗಿ ಮನಸ್ಸು ಇಂದ್ರಿಯಗಳಿಂದ ಗ್ರಹಿಸಿದ ವಿಷಯಗಳನ್ನು ಏಕ ಕಾಲದಲ್ಲಿ ಸಮಗ್ರವಾಗಿ ಗ್ರಹಿಸಲು ಸಮರ್ಥವಾಗಿದೆಯೋ ಆ ಮನಸ್ಸು, ಇಂದ್ರಿಯಗಳಲ್ಲಿ ತನ್ನ ಕರ್ಮಬಲವನ್ನು ಅನುಸರಿಸಿ ಜೀವನು ಸಂಚರಿಸುತ್ತಾನೆ. ಆದ್ದರಿಂದ ಈ ಶರೀರ, ಇಂದ್ರಿಯ, ಮನಸ್ಸು, ಬುದ್ಧಿ, ಆತ್ಮರಲ್ಲಿ ಜೀವನೇ ಶ್ರೇಷ್ಠನೆನಿಸಿದ್ದಾನೆ.

ರಜಸ್ತಮಃ ಸತ್ತ್ವಮಥೋ ತೃತೀಯಂ
ಗಚ್ಛತ್ಯಸೌ ಜ್ಞಾನಗುಣಾನ್ ವಿರೂಪಾನ್ ।
ತಥೇಂದ್ರಿಯಾಣ್ಯಾವಿಶತೇ ಶರೀರೀ
ಹುತಾಶನಂ ವಾಯುರಿವೇಂಧನಸ್ಥಮ್ ॥ ೩ ॥

ರಜಸ್ಸು, ತಮಸ್ಸು, ಮೂರನೆಯದ್ದಾದ ಸತ್ತ್ವಗುಣಗಳನ್ನು ರೂಪ, ರಸಾದಿ ಜ್ಞಾನವೆಂಬ ಗುಣಗಳನ್ನು, ಇಂದ್ರಿಯಗುಣಗಳ ಅನೇಕ ಪ್ರಕಾರವನ್ನು ಈ ಶರೀರದಲ್ಲಿರುವ ಜೀವನು ಪ್ರವೇಶಿಸುತ್ತಾನೆ. ಕಟ್ಟಿಗೆಯೊಳಗಿನ ಬೆಂಕಿಯನ್ನು ಗಾಳಿಯು ಪ್ರವೇಶಿಸಿದಂತೆ ಈ ಇಂದ್ರಿಯಾದಿಗಳಲ್ಲಿ ಜೀವನು ಪ್ರವೇಶಿಸುತ್ತಾನೆ.

ನ ಚಕ್ಷುಷಾ ಪಶ್ಯತಿ ರೂಪಮಾತ್ಮನೋ
ನ ಪಶ್ಯತಿ ಸ್ಪರ್ಶನಮಿಂದ್ರಿಯಾಣಾಮ್ ।
ನ ಶ್ರೋತ್ರಲಿಂಗಂ ಶ್ರವಣೇ ನಿದರ್ಶನಂ
ತಥಾಗತಂ ಪಶ್ಯತಿ ತದ್ ವಿನಶ್ಯತಿ ॥ ೪ ॥

ಈ ಜೀವನಾದರೂ ಇಂದ್ರಿಯಗಳ ಮಧ್ಯದಲ್ಲಿರುವ ಚಕ್ಷುರಿಂದ್ರಿಯದಿಂದ ಪರಮಾತ್ಮನನ್ನು ನೋಡಲಾರ. ತ್ವಗಿಂದ್ರಿಯವು ಪರಮಾತ್ಮನನ್ನು ನೋಡದು. ಶ್ರೋತ್ರೇಂದ್ರಿಯವು ಪರಮಾತ್ಮನನ್ನು ತಿಳಿಸಲಾರದು, ಅರ್ಥಾತ್ ಶ್ರವಣಾದಿ ಜನಿತ

ಜ್ಞಾನವು ಪರಮಾತ್ಮನನ್ನು ನೋಡಲಾರದು. ಇದರಂತೆ ಇಂದ್ರಿಯಗಳಿಂದ ಆಚರಿಸಲ್ಪಟ್ಟ ಕರ್ಮಕ್ಕೂ ಪರಮಾತ್ಮನನ್ನು ತಿಳಿಸುವ ಸಾಮರ್ಥ್ಯವಿರುವುದಿಲ್ಲ. ಆದ್ದರಿಂದಲೇ ಜೀವನು ಪರಮಾತ್ಮನನ್ನು ಅರಿಯದೆ ನಾಶಹೊಂದುತ್ತಾನೆ.

ಶ್ರೋತ್ರಾದೀನಿ ನ ಪಶ್ಯಂತಿ ಸ್ವಂ ಸ್ವಮಾತ್ಮಾನಮಾತ್ಮನಾ ।
ಸರ್ವಜ್ಞಃ ಸರ್ವದರ್ಶೀ ಚ ಕ್ಷೇತ್ರಜ್ಞಸ್ತಾನಿ ಪಶ್ಯತಿ ॥ ೫ ॥

ಶ್ರೋತ್ರವೇ ಮೊದಲಾದ ಇಂದ್ರಿಯಗಳು ತಮ್ಮ ತಮ್ಮ ರೂಪಗಳನ್ನು ತಾವು ತಿಳಿಯಲಾರವು. ಕ್ಷೇತ್ರಜ್ಞನೆನಿಸಿದ ಪರಮಾತ್ಮನು ಅವೆಲ್ಲವನ್ನೂ ತಿಳಿಯಬಲ್ಲವನಾದ್ದರಿಂದ ಸರ್ವದರ್ಶೀ, ಸರ್ವಜ್ಞನೆನಿಸಿದ್ದಾನೆ.

ಯಥಾ ಹಿಮವತಃ ಪಾರ್ಶ್ವಂ ಪೃಷ್ಠಂ ಚಂದ್ರಮಸೋ ಯಥಾ ।
ನ ದೃಷ್ಟಪೂರ್ವಂ ಮನುಜೈರ್ನ ಚ ತನ್ನಾಸ್ತಿ ತಾವತಾ ॥ ೬ ॥

ಹಿಮಾಲಯ ಬೆಟ್ಟದ ಹಿಂದಿನ ಭಾಗವನ್ನು, ಚಂದ್ರಮಂಡಲದ ಹಿಂಭಾಗವನ್ನು ಮನುಷ್ಯನು ನೋಡಲಿಲ್ಲ ಎಂದ ಮಾತ್ರಕ್ಕೆ ಅದರ ಹಿಂಭಾಗಗಳೇ ಇಲ್ಲವೆಂದು ಅರ್ಥವಲ್ಲ.

ತದ್ವದ್ ಭೂತೇಷು ಭೂತಾತ್ಮಾ ಸೂಕ್ಷ್ಮೋ ಜ್ಞಾನಾತ್ಮವಾನಸೌ ।
ಅದೃಷ್ಟಪೂರ್ವಶ್ಚಕ್ಷುರ್ಭ್ಯಾಂ ನ ಚಾಸೌ ನಾಸ್ತಿ ತಾವತಾ ॥ ೭ ॥

ಅದರಂತೆ ಜ್ಞಾನರೂಪಿಯಾದ, ಸೂಕ್ಷ್ಮನಾದ, ಸಮಸ್ತ ಭೂತಗಳ ಅಂತರ್ಯಾಮಿಯಾದ ಪರಮಾತ್ಮನು ಇಂದ್ರಿಯಗಳಿಗೆ ಗೋಚರವಾಗಿಲ್ಲವೆಂದ ಮಾತ್ರಕ್ಕೆ ಇಲ್ಲವೆಂದೇ ಅರ್ಥವಲ್ಲ.

ಪಶ್ಯನ್ನಪಿ ಯಥಾ ಲಕ್ಷ್ಮ ಜಗತ್ಸೋಮೇ ನ ವಿಂದತಿ ।
ಏವಮಸ್ತಿ ನ ವೇತ್ಯೇತನ್ನ ಚ ತನ್ನ ಪರಾಯಣಮ್ ॥ ೮ ॥

ಜಗತ್ತಿನಲ್ಲಿ ಚಂದ್ರಮಂಡಲವನ್ನು ಅದರಲ್ಲಿರುವ ಚಿಹ್ನೆಯನ್ನು ನೋಡುತ್ತಿದ್ದರೂ ಆ ಪುರುಷನು ಆ ಚಿಹ್ನೆಯನ್ನು ಏನೆಂದು ಹೇಗೆ ತಿಳಿಯನೋ, ಒಳಗೆ ಇರುವ ಆ ಚಿಹ್ನೆಯ ಸ್ವರೂಪವನ್ನು ಅರಿಯದಿರುವಂತೆ ಉತ್ತಮ ಜ್ಞಾನಿಯಾದವನೂ ಪರಮಾತ್ಮನ

ಸ್ವರೂಪವನ್ನು ಅರ್ಥಮಾಡಿಕೊಳ್ಳುತ್ತಾನೆ. ಆದರೆ ಮಧ್ಯಮದಲ್ಲಿರುವ ಜೀವನು ಹೃದಯದಲ್ಲಿ ಪರಮಾತ್ಮನು ಇದ್ದಾನೋ ಇಲ್ಲವೋ ಎಂದು ಸಂಶಯಗ್ರಸ್ಥನಾಗುತ್ತಾನೆ. ಮಿಥ್ಯಾಜ್ಞಾನಿಯಾದವನು ಎಲ್ಲರಿಗೂ ಆಶ್ರಯನಾದ ಮುಕ್ತಾಧಾರನಾದ ನಾರಾಯಣನನ್ನು ಇಲ್ಲವೆಂದೇ ತಿಳಿಯುತ್ತಾನೆ. ಅವನು ಪರಮಾತ್ಮನನ್ನು ತಿಳಿಯುವುದೇ ಇಲ್ಲ.

ರೂಪವಂತಮರೂಪತ್ವಾದುದಯಾಸ್ತಮಯೇ ಬುಧಾಃ ।
ಧಿಯಾ ಸಮನುಪಶ್ಯಂತಿ ತದ್ಗತಾಃ ಸವಿತುರ್ಗತಿಮ್ ॥ ೯ ॥

ತಥಾ ಬುದ್ಧಿಪ್ರದೀಪೇನ ದೂರಸ್ಥಂ ಸುವಿಪಶ್ಚಿತಃ ।
ಪ್ರತ್ಯಾಸನ್ನಂ ನಿಷೀದಂತಿ ಜ್ಞೇಯಂ ಜ್ಞಾನಾಭಿಸಂಹಿತಮ್ ॥ ೧೦ ॥

ಸೂರ್ಯನನ್ನು ಕಂಡ ಜ್ಞಾನಿಗಳು ಲೋಕದ ವಸ್ತುಗಳಲ್ಲಿ ಕಾಣದೆ ಇರುವ ರೂಪವುಳ್ಳವನಲ್ಲ. ಅಲೌಕಿಕ ರೂಪವುಳ್ಳವನು ಎಂದು ತಿಳಿಯುತ್ತಾರೆ. ಉದಯಾಸ್ತಮಾನಗಳ ಮೂಲಕ ಸೂರ್ಯನಲ್ಲಿರುವ ಚಲನೆಯನ್ನು ಬುದ್ಧಿಯಿಂದಲೇ ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ. ಇದರಂತೆ ಬುದ್ಧಿಯೆಂಬ ಬೆಳಕಿನ ಸಹಾಯದಿಂದ ಜ್ಞಾನಿಗಳಾದವರು ಅತ್ಯಂತ ದೂರನಾದ ಪರಮಾತ್ಮನು ಹೃದಯದಲ್ಲೇ ಇದ್ದಾನೆಂದೂ, ಅವನೇ ತಿಳಿಯಬೇಕಾದ ಪದಾರ್ಥವೆಂದೂ, ಜ್ಞಾನಪರಿಪೂರ್ಣನೆಂದೂ ತಿಳಿಯುತ್ತಾರೆ.

ನ ಹಿ ಖಿಲ್ವನುಪಾಯೇನ ಕಶ್ಚಿದರ್ಥೋಽಭಿಸಿದ್ಧ್ಯತಿ ।
ಸೂತ್ರಜಾಲೈರ್ಯಥಾ ಮತ್ಸ್ಯಾನ್ ಬಧ್ನಂತಿ ಜಲಜೀವಿನಃ ॥ ೧೧ ॥

ಜಗತ್ತಿನಲ್ಲಿ ಒಂದು ವಸ್ತುವು ಲಭಿಸಬೇಕಾದರೆ ಅದರ ಪ್ರಾಪ್ತಿಗೆ ಬೇಕಾದ ಉಪಾಯವನ್ನು ಹೂಡಲೇಬೇಕು. ಯುಕ್ತಿಬದ್ಧವಾದ ಉಪಾಯವಿಲ್ಲದೆ ಸಾಮಾನ್ಯ ಪದಾರ್ಥಗಳು ಸಿಗಲು ಸಾಧ್ಯವಿಲ್ಲ. ಜಲಚರ ಪ್ರಾಣಿಗಳಾದ ಮತ್ಸ್ಯಾದಿಗಳಿಂದಲೇ ಜೀವನವನ್ನು ಸಾಗಿಸುವ ಬೆಸ್ತರು ಬಲೆಗಳ ಸಮುದಾಯದಿಂದ ಯುಕ್ತಿಬದ್ಧವಾಗಿ ಮೀನುಗಳನ್ನು ಹೇಗೆ ಹಿಡಿಯುತ್ತಾರೋ ಅದರಂತೆ ಜೀವನದ ಪದಾರ್ಥಗಳನ್ನು ಹೊಂದಬಹುದು.

ಮೃಗೈರ್ಮೃಗಾಣಾಂ ಗ್ರಹಣಂ ಪಕ್ಷಿಣಾಂ ಪಕ್ಷಿಭಿರ್ಯಥಾ ।
ಗಜಾನಾಂ ಚ ಗಜೈರೇವಂ ಜ್ಞೇಯಂ ಜ್ಞಾನೇನ ಗೃಹ್ಯತೇ ॥ ೧೨ ॥

ಬೇಡರು ಮೃಗಗಳಿಂದ ಮೃಗಗಳನ್ನು ಹಿಡಿಯುತ್ತಾರೆ. ಪಕ್ಷಿಗಳ ಮೂಲಕ ಪಕ್ಷಿಗಳನ್ನು ಹಿಡಿಯುತ್ತಾರೆ. ಆನೆಗಳ ಮೂಲಕವೇ ಕಾಡಾನೆಗಳನ್ನು ವಶಪಡಿಸಿಕೊಳ್ಳುತ್ತಾರೆ. ಇದರಂತೆ ತಿಳಿಯಲು ಅರ್ಹನಾದ ಪರಮಾತ್ಮನನ್ನು, ಜ್ಞಾನರೂಪಿಯಾದ ಪರಮಾತ್ಮನನ್ನು ಜ್ಞಾನದ ಮೂಲಕವೇ ಕಂಡುಕೊಳ್ಳಬೇಕು.

ಅಹಿರೇವ ಹ್ಯಹೇಃ ಪಾದಾನ್ ಪಶ್ಯತೀತಿ ನಿದರ್ಶನಮ್ ।
ತದ್ವನ್ಮೂರ್ತಿಷು ಮೂರ್ತಿಷ್ಮಂ ಜ್ಞೇಯಂ ಜ್ಞಾನೇನ ಪಶ್ಯತಿ ॥ ೧೩ ॥

ಹಾವಿನ ಹೆಜ್ಜೆಯನ್ನು ಹಾವೇ ಬಲ್ಲದು ಎಂಬ ನಾಣ್ನುಡಿಯಿದೆ. ಅದೇ ರೀತಿಯಾಗಿ ಸ್ಥೂಲದೇಹದಲ್ಲಿರುವ ಸೂಕ್ಷ್ಮರೂಪಿಯಾದ ಪರಮಾತ್ಮನನ್ನು ಜ್ಞಾನಿಯು ಜ್ಞಾನದ ಸಹಾಯದಿಂದಲೇ ನೋಡಬೇಕು.

ನೋತ್ಸಹಂತೇ ಯಥಾ ವೇತ್ತುಮಿಂದ್ರಿಯೈರಿಂದ್ರಿಯಾಣ್ಯಪಿ ।
ತಥೈವೇಹ ಪರಾ ಬುದ್ಧಿಃ ಪರಂ ಬುದ್ಧ್ಯಾ ನ ಪಶ್ಯತಿ ॥ ೧೪ ॥

ಜನರು ತಮ್ಮ ಇಂದ್ರಿಯಗಳನ್ನು ತಮ್ಮ ಇಂದ್ರಿಯಗಳಿಂದಲೇ ಕಾಣಲಾರರು. ಅದರಂತೆ ಪರಮಾತ್ಮನ ಸ್ವರೂಪವನ್ನು ಕೇವಲ ಬುದ್ಧಿಬಲದಿಂದ ತಿಳಿಯಲಾಗದು.

ಯಥಾ ಚಂದ್ರೋ ಹ್ಯಮಾವಾಸ್ಯಾಮಲಿಂಗತ್ವಾನ್ನ ದೃಶ್ಯತೇ ।
ನ ಚ ನಾಶೋಽಸ್ಯ ಭವತಿ ತಥಾ ವಿದ್ಧಿ ಶರೀರಿಣಮ್ ॥ ೧೫ ॥

ಚಂದ್ರನು ಅಮಾವಾಸ್ಯೆಯಲ್ಲಿ ಕಾಣಿಸದಿದ್ದ ಮಾತ್ರಕ್ಕೆ ಅವನು ನಾಶ-ಹೊಂದಿದನೆಂದು ಯಾರೂ ಹೇಳುವುದಿಲ್ಲ. ಅದರಂತೆ ಶರೀರದಲ್ಲಿರುವ ಪರಮಾತ್ಮನು ಕಾಣಿಸದಿದ್ದರೂ ಅವನು ಇಲ್ಲವೆಂದು ಅರ್ಥವಲ್ಲ.

ಕ್ಷೀಣಕೋಶೋ ಹ್ಯಮಾವಾಸ್ಯಾಂ ಚಂದ್ರಮಾ ನ ಪ್ರಕಾಶತೇ ।
ತದ್ವನ್ಮೂರ್ತಿವಿಯುಕ್ತಃ ಸನ್ ಶರೀರೀ ನೋಪಲಭ್ಯತೇ ॥ ೧೬ ॥

ಅಮಾವಾಸ್ಯೆಯಲ್ಲಿ ಚಂದ್ರನು ಕ್ಷೀಣಮಂಡಲನಾದುದರಿಂದ ಕಣ್ಣಿಗೆ ಕಾಣಿಸುವುದಿಲ್ಲ. ಅದರಂತೆ ಜೀವರ ಅಂತರ್ಯಾಮಿಯಾದ ಪರಮಾತ್ಮನು ಜ್ಞಾನದ ಸಹಾಯದಿಂದ ಪ್ರಜ್ವಲಿತನಾಗಿಲ್ಲವಾದುದರಿಂದ ಕಾಣಿಸುತ್ತಿಲ್ಲ ಎಂದು ತಿಳಿಯಬೇಕೇ ಹೊರತು ಇಲ್ಲವೇ ಇಲ್ಲ ಎಂದು ಭಾವಿಸಬಾರದು.

ಯಥಾ ಕೋಶಾಂತರಂ ಪ್ರಾಪ್ಯ ಚಂದ್ರಮಾ ಭ್ರಾಜತೇ ಪುನಃ ।
ತದ್ವಲ್ಲಿಂಗಾಂತರಂ ಪ್ರಾಪ್ಯ ಶರೀರೀ ಭ್ರಾಜತೇ ಪುನಃ ॥ ೧೭ ॥

ಚಂದ್ರನು ಆಕಾಶದಲ್ಲಿ ಅದೃಶ್ಯನಾಗಿದ್ದು ಮೋಡದ ಮಧ್ಯದಲ್ಲಿ ಸಿಲುಕಿ ಕಾಣಿಸದಿದ್ದರೂ ಪುನಃ ಬೇರೆ ಸ್ಥಳಕ್ಕೆ ಹೋದಾಗ ಸ್ವಪ್ರಕಾಶದಿಂದ ಹೇಗೆ ಬೆಳಗುತ್ತಾನೋ ಅದರಂತೆ ಜೀವನೂ ಇನ್ನೊಂದು ಶರೀರವನ್ನು ಹೊಂದಿ ತತ್ತ್ವಜ್ಞಾನದ ಬೆಳಕಿನಿಂದ ಪುನಃ ಬೆಳಗುತ್ತಾನೆ.

ಜನ್ಮವೃದ್ಧಿಕ್ಷಯಶ್ಚಾಸ್ಯ ಪ್ರತ್ಯಕ್ಷೇಣೋಪಲಭ್ಯತೇ ।
ಸಾ ತು ಚಂದ್ರಮಸೋ ವ್ಯಕ್ತಿರ್ನ ತು ತಸ್ಯ ಶರೀರಿಣಃ ॥ ೧೮ ॥

ನಮ್ಮ ಕಣ್ಣಿಗೆ ಕಾಣಿಸುವ ಚಂದ್ರಮಂಡಲದಲ್ಲಿನಡೆಯುವ ಚಂದ್ರನ ಜನ್ಮ-ವೃದ್ಧಿ-ಕ್ಷಯಗಳು ಚಂದ್ರಮಂಡಲದ ಗುಣವೇ ಹೊರತು ಅವು ಚಂದ್ರನ ಗುಣಗಳಾಗಿರುವುದಿಲ್ಲ. ಇದರಂತೆ ಉತ್ಪತ್ತಿ-ಕ್ಷಯಗಳೆಲ್ಲ ಆತ್ಮನ ದೇಹಕ್ಕೆ ಸಂಬಂಧ ಪಟ್ಟವೇ ವಿನಾ ಜೀವನಿಗಲ್ಲ.

ಉತ್ಪತ್ತಿವೃದ್ಧಿವ್ಯಯತೋ ಯಥಾ ಸ ಇತಿ ಗೃಹ್ಯತೇ ।
ಚಂದ್ರ ಏವ ತ್ವಮಾವಾಸ್ಯಾಂ ತಥಾ ಭವತಿ ಮೂರ್ತಿಮಾನ್ ॥ ೧೯ ॥

ಚಂದ್ರನು ಅಮಾವಾಸ್ಯೆಯ ದಿವಸದಲ್ಲಿ ಕಾಣಿಸದಿದ್ದರೂ ಅದೇ ಚಂದ್ರನು ಮತ್ತೆ ಉದಿಸಿದಾಗ, ವೃದ್ಧಿಯನ್ನು ಹೊಂದಿದಾಗ ಅದೇ ಚಂದ್ರನೇ ಬಂದನೆಂದು ಭಾವಿಸುತ್ತಾರೆ ವಿನಾ ಅಮಾವಾಸ್ಯೆಯಂದು ಚಂದ್ರ ಸತ್ತನು, ಬೇರೆ ಚಂದ್ರನು ಮರುದಿವಸ ಹುಟ್ಟಿದನು ಎಂದು ಯಾರೂ ತಿಳಿಯರು. ಇದರಂತೆ ಜೀವರಿಗೆ ಉತ್ಪತ್ತಿ-ವೃದ್ಧಿ-ಜರೆ ಇವುಗಳು ಬದಲಾಗುತ್ತಿದ್ದರೂ ಜೀವನು ಬದಲಾಗಲಾರ ಎಂದು ಭಾವಿಸಬೇಕು.

ನಾಭಿಸರ್ಪದ್ ವಿಮುಂಚದ್ವಾ ಶಶಿನಂ ದೃಶ್ಯತೇ ತಮಃ ।
ವಿಸೃಜಂಶ್ಚೋಪಸರ್ಪಂಶ್ಚ ತದ್ವತ್ ಪಶ್ಯ ಶರೀರಿಣಮ್ ॥ ೨೦ ॥

ರಾಹುವು ಚಂದ್ರನನ್ನು ನುಂಗುವುದು, ಬಿಡುವುದು ಯಾವುದೂ ನಮಗೆ ಕಾಣಿಸುವುದಿಲ್ಲ. ಅದರಂತೆ ಆತ್ಮನು ದೇಹವನ್ನು ಬಿಡುವುದು, ಮತ್ತೊಂದು ದೇಹವನ್ನು ಪ್ರವೇಶಿಸುವುದು ನಮಗೆ ತಿಳಿಯಲಾರದು.

ಯಥಾ ಚಂದ್ರಾರ್ಕಸಂಯುಕ್ತಂ ತಮಸ್ತದುಪಲಭ್ಯತೇ ।
ತದ್ವಚ್ಛರೀರಸಂಯುಕ್ತಃ ಶರೀರೀತ್ಯುಪಲಭ್ಯತೇ ॥ ೨೧ ॥

ರಾಹುವು ಚಂದ್ರ-ಸೂರ್ಯನನ್ನು ಹಿಡಿದಿದ್ದಾಗಲೇ ನಮಗೆ ಅವನು ಹಿಡಿದಿದ್ದಾನೆ. ಈಗ ಗ್ರಹಣವುಂಟಾಗಿದೆ ಎಂದು ಕಾಣಿಸುತ್ತದೆ. ಇದರಂತೆ ಆತ್ಮನು ಶರೀರದ ಸಂಬಂಧವನ್ನು ಹೊಂದಿದಾಗಲೇ ನಮಗೆ ಜೀವನಿದ್ದಾನೆ ಎಂಬ ತಿಳಿವಳಿಕೆಯು ಬರುತ್ತದೆ.

ಯಥಾ ಚಂದ್ರಾರ್ಕನಿರ್ಮುಕ್ತಃ ಸ ರಾಹುರ್ನೋಪಲಭ್ಯತೇ ।
ತದ್ವಚ್ಛರೀರನಿರ್ಮುಕ್ತಃ ಶರೀರೀ ನೋಪಲಭ್ಯತೇ ॥ ೨೨ ॥

ಚಂದ್ರ-ಸೂರ್ಯರನ್ನು ಬಿಟ್ಟು ಹೋದ ರಾಹುವು ಬಳಿಕ ಹೇಗೆ ಕಾಣಿಸುವುದಿಲ್ಲವೋ ಅದರಂತೆ ಶರೀರವನ್ನು ಜೀವನು ಬಿಟ್ಟುಹೋಗಲು ಶರೀರಿಯು ಅರ್ಥಾತ್ ಜೀವನು ಕಾಣಿಸುವುದಿಲ್ಲ.

ಯಥಾ ಚಂದ್ರೋ ಹ್ಯಮಾವಾಸ್ಯಾಂ ನಕ್ಷತ್ರೈರ್ಯುಜ್ಯತೇ ಗತಃ ।
ತದ್ವಚ್ಛರೀರನಿರ್ಮುಕ್ತಃ ಫಲೈರ್ಯುಜ್ಯತಿ ಕರ್ಮಣಃ ॥ ೨೩ ॥

ಅಮಾವಾಸ್ಯೆಯ ಚಂದ್ರನು ಮುಚ್ಚಿಹೋಗಿದ್ದರೂ ನಕ್ಷತ್ರಗಳು ಅಲ್ಲಿಯೇ ಇರುವಂತೆ ಆತ್ಮನು ದೇಹವನ್ನು ಬಿಟ್ಟುಹೋದ ಮೇಲೂ ಆ ದೇಹಕೃತವಾದ ಕರ್ಮಗಳು ಹಾಗೆಯೇ ಇರುತ್ತವೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಏಕೋನತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಇಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತನೆಯ ಅಧ್ಯಾಯ

ಪರಮಾತ್ಮನ ಸಾಕ್ಷಾತ್ಕಾರ, ಉಪಾಯ ಮತ್ತು ಅದರ ಮಹತ್ವ

ಮನುಃ

ಯಥಾ ವ್ಯಕ್ತಮಿದಂ ಶೇತೇ ಸ್ವಪ್ನೇ ಚರತಿ ಚೇತನಮ್ ।
ಜ್ಞಾನಮಿಂದ್ರಿಯಸಂಯುಕ್ತಂ ತದ್ವತ್ ಪ್ರೇತ್ಯ ಭವಾಭವೌ ॥ ೧ ॥

ಮನು– ಸ್ವಪ್ನಾವಸ್ಥೆಯಲ್ಲಿರುವ ಮನುಷ್ಯನ ಸ್ಥೂಲಶರೀರವು ಮಲಗಿದ್ದರೂ ಸೂಕ್ಷ್ಮ ಚೇತನವು ಯಾವ ರೀತಿಯಲ್ಲಿ ಸಂಚರಿಸುತ್ತದೋ ಅದೇ ರೀತಿಯಲ್ಲಿ ಜ್ಞಾನ-ರೂಪಿಯಾದ ಆತ್ಮನು ಇಂದ್ರಿಯಗಳ ಜೊತೆ ಸಂಯುಕ್ತವಾದಾಗ ಮತ್ತು ಅವುಗಳ ಜೊತೆಗೆ ಬಿಡುಗಡೆಯನ್ನು ಹೊಂದಿದಾಗ ಬಂಧ-ಮೋಕ್ಷಗಳನ್ನು ಅನುಭವಿಸುತ್ತಾನೆ. ಇಂದ್ರಿಯಸಂಯೋಗವಾದಾಗ ಬಂಧನವಾಗುತ್ತದೆ, ಅದರಿಂದ ಬಿಡುಗಡೆಯಾದಾಗ ಮೋಕ್ಷವಾಗುತ್ತದೆ.

ಯಥಾಂಭಸಿ ಪ್ರಸನ್ನೇ ತು ರೂಪಂ ಪಶ್ಯತಿ ಚಕ್ಷುಷಾ ।
ತದ್ವತ್ ಪ್ರಸನ್ನೇಂದ್ರಿಯವಾನ್ ಜ್ಞೇಯಂ ಜ್ಞಾನೇನ ಪಶ್ಯತಿ ॥ ೨ ॥

ನಿಶ್ಚಲವಾದ ನೀರಿನಲ್ಲಿ ಮನುಷ್ಯನು ಯಾವ ರೀತಿಯಾಗಿ ತನ್ನ ರೂಪವನ್ನು ತನ್ನ ಕಣ್ಣಿನಿಂದಲೇ ನೋಡಿಕೊಳ್ಳಬಲ್ಲನೋ ಅದೇ ರೀತಿಯಾಗಿ ಜ್ಞಾನಿಯು ಇಂದ್ರಿಯಗಳು ಮತ್ತು ಮನಸ್ಸು ಶುದ್ಧವಾದಾಗ, ಕಾಮ-ಕ್ರೋಧಗಳಿಂದ ವಿದುರವಾದಾಗ ಜ್ಞೇಯವಾದ ಪರಬ್ರಹ್ಮನನ್ನು ಜ್ಞಾನದ ಮೂಲಕವಾಗಿ ನೋಡುತ್ತಾನೆ.

ಸ ಏವ ಲುಲಿತೇ ತಸ್ಮಿನ್ ಯಥಾ ರೂಪಂ ನ ಪಶ್ಯತಿ ।
ತಥೇಂದ್ರಿಯಾಕುಲೀಭಾವೇ ಜ್ಞೇಯಂ ಜ್ಞಾನೇ ನ ಪಶ್ಯತಿ ॥ ೩ ॥

ಚಂಚಲವಾದ ನೀರಿನಲ್ಲಿ ತನ್ನ ರೂಪವನ್ನು ಹೇಗೆ ನೋಡಿಕೊಳ್ಳಲು ಸಾಧ್ಯವಿಲ್ಲವೋ ಅದರಂತೆ ಅಸ್ಥಿರವಾದ, ಚಂಚಲವಾದ ಇಂದ್ರಿಯಗಳಿಂದ ಕೂಡಿದ ಬುದ್ಧಿಯುಳ್ಳ ಮನುಷ್ಯನು ಜ್ಞೇಯನಾದ ಪರಮಾತ್ಮನನ್ನು ಕಾಣಲಾರ.

ಅಬುದ್ಧಿರಜ್ಞಾನಕೃತಾ ಅಬುದ್ಧ್ಯಾ ದುಷ್ಯತೇ ಮನಃ ।
ದುಷ್ಟಸ್ಯ ಮನಸಃ ಪಂಚ ಸಂಪ್ರದುಷ್ಯಂತಿ ಮಾನಸಾಃ ॥ ೪ ॥

ಅಜ್ಞಾನದಿಂದಾಗಿ ಬುದ್ಧಿಯು ಹಾಳಾಗುತ್ತದೆ. ಬುದ್ಧಿ ಹಾಳಾದಾಗ ಮನಸ್ಸು ರಾಗ-ದ್ವೇಷಗಳಿಂದ ಕದಡಿಹೋಗುತ್ತದೆ. ಮನಸ್ಸು ದುಷ್ಟವಾದಾಗ ಪ್ರಧಾನವಾದ ಮನಸ್ಸಿನ ಅಭಿಪ್ರಾಯವನ್ನು ಪಂಚಜ್ಞಾನೇಂದ್ರಿಯಗಳು ಅನುಸರಿಸುತ್ತಾ ಅವುಗಳೂ ಕಲುಷಿತವಾಗುತ್ತವೆ.

ಅಜ್ಞಾನತೃಪ್ತೋ ವಿಷಯೇಷ್ವವಗಾಢೋ ನ ದೃಶ್ಯತೇ ।
ಅದೃಷ್ಟಪ್ಲವ ತು ಪೂತಾತ್ಮಾ ವಿಷಯೇಭ್ಯೋ ನಿವರ್ತತೇ ॥ ೫ ॥

ಅಜ್ಞಾನದಿಂದ ಆವೃತನಾದ ಜೀವನು ವಿಷಯಸುಖಗಳಲ್ಲಿಯೇ ಮುಳುಗಿ ಹೋಗಿ ನಿರಂತರ ಅವುಗಳನ್ನೇ ಅನುಭವಿಸುತ್ತಿದ್ದರೂ ತೃಪ್ತಿಯನ್ನು ಹೊಂದುವುದಿಲ್ಲ. ಅದೃಷ್ಟ ವಶದಿಂದ ಭಗವಂತನ ಅನುಗ್ರಹದಿಂದ ಕೆಲವೊಮ್ಮೆ ಜೀವನು ವಿಷಯ ಸುಖಗಳಿಂದ ಹಿಂದಿರುಗುತ್ತಾನೆ. ಆಗ ಅವನು ಮೋಕ್ಷದ ಮಾರ್ಗವನ್ನು ಅವಲಂಬಿಸುತ್ತಾನೆ.

ತರ್ಷಚ್ಛೇದೋ ನ ಭವತಿ ಪುರುಷಸ್ಯೇಹ ಕಲ್ಮಷಾತ್ ।
ನಿವರ್ತತೇ ತಥಾ ತರ್ಷಃ ಪಾಪಮಂತಂ ಗತಂ ಯಥಾ ॥ ೬ ॥

ಪಾಪದ ಕಾರಣದಿಂದಾಗಿ ಮನುಷ್ಯನಿಗೆ ಆಕಾಂಕ್ಷೆಗಳು ಪೂರ್ಣವಾಗುವುದಿಲ್ಲ. ಪಾಪವು ಯಾವಾಗ ವಿನಾಶ ಹೊಂದುತ್ತದೋ ಆಗ ತೃಷ್ಣೆಯು ನಿವೃತ್ತಿಯಾಗುತ್ತದೆ. ಪಾಪ ಹೊಂದಿದವನನ್ನು ತೃಷ್ಣೆಗಳು ಪುನಃ ಪುನಃ ಪೀಡಿಸುತ್ತವೆ.

ಅಂತರ್ಗತೇನ ಪಾಪೇನ ದಹ್ಯಮಾನೇನ ಚೇತಸಾ ।
ಶುಭಾಶುಭವಿಕಾರೇಣ ನ ಸ ಭೂಯೋಽಭಿಜಾಯತೇ ॥ ೭ ॥

ಪಾಪವು ಜೀವನನ್ನು ಸೇರಿಕೊಂಡಾಗ ಅದರಿಂದ ಸುಡಲ್ಪಡುತ್ತಿರುವ ಜೀವನು ಶುಭಾಶುಭ ವಿಕಾರಗಳಿಗೆ ತುತ್ತಾಗಿ ಶ್ರೇಷ್ಠತ್ವವನ್ನು ಹೊಂದುವುದಿಲ್ಲ.

ವಿಷಯೇಷು ಚ ಸಂಸರ್ಗಾಚ್ಛಾಶ್ವತಸ್ಯ ಚ ಸಂಶಯಾತ್ ।
ಮನಸಾ ಚಾನ್ಯದಾಕಾಂಕ್ಷನ್ ಪರಂ ನ ಪ್ರತಿಪದ್ಯತೇ ॥ ೮ ॥

ಮನುಷ್ಯನು ವಿಷಯಗಳಲ್ಲಿ ಸಂಸರ್ಗವನ್ನು ಹೊಂದುವುದರಿಂದ, ನಿರಂತರವೂ ವಿಷಯಸುಖಗಳನ್ನೇ ಆಶ್ರಯಿಸುವುದರಿಂದ ಆತ್ಮಸಾಧನೆಗೆ ವಿರುದ್ಧವಾದುದನ್ನೇ ಮನಸ್ಸಿನಲ್ಲಿ ಚಿಂತಿಸುತ್ತಾ ಪರಮಾತ್ಮನನ್ನು ಹೊಂದುವುದಿಲ್ಲ.

ಜ್ಞಾನಮುತ್ಪದ್ಯತೇ ಪುಂಸಾಂ ಕ್ಷಯಾತ್ ಪಾಪಸ್ಯ ಕರ್ಮಣಃ ।
ಅಥಾದರ್ಶತಲಪ್ರಖ್ಯೇ ಪಶ್ಯತ್ಯಾತ್ಮಾನಮಾತ್ಮನಿ ॥ ೯ ॥

ಸ್ವಚ್ಛವಾದ ಕನ್ನಡಿಯಲ್ಲಿ ಪುರುಷನ ಪ್ರತಿಬಿಂಬವು ಚೆನ್ನಾಗಿ ಕಾಣಲು ಸಾಧ್ಯವಾಗುವಂತೆ ಪಾಪಕರ್ಮಗಳು ವಿನಾಶವಾದ ಬಳಿಕವೇ ಪುರುಷನ ಅಂತಃಕರಣದಲ್ಲಿ ಜ್ಞಾನದ ಉದಯವಾಗುತ್ತದೆ. ಕನ್ನಡಿಯಂತೆ ಸ್ವಚ್ಛವಾದ ಅಂತಃಕರಣದ ಮೂಲಕ ಪುರುಷನು ಜ್ಞಾನರೂಪಿಯಾದ ಪರಮಾತ್ಮನನ್ನು ತನ್ನಲ್ಲಿ ಕಂಡುಕೊಳ್ಳುತ್ತಾನೆ.

ಪ್ರಸೃತೈರಿಂದ್ರಿಯೈರ್ದುಃಖೀ ತೈರೇವ ನಿಯತೈಃ ಸುಖೀ ।
ತಸ್ಮಾದಿಂದ್ರಿಯರೂಪೇಭ್ಯೋ ಯಚ್ಚೇದಾತ್ಮಾನಮಾತ್ಮನಾ ॥ ೧೦ ॥

ವಿಷಯ ಪದಾರ್ಥಗಳ ಕಡೆ ಇಂದ್ರಿಯಗಳನ್ನು ಹರಿಬಿಟ್ಟರೆ ಮನುಷ್ಯನು ದುಃಖಕ್ಕೆ ತುತ್ತಾಗುತ್ತಾನೆ. ಆದ್ದರಿಂದ ಇಂದ್ರಿಯಗಳನ್ನು ಬುದ್ಧಿಯ ಮೂಲಕವಾಗಿ ವಿಷಯ ಪದಾರ್ಥಗಳಿಂದ ತಡೆ ಹಿಡಿಯಬೇಕು.

ಇಂದ್ರಿಯೇಭ್ಯೋ ಮನಃ ಪೂರ್ವಂ ಬುದ್ಧಿಃ ಪರತರಾ ತತಃ ।
ಬುದ್ಧೇಃ ಪರತರಂ ಜ್ಞಾನಂ ಜ್ಞಾನಾತ್ ಪರತರಂ ಪರಮ್ ॥ ೧೧ ॥

ಇಂದ್ರಿಯಾಭಿಮಾನಿ ದೇವತೆಗಳಿಗಿಂತಲೂ ಮನೋಭಿಮಾನಿಯಾದ ರುದ್ರನು ಶ್ರೇಷ್ಠನಾಗಿದ್ದಾನೆ. ಮನೋಭಿಮಾನಿಯಾದ ರುದ್ರನಿಗಿಂತ ಬುದ್ಧ್ಯಭಿಮಾನಿ ಸರಸ್ವತಿಯು ಉತ್ತಮಳು. ಬುದ್ಧ್ಯಭಿಮಾನಿಗಿಂತಲೂ ವಿಜ್ಞಾನತತ್ತ್ವಾಭಿಮಾನಿಯಾದ ಚತುರ್ಮುಖ ಬ್ರಹ್ಮನು ಶ್ರೇಷ್ಠನು. ಆ ಚತುರ್ಮುಖ ಬ್ರಹ್ಮನಿಗಿಂತಲೂ ಪರಬ್ರಹ್ಮನು ಅತ್ಯಂತ ಶ್ರೇಷ್ಠನು.

ಅವ್ಯಕ್ತಾತ್ ಪ್ರಸೃತಂ ಜ್ಞಾನಂ ತತೋ ಬುದ್ಧಿಸ್ತತೋ ಮನಃ ।
ಮನಃ ಶ್ರೋತ್ರಾದಿಭಿರ್ಯುಕ್ತಂ ಶಬ್ದಾದೀನ್ ಸಾಧು ಪಶ್ಯತಿ ॥ ೧೨ ॥

ಅವ್ಯಕ್ತ ತತ್ತ್ವದಿಂದ ಉತ್ಪನ್ನವಾದ ಜ್ಞಾನವು ಬುದ್ಧಿತತ್ತ್ವವನ್ನು ಜಾಗೃತಗೊಳಿಸುತ್ತದೆ. ಬುದ್ಧಿತತ್ತ್ವದಿಂದ ಮನಸ್ಸು, ಮನಸ್ಸಿನಿಂದ ಶ್ರೋತ್ರಾದಿ ಇಂದ್ರಿಯಗಳು, ಅವುಗಳ ಮೂಲಕ ಶಬ್ದವೇ ಮೊದಲಾದ ಇಂದ್ರಿಯಾರ್ಥಗಳನ್ನು ಚೆನ್ನಾಗಿ ಅನುಭವಿಸುತ್ತವೆ.

ಯಸ್ತಾಂಸ್ಯಜತಿ ಶಬ್ದಾದೀನ್ ಸರ್ವಾಶ್ಚ ವ್ಯಕ್ತಯಸ್ತಥಾ ।
ವಿಮುಂಚತ್ಯಾಕೃತಿಗ್ರಾಮಾಂಸ್ತಾನ್ ಮುಕ್ತಾ ವ್ಯಮೃತಮಶ್ನುತೇ ॥ ೧೩ ॥

ಯಾವ ಮನುಷ್ಯನು ಶಬ್ದಾದಿವಿಷಯಗಳನ್ನು, ಅವುಗಳಿಗೆ ಆಶ್ರಯವಾದ ಶಬ್ದಾದಿಗಳಿಂದ ಉತ್ಪನ್ನವಾಗುವ ಜ್ಞಾನಗಳನ್ನು, ಇಂದ್ರಿಯಗ್ರಾಮಗಳನ್ನು ಪರಿತ್ಯಜಿಸುತ್ತಾನೋ ಅಂತಹ ಮನುಷ್ಯನು ಮುಕ್ತನಾಗಿ ಅಮೃತರೂಪಿಯಾದ ಪರಮಾತ್ಮನನ್ನು ಹೊಂದುತ್ತಾನೆ.

ಉದ್ಯನ್ ಹಿ ಸವಿತಾ ಯದ್ವತ್ ಸೃಜತೇ ರಶ್ಮಿಮಂಡಲಮ್ ।
ಸ ಏವಾಸ್ತಮುಪಾಗಚ್ಛಂಸ್ತದೇವಾತ್ಮನಿ ಯಚ್ಛತಿ ॥ ೧೪ ॥

ಸೂರ್ಯನು ಉದಯಿಸುತ್ತಿರುವಾಗಲೇ ರಶ್ಮಿಮಂಡಲವನ್ನು ಸೃಷ್ಟಿಸುತ್ತಾನೆ. ಅದೇ ಸೂರ್ಯನು ತಾನು ಅಸ್ತಮಾನ ಹೊಂದುವಾಗ ರಶ್ಮಿಗಳನ್ನು ತನ್ನಲ್ಲೇ ಉಪಸಂಹರಿಸಿಕೊಳ್ಳುತ್ತಾನೆ.

ಅಂತರಾತ್ಮಾ ತಥಾ ದೇಹಮಾವಿಶ್ಯೇಂದ್ರಿಯರಶ್ಮಿಭಿಃ ।
ಪ್ರಾಪ್ಯೇಂದ್ರಿಯಗುಣಾನ್ ಪಂಚ ಸೋಽಸ್ತಮಾವೃತ್ಯ ಗಚ್ಛತಿ ॥ ೧೫ ॥

ಇದರಂತೆ ಅಂತರಾತ್ಮನು ಇಂದ್ರಿಯಗಳ ರಶ್ಮಿಗಳ ಸಹಿತವಾಗಿ ದೇಹವನ್ನು ಪ್ರವೇಶಿಸುತ್ತಾನೆ. ದೇಹದ ಮೂಲಕ ಇಂದ್ರಿಯಗುಣಗಳನ್ನು ಅರ್ಥಾತ್ ವಿಷಯಗಳನ್ನು ಸ್ವೀಕರಿಸುತ್ತಾನೆ. ಪುನಃ ಜೀವನು ಶರೀರವನ್ನು ಬಿಟ್ಟು ಹೋಗುವಾಗ ಪಂಚೇಂದ್ರಿಯಗಳನ್ನು ತನ್ನಲ್ಲಿಯೇ ಉಪಸಂಹರಿಸಿಕೊಂಡು ಹೋಗುತ್ತಾನೆ.

ಗ್ರಸ್ತಂ ಹ್ಯುದ್ಗಿರತೇ ನಿತ್ಯಮುದ್ಗೀಥಂ ವೇತ್ತಿ ನಿತ್ಯಶಃ ।
ಬಾಲ್ಯೇ ರಥಾಭ್ಯಾಂ ಯೋಗೇನ ತತ್ತ್ವಜ್ಞಾನಂ ತು ಸಮ್ಮತಮ್ ॥ ೧೬ ॥

ಮನಸ್ಸಿನಿಂದ ಭಗವಂತನನ್ನು ಸ್ವೀಕರಿಸಿದ ಚೇತನನು ಅವನನ್ನೇ ಸ್ತುತಿಸುತ್ತಾ ಯಾವಾಗಲೂ ಉದ್ಗೀಥನಾದ ಅವನನ್ನೇ ತಿಳಿಯುತ್ತಾನೆ. ಜೀವನಿಗೆ ರಥದಂತಿರುವ ಸ್ಥೂಲದೇಹ, ಲಿಂಗದೇಹದಂತಿರುವ ಕೂಡಿಕೊಂಡ ಜೀವನು ತನಗೆ ಯೋಗ್ಯವಾದ ತತ್ತ್ವಜ್ಞಾನವನ್ನು ಹೊಂದುತ್ತಾನೆ.

ಪ್ರಣೀತಂ ಕರ್ಮಣಾ ಮಾರ್ಗಂ ನೀಯಮಾನಃ ಪುನಃ ಪುನಃ ।
ಪ್ರಾಪ್ನೋತ್ಯಯಂ ಕರ್ಮಫಲಂ ಪ್ರವೃದ್ಧಂ ಧರ್ಮಮಾತ್ಮವಾನ್ ॥ ೧೭ ॥

ಜೀವಾತ್ಮನು ಕರ್ಮಗಳ ಮೂಲಕವಾಗಿ ಕರ್ಮಮಾರ್ಗದಲ್ಲಿಯೇ ಅರ್ಥಾತ್ ಸಂಸಾರ ಚಕ್ರದಲ್ಲಿಯೇ ಪರಿಕ್ರಮಿಸುತ್ತಾ ಸುಖ-ದುಃಖರೂಪವಾದ ಕರ್ಮಫಲವನ್ನು ಅನುಭವಿಸುತ್ತಿರುತ್ತಾನೆ.

ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ।
ರಸವರ್ಜಂ ರಸೋಽಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ ॥ ೧೮ ॥

ವಿಷಯಭೋಗಗಳನ್ನು ತ್ಯಜಿಸಿದ ಮನುಷ್ಯನ ವಿಷಯಗಳೆಲ್ಲವೂ ಹಿಂದಿರುಗಿ ಹೋಗುತ್ತವೆ. ವಿಷಯ ಸುಖಗಳಲ್ಲಿ ಆಸಕ್ತಿಯು ಉಂಟಾಗುವುದಿಲ್ಲ. ಆದರೆ ಜಿಹ್ವಾ ಚಾಪಲ್ಯವು ಪರಮಾತ್ಮನನ್ನು ನೋಡಿಯೇ ನಿವೃತ್ತಿಯನ್ನು ಹೊಂದುತ್ತದೆ.

ಬುದ್ಧಿಃ ಕರ್ಮಗುಣೈರ್ಹೀನಾ ಯದಾ ಮನಸಿ ವರ್ತತೇ ।
ತದಾ ಸಂಪದ್ಯತೇ ಬ್ರಹ್ಮ ತತ್ಕೈವ ಪ್ರಲಯಂ ಗತಮ್ ॥ ೧೯ ॥

ಯಾವಾಗ ಬುದ್ಧಿಯು ಕರ್ಮನಿರತವಾದ ಗುಣಗಳಿಂದ ಬಿಡಲ್ಪಟ್ಟು ಮನಸ್ಸಿನಿಂದ ನಿಗ್ರಹಿಸಲ್ಪಟ್ಟಿರುತ್ತದೋ ಆಗ ಪರಬ್ರಹ್ಮನನ್ನು ಹೊಂದಲು ಸಾಧ್ಯವಾಗುತ್ತದೆ. ಆ ಸಮಯದಲ್ಲಿ ವಿಶೇಷವಾಗಿ ಅವನಲ್ಲಿಯೇ ಮನಸ್ಸು ಆಸಕ್ತವಾಗಿರುತ್ತದೆ.

ಅಸ್ಪರ್ಶನಮಶ್ರಾವ್ಯತ್ವಮನಾಸ್ವಾದಮದರ್ಶನಮ್ ।
ಅಘ್ರಾಣಮವಿತರ್ಕಂ ಚ ಸತ್ತ್ವಂ ಪ್ರವಿಶತೇ ಪರಮ್ ॥ ೨೦ ॥

ಚಿತ್ತವು ಬಾಹ್ಯವಿಷಯಸ್ಪರ್ಶದಿಂದ ರಹಿತವಾಗಿ, ಬಾಹ್ಯಶ್ರವಣಗಳಿಂದ ನಿವೃತ್ತವಾಗಿ, ಬಾಹ್ಯರಸಗಳನ್ನು ಆಸ್ವಾದಿಸುವುದರಲ್ಲಿಯೂ ನಿವೃತ್ತವಾಗಿ, ಬಾಹ್ಯ ದರ್ಶನಗಳಿಂದ ವಿರಕ್ತವಾಗಿ, ಬಾಹ್ಯ ಘ್ರಾಣನ ಸಂಕಲ್ಪ-ವಿಕಲ್ಪಗಳಿಂದ ಹೀನವಾಗಿ ಪರಮಾತ್ಮನಲ್ಲಿಯೇ ನೆಲೆಗೊಂಡಿರುತ್ತದೆ.

ಅವ್ಯಕ್ತಾತ್ ಪ್ರಸೃತಂ ಜ್ಞಾನಂ ತತೋ ಬುದ್ಧಿಸ್ತತೋ ಮನಃ ।
ಆತ್ಮನಃ ಪ್ರಸೃತೌ ಬುದ್ಧಿರವ್ಯಕ್ತಂ ಜ್ಞಾನಮುಚ್ಯತೇ ॥ ೨೧ ॥

ಅವ್ಯಕ್ತದಿಂದ ಉತ್ಪನ್ನವಾದ ಜ್ಞಾನವು, ಜ್ಞಾನದಿಂದ ಉತ್ಪನ್ನವಾದ ಬುದ್ಧಿಯು, ಬುದ್ಧಿಯಿಂದ ಉತ್ಪನ್ನವಾದ ಮನಸ್ಸು ಎಲ್ಲವೂ ಪರಮಾತ್ಮನ ಬಳಿ ಪ್ರವೃತ್ತಿಯನ್ನು ಹೊಂದಿದಾಗ ವಿಷಯ ವ್ಯಕ್ತಿರಹಿತವಾದ ಬುದ್ಧಿಯು ವಿಜ್ಞಾನ ತತ್ತ್ವವನ್ನು ಗ್ರಹಿಸುತ್ತದೆ.

ತಸ್ಮಾದ್ ಬುದ್ಧಿಃ ಸ್ಮೃತಾ ತಜ್ಜ್ಞೈರ್ಮನಸ್ತಸ್ಮಾತ್ತತಃ ಸ್ಮೃತಮ್ ।
ತಸ್ಮಾದಾಕೃತಯಃ ಪಂಚ ಮನಃ ಪರಮಮುಚ್ಯತೇ ॥ ೨೨ ॥

ಅವ್ಯಕ್ತದಿಂದ ಬುದ್ಧಿತತ್ತ್ವ, ಬುದ್ಧಿತತ್ತ್ವದಿಂದ ಮನಸ್ತತ್ತ್ವವು, ಮನಸ್ತತ್ತ್ವದಿಂದ ವಿಷಯವನ್ನು ಪರಿವ್ಯಂಜನೆ ಮಾಡುವ ಪಂಚಜ್ಞಾನೇಂದ್ರಿಯಗಳು ಹುಟ್ಟುತ್ತವೆ. ಪಂಚಜ್ಞಾನೇಂದ್ರಿಯಗಳಿಗೆ ನಿಯಾಮಕವಾದ ಮನಸ್ಸು ಶ್ರೇಷ್ಠ ಎನಿಸುತ್ತದೆ.

ತಸ್ಮಾತ್ ಪರತರಾ ಬುದ್ಧಿರ್ಜ್ಞಾನಂ ತಸ್ಮಾತ್ ಪರಂ ಸ್ಮೃತಮ್ ।
ತತಃ ಸೂಕ್ಷ್ಮಸ್ತತೋ ಹ್ಯಾತ್ಮಾ ತಸ್ಮಾತ್ಪರತರಂ ನ ಚ ॥ ೨೩ ॥

ಆ ಮನಸ್ತತ್ತ್ವಕ್ಕಿಂತಲೂ ಶ್ರೇಷ್ಠವಾದುದು ಬುದ್ಧಿತತ್ತ್ವವು. ಬುದ್ಧಿತತ್ತ್ವಕ್ಕಿಂತಲೂ ಶ್ರೇಷ್ಠವಾದುದು ವಿಜ್ಞಾನತತ್ತ್ವವು. ಆ ವಿಜ್ಞಾನತತ್ತ್ವಕ್ಕಿಂತಲೂ ವ್ಯಾಪ್ತನಾದವನು ಸೂಕ್ಷ್ಮನೆನಿಸಿದ ಪರಮಾತ್ಮನು. ಆ ಪರಮಾತ್ಮನಿಗಿಂತಲೂ ಶ್ರೇಷ್ಠವಾದ ವಸ್ತುವು ಯಾವುದೂ ಇರುವುದಿಲ್ಲ.

ಮನಸ್ಯಾಕೃತಯೋ ಮಗ್ನಾ ಮನಸ್ತತ್ತ್ವಿಗತಂ ಮತಿಮ್ ।
ಮತಿಸ್ತತ್ತ್ವಿಗತಾ ಜ್ಞಾನಂ ಜ್ಞಾನಂ ತದ್ಭಗತಂ ಪರಮ್ ॥ ೨೪ ॥

ಮನಸ್ಸಿನಲ್ಲಿ ವಿಷಯರೂಪವಾದ ಶಬ್ದಾದಿ ಸಮಸ್ತವಾದ ಪಂಚೇಂದ್ರಿಯಗಳು ಲಯ ಹೊಂದುತ್ತವೆ. ಮನಸ್ಸು ಬುದ್ಧಿಯಲ್ಲಿಯೂ, ಬುದ್ಧಿಯು ವಿಜ್ಞಾನ ತತ್ತ್ವದಲ್ಲಿಯೂ, ವಿಜ್ಞಾನ ತತ್ತ್ವವು ಪರಮಾತ್ಮನಲ್ಲಿಯೂ ಕ್ರಮವಾಗಿ ಲಯವನ್ನು ಹೊಂದುತ್ತವೆ.

ಇಂದ್ರಿಯೈರ್ಮನಸಃ ಸಿದ್ಧಿರ್ನ ಬುದ್ಧಿಂ ಬುಧ್ಯತೇ ಮನಃ ।
ನ ಬುದ್ಧಿರ್ಬುಧ್ಯತೇऽವ್ಯಕ್ತಂ ವ್ಯಕ್ತಿಷ್ಟೇತಾನಿ ಪಶ್ಯತಿ ॥ ೨೫ ॥

ಕಣ್ಣಿಗೆ ಕಾಣುವ ಜೀವರ ದೇಹದಲ್ಲಿರುವ ಇಂದ್ರಿಯಗಳಿಗೆ ಮನಸ್ಸು ಗೋಚರವಾಗುವುದಿಲ್ಲ. ಮನಸ್ಸು ಬುದ್ಧಿಯನ್ನು ತಿಳಿದಿರುವುದಿಲ್ಲ. ಬುದ್ಧಿಯು

ವಿಜ್ಞಾನತತ್ತ್ವವನ್ನು, ವಿಜ್ಞಾನತತ್ತ್ವವು ಅವ್ಯಕ್ತವನ್ನು, ಅವ್ಯಕ್ತತತ್ತ್ವವು ಸೂಕ್ಷ್ಮತತ್ತ್ವವೆನಿಸಿದ ಪರಮಾತ್ಮನನ್ನು ಪೂರ್ಣವಾಗಿ ತಿಳಿದಿರುವುದಿಲ್ಲ. ಆದರೆ ಸೂಕ್ಷ್ಮನೆನಿಸಿದ ಪರಮಾತ್ಮನು ಇವರೆಲ್ಲರನ್ನೂ ತಿಳಿದಿರುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಮೂವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೊಂದನೆಯ ಅಧ್ಯಾಯ

ಪರಬ್ರಹ್ಮಪ್ರಾಪ್ತಿಗೆ ಉಪಾಯ.

ಮನುಃ

ಜ್ಞಾನಂ ಜ್ಞೇಯಾಭಿನಿರ್ವೃತ್ತಂ ವಿದ್ಧಿ ಜ್ಞಾನಗುಣಂ ಮನಃ ।
ಪ್ರಜ್ಞಾಕರಣಸಂಯುಕ್ತಂ ತತೋ ಬುದ್ಧಿಃ ಪ್ರವರ್ತತೇ ॥ ೧ ॥

ಮನು– ಬೃಹಸ್ಪತಿಯೇ, ಜ್ಞೇಯನೆನಿಸಿದ ಪರಮಾತ್ಮನ ಅಸ್ತಿತ್ವವನ್ನು ನಿರ್ಣಯಿಸಿಕೊಡುವುದೇ ಜ್ಞಾನ ಎಂದು ತಿಳಿ. ಜ್ಞಾನಗುಣವುಳ್ಳ ಮನಸ್ಸು ಜ್ಞಾನಕ್ಕೆ ಕರಣಗಳಾದ ಇಂದ್ರಿಯಗಳಿಂದ ಕೂಡಿದಾಗ ವಿಷಯಗಳ ಕಡೆ ಪ್ರವೃತ್ತಿಯನ್ನು ಹೊಂದುತ್ತದೆ.

ಯದಾ ಕರ್ಮಗುಣೋಪೇತಾ ಬುದ್ಧಿರ್ಮನಸಿ ವರ್ತತೇ ।
ತದಾ ಪ್ರಜ್ಞಾಯತೇ ಬ್ರಹ್ಮ ಧ್ಯಾನಯೋಗಸಮಾಧಿನಾ ॥ ೨ ॥

ಯಾವಾಗ ಬುದ್ಧಿಯು ಕರ್ಮ ಮತ್ತು ಗುಣಗಳಿಂದ ದೂರ ಸರಿದು ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುತ್ತದೋ ಆಗ ಧ್ಯಾನಯೋಗದಿಂದ ಲಭ್ಯವಾಗುವ ಸಮಾಧಿಯ ಮೂಲಕವಾಗಿ ಗುಣಪರಿಪೂರ್ಣವಾದ ಪರಮಾತ್ಮನ ಸಾಕ್ಷಾತ್ಕಾರವಾಗುತ್ತದೆ.

ಸೇಯಂ ಗುಣವತೀ ಬುದ್ಧಿರ್ಗುಣೇಷ್ವೇವಾಭಿವರ್ತತೇ ।
ಅಪರಾ ತ್ವಭಿನಿಃಸ್ರೌತಿ ಗಿರೇಃ ಶೃಂಗಾದಿವೋದಕಮ್ ॥ ೩ ॥

ಇದೇ ಬುದ್ಧಿಯು ಇಂದ್ರಿಯಗುಣಯುಕ್ತವಾದರೆ ಪರ್ವತಶಿಖರದಿಂದ ನೀರು ಹರಿದು ಬರುವಂತೆ ಪರಮಾತ್ಮನ ಸನ್ನಿಧಾನದಿಂದ ಚ್ಯುತವಾಗಿ ವಿಷಯ ಪದಾರ್ಥಗಳಲ್ಲಿ ಆಸಕ್ತವಾಗಿ ಜಗತ್ತಿನ ಕಡೆ ಧಾವಿಸುತ್ತದೆ.

ಯದಾ ನಿರ್ಗುಣಮಾಪ್ನೋತಿ ಧ್ಯಾನಂ ಮನಸಿ ಪೂರ್ವಜಮ್ ।
ತದಾ ಪ್ರಜ್ಞಾಯತೇ ಬ್ರಹ್ಮ ನಿಕಷಂ ನಿಕಷೇ ಯಥಾ ॥ ೪ ॥

ಯಾವಾಗ ಸಾಧಕನು ಮನಸ್ಸಿನಲ್ಲಿ ಹಿಂದಿನ ಸಾಧನೆಗಳಿಂದುಂಟಾದ ಪ್ರಾಕೃತವಾದ ಪರಮಾತ್ಮನನ್ನು ಹೊಂದುತ್ತಾನೋ ಆಗ ಅವನು ಒರೆಗಲ್ಲಿನ ಮೇಲಿರುವ ಚಿನ್ನದ ರೇಖೆಯಂತೆ ಬುದ್ಧಿಯಲ್ಲಿ ಪರಬ್ರಹ್ಮವಸ್ತುವನ್ನು ಅರ್ಥೈಸಿಕೊಳ್ಳುತ್ತಾನೆ.

ಮನಸ್ತ್ವಪಹೃತಂ ಬುದ್ಧಿಮಿಂದ್ರಿಯಾರ್ಥನಿದರ್ಶನಮ್ ।
ನ ಸಮಕ್ಷಂ ಗುಣಾವೇಕ್ಷಿ ನಿರ್ಗುಣಸ್ಯ ನಿದರ್ಶನಮ್ ॥ ೫ ॥

ಇಂದ್ರಿಯಗಳ ಕಡೆ ಧಾವಿಸುವ ಇಂದ್ರಿಯಗಳಿಗೆ ಬೇಕಾದ ಭೋಗ ಪದಾರ್ಥಗಳನ್ನೇ ಯಾವಾಗಲೂ ನೋಡುತ್ತಿರುವ, ಇಂದ್ರಿಯ ಸುಖಗಳನ್ನೇ ಅಪೇಕ್ಷಿಸುವ ಮನಸ್ಸು, ಪ್ರಾಕೃತಗುಣರಹಿತನಾದ ಪರಮಾತ್ಮನನ್ನು ನೋಡಲು ಸಮರ್ಥವಾಗುವುದಿಲ್ಲ.

ಸರ್ವಾಣ್ಯೇತಾನಿ ಸಂವಾರ್ಯ ದ್ವಾರಾಣಿ ಮನಸಿ ಸ್ಥಿತಃ ।
ಮನಸ್ಯೇಕಾಗ್ರತಾಂ ಕೃತ್ವಾ ತತ್ ಪರಂ ಪ್ರತಿಪದ್ಯತೇ ॥ ೬ ॥

ಶರೀರದಲ್ಲಿರುವ ಇಂದ್ರಿಯರೂಪ ದ್ವಾರಗಳನ್ನು ನಿರೋಧಿಸಿಕೊಂಡು ಮನಸ್ಸನ್ನು ಏಕಾಗ್ರಗೊಳಿಸಿ ಹೃದಯದಲ್ಲಿರುವ ಪರಮಾತ್ಮನನ್ನು ಧ್ಯಾನ ಮಾಡುವುದರಿಂದ ಆ ಪರಬ್ರಹ್ಮವಸ್ತುವನ್ನು ತಿಳಿದುಕೊಳ್ಳುತ್ತಾನೆ.

ಯಥಾ ಮಹಾಂತಿ ಭೂತಾನಿ ನಿವರ್ತಂತೇ ಗುಣಕ್ಷಯೇ ।
ತಥೇಂದ್ರಿಯಾಣ್ಯುಪಾದಾಯ ಬುದ್ಧಿರ್ಮನಸಿ ವರ್ತತೇ ॥ ೭ ॥

ಯಾವ ರೀತಿಯಾಗಿ ಶಬ್ದ-ಸ್ಪರ್ಶಾದಿ ಪಂಚತನ್ಮಾತ್ರಗಳು ನಾಶವಾದಾಗ ಅದರ ಮೂಲವಾದ ಪಂಚಮಹಾಭೂತಗಳು ನಾಶವಾಗುತ್ತವೋ ಅದೇ ರೀತಿಯಲ್ಲಿ

ಇಂದ್ರಿಯಗಳು ಬಾಹ್ಯವಿಷಯಗಳಿಂದ ನಿವೃತ್ತಿಯನ್ನು ಹೊಂದಿದಾಗ ಬುದ್ಧಿಯು ಮನಸ್ಸಿನಲ್ಲಿಯೇ ನೆಲೆಗೊಂಡಿರುತ್ತದೆ.

ಯದಾ ಮನಸಿ ಸಾ ಬುದ್ಧಿರ್ವರ್ತತೇಽಂತರಚಾರಿಣೀ ।
ವ್ಯವಸಾಯಗುಣೋಪೇತಾ ತದಾ ಸಂಪದ್ಯತೇ ಮನಃ ॥ ೮ ॥

ಯಾವಾಗ ನಿಶ್ಚಯಾತ್ಮಕವಾದ ಬುದ್ಧಿಯು ಮನಸ್ಸಿನ ಜೊತೆಗೆ ಸೇರಿ ಪರಬ್ರಹ್ಮನ ಧ್ಯಾನದಲ್ಲಿಯೇ ನೆಲೆಸಿರುತ್ತದೋ ಆಗ ನಿರಂತರ ವಿಮರ್ಶೆ ಮಾಡಿದ ಗುಣವುಳ್ಳ ಆ ಜ್ಞಾನವು ದೃಢವಾಗುತ್ತದೆ. ಮನಸ್ಸು ಆ ಜ್ಞಾನವನ್ನೇ ದೃಢೀಕರಿಸಿಕೊಳ್ಳುತ್ತದೆ.

ಗುಣವದ್ಭಿರ್ಗುಣೋಪೇತಂ ಯದಾ ಧ್ಯಾನಗುಣಂ ಮನಃ ।
ತದಾ ಸರ್ವಗುಣಾನ್ ಹಿತ್ವಾ ನಿರ್ಗುಣಂ ಪ್ರತಿಪದ್ಯತೇ ॥ ೯ ॥

ಇಂದ್ರಿಯಗಳಿಂದ ಪ್ರತ್ಯಾಹಾರವೆಂಬ ಗುಣವನ್ನು ಹೊಂದಿರುವ ಮನಸ್ಸು ಯಾವಾಗ ಧ್ಯಾನಯೋಗಜನಿತವಾದ ಗುಣಗಳಿಂದ ಸಂಪನ್ನವಾಗುತ್ತದೋ ಆಗ ಇಂದ್ರಿಯಗಳಿಗೆ ಸಂಬಂಧಿಸಿದ ಸಮಸ್ತ ಗುಣಗಳನ್ನು ತ್ಯಾಗ ಮಾಡಿ ಪ್ರಾಕೃತಗುಣ ರಹಿತನಾದ ಪರಮಾತ್ಮನನ್ನು ಹೊಂದುತ್ತದೆ.

ಅವ್ಯಕ್ತಸ್ಯೇಹ ವಿಜ್ಞಾನೇ ನಾಸ್ತಿ ತುಲ್ಯಂ ನಿದರ್ಶನಮ್ ।
ಯತ್ರ ನಾಸ್ತಿ ಪದನ್ಯಾಸಃ ಕಸ್ತಂ ವಿಷಯಮಾಪ್ನುಯಾತ್ ॥ ೧೦ ॥

ಅವ್ಯಕ್ತನೆನಿಸಿದ ಪರಮಾತ್ಮ ವಿಜ್ಞಾನಕ್ಕೆ ಸಮಾನವಾದ ಜಗತ್ತಿನಲ್ಲಿ ಯಾವುದೂ ಇರುವುದಿಲ್ಲ. ಯಾವ ಪರಬ್ರಹ್ಮನ ವಿಷಯದಲ್ಲಿ ಯಾವ ವಾಣಿಯ ವ್ಯಾಪಾರವೇ ಇಲ್ಲವೋ ಯಾವುದನ್ನು ವೇದಗಳು ಸಾಕಲ್ಯೇನ ಬಣ್ಣಿಸಲಾರವೋ ಅಂತಹ ಪರಬ್ರಹ್ಮ ವಸ್ತುವನ್ನು ವರ್ಣನೆಗೆ ವಿಷಯವಾಗಿ ಯಾರು ಮಾಡಿಕೊಳ್ಳಬಲ್ಲರು?

ತಪಸಾ ಚಾನುಮಾನೇನ ಗುಣೈರ್ಜಾತ್ಯಾ ಶ್ರುತೇನ ಚ ।
ನಿನೀಷೇತ್ತತ್ಪರಂ ಬ್ರಹ್ಮ ವಿಶುದ್ಧೇನಾಂತರಾತ್ಮನಾ ॥ ೧೧ ॥

ತಪಸ್ಸಿನಿಂದಲೂ, ತರ್ಕದಿಂದಲೂ, ಭಗವನ್ನಿಷ್ಠ ಸರ್ವಜ್ಞತ್ವಾದಿ ಅಸಾಧಾರಣ ಗುಣದಿಂದಲೂ, ಸರ್ವೇಶ್ವರತ್ವ ಜಾತಿಯಿಂದಲೂ, ಶಾಸ್ತ್ರಗಳ ಅಧ್ಯಯನದಿಂದಲೂ

ಅಂತಃಕರಣವನ್ನು ಶುದ್ಧಿಮಾಡಿಕೊಂಡು ಆ ಪರಬ್ರಹ್ಮವಸ್ತುವನ್ನು ಹೊಂದಲು ಇಚ್ಛಿಸಬೇಕು.

ಗುಣಹೀನೋ ಹಿ ತಂ ಮಾರ್ಗಂ ಬಹಿಃ ಸಮನುವರ್ತತೇ ।
ಗುಣಾಭಾವಾತ್ ಪ್ರಕೃತ್ಯಾ ಚ ನಿಸ್ತರ್ಕ್ಯಂ ಜ್ಞೇಯಸಮ್ಮಿತಮ್ ॥ ೧೨॥

ರೂಪ-ರಸಾದಿ ಗುಣಗಳಿಂದ ಹೀನನಾದ ವ್ಯಕ್ತಿಯು ಆ ಅಧ್ಯಾತ್ಮ ಮಾರ್ಗವನ್ನು ಚೆನ್ನಾಗಿ ಅನುಸರಿಸುತ್ತಾನೆ. ರೂಪ-ರಸಾದಿ ಗುಣಗಳಲ್ಲಿ ಸಂಜ್ಞೆ ಇಲ್ಲದಿರುವುದರಿಂದ ಯೋಗ್ಯತೆಯನ್ನು ಹೊಂದಿ ತರ್ಕಕ್ಕೂ ನಿಲುಕದ, ತಿಳಿಯಲು ಅರ್ಹನಾದ ಭಗವಂತನನ್ನು ಚಿಂತಿಸುತ್ತಾನೆ.

ನೈರ್ಗುಣ್ಯಾದ್ ಬ್ರಹ್ಮ ಚಾಪ್ನೋತಿ ಸಗುಣತ್ವಾನ್ನಿವರ್ತತೇ ।
ಗುಣಪ್ರಸಾರಿಣೀ ಬುದ್ಧಿರ್ಹುತಾಶನ ಇವೇಂಧನೇ ॥ ೧೩ ॥

ಅಗ್ನಿಯು ಯಾವ ರೀತಿಯಲ್ಲಿ ಒಣಗಿದ ಕಟ್ಟಿಗೆಯನ್ನು ಚೆನ್ನಾಗಿ ಸುಡುತ್ತದೋ ಅದೇ ರೀತಿಯಲ್ಲಿ ಬಾಹ್ಯ ರೂಪಾದಿ ಗುಣಗಳಲ್ಲಿ ಆಸಕ್ತಿಶೂನ್ಯವಾದ ಬುದ್ಧಿಯು ಪರಮಾತ್ಮನ ಗುಣಗಳಲ್ಲೇ ಆಸಕ್ತವಾಗಿ ಪಕ್ವವಾಗಿ ಅವನಲ್ಲಿಯೇ ಸಂಚರಿಸುವ ಸಾಮರ್ಥ್ಯವನ್ನು ಹೊಂದುತ್ತದೆ.

ಯದಾ ಪಂಚ ವಿಮುಕ್ತಾನಿ ಇಂದ್ರಿಯಾಣಿ ಸ್ವಕರ್ಮಭಿಃ ।
ತದಾ ತತ್ ಪರಮಂ ಬ್ರಹ್ಮ ವಿಮುಕ್ತಂ ಪ್ರಕೃತೇಃ ಪರಮ್ ॥ ೧೪ ॥

ಯಾವ ರೀತಿಯಾಗಿ ಪಂಚೇಂದ್ರಿಯಗಳು ಯಾವಾಗ ತಮ್ಮ ವಿಷಯಗಳೆನಿಸಿದ ರೂಪ-ರಸಾದಿಗಳಿಂದ ವಿಮುಕ್ತವಾಗುತ್ತವೋ, ಶಬ್ದಾದಿ ಗುಣಗಳಿಂದ ಭಿನ್ನವಾಗುತ್ತವೆಯೋ ಅದೇ ರೀತಿಯಲ್ಲಿ ಪರಬ್ರಹ್ಮವಸ್ತುವು ಪ್ರಕೃತಿ ತತ್ತ್ವಕ್ಕಿಂತ ಭಿನ್ನವೂ ಉತ್ತಮವೂ ಆಗಿದೆ.

ಏವಂ ಪ್ರಕೃತಿತಃ ಸರ್ವೇ ಪ್ರಭವಂತಿ ಶರೀರಿಣಃ ।
ನಿವರ್ತಂತೇ ನಿವೃತ್ತೈ ಚ ಸರ್ಗಂ ನೈವೋಪಯಾಂತಿ ಚ ॥ ೧೫ ॥

ಹೀಗೆ ಸಮಸ್ತ ಪ್ರಾಣಿಗಳು ಪ್ರಕೃತಿಯ ದೆಸೆಯಿಂದ ಹುಟ್ಟು-ಸಾವುಗಳಿಂದ ಸಂಸಾರ ಚಕ್ರದಲ್ಲಿ ಪ್ರವೃತ್ತವಾಗುತ್ತವೆ. ಪ್ರಕೃತಿಯ ಸಹಾಯದಿಂದಲೇ ಸಂಸಾರ ನಿವೃತ್ತಿಯನ್ನು

ಇಂದ್ರಿಯಗಳು ಬಾಹ್ಯವಿಷಯಗಳಿಂದ ನಿವೃತ್ತಿಯನ್ನು ಹೊಂದಿದಾಗ ಬುದ್ಧಿಯು ಮನಸ್ಸಿನಲ್ಲಿಯೇ ನೆಲೆಗೊಂಡಿರುತ್ತದೆ.

ಯದಾ ಮನಸಿ ಸಾ ಬುದ್ಧಿರ್ವರ್ತತೇಽಂತರಚಾರಿಣೀ ।
ವ್ಯವಸಾಯಗುಣೋಪೇತಾ ತದಾ ಸಂಪದ್ಯತೇ ಮನಃ ॥ ೮ ॥

ಯಾವಾಗ ನಿಶ್ಚಯಾತ್ಮಕವಾದ ಬುದ್ಧಿಯು ಮನಸ್ಸಿನ ಜೊತೆಗೆ ಸೇರಿ ಪರಬ್ರಹ್ಮನ ಧ್ಯಾನದಲ್ಲಿಯೇ ನೆಲೆಸಿರುತ್ತದೋ ಆಗ ನಿರಂತರ ವಿಮರ್ಶೆ ಮಾಡಿದ ಗುಣವುಳ್ಳ ಆ ಜ್ಞಾನವು ದೃಢವಾಗುತ್ತದೆ. ಮನಸ್ಸು ಆ ಜ್ಞಾನವನ್ನೇ ದೃಢೀಕರಿಸಿಕೊಳ್ಳುತ್ತದೆ.

ಗುಣವದ್ಭಿರ್ಗುಣೋಪೇತಂ ಯದಾ ಧ್ಯಾನಗುಣಂ ಮನಃ ।
ತದಾ ಸರ್ವಗುಣಾನ್ ಹಿತ್ವಾ ನಿರ್ಗುಣಂ ಪ್ರತಿಪದ್ಯತೇ ॥ ೯ ॥

ಇಂದ್ರಿಯಗಳಿಂದ ಪ್ರತ್ಯಾಹಾರವೆಂಬ ಗುಣವನ್ನು ಹೊಂದಿರುವ ಮನಸ್ಸು ಯಾವಾಗ ಧ್ಯಾನಯೋಗಜನಿತವಾದ ಗುಣಗಳಿಂದ ಸಂಪನ್ನವಾಗುತ್ತದೋ ಆಗ ಇಂದ್ರಿಯಗಳಿಗೆ ಸಂಬಂಧಿಸಿದ ಸಮಸ್ತ ಗುಣಗಳನ್ನು ತ್ಯಾಗ ಮಾಡಿ ಪ್ರಾಕೃತಗುಣ ರಹಿತನಾದ ಪರಮಾತ್ಮನನ್ನು ಹೊಂದುತ್ತದೆ.

ಅವ್ಯಕ್ತಸ್ಯೇಹ ವಿಜ್ಞಾನೇ ನಾಸ್ತಿ ತುಲ್ಯಂ ನಿದರ್ಶನಮ್ ।
ಯತ್ರ ನಾಸ್ತಿ ಪದನ್ಯಾಸಃ ಕಸ್ತಂ ವಿಷಯಮಾಪ್ನುಯಾತ್ ॥ ೧೦ ॥

ಅವ್ಯಕ್ತನೆನಿಸಿದ ಪರಮಾತ್ಮ ವಿಜ್ಞಾನಕ್ಕೆ ಸಮಾನವಾದ ಜಗತ್ತಿನಲ್ಲಿ ಯಾವುದೂ ಇರುವುದಿಲ್ಲ. ಯಾವ ಪರಬ್ರಹ್ಮನ ವಿಷಯದಲ್ಲಿ ಯಾವ ವಾಣಿಯ ವ್ಯಾಪಾರವೇ ಇಲ್ಲವೋ ಯಾವುದನ್ನು ವೇದಗಳು ಸಾಕಲ್ಯೇನ ಬಣ್ಣಿಸಲಾರವೋ ಅಂತಹ ಪರಬ್ರಹ್ಮ ವಸ್ತುವನ್ನು ವರ್ಣನೆಗೆ ವಿಷಯವಾಗಿ ಯಾರು ಮಾಡಿಕೊಳ್ಳಬಲ್ಲರು?

ತಪಸಾ ಚಾನುಮಾನೇನ ಗುಣೈರ್ಜಾತ್ಯಾ ಶ್ರುತೇನ ಚ ।
ನಿನೀಷೇತ್ತತ್ಪರಂ ಬ್ರಹ್ಮ ವಿಶುದ್ಧೇನಾಂತರಾತ್ಮನಾ ॥ ೧೧ ॥

ತಪಸ್ಸಿನಿಂದಲೂ, ತರ್ಕದಿಂದಲೂ, ಭಗವನ್ನಿಷ್ಠ ಸರ್ವಜ್ಞತ್ವಾದಿ ಅಸಾಧಾರಣ ಗುಣದಿಂದಲೂ, ಸರ್ವೇಶ್ವರತ್ವ ಜಾತಿಯಿಂದಲೂ, ಶಾಸ್ತ್ರಗಳ ಅಧ್ಯಯನದಿಂದಲೂ

ಅಂತಃಕರಣವನ್ನು ಶುದ್ಧಿಮಾಡಿಕೊಂಡು ಆ ಪರಬ್ರಹ್ಮವಸ್ತುವನ್ನು ಹೊಂದಲು ಇಚ್ಛಿಸಬೇಕು.

ಗುಣಹೀನೋ ಹಿ ತಂ ಮಾರ್ಗಂ ಬಹಿಃ ಸಮನುವರ್ತತೇ ।
ಗುಣಾಭಾವಾತ್ ಪ್ರಕೃತ್ಯಾ ಚ ನಿಸ್ತರ್ಕ್ಯಂ ಜ್ಞೇಯಸಮ್ಮಿತಮ್ ॥ ೧೨॥

ರೂಪ-ರಸಾದಿ ಗುಣಗಳಿಂದ ಹೀನನಾದ ವ್ಯಕ್ತಿಯು ಆ ಅಧ್ಯಾತ್ಮ ಮಾರ್ಗವನ್ನು ಚೆನ್ನಾಗಿ ಅನುಸರಿಸುತ್ತಾನೆ. ರೂಪ-ರಸಾದಿ ಗುಣಗಳಲ್ಲಿ ಸಂಜ್ಞೆ ಇಲ್ಲದಿರುವುದರಿಂದ ಯೋಗ್ಯತೆಯನ್ನು ಹೊಂದಿ ತರ್ಕಕ್ಕೂ ನಿಲುಕದ, ತಿಳಿಯಲು ಅರ್ಹನಾದ ಭಗವಂತನನ್ನು ಚಿಂತಿಸುತ್ತಾನೆ.

ನೈರ್ಗುಣ್ಯಾದ್ ಬ್ರಹ್ಮ ಚಾಪ್ನೋತಿ ಸಗುಣತ್ವಾನ್ನಿವರ್ತತೇ ।
ಗುಣಪ್ರಸಾರಿಣೀ ಬುದ್ಧಿರ್ಹುತಾಶನ ಇವೇಂಧನೇ ॥ ೧೩ ॥

ಅಗ್ನಿಯು ಯಾವ ರೀತಿಯಲ್ಲಿ ಒಣಗಿದ ಕಟ್ಟಿಗೆಯನ್ನು ಚೆನ್ನಾಗಿ ಸುಡುತ್ತದೋ ಅದೇ ರೀತಿಯಲ್ಲಿ ಬಾಹ್ಯ ರೂಪಾದಿ ಗುಣಗಳಲ್ಲಿ ಆಸಕ್ತಿಶೂನ್ಯವಾದ ಬುದ್ಧಿಯು ಪರಮಾತ್ಮನ ಗುಣಗಳಲ್ಲೇ ಆಸಕ್ತವಾಗಿ ಪಕ್ವವಾಗಿ ಅವನಲ್ಲಿಯೇ ಸಂಚರಿಸುವ ಸಾಮರ್ಥ್ಯವನ್ನು ಹೊಂದುತ್ತದೆ.

ಯದಾ ಪಂಚ ವಿಮುಕ್ತಾನಿ ಇಂದ್ರಿಯಾಣಿ ಸ್ವಕರ್ಮಭಿಃ ।
ತದಾ ತತ್ ಪರಮಂ ಬ್ರಹ್ಮ ವಿಮುಕ್ತಂ ಪ್ರಕೃತೇಃ ಪರಮ್ ॥ ೧೪ ॥

ಯಾವ ರೀತಿಯಾಗಿ ಪಂಚೇಂದ್ರಿಯಗಳು ಯಾವಾಗ ತಮ್ಮ ವಿಷಯಗಳೆನಿಸಿದ ರೂಪ-ರಸಾದಿಗಳಿಂದ ವಿಮುಕ್ತವಾಗುತ್ತವೋ, ಶಬ್ದಾದಿ ಗುಣಗಳಿಂದ ಭಿನ್ನವಾಗುತ್ತವೆಯೋ ಅದೇ ರೀತಿಯಲ್ಲಿ ಪರಬ್ರಹ್ಮವಸ್ತುವು ಪ್ರಕೃತಿ ತತ್ತ್ವಕ್ಕಿಂತ ಭಿನ್ನವೂ ಉತ್ತಮವೂ ಆಗಿದೆ.

ಏವಂ ಪ್ರಕೃತಿತಃ ಸರ್ವೇ ಪ್ರಭವಂತಿ ಶರೀರಿಣಃ ।
ನಿವರ್ತಂತೇ ನಿವೃತ್ತೌ ಚ ಸರ್ಗಂ ನೈವೋಪಯಾಂತಿ ಚ ॥ ೧೫ ॥

ಹೀಗೆ ಸಮಸ್ತ ಪ್ರಾಣಿಗಳು ಪ್ರಕೃತಿಯ ದೆಸೆಯಿಂದ ಹುಟ್ಟು-ಸಾವುಗಳಿಂದ ಸಂಸಾರ ಚಕ್ರದಲ್ಲಿ ಪ್ರವೃತ್ತವಾಗುತ್ತವೆ. ಪ್ರಕೃತಿಯ ಸಹಾಯದಿಂದಲೇ ಸಂಸಾರ ನಿವೃತ್ತಿಯನ್ನು

ಹೊಂದುತ್ತವೆ. ಬಳಿಕ ಈ ಸೃಷ್ಟಿಯನ್ನು ಹೊಂದುವುದಿಲ್ಲ.

ಪುರುಷಃ ಪ್ರಕೃತಿರ್ಬುದ್ಧಿರ್ವಿಶೇಷಾಶ್ಚೇಂದ್ರಿಯಾಣಿ ಚ ।
ಅಹಂಕಾರೋಽಭಿಮಾನಶ್ಚ ಸಂಭೂತೋ ಭೂತಸಂಜ್ಞಕಃ ॥ ೧೬ ॥

ಪುರುಷ, ಪ್ರಕೃತಿ, ಬುದ್ಧಿ, ಶಬ್ದಾದಿ ವಿಷಯಗಳು, ದಶೇಂದ್ರಿಯಗಳು, ಅಹಂಕಾರ, ಮನಸ್ಸು, ಪಂಚಮಹಾಭೂತಗಳು ಈ ಇಪ್ಪತ್ತೈದು ತತ್ತ್ವಗಳ ಸಮೂಹವು ಭೂತ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ.

ಏಕಸ್ಯಾದ್ಯಾ ಪ್ರವೃತ್ತಿಸ್ತು ಪ್ರಧಾನಾತ್ ಸಂಪ್ರವರ್ತತೇ ।
ದ್ವಿತೀಯಾ ಮಿಥುನವ್ಯಕ್ತಿಮವಿಶೇಷಾನ್ನಿಯಚ್ಛತಿ ॥ ೧೭ ॥

ಸಕಲ ಜೀವಪ್ರಧಾನನೆನಿಸಿದ ಚತುರ್ಮುಖ ಬ್ರಹ್ಮನ ಸೃಷ್ಟಿಯು ಕೇವಲ ಮೂಲ ಪ್ರಕೃತಿಯಿಂದ ಉಂಟಾಗುತ್ತದೆ. ಎರಡನೆಯ ಸೃಷ್ಟಿಯು ಸಾಮಾನ್ಯತಃ ಮೈಥುನ ಧರ್ಮದಿಂದ ನಿಯಮಪೂರ್ವಕವಾಗಿ ಅಭಿವ್ಯಕ್ತವಾಗುತ್ತದೆ.

ಧರ್ಮಾದುತ್ಕೃಷ್ಯತೇ ಶ್ರೇಯಸ್ತಥಾಶ್ರೇಯೋಽಪ್ಯಧರ್ಮತಃ ।
ರಾಗವಾನ್ ಪ್ರಕೃತಿಂ ಹ್ಯೇತಿ ವಿರಕ್ತೋ ಜ್ಞಾನವಾನ್ ಭವೇತ್ ॥ ೧೮ ॥

ಧರ್ಮಮಾರ್ಗಪ್ರವೃತ್ತಿಯಿಂದಲೇ ಮನುಷ್ಯನಿಗೆ ಶ್ರೇಯಸ್ಸಿನ ವೃದ್ಧಿಯಾಗುತ್ತದೆ. ಅಧರ್ಮಮಾರ್ಗಪ್ರವೃತ್ತಿಯಿಂದ ಅಶ್ರೇಯಸ್ಸುಂಟಾಗುತ್ತದೆ. ವಿಷಯಾಸಕ್ತನಾದ ಪುರುಷನು ನಿರಂತರವಾಗಿ ಪ್ರಕೃತಿಬಂಧನದಲ್ಲಿಯೇ ಸುತ್ತುತ್ತಾನೆ. ವಿರಕ್ತನಾದ ಪುರುಷನು ಪರಮಾತ್ಮನ ಜ್ಞಾನವನ್ನು ಹೊಂದುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಏಕತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಮೂವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೆರಡನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಮನು-ಬೃಹಸ್ಪತಿ ಸಂವಾದದ ಅನುವಾದವನ್ನು ಮುಕ್ತಾಯಗೊಳಿಸಿದುದು.

ಮನುಃ

ತದೇವ ಸತತಂ ಮನ್ಯೇ ನ ಶಕ್ಯಮನುವರ್ಣಿತುಮ್ ।
ಯಥಾ ನಿದರ್ಶನಂ ವಸ್ತು ನ ಶಕ್ಯಮನುಬೋಧಿತುಮ್ ॥ ೧ ॥

ಮನು- ಬೃಹಸ್ಪತಿಯೇ, ಆ ಪರಬ್ರಹ್ಮನ ವಿಷಯವಾಗಿಯೇ ನಿರಂತರ ಚಿಂತಿಸುತ್ತಿದ್ದೇನೆ. ಆದರೆ ಸಮಗ್ರವಾಗಿ ಅದನ್ನು ಬಣ್ಣಿಸಲು ನನ್ನಿಂದ ಶಕ್ಯವಾಗದು. ಆ ವಸ್ತುವಿಗೆ ಸಮಾನವಾದ ಮತ್ತೊಂದು ದೃಷ್ಟಾಂತವೇ ಇರುವುದಿಲ್ಲವಾದ್ದರಿಂದ ಅದನ್ನು ತಿಳಿದೂ ಬಣ್ಣಿಸಲು ಸಾಧ್ಯವಾಗದು.

ಯಥಾ ಹಿ ಸಾರಂ ಜಾನಾತಿ ನ ಕಥಂಚನ ಸಂಸ್ಥಿತಮ್ ।
ಪರಕಾಯಚ್ಛವಿಸ್ತದ್ವದ್ದೇಹೇऽಯಂ ಚೇತನಸ್ತಥಾ ॥ ೨ ॥

ಯಾವುದನ್ನು ದೃಷ್ಟಾಂತದಿಂದ ಯಥಾವತ್ತಾಗಿ ತಿಳಿಯಲು ಸಾಧ್ಯವಿಲ್ಲವೋ ಅದನ್ನು ವರ್ಣಿಸಿ ಹೇಳುವುದು ಅಸಾಧ್ಯವೇ ಆಗಿದೆ. ಮನುಷ್ಯನ ದೇಹದ ನೆರಳು ಶರೀರಕ್ಕಿಂತಲೂ ಬೇರೆಯಾಗಿ ಅದರ ಪಕ್ಕದಲ್ಲಿಯೇ ಇದ್ದರೂ ಅದನ್ನು ನಮ್ಮಿಂದ ಅರಿಯಲಾಗದಷ್ಟೆ!

ವಿನಾ ಕಾಯಂ ನ ಸಾ ಚ್ಛಾಯಾ ತಾಂ ವಿನಾ ಕಾಯಮಸ್ಯುತ ।
ತದ್ವದ್ದೇವಂ ವಿನಾ ನಾಸ್ತಿ ಪ್ರಕೃತೇರಿಹ ವರ್ತನಮ್ ॥ ೩ ॥

ಈ ಶರೀರದೊಳಗೆ ಆತ್ಮವಿದೆ. ಶರೀರವನ್ನು ಬಿಟ್ಟು ನೆರಳು ಇರಲು ಸಾಧ್ಯವಿಲ್ಲ. ಆದರೆ ನೆರಳನ್ನು ಬಿಟ್ಟು ಶರೀರವಿರಬಹುದು. ಅದರಂತೆಯೇ ಮೂಲಕಾರಣವೆನಿಸಿದ ಆತ್ಮವಿಲ್ಲದೆ ಶರೀರವಿಲ್ಲ. ಶರೀರವನ್ನು ಬಿಟ್ಟು ಆತ್ಮನಿರಬಹುದು.

ಇದಂ ವಿನಾ ಪರಂ ನಾಸ್ತಿ ನೇದಮಸ್ತಿ ಪರಂ ವಿನಾ ।
ಜೀವಾತ್ಮನಾ ತ್ವಸೌ ಭಿನ್ನಸ್ತ್ವೇಷ ಚೈವ ಪರಾತ್ಮನಾ ॥ ೪ ॥

ಈ ಲೋಕದಲ್ಲಿ ಮಾಡಲ್ಪಟ್ಟ ಪುಣ್ಯವನ್ನು ಬಿಟ್ಟು ಪರಲೋಕವನ್ನು ಹೊಂದಲಾಗದು. ಆದರೆ ಪರಲೋಕದ ದೇವತೆಗಳ ಕರುಣೆಯಿಲ್ಲದೆ ಈ ಪುಣ್ಯವು ಇರುವುದಿಲ್ಲ. ಈ ಜೀವಾತ್ಮನಿಂದ ಪರಮಾತ್ಮನು ಭಿನ್ನನಾಗಿಯೇ ಇದ್ದಾನೆ. ಈ ಜೀವಾತ್ಮನು ಪರಮಾತ್ಮನಿಗಿಂತ ಭಿನ್ನನೆಂಬುದು 'ದ್ವಾಸುಪರ್ಣಾ' ಎಂಬ ಶ್ರುತಿಯಲ್ಲಿ ಪ್ರಸಿದ್ಧವಾಗಿದೆ. ಪರಮಾತ್ಮನಿಗಿಂತ ಜೀವಾತ್ಮನು ಭಿನ್ನನೇ ಆಗಿದ್ದಾನೆ.

ತತ್ತಥೇತಿ ವಿದುಃ ಕೇಚಿದತಥ್ಯಮಿತಿ ಚಾಪರೇ ।
ಉಭಯಂ ಮೇ ಮತಂ ವಿದ್ವನ್ಮುಕ್ತಿಹೇತೌ ಸಮಾಹಿತಮ್ ॥ ೫ ॥

ಈ ಜೀವ-ಪರಮಾತ್ಮರ ಭೇದವು ನಿಜ ಎಂದು ಕೆಲವರು ಹೇಳುತ್ತಾರೆ. ಸುಳ್ಳು ಎಂದು ಕೆಲವರು ಹೇಳುತ್ತಾರೆ. ಆದರೆ ಜೀವಪ್ರತಿಯೋಗಿಕ ಪರಮಾತ್ಮನಿಷ್ಠ ಭೇದವು, ಪರಮಾತ್ಮ ಪ್ರತಿಯೋಗಿಕ ಜೀವನಿಷ್ಠ ಭೇದವು ಇವೆರಡೂ ನನಗೆ ಸಮ್ಮತವಾದದ್ದು ಹೊರತು ಜೀವ-ಪರಮಾತ್ಮರಿಗೆ ಭೇದವೂ ಸತ್ಯ, ಜೀವ-ಪರಮಾತ್ಮರಿಗೆ ಭೇದವು ಮಿಥ್ಯಾ ಅನ್ನುವ ವಾದವು ಪರಸ್ಪರ ವಿರುದ್ಧವಾದುದರಿಂದ ನನಗೆ ಸಮ್ಮತವಲ್ಲ. ಜೀವ ಸತ್ಯ ಎಂಬ ವಾದವೇ ನನಗೆ ಸಮ್ಮತವಾದದ್ದು. ಇದೇ ಮುಕ್ತಿಗೆ ಕಾರಣವಾದುದು.

ವಿಮುಕ್ತೈಶ್ಚ ಮೃಗಃ ಸೋಽಪಿ ದೃಶ್ಯತೇ ಸಂಯತೇಂದ್ರಿಯೈಃ ।
ಸರ್ವೇಷಾಂ ನಹಿ ದೃಶ್ಯೋ ಹಿ ತಟಿದ್ವತ್ ಸ್ಫುರತಿ ಹ್ಯಸೌ ॥ ೬ ॥

ಪರಮಾತ್ಮನೆಂಬ ವಸ್ತುವಾದರೂ ಮುಕ್ತಾತ್ಮರಿಂದಲೂ ಕೂಡ ವಿಚಾರ ಮಾಡಲು ಯೋಗ್ಯವಾದುದು. ಜಿತೇಂದ್ರಿಯರಿಂದ ಮಾತ್ರ ಕಾಣಲು ಅರ್ಹವಾಗಿದೆ. ಎಲ್ಲರಿಂದಲೂ ನೋಡಲು ಅಶಕ್ಯವಾದುದು. ಮಿಂಚಿನಂತೆ ಕೆಲವೊಮ್ಮೆ ಹೊಳೆಯುತ್ತದೆ.

ಬ್ರಾಹ್ಮಣಸ್ಯ ಸಮಾದೃಶ್ಯೋ ವರ್ತತೇ ಸೋಽಪಿ ಕಿಂ ಪುನಃ ।
ವಿದ್ಯತೇ ಪರಮಃ ಶುದ್ಧಃ ಸಾಕ್ಷಿಭೂತೋ ವಿಭಾವಸುಃ ॥ ೭ ॥

ಆ ಪರಮಾತ್ಮನೆಂಬ ವಸ್ತುವಾದರೂ ಚತುರ್ಮುಖ ಬ್ರಹ್ಮನಿಂದಲೇ ಪೂರ್ಣವಾಗಿ ತಿಳಿಯಲಾರದು ಎಂದ ಬಳಿಕ ಉಳಿದವರ ಅವಸ್ಥೆಯನ್ನು ಏನು ಬಣ್ಣಿಸಲಿ? ಆ ಪರಮಾತ್ಮ ಎಂಬ ವಸ್ತುವು ಸಮಸ್ತ ದೋಷದಿಂದ ದೂರವಾಗಿದೆ. ಸಮಸ್ತ ಜೀವರ ಸಾಕ್ಷಿವಿಷಯವಾಗಿದೆ. ವಿಶೇಷವಾದ ಪ್ರಭೆಯೇ ಸಂಪತ್ತಾಗಿ ಉಳ್ಳ ಸೂರ್ಯನಂತೆ ಪ್ರಕಾಶಿಸುತ್ತದೆ ಎಂದು ಜ್ಞಾನಿಗಳು ಹೇಳುತ್ತಾರೆ.

ಶ್ರುತಿರೇಷಾ ತತೋ ನಿತ್ಯಾ ತಸ್ಮಾದೇಕಃ ಪರೋ ಮತಃ ।
ನ ಪ್ರಯೋಜನಮುದ್ದಿಶ್ಯ ಚೇಷ್ಟಾ ತಸ್ಯ ಮಹಾತ್ಮನಃ ॥ ೮ ॥

ನಿತ್ಯವಾದ ದ್ವಾಸುಪರ್ಣಾ ಮೊದಲಾದ ಶ್ರುತಿಯು 'ಯತ್ರದದ್ದೇಶ್ಯಂ ಅಗ್ರಾಹ್ಯಂ ಯೇತ ಸರ್ವೇಶ್ವರಃ' ಮೊದಲಾದ ಶ್ರುತಿಗಳು ಭಗವಂತನೇ ಸರ್ವೋತ್ತಮನೆಂದು ವರ್ಣಿಸುತ್ತಿವೆ. ಪರಮಾತ್ಮನು ಸೃಷ್ಟಿ ಮೊದಲಾದ ಕಾರ್ಯಗಳನ್ನು ಸ್ವಪ್ರಯೋಜನದ ಉದ್ದೇಶದಿಂದ ನಡೆಸುವುದಿಲ್ಲ.

ತಾದೃಶೋಽಸ್ತಿ ತಿ ಮಂತವ್ಯಸ್ತಥಾ ಸತ್ಯಂ ಮಹಾತ್ಮನಾ ।
ನಾನಾಸಂಸ್ಥೇನ ಭೇದೇನ ಸದಾ ಗತಿವಿಭೇದವಿತ್ ।
ತಸ್ಯ ಭೇದಃ ಸಮಾಖ್ಯಾತೋ ಭೇದೋಽಪ್ಯಸ್ತಿ ತಥಾವಿಧಃ ॥ ೯ ॥

ತತ್ತ್ವಜ್ಞಾನಿಗಳು ಆ ಪರಮಾತ್ಮನ ಸ್ತುತಿಯನ್ನು ಚೆನ್ನಾಗಿ ತಿಳಿಯಬಲ್ಲರು. ಜೀವರಲ್ಲಿಯೇ ನಾನಾ ವಿಧವಾದ ಭೇದವೂ ಇದೆ. ಅವರ ಸಾಧನಭೇದ ನಿಮಿತ್ತದಿಂದ ಗತಿಭೇದವನ್ನು ತಿಳಿಯಬೇಕು. ಮುಕ್ತಿಯೋಗ್ಯರು, ನಿತ್ಯಸಂಸಾರಿಗಳು, ತಮೋಯೋಗ್ಯರು ಎಂಬ ಭೇದವನ್ನು ತಿಳಿದವರು ಪರಮಾತ್ಮನನ್ನು ಯಥಾಯೋಗ್ಯವಾಗಿ ಹೊಂದುತ್ತಾರೆ. ಪರಮಾತ್ಮನ ಸತ್ಯವು ಎಷ್ಟು ಪರಮಾರ್ಥವೋ ಅದರಂತೆಯೇ ಈ ಭೇದವೂ ಅಷ್ಟೇ ಸತ್ಯವಾದುದು. ಧರ್ಮಸಕ್ತ ಸಮಾನ ಸತ್ತಾಕವಾದುದು ಎಂದು ಭಾವ.

ಏವಂ ವಿದ್ವನ್ ವಿಜಾನೀಹಿ ಪರಮಾತ್ಮಾನಮವ್ಯಯಮ್ ।
ತತ್ತದ್ಗುಣವಿಶೇಷೇಣ ಸಂಜ್ಞಾನಾಮಾನುಸಂಯುತಮ್ ॥ ೧೦ ॥

ಈ ರೀತಿಯಾಗಿ ಭಗವಂತನ ಮಹತ್ವವನ್ನು ತಿಳಿದುಕೊ. ಪರಮಾತ್ಮನನ್ನು ಅವ್ಯಯನೆಂದೂ, ಕರ್ತಾ, ಹರ್ತಾ, ಪಾತಾ, ನಿಯಂತಾ, ಭರ್ತಾ, ಪಿತಾ ಮೊದಲಾದ ಅನೇಕ ಸಂಜ್ಞಾರೂಪದಿಂದ ಮುಖ್ಯವಾದ ವ್ಯವಹಾರಕ್ಕೆ ಅರ್ಹನಾಗಿ ಕೂಡಿದ್ದಾನೆಂಬುದನ್ನು ತಿಳಿದುಕೊ.

ಸರ್ವೇಶ್ವರಃ ಸರ್ವಮಯಃ ಸ ಚ ಸರ್ವಪ್ರವರ್ತಕಃ ।
ಸರ್ವಾತ್ಮಕಃ ಸರ್ವಶಕ್ತಿಃ ಸರ್ವಕಾರಣಕಾರಣಮ್ ॥ ೧೧ ॥

ಭಗವಂತನು ಎಲ್ಲರಿಗೂ ಈಶ್ವರನೂ, ಎಲ್ಲರ ಅಂತರ್ಯಾಮಿಯೂ, ಎಲ್ಲರ ಜೀವನದ ಪ್ರವೃತ್ತಿಗಳಿಗೂ ಮುಖ್ಯಕಾರಣನೂ, ಎಲ್ಲರಿಗಿಂತ ಪ್ರಧಾನನೂ, ಎಲ್ಲ ರೀತಿಯಾದ ಹೀನ-ಉಚ್ಚ ಪ್ರಾಣಿಗಳಲ್ಲಿ ಅಂತರ್ಯಾಮಿಯೂ, ತಾನೊಬ್ಬನೇ ಪ್ರಧಾನನೂ ಆಗಿರುವನೆಂದು ತಿಳಿದುಕೊ.

ವ್ಯಾಖ್ಯಾನವಿಶೇಷ– ಆದ್ದರಿಂದ ಹಿಂದೆಲ್ಲ ಹೇಳಿದ ನಿರ್ಗುಣಶಬ್ದಕ್ಕೂ ಪ್ರಾಕೃತಗುಣರಹಿತನೆಂದೇ ವ್ಯಾಖ್ಯಾನ ಮಾಡಬೇಕೇ ವಿನಾ ಸರ್ವಥಾ ಗುಣರಹಿತನೆಂದು ವ್ಯಾಖ್ಯಾನಿಸಬಾರದು. ಸರ್ವೇಶ್ವರತ್ವಾದಿ ಗುಣಗಳನ್ನು ಬೃಹಸ್ಪತಿಗಳಿಗೆ ಇಲ್ಲಿ ವರ್ಣಿಸುತ್ತಿರುವುದರಿಂದ ಮನುವಿಗೆ ಭಗವಂತನ ನಿರ್ಗುಣತ್ವವನ್ನು ಹೇಳುವುದರಲ್ಲಿ ಇಲ್ಲಿ ತಾತ್ಪರ್ಯವಿಲ್ಲವೆಂದು ಭಾವ.

ಸರ್ವಸಾಧಾರಣಃ ಸರ್ವೈರುಪಾಸ್ಯಶ್ಚ ಮಹಾತ್ಮಭಿಃ ।
ವಾಸುದೇವೇತಿ ವಿಖ್ಯಾತಸ್ತಂ ವಿದಿತ್ವಾऽಶ್ನುತೇऽಮೃತಮ್ ॥ ೧೨ ॥

ಎಲ್ಲರಿಗಿಂತ ಪ್ರಧಾನನಾದ ಪರಮಾತ್ಮನು ಮಹಾತ್ಮರಾದ ಎಲ್ಲರಿಂದಲೂ ಉಪಾಸ್ಯನಾಗಿದ್ದಾನೆ. ವಾಸುದೇವ ಎಂದು ಪ್ರಸಿದ್ಧಿಯನ್ನು ಹೊಂದಿದ್ದಾನೆ. ಇವನನ್ನು ತಿಳಿದವನು ಅಮೃತತ್ವವನ್ನು ಹೊಂದುತ್ತಾನೆ.

ಮನುಃ

ಯದಾ ತೇ ಪಂಚಭಿಃ ಪಂಚ ವಿಮುಕ್ತಾ ಮನಸಾ ಸಹ ।
ಅಥ ತದ್ ದ್ರಕ್ಷ್ಯಸೇ ಬ್ರಹ್ಮ ಮಣೌ ಸೂತ್ರಮಿವಾರ್ಪಿತಮ್ ॥ ೧೩ ॥

ಮನು– ಬೃಹಸ್ಪತಿಯೇ, ಯಾವಾಗ ರೂಪಾದಿ ವಿಷಯಗಳಿಂದ ಕೂಡಿದ ಪಂಚೇಂದ್ರಿಯಗಳು ನಿನ್ನ ಅಧೀನದಲ್ಲಿರುತ್ತವೋ ಆ ಅಧೀನವಾದ ಇಂದ್ರಿಯಗಳಿಂದ ಕೂಡಿದ ಮನಸ್ಸಿನಿಂದ ಆ ಪರಬ್ರಹ್ಮವಸ್ತುವನ್ನು ನೀನು ನೋಡುತ್ತಿ. ಒಂದು ನೂಲಿನಲ್ಲಿ ಮಣಿಗಳು ಜೋಡಿಸಲ್ಪಟ್ಟಂತೆ ಆ ಪರಮಾತ್ಮನ ಸೂತ್ರದಲ್ಲಿಯೇ ಸಮಗ್ರ ಜಗತ್ತು ಹೊಂದಿಕೊಂಡಿದೆ.

ತದೇವ ಚ ಯಥಾ ಸೂತ್ರಂ ಸುವರ್ಣೇ ವರ್ತತೇ ಪುನಃ ।
ಮುಕ್ತಾಸ್ವಥ ಪ್ರವಾಲೇಷು ಮೃನ್ಮಯೇ ರಾಜತೇ ತಥಾ ॥ ೧೪ ॥

ತದ್ವದ್ ಗೋಷು ಮನುಷ್ಯೇಷು ತದ್ವದ್ಧಸ್ತಿಮೃಗಾದಿಷು ।
ತದ್ವತ್ ಕೀಟಪತಂಗೇಷು ಪ್ರಸಕ್ತಾತ್ಮಾ ಸ್ವಕರ್ಮಭಿಃ ॥ ೧೫ ॥

ಯೇನ ಯೇನ ಶರೀರೇಣ ಯದ್ಯತ್ ಕರ್ಮ ಕರೋತ್ಯಯಮ್ ।
ತೇನ ತೇನ ಶರೀರೇಣ ತತ್ತತ್ಫಲಮುಪಾಶ್ನುತೇ ॥ ೧೬ ॥

ಮುತ್ತು, ಹವಳ, ಬಂಗಾರ, ಗುಂಡು, ಕರಿಮಣಿ, ಗಾಜಿನ ಮಣಿ ಮುಂತಾದವು ಒಂದು ಸೂತ್ರದ ಆಧಾರದಲ್ಲಿ ಹೆಣೆಯಲ್ಪಟ್ಟಂತೆ ಆನೆ, ಕುದುರೆ, ಮನುಷ್ಯ, ಹಸು, ಕ್ರಿಮಿ-ಕೀಟಾದಿಗಳು, ಪಕ್ಷಿ ಮೊದಲಾದವುಗಳು, ತಮ್ಮ ಕರ್ಮಾನುಸಾರವಾಗಿ ಹುಟ್ಟಿರುವ ಬೇರೆ ಬೇರೆ ಪ್ರಾಣಿಗಳು ಯಾವ ಯಾವ ದೇಹಕ್ಕಾಗಿ ಯಾವ ಯಾವ ಕರ್ಮಗಳನ್ನು ಮಾಡಿವೆಯೋ ಆಯಾ ದೇಹವನ್ನು ಭಗವಂತನ ದೆಶೆಯಿಂದ ಪಡೆದು ಈ ಕರ್ಮಫಲಗಳನ್ನು ಅನುಭವಿಸುತ್ತವೆ.

ಯಥಾ ಹ್ಯೇಕರಸಾ ಭೂಮಿರೋಷಧ್ಯಾತ್ಮಾನುಸಾರಿಣೀ ।
ತಥಾ ಕರ್ಮಾನುಗಾ ಬುದ್ಧಿರಂತರಾತ್ಮಾನುದರ್ಶಿನೀ ॥ ೧೭ ॥

ಭೂಮಿಯು ಒಂದೇ ಇದ್ದರೂ ಆ ಭೂಮಿಯಲ್ಲಿ ನೆಡಲ್ಪಟ್ಟ ಗಿಡಗಳ ಸ್ವಭಾವಕ್ಕೆ ಅನುಗುಣವಾಗಿ ರಸಗಳನ್ನು ತುಂಬುತ್ತದೆ. ತಿಕ್ತವಾದ ವನಸ್ಪತಿಯಲ್ಲಿ ಭೂಮಿಯು ತಿಕ್ತರಸವನ್ನೇ ದಾನ ಮಾಡುತ್ತದೆ. ಮಧುರವಾದ ವನಸ್ಪತಿಯಲ್ಲಿ ಭೂಮಿಯು ಮಧುರವನ್ನೇ ದಾನ ಮಾಡುತ್ತದೆ. ಹುಳಿಯಾದ ವನಸ್ಪತಿಯಲ್ಲಿ ಭೂಮಿಯು ಆಮ್ಲರಸವನ್ನೇ ದಾನ ಮಾಡುತ್ತದೆ. ಅವುಗಳ ಅರ್ಹತೆಗನುಗುಣವಾಗಿ ಆಯಾ ರಸಗಳನ್ನು ದಾನ ಮಾಡುವಂತೆ, ತ್ರಿಗುಣಾತ್ಮಕವಾದ ಬುದ್ಧಿಯು ಕರ್ಮಾನುಸಾರವಾಗಿ ಹೃದಯದಲ್ಲಿರುವ ಜೀವನನ್ನು ನೋಡುತ್ತದೆ. ಆ ಕರ್ಮಾನುಸಾರವಾಗಿ ಬಂದಿರುವ ಬುದ್ಧಿಯು ಜೀವಾತ್ಮನಿಗೆ ಪರತತ್ತ್ವವನ್ನು ತೋರಿಸುತ್ತದೆ. ಉತ್ತಮ ಸ್ವಭಾವದ ಬುದ್ಧಿಯು, ಮಧ್ಯಮ ರಾಜಸ ಸ್ವಭಾವದ ಬುದ್ಧಿಯು, ಅಧಮ ತಾಮಸವಾದ ಬುದ್ಧಿಯು ಆಯಾ ಉತ್ತಮ-ಮಧ್ಯಮ-ಅಧಮ ಜೀವರಿಗೆ ಅರ್ಹವಾದ ಪರತತ್ತ್ವವನ್ನು ತೋರಿಸುತ್ತದೆ. ಉತ್ತಮರು ಸರ್ವೋತ್ತಮನೆಂದು, ಮಧ್ಯಮರು ಇದೋ-ಅದೋ ಎಂದು, ಅಧಮರು ನಾನೇ ದೇವನೆಂದು ಭಾವಿಸುತ್ತಾರೆ. ಗಿಡಗಳಲ್ಲೇ ಇರುವ ಭಿನ್ನತೆಗಳು ಅವುಗಳ ರಸಕ್ಕೆ ಅವುಗಳೇ ಕಾರಣವಾಗುವಂತೆ ಅವರವರ

ಚಿಂತನೆಗಳಿಗೆ ಅವರವರ ಸ್ವಭಾವ, ಯೋಗ್ಯತೆಗಳೇ ಕಾರಣವಾಗಿವೆ.

ಜ್ಞಾನಪೂರ್ವೋದ್ಭವಾ ಲಿಪ್ಸಾ ಲಿಪ್ಸಾಪೂರ್ವಾಭಿಸಂಧಿತಾ ।
ಅಭಿಸಂಧಿಪೂರ್ವಕಂ ಕರ್ಮ ಕರ್ಮಮೂಲಂ ತತಃ ಫಲಮ್ ॥ ೧೮ ॥

ವಿಷಯಗಳಲ್ಲಿ ಇಂದ್ರಿಯಗಳು ಆಸಕ್ತವಾದಾಗ ಜ್ಞಾನದಿಂದಾಗಿ ಅವುಗಳಲ್ಲಿ ಆಸಕ್ತಿಯು ಉಂಟಾಗುತ್ತದೆ. ಆಸೆಯನ್ನು ಮುಂದಿಟ್ಟುಕೊಂಡು ಅದರ ವಿಷಯಗಳಲ್ಲಿ ಅಭಿಸಂಧಿಯು ಉಂಟಾಗುತ್ತದೆ. ಅಭಿಸಂಧಿಯನ್ನು ಮುಂದಿಟ್ಟುಕೊಂಡು ಕರ್ಮಗಳು ನಡೆಯುತ್ತವೆ. ಆ ಕರ್ಮಫಲಗಳನ್ನನುಸರಿಸಿ ಸುಖಫಲಗಳು ಉಂಟಾಗುತ್ತವೆ.

ಫಲಂ ಕರ್ಮಾತ್ಮಕಂ ವಿದ್ಯಾತ್ ಕರ್ಮ ಜ್ಞೇಯಾತ್ಮಕಂ ತಥಾ ।
ಜ್ಞೇಯಂ ಜ್ಞಾನಾತ್ಮಕಂ ವಿದ್ಯಾಜ್ಜ್ಞಾನಂ ಸದಸದಾತ್ಮಕಮ್ ॥ ೧೯ ॥

ಕರ್ಮಕ್ಕೆ ಬುದ್ಧಿಯು ಕಾರಣವು. ಬುದ್ಧಿಗೆ ವಿಷಯಜ್ಞಾನವು ಕಾರಣವು. ಆ ವಿಷಯ ಜ್ಞಾನಕ್ಕೆ ಆತ್ಮನು, ಜೀವನು ಆಶ್ರಯನು. ಆತ್ಮನಲ್ಲಿ ವೈವಿಧ್ಯವು ಇರುವುದರಿಂದ ಆತ್ಮನಲ್ಲಿರುವ ಜ್ಞಾನದಲ್ಲಿಯೇ ಉತ್ತಮ ಜ್ಞಾನವು, ಅಧಮ ಜ್ಞಾನವು, ಮಿಶ್ರ ಜ್ಞಾನವು ಎಂದು ಜ್ಞಾನದಲ್ಲಿ ತ್ರೈವಿಧ್ಯವಿದೆ.

ತದೇವಮಿಷ್ಯತೇ ಬ್ರಹ್ಮ ಶಾಸನಾದ್ವಿನಿಭಿದ್ಯತೇ ।
ಜ್ಞಾನಾನಾಂ ಚ ಫಲಾನಾಂ ಚ ಜ್ಞೇಯಾನಾಂ ಕರ್ಮಣಾಂ ತಥಾ ।
ಜ್ಞೇಯಾಂತೇ ತತ್ಫಲಂ ದಿವ್ಯಂ ಜ್ಞಾನಂ ಜ್ಞೇಯಪ್ರತಿಷ್ಠಿತಮ್ ॥ ೨೦ ॥

ಈ ಕಾರಣದಿಂದ ಪರಬ್ರಹ್ಮನೆಂಬ ವಸ್ತುವು ನಾನು ಹೇಳಿದ ರೀತಿಯಲ್ಲಿ ಅನೇಕ ಸಂಜ್ಞಾನಗಳಿಂದ ಹೊಂದಲ್ಪಡುತ್ತದೆ. ಆ ಪರಬ್ರಹ್ಮ ವಸ್ತುವು ಹೊಂದಿದ ಬಳಿಕವೂ ಅದರ ಅಧೀನವಾಗಿಯೇ ಮುಕ್ತಿಯಲ್ಲಿರುತ್ತಾರೆ. ಮುಕ್ತಿಯಲ್ಲಿಯೂ ಜೀವರನ್ನು ಶಾಸನ ಮಾಡುತ್ತದೆ. ಆದ್ದರಿಂದ ಮುಕ್ತಿಯಲ್ಲಿಯೂ ಜೀವನು ಪರಮಾತ್ಮನ ಅಧೀನನಾಗಿಯೇ ಇರುತ್ತಾನೆ. ಜ್ಞಾನಫಲ, ಜ್ಞಾನ ವಿಷಯಗಳು, ಕರ್ಮಗಳು ಇವುಗಳನ್ನೆಲ್ಲಾ ಹೊಂದಿದ ಮೇಲೆ, ಇವುಗಳನ್ನು ತಿಳಿಯುವ ಶಾಸ್ತ್ರವನ್ನು ಚೆನ್ನಾಗಿ ತಿಳಿದ ಬಳಿಕ ಯಾವ ದಿವ್ಯಜ್ಞಾನವು ಉತ್ಪನ್ನವಾಗುತ್ತದೋ ಅಂತಹ ಜ್ಞಾನಯೋಗ್ಯನಾದ ಜೀವನಲ್ಲಿ ಈ ಪರಬ್ರಹ್ಮ ವಸ್ತುವು ಸುಪ್ರತಿಷ್ಠಿತವಾಗಿ ಗೋಚರವಾಗುತ್ತದೆ.

ಮಹದ್ಧಿ ಪರಮಂ ಭೂತಂ ಯುಕ್ತಾಃ ಪಶ್ಯಂತಿ ಯೋಗಿನಃ ।
ಅಬುಧಾಸ್ತಂ ನ ಪಶ್ಯಂತಿ ಹ್ಯಾತ್ಮಸ್ಥಂ ಗುಣಬುದ್ಧಯಃ ॥ ೨೧ ॥

ಸಮಸ್ತ ಯೋಗಿಗಳು ಪರಮಾತ್ಮನನ್ನು ಮಹತ್ತಾದ ಶ್ರೇಷ್ಠವಾದ ಭೂತವೆಂದು ಕಂಡುಕೊಳ್ಳುತ್ತಾರೆ. ರೂಪಾದಿ ವಿಷಯಲಂಪಟರಾದ ಜೀವರು ಪರಮಾತ್ಮನು ಹೃದಯದಲ್ಲಿದ್ದರೂ ದಡ್ಡರಾಗಿ ಅವನನ್ನು ನೋಡುವುದಿಲ್ಲ.

ಪೃಥಿವ್ಯಾರೂಪತೋ ರೂಪಮಪಾಮಿಹ ಮಹತ್ತರಮ್ ।
ಅದ್ಭ್ಯೋ ಮಹತ್ತರಂ ತೇಜಸ್ತೇಜಸಃ ಪವನೋ ಮಹಾನ್ ॥ ೨೨ ॥

ಪೃಥಿವ್ಯಭಿಮಾನಿ ದೇವತೆಗಳಿಗಿಂತಲೂ ಜಲಾಭಿಮಾನಿದೇವತೆಯ ರೂಪವು ಮಹತ್ತರವಾದುದು. ಜಲಾಭಿಮಾನಿ ದೇವತೆಯ ರೂಪಕ್ಕಿಂತಲೂ ತೇಜೋಭಿಮಾನಿ ದೇವತೆಯ ರೂಪವು ಮಹತ್ತರವಾದುದು. ತೇಜೋಭಿಮಾನಿ ರೂಪಕ್ಕಿಂತಲೂ ವಾಯು ಅಭಿಮಾನಿ ದೇವತೆಯ ರೂಪವು ಮಹತ್ತರವಾದುದು.

ಪವನಾಚ್ಚ ಮಹದ್ವ್ಯೋಮ ತಸ್ಮಾತ್ ಪರತರಂ ಮನಃ ।
ಮನಸೋ ಮಹತೀ ಬುದ್ಧಿರ್ಬುದ್ಧೇಃ ಕಾಲೋ ಮಹಾನ್ ಸ್ಮೃತಃ ॥೨೩॥

ವಾಯು ಅಭಿಮಾನಿ ದೇವತೆಗಿಂತಲೂ ಆಕಾಶತತ್ತ್ವಾಭಿಮಾನಿ ದೇವತೆಯ ರೂಪವು ಮಹತ್ತರವಾದುದು. ಆ ಆಕಾಶತತ್ತ್ವಾಭಿಮಾನಿ ದೇವತೆಗಿಂತಲೂ ಮನಸ್ತತ್ತ್ವಾಭಿಮಾನಿ ದೇವತೆಯ ರೂಪವು ಪರತರವಾದುದು. ಮನಸ್ತತ್ತ್ವಾಭಿಮಾನಿ ದೇವತೆಯ ರೂಪಕ್ಕಿಂತಲೂ ಮಹತತ್ತ್ವಾಭಿಮಾನಿ ಎನಿಸಿದ ಬುದ್ಧ್ಯಭಿಮಾನಿಯು ಮಹತ್ತರವಾದುದು. ಬುದ್ಧಿ ತತ್ತ್ವಾಭಿಮಾನಿ ದೇವತೆಗಿಂತಲೂ ನಿತ್ಯಾಪರೋಕ್ಷ ಜ್ಞಾನಿಯಾದ, ಕಾಲನಾಮಕನಾದ ಚತುರ್ಮುಖ ಬ್ರಹ್ಮನು ಶ್ರೇಷ್ಠನಾದವನು.

ಕಾಲಾತ್ಸ ಭಗವಾನ್ ವಿಷ್ಣುರ್ಯಸ್ಯ ಸರ್ವಮಿದಂ ಜಗತ್ ।
ನಾದಿರ್ನ ಮಧ್ಯಂ ನೈವಾಂತಸ್ತಸ್ಯ ದೇವಸ್ಯ ವಿದ್ಯತೇ ॥ ೨೪ ॥

ಕಾಲನೆನಿಸಿದ ಚತುರ್ಮುಖ ಬ್ರಹ್ಮನಿಗಿಂತಲೂ ಷಡ್ಗುಣೈಶ್ವರ್ಯ ಸಂಪನ್ನನಾದ ವಿಷ್ಣುವು ಸರ್ವೋತ್ತಮನು. ಯಾವ ವಿಷ್ಣುವಿನಿಂದಲೇ ಈ ಸಮಗ್ರ ಜಗತ್ತು ನಡೆಯುತ್ತಿದೆಯೋ ಈ ಜಗನ್ನಿಯಾಮಕನಾದ ವಿಷ್ಣುವಿಗೆ ಆದಿಯಾಗಲೀ, ಮಧ್ಯವಾಗಲೀ, ಕೊನೆಯಾಗಲೀ ಇರುವುದಿಲ್ಲ.

ಅನಾದಿತ್ವಾದಮಧ್ಯತ್ವಾದನಂತತ್ವಾಚ್ಚ ಸೋಽವ್ಯಯಃ ।
ಅತ್ಯೇತಿ ಜೀವಜಾತಂ ಹಿ ದುಃಖಂ ಹ್ಯಂತವದುಚ್ಯತೇ ॥ ೨೫ ॥

ಅನಾದಿಯೂ, ಮಧ್ಯರಹಿತನಾದುದರಿಂದಲೂ, ಅನಂತನಾದುದರಿಂದಲೂ ಅವ್ಯಯನೆನಿಸಿದ್ದಾನೆ. ಸಮಸ್ತ ದುಃಖಗಳನ್ನೂ ಮೀರಿ ನಿಂತಿದ್ದಾನೆ. ದುಃಖವನ್ನೇ ಅಂತ ಕೊನೆ ಎಂದು ಕರೆಯುತ್ತಾನೆ. ಈ ದುಃಖದಿಂದ ಪರಬ್ರಹ್ಮನು ನಿತ್ಯಮುಕ್ತನಾಗಿದ್ದಾನೆ. ದುಃಖವುಳ್ಳಂತಹ ಜೀವಸಮುದಾಯವು ನಾಶದಿಂದ ಕೂಡಿದೆ. ಇವನು ನಾಶವಿಲ್ಲದವನಾಗಿದ್ದರಿಂದ ಜೀವರಂತೆ ದುಃಖಿಯೂ ಅಲ್ಲ.

ತದ್ ಬ್ರಹ್ಮ ಪರಮಂ ಪ್ರೋಕ್ತಂ ತದ್ಧಾಮ ಪರಮಂ ಸ್ಮೃತಮ್ ।
ತದ್ ಗತ್ವಾ ಕಾಲವಿಷಯಾದ್ ವಿಮುಕ್ತಾ ಮೋಕ್ಷಮಾಶ್ರಿತಾಃ ॥ ೨೬॥

ಆ ಗುಣಪರಿಪೂರ್ಣವಾದ ವಸ್ತುವೇ ಸರ್ವೋತ್ತಮವಾಗಿದೆ. ಅವನು ವಾಸ ಮಾಡುವ ಮನೆಯೇ ಪರಮ ಎಂದು ಕರೆಯಲ್ಪಟ್ಟಿದೆ. ಅಂತಹ ಪರಮಾತ್ಮನ ಮನೆ ಎಂಬ ಮೋಕ್ಷವನ್ನು ಆಶ್ರಯಿಸಿದ ನಿರ್ಮುಕ್ತರು ಮೃತ್ಯುವಿಷಯದಿಂದ ನಿರ್ಮುಕ್ತರಾಗಿರುತ್ತಾರೆ.

ಗುಣೇಷ್ವೇತೇ ಪ್ರಕಾಶಂತೇ ನಿರ್ಗುಣತ್ವಾತ್ತತಃ ಪರಮ್ ।
ನಿವೃತ್ತಿಲಕ್ಷಣೋ ಧರ್ಮಸ್ತಥಾನಂತ್ಯಾಯ ಕಲ್ಪತೇ ॥ ೨೭ ॥

ಈ ಜೀವರು ರೂಪಾದಿ ಗುಣಪಂಚಕಗಳಲ್ಲಿ ಪ್ರಕಾಶಿಸುತ್ತಾರೆ. ಗುಣಗಳ ಸಂಬಂಧವೇ ಇಲ್ಲದಿರುವಂತಹ ಪರಮಾತ್ಮನು ಈ ಜೀವಸಮೂಹಕ್ಕಿಂತ ವಿಲಕ್ಷಣನಾಗಿ ಪ್ರಕಾಶಿಸುತ್ತಾನೆ. ಕಾಮನಾರಹಿತವಾಗಿ, ಜ್ಞಾನಪೂರ್ವಕವಾಗಿ ಮಾಡಿದ ಧರ್ಮಾಚರಣೆಗಳು ಆ ಸರ್ವೋತ್ತಮನಾದ ಪರಬ್ರಹ್ಮನನ್ನು ನಿತ್ಯವೂ ಹೊಂದಲು ಕಾರಣವಾಗುತ್ತವೆ.

ಋಚೋ ಯಜೂಂಷಿ ಸಾಮಾನಿ ಶರೀರಾಣಿ ವ್ಯಪಾಶ್ರಿತಾಃ ।
ಜಿಹ್ವಾಗ್ರೇಷು ಪ್ರವರ್ತಂತೇ ಯಜ್ಞಸಾಧ್ಯಾವಿನಾಶಿನಃ ॥ ೨೮ ॥

ಯಾರಲ್ಲಿ ಋಗ್ವೇದ, ಯಜುರ್ವೇದ, ಸಾಮವೇದಗಳು ನಾಲಿಗೆ ತುದಿಯಲ್ಲಿಯೇ ಭಗವದ್ಗುಣವಾಚಕಗಳಾಗಿ ಪ್ರವೃತ್ತಿಯನ್ನು ಹೊಂದುತ್ತವೋ ಅವರು ಯಜ್ಞನಾಮಕನಾದ ಪರಮಾತ್ಮನ ಅನುಗ್ರಹದಿಂದ ಅವಿನಾಶಿಯಾಗಿರುವಂತಹ ಮೋಕ್ಷವನ್ನು ಹೊಂದುತ್ತಾರೆ.

ನ ಚೈವಮಿಷ್ಯತೇ ಬ್ರಹ್ಮ ಶರೀರಾಶ್ರಯಸಂಭವಮ್ ।
ನ ಯತ್ನಸಾಧ್ಯಂ ತದ್ ಬ್ರಹ್ಮ ನಾದಿಮಧ್ಯಂ ನ ಚಾಂತವತ್ ॥ ೨೯ ॥

ಗುಣಪರಿಪೂರ್ಣವಾದ ಪರಬ್ರಹ್ಮನೆಂಬ ವಸ್ತುವನ್ನು ಸಮಸ್ತ ಜೀವರ ಉತ್ಪತ್ತಿಗೆ ಕಾರಣವಾದುದರಿಂದ ಜೀವರಂತೆ ಇದ್ದಾನೆಂದು ಜ್ಞಾನಿಗಳು ಅಂಗೀಕರಿಸುವುದಿಲ್ಲ. ಅವನ ಮಹಿಮೆಯನ್ನು ಅವನ ಅನುಗ್ರಹದಿಂದಲೇ ತಿಳಿಯಬೇಕೇ ವಿನಾ ನಮ್ಮ ಪ್ರಯತ್ನಗಳಿಂದ ತಿಳಿಯಲಾಗದು. ಆದಿ-ಮಧ್ಯ-ಅಂತ್ಯಗಳಿಲ್ಲದ ಗುಣಪರಿಪೂರ್ಣ-ವಾದ ವಸ್ತು ಪರಬ್ರಹ್ಮನೆನಿಸಿದ್ದಾನೆ.

ಋಚಾಮಾದಿಸ್ತಥಾ ಸಾಮ್ನಾಂ ಯಜುಷಾಮಾದಿರುಚ್ಯತೇ ।
ಅಂತಶ್ಚಾದಿಮತಾಂ ದೃಷ್ಟೋ ನ ಚಾದಿರ್ಬ್ರಹ್ಮಣಃ ಸ್ಮೃತಃ ॥ ೩೦ ॥

ಋಗ್ವೇದಗಳಿಗೂ ಆದಿ ಇದೆ. ಸಾಮವೇದಗಳಿಗೂ ಆದಿ ಇದೆ. ಯಜುರ್ವೇದಗಳಿಗೂ ಆದಿ ಇದೆ. ಆದಿಯುಳ್ಳವುಗಳೆಲ್ಲ ಅಂತವುಳ್ಳವುಗಳು ಆಗಿವೆ. ಆದರೆ ಗುಣಪರಿಪೂರ್ಣನಾದ ಬ್ರಹ್ಮನು ಆದಿಯುಳ್ಳವನೂ ಅಲ್ಲ, ಆದ್ದರಿಂದ ಅಂತ್ಯವುಳ್ಳವನೂ ಅಲ್ಲ.

ವ್ಯಾಖ್ಯಾನ ವಿಶೇಷ– ಶಾರೀರಿಕ ಆದಿವುಳ್ಳವರು ಜೀವರು. ಅವರಿಗೆ ಶರೀರದ ವಿನಾಶವು ಇದೆ. ಆದಿವುಳ್ಳದ್ದು ಅಂತ್ಯವನ್ನು ಹೊಂದುತ್ತದೆ ಎಂಬುದು ಸಾಮಾನ್ಯ ನಿಯಮ. ಕೆಲವೊಂದಕ್ಕೆ ಆದಿ ಇದೆ, ಅಂತ್ಯವಿಲ್ಲ. ಘಟದ ಧ್ವಂಸವು ಉತ್ಪತ್ತಿಯಾಗುತ್ತದೆ. ಆದರೆ ನಿತ್ಯವೆನಿಸಿದೆ. ಅದರಂತೆ ಇಲ್ಲಿ ವೇದಗಳ ಆದಿಯಾಗಲಿ, ಅಂತ್ಯಗಳೆಂದರೆ ಅಭಿವ್ಯಕ್ತಿ, ಅನಭಿವ್ಯಕ್ತಿಯನ್ನು ಇಟ್ಟುಕೊಂಡು ಹೇಳಲಾಗಿದೆ.

ಅನಾದಿತ್ವಾದನಂತತ್ವಾತ್ತದನಂತಮಥಾವ್ಯಯಮ್ ।
ಅವ್ಯಯತ್ವಾಚ್ಚ ನಿರ್ದ್ವಂದ್ವಂ ದ್ವಂದ್ವಾಭಾವಾತ್ತತಃ ಪರಮ್ ॥ ೩೧ ॥

ಪರಮಾತ್ಮನು ಅನಾದಿ, ಅನಂತವಾದುದರಿಂದ ಅವನು ಅನಂತನೆಂದೂ, ಅವ್ಯಯನೆಂದೂ, ಅವ್ಯಯನಾದುದರಿಂದ ಸುಖ-ದುಃಖಗಳನ್ನು ಅತಿಕ್ರಮಿಸಿದವನು ಎಂದೂ, ದ್ವಂದ್ವಾತೀತನಾದುದರಿಂದ ಎಲ್ಲಕ್ಕಿಂತ ಉತ್ತಮನೆಂದೂ ಹೇಳಲ್ಪಟ್ಟಿದ್ದಾನೆ.

ಅದೃಷ್ಟತೋऽನುಪಾಯಾಚ್ಚ ಅಪ್ಯಭಿಸಂಧೇಶ್ಚ ಕರ್ಮಣಃ ।
ನ ತೇನ ಮರ್ತ್ಯಾಃ ಪಶ್ಯಂತಿ ಯೇನ ಗಚ್ಛಂತಿ ತತ್ ಪರಮ್ ॥ ೩೨ ॥

ಪರಮಾತ್ಮನನ್ನು ಅದೃಷ್ಟದಿಂದ ಹೊಂದಲಾಗುವುದಿಲ್ಲ. ಕರ್ಮಾಭಿಸಂಧಿಯಿಂದ ಹೊಂದಲಾಗುವುದಿಲ್ಲ. ಅವುಗಳಿಂದ ಮರ್ತ್ಯರು ಪರಬ್ರಹ್ಮನನ್ನು ನೋಡಲಾರರು. ತತ್ತ್ವಜ್ಞಾನದಿಂದಲೇ ಆ ಪರಬ್ರಹ್ಮನನ್ನು ಹೊಂದುತ್ತಾರೆ. ಅಂತಹ ವಸ್ತುವು ಸರ್ವೋತ್ತಮವಾಗಿದೆ.

ವಿಷಯೇಷು ಚ ಸಂಸರ್ಗಾಚ್ಛಾಶ್ವತಸ್ಯ ಚ ದರ್ಶನಾತ್ ।
ಮನಸಾ ಚಾನ್ಯದಾಕಾಂಕ್ಷನ್ ಪರಂ ನ ಪ್ರತಿಪದ್ಯತೇ ॥ ೩೩ ॥

ನಿರಂತರವೂ ಮನಸ್ಸು ವಿಷಯಗಳ ಸಂಪರ್ಕವನ್ನೇ ಹೊಂದಿದ್ದಲ್ಲಿ, ಮನಸ್ಸು ಬೇರೆಯದ್ದನ್ನೇ ಆಕಾಂಕ್ಷಿಸುವುದರಿಂದ ಪರಬ್ರಹ್ಮನನ್ನು ಹೊಂದಲಾಗುವುದಿಲ್ಲ.

ಗುಣಾನ್ ಯದಿಹ ಪಶ್ಯಂತಿ ತದಿಚ್ಛಂತ್ಯಪರೇ ಜನಾಃ ।
ಪರಂ ನೈವಾಭಿಕಾಂಕ್ಷಂತಿ ನಿರ್ಗುಣತ್ವಾದ್ ಗುಣಾರ್ಥಿನಃ ॥ ೩೪ ॥

ರೂಪಾದಿ ವಿಷಯಗಳನ್ನೇ ಯಾರು ಇಲ್ಲಿ ನೋಡಲು ಬಯಸುತ್ತಾರೋ ಅಂತಹ ಜನರಿಗೆ ಅವುಗಳಲ್ಲಿಯೇ ಆಸಕ್ತಿ ಹುಟ್ಟುತ್ತದೆ. ಪರಬ್ರಹ್ಮ ವಸ್ತುವನ್ನು ನೋಡಲು ಅವರು ಬಯಸುವುದಿಲ್ಲ. ವಿಷಯಗಳಲ್ಲಿ ಬಯಕೆಯುಳ್ಳವರಿಗೆ ವಿಷಯಗಳಿಗಿಂತ ಅತೀ ದೂರನಾದ ಭಗವಂತನಲ್ಲಿ ಅಪೇಕ್ಷೆ ಹುಟ್ಟುವುದಿಲ್ಲ.

ಗುಣೈರ್ಯಸ್ತ್ವವರೈರ್ಯುಕ್ತಃ ಕಥಂ ವಿದ್ಯಾದ್ ಗುಣಾನಿಮಾನ್ ।
ಅನುಮಾನಾದ್ಧಿ ಗಂತವ್ಯಂ ಗುಣೈರವಯವೈಃ ಸಹ ॥ ೩೫ ॥

ರೂಪ-ರಸಾದಿ ಗುಣಗಳಿಗಿಂತ ಭಗವಂತನ ಸರ್ವೇಶ್ವರತ್ವಾದಿ ಗುಣಗಳು ಉತ್ತಮವಾಗಿವೆ. ಆದ್ದರಿಂದ ರೂಪ-ರಸಾದಿ ಅಧಮ ಗುಣಗಳನ್ನು ಚಿಂತಿಸುವವರು ಭಗವಂತನ ಸರ್ವೇಶ್ವರತ್ವಗುಣಗಳನ್ನು ಹೇಗೆ ಚಿಂತಿಸಿಯಾರು? ಇಷ್ಟಾಗಿ ಪರವಾದಿಗಳು ಹೇಳುವಂತೆ ಭಗವಂತನ ನಿರ್ಗುಣತ್ವ, ನಿರಾಕಾರತ್ವಗಳು ಸರ್ವಥಾ ವಿದ್ವಜ್ಜನರಿಗೆ ಸಮ್ಮತವಾದುವಲ್ಲ. ಭಗವಂತನನ್ನು ಸಕಲ ಜಗತ್ಕರ್ತೃತ್ವ ಅನುಮಾನದಿಂದ, ಸರ್ವಜ್ಞತ್ವಾದಿ ಗುಣಗಳಿಂದ, ಜ್ಞಾನಾನಂದಮಯ ಕರ-ಚರಣಾದಿ ಅವಯವಗಳಿಂದ

ತಿಳಿಯಬೇಕು. ಭಗವಂತನಲ್ಲಿ ಸರ್ವಜ್ಞತ್ವವು ಇಲ್ಲದಿದ್ದಲ್ಲಿ ಸಕಲ ಪ್ರಪಂಚಕ್ಕೆ ಆಶ್ರಯವಾದ ವಿಶ್ವರೂಪ ಎಂಬ ಬೃಹತ್ತಾದ ದೇಹವೇ ಇಲ್ಲದಿದ್ದಲ್ಲಿ ಜಗತ್ಕರ್ತೃತ್ವ ಲಕ್ಷಣವು ಹೊಂದುವುದಿಲ್ಲ ಎಂದು ಭಾವ.

ಸೂಕ್ಷ್ಮೇಣ ಮನಸಾ ವಿದ್ಮೋ ವಾಚಾ ವಕ್ತುಂ ನ ಶಕ್ನುಮಃ ।
ಮನೋ ಹಿ ಮನಸಾ ಗ್ರಾಹ್ಯಂ ದರ್ಶನೇನ ಚ ದರ್ಶನಮ್ ॥ ೩೬ ॥

ಆ ಪರಬ್ರಹ್ಮ ವಸ್ತುವನ್ನು ಸೂಕ್ಷ್ಮವಾದ ಮನಸ್ಸಿನಿಂದ ತಿಳಿಯಬಹುದು. ಮಾತಿನಿಂದ ಹೇಳಲು ಸಾಧ್ಯವಿಲ್ಲ. ಮನಸ್ಸನ್ನು ಜ್ಞಾನದಿಂದಲೇ ಬಾಹ್ಯ ವಿಷಯದಲ್ಲಿ ಸಾಗದಂತೆ ನಿಗ್ರಹಿಸಿಕೊಳ್ಳಬೇಕು. ವಿಷಯಪದಾರ್ಥಗಳಲ್ಲಿ ದೋಷಗಳನ್ನು ಕಂಡು ವಿಷಯಪದಾರ್ಥಗಳ ಕಡೆ ಮನಸ್ಸು ಸಾಗದಂತೆ ನಿಗ್ರಹಿಸಿಕೊಳ್ಳಬೇಕು.

ಜ್ಞಾನೇನ ನಿರ್ಮಲೀಕೃತ್ಯ ಬುದ್ಧಿಂ ಬುದ್ಧ್ಯಾ ತಥಾ ಮನಃ ।
ಮನಸಾ ಚೇಂದ್ರಿಯಗ್ರಾಮಮನಂತಂ ಪ್ರತಿಪದ್ಯತೇ ॥ ೩೭ ॥

ಬುದ್ಧಿಯನ್ನು ನಿಶ್ಚಯವಾದ ಬುದ್ಧಿಯಿಂದ, ಭಗವದ್‌ಜ್ಞಾನದಿಂದ ಸ್ವಚ್ಛ ಮಾಡಿಕೊಂಡು ಅದರಂತೆ ಮನಸ್ಸನ್ನೂ ಬುದ್ಧಿಪೂರ್ವಕವಾಗಿ ಸ್ವಚ್ಛ ಮಾಡಿಕೊಂಡು ಮನಸ್ಸಿನಿಂದ ಇಂದ್ರಿಯಗಳನ್ನು ನಿಗ್ರಹಿಸಿಕೊಂಡು ಅನಂತನಾದ ಬ್ರಹ್ಮನನ್ನು ಹೊಂದುತ್ತಾನೆ.

ಬುದ್ಧಿಪ್ರಹೀಣೋ ಮನಸಾಸಮೃದ್ಧ-
ಸ್ತಥಾऽನಿರಾಶೀರ್ಗುಣತಾಮುಪೈತಿ ।
ಪರಂ ತ್ಯಜಂತೀಹ ವಿಲೋಭ್ಯಮಾನಾ
ಹುತಾಶನಂ ವಾಯುರಿವೇಂಧನಸ್ಥಮ್ ॥ ೩೮ ॥

ದುರ್ಬುದ್ಧಿಯಿಂದ ಹೀನನಾದವನು ಮನಸ್ಸಿನಿಂದ ಎಂದರೆ ಭಗವದ್ವಿಷಯಕವಾದ ಮನಸ್ಸಿನಿಂದ ಸಮೃದ್ಧಿಯನ್ನು ಹೊಂದಿ ನೈರಾಶ್ಯವನ್ನು, ಬಾಹ್ಯವಿಷಯಗಳಲ್ಲಿ ಅನಾಸಕ್ತಿಯನ್ನು ಹೊಂದುತ್ತಾನೆ. ವಿಷಯಪದಾರ್ಥಗಳಿಂದ ಯಾರು ವಂಚಿತರಾಗುತ್ತಾರೋ ಅವರು ಪರಬ್ರಹ್ಮನನ್ನು ಹೊಂದುವುದಿಲ್ಲ. ಕಟ್ಟಿಗೆಯಲ್ಲಿರುವ ಅಗ್ನಿಯನ್ನು ವಾಯುವು ಮುಟ್ಟಲಾಗದಂತೆ ವಿಷಯಗಳಲ್ಲಿ ಆಸಕ್ತರಾದವರು ಪರಬ್ರಹ್ಮನನ್ನು ಮುಟ್ಟಲಾರರು.

ಗುಣಾದಾನೇ ವಿಪ್ರಯೋಗೇ ಚ ತೇಷಾಂ
ಮನಃ ಸದಾ ವಿದ್ಧಿಪರಾವರಾಭ್ಯಾಮ್ ।
ಅನೇನೈವ ವಿಧಿನಾ ಸಂಪ್ರವೃತ್ತೋ
ಗುಣಾದಾನೇ ಬ್ರಹ್ಮಶರೀರಮೇತಿ ॥ ೩೯ ॥

ಮನಸ್ಸು ಯಾವಾಗಲೂ ಗುಣಾದಾನ ವಿಪ್ರಯೋಗ ಬುದ್ಧಿಯನ್ನು ಹೊಂದಿರಬೇಕು. ಇದನ್ನೇ 'ಪರಾವರಾಭ್ಯಾಂ' ಎಂದು ಹೇಳಿದ್ದಾರೆ. ಗುಣಾದಾನವು ಪರ ಎನಿಸಿದೆ. ವಿಪ್ರಯೋಗವು ಅವರ ಎನಿಸಿದೆ. ಎಂದರೆ ಅಪ್ರಾಕೃತ ದಿವ್ಯರೂಪ ರಸ ಜ್ಞಾನಗಳುಳ್ಳ ಪರಬ್ರಹ್ಮನ ಗುಣಗಳನ್ನು ಮನಸ್ಸು ಸ್ವೀಕರಿಸಬೇಕು. ಅಧಮ ಎನಿಸಿದ ರೂಪಾದಿ ಪ್ರಾಕೃತಗುಣಗಳನ್ನು ಮನಸ್ಸು ತ್ಯಜಿಸಬೇಕು. ಈ ರೀತಿಯಾದ ಮನಸ್ಸಿನಿಂದ ಯಾವಾಗಲೂ ಕೂಡಿದ ವ್ಯಕ್ತಿಯು ಸಾಧಕನಾಗಿ ಈ ಕ್ರಮವನ್ನು ಅನುಷ್ಠಾನ ಮಾಡಿದುದರಿಂದ ವೈಕುಂಠಾದಿ ಲೋಕಸ್ಥಿತ ಪರಬ್ರಹ್ಮನ ಶರೀರವನ್ನು ಹೊಂದುತ್ತಾನೆ.

ವ್ಯಾಖ್ಯಾನ ವಿಶೇಷ– ನಿರ್ಗುಣ ನಿರಾಕಾರ ಬ್ರಹ್ಮಾವಾಪ್ತಿಯೇ ಮೋಕ್ಷ ಎಂದು ಕೆಲವರು ಹೇಳುತ್ತಾರೆ. ಅದನ್ನು ನಿರಾಕರಿಸಲು ಬ್ರಹ್ಮಶರೀರ ಎಂದು ವ್ಯಾಸರು ಪ್ರಯೋಗಿಸುವ ಮೂಲಕ ಗುಣಪರಿಪೂರ್ಣನಾದ ಪರಬ್ರಹ್ಮನು, ಪರಬ್ರಹ್ಮನ ಶರೀರ ಎಂದು ನಿರ್ಗುಣ ವಾದವನ್ನು ನಿರಾಕರಿಸಿದ್ದಾರೆ.

ಅವ್ಯಕ್ತಾತ್ಮಾ ಪುರುಷೋಽವ್ಯಕ್ತಕರ್ಮಾ
ಸೋಽವ್ಯಕ್ತತ್ವಂ ಗಚ್ಛತಿ ಹ್ಯಂತಕಾಲೇ ।
ತೈರೇವಾಯಂ ಚೇಂದ್ರಿಯೈರ್ವರ್ಧಮಾನೈ-
ರ್ಗ್ಲಾಯದ್ಭಿರ್ವಾ ವರ್ತತೇ ಕರ್ಮರೂಪಃ ॥ ೪೦ ॥

ಯಾವ ಸಾಧಕನು ಅವ್ಯಕ್ತನೆನಿಸಿದ ಪರಮಾತ್ಮನಲ್ಲಿಯೇ ಮನಸ್ಸುಳ್ಳವನಾಗಿ ಇರುತ್ತಾನೋ, ಅವ್ಯಕ್ತನೆನಿಸಿದ ಪರಮಾತ್ಮನಲ್ಲಿ ನಿವೃತ್ತಿರೂಪವಾದ ಕರ್ಮವನ್ನು ಸಮರ್ಪಿಸುತ್ತಾನೋ ಅವನು ಮತ್ತೂ ಮತ್ತೂ ಸಾಂಸಾರಿಕವಾದ ದೇಹಗಳನ್ನು ಹೊಂದುವುದರಿಂದ ಮುಕ್ತನಾಗುತ್ತಾನೆ. ಅದೇ ಬಾಹ್ಯೇಂದ್ರಿಯಗಳಿಂದ ವಿಷಯ ಪದಾರ್ಥಗಳು ಅಭಿವೃದ್ಧಿಯನ್ನು ಹೊಂದುತ್ತಿರಲು ಅದೇ ಇಂದ್ರಿಯಗಳು ಜೀವನನ್ನು ದುಃಖಿತನನ್ನಾಗಿ ಮಾಡಿ ಕರ್ಮದಲ್ಲಿಯೇ ರತನಾಗಿ ಇರುತ್ತಾನೆ. ಅವುಗಳ

ಸುಳಿಯಲ್ಲಿಯೇ ಸಂಸಾರವನ್ನು ಹೊಂದಿರುತ್ತಾನೆ. ಇದನ್ನು ದಾಟಲು ನಿವೃತ್ತರೂಪ ಕರ್ಮವನ್ನು ಆಶ್ರಯಿಸಬೇಕು.

ಸರ್ವೈರಯಂ ಚೇಂದ್ರಿಯೈಃ ಸಂಪ್ರಯುಕ್ತೋ
ದೇಹಃ ಪ್ರಾಪ್ತಃ ಪಂಚಭೂತಾಶ್ರಯಃ ಸ್ಯಾತ್ ।
ನ ಸಾಮರ್ಥ್ಯಾದ್ ಗಚ್ಛತಿ ಕರ್ಮಣೇಹ
ಹೀನಸ್ತೇನ ಪರಮೇಣಾವ್ಯಯೇನ ॥ ೪೧ ॥

ಈ ಜೀವನು ಸಮಸ್ತ ಇಂದ್ರಿಯಗಳಿಂದ ಪರಮಾತ್ಮನಿಂದಲೇ ನಿಯೋಜಿಸಲ್ಪಟ್ಟಿದ್ದಾನೆ. ದೇಹವನ್ನು ಹೊಂದಿದ್ದಾನೆ. ಪಂಚಭೂತಗಳನ್ನು ಆಶ್ರಯಿಸಿದ್ದಾನೆ. ಈ ಸಂಸಾರದಲ್ಲಿ ತೊಳಲುತ್ತಿರುವ ಜೀವನು ಪರಮಾತ್ಮನ ಅನುಗ್ರಹವನ್ನು ಸಂಪಾದಿಸದೆ ಕೇವಲ ಪ್ರವೃತ್ತಿಕರ್ಮಗಳನ್ನೇ ಮಾಡುತ್ತಿದ್ದಲ್ಲಿ ಆ ಪ್ರವೃತ್ತಿಕರ್ಮದ ಬಲದಿಂದ ಪರಲೋಕವನ್ನು ಅವನಿಂದ ಹೊಂದಲಾಗುವುದಿಲ್ಲ.

ಪೃಥ್ವ್ಯಾ ನರಃ ಪಶ್ಯತಿ ನಾಂತಮಸ್ಯಾ
ಹ್ಯಂತಶ್ಚಾಸ್ಯಾ ಭವಿತಾ ಚೇತಿ ವಿದ್ಧಿ ।
ಪರಂ ನಯಂತೀಹ ವಿಲೋಭ್ಯಮಾನಂ
ಯಥಾ ಪ್ಲವಂ ವಾಯುರಿವಾರ್ಣವಸ್ಥಮ್ ॥ ೪೨ ॥

ಮನುಷ್ಯನು ಈ ಭೂಮಿಯ ಕೊನೆಯನ್ನು ಕಂಡಿರುವುದಿಲ್ಲ. ಹೀಗಿದ್ದರೂ ಭೂಮಿಗೆ ಕೊನೆಯಿಲ್ಲ ಎಂದು ತಿಳಿದಿಲ್ಲ. ಅಂತವನ್ನು ತಿಳಿದಿದ್ದಾನೆ. ಅದರಂತೆ ಸುಖ-ದುಃಖಗಳೆರಡಕ್ಕೂ ಅಂತವಿದ್ದೇ ಇದೆ. ಸಮುದ್ರದಲ್ಲಿ ಅಲೆದಾಡುತ್ತಿರುವ ಹಡಗು ಅನುಕೂಲವಾದ ವಾಯುವು ಸಿಗದಿದ್ದಲ್ಲಿ ಬಿರುಗಾಳಿಯ ಹೊಡೆತದಿಂದಾಗಿ ಹೇಗೆ ಹಾನಿಗೀಡಾಗುತ್ತದೋ ಅದರಂತೆ ಈ ಬಾಹ್ಯವಾದ ಸುಖ-ದುಃಖಗಳ ಬಿರುಗಾಳಿಯಲ್ಲಿ ಸಿಕ್ಕಿಬಿದ್ದ ಮನುಷ್ಯನು ತನ್ನ ಪ್ರಾಪ್ಯಸ್ಥಾನವನ್ನು ಹೊಂದಲಾರನು.

ದಿವಾಕರೋ ಗುಣಮುಪಲಭ್ಯ ನಿರ್ಗುಣೋ
ಯಥಾ ಭವೇದ್ ವ್ಯಪಗತರಶ್ಮಿಮಂಡಲಃ ।
ತಥಾ ಹ್ಯಸೌ ಮುನಿರಿಹ ನಿರ್ವಿಶೇಷವಾನ್
ಸ ನಿರ್ಗುಣಂ ಪ್ರವಿಶತಿ ಬ್ರಹ್ಮ ಚಾವ್ಯಯಮ್ ॥ ೪೩ ॥

ಸೂರ್ಯನು ಹಗಲಿನಲ್ಲಿ ತನ್ನ ಕಿರಣಗಳಿಂದ ಘಟ-ಪಟಾದಿಗಳಲ್ಲಿರುವ ರೂಪಾದಿ ಗುಣಗಳನ್ನು ಸ್ಪರ್ಶಿಸಿ ಅರ್ಥಾತ್ ಪದಾರ್ಥಗಳನ್ನು ತನ್ನ ಕಿರಣಗಳಿಂದ ಗೋಚರವಾಗುವಂತೆ ಮಾಡಿ ಅಸ್ತಮಾನ ಹೊಂದುವ ಸಮಯದಲ್ಲಿ ತನ್ನ ರಶ್ಮಿಗಳನ್ನು ಸ್ವೀಕರಿಸಿ ಹೋಗುತ್ತಾನೆ. ಘಟ-ಪಟಾದಿ ಗುಣಗಳ ಸಂಬಂಧವನ್ನು ಹೊಂದಿದ ಸೂರ್ಯನಿಗೆ ಅಸ್ತಮಾನದ ಸಮಯದಲ್ಲಿ ಅದರ ಅತಿಯಾದ ಸಂಗವು ಇರುವುದಿಲ್ಲ. ನಿರ್ಲಿಪ್ತನಾಗಿ ಆ ಪದಾರ್ಥಗಳನ್ನು ಬಿಟ್ಟು ತೆರಳುತ್ತಾನೆ. ಇದೇ ರೀತಿಯಾಗಿ ಬಾಹ್ಯ ಗುಣಗಳ ಆಸೆಯನ್ನು ತ್ಯಜಿಸಿದಲ್ಲಿ ಅಪ್ರಾಕೃತ ಗುಣಗಳಿಂದ ಕೂಡಿದ ಅವ್ಯಯನಾದ ಪರಬ್ರಹ್ಮನನ್ನು ಹೊಂದುತ್ತಾನೆ.

ಅನಾಗತಂ ಸುಕೃತಿಮತಾಂ ಪರಾಂ ಗತಿಂ
ಸ್ವಯಂಭುವಂ ಪ್ರಭವನಿಧಾನಮವ್ಯಯಮ್ ।
ಸನಾತನಂ ಯದಮೃತಮವ್ಯಯಂ ಪದಂ
ವಿಚಾರ್ಯ ತಂ ಶಮಮಮೃತತ್ವಮಶ್ನುತೇ ॥ ೪೪ ॥

ಪರಮಾತ್ಮನು ಅನಾಗತ ಎನಿಸಿದ್ದಾನೆ. ಎಂದರೆ ಪೂರ್ಣವಾಗಿ ತಿಳಿಯಲಾಗದು ಎಂದರ್ಥ. ಪುಣ್ಯವುಳ್ಳವರಿಗೆ ಮಾತ್ರ ಈ ಪರಬ್ರಹ್ಮನನ್ನು ಹೊಂದಲು ಸಾಧ್ಯವಾಗುತ್ತದೆ. ಪರಬ್ರಹ್ಮನಾದರೂ ಸ್ವಯಂ ವ್ಯಕ್ತನೂ, ಸಮಗ್ರ ಪ್ರಪಂಚದ ಉತ್ಪತ್ತಿಗೆ, ಲಯಕ್ಕೆ ಕಾರಣನೂ, ಸನಾತನನೂ, ಆದಿ-ಮಧ್ಯಾಂತ ರಹಿತನೂ, ಸತ್ಯಸ್ವರೂಪನೂ ಆಗಿದ್ದಾನೆ. ಇಂತಹ ಪರಮಾತ್ಮನನ್ನು ಯಾವ ಸಾಧಕನು ಕಂಡುಕೊಳ್ಳುತ್ತಾನೋ ಅವನು ಅಮೃತತ್ವವನ್ನು ಹೊಂದುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ದ್ವಾತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಮೂವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ಮೂರನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ನಿಬಂಧನನೆಂಬ ಮುನಿಯು ತನ್ನ ತಾಯಿಗೆ ಸಂಸಾರವನ್ನು ಅರಣ್ಯರೂಪವಾಗಿ ನಿರೂಪಿಸಿದ ಕಥೆಯನ್ನು ಹೇಳಿದುದು. ಅದರಂತೆ ನಾರದ, ಸಾವಿತ್ರೀ ಸಂವಾದವನ್ನು, ನಾರದರ ತಪಸ್ಸು, ವಿಷ್ಣುವಿಗೆ ನಾರದರಿಗೆ ಪ್ರತ್ಯಕ್ಷವಾದ ಬಗೆ – ಇವುಗಳನ್ನು ನಿರೂಪಿಸಿದುದು.

ಯುಧಿಷ್ಠಿರಃ

ಪಿತಾಮಹ ಮಹಾಪ್ರಾಜ್ಞ ದುಃಖಶೋಕಸಮಾಕುಲೇ ।
ಸಂಸಾರಚಕ್ರೇ ಲೋಕಾನಾಂ ನಿರ್ವೇದೋ ನಾಸ್ತಿ ಕಿನ್ನಿದಮ್ ॥ ೧ ॥

ಯುಧಿಷ್ಠಿರ– ತಾತನೇ, ಕೇವಲ ದುಃಖ-ಶೋಕಗಳಿಂದ ಕೂಡಿರುವ ಈ ಸಂಸಾರ ಚಕ್ರದಲ್ಲಿ ಜನರಿಗೆ ವೈರಾಗ್ಯವು ಏಕೆ ಹುಟ್ಟುತ್ತಿಲ್ಲ? ಇದರ ರಹಸ್ಯವನ್ನು ತಿಳಿಸಬೇಕು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ನಿಬಂಧನಸ್ಯ ಸಂವಾದಂ ಭೋಗವತ್ಯಾ ನೃಪೋತ್ತಮ ॥ ೨ ॥

ಭೀಷ್ಮ– ನೃಪೋತ್ತಮನೇ, ಇದೇ ವಿಚಾರದಲ್ಲಿ ನಿಬಂಧನನೆಂಬ ಮುನಿಗೂ ಅವನ ತಾಯಿಯಾದ ಭೋಗವತಿಗೂ ನಡೆದ ಪುರಾತನವಾದ ಸಂಭಾಷಣೆ ಇದೆ.

ಮುನಿಂ ನಿಬಂಧನಂ ಶುಷ್ಕಂ ಧಮನೀಯಾಕೃತಂ ತಥಾ ।
ನಿರಾರಂಭಂ ನಿರಾಲಂಬಮಸಜ್ಜಂತಂ ಚ ಕರ್ಮಣಿ ।
ಪುತ್ರಂ ದೃಷ್ಟ್ವಾऽಪ್ಯವಾಚಾರ್ತಂ ಮಾತಾ ಭೋಗವತೀ ತದಾ ॥ ೩ ॥

ಹಿಂದೆ ನಿಬಂಧನನೆಂಬ ಮುನಿಯು ಯಾವ ಕಾರ್ಯದಲ್ಲಿಯೂ ಉತ್ಸಾಹವಿಲ್ಲದೆ, ಜೀವನಕ್ಕೂ ಯಾವ ಉಪಾಯಗಳಿಲ್ಲದೆ, ಅತ್ಯಂತ ಕಷ್ಟದಿಂದ ಕೃಶಶರೀರಿಯಾಗಿ ಇರುವುದನ್ನು ಕಂಡ ಅವನ ತಾಯಿಯು ದುಃಖಿತನಾದ ಮಗನನ್ನು ಉದ್ದೇಶಿಸಿ ಹೀಗೆ ಹೇಳಿದಳು.

ಉತ್ತಿಷ್ಠ ಮೂಢ ಕಿಂ ಶೇಷೇ ನಿರಪೇಕ್ಷಃ ಸುಹೃಜ್ಜನೈಃ ।
ನಿರಾಲಂಬೋ ಧನೋಪಾಯೇ ಪೈತೃಕಂ ತವ ಕಿಂ ಧನಮ್ ॥ ೪ ॥

ಮೂಢನೇ, ಎದ್ದೇಳು. ನಿನಗೆ ಸಂಪಾದನೆಯ ದಾರಿ ತಿಳಿಯದು. ಜೀವನಕ್ಕೆ ಮಾರ್ಗವಿಲ್ಲ. ನಿನಗೆ ಲೋಕದಲ್ಲಿ ಮಿತ್ರರೇ ಇದ್ದಂತಿಲ್ಲ. ಸ್ನೇಹ ಮಾಡುವ ಬಗೆಯನ್ನು ಅರಿತಿಲ್ಲ. ಪಿತೃಗಳಿಗೆ ಸಂಬಂಧಿಸಿದ ನಿನ್ನ ಧನವು ಯಾವುದಿದೆ? ಎಂದು ಆಲಸಿಯಾಗಿರುವೆ ಎಂದು ಸಂಬೋಧಿಸಿದಾಗ ನಿಬಂಧನನು ಹೀಗೆ ಹೇಳಿದನು.

ನಿಬಂಧನಃ

ಪೈತೃಕಂ ಮೇ ಮಹನ್ಮಾತಃ ಸರ್ವದುಃಖಾಲಯಂ ತ್ವಿಹ ।
ಅಸ್ಯೇತತ್ತದ್ವಿಘಾತಾಯ ಯತಿಷ್ಯೇ ತತ್ರ ಮಾ ಶುಚಃ ॥ ೫ ॥

ನಿಬಂಧನ– ತಾಯಿಯೇ, ನನಗೆ ತಂದೆಯು ಸಂಪಾದಿಸಿಕೊಟ್ಟ ಆಸ್ತಿ ಇದೆ. ಅದೇ ನನಗೆ ಬಹಳ ದೊಡ್ಡ ದುಃಖಕ್ಕೆ ಎಡೆಮಾಡಿಕೊಟ್ಟಿದೆ. ಪ್ರಪಂಚದಲ್ಲಿನ ಸಮಸ್ತ ದುಃಖಗಳಿಗೂ, ಕಷ್ಟಗಳಿಗೂ ನೆಲೆಯಾಗಿದೆ. ಇರುವ ಆ ಆಸ್ತಿಯನ್ನು ಹೇಗೆ ತ್ಯಜಿಸಬೇಕೆಂಬುದೇ ನನ್ನ ಚಿಂತೆಯಾಗಿದೆ. ಅದಕ್ಕಾಗಿ ನಾನು ಪ್ರಯತ್ನಿಸುತ್ತಿದ್ದೇನೆ.

ಇದಂ ಶರೀರಮತ್ಯುಗ್ರಂ ಪಿತ್ರಾ ದತ್ತಮಸಂಶಯಮ್ ।
ತಮೇವ ಪಿತರಂ ಗತ್ವಾ ಧನಂ ತಿಷ್ಠತಿ ಶಾಶ್ವತಮ್ ॥ ೬ ॥

ಅತ್ಯಂತ ಉಗ್ರವಾದ ತಂದೆಯಿಂದ ನೀಡಲ್ಪಟ್ಟ ಈ ನನ್ನ ಶರೀರವೇ ದೊಡ್ಡ ಆಸ್ತಿ ಎನಿಸಿದೆ. ಈ ಆಸ್ತಿಯನ್ನು ನಾನು ನನ್ನ ತಂದೆಯ ಬಳಿ ಹೋಗಿ ಒಪ್ಪಿಸಿಬಿಡುತ್ತೇನೆ. ಅವರು ಕೊಟ್ಟಿರುವ ಈ ಶರೀರವೆಂಬ ಧನವು ಅವನಿಗೇ ಶಾಶ್ವತವಾದ ಧನವಾಗಿರಲಿ.

ಕಶ್ಚಿನ್ಮಹತಿ ಸಂಸಾರೇ ವರ್ತಮಾನೋ ಧನೇಚ್ಛಯಾ ।
ವನದುರ್ಗಮಭಿಪ್ರಾಪ್ತೋ ಮಹತ್ಕ್ಷ್ವ್ಯಾದಸಂಕುಲಮ್ ॥ ೭ ॥

ಹಿಂದೆ ಒಬ್ಬನು ಈ ಶರೀರವೆಂಬ ಧನವನ್ನು ಧರಿಸಿಕೊಂಡು ಇನ್ನೂ ಅಧಿಕ ಧನಕ್ಕಾಗಿ ಆಸೆ ಪಡುತ್ತಾ ಮಾಂಸಭಕ್ಷಕರಿಂದ ತುಂಬಿದ ಅತ್ಯಂತ ಘೋರವಾದ ಅರಣ್ಯ ಪ್ರದೇಶವನ್ನು ಹೊಕ್ಕನು.

ಸಿಂಹವ್ಯಾಘ್ರಗಜಾಕಾರೈರತಿಘೋರೈರ್ಮಹಾಶನೈಃ ।
ಸಮಂತಾತ್ ಸುಪರಿಕ್ಷಿಪ್ತಂ ಸ ದೃಷ್ಟ್ವಾ ವ್ಯಥತೇ ಪುಮಾನ್ ॥ ೮ ॥

ಸ ತದ್ವನಂ ಹ್ಯನುಚರನ್ ವಿಪ್ರಧಾವನ್ನಿತಸ್ತತಃ ।
ವೀಕ್ಷಮಾಣೋ ದಿಶಃ ಸರ್ವಾಃ ಶರಣಾರ್ಥಂ ಪ್ರಧಾವತಿ ॥ ೯ ॥

ಆ ಅರಣ್ಯವಾದರೂ ಸಿಂಹ, ಹುಲಿ ಮೊದಲಾದ ದುಷ್ಟಪ್ರಾಣಿಗಳಿಂದ ನಿಬಿಡವಾಗಿತ್ತು. ಅಲ್ಲಿಗೆ ಪ್ರವೇಶಿಸಿ ನಿರಂತರವೂ ಭಯದಿಂದ ಆಚೆ-ಈಚೆ ಸಂಚರಿಸುತ್ತಾ ತತ್ತರಿಸುತ್ತಾ ಎಲ್ಲಿಯೂ ಆಶ್ರಮವನ್ನು ಕಾಣದೆ ದಿಕ್ಕುದಿಕ್ಕುಗಳಲ್ಲಿ ತಿರುಗುತ್ತಿದ್ದನು. ಆಶ್ರಯಕ್ಕಾಗಿ ಆಚೆ-ಈಚೆ ಓಡುತ್ತಲೇ ಇದ್ದನು.

ಅಥಾಪಶ್ಯದ್ವನಂ ರೂಢಂ ಸಮಂತಾದ್ ವಾಗುರಾವೃತಮ್ ।
ವನಮಧ್ಯೇ ಚ ತತ್ರಾಸೀದುದಪಾನಃ ಸಮಾವೃತಃ ॥ ೧೦ ॥

ಬಳಿಕ ಮುಂದೆ ಹೋಗುತ್ತಾ ಆ ಕಾಡಿನ ಅನೇಕ ಕಡೆಗಳಲ್ಲಿ ಬಲೆಗಳು ಕಟ್ಟಿದ್ದನ್ನು ಕಂಡನು. ಆ ಬಲೆಗಳನ್ನು ತಪ್ಪಿಸಿಕೊಳ್ಳುವ ಮಾರ್ಗವನ್ನು ಹುಡುಕುತ್ತಾ ಮುಂದೆ ಆ ಅರಣ್ಯದಲ್ಲಿ ದೊಡ್ಡ ಗಿಡಗಂಟಿಗಳಿಂದ ಮುಚ್ಚಿಹೋಗಿದ್ದ ಬಾವಿಯ ಕಡೆ ಆಗಮಿಸಿದನು.

ವಲ್ಲಿಭಿಸ್ತೃಣಸಂಛಿನ್ನೈರ್ಗೂಢಾಭಿರಭಿಸಂವೃತಃ ।
ಸ ಪಪಾತ ದ್ವಿಜಸ್ತತ್ರ ವಿಜನೇ ಸಲಿಲಾಶಯೇ ॥ ೧೧ ॥

ಅಲ್ಲಿ ಒಂದು ಆಳವಾದ ಬಾವಿಯು ದಟ್ಟವಾದ ಬಳ್ಳಿಗಳಿಂದ, ತೃಣಗಳಿಂದ ಮುಚ್ಚಿಹೋಗಿತ್ತು. ಅದರಲ್ಲಿ ನೀರು ತುಂಬಿತ್ತು. ಆಳವಾದ ಹಾಳುಬಾವಿಯಲ್ಲಿ ತಿಳಿಯದೆ ಅವನು ಬಿದ್ದುಬಿಟ್ಟನು.

ವಿಲಗ್ನಶ್ಚಾಭವತ್ತಸ್ಮಿಲ್ಲತಾಸಂತಾನಸಂಕುಲೇ ।
ಬಾಹುಭ್ಯಾಂ ಸಂಪರಿಷ್ವಕ್ತಸ್ತಯಾ ಪರಮಸತ್ತ್ವಯಾ ॥ ೧೨ ॥

ಸ ತಥಾ ಲಂಬತೇ ತತ್ರ ಊರ್ಧ್ವಪಾದೋ ಹ್ಯಧಃಶಿರಾಃ ।
ಅಧಸ್ತತ್ಸೈವ ಜಾತಶ್ಚ ಜಂಬೂವೃಕ್ಷಃ ಸುದುಸ್ತರಃ ॥ ೧೩ ॥

ಹೀಗೆ ಬೀಳುತ್ತಾ ಹಿಂದೆ ಮುಂದೆ ಏನೂ ಅರಿಯದ ಅವನು ನಡುವೆ ತನ್ನ ಕೈಗೆ ಸಿಕ್ಕಿದ ಬಳ್ಳಿಯನ್ನು ಹಿಡಿದುಕೊಂಡು ಅದರ ಆಶ್ರಯದಿಂದ ತಲೆಕೆಳಗಾಗಿ ನೇತಾಡುತ್ತಿದ್ದನು. ಗಟ್ಟಿಯಾದ ಬಳ್ಳಿಯು ಅವನನ್ನು ಹಿಡಿದಿತ್ತಾದರೂ ತಲೆಕೆಳಗಾಗಿ

ಊರ್ಧ್ವಪಾದನಾಗಿ ಅಲ್ಲಿಯೇ ನೇತಾಡುತ್ತಿದ್ದನು. ಆ ಪಾಳುಬಾವಿಯಲ್ಲಿ ಬಿದ್ದಿರುವ ಅವನಿಗೆ ಅದೇ ಬಾವಿಯ ಪಕ್ಕದಲ್ಲಿರುವ ಎತ್ತರವಾದ ಒಂದು ನೇರಳೆ ಮರ ಕಂಡಿತು.

ಕೂಪಸ್ಯ ತಸ್ಯ ವೇಲಾಯಾ ಅಪಶ್ಯತ್ ಸುಮಹಾಫಲಮ್ ।
ವೃಕ್ಷಂ ಬಹುವಿಧಂ ವ್ಯೋಮಂ ವಲ್ಲೀಪುಷ್ಪಸಮಾಕುಲಮ್ ॥ ೧೪ ॥

ನಾನಾರೂಪಾ ಮಧುಕರಾಸ್ತಸ್ಮಿನ್ ವೃಕ್ಷೇऽಭವನ್ ಕಿಲ ।
ತೇಷಾಂ ಮಧೂನಾಂ ಬಹುಧಾ ಧಾರಾ ಪ್ರವವೃತೇ ತದಾ ॥ ೧೫ ॥

ಬಾವಿಯ ಪಕ್ಕದಲ್ಲಿರುವ ನೇರಳೆ ಮರದಲ್ಲಿ ಅನೇಕ ರಸಭರಿತವಾದ ಹಣ್ಣುಗಳು ತುಂಬಿದ್ದವು. ಆ ನೇರಳ ವೃಕ್ಷವು ಅನೇಕ ಶಾಖೋಪಶಾಖೆಗಳಿಂದ ಹರಡಿಕೊಂಡಿತ್ತು. ಲತೆಗಳಿಂದಲೂ ಪುಷ್ಪಗಳಿಂದಲೂ ಆವೃತವಾಗಿತ್ತು .ಅನೇಕ ವಿಧವಾದ ದುಂಬಿಗಳು ಆ ವೃಕ್ಷದಲ್ಲಿ ನೆಲೆಸಿದ್ದವು. ಆ ಮಧುಕರಗಳ ಜೇನುತುಪ್ಪವು ಅನೇಕ ವಿಧವಾಗಿತ್ತು. ಅವುಗಳ ಧಾರೆಗಳು ಆ ವೃಕ್ಷದಿಂದ ಕೆಳಗೆ ಸುರಿಯುತ್ತಿದ್ದವು.

ವಿಲಂಬಮಾನಃ ಸ ಪುಮಾನ್ ಧಾರಾಂ ಪಿಬತಿ ಸರ್ವದಾ ।
ನ ತಸ್ಯ ತೃಷ್ಣಾ ವಿರತಾ ಪೀಯಮಾನಸ್ಯ ಸಂಕಟೇ ॥ ೧೬ ॥

ಈ ಬಾವಿಯಲ್ಲಿ ನೇತಾಡುತ್ತಿರುವ ಪುರುಷನು ಯಾವಾಗಲೂ ಸುರಿಯುತ್ತಿರುವ ಆ ಮಧುವನ್ನು ಕುಡಿದನು. ಇಷ್ಟು ಸಂಕಟದಲ್ಲಿ ತಲೆಕೆಳಗಾಗಿ ಜೋತಾಡುತ್ತಿರುವ ಆ ವ್ಯಕ್ತಿಗೂ ಆ ಜೇನುತುಪ್ಪದ ರಸವನ್ನು ಕುಡಿಯುವ ಅಪೇಕ್ಷೆಯು ಮತ್ತೂ ಮತ್ತೂ ಹುಟ್ಟಿತು.

ಪರೀಪ್ಸತಿ ಚ ತಾಂ ನಿತ್ಯಮತೃಪ್ತಃ ಸ ಪುನಃಪುನಃ ।
ಏವಂ ಸ ವಸತೇ ತತ್ರ ದುಃಖಿದುಃಖೀ ಪುನಃಪುನಃ ॥ ೧೭ ॥

ಆ ಜೇನುತುಪ್ಪದ ಧಾರೆಯನ್ನು ಸವಿದ ಆತನು ಪುನಃ ಪುನಃ ಅದನ್ನೇ ಸವಿಯಬೇಕೆಂದು ಅಪೇಕ್ಷೆ ಪಟ್ಟನು. ಅತ್ಯಂತ ದುಃಖದಿಂದ ಪುನಃ ಪುನಃ ಆ ಪಾಳುಬಾವಿಯಲ್ಲಿಯೇ ಈ ಮಧುವಿನ ಆಸೆಗೆ ಅಲ್ಲಿಯೇ ನೇತಾಡುತ್ತಿದ್ದನು.

ಮಯಾ ತು ತದ್ಧನಂ ದೇಯಂ ತವ ದಾಸ್ಯಾಮಿ ಚೇಚ್ಛಸಿ ।
ತಸ್ಯ ಚ ಪ್ರಾರ್ಥಿತಃ ಸೋऽಥ ದತ್ತ್ವಾ ಮುಕ್ತಿಮವಾಪ ಸಃ ॥ ೧೮ ॥

ತಾಯಿಯೇ, ಈಗ ನನ್ನ ಬಳಿ ಇರುವ ಧನವು ಅಂತಹ ಕಷ್ಟಗಳನ್ನು ಅನುಭವಿಸುವ ದೇಹವೆಂಬ ಧನವೇ ಆಗಿದೆ. ಅಂತಹ ಧನವನ್ನು ನಾನು ಆ ಬ್ರಾಹ್ಮಣನ ಬಳಿ ಇಂತಹ ದೇಹವೆಂಬ ಧನವನ್ನು ಕೊಡು ಎಂದು ಕೇಳಿದಾಗ, ಅವನೂ ದೇಹವೆಂಬ ಧನವನ್ನೇ ಕೊಟ್ಟು ಅವನು ಮುಕ್ತಿಯನ್ನು ಹೊಂದಿದ್ದಾನೆ. ಇದನ್ನೇ ಪೈತೃಕಧನ ಎಂದು ನಾನು ಹೇಳಿದೆ. ಇಂತಹ ಧನವನ್ನು ನೀನು ಬಯಸುವಿಯಾದರೆ ನಿನಗೆ ಧನವನ್ನು ಕೊಡಲು ಸಿದ್ಧನಿದ್ದೇನೆ.

ಸಾ ಚ ತ್ಯಕ್ತ್ವಾ ತ್ವರ್ಥಸಂಕಲ್ಪಂ ಜಗಾಮ ಪರಮಾಂ ಗತಿಮ್ ॥ ೧೯ ॥

ತನ್ನ ಮಗನಾದ ನಿಬಂಧನನ ಈ ವಾಕ್ಯವನ್ನು ಕೇಳಿಸಿಕೊಂಡ ಭೋಗವತಿಯು ತನಗಿರುವ ಅರ್ಥದ ವಿಷಯದ ಆತುರವನ್ನು ನೀಗಿಸಿಕೊಂಡು ಕೊನೆಗೆ ಉತ್ತಮವಾದ ಗತಿಯನ್ನು ಹೊಂದಿದಳು.

ಏವಂ ಸಂಸಾರಚಕ್ರಸ್ಯ ಸ್ವರೂಪಜ್ಞಾ ನೃಪೋತ್ತಮ ।
ಪರಂ ವೈರಾಗ್ಯಮಾಗಮ್ಯ ಗಚ್ಛಂತಿ ಪರಮಂ ಪದಮ್ ॥ ೨೦ ॥

ಯುಧಿಷ್ಠಿರನೇ, ಈ ವಿಧವಾದ ಸಂಸಾರಚಕ್ರದ ಸ್ಥಿತಿಯನ್ನು ತಿಳಿದವನೇ ವೈರಾಗ್ಯವನ್ನು ಹೊಂದಿ ಪರಮಪದವನ್ನು ಹೊಂದಬಹುದು.

ಯುಧಿಷ್ಠಿರಃ

ಏವಂ ಸಂಸಾರಚಕ್ರಸ್ಯ ಸ್ವರೂಪಂ ವಿದಿತಂ ನ ಮೇ ।
ಪೈತೃಕಂ ತು ಧನಂ ಪ್ರೋಕ್ತಂ ಕಿಂ ತದ್ ವಿದ್ವನ್ಮಹಾತ್ಮನಾ ॥ ೨೧ ॥

ಕಾಂತಾರಮಿತಿ ಕಿಂ ಪ್ರೋಕ್ತಂ ಕೋ ಹಸ್ತೀ ಸ ತು ಕೂಪಕಃ ।
ಕಿಂಸಂಜ್ಞಕೋ ಮಹಾವೃಕ್ಷೋ ಮಧು ವಾಽಪಿ ಪಿತಾಮಹ ॥ ೨೨ ॥

ಯುಧಿಷ್ಠಿರ– ಇಲ್ಲಿಯತನಕ ನೀನು ಬಣ್ಣಿಸಿದ ಸಂಸಾರಚಕ್ರದ ಸ್ವರೂಪವು ನನಗೆ ಪೂರ್ಣವಾಗಿ ಅರ್ಥವಾಗಲಿಲ್ಲ. ನೀನು ಹೇಳಿದ ತಂದೆಯ ಆಸ್ತಿ ಎಂಬುದೇನು? ಅದನ್ನು ಅರಣ್ಯರೂಪವಾಗಿ ಮಹರ್ಷಿಯು ಏಕೆ ವರ್ಣಿಸಿದನು? ಆ ಅರಣ್ಯದಲ್ಲಿ ಹೇಳಿದ ಆನೆ ಮೊದಲಾದ ಪ್ರಾಣಿಗಳು ಯಾವುವು? ಬಾವಿಯ ದಡದಲ್ಲಿದ್ದ ಮರ ಎಂಬುದ್ಯಾವುದು? ಅಲ್ಲಿರುವ ಮಧು ಎಂದರೇನು?

ಏತಂ ಮೇ ಸಂಶಯಂ ವಿದ್ಧಿ ಧನಶಬ್ದಂ ಕಿಮುಚ್ಯತೇ ।
ಕಥಂ ಲಬ್ಧಂ ಧನಂ ತೇನ ತಥಾ ಚ ಕಿಮಿದಂ ತ್ವಿಹ ॥ ೨೩ ॥

ಪಿತಾಮಹನೇ, ಈ ನನ್ನ ಸಂಶಯವನ್ನೆಲ್ಲ ನೀನು ಪರಿಹರಿಸಬೇಕು. ಧನ ಎಂಬ ಶಬ್ದವನ್ನು ಈ ದೇಹಕ್ಕೆ ಯಾಕೆ ಹೇಳುತ್ತಾರೆ? ಆ ದೇಹವೆಂಬ ಧನವನ್ನು ಬ್ರಾಹ್ಮಣನಿಂದ ಅವನು ಹೇಗೆ ಪಡೆದನು? ಆ ಧನವೇ ಈ ಶರೀರವಾಗುವುದು ಎಂದರೆ ಏನು?

ಭೀಷ್ಮಃ

ಉಪಾಖ್ಯಾನಮಿದಂ ಸರ್ವಂ ಮೋಕ್ಷವಿದ್ಭಿರುದಾಹೃತಮ್ ।
ಸುಮತಿಂ ವಿಂದತೇ ಯೇನ ಬಂಧನಾಶಶ್ಚ ಭಾರತ ॥ ೨೪ ॥

ಭೀಷ್ಮ– ಭಾರತನೇ, ಮೋಕ್ಷಜ್ಞಾನಿಗಳೆಲ್ಲರೂ ಈ ಉಪಾಖ್ಯಾನವನ್ನೇ ಅಲ್ಲಲ್ಲಿ ಉದಾಹರಿಸುತ್ತಾರೆ. ಇದನ್ನು ಚೆನ್ನಾಗಿ ಅರಿತು ಬುದ್ಧಿವಂತನಾದವನು ಬಂಧ-ಮೋಕ್ಷಗಳನ್ನು, ಅದರ ಮರ್ಮವನ್ನು ತಿಳಿದುಕೊಳ್ಳಬಹುದು.

ಏತದುಕ್ತಂ ಹಿ ಕಾಂತಾರಂ ಮಹಾನ್ ಸಂಸಾರ ಏವ ಸಃ ।
ಯೇ ತೇ ಪ್ರತಿಷ್ಠಿತಾ ವ್ಯಾಲಾ ವ್ಯಾಧಯಸ್ತೇ ಪ್ರಕೀರ್ತಿತಾಃ ॥ ೨೫ ॥

ಈ ಕಥೆಯಲ್ಲಿ ಹೇಳಿದ ದೊಡ್ಡ ಕಾಡೆಂಬುದೇ ಸಂಸಾರಚಕ್ರವು. ಅದರಲ್ಲಿರುವ ಕ್ರೂರಸರ್ಪಗಳೆಂದರೆ ವ್ಯಾಧಿಗಳು.

ಯಾ ಸಾ ನಾರೀ ಮಹಾಘೋರಾ ವರ್ಣರೂಪವಿನಾಶಿನೀ ।
ತಾಮಾಹುಶ್ಚ ಜರಾಂ ಪ್ರಾಜ್ಞಾಃ ಪರಿಷ್ವಕ್ತಂ ಯಯಾ ಜಗತ್ ॥ ೨೬ ॥

ಅಲ್ಲಿ ರೂಪ, ಬಣ್ಣ, ಬಲವನ್ನು ಹಾಳು ಮಾಡುವ ಮಹಾಘೋರಳಾದ ಸ್ತ್ರೀಯೊಬ್ಬಳಿದ್ದಾಳೆ. ಅವಳಿಗೆ ಜರೆ ಎಂದು ಹೆಸರು. ಸಮಗ್ರ ಜಗತ್ತು ನಿಯಮೇನ ಇವಳನ್ನು ಆಲಿಂಗಿಸಿಕೊಳ್ಳುತ್ತದೆ.

ಯಸ್ತತ್ರ ಕೂಪೇ ವಸತೇ ಮಹಾಹಿಃ ಕಾಲ ಏವ ಸಃ ।
ಯೋ ವೃಕ್ಷಃ ಸ ಚ ಮೃತ್ಯುರ್ಹಿ ಸ್ವಕೃತಂ ತಸ್ಯ ತತ್ಫಲಮ್ ॥ ೨೭ ॥

ಆ ಕೂಪದಲ್ಲಿ ವಾಸ ಮಾಡುವ ದೊಡ್ಡ ಭುಸುಗುಟ್ಟುವ ಒಂದು ಹಾವಿದೆ. ಕಾಲಪುರುಷನನ್ನೇ ಹಾವು ಎಂದು ವರ್ಣಿಸಲಾಗಿದೆ. ಮೇಲೆ ಕಾಣುವ ಜಂಬೂವೃಕ್ಷ

ಎಂದು ಏನು ಬಣ್ಣಿಸಿದ್ದಾರೋ ಆ ವೃಕ್ಷವೆಂಬುದೇ ಮೃತ್ಯುವೆನಿಸಿದೆ. ಆ ವೃಕ್ಷದಲ್ಲಿರುವ ಫಲವೆಂದರೆ ತಾನು ಮಾಡಿದ ಪುಣ್ಯ-ಪಾಪ ಕರ್ಮಫಲಗಳು.

ಯೇ ತು ಕೃಷ್ಣಾಃ ಸಿತಾ ರಾಜನ್ಮೂಷಿಕಾ ರಾತ್ರ್ಯಹಾನಿ ವೈ ॥ ೨೮ ॥

ಅದರಲ್ಲಿ ಕಪ್ಪು ಮತ್ತು ಬಿಳಿಯಾದ ಇಲಿಗಳಿವೆ ಎಂದು ಹೇಳಿರುತ್ತಾರೆ. ರಾತ್ರಿ ಮತ್ತು ಹಗಲುಗಳೇ ಆ ಇಲಿಗಳೆನಿಸಿವೆ.

ದ್ವಿಷಟ್‌ಪದಸಂಯುಕ್ತೋ ಯೋ ಹಸ್ತೀ ಷಣ್ಮುಖಾಕೃತಿಃ ।
ಸ ಚ ಸಂವತ್ಸರಃ ಪ್ರೋಕ್ತಃ ಪಾದಾ ಮಾಸರ್ತವೋ ಮುಖಾಃ ॥ ೨೯ ॥

ಹನ್ನೆರಡು ಕಾಲುಗಳಿಂದ ಕೂಡಿದ, ಆರು ಮುಖಗಳಿಂದ ಕೂಡಿದ ಒಂದು ಆನೆ ಇದೆ. ಆ ಆನೆಯಾದರೂ ಸಂವತ್ಸರವೆನಿಸಿದೆ. ಹನ್ನೆರಡು ಮಾಸಗಳೇ ಪಾದವೆನಿಸಿವೆ. ಆರು ಋತುಗಳೇ ಮುಖವೆನಿಸಿದೆ.

ಏತತ್ಸಂಸಾರಚಕ್ರಸ್ಯ ಸ್ವರೂಪಂ ವ್ಯಾಹೃತಂ ಮಯಾ ।
ಏವಂ ಲಬ್ಧಧನಂ ರಾಜಂಸ್ತತ್ಸ್ವರೂಪಂ ವಿನಾಶಯ ॥ ೩೦ ॥

ಆ ಸಂಸಾರಚಕ್ರಸ್ವರೂಪವೆಂಬುದೇನಿದೆಯೋ ಅದನ್ನು ನೀನು ತಿಳಿದಂತಾಯಿತು. ಇದರಂತೆಯೇ ಅಂತಹ ಪೈತೃಕಧನವನ್ನೂ, ಅದರ ಸ್ವರೂಪವನ್ನು ತಿಳಿದ ನೀನು ಇದರಲ್ಲಿ ವಿರಕ್ತಿಯಿಂದಿರಬೇಕು.

ಏತಜ್ಜ್ಞಾತ್ವಾ ತು ಸಾ ರಾಜನ್ ಪರಂ ವೈರಾಗ್ಯಮಾಸ್ಥಿತಾ ।
ಯಥೋಕ್ತವಿಧಿನಾ ಭೂಯಃ ಪರಂ ಪದಮವಾಪ ಸಃ ॥ ೩೧ ॥

ಈ ರೀತಿಯಾದ ನಿಬಂಧನನ ಸಂಸಾರ ಎಂಬ ವನದ ಉಪದೇಶವನ್ನು ಅರ್ಥ ಮಾಡಿಕೊಂಡ ಅವನ ತಾಯಿಯು ಉತ್ಕೃಷ್ಟವಾದ ವೈರಾಗ್ಯವನ್ನು ಹೊಂದಿದಳು. ಯಾವ ಕ್ರಮದಿಂದ ವೈರಾಗ್ಯದ ವಿಧಿಯನ್ನು ತಾಳಬೇಕೋ ಅಂತಹ ವೈರಾಗ್ಯವನ್ನು ತಾಳಿ ಮುಕ್ತಿಯನ್ನು ಹೊಂದಿದಳು. ಅವನೂ ಮುಕ್ತಿಯನ್ನು ಹೊಂದಿದನು.

ಧತ್ತೇ ಧಾರಯತೇ ಚೈವ ಏತಸ್ಮಾತ್ಕಾರಣಾದ್ಧನಮ್ ।
ತದ್ ಗಚ್ಛ ಚಾಮೃತಂ ಶುದ್ಧಂ ಹಿರಣ್ಯಮಮೃತಂ ತಪಃ ॥ ೩೨ ॥

ಕೆಳಗೆ ಬೀಳುವ ಈ ಶರೀರವನ್ನು ಧರಿಸಿದ್ದಾನೆ. ಜ್ಞಾನ-ಭಕ್ತ್ಯಾದಿ ಗುಣಗಳನ್ನು ಧರಿಸಿದ್ದಾನೆ. ಈ ಕಾರಣದಿಂದ ಈ ಶರೀರಕ್ಕೆ ಧನ ಎಂದು ಕರೆದಿದ್ದಾರೆ. ಇದನ್ನು ಅರ್ಥ ಮಾಡಿಕೊಂಡು ಅಶಾಶ್ವತವಾದ ಧನವನ್ನು ತೊರೆದು ಶುದ್ಧವೂ, ಶಾಶ್ವತವೂ ಆದ ತಪೋಧನವನ್ನು ಧರಿಸಿಕೊ.

ತತ್ತ್ವರೂಪೋ ಮಹಾದೇವಃ ಕೃಷ್ಣೋ ದೇವಕಿನಂದನಃ ।
ತಸ್ಯ ಪ್ರಸಾದಾದ್ದುಃಖಸ್ಯ ನಾಶಂ ಪ್ರಾಪ್ಸ್ಯಸಿ ಮಾನದ ॥ ೩೩ ॥

ಆ ತಪಸ್ಸಿಗೆ ಫಲರೂಪನಾದವನು ದೇವಕೀ ಸುತನಾದ ಕೃಷ್ಣನೇ ಆಗಿದ್ದಾನೆ. ಅವನ ಅನುಗ್ರಹದಿಂದಲೇ ಎಲ್ಲ ವಿಧವಾದ ದುಃಖದಿಂದ ಬಿಡುಗಡೆಯು.

ಏಕಃ ಕರ್ತಾ ಸ ಕೃಷ್ಣಶ್ಚ ಜ್ಞಾನಿನಾಂ ಪರಮಾ ಗತಿಃ ॥ ೩೪ ॥

ಆ ಕೃಷ್ಣಪರಮಾತ್ಮನು ಸಮಸ್ತ ಲೋಕಗಳಿಗೆ ಕರ್ತನಾಗಿದ್ದಾನೆ. ಎಲ್ಲಾ ಜ್ಞಾನಿಗಳಿಗೂ ಅವನೇ ಪರಮಗತಿ ಎನಿಸಿದ್ದಾನೆ.

ಇದಮಾಶ್ರಿತ್ಯ ದೇವೇಂದ್ರೋ ದೇವಾ ರುದ್ರಾಸ್ತಥಾऽಶ್ವಿನೌ ।
ಸ್ವೇ ಸ್ವೇ ಪದೇ ವಿವಿಶಿರೇ ಮುಕ್ತಿಮುಕ್ತಿವಿದೋ ಜನಾಃ ॥ ೩೫ ॥

ಕೃಷ್ಣನೆಂಬ ಈ ಧನವನ್ನು ಆಶ್ರಯಿಸಿಯೇ ಇಂದ್ರ-ರುದ್ರಾದಿಗಳೆಲ್ಲರೂ ತಮ್ಮ ತಮ್ಮ ಉತ್ತಮ ಸ್ಥಾನಗಳಲ್ಲಿ ಬೆಳಗುತ್ತಿದ್ದಾರೆ. ಅವನ ಆಶ್ರಯದಿಂದಲೇ ಸಮಸ್ತರಿಗೂ ಭೋಗ-ಮೋಕ್ಷಗಳು.

ಭೂತಾನಾಮಂತರಾತ್ಮಾऽಸೌ ಸ ನಿತ್ಯಪದಸಂವೃತಃ ।
ಶ್ರೂಯತಾಮಸ್ಯ ಸದ್ಭಾವಃ ಸಮ್ಯಗ್ ಜ್ಞಾನಂ ಯಥಾ ತವ ॥ ೩೬ ॥

ಸಮಸ್ತ ಜೀವರಿಗೂ ಇವನೇ ಅಂತರಾತ್ಮ. ಎಲ್ಲಕ್ಕಿಂತಲೂ ಮಿಗಿಲಾದ, ಉತ್ತಮವಾದ, ಶಾಶ್ವತವಾದ ಸ್ಥಾನದಲ್ಲಿರುವವನೂ ಇವನೇ. ಭಗವಂತನ ಮಹಿಮೆಯನ್ನು, ಅದಕ್ಕೆ ಯೋಗ್ಯವಾದ ತತ್ತ್ವಜ್ಞಾನದ ಇನ್ನೊಂದು ವಿಷಯವನ್ನು ತಿಳಿಸುತ್ತೇನೆ, ಕೇಳು.

ಭವೇದೇತನ್ನಿಬೋಧ ತ್ವಂ ನಾರದಾಯ ಪುರಾ ಹರಿಃ ।
ದರ್ಶಯಿತ್ವಾऽऽತ್ಮನೋ ರೂಪಂ ಯದವೋಚತ್ ಸ್ವಯಂ ಪ್ರಭುಃ ॥

ಹಿಂದೆ ನಾರದರಿಗೆ ಶ್ರೀಹರಿಯು ತನ್ನ ನಿಜರೂಪವನ್ನು ತೋರಿಸಿದನು. ಈ ವಿಚಾರವನ್ನು ಸ್ವಯಂ ಸಮರ್ಥನಾದ ಭಗವಂತನೇ ಹಿಂದೆ ಹೇಳಿದ್ದಾನೆ.

ಪುರಾ ದೇವಋಷಿಃ ಶ್ರೀಮಾನ್ನಾರದಃ ಪರಮಾರ್ಥವಾನ್ ।
ಚಚಾರ ಪೃಥಿವೀಂ ಕೃತ್ಸ್ನಾಂ ತೀರ್ಥಾನ್ಯನುಚರನ್ ಪ್ರಭುಃ ॥ ೩೮ ॥

ಹಿಮವತ್ಪಾದಮಾಶ್ರಿತ್ಯ ವಿಚಾರ್ಯ ಚ ಪುನಃಪುನಃ ।
ಸ ದದರ್ಶ ಹ್ರದಂ ತತ್ರ ಪದ್ಮೋತ್ಪಲಸಮಾಕುಲಮ್ ॥ ೩೯ ॥

ಹಿಂದೆ ದೇವರ್ಷಿಯಾದ ಮಂಗಳರೂಪಿಯಾದ ನಾರದನು ಲೋಕದಲ್ಲಿ ಪರಮಾರ್ಥವೇನೆಂಬುದನ್ನು ತಿಳಿಯುವ ಉದ್ದೇಶದಿಂದ ಭೂಮಂಡಲದಲ್ಲಿರುವ ತೀರ್ಥಗಳನ್ನೆಲ್ಲಾ ಸೇವಿಸುತ್ತಾ ಕೊನೆಗೆ ಹಿಮಾಲಯ ಪರ್ವತವನ್ನು ಸೇರಿ ಪುನಃ ಪುನಃ ಅಲ್ಲಿ ಭಗವತ್ಸ್ವರೂಪವನ್ನು ವಿಮರ್ಶಿಸುತ್ತಾ ಅಲ್ಲಿಯೇ ಸಂಚರಿಸುತ್ತಿರುವಾಗ ಅವನಿಗೆ ಅತ್ಯಂತ ರಮಣೀಯವಾದ ಒಂದು ಪದ್ಮಸರೋವರವು ಕಂಡಿತು.

ದದರ್ಶ ಕನ್ಯಾಂ ತತ್ತೀರೇ ಸರ್ವಾಭರಣಭೂಷಿತಾಮ್ ।
ಶೋಭಮಾನಾಂ ಶ್ರಿಯಾ ರಾಜನ್ ಕ್ರೀಡಂತೀಮುತ್ಪಲೈಸ್ತಥಾ ॥ ೪೦ ॥

ಆ ಸರೋವರದ ತೀರದಲ್ಲಿ ಸರ್ವಾಭರಣಭೂಷಿತೆಯಾದ ಯುವತಿಯೊಬ್ಬಳು ಕಾಣಿಸಿಕೊಂಡಳು. ಅತ್ಯಂತ ಸುಂದರಿಯಾದ ಆಕೆ ನೇದಿಲೆ ಹೂಗಳನ್ನು ಹಿಡಿದು ವಿನೋದದಿಂದ ಆಟವಾಡುತ್ತಿದ್ದಳು.

ಸಾ ಮಹಾತ್ಮಾನಮಾಲೋಕ್ಯ ನಾರದೇತ್ಯಾಹ ಭಾಮಿನೀ ।
ತಸ್ಯಾಃ ಸಮೀಪಮಾಸಾದ್ಯ ತಸ್ಥೌ ವಿಸ್ಮಿತಮಾನಸಃ ॥ ೪೧ ॥

ಆ ಸುಂದರಿಯು ಮಹಾತ್ಮನಾದ ನಾರದನನ್ನು ಕಂಡು ತನ್ನ ಕಲಕಂಠ ನಾದದಿಂದ ನಾರದ ಎಂದು ಹೆಸರನ್ನು ಹಿಡಿದು ಕರೆದಳು. ಇದರಿಂದ ಆಶ್ಚರ್ಯಚಕಿತನಾದ ನಾರದನು ಅವಳ ಸಮೀಪಕ್ಕೆ ಆಗಮಿಸಿ ನಿಂತನು.

ವೀಕ್ಷಮಾಣಂ ತಮಾಜ್ಞಾಯ ಸಾ ಕನ್ಯಾ ಚಾರುವಾಸಿನೀ ।
ವಿಜಜೃಂಭೇ ಮಹಾಭಾಗ ಸ್ಮಯಮಾನಾ ಪುನಃಪುನಃ ॥ ೪೨ ॥

ಆ ಸಮಯದಲ್ಲಿ ಯುವತಿಯು ನಾರದರಿಗೆ ಆಶ್ಚರ್ಯವಾಗುವಂತೆ ದೊಡ್ಡದಾಗಿ ಬಾಯ್ತೆರೆದು ಆಕಳಿಸಿದಳು. ಚಾರುವಾಸಿನಿಯಾದ ಆಕೆಯು ಪುನಃ ಪುನಃ ಹೀಗೆಯೇ ಆಕಳಿಸಿದಳು.

ತಸ್ಮಾತ್ ಸಮಭವದ್ ವಕ್ತ್ರಾತ್ ಪುರುಷಾಕೃತಿಸಂಯುತಃ ।
ರತ್ನಬಿಂದುಚಿತಾಂಗಸ್ತು ಸರ್ವಾಭರಣಸಂಯುತಃ ॥ ೪೩ ॥

ಆದಿತ್ಯಸದೃಶಾಕಾರಃ ಶಿರಸಾ ಧಾರಯನ್ ಮಣಿಮ್ ।
ಪುನರೇವ ತದಾಕಾರಃ ಸದೃಶಃ ಸಮಜಾಯತ ॥ ೪೪ ॥

ತೃತೀಯಸ್ತು ಮಹಾರಾಜ ವಿವಿಧಾಭರಣೈರ್ಯುತಃ ।
ಪ್ರದಕ್ಷಿಣಂ ತು ತಾಂ ಕೃತ್ವಾ ವಿವಿಧಧ್ವನಯಸ್ತು ತಾಮ್ ॥ ೪೫ ॥

ಆ ಸಮಯದಲ್ಲಿ ಅವಳ ಮುಖದಿಂದ ಒಂದು ಪುರುಷಾಕೃತಿಯು ಹೊರಟು ಬಂದಿತು. ಆ ಪುರುಷನಿಗೋ ಸೂರ್ಯಸಮಾನವಾದ ತೇಜಸ್ಸಿತ್ತು. ಅಲ್ಲಲ್ಲಿ ರತ್ನಗಳನ್ನು ಕೆತ್ತಿದಂತೆ ರತ್ನದಿಂದ ವ್ಯಾಪ್ತವಾದ ದೇಹವು, ಆ ದೇಹದಲ್ಲಿ ವಿವಿಧ ಆಭರಣಗಳು. ಇಂತಹ ಆಭರಣದಿಂದ ಪ್ರಕಾಶಮಾನವಾದ ಮಣಿಯು ತಲೆಯಲ್ಲಿಯೂ ಕಾಣಿಸುತ್ತಿತ್ತು. ದೇಹದ ಕಾಂತಿ, ಆಭರಣದ ಕಾಂತಿ, ಶಿರೋಮಣಿಯ ಕಾಂತಿ ಸಮಾನವಾಗಿತ್ತು. ಇಂತಹ ಪುರುಷನು ಆವಿರ್ಭವಿಸಿದನು. ಮುಂದಿನ ಕ್ಷಣದಲ್ಲಿ ಅದೇ ಆಕಾರವುಳ್ಳ ಮತ್ತೊಬ್ಬ ಪುರುಷನು ಹೊರಕ್ಕೆ ಬಂದನು. ಅದರಂತೆ ಇನ್ನೊಬ್ಬನೂ ಬಂದನು. ಅವನೂ ವಿವಿಧವಾದ ಆಭರಣಗಳಿಂದ ಕೂಡಿದ್ದನು. ಅವಳ ಬಾಯಿಂದ ಆವರಿಸಿದ ಮೂರು ದಿವ್ಯಾಕೃತಿಗಳು ವಿವಿಧ ಧ್ವನಿಗಳೊಡನೆ ಆ ತರುಣಿಗೆ ಪ್ರದಕ್ಷಿಣೆ ಮಾಡಿದವು.

ತತಃ ಸರ್ವೇಣ ವಿಪ್ರರ್ಷಿಃ ಕನ್ಯಾಂ ಪಪ್ರಚ್ಛ ತಾಂ ಶುಭಾಮ್ ॥ ೪೬ ॥

ಇದನ್ನೆಲ್ಲಾ ನೋಡಿದ ನಾರದರು ಆಶ್ಚರ್ಯಚಕಿತರಾಗಿ ಆ ತರುಣಿಯನ್ನು ಕುರಿತು ಎಲ್ಲಾ ಪ್ರಕಾರದಿಂದಲೂ ನೀನು ಯಾರೆಂದು ಪುನಃ ಪುನಃ ಕೇಳಿದರು.

ಕಾ ತ್ವಂ ಪರಮಕಲ್ಯಾಣೀ ಪದ್ಮೇಂದುಸದೃಶಾನನೇ ।
ನ ಜಾನೇ ತ್ವಾಂ ಮಹಾದೇವಿ ಬ್ರೂಹಿ ಸತ್ಯಮನಿಂದಿತೇ ॥ ೪೭ ॥

ಪರಮಕಲ್ಯಾಣಿಯೇ, ನೀನು ಯಾರೆಂದು ನನಗೆ ತಿಳಿಯಲಿಲ್ಲ. ನನಗೆ ವಾಸ್ತವದಲ್ಲಿ ತಿಳಿಸಬೇಕು. ಪದ್ಮೇಂದುಸದೃಶವಾದ ಮುಖವುಳ್ಳವಳೇ, ಮಹಾದೇವಿಯೇ, ಅನಿಂದಿತಳೇ, ನೀನು ಯಾರೆಂದು ಸತ್ಯವಾಗಿ ನನಗೆ ಹೇಳು.

ಕನ್ಯಾ

ಸಾವಿತ್ರೀ ನಾಮ ವಿಪ್ರರ್ಷೇ ಶೃಣು ಭದ್ರಂ ತವಾಸ್ತು ವೈ ।
ಕಿಂ ಕರಿಷ್ಯಾಮಿ ತದ್ ಬ್ರೂಹಿ ತವ ಯಚ್ಚೇತಸಿ ಸ್ಥಿತಮ್ ॥ ೪೮ ॥

ಕನ್ಯೆ– ವಿಪ್ರರ್ಷಿಯೇ, ನಾನು ಸಾವಿತ್ರಿ. ನಿನಗೆ ಶುಭವಾಗಲಿ. ನಿನ್ನ ಅಪೇಕ್ಷೆಗಳೇನಿದ್ದರೂ ತಿಳಿಸು. ನಾನು ನಿನ್ನ ಮನಸ್ಸಿನಲ್ಲಿರುವ ಆ ಅಪೇಕ್ಷೆಯನ್ನು ಈಡೇರಿಸುತ್ತೇನೆ.

ನಾರದಃ

ಅಭಿವಾದಯೇ ತ್ವಾಂ ಸಾವಿತ್ರಿ ಕೃತಾರ್ಥೋಽಹಮನಿಂದಿತೇ ।
ಏತಂ ಮೇ ಸಂಶಯಂ ದೇವಿ ವಕ್ತುಮರ್ಹಸಿ ಶೋಭನೇ ॥ ೪೯ ॥

ನಾರದರು– ಅನಿಂದಿತಳಾದ ಸಾವಿತ್ರಿಯೇ, ನಿನ್ನ ದರ್ಶನದಿಂದ ಕೃತಾರ್ಥನಾದ ನಾನು ನಿನಗೆ ನಮಸ್ಕರಿಸುತ್ತೇನೆ. ನನಗೊಂದು ಸಂಶಯವಿದೆ. ದೇವಿಯೇ, ಶೋಭನೆಯೇ, ಅದಕ್ಕೆ ಉತ್ತರಿಸಲು ನೀನು ಅರ್ಹಳಾಗಿರುತ್ತಿ.

ಯಸ್ತು ವೈ ಪ್ರಥಮೋತ್ಪನ್ನಃ ಕೋಽಸೌ ಸ ಪುರುಷಾಕೃತಿಃ ।
ಬಿಂದವಸ್ತು ಮಹಾದೇವಿ ಮೂರ್ಧ್ನಿ ಜ್ಯೋತಿರ್ಮಯಾಕೃತಿಃ ॥ ೫೦ ॥

ನಿನ್ನ ದೇಹದಿಂದ ಮೊದಲು ಉತ್ಪತ್ತಿಯು ಪಡೆದ ಆ ಪುರುಷಾಕೃತಿಯ ವ್ಯಕ್ತಿಯು ಯಾರು? ಅವನ ತಲೆಯಲ್ಲಿದ್ದ ಅನೇಕ ಮುತ್ತುಗಳು, ಮಣಿಗಳು, ಜ್ಯೋತಿರ್ಮಯವಾದ ಆಕೃತಿಗಳು ಯಾವುವು? ನನಗೆ ತಿಳಿಸು.

ಕನ್ಯಾ

ಅಗ್ರಜಃ ಪ್ರಥಮೋತ್ಪನ್ನೋ ಯಜುರ್ವೇದಸ್ತಥಾಽಪರಃ ।
ತೃತೀಯಃ ಸಾಮವೇದಸ್ತು ಸಂಶಯೋ ವ್ಯೇತು ತೇ ಮುನೇ ॥ ೫೧ ॥

ಕನ್ಯಾ– ಮೊದಲನೆಯ ಪುರುಷಾಕೃತಿಯೇ ಋಗ್ವೇದವು. ಎರಡನೆಯ ಪುರುಷಾಕೃತಿಯು ಯಜುರ್ವೇದವು. ಮೂರನೆಯ ಪುರುಷಾಕೃತಿಯು ಸಾಮವೇದವು. ನಿನ್ನ ಸಂಶಯವನ್ನು ನಿಜಾರ್ಥವನ್ನು ತಿಳಿಯುವ ಮೂಲಕ ಪರಿಹರಿಸಿಕೊ.

ವೇದಾಶ್ಚ ಬಿಂದುಸಂಯುಕ್ತಾ ಯಜ್ಞಸ್ಯ ಫಲಸಂಶ್ರಿತಾಃ ।
ತತ್ತದ್ ದೃಷ್ಟಂ ಮಹಜ್ಜ್ಯೋತಿರ್ಜ್ಯೋತಿರಿತ್ಯುಚ್ಯತೇ ಬುಧೈಃ ॥ ೫೨ ॥

ಬಿಂದುವಿನಿಂದ ಕೂಡಿದ ವೇದಗಳು ಎಂದರೆ (ಬಿಂದುಗಳು ಎಂದರೆ) ಇಲ್ಲಿ ಪ್ರಣವ ಎಂದರ್ಥ. ಆ ವೇದಗಳ ಶಿರಸ್ಸಿನಲ್ಲಿರುವ ವೇದೋಪನಿಷತ್ ಸ್ಥಾನೀಯವಾದ ಯಾವ ಜ್ಯೋತಿಯನ್ನು ನೀನು ನೋಡಿದೆಯೋ ಅದನ್ನು ಪರಂಜ್ಯೋತಿ ಅರ್ಥಾತ್ ಪರಮಾತ್ಮನೆಂದು ಜ್ಞಾನಿಗಳು ಹೇಳುತ್ತಾರೆ.

ಋಷೇಮಯಚಾऽಪೀತ್ಯುಕ್ತ್ವಾ ಚಾಂತರಧೀಯತ ।
ತತಃ ಸ ವಿಸ್ಮಯಾವಿಷ್ಟೋ ನಾರದಃ ಪುರುಷರ್ಷಭ ॥ ೫೩ ॥

ಋಷಿಯೇ, ಆ ಜ್ಯೋತಿಯೇ ನಮಗೆಲ್ಲರಿಗೂ ಜ್ಞೇಯವಾದ, ಉತ್ತಮವಾದ ವಸ್ತುವೆಂದು ತಿಳಿ. ಆ ಜ್ಯೋತಿಯ ಬಗ್ಗೆ ಪೂರ್ಣವಾಗಿ ಹೇಳಲು ನನ್ನಿಂದಲೂ ಸಾಧ್ಯವಿಲ್ಲ ಎಂದು ಹೇಳುತ್ತಾ ಆ ಕನ್ಯೆಯು ಅಂತರ್ಧಾನವನ್ನು ಹೊಂದಿದಳು. ಅದೆಲ್ಲವನ್ನೂ ಕಂಡ ನಾರದನು ವಿಸ್ಮಿತನಾಗಿ ಆ ಪರಂಜ್ಯೋತಿಯನ್ನೇ ಧ್ಯಾನಿಸುತ್ತಾ ತನ್ನನ್ನೇ ತಾನು ಮರೆತುಬಿಟ್ಟನು. ಹೀಗೆ ಬಹಳ ಹೊತ್ತಿನ ತನಕ ಆ ಪರಂಜ್ಯೋತಿಯಲ್ಲೇ ಅವನ ಮನಸ್ಸು ನೆಲೆಸಿತ್ತು.

ತತಃ ಸ್ನಾತ್ವಾ ಮಹಾತೇಜಾ ವಾಗ್ಯತೋ ನಿಯತೇಂದ್ರಿಯಃ ।
ತುಷ್ಟಾವ ಪುರುಷವ್ಯಾಘ್ರೋ ಜಿಜ್ಞಾಸುಶ್ಚ ತದದ್ಭುತಮ್ ॥ ೫೪ ॥

ಕ್ರಮವಾಗಿ ಎಚ್ಚೆತ್ತುಕೊಂಡ ನಾರದ ಮಹರ್ಷಿಯು ಆ ಸರೋವರದಲ್ಲಿ ಸ್ನಾನವನ್ನು ಮಾಡಿ ಬಂದು ನಿಯಮನಿಷ್ಠನಾಗಿ ಆ ದಿವ್ಯರೂಪದ ನಿಜಸ್ಥಿತಿಯನ್ನು ತಿಳಿಯಬೇಕೆಂದು ಸ್ತುತಿಸತೊಡಗಿದನು. ಆ ಅದ್ಭುತವಾದ ರೂಪದ ಜಿಜ್ಞಾಸೆಯಿಂದ ಅನೇಕ ಸ್ತುತಿ ಮಾತುಗಳಿಂದ ಆ ಭಗವಂತನನ್ನು ಸಂತೋಷಗೊಳಿಸಿದನು.

ತತೋ ವರ್ಷಶತೇ ಪೂರ್ಣೇ ಭಗವಾಂಲ್ಲೋಕಭಾವನಃ ।
ಪ್ರಾದುಶ್ಚಕಾರ ವಿಶ್ವಾತ್ಮಾ ಋಷೇಃ ಪರಮಸೌಹೃದಾತ್ ॥ ೫೫ ॥

ಹೀಗೆ ನೂರು ವರ್ಷಗಳು ಪೂರ್ಣವಾಗಲು ಲೋಕಕರ್ತನೂ, ವಿಶ್ವಾತ್ಮಕನೂ ಆದ ನಾರಾಯಣನು ನಾರದನ ಭಕ್ತಿಗೆ ಮೆಚ್ಚಿ ಅತ್ಯಂತ ಪ್ರೀತಿಯಿಂದಲೇ ಪ್ರಾದುರ್ಭೂತನಾದನು.

ತಮಾಗತಂ ಜಗನ್ನಾಥಂ ಸರ್ವಕಾರಣಕಾರಣಮ್ ।
ಅಖಿಲಾಮರಮೌಲ್ಯಂಗರುಕ್ಮಾರುಣಪದದ್ವಯಮ್ ॥ ೫೬ ॥

ವೈನತೇಯಪದಸ್ಪರ್ಶಕಿಣಶೋಭಿತಜಾನುಕಮ್ ।
ಪೀತಾಂಬರಲಸತ್ಕಾಂಚೀದಾಮಬದ್ಧಕಟೀತಟಮ್ ॥ ೫೭ ॥

ಶ್ರೀವತ್ಸವಕ್ಷಸಂ ಚಾರುಮಣಿಕೌಸ್ತುಭಕಂಧರಮ್ ।
ಮಂದಸ್ಮಿತಮುಖಾಂಭೋಜಂ ಚಲದಾಯತಲೋಚನಮ್ ॥ ೫೮ ॥

ಸಮಸ್ತ ಕಾರಣಗಳಿಗೂ ಆದಿಕಾರಣನಾದ, ಸಮಸ್ತ ದೇವತೆಗಳ ತಲೆಯ ಮೇಲಿರುವ ಕಿರೀಟದ ಮಣಿಗಳಿಂದ ಕೆಂಪಾದ ಪಾದಕಮಲಗಳುಳ್ಳ ಜಗನ್ನಾಥನಾದ ಆಗಮಿಸಿದ ಪರಮಾತ್ಮನನನ್ನು ಕಂಡನು. ಆ ಪರಮಾತ್ಮನಾದರೂ ಗರುಡನು ಶ್ರೀಹರಿಯ ಪಾದವನ್ನು ಸ್ಪರ್ಶ ಮಾಡಿದಾಗ ಆ ಪಾದದಲ್ಲಿ ಉತ್ಪನ್ನವಾಗುವ ಯಾವ ಪಾದಾರವಿಂದದ ಧೂಳಿನ ಕಣಗಳಿದ್ದವೋ ಆ ಕಣಗಳು ಗರುಡನು ರೆಕ್ಕೆಯನ್ನು ಬಡಿಯುವಾಗ ಮೇಲೆ ಧೂಳಿನಂತೆ ಹಾರಿ ಶ್ರೀಹರಿಯ ಜಾನುಮಂಡಲವೆಲ್ಲವೂ ಶೋಭಾಯಮಾನವಾಗಿ ಕಾಣಿಸುತ್ತಿತ್ತು. ಇಂತಹ ಶೋಭಿತವಾದ ಜಾನುಮಂಡಲದಿಂದ ಕೂಡಿದ ಪೀತಾಂಬರಧಾರಿಯಾದ, ಕಾಂಚೀದಾಮದಿಂದ ಕಟ್ಟಲ್ಪಟ್ಟ ಕಟಿತಟವುಳ್ಳ, ಶ್ರೀವತ್ಸಚಿಹ್ನೆಯಿಂದ ಅಲಂಕೃತನಾದ, ಕೌಸ್ತುಭಧಾರಿಯಾದ, ನೀಲಮೇಘಶ್ಯಾಮನಾದ ಶ್ರೀಹರಿಯು ಮಂದಹಾಸದಿಂದ ಕೂಡಿದ ಮುಖಕಮಲ ಉಳ್ಳವನಾಗಿದ್ದನು. ಚಂಚಲವಾದ ವಿಶಾಲವಾದ ಕಣ್ಣುಗಳಿಂದ ಮನೋಹರನಾಗಿದ್ದನು.

ನಮ್ರಚಾಪಾನುಕರಣನಮ್ರಭ್ರೂಯುಗಶೋಭಿತಮ್ ।
ನಾನಾರತ್ನಮಣೀವಜ್ರಸ್ಫುರನ್ಮಕರಕುಂಡಲಮ್ ॥ ೫೯ ॥

ಬಗ್ಗಿದ ಧನುಸ್ಸನ್ನು ಅನುಕರಿಸುವಂತೆ ಇರುವ ಬಾಗಿದ ಭ್ರೂಯುಗದಿಂದ (ಹುಬ್ಬು) ಶೋಭಿತನಾಗಿದ್ದನು. ಮಹಾಲಕುಮಿಯೇ ನಾನಾರತ್ನ ಮಣಿಗಳಿಂದ ಕೂಡಿದ ರತ್ನಮಾಲೆಯಾಗಿ ಭಗವಂತನ ವಕ್ಷಸ್‌ಸ್ಥಲದಲ್ಲಿ ಶೋಭಿಸುತ್ತಿದ್ದಳು. ವಜ್ರದಿಂದ ಹೊಳೆಯುವ ಮಕರ ಕುಂಡಲವನ್ನು ಧರಿಸಿದ್ದನು.

ಇಂದ್ರನೀಲನಿಭಾಭಂ ತಂ ಕೇಯೂರಮುಕುಟೋಜ್ಜ್ವಲಮ್ ।
ದೇವೈರಿಂದ್ರಪುರೋಗೈಶ್ಚ ಋಷಿಸಂಘೈರಭಿಷ್ಟುತಮ್ ॥ ೬೦ ॥

ಇಂದ್ರನೀಲ ಮಣಿಯ ಕಾಂತಿಗೆ ಸದೃಶವಾದ ಕಾಂತಿಯಿಂದ, ಕೇಯೂರಗಳಿಂದ ಅಲಂಕೃತವಾದ ಉಜ್ವಲವಾದ ಮುಕುಟಗಳಿಂದ ಶೋಭಿತನಾಗಿದ್ದನು. ಇಂದ್ರನೇ ಮೊದಲಾದ ದೇವತೆಗಳಿಂದ, ಋಷಿಸಂಘಗಳಿಂದ ಪೂಜಿಸಲ್ಪಡುತ್ತಿದ್ದನು.

ನಾರದೋ ಜಯಶಬ್ದೇನ ವವಂದೇ ಶಿರಸಾ ಹರಿಮ್ ॥ ೬೧ ॥

ಇಂತಹ ಸರ್ವೋತ್ತಮನಾದ ಭಗವಂತನನ್ನು ಜಯಶಬ್ದದ ಮೂಲಕ ನಾರದನು ಶಿರಸಾ ವಂದಿಸಿದನು.

ತತಃ ಸ ಭಗವಾನ್ ಶ್ರೀಮಾನ್ ಮೇಘಗಂಭೀರಯಾ ಗಿರಾ ।
ಪ್ರಾಹೇಶಃ ಸರ್ವಭೂತಾನಾಂ ನಾರದಂ ಪತಿತಂ ಕ್ಷಿತೌ ॥ ೬೨ ॥

ಬಳಿಕ ಷಡ್ಗುಣೈಶ್ವರ್ಯ ಸಂಪನ್ನನಾದ, ಕಾಂತಿಯುಕ್ತನಾದ ಶ್ರೀಹರಿಯು ಮೇಘಗಂಭೀರವಾದ ಮಾತಿನಿಂದ ಭೂಮಿಯಲ್ಲಿ ಸಾಷ್ಟಾಂಗವೆರಗಿ ನಮಿಸುತ್ತಿರುವ ಸಮಸ್ತ ಪ್ರಾಣಿಗಳಿಗೂ ಹಿತಚಿಂತಕನಾದ ನಾರದನನ್ನು ಕುರಿತು ಈ ರೀತಿ ಹೇಳಿದನು.

ಭದ್ರಮಸ್ತು ಋಷೇ ತುಭ್ಯಂ ವರಂ ವರಯ ಸುವ್ರತ ।
ಯತ್ತೇ ಮನಸಿ ಸುವ್ಯಕ್ತಮಸ್ತಿ ಚ ಪ್ರದದಾಮಿ ತತ್ ॥ ೬೩ ॥

ನಾರದಮಹರ್ಷಿಯೇ, ನಿನಗೆ ಮಂಗಳವಾಗಲಿ. ಸದಾಚಾರಸಂಪನ್ನನೇ ನನ್ನ ಬಳಿ ವರವನ್ನು ಕೇಳಿಕೊ. ನಿನ್ನ ಮನಸ್ಸಿನಲ್ಲಿ ಕೇಳಬೇಕೆಂಬ ಬಯಕೆ ಏನಿದೆಯೋ ಅದನ್ನು ನಾನು ಕೊಡಲು ಬಯಸುತ್ತೇನೆ.

ಸ ಚೇಮಂ ಜಯಶಬ್ದೇನ ಪ್ರಸೀದೇತ್ಯಾತುರೋ ಮುನಿಃ ।
ಪ್ರೋವಾಚ ಹೃದಿ ಸಂರೂಢಂ ಶಂಖಚಕ್ರಗದಾಧರಮ್ ॥ ೬೪ ॥

ಈ ರೀತಿಯಾಗಿ ಭಗವಂತನು ನುಡಿಯಲು ಆತುರನಾದ ಮುನಿಯು ಜಯಶಬ್ದದಿಂದ ಭಗವಂತನನ್ನು ಪ್ರಸನ್ನನಾಗು ಎಂದು ಹೇಳುತ್ತಾ ಶಂಖ-ಚಕ್ರ-ಗದಾಧರನಾದ ಭಗವಂತನ ಬಳಿ ತನ್ನ ಹೃದಯದಲ್ಲಿರುವ ಬಯಕೆಯನ್ನು ಹೇಳಿಕೊಂಡನು.

ವಿವಕ್ಷಿತಂ ಜಗನ್ನಾಥ ಮಯಾ ಜ್ಞಾತಂ ತ್ವಯಾಽಚ್ಯುತ ।
ತತ್ ಪ್ರಸೀದ ಹೃಷೀಕೇಶ ಶ್ರೋತುಮಿಚ್ಛಾಮಿ ತದ್ಧರೇ ॥ ೬೫ ॥

ಅಚ್ಯುತನೇ, ಜಗನ್ನಾಥನೇ, ನನ್ನ ಹೃದಯದಲ್ಲಿರುವ ಬಯಕೆ ಏನೆಂಬುದನ್ನು ಸರ್ವಜ್ಞನಾದ ನೀನು ತಿಳಿದಿರುವಿ. ಆ ವಿಷಯದಲ್ಲಿ ಹೃಷೀಕೇಶನೇ ನೀನು ಪ್ರಸನ್ನನಾಗು. ಆ ವಿಷಯವನ್ನು ತಿಳಿಯಬೇಕೆಂದು ನಾನು ಇಚ್ಛಿಸುತ್ತಿದ್ದೇನೆ.

ತತಃ ಸ್ಮಯನ್ ಮಹಾವಿಷ್ಣುರಭ್ಯಭಾಷತ ನಾರದಮ್ ।
ಯದ್ ದೃಷ್ಟಂ ಮಮ ರೂಪಂ ತು ವೇದಾನಾಂ ಶಿರಸಿ ತ್ವಯಾ ॥

ನಿರ್ದ್ವಂದ್ವಾ ನಿರಹಂಕಾರಾಃ ಶುಚಯಃ ಶುದ್ಧಲೋಚನಾಃ ।
ತಂ ಮಾಂ ಪಶ್ಯಂತಿ ಸತತಂ ತಾನ್ ಪೃಚ್ಛ ಯದಿಹೇಚ್ಛಸಿ ॥ ೬೭ ॥

ಬಳಿಕ ಮಂದಹಾಸವನ್ನು ಬೀರುತ್ತಾ ನಾರದನನ್ನು ಕುರಿತು ವಿಷ್ಣುವು ಹೇಳಿದನು: ನಾರದರೇ, ವೇದಗಳ ಶಿರಸ್ಸಿನಲ್ಲಿ ನೀನು ನನ್ನ ಯಾವ ಪರಮಮಂಗಳವಾದ ರೂಪವನ್ನು ನೋಡಿದ್ದೀಯೋ, ಅಂತಹ ರೂಪವನ್ನು ದ್ವಂದ್ವಗಳನ್ನು ಮೀರಿ ನಿಂತ ನಿರಹಂಕಾರಿಯಾದ, ಶುದ್ಧಹೃದಯವುಳ್ಳ, ಕಾಮ-ಕ್ರೋಧಗಳಿಲ್ಲದ ಜ್ಞಾನಿಗಳು ಯಾವಾಗಲೂ ನೋಡುತ್ತಾರೆ. ನಿನಗೆ ಆ ನನ್ನ ರೂಪದ ಬಗ್ಗೆ ತಿಳಿಯಬೇಕೆಂಬ ಕುತೂಹಲವಿದ್ದಲ್ಲಿ ಅಂತಹ ಜ್ಞಾನಿಗಳ ಬಳಿ ಕೇಳು.

ಯೇ ಯೋಗಿನೋ ಮಹಾಪ್ರಾಜ್ಞಾ ಮದಂಶಾ ಯೇ ವ್ಯವಸ್ಥಿತಾಃ ।
ತೇಷಾಂ ಪ್ರಸಾದಂ ದೇವರ್ಷೇ ಮತ್ಪ್ರಸಾದಮವೈಹಿ ತತ್ ॥ ೬೮ ॥

ಮಹಾಪ್ರಾಜ್ಞರಾದ ಯಾವ ಯೋಗಿಗಳಿದ್ದಾರೋ ಅವರು ನನ್ನ ಸನ್ನಿಧಾನ ಪಾತ್ರರಾಗಿದ್ದಾರೆ. ಅವನ ಪ್ರಸನ್ನತೆಯನ್ನು ಪಡೆದ ನೀನು ನನ್ನ ಅನುಗ್ರಹದಿಂದ ಆ ವಿಚಾರವನ್ನು ತಿಳಿದುಕೊ.

ಭೀಷ್ಮಃ

ಇತ್ಯುಕ್ತ್ವಾ ಸ ಜಗಾಮಾಥ ಭಗವಾನ್ ಭೂತಭಾವನಃ ।
ತಸ್ಮಾದ್ ವ್ರಜ ಹೃಷೀಕೇಶಂ ಕೃಷ್ಣಂ ದೇವಕಿನಂದನಮ್ ॥ ೬೯ ॥

ಭೀಷ್ಮ– ಈ ರೀತಿಯಾಗಿ ಷಡ್ಗುಣೈಶ್ವರ್ಯಸಂಪನ್ನನಾದ, ಭೂತಭಾವನನಾದ ಭಗವಂತನು ನಾರದರನ್ನು ಕುರಿತು ಹೇಳಿ ಹೊರಟು ಹೋದನು. ಆದ್ದರಿಂದ ಯುಧಿಷ್ಠಿರನೇ, ದೇವಕೀನಂದನನಾದ, ಹೃಷೀಕೇಶನಾದ ಕೃಷ್ಣನನ್ನು ನೀನು ಜ್ಞಾನಕ್ಕಾಗಿ ಶರಣು ಹೊಂದು.

ಏತಮಾರಾಧ್ಯ ಗೋವಿಂದಂ ಗತಾ ಮುಕ್ತಿಂ ಮಹರ್ಷಯಃ ।
ಏಷ ಕರ್ತಾ ವಿಕರ್ತಾ ಚ ಸರ್ವಕಾರಣಕಾರಣಮ್ ॥ ೭೦ ॥

ಅನೇಕ ಮಹರ್ಷಿಗಳು ಈ ಗೋವಿಂದನನ್ನು ಆರಾಧಿಸಿ ಮುಕ್ತಿಗೆ ಹೋಗಿದ್ದಾರೆ. ಈ ಗೋವಿಂದನೇ ಸೃಷ್ಟಿಕರ್ತನಾಗಿದ್ದಾನೆ. ಲಯಕರ್ತನೂ ಆಗಿದ್ದಾನೆ. ಸಮಸ್ತ ಕಾರಣಗಳಿಗೆ ಕಾರಣನೂ ಆಗಿದ್ದಾನೆ.

ಮಯಾऽಪ್ಯೇತಚ್ಛ್ರುತಂ ರಾಜನ್ನಾರದಾತ್ತು ನಿಬೋಧ ತತ್ ।
ಸ್ವಯಮೇವ ಸಮಾಚಷ್ಟ ನಾರದೋ ಭಗವಾನ್ ಮುನಿಃ ॥ ೭೧ ॥

ಈ ತತ್ತ್ವವನ್ನು ನಾನು ನಾರದರಿಂದ ಹೇಗೆ ತಿಳಿದುಕೊಂಡಿದ್ದೇನೋ ಅದನ್ನು ನಿನಗೆ ತಿಳಿಸಿದ್ದೇನೆ. ಪೂಜ್ಯನಾದ ನಾರದಮುನಿಯು ತಾನಾಗಿಯೇ ಈ ವಿಚಾರಗಳನ್ನು ತಿಳಿಸಿರುತ್ತಾನೆ.

ಸಮಸ್ತಸಂಸಾರವಿಘಾತಕಾರಣಂ
ಭಜಂತಿ ಯೇ ವಿಷ್ಣುಮನನ್ಯಮಾನಸಾಃ ।
ತೇ ಯಾಂತಿ ಸಾಯುಜ್ಯಮತೀವ ದುರ್ಲಭ-
ಮಿತೀವ ನಿತ್ಯಂ ಹೃದಿ ವರ್ಣಯಂತಿ ॥ ೭೨ ॥

ಸಮಸ್ತ ಸಂಸಾರಜೀವರ ಸಂಸಾರದುಃಖದ ನಾಶಕ್ಕೆ ಕಾರಣನಾದ ವಿಷ್ಣುವನ್ನು ಅನನ್ಯ ಮನಸ್ಸಿನಿಂದ ಯಾರು ಭಜಿಸುತ್ತಾರೋ ಅವರು ಹೃದಯದಲ್ಲಿ ಅವನನ್ನು ಚಿಂತಿಸುತ್ತಾ ದುರ್ಲಭವಾದ ಸಾಯುಜ್ಯ ಮುಕ್ತಿಯನ್ನು ಹೊಂದುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ತ್ರಯಸ್ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಮೂವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ನಾಲ್ಕನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನಿಗೆ ಭಗವಂತನ ಸೃಷ್ಟಿಯ ಪ್ರಕಾರವನ್ನೂ, ಭಗವಂತನ ಅವತಾರ ಕ್ರಮಗಳನ್ನೂ, ಶ್ರೀಕೃಷ್ಣನ ಸರ್ವೋತ್ತಮತ್ವವನ್ನೂ ನಿರೂಪಿಸಿದುದು.

ಯುಧಿಷ್ಠಿರಃ

ಪಿತಾಮಹ ಮಹಾಪ್ರಾಜ್ಞ ಪುಂಡರೀಕಾಕ್ಷಮಚ್ಯುತಮ್ ।
ಕರ್ತಾರಮಕೃತಂ ವಿಷ್ಣುಂ ಭೂತಾನಾಂ ಪ್ರಭವಾಪ್ಯಯಮ್ ॥ ೧ ॥

ನಾರಾಯಣಂ ಹೃಷೀಕೇಶಂ ಗೋವಿಂದಮಪರಾಜಿತಮ್ ।
ತತ್ತ್ವೇನ ಭರತಶ್ರೇಷ್ಠ ಶ್ರೋತುಮಿಚ್ಛಾಮಿ ಕೇಶವಮ್ ॥ ೨ ॥

ಯುಧಿಷ್ಠಿರ– ಪಿತಾಮಹನೇ, ಮಹಾಪ್ರಾಜ್ಞನೇ, ಅಚ್ಯುತನಾದ, ಪುಂಡರೀಕಾಕ್ಷನಾದ, ಜಗತ್ತಿನ ಸೃಷ್ಟಿಕರ್ತನಾದ, ಯಾವ ಕರ್ಮಗಳ ಬಂಧನಕ್ಕೂ ಸಿಲುಕದ, ಜೀವರ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನಾದ ಕೇಶವನ, ನಾರಾಯಣನ, ಹೃಷೀಕೇಶನ ಅವತಾರಭೂತನಾದ, ಅಪರಾಜಿತನಾದ ಗೋವಿಂದನ ಮಹಿಮೆಯನ್ನು ಯಥಾರ್ಥವಾಗಿ ಕೇಳಲು ಬಯಸುತ್ತೇನೆ.

ಭೀಷ್ಮಃ

ಶ್ರುತೋऽಯಮಥೋ ರಾಮಸ್ಯ ಜಾಮದಗ್ನ್ಯಸ್ಯ ಜಲ್ಪತಃ ।
ನಾರದಸ್ಯ ಚ ದೇವರ್ಷೇಃ ಕೃಷ್ಣದ್ವೈಪಾಯನಸ್ಯ ಚ ॥ ೩ ॥

ಭೀಷ್ಮ– ಈ ಗೋವಿಂದನ ಮಹಿಮೆಯನ್ನು ಜಮದಗ್ನಿಗಳ ಮಗನೆನಿಸಿದ ಪರಶುರಾಮರು ಹಿಂದೆ ಹೇಳಿದ್ದನ್ನು, ದೇವರ್ಷಿಗಳಾದ ನಾರದರು ಹಿಂದೆ ಹೇಳಿದ್ದನ್ನು ಮತ್ತು ವೇದವ್ಯಾಸರು ಹೇಳಿದ್ದನ್ನು ನಿನಗೆ ತಿಳಿಸುತ್ತೇನೆ.

ಅಸಿತೋ ದೇವಲಸ್ತಾತ ವಾಲ್ಮೀಕಿಶ್ಚ ಮಹಾತಪಾಃ ।
ಮಾರ್ಕಂಡೇಯಶ್ಚ ಗೋವಿಂದೇ ಕಥಯತ್ಯದ್ಭುತಂ ಮಹತ್ ॥ ೪ ॥

ಈ ಕೃಷ್ಣನ ಅದ್ಭುತವಾದ ಚರಿತ್ರೆಯನ್ನು ಅಸಿತರು, ದೇವಲರು, ಮಹಾತಪಸ್ವಿಗಳಾದ ವಾಲ್ಮೀಕಿಗಳು, ಮಾರ್ಕಂಡೇಯರು ಮಹತ್ತರವಾದ ಅದ್ಭುತವಾದ ಗೋವಿಂದನ ಮಹಿಮೆಯನ್ನು ಹೇಳಿದ್ದರು.

ಕೇಶವೋ ಭರತಶ್ರೇಷ್ಠ ಭಗವಾನೀಶ್ವರಃ ಪ್ರಭುಃ ।
ಪುರುಷಃ ಸರ್ವಮಿತ್ಯೇವ ಶ್ರೂಯತೇ ಬಹುಧಾ ವಿಭುಃ ॥ ೫ ॥

ಕಿಂ ತು ಯಾನಿ ವಿದುರ್ಲೋಕೇ ಬ್ರಾಹ್ಮಣಾಃ ಶಾರ್ಙ್ಗಧನ್ವನಃ ।
ಮಾಹಾತ್ಮ್ಯಾನಿ ಮಹಾಬಾಹೋ ಶೃಣು ತಾನಿ ಯುಧಿಷ್ಠಿರ ॥ ೬ ॥

ಯುಧಿಷ್ಠಿರನೇ, ಕೇಶವನ ಗುಣಗಳನ್ನು ವರ್ಣಿಸಲು ನನ್ನಿಂದ ಸಾಧ್ಯವಾಗುವುದಿಲ್ಲ. ಸರ್ವೋತ್ತಮವಾದ ಪದಾರ್ಥಗಳಿಗಿಂತ ಉತ್ತಮನಾದ ಹೃಷೀಕೇಶನಾದ ವಾಸುದೇವನ ಮಹಿಮೆಯು ಅಪಾರವಾದುದು. ಪುರುಷನೆನಿಸಿದ ಭಗವಂತನಲ್ಲಿಯೇ ಸಕಲ ಜಗತ್ತು ನೆಲೆಗೊಂಡಿದೆ ಎಂದು ಭಗವಂತನ ಮಹಿಮೆಯು ಶ್ರುತಿಗಳ ಮೂಲಕ ಅನೇಕ ರೀತಿಯಲ್ಲಿ ಕೇಳಲ್ಪಟ್ಟಿದೆ. ಇಂತಹ ಷಡ್ಗುಣೈಶ್ವರ್ಯಸಂಪನ್ನನಾದ ಕೇಶವನೇ ಜಗತ್ತಿಗೆ ಈಶ್ವರನಾಗಿದ್ದಾನೆ. ಶಾರ್ಙ್ಗಧನುರ್ಧಾರಿಯಾದ ಭಗವಂತನ ವಿಷಯದಲ್ಲಿ ಬ್ರಹ್ಮಜ್ಞಾನಿಗಳು ಲೋಕದಲ್ಲಿ ಏನು ತಿಳಿದುಕೊಂಡಿದ್ದಾರೋ ಮಹಾನುಭಾವನಾದ ಆ ಕೃಷ್ಣನ ಮಹಿಮೆಯನ್ನು ಮಹಾಬಾಹುವೇ ನನ್ನಿಂದ ಕೇಳಿಸಿಕೊ.

ಯಾನಿ ಚಾಹುರ್ಮನುಷ್ಯೇಂದ್ರ ಯೇ ಪುರಾಣವಿದೋ ಜನಾಃ ।
ಅಶೇಷೇಣ ಹಿ ಗೋವಿಂದೇ ಕೀರ್ತಯಿಷ್ಯಾಮಿ ತಾನ್ಯಹಮ್ ॥ ೭ ॥

ಭಗವಂತನ ವಿಷಯಕವಾಗಿ ವೇದಜ್ಞರು, ಪೌರಾಣಿಕರು ಏನು ತಿಳಿದು ಹೇಳುತ್ತಾರೋ ಅಂತಹ ಸಮಸ್ತ ಗೋವಿಂದನ ಮಹಿಮೆಗಳನ್ನು ನಾನು ಕೇಳಿಸಿಕೊಂಡಿದ್ದನ್ನು ನಿನಗೆ ಹೇಳುತ್ತೇನೆ.

ಮಹಾಭೂತಾನಿ ಭೂತಾತ್ಮಾ ಮಹಾತ್ಮಾ ಪುರುಷೋತ್ತಮಃ ।
ವಾಯುಜ್ಯೋತಿಸ್ತಥಾ ಚಾಪಃ ಖಂ ಗಾಂ ಚೈವಾನ್ವಕಲ್ಪಯತ್ ॥ ೮ ॥

ಆ ಗೋವಿಂದನು ಪುರುಷೋತ್ತಮನೆನಿಸಿದ್ದಾನೆ. ಮಹಾತ್ಮನಾದ, ಸಮಸ್ತ ಭೂತಾಂತರ್ಯಾಮಿಯಾದ ಭಗವಂತನು ಪಂಚಮಹಾಭೂತಗಳನ್ನೂ, ವಾಯು, ಅಗ್ನಿ, ಜಲ, ಆಕಾಶ, ಭೂಮಿ ಎಂಬವುಗಳನ್ನೂ ಸೃಷ್ಟಿಸಿದ್ದಾನೆ.

ಸ ದೃಷ್ಟ್ವಾ ಪೃಥಿವೀಂ ಚೈವ ಸರ್ವಭೂತೇಶ್ವರಃ ಪ್ರಭುಃ ।
ಅಪ್ಸ್ವೇವ ಶಯನಂ ಚಕ್ರೇ ಮಹಾತ್ಮಾ ಪುರುಷೋತ್ತಮಃ ॥ ೯ ॥

ಸರ್ವಭೂತೇಶ್ವರನಾದ ಮಹಾತ್ಮನಾದ, ಪುರುಷೋತ್ತಮನಾದ ಪ್ರಭುವು ಪೃಥಿವಿಯನ್ನು ಸೃಷ್ಟಿಸಿ ನೀರಿನ ಮೇಲೆಯೇ ತಾನು ಮಲಗಿದ್ದನು.

ಸರ್ವತೇಜೋಮಯಸ್ತಸ್ಮಿನ್ ಶಯಾನಃ ಶಯನೇ ಶುಭೇ ।
ಸೋಽಗ್ರಜಂ ಸರ್ವಭೂತಾನಾಂ ಸಂಕರ್ಷಣಮಚಿಂತಯತ್ ॥ ೧೦ ॥

ಸರ್ವತೇಜೋಮಯನಾದ ಭಗವಂತನು ಆ ನೀರಿನ ಮಧ್ಯದಲ್ಲಿ ಹಾಸಿಗೆಯನ್ನು ನಿರ್ಮಿಸಿಕೊಂಡು ಮಲಗಿದ್ದಾಗ ಸಮಸ್ತ ಭೂತಗಳಿಗೂ ಮೊದಲಿಗನಾದ ಸಂಕರ್ಷಣನನ್ನು ತನ್ನ ಮನಸ್ಸಿನಲ್ಲಿ ಧ್ಯಾನಿಸಿದನು.

ಆಶ್ರಯಂ ಸರ್ವಭೂತಾನಾಂ ಮನಸೇತಿ ವಿಶುಶ್ರುಮ ।
ಸ ಧಾರಯತಿ ಭೂತಾತ್ಮಾ ಉಭೇ ಭೂತಭವಿಷ್ಯತೀ ॥ ೧೧ ॥

ಆ ಸಂಕರ್ಷಣನೇ ಭವಿಷ್ಯತ್-ಭೂತಗಳಿಗೂ ಆಧಾರನೆನಿಸಿದ್ದಾನೆ.

ಪ್ರದ್ಯುಮ್ನಮಸೃಜತ್ ತಸ್ಮಾತ್ ಸರ್ವತೇಜಃಪ್ರಕಾಶಕಮ್ ।
ಅನಿರುದ್ಧಸ್ತತೋ ಜಜ್ಞೇ ಸರ್ವಶಕ್ತಿರ್ಮಹಾದ್ಯುತಿಃ ॥ ೧೨ ॥

ಆ ಭಗವಂತನು ಸಂಕರ್ಷಣನ ಮೂಲಕ ಪ್ರದ್ಯುಮ್ನನನ್ನು ಸೃಷ್ಟಿ ಮಾಡಿದನು. ಸಮಸ್ತ ಬೆಳಗುವ ಪದಾರ್ಥಗಳನ್ನು ಬೆಳಗುವ ಸಾಮರ್ಥ್ಯ ಪ್ರದ್ಯುಮ್ನನದ್ದು. ಅವನ ಮೂಲಕ ಸರ್ವಶಕ್ತಿಸಂಪನ್ನನಾದ ಅನಿರುದ್ಧನು ಸೃಷ್ಟಿಗೊಂಡನು. ಇವನು ಮಹಾಕಾಂತಿ ಸಂಪನ್ನನು.

ಅಪ್ಸು ವ್ಯೋಮಗತಃ ಶ್ರೀಮಾನ್ ಯೋಗನಿದ್ರಾಮುಪೇಯಿವಾನ್ ।
ತಸ್ಮಾತ್ ಸಂಜಜ್ಞಿರೇ ದೇವಾ ಬ್ರಹ್ಮವಿಷ್ಣುಮಹೇಶ್ವರಾಃ ।
ಲಯಸ್ಥಿತ್ಯಂತಕರ್ಮಾಣಸ್ತ್ರಯಸ್ತೇ ಸುಮಹೌಜಸಃ ॥ ೧೩ ॥

ನೀರಿನಲ್ಲಿ ಆಕಾಶದಲ್ಲಿರುವ ಕಾಂತಿಯುಕ್ತನಾದ ಭಗವಂತನು ಯೋಗನಿದ್ರೆಯನ್ನು ಕೈಗೊಂಡನು. ಅಂತಹ ಭಗವಂತನಿಂದ ಬ್ರಹ್ಮ-ವಿಷ್ಣು-ಮಹೇಶ್ವರರಾದ ದೇವತೆಗಳು ಉತ್ಪನ್ನರಾದರು. ಆ ಮೂವರು ಮಹಾತೇಜಸ್ವಿಗಳಾಗಿ ಲಯ-ಸ್ಥಿತಿ-ಉತ್ಪತ್ತಿ ಎಂಬ ಕರ್ಮಗಳನ್ನು ಮಾಡುವವರಾಗಿದ್ದಾರೆ.

ವ್ಯಾಖ್ಯಾನ ವಿಶೇಷ– ಬ್ರಹ್ಮನ ಸೃಷ್ಟಿ ರುದ್ರನ ಸೃಷ್ಟಿಗಳನ್ನು ಮುಂದೆ ಹೇಳುವುದರಿಂದ ಸೃಷ್ಟಿ ಮಾಡುವುದಕ್ಕೋಸ್ಕರ ಗುಣಪರಿಪೂರ್ಣನಾದ ಭಗವಂತನು ಬ್ರಹ್ಮ-ರುದ್ರರ ಸೃಷ್ಟಿಗಳ ಪೂರ್ವದಲ್ಲಿ ತಾನು ಬ್ರಹ್ಮನಾಮಕನಾಗಿ ಅವತಾರ ಮಾಡಿದನು. ಚತುರ್ಮುಖನೆಂಬ ಬ್ರಹ್ಮನ ಅಧಿಷ್ಠಾನದಲ್ಲಿ ಮುಂದೆ ಸೃಷ್ಟಿಯನ್ನು ಮಾಡುತ್ತಾನೆ. ಪಾಲನೆಯನ್ನು ಸ್ವತಃ ವಿಷ್ಣುನಾಮಕನಾದ ಭಗವಂತನೇ ಮಾಡುತ್ತಾನೆ. ಸಂಹಾರಕ್ಕಾಗಿ ರುದ್ರ ಎಂಬ ಹೆಸರಿನ ತನ್ನ ರೂಪವನ್ನೇ ಸೃಷ್ಟಿಸಿದನು. ಮುಂದೆ ಸಂಹಾರಕ್ಕೆ ಮಹರುದ್ರನನ್ನು ಅಧಿಷ್ಠಾನ ಮಾಡಿಕೊಳ್ಳುವ ರೂಪ ಈ ಭಗವಂತನ ರುದ್ರರೂಪವಾಗಿದೆ. ಹೀಗಾಗಿ ಬ್ರಹ್ಮನ ಅಂತರ್ಯಾಮಿಯಾದ ಬ್ರಹ್ಮ, ಸ್ವಯಂ ವಿಷ್ಣು, ರುದ್ರಾಂತರ್ಯಾಮಿಯಾದ ರುದ್ರ ಎಂಬ ಮೂರು ರೂಪಗಳು ಪದ್ಮನಾಭ ಮೂರ್ತಿಯಿಂದ ಹುಟ್ಟಿದವು. ಆದ್ದರಿಂದಲೇ ತಾತ್ಪರ್ಯನಿರ್ಣಯದಲ್ಲಿ 'ಸ್ಥಿತ್ಯಾದಯೇ ಹರಿವಿರಂಚ ಹರೇತಿ ಸಂಜ್ಞಾಃ ದತ್ತೇ' ಸ್ಥಿತ್ಯಾದಿಗಳು ನಡೆಯಬೇಕೆಂದು ಭಗವಂತನು ಹರಿ-ವಿರಂಚ-ಹರ ಎಂಬ ಹೆಸರುಗಳನ್ನು ಹೊಂದಿದ್ದಾನೆ ಎಂದು ಹೇಳಿದ್ದಾರೆ. ಚತುರ್ಮುಖ ಬ್ರಹ್ಮನು ಸತಿಯಾದ ಸರಸ್ವತಿಯನ್ನು ಹೃದಯದಲ್ಲಿಟ್ಟುಕೊಂಡು ಅವಳಿಂದ ಪ್ರಚೋದಿತನಾಗಿ ಸೃಷ್ಟಿಯನ್ನು ಮಾಡಿದನು ಎಂಬ ಪ್ರಮಾಣಗಳು ಈ ವಿಷಯದಲ್ಲಿ ಆಧಾರವಾಗಿವೆ. **'ಸೃಜಾಮಿತನ್ನಿಯುಕ್ತೋಹಂ ಹರೋ ಹರತಿ ತದ್ವಶಃ । ವಿಶ್ವಂ ಪುರುಷರೂಪೇಣ ಪರಿಪಾತಿತ್ರಿಶಕ್ತಿಧೃಕ್'** ಚತುರ್ಮುಖ ಬ್ರಹ್ಮನು ಹೇಳುವ ಮಾತು- ಭಗವಂತನಿಂದ ನಿಯುಕ್ತನಾದ ನಾನು ಸೃಷ್ಟಿಯನ್ನು ಮಾಡುತ್ತೇನೆ. ಆ ಭಗವಂತನಿಗೆ ವಶನಾಗಿಯೇ ರುದ್ರನು ಸಂಹಾರ ಮಾಡುತ್ತಾನೆ. ಹೀಗೆ ಮೂರು ಶಕ್ತಿಗಳನ್ನು ಧರಿಸಿದ ಭಗವಂತನು ಜಗತ್ತನ್ನು ತಾನು ಪುರುಷರೂಪದಿಂದ ಪರಿಪಾಲಿಸುತ್ತಿದ್ದಾನೆ ಎಂಬುದು ಇನ್ನೊಂದು ಪ್ರಮಾಣ. ಇದರಂತೆ ಭಗವಂತನು ಅಮೃತಮಥನದ ಕಾಲದಲ್ಲಿ ಅಸುರರಲ್ಲಿ ಅಸುರರೂಪದಿಂದ ನಿಂತು ಅವರಲ್ಲಿ ಬಲ-ವೀರ್ಯಗಳನ್ನು ಪ್ರಚೋದಿಸಿದನು. ದೇವತೆಗಳ ಗುಂಪಿನಲ್ಲಿ ದೇವತೆಗಳ ಅಂತರ್ಯಾಮಿಯಾಗಿ ನಿಂತು ಅವರನ್ನೂ ಅಮೃತಮಥನದ ಕಾಲದಲ್ಲಿ ಪ್ರಚೋದಿಸಿದನು. ಮತ್ತೊಂದು ರೂಪದಿಂದ ವಾಸುಕಿಯಲ್ಲಿದ್ದು ಮಥನಕ್ಕೆ ಯೋಗ್ಯವಾಗುವಂತೆ ಪ್ರಚೋದಿಸಿದನು. ಮುಂತಾದ ವಚನಗಳು ಭಾಗವತದಲ್ಲಿವೆ.

ತತಸ್ತಸ್ಮಿನ್ ಮಹಾಬಾಹೋ ಪ್ರಾದುರ್ಭೂತೇ ಮಹಾತ್ಮನಿ ।
ಭಾಸ್ಕರಪ್ರತಿಮಂ ದಿವ್ಯಂ ನಾಭ್ಯಾಂ ಪದ್ಮಮಜಾಯತ ॥ ೧೪ ॥

ಬಳಿಕ ಮಹಾಬಾಹುವಾದ, ಮಹಾತ್ಮನಾದ ಭಗವಂತನು ಪ್ರಾದುರ್ಭವಿಸುತ್ತಿರಲು ಉದಿಸುವ ಸೂರ್ಯನಂತೆ ದಿವ್ಯವಾದ ಒಂದು ಕಮಲವು ಪದ್ಮನಾಭರೂಪಿಯಾದ ಭಗವಂತನ ನಾಭಿಯಿಂದ ಉತ್ಪನ್ನವಾಯಿತು.

ಸ ತತ್ರ ಭಗವಾನ್ ದೇವಃ ಪುಷ್ಕರೇ ಭಾಸಯನ್ ದಿಶಃ ।
ಬ್ರಹ್ಮಾ ಸಮಭವತ್ತಾತ ಸರ್ವಭೂತಪಿತಾಮಹಃ ॥ ೧೫ ॥

ಅಂತಹ ನಾಭಿಯಲ್ಲಿ ಅರಳಿದ ಕಮಲವನ್ನು ಷಡ್ಗುಣೈಶ್ವರ್ಯಸಂಪನ್ನನಾದ ಭಗವಂತನು ಬೆಳಗುತ್ತಿರಲು ಆ ಕಮಲದಲ್ಲಿ ಸರ್ವಭೂತಗಳಿಗೂ ಪಿತಾಮಹನೆನಿಸಿದ ಚತುರ್ಮುಖ ಬ್ರಹ್ಮನು ಸೃಷ್ಟನಾದನು.

ತಸ್ಮಿನ್ನಪಿ ಮಹಾಬಾಹೋ ಪ್ರಾದುರ್ಭೂತೇ ಮಹಾತ್ಮನಿ ।
ತಮಸಃ ಪೂರ್ವಜೋ ಜಜ್ಞೇ ಮಧುರ್ನಾಮ ಮಹಾಸುರಃ ॥ ೧೬ ॥

ಮಹಾತ್ಮನಾದ ಚತುರ್ಮುಖಬ್ರಹ್ಮನು ಆ ನಾಭಿಕಮಲದಿಂದ ಪ್ರಾದುರ್ಭೂತನಾಗುತ್ತಿರಲು ತಮೋಗುಣದ ಸೃಷ್ಟಿಗಿಂತ ಮೊದಲೇ ಮಹಾಸುರನಾದ ಮಧುನಾಮಕನಾದ ದೈತ್ಯನು ಹುಟ್ಟಿದನು.

ತಮುಗ್ರಮುಗ್ರಕರ್ಮಾಣಮುಗ್ರಾಂ ಬುದ್ಧಿಂ ಸಮಾಸ್ಥಿತಮ್ ।
ಬ್ರಹ್ಮಣೋಪಚಿತಿಂ ಕುರ್ವನ್ ಜಘಾನ ಪುರುಷೋತ್ತಮಃ ॥ ೧೭ ॥

ಆ ಮಧುನಾಮಕ ದೈತ್ಯನು ಉಗ್ರನಾಗಿದ್ದನು. ಉಗ್ರವಾದ ಕರ್ಮವನ್ನು ಅನುಷ್ಠಾನ ಮಾಡುತ್ತಿದ್ದನು. ಕ್ರೂರವಾದ ಬುದ್ಧಿಯನ್ನು ಹೊಂದಿದ್ದನು. ಇಂತಹ ದೈತ್ಯನನ್ನು ಪುರುಷೋತ್ತಮನು ಚತುರ್ಮುಖ ಬ್ರಹ್ಮನಿಗೆ ಶ್ರೇಯಸ್ಸನ್ನುಂಟು ಮಾಡುವ ದೃಷ್ಟಿಯಿಂದ ಸಂಹರಿಸಿದನು.

ತಸ್ಯ ತಾತ ವಧಾತ್ ಸರ್ವೇ ದೇವದಾನವಮಾನವಾಃ ।
ಮಧುಸೂದನಮಿತ್ಯಾಹುರ್ಋಷಭಂ ಸರ್ವಸಾತ್ವತಾಮ್ ॥ ೧೮ ॥

ಆ ಮಧುನಾಮಕ ದೈತ್ಯನ ವಧೆಯಿಂದ ಸಮಸ್ತ ದೇವ-ದಾನವ-ಮಾನವರು ಸತ್ವವುಳ್ಳಂತಹ ವ್ಯಕ್ತಿಗಳಿಗೆಲ್ಲ ಶ್ರೇಷ್ಠನಾಗಿರುವ ಈ ಭಗವಂತನನ್ನು ಮಧುಸೂದನ ಎಂದೇ ಹೇಳುತ್ತಾರೆ.

ಬ್ರಹ್ಮಾ ತು ಸಸೃಜೇ ಪುತ್ರಾನ್ ಮಾನಸಾನ್ ದಕ್ಷಸಪ್ತಮಾನ್ ।
ಮರೀಚಿಮತ್ರ್ಯಂಗಿರಸೌ ಪುಲಸ್ತ್ಯಂ ಪುಲಹಂ ಕ್ರತುಮ್ ॥ ೧೯ ॥

ಬಳಿಕ ಚತುರ್ಮುಖ ಬ್ರಹ್ಮನು ಮರೀಚಿ ಮೊದಲಾದ ಕ್ರತುವಿನ ತನಕ ಏಳು ಮಂದಿ ಮಾನಸ ಪುತ್ರರನ್ನು ಸೃಷ್ಟಿಸಿದನು. ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ವಸಿಷ್ಠ, ಕ್ರತುಗಳು ಬ್ರಹ್ಮನ ಮಾನಸ ಪುತ್ರರು.

ಮರೀಚಿಃ ಕಶ್ಯಪಂ ತಾತ ಪುತ್ರಂ ಚಾಸೃಜದಗ್ರಜಮ್ ।
ಮಾನಸಂ ಜನಯಾಮಾಸ ತೈಜಸಂ ಬ್ರಹ್ಮಸತ್ತಮಮ್ ॥ ೨೦ ॥

ಬಳಿಕ ಮರೀಚಿಯು ತನಗೆ ಮೊದಲನೆಯ ಮಗನನ್ನಾಗಿ ಕಶ್ಯಪನನ್ನು ಪಡೆದನು. ಈ ಕಶ್ಯಪನ ಸೃಷ್ಟಿಯು ಮನಸ್ಸಿನಿಂದಲೇ ಆಗಿದೆ. ತೇಜೋರೂಪನಾದ ಈತನು ಬ್ರಹ್ಮಜ್ಞಾನಿ ಎನಿಸಿದ್ದಾನೆ.

ಅಂಗುಷ್ಠಾದಸೃಜದ್ ಬ್ರಹ್ಮಾ ಮರೀಚೇರಪಿ ಪೂರ್ವಜಮ್ ।
ಸೋಽಭವದ್ಭರತಶ್ರೇಷ್ಠ ದಕ್ಷೋ ನಾಮ ಪ್ರಜಾಪತಿಃ ॥ ೨೧ ॥

ಬ್ರಹ್ಮನು ಮರೀಚಿಗೂ ಜ್ಯೇಷ್ಠನೆನಿಸಿದ ಒಬ್ಬನನ್ನು ತನ್ನ ಅಂಗುಷ್ಠದಿಂದ ಸೃಷ್ಟಿಸಿದನು. ಅವನೇ ದಕ್ಷನೆಂದು ಪ್ರಖ್ಯಾತಗೊಂಡ ಪ್ರಜಾಪತಿಯು.

ತಸ್ಯ ಪೂರ್ವಮಜಾಯಂತ ದಶ ತಿಸ್ರಶ್ಚ ಭಾರತ ।
ಪ್ರಜಾಪತೇರ್ದುಹಿತರಸ್ತಾಸಾಂ ಜ್ಯೇಷ್ಠಾಭವದ್ದಿತಿಃ ॥ ೨೨ ॥

ಆ ದಕ್ಷಪ್ರಜಾಪತಿಗೂ ಮೊದಲು ಹದಿಮೂರು ಮಂದಿ ಕನ್ಯೆಯರಾದರು. ಅವರಲ್ಲಿ ದಿತಿ ಎಂಬುವವಳು ಹಿರಿಯಳು.

ಸರ್ವಧರ್ಮವಿಶೇಷಜ್ಞಃ ಪುಣ್ಯಕೀರ್ತಿರ್ಮಹಾಯಶಾಃ ।
ಮಾರೀಚಃ ಕಶ್ಯಪಸ್ತಾತ ಸರ್ವಾಸಾಮಭವತ್ ಪತಿಃ ॥ ೨೩ ॥

ಸರ್ವಧರ್ಮವಿಶೇಷಜ್ಞನೂ, ಯಶಸ್ಸಂಪನ್ನನೂ, ಮರೀಚಿಪುತ್ರನೂ ಆದ ಕಶ್ಯಪನು ಆ ಕನ್ಯೆಯರೆಲ್ಲರಿಗೂ ಪತಿಯಾದನು.

ಉತ್ಪಾದ್ಯ ತು ಮಹಾಭಾಗಸ್ತಾಸಾಮವರಜಾ ದಶ ।
ದದೌ ಧರ್ಮಾಯ ಧರ್ಮಜ್ಞೋ ದಕ್ಷ ಏವ ಪ್ರಜಾಪತಿಃ ॥ ೨೪ ॥

ಬಳಿಕ ಆ ದಕ್ಷಪ್ರಜಾಪತಿ ಮತ್ತೂ ಹತ್ತು ಮಂದಿ ಕನ್ಯೆಯರನ್ನು ಪಡೆದು ಧರ್ಮದೇವನಿಗೆ ವಿವಾಹ ಮಾಡಿಕೊಟ್ಟನು.

ಧರ್ಮಸ್ಯ ವಸವಃ ಪುತ್ರಾ ರುದ್ರಾಶ್ಚಾಮಿತತೇಜಸಃ ।
ವಿಶ್ವೇದೇವಾಶ್ಚ ಸಾಧ್ಯಾಶ್ಚ ಮರುತ್ವಂತಶ್ಚ ಭಾರತ ॥ ೨೫ ॥

ಅಪರಾಸ್ತು ಯವೀಯಸ್ಯಸ್ತಾಭ್ಯೋಽನ್ಯಾಃ ಸಪ್ತವಿಂಶತಿಃ ।
ಸೋಮಸ್ತಾಸಾಂ ಮಹಾಭಾಗಃ ಸರ್ವಾಸಾಮಭವತ್ ಪತಿಃ ॥ ೨೬ ॥

ಆ ಧರ್ಮನಿಗೆ ವಸುಗಳು, ರುದ್ರರು, ವಿಶ್ವೇದೇವತೆಗಳು, ಸಾಧ್ಯರು, ಮರುತ್ವಂತರು ಪುತ್ರರಾದರು. ಬಳಿಕ ದಕ್ಷಪ್ರಜಾಪತಿಗೆ ಹತ್ತು ಮಂದಿ ಕನ್ಯೆಯರ ಬಳಿಕ ಪುನಃ ಇಪ್ಪತ್ತೇಳು ಮಂದಿ ಕನ್ಯೆಯರಾದರು. ಆ ಇಪ್ಪತ್ತೇಳು ಕನ್ಯೆಯರಿಗೂ ಚಂದ್ರನು ಪತಿಯಾದನು.

ಇತರಾಸ್ತು ವ್ಯಜಾಯಂತ ಗಂಧರ್ವಾಂಸ್ತುರಗಾನ್ ದ್ವಿಜಾನ್ ।
ಗಾಶ್ಚ ಕಿಂಪುರುಷಾನ್ ಮತ್ಸ್ಯಾನೌದ್ಭಿದಾಂಶ್ಚ ವನಸ್ಪತೀನ್ ॥ ೨೭

ಕಶ್ಯಪ ಪತ್ನಿಯರಲ್ಲಿ ಗಂಧರ್ವರು-ಕಿನ್ನರರು, ಕಿಂಪುರುಷರು, ಪಕ್ಷಿಗಳು, ಪಶುಗಳು, ಮತ್ಸ್ಯಗಳು, ಗಿಡ-ಮರ ಬಳ್ಳಿಗಳು ಮೊದಲಾದ ಸಸ್ಯವರ್ಗವೆಲ್ಲವೂ ಜನಿಸಿದವು.

ಆದಿತ್ಯಾನದಿತಿರ್ಜಜ್ಞೇ ದೇವಶ್ರೇಷ್ಠಾನ್ ಮಹಾಬಲಾನ್ ।
ತೇಷಾಂ ವಿಷ್ಣುರ್ವಾಮನೋಽಭೂದ್ ಗೋವಿಂದಶ್ಚಾಭವತ್ ಪ್ರಭುಃ॥

ಅದಿತಿಯಲ್ಲಿ ಮಹಾಬಲಾಢ್ಯರೂ ದೇವಶ್ರೇಷ್ಠರೂ ಆದ ಆದಿತ್ಯರು ಹುಟ್ಟಿದರು. ವಾಮನರೂಪಿಯಾದ ವಿಷ್ಣುವು ಆ ಆದಿತ್ಯರೆಲ್ಲರಿಗೂ ಪ್ರಮುಖನಾದನು.

ಆ ಮಧುನಾಮಕ ದೈತ್ಯನ ವಧೆಯಿಂದ ಸಮಸ್ತ ದೇವ-ದಾನವ-ಮಾನವರು ಸತ್ವವುಳ್ಳಂತಹ ವ್ಯಕ್ತಿಗಳಿಗೆಲ್ಲ ಶ್ರೇಷ್ಠನಾಗಿರುವ ಈ ಭಗವಂತನನ್ನು ಮಧುಸೂದನ ಎಂದೇ ಹೇಳುತ್ತಾರೆ.

ಬ್ರಹ್ಮಾ ತು ಸಸೃಜೇ ಪುತ್ರಾನ್ ಮಾನಸಾನ್ ದಕ್ಷಸಪ್ತಮಾನ್ ।
ಮರೀಚಿಮತ್ರ್ಯಂಗಿರಸೌ ಪುಲಸ್ತ್ಯಂ ಪುಲಹಂ ಕ್ರತುಮ್ ॥ ೧೯ ॥

ಬಳಿಕ ಚತುರ್ಮುಖ ಬ್ರಹ್ಮನು ಮರೀಚಿ ಮೊದಲಾದ ಕ್ರತುವಿನ ತನಕ ಏಳು ಮಂದಿ ಮಾನಸ ಪುತ್ರರನ್ನು ಸೃಷ್ಟಿಸಿದನು. ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ವಸಿಷ್ಠ, ಕ್ರತುಗಳು ಬ್ರಹ್ಮನ ಮಾನಸ ಪುತ್ರರು.

ಮರೀಚಿಃ ಕಶ್ಯಪಂ ತಾತ ಪುತ್ರಂ ಚಾಸೃಜದಗ್ರಜಮ್ ।
ಮಾನಸಂ ಜನಯಾಮಾಸ ತೈಜಸಂ ಬ್ರಹ್ಮಸತ್ತಮಮ್ ॥ ೨೦ ॥

ಬಳಿಕ ಮರೀಚಿಯು ತನಗೆ ಮೊದಲನೆಯ ಮಗನನ್ನಾಗಿ ಕಶ್ಯಪನನ್ನು ಪಡೆದನು. ಈ ಕಶ್ಯಪನ ಸೃಷ್ಟಿಯು ಮನಸ್ಸಿನಿಂದಲೇ ಆಗಿದೆ. ತೇಜೋರೂಪನಾದ ಈತನು ಬ್ರಹ್ಮಜ್ಞಾನಿ ಎನಿಸಿದ್ದಾನೆ.

ಅಂಗುಷ್ಠಾದಸೃಜದ್ ಬ್ರಹ್ಮಾ ಮರೀಚೇರಪಿ ಪೂರ್ವಜಮ್ ।
ಸೋಽಭವದ್ಭರತಶ್ರೇಷ್ಠ ದಕ್ಷೋ ನಾಮ ಪ್ರಜಾಪತಿಃ ॥ ೨೧ ॥

ಬ್ರಹ್ಮನು ಮರೀಚಿಗೂ ಜ್ಯೇಷ್ಠನೆನಿಸಿದ ಒಬ್ಬನನ್ನು ತನ್ನ ಅಂಗುಷ್ಠದಿಂದ ಸೃಷ್ಟಿಸಿದನು. ಅವನೇ ದಕ್ಷನೆಂದು ಪ್ರಖ್ಯಾತಗೊಂಡ ಪ್ರಜಾಪತಿಯು.

ತಸ್ಯ ಪೂರ್ವಮಜಾಯಂತ ದಶ ತಿಸ್ರಶ್ಚ ಭಾರತ ।
ಪ್ರಜಾಪತೇರ್ದುಹಿತರಸ್ತಾಸಾಂ ಜ್ಯೇಷ್ಠಾಭವದ್ದಿತಿಃ ॥ ೨೨ ॥

ಆ ದಕ್ಷಪ್ರಜಾಪತಿಗೂ ಮೊದಲು ಹದಿಮೂರು ಮಂದಿ ಕನ್ಯೆಯರಾದರು. ಅವರಲ್ಲಿ ದಿತಿ ಎಂಬುವವಳು ಹಿರಿಯಳು.

ಸರ್ವಧರ್ಮವಿಶೇಷಜ್ಞಃ ಪುಣ್ಯಕೀರ್ತಿರ್ಮಹಾಯಶಾಃ ।
ಮಾರೀಚಃ ಕಶ್ಯಪಸ್ತಾತ ಸರ್ವಾಸಾಮಭವತ್ ಪತಿಃ ॥ ೨೩ ॥

ಸರ್ವಧರ್ಮವಿಶೇಷಜ್ಞನೂ, ಯಶಸ್ಸಂಪನ್ನನೂ, ಮರೀಚಿಪುತ್ರನೂ ಆದ ಕಶ್ಯಪನು ಆ ಕನ್ಯೆಯರೆಲ್ಲರಿಗೂ ಪತಿಯಾದನು.

ಉತ್ಪಾದ್ಯ ತು ಮಹಾಭಾಗಸ್ತಾಸಾಮವರಜಾ ದಶ ।
ದದೌ ಧರ್ಮಾಯ ಧರ್ಮಜ್ಞೋ ದಕ್ಷ ಏವ ಪ್ರಜಾಪತಿಃ ॥ ೨೪ ॥

ಬಳಿಕ ಆ ದಕ್ಷಪ್ರಜಾಪತಿ ಮತ್ತೂ ಹತ್ತು ಮಂದಿ ಕನ್ಯೆಯರನ್ನು ಪಡೆದು ಧರ್ಮದೇವನಿಗೆ ವಿವಾಹ ಮಾಡಿಕೊಟ್ಟನು.

ಧರ್ಮಸ್ಯ ವಸವಃ ಪುತ್ರಾ ರುದ್ರಾಶ್ಚಾಮಿತತೇಜಸಃ ।
ವಿಶ್ವೇದೇವಾಶ್ಚ ಸಾಧ್ಯಾಶ್ಚ ಮರುತ್ವಂತಶ್ಚ ಭಾರತ ॥ ೨೫ ॥

ಅಪರಾಸ್ತು ಯವೀಯಸ್ಯಸ್ತಾಭ್ಯೋಽನ್ಯಾಃ ಸಪ್ತವಿಂಶತಿಃ ।
ಸೋಮಸ್ತಾಸಾಂ ಮಹಾಭಾಗಃ ಸರ್ವಾಸಾಮಭವತ್ ಪತಿಃ ॥ ೨೬ ॥

ಆ ಧರ್ಮನಿಗೆ ವಸುಗಳು, ರುದ್ರರು, ವಿಶ್ವೇದೇವತೆಗಳು, ಸಾಧ್ಯರು, ಮರುತ್ವಂತರು ಪುತ್ರರಾದರು. ಬಳಿಕ ದಕ್ಷಪ್ರಜಾಪತಿಗೆ ಹತ್ತು ಮಂದಿ ಕನ್ಯೆಯರ ಬಳಿಕ ಪುನಃ ಇಪ್ಪತ್ತೇಳು ಮಂದಿ ಕನ್ಯೆಯರಾದರು. ಆ ಇಪ್ಪತ್ತೇಳು ಕನ್ಯೆಯರಿಗೂ ಚಂದ್ರನು ಪತಿಯಾದನು.

ಇತರಾಸ್ತು ವ್ಯಜಾಯಂತ ಗಂಧರ್ವಾಂಸ್ತುರಗಾನ್ ದ್ವಿಜಾನ್ ।
ಗಾಶ್ಚ ಕಿಂಪುರುಷಾನ್ ಮತ್ಸ್ಯಾನೌದ್ಭಿದಾಂಶ್ಚ ವನಸ್ಪತೀನ್ ॥ ೨೭

ಕಶ್ಯಪ ಪತ್ನಿಯರಲ್ಲಿ ಗಂಧರ್ವರು-ಕಿನ್ನರರು, ಕಿಂಪುರುಷರು, ಪಕ್ಷಿಗಳು, ಪಶುಗಳು, ಮತ್ಸ್ಯಗಳು, ಗಿಡ-ಮರ ಬಳ್ಳಿಗಳು ಮೊದಲಾದ ಸಸ್ಯವರ್ಗವೆಲ್ಲವೂ ಜನಿಸಿದವು.

ಆದಿತ್ಯಾನದಿತಿರ್ಜಜ್ಞೇ ದೇವಶ್ರೇಷ್ಠಾನ್ ಮಹಾಬಲಾನ್ ।
ತೇಷಾಂ ವಿಷ್ಣುರ್ವಾಮನೋಽಭೂದ್ ಗೋವಿಂದಶ್ಚಾಭವತ್ ಪ್ರಭುಃ॥

ಅದಿತಿಯಲ್ಲಿ ಮಹಾಬಲಾಢ್ಯರೂ ದೇವಶ್ರೇಷ್ಠರೂ ಆದ ಆದಿತ್ಯರು ಹುಟ್ಟಿದರು. ವಾಮನರೂಪಿಯಾದ ವಿಷ್ಣುವು ಆ ಆದಿತ್ಯರೆಲ್ಲರಿಗೂ ಪ್ರಮುಖನಾದನು.

ತಸ್ಯ ವಿಕ್ರಮಣಾದೇವ ದೇವಾನಾಂ ಶ್ರೀರ್ವ್ಯವರ್ಧತ ।
ದಾನವಾಶ್ಚ ಪರಾಭೂತಾ ದೈತೇಯೀ ಚಾಸುರೀ ಪ್ರಜಾ ॥ ೨೯ ॥

ಈ ವಾಮನರೂಪಿಯಾದ ಭಗವಂತನ ಪರಾಕ್ರಮದಿಂದಲೇ ದೇವತೆಗಳ ಸಂಪತ್ತು ವೃದ್ಧಿಯನ್ನು ಪಡೆದು ದಾನವರೆಲ್ಲರೂ ಸೋತುಹೋದರು.

ವಿಪ್ರಚಿತ್ತಿಪ್ರಧಾನಾಂಶ್ಚ ದಾನವಾನಸೃಜದ್ ದನುಃ ।
ದಿತಿಸ್ತು ಸರ್ವಾನಸುರಾನ್ ಮಹಾಸತ್ತ್ವಾನ್ ವ್ಯಜಾಯತ ॥ ೩೦ ॥

ದನುವೆಂಬುವಳಲ್ಲಿ ವಿಪ್ರಚಿತ್ತಿ ಮೊದಲಾದ ದಾನವರು ಹುಟ್ಟಿದರು. ಅಸುರರನ್ನೆಲ್ಲ ಪಡೆದವಳು ದಿತಿದೇವಿ. ಮಹಾಪರಾಕ್ರಮಶಾಲಿಯಾದ ಅಸುರರಿಗೆಲ್ಲಾ ದಿತಿಯೇ ತಾಯಿಯಾದಳು.

ತತಃ ಸಸರ್ಜ ಭಗವಾನ್ ಮೃತ್ಯುಂ ಲೋಕಭಯಂಕರಮ್ ।
ಹರ್ತಾರಂ ಸರ್ವಭೂತಾನಾಂ ಸಸರ್ಜ ಚ ಜನಾರ್ದನಃ ॥ ೩೧ ॥

ಹೀಗೆ ದೇವ-ದಾನವರ ಸೃಷ್ಟಿಗಳೆಲ್ಲ ನಡೆದ ಬಳಿಕ, ಲೋಕಭಯಂಕರನೂ, ಸಮಸ್ತಭೂತಗಳ ಪ್ರಾಣ ಅಪಹಾರಕನೂ ಆದ ಮೃತ್ಯುವನ್ನು ಸೃಷ್ಟಿಸಿದನು.

ಅಹೋರಾತ್ರಂ ಚ ಕಾಲಂ ಚ ಯಥರ್ತು ಮಧುಸೂದನಃ ।
ಪೂರ್ವಾಹ್ಣಂ ಚಾಪರಾಹ್ಣಂ ಚ ಸರ್ವಮೇವಾನ್ವಕಲ್ಪಯತ್ ॥ ೩೨ ॥

ಬಳಿಕ ಅಹೋರಾತ್ರಿಗಳನ್ನು, ಕಾಲವನ್ನು, ಋತುಗಳನ್ನು, ಪೂರ್ವಾಹ್ಣ, ಅಪರಾಹ್ಣ- ಇವೆಲ್ಲವನ್ನೂ ಭಗವಂತನು ಸೃಷ್ಟಿಸಿದನು.

ಬುದ್ಧ್ಯಾಪಃ ಸೋಽಸೃಜನ್ಮೇಘಾಂಸ್ತಥಾ ಸ್ಥಾವರಜಂಗಮಾನ್ ।
ಪೃಥಿವೀಂ ಸೋಽಸೃಜದ್ ವಿಶ್ವಾಂ ಸಹಿತಾಂ ಭೂರಿತೇಜಸಾ ॥ ೩೩ ॥

ಬಳಿಕ ನೀರುಗಳನ್ನು ಪಡೆದು ಅದಕ್ಕೆ ಆಶ್ರಯವಾದ ಮೇಘಗಳನ್ನೂ, ಸ್ಥಾವರ-ಜಂಗಮಗಳನ್ನೂ, ಸಮಸ್ತ ಪೃಥಿವೀ ಮಂಡಲವನ್ನು ತನ್ನ ಪರಾಕ್ರಮದಿಂದ, ಹೀಗೆ ವಿಶ್ವವನ್ನು ಸೃಷ್ಟಿಸಿದನು.

ತತಃ ಕೃಷ್ಣೋ ಮಹಾಬಾಹುಃ ಪುನರೇವ ಯುಧಿಷ್ಠಿರ ।
ಬ್ರಾಹ್ಮಣಾನಾಂ ಶತಂ ಶ್ರೇಷ್ಠಂ ಮುಖಾದಸೃಜತ ಪ್ರಭುಃ ॥ ೩೪ ॥

ಬಳಿಕ ಮಹಾಭಾಗನಾದ ಕೃಷ್ಣನು ಪುನಃ ನೂರು ಮಂದಿ ಶ್ರೇಷ್ಠ ಬ್ರಾಹ್ಮಣರನ್ನು ತನ್ನ ಮುಖದಿಂದಲೇ ಸೃಷ್ಟಿಸಿದನು.

ಬಾಹುಭ್ಯಾಂ ಕ್ಷತ್ರಿಯಶತಂ ವೈಶ್ಯಾನಾಮೂರುತಃ ಶತಮ್ ।
ಪದ್ಭ್ಯಾಂ ಶೂದ್ರಶತಂ ಚೈವ ಕೇಶವೋ ಭರತರ್ಷಭ ॥ ೩೫ ॥

ತನ್ನ ಬಾಹುಗಳಿಂದ ನೂರು ಕ್ಷತ್ರಿಯರನ್ನು, ತನ್ನ ತೊಡೆಗಳಿಂದ ನೂರು ವೈಶ್ಯರನ್ನು, ಪಾದಗಳಿಂದ ನೂರು ಶೂದ್ರರನ್ನು ಕೇಶವನು ಸೃಷ್ಟಿಸಿದನು.

ಸ ಏವಂ ಚತುರೋ ವರ್ಣಾನ್ ಸಮುತ್ಪಾದ್ಯ ಮಹಾಯಶಾಃ ।
ಅಧ್ಯಕ್ಷಂ ಸರ್ವಭೂತಾನಾಂ ಧಾತಾರಮಕರೋತ್ ಪ್ರಭುಃ ॥ ೩೬ ॥

ಮಹಾತಪಸ್ವಿಯಾದ ಭಗವಂತನು ಹೀಗೆ ನಾಲ್ಕು ವರ್ಣಗಳನ್ನು ಸೃಷ್ಟಿಸಿ ಸಮಸ್ತ ಭೂತಗಳಿಗೂ ಚತುರ್ಮುಖ ಬ್ರಹ್ಮನನ್ನು ಅಧ್ಯಕ್ಷನನ್ನಾಗಿ ನಿಯಮಿಸಿದನು.

ವೇದವಿದ್ಯಾವಿಧಾತಾರಂ ಬ್ರಹ್ಮಾಣಮಮಿತದ್ಯುತಿಮ್ ।
ಭೂತಮಾತೃಗಣಾಧ್ಯಕ್ಷಂ ವಿರೂಪಾಕ್ಷಂ ಚ ಸೋಽಸೃಜತ್ ॥ ೩೭ ॥

ವೇದವಿದ್ಯೆಗಳನ್ನು ನಿರ್ಮಾಣ ಮಾಡುವ, ಅಮಿತದ್ಯುತಿಯಾದ ಚತುರ್ಮುಖ ಬ್ರಹ್ಮನು ಸರ್ವಭೂತಗಳಿಗೂ ಅಧ್ಯಕ್ಷನಾದನು. ಭೂತಗಣಗಳಿಗೂ, ಮಾತೃಗಣಗಳಿಗೂ ವಿರೂಪಾಕ್ಷನನ್ನು ಅಧ್ಯಕ್ಷನನ್ನಾಗಿ ಮಾಡಿದನು.

ಶಾಸಿತಾರಂ ಚ ಪಾಪಾನಾಂ ಪಿತೄಣಾಂ ಸಮವರ್ತಿನಮ್ ।
ಅಸೃಜತ್ ಸರ್ವಭೂತಾತ್ಮಾ ನಿಧಿಪಂ ಚ ಧನೇಶ್ವರಮ್ ॥ ೩೮ ॥

ಪಾಪಗಳನ್ನು ಶಿಕ್ಷಿಸಲು ಪಾಪಿಗಳಿಗೆ ಪಿತೃದೇವನಾದ ಯಮನನ್ನು, ಧನಾದಿಪತಿಯಾಗಿ ಕುಬೇರನನ್ನು ನಿಯೋಜಿಸಿದನು.

ಯಾದಸಾಮಸೃಜನ್ನಾಥಂ ವರುಣಂ ಚ ಜಲೇಶ್ವರಮ್ ।
ವಾಸವಂ ಸರ್ವದೇವಾನಾಮಧ್ಯಕ್ಷಮಕರೋತ್ ಪ್ರಭುಃ ॥ ೩೯ ॥

ನೀರಿಗೂ, ಜಲಚರಪ್ರಾಣಿಗಳಿಗೂ ಅಧಿಪತಿಯಾಗಿ ವರುಣನನ್ನೂ, ದೇವಾಧಿಪತಿಯಾಗಿ ಇಂದ್ರನನ್ನು ನಿಯಮಿಸಿದನು.

ಯಾವದ್ಯಾವದಭೂಚ್ಛ್ರದ್ಧಾ ದೇಹಂ ಧಾರಯಿತುಂ ನೃಣಾಮ್ ।
ತಾವತ್ತಾವದಜೀವಂಸ್ತೇ ನಾಸೀದ್ಯಮಕೃತಂ ಭಯಮ್ ॥ ೪೦ ॥

ಹೀಗೆ ಪುರುಷರಿಗೆ ಎಲ್ಲಿಯ ತನಕ ದೇಹವನ್ನು ಧರಿಸಲು ಇಷ್ಟವಿರುತ್ತದೋ ಅಲ್ಲಿಯ ತನಕವೂ ಅವರು ಬದುಕುತ್ತಿದ್ದರು. ಅವರಿಗೆ ಯಮನ ಭಯವು ಸೃಷ್ಟಿಯ ಆರಂಭದಲ್ಲಿ ಇರಲಿಲ್ಲ.

ನ ಚೈಷಾಂ ಮೈಥುನೋ ಧರ್ಮೋ ಬಭೂವ ಭರತರ್ಷಭ ।
ಸಂಕಲ್ಪಾದೇವ ಚೈತೇಷಾಮಪತ್ಯಮುದಪದ್ಯತ ॥ ೪೧ ॥

ಮತ್ತು ಸ್ತ್ರೀ-ಪುರುಷರ ಸಂಯೋಗವಿಲ್ಲದೆ ಸಂಕಲ್ಪಮಾತ್ರದಿಂದ ಗರ್ಭೋತ್ಪತ್ತಿಯು ಆಗುತ್ತಿತ್ತು.

ತತ್ರ ತ್ರೇತಾಯುಗೇ ಕಾಲೇ ಸಂಕಲ್ಪಾಜ್ಜಾಯತೇ ಪ್ರಜಾ ।
ನ ಹ್ಯಭೂನ್ಮೈಥುನೋ ಧರ್ಮಸ್ತೇಷಾಮಪಿ ಜನಾಧಿಪ ॥ ೪೨ ॥

ಬಳಿಕ ಮೊದಲನೆಯ ಕೃತಯುಗ ಧರ್ಮವು ಹೀಗೆ ನಡೆದು ತ್ರೇತಾಯುಗ ಬರುತ್ತಿರಲು ಸ್ಪರ್ಶಮಾತ್ರದಿಂದ ಪ್ರಜೋತ್ಪತ್ತಿಯಾಗುತ್ತಿತ್ತು. ಆ ಯುಗದಲ್ಲಿಯೂ ಪ್ರಜೆಗಳ ಉತ್ಪತ್ತಿಗೆ ಮೈಥುನ ಧರ್ಮವು ಅವಲಂಬಿತವಾಗಿರಲಿಲ್ಲ.

ದ್ವಾಪರೇ ಮೈಥುನೋ ಧರ್ಮಃ ಪ್ರಜಾನಾಮಭವನ್ನಪ ।
ತಥಾ ಕಲಿಯುಗೇ ರಾಜನ್ ದ್ವಂದ್ವಮಾಪೇದಿರೇ ಜನಾಃ ॥ ೪೩ ॥

ನಂತರ ದ್ವಾಪರಯುಗದಲ್ಲಿ ಸ್ತ್ರೀಪುರುಷರ ಸಂಯೋಗದಿಂದ ಪ್ರಜೋತ್ಪತ್ತಿ ಎಂಬ ವ್ಯವಸ್ಥೆಯು ಏರ್ಪಟ್ಟಿತು. ನಂತರ ಕಲಿಯುಗ ಪ್ರವೇಶ ಕಾಲಕ್ಕೆ ಪೂರ್ಣವಾಗಿ ಪರಸ್ಪರ ಸಮಾಗಮದಿಂದಲೇ ಸೃಷ್ಟಿ ಎಂಬ ವ್ಯವಸ್ಥೆಯು ದೃಢವಾಯಿತು.

ಏಷ ಭೂತಪತಿಸ್ತಾತ ಸ್ವಧ್ಯಕ್ಷಶ್ಚ ಪ್ರಕೀರ್ತಿತಃ ।
ನಿರಧ್ಯಕ್ಷಾಂಸ್ತು ಕೌಂತೇಯ ಕೀರ್ತಯಿಷ್ಯಾಮಿ ತಾನಪಿ ॥ ೪೪ ॥

ಯುಧಿಷ್ಠಿರನೇ, ಇಲ್ಲಿಯ ತನಕವೂ ಭೂತಪತಿಗಳನ್ನು ಅವುಗಳ ಅಧ್ಯಕ್ಷನಾದ ಭಗವಂತನ ಮಹಿಮೆಯನ್ನು ಶ್ರೇಷ್ಠ ಅಧ್ಯಕ್ಷನ ಮಹಿಮೆಯ ಜೊತೆಗೆ ವರ್ಣಿಸಿದ್ದೇನೆ. ಮುಂದೆ ಪಾಪಕಾರ್ಯರತರಾಗಿ ನರಕವನ್ನೇ ಹೊಂದುವ ಜನರು ಯಾರೆಂಬುದನ್ನು ವರ್ಣಿಸುತ್ತೇನೆ, ಕೇಳು.

ದಕ್ಷಿಣಾಪಥಜನ್ಮಾನಃ ಸರ್ವೇ ತಲವರಾಂಧ್ರಕಾಃ ।
ಉತ್ಸಾಃ ಪುಲಿಂದಾಃ ಶಬರಾಶ್ಚೂಚುಪಾ ಮಂಡಪೈಃ ಸಹ ॥ ೪೫ ॥

ಉತ್ತರಾಪಥಜನ್ಮಾನಃ ಕೀರ್ತಯಿಷ್ಯಾಮಿ ತಾನಪಿ ।
ಯೌನಕಾಂಬೋಜಗಾಂಧಾರಾಃ ಕಿರಾತಾ ಬರ್ಬರೈಃ ಸಹ ॥ ೪೬ ॥

ದಕ್ಷಿಣಾಪಥದಲ್ಲಿ ನಿನಗೆ ಕಪ್ಪವನ್ನೊಪ್ಪಿಸುತ್ತಿರುವ ಆಂಧ್ರರು, ಉತ್ಸರು, ಪುಲಿಂದರು, ಶಬರರು, ಚೂಚುಪರು, ಮದ್ರಕರು ಇವರ ಜೊತೆಗೆ ಉತ್ತರಾಪಥದಲ್ಲಿ ಜನ್ಮವನ್ನು ತಾಳಿದ ವ್ಯಕ್ತಿಗಳನ್ನು ಹೇಳುತ್ತೇನೆ. ಯೌನಕರು, ಕಾಂಭೋಜರು, ಗಾಂಧಾರರು, ಕಿರಾತರು, ಬರ್ಬರರು ಎಲ್ಲಾ ಒಂದೇ ಗುಂಪಿನವರಾಗಿದ್ದಾರೆ.

ಏತೇ ಪಾಪಕೃತಸ್ತಾತ ಚರಂತಿ ಪೃಥಿವೀಮಿಮಾಮ್ ।
ಶ್ವಕಾಕಬಲಗೃಧ್ರಾಣಾಂ ಸಧರ್ಮಾಣೋ ನರಾಧಿಪ ॥ ೪೭ ॥

ಇವರೆಲ್ಲರೂ ಬಕ, ಗೃಧ್ರ, ಚಂಡಾಲಾದಿಗಳು ಹೇಗೋ ಹಾಗೆ ಜನ್ಮಬಾಧ್ಯರಾಗಿ, ಪಾಪ ಮಾಡಿದವರಾಗಿ ಈ ಭೂಮಿಯಲ್ಲಿ ಸಂಚರಿಸುತ್ತಾರೆ.

ನೈತೇ ಕೃತಯುಗೇ ತಾತ ಚರಂತಿ ಪೃಥಿವೀಮಿಮಾಮ್ ।
ತ್ರೇತಾಪ್ರಭೃತಿ ವರ್ತಂತೇ ತೇ ಜನಾ ಭರತರ್ಷಭ ॥ ೪೮ ॥

ಕೃತಯುಗದಲ್ಲಿ ಇಂತಹ ಕ್ರೂರಜನರ ಸುಳಿವೇ ಇರುವುದಿಲ್ಲ. ತ್ರೇತಾಯುಗದಿಂದ ಆರಂಭಿಸಿ ಸ್ವಲ್ಪ ಸ್ವಲ್ಪವಾಗಿ ಈ ಪಾಪಕರ್ಮಿಗಳು ಅಭಿವೃದ್ಧಿಯನ್ನು ಹೊಂದುತ್ತಾರೆ.

ತತಸ್ತಸ್ಮಿನ್ ಮಹಾಘೋರೇ ಸಂಧ್ಯಾಕಾಲೇ ಯುಗಾಂತಿಕೇ ।
ರಾಜಾನಃ ಸಮಸಜ್ಜಂತ ಸಮಾಸಾದ್ಯೇತರೇತರಮ್ ॥ ೪೯ ॥

ತ್ರೇತಾ, ದ್ವಾಪರ ಸಂಧಿ ಎಂಬ ಕ್ರೂರಕಾಲಗಳಲ್ಲಿ ಅಸುರ ಭಾವದಿಂದ ರಾಜರು ಒಬ್ಬರ ಮೇಲೆ ಒಬ್ಬರು ಬಿದ್ದು ಯುದ್ಧವನ್ನು ಮಾಡುತ್ತಾರೆ.

ಐಂದ್ರಂ ರೂಪಂ ಸಮಾಸ್ಥಾಯ ಹ್ಯಸುರೇಭ್ಯೋ ಚರನ್ಮಹೀಮ್ ।
ಸ ಏವ ಭಗವಾನ್ ದೇವೋ ವೇದಿತ್ವಂ ಚ ಗತಾ ಮಹೀ ॥ ೫೦ ॥

ಇಂತಹ ವ್ಯಕ್ತಿಗಳನ್ನು ಅಡಗಿಸುವುದಕ್ಕಾಗಿ ದೇವದೇವನಾದ ಭಗವಂತನು ಇಂದ್ರರೂಪದಿಂದ ಭೂಮಿಯಲ್ಲಿ ಸಂಚರಿಸತೊಡಗಿದನು. ಭೂಮಿಯು ಆ ಸಮಯದಲ್ಲಿ ಯುದ್ಧವೆಂಬ ಯಾಗಕ್ಕೆ ವೇದಿಕೆಯಂತಿತ್ತು.

ಏವಂಭೂತೇ ತದಾ ಸೃಷ್ಟಿರ್ನಾರಸಿಂಹಾದಯಃ ಕ್ರಮಾತ್ ।
ಪ್ರಾದುರ್ಭಾವಾಃ ಸ್ಮೃತಾ ವಿಷ್ಣೋರ್ಜಗತೀರಕ್ಷಣಾಯ ವೈ ॥ ೫೧ ॥

ಲೋಕದಲ್ಲಿ ಇಂತಹ ಕಠಿಣ ಸ್ಥಿತಿ ಎರಗಿದಾಗಲೇ ಭಗವಂತನು ನರಸಿಂಹನೇ ಮೊದಲಾದ ಅವತಾರಗಳನ್ನು ತಳೆದು ದುಷ್ಟರನ್ನು ಸಂಹರಿಸಬೇಕಾಯಿತು. ಜಗತ್ತಿನ ರಕ್ಷಣೆಯು ಈ ಮೂಲಕ ಅನಿವಾರ್ಯವಾಗಿತ್ತು.

ಏಷ ಕೃಷ್ಣೋ ಮಹಾಯೋಗೀ ತತ್ತತ್ಕಾರ್ಯಾನುರೂಪಣಮ್ ।
ಹಿರಣ್ಯಕಶಿಪುಂ ದೈತ್ಯಂ ಹಿರಣ್ಯಾಕ್ಷಂ ತಥೈವ ಚ ॥ ೫೨ ॥

ರಾವಣಂ ಚ ಮಹಾದೈತ್ಯಂ ಹತ್ವಾಸೌ ಪುರುಷೋತ್ತಮಃ ।
ಭೂಮೇರ್ದುಃಖೋಪನಾಶಾರ್ಥಂ ಬ್ರಹ್ಮಶಕ್ರಾದಿಭಿಃ ಸ್ತುತಃ ॥ ೫೩ ॥

ಆತ್ಮನೋऽಂಗಾನ್ಮಹಾತೇಜಾ ಉದ್ಬಬರ್ಹ ಜನಾರ್ದನಃ ।
ಸಿತಕೃಷ್ಣೌ ಮಹಾರಾಜ ಕೇಶೌ ಹರಿರುದಾರಧೀಃ ॥ ೫೪ ॥

ಇಂತಹ ಸ್ಥಿತಿಯಲ್ಲಿ ಮಹಾಯೋಗಿಯಾದ ಭಗವಾನ್ ಕೃಷ್ಣನು ಆಯಾ ಲೋಕಕಾರ್ಯಕ್ಕನುಸಾರವಾಗಿ ಅವತಾರವನ್ನು ಮಾಡುತ್ತಾನೆ. ಹಿರಣ್ಯಕಶಿಪು ದೈತ್ಯನನ್ನೂ, ಅದರಂತೆ ಹಿರಣ್ಯಾಕ್ಷ ದೈತ್ಯನನ್ನು, ರಾವಣನೆಂಬ ಮಹಾದೈತ್ಯನನ್ನು ಪುರುಷೋತ್ತಮನು ಕೊಂದು, ಭೂಮಿಯ ದುಃಖವನ್ನು ಉಪಶಮನ ಮಾಡಲು ಬ್ರಹ್ಮ- ರುದ್ರ-ಇಂದ್ರಾದಿಗಳಿಂದ ಸ್ತುತನಾಗಿ ತನ್ನ ದೇಹದಿಂದಲೇ ಮಹಾತೇಜಸ್ವಿಯಾದ

ಜನಾರ್ದನನು ಈ ಭೂಮಿಯನ್ನು ಧರಿಸಿದ್ದಾನೆ. ಉತ್ಕೃಷ್ಟವಾದ ಬುದ್ಧಿಯುಳ್ಳ ಭಗವಂತನು ಬಿಳಿ ಮತ್ತು ಕೃಷ್ಣ ಎಂಬ ಕೇಶಗಳಿಂದ ಈ ಜಗತ್ತನ್ನು ರಕ್ಷಿಸುತ್ತಿದ್ದಾನೆ.

ವಸುದೇವಸ್ಯ ದೇವಕ್ಯಾಮೇಷ ಜಾತ ಇಹೋತ್ತಮಃ ।
ದೇಹವಾನಿಹ ವಿಶ್ವಾತ್ಮಾ ಸಂಬಂಧೀ ತೇ ಜನಾರ್ದನಃ ॥ ೫೫ ॥

ಆವಿರ್ಬಭೂವ ಯೋಗೀಂದ್ರೋ ಮನೋತೀತೋ ಜಗತ್ಪತಿಃ ।
ಅಚಿಂತ್ಯಃ ಪುರುಷವ್ಯಾಘ್ರ ನೈವ ಕೇವಲಮಾನುಷಃ ॥ ೫೬ ॥

ಅವರಲ್ಲಿ ಭಗವಂತನ ಅವತಾರವಾದ ಕೃಷ್ಣನು ನಿನಗೆ ಬಂಧುವಾಗಿಯೇ ಇದ್ದಾನೆ. ಅವನು ಅಪ್ರಮೇಯನೂ, ಅಚಿಂತ್ಯನೂ, ಯೋಗೀಶ್ವರನೂ, ಜಗತ್ಪತಿಯೂ ಆಗಿದ್ದು ವಸುದೇವ-ದೇವಕಿಯರನ್ನು ನೆಪಮಾಡಿಕೊಂಡು ಅವತಾರ ಮಾಡಿದ್ದಾನೆ. ಲೀಲಾಮಾನುಷವಿಗ್ರಹನಾದ ಭಗವಂತನು ಸಾಮಾನ್ಯ ಮನುಷ್ಯರಂತೆ ಕಾಣಿಸಿದರೂ ಅವನು ಮನುಷ್ಯನಲ್ಲ.

ಅವ್ಯಕ್ತಾದಿವಿಶೇಷಾಂತಂ ಪರಿಮಾಣಾರ್ಥಸಂಯುತಮ್ ।
ಕ್ರೀಡಾ ಹರೇರಿದಂ ಸರ್ವಂ ಕ್ಷರಮಿತ್ಯೇವ ಧಾರ್ಯತಾಮ್ ॥ ೫೭ ॥

ಅವ್ಯಕ್ತದಿಂದ ಆರಂಭಿಸಿ ವಿಶೇಷದ ತನಕ ವಿವಿಧ ಪರಿಮಾಣವುಳ್ಳ ಆಕಾರಗಳುಳ್ಳ ಸಮಸ್ತ ಜಗತ್ತು ಶ್ರೀಹರಿಯ ಲೀಲೆಯಿಂದಲೇ ನಡೆಯುತ್ತಿದೆ ಎಂದು ತಿಳಿ. ಈ ಜಗತ್ತೆಲ್ಲವೂ ನಶ್ವರವಾದವು.

ಅಕ್ಷರಂ ತತ್ಪರಂ ನಿತ್ಯಂ ವೈರೂಪ್ಯಂ ಜಗತೋ ಹರೇಃ ।
ತದ್ವಿದ್ಧಿ ರೂಪಮತುಲಮಮೃತತ್ವಂ ಭವಂಜಿತಮ್ ॥ ೫೮ ॥

ಭಗವಂತನ ರೂಪವು ಎಂದೆಂದಿಗೂ ನಾಶರಹಿತವಾದುದು. ಕ್ಷರಾಕ್ಷರ ಜಗತ್ತಿಗಿಂತಲೂ ವಿಲಕ್ಷಣವಾದುದು. ಇಂತಹ ಅಸಮಾನವಾದ ಸರ್ವೋತ್ತಮ ರೂಪವನ್ನು ತಿಳಿದಾಗಲೇ ನೀನು ಮೋಕ್ಷಸಾಮ್ರಾಜ್ಯವನ್ನು ಧರಿಸಲು ಸಾಧ್ಯವಾಗುತ್ತದೆ.

ತದೇವ ಕೃಷ್ಣೋ ದಾಶಾರ್ಹಃ ಶ್ರೀಮಾನ್ ಶ್ರೀವತ್ಸಲಕ್ಷಣಃ ।
ನ ಭೂತಸೃಷ್ಟಿಸಂಸ್ಥಾನಂ ದೇಹೋಽಸ್ಯ ಪರಮಾತ್ಮನಃ ॥ ೫೯ ॥

ಆ ಮೂಲರೂಪಿಯಾದ ನಾರಾಯಣನೇ ಕೃಷ್ಣನಾಗಿ ಯಾದವಕುಲದಲ್ಲಿ ಕಾಂತಿಯುಕ್ತನಾಗಿ, ಶ್ರೀವತ್ಸಲಕ್ಷಣದಿಂದ ಕೂಡಿದವನಾಗಿ ಇದ್ದಾನೆ. ಅವನ ದೇಹವು ಪಂಚಭೂತಗಳ ವಿಕಾರದಿಂದ ಉಂಟಾಗಿರುವುದಿಲ್ಲ.

ದೇಹವಾನಿವ ಯೋ ವಿಷ್ಣುರಸೌ ಮಾಯಾಮಯೋ ಹರಿಃ ।
ಆತ್ಮನೋ ಲೋಕರಕ್ಷಾರ್ಥಂ ಧ್ಯಾಹಿ ನಿತ್ಯಂ ಸನಾತನಮ್ ॥ ೬೦ ॥

ಅವನು ನಮ್ಮೆಲ್ಲರಿಗೂ ಸಾಮಾನ್ಯದೇಹಿಯಂತೆ ತೋರಿದರೂ ವಿಷ್ಣುವು ತನ್ನ ಇಚ್ಛಾಶಕ್ತಿಯಿಂದ ಹಾಗೆ ತೋರಿಸುತ್ತಿದ್ದಾನೆ. ಅವನು ಲೋಕರಕ್ಷಣೆಗೋಸ್ಕರವೇ ಬಂದಿರುವ ಸನಾತನನೆಂದು ನಿತ್ಯವೂ ಅವನನ್ನು ಧ್ಯಾನಿಸು.

ಅಂಗಾನಿ ಚತುರೋ ವೇದಾ ಮೀಮಾಂಸಾ ನ್ಯಾಯವಿಸ್ತರಃ ।
ಇತಿಹಾಸಪುರಾಣಾನಿ ಧರ್ಮಾಃ ಸ್ವಾಯಂಭುವಾದಯಃ ॥ ೬೧ ॥

ಯ ಏನಂ ಪ್ರತಿವರ್ತಂತೇ ವೇದಾಂತಾನಿ ಚ ಸರ್ವಶಃ ।
ಭಕ್ತಿಹೀನಾ ನ ತೈರ್ಯಾಂತಿ ನಿತ್ಯಮೇನಂ ಕಥಂಚನ ॥ ೬೨ ॥

ನಾಲ್ಕು ವೇದಗಳು, ಷಡಂಗಗಳು, ಮೀಮಾಂಸಾ, ನ್ಯಾಯಶಾಸ್ತ್ರ, ಇತಿಹಾಸ-ಪುರಾಣಗಳು, ಮನುಸ್ಮೃತಿ ಮೊದಲಾದ ಧರ್ಮಶಾಸ್ತ್ರಗಳು ಇವೆಲ್ಲವೂ ಪರಮಪುರುಷನನ್ನೇ ಎಲ್ಲಾ ವಿಧದಿಂದಲೂ ಪ್ರತಿಪಾದಿಸುತ್ತಿವೆ. ಹೀಗಿದ್ದರೂ ಭಕ್ತಿಹೀನರು ಅವುಗಳ ಆಧಾರದಿಂದ ಆತನನ್ನು ಯಾವ ರೀತಿಯಲ್ಲಿಯೂ ತಿಳಿಯಲಾರರು.

ಸರ್ವಭೂತೇಷು ಭೂತಾತ್ಮಾ ತತ್ತದ್ಬುದ್ಧಿಂ ಸಮಾಸ್ಥಿತಃ ।
ತಸ್ಮಾದ್ ಬುದ್ಧ್ಯಸ್ವಮೇವೈನಂ ಧ್ಯಾಹಿ ನಿತ್ಯಮತಂದ್ರಿತಃ ॥ ೬೩ ॥

ಪರಮಾತ್ಮ ಸಮಸ್ತ ಭೂತಗಳಲ್ಲಿಯೂ ಅಂತರ್ಯಾಮಿಯಾಗಿದ್ದಾನೆ. ಆ ಪರಮಾತ್ಮನು ಅವರವರ ಬುದ್ಧಿಗೆ ತಕ್ಕಂತೆ ಗೋಚರಿಸತಕ್ಕವನು. ಆದ್ದರಿಂದ ಬುದ್ಧಿಬಲವುಳ್ಳ ನೀನು ಎಚ್ಚರತಪ್ಪದೆ ಅವನನ್ನು ನಿತ್ಯವೂ ಧ್ಯಾನಿಸುತ್ತಿರು.

ಏವಮೇಷ ಕುರುಶ್ರೇಷ್ಠ ಪ್ರಾದುರ್ಭಾವೋ ಮಹಾತ್ಮನಃ ।
ದೇವದೇವರ್ಷಿರಾಚಷ್ಟ ನಾರದಃ ಸರ್ವಲೋಕದೃಕ್ ॥ ೬೪ ॥

ಆ ಪರಮಾತ್ಮನ ಅವತಾರ ಚರಿತ್ರೆಗಳು ವಿಧವಿಧವಾಗಿವೆ. ಸಮಸ್ತ ಲೋಕಗಳನ್ನು ಸಾಕ್ಷಾತ್ಕರಿಸಿಕೊಂಡ ನಾರದರೇ ನನಗೆ ಈ ತತ್ತ್ವಗಳನ್ನು ಹೇಳಿದ್ದಾರೆ.

ನಾರದೋऽಪ್ಯಥ ಕೃಷ್ಣಸ್ಯ ಪರಂ ಮೇನೇ ನರಾಧಿಪ ।
ಶಾಶ್ವತತ್ವಂ ಮಹಾಬಾಹೋ ಯಥಾವದ್ಭರತರ್ಷಭ ॥ ೬೫ ॥

ನಾರದರು ಶ್ರೀಕೃಷ್ಣನು ಪರಮನೆಂದೂ, ಶಾಶ್ವತನೆಂದೂ ತಿಳಿಸಿದ್ದಾರೆ. ಆ ಕೃಷ್ಣನ ಪರಾಕ್ರಮವು ಅಮೋಘವಾದುದು.

ಏವಮೇಷ ಮಹಾಬಾಹುಃ ಕೇಶವಃ ಸತ್ಯವಿಕ್ರಮಃ ।
ಅಚಿಂತ್ಯಃ ಪುಂಡರೀಕಾಕ್ಷೋ ನೈಷ ಕೇವಲಮಾನುಷಃ ॥ ೬೬ ॥

ಭರತರ್ಷಭನೇ, ಈ ರೀತಿಯಾಗಿ ಮಹಾಬಾಹುವಾದ, ಸತ್ಯವಿಕ್ರಮನಾದ ಕೇಶವನು ಅಚಿಂತ್ಯನೂ, ಪುಂಡರೀಕಾಕ್ಷನೂ ಆಗಿದ್ದಾನೆ. ಅವನನ್ನು ಎಂದಿಗೂ ಮನುಷ್ಯನೆಂದು ಭಾವಿಸಬಾರದು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಚತುಸ್ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಮೂವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೈದನೆಯ ಅಧ್ಯಾಯ

ಮರೀಚ್ಯಾದಿಗಳಲ್ಲಿರುವ ವಂಶಕ್ರಮವನ್ನೂ, ಬೇರೆ ಬೇರೆ ದಿಕ್ಕುಗಳಲ್ಲಿರುವ ಮಹರ್ಷಿಗಳನ್ನು ಭೀಷ್ಮರು ಯುಧಿಷ್ಠಿರನಿಗೆ ತಿಳಿಸಿದುದು.

ಯುಧಿಷ್ಠಿರಃ

ಕೇ ಪೂರ್ವಮಾಸನ್ ಪತಯಃ ಪ್ರಜಾನಾಂ ಭರತರ್ಷಭ ।
ಕೇ ಚರ್ಷಯೋ ಮಹಾಭಾಗಾ ದಿಕ್ಷು ಪ್ರತ್ಯೇಕಶಃ ಸ್ಮೃತಾಃ ॥ ೧ ॥

ಯುಧಿಷ್ಠಿರ– ಪಿತಾಮಹನೇ, ಆದಿಪ್ರಜಾಪತಿಗಳು ಯಾರು? ಮಹರ್ಷಿಗಳಲ್ಲಿ ಮಹಾಮಹಿಮೆಯುಳ್ಳ ಪ್ರಮುಖರು ಯಾರು? ಪ್ರತಿ ದಿಕ್ಕುಗಳಲ್ಲಿಯೂ ಅಧಿಪತಿಗಳಾಗಿ ಯಾರಿದ್ದಾರೆ?

ಭೀಷ್ಮಃ

ಶ್ರೂಯತಾಂ ಭರತಶ್ರೇಷ್ಠ ಯನ್ಮಾ ತ್ವಂ ಪರಿಪೃಚ್ಛಸಿ ।
ಪ್ರಜಾನಾಂ ಪತಯೋ ಯೇ ಸ್ಮ ದಿಕ್ಷು ಪ್ರತ್ಯೇಕಶಃ ಸ್ಮೃತಾಃ ॥ ೨ ॥

ಭೀಷ್ಮ– ಭರತಶ್ರೇಷ್ಠನೇ, ಯಾವ ಪ್ರಶ್ನೆಗಳನ್ನು ನನ್ನನ್ನು ಕುರಿತು ಕೇಳಿದ್ದೀಯೋ ವಿವರಿಸುತ್ತೇನೆ, ಕೇಳು. ಪ್ರಜಾಪತಿಗಳು, ದಿಕ್ಕುಗಳಿಗೆ ಅಧಿಪತಿಗಳಾದ ಋಷಿಗಳ್ಯಾರು ಎಲ್ಲವನ್ನೂ ವಿವರಿಸುತ್ತೇನೆ.

ಏಕಃ ಸ್ವಯಂಭೂರ್ಭಗವಾನಾದ್ಯೋ ಬ್ರಹ್ಮಾ ಸನಾತನಃ ।
ಬ್ರಹ್ಮಣಃ ಸಪ್ತ ಪುತ್ರಾ ವೈ ಮಹಾತ್ಮಾನಃ ಸ್ವಯಂಭುವಃ ॥ ೩ ॥

ಸ್ವಯಂಭೂವೆನಿಸಿದ ಬ್ರಹ್ಮನು ಸೃಷ್ಟಿಯ ಆರಂಭದಲ್ಲಿ ಇದ್ದನು. ಅವನಿಗೆ ಏಳು ಮಂದಿ ಮಹಾತ್ಮರು ಮಕ್ಕಳಾಗಿ ಹುಟ್ಟಿದರು.

ಮರೀಚಿರತ್ರ್ಯಂಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ ।
ವಸಿಷ್ಠಶ್ಚ ಮಹಾಭಾಗಃ ಸದೃಶಾ ವೈ ಸ್ವಯಂಭುವಾ ॥ ೪ ॥

ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ ಎಂಬ ಏಳು ಋಷಿಗಳು ಬ್ರಹ್ಮಸಮಾನರಾಗಿದ್ದರು.

ಸಪ್ತ ಬ್ರಾಹ್ಮಣ ಇತ್ಯೇಷ ಪುರಾಣೇ ನಿಶ್ಚಯೋ ಗತಃ ।
ಅತ ಊರ್ಧ್ವಂ ಪ್ರವಕ್ಷ್ಯಾಮಿ ಸರ್ವಾನೇವ ಪ್ರಜಾಪತೀನ್ ॥ ೫ ॥

ಪುರಾಣಗಳಲ್ಲಿ ಇವರೇ ಏಳು ಮಂದಿ ಬ್ರಹ್ಮರೆಂದು ಪ್ರಸಿದ್ಧಿಯನ್ನು ಹೊಂದಿರುತ್ತಾರೆ. ಇವರಿಂದಾಚೆಗೆ ಬಂದ ಪ್ರಜಾಪತಿಗಳನ್ನು ವಂಶಾನುಕ್ರಮವಾಗಿ ವಿವರಿಸುತ್ತೇನೆ.

ಅತ್ರಿವಂಶಸಮುತ್ಪನ್ನೋ ಬ್ರಹ್ಮಯೋನಿಃ ಸನಾತನಃ ।
ಪ್ರಾಚೀನಬರ್ಹಿರ್ಭಗವಾಂಸ್ತಸ್ಮಾತ್ ಪ್ರಚೇತಸೋ ದಶ ॥ ೬ ॥

ಅತ್ರಿಯ ವಂಶದಲ್ಲಿ ಪ್ರಾಚೀನಬರ್ಹಿ ಎಂಬುವನು ಉತ್ಪನ್ನನಾದನು. ಸನಾತನನಾದ ಈತನು ಬ್ರಹ್ಮಯೋನಿ ಎನಿಸಿದ್ದಾನೆ. ಇವನ ಮೂಲಕ ಹತ್ತು ಮಂದಿ ಪ್ರಾಚೇತಸರು ಹುಟ್ಟಿದರು.

ದಶಾನಾಂ ತನಯಸ್ತ್ವೇಕೋ ದಕ್ಷೋ ನಾಮ ಪ್ರಜಾಪತಿಃ ।
ತಸ್ಯ ದ್ವೇ ನಾಮನೀ ಲೋಕೇ ದಕ್ಷಃ ಕ ಇತಿ ಚೋಚ್ಯತೇ ॥ ೭ ॥

ಈ ಹತ್ತುಜನರಲ್ಲಿ ದಕ್ಷನೆಂಬ ಪ್ರಜಾಪತಿಯು ಒಬ್ಬನು. ಈತನಿಗೆ ಲೋಕದಲ್ಲಿ ಎರಡು ಹೆಸರುಗಳಿವೆ. ದಕ್ಷ ಮತ್ತು ಕ ಎಂದು.

ಮರೀಚೇಃ ಕಶ್ಯಪಃ ಪುತ್ರಸ್ತಸ್ಯ ದ್ವೇ ನಾಮನೀ ಶ್ರುತೇ ।
ಅರಿಷ್ಟನೇಮಿರಿತ್ಯೇಕಂ ಕಶ್ಯಪೇತ್ಯಪರಂ ವಿದುಃ ॥ ೮ ॥

ಮರೀಚಿಯ ಮಗನು ಕಶ್ಯಪನು. ಇವನಿಗೂ ಎರಡು ಹೆಸರುಗಳಿವೆ. ಕೆಲವರು ಕಶ್ಯಪನನ್ನೇ ಅರಿಷ್ಟನೇಮಿ ಎಂದೂ, ಕೆಲವರು ಕಶ್ಯಪನೆಂದು ಕರೆಯುತ್ತಾರೆ.

ಅಂಗಶ್ಚೈವೌರಸಃ ಶ್ರೀಮಾನ್ ರಾಜಾ ಭೌಮಶ್ಚ ವೀರ್ಯವಾನ್ ।
ಸಹಸ್ರಂ ಯಶ್ಚ ದಿವ್ಯಾನಾಂ ಯುಗಾನಾಂ ಪರ್ಯುಪಾಸಿತಾ ॥ ೯ ॥

ಅತ್ರಿಗೆ ಔರಸಪುತ್ರನಾಗಿ ಹುಟ್ಟಿದವನು ವೀರ್ಯವಂತ ರಾಜನಾದ ಸೋಮನು. ಇವನು ಸಾವಿರದಿವ್ಯಯುಗಗಳವರೆಗೆ ತಪಸ್ಸಿನಲ್ಲಿ ನಿರತನಾಗಿದ್ದನು.

ಅರ್ಯಮಾ ಚೈವ ಭಗವಾನ್ ಯೇ ಚಾನ್ಯೇ ತನಯಾ ವಿಭೋ ।
ಏತೇ ಪ್ರದೇಶಾಃ ಕಥಿತಾ ಭುವನಾನಾಂ ಪ್ರಭಾವನಾಃ ॥ ೧೦ ॥

ಪೂಜ್ಯನಾದ ಅರ್ಯಮನು ಇನ್ನೂ ಅವನ ಬೇರೆ ಪುತ್ರರು ಸೃಷ್ಟಿಕರ್ತರೆಂದು ಲೋಕಕ್ಕೆ ಆಜ್ಞಾಪಕರೆಂದು ಹೇಳಲ್ಪಡುವರು.

ಶಶಬಿಂದೋಶ್ಚ ಭಾರ್ಯಾಣಾಂ ಸಹಸ್ರಾಣಿ ದಶಾಚ್ಯುತ ।
ಏಕೈಕಸ್ಯಾಂ ಸಹಸ್ರಂ ತು ತನಯಾನಾಮಭೂತ್ತದಾ ॥ ೧೧ ॥

ಶಶಬಿಂದುವಿನ ಭಾರ್ಯೆಯರಲ್ಲಿ ಒಬ್ಬೊಬ್ಬಳಲ್ಲಿಯೂ ಸಾವಿರಮಂದಿ ಮಕ್ಕಳಾದರು. ಶಶಬಿಂದುವಿಗೆ ಹತ್ತುಸಾವಿರ ಮಂದಿ ಭಾರ್ಯೆಯರಿದ್ದರು.

ಏವಂ ಶತಸಹಸ್ರಾಣಾಂ ಶತಂ ತಸ್ಯ ಮಹಾತ್ಮನಃ ।
ಪುತ್ರಾಣಾಂ ನ ಚ ತೇ ಕಂಚಿದಿಚ್ಛಂತ್ಯನ್ಯಂ ಪ್ರಜಾಪತಿಮ್ ॥ ೧೨ ॥

ಹೀಗೆ ಹತ್ತುಸಾವಿರವನ್ನು ಸಾವಿರದಿಂದ ಗುಣಿಸಿದಾಗ ಹತ್ತುಲಕ್ಷ ಪ್ರಜೆಗಳು ಈ ಮಹಾತ್ಮನಿಗೆ ಉಂಟಾದರು. ಆ ಮಕ್ಕಳಲ್ಲಿ ಯಾರೂ ತಮ್ಮನ್ನು ಹೊರತು ಪ್ರಜಾಪತಿಗಳೆಂದು ಅಂಗೀಕರಿಸದೆ ಹೋದರು.

ಪ್ರಜಾಮಾಚಕ್ಷತೇ ವಿಪ್ರಃ ಪೌರಾಣೀಂ ಶಾಶಬಿಂದವೀಮ್ ।
ಸ ವೃಷ್ಣಿವಂಶಪ್ರಭವೋ ಮಹಾನ್ ವಂಶಃ ಪ್ರಜಾಪತೇಃ ॥ ೧೩ ॥

ಇದಕ್ಕಾಗಿ ಪುರಾತನ ಮಹರ್ಷಿಗಳು ಪ್ರಜೆಗಳಿಗೆ ಶಶಬಿಂದು ವಂಶೀಯರೆಂದೇ ಹೆಸರನ್ನಿಟ್ಟರು. ಈ ಶಶಬಿಂದುವಿನ ವಂಶವೇ ವೃಷ್ಣಿವಂಶದ ಉತ್ಪತ್ತಿಗೂ ಮೂಲವಾಯಿತು.

ಏತೇ ಪ್ರಜಾನಾಂ ಪತಯಃ ಸಮುದ್ದಿಷ್ಟಾ ಯಶಸ್ವಿನಃ ।
ಅತಃ ಪರಂ ಪ್ರವಕ್ಷ್ಯಾಮಿ ದೇವಾಂಸ್ತ್ರಿಭುವನೇಶ್ವರಾನ್ ॥ ೧೪ ॥

ನಾನು ಇಲ್ಲಿಯ ತನಕ ಹೇಳಿದವರೆಲ್ಲರೂ ಪ್ರಜಾಪಧಿಪತಿಗಳೆಂದೇ ಹೆಸರನ್ನು ಹೊಂದಿರುತ್ತಾರೆ. ಎಲ್ಲರೂ ಕೀರ್ತಿಸಂಪನ್ನರು. ಇನ್ನು ಮುಂದೆ ಮೂರುಲೋಕಗಳಿಗೆ ಒಡೆಯರಾದ ದೇವತೆಗಳ್ಯಾರೆಂಬುದನ್ನು ತಿಳಿಸುತ್ತೇನೆ.

ಭಗೋಽಂಶಶ್ಚಾರ್ಯಮಾ ಚೈವ ಮಿತ್ರೋಽಥ ವರುಣಸ್ತಥಾ ।
ಸವಿತಾ ಚೈವ ಧಾತಾ ಚ ವಿವಸ್ವಾಂಶ್ಚ ಮಹಾಬಲಃ ॥ ೧೫ ॥

ಪೂಷಾ ತ್ವಷ್ಟಾ ತಥೈವೇಂದ್ರೋ ದ್ವಾದಶೋ ವಿಷ್ಣುರುಚ್ಯತೇ ।
ತ ಏತೇ ದ್ವಾದಶಾದಿತ್ಯಾಃ ಕಶ್ಯಪಸ್ಯಾತ್ಮಸಂಭವಾಃ ॥ ೧೬ ॥

ಭಗನೂ, ಅಂಶನೂ, ಅರ್ಯಮನೂ, ಮಿತ್ರನೂ, ವರುಣನೂ, ಸವಿತೃ, ಧಾತೃ, ಮಹಾಬಲನಾದ ವಿವಸ್ವಂತನೂ, ಪೂಷನೂ, ತ್ವಷ್ಟನೂ, ಇಂದ್ರನೂ ಕೊನೆಯಲ್ಲಿ ಹನ್ನೆರಡನೆಯವನಾದವನು ವಿಷ್ಣುವೆನಿಸುತ್ತಾನೆ. ಈ ಹನ್ನೆರಡು ಜನರು ಕಶ್ಯಪನ ಮಕ್ಕಳು. ಕಶ್ಯಪನಿಂದಲೇ ಹುಟ್ಟಿದವರು. ಇವರನ್ನೇ ದ್ವಾದಶಾದಿತ್ಯರು ಎನ್ನಲಾಗುತ್ತದೆ.

ನಾಸತ್ಯಶ್ಚೈವ ದಸ್ರಶ್ಚ ಸ್ಮೃತೌ ದ್ವಾವಶ್ವಿನಾವಪಿ ।
ಮಾರ್ತಾಂಡಸ್ಯಾತ್ಮಜಾವೇತಾವಷ್ಟಮಸ್ಯ ಪ್ರಜಾಪತೇಃ ॥ ೧೭ ॥

ನಾಸತ್ಯನೂ, ದಸ್ರ ಎಂಬ ಇವರಿಬ್ಬರು ಅಶ್ವಿನೀದೇವತೆಗಳು. ಇವರಿಬ್ಬರೂ ಎಂಟನೆಯ ಪ್ರಜಾಧಿಪತಿಯಾದ ಮಾರ್ತಾಂಡನ ಮಕ್ಕಳು.

ತ್ವಷ್ಟುಶ್ಚೈವಾತ್ಮಜಃ ಶ್ರೀಮಾನ್ ವಿಶ್ವರೂಪೋ ಮಹಾಯಶಾಃ ।
ಅಜೈಕಪಾದಹಿರ್ಬುಧ್ನ್ಯೋ ವಿರೂಪಾಕ್ಷೋಽಥ ರೈವತಃ ॥ ೧೮ ॥

ಹರಶ್ಚ ಬಹುರೂಪಶ್ಚ ತ್ರ್ಯಂಬಕಶ್ಚ ಸುರೇಶ್ವರಃ ।
ಸಾವಿತ್ರಶ್ಚ ಜಯಂತಶ್ಚ ಪಿನಾಕೀ ಚಾಪರಾಜಿತಃ ।
ಪೂರ್ವಮೇವ ಮಹಾಭಾಗಾ ವಸವೋಽಷ್ಟೌ ಪ್ರಕೀರ್ತಿತಾಃ ॥ ೧೯ ॥

ಮಹಾಯಶಸ್ವಿಯಾದ ವಿಶ್ವರೂಪನೆಂಬುವನು ತ್ವಷ್ಟುವಿನ ಮಗನು. ಅಜೈಕಪಾತ್, ಅಹಿರ್ಬುಧ್ನ್ಯ, ವಿರೂಪಾಕ್ಷ, ರೈವತ, ಹರ, ಬಹುರೂಪ, ತ್ರ್ಯಂಬಕ, ಸಾವಿತ್ರ, ಜಯಂತ, ಪಿನಾಕಿ, ಇವರೊಡನೆ ವಿಶ್ವರೂಪನೂ ಸೇರಿದಾಗ ಹನ್ನೊಂದು ಮಂದಿಯಾಗುತ್ತಾರೆ. ಇವರೆಲ್ಲರೂ ಅಪರಾಜಿತರೆನಿಸಿದ್ದಾರೆ. ಅಷ್ಟವಸುಗಳು ಯಾರೆಂಬುದನ್ನು ನಾನು ಹಿಂದೆಯೇ ಹೇಳಿರುತ್ತೇನೆ.

ಏತ ಏವಂವಿಧಾ ದೇವಾ ಮನೋರೇವ ಪ್ರಜಾಪತೇಃ ।
ತೇ ಚ ಪೂರ್ವೇ ಸುರಾಶ್ಚೇತಿ ದ್ವಿವಿಧಾಃ ಪಿತರಃ ಸ್ಮೃತಾಃ ॥ ೨೦ ॥

ಈ ದೇವತೆಗಳೆಲ್ಲರೂ ಮನುವಿನಿಂದಲೇ ಹುಟ್ಟಿದವರು. ಈ ದೇವತೆಗಳಲ್ಲಿ ಸುರರೆಂದು, ಪಿತೃಗಳೆಂದು ಎರಡು ವಿಭಾಗಗಳಿವೆ.

ಶೀಲಯೌವನಯೋಸ್ತ್ವನ್ಯೇ ತಥಾನ್ಯೇ ಸಿದ್ಧಸಾಧ್ಯಯೋಃ ।
ಋಭವೋ ಮರುತಶ್ಚೈವ ದೇವಾನಾಂ ಚೋದಿತಾ ಗಣಾಃ ॥ ೨೧ ॥

ಸಿದ್ಧ-ಸಾಧ್ಯರಲ್ಲಿಯೂ ಶೀಲ, ಯೌವನ ಎಂಬ ದೇವತೆಗಳ ಎರಡು ಗುಂಪಿದೆ. ದೇವತೆಗಳನ್ನು ಪೂರ್ವದಲ್ಲಿ ಋಕ್‌ಗಳೆಂದು, ಮರುತ್ತುಗಳೆಂದು ಎರಡು ಪಂಗಡವನ್ನಾಗಿ ವಿಭಾಗ ಮಾಡಿದ್ದಾರೆ.

ಏವಮೇತೇ ಸಮಾಮ್ನಾತಾ ವಿಶ್ವೇದೇವಾಸ್ತಥಾಶ್ವಿನೌ ।
ಆದಿತ್ಯಾಃ ಕ್ಷತ್ರಿಯಾಸ್ತೇಷಾಂ ವಿಶಸ್ತು ಮರುತಸ್ತಥಾ ॥ ೨೨ ॥

ಇದರಂತೆ ವಿಶ್ವೇದೇವತೆಗಳು, ಅಶ್ವಿನೀದೇವತೆಗಳು ಎಂದು ಗುರುತಿಸಲ್ಪಡುತ್ತಿದ್ದರು. ಇವರಲ್ಲಿಯೂ ಆದಿತ್ಯರು ಕ್ಷತ್ರಿಯರೆನಿಸಿದ್ದಾರೆ. ಮರುತ್ತುಗಳು ವೈಶ್ಯರೆನಿಸಿದ್ದಾರೆ.

ಅಶ್ವಿನೌ ತು ಮತೌ ಶೂದ್ರೌ ತಪಸ್ಯುಗ್ರೇ ಸಮಾಹಿತೌ ।
ಸ್ಮೃತಾಸ್ತ್ವಂಗಿರಸೋ ದೇವಾ ಬ್ರಾಹ್ಮಣಾ ಇತಿ ನಿಶ್ಚಯಃ ।
ಇತ್ಯೇತತ್ ಸರ್ವದೇವಾನಾಂ ಚಾತುರ್ವರ್ಣ್ಯಂ ಪ್ರಕೀರ್ತಿತಮ್ ॥೨೩॥

ಅಶ್ವಿನೀದೇವತೆಗಳಿಬ್ಬರೂ ಶೂದ್ರರೆಂದು ಕರೆಯಲ್ಪಡುತ್ತಾರೆ. ಅವರಿಬ್ಬರೂ ಉಗ್ರವಾದ ತಪಸ್ಸಿನಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಂಗಿರಸ ವಂಶದಲ್ಲಿ ಹುಟ್ಟಿದ ದೇವತೆಗಳನ್ನು ಬ್ರಾಹ್ಮಣರೆನ್ನುತ್ತಾರೆ. ಹೀಗೆ ದೇವತೆಗಳಲ್ಲಿಯೂ ಚಾತುರ್ವರ್ಣ್ಯವು ವ್ಯವಸ್ಥಿತವಾಗಿದೆ.

ಏತಾನ್ ವೈ ಪ್ರಾತರುತ್ಥಾಯ ದೇವಾನ್ಯಸ್ತು ಪ್ರಕೀರ್ತಯೇತ್ ।
ಸ್ವಜಾದನ್ಯಕೃತಾಚ್ಚೈವ ಸರ್ವಪಾಪಾತ್ ಪ್ರಮುಚ್ಯತೇ ॥ ೨೪ ॥

ಈ ದೇವತೆಗಳನ್ನು ಪ್ರಾತಃಕಾಲದಲ್ಲಿ ಎದ್ದು ಯಾರು ಸ್ತುತಿಸುತ್ತಾರೋ ಅವರು ತಿಳಿದೋ, ತಿಳಿಯದೆಯೋ ಮಾಡಿದ ತಮ್ಮ ಅರ್ಜಿತವಾದ ಪಾಪಗಳನ್ನು, ತಮಗೆ ಪರರ ಸಂಬಂಧದಿಂದ ಸಂಬಂಧಿಸಿದ ಪಾಪಗಳಿಂದಲೂ ಮುಕ್ತರಾಗುತ್ತಾರೆ.

ಯವಕ್ರೀತೋಽಥ ರೈಭ್ಯಶ್ಚ ಅರ್ವಾವಸುಪರಾವಸೂ ।
ಔಶಿಜಶ್ಚೈವ ಕಕ್ಷೀವಾನ್ನಲಶ್ಚಾಂಗಿರಸಃ ಸುತಾಃ ॥ ೨೫ ॥

ಋಷೇರ್ಮೇಧಾತಿಥೇಃ ಪುತ್ರಃ ಕಣ್ವೋ ಬರ್ಹಿಷದಸ್ತಥಾ ।
ತ್ರೈಲೋಕ್ಯಭಾವನಾಸ್ತಾತ ಪ್ರಾಚ್ಯಾಂ ಸಪ್ತರ್ಷಯಸ್ತಥಾ ॥ ೨೬ ॥

ಧರ್ಮಪುತ್ರನೇ, ಮಹರ್ಷಿಗಳ ವಾಸಸ್ಥಾನವನ್ನು ಕೇಳು. ಯವಕ್ರೀತ, ರೈಭ್ಯ, ಅರ್ವಾವಸು, ಪರಾವಸು, ಔಶಿಜ, ಕಕ್ಷೀವಾನ್, ಅಂಗಿರಸನ ಮಗನಾದ ನಲ, ಬರ್ಹಿಷದನೆನಿಸಿದ ಮೇಧಾತಿಥಿಯ ಮಗನಾದ ಕಣ್ವ ಈ ಏಳು ಮಂದಿ ಮಹರ್ಷಿಗಳು ಪೂರ್ವದಿಕ್ಕಿನಲ್ಲಿದ್ದಾರೆ. ಇವರು ಮೂರುಲೋಕಗಳನ್ನು ಸೃಷ್ಟಿ ಮಾಡಬಲ್ಲ ಮಹಾಮಹಿಮರು.

ಉನ್ಮುಚೋ ವಿಮುಚಶ್ಚೈವ ಸ್ವಸ್ತ್ಯಾತ್ರೇಯಶ್ಚ ವೀರ್ಯವಾನ್ ।
ಪ್ರಮುಚಶ್ಚೇಧ್ಮವಾಹಶ್ಚ ಭಗವಾಂಶ್ಚ ದೃಢವ್ರತಃ ॥ ೨೭ ॥

ಮಿತ್ರಾವರುಣಯೋಃ ಪುತ್ರಸ್ತಥಾಗಸ್ತ್ಯಃ ಪ್ರತಾಪವಾನ್ ।
ಏತೇ ಬ್ರಹ್ಮರ್ಷಯೋ ನಿತ್ಯಮಾಶ್ರಿತಾ ದಕ್ಷಿಣಾಂ ದಿಶಮ್ ॥ ೨೮ ॥

ಉನ್ಮುಚ, ವಿಮುಚ, ವೀರ್ಯವಂತನಾದ ಸ್ವಸ್ತ್ಯಾತ್ರೇಯ, ಪ್ರಮುಚ, ಇಧ್ಮವಾಹ, ಪೂಜ್ಯನಾದ ದೃಢವ್ರತ, ಮಿತ್ರಾವರುಣರ ಪುತ್ರ ಹಾಗೂ ಮಹಾತೇಜಸ್ವಿಯಾದ ಅಗಸ್ತ್ಯ - ಈ ಏಳು ಮಂದಿ ಬ್ರಹ್ಮರ್ಷಿಗಳು ನಿತ್ಯವೂ ದಕ್ಷಿಣ ದಿಕ್ಕನ್ನು ಆಶ್ರಯಿಸಿದ್ದಾರೆ.

ರುಷದ್ಗುಃ ಕವಷೋ ಧೌಮ್ಯಃ ಪರಿವ್ಯಾಧಶ್ಚ ವೀರ್ಯವಾನ್ ।
ಏಕತಶ್ಚ ದ್ವಿತಶ್ಚೈವ ತ್ರಿತಶ್ಚೈವ ಮಹರ್ಷಯಃ ॥ ೨೯ ॥

ಅತ್ರೇಃ ಪುತ್ರಶ್ಚ ಭಗವಾಂಸ್ತಥಾ ಸಾರಸ್ವತಃ ಪ್ರಭುಃ ।
ಏತೇ ನವ ಮಹಾತ್ಮಾನಃ ಪಶ್ಚಿಮಾಮಾಶ್ರಿತಾ ದಿಶಮ್ ॥ ೩೦ ॥

ರುಷದ್ಗು, ಕವಷ, ಧೌಮ್ಯ, ವೀರ್ಯವಂತನಾದ ಪರಿವ್ಯಾಧ, ಏಕತ, ದ್ವಿತ, ತ್ರಿತ ಎಂಬ ಮಹರ್ಷಿಗಳು, ಅತ್ರಿಪುತ್ರನಾದ ಭಗವಾನ್ ಸಾರಸ್ವತನು - ಈ ಒಂಬತ್ತು ಮಂದಿ ಮಹಾತ್ಮರು ಪಶ್ಚಿಮದಿಕ್ಕನ್ನು ಆಶ್ರಯಿಸಿರುತ್ತಾರೆ.

ಆತ್ರೇಯಶ್ಚ ವಸಿಷ್ಠಶ್ಚ ಕಶ್ಯಪಶ್ಚ ಮಹಾನೃಷಿಃ ।
ಗೌತಮಃ ಸಭರದ್ವಾಜೋ ವಿಶ್ವಾಮಿತ್ರೋಽಥ ಕೌಶಿಕಃ ॥ ೩೧ ॥

ತಥೈವ ಪುತ್ರೋ ಭಗವಾನೃಚೀಕಸ್ಯ ಮಹಾತ್ಮನಃ ।
ಜಮದಗ್ನಿಶ್ಚ ಸಪ್ತೈತೇ ಉದೀಚೀಂ ದಿಶಮಾಶ್ರಿತಾಃ ॥ ೩೨ ॥

ಆತ್ರೇಯ, ವಸಿಷ್ಠ, ಮಹಾತ್ಮನಾದ ಕಶ್ಯಪ, ಗೌತಮ, ಭರದ್ವಾಜ, ಕುಶಿಕ ವಂಶದ ವಿಶ್ವಾಮಿತ್ರ, ಋಚೀಕಪುತ್ರನಾದ ಜಮದಗ್ನಿ - ಈ ಏಳು ಮಂದಿ ಉತ್ತರದಿಕ್ಕನ್ನು ಆಶ್ರಯಿಸಿದ್ದಾರೆ.

ಏತೇ ಪ್ರತಿದಿಶಂ ಸರ್ವೇ ಕೀರ್ತಿತಾಸ್ತಿಗ್ಮತೇಜಸಃ ।
ಸಾಕ್ಷಿಭೂತಾ ಮಹಾತ್ಮಾನೋ ಭುವನಾನಾಂ ಪ್ರಭಾವನಾಃ ॥ ೩೩ ॥

ಈ ಮಹಾತ್ಮರೆಲ್ಲರೂ ತಮ್ಮ ತೀಕ್ಷ್ಣ ತೇಜಸ್ಸಿನಿಂದ ದಿಕ್ಪಾಲಕ ಋಷಿಗಳೆನಿಸಿಕೊಂಡಿದ್ದಾರೆ. ಲೋಕಕ್ಕೆಲ್ಲಾ ಸಾಕ್ಷೀಭೂತರಾಗಿ ಲೋಕಗಳಿಗೂ ಉತ್ಪಾದಕರಾಗಿದ್ದಾರೆ.

ಏವಮೇತೇ ಮಹಾತ್ಮಾನಃ ಸ್ಥಿತಾಃ ಪ್ರತ್ಯೇಕಶೋ ದಿಶಃ ।
ಏತೇಷಾಂ ಕೀರ್ತನಂ ಕೃತ್ವಾ ಸರ್ವಪಾಪೈಃ ಪ್ರಮುಚ್ಯತೇ ॥ ೩೪ ॥

ಇವರೆಲ್ಲ ಮಹಾತ್ಮರು ಪ್ರತ್ಯೇಕ ಪ್ರತ್ಯೇಕ ದಿಕ್ಕುಗಳಲ್ಲಿದ್ದಾರೆ. ಇವರ ಹೆಸರುಗಳನ್ನು ಹೇಳಿದಾಗ ಸಮಸ್ತ ಪಾಪಗಳು ಬಿಡುಗಡೆ ಹೊಂದುತ್ತವೆ.

ಯಸ್ಯಾಂ ಯಸ್ಯಾಂ ದಿಶಿ ಹ್ಯೇತೇ ತಾಂ ದಿಶಂ ಶರಣಂ ಗತಃ ।
ಮುಚ್ಯತೇ ಸರ್ವಪಾಪೇಭ್ಯಃ ಸ್ವಸ್ತಿಮಾಂಶ್ಚ ಗೃಹಾನ್ ವ್ರಜೇತ್ ॥ ೩೫॥

ಯಾವ ಯಾವ ದಿಕ್ಕುಗಳಲ್ಲಿ ಇವರಿದ್ದಾರೆ ಎಂದು ತಿಳಿದು ಸಾಧಕರು ಆಯಾ ದಿಕ್ಕನ್ನು ಆಶ್ರಯಿಸುತ್ತಾರೋ ಅವರು ಸಮಸ್ತ ಪಾಪಗಳಿಂದ ಮುಕ್ತರಾಗಿ ಕ್ಷೇಮವನ್ನು ಹೊಂದಿ ಮನೆಗಳಲ್ಲಿರುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಪಂಚತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಮೂವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತಾರನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಹರಿಯ ವರಾಹಾವತಾರ ಚರಿತ್ರೆಯನ್ನು ನಿರೂಪಿಸಿದುದು.

ಯುಧಿಷ್ಠಿರಃ

ಪಿತಾಮಹ ಮಹಾಪ್ರಾಜ್ಞ ಯುಧಿ ಸತ್ಯಪರಾಕ್ರಮ ।
ಶ್ರೋತುಮಿಚ್ಛಾಮಿ ಕಾರ್ತ್ಸ್ನ್ಯೇನ ಕೃಷ್ಣಮವ್ಯಯಮೀಶ್ವರಮ್ ॥ ೧ ॥

ಯುಧಿಷ್ಠಿರ– ಪಿತಾಮಹನೇ, ಮಹಾಪ್ರಾಜ್ಞನೇ, ಯುದ್ಧದಲ್ಲಿ ಸತ್ಯವಾದ ಪರಾಕ್ರಮವುಳ್ಳವನೇ, ಅವ್ಯಯ ಈಶ್ವರನಾದ ಕೃಷ್ಣನ ಸಮಗ್ರ ಮಹಿಮೆಯನ್ನು ನಿನ್ನಿಂದ ಕೇಳಲು ಬಯಸುತ್ತೇನೆ.

ಯಚ್ಚಾಸ್ಯ ತೇಜಃ ಸುಮಹದ್ ಯಚ್ಚ ಕರ್ಮ ಪುರಾ ಕೃತಮ್ ।
ತನ್ಮೇ ಸರ್ವಂ ಯಥಾತತ್ತ್ವಂ ಬ್ರೂಹಿ ತ್ವಂ ಪುರುಷರ್ಷಭ ॥ ೨ ॥

ಭಗವಂತನ ಅದ್ಭುತವಾದ ತೇಜಸ್ಸು, ಕೃಷ್ಣನು ಹಿಂದೆ ನಡೆಸಿದ ಅಸಾಧಾರಣ ಕಾರ್ಯಗಳು ಇವೆಲ್ಲವನ್ನೂ ಯಥಾವತ್ತಾಗಿ ಪುರುಷರ್ಷಭನಾದ ನೀನು ನನಗೆ ಹೇಳು.

ತಿರ್ಯಗ್ಯೋನಿಗತೋ ರೂಪಂ ಕಥಂ ಧಾರಿತವಾನ್ ಪ್ರಭುಃ ।
ಕೇನ ಕಾರ್ಯನಿಸರ್ಗೇಣ ತಮಾಖ್ಯಾಹಿ ಮಹಾಬಲ ॥ ೩ ॥

ಸರ್ವಸಮರ್ಥನಾದ ಭಗವಂತನು ತಿರ್ಯಗ್ಯೋನಿಯ (ನೀಚ) ರೂಪವನ್ನು ಹೇಗೆ ಹೊಂದಿದನು? ಯಾವ ಕಾರ್ಯದ ನಿಮಿತ್ತವಾಗಿ ಆ ರೂಪವನ್ನು ಪಡೆದನೋ ಅದನ್ನು ನನಗೆ ಮಹಾಬಲನೇ, ತಿಳಿಸು.

ಭೀಷ್ಮಃ

ಪುರಾऽಹಂ ಮೃಗಯಾಂ ಯಾತೋ ಮಾಕಂಡೇಯಾಶ್ರಮೇ ಸ್ಥಿತಃ ।
ತತ್ರಾಪಶ್ಯಂ ಮುನಿಗಣಾನ್ ಸಮಾಸೀನಾನ್ ಸಹಸ್ರಶಃ ॥ ೪ ॥

ಭೀಷ್ಮ– ಧರ್ಮಪುತ್ರನೇ, ಹಿಂದೊಮ್ಮೆ ನಾನು ಬೇಟೆಗಾಗಿ ಹೊರಟು ಮಾರ್ಕಂಡೇಯರ ಆಶ್ರಮದ ಬಳಿ ಆಗಮಿಸಿದೆನು. ಅಲ್ಲಿ ಸಾವಿರಾರು ಮಂದಿ ಮಹರ್ಷಿಗಳು ಗುಂಪುಗೂಡಿದ್ದನ್ನು ನಾನು ನೋಡಿದೆನು.

ತತಸ್ತೇ ಮಧುಪರ್ಕೇಣ ಪೂಜಾಂ ಚಕ್ರುರಥೋ ಮಯಿ ।
ಪ್ರತಿಗೃಹ್ಯ ಚ ತಾಂ ಪೂಜಾಂ ಪ್ರತ್ಯನಂದಮೃಷೀನಹಮ್ ॥ ೫ ॥

ನನ್ನನ್ನು ಕಂಡ ಕೂಡಲೇ ಆ ಋಷಿವರ್ಗವು ನನ್ನನ್ನು ಮಧುಪರ್ಕಾದಿಗಳಿಂದ ಸತ್ಕರಿಸಿತು. ನಾನು ಅವರ ಸತ್ಕಾರವನ್ನೆಲ್ಲ ಸ್ವೀಕರಿಸಿ ಅವರನ್ನೂ ಯಥೋಚಿತವಾಗಿ ಪೂಜಿಸಿದೆನು.

ಕಥೈಷಾ ಕಥಿತಾ ತತ್ರ ಕಶ್ಯಪೇನ ಮಹರ್ಷಿಣಾ ।
ಮನಃಪ್ರಹ್ಲಾದಿನೀಂ ದಿವ್ಯಾಂ ತಾಮಿಹೈಕಮನಾಃ ಶೃಣು ॥ ೬ ॥

ಆ ಕಾಲದಲ್ಲಿ ಅಲ್ಲಿದ್ದ ಕಶ್ಯಪಮುನಿಯು ಮನಸ್ಸಿಗೆ ಸಂತೋಷಕರವಾದ ಭಗವಂತನ ಚರಿತ್ರೆಯನ್ನು ಅಲ್ಲಿನ ಮಹರ್ಷಿಗಳಿಗೆ ಹೇಳುತ್ತಿದ್ದರು. ಅದನ್ನು ನಿನಗೆ ಹೇಳುತ್ತೇನೆ. ಇಲ್ಲೇ ಮನಸ್ಸಿಟ್ಟು ಕೇಳು.

ಪುರಾ ದಾನವಮುಖ್ಯಾ ಹಿ ಕ್ರೋಧಲೋಭಸಮನ್ವಿತಾಃ ।
ಬಲೇನ ಮತ್ತಾಃ ಶತಶೋ ನರಕಾದ್ಯಾಃ ಮಹಾಸುರಾಃ ॥ ೭ ॥

ಹಿಂದೆ ನರಕಾಸುರನೇ ಮೊದಲಾದ ಬಲಗರ್ವಿತರಾಗಿದ್ದ ಪ್ರಮುಖ ದಾನವರು ದೇವತೆಗಳ ಭಾಗ್ಯಸಮೃದ್ಧಿಯನ್ನು ನೋಡಿ ಕ್ರೋಧ-ಲೋಭಗಳಿಂದ ತಮ್ಮ ಬಲದಿಂದಲೂ ಮತ್ತರಾಗಿ ದೇವತೆಗಳನ್ನು ನಿಗ್ರಹಿಸಬೇಕೆಂದು ಯತ್ನಿಸುತ್ತಿದ್ದರು.

ತಥೈವ ಚಾನ್ಯೇ ಬಹವೋ ದಾನವಾ ಯುದ್ಧದುರ್ಮದಾಃ ।
ನ ಸನ್ಹತೇ ಸ್ಮ ದೇವಾನಾಂ ಸಮೃದ್ಧಿಂ ತಾಮನುತ್ತಮಾಮ್ ॥ ೮ ॥

ಅವರಂತೆ ಯುದ್ಧದುರ್ಮದರಾದ ಅನೇಕ ದಾನವರು ದೇವತೆಗಳ ಮಿಗಿಲಾಗಿರುವ ಸಮೃದ್ಧಿಯನ್ನು ನೋಡಿ ಸಹಿಸುತ್ತಿರಲಿಲ್ಲ.

ನರಕಾದ್ಯಾ ಮಹಾಘೋರಾ ಹಿರಣ್ಯಾಕ್ಷಮುಪಾಶ್ರಿತಾಃ ।
ಉದ್ಯೋಗಂ ಪರಮಂ ಚಕ್ರುರ್ದೇವಾನಾಂ ನಿಗ್ರಹೇ ತದಾ ॥ ೯ ॥

ನರಕಾಸುರನೇ ಮೊದಲಾದ ಘೋರದೈತ್ಯರು ಹಿರಣ್ಯಾಕ್ಷನನ್ನು ಆಶ್ರಯಿಸಿದರು. ದೇವತೆಗಳನ್ನು ನಿಗ್ರಹಿಸಬೇಕೆಂದು ಮಹಾಪ್ರಯತ್ನವನ್ನು ಆ ಸಂದರ್ಭದಲ್ಲಿ ಮಾಡಿದರು.

ನಿಯುತಂ ವತ್ಸರಾಣಾಂ ತು ವಾಯುಭಕ್ಷೋಽಭವತ್ತದಾ ।
ಹಿರಣ್ಯಾಕ್ಷೋ ಮಹಾರೌದ್ರೋ ಲೇಭೇ ದೇವಾತ್ ಪಿತಾಮಹಾತ್ ।
ವರಾನಚಿಂತ್ಯಾನತುಲಾನ್ ಶತಶೋಽಥ ಸಹಸ್ರಶಃ ॥ ೧೦ ॥

ಈ ಉದ್ದೇಶದಿಂದ ಇಪ್ಪತ್ತು ಸಾವಿರ ವರ್ಷಗಳ ಕಾಲ ಗಾಳಿಯನ್ನೇ ಸ್ವೀಕರಿಸುತ್ತಾ ಉಗ್ರವಾದ ತಪಸ್ಸನ್ನು ಮಾಡಿ ಹಿರಣ್ಯಾಕ್ಷನು ಅತ್ಯಂತ ಪ್ರಬಲನಾದನು. ಅಚಿಂತ್ಯವಾದ, ಅತುಲವಾದ ನೂರಾರು ಸಾವಿರಾರು ವರಗಳನ್ನು ಚತುರ್ಮುಖ ಬ್ರಹ್ಮದೇವನಿಂದಲೇ ಪಡೆದುಕೊಂಡನು.

ದಾನವೈರದ್ಯಮಾನಾಸ್ತು ದೇವಾ ದೇವರ್ಷಯಸ್ತಥಾ ।
ನ ಶರ್ಮ ಲೇಭಿರೇ ರಾಜನ್ ಕ್ಲಿಶ್ಯಮಾನಾಸ್ತತಸ್ತತಃ ॥ ೧೧ ॥

ರಾಜನೇ, ಹಿರಣ್ಯಾಕ್ಷರೇ ಪ್ರಮುಖರಾದ ದಾನವರಿಂದ ಪೀಡಿತರಾದ ದೇವತೆಗಳು, ದೇವರ್ಷಿಗಳು ತುಂಬಾ ಕ್ಲೇಶವನ್ನು ಹೊಂದಿದವರಾಗಿ ಎಲ್ಲಿ ಓಡಿದರೂ ಶಾಂತಿಯನ್ನು ಅವರು ಹೊಂದಲಿಲ್ಲ.

ಪೃಥಿವೀಮಾರ್ತರೂಪಾಂ ತೇ ಸಮಪಶ್ಯನ್ ದಿವೌಕಸಃ ।
ದಾನವೈರಭಿಸಂಕೀರ್ಣಾಂ ಘೋರರೂಪೈರ್ಮಹಾಬಲೈಃ ।
ಭಾರಾರ್ತಾಮಪ್ರಹೃಷ್ಟಾಂ ಚ ದುಃಖಿತಾಂ ಸನ್ನಿಮಜ್ಜತೀಮ್ ॥ ೧೨ ॥

ದೇವತೆಗಳೆಲ್ಲರೂ ಈ ದೈತ್ಯನ ಉಪಟಳದಿಂದಾಗಿ ಸಮಗ್ರ ಭೂಮಂಡಲವೇ ಆರ್ತರೂಪವಾದುದನ್ನು ಕಂಡರು. ಮಹಾಬಲಿಷ್ಠರಾದ, ಘೋರರೂಪಿಗಳಾದ ದಾನವರಿಂದ ತುಂಬಿಹೋಗಿರುವ ಮೇದಿನಿಯು ದುಷ್ಟರ ಭಾರದಿಂದ ದುಃಖಿತಳಾಗಿ ಕುಗ್ಗಿಹೋಗುತ್ತಿರುವ ದೃಶ್ಯವನ್ನು ನೋಡಿದರು.

ಗೃಹೀತ್ವಾ ಪೃಥಿವೀ ದೇವೀ ಪಾತಾಲೇ ನ್ಯವಸತ್ತದಾ ।
ತತಸ್ತ್ರೈಲೋಕ್ಯಮಖಿಲಂ ನಿರೋಷಧಿಗಣಾನ್ವಿತಮ್ ।
ನಿಃಸ್ವಾಧ್ಯಾಯವಷಟ್ಕಾರಮಭೂತ್ ಸರ್ವಂ ಸಮಂತತಃ ॥ ೧೩ ॥

ಹಿರಣ್ಯಾಕ್ಷನು ಸಮಗ್ರ ಭೂಮಿಯನ್ನು ನೀರಿನಲ್ಲಿ ಮುಳುಗಿಸಿದನು. ಆ ಮುಳುಗಿದ ಭೂಮಿಯಲ್ಲಿರುವ ಓಷಧಿಗಳನ್ನು ದೈತ್ಯರು ತಿಂದುಹಾಕುತ್ತಿದ್ದರು. ಇದರಿಂದ ಹೆದರಿದ ಪೃಥಿವಿಯ ಅಭಿಮಾನಿನಿಯಾದ ಭೂದೇವಿಯು ಸೂಕ್ಷ್ಮರೂಪವನ್ನು ತಾಳಿ ಪಾತಾಳ ರೂಪದ ಒಂದು ಮೂಲೆಯಲ್ಲಿ ವಾಸಿಸಲಾರಂಭಿಸಿದಳು. ಆ ಸಂದರ್ಭದಲ್ಲಿ ಆ ಭೂಮಿಯಲ್ಲಿ ಎಲ್ಲಿಯೂ ಬೆಳೆಯು ಬೆಳೆಯಲಿಲ್ಲ. ಅಧ್ಯಯನಾದಿ ಕರ್ಮಗಳೂ ನಡೆಯಲಿಲ್ಲ. ಯಾಗಗಳೂ ಇಲ್ಲ. ಎಲ್ಲೆಡೆಯೂ ಭೂಮಿಯು ಎಲ್ಲದರಿಂದಲೂ ಬಂಜರಾಯಿತು.

ಅಥಾದಿತೇಯಾಃ ಸಂತ್ರಸ್ತಾಃ ಬ್ರಹ್ಮಾಣಮಿದಮಬ್ರುವನ್ ।
ಕಥಂ ಶಕ್ಷ್ಯಾಮಹೇ ಬ್ರಹ್ಮನ್ ದಾನವೈರಭಿಮರ್ದನಮ್ ॥ ೧೪ ॥

ಆ ಸಂದರ್ಭದಲ್ಲಿ ದೇವತೆಗಳು ಸಂತ್ರಸ್ತರಾಗಿ ಚತುರ್ಮುಖ ಬ್ರಹ್ಮನಲ್ಲಿ ಮೊರೆಯಿಟ್ಟು ಹೀಗೆ ಪ್ರಾರ್ಥಿಸಿದರು: ಎಲೈ ಪ್ರಭುವೇ, ಸಮಗ್ರ ಭೂಮಂಡಲವೇ ದಾನವರಿಂದ ಅರ್ದಿತ(ಪೀಡಿತ)ವಾಗಿದೆ. ಇದನ್ನು ನಾವು ಹೇಗೆ ತಾನೆ ಸಹಿಸೋಣ?

ಹಿರಣ್ಯಾಕ್ಷೇಣ ಭಗವನ್ ಗೃಹೀತೇಯಂ ವಸುಂಧರಾ ।
ನ ಶಕ್ಷ್ಯಾಮೋ ವಯಂ ತತ್ರ ಪ್ರವೇಷ್ಟುಂ ಜಲದುರ್ಗಮಮ್ ॥ ೧೫ ॥

ಪೂಜ್ಯನೇ, ಭೂಮಿಯನ್ನು ಹಿರಣ್ಯಾಕ್ಷನು ಹಿಡಿದು ಸಮುದ್ರದಲ್ಲಿ ಹೊಕ್ಕಿದ್ದಾನೆ. ಆ ಮಹಾಜಲದೊಳಗೆ ಪ್ರವೇಶಿಸಲು ನಾವ್ಯಾರೂ ಸಮರ್ಥರಲ್ಲ.

ತಾನಾಹ ಭಗವಾನ್ ಬ್ರಹ್ಮಾ ಮುನಿರೇವ ಪ್ರಸಾದ್ಯತಾಮ್ ।
ಅಗಸ್ತ್ಯೋಽಸೌ ಮಹಾತೇಜಾಃ ಪಾತುಂ ತಜ್ಜಲಮಂಜಸಾ ॥ ೧೬ ॥

ಅವರನ್ನು ಕುರಿತು ಬ್ರಹ್ಮನು ಹೇಳಿದನು: ಎಲೈ ದೇವತೆಗಳಿರಾ, ಮಹಾತೇಜಸ್ವಿಯಾದ ಅಗಸ್ತ್ಯಮುನಿಯು ಆ ಸಮುದ್ರಜಲವನ್ನು ಸಮಗ್ರವಾಗಿ ಪಾನ ಮಾಡಲು ಸಮರ್ಥನಾಗಿದ್ದಾನೆ. ಅವನನ್ನು ಸಂತೋಷಗೊಳಿಸಿ ಪ್ರಾರ್ಥಿಸಿರಿ.

ತಥೇತಿ ಚೋಕ್ತ್ವಾ ತೇ ದೇವಾ ಮುನಿಮೂಚುರ್ಮುದಾನ್ವಿತಾಃ ।
ತ್ರಾಯಸ್ವ ಲೋಕಾನ್ ವಿಪ್ರರ್ಷೇ ಜಲಮೇತತ್ ಕ್ಷಯಂ ನಯ॥ ೧೭ ॥

ದೇವತೆಗಳು ಬ್ರಹ್ಮನ ಮಾತಿನಿಂದ ಸಂತುಷ್ಟರಾಗಿ ಹಾಗೆಯೇ ಆಗಲಿ ಎಂದು ಹೇಳಿ ಅಗಸ್ತ್ಯಮುನಿಯ ಬಳಿ ಸಾಗಿದರು. ವಿಪ್ರರ್ಷಿಯೇ, ತುಂಬಿದ ನೀರನ್ನೆಲ್ಲ ನಾಶ ಮಾಡಿ ಲೋಕವನ್ನು ರಕ್ಷಿಸು ಎಂದು ಪ್ರಾರ್ಥಿಸಿದರು.

ತಥೇತಿ ಚೋಕ್ತ್ವಾ ಭಗವಾನ್ ಕಾಲಾನಲಸಮದ್ಯುತಿಃ ।
ಧ್ಯಾಯನ್ ಜಲಾದನಿವಹಾನ್ ತದ್ರೂಪೇಣ ಜಲಮ್ ಪಪೌ ॥ ೧೮ ॥

ಪ್ರಳಯಕಾಲದಂತೆ ಕಾಂತಿಯುಳ್ಳ ಅಗಸ್ತ್ಯನು ದೇವತೆಗಳ ಪ್ರಾರ್ಥನೆಯಂತೆ ಹಾಗೆಯೇ ಆಗಲೆಂದು ಮನಸ್ಸಿನಲ್ಲಿ ಹರಿಯನ್ನು ಧ್ಯಾನಿಸುತ್ತಾ ಮೇಘಗಳ ರೂಪದಲ್ಲಿ ನಿಂತು ಸಮುದ್ರದ ನೀರನ್ನು ಪಾನ ಮಾಡಿದನು.

ವ್ಯಾಖ್ಯಾನ ವಿಶೇಷ– ನಾವಿರುವ ಭೂಭಾಗದಿಂದ ರಸಾತಳವು ಕೆಳಭಾಗದಲ್ಲಿ ಅರವತ್ತುಸಾವಿರ ಯೋಜನಾತ್ಮಕವಾದ ಪ್ರದೇಶದಲ್ಲಿದೆ. ಅದರ ಕೆಳಗಡೆ ಪರ್ವತಗಳಿಂದ ಕೂಡಿದ ಈ ಭೂಮಿಯು

ಹಿರಣ್ಯಾಕ್ಷನಿಂದ ಕೊಂಡೊಯ್ಯಲ್ಪಟ್ಟಿದೆ. ಘನೋದಕದ ಒಳಗಡೆ ಲಕ್ಷಯೋಜನ ಪರ್ಯಂತ ಕೆಳಗಿರುವ ಈ ಭೂಮಿಯು ಮುಳುಗಿ ಹೋಯಿತು ಎಂದು ಅರ್ಥ. ಭೂಮಿಯ ಊರ್ಧ್ವಭಾಗವು ನಾವು ನಿಂತಿರುವ ಭಾಗದಿಂದ ಗಮನಿಸಿದಾಗ ಅರವತ್ತು ಸಾವಿರ ಯೋಜನ ಕೆಳಗಡೆ ಇದೆ. ಆದ್ದರಿಂದ ಹಿರಣ್ಯಾಕ್ಷನು ರಸಾತಳದಲ್ಲಿ ಭೂಮಿಯನ್ನು ಅಡಗಿಸಿಟ್ಟ ಎಂದರೆ ಘನೋದಕದಲ್ಲಿಮುಳುಗಿದ ಭೂಮಿಯ ಶಿಖರವು ರಸಾತಳದಲ್ಲಿಕಾಣಿಸುತ್ತಿತ್ತು ಎಂದು ಅರ್ಥ. ಇಲ್ಲದಿದ್ದರೆ ಏಳುಕೋಟಿ ಹದಿನಾಲ್ಕು ಲಕ್ಷ ವಿಸ್ತಾರವುಳ್ಳ ಭೂಮಿಯು ಹತ್ತು ಸಾವಿರ ಯೋಜನ ಪರಿಮಿತಿಯುಳ್ಳ; ಭೂಮಿಯ ಹೊಂಡದಂತೆ ಇರುವ ರಸಾತಳಲೋಕದಲ್ಲಿ ಹೇಗೆ ಪ್ರವೇಶಿಸಲು ಸಾಧ್ಯ ? ಆದ್ದರಿಂದ ಹಿರಣ್ಯಾಕ್ಷನು ಭೂಮಿಯನ್ನು ಮುಳುಗಿಸಿಟ್ಟಿದ್ದು ಘನೋದಕದಲ್ಲಿ. ಅದರ ಶಿಖರಭಾಗವು ರಸಾತಳಲೋಕದಲ್ಲಿಕಾಣಿಸುತ್ತಿತ್ತು ಎಂದು ಅಭಿಪ್ರಾಯ. ಇಲ್ಲದಿದ್ದರೆ ಹತ್ತು ಸಾವಿರ ಯೋಜನ ಪರಿಮಿತಿಯುಳ್ಳ ರಸಾತಳದಲ್ಲಿ ಏಳು ಕೋಟಿ ಹದಿನಾಲ್ಕು ಲಕ್ಷ ಪರಿಮಿತಿಯ ಭೂಮಿಯನ್ನು ಅಡಗಿಸುವುದು ಅಸಂಭವವಾಗುತ್ತದೆ. ಆದ್ದರಿಂದ ಭೂಮಿಯನ್ನು ಘನೋದಕದಲ್ಲಿ ಮುಳುಗಿಸಿಟ್ಟಾಗ ಆ ನೀರು ಅರವತ್ತು ಸಾವಿರ ಯೋಜನ ಈ ಭೂಕಕ್ಷೆಯಿಂದ ಕೆಳಭಾಗದಲ್ಲಿರುವ ರಸಾತಳದಲ್ಲಿ ಕಾಣಿಸಿತು. ಆ ಭೂಮಿಯ ಮೇಲ್ಭಾಗದಲ್ಲಿ ಘನೋದಕದ ನೀರೆಲ್ಲವೂ ತುಂಬಿ ಹೋಯಿತು. ವಿಸ್ತಾರವಾಗಿ ಭೂಮಿಯ ಮೇಲ್ಭಾಗದಲ್ಲಿತುಂಬಿರುವ ನೀರನ್ನು ಅಗಸ್ತ್ಯರು ಮೇಘ ರೂಪದಲ್ಲಿನಿಂತು ಪಾನ ಮಾಡಿದರು. ಹೀಗಿದ್ದಾಗ ಆ ಭೂಮಿಯು ಕಣ್ಣಿಗೆ ಕಾಣಿಸುತ್ತಿತ್ತೆ ವಿನಾ ತನ್ನ ಕಕ್ಷೆಯನ್ನು ಸೇರಿರಲಿಲ್ಲ. ಆ ಪ್ರಸಂಗದಲ್ಲಿವರಾಹರೂಪಿಯಾದ ಪರಮಾತ್ಮನು ಘನೋದಕದ ಪ್ರದೇಶದಲ್ಲಿ ಪ್ರವೇಶಿಸಿ ಘನೋದಕ ಸಮುದ್ರದಲ್ಲಿ ಅಡಕವಾಗಿರುವ ಭೂಮಿಯನ್ನು, ಆ ಜಲದಲ್ಲಿಯೇ ವಿಹರಿಸಿ ತನ್ನ ಕೋರೆದಾಡೆಯಿಂದ ಭೂಮಿಯನ್ನು ಧರಿಸಿಕೊಂಡು ಮೇಲೆ ಆಗಮಿಸಲು ಆರಂಭಿಸಿದನು. ಆ ಸಂದರ್ಭದಲ್ಲಿಭೂಮಿಯ ಒಳಗಡೆ ಸೇರಿರುವ ಹಿರಣ್ಯಾಕ್ಷನು ವರಾಹನ ಬಳಿ ಯುದ್ಧಕ್ಕೆ ಆಗಮಿಸಿದನು. ಅವನ ಪರಿವಾರದವರೂ ಯುದ್ಧಕ್ಕೆ ಆಗಮಿಸಿದರು. ಆ ಹಿರಣ್ಯಾಕ್ಷನನ್ನು, ಅವನಿಗೆ ಸಂಬಂಧಿಸಿದ ದೈತ್ಯರನ್ನು ಸಂಹರಿಸಿ ಅದೇ ಭೂಮಿಯನ್ನು ಯಥಾಸ್ಥಾನಕ್ಕೆ ತಂದು ಕಕ್ಷೆಯಲ್ಲಿ ನಿಲ್ಲಿಸಿ ಈ ಭೂಮಂಡಲದಲ್ಲಿ ಕೊನೆಯ ಭಾಗದಲ್ಲಿರುವ ಘನೀಭೂತವಾದ ತಮಸ್ಸನ್ನು, ಕತ್ತಲೆಯನ್ನು ತೆಗೆದುಕೊಂಡು ಇನ್ನಾರೂ ಹಂದಾಡಿಸದಂತೆ ಅತ್ಯಂತ ದೃಢವಾಗಿ ಭೂಮಿಯನ್ನು ಕತ್ತಲೆಯಿಂದ ಘಟ್ಟಿಗೊಳಿಸಿ ಜೋಡಿಸಿದನು. ಆದ್ದರಿಂದ ವರಾಹರೂಪಿಯಾದ ಭಗವಂತನು ಸಮುದ್ರದಲ್ಲಿವಿಹಾರ ಮಾಡಿ ಭೂಮಿಯನ್ನು ತಂದ ಎಂಬ ಕಥೆಯ ಆಧಾರದಲ್ಲಿಅಗಸ್ತ್ಯರ ಜಲಪಾನವಾಗಲಿ ವಿರುದ್ಧವಾಗುವುದಿಲ್ಲ.

ಶೋಷಿತೇ ತು ಸಮುದ್ರೇ ಚ ದೇವಾಃ ಸರ್ಷಿಪುರೋಗಮಾಃ ।
ಬ್ರಹ್ಮಾಣಂ ಪ್ರಣಿಪತ್ಯೋಚುರ್ಮುನಿನಾ ಶೋಷಿತಂ ಜಲಮ್ ।
ಇತಿ ಭೂಯಃ ಸಮಾಚಕ್ಷ್ವ ಕಿಂ ಕರಿಷ್ಯಾಮಹೇ ವಿಭೋ ॥ ೧೯ ॥

ಅಗಸ್ತ್ಯರು ದೇವತೆಗಳ ಪ್ರಾರ್ಥನೆಯಂತೆ ಭೂಮಿಯ ಮೇಲ್ಭಾಗದಲ್ಲಿರುವ ನೀರಿನ ಸಮುದ್ರವನ್ನು ತನ್ನ ಸಾಮರ್ಥ್ಯಾತಿಶಯದಿಂದ ಒಣಗಿಸಿದ ಬಳಿಕ ಋಷಿಗಳಿಂದ ಕೂಡಿರುವ ದೇವತೆಗಳೆಲ್ಲರೂ ಚತುರ್ಮುಖ ಬ್ರಹ್ಮನ ಬಳಿ ಪುನಃ ಸಾಗಿ ನಮಸ್ಕರಿಸಿ ಹೀಗೆ ಕೇಳಿದರು: ಬ್ರಹ್ಮನೇ, ಅಗಸ್ತ್ಯಮುನಿಗಳು ಜಲವನ್ನು ಒಣಗಿಸಿದ್ದಾರೆ. ಆದರೆ ಭೂಮಿಯು ಇನ್ನೂ ಕೆಳಭಾಗದಲ್ಲಿಯೇ ಇದೆ. ಮುಂದೆ ಏನು ಮಾಡಬೇಕೆಂಬುದರ ಬಗ್ಗೆ ನೀನೇ ನಮಗೆ ತಿಳಿಸು.

ಸ್ವಯಂಭೂಸ್ತಾನುವಾಚೇದಂ ನಿಸೃಷ್ಟೋಽತ್ರ ವಿಧಿರ್ಮಯಾ ।
ತೇ ವರೇಣಾಭಿಸಂಪನ್ನಾ ಬಲೇನ ಚ ಮದೇನ ಚ ॥ ೨೦ ॥

ನಾವಬುದ್ಧ್ಯಂತಿ ಸಮ್ಮೂಢಾ ವಿಷ್ಣುಮವ್ಯಕ್ತದರ್ಶನಮ್ ।
ವರಾಹರೂಪಿಣಂ ದೇವಮದೃಷ್ಯಮಮರೈರಪಿ ॥ ೨೧ ॥

ಬ್ರಹ್ಮನು ಹೇಳುತ್ತಾನೆ– ಎಲೈ ದೇವತೆಗಳಿರಾ, ಮುಂದೆ ನಡೆಯಬೇಕಾದ ಕಾರ್ಯವೆಲ್ಲವೂ ಮೊದಲೇ ವಿಧಿಸಲ್ಪಟ್ಟಿದೆ. ಬಲಗರ್ವಿತರಾದ ದಾನವರು ನನ್ನ ವರಗಳಿಂದ ಕೊಬ್ಬಿ ಅಂಧರಾಗಿ ಮಿತಿಮೀರಿ ಹೋಗುತ್ತಿದ್ದಾರೆ. ಇದಕ್ಕಾಗಿ ವಿಷ್ಣುವು ವರಾಹರೂಪವನ್ನು ಧರಿಸಿ, ತನ್ನ ಇಚ್ಛಾಶಕ್ತಿಯಿಂದ ತನ್ನ ರೂಪವು ಯಾರಿಗೂ ತಿಳಿಯದಂತೆ ಮರೆಮಾಚಿಕೊಂಡು ದೇವತೆಗಳಿಗೂ ಅರಿಯದಂತಿದ್ದಾನೆ.

ಏಷ ವೇಗೇನ ಗತ್ವಾ ಹಿ ಯತ್ರ ತೇ ದಾನವಾಧಮಾಃ ।
ಅಂತರ್ಭೂಮಿಗತಾ ಘೋರಾ ನಿವಸಂತಿ ಸಹಸ್ರಶಃ ।
ಶಮಯಿಷ್ಯತಿ ತಚ್ಛ್ರುತ್ವಾ ಜಹೃಷುಃ ಸುರಸತ್ತಮಾಃ ॥ ೨೨ ॥

ಈ ವರಾಹರೂಪಿ ಭಗವಂತನು ವೇಗದಿಂದ ಭೂಮಿಯ ಒಳಗಡೆ ಹೋಗಿ ಅಲ್ಲಿರುವ ನೀಚ ದಾನವರನ್ನು ನಿಗ್ರಹಿಸುತ್ತಾನೆ. ನೀಚ ದಾನವರಾದರೂ ಸಾವಿರಾರು ಸಂಖ್ಯೆಯಿಂದ ಈ ಭೂಮಿಯ ವಿವರದ ಒಳಗಡೆಯೇ ವಾಸಿಸುತ್ತಿದ್ದಾರೆ. ಅವರೆಲ್ಲರನ್ನೂ ಭಗವಂತನು ನಿಗ್ರಹಿಸುತ್ತಾನೆ ಎಂದು ಹೇಳಿದಾಗ ದೇವತೆಗಳಿಗೆ ಬಹಳ ಸಂತೋಷವುಂಟಾಯಿತು.

ತತೋ ವಿಷ್ಣುರ್ಮಹಾತೇಜಾ ವಾರಾಹಂ ರೂಪಮಾಸ್ಥಿತಃ ।
ಅಂತರ್ಭೂಮಿಂ ಸಂಪ್ರವಿಶ್ಯ ಜಗಾಮ ದಿತಿಜಾನ್ ಪ್ರತಿ ॥ ೨೩ ॥

ಇಷ್ಟರಲ್ಲಿಯೇ ಬ್ರಹ್ಮನು ಹೇಳಿದಂತೆ ಭಗವಂತನು ವರಾಹರೂಪವನ್ನು ಧರಿಸಿ ಭೂಮಿಯ ಒಳಗಡೆ ಪ್ರವೇಶ ಮಾಡಿ ದೈತ್ಯರಿದ್ದಲ್ಲಿಗೆ ಸಾಗಿದನು.

ದೃಷ್ಟ್ವಾ ಚ ಸಹಿತಾಃ ಸರ್ವೇ ದೈತ್ಯಾಃ ಸತ್ವಮಮಾನುಷಮ್ ।
ಪ್ರಸಹ್ಯ ತರಸಾ ಸರ್ವೇ ಸಂತಸ್ಥುಃ ಕಾಲಮೋಹಿತಾಃ ॥ ೨೪ ॥

ಆ ವರಾಹನನ್ನು ಕಂಡ ಎಲ್ಲಾ ದೈತ್ಯರೂ ಒಟ್ಟಾಗಿ ಮೃತ್ಯುವಶರಾಗಿ ಅಮಾನುಷನಾದ ಭಗವಂತನನ್ನು ಒಮ್ಮೆಲೆ ಎದುರಿಸಲು ನಿಂತರು.

ತತಸ್ತೇ ಸಮಭಿದ್ರುತ್ಯ ವರಾಹಂ ಜಗೃಹುಃ ಸಮಮ್ ।
ಸಂಕ್ರುದ್ಧಾಶ್ಚ ವರಾಹಂ ತಂ ವ್ಯಕರ್ಷಂತ ಸಮಂತತಃ ॥ ೨೫ ॥

ವರಾಹನನ್ನು ಸುತ್ತಲೂ ಮುತ್ತಿಕೊಂಡು ತನ್ನ ಬಲವನ್ನು ತೋರಿಸಲು ಆರಂಭಿಸಿದರು. ತಮ್ಮ ಮಹಾಕಾರ್ಯಗಳಿಂದ ವರಾಹನ ಮೇಲೆ ಬಿದ್ದು ಆಚೆ-ಈಚೆ ಅವನನ್ನು ಸೆಳೆಯಲು ಪ್ರಯತ್ನಿಸಿದರು.

ದಾನವೇಂದ್ರಾ ಮಹಾಕಾಯಾ ಮಹಾವೀರ್ಯಬಲೋಚ್ಛ್ರಿತಾಃ ।
ನಾಶಕ್ನುವಂಶ್ಚ ಕಿಂಚಿತ್ತೇ ತಸ್ಯ ಕರ್ತುಂ ತದಾ ವಿಭೋ ॥ ೨೬ ॥

ಆ ದಾನವರೆಲ್ಲರೂ ಮಹಾಕಾಯವುಳ್ಳವರೂ, ಮಹಾವೀರ್ಯ, ಬಲಗಳಿಂದ ಗರಿಷ್ಠರೂ ಆಗಿದ್ದರು. ಆದರೂ ಅವರಿಂದ ವರಾಹನ ಮೇಲೆ ತಮ್ಮ ದರ್ಪವನ್ನು ತೋರಿಸಲು ಕಿಂಚಿತ್ತೂ ಸಾಧ್ಯವಾಗಲಿಲ್ಲ.

ತತೋಽಗಚ್ಛನ್ ವಿಸ್ಮಯಂ ತೇ ದಾನವೇಂದ್ರಾ ಭಯಂ ತಥಾ ।
ಸಂಶಯಂ ಗತಮಾತ್ಮಾನಂ ಮೇನಿರೇ ಚ ಸಹಸ್ರಶಃ ॥ ೨೭ ॥

ಅವರೆಲ್ಲ ಭಯಾಶ್ಚರ್ಯಗಳಿಂದ ಬಸವಳಿದರು. ತಾವು ಇನ್ನು ಬದುಕುವುದು ಸಂಶಯವೆಂದು ಸಾವಿರಾರು ಸಂಖ್ಯೆಯಲ್ಲಿರುವ ಆ ದೈತ್ಯರಿಗೆ ತೋರಿತು.

ತತೋ ದೇವಾಧಿದೇವಃ ಸ ಯೋಗಾತ್ಮಾ ಯೋಗಸಾರಥಿಃ ।
ಯೋಗಮಾಸ್ಥಾಯ ಭಗವಾಂಸ್ತದಾ ಭರತಸತ್ತಮ ॥ ೨೮ ॥

ವಿನನಾದ ಮಹಾನಾದಂ ಕ್ಷೋಭಯನ್ ದೈತ್ಯದಾನವಾನ್ ।
ಸನ್ನಾದಿತಾ ಯೇನ ಲೋಕಾಃ ಸರ್ವಾಶ್ಚೈವ ದಿಶೋ ದಶ ॥ ೨೯ ॥

ಇಷ್ಟರಲ್ಲಿ ಯೋಗೇಶ್ವರನಾದ, ಯೋಗಾತ್ಮನೆನಿಸಿದ, ದೇವಾಧಿದೇವನಾದ ಭಗವಂತನು ತನ್ನ ಯೋಗವನ್ನು ಅವಲಂಬಿಸಿ ದೈತ್ಯರ ಎದೆ ನಡುಗುವಂತೆ ದೊಡ್ಡದಾದ ಸಿಂಹನಾದವನ್ನು ಮಾಡಿದನು. ಆ ನಾದಕ್ಕೆ ಸಮಸ್ತ ಲೋಕಗಳು ನಡುಗಿದವು. ಅದರ ಪ್ರತಿಧ್ವನಿಯು ಹತ್ತು ದಿಕ್ಕುಗಳಲ್ಲಿಯೂ ಮೊಳಗಿತು.

ತೇನ ಸನ್ನಾದಶಬ್ದೇನ ಲೋಕಾನಾಂ ಕ್ಷೋಭ ಆಗಮತ್ ।
ಸಂಶ್ರಾಂತಾಶ್ಚ ದಿಶಃ ಸರ್ವಾ ದೇವಾಃ ಶಕ್ರಪುರೋಗಮಾಃ ॥ ೩೦ ॥

ಆ ವರಾಹನ ಭಯಂಕರವಾದ ನಾದದಿಂದ ಉಂಟಾದ ಶಬ್ದದಿಂದ ಸಮಸ್ತ ಲೋಕಗಳೇ ಕ್ಷೋಭೆಗೊಂಡವು. ದಿಕ್ಕುಗಳು ಬಳಲಿದವು. ಇಂದ್ರನೇ ಮೊದಲಾದ ದೇವತೆಗಳೂ ಭಯಭೀತರಾದರು.

ನಿರ್ವಿಚೇಷ್ಟಂ ಜಗಚ್ಚಾಪಿ ಬಭೂವಾತಿಭೃಶಂ ತದಾ ।
ಸ್ಥಾವರಂ ಜಂಗಮಂ ಚೈವ ತೇನ ನಾದೇನ ಮೋಹಿತಮ್ ॥ ೩೧ ॥

ಸಮಗ್ರ ಜಗತ್ತು ಕ್ಷಣ ಕಾಲ ನಿಶ್ಚೇಷ್ಟಿತವಾಯಿತು. ಆ ವರಾಹನಾದವು ಅತ್ಯಂತ ಭಯಂಕರವಾಗಿತ್ತು. ಸ್ಥಾವರ-ಜಂಗಮಾತ್ಮಕವಾದ ಪ್ರಪಂಚವು ನಾದದಿಂದಲೇ ಮೋಹಿತವಾಗಿತ್ತು.

ತತಸ್ತೇ ದಾನವಾಃ ಸರ್ವೇ ತೇನ ನಾದೇನ ಭೀಷಿತಾಃ ।
ಪೇತುರ್ಗತಾಸವಶ್ಚೈವ ವಿಷ್ಣುತೇಜಃಪ್ರಮೋಹಿತಾಃ ॥ ೩೨ ॥

ಸಮಸ್ತ ದಾನವರು ಆ ನಾದದಿಂದಲೇ ಭಯಗ್ರಸ್ಥರಾಗಿ ಪ್ರಾಣಗಳನ್ನು ಕಳೆದುಕೊಂಡು ಬಿದ್ದರು. ವಿಷ್ಣುವಿನ ತೇಜಸ್ಸಿನಿಂದ ಮೋಹಿತರಾದರು.

ತ್ರಸ್ತಾಂಶ್ಚ ದೇವಾನಾಲೋಕ್ಯ ಬ್ರಹ್ಮಾ ಪ್ರಾಹ ಪಿತಾಮಹಃ ।
ಯೋಗೇಶ್ವರೋಽಯಂ ಭಗವಾನ್ ವಾರಾಹಂ ರೂಪಮಾಸ್ಥಿತಃ ।
ನರ್ದಮಾನೋಽತ್ರ ಸಂಯಾತಿ ಮಾ ಭೈಷ್ಟ ಸುರಸತ್ತಮಾಃ ॥ ೩೩ ॥

ಸಮಸ್ತ ದೇವತೆಗಳೆಲ್ಲರೂ ವರಾಹನಾದದಿಂದ ಹೆದರಿಹೋದಾಗ ಪಿತಾಮಹರಾದ ಬ್ರಹ್ಮದೇವರು ಅವರನ್ನು ಕುರಿತು ಹೇಳಿದರು: ದೇವತೆಗಳೇ, ಷಡ್ಗುಣೈಶ್ವರ್ಯ ಸಂಪನ್ನನಾದ ಯೋಗೇಶ್ವರನಾದ ಭಗವಂತನು ವರಾಹರೂಪವನ್ನು ತಾಳಿದ್ದಾನೆ. ದೈತ್ಯರನ್ನೆಲ್ಲ ಸದೆಬಡಿದು ಭೂಮಿಯನ್ನು ಹೊತ್ತು ತರುತ್ತಾನೆ. ಸುರೋತ್ತಮರೇ, ಹೆದರಬೇಡಿರಿ.

ಏವಮುಕ್ತ್ವಾ ತತೋ ಬ್ರಹ್ಮಾ ನಮಶ್ಚಕ್ರೇ ಪಿತಾಮಹಃ ।
ದೇವತಾ ಮುನಯಶ್ಚೈವ ವಿಷ್ಣುಂ ವೈ ಮುಕ್ತಿಹೇತವೇ ॥ ೩೪ ॥

ಈ ರೀತಿಯಾಗಿ ಚತುರ್ಮುಖ ಬ್ರಹ್ಮನು ಹೇಳಿ ಆ ವರಾಹನಿಗೆ ನಮಸ್ಕರಿಸಿದನು. ದೇವತೆಗಳು ಮುನಿಗಳೆಲ್ಲರೂ ಮುಕ್ತಿಗಾಗಿ ಆ ವಿಷ್ಣುವನ್ನು ನಮಸ್ಕರಿಸಿದರು.

ತತೋ ಹರಿರ್ಮಹಾತೇಜಾ ಬ್ರಹ್ಮಾಣಮಭಿನಂದ್ಯ ಚ ।
ರಸಾತಲಗತಶ್ಚಾಪಿ ವರಾಹಸ್ತ್ರಿದಶದ್ವಿಷಾಮ್ ।
ಖುರೈರ್ವಿದಾರಯಾಮಾಸ ಮಾಂಸಮೇದೋಸ್ಥಿಸಂಚಯಾನ್ ॥ ೩೫ ॥

ಬಳಿಕ ಮಹಾತೇಜಸ್ವಿಯಾದ ಶ್ರೀಹರಿಯು ಚತುರ್ಮುಖಬ್ರಹ್ಮನನ್ನು ಅಭಿನಂದಿಸಿ ರಸಾತಳದಲ್ಲಿದ್ದವನಾದರೂ ವರಾಹರೂಪಿಯಾದ ಪರಮಾತ್ಮನು ದೇವತೆಗಳನ್ನು ದ್ವೇಷಿಸುವ ದೈತ್ಯರನ್ನು ತನ್ನ ಖುರ(ಉಗುರು)ಗಳಿಂದಲೇ ಸೀಳಿಹಾಕಿದನು. ಮಾಂಸ, ಮೇದ, ಅಸ್ಥಿಗಳ ಬೆಟ್ಟವನ್ನೇ ಪೇರಿಸಿದನು.

ನಾದೇನ ತೇನ ಮಹತಾ ಸನಾತನ ಇತಿ ಸ್ಮೃತಃ ।
ಪದ್ಮನಾಭೋ ಮಹಾಯೋಗೀ ಭೂತಾತ್ಮಾ ಭೂತಭಾವನಃ ॥ ೩೬ ॥

ಉತ್ತಮವಾದ ನಾದದಿಂದ ಸಹಿತನಾದುದರಿಂದಲೇ ಭಗವಂತನು ಸನಾದನ ಎಂಬ ಶಬ್ದದಿಂದ ಕರೆಸಿಕೊಳ್ಳಲ್ಪಟ್ಟಿದ್ದಾನೆ. ಸನಾದನ ಶಬ್ದವೇ ನಿರುಕ್ತದಿಂದ ಸನಾತನ ಎನಿಸಿದೆ. ಪದ್ಮನಾಭನು ಮಹಾಯೋಗಿಯೂ, ಭೂತಭಾವನನೂ, ಭೂತಾತ್ಮನೂ ಆಗಿದ್ದಾನೆ.

ತತೋ ದೇವಗಣಾಃ ಸರ್ವೇ ಪಿತಾಮಹಮುಪಾದ್ರವನ್ ।
ತತ್ರ ಗತ್ವಾ ಮಹಾತ್ಮಾನಮೂಚುಶ್ಚೈವ ಜಗತ್ಪತಿಮ್ ॥ ೩೭ ॥

ಬಳಿಕ ಸಮಸ್ತ ದೇವತೆಗಳು ಚತುರ್ಮುಖ ಬ್ರಹ್ಮನನ್ನು ಕುರಿತು ಸ್ತುತಿಸಲು ಆಗಮಿಸಿದರು. ಎಲ್ಲರೂ ಆಗಮಿಸಿ ಚತುರ್ಮುಖ ಬ್ರಹ್ಮನನ್ನು ಕುರಿತು ಹೀಗೆ ಹೇಳಿದರು.

ನಾದೋಽಯಂ ಕೀದೃಶೋ ದೇವ ನೈತಂ ವಿದ್ಮ ವಯಂ ಪ್ರಭೋ ।
ಕೋಽಸೌ ಹಿ ಕಸ್ಯ ವಾ ನಾದೋ ಯೇನ ವಿಹ್ವಲಿತಂ ಜಗತ್ ।
ದೇವಾಶ್ಚ ದಾನವಾಶ್ಚೈವ ಮೋಹಿತಾಸ್ತಸ್ಯ ತೇಜಸಾ ॥ ೩೮ ॥

ದೇವೋತ್ತಮನೇ, ಇದು ಯಾವ ನಾದವು? ಎಂದಿಗೂ ಇಂತಹ ನಾದದ ಸ್ವರೂಪವನ್ನೇ ನಾವು ಕೇಳಿಸಿಕೊಂಡಿಲ್ಲ. ಈ ನಾದವನ್ನು ಮಾಡಿದ ವ್ಯಕ್ತಿಯು ಯಾರು? ಯಾರ ನಾದವು ಇದು? ಈ ನಾದದಿಂದ ಜಗತ್ತೇ ಕಂಗಾಲಾಗಿದೆ. ಅವನ ನಾದದ ತೇಜಸ್ಸಿನಿಂದಲೇ ದೇವ-ದಾನವರೆಲ್ಲರೂ ಮೋಹಿತರಾಗಿದ್ದಾರೆ.

ಏತಸ್ಮಿನ್ನಂತರೇ ವಿಷ್ಣುರ್ವಾರಾಹಂ ರೂಪಮಾಸ್ಥಿತಃ ।
ಉದತಿಷ್ಠನ್ಮಹಾಬಾಹೋ ಸ್ತೂಯಮಾನೋ ಮಹರ್ಷಿಭಿಃ ॥ ೩೯ ॥

ಈ ನಡುವೆ ವಿಷ್ಣುವು ವರಾಹರೂಪವನ್ನು ಹೊಂದಿದ್ದ, ವರಾಹರೂಪದಿಂದ ಪ್ರಕಟನಾದ. ಮಹರ್ಷಿಗಳಿಂದಲೂ, ದೇವತೆಗಳಿಂದಲೂ ಸ್ತೋತ್ರಪಾತ್ರನಾದ ಮೇಲೆ ಆಗಮಿಸಿದನು.

ಪಿತಾಮಹಃ

ದಿವ್ಯಂ ಮಹತ್ ಯುದ್ಧಮಾಸೀನ್ಮಹಾತ್ಮನೋಃ ।
ಹಿರಣ್ಯಾಕ್ಷಸ್ಯ ವಿಷ್ಣೋಶ್ಚ ಸರ್ವಸಂಕ್ಷೋಭಕಾರಣಮ್ ॥ ೪೦ ॥

ಚತುರ್ಮುಖ ಬ್ರಹ್ಮ– ದೇವತೆಗಳೇ, ಮಹಾತ್ಮನಾದ ಹಿರಣ್ಯಾಕ್ಷನಿಗೂ, ವಿಷ್ಣುವಿಗೂ ಭಯಂಕರವಾದ ಯುದ್ಧವು ಸಮಸ್ತ ಜಗತ್ತೇ ನಾಶವಾಗುವಂತೆ ನಡೆಯಿತು.

ಜಘಾನ ಚ ಹಿರಣ್ಯಾಕ್ಷಮಂತರ್ಭೂಮಿಗತಂ ಹರಿಃ ।
ತದಾಕರ್ಣ್ಯ ಮಹಾತೇಜಾ ಬ್ರಹ್ಮಾ ಮಧುರಮಬ್ರವೀತ್ ॥ ೪೧ ॥

ಭೂಮಿಯ ವಿವರದೊಳಗೆ ಸೇರಿರುವ ಹಿರಣ್ಯಾಕ್ಷನನ್ನು ಶ್ರೀಹರಿಯು ಕೊಂದಿದ್ದಾನೆ. ಹೀಗೆ ಆ ಶಬ್ದವನ್ನು ಕೇಳಿಸಿಕೊಂಡೇ ಚತುರ್ಮುಖ ಬ್ರಹ್ಮನು ಹಿರಣ್ಯಾಕ್ಷನ ಸಂಹಾರದ ಮಧುರವಾರ್ತೆಯನ್ನು ದೇವತೆಗಳಿಗೆ ಹೇಳಿದನು.

ನಿಹತ್ಯ ದಾನವಪತೀನ್ ಮಹಾವರ್ಷ್ಮಾ ಮಹಾಬಲಃ ।
ಏಷ ದೇವೋ ಮಹಾಯೋಗೀ ಭೂತಾತ್ಮಾ ಭೂತಭಾವನಃ ॥ ೪೨ ॥

ಸರ್ವಭೂತೇಶ್ವರೋ ಯೋಗೀ ಮುನಿರಾತ್ಮಾ ತಥಾऽऽತ್ಮನಃ ।
ಸ್ಥಿರೀಭವತ ಕೃಷ್ಣೋऽಯಂ ಸರ್ವವಿಘ್ನವಿನಾಶನಃ ॥ ೪೩ ॥

ಎಲೈ ದೇವತೆಗಳಿರಾ, ಮಹಾಯೋಗೀಶ್ವರನೆನಿಸಿದ ಸರ್ವೇಶ್ವರನಾದ ಭಗವಂತನೇ ಇವನು. ಇವನು ದೊಡ್ಡ ಆಕಾರದಿಂದಲೂ, ಮಹಾಬಲದಿಂದಲೂ ಕೂಡಿದವನಾಗಿ, ಸಮುದ್ರದೊಳಗಿದ್ದ ದಾನವರನ್ನೆಲ್ಲ ಸಂಹರಿಸಿ ಆಗಮಿಸುತ್ತಿದ್ದಾನೆ. ಇವನೇ ಸಮಸ್ತ ಜೀವರಿಗೂ ಆತ್ಮಭೂತನು. ನಿಮ್ಮ ವಿಘ್ನಗಳನ್ನು ನಿವಾರಿಸುವಂತಹ ಕೃಷ್ಣನೇ ಇವನಾಗಿದ್ದಾನೆ. ನೀವೆಲ್ಲರೂ ಸ್ಥಿರವಾಗಿ ನಿಲ್ಲಿರಿ. ಹೆದರಬೇಡಿ.

ಕೃತ್ವಾ ಕರ್ಮಾತಿಸಾಧ್ವೇತದಶಕ್ಯಮಮಿತಪ್ರಭಃ ।
ಸಮಾಯಾತಃ ಸ್ವಮಾತ್ಮಾನಂ ಮಹಾಭಾಗೋ ಮಹಾದ್ಯುತಿಃ ॥ ೪೪ ॥

ಇವನು ಅಮೃತವಾದ ತೇಜಸ್ಸುಳ್ಳ ಮಹಾನುಭಾವನು. ಬೇರೊಬ್ಬರಿಗೆ ಸಾಧ್ಯವಾಗದ ಕಾರ್ಯಗಳನ್ನು ನಡೆಸಿಬಂದು ತನ್ನ ಶುದ್ಧರೂಪದಿಂದ ಕಾಣಿಸುತ್ತಿದ್ದಾನೆ. ಇವನನ್ನು ನೋಡಿರಿ.

ಪದ್ಮನಾಭೋ ಮಹಾಯೋಗೀ ಪುರಾಣಪುರುಷೋತ್ತಮಃ ।
ನ ಸಂತಾಪೋ ನ ಭೀಃ ಕಾರ್ಯಾ ಶೋಕೋ ವಾ ಸುರಸತ್ತಮೈಃ ॥೪೫॥

ಪದ್ಮನಾಭನು ಈತನೇ. ಮಹಾಯೋಗಿಯಾದ ಪುರಾಣಪುರುಷೋತ್ತಮನು ಈತನೇ. ಈತನನ್ನು ಕಂಡ ನೀವು ಸಂತಾಪವನ್ನು ಪಡಬೇಡಿ, ಹೆದರಬೇಡಿ. ಸುರೋತ್ತಮರೇ ಶೋಕಕ್ಕೆ ತುತ್ತಾಗದಿರಿ.

ವಿಧಿರೇಷ ಪ್ರಭಾವಶ್ಚ ಕಾಲಃ ಸಂಕ್ಷಯಕಾರಕಃ ।
ಲೋಕಾನ್ ಧಾರಯತಾ ತೇನ ನಾದೋ ಮುಕ್ತೋ ಮಹಾತ್ಮನಾ ॥೪೬॥

ಇವನೇ ಸೃಷ್ಟಿಕರ್ತನು. ಈತನೇ ದೈವವು. ಇವನೇ ಲೋಕಧಾರಕನು. ಎಲ್ಲವನ್ನೂ ಸಂಹರಿಸುವ ಕಾಲನೂ ಇವನೇ. ನಾವು ಕೇಳಿದ ಮಹಾಧ್ವನಿಯೂ ಈ ಮಹಾತ್ಮನದ್ದೇ.

ಸ ಏಷ ಹಿ ಮಹಾಬಾಹುಃ ಸರ್ವಲೋಕನಮಸ್ಕೃತಃ ।
ಅಚ್ಯುತಃ ಪುಂಡರೀಕಾಕ್ಷಃ ಸರ್ವಭೂತಾದಿರೀಶ್ವರಃ ॥ ೪೭ ॥

ಅಚ್ಯುತನೂ, ಪುಂಡರೀಕಾಕ್ಷನೂ, ಸಮಸ್ತಕ್ಕೂ ಆದಿಕಾರಣನೂ ಆದ ಈ ಮಹಾಪುರುಷನು ಸಮಸ್ತ ಲೋಕಗಳಿಂದ ನಮಸ್ಕರಿಸಲ್ಪಡತಕ್ಕವನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಷಟ್‌ತ್ರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಮೂವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೇಳನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನಿಗೆ ನಾರದರ ಕಥೆಯ ಮೂಲಕವಾಗಿ
ಶ್ರೀಕೃಷ್ಣನ ತತ್ತ್ವವನ್ನು ನಿರೂಪಿಸಿದುದು.

ಯುಧಿಷ್ಠಿರಃ

ಪಿತಾಮಹ ಮಹಾಪ್ರಾಜ್ಞ ಕೇಶವಸ್ಯ ಮಹಾತ್ಮನಃ ।
ವಕ್ತುಮರ್ಹಸಿ ತತ್ತೇನ ಮಾಹಾತ್ಮ್ಯಂ ಪುನರೇವ ತು ॥ ೧ ॥

ಯುಧಿಷ್ಠಿರ– ಪಿತಾಮಹನೇ, ಮಹಾಪ್ರಾಜ್ಞನೇ, ಮಹಾತ್ಮನಾದ ಕೇಶವನ ಮಾಹಾತ್ಮ್ಯವನ್ನು ಮತ್ತೂ ಯಥಾರ್ಥವಾಗಿ ನನಗೆ ಹೇಳಲು ಅರ್ಹನಾಗಿದ್ದಿ.

ನ ತೃಪ್ಯಾಮ್ಯಹಮಪ್ಯೇನಂ ಪಶ್ಯನ್ ಶೃಣ್ವಂಶ್ಚ ಭಾರತ ।
ಏವಂ ಕೃಷ್ಣಂ ಮಹಾಬಾಹೋ ತಸ್ಮಾದೇತದ್ ಬ್ರವೀಹಿ ಮೇ ॥ ೨ ॥

ಶ್ರೀಕೃಷ್ಣನ ಕುರಿತಾದ ವಿಚಾರವನ್ನು ಎಷ್ಟೆಷ್ಟು ಕೇಳಿದರೂ, ಅವನನ್ನು ಎಷ್ಟೆಷ್ಟು ನೋಡಿದರೂ ನನಗೆ ತೃಪ್ತಿಯಾಗುವುದಿಲ್ಲ. ಆದ್ದರಿಂದ ಕೃಷ್ಣನ ಕುರಿತಾಗಿ ಮತ್ತೂ ಚೆನ್ನಾಗಿ ನನಗೆ ವಿವರಿಸಿ ಹೇಳು.

ಭೀಷ್ಮಃ

ಶೃಣು ರಾಜನ್ ಕಥಾಮೇತಾಂ ವೈಷ್ಣವೀಂ ಪಾಪನಾಶನೀಮ್ ।
ನಾರದೋ ಮಾಂ ಪುರಾ ಪ್ರಾಹ ಯಾಮಹಂ ತೇ ವದಾಮಿ ತಾಮ್ ॥

ಭೀಷ್ಮ– ರಾಜನೇ, ಪಾಪನಾಶಕನಾದ ಶ್ರೀವಿಷ್ಣುವಿನ ಪರತತ್ತ್ವವನ್ನು ಕುರಿತು ಹಿಂದೊಮ್ಮೆ ನನಗೆ ನಾರದರು ಹೇಳಿದ ಕಥೆಯನ್ನೇ ನಾನು ನಿನಗೆ ತಿಳಿಸುತ್ತೇನೆ.

ದೇವರ್ಷಿರ್ನಾರದಃ ಪೂರ್ವಂ ತತ್ತ್ವಂ ವೇತ್ಸ್ಯಾಮಿ ವೈ ಹರೇಃ ।
ಇತಿ ಸಂಚಿಂತ್ಯ ಮನಸಾ ದಧ್ಯೌ ಬ್ರಹ್ಮ ಸನಾತನಮ್ ॥ ೪ ॥

ಹಿಮಾಲಯೇ ಶುಭೇ ದಿವ್ಯೇ ದಿವ್ಯಂ ವರ್ಷಶತಂ ಕಿಲ ।
ಅನುಚ್ಛ್ವಸನ್ನಿರಾಹಾರಃ ಸಂಯತಾತ್ಮಾ ಜಿತೇಂದ್ರಿಯಃ ॥ ೫ ॥

ಹಿಂದೆ ನಾರದರು ಶ್ರೀಹರಿಯ ತತ್ತ್ವವನ್ನು ತಿಳಿಯಬೇಕೆಂದು ಬಯಸಿ ಹಿಮಾಲಯ ಪರ್ವತದಲ್ಲಿ ನೂರು ದಿವ್ಯವರ್ಷಗಳವರೆಗೆ ಬ್ರಹ್ಮಧ್ಯಾನರೂಪವಾದ ತಪಸ್ಸನ್ನು ಆಚರಿಸಿದರು. ಅಲ್ಲಿಯ ತನಕ ಶ್ವಾಸವನ್ನು ನಿಗ್ರಹಿಸಿ ಆಹಾರವನ್ನೂ ತೊರೆದು ಮನಸ್ಸನ್ನು, ಇಂದ್ರಿಯಗಳನ್ನು ನಿಗ್ರಹಿಸಿಕೊಂಡು ಧ್ಯಾನರತರಾಗಿದ್ದರು.

ತತೋऽಂತರಿಕ್ಷೇ ವಾಗಾಸೀತ್ತಂ ಮುನಿಪ್ರವರಂ ಪ್ರತಿ ।
ಮೇಘಗಂಭೀರನಿರ್ಘೋಷಾ ದಿವ್ಯಾ ಬಾಹ್ಯಾऽಶರೀರಿಣೀ ॥ ೬ ॥

ಬಳಿಕ ಮುನಿಶ್ರೇಷ್ಠರಾದ ನಾರದರನ್ನು ಕುರಿತು ಅಂತರಿಕ್ಷದಲ್ಲಿ ಮೇಘ ಗಂಭೀರ ಧ್ವನಿಯುಳ್ಳ ಅಶರೀರಧ್ವನಿ ಕೇಳಿಸಿತು.

ಕಿಮರ್ಥಂ ತ್ವಂ ಸಮಾಪನ್ನೋ ಧ್ಯಾನಂ ಮುನಿವರೋತ್ತಮ ।
ಅಹಂ ದದಾಮಿ ತೇ ಜ್ಞಾನಂ ಧರ್ಮಾದ್ಯಂ ವಾ ವೃಣೀಷ್ವ ಮಾಮ್ ॥

ಎಲೈ ಮುನೀಂದ್ರನೇ, ನೀನು ಹೀಗೇಕೆ ಧ್ಯಾನಮಗ್ನನಾಗಿರುವಿ? ನಾನು ನಿನಗೆ ಧ್ಯಾನವನ್ನೂ, ಧರ್ಮವನ್ನು, ಬೇಕಾದ್ದನ್ನೆಲ್ಲ ನೀಡಲು ತಯಾರಿದ್ದೇನೆ. ನಿನಗೆ ಇಷ್ಟವಾದುದನ್ನು ಕೇಳು.

ತಚ್ಛ್ರುತ್ವಾ ಮುನಿರಾಲೋಚ್ಯ ಸಂಭ್ರಮಾವಿಷ್ಟಮಾನಸಃ ।
ಕಿನ್ನು ಸ್ಯಾದಿತಿ ಸಂಚಿಂತ್ಯ ವಾಕ್ಯಮಾಹಾಪರಂ ಪ್ರತಿ ॥ ೮ ॥

ಈ ಮಾತನ್ನು ಕೇಳಿಸಿಕೊಂಡ ಮುನಿಯು ಅತ್ಯಂತ ಸಂತೋಷದಿಂದ ಕೂಡಿದ ಮನಸ್ಸುಳ್ಳವನಾಗಿ ಇದೇನಿರಬಹುದೆಂದು ಆಲೋಚಿಸಿ ಆ ಅಶರೀರವಾಣಿಯ ಕಡೆಗೆ ತಿರುಗಿ ಹೀಗೆ ಹೇಳಿದನು.

ಕಸ್ಮಾದ್ ಭವಾನದ್ಯ ಬಿಭೇದ ಮಧ್ಯೇ
ಸಮಾಸ್ಥಿತೋ ವಾಕ್ಯಮುದೀರಯನ್ ಮಾಮ್ ।
ನ ರೂಪಮನ್ಯತ್ತವ ದೃಶ್ಯತೇ ವೈ
ಈದೃಗ್ವಿಧಸ್ತ್ವಂ ಸಮಧಿಷ್ಠಿತೋಽಸಿ ॥ ೯ ॥

ನೀನು ನನ್ನ ಧ್ಯಾನವನ್ನು ಏಕೆ ಕೆಡಿಸಿದೆ? ಧ್ಯಾನ ಮಾಡುತ್ತಿರುವ ಮಧ್ಯದಲ್ಲಿ ಈ ವಾಕ್ಯವನ್ನು ಏಕೆ ಹೇಳುತ್ತಿರುವಿ? ನಿನ್ನ ರೂಪವು ನನಗೆ ಕಾಣಿಸುತ್ತಿಲ್ಲ? ನೀನು ಹೀಗೇಕೆ ತೋರುತ್ತಿರುವಿ? ಏಕೆ ಗೂಢರೂಪನಾಗಿರುವಿ?

ಪುನಸ್ತಮಾಹ ಸ ಮುನಿಮನಂತೋಽಹಂ ಬೃಹತ್ತರಃ ।
ನ ಮಾಂ ಮೂಢಾ ವಿಜಾನಂತಿ ಜ್ಞಾನಿನೋ ಮಾಂ ವಿದಂತ್ಯುತ ॥೧೦॥

ಪುನಃ ಆ ಪುರುಷನು ನಾರದನನ್ನು ಕುರಿತು ಹೇಳಿದನು: ನಾನು ಅನಂತನು. ಎಲ್ಲರಿಗಿಂತ ದೊಡ್ಡವನು. ನನ್ನನ್ನು ಅಜ್ಞಾನಿಗಳು ತಿಳಿಯಲಾರರು. ಜ್ಞಾನಿಗಳು ಮಾತ್ರ ನನ್ನನ್ನು ಕಾಣಬಲ್ಲರು (ತಿಳಿಯುವರು) ಎಂದನು.

ತಂ ಪ್ರತ್ಯಾಹ ಮುನಿಃ ಶ್ರೀಮಾನ್ ಪ್ರಣತೋ ವಿನಯಾನ್ವಿತಃ ।
ಭವಂತಂ ಜ್ಞಾತುಮಿಚ್ಛಾಮಿ ತವ ತತ್ವಂ ಬ್ರವೀಹಿ ಮೇ ॥ ೧೧ ॥

ಈ ಮಾತನ್ನು ಕೇಳಿ ನಾರದರು ವಿನಮ್ರರಾಗಿ, ನಿನ್ನ ನಿಜಸ್ಥಿತಿಯನ್ನು ನಾನು ತಿಳಿಯಬೇಕೆಂದು ತವಕಗೊಂಡಿರುವೆ. ನೀನು ದರ್ಶನವನ್ನು ನೀಡದಿದ್ದಲ್ಲಿ ಬಾಯಿಂದಲಾದರೂ ನಿನ್ನ ತತ್ತ್ವವನ್ನು ನನಗೆ ಉಪದೇಶಿಸು ಎಂದನು.

ತಸ್ಯ ತದ್ವಚನಂ ಶ್ರುತ್ವಾ ನಾರದಂ ಪ್ರಾಹ ಲೋಕಪಃ ।
ಜ್ಞಾನೇನ ಮಾಂ ವಿಜಾನೀಹಿ ನಾನ್ಯಥಾ ಶಕ್ತಿರಸ್ತಿ ತೇ ॥ ೧೨ ॥

ನಾರದರ ಈ ಮಾತನ್ನು ಕೇಳಿಸಿಕೊಂಡ ಆ ಪುರುಷನು ನಾರದರನ್ನು ಕುರಿತು ಹೇಳಿದನು: ನನ್ನನ್ನು ಜ್ಞಾನದಿಂದಲೇ ನೀನು ತಿಳಿದುಕೊ. ಬೇರೆ ಯಾವುದರಿಂದಲೂ ನನ್ನನ್ನು ತಿಳಿಯಲು ಶಕ್ತಿ ಇರುವುದಿಲ್ಲ.

ನಾರದಃ

ಕೀದೃಗ್ವಿಧಂ ತು ತಜ್ಜ್ಞಾನಂ ಯೇನ ಜಾನಾಮಿ ತೇ ತನುಮ್ ।
ಅನಂತ ತನ್ಮೇ ಬ್ರೂಹಿ ತ್ವಂ ಯದ್ಯನುಗ್ರಹವಾನಹಮ್ ॥ ೧೩ ॥

ನಾರದ– ನಿನ್ನ ರೂಪವನ್ನು ತಿಳಿದುಕೊಳ್ಳಲು ಸಾಧಕವಾದ ಜ್ಞಾನವು ಯಾವುದು? ಯಾವ ಜ್ಞಾನದಿಂದ ನಿನ್ನ ಸ್ವರೂಪವನ್ನು ತಿಳಿಯುವೆನು? ಅನಂತನೇ, ನಿನಗೆ ನನ್ನಲ್ಲಿ ಅನುಗ್ರಹ ದೃಷ್ಟಿಯಿದ್ದರೆ ಅದನ್ನಾದರೂ ಉಪದೇಶಿಸು.

ಲೋಕಪಾಲಃ

ವಿಕಲ್ಪಹೀನಂ ವಿಪುಲಂ ತಸ್ಯ ಚೂರಂ ಶಿವಂ ಪರಮ್ ।
ಜ್ಞಾನಂ ತತ್ತೇನ ಜಾನಾಸಿ ಸಾಧನಂ ಪ್ರತಿ ತೇ ಮುನೇ ॥ ೧೪ ॥

ಲೋಕಪಾಲ– ನನ್ನನ್ನು ಕುರಿತು ಜ್ಞಾನವೆಂಬುದು ಮಹತ್ತರವಾದುದು, ವಿಪುಲವಾದುದು, ವಿಕಲ್ಪರಹಿತವು. ಅದು ಸರ್ವಶ್ರೇಯಸ್ಸಿಗೂ ಕಾರಣವಾದುದು. ಆ ಜ್ಞಾನಬಲದಿಂದ ನೀನು ನಿನಗೆ ಬೇಕಾದ ಸಾಧನವನ್ನು ಪಡೆಯಬಹುದು.

ಅತ್ರಾವೃತ್ಯ ಸ್ಥಿತಂ ಹ್ಯೇತತ್ ತಚ್ಛುದ್ಧಮಿತರನ್ಮೃಷಾ ।
ಏತತ್ತೇ ಸರ್ವಮಾಖ್ಯಾತಂ ಸಂಕ್ಷೇಪಾನ್ಮುನಿಸತ್ತಮ ॥ ೧೫ ॥

ಆ ಜ್ಞಾನವು ಲೋಕದಲ್ಲಿ ಬಚ್ಚಿಟ್ಟುಕೊಂಡಿದೆ. ಅದೊಂದೇ ಶುದ್ಧವಾದ ಜ್ಞಾನವೆನಿಸಿದೆ. ಉಳಿದ ಲೋಕದ ಜ್ಞಾನವೆಲ್ಲವೂ ವ್ಯರ್ಥವೆನಿಸಿದೆ. ಇದೆಲ್ಲವನ್ನೂ ಸಂಗ್ರಹವಾಗಿ ಮುನಿಸತ್ತಮನೇ, ನಿನಗೆ ತಿಳಿಸಿದ್ದೇನೆ.

ನಾರದಃ

ತ್ವಮೇವ ತವ ಯತ್ತತ್ತ್ವಂ ಬ್ರೂಹಿ ಲೋಕಗುರೋ ಮಮ ।
ಭವಂತಂ ಜ್ಞಾತುಮಿಚ್ಛಾಮಿ ಕೀದೃಗ್ಭೂತಸ್ತ್ವಮವ್ಯಯ ॥ ೧೬ ॥

ನಾರದ– ಆ ನಿನ್ನ ಪರತತ್ತ್ವ ಏನಿದೆಯೋ ಅದನ್ನು ನೀನೇ ನನಗೆ ಉಪದೇಶಿಸಬಾರದೇಕೆ? ನೀನೇ ನನಗೆ ಲೋಕಗುರುವು. ಅವ್ಯಯನೇ, ನೀನು ಯಾವ ರೀತಿಯಾಗಿರುವಿ ಎಂದು ತಿಳಿಯಲು ಬಯಸುತ್ತೇನೆ.

ತತಃ ಪ್ರಹಸ್ಯ ಭಗವಾನ್ ಮೇಘಗಂಭೀರಯಾ ಗಿರಾ ।
ಪ್ರಾಹೇಶಃ ಸರ್ವಭೂತಾನಾಂ ನ ಮೇ ಚಾಸ್ಯಂ ಶ್ರುತಿರ್ನ ಚ ॥ ೧೭ ॥

ನಾರದ ಮುನಿಯು ಹೀಗೆ ಹೇಳಲಾಗಿ ಆ ಪುರುಷನು ಜೋರಾಗಿ ನಕ್ಕು ಮೇಘ ಗಂಭೀರ ಧ್ವನಿಯಿಂದ ಹೀಗೆ ಹೇಳಿದನು: ಎಲೈ ಮುನಿವರನೇ, ನನಗೆ ಪ್ರಾಕೃತವಾದ ಶ್ರವಣಾದಿ ಇಂದ್ರಿಯಗಳಿರುವುದಿಲ್ಲ.

ನ ಘ್ರಾಣಜಿಹ್ವೇ ದೃಕ್ಚೈವ ತ್ವಚಾ ನಾಸ್ತಿ ತಥಾ ಮುನೇ ।
ಕಥಂ ವಕ್ಷ್ಯಾಮಿ ಚಾತ್ಮಾನಮಶರೀರಸ್ತಥಾಪ್ಯಹಮ್ ॥ ೧೮ ॥

ನನಗೆ ಪ್ರಾಕೃತವಾದ ಘ್ರಾಣೇಂದ್ರಿಯವಾಗಲಿ, ಜಿಹ್ವೆಯಾಗಲಿ, ತ್ವಗಿಂದ್ರಿಯವಾಗಲಿ ಇರುವುದಿಲ್ಲ. ಹೀಗಿರಲು ಪ್ರಾಕೃತಶರೀರರಹಿತನಾದ ನಾನು ಪ್ರಾಕೃತಶರೀರ ಶಬ್ದಗಳನ್ನು ಅವಲಂಬಿಸಿಕೊಂಡ ನಿನಗೆ ಹೇಗೆ ಹೇಳಲಿ?

ವ್ಯಾಖ್ಯಾನ ವಿಶೇಷ– ಕೆಲವರು ಭಗವಂತನಿಗೆ ಕೈ-ಕಾಲುಗಳೇ ಇಲ್ಲದ ನಿರ್ಗುಣವಸ್ತು ಎನ್ನುತ್ತಾರೆ. ಆದರೆ 'ದಿವ್ಯ ಬಾಹ್ಯ ಅಶರೀರಿಣೆ' ಎಂದು ಬಾಹ್ಯಶರೀರವನ್ನು ಕೃಷ್ಣನಿಗೆ ನಿರಾಕರಿಸಿದ್ದಾರೆ. ಅಪ್ರಾಕೃತವಾದ ಎಲ್ಲ ಅವಯವಗಳು ಭಗವಂತನಲ್ಲಿವೆ ಎಂದು ಹಿಂದಿನ ಅಧ್ಯಾಯದಲ್ಲೇ ಭೀಷ್ಮರು ವರ್ಣಿಸಿದ್ದಾರೆ. ಅವಯವಾದಿ ರಾಹಿತ್ಯವನ್ನು ಹೇಳಿದರೆ ಪೂರ್ವೋತ್ತರ ವಿರೋಧ ಉಂಟಾಗುತ್ತದೆ.

ತಜ್ಜ್ಞಾತ್ವಾ ವಿಸ್ಮಯಾವಿಷ್ಟೋ ಮುನಿರಾಹ ಪ್ರಣಮ್ಯ ತಮ್ ।
ಯೇನ ತ್ವಂ ಪೂರ್ವಮಾತ್ಮಾನಮನಂತೋಽಹಂ ಬೃಹತ್ತರಃ ।
ಶತೋಽಹಮಿತಿ ಮಾಂ ಪ್ರೀತಃ ಪ್ರೋಕ್ತವಾನಸಿ ತತ್ಕಥಮ್ ॥ ೧೯ ॥

ನಾರದರು ಆ ಮಾತಿಗೆ ಆಶ್ಚರ್ಯಗೊಂಡು ಅವನ ಮುಂದೆ ನಮಸ್ಕರಿಸಿ, ಓ ಮಹಾತ್ಮನೇ, ನೀನು ಮೊದಲು ನನ್ನೊಡನೆ ನಾನು ಅನಂತನು, ಬಹಳದೊಡ್ಡವನು, ನಾನಾ ರೂಪದಿಂದ ಇರುವವನು ಎಂದು ಹೇಗೆ ಹೇಳಿಕೊಂಡೆ?

ಪುನಸ್ತಮಾಹ ಭಗವಾಂಸ್ತವಾಪ್ಯಕ್ಷಾಣಿ ಸಂತಿ ವೈ ।
ತ್ವಮೇನಂ ಬ್ರೂಹಿ ಚಾತ್ಮಾನಂ ಯದಿ ಶಕ್ನೋಷಿ ನಾರದ ॥ ೨೦ ॥

ಆಗ ಪುರುಷನು ಎಲೈ ಮುನೀಂದ್ರನೇ, ನಿನಗೂ ಇಂದ್ರಿಯಗಳು ಇವೆಯಲ್ಲವೆ? ನಿನ್ನ ಹೃದಯದಲ್ಲಿ ಧ್ಯೇಯನಾಗಿರುವ ಅಂತರ್ಯಾಮಿಯಾದ ಪರಮಾತ್ಮನನ್ನು ನೀನು ತಿಳಿದುಕೊಂಡಿದ್ದಲ್ಲಿ ನೀನೇ ಹೇಳು.

ಆತ್ಮಾ ಯಥಾ ತವ ಮುನೇ ವಿದಿತಸ್ತು ಭವಿಷ್ಯತಿ ।
ಮಾಂ ಚ ಜಾನಾಸಿ ತೇನ ತ್ವಮೇಕಂ ಸಾಧನಮಾವಯೋಃ ।
ಇತ್ಯುಕ್ತ್ವಾ ಭಗವಾನ್ ದೇವಸ್ತತೋ ನೋವಾಚ ಕಿಂಚನ ॥ ೨೧ ॥

ನಿನ್ನ ಆತ್ಮಸ್ವರೂಪವು ನಿನಗೆ ಹೇಗೆ ತಿಳಿದಿದೆಯೋ ಅದರಂತೆ ನೀನು ನನ್ನನ್ನು ತಿಳಿಯಬಲ್ಲೆ. ನನ್ನನ್ನೂ, ನಿನ್ನನ್ನೂ ತಿಳಿಯಲು ಬೇಕಾಗಿರುವ ಜ್ಞಾನಸಾಧನವು ಒಂದೇ ಎನಿಸಿದೆ. ಈ ರೀತಿಯಾಗಿ ಭಗವಂತನು ಹೇಳುತ್ತಾ ಮಾತಿನಿಂದ ವಿರಮಿಸಿದನು. ಬಳಿಕ ಮತ್ತೇನೂ ಹೇಳಲಿಲ್ಲ.

ನಾರದೋಽಪ್ಯತ್ಸ್ಮಯನ್ ಖಿನ್ನಃ ಕ್ವ ಗತೋಽಸಾವಿತಿ ಪ್ರಭುಃ ।
ಸ್ಥಿತ್ವಾ ಸ ದೀರ್ಘಕಾಲಂ ಚ ಮುನಿರ್ವ್ಯಾಮೂಢಮಾನಸಃ ॥ ೨೨ ॥

ನಾರದನು ಆ ಅದೃಶ್ಯರೂಪವನ್ನೂ, ಅದರ ಮಾತನ್ನೂ ಕೇಳಿ ಆಶ್ಚರ್ಯಚಕಿತನಾಗಿ ಭಗವಂತನು ಎಲ್ಲಿಗೆ ಹೋದನು? ನಾನು ಕಾಣುತ್ತಿಲ್ಲವಲ್ಲ ಎಂದು ಮನಸ್ಸಿಗೆ ಏನೊಂದೂ ತೋರದೆ ಸ್ತಬ್ಧನಾಗಿದ್ದನು.

ಆಹ ಮಾಂ ಭಗವಾನ್ ದೇವಸ್ತ್ವನಂತೋಽಹಂ ಬೃಹತ್ತರಃ ।
ತೇನಾಹಮಿತಿ ಸರ್ವಸ್ಯ ಕೋ ವಾನಂತೋ ಬೃಹತ್ತರಃ ॥ ೨೩ ॥

ಬಳಿಕ ನಾರದನು ತನ್ನೊಳಗೆ ತಾನು ಆ ಭಗವಂತನು ಅನಂತನೆಂದೂ, ದೊಡ್ಡವನೆಂದೂ ಹೇಳಿದನು. ಆದ್ದರಿಂದ ಲೋಕದಲ್ಲಿ ಅನಂತವೂ, ಎಲ್ಲಕ್ಕಿಂತಲೂ ದೊಡ್ಡದೂ ಆದ ಪದಾರ್ಥವೇನೆಂದು ವಿಚಾರ ಮಾಡುತ್ತೇನೆ. ಈ ನಿಜಾಂಶವನ್ನು ತಿಳಿಯದೆ ಅವನನ್ನು ತಿಳಿಯಲಾಗದು.

ಕೇಯಮುರ್ವೀ ಹ್ಯನಂತಾಖ್ಯಾ ಬೃಹತೀ ನೂನಮೇವ ಸಾ ।
ಯಸ್ಯಾಂ ಜಾನಂತಿ ಭೂತಾನಿ ವಿಲೀನಾನಿ ತತಸ್ತತಃ ।
ಏನಾಂ ಪೃಚ್ಛಾಮಿ ತರುಣೀಂ ಸೈಷಾ ನೂನಮುವಾಚ ಮಾಮ್ ॥೨೪॥

ಇತ್ಯೇವಂ ಸ ಮುನಿಃ ಶ್ರೀಮಾನ್ ಕೃತ್ವಾ ನಿಶ್ಚಯಮಾತ್ಮನಃ ।
ಸ ಭೂತಲಂ ಸಮಾವಿಶ್ಯ ಪ್ರಣಿಪತ್ಯೇದಮಬ್ರವೀತ್ ॥ ೨೫ ॥

ಈ ಭೂಮಿಯಲ್ಲಿ ಎಲ್ಲಾ ಭೂತಗಳ ಉತ್ಪತ್ತಿ-ಸ್ಥಿತಿ-ಲಯಗಳಿಗೆ ಆಧಾರವೆನಿಸಿದ ಭೂಮಿಯೇ ಅನಂತವಾಗಿರಬಹುದೇ? ಈ ಭೂಮಿಯನ್ನೇ ಕೇಳಿ ತಿಳಿಯುತ್ತೇನೆ ಎಂದು ನಿಶ್ಚಯಿಸಿ, ಭೂತಳದೊಳಗೆ ಪ್ರವೇಶಿಸಿ ಅಲ್ಲಿಯ ಭೂಮಿಯನ್ನು ನಮಸ್ಕರಿಸಿ, ಅವಳೇ ನನಗೆ ಉತ್ತರಿಸುತ್ತಾಳೆ ಎಂಬ ಭಾವದಿಂದ ನಾರದನು ಹೀಗೆ ಹೇಳಿದನು.

ಆಶ್ಚರ್ಯಾಸಿ ಚ ಧನ್ಯಾಸಿ ಬೃಹತೀ ತ್ವಂ ವಸುಂಧರೇ ।
ತ್ವಾಮತ್ರ ವೇತ್ತುಮಿಚ್ಛಾಮಿ ಯಾದೃಗ್ಭೂತಾऽಸಿ ಶೋಭನೇ ॥ ೨೬ ॥

ತಾಯಿಯೇ, ನೀನೇ ಧನ್ಯಳು. ಪ್ರಪಂಚದಲ್ಲಿ ಎಲ್ಲಕ್ಕಿಂತಲೂ ನೀನೇ ದೊಡ್ಡವಳು. ನಿನ್ನ ಸ್ವರೂಪವನ್ನು ನಾನು ವಿವರವಾಗಿ ತಿಳಿಯಲು ಬಯಸುತ್ತೇನೆ. ನೀನೆಂಥವಳು? ನಿನ್ನ ಪ್ರಭಾವವನ್ನು ನನಗೆ ತಿಳಿಸು.

ತಚ್ಛ್ರುತ್ವಾ ಧರಣೀ ದೇವೀ ಸ್ಮಯಮಾನಾऽಬ್ರವೀದಿದಮ್ ।
ನಾಹಂ ಹಿ ಬೃಹತೀ ವಿಪ್ರ ನ ಚಾನಂತಾ ಚ ಸತ್ತಮ ॥ ೨೭ ॥

ನಾರದರ ಈ ಮಾತನ್ನು ಕೇಳಿಸಿಕೊಂಡ ಧರಣೀದೇವಿಯು ಮಂದಹಾಸವನ್ನು ಬೀರುತ್ತಾ ಹೀಗೆ ಹೇಳಿದಳು: ನಾರದನೇ, ನಾನು ಎಂದಿಗೂ ದೊಡ್ಡವಳಲ್ಲ. ಎಂದಿಗೂ ಅಂತವಿಲ್ಲದವಳೂ ಅಲ್ಲ.

ಕಾರಣಂ ಮೇ ಜಲಂ ಮತ್ತೋ ಬೃಹತ್ತರತಮಂ ಹಿ ತತ್ ॥ ೨೯ ॥

ನನಗೂ ಕಾರಣವೆನಿಸಿದ ಗಂಧಗುಣವಿದೆ. ನೀನು ಅಲ್ಲಿಗೆ ಹೋಗಿ ಕೇಳು ಎಂದಳು. ಬಳಿಕ ಮುನಿಯು ಆಗಲೆಂದು ಗಂಧದ ಬಳಿಗೆ ಬಂದು ಗಂಧವೇ ನೀನೇ ಪ್ರಪಂಚದಲ್ಲಿ ಅನಂತನೂ, ಬೃಹತ್ತೂ ಆಗಿರುವೆ ಎಂದು ಹೇಳಿದನು. ಆಗ ಗಂಧವು ಅಯ್ಯಾ! ನನಗೂ ಕಾರಣನಾದ ಜಲವು ನನಗಿಂತ ಬೃಹತ್ತೂ, ಅನಂತವೂ ಆಗಿದೆ ಎಂದಿತು.

ಸ ಸಮುದ್ರಂ ಮುನಿರ್ಗತ್ವಾ ಪ್ರಣಿಪತ್ಯೇದಮಬ್ರವೀತ್ ।
ಆಶ್ಚರ್ಯೋऽಸಿ ಚ ಧನ್ಯೋऽಸಿ ಹ್ಯನಂತೋऽಸಿ ಬೃಹತ್ತರಃ ॥ ೩೦ ॥

ಪುನಃ ನಾರದನು ಸಮುದ್ರವನ್ನು ಪ್ರವೇಶಿಸಿ ಆ ಜಲರಾಶಿ ಮುಂದೆ ನಮಸ್ಕರಿಸಿ ಹೇಳಿದನು: ಸಮುದ್ರರಾಜನೇ, ನೀನೇ ಆಶ್ಚರ್ಯನೂ, ನೀನೇ ಧನ್ಯನೂ, ನೀನೇ ಅನಂತನೂ, ನೀನೇ ಬೃಹತ್ತರನು.

ಭವಂತಂ ವೇತ್ತುಮಿಚ್ಛಾಮಿ ಕೀದೃಗ್ಭೂತಸ್ತ್ವಮವ್ಯಯ ।
ತಚ್ಛ್ರುತ್ವಾ ಸರಿತಾಂನಾಥಃ ಸಮುದ್ರೋ ಮುನಿಮಬ್ರವೀತ್ ॥ ೩೧ ॥

ನಿನ್ನನ್ನು ತಿಳಿಯಲು ನಾನು ಬಯಸುತ್ತೇನೆ. ನಿನ್ನ ಸ್ವರೂಪನು ಏನು? ಅವ್ಯಯನೇ, ತಿಳಿಸು. ಈ ರೀತಿಯಾದ ನಾರದಮುನಿಯ ಮಾತನ್ನು ಕೇಳಿಸಿಕೊಂಡ, ನದಿಗಳಿಗೆಲ್ಲ ನಾಥನಾದ ಸಮುದ್ರರಾಜನು ನಾರದರನ್ನು ಕುರಿತು ಹೀಗೆ ಹೇಳಿದನು.

ಕಾರಣಂ ಮೇಽತ್ರ ಸಂಪೃಚ್ಛ ರಸಾತ್ಮಾನಂ ಬೃಹತ್ತರಮ್ ।
ತತೋಬೃಹತ್ತರಂ ವಿದ್ವಂಸ್ತ್ವಂ ಪೃಚ್ಛ ಮುನಿಸತ್ತಮ ॥ ೩೨ ॥

ನಾರದನೇ, ನನಗಿಂತಲೂ ಎಷ್ಟೋ ದೊಡ್ಡದಾದುದು ರಸವೆಂಬ ಗುಣವು. ಅಲ್ಲಿಗೆ ಹೋಗಿ ನೀನು ಪ್ರಶ್ನಿಸು ಎಂದು ಹೇಳಿದನು.

ತತೋ ಮುನಿರ್ಯಥಾಯೋಗಂ ಜಲಂ ತತ್ತ್ವಮವೇಕ್ಷ್ಯ ತತ್ ।
ಜಲಾತ್ಮಾನಂ ಪ್ರಣಮ್ಯಾಹ ಜಲತತ್ತ್ವಸ್ಥಿತೋ ಮುನಿಃ ॥ ೩೩ ॥

ಬಳಿಕ ನಾರದಮುನಿಯು ಜಲತತ್ತ್ವವು ಹೇಳಿದ ಅಭಿಪ್ರಾಯವನ್ನು ಕೇಳಿಸಿಕೊಂಡು ಜಲಸ್ವರೂಪಿಯಾದ ಸಮುದ್ರನನ್ನು ನಮಸ್ಕರಿಸಿ ಮುಂದೆ ರಸತತ್ತ್ವದ ಬಳಿ ಹೊರಟನು.

ಆಶ್ಚರ್ಯೋಽಸಿ ಚ ಧನ್ಯೋಽಸಿ ಹ್ಯನಂತೋಽಸಿ ಬೃಹತ್ತರಃ ।
ಭವಂತಂ ಶ್ರೋತುಮಿಚ್ಛಾಮಿ ಕೀದೃಗ್ಭೂತಸ್ತ್ವಮವ್ಯಯ ॥ ೩೪ ॥

ರಸತತ್ತ್ವವೇ, ನೀನೇ ಆಶ್ಚರ್ಯನೂ, ಧನ್ಯನೂ, ಅನಂತನೂ, ಬೃಹತ್ತರನು. ನಿನ್ನ ಮಹಿಮೆಯನ್ನೂ, ಸ್ವರೂಪವನ್ನೂ ತಿಳಿಯಲು ಬಯಸುತ್ತೇನೆ.

ತತೋ ರಸಾತ್ಮರೋತತ್ತ್ವಃ ಮುನಿಮಾಹ ಪುನಃಪುನಃ ।
ಮಮಾಪಿ ಕಾರಣಂ ಪೃಚ್ಛ ತೇಜೋರೂಪಂ ವಿಭಾವಸುಮ್ ।
ನಾಹಂ ಬೃಹತ್ತರೋ ಬ್ರಹ್ಮನ್ನಾಪ್ಯನಂತಶ್ಚ ಸತ್ತಮ ॥ ೩೫ ॥

ಬಳಿಕ ರಸಾತ್ಮಕವಾದ ತತ್ತ್ವವು ನಾರದಮುನಿಯನ್ನು ಕುರಿತು ಪುನಃ ಪುನಃ ಹೇಳಿತು: ನಾರದನೇ, ನನಗೂ ಕಾರಣನಾದ ತೇಜೋರೂಪನಾದ ವಿಭಾವಸುವನ್ನು ಪ್ರಶ್ನಿಸು. ನಾನು ಅವನ ಮುಂದೆ ಬೃಹತ್ತರನೂ ಅಲ್ಲ, ಅನಂತನೂ ಅಲ್ಲ.

ತತೋಽಗ್ನಿಂ ಪ್ರಣಿಪತ್ಯಾಹ ಮುನಿರ್ವಿಸ್ಮಿತಮಾನಸಃ ।
ಯಜ್ಞಾತ್ಮಾನಂ ಮಹಾವಾಸಂ ಸರ್ವಭೂತನಮಸ್ಕೃತಮ್ ॥ ೩೬ ॥

ಬಳಿಕ ನಾರದ ಮುನಿಯು ಆಶ್ಚರ್ಯಚಕಿತವಾದ ಮನಸ್ಸುಳ್ಳವನಾಗಿ ಅಗ್ನಿಯನ್ನು ಕುರಿತು ನಮಸ್ಕರಿಸಿ, ಯಜ್ಞಸ್ವರೂಪಿಯಾದ ಮಹಾವಾಸನೆನಿಸಿದ, ಸರ್ವಭೂತ ನಮಸ್ಕೃತನಾದ ಅಗ್ನಿದೇವನನ್ನು ಕುರಿತು ಕೇಳಿದನು.

ಆಶ್ಚರ್ಯೋಽಸಿ ಚ ಧನ್ಯೋಽಸಿ ಹ್ಯನಂತಶ್ಚ ಬೃಹತ್ತರಃ ।
ಭವಂತಂ ವೇತ್ತುಮಿಚ್ಛಾಮಿ ಕೀದೃಗ್ಭೂತಸ್ತ್ವಮವ್ಯಯ ॥ ೩೭ ॥

ಅಗ್ನಿದೇವನೇ, ನೀನೇ ಆಶ್ಚರ್ಯನೂ, ಅನಂತನೂ, ಬೃಹತ್ತರನೂ ಆಗಿರುವಿ. ನಿನ್ನನ್ನು ತಿಳಿಯಲು ಇಚ್ಛಿಸುತ್ತೇನೆ. ನಿನ್ನ ಸ್ವರೂಪವೇನು? ಅವ್ಯಯನೇ ತಿಳಿಸು.

ತತಃ ಪ್ರಹಸ್ಯ ಭಗವಾನ್ ಮುನಿಂ ಸ್ವಿಷ್ಟಕೃದಬ್ರವೀತ್ ।
ನಾಹಂ ಬೃಹತ್ತರೋ ಬ್ರಹ್ಮನ್ನಾಪ್ಯನಂತಶ್ಚ ಸತ್ತಮ ।
ಕಾರಣಂ ಮಮ ರೂಪಂ ಯತ್ ತಂ ಪೃಚ್ಛ ಮುನಿಸತ್ತಮ ॥ ೩೮ ॥

ಸ್ವಿಷ್ಟಕೃತ್ ಎನಿಸಿದ ಅಗ್ನಿಯು ನಾರದಮುನಿಯನ್ನು ಕುರಿತು ಮಂದಹಾಸವನ್ನು ಬೀರುತ್ತಾ ಹೀಗೆ ಹೇಳಿದನು: ಮುನೀಂದ್ರನೇ, ನಾನು ಬೃಹತ್ತರನಲ್ಲ, ಅನಂತನಲ್ಲ. ನನಗೆ ಕಾರಣವಾದ ರೂಪವು ನನಗಿಂತ ಮಿಗಿಲಾದುದು. ಅವನ ಬಳಿ ಹೋಗಿ ಪ್ರಶ್ನಿಸು ಎಂದನು.

ತತೋ ಯೋಗಕ್ರಮೇಣೈವ ಪ್ರತೀತಂ ತಂ ಪ್ರವಿಶ್ಯ ಸಃ ।
ರೂಪಾತ್ಮಾನಂ ಪ್ರಣಮ್ಯಾಹ ನಾರದೋ ವದತಾಂವರಃ ॥ ೩೯ ॥

ಬಳಿಕ ನಾರದ ಮುನಿಯು ಯೋಗಕ್ರಮದಲ್ಲಿಯೇ ಆ ರೂಪವನ್ನು ಸಮೀಪಿಸಿ ರೂಪಾತ್ಮನಾದ ದೇವನನ್ನು ನಮಸ್ಕರಿಸಿ ಮಾತುಗಾರರಲ್ಲಿ ಶ್ರೇಷ್ಠನಾದ ನಾರದನು ಹೇಳಿದನು.

ಆಶ್ಚರ್ಯೋಽಸಿ ಚ ಧನ್ಯೋಽಸಿ ಹ್ಯನಂತೋಽಸಿ ಬೃಹತ್ತರಃ ।
ಭವಂತಂ ವೇತ್ತುಮಿಚ್ಛಾಮಿ ಕೀದೃಗ್ಭೂತಸ್ತ್ವಮವ್ಯಯ ॥ ೪೦ ॥

ರೂಪಾತ್ಮನೇ, ನೀನೇ ಆಶ್ಚರ್ಯನೂ, ಅನಂತನೂ, ಬೃಹತ್ತರನೂ ಆಗಿರುವಿ. ನಿನ್ನನ್ನು ತಿಳಿಯಲು ಇಚ್ಛಿಸುತ್ತೇನೆ. ನಿನ್ನ ಸ್ವರೂಪವೇನು? ಅವ್ಯಯನೇ, ತಿಳಿಸು.

ಉತ್ಸ್ಮಯಿತ್ವಾ ತು ರೂಪಾತ್ಮಾ ತಂ ಮುನಿಂ ಪ್ರತ್ಯುವಾಚ ಹ ।
ವಾಯುರ್ಮೇ ಕಾರಣಂ ಬ್ರಹ್ಮಂಸ್ತಂ ಪೃಚ್ಛ ಮುನಿಸತ್ತಮ ।
ಮತ್ತೋ ಬಹುತರಃ ಶ್ರೀಮಾನನಂತಶ್ಚ ಮಹಾಬಿಲಮ್ ॥ ೪೧ ॥

ರೂಪಾತ್ಮನು ನಾರದರನ್ನು ಕುರಿತು ಮಂದಹಾಸವನ್ನು ಬೀರಿ ಉತ್ತರಿಸಿದನು: ಪೂಜ್ಯನೇ, ನನಗೆ ವಾಯುವು ಕಾರಣನು. ನನಗಿಂತ ಬೃಹತ್ತರನು. ಅನಂತನೂ, ಮಹಾಬಿಲನು. ಅವನನ್ನು ಪ್ರಶ್ನಿಸು.

ಸ ಮಾರುತಂ ಪ್ರಣಮ್ಯಾಹ ಭಗವಾನ್ ಮುನಿಸತ್ತಮಃ ।
ಯೋಗಸಿದ್ಧೋ ಮಹಾಯೋಗೀ ಜ್ಞಾನವಿಜ್ಞಾನಪಾರಗಃ ॥ ೪೨ ॥

ನಾರದಮುನಿಯು ಮಾರುತನನ್ನು ನಮಸ್ಕರಿಸಿ, ಯೋಗಸಿದ್ಧನೂ, ಮಹಾಯೋಗಿಯೂ, ಜ್ಞಾನ-ವಿಜ್ಞಾನಪಾರಗನೂ ಆದ ಮುನಿಯು ಪ್ರಶ್ನಿಸಿದನು.

ಆಶ್ಚರ್ಯೋಽಸಿ ಚ ಧನ್ಯೋಽಸಿ ಹ್ಯನಂತೋಽಸಿ ಬೃಹತ್ತರಃ ।
ಭವಂತಂ ವೇತ್ತುಮಿಚ್ಛಾಮಿ ಕೀದೃಗ್ಭೂತಸ್ತ್ವಮವ್ಯಯ ॥ ೪೩ ॥

ವಾಯುವೇ, ನೀನೇ ಆಶ್ಚರ್ಯನೂ, ಅನಂತನೂ, ಬೃಹತ್ತರನೂ ಆಗಿರುವಿ. ನಿನ್ನನ್ನು ತಿಳಿಯಲು ಇಚ್ಛಿಸುತ್ತೇನೆ. ನಿನ್ನ ಸ್ವರೂಪವೇನು? ಅವ್ಯಯನೇ, ತಿಳಿಸು.

ತತೋ ವಾಯುರ್ಹಿ ಸಂಪ್ರಾಹ ನಾರದಂ ಮುನಿಸತ್ತಮಮ್ ।
ಕಾರಣಂ ಪೃಚ್ಛ ಭಗವನ್ ಸ್ಪರ್ಶಾತ್ಮಾನಂ ಮಮಾದ್ಯ ವೈ ॥ ೪೪ ॥

ಮುನಿಶ್ರೇಷ್ಠನಾದ ನಾರದನನ್ನು ಕುರಿತು ವಾಯುವು ಹೇಳಿದನು: ನನಗೂ ಕಾರಣನಾದವನು ವಾಯುತನ್ಮಾತ್ರನಾದ ಸ್ಪರ್ಶನು. ಅವನ ಬಳಿ ಹೋಗಿ ಪ್ರಶ್ನಿಸು.

ಮತ್ತೋ ಬೃಹತ್ತರಃ ಶ್ರೀಮಾನನಂತಶ್ಚ ತಥೈವ ಸಃ ।
ತತೋಽಸ್ಯ ವಚನಂ ಶ್ರುತ್ವಾ ಸ್ಪರ್ಶಾತ್ಮಾನಮುವಾಚ ಸಃ ॥ ೪೫ ॥

ನನಗಿಂತಲೂ ಬೃಹತ್ತರನೂ, ಕಾಂತಿಯುಕ್ತನೂ, ಅನಂತನೂ ಅವನೇ ಆಗಿದ್ದಾನೆ ಎಂದು ಹೇಳಲು, ನಾರದರು ವಾಯುವಿನ ಮಾತನ್ನು ಕೇಳಿ ಸ್ಪರ್ಶಾತ್ಮನನ್ನು ಕುರಿತು ಹೇಳಿದನು.

ಆಶ್ಚರ್ಯೋಽಸಿ ಚ ಧನ್ಯೋಽಸಿ ಹ್ಯನಂತೋಽಸಿ ಬೃಹತ್ತರಃ ।
ಭವಂತಂ ವೇತ್ತುಮಿಚ್ಛಾಮಿ ಕೀದೃಗ್ಭೂತಸ್ತ್ವಮವ್ಯಯ ॥ ೪೬ ॥

ಸ್ಪರ್ಶಾತ್ಮನೇ, ನೀನೇ ಆಶ್ಚರ್ಯನೂ, ಅನಂತನೂ, ಬೃಹತ್ತರನೂ ಆಗಿರುವಿ. ನಿನ್ನನ್ನು ತಿಳಿಯಲು ಇಚ್ಛಿಸುತ್ತೇನೆ. ನಿನ್ನ ಸ್ವರೂಪವೇನು? ಅವ್ಯಯನೇ, ತಿಳಿಸು.

ತಸ್ಯ ತದ್ ವಚನಂ ಶ್ರುತ್ವಾ ಸ್ಪರ್ಶಾತ್ಮಾ ಮುನಿಮಬ್ರವೀತ್ ।
ನಾಹಂ ಬೃಹತ್ತರೋ ಬ್ರಹ್ಮನ್ನಪ್ಯನಂತಶ್ಚ ಸತ್ತಮ ॥ ೪೭ ॥

ಅವನ ಮಾತನ್ನು ಕೇಳಿಸಿಕೊಂಡ ಸ್ಪರ್ಶಾತ್ಮನು ಮುನಿಯನ್ನು ಕುರಿತು ಹೇಳಿದನು. ಪೂಜ್ಯನೇ, ಶ್ರೇಷ್ಠನೇ, ನಾನು ಬೃಹತ್ತರನೂ ಅಲ್ಲ, ಅನಂತನೂ ಅಲ್ಲ.

ಕಾರಣಂ ಮಮ ಚೈವೇಮಮಾಕಾಶಂ ಚ ಬೃಹತ್ತರಮ್ ।
ತಂ ಪೃಚ್ಛ ಮುನಿಶಾರ್ದೂಲ ಸರ್ವವ್ಯಾಪಿನಮವ್ಯಯಮ್ ॥ ೪೮ ॥

ನನಗೂ ಕಾರಣನಾದವನು ಆಕಾಶನು. ಅವನೇ ಬೃಹತ್ತರನು. ನಾಶರಹಿತನಾದ, ಸರ್ವವ್ಯಾಪಿಯಾದ ಅವನನ್ನು ಮುನಿಶಾರ್ದೂಲನೇ, ಪ್ರಶ್ನಿಸು.

ತಚ್ಛ್ರುತ್ವಾ ನಾರದಃ ಶ್ರೀಮಾನ್ ವಾಕ್ಯಂ ವಾಕ್ಯವಿಶಾರದಃ ।
ಆಕಾಶಂ ಸಮುಪಾಗಮ್ಯ ಪ್ರಣಮ್ಯಾಹ ಕೃತಾಂಜಲಿಃ ॥ ೪೯ ॥

ವಾಕ್ಯವಿಶಾರದನಾದ ಪೂಜ್ಯನಾದ ನಾರದನು ಸ್ಪರ್ಶಾತ್ಮನ ಮಾತನ್ನು ಕೇಳಿಸಿಕೊಂಡು ಆಕಾಶವನ್ನು ಕುರಿತು ನಮಸ್ಕರಿಸಿ ಕೃತಾಂಜಲಿ ಸ್ಫುಟನಾಗಿ ಹೀಗೆ ಹೇಳಿದನು.

ಆಶ್ಚರ್ಯೋಽಸಿ ಚ ಧನ್ಯೋಽಸಿ ಹ್ಯನಂತೋಽಸಿ ಬೃಹತ್ತರಃ ।
ಭವಂತಂ ವೇತ್ತುಮಿಚ್ಛಾಮಿ ಕೀದೃಗ್ಭೂತಸ್ತ್ವಮವ್ಯಯ ॥ ೫೦ ॥

ಆಕಾಶನೇ, ನೀನೇ ಆಶ್ಚರ್ಯನೂ, ಅನಂತನೂ, ಬೃಹತ್ತರನೂ ಆಗಿರುವಿ. ನಿನ್ನನ್ನು ತಿಳಿಯಲು ಇಚ್ಛಿಸುತ್ತೇನೆ. ನಿನ್ನ ಸ್ವರೂಪವೇನು? ಅವ್ಯಯನೇ, ತಿಳಿಸು.

ಆಕಾಶಸ್ತಮುವಾಚೇದಂ ಪ್ರಹಸನ್ ಮುನಿಸತ್ತಮಮ್ ।
ನಾಹಂ ಬೃಹತ್ತರೋ ಬ್ರಹ್ಮನ್ ಶಬ್ದೋ ವೈ ಕಾರಣಂ ಮಮ ।
ತಂ ಪೃಚ್ಛ ಮುನಿಶಾರ್ದೂಲ ಸ ವೈ ಮತ್ತೋ ಬೃಹತ್ತರಃ ॥ ೫೧ ॥

ಆಕಾಶನು ಮಂದಹಾಸವನ್ನು ಬೀರುತ್ತಾ ಮುನಿಯನ್ನು ಕುರಿತು ಹೇಳಿದನು: ಮುನಿಯೇ, ನನಗಿಂತ ಬೃಹತ್ತರನು ನನಗೆ ಕಾರಣನಾದ ಶಬ್ದನು. ಅವನೇ ಬೃಹತ್ತರನಾಗಿದ್ದಾನೆ. ಅವನನ್ನು ಕುರಿತು ಕೇಳು.

ತತೋ ಹ್ಯಾವಿಶ್ಯ ಚಾಕಾಶಂ ಶಬ್ದಾತ್ಮಾನಮುವಾಚ ಹ ।
ಸ್ವರವ್ಯಂಜನಸಂಯುಕ್ತಂ ನಾನಾಹೇತುವಿಭೂಷಿತಮ್ ।
ವೇದಾಖ್ಯಂ ಪರಮಂ ಗುಹ್ಯಂ ವೇದಕಾರಣಮಚ್ಯುತಮ್ ॥ ೫೨ ॥

ಶಬ್ದನಾದರೂ ಸ್ವರ-ವ್ಯಂಜನದಿಂದ ಕೂಡಿದವನಾಗಿದ್ದಾನೆ. ನಾನಾಯುಕ್ತಿಗಳಿಂದ ಅಲಂಕೃತನಾಗಿದ್ದಾನೆ. ವೇದವೆಂಬ ಪರಮಗುಹ್ಯನಾಗಿದ್ದಾನೆ. ಅಂತಹ ಚ್ಯುತಿರಹಿತನಾದ ಶಬ್ದಾತ್ಮನ ಬಳಿ ಹೋಗಿ ನಾರದನು ಶಬ್ದಾತ್ಮನನ್ನು ಕುರಿತು ಹೇಳಿದನು:

ಆಶ್ಚರ್ಯೋಽಸಿ ಚ ಧನ್ಯೋಽಸಿ ಹ್ಯನಂತೋಽಸಿ ಬೃಹತ್ತರಃ ।
ಭವಂತಂ ಶ್ರೋತುಮಿಚ್ಛಾಮಿ ಕೀದೃಗ್ಭೂತಸ್ತ್ವಮವ್ಯಯ ॥ ೫೩ ॥

ಶಬ್ದಾತ್ಮನೇ, ನೀನೇ ಆಶ್ಚರ್ಯನೂ, ಅನಂತನೂ, ಬೃಹತ್ತರನೂ ಆಗಿರುವಿ. ನಿನ್ನನ್ನು ತಿಳಿಯಲು ಇಚ್ಛಿಸುತ್ತೇನೆ. ನಿನ್ನ ಸ್ವರೂಪವೇನು? ಅವ್ಯಯನೇ, ತಿಳಿಸು.

ವೇದಾತ್ಮಾ ಪ್ರತ್ಯುವಾಚೇದಂ ನಾರದಂ ಮುನಿಪುಂಗವಮ್ ।
ಮಯಾ ಕಾರಣಭೂತೇನ ಸರ್ವವೇತ್ತಾ ಪಿತಾಮಹಃ ॥ ೫೪ ॥

ಈ ಪ್ರಸಂಗದಲ್ಲಿ ವೇದಾತ್ಮ ಎನಿಸಿದ ಸರಸ್ವತಿಯು ನಾರದ ಮುನಿಪುಂಗವನನ್ನು ಕುರಿತು ಹೀಗೆ ಹೇಳಿದಳು: ನನಗೂ ಕಾರಣೀಭೂತನಾದವನು ಸರ್ವಜ್ಞನಾದ ಪಿತಾಮಹನು.

ಬ್ರಹ್ಮಣೋ ಬುದ್ಧಿಸಂಸ್ಥಾನಮಾಸ್ಥಿತೋಽಹಂ ಮಹಾಮುನೇ ।
ತಸ್ಮಾದ್ ಬೃಹತ್ತರೋ ಮತ್ತಃ ಪದ್ಮಯೋನಿರ್ಮಹಾಮತಿಃ ।
ತಂ ಪೃಚ್ಛ ಮುನಿಶಾರ್ದೂಲ ಸರ್ವಕಾರಣಕಾರಣಮ್ ॥ ೫೫ ॥

ನಾನು ಆ ಚತುರ್ಮುಖಬ್ರಹ್ಮನ ಬುದ್ಧಿಯನ್ನೇ ಆಶ್ರಯಿಸಿಕೊಂಡಿದ್ದೇನೆ. ಪದ್ಮಯೋನಿಯಾದ ಮಹಾಮತಿಯಾದ ಬ್ರಹ್ಮನು ನನಗಿಂತಲೂ ಬೃಹತ್ತರನಾಗಿದ್ದಾನೆ. ಮುನಿಶಾರ್ದೂಲನೇ, ಎಲ್ಲ ಕಾರಣಗಳಿಗೂ ಕಾರಣನಾದ ಅವನ ಬಳಿಗೆ ಹೋಗಿ ಪ್ರಶ್ನಿಸು.

ಬ್ರಹ್ಮಲೋಕಂ ತತೋ ಗತ್ವಾ ನಾರದೋ ಮುನಿಪುಂಗವೈಃ ।
ಸೇವ್ಯಮಾನಂ ಮಹಾತ್ಮಾನಂ ಲೋಕಪಾಲೈರ್ಮರುದ್ಗಣೈಃ ॥ ೫೬ ॥

ಸಮುದ್ರೈಶ್ಚ ಸರಿದ್ಭಿಶ್ಚ ಭೂತತತ್ತ್ವೈಃ ಸಭೂಧರೈಃ ।
ಗಂಧರ್ವೈರಪ್ಸರೋಭಿಶ್ಚ ಜ್ಯೋತಿಷಾಂ ಚ ಗಣೈಸ್ತಥಾ ॥ ೫೭ ॥

ಸ್ತುತಿಸ್ತೋಮಗ್ರಹಸ್ತೋಭೈಸ್ತಥಾ ವೇದೈರ್ಮುನೀಶ್ವರೈಃ ।
ಉಪಾಸ್ಯಮಾನಂ ಬ್ರಹ್ಮಾಣಂ ಲೋಕನಾಥಂ ಪರಾತ್ಪರಮ್ ॥ ೫೮ ॥

ಹಿರಣ್ಯಗರ್ಭಂ ವಿಶ್ವೇಶಂ ಚತುರ್ವಕ್ತ್ರೇಣ ಭೂಷಿತಮ್ ।
ಪ್ರಣಮ್ಯ ಪ್ರಾಂಜಲಿಃ ಪ್ರಹ್ವಸ್ತಮಾಹ ಮುನಿಪುಂಗವಃ ॥ ೫೯ ॥

ಮುನಿಪುಂಗವರಿಂದ ಕೂಡಿದ ನಾರದರು ಬ್ರಹ್ಮಲೋಕವನ್ನು ಕುರಿತು ಹೋದನು. ಲೋಕಪಾಲಕರಿಂದ ಮರುದ್ಗಣಗಳಿಂದ ಸೇವ್ಯಮಾನನಾದ ಮಹಾತ್ಮನಾದ ಚತುರ್ಮುಖ ಬ್ರಹ್ಮನನ್ನು ಸಮುದ್ರಗಳಿಂದ, ಸರೋವರಗಳಿಂದ, ಭೂತತತ್ತ್ವಗಳಿಂದ, ಪರ್ವತಗಳಿಂದ, ಗಂಧರ್ವರಿಂದ, ಅಪ್ಸರೆಯರಿಂದ, ಜ್ಯೋತಿರ್ಮಂಡಲಗಳಿಂದ, ಸಮಸ್ತ ಗ್ರಹಗಳಿಂದ, ವೇದಗಳಿಂದ, ಮುನೀಶ್ವರರಿಂದ ಸ್ತೋತ್ರಪರಾಯಣನಾದ, ಉಪಾಸ್ಯಮಾನನಾದ, ಪರಾತ್ಪರನಾದ, ಲೋಕನಾಥನಾದ ಚತುರ್ಮುಖ ಬ್ರಹ್ಮನನ್ನು ನಾಲ್ಕು ವದನಗಳಿಂದ ಭೂಷಿತನಾದ, ಹಿರಣ್ಯಗರ್ಭನಾದ, ವಿಶ್ವೇಶನನ್ನು ನಮಸ್ಕರಿಸಿ ಸ್ತುತಿಸುತ್ತಾ ಪ್ರಾಂಜಲಿ ಬದ್ಧನಾಗಿ ಮುನಿಪುಂಗವನು ಹೀಗೆ ಹೇಳಿದನು.

ಆಶ್ಚರ್ಯೋಽಸಿ ಚ ಧನ್ಯೋಽಸಿ ಹ್ಯನಂತೋಽಸಿ ಬೃಹತ್ತರಃ ।
ಭವಂತಂ ವೇತ್ತುಮಿಚ್ಛಾಮಿ ಕೀದೃಗ್ಭೂತಸ್ತ್ವಮವ್ಯಯ ॥ ೬೦ ॥

ಪಿತಾಮಹನೇ, ನೀನೇ ಆಶ್ಚರ್ಯನೂ, ಧನ್ಯನೂ, ಅನಂತನೂ, ಬೃಹತ್ತರನೂ ಆಗಿರುವಿ. ನಿನ್ನ ಸ್ವರೂಪವೆಂತಹದ್ದು? ಅವ್ಯಯನೇ, ಅದನ್ನು ತಿಳಿಯಲು ಬಯಸಿದ್ದೇನೆ.

ತಚ್ಛ್ರುತ್ವಾ ಭಗವಾನ್ ಬ್ರಹ್ಮಾ ಸರ್ವಲೋಕಪಿತಾಮಹಃ ।
ಉತ್ಸ್ಮಯನ್ ಮುನಿಮಾಹೇದಂ ಕರ್ಮಮೂಲಸ್ಯ ಲೋಪಕಮ್ ॥೬೧॥

ಸರ್ವಲೋಕಪಿತಾಮಹನಾದ ಭಗವಾನ್ ಬ್ರಹ್ಮನು ನಾರದಮುನಿಯ ಮಾತನ್ನು ಕೇಳಿ, ಮಂದಹಾಸ ಬೀರುತ್ತಾ, ಮುನಿಯನ್ನು ಕುರಿತು ಸಮಸ್ತಲೋಕಪಾಲನಾದ ಭಗವಂತನನ್ನು ಚಿಂತಿಸುತ್ತಾ ಹೇಳಿದನು:

ನಾಹಂ ಬೃಹತ್ತರೋ ಬ್ರಹ್ಮನ್ನಪ್ಯನಂತಶ್ಚ ಸತ್ತಮ ।
ಲೋಕಾನಾಂ ಮಮ ಸರ್ವೇಷಾಂ ನಾಥಭೂತೋ ಬೃಹತ್ತರಃ ॥ ೬೨ ॥

ನಾನು ಬೃಹತ್ತರನಲ್ಲ, ಅನಂತನೂ ಅಲ್ಲ, ನನ್ನ ಸಮಸ್ತ ಲೋಕಗಳಿಗೂ ಸ್ವಾಮಿಯಾದವನೇ ಬೃಹತ್ತರನು.

ನಂದಗೋಪಕುಲೇ ಗೋಪಕುಮಾರೈಃ ಪರಿವಾರಿತಃ ।
ಸಮಸ್ತಜಗತಾಂ ಗೋಪ್ತಾ ಗೋಪವೇಷೇಣ ಸಂಸ್ಥಿತಃ ॥ ೬೩ ॥

ನಂದಗೋಪಕುಲದಲ್ಲಿ ಗೋಪಕುಮಾರರೊಂದಿಗೆ ಸುತ್ತುವರಿದಿದ್ದಾನೆ. ಸಮಸ್ತ ಜಗತ್ತನ್ನು ಅವನೇ ರಕ್ಷಿಸುತ್ತಿದ್ದಾನೆ. ಗೋಪವೇಷದಿಂದ ಜನರ ಕಣ್ಣಿಗೆ ಕಾಣಿಸುತ್ತಿದ್ದಾನೆ.

ಮದ್ರೂಪಂ ಚ ಸಮಾಸ್ಥಾಯ ಜಗತ್ಸೃಷ್ಟಿಂ ಕರೋತಿ ಸಃ ।
ಐಶಾನರೂಪಮಾಸ್ಥಾಯಃ ಶ್ರೀಮಾನ್ ಹಂತಿ ನಿತ್ಯಂ ಹಿ ಪಾತಿ ಚ ॥

ನನ್ನ ರೂಪವನ್ನು ಆಶ್ರಯಿಸಿ ಅರ್ಥಾತ್ ಬ್ರಹ್ಮಾ ಎಂಬ ರೂಪವನ್ನು ಧರಿಸಿದ ಭಗವಂತನು ಜಗತ್ತಿನ ಸೃಷ್ಟಿಯನ್ನು ಮಾಡುತ್ತಿದ್ದಾನೆ. ಶಿವ ಎಂಬ ರೂಪದಿಂದ ಜಗತ್ತಿನ ಸಂಹಾರವನ್ನೂ ಮಾಡುತ್ತಿದ್ದಾನೆ. ಸ್ವಯಂ ತಾನೇ ಈ ಜಗತ್ತನ್ನು ಪರಿಪಾಲಿಸುತ್ತಿದ್ದಾನೆ.

ವಿಷ್ಣೋಃ ಸ್ವರೂಪರೂಪೋಽಸೌ ಕಾರಣಂ ಸ ಹರಿರ್ಮಮ ।
ತಂ ಪೃಚ್ಛ ಮುನಿಶಾರ್ದೂಲ ಸ ಚಾನಂತೋ ಬೃಹತ್ತರಃ ॥ ೬೫ ॥

ಕೇವಲ ಕೃಷ್ಣಸ್ವರೂಪದಿಂದ ಅಲ್ಲದೆ ಬ್ರಹ್ಮ-ಶಿವರಂತೆ ಅಂತರ್ಯಾಮಿಯಾಗಿರುವ ಸ್ವರೂಪರೂಪನಾದ ಭಗವಂತನು ಬ್ರಹ್ಮರೂಪವನ್ನೂ ತಾಳಿ, ಶಿವರೂಪವನ್ನೂ ತಾಳಿ, ವಿಷ್ಣುವೆಂಬ ರೂಪವನ್ನೂ ತಾಳಿ ಜಗತ್ತಿಗೆಲ್ಲ ಕಾರಣನಾಗಿದ್ದಾನೆ. ನನಗೂ ಕಾರಣನು ಅವನೇ. ಅನಂತನೂ, ಬೃಹತ್ತರನೂ ಆದವನು ವಿಷ್ಣುವೇ ಆಗಿದ್ದಾನೆ. ಮುನಿಯೇ, ಅವನನ್ನು ಪ್ರಶ್ನಿಸು.

ತತೋಽವತೀರ್ಯ ಭಗವಾನ್ ಬ್ರಹ್ಮಲೋಕಾನ್ಮಹಾಮುನಿಃ ।
ನಂದಗೋಪಕುಲೇ ವಿಷ್ಣುಮೇನಂ ಕೃಷ್ಣಂ ಜಗತ್ಪತಿಮ್ ॥ ೬೬ ॥

ಬಾಲಕ್ರೀಡನಕಾಸಕ್ತಂ ವತ್ಸಜಾಲವಿಭೂಷಿತಮ್ ।
ಪಾಯಯಿತ್ವಾಥ ಬಧ್ನಂತಂ ಧೂಲಧೂಮ್ರಾನನಂ ಪರಮ್ ॥ ೬೭ ॥

ಗಾಹಮಾನೈರ್ಹಸದ್ಭಿಶ್ಚ ನೃತ್ಯದ್ಭಿಶ್ಚ ಸಮಂತತಃ ।
ಪಾಣಿವಾದನಕೈಶ್ಚೈವ ಸಂವೃತಂ ವೇಣುವಾದಕೈಃ ॥ ೬೮ ॥

ಪ್ರಣಿಪತ್ಯಾಬ್ರವೀದೇನಂ ನಾರದೋ ಭಗವಾನ್ ಮುನಿಃ ।
ಆಶ್ಚರ್ಯೋಽಸಿ ಚ ಧನ್ಯೋಽಸಿ ಹ್ಯನಂತಶ್ಚ ಬೃಹತ್ತರಃ ।
ವೇತ್ತಾಽಸಿ ಚಾವ್ಯಯಶ್ಚಾಸಿ ವೇತ್ತುಮಿಚ್ಛಾಮಿ ಯಾದೃಶಮ್ ॥ ೬೯ ॥

ಬಳಿಕ ಪೂಜ್ಯನಾದ ನಾರದನು ಬ್ರಹ್ಮಲೋಕದಿಂದ ಕೆಳಗಿಳಿದು ಬಂದು ನಂದಗೋಪಕುಲದಲ್ಲಿ ಜಗತ್ಪತಿಯಾಗಿರುವ ವಿಷ್ಣುವಾದ ಕೃಷ್ಣನನ್ನು, ಅನೇಕ ಕರುಗಳ ನಡುವೆ ಅಲಂಕೃತನಾದ, ಬಾಲಕ್ರೀಡೆಯನ್ನು ಮಾಡುತ್ತಿರುವ ಕರುಗಳಿಗೆ ಹಾಲನ್ನು ಕುಡಿಸಿ ಹಗ್ಗದಿಂದ ಕಟ್ಟುತ್ತಿರುವ, ಗೋಧೂಳಿಗಳಿಂದ ಆವೃತನಾದ, ಮುಖವೆಲ್ಲ ಧೂಳು ಕವಿದುಕೊಂಡಿರುವ ಸರ್ವೋತ್ತಮನಾದ, ಓಡುತ್ತಿರುವ, ನಗುತ್ತಿರುವ, ಸುತ್ತಲೂ ನರ್ತನ ಮಾಡುತ್ತಿರುವ, ಚಪ್ಪಾಳೆ ತಟ್ಟುತ್ತಿರುವ, ವೇಣುವಾದಕರಿಂದ ಸುತ್ತುಗಟ್ಟಿರುವ, ಹೀಗೆ ಅನೇಕ ಗೋಪಾಲ ಬಾಲಕರಿಂದ ನೆರೆದಿರುವ ಕೃಷ್ಣನನ್ನು ನಮಸ್ಕರಿಸಿ ಭಗವಾನ್ ನಾರದಮುನಿಯು ಹೀಗೆ ಹೇಳಿದನು: ಕೃಷ್ಣನೇ, ನೀನೇ ಆಶ್ಚರ್ಯನೂ, ಧನ್ಯನೂ, ಅನಂತನೂ, ಬೃಹತ್ತರನು. ಎಲ್ಲವನ್ನೂ ಬಲ್ಲವನೂ, ಅವ್ಯಯನೂ, ಇಂತಹ ನಿನ್ನ ಸ್ವರೂಪವನ್ನು ತಿಳಿಯಲು ಬಯಸುತ್ತೇನೆ.

ತತಃ ಪ್ರಹಸ್ಯ ಭಗವಾನ್ನಾರದಂ ಪ್ರತ್ಯುವಾಚ ಹ ।
ಮತ್ತಃ ಪರತರಂ ನಾಸ್ತಿ ಮತ್ತಃ ಸರ್ವಂ ಪ್ರತಿಷ್ಠಿತಮ್ ॥ ೭೦ ॥

ಬಳಿಕ ಭಗವಾನ್ ಕೃಷ್ಣನು ಮಂದಹಾಸವನ್ನು ಬೀರಿ ನಾರದರನ್ನು ಕುರಿತು ಹೇಳಿದನು: ನಾರದರೇ ನನಗಿಂತ ಸರ್ವೋತ್ತಮವಾದ ವಸ್ತುವು ಜಗತ್ತಿನಲ್ಲಿ ಯಾವುದೂ ಇಲ್ಲ. ನನ್ನಿಂದಲೇ ಎಲ್ಲವೂ ಪ್ರತಿಷ್ಠಿತವಾಗಿವೆ.

ವ್ಯಾಖ್ಯಾನ ವಿಶೇಷ– ಸಮಸ್ತ ದೇವತೆಗಳು ತಾವು ಹೇಳುವಾಗ ಪೃಥಿವೀ, ಗಂಧ, ಜಲ, ರಸಾದಿ ವಸ್ತುಗಳ ಅಭಿಮಾನಿದೇವತೆಗಳು ತಾರತಮ್ಯಕ್ರಮದಲ್ಲಿ ಉತ್ತಮತ್ವವನ್ನು ಹೇಳುತ್ತಾ ಬಂದಿದ್ದಾರೆಂದು ತಿಳಿಯಬೇಕು. ಪ್ರಶ್ನೆಗೆ ಉತ್ತರವನ್ನು ಹೇಳುವ ನೆಪದಲ್ಲಿ ಪೃಥಿವ್ಯಾದಿ ದೇವತೆಗಳ ತಾರತಮ್ಯವನ್ನೂ ಇಲ್ಲಿ ತಿಳಿಸಿದಂತಾಗಿದೆ. ಜೊತೆಗೆ ಪರಮಾತ್ಮನಿಗಿಂತಲೂ ಇವರಿಗೆ ಅತ್ಯಂತ ಭೇದವಿದೆ ಎಂಬ ವಿಚಾರವೂ, ಕೊನೆಗೆ ಭಗವಂತನೇ ಸರ್ವೋತ್ತಮನೆಂಬುದನ್ನೂ ತಿಳಿಸಲು ನಾರದರು ಮಾಡಿದ ಪ್ರಯತ್ನವು ಎಂದು ಈ ಸಮಗ್ರ ಪ್ರಕರಣದ ಅಭಿಪ್ರಾಯ. ಪ್ರತೀ ವ್ಯಕ್ತಿಯ ಬಳಿ ನಾರದರು ಸಾಗಿದಾಗಲೂ ಎಲ್ಲರೂ ಬೃಹತ್ತರನಲ್ಲ ಎಂದು ತಮ್ಮ ಸ್ವರೂಪದ ವಿಚಾರವನ್ನು ತಿಳಿಸುವುದರ ಜೊತೆಗೆ ಭಗವಂತನೇ ಸರ್ವೋತ್ತಮನೆಂದು ಅಭಿಪ್ರಾಯವನ್ನು ಹೊಂದಿದುದರಿಂದ ಸರ್ವೋತ್ತಮನಾದ ನಾರಾಯಣನು ಜಗತ್ತಿಗಿಂತ ಅತ್ಯಂತ ಭಿನ್ನನೂ, ಸರ್ವೋತ್ತಮನೂ ಎಂಬುದನ್ನು ಈ ಪ್ರಕರಣದಲ್ಲಿ ಸ್ಪಷ್ಟವಾಗಿ ಹೇಳಿದಂತಾಯಿತು. ಈ ಅಭಿಮಾನಿದೇವತೆಗಳ ತಾರತಮ್ಯವನ್ನು ಶ್ರೀಭಾವೀಸಮೀರ ವಾದಿರಾಜಗುರುಸಾರ್ವಭೌಮರು ತಮ್ಮ ಮಹಾಭಾರತತಾತ್ಪರ್ಯ ನಿರ್ಣಯದ ಪ್ರಕಾಶಿಕಾ ವ್ಯಾಖ್ಯಾನದಲ್ಲಿ ವಿಸ್ತಾರವಾಗಿ ಹೇಳಿದ್ದಾರೆ. ಆದ್ದರಿಂದ ಇಲ್ಲಿ ಸಂಕ್ಷಿಪ್ತವಾಗಿ ವ್ಯಾಖ್ಯಾನಿಸಿದ್ದಾರೆ ಎಂದು ತಿಳಿಯಬೇಕು.

ಮತ್ತೋ ಬೃಹತ್ತರಂ ನಾನ್ಯದಹಮೇವ ಬೃಹತ್ತರಃ ।
ಆಕಾಶೇ ಚ ಸ್ಥಿತಃ ಪೂರ್ವಮುಕ್ತವಾನಹಮೇವ ತೇ ॥ ೭೧ ॥

ನನಗಿಂತಲೂ ಬೃಹತ್ತರವಾದುದು ಬೇರೆ ಯಾವುದೂ ಇಲ್ಲ. ನಾನೇ ಬೃಹತ್ತರನು. ಹಿಂದೆ ಆಕಾಶದಲ್ಲಿ ಅಶರೀರವಾಣಿಯಾಗಿ ಈ ಅಭಿಪ್ರಾಯವನ್ನು ನಾನೇ ನಿನಗೆ ತಿಳಿಸಿದ್ದೆ.

ನ ಮಾಂ ವೇತ್ತಿ ಜನಃ ಕಶ್ಚಿನ್ಮಾಯಾ ಮಮ ದುರತ್ಯಯಾ ।
ಭಕ್ತ್ಯಾ ತ್ವನನ್ಯಯಾ ಯುಕ್ತಾ ಮಾಂ ವಿಜಾನಂತಿ ಯೋಗಿನಃ ॥ ೭೨ ॥

ಸಾಮಾನ್ಯ ಜನರು ನನ್ನ ಸ್ವರೂಪವನ್ನು ಅರಿಯಲಾರರು. ನನ್ನ ಇಚ್ಛಾಶಕ್ತಿಯನ್ನು ಯಾರೂ ದಾಟಲಾಗದು. ಯಾರಲ್ಲೂ ಇಲ್ಲದ ಅನನ್ಯವಾದ ಭಕ್ತಿಯಿಂದ ಯೋಗಿಗಳು ನನ್ನನ್ನು ತಿಳಿಯುತ್ತಾರೆ.

ಪ್ರಿಯೋಽಸಿ ಮಮ ಭಕ್ತೋಽಸಿ ಮಮ ತತ್ತ್ವಂ ವಿಲೋಕಯ ।
ದದಾಮಿ ತವ ತಜ್ಜ್ಞಾನಂ ಯೇನ ತತ್ತ್ವಂ ಪ್ರಪಶ್ಯಸಿ ॥ ೭೩ ॥

ನಾರದನೇ, ನೀನು ನನಗೆ ಪ್ರೀತಿಪಾತ್ರನಾಗಿರುವಿ. ಭಕ್ತನಾಗಿರುವಿ. ನನ್ನ ತತ್ತ್ವವನ್ನು ನೀನೇ ನೋಡು. ನಿನಗೆ ನನ್ನನ್ನು ನೋಡುವ ಜ್ಞಾನವನ್ನು ನೀಡುತ್ತೇನೆ. ಇದರಿಂದ ನನ್ನ ತತ್ತ್ವವನ್ನು ಚೆನ್ನಾಗಿ ನೋಡುತ್ತಿ.

ಅನ್ಯೇಷಾಂ ಚೈವ ಭಕ್ತಾನಾಂ ಮಮ ಯೋಗರತಾತ್ಮನಾಮ್ ।
ದದಾಮಿ ದಿವ್ಯಂ ಜ್ಞಾನಂ ಚ ಯೇನ ತತ್ತ್ವಂ ಪ್ರಪಶ್ಯಸಿ ॥ ೭೪ ॥

ಬೇರೆ ನನ್ನ ಭಕ್ತರಿಗೂ ಯೋಗರತರಾದ ಭಕ್ತರಿಗೂ ದಿವ್ಯಜ್ಞಾನವನ್ನು ನೀಡುತ್ತೇನೆ. ನೀನು ಯಾವ ತತ್ತ್ವವನ್ನು ನೋಡುತ್ತೀಯೋ ಅವರೂ ಅದರಂತೆ ನೋಡುತ್ತಾರೆ.

ಅನ್ಯೇಷಾಂ ಚೈವ ಭಕ್ತಾನಾಂ ಮಮ ಯೋಗರತಾತ್ಮನಾಮ್ ।
ದದಾಮಿ ದಿವ್ಯಂ ಜ್ಞಾನಂ ಚ ತೇನ ತೇ ಯಾಂತಿ ಮತ್ಪದಮ್ ॥ ೭೫ ॥

ನನ್ನ ಯೋಗದಲ್ಲೇ ರತರಾದ ಬೇರೆ ಭಕ್ತರಿಗೂ ದಿವ್ಯಜ್ಞಾನವನ್ನು ನೀಡುತ್ತೇನೆ. ಅದರಿಂದ ನನ್ನ ಸ್ಥಾನವೆನಿಸಿದ ಮುಕ್ತಿಯನ್ನು ಹೊಂದುತ್ತಾರೆ.

ಏವಮುಕ್ತ್ವಾ ಯಯೌ ಕೃಷ್ಣೋ ನಂದಗೋಪಗೃಹಂ ಹರಿಃ ॥ ೭೬ ॥

ಈ ರೀತಿಯಾಗಿ ನಾರದರನ್ನು ಕುರಿತು ಹೇಳಿದ ಕೃಷ್ಣನು ನಂದಗೋಪಗೃಹಕ್ಕೆ ಹೊರಟನು.

ಭೀಷ್ಮಃ

ಏತತ್ತೇ ಕಥಿತಂ ರಾಜನ್ ವಿಷ್ಣುತತ್ತ್ವಮನುತ್ತಮಮ್ ।
ಭಜಸ್ವೈನಂ ವಿಶಾಲಾಕ್ಷಂ ಜಪನ್ ಕೃಷ್ಣೇತಿ ಸತ್ತಮ ॥ ೭೭ ॥

ಭೀಷ್ಮ– ರಾಜನೇ, ಅನುತ್ತಮವಾದ ವಿಷ್ಣುತತ್ತ್ವವನ್ನು ನಿನಗೆ ಹೇಳಿದ್ದೇನೆ. ಈ ತತ್ತ್ವವನ್ನು ಚೆನ್ನಾಗಿ ಚಿಂತಿಸು. ಪೂಜ್ಯನೇ, ಕೃಷ್ಣಾ ಎಂದು ಜಪಿಸುತ್ತಾ ಇವನನ್ನೇ ಭಜಿಸು.

ಮೋಹಯನ್ ಮಾಂ ತಥಾ ತ್ವಾಂ ಚ ಶೃಣೋತ್ಯೇಷ ಮಯೇರಿತಾನ್ ।
ಧರ್ಮಾತ್ಮಾ ಚ ಮಹಾಬಾಹೋ ಭಕ್ತಾನ್ ರಕ್ಷತಿ ನಾನ್ಯಥಾ ॥ ೭೮ ॥

ಅನಂತ ಕಲ್ಯಾಣ ಗುಣಪರಿಪೂರ್ಣನಾದ ಭಗವಂತನು ನನ್ನನ್ನು ಮೋಹಿಸುತ್ತಾ ನಿನ್ನಿಂದ ಕೇಳಿಸುತ್ತಾ ನನ್ನಿಂದ ಹೇಳಿದ ಈ ಗುಣಗಳನ್ನು ಅವನು ಕೇಳುತ್ತಲೇ ಇದ್ದಾನೆ. ಅವನು ಭಕ್ತರಕ್ಷಕನು, ಧರ್ಮಾತ್ಮನು. ಮಹಾಬಾಹುವೇ, ಭಗವಂತನ ಸ್ವರೂಪವು ಹೀಗೆ ನಿಶ್ಚಿತವಾಗಿಯೂ ಇದೆ. ಅವನಂತೆ ಸರ್ವೋತ್ತಮನು ಯಾರೂ ಇಲ್ಲ. ಈ ವಿಚಾರದಲ್ಲಿ ಅಭಿಪ್ರಾಯಭೇದವನ್ನು ಹೊಂದಬೇಡ. ಇದು ಸಿದ್ಧವು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಸಪ್ತತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಮೂವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೆಂಟನೆಯ ಅಧ್ಯಾಯ

ವಿಷ್ಣುವು ನಾರದರಿಗೆ ಮನುಷ್ಯನು ತನ್ನ ಅವಸಾನಕಾಲದಲ್ಲಿ ಜಪಿಸುವ ಮಂತ್ರವನ್ನುಪದೇಶಿಸಿದ ವಿಷಯವನ್ನು ಭೀಷ್ಮನು ಯುಧಿಷ್ಠಿರನಿಗೆ ಹೇಳಿದುದು.

ಯುಧಿಷ್ಠಿರಃ

ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಪ್ರಯಾಣಕಾಲೇ ಕಿಂ ಜಪ್ಯಂ ಮೋಕ್ಷಿಭಿಸ್ತತ್ತ್ವಚಿಂತಕೈಃ ॥ ೧ ॥

ಕಿನ್ನು ಸ್ಮರನ್ ಕುರುಶ್ರೇಷ್ಠ ಮರಣೇ ಸಮುಪಸ್ಥಿತೇ ।
ಪ್ರಾಪ್ನುಯಾತ್ ಪರಮಾಂ ಸಿದ್ಧಿಂ ಶ್ರೋತುಮಿಚ್ಛಾಮಿ ತತ್ತ್ವತಃ ॥ ೨ ॥

ಯುಧಿಷ್ಠಿರ– ಪಿತಾಮಹನೇ, ಮಹಾಪ್ರಾಜ್ಞನೇ, ಸರ್ವಶಾಸ್ತ್ರ ವಿಶಾರದನೇ, ಪ್ರಯಾಣ ಕಾಲದಲ್ಲಿ ಮೋಕ್ಷಾರ್ಥಿಗಳು ಏನನ್ನು ಜಪಿಸಬೇಕು? ಮರಣಕಾಲದಲ್ಲಿ ಯಾವುದನ್ನು ಸ್ಮರಿಸಿದರೆ ಉತ್ತಮ ಗತಿಯನ್ನು ಹೊಂದುತ್ತಾರೆ? ಇದನ್ನು ಕೇಳಲು ಬಯಸುತ್ತೇನೆ.

ಭೀಷ್ಮಃ

ತ್ವದ್ಯುಕ್ತಶ್ಚ ಹಿತಃ ಸೂಕ್ಷ್ಮ ಉಕ್ತಃ ಪ್ರಶ್ನಸ್ತ್ವಯಾऽನಘ ।
ಶೃಣುಷ್ವಾವಹಿತೋ ರಾಜನ್ನಾರದೇನ ಪುರಾ ಶ್ರುತಮ್ ॥ ೩ ॥

ಶ್ರೀವತ್ಸಾಂಕಂ ಜಗದ್ಬೀಜಮನಂತಂ ಲೋಕಸಾಕ್ಷಿಣಮ್ ।
ಪುರಾ ನಾರಾಯಣಂ ದೇವಂ ನಾರದಃ ಪರ್ಯಪೃಚ್ಛತ ॥ ೪ ॥

ಭೀಷ್ಮ- ಅನಘನೇ, ನೀನು ಹಿತವೂ, ಸೂಕ್ಷ್ಮವೂ, ಯುಕ್ತವೂ ಆದ ಪ್ರಶ್ನೆಯನ್ನು ಕೇಳಿರುವೆ. ಹಿಂದೆ ನಾರದ ಮುನಿಯು ಶ್ರೀವತ್ಸಲಾಂಛನನೂ, ಅವ್ಯಯನೂ, ಜಗತ್ಕಾರಣನೂ ಆದ ಶ್ರೀಮನ್ನಾರಾಯಣನಲ್ಲಿ ಹೀಗೆಯೇ ಪ್ರಶ್ನೆಯನ್ನು ಮಾಡಿದ್ದನು.

ಅಕ್ಷರಂ ಪರಮಂ ಬ್ರಹ್ಮ ನಿರ್ಗುಣಂ ತಮಸಃ ಪರಮ್ ।
ಆಹುರ್ವೇದ್ಯಂ ಪರಂ ಧಾಮ ಬ್ರಹ್ಮಾದಿಕಮಲೋದ್ಭವಮ್ ॥ ೫ ॥

ಜಗದೀಶ್ವರನೇ, ಅವ್ಯಯನೆನಿಸಿದ, ನಾಶರಹಿತನಾದ, ಪ್ರಕೃತಿಗಿಂತಲೂ ಉತ್ತಮನಾದ, ಪ್ರಾಕೃತಗುಣರಹಿತನಾದ, ಎಲ್ಲಕ್ಕಿಂತಲೂ ಉತ್ತಮನಾಗಿರುವ, ಚತುರ್ಮುಖ ಬ್ರಹ್ಮನಿಗೂ ಆದಿಭೂತವಾದ, ಕಮಲಕ್ಕೂ ಕಾರಣನಾದ ಪರವಸ್ತುವನ್ನು ತಿಳಿಯಬೇಕೆಂದು ಹಿರಿಯರು ಹೇಳುತ್ತಾರೆ.

ಭಗವನ್ ಭೂತಭವ್ಯೇಶ ಶ್ರದ್ಧಾನೈರ್ಜಿತೇಂದ್ರಿಯೈಃ ।
ಕಥಂ ಭಕ್ತೈರ್ವಿಚಿಂತ್ಯೋऽಸಿ ಯೋಗಿಭಿರ್ಮೋಕ್ಷಕಾಂಕ್ಷಿಭಿಃ ॥ ೬ ॥

ಪೂಜ್ಯನೇ, ಹಿಂದೆ ಹುಟ್ಟಿದ, ಮುಂದೆ ಹುಟ್ಟುವ ಸ್ಥಾವರ-ಜಂಗಮಗಳಿಗೆ ಒಡೆಯನೆ, ಶ್ರದ್ಧಾಳುಗಳು ಜಿತೇಂದ್ರಿಯರೂ ಆದ ಯೋಗಿಗಳಿಗೆ ನೀನು ಚಿಂತಿಸಲು ಹೇಗೆ ಅರ್ಹನಾಗಿರುವಿ? ಮೋಕ್ಷಾಕಾಂಕ್ಷಿಯಾದ ಯೋಗಿಗಳಿಗೆ ನೀನು ಹೇಗೆ ಗೋಚರನಾಗುತ್ತಿ?

ಕಿನ್ನು ಜಪ್ಯಂ ಜಪೇನ್ನಿತ್ಯಂ ಕಾಲ್ಯಮುತ್ಥಾಯ ಮಾನವಃ ।
ಸ್ಮರೇಚ್ಚ ಮ್ರಿಯಮಾಣೋ ವೈ ವಿಶೇಷೇಣ ಮಹಾದ್ಯುತೇ ॥ ೭ ॥

ಕಥಂ ಯುಂಜನ್ ಸಮಾಧ್ಯಾಯೇದ್ ಬ್ರೂಹಿ ತತ್ತ್ವಂ ಸನಾತನಮ್ ॥

ಪ್ರತಿದಿನವೂ ಪ್ರಾತಃಕಾಲದಲ್ಲಿ ಎದ್ದಕೂಡಲೇ ಜಪಿಸಬೇಕಾದ ಮಂತ್ರಯಾವುದು? ಮರಣೋನ್ಮುಖನಾದ ವ್ಯಕ್ತಿಯು ಏನನ್ನು ಜಪಿಸಬೇಕು? ಸಮಾಧಿಯಲ್ಲಿದ್ದಾಗ ಏನನ್ನು ಧ್ಯಾನಿಸಬೇಕು? ಸನಾತನತತ್ತ್ವವನ್ನೆಲ್ಲ ನೀನು ತಿಳಿಸಬೇಕು.

ಶ್ರುತ್ವಾ ಚ ನಾರದೋಕ್ತಂ ತು ದೇವಾನಾಮೀಶ್ವರಃ ಸ್ವಯಮ್ ।
ಪ್ರೋವಾಚ ಭಗವಾನ್ ವಿಷ್ಣುರ್ನಾರದಂ ವರದಃ ಪ್ರಭುಃ ॥ ೯ ॥

ನಾರದನು ಹೇಳಿದ್ದನ್ನೆಲ್ಲ ಕೇಳಿಸಿಕೊಂಡ ಭಗವಂತನು ಸಮಸ್ತ ದೇವತೆಗಳಿಗೆ ಸ್ವಯಂ ಈಶ್ವರನಾಗಿದ್ದರೂ ವರದನಾದ ಪ್ರಭುವಾದ ಭಗವಾನ್ ವಿಷ್ಣುವು ನಾರದರನ್ನು ಕುರಿತು ಹೇಳಿದನು.

ಹಂತ ತೇ ಕಥಯಿಷ್ಯಾಮಿ ಇಮಾಂ ದಿವ್ಯಾಮನುಸ್ಮೃತಿಮ್ ।
ಯಾಮಧೀತ್ಯ ಪ್ರಯಾಣೇ ತು ಮದ್ಭಾವಾಯೋಪಪದ್ಯತೇ ॥ ೧೦ ॥

ನಾರದನೇ, ಮನುಷ್ಯನು ತನ್ನ ಅವಸಾನಕಾಲದಲ್ಲಿ ಯಾವ ಮಂತ್ರವನ್ನು ಜಪಿಸಿದರೆ ನನ್ನಂತೆ ನಿರ್ದುಃಖರೂಪವನ್ನು ಹೊಂದುತ್ತಾನೋ ಅಂತಹ ಅನುಸ್ಮೃತಿಯನ್ನು ಹೇಳುತ್ತೇನೆ, ಕೇಳು.

ಓಂಕಾರಮಗ್ರತಃ ಕೃತ್ವಾ ಮಾಂ ನಮಸ್ಕೃತ್ಯ ನಾರದ ।
ಏಕಾಗ್ರಃ ಪ್ರಯತೋ ಭೂತ್ವಾ ಇಮಂ ಮಂತ್ರಮುದೀರಯೇತ್ ॥೧೧॥

ನಾರದನೇ, ಆರಂಭದಲ್ಲಿ ಓಂಕಾರವನ್ನು ಹೇಳುತ್ತಾ ನನ್ನನ್ನು ನಮಸ್ಕರಿಸಿ ಜಿತೇಂದ್ರಿಯನಾಗಿ ಏಕಾಗ್ರಬುದ್ಧಿಯಿಂದ ಈ ಮಂತ್ರವನ್ನು ಹೇಳಬೇಕು.

ಓಂ ನಮೋ ಭಗವತೇ ವಾಸುದೇವಾಯೇತಿ ॥ ೧೨ ॥

'ಓಂ ನಮೋ ಭಗವತೇ ವಾಸುದೇವಾಯ' ಎಂದು.

ಇತ್ಯುಕ್ತೋ ನಾರದಃ ಪ್ರಾಹ ಪ್ರಾಂಜಲಿಃ ಪ್ರಣತಃ ಸ್ಥಿತಃ ।
ಸರ್ವದೇವೇಶ್ವರಂ ವಿಷ್ಣುಂ ಸರ್ವಾತ್ಮಾನಂ ಹರಿಂ ಪ್ರಭುಮ್ ॥ ೧೩ ॥

ಈ ರೀತಿಯಾಗಿ ಭಗವಂತನು ಹೇಳಿದಾಗ ನಮಸ್ಕರಿಸುತ್ತಾ ಪ್ರಾಂಜಲಿಬದ್ಧರಾಗಿ ನಿಂತಿರುವ ನಾರದರು ಹೇಳುತ್ತಾರೆ: ಸರ್ವದೇವೇಶ್ವರನೂ, ಸರ್ವಾತ್ಮನೂ, ಪ್ರಭುವೂ, ಹರಿಯೂ ಆದ ವಿಷ್ಣುವನ್ನು ಕುರಿತು ಹೀಗೆ ಹೇಳಿದರು.

ನಾರದಃ

ಅವ್ಯಯಂ ಶಾಶ್ವತಂ ದೇವಂ ಪ್ರಭವಂ ಪುರುಷೋತ್ತಮಮ್ ।
ಪ್ರಪದ್ಯೇ ಪ್ರಾಂಜಲಿರ್ವಿಷ್ಣುಮಕ್ಷರಂ ಪರಮಂ ಪದಮ್ ॥ ೧೪ ॥

ನಾರದರು– ಅವ್ಯಯನೂ, ಶಾಶ್ವತನೂ, ಕ್ರೀಡಾದಿಗುಣವಿಶಿಷ್ಟನೂ, ಲೋಕಕರ್ತನೂ, ಪುರುಷೋತ್ತಮನೂ, ಅಕ್ಷರನೂ, ಪರಮಪದನೂ ಆದ ವಿಷ್ಣುವನ್ನು ನಾನು ಹೊಂದುತ್ತೇನೆ.

ಪುರಾಣಂ ಪ್ರಭವಂ ವಿಷ್ಣುಮಕ್ಷಯಂ ಲೋಕಸಾಕ್ಷಿಣಮ್ ।
ಪ್ರಪದ್ಯೇ ಪುಂಡರೀಕಾಕ್ಷಮೀಶಂ ಭಕ್ತಾನುಕಂಪಿನಮ್ ॥ ೧೫ ॥

ಪುರಾಣನೂ, ಸಮಸ್ತ ಜಗತ್ತಿಗೆ ಉತ್ಪತ್ತಿಕಾರಣನೂ, ಅಕ್ಷಯನೂ, ಲೋಕಸಾಕ್ಷಿಯೂ, ಪುಂಡರೀಕಾಕ್ಷನೂ, ಸರ್ವಶಕ್ತನೂ, ಭಕ್ತಾನುಕಂಪಿಯೂ ಆದ ವಿಷ್ಣುವನ್ನು ಹೊಂದುತ್ತೇನೆ.

ಲೋಕನಾಥಂ ಸಹಸ್ಯಾಕ್ಷಮದ್ಭುತಂ ಪರಮಂ ಪದಮ್ ।
ಭಗವಂತಂ ಪ್ರಪನ್ನೋಽಸ್ಮಿ ಭೂತಭವ್ಯಭವತ್ಪ್ರಭುಮ್ ॥ ೧೬ ॥

ಲೋಕನಾಥನೂ, ಸಹಸ್ರಾಕ್ಷನೂ, ಅದ್ಭುತನೂ, ಪರಮಪದನೂ, ಹಿಂದೆ ಹುಟ್ಟಿದ ಮುಂದೆ ಹುಟ್ಟುವ ಜೀವನಿಗೆ ಪ್ರಭುವೂ ಆದ ಭಗವಂತನಾದ ನಿನ್ನನ್ನು ಶರಣು ಹೊಂದುತ್ತೇನೆ.

ಸ್ರಷ್ಟಾರಂ ಸರ್ವಲೋಕಾನಾಮನಂತಂ ಸರ್ವತೋಮುಖಮ್ ।
ಪದ್ಮನಾಭಂ ಹೃಷೀಕೇಶಂ ಪ್ರಪದ್ಯೇ ಸತ್ಯಮಚ್ಯುತಮ್ ॥ ೧೭ ॥

ಸಮಸ್ತ ಲೋಕಗಳ ಸೃಷ್ಟಿಕಾರಣನಾದ, ಅನಂತನಾದ, ಸಮಸ್ತ ದಿಕ್ಕುಗಳಿಗೂ ನಿಯಾಮಕನಾದ, ಪದ್ಮನಾಭನಾದ, ಹೃಷೀಕೇಶನಾದ, ಅಚ್ಯುತನಾದ ನಿನ್ನನ್ನು ಹೊಂದುತ್ತೇನೆ.

ಹಿರಣ್ಯಗರ್ಭಮಮೃತಂ ಭೂಗರ್ಭಂ ಪರತಃಪರಮ್ ।
ಪ್ರಭೋಃ ಪ್ರಭುಮನಾದ್ಯಂತಂ ಪ್ರಪದ್ಯೇ ತಂ ರವಿಪ್ರಭಮ್ ॥ ೧೮ ॥

ಅಮೃತನಾದ, ಹಿರಣ್ಯಗರ್ಭನಾದ, ಭೂಗರ್ಭನಾದ, ಸರ್ವೋತ್ತಮ ಪದಾರ್ಥಕ್ಕಿಂತ ಉತ್ತಮನಾದ, ಪ್ರಭುಗಳಿಗೂ ಪ್ರಭುವಾದ, ಅನಾದಿಯಾದ, ಅನಂತನಾದ, ರವಿಪ್ರಭೆಯಿಂದ ಕೂಡಿದ ನಿನ್ನನ್ನು ಹೊಂದುತ್ತೇನೆ.

ಸಹಸ್ರಶೀರ್ಷಂ ಪುರುಷಂ ಮಹರ್ಷಿಂ ತತ್ತ್ವಭಾವನಮ್ ।
ಪ್ರಪದ್ಯೇ ಸೂಕ್ಷ್ಮಮಚಲಂ ವರೇಣ್ಯಮಭಯಪ್ರದಮ್ ॥ ೧೯ ॥

ಸಹಸ್ರಶೀರ್ಷನೂ, ಮಹರ್ಷಿಯೂ, ಎಲ್ಲಾ ತತ್ತ್ವಗಳ ಉತ್ಪತ್ತಿ ಕಾರಣನೂ, ಸೂಕ್ಷ್ಮನೂ, ಅಚಲನೂ, ವರೇಣ್ಯನೂ, ಅಭಯಪ್ರದನೂ ಆದ ನಿನ್ನನ್ನು ಹೊಂದುತ್ತೇನೆ.

ನಾರಾಯಣಂ ಪುರಾಣರ್ಷಿಂ ಯೋಗಾತ್ಮಾನಂ ಸನಾತನಮ್ ।
ಸಂಸ್ಥಾನಂ ಸರ್ವತತ್ತ್ವಾನಾಂ ಪ್ರಪದ್ಯೇ ಧ್ರುವಮೀಶ್ವರಮ್ ॥ ೨೦ ॥

ನಾರಾಯಣನೂ, ಪುರಾಣರ್ಷಿಯೂ, ಯೋಗಾತ್ಮನೂ, ಸನಾತನನೂ, ಸಮಸ್ತ ತತ್ತ್ವಗಳಿಗೆ ಆಶ್ರಯಸ್ಥಾನನಾದ, ಈಶ್ವರನಾದ ನಿನ್ನನ್ನು ಹೊಂದುತ್ತೇನೆ.

ಯಃ ಪ್ರಭುಃ ಸರ್ವಭೂತಾನಾಂ ಯೇನ ಸರ್ವಮಿದಂ ತತಮ್ ।
ಪರಾವರಗುರುರ್ವಿಷ್ಣುಃ ಸ ಮೇ ದೇವಃ ಪ್ರಸೀದತು ॥ ೨೧ ॥

ಸರ್ವಭೂತಗಳಿಗೂ ಯಾವನು ಪ್ರಭುವಾಗಿದ್ದಾನೋ, ಯಾವುದರಿಂದ ವ್ಯಾಪ್ತನಾಗಿದ್ದಾನೋ, ಉತ್ತಮರಿಗೂ, ಅವರರಿಗೂ ಯಾವ ವಿಷ್ಣುವೇ ಗುರುವಾಗಿದ್ದಾನೋ ಅಂತಹ ಕ್ರೀಡಾದಿಗುಣವಿಶಿಷ್ಟನಾದ ಶ್ರೀಹರಿಯು ನನ್ನ ವಿಷಯದಲ್ಲಿ ಪ್ರಸನ್ನನಾಗಲಿ.

ಯಸ್ಮಾದುತ್ಪದ್ಯತೇ ಬ್ರಹ್ಮಾ ಪದ್ಮಯೋನಿಃ ಸನಾತನಃ ।
ಬ್ರಹ್ಮಯೋನಿರ್ಹಿ ವಿಶ್ವಾತ್ಮಾ ಸ ಮೇ ವಿಷ್ಣುಃ ಪ್ರಸೀದತು ॥ ೨೨ ॥

ಯಾವ ಭಗವಂತನಿಂದ ಪದ್ಮಯೋನಿಯಾದ, ಸನಾತನನಾದ ಚತುರ್ಮುಖ ಬ್ರಹ್ಮನು ಉತ್ಪತ್ತಿಯನ್ನು ಹೊಂದುತ್ತಾನೋ ಅಂತಹ ವಿಶ್ವಾತ್ಮನಾದ ಬ್ರಹ್ಮಯೋನಿಗೆ ಕಾರಣನಾದ ವಿಷ್ಣುವು ನನ್ನ ವಿಷಯದಲ್ಲಿ ಪ್ರಸನ್ನನಾಗಲಿ.

ಯಃ ಪುರಾ ಪ್ರಳಯೇ ಪ್ರಾಪ್ತೇ ನಷ್ಟೇ ಸ್ಥಾವರಜಂಗಮೇ ।
ಬ್ರಹ್ಮಾದಿಷು ಪ್ರಲೀನೇಷು ನಷ್ಟೇ ಲೋಕಪರಾವರೇ ॥ ೨೩ ॥

ಆಭೂತಸಂಪ್ಲವೇ ಚೈವ ಪ್ರಲೀನೇಽಪ್ರಾಕೃತೋ ಮಹಾನ್ ।
ಏಕಸ್ತಿಷ್ಠತಿ ವಿಶ್ವಾತ್ಮಾ ಸ ಮೇ ವಿಷ್ಣುಃ ಪ್ರಸೀದತು ॥ ೨೪ ॥

ಯಾವ ಭಗವಂತನು ಹಿಂದೆ ಪ್ರಳಯಕಾಲವು ಪ್ರಾಪ್ತವಾದಾಗ, ಸ್ಥಾವರ-ಜಂಗಮಗಳೆಲ್ಲವೂ ಲಯ ಹೊಂದಿದಾಗ ಬ್ರಹ್ಮಾದಿ ದೇವತೆಗಳು, ಉತ್ತಮಾಧಮ ಜೀವರೆಲ್ಲರೂ ಲಯ ಹೊಂದಿದಾಗ, ಸಮಸ್ತ ಜೀವರ ಪ್ರಳಯವು ಉಂಟಾದಾಗ, ಅಪ್ರಾಕೃತನಾದ, ಸರ್ವೋತ್ತಮನಾದ, ವಿಶ್ವಾತ್ಮನಾದ ಭಗವಂತನು ಒಬ್ಬನೇ ಇರುತ್ತಾನೋ ಅಂತಹ ವಿಷ್ಣುವು ನನ್ನ ವಿಷಯದಲ್ಲಿ ಪ್ರಸನ್ನನಾಗಲಿ.

ಚತುರ್ಭಿಶ್ಚ ಚತುರ್ಭಿಶ್ಚ ದ್ವಾಭ್ಯಾಂ ಪಂಚಭಿರೇವ ಚ ।
ಹೂಯತೇ ಚ ಪುನರ್ದ್ವಾಭ್ಯಾಂ ಸ ಮೇ ವಿಷ್ಣುಃ ಪ್ರಸೀದತು ॥ ೨೫ ॥

'ಆಶಾವಯ ಅಸ್ತು ಶೌಷಟ್ ಯೇ ಯಜಾಮಹೇ' ಎಂಬ ನಾಲ್ಕು-ನಾಲ್ಕು ಎರಡು-ಐದು ಅಕ್ಷರಗಳಿಂದ ಯಾವಾಗಲೂ ಯಾವ ಭಗವಂತನು ಹೋಮಿಸಲ್ಪಡುತ್ತಾನೋ ಅಂತಹ ವಿಷ್ಣುವು ನನ್ನ ವಿಷಯದಲ್ಲಿ ಪ್ರಸನ್ನನಾಗಲಿ.

ಪರ್ಜನ್ಯಃ ಪೃಥಿವೀ ಸತ್ಯಂ ಕಾಲೋ ಧರ್ಮಃ ಕ್ರಿಯಾಕ್ರಿಯೇ ।
ಗುಣಾಕರಃ ಸ ಮೇ ಬಭ್ರುರ್ವಾಸುದೇವಃ ಪ್ರಸೀದತು ॥ ೨೬ ॥

ಪರ್ಜನ್ಯನೂ, ಪೃಥಿವಿಯೂ, ಸತ್ಯನೂ, ಕಾಲನೂ, ಧರ್ಮನೂ, ಕ್ರಿಯೆಯೂ, ಅಕ್ರಿಯೆಯೂ, ಗುಣಾಕರವೂ ಎನಿಸಿದ ಇವುಗಳಲ್ಲಿ ನಿಯಾಮಕನಾದ ಕನಕವರ್ಣದವನಾದ್ದರಿಂದ ಬಭ್ರು ಎನಿಸಿದ ವಾಸುದೇವನು ನನ್ನ ವಿಷಯದಲ್ಲಿ ಪ್ರಸನ್ನನಾಗಲಿ.

ಅಗ್ನೀಷೋಮಾರ್ಕತಾರಾಣಾಂ ಬ್ರಹ್ಮರುದ್ರೇಂದ್ರಯೋಗಿನಾಮ್ ।
ಯಸ್ತೇಜಯತಿ ತೇಜಾಂಸಿ ಸ ಮೇ ವಿಷ್ಣುಃ ಪ್ರಸೀದತು ॥ ೨೭ ॥

ಅಗ್ನಿ, ಚಂದ್ರ, ಸೂರ್ಯ, ನಕ್ಷತ್ರಗಳು, ಬ್ರಹ್ಮೇಂದ್ರ-ರುದ್ರರು, ಯೋಗಿಗಳು, ಇವರೆಲ್ಲರ ತೇಜಸ್ಸನ್ನು ತುಂಬಿಕೊಂಡಿರುವ ವಿಷ್ಣುವು ನನ್ನ ವಿಷಯದಲ್ಲಿ ಪ್ರಸನ್ನನಾಗಲಿ.

ಯೋಗಾವಾಸ ನಮಸ್ತುಭ್ಯಂ ಸರ್ವಾವಾಸ ವರಪ್ರದ ।
ಯಜ್ಞಗರ್ಭ ಹಿರಣ್ಯಾಂಗ ಪಂಚಯಜ್ಞ ನಮೋಽಸ್ತು ತೇ ॥ ೨೮ ॥

ಯೋಗವಾಸನೇ, ಸರ್ವನಿವಾಸನೇ, ವರಪ್ರದನೇ, ಯಜ್ಞಗರ್ಭನೇ, ಹಿರಣ್ಯಾಂಗನೇ, ಪಂಚಯಜ್ಞಸ್ವರೂಪನೇ ನಿನಗೆ ನಮಸ್ಕಾರವು ನಮಸ್ಕಾರವು.

ಚತುರ್ಮೂರ್ತೇ ಪರಂ ಧಾಮ ಲಕ್ಷ್ಮ್ಯಾವಾಸ ಪರಾರ್ಚಿತ ।
ಸರ್ವಾವಾಸ ನಮಸ್ತೇಽಸ್ತು ವಾಸುದೇವ ಪ್ರಧಾನಕೃತ್ ॥ ೨೯ ॥

ನಿರ್ದುಷ್ಟವಾದ ಮಾರ್ಗವುಳ್ಳವನೇ, ಪ್ರಧಾನಕರ್ತೃವೇ, ವಾಸುದೇವನೇ, ಲಕ್ಷ್ಮ್ಯಾವಾಸನೇ, ಚತುರ್ಮೂರ್ತಿಯೇ, ಉತ್ತಮರಿಂದ ಅರ್ಚಿತನೇ, ಚತುರ್ಮೂರ್ತಿಯನ್ನು ನಿರ್ಮಿಸುವವನೇ ನಿನಗೆ ನಮಸ್ಕಾರವು.

ಅಜಸ್ತ್ವನಾಮಯಃ ಪಂಥಾ ಹ್ಯಮೂರ್ತಿರ್ವಿಶ್ವಮೂರ್ತಿಧೃತ್ ।
ವಿಕರ್ತಃ ಪಂಚಕಾಲಜ್ಞ ನಮಸ್ತೇ ಜ್ಞಾನಸಾಗರ ॥ ೩೦ ॥

ಹುಟ್ಟಿಲ್ಲದವನೇ, ನಿರ್ದುಷ್ಟವಾದ ಮಾರ್ಗವುಳ್ಳವನೇ, ನಿರ್ದಿಷ್ಟವಾದ ಮೂರ್ತಿಯಿಲ್ಲದವನೆ, ವಿಶ್ವಮೂರ್ತಿಯನ್ನೇ ಧರಿಸಿದವನೇ, ವಿಕರ್ತನೇ, ಅನದ್ಯತನಭೂತ, ಅದ್ಯತನಭೂತ, ವರ್ತಮಾನ, ಅದ್ಯತನಭವಿಷ್ಯತ್, ಅನದ್ಯತನ ಭವಿಷ್ಯತ್ ಎಂಬ ಪಂಚಕಾಲಗಳನ್ನು ತಿಳಿದ ಜ್ಞಾನಸಾಗರನೇ ನಿನಗೆ ನಮಸ್ಕಾರವು.

ಅವ್ಯಕ್ತಾದ್ ವ್ಯಕ್ತಮುತ್ಪನ್ನಮವ್ಯಕ್ತಾದ್ಯಃ ಪರೋಽಕ್ಷರಃ ।
ಯಸ್ಮಾತ್ ಪರತರಂ ನಾಸ್ತಿ ತಮಸ್ಮಿ ಶರಣಂ ಗತಃ ॥ ೩೧ ॥

ವ್ಯಕ್ತಪ್ರಪಂಚಕ್ಕೆ ಉತ್ಪತ್ತಿ ಕಾರಣನಾದ, ಅವ್ಯಕ್ತಕ್ಕಿಂತಲೂ ಪರನಾದ, ಅಕ್ಷರನಾದ, ತನಗಿಂತಲೂ ಮೇಲಾದುದು ಒಂದೂ ಇಲ್ಲದ ಆ ಪರಮಪುರುಷನನ್ನು ಶರಣು ಹೊಂದುತ್ತೇನೆ.

ನ ಪ್ರಧಾನೋ ನ ಚ ಮಹಾನ್ ಪುರುಷಶ್ಚೇತನೋ ಹ್ಯಜಃ ।
ಅನಯೋರ್ಯಃ ಪರತರಸ್ತಮಸ್ಮಿ ಶರಣಂ ಗತಃ ॥ ೩೨ ॥

ಪ್ರಧಾನ, ಮಹತ್ತು ಇವೆರಡಕ್ಕಿಂತಲೂ ಮಿಗಿಲೆನಿಸಿದ, ಜನ್ಮರಹಿತನೂ, ಪುರುಷನೂ, ಚೇತನಾತ್ಮಕನೂ ಆದ ಭಗವಂತನನ್ನು ಶರಣು ಹೊಂದುತ್ತೇನೆ.

ಚಿಂತಯಂತೋ ಹಿ ಯಂ ನಿತ್ಯಂ ಬ್ರಹ್ಮೇಶಾನಾದಯಃ ಪ್ರಭುಮ್ ।
ನಿಶ್ಚಯಂ ನಾಧಿಗಚ್ಛಂತಿ ತಮಸ್ಮಿ ಶರಣಂ ಗತಃ ॥ ೩೩ ॥

ಯಾವ ಭಗವಂತನನ್ನು ಬ್ರಹ್ಮೇಶಾನಾದರೇ ಮೊದಲಾದ ದೇವಶ್ರೇಷ್ಠರು ನಿರಂತರ ಚಿಂತಿಸುತ್ತಿದ್ದರೂ ಅವನ ನಿಶ್ಚಯಜ್ಞಾನವನ್ನು ಹೊಂದಲಾರರೋ ಅಂತಹ ದೇವದೇವನನ್ನು ಶರಣು ಹೊಂದುತ್ತೇನೆ.

ಜಿತೇಂದ್ರಿಯಾ ಮಹಾತ್ಮಾನೋ ಜ್ಞಾನಧ್ಯಾನಪರಾಯಣಾಃ ।
ಯಂ ಪ್ರಾಪ್ಯ ನ ನಿವರ್ತಂತೇ ತಮಸ್ಮಿ ಶರಣಂ ಗತಃ ॥ ೩೪ ॥

ಜಿತೇಂದ್ರಿಯರೂ, ಜ್ಞಾನಿಗಳೂ, ಧ್ಯಾನರತರೂ ಆದ ಮಹಾತ್ಮರು ಯಾವನನ್ನು ಹೊಂದಿದ ಮೇಲೆ ತಿರುಗಿ ಹಿಂದಿರುಗಲಾರರೋ ಅಂತಹ ಪರಮಾತ್ಮನನ್ನು ಶರಣು ಹೊಂದುತ್ತೇನೆ.

ಏಕಾಂಶೇನ ಜಗತ್ ಸರ್ವಮವಷ್ಟಭ್ಯ ವಿಭುಃ ಸ್ಥಿತಃ ।
ಅಗ್ರಾಹ್ಯಂ ನಿರ್ಗುಣಂ ನಿತ್ಯಂ ತಮಸ್ಮಿ ಶರಣಂ ಗತಃ ॥ ೩೫ ॥

ಜಗತ್ತನ್ನೆಲ್ಲ ತನ್ನ ಒಂದಂಶದಿಂದಲೇ ವ್ಯಾಪಿಸಿದ, ಪ್ರಾಕೃತಗುಣರಹಿತನೂ, ನಿತ್ಯನೂ ಆದ ಪ್ರಭುವಾದ ಭಗವಂತನನ್ನು ಶರಣು ಹೊಂದುತ್ತೇನೆ.

ಸೋಮಾರ್ಕಾಗ್ನಿಮಯಂ ತೇಜೋ ಯಾ ಚ ತಾರಾಮಯೀ ದ್ಯುತಿಃ ।
ದಿವಿ ಸಂಜಾಯತೇ ಯೋಽಯಂ ಸ ಮಹಾತ್ಮಾ ಪ್ರಸೀದತು ॥ ೩೬ ॥

ಸೂರ್ಯ-ಚಂದ್ರಾಗ್ನಿ-ನಕ್ಷತ್ರರೂಪದಿಂದ ಆಕಾಶದಲ್ಲಿ ತೇಜೋಮಯನಾಗಿ ಪ್ರಕಾಶಿಸುತ್ತಿರುವ, ಅವರ ಅಂತರ್ಯಾಮಿಯಾದ ಪರಂಜ್ಯೋತಿಯೂ ಮಹಾತ್ಮನೂ ನನ್ನಲ್ಲಿ ಪ್ರಸನ್ನನಾಗಲಿ.

ಗುಣಾದಿರ್ನಿರ್ಗುಣಶ್ಚಾದ್ಯೋ ಲಕ್ಷ್ಮೀವಾಂಶ್ಚೇತನೋ ಹ್ಯಜಃ ।
ಸೂಕ್ಷ್ಮಃ ಸರ್ವಗತೋ ಯೋಗೀ ಸ ಮಹಾತ್ಮಾ ಪ್ರಸೀದತು ॥ ೩೭ ॥

ಗುಣಗಳಿಗೆಲ್ಲಾ ಆದಿಯೂ, ಪ್ರಾಕೃತಗುಣರಹಿತನೂ, ಆದ್ಯನೂ, ಶ್ರೀಮಂತನೂ, ಸೂಕ್ಷ್ಮನೂ, ಸರ್ವಗತನೂ, ಯೋಗಿಯೂ ಆದ ಆ ಮಹಾತ್ಮನು ನನ್ನಲ್ಲಿ ಪ್ರಸನ್ನನಾಗಲಿ.

ಸಾಂಖ್ಯಯೋಗಾಶ್ಚ ಯೇ ಚಾನ್ಯೇ ಸಿದ್ಧಾಶ್ಚ ಪರಮರ್ಷಯಃ ।
ಯಂ ವಿದಿತ್ವಾ ವಿಮುಚ್ಯಂತೇ ಸ ಮಹಾತ್ಮಾ ಪ್ರಸೀದತು ॥ ೩೮ ॥

ಸಾಂಖ್ಯಯೋಗನಿರತರೂ, ಬೇರೆ ಸಿದ್ಧ ಪುರುಷರು, ಪರಮರ್ಷಿಗಳು, ಯಾವ ಭಗವಂತನನ್ನು ತಿಳಿದು ಸಂಸಾರ ಬಂಧನದಿಂದ ಬಿಡುಗಡೆಯನ್ನು ಹೊಂದುತ್ತಾರೋ ಆ ಮಹಾತ್ಮನು ನನ್ನಲ್ಲಿ ಪ್ರಸನ್ನನಾಗಲಿ.

ಅವ್ಯಕ್ತಃ ಸಮಧಿಷ್ಠಾತಾ ಅಚಿಂತ್ಯಃ ಸದಸತ್ಪರಃ ।
ಅಸ್ಥಿತಿಃ ಪ್ರಕೃತಿಶ್ರೇಷ್ಠಃ ಸ ಮಹಾತ್ಮಾ ಪ್ರಸೀದತು ॥ ೩೯ ॥

ಇಂದ್ರಿಯಗಳಿಗೆ ಗೋಚರನಲ್ಲದ್ದರಿಂದ ಅವ್ಯಕ್ತನಾದ, ಅಧಿಷ್ಠನಾದ, ಅಚಿಂತ್ಯನಾದ, ಕಾರ್ಯಕಾರಣಗಳಿಗಿಂತಲೂ ಪರನಾದ, ಸ್ಥಳವಿಲ್ಲದ ಆ ಮಹಾತ್ಮನು ನನ್ನಲ್ಲಿ ಪ್ರಸನ್ನನಾಗಲಿ.

ಕ್ಷೇತ್ರಜ್ಞಃ ಪಂಚಧಾ ಭುಂಕ್ತೇ ಪ್ರಕೃತಿಂ ಪಂಚಭಿರ್ಮುಖೈಃ ।
ಮಹಾನ್ ಗುಣಾಂಶ್ಚ ಯೋ ಭುಂಕ್ತೇ ಸ ಮಹಾತ್ಮಾ ಪ್ರಸೀದತು ॥೪೦॥

ಜೀವಾಂತರ್ಯಾಮಿಯಾಗಿ ಕ್ಷೇತ್ರಜ್ಞನೆನಿಸಿಕೊಂಡಿರುವ ಪಂಚೇಂದ್ರಿಯಗಳಿಂದ ಪ್ರಕೃತಿಯನ್ನು ಐದುವಿಧವಾಗಿ ಅನುಭವಿಸುತ್ತಿರುವ ಹಾಗೆಯೇ ಗುಣಗಳನ್ನು ಅನುಭವಿಸುತ್ತಿರುವ ಆ ಮಹಾತ್ಮನು ನನ್ನಲ್ಲಿ ಪ್ರಸನ್ನನಾಗಲಿ.

ಸೂರ್ಯಮಧ್ಯೇ ಸ್ಥಿತಃ ಸೋಮಸ್ತಸ್ಯ ಮಧ್ಯೇ ಚ ಯಾ ಸ್ಥಿತಾ ।
ಭೂತಬಾಹ್ಯಾ ಚ ಯಾ ದೀಪ್ತಿಃ ಸ ಮಹಾತ್ಮಾ ಪ್ರಸೀದತು ॥ ೪೧ ॥

ನಮ್ಮ ಹೃದಯಕಮಲದಲ್ಲಿರುವ ಸೂರ್ಯಮಂಡಲ, ಸೋಮಮಂಡಲ, ಅಗ್ನಿ ಮಂಡಲಗಳ ಮಧ್ಯದಲ್ಲಿ ಅಪ್ರಾಕೃತ ಜ್ಞಾನಾನಂದರೂಪಗಳಿಂದ ಬೆಳಗುವ ಆ ಪರಮಾತ್ಮನು ನನ್ನಲ್ಲಿ ಪ್ರಸನ್ನನಾಗಲಿ.

ನಮಸ್ತೇ ಸರ್ವತಃ ಸರ್ವ ಸರ್ವತೋಕ್ಷಿಶಿರೋಮುಖ ।
ನಿರ್ವಿಕಾರ ನಮಸ್ತೇಽಸ್ತು ಸಾಕ್ಷೀ ಕ್ಷೇತ್ರಧ್ರುವಸ್ಥಿತಿಃ ॥ ೪೨ ॥

ಸರ್ವಸ್ವರೂಪಿಯಾಗಿ, ಸರ್ವತೋಮುಖವಾದ ಶಿರಸ್ಸುಗಳು, ಕಣ್ಣುಗಳು ಇವುಗಳಿಂದ ಕೂಡಿದ ನಿನಗೆ ಎಲ್ಲಕಡೆಯಿಂದಲೂ ನಮಸ್ಕಾರವು. ಕ್ಷೇತ್ರದಲ್ಲಿ ಅರ್ಥಾತ್ ಶರೀರದಲ್ಲಿ ಸಾಕ್ಷಿಭೂತನಾಗಿ ನೆಲೆಗೊಂಡಿರುವ ಅತೀಂದ್ರಿಯನಾದ ನಿನಗೆ ನಮಸ್ಕಾರವು.

ಅತೀಂದ್ರಿಯ ನಮಸ್ತುಭ್ಯಂ ಲಿಂಗೈರ್ವ್ಯಕ್ತೈರ್ನ ಮೀಯಸೇ ।
ಯೇ ಚ ತ್ವಾಂ ನಾಭಿಜಾನಂತಿ ಸಂಸಾರೇ ಸಂಸರಂತಿ ತೇ ॥ ೪೩ ॥

ಸ್ಪಷ್ಟವಾದ ಯಾವ ಚಿಹ್ನೆಯಿಂದಲೂ ನಿನ್ನನ್ನು ತಿಳಿಯಲಾಗುವುದಿಲ್ಲ. ನಿನ್ನನ್ನು ಯಾರು ತಿಳಿಯರೋ ಅವರು ಸಂಸಾರದಲ್ಲಿಯೇ ತೊಳಲುತ್ತಿರುತ್ತಾರೆ.

ಕಾಮಕ್ರೋಧವಿನಿರ್ಮುಕ್ತಾ ರಾಗದ್ವೇಷವಿವರ್ಜಿತಾಃ ।
ಮಾನ್ಯಭಕ್ತಾ ವಿಜಾನಂತಿ ನ ಪುನರ್ಭವಕಾ ದ್ವಿಜಾಃ ॥ ೪೪ ॥

ಕಾಮ-ಕ್ರೋಧಗಳನ್ನು ಜಯಿಸಿ, ರಾಗ-ದ್ವೇಷಗಳನ್ನು ತೊರೆದು ಮಾನ್ಯರಾದ ಭಕ್ತರು ನಿನ್ನ ಸ್ವರೂಪವನ್ನು ಚೆನ್ನಾಗಿ ತಿಳಿಯುತ್ತಾರೆ. ನಿನ್ನನ್ನು ಚೆನ್ನಾಗಿ ತಿಳಿದವರು ಪುನರ್ಜನ್ಮದಿಂದ ಮುಕ್ತರಾಗುತ್ತಾರೆ.

ಏಕಾಂತಿನೋ ಹಿ ನಿರ್ದ್ವಂದ್ವಾ ನಿರಾಶೀಃ ಕರ್ಮಕಾರಿಣಃ ।
ಜ್ಞಾನಾಗ್ನಿದಗ್ಧಕರ್ಮಾಣಸ್ತ್ವಾಂ ವಿಶಂತಿ ವಿಚಿಂತಕಾಃ ॥ ೪೫ ॥

ನಿನ್ನಲ್ಲಿಯೇ ಏಕಾಂತ ಭಕ್ತಿಯುಳ್ಳವರು ದ್ವಂದ್ವಗಳನ್ನು ಮೀರಿದವರು, ಬಾಹ್ಯ ಆಸೆಗಳನ್ನು ಮೀರಿದವರು, ನಿಷ್ಕಾಮಕರ್ಮಗಳನ್ನು ಆಶ್ರಯಿಸಿದವರು ಜ್ಞಾನಾಗ್ನಿಯಿಂದ ಪ್ರಾರಬ್ಧವನ್ನು ಸುಟ್ಟುಕೊಂಡವರು ನಿನ್ನನ್ನೇ ವಿಶೇಷವಾಗಿ ಆಲೋಚಿಸುವವರು ನಿನ್ನ ಪಾದವನ್ನು ಸೇರುತ್ತಾರೆ.

ಅಶರೀರಂ ಶರೀರಸ್ಥಂ ಸಮಂ ಸರ್ವೇಷು ದೇಹಿಷು ।
ಪುಣ್ಯಪಾಪವಿನಿರ್ಮುಕ್ತಾ ಭಕ್ತಾಸ್ತ್ವಾಂ ಪ್ರಾವಿಶಂತ್ಯುತ ॥ ೪೬ ॥

ನೀನು ಸಮಸ್ತ ಜೀವರ ಶರೀರದಲ್ಲಿ ಪರತರನಾಗಿದ್ದರೂ, ಆ ಶರೀರದ ಸಂಬಂಧವಿಲ್ಲದೆ ಇರುವಿ. ಪುಣ್ಯ-ಪಾಪಗಳಿಂದ ಮುಕ್ತನಾಗಿರುವಿ. ಅಂತಹ ನಿನ್ನನ್ನು ಭಕ್ತರು ಹೊಂದುತ್ತಾರೆ.

ಅವ್ಯಕ್ತಂ ಬುದ್ಧ್ಯಹಂಕಾರಮನೋಭೂತೇಂದ್ರಿಯಾಣಿ ಚ ।
ತ್ವಯಿ ತಾನಿ ಚ ತೇಷು ತ್ವಂ ನ ತೇಷು ತ್ವಂ ನ ತೇ ತ್ವಯಿ ॥ ೪೭ ॥

ಅವ್ಯಕ್ತ ಬುದ್ಧಿ, ಅಹಂಕಾರ, ಮನಸ್ಸು, ಪಂಚಭೂತಗಳು, ಸಮಸ್ತ ಇಂದ್ರಿಯಗಳು ಇವೆಲ್ಲವೂ ನಿನ್ನಲ್ಲಿವೆ. ಅವುಗಳಲ್ಲಿ ನೀನು ಇರುವಿ. ಆದರೆ ನಿಜವಾಗಿ ಚಿಂತಿಸಿದಲ್ಲಿ ಅವುಗಳಲ್ಲಿ ನೀನಿಲ್ಲ. ನಿನ್ನಲ್ಲಿಯೂ ಅವುಗಳಿಲ್ಲ. ಅರ್ಥಾತ್ ನೀನು ಆ ಇಂದ್ರಿಯಗಳ ಒಳಗಡೆ ನಿರ್ಲೇಪನಾಗಿರುವಿ ಎಂದು ಭಾವ.

ಏಕತ್ವಾನ್ಯತ್ವನಾನಾತ್ವಂ ಯೇ ವಿದುರ್ಯಾಂತಿ ತೇ ಪರಮ್ ।
ಸಮೋಽಸಿ ಸರ್ವಭೂತೇಷು ನ ತೇ ದ್ವೇಷ್ಯೋಽಸ್ತಿ ನ ಪ್ರಿಯಃ ॥ ೪೮ ॥

ಯಾರು ನಿನ್ನ ಸರ್ವೋತ್ತಮತ್ವವನ್ನು, ಸಕಲ ಜಗತ್‌ಭಿನ್ನತ್ವವನ್ನು, ನಾನಾವತಾರತ್ವವನ್ನು, ಪರತ್ವವನ್ನು ತಿಳಿದಿದ್ದಾರೋ ಅವರು ನಿನ್ನ ಪರಮಗತಿಯನ್ನು ಹೊಂದುತ್ತಾರೆ. ನೀನು ಸರ್ವಸಮನು. ನಿನಗೆ ಶತ್ರುವೂ ಇಲ್ಲ, ಮಿತ್ರನೂ ಇಲ್ಲ.

ಸಮತ್ವಮಭಿಕಾಂಕ್ಷೇಽಹಂ ಭಕ್ತ್ಯಾ ವೈ ನಾನ್ಯಚೇತಸಾ ।
ಚರಾಚರಮಿದಂ ಸರ್ವಂ ಭೂತಗ್ರಾಮಂ ಚತುರ್ವಿಧಮ್ ।
ತ್ವಯಾ ತ್ವಯ್ಯೇವ ತತ್ಪ್ರೋತಂ ಸೂತ್ರೇ ಮಣಿಗಣಾ ಇವ ॥ ೪೯ ॥

ನನ್ನ ಮನಸ್ಸನ್ನು ಮತ್ತೊಂದು ಕಡೆ ಕಳಿಸದೆ ನಿನ್ನ ಭಕ್ತಿಯೊಂದನ್ನೇ ಹಿಡಿದು ಏಕಾಗ್ರತೆಯಿಂದ ಸುಖ-ದುಃಖಗಳನ್ನು ಸಮಾನವಾಗಿ ಕಾಣುವ ನಾನು ಅನನ್ಯ ಮನಸ್ಸಿನಿಂದ ನಿನ್ನನ್ನು ಹೊಂದುತ್ತೇನೆ. ಚರಾಚರವಾದ ನಾಲ್ಕು ವಿಧವಾದ ಜೀವವರ್ಗಗಳೊಡನೆ ಜಗತ್ತೆಲ್ಲ ದಾರದಲ್ಲಿರುವ ಮಣಿಗಳಂತೆ ನಿನ್ನಿಂದಲೇ ಸೃಷ್ಟಿಯನ್ನು ಹೊಂದಿದೆ.

ಸ್ರಷ್ಟಾ ಭೋಕ್ತಾಸಿ ಕೂಟಸ್ಥೋ ಅತತ್ ಸ್ತತ್ ತ್ವಕ್ ।
ಅಕರ್ತಾ ಹೇತುರಚಲಃ ಪೃಥಗಾತ್ಮನ್ಯವಸ್ಥಿತಃ ॥ ೫೦ ॥

ನೀನೇ ಸೃಷ್ಟಿಕರ್ತನಾಗಿರುವಿ. ಎಲ್ಲರ ಜೀವಾಂತರ್ಯಾಮಿಯಾಗಿ ಭೋಕ್ತೃವೂ ಆಗಿರುವಿ. ನಿರ್ವಿಕಾರನಾಗಿರುವಿ. ಚತುರ್ವಿಂಶತಿ ತತ್ತ್ವಗಳಲ್ಲಿ ಅಂತರ್ಯಾಮಿಯಾಗಿದ್ದರೂ ಅವುಗಳಿಗಿಂತ ಭಿನ್ನನಾಗಿರುವಿ. ಸ್ವತಂತ್ರವೆಂಬ ಶಬ್ದಕ್ಕೆ

ಭಾಜನನಾಗಿರುವಿ. ನೀನು ಅಕರ್ತನೂ, ಕಾರಣನೂ, ಅಚಲನೂ, ಶರೀರಕ್ಕಿಂತಲೂ, ಜೀವಾತ್ಮರಿಗಿಂತಲೂ, ಪೃಥಗಾತ್ಮನೆನಿಸಿ ಇರುವಿ.

ನ ತೇ ಭೂತೇಷು ಸಂಯೋಗೋ ಭೂತತತ್ವಗುಣಾಧಿಕಃ ।
ಅಹಂಕಾರೇಣ ಬುದ್ಧ್ಯಾ ವಾ ನ ತೇ ಯೋಗಸ್ತ್ರಿಭಿರ್ಗುಣೈಃ ॥ ೫೧ ॥

ಭೂತತತ್ತ್ವಗಳ ಗುಣಗಳಿಂದಲೂ ನಿನಗೆ ಸಂಬಂಧವಿರುವುದಿಲ್ಲ. ಅವುಗಳಿಗಿಂತ ಅಧಿಕನಾಗಿರುವಿ. ಅಹಂಕಾರತತ್ತ್ವದಿಂದಾಗಲೀ, ಬುದ್ಧಿತತ್ತ್ವದಿಂದಾಗಲೀ, ಮೂರು ಗುಣಗಳಿಂದಾಗಲೀ (ಸತ್ವ-ರಜಸ್-ತಮಸ್) ನಿನಗೆ ಸಂಬಂಧವಿರುವುದಿಲ್ಲ.

ನ ಮೋಕ್ಷಧರ್ಮೋ ವಾ ನ ತ್ವಂ ನಾರಂಭೋ ಜನ್ಮ ವಾ ಪುನಃ ।
ಜರಾಮರಣಮೋಕ್ಷಾರ್ಥಂ ತ್ವಾಂ ಪ್ರಪನ್ನೋಽಸ್ಮಿ ಸರ್ವಗ ॥ ೫೨ ॥

ನೀನು ಮೋಕ್ಷಧರ್ಮಗಳಾಗಲೀ ಅದರ ಪ್ರಯತ್ನವಾಗಲೀ ಇಲ್ಲದವನು. ಜನ್ಮರಹಿತನೂ, ಅಂತಹ ಸರ್ವಾಂತರ್ಯಾಮಿಯಾದ ಭಗವಂತನೇ, ನಾನು ನಿನ್ನನ್ನು ಜರಾ-ಮರಣಗಳ ಮೋಕ್ಷಕ್ಕಾಗಿ ಶರಣು ಹೊಂದಿದ್ದೇನೆ.

ಈಶ್ವರೋಽಸಿ ಜಗನ್ನಾಥ ತತಃ ಪರಮ ಉಚ್ಯಸೇ ।
ಭಕ್ತಾನಾಂ ಯದ್ಧಿತಂ ದೇವ ತದ್ ಧ್ಯಾಹಿ ತ್ರಿದಶೇಶ್ವರ ॥ ೫೩ ॥

ಜಗನ್ನಾಥನೇ, ನೀನೇ ಈಶ್ವರನು, ನೀನೇ ಸರ್ವೋತ್ತಮನು. ತ್ರಿದಶೇಶ್ವರನೇ, ಭಕ್ತರಿಗೆ ಯಾವುದು ಹಿತವೋ ಅದನ್ನು ದಯಪಾಲಿಸು.

ವಿಷಯೈರಿಂದ್ರಿಯೈರ್ವಾಽಪಿ ನ ಮೇ ಭೂಯಃ ಸಮಾಗಮಃ ।
ಪೃಥಿವೀಂ ಯಾತು ಗಂಧೋ ವೈ ರಸಂ ಯಾತು ಜಲಂ ತಥಾ ॥೫೪॥

ತೇಜೋ ಹುತಾಶನಂ ಯಾತು ಸ್ಪರ್ಶೋ ಯಾತು ಚ ಮಾರುತಮ್ ।
ಶ್ರೋತ್ರಮಾಕಾಶಮಪ್ಯೇತು ಮನೋ ವೈಕಾರಿಕಂ ಪುನಃ ॥ ೫೫ ॥

ಇಂದ್ರಿಯಾಣ್ಯಪಿ ಸಂಯಾಂತು ಸ್ವಾಸು ಸ್ವಾಸು ಚ ಯೋನಿಷು ।
ಪೃಥಿವೀ ಯಾತು ಸಲಿಲಮಾಪೋಽಗ್ನಿಮನಲೋಽನಿಲಮ್ ॥ ೫೬ ॥

ವಾಯುರಾಕಾಶಮಪ್ಯೇತು ಮನಶ್ಚಾಕಾಶ ಏವ ಚ ।
ಅಹಂಕಾರಂ ಮನೋ ಯಾತು ಮೋಹನಂ ಸರ್ವದೇಹಿನಾಮ್ ॥೫೭॥

ಅಹಂಕಾರಸ್ತತೋ ಬುದ್ಧಿಂ ಬುದ್ಧಿರವ್ಯಕ್ತಮಚ್ಯುತ ॥ ೫೮ ॥

ಪ್ರಧಾನೇ ಪ್ರಕೃತಿಂ ಯಾತೇ ಗುಣಸಾಮ್ಯೇ ವ್ಯವಸ್ಥಿತೇ ।
ವಿಯೋಗಃ ಸರ್ವಕರಣೈರ್ಗುಣೈರ್ಭೂತೈಶ್ಚ ಮೇ ಭವೇತ್ ॥ ೫೯ ॥

ನನಗೆ ಇನ್ನು ಮೇಲೆ ವಿಷಯೇಂದ್ರಿಯಗಳ ಜೊತೆಗೆ ಸಂಬಂಧವಿಲ್ಲದಂತಾಗಲಿ. ನನ್ನನ್ನು ಸೇರಿದ ಗಂಧವು ಭೂಮಿಯನ್ನು, ರಸವು ಜಲವನ್ನು, ರೂಪವು ಅಗ್ನಿಯನ್ನು, ಸ್ಪರ್ಶವು ವಾಯುವನ್ನು, ಶಬ್ದವು ಆಕಾಶವನ್ನು, ಮನಸ್ಸು ಅಹಂಕಾರವನ್ನು, ಅಹಂಕಾರವು ಬುದ್ಧಿಯನ್ನು, ಬುದ್ಧಿಯು ಪ್ರಧಾನವನ್ನು ಹೊಂದಲಿ. ತಮ್ಮ ತಮ್ಮ ಕಾರಣ ವಸ್ತುಗಳಲ್ಲಿ ಆಯಾ ಇಂದ್ರಿಯಗಳು ಲಯವನ್ನು ಹೊಂದಲಿ. ಪ್ರಕೃತಿಯು ತನ್ನಲ್ಲಿ ಗುಣಸಾಮ್ಯವನ್ನು ಹೊಂದಿದಾಗ ನಾನು ಸಮಸ್ತ ಗುಣಗಳಿಂದಲೂ, ಇಂದ್ರಿಯಗಳಿಂದಲೂ, ಭೂತಗಳಿಂದಲೂ ಮುಕ್ತನಾಗುತ್ತೇನೆ.

ನಿಷ್ಕೇವಲಂ ಪದಂ ತಾತ ಕಾಂಕ್ಷೇಽಹಂ ಪರಮಂ ತವ ।
ಏಕೀಭಾವಸ್ತ್ವಯಾ ಮೇಽಸ್ತು ನ ಮೇ ಜನ್ಮ ಭವೇತ್ಪುನಃ ॥ ೬೦ ॥

ಭಗವಂತನೇ, ಪ್ರಕೃತಿಯ ಸಂಬಂಧವಿಲ್ಲದೇ ಇರುವ ನಿನ್ನ ಪಾದಕಮಲವನ್ನು ನಾನು ಅಪೇಕ್ಷಿಸುತ್ತೇನೆ. ಕೊಟ್ಟಿಗೆಯಲ್ಲಿ ಹಸುಗಳು ಒಟ್ಟಾಗಿ ಸೇರುವಂತೆ ನಿನ್ನ ಜೊತೆಗೆ ಇರುವ ಅವಕಾಶವು ನನಗೆ ಒದಗಿ ಬರಲಿ. ಮತ್ತೊಮ್ಮೆ ಜನ್ಮವನ್ನು ನನಗೆ ನೀಡಬೇಡ.

ತ್ವದ್ಬುದ್ಧಿಸ್ತ್ವದ್ಗತಪ್ರಾಣಸ್ತ್ವದ್ಭಕ್ತಸ್ತ್ವತ್ಪರಾಯಣಃ ।
ತ್ವಾಮೇವಾಹಂ ಸ್ಮರಿಷ್ಯಾಮಿ ಮರಣೇ ಪರ್ಯುಪಸ್ಥಿತೇ ॥ ೬೧ ॥

ನಿನ್ನಲ್ಲೇ ಬುದ್ಧಿಯನ್ನಿಟ್ಟು, ನಿನ್ನಲ್ಲಿ ಪ್ರಾಣವನ್ನರ್ಪಿಸಿ, ನಿನ್ನಲ್ಲೇ ಭಕ್ತಿಯನ್ನು ಮಾಡುತ್ತಾ, ನಿನ್ನನ್ನೇ ಚಿಂತಿಸುತ್ತಾ, ಮರಣವು ಆಗಮಿಸಿದಾಗ ನಿನ್ನನ್ನೇ ನಿರಂತರ ಸ್ಮರಿಸುತ್ತೇನೆ.

ಪೂರ್ವದೇಹಕೃತಾ ಯೇ ತು ವ್ಯಾಧಯಃ ಪ್ರವಿಶಂತು ಮಾಮ್ ।
ಅರ್ದಯಂತು ಚ ದುಃಖಾನಿ ಋಣಂ ಮೇ ಪ್ರವಿಮುಂಚತು ॥ ೬೨ ॥

ಪೂರ್ವದೇಹಜನ್ಮಾರ್ಜಿತವಾದ ವ್ಯಾಧಿಗಳು ನನ್ನನ್ನು ಬಾಧಿಸಲಿ. ನನ್ನನ್ನು ದುಃಖಗಳು ಅರ್ದಿಸಲಿ. ನನ್ನ ಋಣವು ತೀರಿಹೋಗಲಿ.

ಅನುಧ್ಯಾತೋಽಸಿ ದೇವೇಶ ನ ಮೇ ಜನ್ಮ ಭವೇತ್ಪುನಃ ।
ತಸ್ಮಾದ್ ಬ್ರವೀಮಿ ಕರ್ಮಾಣಿ ಋಣಂ ಮೇ ನ ಭವೇದಿತಿ ॥ ೬೩ ॥

ಭಗವಂತನೇ, ಹೃದಯದಲ್ಲಿ ನೀನೇ ಧ್ಯಾನಿಸಲ್ಪಟ್ಟಿರುವಿ. ನನಗೆ ಪುನರ್ಜನ್ಮವು ಒದಗುವುದು ಬೇಡ. ಆದ್ದರಿಂದಲೇ ಕರ್ಮಗಳಾಗಲೀ, ಋಣಗಳಾಗಲೀ ನನಗೆ ಪುನಃ ಉಂಟಾಗದಿರಲೆಂದು ಹೀಗೆ ಪ್ರಾರ್ಥಿಸುತ್ತಿದ್ದೇನೆ.

ನೋಪತಿಷ್ಠಂತು ಮಾಂ ಸರ್ವೇ ವ್ಯಾಧಯಃ ಪೂರ್ವಸಂಚಿತಾಃ ।
ಅನೃಣೋ ಗಂತುಮಿಚ್ಛಾಮಿ ತದ್ವಿಷ್ಣೋಃ ಪರಮಂ ಪದಮ್ ॥ ೬೪ ॥

ಭಗವಂತನೇ, ಪುನಃ ನನ್ನನ್ನು ವ್ಯಾಧಿಗಳಾಗಲೀ, ಪೂರ್ವಸಂಚಿತ ಕರ್ಮಗಳಾಗಲೀ ಬಾಧಿಸಬಾರದೆಂದು ಅವುಗಳನ್ನು ಅನುಭವಿಸಿ ಅನೃಣಿಯಾಗಿ ನಿನ್ನ ಪರಮ ಪದವನ್ನು ಹೊಂದಬೇಕೆಂದು ಬಯಸುತ್ತಿದ್ದೇನೆ.

ಶ್ರೀಭಗವಾನ್

ಅಹಂ ಭಗವತಸ್ತಸ್ಯ ಮಮ ಚಾಸೌ ಸನಾತನಃ ।
ತಸ್ಯಾಹಂ ನ ಪ್ರಣಶ್ಯಾಮಿ ಸ ಚ ಮೇ ನ ಪ್ರಣಶ್ಯತಿ ॥ ೬೫ ॥

ಶ್ರೀಭಗವಾನ್– ನಾರದನೇ, ನಾನು ನಿನಗೆ ಸಂಬಂಧಿಸಿದ್ದೇನೆ. ನೀನು ನನಗೆ ಸಂಬಂಧಿಸಿದ್ದೀಯಾ. ನನ್ನನ್ನು ಧ್ಯಾನಿಸಿದ ನಿನಗೆ ಮರಣವು ಇಲ್ಲ. ನಿನ್ನ ವಿಷಯದಲ್ಲಿ ನಾನು ದೂರನಾಗುವುದಿಲ್ಲ.

ಕರ್ಮೇಂದ್ರಿಯಾಣಿ ಸಂಯಮ್ಯ ಪಂಚ ಬುದ್ಧೀಂದ್ರಿಯಾಣಿ ಚ ।
ದಶೇಂದ್ರಿಯಾಣಿ ಮನಸಿ ಅಹಂಕಾರೇ ತಥಾ ಪುನಃ ॥ ೬೬ ॥

ಅಹಂಕಾರಂ ತಥಾ ಬುದ್ಧೌ ಬುದ್ಧಿಮಾತ್ಮನಿ ಯೋಜಯೇತ್ ।
ಯತಬುದ್ಧೀಂದ್ರಿಯಃ ಪಶ್ಯೇದ್ಬುದ್ಧ್ಯಾ ಬುದ್ಧ್ಯೇತ್ತರಾತ್ತರಮ್ ॥ ೬೭ ॥

ನಾರದನೇ, ದಶೇಂದ್ರಿಯಗಳನ್ನು ನಿಗ್ರಹಿಸಿಕೊಂಡು ಮನಸ್ಸನ್ನು ಅಹಂಕಾರದಲ್ಲಿಯೂ, ಬುದ್ಧಿಮೊದಲಾದ ಕರ್ಮೇಂದ್ರಿಯಗಳನ್ನು ನಿಗ್ರಹಿಸಿಕೊಂಡು ಅಹಂಕಾರವನ್ನು ಬುದ್ಧಿಯಲ್ಲಿಯೂ, ಬುದ್ಧಿಯನ್ನು ಪರಮಾತ್ಮನಲ್ಲಿಯೂ

ಸಂಯೋಜಿಸಬೇಕು. ನಿಗ್ರಹವುಳ್ಳ ಬುದ್ಧಿ ಎಂಬ ಇಂದ್ರಿಯದಿಂದ ಚಿಂತಿಸುತ್ತಾ ಪರಾತ್ಪರನಾದ ಭಗವಂತನನ್ನು ತಿಳಿಯಬೇಕು.

ಮಮಾಯಮಿತಿ ಯಸ್ಯಾಹಂ ಯೇನ ಸರ್ವಮಿದಂ ತತಮ್ ।
ಆತ್ಮನಾऽऽತ್ಮನಿ ಸಂಯೋಜ್ಯ ಏತೈರಾತ್ಮಾಹ್ಯನುಸ್ಮರೇತ್ ।
ತತೋ ಬುದ್ಧೇಃ ಪರಂ ಬುದ್ಧ್ವಾ ಲಭತೇ ನ ಪುನರ್ಭವಮ್ ॥ ೬೮ ॥

ಉತ್ತಮ ಪುರುಷನ ಪಾಲಿಗೆ ನಾನು, ನನ್ನ ಪಾಲಿಗೆ ಅವನು ಯಾವಾಗಲೂ ಇರುವವರೆಂದು ತಿಳಿ. ಯಾವ ಭಗವಂತನಿಂದಲೇ ಇವೆಲ್ಲವೂ ವ್ಯಾಪ್ತವಾಗಿದೆ. ನಿನ್ನ ಮನಸ್ಸನ್ನು ಭಗವಂತನಲ್ಲಿ ಏಕಾಗ್ರಗೊಳಿಸಿ ಹಿಂದೆ ಹೇಳಿದ ಪ್ರಕಾರದಿಂದ ಅವನನ್ನು ಚಿಂತಿಸಬೇಕು. ಆ ಭಗವಂತನು ಬುದ್ಧಿಯನ್ನೂ ಮೀರಿದ ಸರ್ವೋತ್ತಮನೂ, ಅಚಿಂತ್ಯನೂ ಎಂದು ತಿಳಿದವನು ಪುನಃ ಹುಟ್ಟನ್ನು ಹೊಂದುವುದಿಲ್ಲ.

ಮರಣೇ ಸಮನುಪ್ರಾಪ್ತೇ ಯಶ್ಚೈವಂ ಮಾಮನುಸ್ಮರೇತ್ ।
ಅಪಿ ಪಾಪಸಮಾಚಾರಃ ಸ ಯಾತಿ ಪರಮಾಂ ಗತಿಮ್ ॥ ೬೯ ॥

ಯಾವನು ಮರಣಕಾಲವು ಸನ್ನಿಹಿತವಾದಾಗ ನನ್ನನ್ನು ಹೀಗೆ ಸ್ಮರಿಸುತ್ತಾನೋ ಅವನು ಅನೇಕ ಪಾಪಕರ್ಮಗಳನ್ನು ಆಚರಿಸಿದ್ದರೂ ಪರಮಗತಿಯನ್ನು ಹೊಂದುತ್ತಾನೆ.

ಓಂ ನಮೋ ಭಗವತೇ ತಸ್ಮೈ ದೇಹಿನಾಂ ಪರಮಾತ್ಮನೇ ।
ನಾರಾಯಣಾಯ ಭಕ್ತಾನಾಮೇಕನಿಷ್ಠಾಯ ಶಾಶ್ವತೇ ॥ ೭೦ ॥

ಇಮಾಮನುಸ್ಮೃತಿಂ ದಿವ್ಯಾಂ ವೈಷ್ಣವೀಂ ಸುಸಮಾಹಿತಃ ।
ಸ್ವಪನ್ ವಿಬುದ್ಧಶ್ಚ ಪಠೇದ್ ಯತ್ರ ತತ್ರ ಸಮಭ್ಯಸೇತ್ ॥ ೭೧ ॥

ನಾರದನೇ, 'ಓಂ ನಮೋ ಭಗವತೇ ತಸ್ಮೈ ದೇಹಿನಾಂ ಪರಮಾತ್ಮನೇ, ನಾರಾಯಣಾಯ ಭಕ್ತಾನಾಮೇಕನಿಷ್ಠಾಯ ಶಾಶ್ವತೇ' ಎಂಬ ನನ್ನ ವಿಷಯವಾದ ಅನುಸ್ಮೃತಿಯನ್ನು ದಿವ್ಯವಾದ ವೈಷ್ಣವಮಂತ್ರವನ್ನು ಏಕಾಗ್ರಚಿತ್ತದಿಂದ ಚಿಂತಿಸುತ್ತಾ ಎಚ್ಚರದಲ್ಲಿಯೂ, ಮಲಗಿದ್ದಾಗಲೂ ಶ್ರದ್ಧೆಯಿಂದ ಈ ಮಂತ್ರವನ್ನು ಪಠಿಸುತ್ತಿರಬೇಕು.

ಪೌರ್ಣಮಾಸ್ಯಾಮಮಾವಾಸ್ಯಾಂ ದ್ವಾದಶ್ಯಾಂ ಚ ವಿಶೇಷತಃ ।
ಶ್ರಾವಯೇಚ್ಛ್ರದ್ದಧಾನಾಂಶ್ಚ ಮದ್ಭಕ್ತಾಂಶ್ಚ ವಿಶೇಷತಃ ॥ ೭೨ ॥

ಮುಖ್ಯವಾಗಿ ಹುಣ್ಣಿಮೆ, ಅಮಾವಾಸ್ಯೆ, ದ್ವಾದಶೀ ಮೊದಲಾದ ಪುಣ್ಯ ದಿವಸಗಳಲ್ಲಿ ಇದನ್ನು ಪಠಿಸಬೇಕು. ವಿಶೇಷವಾಗಿ ಶ್ರದ್ಧೆಯುಳ್ಳಂತಹ ನನ್ನ ಭಕ್ತರಿಗೆ ಶ್ರವಣ ಮಾಡಿಸಬೇಕು.

ಯದ್ಯಹಂಕಾರಮಾಶ್ರಿತ್ಯ ಯಜ್ಞದಾನತಪಃಕ್ರಿಯಾಃ ।
ಕುರ್ವಂಸ್ತತ್ಫಲಮಾಪ್ನೋತಿ ಪುನರಾವರ್ತನಂ ನ ತು ॥ ೭೩ ॥

ಅಂತಹ ವ್ಯಕ್ತಿಯು ಒಂದು ವೇಳೆ ಅಹಂಕಾರವನ್ನು ಅವಲಂಬಿಸಿಕೊಂಡು ಯಜ್ಞ-ದಾನ-ತಪಸ್ಸು ಮೊದಲಾದ ಕ್ರಿಯೆಗಳನ್ನು ಮಾಡಿದರೆ ಅವುಗಳ ಫಲವನ್ನು ಹೊಂದುತ್ತಾನೆ. ಎಂದಿಗೂ ಅವನು ಪುನರ್ಜನ್ಮವನ್ನು ಹೊಂದುವುದಿಲ್ಲ.

ಅಭ್ಯರ್ಚಯನ್ ಪಿತೄನ್ ದೇವಾನ್ ಪಠನ್ ಜುಹ್ವನ್ ಬಲಿಂ ದದತ್ ।
ಜ್ವಲನ್ನಗ್ನಿಂ ಸ್ಮರೇದ್ಯೋ ಮಾಂ ಸ ಯಾತಿ ಪರಮಾಂ ಗತಿಮ್ ॥ ೭೪ ॥

ಪಿತೃಪೂಜೆ, ದೇವಪೂಜೆ, ಜಪ, ಹೋಮ, ಬಲಿದಾನ ಮುಂತಾದವುಗಳಲ್ಲಿಯೂ ನನ್ನ ಸ್ಮರಣೆಯಲ್ಲಿರುವವನೇ ಉತ್ತಮ ಗತಿಯನ್ನು ಹೊಂದುತ್ತಾನೆ.

ಯಜ್ಞೋ ದಾನಂ ತಪಶ್ಚೈವ ಪಾವನಾನಿ ಶರೀರಿಣಾಮ್ ।
ಯಜ್ಞಂ ದಾನಂ ತಪಸ್ತಸ್ಮಾತ್ ಕುರ್ಯಾದಾಶೀರ್ವಿವರ್ಜಿತಃ ॥ ೭೫ ॥

ಯಜ್ಞ, ದಾನ, ತಪಸ್ಸುಗಳೆಂಬ ಈ ಮೂರು ಪವಿತ್ರಕರ್ಮಗಳೇ ಆಗಿದ್ದರೂ ಇವುಗಳನ್ನು ಫಲದ ಅಪೇಕ್ಷೆ ಇಲ್ಲದೆ ನಡೆಸಬೇಕು.

ನಮ ಇತ್ಯೇವ ಯೋ ಬ್ರೂಯಾನ್ಮದ್ಭಕ್ತಃ ಶ್ರದ್ಧಯಾನ್ವಿತಃ ।
ತಸ್ಯಾಕ್ಷಯೋ ಭವೇಲ್ಲೋಕಃ ಶ್ವಪಾಕಸ್ಯಾಪಿ ನಾರದ ॥ ೭೬ ॥

ಶ್ರದ್ಧಾ-ಭಕ್ತಿಗಳಿಂದ ನನ್ನನ್ನುದ್ದೇಶಿಸಿ ಮಾಡಿದ ನಮಸ್ಕಾರವು, ನಮಸ್ಕಾರ ಎಂದು ಹೇಳಿದ ಶಬ್ದವು ಚಂಡಾಲನಿಗೂ ಅಕ್ಷಯಲೋಕವನ್ನು ನೀಡುತ್ತದೆ.

ಕಿಂ ಪುನರ್ಯೇ ಯಜಂತೇ ಮಾಂ ಸಾಧಕಾ ವಿಧಿಪೂರ್ವಕಮ್ ।
ಶ್ರದ್ಧಾವಂತೋ ಯತಾತ್ಮಾನಸ್ತೇ ಮಾಂ ಯಾಂತಿ ಮದಾಶ್ರಿತಾಃ ॥ ೭೭ ॥

ಹೀಗಿರಲು ಶ್ರದ್ಧಾ-ಭಕ್ತಿಗಳಿಂದ ನನ್ನನ್ನೇ ನಂಬಿದ ವಿಧ್ಯುಕ್ತವಾಗಿ ನನ್ನನ್ನು ಆರಾಧಿಸುವ ಭಕ್ತರು ನನ್ನನ್ನು ಹೊಂದುವುದರಲ್ಲಿ ಸಂಶಯವೇ ಇಲ್ಲ.

ಕರ್ಮಾಣ್ಯಾದ್ಯಂತವಂತೀಹ ಮದ್ಭಕ್ತೋಽಮೃತಮಶ್ನುತೇ ।
ಮಾಮೇವ ತಸ್ಮಾದ್ದೇವರ್ಷೇ ಧ್ಯಾಹಿ ನಿತ್ಯಮತಂದ್ರಿತಃ ॥ ೭೮ ॥

ಕರ್ಮಗಳಿಗೆ ಆದಿಯೂ ಇದೆ, ವಿನಾಶವೂ ಇದೆ. ಆದರೆ ನನ್ನಲ್ಲಿ ಭಕ್ತಿಯನ್ನು ಮಾಡಿದ ಮನುಜನು ಮುಕ್ತಿಯನ್ನು ಹೊಂದುತ್ತಾನೆ. ಆದ್ದರಿಂದ ದೇವರ್ಷಿಯೇ, ಆಲಸ್ಯವನ್ನು ತೊರೆದು ನನ್ನನ್ನೇ ನಿತ್ಯವೂ ಧ್ಯಾನಿಸು. ಬಳಿಕ ನೀನು ಸಿದ್ಧಿಯನ್ನು ಹೊಂದಿ ನನ್ನನ್ನೇ ನೋಡುತ್ತಿ. ನನ್ನ ಪದವನ್ನು ಹೊಂದುತ್ತಿ.

ಅಜ್ಞಾನಿನೇ ಚ ಯೋ ಜ್ಞಾನಂ ದದ್ಯಾದ್ಧರ್ಮೋಪದೇಶನಮ್ ।
ಕೃತ್ಸ್ನಾಂ ವಾ ಪೃಥಿವೀಂ ದದ್ಯಾತ್ತೇನ ತುಲ್ಯಂ ನ ತತ್ಫಲಮ್ ॥ ೭೯ ॥

ಅಜ್ಞರಿಗೆ ಜ್ಞಾನವನ್ನು, ಧರ್ಮವನ್ನುಪದೇಶಿಸಿ, ಅವರನ್ನು ಉದ್ಧರಿಸುವ ವ್ಯಕ್ತಿಗಳು ಹೊಂದುವ ಫಲಕ್ಕೆ ಭೂಮಿಯ ಸರ್ವಸ್ವವನ್ನು ದಾನ ಮಾಡಿದರೂ ಯೋಗ್ಯವಾದ ಪ್ರತಿಫಲವಾಗಲಾರದು.

ತಸ್ಮಾತ್ ಪ್ರದೇಯಂ ಸಾಧುಭ್ಯೋ ಜನ್ಮಬಂಧಭಯಾಪಹಮ್ ।
ಏವಂ ದತ್ತ್ವಾ ನರಶ್ರೇಷ್ಠ ಶ್ರೇಯೋ ವೀರ್ಯಂ ಚ ವಿಂದತಿ ॥ ೮೦ ॥

ಆದ್ದರಿಂದ ಪುನರ್ಜನ್ಮದಿಂದ ಉಂಟಾಗುವ ಭಯವನ್ನು ನೀಗಿಸುವ ಈ ಜ್ಞಾನವನ್ನು ನೀನು ಸಾಧಕರಿಗೆ ಉಪದೇಶಿಸುತ್ತಿರು. ಇದರಿಂದ ನಿನಗೂ ಶ್ರೇಯಸ್ಸುಂಟಾಗುತ್ತದೆ.

ಅಶ್ವಮೇಧಸಹಸ್ರಾಣಾಂ ಸಹಸ್ರಂ ಯಃ ಸಮಾಚರೇತ್ ।
ನಾಸೌ ಪದಮವಾಪ್ನೋತಿ ಮದ್ಭಕ್ತೈರ್ಯದವಾಪ್ಯತೇ ॥ ೮೧ ॥

ಯಾವನು ಹತ್ತುಲಕ್ಷ ಅಶ್ವಮೇಧ ಯಜ್ಞಗಳನ್ನು ಮಾಡುತ್ತಾನೋ ಅವನೂ ಸಹ ನನ್ನ ಭಕ್ತರು ಹೊಂದುವ ಉತ್ತಮ ಲೋಕಗಳನ್ನು ಹೊಂದಲಾರನು.

ಭೀಷ್ಮಃ

ಏವಂ ಪೃಷ್ಟಃ ಪುರಾ ತೇನ ನಾರದೇನ ಸುರರ್ಷಿಣಾ ।
ಯದುವಾಚ ತದಾಽಸೌ ಭೋ ತದುಕ್ತಂ ತವ ಸುವ್ರತ ॥ ೮೨ ॥

ಭೀಷ್ಮ– ಹೀಗೆ ಭಗವಂತನು ಸುರರ್ಷಿಯಾದ ನಾರದರಿಂದ ಕೇಳಲ್ಪಟ್ಟವನಾಗಿ ಏನನ್ನು ಹೇಳಿದನೋ ಅದನ್ನು ಸುವ್ರತನೇ, ನಾನು ನಿನಗೆ ತಿಳಿಸಿದ್ದೇನೆ.

ತ್ವಮಪ್ಯೇಕಮನಾ ಭೂತ್ವಾ ಧ್ಯಾಹಿ ಜ್ಞೇಯಂ ಗುಣಾನ್ವಿತಮ್ ।
ಭಜಸ್ವ ಸರ್ವಭಾವೇನ ಪರಮಾತ್ಮಾನಮವ್ಯಯಮ್ ॥ ೮೩ ॥

ನೀನು ಏಕಾಗ್ರಚಿತ್ತನಾಗಿದ್ದು, ತ್ರಿಗುಣಗಳನ್ನೂ ಮೀರಿ ಜ್ಞೇಯವಸ್ತುವಾದ ಆ ಪರಮಾತ್ಮನನ್ನು ಧ್ಯಾನಿಸು. ಅವ್ಯಯನೆನಿಸಿದ ಆ ಪರಬ್ರಹ್ಮನನ್ನೇ ಎಲ್ಲವಿಧದಿಂದಲೂ ಭಜಿಸುತ್ತಿರು.

ಶ್ರುತ್ವೈತನ್ನಾರದೋ ವಾಕ್ಯಂ ದಿವ್ಯಂ ನಾರಾಯಣೇರಿತಮ್ ।
ಅತ್ಯಂತಭಕ್ತಿಮಾನ್ ದೇವ ಏಕಾಂತತ್ವಮುಪೇಯಿವಾನ್ ॥ ೮೪ ॥

ನಾರದರು ಭಗವಂತನ ಈ ದಿವ್ಯೋಪದೇಶವನ್ನು ಮೊದಲು ಕೇಳಿದರು. ಅವನನ್ನು ಅನನ್ಯ ಭಕ್ತಿಯಿಂದ ಭಜಿಸುತ್ತಿದ್ದರು. ಕೊನೆಗೆ ಅವನಲ್ಲಿಯೇ ಏಕಾಂತ ಭಕ್ತಿಯನ್ನು ಹೊಂದಿದರು.

ನಾರಾಯಣಮೃಷಿಂ ದೇವಂ ದಶವರ್ಷಾಣ್ಯನನ್ಯಭಾಕ್ ।
ಇದಂ ಜಪನ್ ವೈ ಪ್ರಾಪ್ನೋತಿ ತದ್ವಿಷ್ಣೋಃ ಪರಮಂ ಪದಮ್ ॥ ೮೫ ॥

ಶ್ರೀಮನ್ನಾರಾಯಣನನ್ನು ಯಾವ ಪುರುಷನು ಬೇರೆ ಕಾರ್ಯಗಳಿಗೆ ಮಹತ್ವವನ್ನು ನೀಡದೆ ಹತ್ತು ಸಂವತ್ಸರಗಳ ಕಾಲ ಸರ್ವೋತ್ತಮನೆಂದು ಭಜಿಸುತ್ತಾ ಈ ಮಂತ್ರವನ್ನು ಜಪಿಸುತ್ತಾನೋ ಅವನು ವಿಷ್ಣುಪದವನ್ನೇ ಹೊಂದುತ್ತಾನೆ.

ಕಿಂ ತಸ್ಯ ಬಹುಭಿರ್ಮಂತ್ರೈರ್ಭಕ್ತಿರ್ಯಸ್ಯ ಜನಾರ್ದನೇ ।
ನಮೋ ನಾರಾಯಣಾಯೇತಿ ಮಂತ್ರಃ ಸರ್ವಾರ್ಥಸಾಧಕಃ ॥ ೮೬ ॥

ಅಂತಹ ಭಗವಂತನಲ್ಲಿ ಭಕ್ತಿಯುಳ್ಳವನಿಗೆ ಬೇರೆ ಯಾವ ಮಂತ್ರಗಳೂ ಬೇಕಾಗುವುದಿಲ್ಲ. 'ಓಂ ನಮೋ ನಾರಾಯಣಾಯ' ಎಂಬ ಮಂತ್ರ ಒಂದೇ ಸರ್ವಾರ್ಥಸಾಧಕವಾದುದು.

ಇಮಾಂ ರಹಸ್ಯಾಂ ಪರಮಾಮನುಸ್ಮೃತಿ-
ಮಧೀತ್ಯ ಬುದ್ಧಿಂ ಲಭತೇ ಚ ನೈಷ್ಠಿಕೀಮ್ ।

ವಿಹಾಯ ದುಃಖಾನ್ಯವಮುಚ್ಯ ಸಂಕಟಾ-
ತ್ಸ ವೀತರಾಗೋ ವಿಗತಜ್ವರಃ ಸುಖೀ ॥ ೮೭ ॥

ಅತ್ಯಂತ ರಹಸ್ಯವಾದ, ಶ್ರೇಷ್ಠವಾದ ಈ ಅನುಸ್ಮೃತಿಯನ್ನು ಅಧ್ಯಯನ ಮಾಡಿದವನು ನಿತ್ಯವೂ ಸರ್ವೋತ್ತಮನೆಂಬ ಸ್ಥಿರವಾದ ಬುದ್ಧಿಯನ್ನು ಹೊಂದುತ್ತಾನೆ. ಅವನು ಸಮಸ್ತ ದುಃಖಗಳನ್ನು ಪರಿಹರಿಸಿಕೊಂಡು ಶೋಕಗಳಿಂದ, ರಾಗಗಳಿಂದ ಮುಕ್ತನಾಗಿ ನಿಶ್ಚಿಂತನಾಗಿ ಶಾಶ್ವತವಾದ ಸುಖವನ್ನು ಹೊಂದುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಅಷ್ಟತ್ರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಮೂವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಮೂವತ್ತೊಂಬತ್ತನೆಯ ಅಧ್ಯಾಯ

ಭೀಷ್ಮಾಚಾರ್ಯರು ಗರುಡನು ತನಗೆ ತಿಳಿಸಿದ್ದ ಭಗವಂತನ ಮಹಿಮೆಯನ್ನು ಯುಧಿಷ್ಠಿರನಿಗೆ ತಿಳಿಸಿದುದು.

ಯುಧಿಷ್ಠಿರಃ

ದೇವಾಸುರಮನುಷ್ಯೇಷು ಋಷಿಮುಖ್ಯೇಷು ವಾ ಪುನಃ ।
ವಿಷ್ಣೋಸ್ತತ್ತ್ವಂ ಯಥಾಖ್ಯಾತಂ ಕೋ ವಿದ್ವಾನನುವೇತ್ತಿ ತತ್ ॥ ೧ ॥

ಯುಧಿಷ್ಠಿರ– ಪಿತಾಮಹನೇ, ದೇವಾಸುರಮನುಷ್ಯರಲ್ಲೇ ಆಗಲೀ, ಮಹರ್ಷಿಗಳಲ್ಲೇ ಆಗಲಿ ಆ ಮಹಾವಿಷ್ಣುವಿನ ಮಹಿಮೆಯನ್ನು ಯಥಾರ್ಥವಾಗಿ ತಿಳಿದ ಜ್ಞಾನಿಯು ಯಾರು?

ಏತನ್ಮೇ ಸರ್ವಮಾಚಕ್ಷ್ವ ನ ಮೇ ತೃಪ್ತಿರ್ಹಿ ತತ್ತ್ವತಃ ।
ವರ್ತತೇ ಭರತಶ್ರೇಷ್ಠ ಸರ್ವಜ್ಞೋಽಸೀತಿ ಮೇ ಮತಿಃ ॥ ೨ ॥

ಭಗವಂತನ ಮಹಿಮೆಯನ್ನು ಎಷ್ಟು ಕೇಳುತ್ತಿದ್ದರೂ ನನಗೆ ತೃಪ್ತಿಯಿಲ್ಲ. ನೀನು ಸರ್ವಜ್ಞನೆಂದು ನನ್ನ ಮನಸ್ಸು ಹೇಳುತ್ತಿದೆ. ಆದ್ದರಿಂದ ಭಗನ್ಮಹಿಮೆಯನ್ನು ಯಥಾರ್ಥವಾಗಿ ತಿಳಿಸು.

ಭೀಷ್ಮಃ

ಕಾರಿತೋಽಹಂ ತ್ವಯಾ ರಾಜನ್ ಯದ್ವೃತ್ತಂ ಚ ಪುರಾ ಮಮ ।
ಗರುಡೇನ ಪುರಾ ಮಹ್ಯಂ ಸಂವಾದೋ ಭೂಭೃತೋತ್ತಮ ॥ ೩ ॥

ಭೀಷ್ಮ– ರಾಜನೇ, ಇದೇ ವಿಚಾರವಾಗಿ ಹಿಂದೊಮ್ಮೆ ಗರುಡನ ಜೊತೆಗೆ ಸಂವಾದವು ನಡೆಯಿತು. ಆ ವಿಚಾರವನ್ನು ನೀನು ನೆನಪಿಸಿದಂತಾಯಿತು.

ಪುರಾಹಂ ತಪ ಆಸ್ಥಾಯ ವಾಸುದೇವಪರಾಯಣಃ ।
ಧ್ಯಾಯನ್ ಸ್ತುವನ್ನಮಸ್ಯಂಶ್ಚ ಯಜಮಾನಸ್ತಮೇವ ।
ಗಂಗಾದ್ವೀಪೇ ಸಮಾಸೀನೋ ದಶವರ್ಷಾಣಿ ಭಾರತ ॥ ೪ ॥

ಹಿಂದೆ ನಾನು ಶ್ರೀಹರಿ ಪರಾಯಣನಾಗಿ, ಅವನಲ್ಲಿಯೇ ಮನಸ್ಸನ್ನಿಟ್ಟು ಗಂಗಾನದಿಯ ಮಧ್ಯದಲ್ಲಿರುವ ಒಂದು ದ್ವೀಪದಲ್ಲಿ ತಪಸ್ಸನ್ನು ಆಚರಿಸಿದೆನು. ಆಗ ನಾನು ನಿರಂತರ ಹತ್ತುವರ್ಷಗಳ ತನಕ ವಾಸುದೇವನಲ್ಲಿಯೇ ಮನಸ್ಸನ್ನಿಟ್ಟು ಧ್ಯಾನದಲ್ಲಿ ನಿರತನಾದೆನು.

ಗಂಗಾ ಚ ಮಮ ಸಾ ದೇವೀ ಜನನೀ ಲೋಕಪಾವನೀ ।
ಸಮಾಸೀನಾ ಸಮೀಪೇ ಮೇ ರಕ್ಷಣಾರ್ಥಂ ಮಮಾಚ್ಯುತ ॥ ೫ ॥

ತಸ್ಮಿನ್ ಕಾಲೇಽದ್ಭುತಃ ಶ್ರೀಮಾನ್ ಸರ್ವವೇದಮಯಃ ಪ್ರಭುಃ ।
ಸುಪರ್ಣಃ ಪತತಾಂಶ್ರೇಷ್ಠೋ ಮೇರುಮಂದರಸನ್ನಿಭಃ ॥ ೬ ॥

ಆಗ ನನ್ನ ತಾಯಿಯಾದ ಗಂಗಾದೇವಿಯು ನನ್ನ ರಕ್ಷಣೆಗಾಗಿ ನನ್ನ ಸಮೀಪದಲ್ಲಿಯೇ ಇರುತ್ತಿದ್ದಳು. ಹೀಗಿರುವಾಗ ಅಕಸ್ಮಾತ್ತಾಗಿ ಅಲ್ಲಿಗೆ ಗರುಡದೇವನು ಆಗಮಿಸಿದನು. ಮೇರು-ಮಂದರಪರ್ವತಗಳಿಗೆ ಸಮಾನವಾದ ಆಕಾರವುಳ್ಳ, ಶುದ್ಧಾತ್ಮನಾದ ಗರುಡನು ನನ್ನ ತಾಯಿಯನ್ನು ನೋಡಲು ಆಗಮಿಸಿದ್ದನು.

ತಮಾಗತಂ ಮಹಾತ್ಮಾನಂ ಪ್ರತ್ಯುದ್ಗಮ್ಯಾಹಮರ್ಥಿತಃ ।
ಪ್ರಣಿಪತ್ಯ ಯಥಾನ್ಯಾಯಂ ಕೃತಾಂಜಲಿರವಸ್ಥಿತಃ ॥ ೭ ॥

ಆಗಮಿಸಿದ ಮಹಾತ್ಮನಾದ ಗರುಡದೇವನನ್ನು ನಾನು ಎದ್ದುನಿಂತು ನಮಸ್ಕರಿಸಿ ಬದ್ಧಾಂಜಲಿಯಾಗಿ ನಿಂತಿದ್ದೆನು.

ಸೋಽಪಿ ದೇವೋ ಮಹಾಭಾಗಾಮಭಿನಂದ್ಯ ಚ ಜಾಹ್ನವೀಮ್ ।
ತಯಾ ಚ ಪೂಜಿತಃ ಶ್ರೀಮಾನ್‌ಭ್ಯುಪಾವಿಶದಾಸನೇ ॥ ೮ ॥

ಆ ಗರುಡನಾದರೂ ನನ್ನ ತಾಯಿಯಾದ ಗಂಗಾದೇವಿಗೆ ನಮಸ್ಕರಿಸಿ, ಅವನು ನನ್ನ ತಾಯಿಯಿಂದ ಸತ್ಕೃತನಾಗಿ ನಮ್ಮ ಸಮೀಪದಲ್ಲಿಯೇ ಕುಳಿತನು.

ತತಃ ಕಥಾಂತರೇ ತಂ ವೈ ವಚನಂ ಚೇದಮಬ್ರವಮ್ ॥ ೯ ॥

ಬಳಿಕ ನಾವೆಲ್ಲರೂ ಪರಸ್ಪರ ಮಾತುಗಳನ್ನಾಡುತ್ತಿರುವಾಗ ನಡುವೆ ನಾನು ಗರುಡನನ್ನು ಕುರಿತು ಹೀಗೆ ಹೇಳಿದೆನು.

ವೇದವೇದ ಮಹಾವೀರ್ಯ ವೈನತೇಯ ಮಹಾಬಲ ।
ನಾರಾಯಣಂ ಹೃಷೀಕೇಶಂ ಸಹಮಾನೋಽನಿಶಂ ಹರಿಮ್ ।
ಜಾನಾಸಿ ತಂ ಯಥಾ ವಕ್ತುಂ ಯಾದೃಗ್ಭೂತೋ ಜನಾರ್ದನಃ ।
ಮಮಾಪಿ ತಸ್ಯ ಸದ್ಭಾನಂ ವಕ್ತುಮರ್ಹಸಿ ಸತ್ತಮ ॥ ೧೦ ॥

ಓ ಮಹಾವೀರನಾದ ಬಲಿಷ್ಠನಾದ ಗರುಡದೇವನೇ, ನೀನು ನಿರಂತರವೂ ನಾರಾಯಣನನ್ನೂ ಹೃಷೀಕೇಶನನ್ನು ನಿನ್ನ ಬೆನ್ನಿನ ಮೇಲೆ ಹೊತ್ತು ಸಂಚರಿಸುತ್ತಿರುವಿ. ಅವನು ಎಂತಹವನು ಎಂಬ ತತ್ತ್ವವು ಎಲ್ಲರಿಗಿಂತಲೂ ಅಧಿಕವಾಗಿ ನಿನಗೆ ತಿಳಿದಿರುತ್ತದೆ. ಅವನ ಮಹಿಮೆಯನ್ನು ನೀನು ನನಗೂ ತಿಳಿಸಬೇಕು ಎಂದು ಕೇಳಿದೆನು.

ಗರುಡಃ

ಶೃಣು ಭೀಷ್ಮ ಯಥಾನ್ಯಾಯಂ ಪುರಾ ತ್ವಮಿಹ ಸತ್ತಮಾಃ ।
ಅನೇಕೇ ಮುನಯಃ ಸಿದ್ಧಾ ಮಾನಸೋತ್ತರವಾಸಿನಃ ।
ಸಿದ್ಧಾಸ್ತೇತು ಮಹಾಪ್ರಾಜ್ಞಾ ವಾಸುದೇವಪರಾಯಣಾಃ ॥ ೧೧ ॥

ಪಕ್ಷೀಂದ್ರ ವಾಸುದೇವಸ್ಯ ತತ್ತ್ವಂ ವೇತ್ಸಿ ಪರಂ ಪದಮ್ ।
ತ್ವಯಾ ಸಮೋ ನ ತಸ್ಯಾಸ್ತಿ ಸನ್ನಿಕೃಷ್ಟಪ್ರಿಯೋಽಪಿ ಚ ॥ ೧೨ ॥

ಗರುಡ– ಭೀಷ್ಮನೇ, ಕೇಳು. ಈಗ ನೀನು ಕೇಳುವಂತೆಯೇ ಮಾನಸೋತ್ತರ ಎಂಬಲ್ಲಿ ವಾಸ ಮಾಡುತ್ತಿದ್ದ ಅನೇಕ ಮಹರ್ಷಿಗಳು, ಸಿದ್ಧರು ವಾಸುದೇವನಲ್ಲೇ

ಭೀಷ್ಮಃ

ಕಾರಿತೋಽಹಂ ತ್ವಯಾ ರಾಜನ್ ಯದ್ವೃತ್ತಂ ಚ ಪುರಾ ಮಮ ।
ಗರುಡೇನ ಪುರಾ ಮಹ್ಯಂ ಸಂವಾದೋ ಭೂಭೃತೋತ್ತಮ ॥ ೩ ॥

ಭೀಷ್ಮ– ರಾಜನೇ, ಇದೇ ವಿಚಾರವಾಗಿ ಹಿಂದೊಮ್ಮೆ ಗರುಡನ ಜೊತೆಗೆ ಸಂವಾದವು ನಡೆಯಿತು. ಆ ವಿಚಾರವನ್ನು ನೀನು ನೆನಪಿಸಿದಂತಾಯಿತು.

ಪುರಾಹಂ ತಪ ಆಸ್ಥಾಯ ವಾಸುದೇವಪರಾಯಣಃ ।
ಧ್ಯಾಯನ್ ಸ್ತುವನ್ನಮಸ್ಯಂಶ್ಚ ಯಜಮಾನಸ್ತಮೇವ ।
ಗಂಗಾದ್ವೀಪೇ ಸಮಾಸೀನೋ ದಶವರ್ಷಾಣಿ ಭಾರತ ॥ ೪ ॥

ಹಿಂದೆ ನಾನು ಶ್ರೀಹರಿ ಪರಾಯಣನಾಗಿ, ಅವನಲ್ಲಿಯೇ ಮನಸ್ಸನ್ನಿಟ್ಟು ಗಂಗಾನದಿಯ ಮಧ್ಯದಲ್ಲಿರುವ ಒಂದು ದ್ವೀಪದಲ್ಲಿ ತಪಸ್ಸನ್ನು ಆಚರಿಸಿದೆನು. ಆಗ ನಾನು ನಿರಂತರ ಹತ್ತುವರ್ಷಗಳ ತನಕ ವಾಸುದೇವನಲ್ಲಿಯೇ ಮನಸ್ಸನ್ನಿಟ್ಟು ಧ್ಯಾನದಲ್ಲಿ ನಿರತನಾದೆನು.

ಗಂಗಾ ಚ ಮಮ ಸಾ ದೇವೀ ಜನನೀ ಲೋಕಪಾವನೀ ।
ಸಮಾಸೀನಾ ಸಮೀಪೇ ಮೇ ರಕ್ಷಣಾರ್ಥಂ ಮಮಾಚ್ಯುತ ॥ ೫ ॥

ತಸ್ಮಿನ್ ಕಾಲೇಽದ್ಭುತಃ ಶ್ರೀಮಾನ್ ಸರ್ವವೇದಮಯಃ ಪ್ರಭುಃ ।
ಸುಪರ್ಣಃ ಪತತಾಂಶ್ರೇಷ್ಠೋ ಮೇರುಮಂದರಸನ್ನಿಭಃ ॥ ೬ ॥

ಆಗ ನನ್ನ ತಾಯಿಯಾದ ಗಂಗಾದೇವಿಯು ನನ್ನ ರಕ್ಷಣೆಗಾಗಿ ನನ್ನ ಸಮೀಪದಲ್ಲಿಯೇ ಇರುತ್ತಿದ್ದಳು. ಹೀಗಿರುವಾಗ ಅಕಸ್ಮಾತ್ತಾಗಿ ಅಲ್ಲಿಗೆ ಗರುಡದೇವನು ಆಗಮಿಸಿದನು. ಮೇರು-ಮಂದರಪರ್ವತಗಳಿಗೆ ಸಮಾನವಾದ ಆಕಾರವುಳ್ಳ, ಶುದ್ಧಾತ್ಮನಾದ ಗರುಡನು ನನ್ನ ತಾಯಿಯನ್ನು ನೋಡಲು ಆಗಮಿಸಿದ್ದನು.

ತಮಾಗತಂ ಮಹಾತ್ಮಾನಂ ಪ್ರತ್ಯುದ್ಗಮ್ಯಾಹಮರ್ಥಿತಃ ।
ಪ್ರಣಿಪತ್ಯ ಯಥಾನ್ಯಾಯಂ ಕೃತಾಂಜಲಿರವಸ್ಥಿತಃ ॥ ೭ ॥

ಆಗಮಿಸಿದ ಮಹಾತ್ಮನಾದ ಗರುಡದೇವನನ್ನು ನಾನು ಎದ್ದುನಿಂತು ನಮಸ್ಕರಿಸಿ ಬದ್ಧಾಂಜಲಿಯಾಗಿ ನಿಂತಿದ್ದೆನು.

ಸೋಽಪಿ ದೇವೋ ಮಹಾಭಾಗಾಮಭಿನಂದ್ಯ ಚ ಜಾಹ್ನವೀಮ್ ।
ತಯಾ ಚ ಪೂಜಿತಃ ಶ್ರೀಮಾನ್‌ಭ್ಯುಪಾವಿಶದಾಸನೇ ॥ ೮ ॥

ಆ ಗರುಡನಾದರೂ ನನ್ನ ತಾಯಿಯಾದ ಗಂಗಾದೇವಿಗೆ ನಮಸ್ಕರಿಸಿ, ಅವನು ನನ್ನ ತಾಯಿಯಿಂದ ಸತ್ಕೃತನಾಗಿ ನಮ್ಮ ಸಮೀಪದಲ್ಲಿಯೇ ಕುಳಿತನು.

ತತಃ ಕಥಾಂತರೇ ತಂ ವೈ ವಚನಂ ಚೇದಮಬ್ರುವಮ್ ॥ ೯ ॥

ಬಳಿಕ ನಾವೆಲ್ಲರೂ ಪರಸ್ಪರ ಮಾತುಗಳನ್ನಾಡುತ್ತಿರುವಾಗ ನಡುವೆ ನಾನು ಗರುಡನನ್ನು ಕುರಿತು ಹೀಗೆ ಹೇಳಿದೆನು.

ವೇದವೇದ ಮಹಾವೀರ್ಯ ವೈನತೇಯ ಮಹಾಬಲ ।
ನಾರಾಯಣಂ ಹೃಷೀಕೇಶಂ ಸಹಮಾನೋಽನಿಶಂ ಹರಿಮ್ ।
ಜಾನಾಸಿ ತಂ ಯಥಾ ವಕ್ತುಂ ಯಾದೃಗ್ಭೂತೋ ಜನಾರ್ದನಃ ।
ಮಮಾಪಿ ತಸ್ಯ ಸದ್ಭಾನಂ ವಕ್ತುಮರ್ಹಸಿ ಸತ್ತಮ ॥ ೧೦ ॥

ಓ ಮಹಾವೀರನಾದ ಬಲಿಷ್ಠನಾದ ಗರುಡದೇವನೇ, ನೀನು ನಿರಂತರವೂ ನಾರಾಯಣನನ್ನೂ ಹೃಷೀಕೇಶನನ್ನು ನಿನ್ನ ಬೆನ್ನಿನ ಮೇಲೆ ಹೊತ್ತು ಸಂಚರಿಸುತ್ತಿರುವಿ. ಅವನು ಎಂತಹವನು ಎಂಬ ತತ್ತ್ವವು ಎಲ್ಲರಿಗಿಂತಲೂ ಅಧಿಕವಾಗಿ ನಿನಗೆ ತಿಳಿದಿರುತ್ತದೆ. ಅವನ ಮಹಿಮೆಯನ್ನು ನೀನು ನನಗೂ ತಿಳಿಸಬೇಕು ಎಂದು ಕೇಳಿದೆನು.

ಗರುಡಃ

ಶೃಣು ಭೀಷ್ಮ ಯಥಾನ್ಯಾಯಂ ಪುರಾ ತ್ವಮಿಹ ಸತ್ತಮಾಃ ।
ಅನೇಕೇ ಮುನಯಃ ಸಿದ್ಧಾ ಮಾನಸೋತ್ತರವಾಸಿನಃ ।
ಸಿದ್ಧಾಸ್ತೇತು ಮಹಾಪ್ರಾಜ್ಞಾ ವಾಸುದೇವಪರಾಯಣಾಃ ॥ ೧೧ ॥

ಪಕ್ಷೀಂದ್ರ ವಾಸುದೇವಸ್ಯ ತತ್ತ್ವಂ ವೇತ್ಸಿ ಪರಂ ಪದಮ್ ।
ತ್ವಯಾ ಸಮೋ ನ ತಸ್ಯಾಸ್ತಿ ಸನ್ನಿಕೃಷ್ಟಪ್ರಿಯೋಽಪಿ ಚ ॥ ೧೨ ॥

ಗರುಡ– ಭೀಷ್ಮನೇ, ಕೇಳು. ಈಗ ನೀನು ಕೇಳುವಂತೆಯೇ ಮಾನಸೋತ್ತರ ಎಂಬಲ್ಲಿ ವಾಸ ಮಾಡುತ್ತಿದ್ದ ಅನೇಕ ಮಹರ್ಷಿಗಳು, ಸಿದ್ಧರು ವಾಸುದೇವನಲ್ಲೇ

ಮನಸ್ಸನ್ನು ನೆಟ್ಟವರಾಗಿ, ನೀನು ಯಾವಾಗಲೂ ಶ್ರೀಹರಿಯ ಸಮೀಪದಲ್ಲಿದ್ದುಕೊಂಡು ಅವನ ಮಹಿಮೆಯನ್ನು ತಿಳಿದುಕೊಂಡಿರುವಿ. ಅವನಿಗೆ ನಿನ್ನಂತೆ ಪ್ರಿಯರಾದವರು ಬೇರೊಬ್ಬರಿಲ್ಲ. ಅವನ ಸ್ವರೂಪವನ್ನು ನೀನು ಚೆನ್ನಾಗಿ ಬಲ್ಲವನಾಗಿರುವಿ. ನಮಗೆ ತಿಳಿಸು ಎಂದು ಕೇಳಿದರು.

ತೇಷಾಮಹಂ ವಚಃ ಶ್ರುತ್ವಾ ಪ್ರಣಿಪತ್ಯ ಮಹಾಹರಿಮ್ ।
ಅಬ್ರುವಂ ಚ ಯಥಾವೃತ್ತಂ ಮಮ ನಾರಾಯಣಸ್ಯ ಚ ॥ ೧೩ ॥

ನಾನು ಆ ಮುನೀಂದ್ರರ ಮಾತನ್ನು ಕೇಳಿಸಿಕೊಂಡು, ಶ್ರೀಮನ್ನಾರಾಯಣನನ್ನು ನಮಸ್ಕರಿಸಿ ಶ್ರೀಹರಿಗೂ, ನನಗೂ ನಡೆದ ಒಂದು ಸಂವಾದವನ್ನು ಅವರ ಮುಂದೆ ಹೇಳಿದೆನು.

ಶೃಣುಧ್ವಂ ಮುನಿಶಾರ್ದೂಲಾ ಹತ್ವಾ ಸೋಮಮಹಂ ಪುರಾ ।
ಆಕಾಶೇ ಪತಮಾನಸ್ತು ವಾಕ್ಯಂ ತತ್ರ ಶೃಣೋಮಿ ವೈ ॥ ೧೪ ॥

ಮುನಿಶಾರ್ದೂಲರೇ, ಹಿಂದೆ ನಾನು ಅಮೃತವನ್ನು ಅಪಹರಿಸಿಕೊಂಡು ಗರ್ವದಿಂದ ಆಕಾಶದಲ್ಲಿ ಹಾರಿ ಹಿಂದಿರುಗಿ ಬರುತ್ತಿರುವಾಗ ನನಗೊಂದು ಅಶರೀರವಾಣಿಯು ಕಿವಿಯಲ್ಲಿ ಬಿದ್ದಿತು.

ಸಾಧು ಸಾಧು ಮಹಾಬಾಹೋ ಪ್ರೀತೋಽಸ್ಮಿ ತವ ದರ್ಶನಾತ್ ।
ವೃಣೀಷ್ವ ವಚನಂ ಮತ್ತಃ ಪಕ್ಷೀಂದ್ರ ಗರುಡಾಧುನಾ ॥ ೧೫ ॥

ಪಕ್ಷೀಂದ್ರನೇ, ಸಾಧು ಸಾಧು (ಒಳ್ಳೆಯದು). ಮಹಾಬಾಹುವೇ, ನಿನ್ನ ದರ್ಶನದಿಂದಲೇ ನನಗೆ ಸಂತೋಷವಾಗಿದೆ. ನಿನ್ನ ಸಾಹಸಕ್ಕೆ ಮೆಚ್ಚಿದ್ದೇನೆ. ಪಕ್ಷೀಂದ್ರನೇ, ಬೇಕಾದ ವರವನ್ನು ಈ ಕ್ಷಣದಲ್ಲಿಯೇ ಕೇಳಿಕೊ.

ತ್ವಾಮಹಂ ಭಕ್ತಿತತ್ತ್ವಜ್ಞೋ ಬ್ರವೈ ವಚನಮುತ್ತಮಮ್ ।
ಇತ್ಯಾಹ ಸ್ಮ ಧ್ರುವಂ ತತ್ರ ಮಾಮಾಹ ಭಗವಾನ್ ಪುನಃ ॥ ೧೬ ॥

ನಿನ್ನ ನಿಜವಾದ ಭಕ್ತಿಯನ್ನೇ ತಿಳಿದು ನಾನು ನಿನಗೆ ಹಿತವನ್ನು ಹೇಳುತ್ತಿದ್ದೇನೆ ಎಂಬ ಮಾತು ಕೇಳಿಸಿತು. ನಾನು ಸುಮ್ಮನಿದ್ದಾಗ ಆಗ ಅದೇ ದಿವ್ಯವಾಣಿಯು ಪುನಃ ಕೇಳಿಸಿತು.

ಋಷಿರಸ್ಮಿ ಮಹಾವೀರ್ಯ ನ ಮಾಂ ಜಾನಾತಿ ವಾ ಮಯಿ ।
ಅಸೂಯತಿ ಚ ಮಾಂ ಮೂಢ ತಚ್ಚುತ್ವಾ ಗರ್ವಮಾಸ್ಥಿತಃ ॥ ೧೭ ॥

ಮಹಾವೀರ್ಯವುಳ್ಳ ನಾನು ಋಷಿಯಾಗಿದ್ದೇನೆ. ನನ್ನನ್ನು ನೀನು ಅರ್ಥೈಸಿಕೊಳ್ಳಲಾರೆ. ಮೂಢನಾದ ನೀನು ನನ್ನಲ್ಲಿಯೇ ಮಾತ್ಸರ್ಯಪಡುವಂತಿರುವಿ, ಎಂಬ ಮಾತು ಕೇಳಿಬಂತು. ನಾನು ಆ ಮಾತಿನಿಂದ ಗರ್ವಿತನಾದೆನು.

ಅಹಂ ದೇವನಿಕಾಯಾನಾಂ ಮಧ್ಯೇ ವಚನಮಬ್ರವಮ್ ।
ಋಷೇ ಪೂರ್ವಂ ವರಂ ಮತ್ತಸ್ತ್ವಂ ವೃಣೀಷ್ವ ತತೋ ಹ್ಯಹಮ್ ।
ವೃಣೇ ತ್ವತ್ತೋ ವರಂ ಪಶ್ಚಾದಿತ್ಯೇವಂ ಮುನಿಸತ್ತಮಾಃ ॥ ೧೮ ॥

ನಾನು ಆ ದೇವಸಮೂಹದ ನಡುವೆ ದಿವ್ಯರೂಪಿಯನ್ನು ಕುರಿತು- 'ಎಲೈ ಮಹರ್ಷಿಯೇ, ಮೊದಲು ಬೇಕಾದರೆ ನೀನು ನನ್ನಿಂದ ವರವನ್ನು ಪಡೆ. ಆಮೇಲೆ ನಾನು ನಿನ್ನಿಂದ ವರವನ್ನು ಪಡೆಯುತ್ತೇನೆ' ಎಂದು ಗರ್ವದಿಂದಲೇ ನುಡಿದೆನು.

ತಸ್ಮಾತ್ತ್ವಂ ಭಗವಾನ್ ದೇವಃ ಶ್ರೀಮಾನ್ ಶ್ರೀವತ್ಸಲಕ್ಷಣಃ ।
ಅದ್ಯ ಪಶ್ಯತಿ ಪಕ್ಷೀಂದ್ರ ವಾಹನಂ ಭವ ಮೇ ಸದಾ ।
ವೃಣೇಽಹಂ ವರಮೇತದ್ಧಿ ತ್ವತ್ತೋಽದ್ಯ ಪತಗೇಶ್ವರ ॥ ೧೯ ॥

ಆ ಸಮಯದಲ್ಲಿ ಶ್ರೀವತ್ಸಾಂಕಿತನಾದ ಭಗವಂತನು ಪ್ರತ್ಯಕ್ಷನಾಗಿ 'ಪಕ್ಷಿರಾಜನೇ, ನೀನು ನನಗೆ ವರವನ್ನು ಕೊಡುವುದಾದರೆ ನನ್ನ ವಾಹನನಾಗಿರಬೇಕು' ಎಂದು ಹೇಳುತ್ತಾ 'ನನಗೆ ಇನ್ನೂ ವರವನ್ನು ನೀನು ನೀಡಬೇಕು' ಎಂದನು.

ತಥೇತಿ ತಂ ವೀಕ್ಷ್ಯ ಮಾತಾಮನಹಂಕಾರಮಾಸ್ಥಿತಮ್ ।
ಜೇತುಕಾಮೋ ಹ್ಯಹಂ ವಿಷ್ಣುಂ ಮಾಯಯಾ ಮಾಯಿನಂ ಹರಿಮ್ ॥

ನಾನು ಹಾಗೆಯೇ ಆಗಲಿ ಎಂದು ಹೇಳಿದೆನು. ಆದರೆ ಮಾಯಾವಿಯಾದ ಭಗವಂತನನ್ನು ಜಯಿಸಬೇಕೆಂಬ ಅಹಂಕಾರದಿಂದ ಅವನನ್ನು ಕುರಿತು ನಾನು ಹೀಗೆ ಹೇಳಿದ್ದೆನು.

ತ್ವತ್ತೋ ಹ್ಯಹಂ ವೃಣೇ ತದ್ಯ ವರಂ ಋಷಿವರೋತ್ತಮಮ್ ।
ತವೋಪರಿಷ್ಟಾತ್ ಸ್ಥಾಸ್ಯಾಮಿ ವರಮೇತತ್ ಪ್ರಯಚ್ಛ ಮೇ ॥ ೨೧ ॥

ಋಷಿವರೋತ್ತಮನೇ, ನಾನು ನಿನ್ನಿಂದಲೂ ಒಂದು ವರವನ್ನು ಪಡೆಯಲು ಬಯಸುತ್ತೇನೆ. ನಾನು ಯಾವಾಗಲೂ ನಿನ್ನ ಮೇಲೆಯೇ ಕುಳಿತುಕೊಳ್ಳಬೇಕು. ಇಂತಹ ವರವನ್ನು ಕೇಳಿದೆನು.

ತಥೇತಿ ಚ ಹಸನ್ ಪ್ರಾಹ ಹರಿರ್ನಾರಾಯಣಃ ಪ್ರಭುಃ ।
ಧ್ವಜಂ ಚ ಮೇ ಭವ ಸದಾ ತ್ವಮೇವ ವಿಹಗೇಶ್ವರ ।
ಉಪರಿಷ್ಟಾತ್ ಸ್ಥಿತಿಸ್ತೇಽಸ್ತು ಮಮ ಪಕ್ಷೀಂದ್ರ ಸರ್ವದಾ ॥ ೨೨ ॥

ಮಹಾವಿಷ್ಣುವು ನಸುನಗುತ್ತಾ ಹಾಗೆಯೇ ಆಗಲಿ. ನೀನು ನನ್ನ ಧ್ವಜದ ಚಿಹ್ನೆಯಾಗಿ ನನ್ನ ಮೇಲೆಯೇ ಕಾಣಿಸುತ್ತಿರು ಎಂದನು.

ಇತ್ಯುಕ್ತ್ವಾ ಭಗವಾನ್ ದೇವಃ ಶಂಖಚಕ್ರಗದಾಧರಃ ।
ಸಪಸ್ರಚರಣಃ ಶ್ರೀಮಾನ್ ಸಹಸ್ರಾದಿತ್ಯಸನ್ನಿಭಃ ॥ ೨೩ ॥

ಈ ರೀತಿಯಾಗಿ ಹೇಳಿದ ಬಳಿಕ ಮಹಾತ್ಮನಾದ ಭಗವಂತನು ಕ್ಷಣಕಾಲ ನಾಲ್ಕು ತೋಳುಗಳ ಜೊತೆಗೆ ಶಂಖಚಕ್ರಗದಾಧರನಾಗಿ ನನಗೆ ಕಾಣಿಸಿಕೊಂಡನು. ಹೊಳೆಯುವ ಸೂರ್ಯಸದೃಶವಾದ ಕಾಂತಿಯುಳ್ಳವನಾಗಿದ್ದನು.

ಸಹಸ್ರಶೀರ್ಷಾ ಪುರುಷಃ ಸಹಸ್ರನಯನೋ ಮಹಾನ್ ।
ಸಹಸ್ರಮುಕುಟೋಽಚಿಂತ್ಯಃ ಸಹಸ್ರವದನೋ ವಿಭುಃ ॥ ೨೪ ॥

ವಿದ್ಯುನ್ಮಾಲಾನಿಭೈರ್ದಿವ್ಯೈರ್ನಾನಾಭರಣರಾಜಿಭಿಃ ।
ಕ್ವಚಿತ್ ಸಂದೃಶ್ಯಮಾನಸ್ತು ಚತುರ್ಬಾಹುಃ ಕ್ವಚಿದ್ಧರಿಃ ॥ ೨೫ ॥

ಸಹಸ್ರಶೀರ್ಷನೂ, ಸಹಸ್ರನಯನನೂ, ಸಹಸ್ರಮಕುಟನೂ, ಅಚಿಂತ್ಯನೂ, ಸಹಸ್ರವದನನೂ, ಸರ್ವಸಮರ್ಥನೂ, ಮಿಂಚಿನಂತೆ ಹೊಳೆಯುವ ಮಾಲೆಗಳಿಂದ ಕಂಗೊಳಿಸುವವನೂ, ದಿವ್ಯವಾದ ನಾನಾಭರಣಗಳಿಂದ ಹೊಳೆಯುವವನೂ, ಹೀಗೆ ಥಳಥಳಿಸುವ ರೂಪದಿಂದ ಕೆಲವೊಮ್ಮೆ ಕಾಣಿಸಿದನು. ಕೆಲವೊಮ್ಮೆ ಚತುರ್ಬಾಹುವಾಗಿ ಕಂಗೊಳಿಸಿದನು.

ಕ್ವಚಿಜ್ಜ್ಯೋತಿರ್ಮಯೋಽಚಿಂತ್ಯಃ ಕ್ವಚಿತ್ ಸ್ಕಂಧೇ ಸಮಾಹಿತಃ ।
ಏವಂ ಮಮ ಜಯನ್ ದೇವಸ್ತತ್ರೈವಾಂತರಧೀಯತ ॥ ೨೬ ॥

ಕೆಲವೊಮ್ಮೆ ಜ್ಯೋತಿರ್ಮಯನಾಗಿ, ಅಚಿಂತ್ಯನಾಗಿ, ಕೆಲವೊಮ್ಮೆ ನನ್ನ ಬೆನ್ನಿನ ಮೇಲೆ ಕುಳಿತಂತೆ, ಈ ರೀತಿಯಾಗಿ ಹಲವು ಬಗೆಯಾಗಿ ನನ್ನ ಜಯಿಸುತ್ತಾ ಅಲ್ಲಿಯೇ ಅಂತರ್ಧಾನ ಹೊಂದಿದನು.

ತತೋಽಹಂ ವಿಸ್ಮಯಾಪನ್ನಃ ಕೃತ್ವಾ ಕಾರ್ಯಮನುತ್ತಮಮ್ ।
ಅಸ್ಯಾ ವಿಮುಚ್ಯಜನನೀಂ ಮಯಾ ಸಹ ಮುನೀಶ್ವರಾಃ ॥ ೨೭ ॥

ಇದನ್ನೆಲ್ಲ ನೋಡಿ ಆಶ್ಚರ್ಯವಶನಾಗಿ ನಾನು ಅಲ್ಲಿಂದ ಹೊರಟೆನು. ಬಳಿಕ ಅಮೃತಾಪಹರಣದಿಂದ ನನ್ನ ತಾಯಿಯಾದ ವಿನತೆಯನ್ನೂ, ನನ್ನನ್ನು ಕದ್ರುವಿನ ಸೆರೆಯಿಂದ ಬಿಡಿಸಿಕೊಂಡೆನು.

ಅಚಿಂತ್ಯೋಽಯಮಹಂ ಭೂಯಃ ಕೋಽಸೌ ಮಾಮಬ್ರವೀತ್ಪುರಾ ।
ಕೀದೃಗ್ವಿಧಃ ಸ ಭಗವಾನಿತಿ ಮತ್ವಾ ತಮಾಸ್ಥಿತಃ ॥ ೨೮ ॥

ಆದರೆ ನನ್ನ ಮನಸ್ಸಿನಲ್ಲಿ ಅಚಿಂತ್ಯಮಹಿಮನಾದ ಆ ವ್ಯಕ್ತಿಯು ಯಾರು? ಆ ಭಗವಂತನು ಹೇಗಿದ್ದಾನೆ? ನನ್ನನ್ನು ಮಾತನಾಡಿಸಿದವನು ಯಾರು? ಈ ರೀತಿಯಾಗಿ ಜಿಜ್ಞಾಸೆಯ ಆತುರತೆಯು ಅಧಿಕವಾಯಿತು.

ಅನಂತರಂ ದೇವದೇವಂ ಸ್ಕಂಧೇ ಮಮ ಸಮಾಶ್ರಿತಮ್ ।
ಅದ್ರಾಕ್ಷಂ ಪುಂಡರೀಕಾಕ್ಷಂ ವಹಮಾನೋಽಹಮದ್ಭುತಮ್ ॥ ೨೯ ॥

ಅವಶಸ್ತಸ್ಯ ಭಾವೇನ ಯತ್ರ ಯತ್ರ ಸ ಚೇಚ್ಛತಿ ।
ವಿಸ್ಮಯಾಪನ್ನಹೃದಯೋ ಹ್ಯಹಂ ಕಿಮಿತಿ ಚಿಂತಯನ್ ।
ಅಂತರ್ಜಲಮಹಂ ಸರ್ವಂ ವಹಮಾನೋಽಗಮಂ ಪುನಃ ॥ ೩೦ ॥

ಇಷ್ಟರಲ್ಲಿ ಅದೇ ದಿವ್ಯಪುರುಷಾಕೃತಿಯು ನನ್ನ ಬೆನ್ನಿನ ಮೇಲೆಯೇ ಏರಿ ಕುಳಿತಿರುವುದನ್ನು ಕಂಡೆನು. ಪುಂಡರೀಕಾಕ್ಷನಾದ ಮಹಾಪುರುಷನನ್ನು ನೋಡಿ, ಅದ್ಭುತವಾದ ಅವನ ರೂಪವನ್ನು ಹೊತ್ತುಕೊಂಡಿರುವನಾದ ನಾನು ಪರವಶನಾದೆನು. ಆ ಮಹಾತ್ಮನು ಎಲ್ಲೆಲ್ಲಿಗೆ ಹೋಗಬೇಕೆಂದು ಅಪೇಕ್ಷಿಸುತ್ತಾನೋ ಅವನನ್ನು ಆಯಾ ದಿಕ್ಕುಗಳಿಗೆ ಹೊತ್ತುಕೊಂಡು ಅವನ ಅಧೀನನಾಗಿಯೇ ಪರವಶನಾಗಿ ಸಂಚರಿಸುತ್ತಿದ್ದೆನು.

ಆ ಪರಮಪುರುಷನನ್ನು ಹೊತ್ತುಕೊಂಡು ಸಮುದ್ರದ ಜಲದೊಳಗೆಯೂ ಪ್ರವೇಶಿಸಿದೆನು.

ಸೇಂದ್ರೈರ್ದೇವೈರ್ಮಹಾಭಾಗೈರ್ಬ್ರಹ್ಮಾದ್ಯೈಃ ಕಲ್ಪಜೀವಿಭಿಃ ।
ಸ್ತೂಯಮಾನೋ ಹ್ಯಹಮಪಿ ತೈಸ್ತೈರಭ್ಯರ್ಚಿತಃ ಪೃಥಕ್ ॥ ೩೧ ॥

ಕ್ಷೀರೋದಸ್ಯೋತ್ತರೇ ಕೂಲೇ ದಿವ್ಯೇ ಮಣಿಮಯೇ ಶುಭೇ ।
ವೈಕರ್ಣನಾಭ ಸದನಂ ಹರೇಸ್ತಸ್ಯ ಮಹಾತ್ಮನಃ ॥ ೩೨ ॥

ಇಂದ್ರಾದಿ ದೇವತಾ ಪರಿವಾರದ ಮತ್ತು ಬ್ರಹ್ಮಾದಿಗಳ ಸ್ತೋತ್ರಕ್ಕೂ ಪಾತ್ರನಾದ, ಕಲ್ಪಾಂತದವರೆಗೆ ಜೀವಿಸುವಂತಹ ಇಂತಹ ಮಹಾಮಹಿಮರಿಂದ ಪೂಜಾಪಾತ್ರನಾದ ಅವರವರಿಂದ ಪ್ರತ್ಯೇಕವಾಗಿ ಪೂಜಿಸಲ್ಪಡುತ್ತಿರುವ ಭಗವಂತನನ್ನು ಹೊತ್ತುಕೊಂಡು ಕ್ಷೀರಸಮುದ್ರದ ಉತ್ತರದ ತೀರದಲ್ಲಿರುವ ತೇಜೋಮಯವಾದ ಒಂದು ದಿವ್ಯ ಭವನದ ಕಡೆಗೆ ಸಾಗಿದೆನು. ಆ ದಿವ್ಯಮಂದಿರವು ಮಣಿಮಯವಾಗಿತ್ತು. ಭಗವಂತನ ವೈಕರ್ಣ ಎಂಬ ಹೆಸರಿನ ಅರಮನೆಯೇ ಅದಾಗಿತ್ತು.

ದಿವ್ಯಂ ತೇಜೋಮಯಂ ಶ್ರೀಮದಚಿಂತ್ಯಮಮರೈರಪಿ ।
ತೇಜೋನಿಲಮಯೈಃ ಸ್ತಂಭೈರ್ನಾನಾಸಂಸ್ಥಾನಸಂಸ್ಥಿತೈಃ ॥ ೩೩ ॥

ವಿಭೂಷಿತಂ ಹಿರಣ್ಮೇನ ಭಾಸ್ವರೇಣ ಸಮಂತತಃ ।
ದಿವ್ಯಂ ಜ್ಯೋತಿಃಸಮಾಯುಕ್ತಂ ಗೀತವಾದಿತ್ರಶೋಭಿತಮ್ ॥ ೩೪ ॥

ದೇವತೆಗಳಿಂದಲೂ ಅಚಿಂತ್ಯವಾದ ವಿವಿಧ ಸನ್ನಿವೇಶಗಳಿಂದ ಕೂಡಿದ ವಾಯು ಮತ್ತು ತೆಜೋಮಯವಾದ ಸ್ತಂಭಗಳಿಂದ ಕೂಡಿರುವ ನೂರಾರು ಸುವರ್ಣಾಲಂಕಾರಗಳಿಂದ ಹೊಳೆಯುತ್ತಿರುವ, ಕಣ್ಣನ್ನು ಕೊರೈಸುವಂತೆ ದಿವ್ಯ ತೇಜಸ್ಸಿನಿಂದ ಕೂಡಿರುವ, ಕಿವಿಗಿಂಪಾದ ಗೀತ-ವಾದ್ಯಗಳಿಂದ ಶೋಭಿತವಾಗಿರುವ ಅರಮನೆಯನ್ನು ಕಂಡೆನು.

ಶೃಣೋಮಿ ಶಬ್ದಂ ತತ್ರಾಹಂ ನ ಪಶ್ಯಾಮಿ ಶರೀರಿಣಮ್ ।
ನ ಚ ಸ್ಥಲಂ ನ ಚಾನ್ಯಚ್ಚ ಪಾದಯೋಸ್ತಂ ಸಮಂತತಃ ॥ ೩೫ ॥

ಆದರೆ ಅಲ್ಲಿ ಕೇವಲ ಧ್ವನಿ ಮಾತ್ರ ಕೇಳಿಸುತ್ತಿತ್ತೇ ವಿನಾ ಒಂದು ಪ್ರಾಣಿಯಾಗಲೀ, ನೆಲಗಟ್ಟಾಗಲೀ, ಹೆಜ್ಜೆಯ ಚಿಹ್ನೆಯಾಗಲೀ, ಹೆಜ್ಜೆಯ ಗುರುತಾಗಲೀ ನನಗೆ ತಿಳಿಯಲಿಲ್ಲ. ಈ ಸನ್ನಿವೇಶದಿಂದ ಭಯದಿಂದ ನಡುಗುತ್ತಾ ಬದ್ಧಾಂಜಲಿಯಾಗಿ ಸುಮ್ಮನೆ ನಿಂತೆನು.

ತತೋ ಬ್ರಹ್ಮಾದಯೋ ದೇವಾ ಲೋಕಪಾಲಾಸ್ತಥೈವ ಚ ।
ಸನಂದನಾದ್ಯಾ ಮುನಯಸ್ತಥಾಽನ್ಯೇ ಪರಜೀವಿನಃ ॥ ೩೬ ॥

ಪ್ರಾಪ್ತಾಸ್ತತ್ರ ಸಭಾದ್ವಾರಿ ದೇವಗಂಧರ್ವಸತ್ತಮಾಃ ।
ಬ್ರಹ್ಮಾಣಂ ಪರತಃ ಕೃತ್ವಾ ಕೃತಾಂಜಲಿಪುಟಾಸ್ತದಾ ॥ ೩೭ ॥

ಇಷ್ಟರಲ್ಲಿ ಬ್ರಹ್ಮದೇವರನ್ನು ಮುಂದಿಟ್ಟುಕೊಂಡು ಸಮಸ್ತ ದೇವತೆಗಳು, ಲೋಕಪಾಲಕರು, ಸನಕ-ಸನಂದನಾದಿ ಮುನಿಗಳು, ದೇವ-ಗಂಧರ್ವಶ್ರೇಷ್ಠರೂ ಆ ಸಭಾದ್ವಾರಕ್ಕೆ ಬಂದು ಸೇರಿ ಕೃತಾಂಜಲಿಪುಟರಾಗಿ ಭಗವಂತನ ಮುಂದೆ ನಿಂತರು.

ತತಸ್ತದಂತರೇ ತಸ್ಮಿನ್ ಕ್ಷೀರೋದಾರ್ಣವಶೀಕರೈಃ ।
ಬೋಧ್ಯಮಾನೋ ಮಹಾವಿಷ್ಣುರಾವಿರ್ಭೂತ ಇವಾಬಭೌ ॥ ೩೮ ॥

ಅದೇ ಸಮಯಕ್ಕೆ ಸರಿಯಾಗಿ ಕ್ಷೀರಸಮುದ್ರದ ಅಲೆಗಳ ತುಂತುರುಗಳಿಂದ ಎಚ್ಚರಗೊಂಡಂತೆ ನಾರಾಯಣನು ಅಲ್ಲೇ ಮೇಲೆದ್ದು ಕಾಣಿಸಿದನು.

ಫಣಾಸಹಸ್ರಲೋಲಾಢ್ಯಂ ಶೇಷಮವ್ಯಕ್ತಸಂಸ್ಥಿತಮ್ ।
ಪಶ್ಯಾಮ್ಯಹಂ ಮುದಾಽಽಕಾಶೇ ಯಸ್ಯೋಪರಿ ಜನಾರ್ದನಮ್ ॥

ದೀರ್ಘವೃತ್ತೈಃ ಸಮೈಃ ಪೀನೈಃ ಕೇಯೂರವಲಯೋಜ್ಜ್ವಲೈಃ ।
ಚತುರ್ಭಿರ್ಬಾಹುಭಿರ್ಯುಕ್ತಂ ಲಕ್ಷ್ಮ್ಯಾಲಿಂಗಿತವಕ್ಷಸಮ್ ॥ ೪೦ ॥

ಪೀತಾಂಬರೇಣ ಸಂವೀತಂ ಕೌಸ್ತುಭೇನ ವಿರಾಜಿತಮ್ ।
ವಕ್ಷಃಸ್ಥಲೇನ ಸಂಯುಕ್ತಂ ಪದ್ಮಯಾಽಧಿಷ್ಠಿತೇನ ಚ ॥ ೪೧ ॥

ಈಷದುನ್ಮೀಲಿತಾಕ್ಷಂ ತಂ ಸರ್ವಕಾರಣಕಾರಣಮ್ ।
ಕ್ಷೀರೋದಸ್ಯೋಪರಿ ಬಭೌ ನೀಲಾಭ್ರಂ ಪರಮಂ ಯಥಾ ॥ ೪೨ ॥

ಸಹಸ್ರಹೆಡೆಗಳಿಂದ ಶೋಭಿಸುತ್ತಿದ್ದರೂ ಭಗವಂತನ ದಿವ್ಯತೇಜಸ್ಸಿನಲ್ಲಿ ಅವ್ಯಕ್ತನಾಗಿಯೇ ತೋರುತ್ತಿದ್ದ ಆದಿಶೇಷನ ಮೇಲೆ ದುಂಡಗಿರುವ, ಸಮವಾದ, ಕೇಯೂರ, ಕಂಕಣಗಳಿಂದ ಅಲಂಕೃತವಾದ ನಾಲ್ಕು ತೋಳುಗಳು, ಲಕ್ಷ್ಮೀದೇವಿಯಿಂದ ಅಲಂಕೃತವಾದ ವಕ್ಷಸ್ಥಲವು ಹೀಗೆ ಶೋಭಾಯಮಾನನಾದ ಜನಾರ್ದನನು ಅರೆಬಿರಿದ ಕಣ್ಣುಗಳಿಂದ ಮಲಗಿರುವ ದೃಶ್ಯವನ್ನು ಕಂಡೆನು. ಪೀತಾಂಬರ, ಕೌಸ್ತುಭಾದ್ಯಾಭರಣಗಳಿಂದ ಅಲಂಕೃತನಾಗಿದ್ದನು. ಹೀಗೆ ಸಮುದ್ರದ ಮೇಲೆ ನೀಲಮೇಘದಂತೆ ಶೋಭಿಸುತ್ತಿದ್ದನು.

ನ ಕಶ್ಚಿದ್ವದತೇ ಕಶ್ಚಿನ್ನ ವ್ಯಾಹರತಿ ಕಶ್ಚನ ।
ಬ್ರಹ್ಮಾದಿಸ್ತಂಭಪರ್ಯಂತಂ ಮಾಶಬ್ದಮಿತಿ ರೋಷಿತಮ್ ।
ಭ್ರುಕುಟೀಕುಟಿಲಾಕ್ಷಾಸ್ತೇ ನಾನಾಭೂತಗಣಾಃ ಸ್ಥಿತಾಃ ॥ ೪೩ ॥

ಆ ಮಹಾವಿಷ್ಣುವನ್ನು ಕಂಡು ಆನಂದ, ಆಶ್ಚರ್ಯಗಳಿಂದ ಮೈಮರೆತೆನು. ನಾನೇನು, ಅಲ್ಲಿ ಮೆರೆದಿರುವ ಬ್ರಹ್ಮಾದಿ ದೇವಗಣಗಳಲ್ಲಿ ಒಬ್ಬರೂ ಮಾತನಾಡಲಿಲ್ಲ. ಪರಸ್ಪರ ಸಂಭಾಷಣೆ ಇಲ್ಲ. ಅಲ್ಲಿ ಹುಬ್ಬುಗಂಟುಗಳಿಂದ ಭಯಂಕರ ಆಕಾರವುಳ್ಳ ಅನೇಕ ಬಗೆಯ ಭೂತಗಣಗಳು ವಕ್ರದೃಷ್ಟಿಯಿಂದ ನೋಡುತ್ತಾ ಬ್ರಹ್ಮಾದಿ ಸ್ತಂಭಪರ್ಯಂತವಾಗಿ ಬ್ರಹ್ಮಾದಿ ಸಮಸ್ತ ದೇವತೆಗಳ ಗುಂಪನ್ನು 'ಸದ್ದು-ಸದ್ದು' ಎಂದು ಎಚ್ಚರಿಸುತ್ತಿದ್ದವು.

ತತೋಽಚಿಂತ್ಯೋ ಹರಿಃ ಶ್ರೀಮಾನಾಲೋಕ್ಯ ಚ ಪಿತಾಮಹಮ್ ।
ಕೃತ್ವಾ ಚ ಪ್ರಸ್ಥಿತಂ ತತ್ರ ಜಗತಾಂ ಹಿತಕಾಮ್ಯಯಾ ॥ ೪೪ ॥

ಬಳಿಕ ಮಹಾವಿಷ್ಣುವು ಬ್ರಹ್ಮದೇವನನ್ನು ನೋಡಿ, ಲೋಕಹಿತಕ್ಕಾಗಿ ನೀವಿನ್ನು ಹೋಗಬಹುದು ಎಂದು ದೇವಸಮೂಹವನ್ನು ಕಳುಹಿಸಿಕೊಟ್ಟನು. ಬಳಿಕ ನನ್ನ ಕಡೆ ನೋಡಿ ಗರುಡ ಎಂದು ಕರೆದನು.

ತತೋಽಹಂ ಪ್ರಣಿಪತ್ಯಾಗ್ರೇ ಕೃತಾಂಜಲಿರವಸ್ಥಿತಃ ।
ಆಗಚ್ಛೇತಿ ಚ ಮಾಮುಕ್ತ್ವಾ ಪೂರ್ವೋತ್ತರಪಥಂ ಗತಃ ॥ ೪೫ ॥

ನಾನು ಮಹಾಭಯದಿಂದ ಮುಂದೆ ಹೋಗಿ ಕೈಜೋಡಿಸಿಕೊಂಡು ನಿಂತೆನು. ಅವನು ನನ್ನನ್ನು ಕುರಿತು ನೀನು ನನ್ನೊಡನೆ ಬಾ ಎಂದು ಹೇಳಿ ಪೂರ್ವೋತ್ತರ ದಿಕ್ಕಿನೆಡೆಗೆ ಹೊರಟನು.

ಅತೀವ ಮೃದುಭಾವೇನ ಗಚ್ಛನ್ನಿವ ಸ ದೃಶ್ಯತೇ ।
ಅಯುತಂ ನಿಯುತಂ ಚಾಹಂ ಪ್ರಯುತಂ ಚಾರ್ಬುದಂ ತಥಾ ।
ಪತಮಾನೋಽಹಮನಿಶಂ ಯೋಜನಾನಿ ತತಸ್ತತಃ ॥ ೪೬ ॥

ಪ್ರಯಾಣದಲ್ಲಿ ಅವನು ಬಹಳ ಮೆಲ್ಲಗೆ ನಡೆಯುವಂತೆ ತೋರಿತು. ಅವನನ್ನು ಹಿಂಬಾಲಿಸಿ ಹೋಗುತ್ತಿದ್ದ ನನಗಾದರೂ ಎಷ್ಟು ದೂರ ನಡೆದರೂ ತೀರದಂತೆ ಅಯುತ, ನಿಯುತ, ಪ್ರಯುತ, ಅರ್ಬುದ ಸಂಖ್ಯೆಯ ಅರ್ಥಾತ್ ಲಕ್ಷೋಪಲಕ್ಷ ಕೋಟಿ ಸಂಖ್ಯೆಯ ಯೋಜನಗಳು ಸಾಗಿದವು. ನನಗೆ ಮುಂದೆ ಹೋಗಲು ಸಾಧ್ಯವಿಲ್ಲದಂತೆ ತೋರಿತು. ಮುಂದೆ ಮುಂದೆ ಮುಗ್ಗರಿಸಿ ಬೀಳುವಂತಹ ಸ್ಥಿತಿಯು ಬಂದಿತು.

ನನು ತತ್ತ್ವಮಹಂ ಭಕ್ತೋ ವಿಷ್ಠಿತೋಽಸ್ಮಿ ಪ್ರಶಾಸ್ತು ನಃ ।
ಆಗಚ್ಛ ಗರುಡೇತ್ಯೇವಂ ಪುನರಾಹ ಸ ಮಾಧವಃ ॥ ೪೭ ॥

ಭಗವಂತನೇ, ನಾನು ನಿನ್ನ ಭಕ್ತನಾಗಿದ್ದೇನೆ. ನನಗೆ ಆಯಾಸವಾಗಿದೆ. ನನ್ನನ್ನು ರಕ್ಷಿಸು ಎಂದು ಬೊಬ್ಬೆ ಹೊಡೆದೆನು. ಆಗ ಮಾಧವನು ಗರುಡ, ನನ್ನ ಜೊತೆ ಬಾ ಎಂದು ಪುನಃ ಕರೆದನು.

ತತೋ ಭೂಯೋ ಹ್ಯಹಂ ಪಾತಂ ಪತಮಾನೋ ವಿಹಾಯಸಮ್ ।
ಆಜಗಾಮ ತತೋ ಘೋರಂ ಶತಕೋಟಿಸಮಾವೃತಮ್ ॥ ೪೮ ॥

ಪುನಃ ನಾನು ಹೊಸ ಶಕ್ತಿ ಬಂದಂತೆ ವೇಗದಿಂದ ಆಕಾಶಕ್ಕೆ ಹಾರಿ ಅವನನ್ನೇ ಹಿಂಬಾಲಿಸಿ ಹೊರಟೆನು. ಹಾಗೆ ಹೋಗುವಾಗ ನೂರಾರು ಕೋಟಿ ಯೋಜನಗಳಿಂದ ತುಂಬಿದ ಭಯಂಕರವಾದ ಸ್ಥಳವೊಂದು ಕಾಣಿಸಿತು.

ತಾಮಸಾನೀವ ಭೂತಾನಿ ಪರ್ವತಾಭಾನಿ ತತ್ರ ಹ ।
ಸಮಾನಾನೀವ ಪದ್ಮಾನಿ ತತೋಽಹಂ ಭೀತ ಆಸ್ಥಿತಃ ॥ ೪೯ ॥

ನೂರುಕೋಟಿ ಯೋಜನವನ್ನಾವರಿಸಿದ ಆ ಸ್ಥಳದಲ್ಲಿ ಅಂಧಕಾರ ಸ್ವರೂಪಗಳಾಗಿ ಬೆಟ್ಟದಂತೆ ಎತ್ತರವಾಗಿ, ಒಂದೇ ಸಮಾನ ಆಕಾರವುಳ್ಳ ಪದ್ಮಸಂಖ್ಯೆಯ ಭೂತಗಣಗಳನ್ನು ನೋಡಿದೆನು. ನೋಡಿದ ಕೂಡಲೇ ಹೃದಯದಲ್ಲಿ ನನಗೆ ಭಯವುಂಟಾಯಿತು.

ತತೋ ಮಾಂ ಕಿಂಕರೋ ಘೋರಃ ಶತಯೋಜನಮಾಯತಮ್ ।
ನಿಗೃಹ್ಯ ಪಾಣಿನಾ ತಸ್ಮಾಚ್ಚಿಕ್ಷೇಪ ಚ ಸ ಲೋಷ್ಟವತ್ ॥ ೫೦ ॥

ನಾನು ಭಯಪಡುತ್ತಿರುವಾಗಲೇ ಆ ಭೂತಗಣಗಳಿಂದ ಘೋರರೂಪಿಯಾದ ಕಿಂಕರನೊಬ್ಬನು ಬಂದು ಶತಯೋಜನಗಳ ವಿಸ್ತಾರವುಳ್ಳ ನನ್ನನ್ನು ಕೈಯಿಂದ ಹಿಡಿದೆತ್ತಿ ಮಣ್ಣುಂಡೆಯನ್ನು ಹೇಗೋ ಹಾಗೆ ದೂರಕ್ಕೆ ಎಸೆದುಬಿಟ್ಟನು.

ತತ್ತಮೋಽಹಮತಿಕ್ರಮ್ಯ ಹ್ಯಾಪಂ ಚೈವ ವಿಹಾಯಸಮ್ ।
ಹುಂಕಾರಘೋಷಂ ತತ್ರಾಹಮಶನೀಪಾತಸನ್ನಿಭಾನ್ ।
ಕರ್ಣಮೂಲೇ ಹ್ಯಶೃಣ್ವಂತಸ್ತತೋ ಭೂತೈಃ ಸಮಾಸ್ಥಿತಃ ॥ ೫೧ ॥

ತತೋಽಹಂ ದೇವದೇವೇಶ ತ್ರಾಹಿ ಮಾಂ ಪುಷ್ಕರೇಕ್ಷಣ ।
ಇತ್ಯಬ್ರುವಮಹಂ ತತ್ರ ತತೋ ವಿಷ್ಣುರುವಾಚ ಮಾಮ್ ॥ ೫೨ ॥

ನಾನು ಆ ಅಂಧಕಾರಪ್ರದೇಶದಿಂದ ಹೊರಗೆ ಹೋಗಿ ಅವನು ಎಸೆದ ವೇಗದಿಂದ ಅಂತರಿಕ್ಷಮಾರ್ಗದಲ್ಲಿದ್ದೆನು. ಇಷ್ಟರಲ್ಲಿ ಸಿಡಿಲಿನಂತೆ ಮಹಾಘೋರವಾದ ಹೂಂಕಾರದ ಘೋಷವೊಂದು ನನ್ನ ಕಿವಿಗೆ ಅಪ್ಪಳಿಸಿತು. ಇದೇನೆಂದು ದಿಗ್ಭ್ರಾಂತವಾಗಿ ನೋಡುತ್ತಿರುವಾಗಲೇ ದೇವದೇವೇಶನೇ, ಪುಷ್ಕರೇಕ್ಷಣನೇ, ನನ್ನನ್ನು ರಕ್ಷಿಸು ಎಂದು ಬೊಬ್ಬೆಹೊಡೆದೆನು. ಬಳಿಕ ವಿಷ್ಣುವು ನನ್ನನ್ನು ಕುರಿತು ಹೀಗೆ ಹೇಳಿದನು.

ಸುಷಿರಸ್ಯ ಮುಖೇ ಕಶ್ಚಿನ್ಮಾಂ ಚಿಕ್ಷೇಪ ಭಯಂಕರಃ ।
ಅತೀತೋಽಹಂ ಕ್ಷಣಾದಗ್ನಿಮಪಶ್ಯಂ ವಾಯುಮಂಡಲಮ್ ॥ ೫೩ ॥

ವಿಷ್ಣುವು ನನ್ನನ್ನು ಸಮಾಧಾನಪಡಿಸುತ್ತಿರುವ ಪ್ರಸಂಗದಲ್ಲಿಯೇ ಭಯಂಕರ ಪುರುಷನೊಬ್ಬನು ನನ್ನನ್ನು ಹಿಡಿದೆತ್ತಿ ಒಂದು ದೊಡ್ಡ ಗುಹೆಯ ಬಾಗಿಲಿನ ಕಡೆ ಬಿಸಾಡಿದನು. ಆಮೇಲೆ ಒಂದು ಕ್ಷಣದಲ್ಲಿಯೇ ನಾನು ಅಗ್ನಿಮಂಡಲವನ್ನು ದಾಟಿ ವಾಯುಮಂಡಲವನ್ನು ಸೇರಿದೆನು.

ಆಕಾಶಮಿವ ಸಂಪ್ರೇಕ್ಷ್ಯ ಕ್ಷೇಪ್ತುಕಾಮಮುಪಾಗತಃ ।
ತತ್ರಾಹಂ ದುಃಖಿತೋ ಭೂತಃ ಕ್ರೋಶಮಾನೋ ಹ್ಯವಸ್ಥಿತಃ ॥ ೫೪ ॥

ಅಲ್ಲಿಯೂ ಒಬ್ಬನು ಆಗಮಿಸಿ ನನ್ನನ್ನು ಹಿಡಿದೆತ್ತಿ ಆಕಾಶಕ್ಕೇ ಒಗೆಯುವ ದೃಷ್ಟಿಯಿಂದ ಬಂದದ್ದನ್ನು ಕಂಡು ನಾನು ದುಃಖದಿಂದ ಕೂಗಿಕೊಂಡೆನು.

ಕ್ಷಣಾಂತರೇಣ ಘೋರೇಣ ಕ್ರುದ್ಧೋ ಹಿ ಪರಮಾತ್ಮನಾ ।
ಸ್ವಪಕ್ಷರಾಜಿನಾ ದೃಷ್ಟ್ವಾ ಮಾಂ ಚಿಕ್ಷೇಪ ಭಯಂಕರಃ ॥ ೫೫ ॥

ಅಷ್ಟರಲ್ಲಿಯೇ ಕ್ಷಣಕಾಲದಲ್ಲಿಯೇ ಸ್ವಭಾವದಿಂದ ಕೋಪಿಷ್ಠನೂ, ಸ್ವಪಕ್ಷದಲ್ಲಿ ಪ್ರಮುಖನೂ ಆದ ಆ ಪುರುಷನು ನನ್ನನ್ನು ಹಿಡಿದು ಎಸೆದುಬಿಟ್ಟನು.

ಅನೇಕ ಗರುಡಕುಲಂ ಸಹಸ್ರಾದಿತ್ಯಸನ್ನಿಭಮ್ ।
ಮಾಂ ದೃಷ್ಟ್ವಾऽಪ್ಯಥ ಸಂಸ್ಥೇऽಥ ಹ್ಯಲ್ಪಕಾಲೋऽತಿದುರ್ಬಲಃ ॥ ೫೬ ॥

ಅಹೋ ವಿಹಂಗಮಃ ಪ್ರಾಪ್ತ ಇತಿ ವಿಸ್ಮಯಮಾನಸಾಃ ।
ಮಾಂ ದೃಷ್ಟ್ವೋಚುರಹಂ ತತ್ರ ಪಶ್ಯಾಮಿ ಗರುಡಧ್ವಜಮ್ ॥ ೫೭ ॥

ಸಹಸ್ರಯೋಜನಾಯಾಮಂ ಸಹಸ್ರಾದಿತ್ಯವರ್ಚಸಮ್ ।
ಸಹಸ್ರಗರುಡಾರೂಢಂ ಗರುಡಾಸ್ತೇ ಮಹಾಬಲಾಃ ॥ ೫೮ ॥

ಬಳಿಕ ನನಗೆ ನಾನು ಬಿದ್ದ ಜಾಗದಲ್ಲಿ ಸಹಸ್ರಸೂರ್ಯಪ್ರಭೆಯುಳ್ಳ ಅನೇಕ ಗರುಡಗಳು ಕಾಣಿಸಿದವು. ಆ ಗರುಡ ಪಕ್ಷಿಗಳೆಲ್ಲ ನನ್ನನ್ನು ನೋಡಿ, ಯಾವುದು ಈ ಸಣ್ಣಹಕ್ಕಿ? ಅಲ್ಪಾಯುಷಿಯೂ, ಅತಿದುರ್ಬಲವೂ ಆದ ಹಕ್ಕಿ ಎಲ್ಲಿಂದ ಆಗಮಿಸಿತು? ಎಂದು ವಿಸ್ಮಯದಿಂದ ನೋಡಲು ಬಂದವು. ಇಷ್ಟರಲ್ಲಿಯೇ ಆ ಗರುಡ ಸಮೂಹಗಳ ಹಿಂದೆ ಸಹಸ್ರ ಸೂರ್ಯಸಮಾನನೂ, ಸಹಸ್ರ ಯೋಜನ ಪ್ರಮಾಣವುಳ್ಳವನೂ ಆದ ಸಹಸ್ರ ಗರುಡಗಳ ಮೇಲೆ ಏರಿ ಮೆರೆಯುವವನೂ ಆದ ವಿಷ್ಣುವನ್ನು ಕಂಡೆನು.

ಅತ್ಯಾಶ್ಚರ್ಯಮಿಮಂ ದೇವ ವಪುಷಾऽಸ್ಮತ್ಕುಲೋದ್ಭವಃ ।
ಸ್ವಲ್ಪಪ್ರಾಣಃ ಸ್ವಲ್ಪಕಾಯಃ ಕೋऽಸೌ ಪಕ್ಷೀ ಇಹಾಗತಃ ॥ ೫೯ ॥

ಅಲ್ಲಿ ಮಹಾಬಲಿಷ್ಠರಾದ ಕೆಲವು ಮಂದಿ ಗರುಡರು ವಿಷ್ಣುವಿನ ಬಳಿ ಬಂದು ಓ ದೇವನೇ, ಇದೊಂದು ಆಶ್ಚರ್ಯವು. ಈ ಪಕ್ಷಿಯು ರೂಪದಲ್ಲಿ ನಮ್ಮ ಜಾತಿಯಂತೆ ಕಾಣಿಸುತ್ತಿದೆ. ಆದರೆ ಬಲದಿಂದ ಅಲ್ಪವಾಗಿದೆ. ಈ ಪಕ್ಷಿಯು ಎಲ್ಲಿಂದ ಬಂದಿತು? ಎಂದು ಹಾಸ್ಯಪೂರ್ವಕವಾಗಿ ಪ್ರಶ್ನಿಸಿದರು.

ತಚ್ಛ್ರುತ್ವಾಽಹಂ ನಷ್ಟಗರ್ವೋ ಭೀತೋ ಲಜ್ಜಾಸಮನ್ವಿತಃ ।
ಸ್ವಯಂ ಬುದ್ಧಶ್ಚ ಸಂವಿಗ್ನಸ್ತತೋ ಹ್ಯಶೃಣವಂ ಪುನಃ ॥ ೬೦ ॥

ಅವರ ಮಾತುಗಳನ್ನು ಕೇಳಿ ನಾನು ನಾಚಿಕೆಯಿಂದ ಗರ್ವವನ್ನು ಪರಿಹರಿಸಿಕೊಂಡು ಹೆದರಿಕೊಂಡು ಲಜ್ಜೆಯಿಂದ ಕೂಡಿದವನಾಗಿ ಭಯದಿಂದ ಕಂಗಾಲಾಗಿ ನಿಂತಿದ್ದೆನು. ಸ್ವಲ್ಪ ಹೊತ್ತಿನಲ್ಲಿಯೇ ನನಗೆ ನಾನೇ ಚೇತರಿಸಿಕೊಂಡು ಭಯದಿಂದ ಕಂಗಾಲಾಗಿದ್ದಾಗ ಪುನಃ ಒಂದು ಮಾತನ್ನು ಕೇಳಿಸಿಕೊಂಡೆನು.

ಆಗಚ್ಛ ಗರುಡೇತ್ಯೇವ ತತೋಽಹಂ ಯಾನಮಾಸ್ಥಿತಃ ।
ಪರಾರ್ಧ್ಯಂ ಚ ತತೋ ಗತ್ವಾ ಯೋಜನಾನಾಂ ಶತಂ ಪುನಃ ।
ತತ್ರಾಪಶ್ಯಮಹಂ ಯೋ ವೈ ಬ್ರಹ್ಮಾಣಂ ಪರಮೇಷ್ಠಿನಮ್ ॥ ೬೧ ॥

ಗರುಡ, ಬಾ ಎಂಬ ಧ್ವನಿಯು ಕೇಳಿಸಿತು. ಒಡನೆಯೇ ನಾನು ಅಲ್ಲಿಂದ ಹೊರಟೆನು. ನೂರು ಪರಾರ್ಧ ಯೋಜನಗಳಷ್ಟು ದೂರ ಓಡಿದೆನು. ಅಲ್ಲಿ ಒಂದು ಕಡೆ ಪರಮೇಷ್ಠಿಯಾದ ಬ್ರಹ್ಮನನ್ನು ನಾನು ನೋಡಿದೆನು.

ವ್ಯಾಖ್ಯಾನ ವಿಶೇಷ– ಗರುಡನ ಗರ್ವವನ್ನು ಪರಿಹರಿಸಲು ಭಗವಂತನು ಗರುಡನ ಸಹಾಯವೇ ಇಲ್ಲದೆ ತನ್ನ ಶಕ್ತಿಯಿಂದಲೇ ಕೋಟಿ ಕೋಟಿ ಯೋಜನ ದೂರ ವೇಗವಾಗಿ ಆಗಮಿಸಿದನು. ಅಂಧಂತಮಸ್ಸನ್ನು ದಾಟಿ ಅನಂತರಾದ ಮುಕ್ತಬ್ರಹ್ಮ, ಗರುಡರ ಆವಾಸಸ್ಥಾನವಾದ ಅನಂತಾಸನವೆಂಬ ತನ್ನ ಲೋಕಕ್ಕೆ ಹೋಗಿ ಅಲ್ಲಿ ತನ್ನ ವಾಹನವಾಗಿರುವ ಅನೇಕ ಗರುಡಗಳನ್ನು ತೋರಿಸಿ ಈ ರೀತಿಯಾದ ಅನಂತ ಬ್ರಹ್ಮಾಂಡಗಳಿಗೂ ನಾನೇ ಆಧಾರಭೂತನಾಗಿದ್ದೇನೆ ಎಂದು ಅನಂತ ಗರುಡರು, ಅನಂತ ಬ್ರಹ್ಮರೂ ನನ್ನ ಮುಂದೆ ಅಲ್ಪರಾಗಿದ್ದಾರೆ. ಆ ಅನಂತ ಗರುಡನಲ್ಲಿ ಒಬ್ಬ ಗರುಡನ ಮುಂದೆಯೂ ನೀನು ಅಲ್ಪನಾಗಿದ್ದಿ. ಹೀಗಿರಲು ನನ್ನನ್ನು ಹೊತ್ತೊಯ್ಯಲು ನಿನಗೆಲ್ಲಿಂದ ಸಾಮರ್ಥ್ಯ? ನನಗೆ ನೀನು ಆಧಾರನಾಗಲು ಸಾಧ್ಯವೇ? ಎಂಬ ಶಿಕ್ಷಣವನ್ನು ಅವನಿಗೆ ನೀಡುತ್ತಾ ತನ್ನ ಮಾಹಾತ್ಮ್ಯವನ್ನು ಗರುಡನಿಗೆ ತೋರಿಸಿದ ಎಂಬುದನ್ನು ಸಮಸ್ತ ಅಧ್ಯಾಯದ ತಾತ್ಪರ್ಯವನ್ನಾಗಿ ತಿಳಿಯಬೇಕು.

ತತ್ರಾಪಿ ಚಾಪರಂ ತತ್ರ ಶತಕೋಟಿಪಿತಾಮಹಾನ್ ।
ಪುನರೇಹೀತ್ಯುವಾಚೋಚ್ಚೈರ್ಭಗವಾನ್ ಮಧುಸೂದನಃ ॥ ೬೨ ॥

ಆ ತೆರಳಿದ ಪ್ರದೇಶದಲ್ಲಿಯೂ ಹಿಂದಿನಂತೆಯೇ ಇನ್ನೊಬ್ಬ ಬ್ರಹ್ಮನು ಕಾಣಿಸಿದನು. ಹೀಗೆಯೇ ಮೇಲೆ ಮೇಲೆ ನೂರಾರು ಕೋಟಿ ಬ್ರಹ್ಮದೇವರನ್ನು ನಾನು ನೋಡಿದೆನು. ಪುನಃ ಮಹಾವಿಷ್ಣುವು, ಮಧುಸೂದನನು ಗಂಭೀರವಾದ ಧ್ವನಿಯಿಂದ ಗರುಡನೇ ಬಾ ಎಂದು ಕರೆದನು.

ಮಹಾಕುಲಂ ತತೋಽಪಶ್ಯಂ ಪ್ರಮಾಣಾನಿ ತಮವ್ಯಯಮ್ ।
ಕಪಿತ್ಥಫಲಸಂಕಾಶೈರಂಧಕಾರೈಃ ಸಮಾಶ್ರಿತಮ್ ॥ ೬೩ ॥

ಅದರಂತೆ ನಾನು ಮುಂದೆ ಹೋಗುವಾಗ ಅಳತೆಗೆ ಸಿಗದಿರುವ, ಸಂಸಾರವೃಕ್ಷದಂತಿರುವ, ಅಕ್ಷಯವಾದ ಒಂದು ದೊಡ್ಡ ಬೇಲದ ಹಣ್ಣಿನ ಮರವೊಂದನ್ನು ಕಂಡೆನು. ಬಳಿಕ ಅಂಧಕಾರದಿಂದ ಆವೃತವಾದ ಅನೇಕ ಮೊಟ್ಟೆಗಳು ಕಾಣಿಸಿದವು.

ತತ್ರ ಸ್ಥಿತೋ ಹರಿಃ ಶ್ರೀಮಾನಂಡಮೇಕಂ ಬಿಭೇದ ಹ ।
ಮಹದ್ಭೂತಂ ಹಿ ಮಾಂ ಗೃಹ್ಯ ದತ್ವಾ ವೈ ಪ್ರಾಕ್ಷಿಪತ್ ಪುನಃ ॥ ೬೪ ॥

ಶ್ರೀಹರಿಯು ಆ ಮೊಟ್ಟೆಗಳ ಸಮುದಾಯದಲ್ಲಿ ಒಂದು ಮೊಟ್ಟೆಯನ್ನು ಭೇದಿಸಲು ಕೂಡಲೇ ಒಂದು ಮಹಾಭೂತವು ನನ್ನನ್ನು ಬಂದು ಹಿಡಿದುಕೊಂಡು ದೂರಕ್ಕೆ ಪುನಃ ನನ್ನನ್ನು ಬಿಸಾಡಿತು.

ತನ್ಮಧ್ಯೇ ಸಾಗರಾನ್ ಸಪ್ತ ಬ್ರಹ್ಮಾಣಂ ಚ ತಥಾ ಸುರಾನ್ ।
ಪಶ್ಯಾಮ್ಯಹಂ ಯಥಾಯೋಗಂ ಮಾತರಂ ಸ್ವಕುಲಂ ತಥಾ ॥ ೬೫ ॥

ಆಗ ನನಗೆ ಆ ಬಿದ್ದ ಜಾಗದ ನಡುವೆ ಸಪ್ತಸಮುದ್ರಗಳೂ, ಸೃಷ್ಟಿಕರ್ತನಾದ ಬ್ರಹ್ಮನು, ದೇವತೆಗಳು, ನನ್ನ ಸಜಾತೀಯರಾದ ಅನೇಕ ಗರುಡರು, ನನ್ನ ತಾಯಿಯಾದ ವಿನತೆಯು ಕಾಣಿಸಿದರು.

ಏವಂ ಮಯಾಽನುಭೂತಂ ಹಿ ತತ್ತಾನ್ವೇಷಣಕಾಂಕ್ಷಿಣಾ ।
ಶಿಬಿಕಾಸದೃಶಂ ಮಾಂ ವೈ ಪಶ್ಯಧ್ವಂ ಮುನಿಸತ್ತಮಾಃ ॥ ೬೬ ॥

ಓ ಮಹರ್ಷಿಗಳಿರಾ, ನಾನು ಆ ನಾರಾಯಣನ ತತ್ತ್ವವನ್ನು ತಿಳಿಯಬೇಕೆಂದು ಬಯಸಿ ಇಷ್ಟೆಲ್ಲ ಕಷ್ಟಗಳನ್ನು ಅನುಭವಿಸಿ ಬಂದೆನು. ನೀವೆಲ್ಲರೂ ನನ್ನನ್ನು ಹೊರುವ ಪಲ್ಲಕ್ಕಿ ಎಂದು ಭಾವಿಸಿರಿ. ಪಲ್ಲಕ್ಕಿಗೆ ಪ್ರೇರಕರಿಲ್ಲದೆ ಹೇಗೆ ಚಲಿಸದೋ ಹಾಗೆ ಭಗವಂತನ ಪ್ರೇರಣೆ ಇಲ್ಲದೆ ಗರುಡನೂ ಚಲಿಸಲಾರ, ಯಾರೂ ಚಲಿಸರೂ ಎಂಬುದನ್ನು ನನ್ನ ಕಥೆಯ ಮೂಲಕ ಅರ್ಥಮಾಡಿಕೊಳ್ಳಿರಿ.

ಇತ್ಯೇವಮಬ್ರವಂ ವಿಪ್ರಾನ್ ಭೀಷ್ಮ ಯನ್ಮೇ ಪುರಾऽಭವನ್ ।
ತತ್ತೇ ಸರ್ವಂ ಯಥಾನ್ಯಾಯಮುಕ್ತವಾನಸ್ಮಿ ಸತ್ತಮ ॥ ೬೭ ॥

ಈ ರೀತಿಯಾಗಿ ನಾನು ಬ್ರಾಹ್ಮಣರನ್ನು ಕುರಿತು ಉಪದೇಶಿಸಿದೆನು. ಎಲೈ ಭೀಷ್ಮನೇ, ನಾನು ಅಲ್ಲಿ ನನ್ನನ್ನು ಪ್ರಶ್ನೆ ಮಾಡಿದ ಬ್ರಾಹ್ಮಣರಿಗೆಲ್ಲ ಇದೇ ಅಭಿಪ್ರಾಯವನ್ನು ತಿಳಿಸಿದೆನು. ಅದನ್ನೇ ನಿನಗೂ ಹೇಳಿದ್ದೇನೆ.

ಯೋಗಿನಸ್ತಂ ಪ್ರಪಶ್ಯಂತಿ ಜ್ಞಾನಂ ದೃಷ್ಟ್ವಾ ಪರಂ ಹರಿಮ್ ।
ನಾನ್ಯಥಾ ಶಕ್ಯರೂಪೋऽಸೌ ಜ್ಞಾನಗಮ್ಯಃ ಪರಃ ಪುಮಾನ್ ॥ ೬೮ ॥

ಯೋಗಿಗಳು ತಮ್ಮ ಉತ್ತಮ ಜ್ಞಾನಬಲದಿಂದ ಭಗವಂತನನ್ನು ತಿಳಿಯಬಲ್ಲರೇ ಹೊರತು ಆ ಪರಮಪುರುಷನನ್ನು ಬೇರೆ ವಿಧದಿಂದ ತಿಳಿಯಲು ಅಸಾಧ್ಯವು. ಭಗವಂತನು ಜ್ಞಾನಗಮ್ಯನಾಗಿದ್ದಾನೆ.

ಅನನ್ಯಯಾ ಚ ಭಕ್ತ್ಯಾ ಚ ಪ್ರಾಪ್ತುಂ ಶಕ್ಯೋ ಮಹಾಹರಿಃ ॥ ೬೯ ॥

ಅನನ್ಯವಾದ ಭಕ್ತಿಯಿಂದಲೂ ಅವನನ್ನು ಹೊಂದಲು ಸಾಧ್ಯವಾಗುತ್ತದೆ.

ಭೀಷ್ಮಃ

ಇತ್ಯೇವಮುಕ್ತ್ವಾ ಭಗವಾನ್ ಸುಪರ್ಣಃ ಪಕ್ಷಿರಾಟ್ ಪ್ರಭುಃ ।
ಆಮಂತ್ರ್ಯ ಜನನೀಂ ಮೇ ವೈ ತತ್ರೈವಾಂತರಧೀಯತ ॥ ೭೦ ॥

ಭೀಷ್ಮ– ಧರ್ಮಪುತ್ರನೇ, ಪಕ್ಷಿರಾಜನಾದ ಗರುಡದೇವನು ಈ ವಿಷಯವನ್ನು ತಿಳಿಸಿ ಬಳಿಕ ನನ್ನ ತಾಯಿಯಾದ ಗಂಗಾದೇವಿಯ ಅನುಮತಿಯನ್ನು ಪಡೆದು ಅಲ್ಲೇ ಅದೃಶ್ಯನಾದನು.

ತಸ್ಮಾದ್ ರಾಜೇಂದ್ರ ಸರ್ವಾತ್ಮಾ ವಾಸುದೇವಃ ಪ್ರಧಾನಕೃತ್ ।
ಜ್ಞಾನೇನ ಭಕ್ತ್ಯಾ ಸುಲಭೋ ನಾನ್ಯಥೇತಿ ಮತಿರ್ಮಮ ॥ ೭೧ ॥

ಆದ್ದರಿಂದ ಜ್ಞಾನ-ಭಕ್ತಿಗಳಿಲ್ಲದೆ ಸರ್ವಾಂತರ್ಯಾಮಿಯಾದ ಆ ವಾಸುದೇವನು ಸುಲಭನಲ್ಲ ಎಂದು ನನ್ನ ಅಭಿಪ್ರಾಯ ಎಂದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಏಕಾಧಿಕದ್ವಿಶತತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಮೂವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಗುರು-ಶಿಷ್ಯ ಸಂವಾದದಿಂದ ಅಧ್ಯಾತ್ಮ ತತ್ತ್ವವನ್ನು ತಿಳಿಸಿದುದು.

ಯುಧಿಷ್ಠಿರಃ

ಯೋಗಂ ಮೇ ಪರಮಂ ತಾತ ಮೋಕ್ಷಸ್ಯ ವದ ಭಾರತ ।
ತಮಹಂ ತತ್ತ್ವತೋ ಜ್ಞಾತುಮಿಚ್ಛಾಮಿ ವದತಾಂ ವರ ॥ ೧ ॥

ಯುಧಿಷ್ಠಿರ– ಪಿತಾಮಹನೇ, ಮೋಕ್ಷಕ್ಕೆ ಸಾಧನವಾದ ಉತ್ತಮ ಜ್ಞಾನಯೋಗವನ್ನು ನಿನ್ನಿಂದ ತಿಳಿಯಲು ನಾನು ಅಪೇಕ್ಷಿಸುತ್ತೇನೆ.

ಭೂಯೋऽಪಿ ಜ್ಞಾನಸದ್ಭಾವೇ ಸ್ಥಿತ್ಯರ್ಥಂ ತ್ವಾಂ ಬ್ರವೀಮ್ಯಹಮ್ ।
ಅಚಿಂತ್ಯಂ ವಾಸುದೇವಾಖ್ಯಂ ತಸ್ಮಾತ್ ಪ್ರಬ್ರೂಹಿ ಸತ್ತಮ ॥ ೨ ॥

ಆ ಜ್ಞಾನಯೋಗದಲ್ಲಿ ಸ್ಥಿರವಾಗಿ ನಿಲ್ಲಬೇಕೆಂಬ ಉದ್ದೇಶದಿಂದಲೇ ಅಚಿಂತ್ಯನಾದ ವಾಸುದೇವನ ನಿಜಸ್ವರೂಪವನ್ನು ಪುನಃ ಪುನಃ ತಿಳಿಯಲು ಬಯಸುತ್ತಿದ್ದೇನೆ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಸಂವಾದಂ ಮೋಕ್ಷಸಂಯುಕ್ತಂ ಶಿಷ್ಯಸ್ಯ ಗುರುಣಾ ಸಹ ॥ ೩ ॥

ಭೀಷ್ಮ– ಧರ್ಮಪುತ್ರನೇ, ಇದಕ್ಕೆ ಸಂಬಂಧಿಸಿದಂತೆ ಪುರಾತನವಾದ ಗುರು-ಶಿಷ್ಯ ಸಂವಾದದ ಇತಿಹಾಸವನ್ನು ಉದಾಹರಿಸುತ್ತಾರೆ. ಮೋಕ್ಷವಿಷಯಕವಾದ ಆ ಸಂವಾದವನ್ನೇ ನಿನಗೆ ತಿಳಿಸುತ್ತೇನೆ.

ಕಶ್ಚಿದ್ ಬ್ರಾಹ್ಮಣಮಾಸೀನಮಾಚಾರ್ಯಮೃಷಿಸತ್ತಮಮ್ ।
ತೇಜೋರಾಶಿಂ ಮಹಾತ್ಮಾನಂ ಸತ್ಯಸಂಧಂ ಜಿತೇಂದ್ರಿಯಮ್ ॥ ೪ ॥

ಬ್ರಹ್ಮರ್ಷಿಶ್ರೇಷ್ಠನಾದ ಒಬ್ಬ ಆಚಾರ್ಯಪುರುಷನಿದ್ದನು. ಅವನು ಮಹಾತೇಜಸ್ವಿಯೂ, ಸತ್ಯಸಂಧನೂ, ಜಿತೇಂದ್ರಿಯನೂ, ಮಹಾತ್ಮನೂ ಆಗಿದ್ದನು.

ಶಿಷ್ಯಃ ಪರಮಮೇಧಾವೀ ಶ್ರೇಯೋರ್ಥೀ ಸುಸಮಾಹಿತಃ ।
ಚರಣಾವುಪಸಂಗೃಹ್ಯ ಸ್ಥಿತಃ ಪ್ರಾಂಜಲಿರಬ್ರವೀತ್ ॥ ೫ ॥

ಅವನಿಗೆ ಅವನಂತೆ ಮೇಧಾವಿಯಾದ, ಜಿತೇಂದ್ರಿಯನಾದ ಒಬ್ಬ ಶಿಷ್ಯನಿದ್ದನು. ತನ್ನ ಶ್ರೇಯಸ್ಸಿಗಾಗಿ ಯಾವಾಗಲೂ ಭಗವದುಪಾಸನೆ ಮಾಡುತ್ತಿದ್ದನು. ಒಂದು ಬಾರಿ ಶಿಷ್ಯನು ಗುರುವಿನ ಪಾದವನ್ನು ಹಿಡಿದುಕೊಂಡು ಕೈಮುಗಿದು ಹೀಗೆ ಹೇಳಿದನು.

ಉಪಾಸನಾತ್ ಪ್ರಸನ್ನೋಽಸಿ ಯದಿ ವೈ ಭಗವನ್ಮಮ ।
ಸಂಶಯೋ ಮೇ ಮಹಾನ್ ಕಶ್ಚಿತ್ತನ್ಮೇ ವ್ಯಾಖ್ಯಾತುಮರ್ಹಸಿ ।
ಕುತಶ್ಚಾಹಂ ಕುತಶ್ಚ ತ್ವಂ ತತ್ ಸಮ್ಯಗ್ ಬ್ರೂಹಿ ಯತ್ ಪರಮ್ ॥೬॥

ಆಚಾರ್ಯನೇ, ನೀನು ನನ್ನ ಶುಶ್ರೂಷೆಗೆ ಪ್ರಸನ್ನನಾಗಿರುವುದಾದಲ್ಲಿ ನನ್ನದೊಂದು ಸಂದೇಹವಿದೆ. ಅದನ್ನು ನೀಗಿಸಬೇಕು. ಈ ಸಂಶಯವು ನಿರಂತರವೂ ನನ್ನ ಮನಸ್ಸನ್ನು ಕಳವಳಗೊಳಿಸಿದೆ. ನಾನು ಎಲ್ಲಿಂದ ಬಂದೆನು? ನೀನೆಲ್ಲಿಂದ ಬಂದಿರುವಿ? ನಮ್ಮೆಲ್ಲರಿಗಿಂತಲೂ ಉತ್ತಮವಾದ ವಸ್ತುವು ಯಾವುದ?

ಕಥಂ ಚ ಸರ್ವಭೂತೇಷು ಸಮೇಷು ದ್ವಿಜಸತ್ತಮ ।
ಸಮ್ಯಗ್ ವೃತ್ತಾ ನಿವರ್ತಂತೇ ವಿಪರೀತಾಃ ಕ್ಷಯೋದಯಾಃ ॥ ೭ ॥

ಲೋಕದಲ್ಲಿ ಎಲ್ಲಾ ಪ್ರಾಣಿಗಳೂ ಪಂಚಭೂತಗಳಿಂದ ಸೃಷ್ಟಿಯನ್ನು ಹೊಂದಿರುವಾಗ ಈ ಜನನ-ಮರಣಗಳಲ್ಲಿ ಇಂತಹ ವೈಪರೀತ್ಯಕ್ಕೆ, ವಿಷಮತೆಗೆ ಕಾರಣವೇನು?

ವೇದೇಷು ಚಾಪಿ ಯದ್ವಾಕ್ಯಂ ಲೌಕಿಕಂ ವ್ಯಾಪಕಂ ಚ ಯತ್ ।
ಏತದ್ ವಿದ್ವನ್ ಯಥಾತತ್ತ್ವಂ ಸರ್ವಂ ವ್ಯಾಖ್ಯಾತುಮರ್ಹಸಿ ॥ ೮ ॥

ವೇದಗಳಲ್ಲಿಯೂ ವರ್ಣವಿಭಾಗಗಳನ್ನು ಏಕೆ ಮಾಡಿದ್ದಾರೆ? ಬೇರೆ ಬೇರೆ ಧರ್ಮಗಳ ವಿವರಣೆಯನ್ನು ಏಕೆ ನೀಡಿದ್ದಾರೆ? ಸ್ಮೃತಿವಾಕ್ಯಗಳು ಆ ವೇದವನ್ನೇ ಏಕೆ ಅನುಸರಿಸುತ್ತಿವೆ? ಇದನ್ನು ತಿಳಿಸಿ ಸಂಶಯವನ್ನು ಪರಿಹರಿಸಿ.

ಗುರುಃ

ಶೃಣು ಶಿಷ್ಯ ಮಹಾಪ್ರಾಜ್ಞ ಬ್ರಹ್ಮ ಗುಹ್ಯಮಿದಂ ಪರಮ್ ।
ಅಧ್ಯಾತ್ಮಂ ಸರ್ವಭೂತಾನಾಮಾಗಮಾನಾಂ ಚ ಯದ್ವಸು ॥ ೯ ॥

ಗುರು– ನೀನು ಕೇಳುವ ವಿಚಾರವು ಬ್ರಹ್ಮಗುಹ್ಯವೆನಿಸಿದೆ. ಅಧ್ಯಾತ್ಮವೆನಿಸಿದೆ. ಸಮಸ್ತ ಜೀವರಿಗೂ ಇದೇ ಸಂಪತ್ತು. ಈ ಆಗಮಗಳಲ್ಲಿ ತುಂಬಿರುವ ಸಂಪತ್ತೇ ಇದು.

ವಾಸುದೇವಃ ಸರ್ವಮಿದಂ ವಿಶ್ವಸ್ಯ ಬ್ರಹ್ಮಣೋ ಮುಖಮ್ ।
ಸತ್ಯಂ ದಾನಮಥೋ ಯಜ್ಞಸ್ತಿತಿಕ್ಷಾ ದಮ ಆರ್ಜವಮ್ ॥ ೧೦ ॥

ಪುರುಷಂ ಸನಾತನಂ ವಿಷ್ಣುಂ ಯತ್ತದ್ವೇದವಿದೋ ವಿದುಃ ।
ಸರ್ಗಪ್ರಳಯಕರ್ತಾರಮವ್ಯಕ್ತಂ ಬ್ರಹ್ಮ ಶಾಶ್ವತಮ್ ॥ ೧೧ ॥

ಜಗತ್ತೆಲ್ಲವೂ ವಾಸುದೇವನಿಂದಲೇ ವ್ಯಾಪ್ತವಾಗಿದೆ ಎಂದು ತಿಳಿ. ವೇದದ ಮುಖವೆನಿಸಿಕೊಂಡ ಪ್ರಣವವು ಅವನೇ ಆಗಿದ್ದಾನೆ. ಸತ್ಯ, ದಾನ, ತಪಸ್ಸು, ಯಜ್ಞ, ತಿತಿಕ್ಷ, ದಮ, ಆರ್ಜವ ಇವುಗಳಿಂದ ಲಭ್ಯನಾದ ಸನಾತನ ಪುರುಷನಾದ ವಿಷ್ಣುವನ್ನು ವೇದಜ್ಞರು ಕೊಂಡಾಡುತ್ತಾರೆ. ಅವನು ಸೃಷ್ಟಿ-ಸ್ಥಿತಿ-ಪ್ರಳಯಗಳನ್ನು ಮಾಡುವ ಅವ್ಯಕ್ತನಾದ, ಗುಣಪರಿಪೂರ್ಣನಾದ ಶಾಶ್ವತ ವಸ್ತುವಾಗಿದ್ದಾನೆ.

ತದಿದಂ ಬ್ರಹ್ಮ ವಾಷ್ಣೇಯಮಿತಿಹಾಸಂ ಶೃಣುಷ್ವ ಮೇ ।
ಬ್ರಾಹ್ಮಣೋ ಬ್ರಾಹ್ಮಣೈಃ ಶ್ರಾವ್ಯೋ ರಾಜನ್ ಯಃ ಕ್ಷತ್ರಿಯೈಸ್ತಥಾ ।
ವೈಶ್ಯೋ ವೈಶ್ಯೈಸ್ತಥಾ ಶ್ರಾವ್ಯಃ ಶೂದ್ರಃ ಶೂದ್ರೈರ್ಮಹಾಮನಾಃ ॥೧೨॥

ಈ ರೀತಿಯಾದ ಗುಣಪರಿಪೂರ್ಣವಾದ ವಸ್ತುವನ್ನು ವಾರ್ಷ್ಣೇಯ ಎಂದು ಕರೆಯುತ್ತಾರೆ. ಇಂತಹ ಇತಿಹಾಸವನ್ನು ಹೇಳುತ್ತೇನೆ, ಕೇಳು. ಬ್ರಾಹ್ಮಣರು ಬ್ರಾಹ್ಮಣರಿಂದಲೂ, ಕ್ಷತ್ರಿಯರು ಕ್ಷತ್ರಿಯರಿಂದಲೂ, ವೈಶ್ಯರು ವೈಶ್ಯರಿಂದಲೂ, ಶೂದ್ರರು ಶೂದ್ರರಿಂದಲೂ ಕೇಳಿ ತಿಳಿಯಬಹುದು.

ಮಾಹಾತ್ಮ್ಯಂ ದೇವದೇವಸ್ಯ ವಿಷ್ಣೋರಮಿತತೇಜಸಃ ।
ಅರ್ಹಸ್ತ್ವಮಸಿ ಕಲ್ಯಾಣ ವಾರ್ಷ್ಣೇಯಂ ಶೃಣು ಯತ್ ಪರಮ್ ॥೧೩॥

ದೇವದೇವನಾದ, ಅಮಿತತೇಜಸ್ವಿಯಾದ ಭಗವಂತನ ಮಹಾಮಹಿಮೆಯನ್ನು ಕೇಳಿ ತಿಳಿಯಬಹುದು. ಅದನ್ನು ಕೇಳುವುದಕ್ಕೆ ನೀನು ಯೋಗ್ಯನಾಗಿರುವಿ. ವಾರ್ಷ್ಣೇಯವೆನಿಸಿದ ಈ ಉತ್ತಮವಾದ ಇತಿಹಾಸವನ್ನು ನಿನಗೆ ಹೇಳುತ್ತೇನೆ.

ಯಮಚ್ಯುತಂ ಪರಂ ನಿತ್ಯಂ ಲಿಂಗಹೀನಂ ಚ ನಿರ್ಮಲಮ್ ।
ನಿರ್ವಾಣಮಮೃತಂ ಶ್ರೇಮತ್ ತದ್ವಿಷ್ಣೋಃ ಪರಮಂ ಪದಮ್॥ ೧೪ ॥

ಯಾವ ಅಚ್ಯುತ ಎನಿಸಿದ, ಪರಮವಾದ, ನಿತ್ಯವಾದ ವಸ್ತುವಿದೆಯೋ ಅದು ಒಂದು ಯುಕ್ತಿಯಿಂದ ನಿರ್ಣಯಿಸುವಂತಹದ್ದಲ್ಲ, ನಿರ್ಮಲವಾದುದು. ಆ ವಿಷ್ಣುವಿನ ಸ್ಥಾನವೇ ನಿರ್ವಾಣ ಎನಿಸಿದೆ. ಮೋಕ್ಷವೆನಿಸಿದೆ. ಐಶ್ವರ್ಯಸಂಪನ್ನವಾಗಿದೆ.

ಭವೇ ಚ ಭೇದವದ್ಭಿನ್ನಂ ಪ್ರದಾನಂ ಗುಣಕಾರಕಮ್ ।
ತಸ್ಮಿನ್ನ ಸಜ್ಯತೇ ನಿತ್ಯಂ ಸ ಏಷ ಪುರುಷೋऽಪರಃ ॥ ೧೫ ॥

ಗುಣಗಳಿಗೆ ಕಾರಣವಾದ ಪ್ರಕೃತಿಯು ಪ್ರತೀ ಸಂಸಾರದಲ್ಲಿಯೂ ಭಿನ್ನ ಭಿನ್ನ ಲಕ್ಷಣಗಳಿಂದ ಕಾಣಿಸುತ್ತದೆ. ಆ ಪ್ರಕೃತಿಯ ಸಂಬಂಧವನ್ನು ಹೊಂದದೇ ಇರುವ ಈ ಪುರುಷನು ಪ್ರಕೃತಿಯಿಂದ ಭಿನ್ನನೆನಿಸಿದ ನಿತ್ಯನಾಗಿದ್ದಾನೆ.

ಪುರುಷಾಧಿಷ್ಠಿತಂ ನಿತ್ಯಂ ಪ್ರಧಾನಂ ಬ್ರಹ್ಮ ಕಾರಣಮ್ ।
ಕಾಲಸ್ವರೂಪಂ ರೂಪೇಣ ವಿಷ್ಣುನಾ ಪ್ರಭವಿಷ್ಣುನಾ ॥ ೧೬ ॥

ಕ್ಷೋಭ್ಯಮಾಣಂ ಸೃಜತ್ಯೇವ ನಾನಾಭೂತಾನಿ ಭಾಗಶಃ ।
ತದ್ ದೃಷ್ಟ್ವಾ ಪುರುಷೋ ತತ್ವಂ ಸಾಕ್ಷೀ ಭೂತ್ವಾ ಪ್ರವರ್ತತೇ ।
ತತ್ ಪ್ರವಿಶ್ಯ ಯಥಾಯೋಗಮಭಿನ್ನೋ ಭಿನ್ನಲಕ್ಷಣಃ ॥ ೧೭ ॥

ಪುರುಷನಿಂದ ಅಧಿಷ್ಠಿತವಾಗಿ, ವ್ಯಾಪಕವಾಗಿ, ಲೋಕಕ್ಕೆ ಕಾರಣವಾಗಿ ಕಾಲ ರೂಪವೆನಿಸಿದ ಪ್ರಧಾನವು ಸರ್ವಶಕ್ತನಾದ ವಿಷ್ಣುವಿನಿಂದ ಕ್ಷೋಭೆಗೆ ತುತ್ತಾದಾಗ ನಾನಾ ಭೂತಗಳ ರೂಪದಲ್ಲಿ ಸೃಷ್ಟಿಯನ್ನು ಹೊಂದುತ್ತದೆ. ಇದೇ ಭೂತಸೃಷ್ಟಿ. ಪುರುಷನು ಸಾಕ್ಷೀಭೂತನಾಗಿದ್ದುಕೊಂಡು ಆ ವಸ್ತುವಿನ ಒಳಗದೆ ತಾನೇ ಪ್ರವೇಶ ಮಾಡಿ ಸ್ವಯಂ ತನ್ನ ಅನೇಕ ರೂಪಗಳಲ್ಲಿ ಭೇದವಿಲ್ಲದಿದ್ದರೂ ವಿಶೇಷ ಬಲದಿಂದ ಭಿನ್ನ ಲಕ್ಷಣಗಳನ್ನು ಹೊಂದಿದವನಾಗಿ ಆಯಾ ಪದಾರ್ಥಗಳನ್ನು ಪ್ರವೇಶಿಸುತ್ತಾನೆ.

ವ್ಯಾಖ್ಯಾನ ವಿಶೇಷ– 'ತತ್‌ಸೃಷ್ಟ್ವಾ ತದೇವಾನುಪ್ರಾವಿಶತ್ । ತದನುಪ್ರವಿಶ್ಯ ಸಚ್ಚತ್ಯಚ್ಚಾಭವತ್' ಎಂಬ ತೈತ್ತಿರೀಯ ಮಂತ್ರದ ವಿವರಣೆಯನ್ನು ಇಲ್ಲಿನೋಡಬಹುದು.

ಕಾಲಚಕ್ರಮನಾದ್ಯಂತಂ ಭಾವಾಭಾವಸ್ವಲಕ್ಷಣಮ್ ।
ತ್ರೈಲೋಕ್ಯಂ ಸರ್ವಭೂತೇಷು ಚಕ್ರವತ್ ಪರಿವರ್ತತೇ ॥ ೧೮ ॥

ಈ ಕಾಲಚಕ್ರವು ಆದಿ-ಅಂತ್ಯಗಳಿಲ್ಲದೆ ಇರುವಂತಹದ್ದು. ಭಾವಾಭಾವ ಎಂಬ ಲಕ್ಷಣಗಳಿಂದ ಕೂಡಿದೆ. ಮೂರುಲೋಕಗಳಲ್ಲಿರುವ ಸರ್ವಭೂತಗಳಲ್ಲಿಯೂ ಕಾಲಚಕ್ರವು ಪರಿವರ್ತನೆಯನ್ನು ಹೊಂದುತ್ತಿರುತ್ತದೆ.

ಯತ್ತದಕ್ಷರಮವ್ಯಕ್ತಮಮೃತಂ ಬ್ರಹ್ಮ ಶಾಶ್ವತಮ್ ।
ವದಂತಿ ಪುರುಷವ್ಯಾಘ್ರಂ ಕೇಶವಂ ಪುರುಷರ್ಷಭಮ್ ॥ ೧೯ ॥

ತದಕ್ಷರಮಚಿಂತ್ಯಂ ವೈ ಭಿನ್ನರೂಪೇಣ ದೃಶ್ಯತೇ ।
ಪಶ್ಯ ಕಾಲಾಖ್ಯಮನಿಶಂ ನ ಚೋಷ್ಣಂ ನಾತಿಶೀತಲಮ್ ॥ ೨೦ ॥

ಆ ಬ್ರಹ್ಮನೆಂಬ ವಸ್ತುವು ನಾಶರಹಿತವಾದುದು. ಅಚಿಂತ್ಯವಾದುದು. ಸ್ವಯಂ ಅಭಿನ್ನವಾದರೂ ಭಿನ್ನರೂಪದಿಂದ ಕಾಣಿಸುತ್ತದೆ. ಅಚಿಂತ್ಯವಾದ ಆ ಕಾಲಸ್ವರೂಪವನ್ನು ನೀನೇ ನೋಡು. ಈ ಕಾಲಸ್ವರೂಪಕ್ಕೆ ಶೀತೋಷ್ಣಾದಿ ಗುಣಭೇದಗಳು ಇರುವುದಿಲ್ಲ.

ನ ಸಂತ್ಯೇತೇ ಗುಣಾಸ್ತಸ್ಮಿಂಸ್ತಥಾ ತಸ್ಮಾತ್ ಪ್ರವರ್ತತೇ ।
ಶೀತೋಽಯಂಸಮನುಪ್ರಾಪ್ತಃ ಕಾಲೋ ಗ್ರೀಷ್ಮಸ್ತಥೈವ ಚ ॥ ೨೧ ॥

ಈ ಸ್ಪರ್ಶಾದಿ ಪ್ರಾಕೃತಗುಣಗಳು ಪ್ರಕೃತಿಯಲ್ಲಿ ಇರುವುದಿಲ್ಲ. ಆ ರೀತಿಯಾಗಿ ಕಾಲಚಕ್ರವು ಮುಂದುವರೆಯುತ್ತಿರುತ್ತದೆ. ಇದು ಶೀತಕಾಲ, ಇದು ಗ್ರೀಷ್ಮ ಕಾಲವು ಎಂದು ಹೇಳುತ್ತಾರೆ. ಈ ಗುಣಗಳು ಕಾಲದಲ್ಲಿಲ್ಲ. ಗುಣಗಳೆಲ್ಲವೂ ಕಾಲವನ್ನು ಅನುಸರಿಸುತ್ತವೆ.

ವಕ್ಷ್ಯಂತಿ ಸರ್ವಭೂತಾನಿ ಹ್ಯೇತೇ ಸೂರ್ಯೋದಯಂ ಪ್ರತಿ ।
ನ ಗಚ್ಛತಿ ನಿವರ್ತಂತಿ ಸ ಕಾಲೋ ವ್ಯಾಪ್ಯ ತಿಷ್ಠತಿ ॥ ೨೨ ॥

ಸಮಸ್ತ ಭೂತಗಳು ಸೂರ್ಯೋದಯವಾದಾಗ ಕಾಲ ಬಂದಿತು ಎನ್ನುತ್ತಾರೆ. ಅಸ್ತಮಾನವಾದಾಗ ಕಾಲ ಹೋಯಿತು ಎನ್ನುತ್ತಾರೆ. ಅಂತಹ ಕಾಲವು ಅರ್ಥಾತ್ ಕಾಲನಿಯಾಮಕನಾದ ಭಗವಂತನು ಬರುವುದೂ ಇಲ್ಲ, ಹೋಗುವುದೂ ಇಲ್ಲ. ಎಲ್ಲೆಡೆಯೂ ವ್ಯಾಪಿಸಿ ಇರುತ್ತಾನೆ.

ನ ಚೈವ ಪ್ರಕೃತಿಸ್ಥೇನ ಕಾಲಯುಕ್ತೇನ ನಿತ್ಯಶಃ ।
ಗುಣೈಃ ಸಂಭೋಗಮರತಿಸ್ತತ್ತ್ವವಿಜ್ಞಾನಕೋವಿದಮ್ ।
ಪುರುಷಾಧಿಷ್ಠಿತಾ ನಿತ್ಯಂ ಪ್ರಕೃತಿಃ ಸೂಯತೇ ಪರಾ ॥ ೨೩ ॥

ಗುಣಜನ್ಯಗಳಾದ ಸುಖ-ದುಃಖಗಳು ಯಾವಾಗಲೂ ಗುಣಗಳಿಂದ ಸುಖವನ್ನೂ, ದುಃಖವನ್ನೂ ನೀಡುತ್ತವೆ. ಆದರೆ ಇದೆಲ್ಲವೂ ಅಜ್ಞಾನಿಗಳಿಗೆ ಮಾತ್ರ. ತತ್ತ್ವಜ್ಞಾನಿಯಾದವನಿಗೆ ಗುಣಜನ್ಯವಾದ ಈ ಸುಖ-ದುಃಖಗಳು ಮುಟ್ಟಲಾರವು. ಮೂಲಪ್ರಕೃತಿಯು ಭಗವಂತನನ್ನಾಶ್ರಯಿಸಿ ಈ ಜಗತ್ತನ್ನು ಸೃಷ್ಟಿಸುತ್ತದೆ.

ಪಿತೄನ್ ದೇವಾನೃಷೀಂಶ್ಚೈವ ತಥಾ ವೈ ಯಕ್ಷದಾನವಾನ್ ।
ನಾಗಾಸುರಮನುಷ್ಯಾಂಶ್ಚ ಸೃಜತೇ ಪರಮೋಽವ್ಯಯಃ ॥ ೨೪ ॥

ದೇವತೆಗಳು, ಪಿತೃಗಳು, ಋಷಿಗಳು, ಯಕ್ಷ-ರಾಕ್ಷಸರು, ನಾಗರು, ಅಸುರರು, ಮನುಷ್ಯರು ಎಂಬ ನಾನಾ ವರ್ಗಗಳನ್ನು ಅವ್ಯಯನಾದ ಪರಮಾತ್ಮನು ಮನಸ್ಸಿನಿಂದ ಸೃಷ್ಟಿಸುತ್ತಾನೆ.

ತಥೈವ ವೇದಶಾಸ್ತ್ರಾಣಿ ಲೋಕಧರ್ಮಾಂಶ್ಚ ಶಾಶ್ವತಾನ್ ।
ಪ್ರಲಯೇ ಪ್ರಕೃತಿಂ ಪ್ರಾಪ್ಯ ಯುಗಾದೌ ಸೃಜತೇ ಪ್ರಭುಃ ॥ ೨೫ ॥

ಇದರಂತೆ ಅನೇಕ ವೇದಶಾಸ್ತ್ರಗಳನ್ನೂ, ಶಾಶ್ವತವಾದ ಲೋಕಧರ್ಮಗಳನ್ನು ಸೃಷ್ಟಿಸುತ್ತಾನೆ. ಪ್ರಳಯಕಾಲದಲ್ಲಿ ಮೂಲಸ್ವರೂಪವನ್ನು ಹೊಂದಿದ ತತ್ತ್ವಗಳನ್ನು ಪುನಃ ಸೃಷ್ಟಿಯ ಆರಂಭದಲ್ಲಿ ಸ್ಥೂಲರೂಪವನ್ನು ಹೊಂದುವಂತೆ ಮಾಡುತ್ತಾನೆ.

ಯಥರ್ತುಷ್ವೃತುಲಿಂಗಾನಿ ನಾನಾರೂಪಾಣಿ ಪರ್ಯಯೇ ।
ದೃಶ್ಯಂತೇ ತಾನಿ ತಾನ್ಯೇವ ತಥಾ ಬ್ರಹ್ಮಾಹರಾತ್ರಿಷು ॥ ೨೬ ॥

ಅಥ ಯದ್ಯದ್ ಯದಾ ಭಾವಿ ಕಾಲಯೋಗಾದ್ಯುಗಾದಿಷು ।
ತತ್ತದುತ್ಪದ್ಯತೇ ಜ್ಞಾನಂ ಲೋಕಯಾತ್ರಾವಿಧಾನಜಮ್ ॥ ೨೭ ॥

ಯಾವ ರೀತಿಯಾಗಿ ಆಯಾ ಋತುಭೇದಗಳಿಂದ ಗಿಡಗಳಲ್ಲಿ ರೂಪಭೇದಗಳು, ಫಲಭೇದಗಳು ಉಂಟಾಗಿ, ಋತುವು ಕಳೆದ ಬಳಿಕ ಅವೆಲ್ಲವೂ ಹೊರಟು ಹೋಗುತ್ತವೋ ಪುನಃ ಅದೇ ಋತುವು ಬಂದಾಗ ಹಿಂದಿನ ಲಕ್ಷಣಗಳು ಕಾಣಿಸಿಕೊಳ್ಳುತ್ತವೋ ಇದರಂತೆ ಯುಗದ ಆರಂಭದಲ್ಲಿ ಪುನಃ ಹಿಂದಿನ ಯುಗದ ಆರಂಭದ ಲಕ್ಷಣಗಳೇ ತಲೆದೋರುತ್ತವೆ.

ಶ್ರುತಿರೇಷಾ ಸಮಾಖ್ಯಾತಾ ತದರ್ಥಂ ಕಾರಣಾತ್ಮನಾ ।
ಅನಾಮ್ನಾಯವಿಧಾನಾದ್ವೈ ವೇದಾ ಹ್ಯಂತರ್ಹಿತಾ ಯಥಾ ॥ ೨೮ ॥

ಶ್ರುತಿಯು ಈ ಕಾರಣದಿಂದಲೇ ಪ್ರಳಯ ಕಾಲದಲ್ಲಿ ಕಾರಣರೂಪದಿಂದ ಜಗತ್ತು ಸತ್ಯವಾಗಿದೆ ಎಂದೇ ಹೇಳುತ್ತಿದೆ. ಸರಿಯಾಗಿ ವೇದವನ್ನು ಅರಿಯದವರ ವಿಷಯದಲ್ಲಿ ವೇದಗಳು ತಮ್ಮ ರಹಸ್ಯವನ್ನು ಮುಚ್ಚಿಡುತ್ತವೆ.

ಯುಗಾಂತೇಽಂತರ್ಹಿತಾನ್ ವೇದಾನ್ ಸೇತಿಹಾಸಾನ್ ಮಹರ್ಷಯಃ ।
ಲೇಭಿರೇ ತಪಸಾ ಪೂರ್ವಮನುಜ್ಞಾತಾಃ ಸ್ವಯಂಭುವಾ ॥ ೨೯ ॥

ಜಗತ್ತಿನ ಪ್ರಳಯವಾದಾಗ ಬೇರೆ ಬೇರೆ ವೇದಶಾಸ್ತ್ರಗಳು ಅವ್ಯಕ್ತರೂಪವನ್ನು ಹೊಂದಿ, ಪುನಃ ಸೃಷ್ಟಿಯಾದ ಮೇಲೆ ಬ್ರಹ್ಮನ ಆಜ್ಞೆಯಂತೆ ಮಹರ್ಷಿಗಳು ಆ ವೇದಗಳನ್ನು ತಪೋಮಹಿಮೆಯಿಂದ ಬ್ರಹ್ಮನಿಂದ ಅನುಜ್ಞಾತರಾಗಿ ಪುನಃ ಪ್ರಕಟಪಡಿಸುತ್ತಾರೆ.

ನಿಯೋಗಾದ್ ಬ್ರಹ್ಮಣೋ ವಿಪ್ರಾ ಲೋಕತಂತ್ರಪ್ರವರ್ತಕಾಃ ।
ವೇದವಿದ್ ವೇದ ಭಗವಾನ್ ವೇದಾಂಗಾನಿ ಬೃಹಸ್ಪತಿಃ ।
ಭಾರ್ಗವೋ ನೀತಿಶಾಸ್ತ್ರಂ ಚ ಜಗಾದ ಜಗತೋ ಹಿತಮ್ ॥ ೩೦ ॥

ಲೋಕತಂತ್ರ ಪ್ರವರ್ತಕರಾದ ಬ್ರಾಹ್ಮಣರು ಚತುರ್ಮುಖ ಬ್ರಹ್ಮನ ಆದೇಶದಂತೆ ವೇದಗಳನ್ನು ಸ್ವೀಕರಿಸಿದರು. ವೇದಾಂಗಗಳು ದೇವಗುರುವಾದ ಬೃಹಸ್ಪತಿಗೆ ಲಭಿಸಿದವು. ನೀತಿಶಾಸ್ತ್ರವನ್ನು ಭೃಗುಕುಮಾರನಾದ ಶುಕ್ರನು ಜಗತ್ತಿಗೆ ಹಿತವಾಗುವ ರೀತಿಯಲ್ಲಿಹೇಳಿದನು.

ಗಾಂಧರ್ವಂ ನಾರದೋ ವೇದಂ ಭರದ್ವಾಜೋ ಧನುರ್ಗ್ರಹಮ್ ।
ದೇವರ್ಷಿಚರಿತಂ ಗಾರ್ಗ್ಯಃ ಕೃಷ್ಣಾತ್ರೇಯಶ್ಚಿಕಿತ್ಸಿತಮ್ ॥ ೩೧ ॥

ಗಾಂಧರ್ವಕಲೆಯನ್ನು ನಾರದರು ತಿಳಿದರು. ಧನುರ್ವೇದ ಕಲೆಯನ್ನು ಭರದ್ವಾಜರು ತಿಳಿದರು. ಹಾಗೆಯೇ ದೇವರ್ಷಿಗಳ ಚರಿತ್ರೆಯನ್ನು ಗರ್ಗಮುನಿಗಳು, ವೈದ್ಯಕಲೆಯನ್ನು ಕೃಷ್ಣಾತ್ರೇಯರು ತಿಳಿದರು.

ನ್ಯಾಯತಂತ್ರಂ ಹಿ ಕಾರ್ತ್ಸ್ನ್ಯೇನ ಗೌತಮೋ ವೇದ ತತ್ತ್ವತಃ ।
ವೇದಾಂತಕರ್ಮಯೋಗಂ ಚ ವೇದವಿದ್ ಬ್ರಹ್ಮವಿದ್ ವಿಭುಃ ।
ದ್ವೈಪಾಯನೋ ನಿಜಗ್ರಾಹ ಶಿಲ್ಪಶಾಸ್ತ್ರಂ ಭೃಗುಃ ಪುನಃ ॥ ೩೨ ॥

ನ್ಯಾಯಕಲೆಯನ್ನು ಸಮಗ್ರವಾಗಿ ಗೌತಮರು ತಿಳಿದರು. ವೇದಾಂತ, ಕರ್ಮ ಯೋಗಗಳನ್ನು ವೇದಜ್ಞರಾದ, ಭಗವಂತನನ್ನು ಪೂರ್ಣವಾಗಿ ತಿಳಿದ, ಸಮರ್ಥರಾದ ದ್ವೈಪಾಯನರು ಸ್ವೀಕರಿಸಿದರು. ಪುನಃ ಶಿಲ್ಪಶಾಸ್ತ್ರಗಳನ್ನು ಭೃಗುಗಳು ಸ್ವೀಕರಿಸಿದರು.

ನ್ಯಾಯತಂತ್ರಾಣ್ಯನೇಕಾನಿ ತೈಸ್ತೈರುಕ್ತಾನಿ ವಾದಿಭಿಃ ।
ಹೇತ್ವಾಗಮಸದಾಚಾರೈರ್ಯದುಕ್ತಂ ತದುಪಾಸ್ಯತೇ ॥ ೩೩ ॥

ಅನೇಕ ವಿಧವಾದ ತರ್ಕಶಾಸ್ತ್ರಗಳು ಬೇರೆ ಬೇರೆ ವಿದ್ವಾಂಸರಿಂದ ಪ್ರವರ್ತಿಸಲ್ಪಟ್ಟವು. ಯುಕ್ತಿಯಿಂದಲೂ, ಶಾಸ್ತ್ರಗಳಿಂದಲೂ, ಸದಾಚಾರಿಗಳಿಂದಲೂ ನಿರ್ಣಯಿಸಲ್ಪಟ್ಟ ಬ್ರಹ್ಮನೇ ಮುಖ್ಯೋಪಾಸ್ಯನೆಂದು ಅಂಗೀಕೃತನಾಗಿದ್ದಾನೆ.

ಅನಾದ್ಯಂ ಯತ್ ಪರಂ ಬ್ರಹ್ಮ ನ ದೇವಾ ನರ್ಷಯೋ ವಿದುಃ ।
ಏಕಸ್ತದ್ವೇದ ಭಗವಾನ್ ಧಾತಾ ನಾರಾಯಣಃ ಪ್ರಭುಃ ॥ ೩೪ ॥

ಅನಾದ್ಯನಂತನಾದ ಬ್ರಹ್ಮನ ಮಹಿಮೆಯನ್ನು ದೇವತೆಗಳಾಗಲೀ, ಋಷಿಗಳಾಗಲೀ ತಿಳಿಯಲಾರರು. ಲೋಕಕರ್ತನೂ, ಪ್ರಭುವಾದ ನಾರಾಯಣನೊಬ್ಬನೇ ತನ್ನ ಮಹಿಮೆಯನ್ನು ತಾನು ಅರಿಯಬಲ್ಲನು.

ನಾರಾಯಣಾದೃಷಿಗಣಾಸ್ತಥಾ ಮುಖ್ಯಾಃ ಸುರಾಸುರಾಃ ।
ರಾಜರ್ಷಯಃ ಪುರಾಣಾಶ್ಚ ಪರಮಂ ದುಃಖಭೇಷಜಮ್ ।
ವಕ್ಷ್ಯೇಽಹಂ ತವ ಯತ್ ಪ್ರಾಪ್ತಮೃಷೇರ್ದ್ವೈಪಾಯನಾನ್ಮಯಾ ॥೩೫॥

ನಾರಾಯಣನ ದೆಸೆಯಿಂದ ಸಮಸ್ತ ಋಷಿಗಣಗಳು, ಅದರಂತೆ ಶ್ರೇಷ್ಠರಾದ ಸುರಾಸುರರು, ರಾಜರ್ಷಿಗಳು ಯಥಾಯೋಗ್ಯವಾಗಿ ತಿಳಿದಿದ್ದಾರೆ. ಬ್ರಹ್ಮಜ್ಞಾನವೇ ಸಮಸ್ತ ದುಃಖಗಳಿಗೂ ಔಷಧಿಯಂತಿದೆ. ವ್ಯಾಸಮಹರ್ಷಿಯು ನನಗೆ ಹೇಗೆ ತಿಳಿಸಿದ್ದಾರೋ ಅದರಂತೆ ನಿನಗೆ ಸಂಗ್ರಹಿಸಿ ಹೇಳುತ್ತೇನೆ.

ಪುರುಷಾಧಿಷ್ಠಿತಂ ಭಾವಂ ಪ್ರಕೃತಿಃ ಸೂಯತೇ ಸದಾ ।
ಹೇತುಯುಕ್ತಮತಃ ಸರ್ವಂ ಜಗತ್ ಸಂಪರಿವರ್ತತೇ ॥ ೩೬ ॥

ಪ್ರಕೃತಿ ಎಂಬುದು ಪುರುಷನಿಂದ ಅಧಿಷ್ಠಿತವಾಗಿ ಅವನಿಂದ ಪ್ರೇರಿಸಲ್ಪಟ್ಟು ಅವನ ಸಂಕಲ್ಪಕ್ಕನುಗುಣವಾಗಿ ಯಾವಾಗ ವಸ್ತುಗಳನ್ನು ಸೃಷ್ಟಿಸತೊಡಗಿತೋ ಆಗ ಶುಭಾಶುಭ ಕರ್ಮಗಳನ್ನೇ ಕಾರಣವಾಗಿ ಉಳ್ಳ ಪ್ರಪಂಚವು ಉತ್ಪನ್ನವಾಯಿತು.

ದೀಪಾದನ್ಯೇ ಯಥಾ ದೀಪಾಃ ಪ್ರವರ್ತಂತೇ ಸಹಸ್ರಶಃ ।
ಪ್ರಕೃತಿಃ ಸೃಜತೇ ತದ್ವದಾನಂತ್ಯಾನ್ನಾಪಚೀಯತೇ ॥ ೩೭ ॥

ಒಂದೇ ದೀಪದಿಂದ ಸಾವಿರಾರು ದೀಪಗಳು ಬೆಳಗುವಂತೆ ಪ್ರಕೃತಿಯೊಂದೇ ಸಾವಿರಾರು ವಸ್ತುಗಳನ್ನು ಹುಟ್ಟಿಸುತ್ತದೆ. ಅದೆಂದಿಗೂ ಕ್ಷೀಣಿಸುವುದಿಲ್ಲ.

ಅವ್ಯಕ್ತಕರ್ಮಜಾ ಬುದ್ಧಿರಹಂಕಾರಂ ಪ್ರಸೂಯತೇ ।
ಆಕಾಶಂ ಚಾಪ್ಯಹಂಕಾರಾದ್ವಾಯುರಾಕಾಶಸಂಭವಃ ॥ ೩೮ ॥

ಮೂಲಪ್ರಕೃತಿಯ ವಿಕಾರದಿಂದ ಹುಟ್ಟಿದ ಬುದ್ಧಿಯು ವಿಜ್ಞಾನವೆಂಬ ಮಹತ್ತತ್ತ್ವವನ್ನು ಹುಟ್ಟಿಸುತ್ತದೆ. ಅದರಿಂದ ಅಹಂಕಾರತತ್ತ್ವವು, ಅಹಂಕಾರ ತತ್ತ್ವದಿಂದ ಆಕಾಶತತ್ತ್ವವು ಹುಟ್ಟುತ್ತದೆ.

ವಾಯೋಸ್ತೇಜಸ್ತತಶ್ಚಾಪಸ್ತ್ವದ್ಭ್ಯೋ ಹಿ ವಸುಧೋದ್ಗತಾ ।
ಮೂಲಪ್ರಕೃತಯೋಽಷ್ಟೌ ತಾ ಜಗದೇತಾಸ್ತ್ವವಸ್ಥಿತಮ್ ॥ ೪೦ ॥

ಆಕಾಶದಿಂದ ವಾಯುವು, ವಾಯುವಿನಿಂದ ತೇಜಸ್ಸು, ತೇಜಸ್ಸಿನಿಂದ ಜಲವು, ಜಲದಿಂದ ಭೂಮಿಯು ಹುಟ್ಟುತ್ತದೆ. ಈ ಎಂಟರ ಸಮುದಾಯವೇ ಮೂಲ ಪ್ರಕೃತಿ ಎನಿಸಿದೆ. ಲೋಕವೆಲ್ಲವೂ ಇದನ್ನೇ ಆಶ್ರಯಿಸಿಕೊಂಡಿದೆ.

ಜ್ಞಾನೇಂದ್ರಿಯಾಣ್ಯತಃ ಪಂಚ ಪಂಚ ಕರ್ಮೇಂದ್ರಿಯಾಣ್ಯಪಿ ।
ವಿಷಯಾಃ ಪಂಚ ಚೈಕಂ ಚ ವಿಕಾರೇ ಷೋಡಶಂ ಮನಃ ॥ ೪೧ ॥

ಈ ಎಂಟರ ಸಮುದಾಯದಿಂದಲೇ ಪಂಚ ಕರ್ಮೇಂದ್ರಿಯಗಳು, ಪಂಚ ಜ್ಞಾನೇಂದ್ರಿಯಗಳು, ಪಂಚ ತನ್ಮಾತ್ರಗಳು, ಮನಸ್ಸು ಹದಿನಾರನೆಯದ್ದಾಗಿ ಹುಟ್ಟಿದೆ.

ಶ್ರೋತ್ರಂ ತ್ವಕ್ಚಕ್ಷುಷೀ ಜಿಹ್ವಾ ಘ್ರಾಣಂ ಪಂಚೇಂದ್ರಿಯಾಣ್ಯಪಿ ।
ಪಾದೌ ಪಾಯುರುಪಸ್ಥಶ್ಚ ಹಸ್ತೌ ವಾಕ್ಕರ್ಮಣಾಮಪಿ ॥ ೪೨ ॥

ಶಬ್ದಃ ಸ್ಪರ್ಶೋಽಥ ರೂಪಂ ಚ ರಸೋ ಗಂಧಸ್ತಥೈವ ಚ ।
ವಿಜ್ಞೇಯಂ ವ್ಯಾಪಕಂ ಚಿತ್ತಂ ತೇಷು ಸರ್ವಗತಂ ಮನಃ ॥ ೪೩ ॥

ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮ ಎಂಬ ಐದು ಜ್ಞಾನೇಂದ್ರಿಯಗಳು; ಕೈ, ಕಾಲು, ಪಾಯು, ಉಪಸ್ಥ ಎಂಬ ಪಂಚ ಕರ್ಮೇಂದ್ರಿಯಗಳು; ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ಇಂದ್ರಿಯಾರ್ಥಗಳು; ಮನಸ್ಸೆಂಬುದು ಎಲ್ಲಾ ಇಂದ್ರಿಯಗಳ ಜೊತೆಗೆ ಬೆರೆತು ಆಯಾ ರೂಪದಿಂದ ಕೆಲಸ ಮಾಡುತ್ತದೆ.

ಬುದ್ಧೀಂದ್ರಿಯಾರ್ಥಾ ಇತ್ಯುಕ್ತಾ ದಶಸಂಸರ್ಗಯೋನಯಃ ।
ಸದಸದ್ಭಾವಯೋಗೇ ಚ ಮನ ಇತ್ಯಭಿಧೀಯತೇ ॥ ೪೪ ॥

ಮನಸ್ಸು ಎಲ್ಲಾ ಸಂದರ್ಭದಲ್ಲಿಯೂ ಸಮಸ್ತ ಇಂದ್ರಿಯಗಳ ಜೊತೆಗೂ ಸಂಯೋಜನೆಯನ್ನು ಹೊಂದಿ ಒಳ್ಳೆ ಮತ್ತು ಕೆಟ್ಟ ಕರ್ಮಗಳಲ್ಲಿ ಪ್ರವೃತ್ತಿಯನ್ನು ಹೊಂದುವಂತೆ ಮಾಡುತ್ತದೆ. ಈ ಸಾಮರ್ಥ್ಯವುಳ್ಳದ್ದಕ್ಕೆ ಮನಸ್ಸು ಎಂದು ಹೆಸರು.

ವ್ಯವಸಾಯಗುಣಾ ಬುದ್ಧಿರಹಂಕಾರೋಽಭಿಮಾನಕಃ ।
ನ ಬೀಜಂ ದೇಹಯೋಗೇ ಚ ಕರ್ಮಬೀಜಪ್ರವರ್ತನಾತ್ ॥ ೪೩ ॥

ವ್ಯವಸಾಯಗುಣವುಳ್ಳ ಬುದ್ಧಿಯು ಅಹಂಕಾರಕ್ಕೆ ಅಭಿಮಾನಿಯಾಗಿದ್ದು ಕರ್ಮ ಬೀಜವನ್ನು ಹುಟ್ಟಿಸುವುದರಿಂದ ದೇಹದ ಸಂಬಂಧವನ್ನು ಇದು ಹುಟ್ಟಿಸುವುದಿಲ್ಲ.

ರಸಜ್ಞಾನೇ ತು ಜಿಹ್ವೇಯಂ ವ್ಯಾಹೃತೇ ವಾಕ್ತಥೈವ ಚ ।
ಇಂದ್ರಿಯೈರ್ವಿವಿಧೈರ್ಯುಕ್ತಂ ಸರ್ವಂ ವ್ಯಸ್ತಂ ಮನಸ್ತಥಾ ॥ ೪೫ ॥

ಮಾತನಾಡುವ ಸಂದರ್ಭದಲ್ಲಿ ವಾಗಿಂದ್ರಿಯವೇ ಕರ್ಮೇಂದ್ರಿಯವೆನಿಸುವುದು. ಹೀಗೆ ಆಯಾ ಇಂದ್ರಿಯಗಳ ಜೊತೆಗೂಡಿದ ಮನಸ್ಸು ಅವುಗಳಿಂದ ಗ್ರಹಿಸಲ್ಪಡುವ ವಿಷಯಗಳು ತಾನೇ ಆಗುತ್ತದೆ.

ವಿದ್ಯಾತ್ತು ಷೋಡಶೈತಾನಿ ದೈವತಾನಿ ವಿಭಾಗಶಃ ।
ದೇಹೇಷು ಜ್ಞಾನಕರ್ತಾರಮುಪಾಸೀನಮುಪಾಸತೇ ॥ ೪೬ ॥

ಈ ರೀತಿಯಾಗಿ ಈ ಹದಿನಾರು ಇಂದ್ರಿಯಗಳು ಮನಸ್ಸಿನಿಂದ ಸೇರಿಕೊಂಡು ಬೇರೆ ಬೇರೆ ಅಭಿಮಾನಿದೇವತೆಗಳಿಂದ ಯುಕ್ತವಾಗಿದ್ದು, ಶರೀರಗಳಲ್ಲಿ ಸೇರಿ ಜ್ಞಾನಕರ್ತಾರನಾದ ಪರಮಾತ್ಮನನ್ನು ಉಪಾಸನೆ ಮಾಡುತ್ತವೆ.

ತತ್ರ ಸೋಮಗುಣಾ ಜಿಹ್ವಾ ಗಂಧಸ್ತು ಪೃಥಿವೀಗುಣಃ ।
ಶ್ರೋತ್ರಂ ಶಬ್ದಗುಣಂ ಚೈವ ಚಕ್ಷುರಗ್ನೇರ್ಗುಣಸ್ತಥಾ ।
ಸ್ಪರ್ಶಂ ವಾಯುಗುಣಂ ವಿದ್ಯಾತ್ ಸರ್ವಭೂತೇಷು ಸರ್ವದಾ॥ ೪೭ ॥

ರಸವು ಜಿಹ್ವೆಯ ಗುಣವೆನಿಸಿದೆ. ಗಂಧವು ಪೃಥಿವಿಯ ಗುಣವೆನಿಸಿದೆ. ಎರಡು ಶ್ರೋತ್ರೇಂದ್ರಿಯಗಳು ಶಬ್ದಗುಣವೆನಿಸಿವೆ. ಚಕ್ಷುರಿಂದ್ರಿಯವು ಅಗ್ನಿಗುಣವೆನಿಸಿದೆ. ಸ್ಪರ್ಶವು ವಾಯುಗುಣವೆನಿಸಿದೆ. ಈ ಗುಣಗಳನ್ನು ಎಲ್ಲಾ ಭೂತಗಳಲ್ಲಿಯೂ ನಿರಂತರ ಚಿಂತಿಸಬೇಕು.

ಮನಃ ಸತ್ತ್ವಗುಣಂ ಪ್ರಾಹುಃ ಸತ್ತ್ವಮವ್ಯಕ್ತಜಂ ತಥಾ ।
ಸರ್ವಭೂತಾತ್ಮಭೂತಸ್ಥಂ ತಸ್ಮಾದ್ ಬುಧ್ಯೇತ ಬುದ್ಧಿಮಾನ್ ॥ ೪೮ ॥

ಮನಸ್ಸು ಸತ್ವಗುಣದ ಕಾರ್ಯವು. ಸತ್ವವು ಅವ್ಯಕ್ತದಿಂದ ಹುಟ್ಟಿದುದು. ಆದ್ದರಿಂದ ಜ್ಞಾನಿಯಾದವನು ಸಮಸ್ತ ಭೂತಗಳಿಗೂ ಅಂತರ್ಯಾಮಿಯಾಗಿರುವ ಅವ್ಯಕ್ತದಲ್ಲಿಯೂ ಇರುವ ಭಗವಂತನನ್ನು ಚಿಂತಿಸಬೇಕು.

ಏತೇ ಭಾವಾ ಜಗತ್ ಸರ್ವಂ ವಹಂತಿ ಸಚರಾಚರಮ್ ।
ಶ್ರಿತಾ ವಿರಜಸಂ ದೇವಂ ಯಮಾಹುಃ ಪರಮಂ ಪದಮ್ ॥ ೪೯ ॥

ಮೇಲೆ ಹೇಳಿದ ಎಲ್ಲಾ ತತ್ತ್ವಗಳು ಚರಾಚರಾತ್ಮಕವಾದ ಜಗತ್ತನ್ನು ಧರಿಸುತ್ತಾ ರಜೋಗುಣದಿಂದ ರಹಿತನಾದ ಪರಬ್ರಹ್ಮನನ್ನು ಆಶ್ರಯಿಸಿವೆ. ಪರಮಪದನಾದ ಭಗವಂತನೇ ಇವುಗಳಿಗೆ ಆಶ್ರಯ.

ನವದ್ವಾರಂ ಪುರಂ ಪುಣ್ಯಮೇತೈರ್ಭಾವೈಃ ಸಮನ್ವಿತಮ್ ।
ವ್ಯಾಪ್ಯ ಶೇತೇ ಮಹಾನಾತ್ಮಾ ತಸ್ಮಾತ್ ಪುರುಷ ಉಚ್ಯತೇ ॥ ೫೦ ॥

ಒಂಬತ್ತು ದ್ವಾರಗಳುಳ್ಳ ಮನುಷ್ಯನ ಶರೀರವೆಂಬ ಪವಿತ್ರವಾದ ಪಟ್ಟಣದಲ್ಲಿ ಸರ್ವವ್ಯಾಪಿಯಾದ ಭಗವಂತನು ಮಲಗಿರುವುದರಿಂದಲೇ ಅವನಿಗೆ ಪುರುಷ ಎಂಬ ಹೆಸರುಂಟಾಗಿದೆ.

ಅಜರಃ ಸೋಽಮರಶ್ಚೈವ ವ್ಯಕ್ತಾವ್ಯಕ್ತೋಪದೇಶವಾನ್ ।
ವ್ಯಾಪಕಃ ಸಗುಣಃ ಸೂಕ್ಷ್ಮಃ ಸರ್ವಭೂತಗುಣಾಶ್ರಯಃ ॥ ೫೧ ॥

ಆ ಪುರುಷನಾದರೂ ಅಜರನೂ, ಅಮರನೂ, ವ್ಯಕ್ತಾವ್ಯಕ್ತ ಉಪದೇಶವುಳ್ಳವನೂ, ವ್ಯಾಪಕನೂ, ಸಗುಣನೂ, ಸೂಕ್ಷ್ಮನೂ, ಸರ್ವಭೂತಗಳಿಗೆ ಆಶ್ರಯನೂ ಆಗಿದ್ದಾನೆ.

ಯಥಾ ದೀಪಃ ಪ್ರಕಾಶಾತ್ಮಾ ಹ್ರಸ್ವೋ ವಾ ಯದಿ ವಾ ಮಹಾನ್ ।
ಜ್ಞಾನಾತ್ಮಾನಂ ತಥಾ ವಿದ್ಯಾತ್ ಪುರುಷಂ ಸರ್ವಜಂತುಷು ॥ ೫೨ ॥

ಯಾವ ರೀತಿಯಾಗಿ ದೀಪವು ಸಣ್ಣದಾಗಿದ್ದರೂ, ದೊಡ್ಡದಾಗಿದ್ದರೂ ಪ್ರಕಾಶ ರೂಪವೇ ಆಗಿರುತ್ತದೆಯೋ ಅದರಂತೆ ಪುರುಷನಾಮಕನಾದ ಸಮಸ್ತ ಜೀವರಲ್ಲಿ ಅಂತರ್ಯಾಮಿಯಾದ ಭಗವಂತನನ್ನು ಜ್ಞಾನಸ್ವರೂಪಿ ಎಂದೇ ತಿಳಿಯಬೇಕು.

ಸೋಽತ್ರ ವೇದಯತೇ ವೇದ್ಯಂ ಸ ಶೃಣೋತಿ ಸ ಪಶ್ಯತಿ ।
ಕಾರಣಂ ತಸ್ಯ ದೇಹೋಽಯಂ ಸ ಕರ್ತಾ ಸರ್ವಕರ್ಮಣಾಮ್ ॥೫೩॥

ದೇಹದಲ್ಲಿ ಕೇಳಬೇಕಾದುದ್ದನ್ನು ಕೇಳಿಸುವ ಮೂಲಕ ತಿಳಿಸಿಕೊಡುತ್ತದೆ. ಜೀವನು ಕೇಳಿಸಿಕೊಂಡು ಆ ಪದಾರ್ಥವನ್ನು ನೋಡುತ್ತಾನೆ. ಅದಕ್ಕೆ ಕಾರಣವಾದುದು ಈ ದೇಹ. ಈ ದೇಹವನ್ನು ನಿರ್ಮಿಸಿದ ಭಗವಂತನು ಸರ್ವಕರ್ಮಗಳಿಗೂ ಕಾರಣನೆನಿಸಿದ್ದಾನೆ.

ಅಗ್ನಿರ್ದಾರುಗತೋ ಯದ್ವದ್ದಿನ್ನೇ ದಾರೌ ನ ದೃಶ್ಯತೇ ।
ತಥೈವಾತ್ಮಾ ಶರೀರಸ್ಥೋ ಯೋಗೇನೈವಾತ್ರ ದೃಶ್ಯತೇ ॥ ೫೪ ॥

ಕಟ್ಟಿಗೆಯಲ್ಲಿ ಅಗ್ನಿಯು ಯಾವಾಗಲೂ ಒಳಗೆ ಅಡಗಿದ್ದರೂ ಕಟ್ಟಿಗೆಯನ್ನು ಒಡೆದು ನೋಡಿದರೂ ಅಗ್ನಿಯು ಕಾಣಿಸುವುದಿಲ್ಲ. ಅದರಂತೆ ಶರೀರದಲ್ಲಿರುವಂತಹ ಭಗವಂತನು ಶರೀರವನ್ನು ತುಂಡರಿಸಿದರೂ ಕಣ್ಣಿಗೆ ಕಾಣಿಸಲಾರ. ಇವನನ್ನು ಯೋಗಶಕ್ತಿಯಿಂದಲೇ ಕಾಣಬೇಕು.

ನದೀಷ್ವಾಪೋ ಯಥಾ ಯುಕ್ತಾ ಯಥಾ ಸೂರ್ಯೇ ಮರೀಚಯಃ ।
ಸಂತನ್ವಾನಾ ಯಥಾ ಯಾಂತಿ ತಥಾ ದೇಹಾಃ ಶರೀರಿಣಾಮ್ ॥ ೫೫ ॥

ಯಾವ ರೀತಿಯಾಗಿ ನದಿಗಳನ್ನು ನೀರು, ಸೂರ್ಯನನ್ನು ಕಿರಣಗಳು ಹಿಂಬಾಲಿಸುತ್ತಿವೆಯೋ ಅದರಂತೆ ಪರಮಾತ್ಮನನ್ನು ಶರೀರವೆಂಬುದು ಹಿಂಬಾಲಿಸುತ್ತಿರುವುದು.

ಸ್ವಪ್ನಯೋಗೇ ಯಥೈವಾತ್ಮಾ ಪಂಚೇಂದ್ರಿಯಸಮಾಗತಃ ।
ದೇಹಮುತ್ಸೃಜ್ಯ ವೈ ಯಾತಿ ತಥೈವಾತ್ರೋಪಲಭ್ಯತೇ ॥ ೫೬ ॥

ಜೀವನಿಗೆ ಕನಸು ಬೀಳುವಾಗ ಜೀವನು ಪಂಚಜ್ಞಾನೇಂದ್ರಿಯಗಳಿಂದ ಸಹಿತವಾಗಿ ಹೊರಗೆ ಸಂಚರಿಸುವಂತೆ ಜೀವಾತ್ಮನು ದೇಹವನ್ನು ಬಿಟ್ಟು ಇನ್ನೊಂದು ದೇಹವನ್ನು ಹೊಂದುತ್ತಾನೆ.

ಕರ್ಮಣಾ ವ್ಯಾಪ್ಯತೇ ಪೂರ್ವಂ ಕರ್ಮಣಾ ಚೋಪಪದ್ಯತೇ ।
ಕರ್ಮಣಾ ನೀಯತೇಽನ್ಯತ್ರ ಸ್ವಕೃತೇನ ಬಲೀಯಸಾ ॥ ೫೭ ॥

ಸಮಸ್ತ ಜಗತ್ತು ಕರ್ಮವನ್ನನುಸರಿಸಿಯೇ ನಡೆಯುತ್ತದೆ. ಕರ್ಮದಿಂದಲೇ ಉತ್ಪತ್ತಿಯನ್ನು ಪಡೆಯುತ್ತದೆ. ಕರ್ಮದಿಂದಲೇ ಜೀವಾತ್ಮನನ್ನು ಕೊಂಡೊಯ್ಯುತ್ತದೆ. ಬೇರೆ ಜನ್ಮದಲ್ಲಿ ಮಾಡಿದ ಬಲಿಷ್ಠವಾದ ಕರ್ಮಗಳೇ ಜನ್ಮಾಂತರದಲ್ಲಿ ಕಾರಣವಾಗುತ್ತವೆ.

ಸ ತು ದೇಹಾದ್ ಯಥಾ ದೇಹಂ ತ್ಯಕ್ತ್ವಾನ್ಯಂ ಪ್ರತಿಪದ್ಯತೇ ।
ತಥಾ ತಂ ಸಂಪ್ರವಕ್ಷ್ಯಾಮಿ ಭೂತಗ್ರಾಮಂ ಸ್ವಕರ್ಮಜಮ್ ॥ ೫೮ ॥

ಕರ್ಮವನ್ನನುಸರಿಸಿದ ಜೀವಾತ್ಮನಾದರೂ ಒಂದು ದೇಹವನ್ನು ಬಿಟ್ಟು ಮತ್ತೊಂದು ದೇಹವನ್ನು ಹೊಂದುತ್ತಾನೆ. ಅವನವನ ಪ್ರಾರಬ್ಧಕರ್ಮವೇ ದೇಹದಿಂದ ದೇಹಕ್ಕೆ ಸೆಳೆದುಕೊಂಡು ಹೋಗುತ್ತವೆ ಎಂದು ತಿಳಿಯಬೇಕು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ॥ ಮೋಕ್ಷಧರ್ಮಪರ್ವಣಿ ಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನಲವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೊಂದನೆಯ ಅಧ್ಯಾಯ

ಜಗತ್ಸೃಷ್ಟ್ಯಾದಿ ಪ್ರತಿಪಾದಕ ಗುರು-ಶಿಷ್ಯ ಸಂವಾದವನ್ನು ಭೀಷ್ಮರು ಯುಧಿಷ್ಠಿರನನ್ನು ಕುರಿತು ಹೇಳಿದುದು.

ಗುರುಃ

ಚತುರ್ವಿಧಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ ।
ಅವ್ಯಕ್ತಪ್ರಭವಾನ್ಯಾಹುರವ್ಯಕ್ತನಿಧನಾನಿ ಚ ।
ಅವ್ಯಕ್ತಲಕ್ಷಣಂ ವಿದ್ಯಾದವ್ಯಕ್ತಾತ್ಮಕಂ ಮನಃ ॥ ೧ ॥

ಗುರು– ವತ್ಸನೇ, ಸ್ಥಾವರ-ಜಂಗಮ ಪ್ರಾಣಿಗಳು ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ ಎಂದು ನಾಲ್ಕು ಪ್ರಕಾರಗಳಾಗಿವೆ. ಆ ಪ್ರಾಣಿಗಳೆಲ್ಲವೂ ಅವ್ಯಕ್ತ ತತ್ತ್ವದಿಂದಲೇ ಜನ್ಮವನ್ನು ತಾಳುತ್ತವೆ. ಅರ್ಥಾತ್ ಮೂಲಪ್ರಕೃತಿಯಲ್ಲಿ ಹುಟ್ಟಿ ಮೂಲ ಪ್ರಕೃತಿಯಲ್ಲಿಯೇ ಲಯವನ್ನು ಹೊಂದುತ್ತವೆ. ಆದ್ದರಿಂದ ಜಗತ್ತನ್ನು ಅವ್ಯಕ್ತ

ಸ್ವರೂಪವೆಂದು ಹೇಳುತ್ತಾರೆ. ಮನಸ್ಸು ಅವ್ಯಕ್ತವಾಗಿದ್ದರೂ ತ್ರಿಗುಣಾತ್ಮಕವಾಗಿದೆ. ಪ್ರಕೃತಿಯೂ ತ್ರಿಗುಣಾತ್ಮಕ.

ಯಥಾಶ್ವತ್ಥಕಣೇಕಾಯಾಮಂತರ್ಭೂತೋ ಮಹಾದ್ರುಮಃ ।
ನಿಷ್ಪನ್ನೋ ದೃಶ್ಯತೇ ವ್ಯಕ್ತಮವ್ಯಕ್ತಾತ್ ಸಂಭವಸ್ತಥಾ ॥ ೨ ॥

ಯಾವ ರೀತಿಯಲ್ಲಿ ಅತ್ಯಂತ ಅಣುವಾಗಿರುವ ಅಶ್ವತ್ಥ ಬೀಜದಲ್ಲಿ ಮಹಾವೃಕ್ಷವೇ ಅವ್ಯಕ್ತ ರೂಪದಿಂದ ಅಡಗಿರುವುದೋ, ಬೀಜವು ಮೊಳೆತ ಬಳಿಕ ಮಹಾವೃಕ್ಷದಲ್ಲಿ ವ್ಯಕ್ತವಾಗುವುದೋ ಅದೇ ರೀತಿಯಲ್ಲಿ ಅವ್ಯಕ್ತದಿಂದ ಜಗತ್ತು ವ್ಯಕ್ತವಾಗಿ ಬೆಳೆದು ನಿಂತಿದೆ.

ಆತ್ಮಾನಮನುಸಂಯಾತಿ ಬುದ್ಧಿರವ್ಯಕ್ತಜಾ ತಥಾ ।
ತಾಮನ್ವೇತಿ ಮನೋ ಯದ್ವಲ್ಲೋಹವನ್ಮಣಿಸನ್ನಿಧೌ ॥ ೩ ॥

ಅವ್ಯಕ್ತ ತತ್ತ್ವದಿಂದ ಉತ್ಪನ್ನವಾದ ಬುದ್ಧಿಯು ಜೀವನನ್ನು ಅನುಸರಿಸುತ್ತದೆ. ಅಯಸ್ಕಾಂತವನ್ನು ಅನುಸರಿಸಿ ಕಬ್ಬಿಣವು ಹೇಗೆ ಚಲಿಸುತ್ತದೋ ಅದರಂತೆ ಅನುಸರಿಸುತ್ತದೆ.

ಅಭಿದ್ರವತ್ಯಯಸ್ಕಾಂತಮಯೋ ನಿಶ್ಚೇತನಾವುಭೌ ।
ಸ್ವಭಾವಹೇತುಜಾ ಭಾವಾ ಯದ್ವದನ್ಯದಪೀದೃಶಮ್ ॥ ೪ ॥

ಯಾವ ರೀತಿಯಲ್ಲಿ ಲೋಹವು ಅಚೇತನವಾಗಿದ್ದರೂ ಅಯಸ್ಕಾಂತದ ಕಡೆ ಚಲಿಸುತ್ತದೋ ಅದರಂತೆ ಶರೀರವು ಹುಟ್ಟಿದ ಕೂಡಲೇ ಪ್ರಾಣಿಯ ಪೂರ್ವಸಂಸ್ಕಾರದಿಂದ ಹುಟ್ಟಿದ ಸ್ವಾಭಾವಿಕವಾದ ಅವಿದ್ಯಾಕಾಮ ಕರ್ಮಗಳೆಲ್ಲವೂ ಶರೀರದ ಕಡೆಗೆ ಸೆಳೆಯಲ್ಪಡುತ್ತವೆ.

ತದ್ವದವ್ಯಕ್ತಜಾ ಭಾವಾಃ ಕರ್ತುಃ ಕಾರಣಲಕ್ಷಣಾಃ ।
ಅಚೇತನಾಶ್ಚೇತಯಿತುಃ ಕಾರಣಾದಭಿಸಂಗತಾಃ ॥ ೫ ॥

ಈ ರೀತಿ ಅವ್ಯಕ್ತದಿಂದ ಹುಟ್ಟಿದವುಗಳಾಗಿ ಜೀವನ ಕಾಮಕರ್ಮಾದಿ ಭಾವಗಳು ಎಲ್ಲವೂ ಜೀವನಿಗೆ ಚೈತನ್ಯವನ್ನು ತುಂಬುವ ಕಾಲ ಅದೃಷ್ಟಾದಿ ಕಾರಣನಾದ ಪರಮಾತ್ಮನಿಂದಲೇ ಒಟ್ಟಾಗಿ ಸೇರಿಸಲ್ಪಟ್ಟಿವೆ.

ನ ಭೂಃ ಖಂ ದ್ಯೌರ್ನ ಭೂತಾನಿ ನರ್ಷಯೋ ನ ಸುರಾಸುರಾಃ ।
ನಾನ್ಯದಾಸೀದೃತೇ ಜೀವಮಾಸೇದುರ್ನ ತು ಸಂಹಿತಮ್ ॥ ೬ ॥

ಹಿಂದೆ ಪೃಥಿವಿ, ಆಕಾಶ, ಸ್ವರ್ಗ, ಭೂತಗಣ, ಋಷಿಗಣ, ದೇವತೆಗಳು, ಅಸುರರು ಇವರು ಯಾರೂ ಇರಲಿಲ್ಲ. ಜೀವನೆನಿಸಿದ ನಾರಾಯಣನ ಅನುಗ್ರಹವಿಲ್ಲದೆ ಯಾವುದೂ ಇರಲಿಲ್ಲ. ಜಡಚೇತನಗಳ ಸಂಬಂಧವೂ ಆಗಿರಲಿಲ್ಲ.

ಪೂರ್ವಂ ನಿತ್ಯಂ ಸರ್ವಗತಂ ಮನೋಹೇತು ತ್ವಲಕ್ಷಣಮ್ ।
ಅಜ್ಞಾನಂಕರ್ಮ ನಿರ್ದಿಷ್ಟಮೇತತ್ ಕಾರಣಲಕ್ಷಣಮ್ ॥ ೭ ॥

ಕರ್ಮವು ಪ್ರವಾಹತಃ ನಿತ್ಯವಾದುದು. ಎಲ್ಲ ಜನ್ಮಕ್ಕೆ ಕಾರಣವಾಗಿ ಎಲ್ಲರಲ್ಲಿಯೂ ಇದೆ. ಕರ್ಮ ಜನ್ಮಕ್ಕೆ ಮನಸ್ಸು ಕಾರಣವು. ಜ್ಞಾನಕ್ಕಿಂತ ಭಿನ್ನವಾದುದು. ಪುಣ್ಯ-ಪಾಪ ಎಂದು ಎರಡು ವಿಧವು. ಈ ಸಂಸಾರಚಕ್ರಕ್ಕೆ ಕಾರಣವಾದುದು ಕರ್ಮವು.

ತತ್‌ಕಾರಣೇನ ಸಂಯುಕ್ತಂ ಕಾರ್ಯಸಂಗ್ರಹಕಾರಕಮ್ ।
ಯೇನೈತದ್ವರ್ತತೇ ಚಕ್ರಮನಾದಿನಿಧನಂ ಮಹತ್ ॥ ೮ ॥

ಜೀವಸ್ವಭಾವವೆಂಬ ಕಾರಣದಿಂದ ಭಗವಂತನಿಂದ ಅಜ್ಞಾನಿಯಾದ, ಪುಣ್ಯ-ಪಾಪಕರ್ಮಗಳ ಸಂಬಂಧವನ್ನು ಹೊಂದಿದ, ಸಂಸಾರಚಕ್ರದಲ್ಲಿ ಸುತ್ತುವ ಅರ್ಹತೆಯನ್ನು ಪಡೆದ ಈ ಜೀವನು ಅವನಿಂದಲೇ ನಿರ್ದೇಶಿಸಲ್ಪಟ್ಟಿದ್ದಾನೆ. ಮನೋಜನ್ಯವಾದ ಕರ್ಮಗಳಿಗಾಗಲೀ, ಸಂಸಾರಕ್ಕಾಗಲೀ ಕಾರಣನಾಗಿದ್ದಾನೆ. ಆದ್ದರಿಂದ ಶ್ರೀಹರಿಯೇ ಎಲ್ಲದಕ್ಕೂ ಮೂಲಕಾರಣ.

ಯೇನ ಸ್ವಭಾವಸದ್ಭಾವಂ ಹೇತುಭೂತಾ ಸಕಾರಣಾ ।
ಏವಂ ಪ್ರಾಕೃತವಿಸ್ತಾರೋ ಹ್ಯಾಶ್ರಿತ್ಯ ಪುರುಷಂ ಪರಮ್ ॥ ೯ ॥

ವಾಸನಾದಿ ಕಾರಣಗಳಿಂದ, ಸ್ವಭಾವ ಕಾರಣದಿಂದ ಯುಕ್ತನಾದ ಜೀವನು ಹಿಂದಿನ ಸಂಸ್ಕಾರಗಳನ್ನು ಅನುಸರಿಸಿ ಕರ್ಮಗಳಲ್ಲಿ ಪ್ರವೃತ್ತನಾಗುತ್ತಾನೆ. ಇದಕ್ಕೆ ನಿಯಾಮಕನಾಗಿ ಭಗವಂತನಿದ್ದಾನೆ. ಈ ಸಂಸಾರಚಕ್ರವು ಅನಾದಿಯೂ, ಅನಂತವೂ ಆಗಿ ಭಗವಂತನಿಂದ ಚಲನೆಯನ್ನು ಹೊಂದುತ್ತಲೇ ಇದೆ.

ಅವ್ಯಕ್ತನಾಭಂ ವ್ಯಕ್ತಾರಂ ವಿಕಾರಪರಿಮಂಡಲಮ್ ।
ಕ್ಷೇತ್ರಜ್ಞಾಧಿಷ್ಠಿತಂ ಚಕ್ರಂ ಸ್ನಿಗ್ಧಾಕ್ಷಂ ವರ್ತತೇ ಧ್ರುವಮ್ ॥ ೧೦ ॥

ಜನನ-ಮರಣ ಪ್ರವಾಹರೂಪವಾದ ಸಂಸಾರವು ಚಕ್ರದಂತೆ ತಿರುಗುತ್ತಿದೆ. ಮೂಲಪ್ರಕೃತಿಯೇ ಈ ಸಂಸಾರಚಕ್ರದ ನಾಭಿಸ್ಥಾನೀಯವಾದ ಛಿದ್ರವೆನಿಸಿದೆ. ಮಹತ್ತತ್ತ್ವ, ಅಹಂಕಾರತತ್ತ್ವ, ಬುದ್ಧಿತತ್ತ್ವಗಳೇ ಚಕ್ರದ ಅರಗಳೆನಿಸುತ್ತವೆ. ಏಕಾದಶೇಂದ್ರಿಯಗಳು, ಪಂಚಭೂತಗಳೆಂಬ ಹದಿನಾರು ವಿಕಾರಗಳೇ ಚಕ್ರದ ಮಂಡಲಾಕಾರದ ಅಚ್ಚಾಗಿರುತ್ತದೆ. ಈ ಚಕ್ರವು ತಿರುಗುತ್ತಲೇ ಇರುತ್ತದೆ. ಕ್ಷೇತ್ರಜ್ಞನಾದ ಪರಮಾತ್ಮನಿಂದ ಧರಿಸಲ್ಪಟ್ಟಿದೆ. ಮನೋಹರವಾದ ಕಾಲವೆಂಬ ಚಕ್ರವು ಭಗವಂತನಿಂದ ನಿಯಮ್ಯವಾಗಿದೆ.

ಸ್ನಿಗ್ಧತ್ವಾತ್ತಿಲವತ್ ಸರ್ವಂ ಚಕ್ರೇಽಸ್ಮಿನ್ ಪೀಡ್ಯತೇ ಜಗತ್ ।
ತಿಲಪೀಡೈರಿವಾಕ್ರಮ್ಯ ಭೋಗೈರಜ್ಞಾನಸಂಭವೈಃ ॥ ೧೧ ॥

ಸಂಸಾರಚಕ್ರದಲ್ಲಿ ಪರಸ್ಪರ ಸ್ನೇಹವು ತುಂಬಿರುವುದರಿಂದ ಎಳ್ಳಿನಲ್ಲಿ ತುಂಬಿದ ಎಣ್ಣೆಯನ್ನು ಗಾಣಕ್ಕೆ ಹಾಕಿ ಅರೆಯುವಂತೆ ಪ್ರಪಂಚವು ಅಜ್ಞಾನಾಸ್ಕಂದಿತವಾದ ಭೋಗಾದಿಗಳಿಂದ ಆಕ್ರಮಿಸಲ್ಪಟ್ಟು, ಜನನ-ಮರಣ ರೂಪವಾದ ಚಕ್ರದಲ್ಲಿ ಅರೆಯಲ್ಪಡುತ್ತದೆ.

ಪ್ರಾಣೋ ನಾಯಂ ಹಿ ಶಾಂತೇ ತು ವಿರೋಧಾತ್ ಪ್ರತಿಪಾಲನಮ್ ।
ದೇಹಸ್ಯೇಷೂನ್ಯ ಆಸ್ತೇ ಯಃ ಶುದ್ಧೋಽಚಿಂತ್ಯಃ ಸನಾತನಃ ॥ ೧೨ ॥

ಜೀವಾತ್ಮನು ನಿತ್ಯ ಸುಖಸ್ವರೂಪಿಯಾದ ಪರಮಾತ್ಮನ ಅಧೀನನಾಗಿದ್ದಾನೆ. ಅನಾದ್ಯನಂತ ಕಾಲದಿಂದಲೂ ಪರಮಾತ್ಮನು ನಿರ್ವಿಕಾರನಾಗಿ ಜೀವನನ್ನು ರಕ್ಷಿಸುತ್ತಿದ್ದಾನೆ. ಇವನನ್ನು ಜೀವಾತ್ಮನು ಅರಿತಾಗ ಜನನ-ಮರಣಾದಿ ವ್ಯಾಪಾರಗಳನ್ನು ಮಾಡುವ ಕಾಲಚಕ್ರವು ಪುನಃ ಈ ಸಂಸಾರದಲ್ಲಿ ತಿರುಗುವುದಿಲ್ಲ. ಅರ್ಥಾತ್ ಪರಮಾತ್ಮನೇ ಈ ಸಂಸಾರಚಕ್ರದ ಗತಿಯನ್ನು ನಿಲ್ಲಿಸುತ್ತಾನೆ. ಪರಮಾತ್ಮನಾದರೂ ಪ್ರಾಕೃತದೇಹಶೂನ್ಯನಾಗಿದ್ದಾನೆ. ಅಂತಹ ಶುದ್ಧನಾದ, ಅಚಿಂತ್ಯನಾದ ಪರಮಾತ್ಮನ ಸನ್ನಿಧಾನದಲ್ಲಿಯೇ ಜೀವಾತ್ಮನು ಇದ್ದಾನೆ.

ಭ್ರಾಮಯನ್ನೇಷತೋ ಯಾತಿ ಕಾಲಚಕ್ರಸಮನ್ವಿತಃ ।
ಭೂತಾನಿ ಮೋಹಯನ್ನಿತ್ಯಂ ಚಕ್ರಸ್ಯ ಚ ರಥಂ ಗತಃ ॥ ೧೩ ॥

ಕಾಲಚಕ್ರದಲ್ಲಿ ಸಿಲುಕಿದ ಜೀವನು ಭ್ರಮೆಯಿಂದಲೇ ಬಾಹ್ಯಸುಖಗಳನ್ನು ಬಯಸುತ್ತಾ ಸಾಗುತ್ತಾನೆ. ಭಗವಂತನು ಸಂಸಾರಚಕ್ರದ ವೇಗಕ್ಕೆ ಈ ಜೀವನನ್ನು ಮೋಹವೆಂಬ ಪಾಶದಿಂದ ಸಿಲುಕಿಸಿ ನಿತ್ಯವೂ ಇದರಲ್ಲಿಯೇ ಪರಿಭ್ರಮಣೆ ಹೊಂದುವಂತೆ ಮಾಡುತ್ತಾನೆ.

ಸ್ನೇಹದ್ರವ್ಯಸಮಾಯೋಗೇ ಕ್ಷೇತ್ರಪಾಯಂ ನ ವಸ್ತುಷು ।
ತಿಲವತ್ ಪೀಡಿತೇ ಚಕ್ರೇ ಹ್ಯಾಧಿಯಂತ್ರನಿಪೀಡಿತೇ ।
ಬಹಿಶ್ಚಾಧಿಷ್ಠಿತೇ ಯದ್ವಜ್ಜ್ಞಾನಿನಾಂ ಕರ್ಮಸಂಭವಮ್ ॥ ೧೪ ॥

ಸ್ನೇಹವೆಂಬ ಗುಣದ ಸಮಾಯೋಗವಾದಾಗ ಜೀವನು ಸಂಸಾರದ ಆದಿ ಎಂಬ ಯಂತ್ರದಿಂದ ನಿತರಾಂ ಪೀಡಿತನಾಗಿ ಸಂಸಾರಚಕ್ರದಲ್ಲಿ ತಿಲದಂತೆ ಪೀಡಿಸಲ್ಪಡುತ್ತಾನೆ. ಶೂಲದಲ್ಲಿ ಚುಚ್ಚಿದ ಮಾಂಸವನ್ನು ಇಷ್ಟಸಾಧನ ಎಂದು ತಿಳಿದ ಮತ್ಸ್ಯಗಳು ಹೇಗೆ ತಿನ್ನಲು ಹೋಗಿ ಸಿಲುಕಿ ಬೀಳುತ್ತಾವೋ ಇದರಂತೆ ಕರ್ಮದಿಂದ ಉತ್ಪನ್ನವಾಗುವ ಮೂಢಜೀವರು ಬಾಹ್ಯಸಾಧನ ಸುಖದಲ್ಲಿ ಇಷ್ಟಸಾಧನತ್ವ ಬುದ್ಧಿಯಿಂದ ಸಂಸಾರ ಚಕ್ರದಲ್ಲಿ ಸಿಲುಕಿಕೊಳ್ಳುತ್ತಾರೆ.

ಕರ್ಮ ತತ್ಕುರುತೇ ತರ್ಷಾದಹಂಕಾರಪರಿಗ್ರಹಮ್ ।
ಕಾರ್ಯಕಾರಣಸಂಯೋಗೇ ಸ ಹೇತುರುಪಪಾದಿತಃ ॥ ೧೫ ॥

ಜೀವನು ಅಹಂಕಾರಕ್ಕೆ ಅಧೀನನಾಗಿ ತೃಷ್ಣೆಯಿಂದ ಕರ್ಮಗಳನ್ನು ಆಚರಿಸುತ್ತಾನೆ. ಹಾಗೆ ಆಚರಿಸುವ ಕರ್ಮಗಳೇ ಮುಂದಿನ ಕಾರ್ಯಕಾರಣಗಳ ಸಂಬಂಧಕ್ಕೆ, ಮತ್ತೊಂದು ದೇಹದ ಸಂಬಂಧಕ್ಕೆ ಕಾರಣವಾಗುತ್ತದೆ.

ಯಥಾ ಚಾಕರ್ಣ್ಯ ತಚ್ಛಿಷ್ಯಸ್ತ ತ್ವಜ್ಞಾನಮನುತ್ತಮಮ್ ।
ನಾತ್ಯೇತಿ ಕಾರಣಂ ಕಾರ್ಯಂ ನ ಕಾರ್ಯಂ ಕಾರಣಂ ತಥಾ ।
ಕಾರ್ಯಾಣಾಂ ತೂಪಕರಣೇ ಕಾಲೋ ಭವತಿ ಹೇತುಮಾನ್ ॥ ೧೬ ॥

ಯಥಾಕರ್ಣ್ಯ ಚ ತಚ್ಛಿಷ್ಯಸ್ತತ್ತ್ವಜ್ಞಾನಮನುತ್ತಮಮ್ ।
ನಾತ್ಯೇತಿ ಕಾರಣಂ ಕಾರ್ಯಂ ನ ಕಾರ್ಯಂ ಕಾರಣಂ ತಥಾ ॥ ೧೭ ॥

ಯಾವ ರೀತಿಯಾಗಿ ಅನುತ್ತಮವಾದ ತತ್ತ್ವಜ್ಞಾನವನ್ನು ಗುರುವಿನಿಂದ ಪಡೆದ ಶಿಷ್ಯನು ಗುರುವನ್ನು ಬಿಟ್ಟುಹೋಗುವುದಿಲ್ಲವೋ ಅದರಂತೆ ಕಾರಣವು ಕಾರ್ಯವನ್ನು ಬಿಟ್ಟುಹೋಗುವುದಿಲ್ಲ. ಕಾರ್ಯವು ಕಾರಣವನ್ನು ಅನುಸರಿಸಿಯೂ ಹೋಗುವುದಿಲ್ಲ. ಕಾರ್ಯ ಮಾಡುವ ಸಮಯದಲ್ಲಿ ಕಾರ್ಯದ ಸಿದ್ಧಿಗೆ ಅಥವಾ ಅಸಿದ್ಧಿಗೆ ಕಾಲವೇ ಕಾರಣವಾಗಿರುತ್ತದೆ. ಇಲ್ಲಿ ಕಾಲನಿಯಾಮಕನಾದವನು ನಾರಾಯಣನೇ ಆಗಿದ್ದಾನೆ.

ಹೇತುಯುಕ್ತಾಃ ಪ್ರಕೃತಯೋ ವಿಕಾರಾಶ್ಚ ಪರಸ್ಪರಮ್ ।
ಅನ್ಯೋನ್ಯಮಭಿವರ್ತಂತೇ ಪುರುಷಾಧಿಷ್ಠಿತಾಃ ಸದಾ ॥ ೧೮ ॥

ಕಾರಣಸಹಿತವಾದ ಎಂಟು ಮೂಲಪ್ರಕೃತಿಗಳು, ಅವುಗಳ ಹದಿನಾರು ವಿಕಾರಗಳು ಪುರುಷನಲ್ಲಿ ಆಶ್ರಯವನ್ನು ಪಡೆದು ಪರಸ್ಪರವಾಗಿ ಸೇರುತ್ತಿರುತ್ತವೆ. ಇದರಂತೆ ಸೃಷ್ಟಿಯನ್ನು ಬೆಳೆಸುತ್ತಿರುತ್ತವೆ.

ಸರಜಸ್ತಾಮಸೈರ್ಭಾವೈಶ್ಚ್ಯುತೋ ಹೇತುಬಲಾನ್ವಿತಃ ।
ಕ್ಷೇತ್ರಜ್ಞಮೇವಾನುಯಾತಿ ಪಾಂಸುರ್ವಾತೇರಿತೋ ಯಥಾ ।
ನ ಚ ತೈಃ ಸ್ಪೃಶ್ಯತೇ ಭಾವೋ ನ ತೇ ತೇನ ಮಹಾತ್ಮನಾ ॥ ೧೯ ॥

ರಾಜಸ-ತಾಮಸ ಭಾವಗಳಿಂದ ರಹಿತನಾದ, ಪರಮಾತ್ಮನೆಂಬ ಬಲವನ್ನು ಹೊಂದಿದ ಜ್ಞಾನಿಯು ಕ್ಷೇತ್ರಜ್ಞನೆನಿಸಿದ ನಾರಾಯಣನನ್ನು ಅನುಸರಿಸುತ್ತಾನೆ. ಬಾಹ್ಯವಾದ ಜಗತ್ತಿನ ವಿಕಾರಗಳ ಸ್ಪರ್ಶವು ಆ ಮಹಾತ್ಮನಿಗೆ ಆಗುವುದಿಲ್ಲ. ಭೂಮಿಯ ಧೂಳಿನ ಜೊತೆಗೆ ಗಾಳಿಯು ಬೀಸಿದಾಗ ಭೂಮಿಯಲ್ಲಿದ್ದ ವಾಯುವು ಭೂಮಿಯ ರಜಸ್ಸಿನಿಂದ ಕೂಡಿದ್ದರೂ ಅದೇ ಗಾಳಿಯು ಆಕಾಶದಲ್ಲಿ ಬೀಸುವಾಗ ಯಾವ ಧೂಳಿನ ಸಂಬಂಧವೂ ಹೇಗೆ ಉಂಟಾಗುವುದಿಲ್ಲವೋ, ಪ್ರಕೃತಿಯ ವಿಷಯಗಳ ಸಂಬಂಧವನ್ನು ಜೀವನು ಹೊಂದಿದಾಗ ರಜೋಗುಣಗಳ ವಿಕಾರಗಳಿಗೆ ತುತ್ತಾಗುತ್ತಿದ್ದರೂ ಆಕಾಶದಂತೆ ಅಸಂಗನಾದ ಪರಮಾತ್ಮನ ಸಂಬಂಧವನ್ನು ಹೊಂದಿದಾಗ ಪ್ರಕೃತಿಯ ಸಂಬಂಧದಿಂದ ದೂರನಾಗುತ್ತಾನೆ.

ಸರಜಸ್ಕೋऽರಜಸ್ಕಶ್ಚ ಸ ವೈ ವಾಯುರ್ಯಥಾ ಭವೇತ್ ।
ತಥೈತದಂತರಂ ವಿದ್ಯಾತ್ ಸತ್ತ ಕ್ಷೇತ್ರಜ್ಞಯೋರ್ಬುಧಃ ।
ಅಭ್ಯಾಸಾತ್ ಸ ತಥಾ ಯುಕ್ತೋ ನ ಗಚ್ಛೇತ್ ಪ್ರಕೃತಿಂ ಪುನಃ ॥೨೦॥

ಒಂದೇ ಗಾಳಿಯು ಭೂಮಿಯ ಸಂಬಂಧವನ್ನು ಹೊಂದಿದಾಗ ಧೂಳಿನಿಂದ ಸಹಿತವಾಗುತ್ತದೆ. ಅದೇ ಗಾಳಿಯು ಆಕಾಶದ ಸಂಬಂಧವನ್ನು ಹೊಂದಿದಾಗ ಧೂಳಿನಿಂದ ರಹಿತವಾಗಿರುತ್ತದೆ. ಇದರಂತೆ ಎಂದಿಗೂ ರಜೋಗುಣದ ಸಂಬಂಧವೇ ಇಲ್ಲದಿದ್ದವನು ಕ್ಷೇತ್ರಜ್ಞನಾದ ಪರಮಾತ್ಮನಾಗಿದ್ದಾನೆ. ಪ್ರಕೃತಿಯ ಸಂಬಂಧವನ್ನು ಹೊಂದುವವನು ಜೀವನೆನಿಸಿದ್ದಾನೆ. ತ್ರಿಗುಣವರ್ಜಿತನಾದ ಪರಮಾತ್ಮನಿಗೂ, ತ್ರಿಗುಣಗಳಿಂದ ಬದ್ಧರಾದ ಜೀವರಿಗೂ ಈ ಅಂತರವನ್ನು ಅರ್ಥಮಾಡಿಕೊಳ್ಳಬೇಕು. ಜೀವನು ಪ್ರಕೃತಿಗುಣಗಳಿಂದ ಬದ್ಧನಾಗಿದ್ದಾನೆ. ಪುನಃ ಪುನಃ ಅಂತರ್ಯಾಮಿಯಾದ ಕ್ಷೇತ್ರಜ್ಞನನ್ನು ಚಿಂತಿಸುವುದರಿಂದ ಅವನು ಈ ಪ್ರಕೃತಿಯ ಸಂಬಂಧದಿಂದ ದೂರನಾಗಿ ಅಸಂಗನಾಗಿರುತ್ತಾನೆ. ಪುನಃ ಈ ಸಂಸಾರಚಕ್ರದಲ್ಲಿ ತಿರುಗುವುದಿಲ್ಲ.

ಸಂದೇಹಮೇತಮುತ್ಪನ್ನಮಚ್ಛಿನದ್ಭಗವಾನೃಷಿಃ ।
ತಥಾ ವಾರ್ತಾಂ ಸಮೀಕ್ಷೇತ ಕೃತಲಕ್ಷಣಸಮ್ಮಿತಾಮ್ ॥ ೨೧ ॥

ಯುಧಿಷ್ಠಿರನೇ, ಹೀಗೆ ಗುರುವು ಶಿಷ್ಯನ ಮನಸ್ಸಿನಲ್ಲಿ ಹುಟ್ಟಿದ ಸಂದೇಹವನ್ನು ಪರಿಹರಿಸಿದನು. ಆದ್ದರಿಂದ ವಿದ್ವಾಂಸನಾದವನು ನಮ್ಮ ಉದ್ದೇಶ ಸಿದ್ಧಿಗೆ ಯಾವ ಉಪಾಯವು ಸಹಾಯಕವಾಗುತ್ತದೋ ಅಂತಹ ಉಪಾಯವನ್ನೇ ಅನ್ವೇಷಿಸಬೇಕು.

ಬೀಜಾನ್ಯಗ್ನ್ಯುಪದಗ್ಧಾನಿ ನ ರೋಹಂತಿ ಯಥಾ ಪುನಃ ।
ಜ್ಞಾನದಗ್ಧೈಸ್ತಥಾ ಕ್ಲೇಶೈರ್ನಾತ್ಮಾ ಸಂಬದ್ಧ್ಯತೇ ಪುನಃ ॥ ೨೨ ॥

ಯಾವ ರೀತಿಯಲ್ಲಿ ಬೆಂಕಿಯಲ್ಲಿ ಹುರಿದ ಬೀಜಗಳು ಪುನಃ ಮೊಳಕೆಯನ್ನು ಹೊಂದುವುದಿಲ್ಲವೋ ಅದೇ ರೀತಿ ಭಗವಂತನ ಜ್ಞಾನವೆಂಬ ಅಗ್ನಿಯಿಂದ ದಗ್ಧವಾದ ಕ್ಲೇಶಗಳಿಂದ ಕೂಡಿರುವ ಜೀವಾತ್ಮನಿಗೆ ಪುನಃ ಈ ಸಂಸಾರವು ಮೊಳೆಯುವುದಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಏಕಚತ್ವಾರ್ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನಲವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೆರಡನೆಯ ಅಧ್ಯಾಯ

ನಿಷಿದ್ಧಾಚರಣೆಗಳ ತ್ಯಾಗ. ಸತ್ತ್ವ-ರಜಸ್ತಮೋಗುಣಗಳ ಕಾರ್ಯ ಮತ್ತು ಅವುಗಳ ಪರಿಣಾಮಗಳ ಬಗ್ಗೆ ನಡೆದ ಗುರು-ಶಿಷ್ಯರ ಸಂವಾದವನ್ನು ಭೀಷ್ಮರು ಯುಧಿಷ್ಠಿರನಿಗೆ ತಿಳಿಸಿದುದು.

ಗುರುಃ

ಪ್ರವೃತ್ತಿಲಕ್ಷಣೋ ಧರ್ಮೋ ಯಥಾಯಮುಪಪದ್ಯತೇ ।
ತೇಷಾಂ ವಿಜ್ಞಾನನಿಷ್ಠಾನಾಮನ್ಯತ್ತತ್ತ್ವಂ ನ ರೋಚತೇ ॥ ೪ ॥

ಗುರು– ಕರ್ಮನಿಷ್ಠರಾದ ಪುರುಷರಿಗೆ ಪ್ರವೃತ್ತಿಲಕ್ಷಣಗಳಿಂದ ಕೂಡಿರುವ ಧರ್ಮವು ಬಹಳ ಬೇಗ ರುಚಿಸುತ್ತದೆ. ಅದೇ ರೀತಿ ಜ್ಞಾನನಿಷ್ಠರಾದ ಪುರುಷರಿಗೆ ಜ್ಞಾನಕ್ಕಿಂತಲೂ ಬೇರೆಯಾದ ಯಾವ ತತ್ತ್ವವೂ ರುಚಿಸುವುದಿಲ್ಲ.

ದುರ್ಲಭಾ ವೇದವಿದ್ವಾಂಸೋ ವೇದೋಕ್ತೇಷು ವ್ಯವಸ್ಥಿತಾಃ ।
ಪ್ರಯೋಜನಮತಸ್ತತ್ರ ಮಾರ್ಗಮಿಚ್ಛಂತಿ ಸಂಸ್ತುತಮ್ ॥ ೨ ॥

ಜಗತ್ತಿನಲ್ಲಿ ವೇದವಿಹಿತವಾದ ಅಗ್ನಿಹೋತ್ರಾದಿ ಸತ್ಕರ್ಮಗಳನ್ನು ಆಚರಿಸುತ್ತಾ ಶಮ-ದಮಾದಿಗಳಲ್ಲಿ ನಿರತರಾಗಿರುವ ವೇದವಿದ್ವಾಂಸರು ಅತ್ಯಂತ ದುರ್ಲಭರಾಗಿದ್ದಾರೆ. ಬುದ್ಧಿವಂತರಾದವರು ವೇದೋಕ್ತವಾದ ಮೋಕ್ಷದ ಮಹತ್ವವನ್ನು, ಪ್ರಯೋಜನವನ್ನು ಪ್ರಶಂಸನೀಯವಾದುದೆಂದು ತಿಳಿದು ಅದನ್ನೇ ಹೊಂದಲು ಇಚ್ಛಿಸುತ್ತಾರೆ.

ವೇದಸ್ಯ ನ ವಿದುರ್ಭಾವಂ ಜ್ಞಾನಮಾರ್ಗಪ್ರತಿಷ್ಠಿತಮ್ ।
ಸದ್ಭಿರಾಚರಿತತ್ವಾತ್ತು ವೃತ್ತಮೇತದಗರ್ಹಿತಮ್ ।
ಇಯಂ ಸಾ ಬುದ್ಧಿರನ್ಯೇಯಂ ಯಯಾ ಯಾತಿ ಪರಾಂ ಗತಿಮ್॥ ೩ ॥

ಕೆಲವರು ವೇದಗಳು ಬೋಧಿಸುತ್ತಿರುವ ಜ್ಞಾನಮಾರ್ಗವನ್ನು ಅರ್ಥ ಮಾಡಿಕೊಳ್ಳರು. ಸಜ್ಜನರು ವೇದವಿಹಿತವಾದ ಜ್ಞಾನಮಾರ್ಗವನ್ನೇ ಅನುಸರಿಸಿರುವುದರಿಂದ ಈ ರೀತಿಯಾಗಿ ಜ್ಞಾನಮಾರ್ಗದಲ್ಲಿಯೇ ಸಾಗುವುದು ಅನಿಂದಿತವಾದ ಮಾರ್ಗವೆನಿಸಿದೆ. ಈ ಜ್ಞಾನಮಾರ್ಗವನ್ನು ಅನುಸರಿಸಿ ನಡೆಯುವವರು ಉತ್ತಮವಾದ ಮೋಕ್ಷವನ್ನು ಹೊಂದುತ್ತಾರೆ.

ಶರೀರವಾನುಪಾದತ್ತೇ ಮೋಹಾತ್ ಸರ್ವಪರಿಗ್ರಹಾನ್ ।
ಕಾಮಕ್ರೋಧಾದಿಭಿರ್ಭಾವೈರ್ಯುಕ್ತೋ ರಾಜಸತಾಮಸೈಃ ॥ ೪ ॥

ದೇಹಾಭಿಮಾನವನ್ನು ಹೊಂದಿದ ಪುರುಷನು ಮೋಹದಿಂದಾಗಿ, ಕ್ರೋಧ ಲೋಭಗಳೇ ಮೊದಲಾದ ರಾಜಸ-ತಾಮಸಗಳಿಂದ ಕೂಡಿದವನಾಗಿ ಎಲ್ಲಾ ವಸ್ತುಗಳನ್ನೂ ಸಂಗ್ರಹಿಸುತ್ತಾ ಸಾಗುತ್ತಾನೆ.

ನಾಶುದ್ಧಮಾಚರೇತ್ ತಸ್ಮಾದಭೀಪ್ಸನ್ ದೇಹಯಾಪನಮ್ ।
ಕರ್ಮಣೋ ವಿವರಂ ಕುರ್ವನ್ನ ಲೋಕಾನಾಪ್ನುಯಾಚ್ಛುಭಾನ್ ॥ ೫ ॥

ಆದ್ದರಿಂದ ದೇಹಬಂಧನದಿಂದ ಮುಕ್ತನಾಗಲು ಅಪೇಕ್ಷೆ ಪಡುವ ವ್ಯಕ್ತಿಯು ಅಶುದ್ಧವಾದ ಆಚರಣೆಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಬಾರದು. ನಿಷ್ಕಾಮ ಕರ್ಮಗಳ ಮೂಲಕ ಸದ್ಗತಿಯನ್ನು ಹೊಂದಲು ಬಯಸಬೇಕು. ಕಾಮ್ಯಕರ್ಮಗಳಿಗೆ ಅವಕಾಶವನ್ನು ನೀಡಿ ಪುಣ್ಯಲೋಕವನ್ನು ಹೊಂದಲು ಎಂದೂ ಬಯಸಬಾರದು.

ಲೋಹಯುಕ್ತಂ ಯಥಾ ಹೇಮ ವಿಪಕ್ವಂ ನ ವಿರಾಜತೇ ।
ತಥಾಪಕ್ವಕಷಾಯಾಖ್ಯಂ ವಿಜ್ಞಾನಂ ನ ಪ್ರಕಾಶತೇ ॥ ೬ ॥

ಇತರ ಲೋಹಗಳಿಂದ ಮಿಶ್ರಣವನ್ನು ಹೊಂದಿದ ಬಂಗಾರವನ್ನು ಬೆಂಕಿಯಲ್ಲಿ ಹಾಕಿ ಶುದ್ಧಗೊಳಿಸದಿದ್ದರೆ ಹೇಗೆ ಪ್ರಕಾಶಿಸುವುದಿಲ್ಲವೋ ಅದರಂತೆ ಜೀವನ ಚಿತ್ತದಲ್ಲಿರುವ ರಾಗ-ದ್ವೇಷಾದಿ ದೋಷಗಳಿಂದ ಜೀವಾತ್ಮನು ಎಂದಿಗೂ ಪ್ರಕಾಶವನ್ನು ಹೊಂದುವುದಿಲ್ಲ. ಪರಮಾತ್ಮನ ಜ್ಞಾನವೆಂಬ ಬೆಂಕಿಯಲ್ಲಿ ಜೀವಾತ್ಮನನ್ನು ಹೋಮಿಸಿ ಪ್ರಕಾಶಿಸುವಂತೆ ಮಾಡಬೇಕು.

ಕೇಚಿದಾತ್ಮಗುಣಂ ಪ್ರಾಪ್ತಾಸ್ತೇ ಮುಕ್ತಾಶ್ಚಕ್ರಬಂಧನಾತ್ ।
ಇತರೇ ದುಃಖಸಂದ್ವಂದ್ವಾಸ್ತಥಾ ದುಃಖಪರಾಯಣಾಃ ॥ ೭ ॥

ಕೆಲವರು ಪರಮಾತ್ಮನ ಜ್ಞಾನವನ್ನು ಹೊಂದಿದವರಾಗಿ ಈ ಸಂಸಾರಚಕ್ರ ಬಂಧನದಿಂದ ಬಿಡುಗಡೆಯನ್ನು ಹೊಂದಿರುತ್ತಾರೆ. ಇನ್ನು ಕೆಲವರು ಸುಖ-ದುಃಖಗಳ ಈ ದ್ವಂದ್ವಗಳಲ್ಲೇ ಸಿಲುಕಿದವರಾಗಿ, ದುಃಖಪರಾಯಣರಾಗಿ ಇಲ್ಲಿಯೇ ಸುತ್ತುತ್ತಾರೆ.

ಶೋಕಕರ್ಮಾನುರೂಪಂ ತೇ ಜಾಯಮಾನಾಃ ಪುನಃ ಪುನಃ ।
ಕ್ರೋಧಲೋಭಮದಾವಿಷ್ಟಾ ಮೂಢಾಂತಃಕರಣಾಃ ಸದಾ ॥ ೮ ॥

ಕರ್ಮಾನುಗುಣವಾದ ಶೋಕದಿಂದಲೇ ಪುನಃ ಪುನಃ ಹುಟ್ಟನ್ನು ಪಡೆಯುವರಾಗಿ ಕ್ರೋಧ-ಲೋಭ-ಮದಾವಿಷ್ಟರಾಗಿ ಮೂಢಾಂತಃಕರಣವುಳ್ಳವರಾಗಿ ಯಾವಾಗಲೂ ಇಲ್ಲೇ ಹುಟ್ಟುತ್ತಿರುತ್ತಾರೆ.

ಯಥಾ ವೃಕ್ಷಸ್ಯ ಸಂಛಾಯಾ ನಾಸ್ತಿ ನಿತ್ಯತಯಾ ಪರಾ ।
ಗುಣಾನೇವ ತಥಾ ಚಿಂತ್ಯಾ ಸಂತ್ಯೇತೇ ಚ ವಿದುರ್ಬುಧಾಃ ॥ ೯ ॥

ಯಾವ ರೀತಿಯಾಗಿ ವೃಕ್ಷದ ನೆರಳು ನಿತ್ಯವೂ ಬುಡದಲ್ಲಿ ಕುಳಿತಿರುವವರನ್ನು ರಕ್ಷಿಸುವುದಿಲ್ಲವೋ ಅದರಂತೆ ಈ ತ್ರಿಗುಣಗಳು ಜೀವರನ್ನು ನಿತ್ಯವೂ ರಕ್ಷಿಸುವುದಿಲ್ಲ ಎಂಬುದನ್ನು, ರೂಪಾದಿ ಗುಣಗಳ ಅನಿತ್ಯತೆಯನ್ನು ಜ್ಞಾನಿಗಳು ತಿಳಿದಿರುತ್ತಾರೆ.

ಯಶ್ಚಾಧರ್ಮಂ ಚರೇನ್ಮೋಹಾತ್ ಕಾಮಲೋಭಾವನು ಪ್ಲವನ್ ।
ಧರ್ಮ್ಯಂ ಪಂಥಾನಮಾಕ್ರಮ್ಯ ಸಾನುಬಂಧೋ ವಿನಶ್ಯತಿ ॥ ೧೦ ॥

ಯಾವ ವ್ಯಕ್ತಿಯು ಲೋಭವಶನಾಗಿ ಕಾಮ-ಕ್ರೋಧಾದಿಗಳನ್ನೇ ಅನುಸರಿಸುತ್ತಾ ಹೋಗುತ್ತಾನೋ ಅವನು ಧರ್ಮಮಾರ್ಗವನ್ನು ಉತ್ತಮಿಸಿದ ಕಾರಣದಿಂದ ಜ್ಞಾತಿ ಬಂಧುಗಳ ಸಹಿತವಾಗಿ ವಿನಾಶವನ್ನು ಹೊಂದುತ್ತಾನೆ.

ಅಚಲಂ ಜ್ಞಾನಮಪ್ರಾಪ್ಯ ಚಲಚಿತ್ತಶ್ಚಲಾನಿಯಾತ್ ।
ಶಬ್ದಾದೀನ್ ವಿಷಯಾಂಸ್ತಸ್ಮಾದಸಂರಾಗಾದನುಪ್ಲವೇತ್ ।
ಕ್ರೋಧಹರ್ಷೌ ವಿಷಾದಶ್ಚ ಜಾಯಂತೇ ಹಿ ಪರಸ್ಪರಮ್ ॥ ೧೧ ॥

ಚಂಚಲವಾದ ಮನಸ್ಸುಳ್ಳವನು ನಿಶ್ಚಲವಾದ ಭಗವದ್ಜ್ಞಾನವನ್ನು ಹೊಂದದಿದ್ದಲ್ಲಿ ಪುನಃ ಪುನಃ ಚಂಚಲವಾದ ಪ್ರಕೃತಿಯನ್ನೇ ಹೊಂದುತ್ತಿರುತ್ತಾನೆ. ಶಬ್ದಾದಿ ವಿಷಯಗಳಲ್ಲಿಯೇ ರಾಗವನ್ನು ಹೊಂದುತ್ತಾ ಈ ಸಂಸಾರದಲ್ಲಿಯೇ ಮುಳುಗುತ್ತಾನೆ. ಈ ವಿಷಯಗಳ ಸಂಗದಿಂದ ಕ್ರೋಧ-ಹರ್ಷ-ವಿಷಾದಗಳು ಒಂದರಿಂದ ಒಂದು ಹುಟ್ಟಿಕೊಳ್ಳುತ್ತವೆ.

ಗುಣಾಃ ಕಾರ್ಯಾಃ ಕ್ರೋಧಹರ್ಷೌ ಸುಖದುಃಖೇ ಪ್ರಿಯಾಪ್ರಿಯೇ ।
ದ್ವಂದ್ವಾನ್ಯಥೈವಮಾದೀನಿ ವಿಜಯೇಚ್ಚೈವ ಸರ್ವವಿತ್ ॥ ೧೨ ॥

ಕ್ರೋಧ-ಹರ್ಷಗಳು ಮೂರುಗುಣಗಳ ಕಾರ್ಯ ಎನಿಸಿವೆ. ಸುಖ-ದುಃಖಗಳು, ಪ್ರಿಯ-ಅಪ್ರಿಯಗಳು ಮೊದಲಾದ ದ್ವಂದ್ವಗಳನ್ನು ಭಗವಂತನ ಜ್ಞಾನದಿಂದಲೇ ಜಯಿಸಿಕೊಳ್ಳಬೇಕು.

ಪಂಚಭೂತಾತ್ಮಕೇ ದೇಹೇ ಸತ್ತ್ವರಾಜಸತಾಮಸೇ ।
ಕಮಭಿಷ್ಟುವತೇ ಚಾಯಂ ಕಂ ವಾ ಕ್ರೋಶತಿ ಕಿಂ ವದೇತ್ ॥ ೧೩ ॥

ದೇಹವು ಪಂಚಭೂತಾತ್ಮಕವಾಗಿದೆ. ಸತ್ತ್ವರಜಸ್ತಮೋಗುಣಗಳೆಂಬ ಮೂರು ಗುಣಗಳಿಂದ ಕೂಡಿದೆ. ಇಂತಹ ದೇಹದಲ್ಲಿರುವ ಜೀವನು ಯಾರನ್ನು ಸ್ತುತಿಸುತ್ತಾನೆ? ಯಾರನ್ನು ನಿಂದಿಸುತ್ತಾನೆ? ಏನನ್ನು ಹೇಳಿಕೊಂಡು ಕಿರುಚಾಡುತ್ತಾನೆ? ಬಾಹ್ಯವಾಗಿರುವ ಈ ಇಂದ್ರಿಯವ್ಯಾಪಾರಗಳು ಆತ್ಮನಿಗೆ ಸಂಬಂಧಿಸಿರುವುದಿಲ್ಲ.

ಸ್ಪರ್ಶರೂಪರಸಾದ್ಯೇಷು ಸಂಗಂ ಗಚ್ಛಂತಿ ಬಾಲಿಶಾಃ ।
ನಾವಗಚ್ಛಂತ್ಯವಿಜ್ಞಾನಾದಾತ್ಮಜಂ ಪಾರ್ಥಿವಂ ಗುಣಮ್ ॥ ೧೪ ॥

ಅಜ್ಞಾನಿಗಳಾದ ಪುರುಷರು ರೂಪ, ಸ್ಪರ್ಶ, ರಸಾದಿ ವಿಷಯ ಸುಖಗಳಲ್ಲಿಯೇ ಆಸಕ್ತರಾಗಿರುತ್ತಾರೆ. ಅವರಿಗೆ ಭಗವಂತನ ಜ್ಞಾನವು ಇಲ್ಲದಿರುವುದರಿಂದ ದೇಹದಿಂದ ಕೂಡಿಕೊಂಡು ಹುಟ್ಟಿರುವ ಜೀವನು ತನ್ನ ದೇಹವು ಪೃಥಿವಿಯ ವಿಕಾರವಾಗಿದೆ ಎಂಬುದನ್ನು ತಿಳಿಯುವುದಿಲ್ಲ.

ಮೃನ್ಮಯಂ ಶರಣಂ ಯದ್ವನ್ಮೃದೈವ ಪರಿಲಿಪ್ಯತೇ ।
ಪಾರ್ಥಿವೋಽಯಂ ತಥಾ ದೇಹೋ ಮೃದ್ವಿಕಾರೈರ್ವಿಲಿಪ್ಯತೇ ॥ ೧೫ ॥

ಹೇಗೆ ಮಣ್ಣಿನಿಂದ ಕಟ್ಟಿದ ಮನೆಯು ಮಣ್ಣಿನ ಲೇಪನದಿಂದಲೇ ಸುರಕ್ಷಿತವಾಗಿ ನಿಲ್ಲುತ್ತದೋ ಅದರಂತೆ ಪೃಥಿವಿಯ ವಿಕಾರರೂಪವಾದ ಈ ಪಾರ್ಥಿವ ಶರೀರವು ಪೃಥಿವಿಯ ವಿಕಾರವೆನಿಸಿದ ಅನ್ನಾದಿಗಳ ಸೇವನೆಯಿಂದಲೇ ರಕ್ಷಿತವಾಗಿದೆ.

ಮಧು ತೈಲಂ ಪಯಃ ಸರ್ಪಿರ್ಮಾಂಸಾನಿ ಲವಣಂ ಗುಡಃ ।
ಧಾನ್ಯಾನಿ ಫಲಮೂಲಾನಿ ಮೃದ್ವಿಕಾರಾಃ ಸಹಾಂಭಸಾ ॥ ೧೬ ॥

ಜೇನುತುಪ್ಪ, ಎಣ್ಣೆ, ಹಾಲು, ತುಪ್ಪ, ಮಾಂಸ, ಉಪ್ಪು, ಬೆಲ್ಲ, ಧಾನ್ಯಗಳು, ಹಣ್ಣುಗಳು, ಗೆಡ್ಡೆಗಳು ಮತ್ತು ನೀರು - ಇವೆಲ್ಲವೂ ಪೃಥಿವಿಯ ವಿಕಾರಗಳೇ ಆಗಿವೆ.

ಯದ್ವತ್ ಕಾಂತಾರಮಾತಿಷ್ಠನ್ನೌತ್ಸುಕ್ಯಂ ಸಮನುವ್ರಜೇತ್ ।
ಶ್ರಮಾದಾಹಾರಮಾದದ್ಯಾದಸ್ವಾದ್ವಪಿ ಹಿ ಯಾಪನಮ್ ॥ ೧೭ ॥

ತದ್ವತ್ ಸಂಸಾರಕಾಂತಾರಮಾತಿಷ್ಠನ್ ಶ್ರಮತತ್ಪರಃ ।
ಯಾತ್ರಾರ್ಥಮದ್ಯಾದಾಹಾರಂ ವ್ಯಾಧಿತೋ ಭೇಷಜಂ ಯಥಾ ॥ ೧೮ ॥

ಹೇಗೆ ಅರಣ್ಯದಲ್ಲಿ ವಾಸ ಮಾಡುವ ವಿರಕ್ತನಾದ ತಪಸ್ವಿಯು ತುಂಬಾ ಹಸಿವೆಯು ಉಂಟಾದಾಗ ಆ ಪ್ರದೇಶದಲ್ಲಿ ಸಿಕ್ಕಿದ ಆಹಾರವನ್ನು ಅದು ರುಚಿಸದಿದ್ದರೂ ಸೇವಿಸಿ ದೇಹವನ್ನು ರಕ್ಷಿಸಿಕೊಳ್ಳುತ್ತಾನೋ ಇದರಂತೆ ಸಂಸಾರವೆಂಬ ಅರಣ್ಯದಲ್ಲಿರುವ ಜೀವನು ಶ್ರಮ ಉಂಟಾದಾಗ ದೇಹಯಾತ್ರೆಗೆ ಎಷ್ಟು ಬೇಕೋ ಅಷ್ಟೇ ಆಹಾರವನ್ನು ರೋಗಿಯು ಔಷಧಿಯನ್ನು ಸೇವಿಸುವಂತೆ ಸ್ವಲ್ಪ ಪ್ರಮಾಣದಲ್ಲಿ ಸೇವಿಸಬೇಕು. ಸಿಹಿ-ಕಹಿಗಳಿಗೆ ಹೆಚ್ಚು ಮಹತ್ವವನ್ನು ಬ್ರಹ್ಮಜ್ಞಾನಿಯಾದವನು ನೀಡಬಾರದು ಎಂದು ಭಾವ.

ಭಕ್ಷಣೇ ಶ್ವಾಪದೈರ್ಮಾರ್ಗಾದಿತಿ ಚಾರಂ ಕರೋತಿ ಚೇತ್ ।
ಏವಂ ಸಂಸಾರಮಾರ್ಗೇಣ ಯಾತ್ರಾರ್ಥಂ ವಿಷಯಾಣಿ ಚ ॥ ೧೯ ॥

ಪದಾರ್ಥಗಳನ್ನು ಹೊರಗಡೆ ಇರಿಸಿದಾಗ ನಾಯಿಗಳು ಅವುಗಳನ್ನು ತಿಂದಾವು ಎಂದು ಒಬ್ಬ ಚಾರನನ್ನು ನಿಯೋಜಿಸಿ ರಕ್ಷಿಸುವಂತೆ ಸಂಸಾರ ಮಾರ್ಗದಲ್ಲಿ ಚಲಿಸುವ ಸಾಧಕನ ದೇಹಯಾತ್ರೆಯ ರಕ್ಷಣೆಗಾಗಿ ವಿಷಯಗಳನ್ನು ಭಗವಂತನು ಇರಿಸಿದ್ದಾನೆ.

ನ ಗಚ್ಛೇದ್ಭೋಗವಿಜ್ಞಾನಾದುನ್ಮಾರ್ಗೇ ಪದ್ಯತೇ ತದಾ ।
ತಸ್ಮಾದದುಃಖತೋ ಮಾರ್ಗಮಾಸ್ಥಿತಸ್ತಮನುಸ್ಮರೇತ್ ॥ ೨೦ ॥

ಆದ್ದರಿಂದ ದೇಹಯಾತ್ರೆಗೆ ಕಾರಣವಾದ ವಿಷಯಪದಾರ್ಥಗಳಲ್ಲಿಯೇ ಭೋಗವನ್ನು ಹೊಂದುತ್ತಾ ತನ್ನ ಯಾತ್ರೆಯ ಮಾರ್ಗವನ್ನು ಬಿಟ್ಟು ಹೋಗಬಾರದು. ವಿಷಯಪದಾರ್ಥಗಳನ್ನು ಅನುಸರಿಸಿ ಹೋಗುವ ಮಾರ್ಗವು ದುಃಖದಾಯಕವಾದುದು. ಆದ್ದರಿಂದ ದುಃಖವಿಲ್ಲದೇ ಇರುವ ಮೋಕ್ಷಮಾರ್ಗಕ್ಕಾಗಿ ಭಗವಂತನನ್ನೇ ಸ್ಮರಿಸುತ್ತಿರಬೇಕು.

ನಾನಾಪರ್ಣಫಲಾ ವೃಕ್ಷಾ ಬಹವಃ ಸಂತಿ ತತ್ರ ಹಿ ।
ಭೋಕ್ತಾರೋ ಮುನಯಶ್ಚೈವ ತಸ್ಮಾತ್ತರತರಂ ವನಮ್ ॥ ೨೧ ॥

ನಾನಾ ಎಲೆಗಳಿಂದ, ಹಣ್ಣುಗಳಿಂದ ತುಂಬಿದ ಅನೇಕ ವೃಕ್ಷಗಳು ಈ ಸಂಸಾರದ ಮಾರ್ಗದಲ್ಲಿ ಅಲ್ಲಲ್ಲಿ ದೊರೆಯುತ್ತವೆ. ಮುನಿಗಳು ಇವುಗಳನ್ನು ಅನುಭವಿಸುತ್ತಿದ್ದರೂ ದೇವರು ನಿರ್ಮಾಣ ಮಾಡಿದ ಈ ಪದಾರ್ಥಗಳನ್ನು ದೇಹಯಾತ್ರೆಗೆ ಮಾತ್ರ ಸ್ವೀಕರಿಸಿ ಇವುಗಳಿಗಿಂತ ಪರತರನೆನಿಸಿದ ಪರಮಾತ್ಮನೆಂಬ ಅರಣ್ಯವನ್ನು ಪ್ರವೇಶಿಸುತ್ತಾರೆ.

ಅನುಮಾನೈಸ್ತಥಾ ಶಾಸ್ತ್ರೈರ್ಯಶಸಾ ವಿಕ್ರಮೇಣ ಚ ।
ಸತ್ಯಶೌಚಾರ್ಜವತ್ಯಾಗೈರ್ಯಶಸಾ ವಿಕ್ರಮೇಣ ಚ ।
ಕ್ಷಾಂತ್ಯಾ ಧೃತ್ಯಾ ಚ ಬುದ್ಧ್ಯಾ ಚ ಮನಸಾ ತಪಸೈವ ಚ ॥ ೨೨ ॥

ಭಾವಾನ್ ಸರ್ವಾನ್ ಯಥಾವೃತ್ತಾನ್ ಸಂವಸೇತ ಯಥಾಕ್ರಮಮ್ ।
ಶಾಂತಿಮಿಚ್ಛನ್ನದೀನಾತ್ಮಾ ಸಂಯಚ್ಛೇದಿಂದ್ರಿಯಾಣಿ ಚ ॥ ೨೩ ॥

ಯುಕ್ತಿಗಳಿಂದ, ಶಾಸ್ತ್ರದಲ್ಲಿ ಹೇಳಿದ ಸನ್ಮಾರ್ಗಗಳಿಂದ, ತಮ್ಮ ಮನೋಬಲದಿಂದ, ಸತ್ಯ-ಶೌಚ-ಸರಳತೆ-ತ್ಯಾಗ-ತೇಜಸ್ಸು-ಪರಾಕ್ರಮ-ಕ್ಷಮೆ-ಧೈರ್ಯ-ಬುದ್ಧಿ-ಮನಸ್ಸು-ತಪಸ್ಸು ಇವುಗಳ ಪ್ರಭಾವದಿಂದ ವಿಷಯಪದಾರ್ಥಗಳಲ್ಲಿರುವ ಮನಸ್ಸಿನ ಆಸಕ್ತಿಗಳನ್ನು ವಿಮರ್ಶಿಸಿ, ಶಾಂತಿಯನ್ನು ಬಯಸುತ್ತಾ ಇಂದ್ರಿಯಗಳನ್ನು ತನ್ನ ನಿಗ್ರಹದಲ್ಲಿ ಇಟ್ಟುಕೊಳ್ಳಬೇಕು.

ಸತ್ತ್ವೇನ ರಜಸಾ ಚೈವ ತಮಸಾ ಚೈವ ಮೋಹಿತಾಃ ।
ಚಕ್ರವತ್ ಪರಿವರ್ತಂತೇ ಹ್ಯಜ್ಞಾನಾಜ್ಜಂತವೋ ಭೃಶಮ್ ॥ ೨೪ ॥

ಇಂದ್ರಿಯನಿಗ್ರಹ ಇಲ್ಲದ ಅಜ್ಞಾನಿಗಳು ಸತ್ವ-ರಜಸ್ಸು-ತಮಸ್ಸುಗಳಿಂದ ಮೋಹಿತರಾಗಿ ನಿರಂತರವೂ ಚಕ್ರದಂತೆ ಈ ಸಂಸಾರದಲ್ಲಿಯೇ ತಿರುಗುತ್ತಿರುತ್ತಾರೆ.

ತಸ್ಮಾತ್ ಸಮ್ಯಕ್ಪರೀಕ್ಷೇತ ದೋಷಾನಜ್ಞಾನಸಂಭವಾನ್ ।
ಅಜ್ಞಾನಪ್ರಭವಂ ನಿತ್ಯಮಹಂಕಾರಂ ಪರಿತ್ಯಜೇತ್ ॥ ೨೫ ॥

ಆದ್ದರಿಂದ ವಿವೇಕಿಯಾದ ಮನುಷ್ಯನು ಅಜ್ಞಾನದಿಂದ ಉಂಟಾಗುವ ದೋಷಗಳನ್ನು ಚೆನ್ನಾಗಿ ವಿಮರ್ಶಿಸಿ ಆ ಅಜ್ಞಾನದಿಂದಲೇ ಉಂಟಾದ ದುಃಖವನ್ನೂ, ಅಹಂಕಾರವನ್ನೂ ಪರಿತ್ಯಾಗ ಮಾಡಬೇಕು.

ಮಹಾಭೂತಾನೀಂದ್ರಿಯಾಣಿ ಗುಣಾಃ ಸತ್ತ್ವಂ ರಜಸ್ತಮಃ ।
ದೇಹಮೂಲಂ ವಿಜಾನೀಹಿ ನೈತಾನಿ ಭಗವಾನತಃ ॥ ೨೬ ॥

ಪಂಚಮಹಾಭೂತಗಳು, ದಶೇಂದ್ರಿಯಗಳು, ಶಬ್ದ-ಸ್ಪರ್ಶಾದಿ ಗುಣಗಳು, ಸತ್ತ್ವ-ರಜಸ್ಸು-ತಮಸ್ಸು ಎಂಬ ಮೂರು ಗುಣಗಳು ಇವುಗಳು ಈ ಪ್ರಾಕೃತಿಕ ದೇಹಕ್ಕೆ ಮೂಲಕಾರಣವಾಗಿದ್ದಾವೆ ಎಂದು ತಿಳಿದುಕೊ. ಇವುಗಳಿಂದಲೂ ದೂರನಾದವನು ಷಡ್ಗುಣೈಶ್ವರ್ಯಸಂಪನ್ನನಾದ ಭಗವಂತನು.

ಉಪಾಯತಃ ಪ್ರವಕ್ಷ್ಯಾಮಿ ತಂ ಚ ಮೃತ್ಯುಂ ದುರಾಸದಮ್ ।
ತ್ರೈಲೋಕ್ಯಂ ಸೇಶ್ವರಂ ಸರ್ವಮಹಂಕಾರೇ ಪ್ರತಿಷ್ಠಿತಮ್ ॥ ೨೭ ॥

ಸುಲಭವಾಗಿ ದಾಟಲಾಗದ ಮೃತ್ಯುವನ್ನು ದಾಟುವ ಉಪಾಯವನ್ನು ನಿನಗೆ ತಿಳಿಸುತ್ತೇನೆ. ಮೂರು ಲೋಕಗಳು ಲೋಕಪಾಲಕರಿಂದ ಸಹಿತವಾಗಿ ಎಲ್ಲವೂ ಅಹಂಕಾರದಲ್ಲಿಯೇ ಪ್ರತಿಷ್ಠಿತವಾಗಿವೆ.

ಯಥೇಹ ನಿಯತಃ ಕಾಲೋ ದರ್ಶಯತ್ಯರ್ತವಾನ್ ಗುಣಾನ್ ।
ತದ್ವದ್ ಭೂತೇಷ್ವಹಂಕಾರಂ ವಿದ್ಯಾದ್ಭೂತಪ್ರವರ್ತಕಮ್ ॥ ೨೮ ॥

ಈ ಜಗತ್ತಿನಲ್ಲಿ ನಿಯತವಾದ ಕಾಲದಲ್ಲಿ ಋತುಸಂಬಂಧವಾದ ಗುಣಗಳ ಆವಿರ್ಭಾವವು ಆಗುತ್ತದೆಯೋ ಅದರಂತೆ ಎಲ್ಲಾ ಪ್ರಾಣಿಗಳಲ್ಲಿಯೂ ಕರ್ಮ ಪ್ರವರ್ತಕವಾದುದು ಅಹಂಕಾರವೆಂದೇ ತಿಳಿಯಬೇಕು.

ಸಮ್ಮೋಹಕಂ ತಮೋ ವಿದ್ಯಾತ್ ಕೃಷ್ಣಮಜ್ಞಾನಸಂಭವಮ್ ।
ಪ್ರಕೃತೇರ್ಗುಣಸಂಜಾತೋ ಮಹಾನಹಂಕ್ರಿಯಾ ತತಃ ॥ ೨೯ ॥

ಅಹಂಕಾರವು ಸಾತ್ವಿಕ, ರಾಜಸ, ತಾಮಸ ಎಂದು ಮೂರು ಪ್ರಕಾರಗಳಿಂದ ಕೂಡಿದೆ. ತಮೋಗುಣವು ಸಮ್ಮೋಹಕವಾಗಿದೆ. ಅಜ್ಞಾನದಿಂದ ಹುಟ್ಟುವ ಈ

ತಮೋಗುಣದ ಬಣ್ಣಕಪ್ಪು. ಸಾತ್ವಿಕ ಅಹಂಕಾರವು ಪ್ರೀತಿಯನ್ನು ಹುಟ್ಟಿಸುತ್ತದೆ. ರಾಜಸ ಅಹಂಕಾರವು ದುಃಖವನ್ನು ಹುಟ್ಟಿಸುತ್ತದೆ. ಹೀಗೆ ಮೂರು ಗುಣಗಳ ಸ್ವರೂಪವನ್ನು ತಿಳಿಯಬೇಕು.

ಅಹಂಕಾರಾತ್ತುನಃ ಪಶ್ಚಾದ್ ಭೂತಗ್ರಾಮಮುದಾಹೃತಮ್ ।
ಅವ್ಯಕ್ತಸ್ಯ ಗುಣೇಭ್ಯಸ್ತು ತದ್ಗುಣಾಂಶ್ಚ ನಿಬೋಧ ತಾನ್ ॥ ೩೦ ॥

ಪ್ರೀತಿದುಃಖನಿಬದ್ಧಾಂಶ್ಚ ಸಮಸ್ತಾಂಸ್ತ್ರೀನಥೋ ಗುಣಾನ್ ।
ಸತ್ತ್ವಸ್ಯ ರಜಸಶ್ಚೈವ ತಮಸಶ್ಚ ನಿಬೋಧ ತಾನ್ ॥ ೩೧ ॥

ಪ್ರಕೃತಿಯ ಗುಣದಿಂದಲೇ ಮಹತ್ತಾದ ಅಹಂಕಾರ ಕ್ರಿಯೆಯು ಉತ್ಪನ್ನವಾಗಿದೆ. ಅಹಂಕಾರದಿಂದ ಪಂಚಭೂತಗಳಿಗೆ ಸಂಬಂಧಿಸಿದ ಇಂದ್ರಿಯಗಳು, ಪ್ರಕೃತಿಯ ಸತ್ವ-ರಜಸ್-ತಮೋಗುಣಗಳಿಂದ ಆ ಇಂದ್ರಿಯಗಳಲ್ಲಿ ಉಂಟಾಗುವ ಗುಣಗಳು ಇವುಗಳನ್ನು ತಿಳಿದುಕೊ. ಸಮಸ್ತ ಗುಣಗಳು ಪ್ರೀತಿ, ದುಃಖಗಳಿಂದ ನಿಬದ್ಧವಾಗಿದ್ದಾವೆ ಎಂದು ತಿಳಿದುಕೊ. ಸತ್ವ-ರಜಸ್-ತಮೋಗುಣಗಳ ಕಾರ್ಯವನ್ನು ಹೇಳುತ್ತೇನೆ, ಕೇಳು.

ಪ್ರಮೋಹೋ ಹರ್ಷಜಃ ಪ್ರೀತಿರಸಂದೇಹೋ ಧೃತಿಃ ಸ್ಮೃತಿಃ ।
ಏತಾನ್ ಸತ್ತ್ವಗುಣಾನ್ ವಿದ್ಯಾದಿಮಾನ್ ರಾಜಸತಾಮಸಾನ್ ॥ ೩೨ ॥

ಪ್ರಸನ್ನತೆ, ಹರ್ಷದಿಂದ ಹುಟ್ಟಿದ ಪ್ರೀತಿ, ಸಂದೇಹವಿಲ್ಲದಿರುವಿಕೆ, ಧೈರ್ಯ, ಜ್ಞಾಪಕ ಶಕ್ತಿ ಇವುಗಳನ್ನು ಸತ್ವಗುಣದ ಕಾರ್ಯಗಳಾಗಿದ್ದಾವೆ ಎಂದು ತಿಳಿಯಬೇಕು. ಇದರಂತೆ ರಾಜಸ-ತಾಮಸ ಗುಣಗಳನ್ನು ತಿಳಿದುಕೊಳ್ಳಬೇಕು.

ಅಸಂತೋಷೋಽಕ್ಷಮಾಽಧೈರ್ಯಮತೃಪ್ತಿರ್ವಿಷಯಾದಿಷು ।
ರಾಜಸಾಶ್ಚ ಗುಣಾ ಹ್ಯೇತೇ ತತ್ತರಂ ತಾಮಸಾನ್ ಶೃಣು ॥ ೩೩ ॥

ಅಸಂತೋಷ, ಅಕ್ಷಮಾ, ಅಧೈರ್ಯ, ವಿಷಯಾದಿಗಳಲ್ಲಿ ಅತೃಪ್ತಿ ಇವುಗಳು ರಾಜಸ ಗುಣದ ಕಾರ್ಯಗಳು. ಮುಂದೆ ತಾಮಸ ಗುಣದ ಕಾರ್ಯವನ್ನು ಕೇಳು.

ಮೋಹತಂದ್ರೀ ತಥಾ ದುಃಖಂ ನಿದ್ರಾಽಽಲಸ್ಯಂ ಪ್ರಮಾದತಾ ।
ವಿಷಾದೀ ದೀರ್ಘಸೂತ್ರಶ್ಚ ತತ್ತಾಮಸಮುದಾಹೃತಮ್ ॥ ೩೪ ॥

ಮೋಹ, ತೂಕಡಿಕೆ, ದುಃಖ, ನಿದ್ರೆ, ಆಲಸ್ಯ, ಪ್ರಮಾದ, ವಿಷಾದ, ಆಲಸ್ಯದಿಂದ ಕಾಲವನ್ನು ಮುಂದೂಡುವಿಕೆ ಇವೆಲ್ಲವೂ ತಾಮಸಗುಣದ ಕಾರ್ಯಗಳಾಗಿವೆ.

ಕಾಮಕ್ರೋಧೌ ಪ್ರಮಾದಶ್ಚ ಲೋಭಮೋಹೌ ಭಯಂ ಕ್ಲಮಃ ।
ವಿಷಾದಶೋಕಾವರತಿರ್ಮಾನದರ್ಪಾವನಾರ್ಯತಾ ॥ ೩೫ ॥

ದೋಷಾಣಾಮೇವಮಾದೀನಾಂ ಪರೀಕ್ಷ್ಯ ಗುರುಲಾಘವಮ್ ।
ವಿಮೃಶೇದಾತ್ಮಸಂಸ್ಥಾನಾಮೇಕೈಕಮನುಸಂತತಮ್ ॥ ೩೬ ॥

ಕಾಮ, ಕ್ರೋಧ, ಲೋಭ, ಮೋಹ, ಭಯ, ಬಳಲುವಿಕೆ, ವಿಷಾದ, ಶೋಕ, ಅಪ್ರಸನ್ನತೆ, ಮಾನ, ದರ್ಪ, ಅನಾರ್ಯತೆ - ಇವೇ ಮೊದಲಾದ ದೋಷಗಳನ್ನು ತಿಳಿದು ಆ ದೋಷಗಳು ತನ್ನಲ್ಲಿ ಸಣ್ಣ ಪ್ರಮಾಣದಲ್ಲಿದ್ದಾವೋ, ದೊಡ್ಡ ಪ್ರಮಾಣದಲ್ಲಿದ್ದಾವೋ ಎಂದು ಪರೀಕ್ಷಿಸಿ ಪ್ರತಿಯೊಂದು ತನ್ನಲ್ಲಿರುವ ದೋಷಗಳನ್ನು ದೂರೀಕರಿಸಲು ನಿರಂತರ ಪ್ರಯತ್ನಿಸಬೇಕು.

ಯಸ್ಮಿನ್ ಪ್ರತಿಷ್ಠಿತಂ ಚೇದಂ ಯಸ್ಮಿನ್ ಸಂಜ್ಞಾನನಿರ್ಗತಿಃ ।
ಸರ್ವಭೂತಾಧಿಕಂ ನಿತ್ಯಮಹಂಕಾರಂ ವಿಲೋಕಯೇತ್ ॥ ೩೭ ॥

ಯಾವ ಅಹಂಕಾರದಲ್ಲಿಯೇ ಇವೆಲ್ಲವೋ ಪ್ರತಿಷ್ಠಿತವಾಗಿವೆಯೋ ಅಜ್ಞಾನದ ಪ್ರಾಪ್ತಿಗೆ ಯಾವ ಅಹಂಕಾರವೇ ಕಾರಣವಾಗಿದೆಯೋ, ಸಮಸ್ತ ಭೂತಗಳಿಗಿಂತಲೂ ಬಲಿಷ್ಠವಾದ ಈ ಅಹಂಕಾರವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕು.

ವಿಲೋಕಮಾನಃ ಸ ತದಾ ಸ್ವಬುದ್ಧ್ಯಾ ಸೂಕ್ಷ್ಮಯಾ ಪುನಃ ।
ತದೇವ ಭಾತಿ ತದ್ರೂಪಮಾತ್ಮನಾ ಯತ್ ಸುನಿರ್ಮಲಮ್ ॥ ೩೮ ॥

ಈ ಕ್ರಮದಲ್ಲಿ ಅಹಂಕಾರವನ್ನು ತನ್ನ ಸೂಕ್ಷ್ಮವಾದ ಬುದ್ಧಿಯಿಂದ ಪುನಃ ಪುನಃ ವಿಮರ್ಶಿಸುತ್ತಾ ನಿರ್ಮಲನಾದ ಪರಮಾತ್ಮನನ್ನು ತನ್ನ ಮನಸ್ಸಿನಿಂದ ಚಿಂತಿಸಲು ಆ ರೂಪವೇ ಮನಸ್ಸಿನಲ್ಲಿ ತೋರುತ್ತದೆ.

ಶಿಷ್ಯಃ

ಕೇ ದೋಷಾ ಮನಸಾ ತ್ಯಕ್ತಾಃ ಕೇ ಬುದ್ಧ್ಯಾ ಶಿಥಿಲೀಕೃತಾಃ ।
ಕೇ ಪುನಃ ಪುನರಾಯಾಂತಿ ಕೇ ಮೋಹಾದಫಲಾ ಇವ ॥ ೩೯ ॥

ಶಿಷ್ಯ– ಪೂಜ್ಯನೇ, ಪೂರ್ವಕಾಲದ ಮುಮುಕ್ಷುಗಳು ತಮ್ಮ ಬುದ್ಧಿಯಿಂದ ಯಾವ ದೋಷಗಳನ್ನು ಮನಸ್ಸಿನಿಂದ ತ್ಯಜಿಸಿದರು? ಬುದ್ಧಿಯ ಪ್ರಭಾವದಿಂದ ಯಾವ ದೋಷಗಳನ್ನು ಶಿಥಿಲೀಕರಿಸಿದರು? ಯಾವ ದೋಷಗಳು ಪುನಃ ಪುನಃ ಬರುತ್ತಲೇ ಇರುತ್ತವೆ? ಯಾವ ದೋಷಗಳು ಅಜ್ಞಾನದ ಕಾರಣದಿಂದ ಅಚಲವಾಗಿ ಉಳಿಯುತ್ತವೆ?

ಕೇಷಾಂ ಬಲಾಬಲಂ ಬುದ್ಧ್ಯಾ ಹೇತುಭಿರ್ವಿಮೃಶೇದ್ ಬುಧಃ ।
ಏತತ್ ಸರ್ವಂ ಸಮಾಚಕ್ಷ್ವ ಯಥಾ ವಿದ್ಯಾಮಹಂ ಪ್ರಭೋ ।
ಮಹ್ಯಂ ಶುಶ್ರೂಷವೇ ವಿದ್ವನ್ ವಕ್ಷ್ಯೇತದ್ ಬುದ್ಧಿನಿಶ್ಚಿತಮ್ ॥ ೪೦ ॥

ವಿದ್ವಾಂಸನಾದ ಪುರುಷನು ತನ್ನ ಬುದ್ಧಿ ಮತ್ತು ಯುಕ್ತಿಗಳ ಮೂಲಕ ಯಾವ ದೋಷಗಳ ಬಲಾಬಲವನ್ನು ಪರೀಕ್ಷಿಸಬೇಕು? ಇವುಗಳನ್ನು ಚೆನ್ನಾಗಿ ತಿಳಿಯುವಂತೆ ನೀನು ಎಲ್ಲವನ್ನೂ ನನಗೆ ತಿಳಿಸು. ನಿನ್ನ ಸೇವಕನಾಗಿರುವ ನನಗೆ ವಿದ್ವಾಂಸನಾದ ಪೂಜ್ಯನೇ, ನೀನು ಈ ಬುದ್ಧಿನಿಶ್ಚಯವನ್ನು ಹೇಗೆ ಹೊಂದಬೇಕೆಂಬುದನ್ನು ತಿಳಿಸು.

ಶಾಂತತ್ವಾದಪರಾಂತಾಚ್ಚ ಆರಂಭಾದಪಿ ಚೈಕತಃ ।
ಪ್ರೋಕ್ತೋ ಹ್ಯತ್ರ ಯಥಾ ಹೇತುರೇವಮಾಹುರ್ಮನೀಷಿಣಃ ॥ ೪೧ ॥

ಜ್ಞಾನಿಗಳು ಈ ದೋಷಗಳನ್ನು ದಾಟಲು ಸಹನಶೀಲಗುಣವುಳ್ಳ, ಶಾಂತನಾದ, ಜ್ಞಾನಿಗಳ ಸಮೀಪದಲ್ಲೇ ವಾಸ ಮಾಡುವ, ಪುಣ್ಯಕರ್ಮಗಳಿಗೆ ಪ್ರೇರಕನಾದ ಭಗವಂತನನ್ನೇ ಧ್ಯಾನಿಸಬೇಕು ಎಂದು ಕಾರಣವನ್ನು ಹೇಳುತ್ತಾರೆ. ನನಗೆ ಸ್ಪಷ್ಟಪಡಿಸು.

ಗುರುಃ

ದೋಷೈರ್ಮೂಲಾದವಚ್ಛಿನ್ನೈರ್ವಿಶುದ್ಧಾತ್ಮಾ ವಿಮುಚ್ಯತೇ ।
ವಿನಾಶಯತಿ ಸಂಭೂತಮಯಸ್ಮಯಮಯೋ ಯಥಾ ।
ತಥಾ ಕೃತಾತ್ಮಾ ಸಹಜೈರ್ದೋಷೈರ್ನಶ್ಯತಿ ರಾಜಸೈಃ ॥ ೪೨ ॥

ಗುರು– ಶಿಷ್ಯನೇ, ಈ ದೋಷಗಳಿಗೆ ಮೂಲಕಾರಣವು ಪ್ರಮಾದ ವಶದಿಂದ ಉಂಟಾದ ಅಜ್ಞಾನವೇ ಆಗಿದೆ. ಆದ್ದರಿಂದ ಮೂಲಸಹಿತವಾಗಿ ಈ ದೋಷಗಳ ವಿನಾಶವಾದ ನಂತರ ಮನುಷ್ಯನ ಅಂತಃಕರಣವು ವಿಶುದ್ಧವಾಗುತ್ತದೆ. ಅವನು

ಸಂಸಾರದಿಂದ ಮುಕ್ತನಾಗುತ್ತಾನೆ. ಲೋಹದಿಂದ ಮಾಡಿದ ಉಳಿಯ ತುದಿಯು ಲೋಹವನ್ನು ಕತ್ತರಿಸುತ್ತಲೇ ತಾನೂ ಮೊಂಡಾಗಿ ಹೋಗುವಂತೆ ಧ್ಯಾನದಿಂದ ಸಂಸ್ಕೃತವಾದ ಬುದ್ಧಿಯು ತಮೋಗುಣ ಜನಿತವಾದ ಅನಾದಿ ದೋಷಗಳನ್ನು ನಾಶ ಮಾಡಿ ಅವುಗಳೊಡನೆ ತಾನೂ ನಾಶ ಹೊಂದುತ್ತದೆ.

ಸಹಜೈರವಿಶುದ್ಧಾತ್ಮಾ ದೋಷೈರ್ನಶ್ಯತಿ ತಾಮಸೈಃ ।
ರಾಜಸಂ ತಾಮಸಂ ಚೈವ ಶುದ್ಧಾತ್ಮಾಕರ್ಮಸಂಭವಮ್ ॥ ೪೩ ॥

ಸಹಜವಾಗಿ ಹುಟ್ಟಿದ ದೋಷಗಳಿಂದ ಮಲಿನನಾದ ಚೇತನನು ತಾಮಸ ದೋಷಗಳಿಂದಲೇ ನಾಶ ಹೊಂದುತ್ತಾನೆ. ರಾಜಸ-ತಾಮಸ ಗುಣಗಳಿಂದ ಶುದ್ಧಾತ್ಮನಾದರೂ ಕಾಲಿಕವಾಗಿ ಆ ದೋಷಗಳಿಗೆ ಬದ್ಧನಾಗಿರುತ್ತಾನೆ.

ಶಮಯೇತ್ ಸತ್ತ್ವಮಾಸ್ಥಾಯ ಬುದ್ಧ್ಯಾ ಕೇವಲಯಾ ದ್ವಿಜಃ ।
ತ್ಯಜೇಚ್ಚ ಮನಸಾ ಚೇತಃ ಶುದ್ಧಾತ್ಮಾ ಬುದ್ಧಿಮಾಸ್ಥಿತಃ ॥ ೪೪ ॥

ಈ ರಾಜಸ-ತಾಮಸವೆಂಬ ಕಾಲಿಕವಾಗಿ ಉತ್ಪನ್ನವಾಗುವ ದೋಷಗಳನ್ನು ಸತ್ವಗುಣವನ್ನು ಆಶ್ರಯಿಸಿಕೊಂಡು ಬುದ್ಧಿಪೂರ್ವಕವಾಗಿ ಬ್ರಾಹ್ಮಣನು ತ್ಯಜಿಸಬೇಕು. ಮನಃಪೂರ್ವಕವಾಗಿ ಬುದ್ಧಿಯ ಸಹಕಾರದಿಂದ ಸತ್ವಗುಣವನ್ನಾಶ್ರಯಿಸಿ ರಾಜಸ-ತಾಮಸ ಗುಣಗಳನ್ನು ತ್ಯಜಿಸಿದಲ್ಲಿ ಶುದ್ಧಾತ್ಮನಾಗುತ್ತಾನೆ.

ತತ್ ಸರ್ವಂ ದೇಹಿನಾಂ ಬೀಜಂ ಸರ್ವಮಾತ್ಮವತಃ ಸಮಮ್ ।
ತಸ್ಮಾದಾತ್ಮವತಾ ವರ್ಜ್ಯಂ ರಜಶ್ಚ ತಮ ಏವ ಚ ॥ ೪೫ ॥

ಜಿತಮನಸ್ಕನಾದ ಜೀವನಿಗೆ ಸತ್ವಗುಣದ ಅವಲಂಬನೆಯು ಆದಲ್ಲಿ ರಜೋಗುಣವನ್ನು ಗೆದ್ದಂತೆಯೇ. ಆದ್ದರಿಂದ ಜಿತಮನಸ್ಸಿನಿಂದ ರಜೋಗುಣ, ತಮೋಗುಣಗಳನ್ನು ಸತ್ವಗುಣವನ್ನಾಶ್ರಯಿಸಿ ಬಿಡಬೇಕು. ರಜೋಗುಣ, ತಮೋಗುಣಗಳಿಂದ ನಿರ್ಮುಕ್ತವಾದ ಮನಸ್ಸು ನಿರ್ಮಲ ಭಾವವನ್ನು ಹೊಂದುತ್ತದೆ.

ರಜಸ್ತಮೋಭ್ಯಾಂ ನಿರ್ಮುಕ್ತಂ ಸತ್ತ್ವಂ ನಿರ್ಮಲತಾಮಿಯಾತ್ ।
ಆಹಾರಾನ್ ವರ್ಜಯೇನ್ನಿತ್ಯಂ ರಾಜಸಾಂಸ್ತಾಮಸಾನಪಿ ॥ ೪೬ ॥

ಆ ಮನೋನೈರ್ಮಲ್ಯಕ್ಕಾಗಿ ರಾಜಸ-ತಾಮಸ ಆಹಾರಗಳನ್ನು ವರ್ಜಿಸಬೇಕು. ರಜೋಗುಣ, ತಮೋಗುಣಗಳಿಂದ ನಿರ್ಮುಕ್ತವಾದ ಮನಸ್ಸು ನಿರ್ಮಲ ಭಾವವನ್ನು ಹೊಂದುತ್ತದೆ.

ತೇ ಬ್ರಹ್ಮ ಪುನರಾಯಾಂತಿ ನ ಮೋಹಾದಚಲಾ ಇವ ।
ಅಥ ವಾ ಮಂತ್ರವದ್ ಬ್ರೂಯುರ್ಮಾಂಸಾದಾನಾಂ ಯಜುಷ್ಕೃತಮ್॥

ಯಾರು ಈ ರೀತಿಯಾಗಿ ಅನುಷ್ಠಾನ ಮಾಡುತ್ತಾರೋ, ವಿಷಯ- ಮೋಹಗಳಿಗೆ ತುತ್ತಾಗುವುದಿಲ್ಲವೋ ಅವರು ಪರಬ್ರಹ್ಮನನ್ನು ಸೇರಿ ಈ ಸಂಸಾರಚಕ್ರಕ್ಕೆ ಪುನಃ ಆಗಮಿಸುವುದಿಲ್ಲ. ಅಥವಾ ಯಜ್ಞದಲ್ಲಿ ಹೋಮಿಸಲ್ಪಟ್ಟ ಮಾಂಸವು ಮಂತ್ರಪೂತವಾದವುಗಳಿಂದ ಹೇಗೆ ಪವಿತ್ರವೆನಿಸುತ್ತವೋ, ಭಗವಂತನ ಜ್ಞಾನದ ಹಿನ್ನೆಲೆಯಲ್ಲಿ ಸ್ವೀಕರಿಸಿದ ಪದಾರ್ಥಗಳೂ ಮನಸ್ಸನ್ನು ಮೋಹಗೊಳಿಸವು.

ಹೇತುಃ ಸ ಏವಾನಾದಾನೇ ಶುದ್ಧಧರ್ಮಾನುಪಾಲನೇ ।
ರಜಸಾ ಧರ್ಮಯುಕ್ತಾನಿ ಕಾರ್ಯಾಣ್ಯಪಿ ಸಮಾಪ್ನುಯಾತ್ ।
ಅರ್ಥಯುಕ್ತಾನಿ ಚಾತ್ಯರ್ಥಂ ಕಾಮಾನ್ ಸರ್ವಾಂಶ್ಚ ಸೇವತೇ ॥ ೪೮ ॥

ಶುದ್ಧವಾದ ಧರ್ಮದಲ್ಲಿ ವರ್ತಿಸಲು ತಮೋ-ರಜ ಗುಣಗಳು ಮನಸ್ಸಿಗೆ ಬಾರದಿರುವಂತೆ ಮಾಡಲು ನಿಷ್ಕಾಮ ಭಾವವು ಸತ್ತ್ವಗುಣವನ್ನು ಆಶ್ರಯಿಸುವುದೇ ಕಾರಣವಾಗಿದೆ. ರಜೋಗುಣವನ್ನು ಹೊಂದಿದಾಗ ಕಾಮಯುಕ್ತವಾದ ಮನಸ್ಸು ರಜೋಗುಣದ ಕಾರ್ಯಗಳನ್ನು ಮಾಡಲು ಬಯಸುತ್ತದೆ. ಅರ್ಥಕಾಮನೆಗಳಿಗಾಗಿ ಅತ್ಯಂತ ಆಸಕ್ತಿಯಿಂದ ಕರ್ಮಗಳನ್ನು ಮಾಡಲು ತೊಡಗುತ್ತಾನೆ. ಅರ್ಥಕಾಮಗಳಲ್ಲಿಯೇ ಮನಸ್ಸಿಟ್ಟು ವಿಷಯಭೋಗಗಳಲ್ಲಿ ಅತ್ಯಾಸಕ್ತಿಯನ್ನು ಹೊಂದುತ್ತಾನೆ. ಅವುಗಳನ್ನು ಸೇವಿಸುತ್ತಾನೆ.

ತಮಸಾ ಲೋಭಯುಕ್ತಾನಿ ಕ್ರೋಧಜಾನಿ ಚ ಸೇವತೇ ।
ಹಿಂಸಾವಿಹಾರಾಭಿರತಸ್ತಂದ್ರೀನಿದ್ರಾಸಮನ್ವಿತಃ ॥ ೪೯ ॥

ತಮೋಗುಣದಿಂದ ಲೋಭಯುಕ್ತನಾಗಿ ಕ್ರೋಧಜನಿತವಾದ ಕರ್ಮಗಳನ್ನು ಮಾಡಲು ತೊಡಗುತ್ತಾನೆ. ಹಿಂಸಾತ್ಮಕವಾದ ಕಾರ್ಯಗಳಲ್ಲಿಯೇ ಅವನಿಗೆ ಆಸಕ್ತಿ ಹುಟ್ಟುತ್ತದೆ. ಬಳಿಕ ತೂಕಡಿಕೆ, ನಿದ್ರೆಗಳಿಂದ ಕೂಡಿದವನಾಗುತ್ತಾನೆ.

ಸತ್ತ್ವಸ್ಥಃ ಸಾತ್ತ್ವಿಕಾನ್ ಭಾವಾನ್ ಶುದ್ಧಾನ್ ಪಶ್ಯತಿ ಸಂಶ್ರಿತಃ ।
ಸ ದೇಹೀ ವಿಮಲಃ ಶ್ರೀಮಾನ್ ಶುದ್ಧೋ ವಿದ್ಯಾಸಮನ್ವಿತಃ ॥ ೫೦ ॥

ಸತ್ತ್ವಗುಣಸಂಪನ್ನನಾದ ಮನುಷ್ಯನು ಯಾವಾಗಲೂ ಸಾತ್ವಿಕವಾದ ಭಾವನೆಗಳನ್ನೇ ನೋಡುತ್ತಾ ಅವುಗಳಲ್ಲಿಯೇ ನಿಷ್ಠನಾಗಿರುತ್ತಾನೆ. ಅವನು ಅತ್ಯಂತ ನಿರ್ಮಲನೂ, ಕಾಂತಿಯುಕ್ತನೂ ಆಗಿರುತ್ತಾನೆ. ಶ್ರದ್ಧೆ ಮತ್ತು ವಿದ್ಯೆಗಳಿಂದ ಕೂಡಿದವನಾಗಿರುತ್ತಾನೆ. ಶ್ರದ್ಧಾ-ವಿದ್ಯೆಗಳೇ ಇವನಲ್ಲಿ ಪ್ರಧಾನವಾಗಿ ತೋರುತ್ತವೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ದ್ವಿಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನಲವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ಮೂರನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಅಧ್ಯಾತ್ಮವನ್ನು ಅನುವಾದಿಸಿದುದು.

ಗುರುಃ

ರಜಸಾ ಸಾಧ್ಯತೇ ಮೋಹಸ್ತಮಸಾ ಚ ನರರ್ಷಭ ।
ಕ್ರೋಧಲೋಭೌ ಭಯಂ ದರ್ಪ ಏತೇಷಾಂ ಸಾಧನಾಚ್ಛುಚಿಃ ॥ ೧ ॥

ಗುರು– ನರಶ್ರೇಷ್ಠನೇ, ರಜೋಗುಣ ತಮೋಗುಣದಿಂದ ಮೋಹವು ಉತ್ಪತ್ತಿಯಾಗುತ್ತದೆ. ಆ ಮೋಹದಿಂದ ಕ್ರೋಧ-ಲೋಭ-ಭಯ-ದರ್ಪಗಳು ಹುಟ್ಟುತ್ತವೆ. ಇವುಗಳನ್ನೆಲ್ಲ ನಾಶಮಾಡಿಸುವುದರಿಂದ ಮನುಷ್ಯನು ಪರಿಶುದ್ಧನಾಗುತ್ತಾನೆ.

ಪರಮಂ ಪರಮಾತ್ಮಾನಂ ದೇವಮಕ್ಷಯಮವ್ಯಯಮ್ ।
ವಿಷ್ಣುಮವ್ಯಕ್ತಸಂಸ್ಥಾನಂ ದಿಶಂತೇ ದೇವಸತ್ತಮಮ್ ॥ ೨ ॥

ಸರ್ವೋತ್ತಮನಾದ ಮಹಾವಿಷ್ಣುವನ್ನು ಪರಬ್ರಹ್ಮನೆಂದು, ಕ್ಷಯರಹಿತನೆಂದು, ಅವಿನಾಶಿಯೆಂದು, ಅವ್ಯಕ್ತಸ್ವರೂಪನೆಂದು ಮಹರ್ಷಿಗಳು ಹೇಳುತ್ತಾರೆ.

ತಸ್ಯ ಮಾಯಾವಿದಗ್ಧಾಂಗಾ ಜ್ಞಾನಭ್ರಷ್ಟಾ ನಿರಾಶಿಷಃ ।
ಮಾನನಾಜ್ಞಾನಸಮ್ಮೋಹಾತ್ತತಃ ಕಾಮಂ ಪ್ರಯಾಂತಿ ವೈ ॥ ೩ ॥

ಆ ಮಹಾವಿಷ್ಣುವಿನ ಇಚ್ಛಾಶಕ್ತಿಯಿಂದ ಬಂಧಿತರಾದ ಮನುಷ್ಯರು ಅಜ್ಞಾನಿಗಳು, ವಿವೇಕರಹಿತರೂ ಆಗಿರುತ್ತಾರೆ. ಅಹಂಕಾರ, ಅಜ್ಞಾನ, ಸಮ್ಮೋಹಗಳಿಂದ ಅಭಿಭೂತರಾಗಿ ಕಾಮವನ್ನು ಹೊಂದಿರುತ್ತಾರೆ.

ಕಾಮಾತ್ ಕ್ರೋಧಮವಾಪ್ಯಾಥ ಲೋಭಮೋಹೌ ಚ ಮಾನವಾಃ ।
ಮಾನದರ್ಪಾದಹಂಕಾರಮಹಂಕಾರಾತ್ತತಃ ಕ್ರಿಯಾಃ ॥ ೪ ॥

ಅವರು ಕಾಮದಿಂದ ಕ್ರೋಧವನ್ನು ಹೊಂದಿದವರಾಗಿ, ಲೋಭ, ಮೋಹಗಳನ್ನು, ಮಾನ, ದರ್ಪ, ಅಹಂಕಾರಗಳನ್ನು ಹೊಂದಿದವರಾಗಿ ಹುಟ್ಟು-ಸಾವುಗಳಿಗೆ ಕಾರಣವಾದ ಕ್ರಿಯೆಗಳನ್ನು ಆಚರಿಸುತ್ತಾರೆ.

ಕ್ರಿಯಾಭಿಃ ಸ್ನೇಹಸಂಬಂಧಃ ಸ್ನೇಹಾಚ್ಛೋಕಮನಂತರಮ್ ।
ಸುಖದುಃಖಸಮಾರಂಭಾಜ್ಜನ್ಮಾಜನ್ಮಕೃತಕ್ಷಣಾಃ ॥ ೫ ॥

ಅಂತಹ ಕ್ರಿಯೆಗಳಿಂದ ಸ್ನೇಹದ ಸಂಬಂಧವನ್ನು, ವಿಷಯಾಸಕ್ತಿಯಿಂದ ಶೋಕವನ್ನೂ ಹೊಂದುತ್ತಾರೆ. ಸುಖ-ದುಃಖಗಳನ್ನು ಉಂಟುಮಾಡುವ ಕಾರ್ಯಗಳನ್ನು ಮಾಡುವುದರಿಂದ ಹುಟ್ಟು-ಸಾವುಗಳ ಕಷ್ಟವನ್ನು ಅನುಭವಿಸುತ್ತಾರೆ.

ಜನ್ಮತೋ ಗರ್ಭವಾಸಂ ತು ಶುಕ್ರಶೋಣಿತಸಂಭವಮ್ ।
ಪುರೀಷಮೂತ್ರವಿಕ್ಲೇದಶೋಣಿತಪ್ರಭವಾವಿಲಮ್ ॥ ೬ ॥

ಜನ್ಮದ ನಿಮಿತ್ತವಾಗಿ ಗರ್ಭವಾಸವನ್ನು ಅನುಭವಿಸಬೇಕಾಗುತ್ತದೆ. ಶುಕ್ರ-ಶೋಣಿತಗಳಿಂದಾಗಿ ಉತ್ಪತ್ತಿಯನ್ನೂ, ಅದೇ ಸಮಯದಲ್ಲಿ ತಾಯಿಯ ಗರ್ಭದಲ್ಲಿ ಮಲ-ಮೂತ್ರಗಳಿಂದ ನಾರುತ್ತಿರುವ ರಕ್ತದ ವಿಕಾರದಿಂದ ಮಲಿನವಾಗಿರುವ ಸ್ಥಿತಿಯನ್ನು ಹೊಂದಿರುತ್ತಾರೆ.

ತೃಷ್ಣಾಭಿಭೂತಸ್ಯೈರ್ಬದ್ಧಸ್ತಾನೇವಾಭಿಪರಿಪ್ಲವನ್ ।
ತಥಾ ನರಕಗರ್ತಸ್ಥಸ್ಯಪಾರಜುಭಿರಾಚಿತಃ ।
ಪುಣ್ಯಪಾಪಪ್ರಣುನ್ನಾಂಗೋ ಜಾಯತೇ ಸ ಯಥಾ ಕೃಮಿಃ ॥ ೭ ॥

ವಿಷಯಗಳ ದುರಾಸೆಯಿಂದ ಆಕ್ರಮಿಸಲ್ಪಟ್ಟ ಮನುಷ್ಯರು ಅವುಗಳಲ್ಲಿಯೇ ಬಂಧಿತರಾಗಿ ಅವುಗಳನ್ನೇ ಅನುಸರಿಸುತ್ತಾರೆ. ಬಳಿಕ ನರಕದ ಹೊಂಡಗಳಲ್ಲಿ ಇರುವ

ಅತಿಯಾದ ಆಸೆಗಳೆಂಬ ರಜ್ಜುಗಳಿಂದ ಬಂಧಿತರಾಗಿ ಪುಣ್ಯ-ಪಾಪಗಳಿಂದ ದುಃಖಿತವಾದ ಅಂಗಗಳುಳ್ಳವರಾಗಿ ಕ್ರಿಮಿಗಳಂತೆ ದುಃಖಿತರಾಗಿ ಹುಟ್ಟುತ್ತಾರೆ.

ಮಶಕೈರ್ಮತ್ಕುಣೈರ್ದಷ್ಟಸ್ತಥಾ ಚಿತ್ರವಧಾರ್ದಿತಃ ।
ನಾನಾವ್ಯಾಧಿಭಿರಾಕೀರ್ಣಃ ಕಥಂಚಿದ್ ಯೌವನಂ ಗತಃ ॥ ೮ ॥

ಸೊಳ್ಳೆಗಳಿಂದ, ತಿಗಣೆಗಳಿಂದ ಕಚ್ಚಲ್ಪಟ್ಟವರಾಗಿ, ಬಗೆಬಗೆಯ ವಧೆಗಳಿಂದ ಅರ್ದಿತ(ಪೀಡಿತ)ರಾಗಿ, ನಾನಾ ವಿಧವಾದ ರೋಗಗಳಿಂದ ಆಕೀರ್ಣರಾಗಿ (ಕೂಡಿಕೊಂಡು) ಕಷ್ಟದಿಂದ ಯೌವನವನ್ನು ಹೊಂದುತ್ತಾರೆ.

ಕರ್ಮೋತ್ಸೃಜತಿ ಭೂಯಶ್ಚ ರಜ್ಜುಃ ಸ್ವಸ್ವಮುಖೇಪ್ಸಯಾ ।
ಯೋಷಿತಂ ನರಕಂ ಗೃಹ್ಯ ಜನ್ಮಕರ್ಮವಶಾನುಗಃ ॥ ೯ ॥

ಯೌವನ ಬಂದ ಬಳಿಕ ಮುಂದೆ ಮುಂದೆ ಜನ್ಮಾಂತರಗಳನ್ನು ಹೆಚ್ಚಿಸುವಂತಹ ಕರ್ಮಬಂಧನಗಳಿಂದ ಬಿಗಿಯಲ್ಪಟ್ಟು ಆ ದಾರಿಯಲ್ಲಿಯೇ ಸಾಗುತ್ತಾನೆ. ಸ್ತ್ರೀ ಎಂಬ ನರಕದಲ್ಲಿ ಬಿದ್ದು ಅದರಲ್ಲಿಯೂ ಸುಖಭ್ರಾಂತಿಯಿಂದ ಪುನಃ ಪುನಃ ತನ್ನನ್ನು ಸಂಸಾರದಲ್ಲಿಯೇ ಕಟ್ಟಿಹಾಕುವಂತಹ ಕರ್ಮಗಳನ್ನೇ ನಡೆಸುತ್ತಾನೆ.

ಪುರಕ್ಷೇತ್ರನಿಮಿತ್ತಂ ಯದ್ ದುಃಖಂ ವಕ್ತುಂ ನ ಶಕ್ಯತೇ ।
ಕಸ್ತತ್ರ ನಿಂದಕಶ್ಚೈವ ನರಕೇ ಪಚ್ಯತೇ ಭೃಶಮ್ ॥ ೧೦ ॥

ಆ ವ್ಯಕ್ತಿಯು ಸಂಸಾರದಲ್ಲಿ ಹೊಲ-ಗದ್ದೆಗಳಿಗಾಗಿ, ಮನೆ-ಮಠಗಳಿಗಾಗಿ ಪಡುವ ಕಷ್ಟ ಏನೆಂಬುದನ್ನು ಹೇಳಲು ಸಾಧ್ಯವಿಲ್ಲ. ಇವನು ನರಕದಲ್ಲಿ ನಿರಂತರ ದುಃಖಪಡುವ ಸ್ಥಿತಿಯನ್ನು ಯಾರು ತಾನೇ ನಿಂದಿಸಲು ಸಾಧ್ಯ ?

ವಾರ್ಧಕ್ಯಮನುಲಂಘೇತ ತತ್ರ ಕರ್ಮಾರಭೇತ್ ಪುನಃ ।
ಭಗವಾನ್ ಸಂಸ್ತುತಃ ಪಶ್ಚಾತ್ ಕಿಂ ಪ್ರವಕ್ಷ್ಯಾಮಿ ತೇ ಭೃಶಮ್ ॥ ೧೧ ॥

ಆ ಜೀವನು ವಾರ್ಧಕ್ಯವನ್ನು ಹೊಂದಿದಾಗಲೂ ಪುನಃ ಬಂಧಕವಾದ ಕರ್ಮಗಳನ್ನೇ ಮಾಡುತ್ತಿರುತ್ತಾನೆ. ಇದನ್ನು ದಾಟಿ ಸಾಗುವುದಿಲ್ಲ. ಸಕಲ ಶ್ರುತಿಗಳಿಂದ ಭಗವಂತನು ಚೆನ್ನಾಗಿ ಕೊಂಡಾಡಲ್ಪಡುತ್ತಿದ್ದರೂ ಆ ದೇವರಿಗೆ ಬೆನ್ನು ಹಾಕಿ ಸಾಗುವ ಈ ಜೀವನ ಬಗ್ಗೆ ಏನೆಂದು ಹೇಳಲಿ? ಹೇಳಲು ಲಜ್ಜೆಯಾಗುತ್ತದೆ ಎಂದು ಭಾವ.

ಸಂಸಾರತಂತ್ರವಾಹಿನ್ಯಸ್ತತ್ರ ಬುದ್ಧ್ಯೇತ ಯೋಷಿತಃ ।
ಪ್ರಕೃತ್ಯಾ ಕ್ಷೇತ್ರಭೂತಾಸ್ತಾ ನರಾಃ ಕ್ಷೇತ್ರಜ್ಞಲಕ್ಷಣಾಃ ।
ತಸ್ಮಾದೇತಾ ವಿಶೇಷೇಣ ನರೋಽತೀಯುರ್ವಿಪಶ್ಚಿತಃ ॥ ೧೨ ॥

ಸ್ತ್ರೀಯರೇ ಸಂಸಾರವೆಂಬ ಯಂತ್ರವನ್ನು ನಡೆಸುವವರು ಎಂದು ತಿಳಿ. ಅವರೇ ಪ್ರಕೃತಿಯೆಂಬ ಮಾಯೆಯ ಕ್ಷೇತ್ರವೆನಿಸುವರು. ಆದ್ದರಿಂದ ವಿವೇಕವುಳ್ಳವರು ಸಾಮಾನ್ಯ ಸ್ಥಿತಿಯಲ್ಲಿಯೂ, ವಿಶೇಷ ಸ್ಥಿತಿಯಲ್ಲಿಯೂ ಮಾಯಾರೂಪರಾದ ಸ್ತ್ರೀಯರ ಸಹವಾಸವನ್ನು ದೂರ ಮಾಡಬೇಕು.

ಕೃತ್ಯಾ ಹ್ಯೇತಾ ಘೋರರೂಪಾ ಮೋಹಯಂತ್ಯವಿಚಕ್ಷಣಾನ್ ।
ರಜಸ್ಯಂತರ್ಹಿತಾ ಮೂರ್ತಿರಿಂದ್ರಿಯಾಣಾಂ ಸನಾತನೀ ॥ ೧೩ ॥

ಸ್ತ್ರೀಯರು ಭಯಂಕರವಾದ ರೂಪದಿಂದ ಕೂಡಿರುವ ಕೃತ್ಯಕ್ಕೆ ಸಮಾನರಾಗಿರುತ್ತಾರೆ. ಅಜ್ಞಾನಿಯಾಗಿರುವ ಮನುಷ್ಯನನ್ನು ವಿಮೋಹಗೊಳಿಸುತ್ತಾರೆ. ಇಂದ್ರಿಯಾದಿ ವಿಕಾರವನ್ನುಂಟು ಮಾಡುವ ಸನಾತನವಾದ ನಾರೀಮೂರ್ತಿಯು ವಿವೇಕ ಇಲ್ಲದವರನ್ನೇ ಮರಳು ಮಾಡಿ ಕೆಡಿಸುತ್ತದೆ. ರಜೋಗುಣದಲ್ಲಿ ಮುಳುಗಿದ ಇಂದ್ರಿಯಗಳ ಸಾಕಾರಮೂರ್ತಿಯೇ ಸ್ತ್ರೀಯರಾಗಿರುತ್ತಾರೆ.

ತಸ್ಮಾತ್ತಸ್ಯಾತ್ಮಕಾದ್ರಾಗಾದ್ ಬೀಜಾಜ್ಜಾಯಂತಿ ಜಂತವಃ ।
ಸ್ವದೇಹಜಾತಾಸ್ವಸಂಜ್ಞಾನ್ ಯದ್ವದಂಗಾತ್ಕೃಮೀಂಸ್ಯಜೇತ್ ।
ಸ್ವಸಂಜ್ಞಾನಸ್ವಜಾಂಸ್ತದ್ವತ್ ಸುತಸಂಜ್ಞಾನ್ ಕೃಮೀಂಸ್ಯಜೇತ್ ॥ ೧೪॥

ಆದ್ದರಿಂದ ಸ್ತ್ರೀಸಂಬಂಧವಾದ ಅನುರಾಗದ ಕಾರಣದಿಂದ ಪುರುಷನ ವೀರ್ಯದಿಂದ ಜೀವರ ಉತ್ಪತ್ತಿಯಾಗುತ್ತದೆ. ತನ್ನ ದೇಹದಿಂದ ಹುಟ್ಟಿದ ಮಕ್ಕಳಾದರೂ ಸಂಸಾರಕ್ಕೆ ಕಾರಣವೇ ಆಗುತ್ತಾರೆ. ಹೇನು ಮೊದಲಾದ ಕ್ರಿಮಿಗಳು ತಮ್ಮ ತಮ್ಮ ದೇಹದಲ್ಲಿ ಹುಟ್ಟಿದವಾಗಿದ್ದರೂ ಅವುಗಳಿಗೆ ಸ್ವಕೀಯರಲ್ಲ, ಅಸ್ವರು ಎಂದು ಹೇಗೆ ಕರೆಯುತ್ತೇವೋ ನಮ್ಮ ಮನುಷ್ಯರಂತೆ ಹೆಸರಿಲ್ಲದ ಕಾರಣದಿಂದ ಜಂತುವೆಂದು, ಮಕ್ಕಳೆಂಬ ವಾತ್ಸಲ್ಯವಿಡದೆ ನಮ್ಮ ದೇಹದಿಂದ ಹೊರಗಿಡಲು ಹೇಗೆ ಯತ್ನಿಸುತ್ತೇವೋ ನಮ್ಮ ಸಂತಾನವನ್ನು ಹಾಗೇ ಭಾವಿಸಬೇಕು.

ಶುಕ್ರತೋ ರಸತಶ್ಚೈವ ಸ್ನೇಹಾಜ್ಜಾಯಂತಿ ಜಂತವಃ ।
ಸ್ವಭಾವಾತ್ ಕರ್ಮಯೋಗಾದ್ವಾ ತಾನುಪೇಕ್ಷೇತ ಬುದ್ಧಿಮಾನ್ ॥ ೧೫ ॥

ಶರೀರದ ವೀರ್ಯದ ಮೂಲಕವಾಗಿ, ಪ್ರಾರಬ್ಧಕರ್ಮಕ್ಕನುಗುಣವಾಗಿ ಮಕ್ಕಳು ಹುಟ್ಟುತ್ತಾರೆ. ಬೆವರಿನ ಮೂಲಕ ಕರ್ಮಕ್ಕನುಗುಣವಾಗಿ ಹುಳ-ಹುಪ್ಪಟೆಗಳು ಹುಟ್ಟುತ್ತವೆ. ಬುದ್ಧಿವಂತನಾದವನು ಹುಳ-ಹುಪ್ಪಟೆಗಳಂತೆ ಅವರನ್ನು ಉಪೇಕ್ಷಿಸಬೇಕು (ಬಂಧಕವಾದ ಯಾವ ಕರ್ಮವನ್ನೂ ಆಚರಿಸಬಾರದು. ಕಾಮ-ಕ್ರೋಧಗಳ ವಿಕಾರದಿಂದ ಹುಟ್ಟಿದ ಮಕ್ಕಳಲ್ಲಿ ಮೋಹವನ್ನು ತಾಳದೆ ಕರ್ತವ್ಯವನ್ನು ಭೋಗಿಸಬೇಕು ಎಂದು ತಾತ್ಪರ್ಯ).

ರಜಸ್ತಮಸಿ ಪರ್ಯಸ್ತಂ ಸತ್ತ್ವಂ ತಮಸಿ ಸಂಸ್ಥಿತಮ್ ।
ಜ್ಞಾನಾಧಿಷ್ಠಾನಮಜ್ಞಾನಂ ಬುದ್ಧ್ಯಹಂಕಾರಲಕ್ಷಣಮ್ ॥ ೧೬ ॥

ರಜೋಗುಣವು ತಮೋಗುಣದಲ್ಲಿ ಲಯ ಹೊಂದುವುದು. ಸತ್ತ್ವಗುಣ ರಜೋಗುಣದಲ್ಲಿ ಲಯ ಹೊಂದುವುದು. ಅಜ್ಞಾನವು ಜ್ಞಾನದಲ್ಲಿ ಲಯ ಹೊಂದುವುದು. ಶರೀರ ಪ್ರಾಪ್ತಿಗೆ ಅಜ್ಞಾನವೇ ಕಾರಣವಾಗಿದೆ. ಅವ್ಯಕ್ತನಾದ ಆತ್ಮನು ಬುದ್ಧಿ-ಅಹಂಕಾರದಿಂದ ಯುಕ್ತನಾಗಿದ್ದಾನೆ.

ತದ್ ಬೀಜಂ ದೇಹಿನಾಮಾಹುಸ್ತದ್ ಬೀಜಂ ಜೀವಸಂಜ್ಞಿತಮ್ ।
ಕರ್ಮಣಾ ಕಾಲಯುಕ್ತೇನ ಸಂಸಾರಪರಿವರ್ತಕಮ್ ॥ ೧೭ ॥

ಅವ್ಯಕ್ತನಾದ ಆ ಜೀವನೇ ದೇಹಧಾರಿಗಳಾದ ಪ್ರಾಣಿಗಳಿಗೆ ಬೀಜರೂಪನಾಗಿದ್ದಾನೆ. ಜೀವಭೂತನಾದ ಆತ್ಮನೇ ಗುಣಗಳ ಸಂಗದಿಂದ ಜೀವನೆಂದು ಕರೆಯಲ್ಪಡುತ್ತಾನೆ. ಆ ಜೀವನೇ ಕಾಲಾನುಗುಣವಾದ ಕರ್ಮದಿಂದ ಪ್ರೇರಿತನಾಗಿ ಸಂಸಾರ ಚಕ್ರದಲ್ಲಿ ತಿರುಗುತ್ತಾನೆ.

ರಮತ್ಯಯಂ ಯಥಾ ಸ್ವಪ್ನೇ ಮನಸಾ ದೇಹವಾನಿವ ।
ಕರ್ಮಗರ್ಭೈರ್ಗುಣೈರ್ದೇಹೀ ಗರ್ಭೇ ತದುಪಪದ್ಯತೇ ॥ ೧೮ ॥

ಯಾವ ರೀತಿಯಲ್ಲಿ ಸ್ವಪ್ನಾವಸ್ಥೆಯಲ್ಲಿದ್ದಾಗ ಜೀವನು ಮನಸ್ಸಿನ ಮೂಲಕ ಮತ್ತೊಂದು ಶರೀರವನ್ನು ಧರಿಸಿರುವಂತೆ ಚೇಷ್ಟೆಗಳನ್ನು ಮಾಡುತ್ತಾನೋ ಅದೇ ರೀತಿ ಕರ್ಮ ಸಂಬಂಧದಿಂದ ತಾಯಿಯ ಗರ್ಭದಲ್ಲಿ ಜನ್ಮವನ್ನು ತಾಳುತ್ತಾನೆ.

ಕರ್ಮಣಾ ಬೀಜಭೂತೇನ ಚೋದ್ಯತೇ ಯದ್ ಯದಿಂದ್ರಿಯಮ್ ।
ಜಾಯತೇ ತದಹಂಕಾರಾದ್ರಾಗಯುಕ್ತೇನ ಚೇತಸಾ ॥ ೧೯ ॥

ಹೀಗೆ ಜನ್ಮಕಾರಣವಾದ ಕರ್ಮದಿಂದ ಅವನು ಯಾವ ಇಂದ್ರಿಯಗಳನ್ನು ಮುಂದಿಟ್ಟು ಆಸೆಗಳಿಂದ ಕೂಡಿದ ಮನಸ್ಸನ್ನು ತೊಳಲಿಸುತ್ತಾನೋ ಅವೆಲ್ಲ ಆಯಾ ಇಂದ್ರಿಯಗಳಿಂದ, ಅಹಂಕಾರದಿಂದಲೇ ಉಂಟಾದವು.

ಶಬ್ದರಾಗಾಚ್ಛ್ರೋತ್ರಮಸ್ಯ ಜಾಯತೇ ಭಾವಿತಾತ್ಮನಃ ।
ರೂಪರಾಗಾತ್ತಥಾ ಚಕ್ಷುಘ್ರ್ರಾಣಂ ಗಂಧಚಿಕೀರ್ಷಯಾ ॥ ೨೦ ॥

ತಾಯಿಯ ಗರ್ಭದಲ್ಲಿರುವ ಜೀವನಿಗೆ ವಿಷಯ ಸಂಸ್ಕಾರಗಳ ಸಂಬಂಧದಿಂದ ಶಬ್ದಗಳನ್ನು ಕೇಳುವ ಆಸಕ್ತಿಯುಂಟಾಗಿ ಕಿವಿಗಳು ಮೂಡುತ್ತವೆ. ಪ್ರಾರಬ್ಧ ಕರ್ಮಕ್ಕನುಗುಣವಾಗಿ ರೂಪವನ್ನು ನೋಡಬೇಕೆಂಬ ಆಸಕ್ತಿ ಹುಟ್ಟಿದಾಗಲೇ ಕಣ್ಣುಗಳು ಹುಟ್ಟಿಕೊಳ್ಳುತ್ತವೆ. ಗಂಧವನ್ನು ಆಘ್ರಾಣಿಸಬೇಕೆಂಬ ಇಚ್ಛೆಗನುಗುಣವಾಗಿ ಮೂಗು ಹುಟ್ಟುತ್ತದೆ.

ಸ್ಪರ್ಶನೇಭ್ಯಸ್ತಥಾ ವಾಯುಃ ಪ್ರಾಣಾಪಾನವ್ಯಪಾಶ್ರಯಃ ।
ವ್ಯಾನೋದಾನೌ ಸಮಾನಶ್ಚ ಪಂಚಧಾ ದೇಹಯಾಪನಾ ॥ ೨೧ ॥

ಸ್ಪರ್ಶ ಸುಖವನ್ನು ಅನುಭವಿಸಬೇಕೆಂಬ ಇಚ್ಛೆಯುಂಟಾದೊಡನೆ ಚರ್ಮವು ಬೆಳೆದುಕೊಳ್ಳುತ್ತದೆ. ಅಂತೆಯೇ ವಾಯುವು ಪ್ರಕಟವಾಗುತ್ತದೆ. ವಾಯುವು ಪ್ರಾಣಾಪಾನಗಳನ್ನು ಆಶ್ರಯಿಸುತ್ತದೆ. ಆ ವಾಯುವೇ ಉದಾನ, ವ್ಯಾನ, ಸಮಾನ ಎನಿಸುತ್ತದೆ. ಹೀಗೆ ಐದು ಪ್ರಕಾರಗಳಿಂದ ಪ್ರಕಟಗೊಂಡ ವಾಯುವು ಶರೀರ ಯಾತ್ರೆಯನ್ನು ನಿರ್ವಹಿಸುತ್ತದೆ.

ಸಂಜಾತೈರ್ಜಾಯತೇ ಗಾತ್ರೈಃ ಕರ್ಮಜೈರ್ವಪ್ಷ್ಮಣಾ ವೃತಃ ।
ದುಃಖಾದ್ಯಂತೈರ್ದುಃಖಮಧ್ಯೈರ್ನರಃ ಶಾರೀರಮಾನಸೈಃ ॥ ೨೨ ॥

ಹೀಗೆ ಜನ್ಮಕಾಲದಲ್ಲಿ ಪೂರ್ಣತೆಯನ್ನು ಪಡೆದು ಕರ್ಮಜನಿತವಾಗಿ ಹುಟ್ಟಿದ, ಶರೀರಾವಯವಗಳಿಂದ ಸೂಕ್ಷ್ಮ ಶರೀರದಿಂದ ಕೂಡಿದ ಜೀವನು ಶಾರೀರಿಕ, ಮಾನಸಿಕವಾದ ದುಃಖಗಳಿಂದ ಆದಿ-ಮಧ್ಯಾಂತಗಳಲ್ಲಿಯೂ ಪೀಡಿಸಲ್ಪಡುತ್ತಿರುತ್ತಾನೆ.

ದುಃಖಂ ವಿದ್ಯಾದುಪಾದಾನಾದಭಿಮಾನಾಚ್ಚ ವರ್ಧತೇ ।
ತ್ಯಾಗಾತ್ತೇಭ್ಯೋ ನಿರೋಧಃ ಸ್ಯಾನ್ನಿರೋಧಜ್ಞೋ ವಿಮುಚ್ಯತೇ ॥ ೨೩ ॥

ಜೀವರಿಗೆ ಒಂದು ವಸ್ತುವನ್ನು ಸ್ವೀಕರಿಸಿದ ಕೂಡಲೇ ಅಭಿಮಾನ ನಿಮಿತ್ತದಿಂದ ದುಃಖವು ಉಂಟಾಗುತ್ತದೆ. ಆ ವಸ್ತುವಿನಲ್ಲಿ ಕ್ಷಣಕ್ಷಣವೂ ಅಭಿಮಾನವು ಅಭಿವೃದ್ಧಿಯನ್ನು ಹೊಂದುವುದರಿಂದ ದುಃಖವೂ ಅಭಿವೃದ್ಧಿಯನ್ನು ಹೊಂದುತ್ತದೆ. ದುಃಖದ ತ್ಯಾಗದಿಂದ ಎಲ್ಲಾ ದುಃಖಗಳು ನಿವಾರಣೆ ಹೊಂದುತ್ತವೆ. ಯಾವನು ದುಃಖವನ್ನು ಪರಿಹರಿಸುವ ಉಪಾಯವನ್ನು ತಿಳಿದಿದ್ದಾನೋ ಅವನು ಸಂಸಾರದಿಂದ ಮುಕ್ತನಾಗುತ್ತಾನೆ.

ಇಂದ್ರಿಯಾಣಾಂ ರಜಸ್ಯೇವ ಪ್ರಭವಪ್ರಲಯಾವುಭೌ ।
ಪರೀಕ್ಷ್ಯ ಸಂಚರೇದ್ ವಿದ್ವಾನ್ ಯಥಾವಚ್ಛಾಸ್ತ್ರಚಕ್ಷುಷಾ ॥ ೨೪ ॥

ಇಂದ್ರಿಯಗಳ ಉತ್ಪತ್ತಿ ಮತ್ತು ಲಯ ಇವೆರಡು ಕಾರ್ಯಗಳೂ ರಜೋಗುಣದಿಂದಲೇ ಉಂಟಾಗುತ್ತವೆ. ವಿದ್ವಾಂಸನಾದ ಪುರುಷನು ಶಾಸ್ತ್ರದ ದೃಷ್ಟಿಯಿಂದ ಈ ವಿಷಯವನ್ನು ಚೆನ್ನಾಗಿ ಪರೀಕ್ಷಿಸಿದ ಬಳಿಕ ಯೋಗ್ಯವಾಗಿ ನಡೆದುಕೊಳ್ಳಬೇಕು.

ಜ್ಞಾನೇಂದ್ರಿಯಾಣೇಂದ್ರಿಯಾರ್ಥಾನ್ನೋಪಸರ್ಪಂತ್ಯತರ್ಷುಲಮ್ ।
ಹೀನೈಶ್ಚ ಕರಣೈರ್ದೇಹೀ ನ ದೇಹಂ ಪುನರರ್ಹತಿ ॥ ೨೫ ॥

ಯಾವ ವ್ಯಕ್ತಿಯು ಆಸೆಯನ್ನು ಜಯಿಸಿ ಇರುತ್ತಾನೋ ಅವನಿಗೆ ಇಂದ್ರಿಯಗಳು, ಅವುಗಳಿಗೆ ಬೇಕಾದ ವಿಷಯಗಳು ಸನ್ನಿಹಿತವಾಗಿದ್ದರೂ ಅವುಗಳು ಅವನನ್ನು ಕೆಡಿಸಲಾರವು. ಅಂತಹ ಇಂದ್ರಿಯಗಳನ್ನು ಧಿಕ್ಕರಿಸಿದ ವ್ಯಕ್ತಿಯು ಪುನಃ ಈ ಶರೀರದಲ್ಲಿ ಹುಟ್ಟುವುದಿಲ್ಲ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ತ್ರಿಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನಲವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ನಾಲ್ಕನೆಯ ಅಧ್ಯಾಯ

ಬ್ರಹ್ಮಚರ್ಯ ಮತ್ತು ವೈರಾಗ್ಯದಿಂದ ಮುಕ್ತಿ ಕಥನವು.

ಗುರುಃ

ಅತ್ರೋಪಾಯಂ ಪ್ರವಕ್ಷ್ಯಾಮಿ ಯಥಾವಚ್ಛಾಸ್ತ್ರಚಕ್ಷುಷಾ ।
ತದ್ವಿಜ್ಞಾನಾಚ್ಚರನ್ ಪ್ರಾಜ್ಞಃ ಪ್ರಾಪ್ನುಯಾತ್ ಪರಮಾಂ ಗತಿಮ್ ॥ ೧ ॥

ಗುರು– ಶಿಷ್ಯನೇ, ನಾನು ನಿನಗೆ ಮೋಕ್ಷೋಪಾಯವನ್ನು ಶಾಸ್ತ್ರದೃಷ್ಟಿಯಿಂದ ಯಥಾವತ್ತಾಗಿ ಹೇಳುತ್ತೇನೆ. ಮನುಷ್ಯನು ಶಾಸ್ತ್ರವಿಹಿತವಾದ ಕರ್ಮಗಳನ್ನು ನಿಷ್ಕಾಮ ಭಾವದಿಂದ ಆಚರಿಸುತ್ತಾ ತತ್ತ್ವಜ್ಞಾನದಿಂದ ಪರಮಗತಿಯನ್ನು ಹೊಂದುತ್ತಾನೆ.

ಸರ್ವೇಷಾಮೇವ ಭೂತಾನಾಂ ಪುರುಷಃ ಶ್ರೇಷ್ಠ ಉಚ್ಯತೇ ।
ಪುರುಷೇಭ್ಯೋ ದ್ವಿಜಾನಾಹುರ್ದ್ವಿಜೇಭ್ಯೋ ಮಂತ್ರವಾದಿನಃ ॥ ೨ ॥

ಸಮಸ್ತ ಪ್ರಾಣಿಗಳಲ್ಲಿಯೂ ಮನುಷ್ಯನೇ ಶ್ರೇಷ್ಠನಾದವನು ಎಂದು ಹೇಳಲ್ಪಟ್ಟಿದೆ. ಮನುಷ್ಯರಲ್ಲಿ ದ್ವಿಜರು ಶ್ರೇಷ್ಠರು. ದ್ವಿಜರಲ್ಲಿಯೂ ಮಂತ್ರಜ್ಞರಾದ ಬ್ರಾಹ್ಮಣರು ಶ್ರೇಷ್ಠರು.

ಸರ್ವಭೂತವಿಶಿಷ್ಟಾಸ್ತೇ ಸರ್ವಜ್ಞಾಃ ಸರ್ವದರ್ಶಿನಃ ।
ಬ್ರಾಹ್ಮಣಾ ವೇದತತ್ತ್ವಜ್ಞಾಸ್ತತ್ತ್ವಾರ್ಥಗತಿನಿಶ್ಚಯಾಃ ॥ ೩ ॥

ಮಂತ್ರಜ್ಞರಾದ ಬ್ರಾಹ್ಮಣರು ಸಮಸ್ತ ಪ್ರಾಣಿಗಳಲ್ಲಿಯೂ ವಿಶಿಷ್ಟರಾಗಿರುತ್ತಾರೆ. ಅವರು ಎಲ್ಲವನ್ನೂ ಅರ್ಥಮಾಡಿಕೊಂಡು, ಎಲ್ಲ ಕಡೆಯೂ ದೃಷ್ಟಿಯುಳ್ಳವರಾಗಿ, ಬ್ರಹ್ಮನಿಷ್ಠರಾಗಿ, ವೇದಗಳ ಅಂತರಂಗವನ್ನು ಬಲ್ಲವರಾಗಿ ಪರಮಾರ್ಥ ತತ್ತ್ವದಲ್ಲಿ ನಿಶ್ಚಯವುಳ್ಳವರಾಗಿರುತ್ತಾರೆ.

ನೇತ್ರಹೀನೋ ಯಥಾ ಹ್ಯೇಕಃ ಕೃಚ್ಛ್ರಾಣಿ ಲಭತೇऽಧ್ವನಿ ।
ಜ್ಞಾನಹೀನಸ್ತಥಾ ಲೋಕೇ ತಸ್ಮಾಜ್ಜ್ಞಾನವಿದೋऽಧಿಕಾಃ ॥ ೪ ॥

ಹೇಗೆ ಕಣ್ಣಿನಲ್ಲದವನು ಯಾವ ರೀತಿ ಏಕಾಕಿಯಾಗಿ ಪ್ರಯಾಣವನ್ನು ಮಾಡುವಾಗ ದಾರಿಯಲ್ಲಿ ಅನೇಕ ಕಷ್ಟಗಳಿಗೆ ಗುರಿಯಾಗುತ್ತಾನೋ ಹಾಗೆ ಜ್ಞಾನಹೀನನಾದವನು ಸಂಸಾರದಲ್ಲಿ ಬಿದ್ದು, ಅದನ್ನು ದಾಟುವ ಉಪಾಯವನ್ನು ಕಾಣದೆ ಅನೇಕ

ಕಷ್ಟಕೋಟಲೆಗಳಿಗೆ ತುತ್ತಾಗುತ್ತಾನೆ. ಆದ್ದರಿಂದ ಸಾಮಾನ್ಯ ಮನುಷ್ಯರಿಗಿಂತ ಜ್ಞಾನಿಗಳೇ ಶ್ರೇಷ್ಠರು.

ತಾಂಸ್ತಾನುಪಾಸತೇ ಧರ್ಮಾನ್ ಧರ್ಮಕಾಮಾ ಯಥಾಗಮಮ್ ।
ನ ತ್ವೇಷಾಮರ್ಥಸಾಮಾನ್ಯಮಂತರೇಣ ಗುಣಾನಿಮಾನ್ ॥ ೫ ॥

ಮನುಷ್ಯರು ಶಾಸ್ತ್ರವಿಧಿಗೆ ಅನುಸಾರವಾದ ಧರ್ಮಗಳನ್ನು ಅಪೇಕ್ಷಿಸುತ್ತಾರೆ. ಅಗ್ನಿಷ್ಟೋಮಾದಿ ಸಕಾಮ ಕರ್ಮಗಳನ್ನು ಮಾಡುತ್ತಿರುತ್ತಾರೆ. ಆದರೆ ಅವರಲ್ಲಿ ಮುಂದೆ ಹೇಳುವ ಗುಣಗಳು ಇಲ್ಲದಿದ್ದಲ್ಲಿ ಅವರು ಮೋಕ್ಷರೂಪವಾದ ಪುರುಷಾರ್ಥವನ್ನು ಹೊಂದಲಾರರು.

ವಾಗ್ದೇಹಮನಸಾಂ ಶೌಚಂ ಕ್ಷಮಾ ಸತ್ಯಂ ಧೃತಿಃ ಸ್ಮೃತಿಃ ।
ಸರ್ವಧರ್ಮೇಷು ಧರ್ಮಜ್ಞಾ ಜ್ಞಾಪಯಂತಿ ಗುಣಾನಿಮಾನ್ ॥ ೬ ॥

ಮಾತು, ಮನಸ್ಸು, ಶರೀರಗಳ ಪಾವಿತ್ರ್ಯ, ಕ್ಷಮೆ, ಸತ್ಯ, ಧೈರ್ಯ, ಮೇಧಾಶಕ್ತಿ ಈ ಗುಣಗಳನ್ನು ಸಾಮಾನ್ಯವಾಗಿ ಸಮಸ್ತ ಧರ್ಮಗಳಲ್ಲಿಯೂ ಕಲ್ಯಾಣವನ್ನುಂಟು ಮಾಡುವ ಗುಣಗಳೆಂದು ಜ್ಞಾನಿಗಳು ಹೇಳುತ್ತಾರೆ.

ಯದಿದಂ ಬ್ರಹ್ಮಣೋ ರೂಪಂ ಬ್ರಹ್ಮಚರ್ಯಮಿತಿ ಸ್ಮೃತಮ್ ।
ಪರಂ ತತ್ ಸರ್ವಭೂತೇಭ್ಯಸ್ತೇನ ಯಾಂತಿ ಪರಾಂ ಗತಿಮ್ ॥ ೭ ॥

ವೇದಗಳಿಂದ ಚಿಂತನೆಯನ್ನು ಮಾಡಲು ಯೋಗ್ಯವಾದ ಬ್ರಹ್ಮಚರ್ಯವನ್ನು ಶಾಸ್ತ್ರಗಳಲ್ಲಿ ಭಗವಂತನ ರೂಪವೇ ಎಂದು ಹೇಳಿದ್ದಾರೆ. ಬ್ರಹ್ಮಚರ್ಯವು ಸರ್ವಧರ್ಮಗಳಿಗಿಂತಲೂ ಶ್ರೇಷ್ಠವಾದುದು. ಬ್ರಹ್ಮಚರ್ಯದ ಪಾಲನೆಯಿಂದ ಮನುಷ್ಯನು ಪರಮ ಪದವನ್ನು ಹೊಂದುತ್ತಾನೆ.

ಲಿಂಗಸಂಯೋಗಹೀನಂ ಯಚ್ಛರೀರಸ್ಪರ್ಶವರ್ಜಿತಮ್ ।
ಶ್ರೋತ್ರೇಣ ಶ್ರವಣಂ ಚೈವ ಚಕ್ಷುಷಾ ಚೈವ ದರ್ಶನಮ್ ॥ ೮ ॥

ಜಿಹ್ವಯಾ ರಸನಂ ಯತ್ ತನ್ಮನಃಪರಿವರ್ಜಿತಮ್ ।
ಬುದ್ಧ್ಯಾ ಚ ವ್ಯವಸಾಯೇನ ಬ್ರಹ್ಮಚರ್ಯಮಕಲ್ಮಷಮ್ ॥ ೯ ॥

ಬ್ರಹ್ಮಚರ್ಯವು ಲಿಂಗದೇಹವನ್ನು ಭಂಗ ಮಾಡುವಂತಹದ್ದು. ಸ್ಥೂಲದೇಹವನ್ನು ಪರಿಹರಿಸುವಂತಹದ್ದು. ಕಿವಿಯಿಂದ ಕೇಳುವಿಕೆ, ಕಣ್ಣಿನಿಂದ ನೋಡುವಿಕೆ, ಜಿಹ್ವೆಯಿಂದ ರಸವನ್ನು ಸ್ವೀಕರಿಸುವಿಕೆ ಇವುಗಳನ್ನು ಬಿಟ್ಟಾಗ, ಸಂಶಯ ಕಾರಣವಾಗುವ ವಸ್ತುವನ್ನು ಬಿಡುವ ಮನಸ್ಸನ್ನು ಹೊಂದದಿರುವಿಕೆ, ಕೃಷಿಯಿಂದ ಬುದ್ಧಿಯನ್ನು ಹೊಂದುವಿಕೆ - ಇವುಗಳಿಂದ ಬ್ರಹ್ಮಚರ್ಯವು ನಿರ್ದುಷ್ಟವಾಗುತ್ತದೆ.

ಸಮ್ಯಗ್ ವೃತ್ತಿರ್ಬ್ರಹ್ಮಲೋಕಂ ಪ್ರಾಪ್ನುಯಾನ್ಮಧ್ಯಮಃ ಸುರಾನ್ ।
ದ್ವಿಜಾಗ್ರ್ಯೋ ಜಾಯತೇ ವಿದ್ವಾನ್ ಸನ್ನ್ಯಸೀಂ ವೃತ್ತಿಮಾಸ್ಥಿತಃ ॥ ೧೦ ॥

ಯಾವ ಮನುಷ್ಯನು ಇಂತಹ ಬ್ರಹ್ಮಚರ್ಯವನ್ನು ಸರಿಯಾಗಿ ಪರಿಪಾಲಿಸುವನೋ ಅವನು ಬ್ರಹ್ಮಲೋಕವನ್ನೇ ಹೊಂದುತ್ತಾನೆ. ಮಧ್ಯಮಶ್ರೇಣಿಯ ಬ್ರಹ್ಮಚಾರಿಯು ದೇವತೆಗಳ ಲೋಕವನ್ನು ಪಡೆದು ಬಳಿಕ ಸಮಸ್ತವನ್ನು ತ್ಯಜಿಸುವ ವಿರಕ್ತನಾದ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ಸುದುಷ್ಕರಂ ಬ್ರಹ್ಮಚರ್ಯಮುಪಾಯಂ ತತ್ರ ಮೇ ಶೃಣು ।
ಸಂಪ್ರವೃತ್ತಮುದೀರ್ಣಂ ಚ ನಿಗೃಹ್ಣೀಯಾದ್ ದ್ವಿಜೋ ಮನಃ ॥ ೧೧ ॥

ಬ್ರಹ್ಮಚರ್ಯದ ಪಾಲನೆಯು ಅತ್ಯಂತ ಕಠಿಣವಾದುದು. ಬ್ರಹ್ಮಚರ್ಯವನ್ನು ಅನುಷ್ಠಾನ ಮಾಡುವ ಉಪಾಯವನ್ನು ಹೇಳುತ್ತೇನೆ, ಕೇಳು. ಬ್ರಹ್ಮಚರ್ಯವನ್ನು ಪಾಲಿಸಲು ಇಚ್ಛಿಸುವ ಬ್ರಾಹ್ಮಣನು ಕ್ಷಣಕ್ಷಣಕ್ಕೂ ಉತ್ಪನ್ನವಾಗುವ ಕಾಮ-ಕ್ರೋಧಗಳನ್ನು ನಿಗ್ರಹಿಸಬೇಕು.

ಯೋಷಿತಾಂ ನ ಕಥಾಃ ಶ್ರಾವ್ಯಾ ನ ನಿರೀಕ್ಷ್ಯಾ ನಿರಂಬರಾಃ ।
ಕದಾಚಿದ್ ದರ್ಶನಾದಾಸಾಂ ದುರ್ಬಲಾನಾವಿಶೇದ್ ರಜಃ ॥ ೧೨ ॥

ಸ್ತ್ರೀಯರಿಗೆ ಸಂಬಂಧಿಸಿದ ಸಂಭಾಷಣೆಯನ್ನು ಕೇಳಬಾರದು. ನಗ್ನಾವಸ್ಥೆಯಲ್ಲಿರುವ ಸ್ತ್ರೀಯರನ್ನು ನೋಡಬಾರದು. ಯಾವುದಾದರೂ ಕಾರಣದಿಂದ ಸ್ತ್ರೀಯರು ನಗ್ನಾವಸ್ಥೆಯಲ್ಲಿರುವುದನ್ನು ನೋಡಿದರೆ ದುರ್ಬಲವಾದ ಮನಸ್ಸುಳ್ಳ ಮನುಷ್ಯರ ಮನಸ್ಸನ್ನು ರಜೋಗುಣವು ಬಹಳ ಬೇಗ ಪ್ರವೇಶಿಸುತ್ತದೆ.

ರಾಗೋತ್ಪತ್ತೌ ಚರೇತ್ ಕೃಚ್ಛ್ರಮಘ್ಮಸ್ತ್ರೀಃ ಪ್ರವಿಶೇದಪಃ ।
ಮನಃ ಸ್ವಪ್ನೇ ಚ ಮನಸಾ ತ್ರಿರ್ಜಪೇದಘಮರ್ಷಣಮ್ ॥ ೧೩ ॥

ಬ್ರಹ್ಮಚಾರಿಯು ಮನಸ್ಸಿನಲ್ಲಿ ಕಾಮವಿಕಾರಗಳಿಗೆ ತುತ್ತಾದಲ್ಲಿ ಕೃಚ್ಛ್ರ ವ್ರತವನ್ನು ಆಚರಿಸಬೇಕು. ಮನಸ್ಸಿನಲ್ಲಿ ಸ್ತ್ರೀಯನ್ನು ಸ್ಮರಿಸಿದ ಪಾಪಕ್ಕೆ ಮೂರುಬಾರಿ ಅಘಮರ್ಷಣ ಸೂಕ್ತವನ್ನು ನೀರಿನಲ್ಲಿ ಮುಳುಗಿ ಜಪಿಸಬೇಕು.

ವ್ಯಾಖ್ಯಾನ ವಿಶೇಷ– ಮೂರು ದಿವಸ ಪ್ರಾತಃಕಾಲದಲ್ಲಿಯೂ ಮೂರು ದಿವಸ ಸಾಯಂಕಾಲದಲ್ಲಿಯೂ ಭೋಜನ ಮಾಡಬೇಕು. ಮುಂದೆ ಮೂರು ದಿವಸ ಅಯಾಚಿತವಾದ ಅನ್ನವನ್ನು ಭೋಜನ ಮಾಡಬೇಕು. ನಂತರದ ಮೂರು ದಿವಸ ಉಪವಾಸವಿರಬೇಕು. ಒಟ್ಟು ಹನ್ನೆರಡು ದಿವಸಗಳ ವ್ರತಕ್ಕೆ ಪ್ರಾಜಾಪತ್ಯ ಕೃಚ್ಛ್ರ ಎನ್ನುತ್ತಾರೆ. **'ತ್ರಯಂ ಪ್ರಾತಃ ತ್ರಯಂ ಸಾಯಂ ತ್ರಯಂ ಅದ್ಯಾತ್ ಅಯಾಚಿತಮ್ । ಪರಂ ಚ ನಾಶ್ನೀಯಾತ್ ಪ್ರಾಜಾಪತ್ಯೋಯಮುಚ್ಯತೇ'** (ಮನುಸ್ಮೃತಿ ೧೧-೨೨).

ಪಾಪ್ಮಾನಂ ನಿರ್ದಹೇದೇವಮಂತರ್ಭೂತಂ ರಜೋಮಯಮ್ ।
ಜ್ಞಾನಯುಕ್ತೇನ ಮನಸಾ ಸಂತತೇನ ವಿಚಕ್ಷಣಃ ॥ ೧೪ ॥

ವಿವೇಕಿಯಾದ ಪುರುಷನು ಈ ರೀತಿಯಲ್ಲಿ ಜ್ಞಾನಯುಕ್ತವಾದ, ಸಂಯಮ ಶೀಲವಾದ ಮನಸ್ಸಿನಿಂದ ಕೂಡಿದವನಾಗಿ ಅಂತಃಕರಣದಲ್ಲಿ ಹುಟ್ಟುವ ಪಾಪಮಯವಾದ, ರಜೋಮಯವಾದ ಕಾಮವಿಕಾರವನ್ನು ಭಸ್ಮ ಮಾಡಬೇಕು.

ಕುಣಪಾಮೇಧ್ಯಸಂಯುಕ್ತಂ ಯದ್ವದಚ್ಛಿದ್ರಬಂಧನಮ್ ।
ತದ್ವದ್ದೇಹಗತಂ ವಿದ್ಯಾದಾತ್ಮಾನಂ ದೇಹಬಂಧನಮ್ ॥ ೧೫ ॥

ದುರ್ವಾಸನೆಯಿಂದ ಕೂಡಿರುವ ಮಲಯುಕ್ತವಾದ ಕೋಶವನ್ನು ಕರುಳು ಯಾವ ರೀತಿಯಲ್ಲಿ ದೃಢವಾಗಿ ಬಂಧಿಸುವುದೋ ಅದೇ ರೀತಿ ದೇಹದಲ್ಲಿರುವ ಆತ್ಮನನ್ನು ದೇಹವು ದೃಢವಾಗಿ ಬಂಧಿಸಿರುತ್ತದೆಂದು ತಿಳಿಯಬೇಕು.

ವಾತಪಿತ್ತಕಫಾನ್ ರಕ್ತಂ ತ್ವಙ್ಮಾಂಸಂ ಸ್ನಾಯುಮಸ್ಥಿ ಚ ।
ಮಜ್ಜಾಂ ಚೈವ ಸಿರಾಜಾಲೈಸ್ತರ್ಪಯಂತಿ ರಸಾ ನೃಣಾಮ್ ॥ ೧೬ ॥

ಮನುಷ್ಯನು ಭೋಜನ ಮಾಡುವುದರಿಂದ ಉಂಟಾಗುವ ಅನ್ನರಸಗಳು ನಾಡಿ ಸಮೂಹಗಳ ಮೂಲಕ ಮನುಷ್ಯರ ವಾತ-ಪಿತ್ತ-ಕಫಗಳನ್ನೂ, ರಕ್ತ-ಪಿತ್ತ-ಸ್ನಾಯು-ಅಸ್ಥಿ ಮಜ್ಜೆ, ಸಮಸ್ತ ದೇಹವನ್ನು ಪುಷ್ಟಿಗೊಳಿಸುತ್ತದೆ.

ದಶ ವಿದ್ಯಾದ್ಧಮನ್ಯೋಽತ್ರ ಪಂಚೇಂದ್ರಿಯಗುಣಾವಹಾಃ ।
ಯಾಭಿಃ ಸೂಕ್ಷ್ಮಾಃ ಪ್ರತಾಯಂತೇ ಧಮನ್ಯೋಽನ್ಯಾಃ ಸಹಸ್ರಶಃ ॥ ೧೭ ।

ಈ ಶರೀರದೊಳಗೆ ಅನ್ನರಸವನ್ನು ಕೊಂಡೊಯ್ಯುವ ಹತ್ತುನಾಡಿಗಳಿವೆ. ಅವುಗಳೇ ಪಂಚೇಂದ್ರಿಯಗಳಿಗೆ ಶಬ್ದಾದಿ ಗುಣಗಳನ್ನು ಗ್ರಹಿಸುವ ಶಕ್ತಿಯನ್ನು ನೀಡುತ್ತವೆ. ಈ ಹತ್ತು ನಾಡಿಗಳಿಂದ ಸೂಕ್ಷ್ಮವಾದ ಸಾವಿರಾರು ನಾಡಿಗಳು ದೇಹಾದ್ಯಂತವಾಗಿ ಪಸರಿಸಿವೆ.

ಏವಮೇತಾಃ ಸಿರಾನದ್ಯೋ ರಸೋದಾ ದೇಹಸಾಗರಮ್ ।
ತರ್ಪಯಂತಿ ಯಥಾಕಾಲಮಾಪಗಾ ಇವ ಸಾಗರಮ್ ॥ ೧೮ ॥

ನದಿಗಳು ಕಾಲಾನುಗುಣವಾಗಿ ಪ್ರವಾಹದಿಂದ ತುಂಬಿಕೊಂಡು ಸಮುದ್ರವನ್ನು ತೃಪ್ತಿಗೊಳಿಸುವಂತೆ ರಸವಾಹಿನಿಗಳಾದ ಈ ನಾಡಿಲೋಕದ ನದಿಗಳು ದೇಹವೆಂಬ ಸಾಗರವನ್ನು ತೃಪ್ತಿಪಡಿಸುತ್ತವೆ.

ಮಧ್ಯೇ ಚ ಹೃದಯಸ್ಯೈಕಾ ಸಿರಾ ತತ್ರ ಮನೋವಹಾ ।
ಶುಕ್ರಂ ಸಂಕಲ್ಪಜಂ ನೃಣಾಂ ಸರ್ವಗಾತ್ರೈರ್ವಿಮುಂಚತಿ ॥ ೧೯ ॥

ಹೃದಯದ ಮಧ್ಯದಲ್ಲಿ ಅನ್ನರಸಗಳಿಂದ ಮನಸ್ಸನ್ನು ಸಂತೋಷಗೊಳಿಸುವ ಮನೋವಹಾ ಎಂಬ ನಾಡಿಯಿದೆ. ಈ ನಾಡಿಯು ಮನುಷ್ಯನಲ್ಲಿರುವ ರೇತಸ್ಸನ್ನು ಕಾಮವಿಷಯಕವಾದ ಸಂಕಲ್ಪದ ಮೂಲಕ ದೇಹದ ಅಂಗಾಂಗಗಳಿಂದಲೂ ಸಂಗ್ರಹಿಸಿ ಉಪಸ್ಥದ ಕಡೆ ಸಾಗುವಂತೆ ಮಾಡುತ್ತದೆ. ರೇತಸ್ಸೇಚನ ಕಾರ್ಯವನ್ನು ಮಾಡುತ್ತದೆ.

ಸರ್ವಗಾತ್ರಪ್ರತಾಯಿನ್ಯಸ್ತಸ್ಯಾ ಹ್ಯನುಗತಾಃ ಸಿರಾಃ ।
ನೇತ್ರಯೋಃ ಪ್ರತಿಪದ್ಯಂತೇ ವಹಂತ್ಯಸ್ತೈಜಸಂ ಗುಣಮ್ ॥ ೨೦ ॥

ಮನೋವಹ ನಾಡಿಯನ್ನನುಸರಿಸಿ ಹೋಗುವ ಶರೀರದ ಸಮಗ್ರ ಭಾಗದಲ್ಲಿ ಸಂಚಾರ ಹೊಂದುವ ನಾಡಿಗಳು ತೇಜಸ್ಸಿನ ಗುಣಗಳನ್ನು ಸಂಗ್ರಹಿಸುತ್ತಾ ಕಣ್ಣುಗಳನ್ನು ಸೇರುತ್ತವೆ.

ಪಯಸ್ಯಂತರ್ಹಿತಂ ಸರ್ಪಿರ್ಯದ್ವನ್ನಿರ್ಮಥ್ಯತೇ ಖಜೈಃ ।
ಶುಕ್ರಂ ನಿರ್ಮಥ್ಯತೇ ತದ್ವದ್ದೇಹಸಂಕಲ್ಪಜೈಃ ಖಜೈಃ ॥ ೨೧ ॥

ಹಾಲಿನಲ್ಲಿ ಅಡಗಿರುವ ತುಪ್ಪವು ಯಾವ ರೀತಿ ಕಡಗೋಲಿನಿಂದ ಮಥಿತವಾಗಿದೆಯೋ ಅದೇ ರೀತಿ ದೇಹ ಮತ್ತು ಮನಸ್ಸಿನ ಸಂಕಲ್ಪಗಳಿಂದ ಮಥಿಸಲ್ಪಟ್ಟ ಕಾಮೋಪಕರಣ ರೂಪವಾದ ಕಡೆಗೋಲಿನಿಂದ ವೀರ್ಯವು ಮಥಿಸಲ್ಪಡುತ್ತದೆ.

ಸ್ವಪ್ನೇಽಪ್ಯೇವಂ ಯಥಾಭ್ಯೇತಿ ಮನಃಸಂಕಲ್ಪಜಂ ರಜಃ ।
ಶುಕ್ರಮಸ್ಪರ್ಶಜಂ ದೇಹಾತ್ ಸೃಜಂತ್ಯಸ್ಯ ಮನೋವಹಾ ॥ ೨೨ ॥

ಸ್ವಪ್ನದಲ್ಲಿ ಸ್ತ್ರೀಯರ ಸಂಪರ್ಕವಾಗಿದ್ದರೂ ಮನಸ್ಸಿನ ಸಂಕಲ್ಪದಿಂದಲೇ ಸ್ತ್ರೀ ಸಂಗದಿಂದ ಅನುರಾಗವು ಹುಟ್ಟುತ್ತದೆ. ಮನೋವಹ ನಾಡಿಯು ಆ ಅನುರಾಗ ಜನ್ಯವಾದ ವೀರ್ಯವನ್ನು ಮನುಷ್ಯನ ದೇಹದಿಂದ ಹೊರಹಾಕುತ್ತದೆ.

ಮಹರ್ಷಿರ್ಭಗವಾನತ್ರಿರ್ವೇದ ತಚ್ಛುಕ್ರಸಂಭವಮ್ ।
ತ್ರಿಬೀಜಮಿಂದ್ರದೈವತ್ಯಂ ತಸ್ಮಾದಿಂದ್ರಿಯಮುಚ್ಯತೇ ॥ ೨೩ ॥

ಈ ವೀರ್ಯದ ಉತ್ಪತ್ತಿ ಮತ್ತು ಗತಿಗಳನ್ನು ಮಹರ್ಷಿಗಳಾದ ಅತ್ರಿ ಋಷಿಗಳು ತಿಳಿದವರಾಗಿದ್ದಾರೆ. ಅವರ ಪ್ರಕಾರ ವೀರ್ಯವು ತ್ರಿಬೀಜಯುಕ್ತವಾದುದು. ಮನೋವಹ ಎಂಬ ನಾಡಿ, ಸಂಕಲ್ಪ ಮತ್ತು ಅನ್ನರಸ ಈ ಮೂರು ವೀರ್ಯಕ್ಕೆ ಕಾರಣಗಳಾಗಿವೆ. ಈ ವೀರ್ಯಕ್ಕೆ ಇಂದ್ರನು ದೇವತೆಯಾಗಿದ್ದಾನೆ. ಆದ್ದರಿಂದ ವೀರ್ಯವನ್ನು ಇಂದ್ರಿಯ ಎನ್ನುತ್ತಾರೆ.

ಯೇ ವೈ ಶುಕ್ರಗತಿಂ ವಿದ್ಯುರ್ಭೂತಸಂಕರಕಾರಿಕಾಮ್ ।
ವಿರಾಗಾ ದಗ್ಧದೋಷಾಸ್ತೇ ನಾಪ್ನುಯುರ್ದೇಹಸಂಭವಮ್ ॥ ೨೪ ॥

ಯಾರು ವೀರ್ಯದ ಗತಿಯು ಉದ್ರೇಕಗೊಂಡು ಅವಿವೇಕದಿಂದ ವರ್ಣ ಸಂಕರವನ್ನು ಉಂಟುಮಾಡುತ್ತದೆಂದು ತಿಳಿಯುತ್ತಾರೋ, ತಿಳಿದು ವಿರಕ್ತರಾಗುತ್ತಾರೋ ಅವರು ತಮ್ಮಲ್ಲಿರುವ ದೋಷಗಳನ್ನು ಸುಟ್ಟುಕೊಂಡು ದೇಹಬಂಧನದಿಂದ ಮುಕ್ತರಾಗುತ್ತಾರೆ. ಅವರು ಪುನಃ ಹುಟ್ಟನ್ನು ಪಡೆಯುವುದಿಲ್ಲ.

ಗುಣಾನಾಂ ಸಾಮ್ಯಮಾಗಮ್ಯ ಮನಸೈವ ಮನೋವಹಮ್ ।
ದೇಹಕರ್ಮ ನುದನ್ ಪ್ರಾಣಾನಂತಕಾಲೇ ವಿಮುಚ್ಯತೇ ॥ ೨೫ ॥

ದೇಹನಿರ್ವಾಹಕ್ಕಾಗಿ ಕರ್ಮನಿರತನಾದ ವಿರಕ್ತನು ಮನಸ್ಸಿನಿಂದಲೇ ಬಾಹ್ಯ ಸಂಕಲ್ಪಗಳನ್ನು ತ್ಯಜಿಸಿ, ಪ್ರಾಣಗಳನ್ನು ಊರ್ಧ್ವಗತಿಯಲ್ಲಿ ಪ್ರೇರಿಸುತ್ತಾ ಶರೀರ ಬಂಧನದಿಂದ ಮುಕ್ತನಾಗುತ್ತಾನೆ.

ಭವಿತಾ ಮನಸೋ ಜ್ಞಾನಂ ಮನ ಏವ ಪ್ರತಾಯತೇ ।
ಜ್ಯೋತಿಷ್ಮದ್ ವಿರಜೋ ದಿವ್ಯಮತ್ರ ಸಿದ್ಧಂ ಮಹಾತ್ಮನಾಮ್ ॥ ೨೬ ।

ಇದನ್ನೇ ಗುಣಸಾಮ್ಯ ಎನ್ನುತ್ತಾರೆ. ಇದನ್ನು ಸಾಧಿಸಿಕೊಂಡ ಮನಸ್ಸಿನಿಂದ ಜ್ಞಾನವು, ಭಗವದ್‌ಜ್ಞಾನವು ಉತ್ಪನ್ನವಾಗುತ್ತದೆ. ರಜೋಗುಣರಹಿತವಾದ, ಕಾಂತಿಯುಕ್ತವಾದ ಮನಸ್ಸು ಮಹಾತ್ಮರಿಗೆ ಪ್ರಣವಸಿದ್ಧಿಯನ್ನು ಉಂಟುಮಾಡುತ್ತದೆ.

ತಸ್ಮಾತ್ತದವಿಘಾತಾಯ ಕರ್ಮ ಕುರ್ಯಾದಕಲ್ಮಷಮ್ ।
ರಜಸ್ತಮಶ್ಚ ಹಿತ್ವೇಹ ನ ತಿರ್ಯಗ್ಗತಿಮಾಪ್ನುಯಾತ್ ॥ ೨೭ ॥

ಆದ್ದರಿಂದ ಮನುಷ್ಯನು ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡು ದೋಷರಹಿತವಾದ ಕರ್ಮಗಳನ್ನೇ ಮಾಡಬೇಕು. ಲೋಕದಲ್ಲಿ ರಜೋಗುಣ, ತಮೋಗುಣಗಳನ್ನು ತ್ಯಜಿಸಿದ ಬಳಿಕವೇ ಮನುಷ್ಯನು ತನ್ನ ಈಪ್ಸಿತವಾದ ಸ್ಥಾನವನ್ನು ಹೊಂದಬಹುದು.

ತರುಣಾಧಿಗತಂ ಜ್ಞಾನಂ ಜರಾದುರ್ಬಲತಾಂ ಗತಮ್ ।
ಪರಿಪಕ್ವಬುದ್ಧಿಃ ಕಾಲೇನ ಆದತ್ತೇ ಮಾನಸಂ ಬಲಮ್ ॥ ೨೮ ॥

ಯೌವನಾವಸ್ಥೆಯಲ್ಲಿ ಹೊಂದಿದ ಜ್ಞಾನವು ವೃದ್ಧಾಪ್ಯದಲ್ಲಿ ಶೈಥಿಲ್ಯವನ್ನು ಹೊಂದುತ್ತದೆ. ಆದರೆ ಪರಿಪಕ್ವವಾದ ಜ್ಞಾನವನ್ನು ಪಡೆದ ಮನುಷ್ಯನು ಕಾಲಕ್ರಮದಲ್ಲಿಯೂ ಜ್ಞಾನವು ಕ್ಷೀಣಿಸದಂತೆ ಮನೋಬಲವನ್ನು ಹೊಂದಿರುತ್ತಾನೆ.

ಸುದುರ್ಗಮಿವ ಪಂಥಾನಮತೀತ್ಯ ಗುಣಬಂಧನಮ್ ।
ಯದಾ ಪಶ್ಯೇತ್ತದಾ ದೋಷಾನತೀತ್ಯಾಮೃತಮಶ್ನುತೇ ॥ ೨೯ ॥

ಬುದ್ಧಿಯ ಪಕ್ವತೆಯನ್ನು ಪಡೆದ ಮನುಷ್ಯನು ಕಷ್ಟಮಾರ್ಗದಂತಿರುವ ತ್ರಿಗುಣಗಳ ಬಂಧನವನ್ನು ದಾಟಿ, ತನ್ನಲ್ಲಿ ಯಾವ ದೋಷಗಳು ಇದ್ದಾವೋ ಆ ದೋಷಗಳನ್ನು ಕಂಡುಕೊಂಡು ಕ್ರಮವಾಗಿ ಅವುಗಳನ್ನು ಅತಿಕ್ರಮಿಸಿ ಕೊನೆಯಲ್ಲಿ ಅಮೃತಮಯವಾದ ವಿಷ್ಣುವಿನ ಸ್ಥಾನವನ್ನು ಹೊಂದುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಚತುಶ್ಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನಲವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೈದನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು, ವೈರಾಗ್ಯವು ಮೋಕ್ಷಕ್ಕೆ ಕಾರಣವೆಂದು ತಿಳಿಸಿದುದು.

ಗುರುಃ

ದುರಂತೇಷ್ವಿಂದ್ರಿಯಾರ್ಥೇಷು ಸಕ್ತಾಃ ಸೀದಂತಿ ಜಂತವಃ ।
ಯೇ ತ್ವಸಕ್ತಾ ಮಹಾತ್ಮಾನಸ್ತೇ ಯಾಂತಿ ಪರಮಾಂ ಗತಿಮ್ ॥ ೧ ॥

ಗುರು– ಮೊದಲು ಸುಖದ ಭ್ರಮೆಯನ್ನುಂಟು ಮಾಡಿ ಕೊನೆಗೆ ಅಪಾರವಾದ ದುಃಖವನ್ನು ನೀಡುವ ಇಂದ್ರಿಯಾರ್ಥಗಳಲ್ಲಿ ಸಿಲುಕಿದ ಪ್ರಾಣಿಗಳು ಯಾವಾಗಲೂ ಕಷ್ಟವನ್ನೇ ಹೊಂದುತ್ತಾರೆ. ಅದರಲ್ಲಿರುವ ಸಂಬಂಧವನ್ನು ಬಿಟ್ಟ ಮಹಾತ್ಮರು ಉತ್ತಮ ಗತಿಯನ್ನು ಹೊಂದುತ್ತಾರೆ.

ಜನ್ಮಮೃತ್ಯುಜರಾದುಃಖೈರ್ವ್ಯಾಧಿಭಿರ್ಮನಸಃ ಕ್ಲಮೈಃ ।
ದೃಷ್ಟ್ವೇಮಂ ಸಂತತಂ ಲೋಕಂ ಘಟೇನ್ಮೋಕ್ಷಾಯ ಬುದ್ಧಿಮಾನ್॥ ೨ ॥

ಆದ್ದರಿಂದ ಬುದ್ಧಿವಂತನಾದವನು ಜನನ, ಜರಾ (ಮುಪ್ಪು), ಮರಣ, ದುಃಖ, ವ್ಯಾಧಿ, ಚಿಂತೆ ಮೊದಲಾದ ಕಷ್ಟಗಳಿಂದ ಜಗತ್ತೇ ತುಂಬಿದೆ ಎಂಬುದನ್ನು ತಿಳಿದು ಮೋಕ್ಷಕ್ಕಾಗಿ ಪ್ರಯತ್ನಿಸಬೇಕು.

ವಾಙ್ಮನೋಭ್ಯಾಂ ಶರೀರೇಣ ಶುಚಿಃ ಸ್ಯಾದನಹಂಕೃತಃ ।
ಪ್ರಶಾಂತೋ ಜ್ಞಾನವಾನ್ ಭಿಕ್ಷುರ್ನಿರಪೇಕ್ಷಶ್ಚರೇತ್ ಸುಖಮ್ ॥ ೩ ॥

ಮನೋವಾಕ್‌ಕಾಯಗಳಲ್ಲಿ ಶುಚಿಯಾಗಿ ಅಹಂಕಾರವಿಲ್ಲದೆ ಮನಶ್ಶಾಂತಿಯಿಂದ ಜ್ಞಾನಮಾರ್ಗವನ್ನು ಅನುಸರಿಸಿ ವಿಷಯಗಳಲ್ಲಿ ಅಪೇಕ್ಷೆಯನ್ನು ತೊರೆದು ವೈರಾಗ್ಯದಿಂದ ಭಿಕ್ಷುವೃತ್ತಿಯನ್ನು ಅನುಸರಿಸಿ ನಿಶ್ಚಿಂತನಾಗಿ ಸಂಚರಿಸಬೇಕು.

ವಶಾ ಮೋಕ್ಷವತಾಂ ಪಾಶಾಸ್ತಾಸಾಂ ರೂಪಂ ಪ್ರದರ್ಶಕಮ್ ।
ದುರ್ಗ್ರಹಂ ಪಶ್ಯಮಾನೋಽಪಿ ಮನ್ಯತೇ ಮೋಹಿತಸ್ತದಾ ॥ ೪ ॥

ಮುಕ್ತರಿಗೆ ಆಶಾಪಾಶಗಳೆಲ್ಲ ಅವರ ಅಧೀನವಾಗಿರುತ್ತವೆ. ಆ ಪಾಶಗಳನ್ನು ಅರಿಯುವುದು ಬಹಳ ಕಷ್ಟವಾಗಿದೆ. ಕೆಲವರು ಮೋಹಪಾಶಗಳನ್ನೇ ಇಷ್ಟವೆಂದು ಅವುಗಳಲ್ಲಿಯೇ ಮೋಹಿತರಾಗುತ್ತಾರೆ.

ಏವಂ ಪಶ್ಯಂಸ್ತಮಾತ್ಮಾನಮನುಧ್ಯಾತಂ ಹಿ ಬಂಧುಷು ।
ಅಯಥಾತ್ವೇನ ಜಾನಾತಿ ಭೇದರೂಪೇಣ ಸಂಸ್ಥಿತಮ್ ॥ ೫ ॥

ಈ ರೀತಿಯಾಗಿ ಸಾಂಸಾರಿಕ ಜಂಜಾಟಗಳನ್ನು ಅರ್ಥಮಾಡಿಕೊಂಡು ಪರಮಾತ್ಮನನ್ನೇ ಧ್ಯಾನಿಸುತ್ತಾ, ಸಮಸ್ತ ಜೀವನದ ಬಂಧುವರ್ಗವು ಯಥಾರ್ಥವಾದುದಲ್ಲ ಎಂಬುದನ್ನು ಯಾವನು ತಿಳಿದಿರುತ್ತಾನೋ ಅವನು ಅದಕ್ಕಿಂತ ವಿಲಕ್ಷಣನಾಗಿದ್ದು ವಿರಕ್ತನಾಗಿದ್ದವನಾಗಿ ಸಾಧಕನಾಗುತ್ತಾನೆ.

ಅಥ ವಾ ಮನಸಃ ಸಂಗಂ ಪಶ್ಯೇದ್ಭೂತಾನುಕಂಪಯಾ ।
ಅತ್ರಾಪ್ಯುಪೇಕ್ಷಾಂ ಕುರ್ವೀತ ಜ್ಞಾತ್ವಾ ಕರ್ಮಫಲಂ ಜಗತ್ ॥ ೬ ॥

ಅಥವಾ ಮನಸ್ಸಿನ ಸಂಬಂಧಗಳನ್ನು ಪಂಚಭೂತಾದಿಗಳಲ್ಲಿ ಹೇಗಿದೆಯೋ ಹಾಗೆ ಕಾಣಬೇಕು. ಅರ್ಥಾತ್ ಅನಿತ್ಯವೆಂದು ಭಾವಿಸಬೇಕು. ಅವುಗಳನ್ನು ಉಪೇಕ್ಷಿಸಿ ವಿವೇಕದಿಂದ ಜಗತ್ತಿನಲ್ಲಿರುವ ಕರ್ಮಫಲವನ್ನು ಅರ್ಥಮಾಡಿಕೊಳ್ಳಬೇಕು.

ಯತ್ಕೃತಂ ಪ್ರಾಕ್ ಶುಭಂ ಕರ್ಮ ಪಾಪಂ ವಾ ತದುಪಾಶ್ನುತೇ ।
ತಸ್ಮಾಚ್ಛುಭಾನಿ ಕರ್ಮಾಣಿ ಕುರ್ಯಾದ್ ವಾಗ್ಬುದ್ಧಿಕರ್ಮಭಿಃ ॥ ೭ ॥

ತಾನು ಏನು ಮಾಡಿದ್ದಾನೋ ಅದನ್ನು ಅನುಭವಿಸುತ್ತಾನೆ. ಶುಭಕರ್ಮವನ್ನು ಆಚರಿಸಿದ್ದಲ್ಲಿ ಶುಭವನ್ನೂ, ಪಾಪಕರ್ಮದ ಫಲವಾಗಿ ಪಾಪವನ್ನು ಅನುಭವಿಸುತ್ತಾನೆ.

ಆದ್ದರಿಂದ ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳಿಂದ ತಿಳಿದು ಶುಭಕರ್ಮಗಳನ್ನೇ ಆಚರಿಸಬೇಕು.

ಅಹಿಂಸಾ ಸತ್ಯವಚನಂ ಸರ್ವಭೂತೇಷು ಚಾರ್ಜವಮ್ ।
ಕ್ಷಮಾ ಚೈವಾಪ್ರಮಾದಶ್ಚ ಯಸ್ಯೈತೇ ಸ ಸುಖೀ ಭವೇತ್ ॥ ೮ ॥

ಅಹಿಂಸೆ, ಸತ್ಯಮಾತು, ಪ್ರಾಣಿಗಳಲ್ಲಿ ನಿಷ್ಕಪಟವಾಗಿ ವರ್ತಿಸುವಿಕೆ, ತಾಳ್ಮೆ, ಅಪ್ರಮತ್ತತೆ, ಈ ಗುಣಗಳು ಯಾರಲ್ಲಿದೆಯೋ ಅವನು ಸುಖವಾಗಿರುತ್ತಾನೆ.

ಅನಕ್ಷಸಾಧ್ಯಂ ತದ್ ಬ್ರಹ್ಮ ನಿರ್ಮಲಂ ಜಗತಃ ಪರಮ್ ।
ಸ್ವಾತ್ಮಪ್ರಕಾಶಮಗ್ರಾಹ್ಯಮಹೇತುಕಮಚಂಚಲಮ್ ॥ ೯ ॥

ಆ ಗುಣಪರಿಪೂರ್ಣವಾದ ವಸ್ತುವು ಕಣ್ಣಿನಿಂದ ನೋಡಲಾಗದು. ನಿರ್ಮಲವಾದುದು. ಜಗತ್ತಿಗಿಂತ ಶ್ರೇಷ್ಠವಾದದ್ದು. ಸ್ವಾತ್ಮಪ್ರಕಾಶವುಳ್ಳದ್ದು. ಅಗ್ರಾಹ್ಯವು. ತರ್ಕಗಳಿಂದ ತಿಳಿಯಲಾಗದ್ದು, ಅಚಂಚಲವಾದದ್ದು.

ವಿವೇಕಜ್ಞಾನವಾನ್ ಮಿಶ್ರಃ ಹ್ಯಾಶುರೂಪೇಣ ಸಂಸ್ಥಿತಃ ।
ವೈಕಾರಿಕಾತ್ ಪ್ರದೃಶ್ಯೇತೇ ಗೈರಿಕೇ ಮಧುಧಾರವತ್ ॥ ೧೦ ॥

ವಿವೇಕಜ್ಞಾನವುಳ್ಳದ್ದು. ಜಗದ್ವ್ಯಾಪ್ತವಾದುದು. ಎಲ್ಲೆಡೆಯಲ್ಲಿಯೂ ಸುಖಶೀಲವಾದುದು. ವಿವೇಕಿಯಾದ ಜ್ಞಾನಿಗೆ ವೈಕಾರಿಕವೆನಿಸಿದ ಮನಸ್ಸಿನಿಂದ ಜೀವಾತ್ಮ, ಪರಮಾತ್ಮರೆಂಬ ಜ್ಞಾನವು ನಿರಂತರವೂ ಗಿರಿಯಿಂದ ಉತ್ಪನ್ನವಾಗುವ ಮಧುಧಾರೆಯಂತೆ ಗೋಚರವಾಗುತ್ತದೆ.

ಯಶ್ಚೈನಂ ಪರಮಂ ಧರ್ಮಂ ಸರ್ವಭೂತಸುಖಾವಹಮ್ ।
ದುಃಖಾನ್ನಿಃಸರಣಂ ವೇದ ಸ ತತ್ತ್ವಜ್ಞಃ ಸುಖೀ ಭವೇತ್ ॥ ೧೧ ॥

ಯಾವಾತನು ತನ್ನ ಬುದ್ಧಿಯಿಂದ ಸಮಸ್ತ ಭೂತಗಳಿಗೆ ಸುಖವನ್ನು ತಂದೊಡ್ಡುವ ಪರಮಾತ್ಮನೆಂಬ ಪರಮಧರ್ಮವನ್ನು, ಸಮಸ್ತ ದುಃಖಗಳನ್ನು ಪರಿಹರಿಸುತ್ತದೆಂದು ತಿಳಿಯುತ್ತಾನೋ ಆ ತತ್ತ್ವಜ್ಞನು ಸುಖಿಯಾಗಿರುತ್ತಾನೆ.

ತಸ್ಮಾತ್ ಸಮಾಹಿತಂ ಬುದ್ಧ್ಯಾ ಮನೋ ಭೂತೇಷು ಧಾರಯೇತ್ ।
ನಾಪಧ್ಯಾಯೇನ್ನ ಸ್ಪೃಹಯೇನ್ನಾಬದ್ಧಂ ಚಿಂತಯೇದಸತ್ ॥ ೧೨ ॥

ಆದ್ದರಿಂದ ಸಾಧಕನು ಶಾಂತಿಯಿಂದ ಮನಸ್ಸನ್ನು ನಿಗ್ರಹಿಸಿಕೊಂಡು ಪ್ರಾಣಿಗಳ ಹಿತಚಿಂತನೆಯಲ್ಲಿ ಮನಸ್ಸು ವರ್ತಿಸುವಂತೆ ಮಾಡಬೇಕು. ಯಾವ ಪ್ರಾಣಿಗಳಿಗೂ ಕೇಡನ್ನೆಸಗಬಾರದು. ಯಾವುದೇ ಆಸೆಗಳಿಗೂ ತುತ್ತಾಗಬಾರದು. ಅಯೋಗ್ಯವಾದುದನ್ನು, ಹೀನವಾಗಿದ್ದನ್ನು ಮನಸ್ಸಿನಲ್ಲಿ ಚಿಂತಿಸಬಾರದು.

ಅವಾಗ್ಯೋಗಪ್ರಯೋಗೇಣ ಮನೋಜ್ಞಂ ಸಂಪ್ರವರ್ತತೇ ।
ವಿವಕ್ಷತಾ ವಾ ಸದಾವ್ಯಕ್ತಂ ಧರ್ಮಂ ಸೂಕ್ಷ್ಮಮವೇಕ್ಷತಾ ।
ಸತ್ಯಾಂ ವಾಚಮಹಿಂಸ್ರಾಂ ಚ ವದೇದನಪವಾದಿನೀಮ್ ॥ ೧೩ ॥

ನಿರಂತರವೂ ವ್ಯರ್ಥವಾದ ಪ್ರಯತ್ನದಿಂದ ಮನಸ್ಸನ್ನು ಪರಮಾತ್ಮನ ಜ್ಞಾನದಲ್ಲಿ ನೆಲೆಗೊಳಿಸಬೇಕು. ಪ್ರಿಯವಾದ ಮಾತುಗಳನ್ನು ನುಡಿಯುವುದರಿಂದ ಜ್ಞಾನೋದಯವಾಗುತ್ತದೆ.

ತಾನು ನುಡಿಯಬೇಕಾದ ಮಾತನ್ನು ಯೋಗ್ಯರೀತಿಯಲ್ಲಿ ನಿರ್ಧರಿಸಿಕೊಂಡು ಧರ್ಮಸೂಕ್ಷ್ಮವನ್ನು ವಿಮರ್ಶಿಸಿ ಸತ್ಯವಾಗಿಯೂ ಸಜ್ಜನರಿಗೆ ಹಾನಿಯಾಗದಂತೆಯೂ ಮತ್ತೊಬ್ಬರ ದೋಷವನ್ನು ಹೇಳದಂತೆಯೂ ಇರುವ ಮಾತುಗಳನ್ನೇ ಆಡಬೇಕು.

ಕಲ್ಕಾಪೇತಾಮಪರುಷಾಮನೃಶಂಸಾಮಪೈಶುನಾಮ್ ।
ಈದೃಗಲ್ಪಂ ಚ ವಕ್ತವ್ಯಮವಿಕ್ಷಿಪ್ತೇನ ಚೇತಸಾ ॥ ೧೪ ॥

ಮಾತಿನಲ್ಲಿ ವಂಚನೆ ಇರಬಾರದು. ಕ್ರೌರ್ಯ ಇರಬಾರದು. ಯಾರಿಗೂ ಹಾನಿಯಾಗಬಾರದು. ಪರರ ದೋಷವನ್ನು ಉದ್ಘಾಟಿಸಬಾರದು. ಇಂತಹ ಮಾತುಗಳನ್ನೇ ನಿರ್ಮಲವಾದ ಮನಸ್ಸಿನಿಂದ ಮಿತವಾಗಿ ಹೇಳಬೇಕು.

ವಾಕ್ಚಬುದ್ಧೋ ಹಿ ಸಂರಾಗಾದ್ ವಿರಾಗಾದ್ ವ್ಯಾಹರೇದ್ ಯದಿ ।
ಬುದ್ಧ್ಯಾ ಹ್ಯನಿಗೃಹೀತೇನ ಮನಸಾ ಕರ್ಮ ತಾಮಸಮ್ ॥ ೧೫ ॥

ವೈರಾಗ್ಯಗೊಂಡವನು ಸದ್ಬುದ್ಧಿಯನ್ನಾಶ್ರಯಿಸಿ ಶಾಂತಮನಸ್ಕನಾಗಿ ತಾನು ಮಾಡಿದ ತಾಮಸಕರ್ಮಗಳನ್ನು ತಾನೇ ಹೇಳಿಕೊಳ್ಳಬೇಕು.

ರಜೋಭೂತೈರ್ಹಿ ಕರಣೈಃ ಕರ್ಮಣಾ ಪ್ರತಿಪದ್ಯತೇ ।
ಸ ದುಃಖಂ ಪ್ರಾಪ್ಯ ಲೋಕೇಽಸ್ಮಿನ್ನರಕಾಯೋಪಪದ್ಯತೇ ।
ತಸ್ಮಾನ್ಮನೋವಾಕ್ಕಾರೀರೈರಾಚರೇದ್ ಧೈರ್ಯಮಾತ್ಮನಃ ॥ ೧೬ ॥

ಯಾವನು ವಿರಕ್ತಿಯನ್ನು ತಾಳದೆ ರಜೋಗುಣವನ್ನೇ ಆಶ್ರಯಿಸಿ ಕಾರ್ಯವನ್ನು ಮಾಡುತ್ತಾನೋ ಅವನು ಈ ಲೋಕದಲ್ಲಿ ದುಃಖಕ್ಕೆ ತುತ್ತಾಗಿ ಕೊನೆಗೆ ನರಕವನ್ನು ಹೊಂದುತ್ತಾನೆ. ಆದ್ದರಿಂದ ಮನಸ್ಸು, ಮಾತು, ಕೃತಿಗಳಿಂದ ಮನುಷ್ಯನು ನಿಶ್ಚಲವಾಗಿ ಧೈರ್ಯವನ್ನು ಅವಲಂಬಿಸಬೇಕು.

ಪ್ರಕೀರ್ಣಮೇಷಭಾರೋ ಹಿ ಯದ್ವದ್ಧಾರ್ಯೇತ ದಸ್ಯುಭಿಃ ।
ಪ್ರತಿಲೋಮಾಂ ದಿಶಂ ಬುದ್ಧ್ವಾ ಸಂಸಾರಮಬುಧಾಸ್ತಥಾ ॥ ೧೭ ॥

ದಾರಿಯು ಕೆಟ್ಟದ್ದೆಂಬುದನ್ನು ತಿಳಿದು ಅದೇ ದಾರಿಯಲ್ಲಿ ಪ್ರಯಾಣ ಬೆಳೆಸಿದರೆ ಸಂಪತ್ತನ್ನೆಲ್ಲ ಕಳ್ಳರು ಅಪಹರಿಸುತ್ತಾರೆ. ಅದರಂತೆ ಸಂಸಾರದಲ್ಲಿರುವ ದೋಷಗಳನ್ನು ತಿಳಿದು ಅಲ್ಲಿಯೇ ಸಾಗುವವರು ಆಶಾಪಾಶಗಳಿಂದ ಸೆಳೆಯಲ್ಪಟ್ಟು ದುಃಖಕ್ಕೀಡಾಗುತ್ತಾರೆ. ಆದ್ದರಿಂದ ಸಂಸಾರ ಮಾರ್ಗದಲ್ಲಿರುವ ವ್ಯಕ್ತಿಗಳು ಅತಿಯಾದ ಲೋಭಗಳನ್ನು ಬಿಡಬೇಕು.

ತಾನೇವ ಚ ಯಥಾ ದಸ್ಯೂನ್ ಕ್ಷಿಪ್ತ್ವಾ ಗಚ್ಛೇಚ್ಚಿವಾಂ ದಿಶಮ್ ।
ತಥಾ ರಜಸ್ತಮಃಕರ್ಮಾಣ್ಯುತ್ಸೃಜ್ಯ ಪ್ರಾಪ್ನುಯಾತ್ ಸುಖಮ್ ॥ ೧೮ ॥

ಸಂಸಾರದಲ್ಲಿದ್ದರೂ ದಾರಿ ತಪ್ಪಿ ಹೋದವನು ತನ್ನಲ್ಲಿರುವ ಧೈರ್ಯದಿಂದ ಕಳ್ಳರನ್ನಡಗಿಸಿ ಸರಿಯಾದ ದಾರಿಯನ್ನನುಸರಿಸಿ ಹೋಗುವಂತೆ ರಾಜಸ-ತಾಮಸಗಳನ್ನು ಬಿಟ್ಟಾಗ ಕ್ಷೇಮವನ್ನು ಹೊಂದುತ್ತಾನೆ.

ನಿಃಸಂದಿಗ್ಧಮನೀಹೋ ವೈ ಮುಕ್ತಃ ಸರ್ವಪರಿಗ್ರಹೈಃ ।
ವಿವಿಕ್ತಚಾರೀ ಲಘ್ವಾಶೀ ತಪಸ್ವೀ ನಿಯತೇಂದ್ರಿಯಃ ॥ ೧೯ ॥

ಜ್ಞಾನದಗ್ಧಪರಿಕ್ಲೇಶಃ ಪ್ರಯೋಗರತಿರಾತ್ಮವಾನ್ ।
ನಿಷ್ಪ್ರಚಾರೇಣ ಮನಸಾ ಪರಂ ತದಧಿಗಚ್ಛತಿ ॥ ೨೦ ॥

ಆಸೆಯನ್ನು ಬಿಡುವುದು, ಪರಿಗ್ರಹಗಳನ್ನೆಲ್ಲಾ ತ್ಯಜಿಸುವುದು, ಏಕಾಂತಸ್ಥಳದಲ್ಲಿ ವಾಸ ಮಾಡುವುದು, ಲಘುವಾದ ಆಹಾರ ಸೇವನೆ, ಮನಸ್ಸು ಮತ್ತು ಇಂದ್ರಿಯಗಳ ಏಕಾಗ್ರತೆಯನ್ನು ಹೊಂದುವುದು, ಜ್ಞಾನದಿಂದ ದುಃಖಗಳನ್ನು ದಹಿಸಿಕೊಳ್ಳುವುದು, ಯೋಗಸಮಾಧಿಗೆ ಬೇಕಾದಂತೆ ಅವಯವಗಳನ್ನು ಉತ್ಸಾಹದಿಂದ ಬಳಸಿಕೊಳ್ಳುವುದು ಇಂತಹ ಗುಣವುಳ್ಳವನು ನಿಶ್ಚಲವಾದ ಮನಸ್ಸಿನಿಂದ ಪರಬ್ರಹ್ಮನನ್ನು ಹೊಂದುತ್ತಾನೆ.

ಧೃತಿಮಾನಾತ್ಮವಾನ್ ಬುದ್ಧಿಂ ನಿಗೃಹ್ಣೀಯಾದಸಂಶಯಮ್ ।
ಮನೋ ಬುದ್ಧ್ಯಾ ನಿಗೃಹ್ಣೀಯಾದ್ ವಿಷಯಾನ್ ಮನಸಾತ್ಮನಃ ॥೨೧॥

ಧೈರ್ಯವಂತನೂ, ಬುದ್ಧಿವಂತನೂ ಆದ ಮನುಷ್ಯನು ಮೊದಲು ಬುದ್ಧಿಯನ್ನು, ಬುದ್ಧಿಯಿಂದ ಮನಸ್ಸನ್ನು, ಮನಸ್ಸಿನಿಂದ ವಿಷಯವನ್ನು ಅಡಗಿಸಬೇಕು. ಆ ಮನಸ್ಸನ್ನು ಪರಮಾತ್ಮನಲ್ಲಿ ಲಯಗೊಳಿಸಿ ನಿರಂತರವೂ ಧ್ಯಾನಿಸಬೇಕು.

ಯೋಜಯಿತ್ವಾ ಮನಸ್ತತ್ರ ನಿಶ್ಚಲಂ ಪರಮಾತ್ಮನಿ ।
ಯೋಗಾಭಿಸಂಧಿಯುಕ್ತಸ್ಯ ಬ್ರಹ್ಮ ತತ್ಸಂಪ್ರಕಾಶತೇ ।
ಐಕಾಂತ್ಯಂ ತದಿದಂ ವಿದ್ಧಿ ಸರ್ವವಸ್ತ್ವಂತರಸ್ಥಿತಿಃ ॥ ೨೨ ॥

ಪರಮಾತ್ಮನ ಧ್ಯಾನದಲ್ಲಿಯೇ ಉತ್ಸಾಹಗೊಂಡವನಿಗೆ ಬ್ರಹ್ಮಸ್ವರೂಪವು ಅಭಿವ್ಯಕ್ತವಾಗುತ್ತದೆ. ಎಲ್ಲರ ಅಂತರ್ಯಾಮಿಯಾದ ಬ್ರಹ್ಮನಲ್ಲಿ ಮನಸ್ಸನ್ನು ಲಯಗೊಳಿಸುವುದೇ ಮನಸ್ಸಿನ ಐಕಾಂತಸ್ಥಿತಿ ಎಂದು ತಿಳಿ.

ವಿಶೇಷಹೀನಂ ಗೃಹ್ಣಂತಿ ವಿಶೇಷಾಂ ಕಾರಣಾತ್ಮಿಕಾಮ್ ।
ಅಥವಾ ನ ಪ್ರಭುಸ್ತತ್ರ ಪರಮಾತ್ಮನಿ ವರ್ತಿತುಮ್ ।
ಆಗಮಿತತ್ವಂ ಯೋಗಾತ್ಮಾ ಯೋಗತಂತ್ರಮುಪಕ್ರಮೇತ್ ॥ ೨೩ ॥

ಇಂದ್ರಿಯಗಳು ಬಾಹ್ಯಪದಾರ್ಥಗಳನ್ನು ತೊರೆದಾಗ ಬದುಕಿಗೆ ಕಾರಣನೆನಿಸಿದ ಪರಮಾತ್ಮನನ್ನು ಮನಸ್ಸು ತಿಳಿಯುತ್ತದೆ. ವಿಷಯಪದಾರ್ಥಗಳಿಂದ ಮುಕ್ತವಾಗದ ಮನಸ್ಸು ಪರಮಾತ್ಮನಲ್ಲಿಯೇ ವರ್ತಿಸಲು ಸಮರ್ಥವಾಗುವುದಿಲ್ಲ. ಆದ್ದರಿಂದ ಯೋಗದಲ್ಲಿಯೇ ಮನಸ್ಸುಳ್ಳ ವ್ಯಕ್ತಿಯು ಮುಂದೆ ಕಾಣಬೇಕಾದ ಭಗವತತ್ತ್ವಕ್ಕಾಗಿ ಯೋಗವನ್ನು ಹೊಂದಬೇಕು.

ನಿಗೃಹೀತೇಂದ್ರಿಯಸ್ಯಾಸ್ಯ ಕುರ್ವಾಣಸ್ಯ ಮನೋ ವಶೇ ।
ದೇವತಾಸ್ತಾಃ ಪ್ರಕಾಶಂತೇ ಹೃಷ್ಟಾ ಯಾಂತಿ ತಮೀಶ್ವರಮ್ ॥ ೨೪ ॥

ಇಂದ್ರಿಯವನ್ನು ನಿಗ್ರಹಿಸಿಕೊಂಡು ಮನಸ್ಸನ್ನು ವಶದಲ್ಲಿಟ್ಟುಕೊಂಡಂಥ ಮನುಷ್ಯನಲ್ಲಿ ದೇವತೆಗಳು ಪ್ರಸನ್ನರಾಗಿ ಅಂತರ್ಯಾಮಿಯಾದ ಭಗವಂತನನ್ನು ತೋರಿಸುತ್ತಾರೆ.

ತಾಭಿಃ ಸಂಸಕ್ತಮನಸೋ ಬ್ರಹ್ಮವತ್ ಸಂಪ್ರಕಾಶತೇ ।
ಏತೈಶ್ಚಾಪಗತೈಃ ಸರ್ವೈರ್ಬ್ರಹ್ಮಭೂಯಾಯ ಕಲ್ಪತೇ ॥ ೨೫ ॥

ಆ ದೇವತೆಗಳಿಂದ ಭಗವಂತನಲ್ಲಿ ನೆಲೆಗೊಳಿಸಲ್ಪಟ್ಟ ಸಾಧಕನ ಮನಸ್ಸಿನಲ್ಲಿ ಗುಣಪರಿಪೂರ್ಣನಾದ ಭಗವಂತನು ಕಾಣಿಸುತ್ತಾನೆ. ಕ್ರಮವಾಗಿ ಬಾಹ್ಯೇಂದ್ರಿಯದಿಂದ ಮುಕ್ತನಾಗುತ್ತಿರಲು ಸತ್ತ್ವಗುಣವನ್ನು ಆಶ್ರಯಿಸಿದ ವ್ಯಕ್ತಿಯು ಭಗವಂತನನ್ನೇ ಹೊಂದುತ್ತಾನೆ.

ಅಥ ವಾ ನ ಪ್ರವರ್ತೇತ ಯೋಗತಂತ್ರೈರುಪಕ್ರಮೇತ್ ।
ಯೇನ ತಂತ್ರಮಯಂ ತಂತ್ರಂ ವೃತ್ತಿಃ ಸ್ಯಾತ್ತತ್ತದಾಚರೇತ್ ॥ ೨೬ ॥

ಯಾವನಿಗೆ ಪರಬ್ರಹ್ಮನನ್ನು ಜ್ಞಾನದಲ್ಲಿ ಸ್ಥಿರವಾಗಿ ನೆಲೆಗೊಳಿಸಲು ಶಕ್ತಿಯಿಲ್ಲವೋ ಅವನು ಬುದ್ಧಿಯನ್ನು ಯೋಗತಂತ್ರದಲ್ಲಿ ನೆಲೆಗೊಳಿಸಿ ಯೋಗತಂತ್ರ ಎಂದರೆ ಯೋಗ ಉಪಾಯಸಾಧನೆಗಳಿಂದ ಜೀವನವನ್ನು ಆಶ್ರಯಿಸಿ ಜೀವನೋಪಾಯವನ್ನು ಆಶ್ರಯಿಸುತ್ತಾ ಯೋಗಪ್ರಾಪ್ತಿಯ ದೆಶೆಯಲ್ಲಿ ಹೀಗೆ ವರ್ತಿಸಬೇಕು.

ಕಣಕುಲ್ಮಾಷಪಿಣ್ಯಾಕಶಾಕಯಾವಕಸಕ್ತವಃ ।
ತಥಾ ಮೂಲಫಲಂ ಭೈಕ್ಷಂ ಪರ್ಯಾಯೇಣೋಪಯೋಜಯೇತ್ ॥

ಕಣ ಎಂದರೆ ಭತ್ತ ಬಡಿದ ಮೇಲೆ ಅವರೆಲ್ಲರೂ ಸ್ವೀಕರಿಸಿದ ಬಳಿಕ ಬಿತ್ತಿರುವ ಭತ್ತಗಳನ್ನು ಕಣ ಎಂದಿದ್ದಾರೆ. ಕಾಡಿನ ಉದ್ದನ್ನು ಕುಣ್ಮಾಶ ಎಂದಿದ್ದಾರೆ. ಇಂತಹ ವ್ರೀಹಿ, ಉದ್ದು, ಹಿಂಡಿ, ಕಾಯಿ-ಕಸರುಗಳು, ಗೆಡ್ಡೆ-ಗೆಣಸುಗಳು, ಹಿಟ್ಟುಮುಂತಾದವುಗಳನ್ನೇ ಪರ್ಯಾಯವಾಗಿ ಸೇವಿಸುತ್ತಾ ಬರಬೇಕು.

ಆಹಾರಂ ನಿಯತಂ ಚೈವ ದೇಶೇ ಕಾಲೇ ಚ ಸಾತ್ತ್ವಿಕಮ್ ।
ತತ್ಪರೀಕ್ಷ್ಯಾನುವರ್ತೇತ ಯತ್ ಪ್ರವೃತ್ತ್ಯನುವರ್ತಕಮ್ ॥ ೨೮ ॥

ಸಾತ್ವಿಕನಾಗಿದ್ದುಕೊಂಡು ತನ್ನ ಯೋಗಸಾಧನೆಗೆ ವಿರುದ್ಧವಲ್ಲದ ಆ ಆಹಾರವನ್ನು ಸ್ವೀಕರಿಸುತ್ತಿರಬೇಕು. ಯಾವುದು ತನ್ನ ಜ್ಞಾನಮಾರ್ಗಕ್ಕೆ ಪ್ರತಿಬಂಧವಲ್ಲವೋ ಅದನ್ನು ತಿಳಿದು ಆಹಾರವನ್ನು ಪರೀಕ್ಷಿಸಿ ಸ್ವೀಕರಿಸಬೇಕು.

ಪ್ರವೃತ್ತಂ ನೋಪರುಂಧೇತ ಶನೈರಗ್ನಿಮಿವೇಂಧಯೇತ್ ।
ಜ್ಞಾನೇಂಧಿತಂ ತತೋ ಜ್ಞಾನಮರ್ಕವತ್ ಸಂಪ್ರಕಾಶತೇ ॥ ೨೯ ॥

ಧೃತಿಮಾನಾತ್ಮವಾನ್ ಬುದ್ಧಿಂ ನಿಗೃಹ್ಣೀಯಾದಸಂಶಯಮ್ ।
ಮನೋ ಬುದ್ಧ್ಯಾ ನಿಗೃಹ್ಣೀಯಾದ್ ವಿಷಯಾನ್ ಮನಸಾತ್ಮನಃ ॥೨೧॥

ಧೈರ್ಯವಂತನೂ, ಬುದ್ಧಿವಂತನೂ ಆದ ಮನುಷ್ಯನು ಮೊದಲು ಬುದ್ಧಿಯನ್ನು, ಬುದ್ಧಿಯಿಂದ ಮನಸ್ಸನ್ನು, ಮನಸ್ಸಿನಿಂದ ವಿಷಯವನ್ನು ಅಡಗಿಸಬೇಕು. ಆ ಮನಸ್ಸನ್ನು ಪರಮಾತ್ಮನಲ್ಲಿ ಲಯಗೊಳಿಸಿ ನಿರಂತರವೂ ಧ್ಯಾನಿಸಬೇಕು.

ಯೋಜಯಿತ್ವಾ ಮನಸ್ತತ್ರ ನಿಶ್ಚಲಂ ಪರಮಾತ್ಮನಿ ।
ಯೋಗಾಭಿಸಂಧಿಯುಕ್ತಸ್ಯ ಬ್ರಹ್ಮ ತತ್ಸಂಪ್ರಕಾಶತೇ ।
ಏಕಾಂತ್ಯಂ ತದಿದಂ ವಿದ್ಧಿ ಸರ್ವವಸ್ತ್ವಂತರಸ್ಥಿತಿಃ ॥ ೨೨ ॥

ಪರಮಾತ್ಮನ ಧ್ಯಾನದಲ್ಲಿಯೇ ಉತ್ಸಾಹಗೊಂಡವನಿಗೆ ಬ್ರಹ್ಮಸ್ವರೂಪವು ಅಭಿವ್ಯಕ್ತವಾಗುತ್ತದೆ. ಎಲ್ಲರ ಅಂತರ್ಯಾಮಿಯಾದ ಬ್ರಹ್ಮನಲ್ಲಿ ಮನಸ್ಸನ್ನು ಲಯಗೊಳಿಸುವುದೇ ಮನಸ್ಸಿನ ಏಕಾಂತಸ್ಥಿತಿ ಎಂದು ತಿಳಿ.

ವಿಶೇಷಹೀನಂ ಗೃಹ್ಣಂತಿ ವಿಶೇಷಾಂ ಕಾರಣಾತ್ಮಿಕಾಮ್ ।
ಅಥವಾ ನ ಪ್ರಭುಸ್ತತ್ರ ಪರಮಾತ್ಮನಿ ವರ್ತಿತುಮ್ ।
ಆಗಮಿತತ್ವಂ ಯೋಗಾತ್ಮಾ ಯೋಗತಂತ್ರಮುಪಕ್ರಮೇತ್ ॥ ೨೩ ॥

ಇಂದ್ರಿಯಗಳು ಬಾಹ್ಯಪದಾರ್ಥಗಳನ್ನು ತೊರೆದಾಗ ಬದುಕಿಗೆ ಕಾರಣನೆನಿಸಿದ ಪರಮಾತ್ಮನನ್ನು ಮನಸ್ಸು ತಿಳಿಯುತ್ತದೆ. ವಿಷಯಪದಾರ್ಥಗಳಿಂದ ಮುಕ್ತವಾಗದ ಮನಸ್ಸು ಪರಮಾತ್ಮನಲ್ಲಿಯೇ ವರ್ತಿಸಲು ಸಮರ್ಥವಾಗುವುದಿಲ್ಲ. ಆದ್ದರಿಂದ ಯೋಗದಲ್ಲಿಯೇ ಮನಸ್ಸುಳ್ಳ ವ್ಯಕ್ತಿಯು ಮುಂದೆ ಕಾಣಬೇಕಾದ ಭಗವತತ್ತ್ವಕ್ಕಾಗಿ ಯೋಗವನ್ನು ಹೊಂದಬೇಕು.

ನಿಗೃಹೀತೇಂದ್ರಿಯಸ್ಯಾಸ್ಯ ಕುರ್ವಾಣಸ್ಯ ಮನೋ ವಶೇ ।
ದೇವತಾಸ್ತಾಃ ಪ್ರಕಾಶಂತೇ ಹೃಷ್ಟಾ ಯಾಂತಿ ತಮೀಶ್ವರಮ್ ॥ ೨೪ ॥

ಇಂದ್ರಿಯವನ್ನು ನಿಗ್ರಹಿಸಿಕೊಂಡು ಮನಸ್ಸನ್ನು ವಶದಲ್ಲಿಟ್ಟುಕೊಂಡಂಥ ಮನುಷ್ಯನಲ್ಲಿ ದೇವತೆಗಳು ಪ್ರಸನ್ನರಾಗಿ ಅಂತರ್ಯಾಮಿಯಾದ ಭಗವಂತನನ್ನು ತೋರಿಸುತ್ತಾರೆ.

ತಾಭಿಃ ಸಂಸಕ್ತಮನಸೋ ಬ್ರಹ್ಮವತ್ ಸಂಪ್ರಕಾಶತೇ ।
ಏತೈಶ್ಚಾಪಗತೈಃ ಸರ್ವೈರ್ಬ್ರಹ್ಮಭೂಯಾಯ ಕಲ್ಪತೇ ॥ ೨೫ ॥

ಆ ದೇವತೆಗಳಿಂದ ಭಗವಂತನಲ್ಲಿ ನೆಲೆಗೊಳಿಸಲ್ಪಟ್ಟ ಸಾಧಕನ ಮನಸ್ಸಿನಲ್ಲಿ ಗುಣಪರಿಪೂರ್ಣನಾದ ಭಗವಂತನು ಕಾಣಿಸುತ್ತಾನೆ. ಕ್ರಮವಾಗಿ ಬಾಹ್ಯೇಂದ್ರಿಯದಿಂದ ಮುಕ್ತನಾಗುತ್ತಿರಲು ಸತ್ತ್ವಗುಣವನ್ನು ಆಶ್ರಯಿಸಿದ ವ್ಯಕ್ತಿಯು ಭಗವಂತನನ್ನೇ ಹೊಂದುತ್ತಾನೆ.

ಅಥ ವಾ ನ ಪ್ರವರ್ತೇತ ಯೋಗತಂತ್ರೈರುಪಕ್ರಮೇತ್ ।
ಯೇನ ತಂತ್ರಮಯಂ ತಂತ್ರಂ ವೃತ್ತಿಃ ಸ್ಯಾತ್ತತ್ತದಾಚರೇತ್ ॥ ೨೬ ॥

ಯಾವನಿಗೆ ಪರಬ್ರಹ್ಮನನ್ನು ಜ್ಞಾನದಲ್ಲಿ ಸ್ಥಿರವಾಗಿ ನೆಲೆಗೊಳಿಸಲು ಶಕ್ತಿಯಿಲ್ಲವೋ ಅವನು ಬುದ್ಧಿಯನ್ನು ಯೋಗತಂತ್ರದಲ್ಲಿ ನೆಲೆಗೊಳಿಸಿ ಯೋಗತಂತ್ರ ಎಂದರೆ ಯೋಗ ಉಪಾಯಸಾಧನೆಗಳಿಂದ ಜೀವನವನ್ನು ಆಶ್ರಯಿಸಿ ಜೀವನೋಪಾಯವನ್ನು ಆಶ್ರಯಿಸುತ್ತಾ ಯೋಗಪ್ರಾಪ್ತಿಯ ದೆಶೆಯಲ್ಲಿ ಹೀಗೆ ವರ್ತಿಸಬೇಕು.

ಕಣಕುಲ್ಮಾಷಪಿಣ್ಯಾಕಶಾಕಯಾವಕಸಕ್ತವಃ ।
ತಥಾ ಮೂಲಫಲಂ ಭೈಕ್ಷಂ ಪರ್ಯಾಯೇಣೋಪಯೋಜಯೇತ್ ॥

ಕಣ ಎಂದರೆ ಭತ್ತ ಬಡಿದ ಮೇಲೆ ಅವರೆಲ್ಲರೂ ಸ್ವೀಕರಿಸಿದ ಬಳಿಕ ಬಿತ್ತಿರುವ ಭತ್ತಗಳನ್ನು ಕಣ ಎಂದಿದ್ದಾರೆ. ಕಾಡಿನ ಉದ್ದನ್ನು ಕುಣ್ಮಾಶ ಎಂದಿದ್ದಾರೆ. ಇಂತಹ ವ್ರೀಹಿ, ಉದ್ದು, ಹಿಂಡಿ, ಕಾಯಿ-ಕಸರುಗಳು, ಗೆಡ್ಡೆ-ಗೆಣಸುಗಳು, ಹಿಟ್ಟುಮುಂತಾದವುಗಳನ್ನೇ ಪರ್ಯಾಯವಾಗಿ ಸೇವಿಸುತ್ತಾ ಬರಬೇಕು.

ಆಹಾರಂ ನಿಯತಂ ಚೈವ ದೇಶೇ ಕಾಲೇ ಚ ಸಾತ್ತ್ವಿಕಮ್ ।
ತತ್ಪರೀಕ್ಷ್ಯಾನುವರ್ತೇತ ಯತ್ ಪ್ರವೃತ್ತ್ಯನುವರ್ತಕಮ್ ॥ ೨೮ ॥

ಸಾತ್ವಿಕನಾಗಿದ್ದುಕೊಂಡು ತನ್ನ ಯೋಗಸಾಧನೆಗೆ ವಿರುದ್ಧವಲ್ಲದ ಆ ಆಹಾರವನ್ನು ಸ್ವೀಕರಿಸುತ್ತಿರಬೇಕು. ಯಾವುದು ತನ್ನ ಜ್ಞಾನಮಾರ್ಗಕ್ಕೆ ಪ್ರತಿಬಂಧವಲ್ಲವೋ ಅದನ್ನು ತಿಳಿದು ಆಹಾರವನ್ನು ಪರೀಕ್ಷಿಸಿ ಸ್ವೀಕರಿಸಬೇಕು.

ಪ್ರವೃತ್ತಂ ನೋಪರುಂಧೇತ ಶನೈರಗ್ನಿಮಿವೇಂಧಯೇತ್ ।
ಜ್ಞಾನೇಂಧಿತಂ ತತೋ ಜ್ಞಾನಮರ್ಕವತ್ ಸಂಪ್ರಕಾಶತೇ ॥ ೨೯ ॥

ಆರಂಭಿಸಿದ ಕರ್ಮವನ್ನು ಬಿಡಬಾರದು. ಅಗ್ನಿಯನ್ನು ಬೆಳಗಿಸುವ ಹಾಗೆ ಜ್ಞಾನಪ್ರಕಾಶವನ್ನು ಅರ್ಥಾತ್ ಭಗವದ್‌ಜ್ಞಾನವನ್ನು ಸ್ವಲ್ಪ ಸ್ವಲ್ಪವಾಗಿ ಹೆಚ್ಚಿಸಿಕೊಳ್ಳಬೇಕು. ಪ್ರಕಾಶಗೊಂಡ ಜ್ಞಾನವು ಸೂರ್ಯನು ಪದಾರ್ಥಗಳನ್ನು ಹೇಗೋ ಹಾಗೆ ಬ್ರಹ್ಮಸ್ವರೂಪವನ್ನು ತೋರಿಸುತ್ತದೆ.

ಜ್ಞಾನಾಧಿಷ್ಠಾನಮಜ್ಞಾನಂ ತ್ರೀಂಲ್ಲೋಕಾನಧಿತಿಷ್ಠತಿ ।
ವಿಜ್ಞಾನಾನುಗತಂ ಜ್ಞಾನಮಜ್ಞಾನಾದಪಕೃಷ್ಯತೇ ॥ ೩೦ ॥

ಜ್ಞಾನವನ್ನೇ ಆಶ್ರಯವಾಗಿ ಉಳ್ಳ ಅಜ್ಞಾನವೆಂಬುದು ಮೂರು ಲೋಕಗಳನ್ನೂ, ಮೂರು ಅವಸ್ಥೆಗಳನ್ನೂ ವ್ಯಾಪಿಸಿದೆ. ಬುದ್ಧಿಯನ್ನು ಅವಲಂಬಿಸಿದ ಆ ಜ್ಞಾನವು ಅಜ್ಞಾನದಿಂದ ದೂರವಾಗುತ್ತದೆ.

ಪೃಥಕ್ತಾ ಸಂಪ್ರಯೋಗಾಚ್ಚ ನಾಸೂಯುರ್ವೇದಶಾಶ್ವತಮ್ ।
ಸ ತಯೋರಪವರ್ಗಜ್ಞೋ ವೀತರಾಗೋ ವಿಮುಚ್ಯತೇ ॥ ೩೧ ॥

ಜೀವಾತ್ಮನು ಮೂರು ಅವಸ್ಥೆಗಳಿಂದ ಬೇರೆಯಾಗಿದ್ದರೂ ಅದರೊಡನೆ ಸೇರಿದಂತೆ ತಿಳಿದಿದ್ದರಿಂದ ಮೋಹಗೊಳ್ಳುತ್ತಾನೆ.ಅಸೂಯಾ ರಹಿತನಾಗಿ ಶಾಶ್ವತವಾದ ಹರಿಯನ್ನು ತಿಳಿಸು. ಕ್ರಮವಾಗಿ ಜೀವನು ಆ ಜ್ಞಾನಾಜ್ಞಾನಗಳ ನಡುವೆ ಇರುವ ಅಪವರ್ಗವನ್ನು ತಿಳಿದ ಬಳಿಕ ರಾಗದಿಂದ ಮುಕ್ತನಾಗಿ ಬಿಡುಗಡೆ ಹೊಂದುತ್ತಾನೆ.

ವಯೋತೀತೋ ಜರಾಮೃತ್ಯೂ ಜಿತ್ವಾ ಬ್ರಹ್ಮ ಸನಾತನಮ್ ।
ಅಮೃತಂ ತದವಾಪ್ನೋತಿ ಯತ್ತದಕ್ಷರಮವ್ಯಯಮ್ ॥ ೩೨ ॥

ಆಸೆಯನ್ನು ತೊರೆದಾಗ ಜರಾ-ಮರಣಗಳನ್ನು ಜಯಿಸಿ, ಸನಾತನವೂ, ಅಮೃತವೂ, ಅವ್ಯಯವೂ ಆದ ಗುಣಪರಿಪೂರ್ಣನಾದ ಅಕ್ಷರನಾದ ಭಗವಂತನನ್ನು ಹೊಂದುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಪಂಚಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನಲವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತಾರನೆಯ ಅಧ್ಯಾಯ

ಭೀಷ್ಮರು ಗುರು-ಶಿಷ್ಯರ ಸಂವಾದದಲ್ಲಿ ತಿಳಿಸಲ್ಪಟ್ಟ ಪರಮಾತ್ಮನ ಸಾಕ್ಷಾತ್ಕರಿಸುವ ಮಾರ್ಗಗಳನ್ನು ಯುಧಿಷ್ಠಿರನಿಗೆ ತಿಳಿಸಿದುದು.

ಗುರುಃ

ನಿಷ್ಕಲ್ಮಷಂ ಬ್ರಹ್ಮಚರ್ಯಮಿಚ್ಛತಾ ಚರಿತುಂ ಸದಾ ।
ನಿದ್ರಾ ಸರ್ವಾತ್ಮನಾ ತ್ಯಾಜ್ಯಾ ಸ್ವಪ್ನದೋಷಾನವೇಕ್ಷತಾ ॥ ೧ ॥

ಗುರು- ನಿಷ್ಕಲ್ಮಷವಾದ ಬ್ರಹ್ಮಚರ್ಯವನ್ನು ಆಚರಿಸಬೇಕು ಎಂಬ ಇಚ್ಛೆಯುಳ್ಳವನು ನಿದ್ರೆಯಲ್ಲಿರುವ ದೋಷಗಳನ್ನು ಮೊದಲು ಕಂಡು ಆ ನಿದ್ರೆಯನ್ನು ಜಯಿಸಬೇಕು.

ಸ್ವಪ್ನೇ ಹಿ ರಜಸಾ ದೇಹೀ ತಮಸಾ ಚಾಭಿಭೂಯತೇ ।
ದೇಹಾಂತರಮಿವಾಪನ್ನಶ್ಚರತ್ಯಪಗತಸ್ಮೃತಿಃ ॥ ೨ ॥

ನಿದ್ರೆಯಲ್ಲಿ ಮನುಷ್ಯನಿಗೆ ರಜೋಗುಣ, ತಮೋಗುಣಗಳು ಆಕ್ರಮಿಸಿ ಕುತ್ತು ತರುತ್ತವೆ. ಅವನು ನಿದ್ರಾಸಮಯದಲ್ಲಿ ಬೇರೆ ದೇಹವನ್ನು ಹೊಂದಿದಂತೆ, ಹಿಂದಿನ ಸ್ಮರಣೆಯೇ ಇಲ್ಲದಂತೆ ಬಿದ್ದಿರುತ್ತಾನೆ.

ಜ್ಞಾನಾಭ್ಯಾಸಾಜ್ಜಾಗರತೋ ಜಿಜ್ಞಾಸಾರ್ಥಮನಂತರಮ್ ।
ವಿಜ್ಞಾನಾಭಿನಿವೇಶಾತ್ತು ಜಾಗರ್ತ್ಯನಿಶಂ ಸದಾ ॥ ೩ ॥

ಯೋಗಿಯಾದವನು ಬ್ರಹ್ಮಜ್ಞಾನಾರ್ಜನೆಗಾಗಿ ಪ್ರಯತ್ನಿಸುತ್ತಾ ಆ ಜ್ಞಾನಾರ್ಜನೆಯ ಅಭ್ಯಾಸಕ್ಕಾಗಿ ರಾತ್ರಿ-ಹಗಲು ಯಾವಾಗಲೂ ಜಾಗರೂಕನಾಗಿರಬೇಕು.

ಅತ್ರಾಹ ಕೋऽನ್ವಯಂ ಭಾವಃ ಸ್ವಪ್ನೇ ವಿಷಯವಾನಿವ ।
ಪ್ರಲೀನೈರಿಂದ್ರಿಯೈರ್ದೇಹೀ ವರ್ತತೇ ದೇಹವಾನಿವ ॥ ೪ ॥

ವಿಷಯಗಳಲ್ಲಿ ಸೇರದಂತಿರುವ ಆ ಸ್ವಪ್ನಾವಸ್ಥೆಯು ದೇಹವುಳ್ಳ ಆತ್ಮನಿಗೆ ಯಾವುದಾಗಿರಬಹುದು? ಸ್ವಪ್ನದಲ್ಲಿ ಯಾವ ಸ್ವಭಾವವನ್ನು ಹೊಂದಿರುತ್ತಾನೆ? ಇಂದ್ರಿಯಗಳೆಲ್ಲ ಪೂರ್ಣವಾಗಿ ಲೀನವಾಗಿದ್ದರೂ ಜ್ಞಾನ-ಕರ್ಮೇಂದ್ರಿಯಗಳಿಂದ ಕೂಡಿರುವ ಶರೀರವುಳ್ಳವನಂತೆ ಕಾಣಿಸುತ್ತಾನಲ್ಲವೇ? ಎಂದು ಕೆಲವರು ಹೇಳಬಹುದು.

ಆರಂಭಿಸಿದ ಕರ್ಮವನ್ನು ಬಿಡಬಾರದು. ಅಗ್ನಿಯನ್ನು ಬೆಳಗಿಸುವ ಹಾಗೆ ಜ್ಞಾನಪ್ರಕಾಶವನ್ನು ಅರ್ಥಾತ್ ಭಗವದ್‌ಜ್ಞಾನವನ್ನು ಸ್ವಲ್ಪಸ್ವಲ್ಪವಾಗಿ ಹೆಚ್ಚಿಸಿಕೊಳ್ಳಬೇಕು. ಪ್ರಕಾಶಗೊಂಡ ಜ್ಞಾನವು ಸೂರ್ಯನು ಪದಾರ್ಥಗಳನ್ನು ಹೇಗೋ ಹಾಗೆ ಬ್ರಹ್ಮಸ್ವರೂಪವನ್ನು ತೋರಿಸುತ್ತದೆ.

ಜ್ಞಾನಾಧಿಷ್ಠಾನಮಜ್ಞಾನಂ ತ್ರೀಂಲ್ಲೋಕಾನಧಿತಿಷ್ಠತಿ ।
ವಿಜ್ಞಾನಾನುಗತಂ ಜ್ಞಾನಮಜ್ಞಾನಾದಪಕೃಷ್ಯತೇ ॥ ೩೦ ॥

ಜ್ಞಾನವನ್ನೇ ಆಶ್ರಯವಾಗಿ ಉಳ್ಳ ಅಜ್ಞಾನವೆಂಬುದು ಮೂರು ಲೋಕಗಳನ್ನೂ, ಮೂರು ಅವಸ್ಥೆಗಳನ್ನೂ ವ್ಯಾಪಿಸಿದೆ. ಬುದ್ಧಿಯನ್ನು ಅವಲಂಬಿಸಿದ ಆ ಜ್ಞಾನವು ಅಜ್ಞಾನದಿಂದ ದೂರವಾಗುತ್ತದೆ.

ಪೃಥಕ್ತಾ ಸಂಪ್ರಯೋಗಾಚ್ಚ ನಾಸೂಯುರ್ವೇದಶಾಶ್ವತಮ್ ।
ಸ ತಯೋರಪವರ್ಗಜ್ಞೋ ವೀತರಾಗೋ ವಿಮುಚ್ಯತೇ ॥ ೩೧ ॥

ಜೀವಾತ್ಮನು ಮೂರು ಅವಸ್ಥೆಗಳಿಂದ ಬೇರೆಯಾಗಿದ್ದರೂ ಅದರೊಡನೆ ಸೇರಿದಂತೆ ತಿಳಿದಿದ್ದರಿಂದ ಮೋಹಗೊಳ್ಳುತ್ತಾನೆ. ಅಸೂಯಾ ರಹಿತನಾಗಿ ಶಾಶ್ವತವಾದ ಹರಿಯನ್ನು ತಿಳಿಸು. ಕ್ರಮವಾಗಿ ಜೀವನು ಆ ಜ್ಞಾನಾಜ್ಞಾನಗಳ ನಡುವೆ ಇರುವ ಅಪವರ್ಗವನ್ನು ತಿಳಿದ ಬಳಿಕ ರಾಗದಿಂದ ಮುಕ್ತನಾಗಿ ಬಿಡುಗಡೆ ಹೊಂದುತ್ತಾನೆ.

ವಯೋತೀತೋ ಜರಾಮೃತ್ಯೂ ಜಿತ್ವಾ ಬ್ರಹ್ಮ ಸನಾತನಮ್ ।
ಅಮೃತಂ ತದವಾಪ್ನೋತಿ ಯತ್ತದಕ್ಷರಮವ್ಯಯಮ್ ॥ ೩೨ ॥

ಆಸೆಯನ್ನು ತೊರೆದಾಗ ಜರಾ-ಮರಣಗಳನ್ನು ಜಯಿಸಿ, ಸನಾತನವೂ, ಅಮೃತವೂ, ಅವ್ಯಯವೂ ಆದ ಗುಣಪರಿಪೂರ್ಣನಾದ ಅಕ್ಷರನಾದ ಭಗವಂತನನ್ನು ಹೊಂದುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಪಂಚಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನಲವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತಾರನೆಯ ಅಧ್ಯಾಯ

ಭೀಷ್ಮರು ಗುರು-ಶಿಷ್ಯರ ಸಂವಾದದಲ್ಲಿ ತಿಳಿಸಲ್ಪಟ್ಟ ಪರಮಾತ್ಮನ ಸಾಕ್ಷಾತ್ಕರಿಸುವ ಮಾರ್ಗಗಳನ್ನು ಯುಧಿಷ್ಠಿರನಿಗೆ ತಿಳಿಸಿದುದು.

ಗುರುಃ

ನಿಷ್ಕಲ್ಮಷಂ ಬ್ರಹ್ಮಚರ್ಯಮಿಚ್ಛತಾ ಚರಿತುಂ ಸದಾ ।
ನಿದ್ರಾ ಸರ್ವಾತ್ಮನಾ ತ್ಯಾಜ್ಯಾ ಸ್ವಪ್ನದೋಷಾನವೇಕ್ಷತಾ ॥ ೧ ॥

ಗುರು- ನಿಷ್ಕಲ್ಮಷವಾದ ಬ್ರಹ್ಮಚರ್ಯವನ್ನು ಆಚರಿಸಬೇಕು ಎಂಬ ಇಚ್ಛೆಯುಳ್ಳವನು ನಿದ್ರೆಯಲ್ಲಿರುವ ದೋಷಗಳನ್ನು ಮೊದಲು ಕಂಡು ಆ ನಿದ್ರೆಯನ್ನು ಜಯಿಸಬೇಕು.

ಸ್ವಪ್ನೇ ಹಿ ರಜಸಾ ದೇಹೀ ತಮಸಾ ಚಾಭಿಭೂಯತೇ ।
ದೇಹಾಂತರಮಿವಾಪನ್ನಶ್ಚರತ್ಯಪಗತಸ್ಮೃತಿಃ ॥ ೨ ॥

ನಿದ್ರೆಯಲ್ಲಿ ಮನುಷ್ಯನಿಗೆ ರಜೋಗುಣ, ತಮೋಗುಣಗಳು ಆಕ್ರಮಿಸಿ ಕುತ್ತು ತರುತ್ತವೆ. ಅವನು ನಿದ್ರಾಸಮಯದಲ್ಲಿ ಬೇರೆ ದೇಹವನ್ನು ಹೊಂದಿದಂತೆ, ಹಿಂದಿನ ಸ್ಮರಣೆಯೇ ಇಲ್ಲದಂತೆ ಬಿದ್ದಿರುತ್ತಾನೆ.

ಜ್ಞಾನಾಭ್ಯಾಸಾಜ್ಜಾಗರತೋ ಜಿಜ್ಞಾಸಾರ್ಥಮನಂತರಮ್ ।
ವಿಜ್ಞಾನಾಭಿನಿವೇಶಾತ್ತು ಜಾಗರ್ತ್ಯನಿಶಂ ಸದಾ ॥ ೩ ॥

ಯೋಗಿಯಾದವನು ಬ್ರಹ್ಮಜ್ಞಾನಾರ್ಜನೆಗಾಗಿ ಪ್ರಯತ್ನಿಸುತ್ತಾ ಆ ಜ್ಞಾನಾರ್ಜನೆಯ ಅಭ್ಯಾಸಕ್ಕಾಗಿ ರಾತ್ರಿ-ಹಗಲು ಯಾವಾಗಲೂ ಜಾಗರೂಕನಾಗಿರಬೇಕು.

ಅತ್ರಾಹ ಕೋऽನ್ವಯಂ ಭಾವಃ ಸ್ವಪ್ನೇ ವಿಷಯವಾನಿವ ।
ಪ್ರಲೀನೈರಿಂದ್ರಿಯೈರ್ದೇಹೀ ವರ್ತತೇ ದೇಹವಾನಿವ ॥ ೪ ॥

ವಿಷಯಗಳಲ್ಲಿ ಸೇರದಂತಿರುವ ಆ ಸ್ವಪ್ನಾವಸ್ಥೆಯು ದೇಹವುಳ್ಳ ಆತ್ಮನಿಗೆ ಯಾವುದಾಗಿರಬಹುದು? ಸ್ವಪ್ನದಲ್ಲಿ ಯಾವ ಸ್ವಭಾವವನ್ನು ಹೊಂದಿರುತ್ತಾನೆ? ಇಂದ್ರಿಯಗಳೆಲ್ಲ ಪೂರ್ಣವಾಗಿ ಲೀನವಾಗಿದ್ದರೂ ಜ್ಞಾನ-ಕರ್ಮೇಂದ್ರಿಯಗಳಿಂದ ಕೂಡಿರುವ ಶರೀರವುಳ್ಳವನಂತೆ ಕಾಣಿಸುತ್ತಾನಲ್ಲವೇ? ಎಂದು ಕೆಲವರು ಹೇಳಬಹುದು.

ಅತ್ರೋಚ್ಯತೇ ಯಥಾ ಹ್ಯೇತದ್ ವೇದ ಯೋಗೇಶ್ವರೋ ಹರಿಃ ।
ತಥೈತದುಪಪನ್ನಾರ್ಥಂ ವರ್ಣಯಂತಿ ಮಹರ್ಷಯಃ ॥ ೫ ॥

ಈ ವಿಷಯದಲ್ಲಿ ಯೋಗಿಗಳು ಹೀಗೆ ಹೇಳುತ್ತಾರೆ- ಸ್ವಪ್ನಾವಸ್ಥೆಯಲ್ಲಿ ಭಗವಂತನೇ ರಥಗಳನ್ನೂ, ರಥಯೋಗಗಳನ್ನೂ, ಮಾರ್ಗಗಳನ್ನೂ ಸೃಷ್ಟಿಸುತ್ತಾನೆ. 'ಸಂದೇಸೃಷ್ಟಿರಾಹ ಹಿ' ಎಂದು ಬ್ರಹ್ಮಸೂತ್ರವು ಹೇಳುತ್ತಿದೆ. ಆದ್ದರಿಂದ ಭಗವಂತನ ಸೃಷ್ಟಿಯಿಂದ ಸ್ವಪ್ನಸ್ಥಾನವು ಉಪಪನ್ನವಾಗಿದೆ ಎಂದು ಶಾಸ್ತ್ರಜ್ಞರು ಭಗವಂತನ ಯೋಗೇಶ್ವರ ಶಕ್ತಿಯನ್ನು ವರ್ಣಿಸುತ್ತಾರೆ.

ಇಂದ್ರಿಯಾಣಾಂ ಶ್ರಮಾತ್ ಸ್ವಪ್ನಮಾಹುಃ ಸರ್ವಗತಂ ಬುಧಾಃ ।
ಅನ್ಯಥಾ ಹೀಂದ್ರಿಯಾಣ್ಯಾಹುಸ್ತಾವದ್ ಗಚ್ಛಂತಿ ತಾನಿ ವೈ ॥ ೬ ॥

ಇಂದ್ರಿಯಗಳಿಗೆ ಅಧಿಕ ಶ್ರಮವುಂಟಾದರೆ ಸ್ವಪ್ನವು ಉಂಟಾಗುತ್ತದೆ ಎಂದು ಶಾಸ್ತ್ರಜ್ಞರು ಹೇಳುತ್ತಾರೆ. ಆಗ ಮನಸ್ಸೆಂಬುದು ಎಲ್ಲ ವಿಷಯಗಳನ್ನು ಸೇರುತ್ತದೆ ಎಂದು ಅವರ ಅಭಿಪ್ರಾಯ. ಸ್ವಪ್ನವಿಲ್ಲದೇ ಇದ್ದಾಗ ಇಂದ್ರಿಯಗಳು ಏನನ್ನು ಬಯಸುತ್ತವೋ, ತಾವು ಅಪೇಕ್ಷಿಸಿದ್ದ ಪದಾರ್ಥಗಳ ಬಳಿ ಸಾಗುತ್ತವೆ.

ಅತ್ರಾಹುಸ್ತ್ರಿತಯಂ ನಿತ್ಯಮತಥ್ಯಮಿತಿ ಚೇಚ್ಚ ನ ।
ಪ್ರಥಮೇ ವರ್ತಮಾನೋಽಸೌ ತ್ರಿತಯಂ ವೇತ್ತಿ ಸರ್ವದಾ ॥ ೭ ॥

ಕೆಲವರು ಪದಾರ್ಥವು, ಪದಾರ್ಥಜ್ಞಾನವು, ಪದಾರ್ಥಜ್ಞಾನ ಹೊಂದಿದ ಮೇಲೆ ಆ ವಿಷಯದಲ್ಲಿ ನಡೆಸುವ ಪ್ರಯತ್ನವು ಅಥವಾ ಸುಖ-ದುಃಖಗಳ ಭೋಗ ಇವುಗಳನ್ನು ಸತ್ಯ ಎಂದು ಹೇಳುತ್ತಾರೆ. ಕೆಲವರು ಮಿಥ್ಯಾ ಎಂದು ಹೇಳುತ್ತಾರೆ. ಸತ್ಯ ಎನ್ನುವ ಪಕ್ಷದಲ್ಲಿ ಪರಮಾತ್ಮನು ಈ ಮೂರನ್ನೂ ನಿಯಮಿಸುವುದು ಸತ್ಯ ಎಂದು ತಿಳಿಯುತ್ತಾರೆ.

ನೇತರಾವುಪಸಂಗಮ್ಯ ವಿಜಾನಾತಿ ಕಥಂಚನ ।
ಸ್ವಪ್ನಾವಸ್ಥಾಗತೋ ಹ್ಯೇಷ ಸ್ವಪ್ನ ಇತ್ಯೇವ ವೇತ್ತಿ ಚ ॥ ೮ ॥

ಇನ್ನು ಕೆಲವರು ಜಾಗರಾವಸ್ಥೆಯಲ್ಲಿದ್ದಾಗ ಜೀವನು ಮೂರು ಅವಸ್ಥೆಗಳನ್ನು ತಿಳಿಯಬಲ್ಲನು. ಸ್ವಪ್ನ-ಸುಷುಪ್ತಿ ಅವಸ್ಥೆಗಳಲ್ಲಿ ಅವನಿಗೆ ತಿಳಿವಳಿಕೆ ಇರುವುದಿಲ್ಲ. ಸ್ವಪ್ನಾವಸ್ಥೆಯಲ್ಲಿದ್ದಾಗ ಸ್ವಪ್ನವನ್ನು ಮಾತ್ರ ತಿಳಿಯಬಲ್ಲನು ಎಂದು ಕೆಲವರು ಹೇಳುತ್ತಾರೆ.

ತದಪ್ಯಸದೃಶಂ ಯುಕ್ತ್ಯಾ ತ್ರಿತಯಂ ಮೋಹಲಕ್ಷಣಮ್ ।
ಯದಾತ್ಮತ್ರಿತಯಾನ್ಮುಕ್ತಸ್ತದಾ ಜಾನಾತ್ಯಸತ್ಕೃತಃ ॥ ೯ ॥

ಅದೂ ಯುಕ್ತಿಯುಕ್ತವಾಗುವುದಿಲ್ಲ. ಈ ಮೂರು ಅವಸ್ಥೆಗಳು ಮೋಹವೆಂದೇ ಕರೆಸಿಕೊಳ್ಳಲ್ಪಡುತ್ತವೆ. ಮೂರನ್ನು ಇವನು ಸರಿಯಾಗಿ ತಿಳಿದಿರುವುದಿಲ್ಲ. ಯಾವಾಗ ಈ ಮೂರು ಅವಸ್ಥೆಗಳು ತನಗೆ ಸಹಜವಲ್ಲ, ತಾತ್ಕಾಲಿಕವೆಂದು ತಿಳಿಯುತ್ತಾನೋ ಆಗ ಮೂರು ಅವಸ್ಥೆಗಳಿಂದ ಮುಕ್ತನಾಗುತ್ತಾನೆ.

ಮನಸಸ್ತು ಪ್ರಲೀನತ್ವಾತ್ ತತ್ತದಾಹುರ್ನಿದರ್ಶನಮ್ ।
ಕಾರ್ಯವ್ಯಾಸಕ್ತಮನಸಃ ಸಂಕಲ್ಪೋ ಜಾಗ್ರತೋ ಹ್ಯಪಿ ।
ಯದ್ವನ್ಮನೋರಥೈಶ್ವರ್ಯಂ ಸ್ವಪ್ನೇ ತದ್ವನ್ಮನೋಗತಮ್ ॥ ೧೦ ॥

ಸ್ವಪ್ನದಲ್ಲಿ ಇಂದ್ರಿಯಗಳು ಲೀನವಾಗಿದ್ದರೂ ಮನಸ್ಸು ವ್ಯಾಪಾರವುಳ್ಳದ್ದಾಗಿಯೇ ಇರುತ್ತದೆಂದೂ, ಇದೇ ಸ್ವಪ್ನಕ್ಕೆ ಕಾರಣವೆಂದೂ ಹೇಳುತ್ತಾರೆ. ಆದರೆ ಸುಷುಪ್ತಿಯ ಅವಸ್ಥೆಯಲ್ಲಿ ಮನಸ್ಸು ಲೀನವಾಗಿರುತ್ತದೆ. ಆಗ ಜೀವನು ಸಾಕ್ಷಿಯಿಂದಲೇ ಸ್ವರೂಪ ಸುಖವನ್ನು ಅನುಭವಿಸುತ್ತಾನೆ. ಸುಷುಪ್ತಿಯಲ್ಲಿ ಅನುಭವಿಸುವ ಸುಖವು ಮುಕ್ತಿ ಸುಖಕ್ಕೆ ದೃಷ್ಟಾಂತವಾಗಿದೆ. ಎಚ್ಚರದಲ್ಲಿದ್ದಾಗ ಬೇರೆ ಬೇರೆ ಕಾರ್ಯಗಳಲ್ಲಿ ಮನಸ್ಸಿಟ್ಟಿರುವಾಗ ಅವನಿಗೆ ತೋರುವ ಸಂಕಲ್ಪಗಳೆಲ್ಲ ಅವನ ಮನಸ್ಸಿನಲ್ಲೇ ಮೂಡಿದವುಗಳು ಹೇಗೋ ಹಾಗೆ ಸ್ವಪ್ನದಲ್ಲಿ ತೋರುವ ಪದಾರ್ಥಗಳು ಮನಸ್ಸಿಗೆ ಸಂಬಂಧಪಟ್ಟವುಗಳೇ.

ಸಂಸಾರಾಣಾಮಸಂಖ್ಯಾನಾಂ ಕಾಮಾತ್ಮಾ ತದವಾಪ್ನುಯಾತ್ ।
ಮನಸ್ಯಂತರ್ಹಿತಂ ಸರ್ವಂ ವೇದ ಸೋತ್ತಮಪೂರುಷಃ ॥ ೧೧ ॥

ಜೀವನು ಲೆಕ್ಕ ಸಿಗದಿರುವಷ್ಟು ಜನ್ಮವನ್ನು ತಾಳಿರುವುದರಿಂದ ಯಾವ ಜನ್ಮದಲ್ಲಿ ಕಾಮಿಸಿದ ಸಂಕಲ್ಪಗಳಿವೆಯೋ ಅವೆಲ್ಲವನ್ನೂ ಮನಸ್ಸಿನಲ್ಲಿ ಹೊಂದಿದ್ದು ಸ್ವಪ್ನಾವಸ್ಥೆಯಲ್ಲಿ ನೋಡುತ್ತಾನೆ. ಮನಸ್ಸಿನಲ್ಲಿ ಅಡಕವಾದ ಅನಂತ ಜನ್ಮಗಳ ಸಂಸ್ಕಾರಗಳನ್ನು ಪುರುಷೋತ್ತಮನಾದ ಭಗವಂತನು ಸಮಗ್ರವಾಗಿ ತಿಳಿದಿರುತ್ತಾನೆ.

ಗುಣಾನಾಮಪಿ ಯದ್ಯೇತತ್ ಕರ್ಮ ಜಾನಾತ್ಯುಪಸ್ಥಿತಿಮ್ ।
ತತ್ತಚ್ಛಂಸಂತಿ ಭೂತಾನಿ ಮನೋ ಯದ್ಭಾವಿತಂ ಯಥಾ ॥ ೧೨ ॥

ಸತ್ತ್ವ-ರಜಸ್-ತಮೋಗುಣಗಳ ದೆಸೆಯಿಂದ ಉತ್ತಮ-ಮಧ್ಯಮ-ಅಧಮ ರೂಪವಾದ ಕರ್ಮಗಳಲ್ಲಿ ಮನಸ್ಸು ಪ್ರವೃತ್ತಿಯನ್ನು ಹೊಂದುತ್ತದೆ. ಮನಸ್ಸು ಹೇಗೆ ಸಂಕಲ್ಪಗಳನ್ನು ಮಾಡುತ್ತದೋ ಆ ರೀತಿಯಾಗಿ ಆ ಜೀವರು ಆಯಾ ಕರ್ಮಗಳನ್ನು ತಿಳಿಯುತ್ತಾರೆ.

ತತಸ್ತಮುಪವರ್ತಂತೇ ಗುಣಾ ರಾಜಸತಾಮಸಾಃ ।
ಸಾತ್ತ್ವಿಕೋ ವಾ ಯಥಾಯೋಗಮಾನಂತರ್ಯಫಲೋದಯಃ ॥ ೧೩ ॥

ಮನಸ್ಸು ಯಾವ ರೀತಿಯಾಗಿ ಸಾಗುತ್ತದೋ ಅದರಂತೆ ರಾಜಸ-ತಾಮಸ-ಸಾತ್ವಿಕ ಗುಣಗಳಲ್ಲಿ ಪ್ರವೃತ್ತಿಯು ಉಂಟಾಗುತ್ತದೆ. ಅವರವರ ಕರ್ಮಾನುಸಾರವಾಗಿ ಮನಸ್ಸು ಪ್ರವೃತ್ತಿಯನ್ನು ಹೊಂದುತ್ತದೆ. ಜನ್ಮಾಂತರದ ಫಲಗಳ ಉದಯಕ್ಕೆ ಈ ಮನಸ್ಸಿನ ಗತಿಯೇ ಕಾರಣವಾಗಿದೆ.

ತತಃ ಪಶ್ಯತ್ಯಸಂಬಂಧಾನ್ ವಾತಪಿತ್ತಕಫೋತ್ತರಾನ್ ।
ರಜಸ್ತಮೋಭವೈರ್ಭಾವೈಸ್ತದಪ್ಯಾಹುರ್ದುರನ್ವಯಮ್ ॥ ೧೪ ॥

ಸ್ವಪ್ನಾವಸ್ಥೆಯಲ್ಲಿ ಜೀವನು ಹಿಂದೆ ಮುಂದೆ ಸಂಬಂಧವಿಲ್ಲದಿರುವಂತಹ ಸ್ವಪ್ನ ಪದಾರ್ಥಗಳನ್ನು ನೋಡುತ್ತಾನೆ. ವಾತ-ಪಿತ್ತ-ಕಫಗಳ ನಿಮಿತ್ತವಾಗಿ ಸ್ವಪ್ನವು ಉಂಟಾಗಿದೆ ಎಂದು ತಿಳಿಯುತ್ತಾನೆ. ಅಂತಹ ಶರೀರ ಸಂಬಂಧವನ್ನು ತಪ್ಪಿಸಿಕೊಳ್ಳುವುದು ಕಷ್ಟವೆಂದು ಹೇಳುತ್ತಾರೆ.

ಪ್ರಸನ್ನೈರಿಂದ್ರಿಯೈರ್ಯದ್ಯತ್ ಸಂಕಲ್ಪಯತಿ ಮಾನಸಮ್ ।
ತತ್ತತ್ ಸ್ವಪ್ನೇऽಪ್ಯುಪರತೇ ಮನೋದೃಷ್ಟಿರ್ನಿರೀಕ್ಷತೇ ॥ ೧೫ ॥

ಮನುಷ್ಯನು ಎಚ್ಚರಗೊಂಡಾಗ ಚಟುವಟಿಕೆಯಿಂದ ಕೂಡಿದ ಇಂದ್ರಿಯಗಳಿಂದ ಮನಸ್ಸಿನಲ್ಲಿ ಯಾವ ಯಾವ ವಿಷಯಗಳನ್ನು ಸಂಕಲ್ಪಿಸುತ್ತಾನೋ ಅವುಗಳನ್ನೆಲ್ಲ ಸ್ವಪ್ನಾವಸ್ಥೆಯಲ್ಲಿಯೂ ಭಗವಂತನ ವ್ಯಾಪಾರದಿಂದ ಮನಸ್ಸು ಕಾಣಬಲ್ಲದು.

ವ್ಯಾಪಕಂ ಸರ್ವಭೂತೇಷು ವರ್ತತೇऽಪ್ರತಿಘಂ ಮನಃ ।
ಮನಸ್ಯಂತರ್ಹಿತಂ ದ್ವಾರಂ ದೇಹಮಾಸ್ಥಾಯ ಮಾನಸಮ್ ॥ ೧೬ ॥

ಮನಸ್ಸು ಯಾವಾಗಲೂ ಸಮಸ್ತ ಭೂತಗಳಲ್ಲಿಯೂ ವ್ಯಾಪಕವಾಗಿದೆ. ದೀಪದಂತೆ ವ್ಯಾಪಿಸಿರುವಂತಹ ಮನಸ್ಸು ಜೀವಾತ್ಮನ ಪ್ರಭಾವದಿಂದ ಶಕ್ತಿಯನ್ನು ಪಡೆದು ಎಲ್ಲಾ ಪ್ರಾಣಿಗಳು ಮನಸ್ಸಿನ ಸಹಾಯದಿಂದ ವ್ಯಾಪಾರಗಳನ್ನು ಮಾಡುತ್ತಿದ್ದಾರೆ. ಮನಸ್ಸಿನಲ್ಲಿಯೇ ಎಲ್ಲಾ ದೇವತೆಗಳು ನೆಲೆಸಿದ್ದು ವ್ಯಾಪಾರವನ್ನು ನಡೆಸುತ್ತಿದ್ದಾರೆ.

ಯತ್ತತ್ ಸದಸದವ್ಯಕ್ತಂ ಸ್ವಪಿತ್ಯಸ್ಮಿನ್ನಿದರ್ಶನಮ್ ।
ವ್ಯಕ್ತಭೇದಮತೀತೋಽಸೌ ಚಿನ್ಮಾತ್ರಂ ಪರಿದೃಶ್ಯತೇ ।
ಸರ್ವಭೂತಾತ್ಮಭೂತತ್ವಂ ತದಧ್ಯಾತ್ಮಗುಣಂ ವಿದುಃ ॥ ೧೭ ॥

ದೇಹಾದಿಗಳಿಗೆ ಕಾರಣವಾದ ಕರ್ಮವು ಈ ಮನಸ್ಸಿನಲ್ಲಿ ಸೇರಿಕೊಂಡಿದೆ. ಮನಸ್ಸು ಈ ಮನುಷ್ಯದೇಹವನ್ನು ಅವಲಂಬಿಸಿಕೊಂಡಿದೆ. ಈ ದೇಹ-ಮನಸ್ಸುಗಳಲ್ಲಿ ಅಜ್ಞೇಯನಾದ, ಸೂಕ್ಷ್ಮನಾದ, ಸರ್ವಜ್ಞನಾದ, ಗುಣಪರಿಪೂರ್ಣನಾದ ಪರಬ್ರಹ್ಮನು ಜೀವಾತ್ಮನನ್ನು ಆಲಿಂಗಿಸಿ ಮಲಗಿದ್ದಾನೆ. ಪ್ರಾಜ್ಞನಾದ ಪರಮಾತ್ಮನಿಂದ ಆಲಿಂಗಿತನಾದ ಜೀವಾತ್ಮನು ಈ ದೇಹದಲ್ಲಿ ಮಲಗಿರುತ್ತಾನೆ. ಜ್ಞಾನಿಗಳು ನಿದ್ರಾತೀತನಾದ ಪರಮಾತ್ಮನು ಜೀವನಿಂದ ಅತ್ಯಂತ ಭಿನ್ನನೆಂದೂ, ಕೇವಲ ಜ್ಞಾನಾನಂದಾತ್ಮಕ ಕರ-ಚರಣಾದಿಗಳುಳ್ಳವನೆಂದು ತಿಳಿಯಲ್ಪಡುತ್ತಾನೆ. ಸಮಸ್ತ ಜೀವರ ಅಂತರ್ಯಾಮಿಯಾಗಿರುವ ಪರಮಾತ್ಮನನ್ನು ಜೀವರಿಗಿಂತ ಜ್ಞಾನಾದಿ ಗುಣಗಳಲ್ಲಿ ಅಧಿಕನೆಂದು ಜ್ಞಾನಿಗಳು ತಿಳಿದಿರುತ್ತಾರೆ.

ಲಿಪ್ಸೇತ ಮನಸಾ ಯದ್ಯತ್ ಸಂಕಲ್ಪಾದ್ದೈಶ್ವರಂ ಗುಣಮ್ ।
ಆತ್ಮಪ್ರಸಾದಾತ್ತಂ ವಿದ್ಯಾತ್ ಸರ್ವಾ ಹ್ಯಾತ್ಮನಿ ದೇವತಾಃ ॥ ೧೮ ॥

ಯಾವ ಸಾಧಕನು ಮನಸ್ಸಿನಲ್ಲಿ ನಿರ್ದುಃಖಿತ್ವ, ನಿತ್ಯಸುಖಿತ್ವ ಎಂಬ ಗುಣಗಳಿಂದ ಕೂಡಿರುವ ಮೋಕ್ಷವನ್ನು ಈಶ್ವರ ಸಂಬಂಧಿ ಎಂದು ತಿಳಿದು ಅಪೇಕ್ಷಿಸುತಾನೋ ಅವನು ಪರಮಾತ್ಮನ ಅನುಗ್ರಹದಿಂದ ಅದನ್ನು ಹೊಂದುತ್ತಾನೆ. ಬ್ರಹ್ಮಾದಿ ದೇವತೆಗಳೂ ಪರಮಾತ್ಮನನ್ನು ಆಶ್ರಯಿಸಿಯೇ ಇದ್ದಾರೆ.

ಏವಂ ಹಿ ತಪಸಾ ಯುಕ್ತಮರ್ಕವತ್ತಮಸಃ ಪರಮ್ ।
ತ್ರೈಲೋಕ್ಯಪ್ರಕೃತಿರ್ದೇಹೀ ತಪಸಾ ತಂ ಮಹೇಶ್ವರಮ್ ॥ ೧೯ ॥

ಈ ರೀತಿಯಾಗಿ ತಪಸ್ಸಿನಿಂದ ಕತ್ತಲೆಯನ್ನು ಮೀರಿರುವ, ಉದಿಸುವ ಸೂರ್ಯನಿಗೆ ಸದೃಶವಾದ ಕಾಂತಿಯುಳ್ಳ ಭಗವಂತನಲ್ಲಿ ಮನಸ್ಸನ್ನು ನೆಲೆಗೊಳಿಸಬೇಕು. ಅಜ್ಞಾನವೆಂಬ ಕತ್ತಲೆಯನ್ನು ದಾಟಿದ ಬಳಿಕ ಜೀವನು ಮೂರುಲೋಕಗಳಿಗೆ ಕಾರಣನಾದ ಭಗವಂತನನ್ನು ಹೊಂದುತ್ತಾನೆ.

ತಪೋ ಹ್ಯಧಿಷ್ಠಿತಂ ದೇವೈಸ್ತಪೋಘ್ನಮಸುರೈಸ್ತಮಃ ।
ಏತದ್ ದೇವಾಸುರೈರ್ಗುಪ್ತಂ ತದಾಹುರ್ಜ್ಞಾನಲಕ್ಷಣಮ್ ॥ ೨೦ ॥

ದೇವತೆಗಳೆಲ್ಲ ತಪಸ್ಸನ್ನೇ ಹೊಂದಿದರು. ಅಸುರರು ತಪಸ್ಸಿಗೆ ವಿಘ್ನವನ್ನೇ ಆಚರಿಸಿದರು. ಹೀಗೆ ಜ್ಞಾನವು ದೇವತೆಗಳಿಂದ ರಕ್ಷಿಸಲ್ಪಟ್ಟಿದ್ದರೆ ಅಜ್ಞಾನವು ದೈತ್ಯರಿಂದ, ಅಸುರರಿಂದ ರಕ್ಷಿಸಲ್ಪಟ್ಟಿದೆ.

ಸತ್ತ್ವಂ ರಜಸ್ತಮಶ್ಚೇತಿ ದೇವಾಸುರಗುಣಾನ್ ವಿದುಃ ।
ಸತ್ತ್ವಂ ದೇವಗುಣಂ ವಿದ್ಯಾದಿತರಾವಾಸುರೌ ಗುಣೌ ॥ ೨೧ ॥

ಸತ್ತ್ವ-ರಜಸ್ಸು-ತಮಸ್ಸು ಎಂಬುದು ದೇವತೆಗಳ, ಅಸುರರ ಗುಣಗಳು ಎಂದು ಹೇಳುತ್ತಾರೆ. ಸತ್ತ್ವಗುಣ ದೇವತೆಗಳ ಗುಣವಾದರೆ, ರಜಸ್ಸು-ತಮಸ್ಸು ಗುಣಗಳು ಆಸುರಿ ಗುಣಗಳೆನಿಸಿವೆ.

ಸತ್ತ್ವಂ ಮನಸ್ತಥಾ ಬುದ್ಧಿರ್ದೇವಾ ಇತ್ಯಭಿಶಬ್ದಿತಾಃ ।
ತೈರೇವ ಹಿ ವೃತಸ್ತಸ್ಮಾಜ್ಜ್ಞಾತ್ವೈವಂ ಪರಮಂ ಪದಮ್ ॥ ೨೨ ॥

ಸತ್ತ್ವಗುಣ, ಮನಸ್ಸು, ಬುದ್ಧಿ ಇವೆಲ್ಲವೂ ದೇವ ಅನ್ನುವ ಶಬ್ದದಿಂದ ಕರೆಯಲ್ಪಟ್ಟಿವೆ. ಆ ದೇವತೆಗಳ ಅನುಗ್ರಹದಿಂದ ಕೂಡಿದ ಜೀವನು ಅವರ ಅನುಗ್ರಹದಿಂದಲೇ ಭಗವಂತನನ್ನು ತಿಳಿದು ಪರಮಪದವನ್ನು ಹೊಂದುತ್ತಾನೆ.

ನಿದ್ರಾಂ ವಿಕಲ್ಪೇತ ಸತಾಂ ಮನೋ ವಿಶತಿ ಲೋಕವತ್ ।
ಸ್ವಸ್ಥೋ ಭವತಿ ಗೂಢಾತ್ಮಾ ಕಲುಷೈಃ ಪರಿವರ್ಜಿತಃ ॥ ೨೩ ॥

ಸಜ್ಜನರ ಮನಸ್ಸಿನಲ್ಲಿ ಸಾಮಾನ್ಯ ಜನರಂತೆ ನಿದ್ರೆಯು ಪ್ರವೇಶಿಸುತ್ತದೆ. ಆ ತಮೋಗುಣದ ಕಾರ್ಯವಾದ ನಿದ್ರೆಯನ್ನು ಜಯಿಸಿದವನು ಕಷ್ಮಲಗಳನ್ನು ದಾಟುತ್ತಾನೆ. ಶಾಂತಚಿತ್ತನಾಗುತ್ತಾನೆ.

ನಿಶಾದಿಕಾ ಯೇ ಕಥಿತಾ ಲೋಕಾನಾಂ ಕಲುಷಾ ಮತಾಃ ।
ತೈರ್ಹೀನಂ ಯತ್ಪರಂ ಶುದ್ಧಂ ಬಾಹ್ಯಾಭ್ಯಂತರವರ್ತಿನಮ್ ।
ಸದಾನಂದಮಯಂ ನಿತ್ಯಂ ಭೂತ್ವಾ ತತ್ಪರಮನ್ವಿಯಾತ್ ॥ ೨೪ ॥

ಯಾವ ಪರಬ್ರಹ್ಮವೆಂಬ ವಸ್ತುವು ಮೂರು ಅವಸ್ಥೆಗಳಿಂದ ದೂರವಾಗಿದೆಯೋ, ಶುದ್ಧವಾಗಿದೆಯೋ, ಒಳಗೆ-ಹೊರಗೆ ವ್ಯಾಪಕವಾಗಿದೆಯೋ, ನಿತ್ಯವೂ ಆನಂದಮಯವಾಗಿ ಇದೆಯೋ ಅಂತಹ ಪರಬ್ರಹ್ಮ ವಸ್ತುವನ್ನು ಜೀವಾತ್ಮನು ಚಿಂತಿಸಬೇಕು.

ಏವಮಾಖ್ಯಾತಮತ್ಯರ್ಥಂ ಬ್ರಹ್ಮಚರ್ಯಮಕಲ್ಮಷಮ್ ।
ಸರ್ವಸ್ಥಂ ಯೋಗಹೀನಂ ತದ್ ವಿಷ್ಣ್ವಾಖ್ಯಂ ಪರಮಂ ಪದಮ್ ।
ಅಚಿಂತ್ಯಮದ್ಭುತಂ ಲೋಕೇ ಜ್ಞಾನೇನ ಪರಿವರ್ತತೇ ॥ ೨೫ ॥

ನಿಷ್ಕಲ್ಮಶವಾದ ಬ್ರಹ್ಮಚರ್ಯವು ಈ ವಿಧವಾದುದು. ಸಮಸ್ತ ಸಂಗಗಳಿಂದಲೂ ಮುಕ್ತವಾಗಿ ವಿಷ್ಣುವೆಂಬ ಹೆಸರುಳ್ಳದ್ದಾಗಿ, ಅಚಿಂತ್ಯವೂ, ಅದ್ಭುತವೂ ಆದ ಪರವೆಂಬ ವಸ್ತುವು ಲೇಪರಹಿತವಾಗಿ ಲೋಕದಲ್ಲಿ ಎಲ್ಲ ಕಡೆಯೂ ವ್ಯಾಪ್ತವಾಗಿ ಕೇವಲ ಜ್ಞಾನದಿಂದ ಜಗತ್ತನ್ನು ನೇಮಿಸುತ್ತಿದೆ.

ಬ್ರಹ್ಮ ತತ್ ಪರಮಂ ವೇದ್ಯಮಮೃತಂ ಜ್ಯೋತಿರಕ್ಷರಮ್ ।
ಯೇ ವಿದುರ್ಭಾವಿತಾತ್ಮಾನಸ್ತೇ ಯಾಂತಿ ಪರಮಾಂ ಗತಿಮ್ ॥ ೨೬ ॥

ಆ ಗುಣಪರಿಪೂರ್ಣವಾದ ವಸ್ತುವು ಸರ್ವೋತ್ತಮವು. ಜ್ಞಾನರೂಪವು, ಅಮೃತವೂ, ಜ್ಯೋತಿಯೂ, ಅಕ್ಷರವೂ ಎಂದು ಕರೆಯಲ್ಪಡುತ್ತದೆ. ಶುದ್ಧವಾದ ಅಂತಃಕರಣವುಳ್ಳವರು ಯಾರು ಇಂತಹ ಪರಬ್ರಹ್ಮ ವಸ್ತುವನ್ನು ತಿಳಿಯುತ್ತಾರೋ ಅವರೂ ಪರಮಗತಿಯನ್ನು ಹೊಂದುತ್ತಾರೆ.

ಹೇತುಮಚ್ಚಕ್ಯಮಾಖ್ಯಾತುಮೇತಾವಜ್ಜ್ಞಾನಚಕ್ಷುಷಾ ।
ಪ್ರತ್ಯಾಹಾರೇಣ ವಾ ಶಕ್ಯಮವ್ಯಕ್ತಂ ಬ್ರಹ್ಮ ವೇದಿತುಮ್ ॥ ೨೭ ॥

ಬ್ರಹ್ಮನ ವಿಷಯವಾಗಿ ಯುಕ್ತಿಯಿಂದ ಹೇಳಲು ಇಷ್ಟೇ ಸಾಧ್ಯ. ಜ್ಞಾನದೃಷ್ಟಿಯಿಂದಲೂ, ವಿಷಯಗಳಿಂದ ನಿವೃತ್ತವಾದ ಇಂದ್ರಿಯಗಳಿಂದಲೂ ಅವ್ಯಕ್ತನಾದ ಪರಬ್ರಹ್ಮನನ್ನು ಮನುಷ್ಯನು ತನ್ನಲ್ಲೇ ತಾನು ಅನುಭವಿಸಿ ತಿಳಿಯಬಹುದು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಷಟ್‌ಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನಲವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೇಳನೆಯ ಅಧ್ಯಾಯ

ಪರಮಾತ್ಮನ ಜ್ಞಾನವನ್ನು ಪಡೆಯುವ ಮಾರ್ಗಗಳನ್ನು ಗುರು-ಶಿಷ್ಯರ ಸಂವಾದದ ಮೂಲಕ ಭೀಷ್ಮರು ಯುಧಿಷ್ಠಿರನಿಗೆ ಬೋಧಿಸಿದುದು.

ಗುರುಃ

ನ ಸ ವೇದ ಪರಂ ಬ್ರಹ್ಮಂ ಯೋ ನ ವೇದ ಚತುಷ್ಟಯಮ್ ।
ವ್ಯಕ್ತಾವ್ಯಕ್ತೇ ಚ ಯತ್ತತ್ತ್ವಂ ಸಂಪ್ರಾಪ್ತಂ ಪರಮರ್ಷಿಣಾ ॥ ೧ ॥

ಗುರು– ಯಾವನು ನಾಲ್ಕು ವೇದಗಳನ್ನು ಅರಿತಿಲ್ಲವೋ ಅವನು ಪರಬ್ರಹ್ಮನನ್ನು ಅರಿತಿಲ್ಲ ಎಂದೇ ಅರ್ಥ. ವ್ಯಕ್ತ-ಅವ್ಯಕ್ತ ಎಂಬ ಎರಡು ತತ್ತ್ವಗಳನ್ನು ಪರಮರ್ಷಿಯಿಂದ ಹೇಳಲ್ಪಟ್ಟಿವೆ.

ವ್ಯಕ್ತಂ ಮೃತ್ಯುಮುಖಂ ವಿದ್ಯಾದವ್ಯಕ್ತಮಮೃತಂ ಪದಮ್ ।
ಪ್ರವೃಲಕ್ಷಣಂ ಧರ್ಮಮೃಷಿರ್ನಾರಾಯಣೋಽಬ್ರವೀತ್ ॥ ೨ ॥

ಈ ಎರಡು ತತ್ತ್ವಗಳಲ್ಲಿ ವ್ಯಕ್ತವು ಮೃತ್ಯುವಿನ ದ್ವಾರವೆಂದೂ, ಅವ್ಯಕ್ತವು ಶಾಶ್ವತವಾದ ಪದವೆಂದೂ ಹೇಳಲ್ಪಡುತ್ತವೆ. ಪರಮರ್ಷಿಯಾದ ನಾರಾಯಣನು ನಿವೃತ್ತಿ ಲಕ್ಷಣಧರ್ಮವನ್ನು ಉಪದೇಶಿಸಿದ್ದಾನೆ.

ಅತ್ಯೈವಾವಸ್ಥಿತಂ ಸರ್ವಂ ತ್ರೈಲೋಕ್ಯಂ ಸಚರಾಚರಮ್ ।
ನಿವೃತ್ತಿಲಕ್ಷಣಂ ಧರ್ಮಮವ್ಯಕ್ತಂ ಬ್ರಹ್ಮ ಶಾಶ್ವತಮ್ ॥ ೩ ॥

ಚರಾಚರಾತ್ಮಕವಾದ ತ್ರೈಲೋಕ್ಯವು ಆ ನಿವೃತ್ತಿಧರ್ಮವನ್ನೇ ಆಶ್ರಯಿಸಿಕೊಂಡಿದೆ. ನಿವೃತ್ತಿ ಎಂಬ ಧರ್ಮವೇ ಇಂದ್ರಿಯಗಳಿಗೆ ಅಗೋಚರನಾದ ಬ್ರಹ್ಮನ ಬಳಿ ಕರೆದೊಯ್ಯುತ್ತದೆ.

ಪ್ರವೃತ್ತಿಲಕ್ಷಣಂ ಧರ್ಮಂ ಪ್ರಜಾಪತಿರಥಾಬ್ರವೀತ್ ।
ಪ್ರವೃತ್ತಿಃ ಪುನರಾವೃತ್ತಿರ್ನಿವೃತ್ತಿಃ ಪರಮಾ ಗತಿಃ ॥ ೪ ॥

ಚತುರ್ಮುಖ ಬ್ರಹ್ಮನು ಪ್ರವೃತ್ತಿ ಧರ್ಮವನ್ನು ಉಪದೇಶಿಸಿದ್ದಾನೆ. ಪ್ರವೃತ್ತಿ ಧರ್ಮ ಎಂದರೆ ಪುನಃ ಸಂಸಾರಕ್ಕೆ ಮರಳಿ ಬರುವುದು. ನಿವೃತ್ತಿ ಧರ್ಮ ಎಂದರೆ ಪರಮಗತಿಯನ್ನು ಸೇರುವುದು.

ತಾಂ ಗತಿಂ ಪರಮಾಮೇತಿ ನಿವೃತ್ತಿಪರಮೋ ಮುನಿಃ ।
ಜ್ಞಾನತತ್ತ್ವಪರೋ ನಿತ್ಯಂ ಶುಭಾಶುಭನಿದರ್ಶಕಃ ॥ ೫ ॥

ನಿವೃತ್ತಿ ಮಾರ್ಗವನ್ನೇ ಶ್ರೇಷ್ಠವೆಂದು ತಿಳಿದ ಜ್ಞಾನಿಯು ಪರಮಪದವನ್ನು ಹೊಂದುತ್ತಾನೆ. ಜ್ಞಾನತತ್ತ್ವದಲ್ಲಿ ನಿರತನಾಗಿ ಶುಭಾಶುಭಗಳನ್ನು ಪ್ರತ್ಯೇಕವಾಗಿ ತಿಳಿಯುವ ಸಾಮರ್ಥ್ಯ ನಿವೃತ್ತಿ ಧರ್ಮನಿರತನಿಗೆ ಇರುತ್ತದೆ.

ತದೇವಮೇತೌ ವಿಜ್ಞೇಯಾವವ್ಯಕ್ತಪುರುಷಾವುಭೌ ।
ಅವ್ಯಕ್ತಪುರುಷಾಭ್ಯಾಂ ತು ಯತ್ ಸ್ಯಾದನ್ಯನ್ಮಹತ್ತರಮ್ ॥ ೬ ॥

ಈ ರೀತಿಯಾಗಿ ಜಡಪ್ರಕೃತಿಯನ್ನು, ಜೀವನನ್ನು ಚೆನ್ನಾಗಿ ತಿಳಿದಿರಬೇಕು. ಆಲ್ಲದೇ ಮೂಲಪ್ರಕೃತಿ ಮತ್ತು ಜೀವ ಇವರಿಬ್ಬರಿಗಿಂತಲೂ ವಿಲಕ್ಷಣನಾದ, ಉತ್ತಮನಾದ, ಅತಿಶಯನಾದ ಪರಬ್ರಹ್ಮನನ್ನು ಚೆನ್ನಾಗಿ ತಿಳಿಯಬೇಕು.

ತಂ ವಿಶೇಷಮವೇಕ್ಷೇತ ವಿಶೇಷೇಣ ವಿಚಕ್ಷಣಃ ।
ಅನಾದ್ಯಂತಾವುಭಾವೇತಾವಲಿಂಗೌ ಚಾಪ್ಯುಭಾವಪಿ ॥ ೭ ॥

ಈ ಪ್ರಕೃತಿ-ಪುರುಷರೆಂಬ ಎರಡು ತತ್ತ್ವಗಳು ಆದ್ಯಂತರಹಿತವಾದವುಗಳು. ಈ ಪ್ರಕೃತಿ-ಜೀವರಿಗೆ ನಿರ್ದಿಷ್ಟವಾದ ಚಿಹ್ನೆಗಳಿಲ್ಲ. ಇವೆರಡೂ ನಾಶವಿಲ್ಲದವುಗಳು.

ಉಭೌ ನಿತ್ಯೌ ಸೂಕ್ಷ್ಮತರೌ ಮಹದ್ಭ್ಯಶ್ಚ ಮಹತ್ತರೌ ।
ಸಾಮಾನ್ಯಮೇತದುಭಯೋರೇವಂ ಹ್ಯನ್ಯದ್ ವಿಶೇಷಣಮ್ ॥ ೮ ॥

ಇವೆರಡೂ ತತ್ತ್ವಗಳು ನಿತ್ಯವಾದವುಗಳು. ಮಹತ್ತಿಗಿಂತಲೂ ಮಹತ್ತರವಾದವುಗಳು. ಇವೆರಡರಲ್ಲಿಯೂ ಇರುವ ವೈಲಕ್ಷಣ್ಯವನ್ನು ತಿಳಿಸುತ್ತೇನೆ, ಕೇಳು.

ಪ್ರಕೃತ್ಯಾ ಸರ್ಗಧರ್ಮಿಣ್ಯಾ ತಥಾ ತ್ರಿವಿಧಸತ್ತ್ವಯಾ ।
ವಿಪರೀತಮತೋ ವಿದ್ಯಾದಾತ್ಮಾನಂ ತಮಲಕ್ಷಣಮ್ ॥ ೯ ॥

ಪ್ರಕೃತಿ ಎಂಬುದು ತ್ರಿಗುಣಾತ್ಮಕವಾಗಿದೆ. ಸೃಷ್ಟಿ ಮಾಡುವುದೇ ಇದರ ಧರ್ಮವಾಗಿದೆ. ಪುರುಷನಾದರೂ ಜಡತ್ವಾದಿ ಪ್ರಕೃತಿಲಕ್ಷಣ ರಹಿತನಾಗಿದ್ದಾನೆ. ಪ್ರಕೃತಿತತ್ತ್ವಕ್ಕಿಂತ ವಿಲಕ್ಷಣನೆಂದು ತಿಳಿಯಬಹುದು.

ಪ್ರಕೃತೇಶ್ಚ ವಿಕಾರಾಣಾಂ ದ್ರಷ್ಟಾರಮಗುಣಾನ್ವಿತಮ್ ।
ಕ್ಷೇತ್ರಜ್ಞಮಾಹುರ್ದೇವಂ ತು ಕರ್ತಾರಂ ಗುಣಸಂವೃತಮ್ ॥ ೧೦ ॥

ಜೀವನು ಪ್ರಕೃತಿಯಲ್ಲಿರುವ ವಿಕಾರಗಳನ್ನು ತಿಳಿಯಬಲ್ಲನು. ಸ್ವರೂಪದಲ್ಲಿ ಪ್ರಕೃತಿಯ ಮೂರುಗುಣಗಳನ್ನು ಮೀರಿದವನು. ಆದರೆ ತ್ರಿಗುಣಗಳಿಂದ ಆವೃತನಾಗಿ ಕಾರ್ಯಗಳನ್ನು ನಡೆಸುವ ಈ ಜೀವನನ್ನು ಕ್ಷೇತ್ರಜ್ಞನೆಂದು ಹೇಳುತ್ತಾರೆ.

ಅಗ್ರಾಹ್ಯಂ ಯೇನ ಜಾನಂತಿ ತಜ್ಜ್ಞಾನಂ ದಂಶಿತಶ್ಚ ತತ್ ।
ತೇನೈವ ದಂಶಿತೋ ನಿತ್ಯಂ ನ ಗುಣಃ ಪರಿಭೂಯತೇ ॥ ೧೧ ॥

ಜೀವನು ಪ್ರಕೃತಿಯ ಗುಣಗಳಿಂದ ಅಭಿಭೂತನಾಗಿರುವುದರಿಂದ ತನ್ನ ಸ್ವರೂಪವನ್ನು ತಿಳಿಯಲಾರನು. ಪ್ರಕೃತಿಗುಣಗಳಿಂದ ನಿತ್ಯವೂ ಬದ್ಧನಾಗಿರುವುದರಿಂದ ಅದನ್ನು ಮೀರಿ ನಡೆಯಲು ಸ್ವಯಂ ಸಮರ್ಥನಾಗುವುದಿಲ್ಲ.

ಅಗ್ರಾಹ್ಯೌ ಪುರುಷಾವೇತಾವಲಿಂಗತ್ವಾದಸಂಹಿತೌ ।
ಸಂಯೋಗಲಕ್ಷಣೋತ್ಪತ್ತಿಃ ಕರ್ಮಜಾ ಗೃಹ್ಯತೇ ಯಯಾ ॥ ೧೨ ॥

ಈ ಪ್ರಕೃತಿ-ಪುರುಷರು ಪ್ರತ್ಯಕ್ಷಕ್ಕೆ ಗೋಚರರಾಗುವುದಿಲ್ಲ. ಯುಕ್ತಿಗಳಿಂದ ತರ್ಕಿಸಲಾಗುವುದಿಲ್ಲ. ಅಸಂಗಿಗಳಾಗಿದ್ದಾರೆ. ಹೀಗಿದ್ದರೂ ಕರ್ಮದ ಬಂಧನದಿಂದ ಪ್ರಕೃತಿಯ ಸಂಬಂಧವು ಈ ಜೀವನಿಗೆ ಉಂಟಾಗುತ್ತದೆ.

ಕರಣೈಃ ಕರ್ಮನಿರ್ವೃತ್ತೈಃ ಕರ್ತಾ ಯದ್ಯದ್ ವಿಚೇಷ್ಟತೇ ।
ಕೀರ್ತ್ಯತೇ ಶಬ್ದಸಂಜ್ಞಾಭಿಃ ಕೋಽಹಮೇಷೋಽಪ್ಯಸಾವಿತಿ ॥ ೧೩ ॥

ಕರ್ತನೆನಿಸಿದ ಜೀವನು ಕರ್ಮಗಳನ್ನು ನಡೆಸುವುದಕ್ಕೆ ಸಾಧನವೆನಿಸಿದ ಇಂದ್ರಿಯಗಳಿಂದ ಯಾವ ಯಾವ ಕರ್ಮಗಳನ್ನು ಹೇಗೆ ನಡೆಸುತ್ತಾನೋ ಅದಕ್ಕೆ ತಕ್ಕಂತೆ ಜನಿಸುತ್ತಾನೆ. ನಾನು ಯಾರು? ಅದ್ಯಾವುದು? ಇದೇನು? ಎಂಬ ನಾಮ ಭೇದಗಳಿಂದ ವ್ಯವಹರಿಸಲ್ಪಡುತ್ತಾನೆ.

ಅನ್ಯಚ್ಚ ಧರ್ಮಸಾಮ್ಯಂ ಯತ್ ತಪಸ್ತತ್ಕೀರ್ತ್ಯತೇ ಪುನಃ ।
ಉಷ್ಣೀಷವಾನ್ ಯಥಾ ವಸ್ತ್ರೈಸ್ತ್ರಿಭಿರ್ಭವತಿ ಸಂವೃತಃ ॥ ೧೪ ॥

ಮಮಾಪಿ ಕಾಯಮಿತಿ ಚ ತದಜ್ಞೋ ನಿತ್ಯಸಂವೃತಃ ।
ಸಂವೃತೋಽಯಂ ತಥಾ ದೇಹೀ ಸತ್ತ್ವರಾಜಸತಾಮಸೈಃ ॥ ೧೫ ॥

ನಿತ್ಯವೂ ಈ ಜೀವನು ಈ ದೇಹವನ್ನು ನನ್ನದು ಎಂದು ಅಜ್ಞಾನದಿಂದ ತಿಳಿದಿರುತ್ತಾನೆ. ಒಬ್ಬ ವ್ಯಕ್ತಿಯು ಯಾವ ರೀತಿಯಾಗಿ ರುಮಾಲನ್ನು ತನ್ನ ತಲೆಗೆ ಬಿಗಿದಿರುತ್ತಾನೋ, ಆದ್ದರಿಂದ ಅವನ ನಡುತಲೆಯು ಕಾಣಿಸುವುದಿಲ್ಲವೋ ಅದರಂತೆ ಸಾತ್ವಿಕ, ರಾಜಸ, ತಾಮಸಗಳಿಂದ ಸಂವೃತನಾದ ಜೀವನು ತನ್ನ ಸ್ವರೂಪವನ್ನು ಅರಿಯಲಾರನು.

ಭೇದವಸ್ತು ತ್ವಭೇದೇನ ಜಾನಾತಿ ಸ ಯದಾ ಪುಮಾನ್ ।
ತದಾ ಪರಂ ಪರಾತ್ಮಾಕಸೌ ಭವತ್ಯೇವ ನಿರಂಜನಃ ॥ ೧೬ ॥

ಯಾವಾಗ ಜೀವನು ಪಂಚಭೇದಗಳಿಗಿಂತ ಭಿನ್ನವಾದ ಜೀವ-ಈಶ್ವರ-ಜಡ ಎಂಬ ವಸ್ತುಗಳನ್ನು ಚೆನ್ನಾಗಿ ತಿಳಿಯುತ್ತಾನೋ ಆಗ ಉತ್ತಮ ಸ್ವಭಾವವನ್ನು ಹೊಂದಿದ ಜೀವನು ಮುಕ್ತನಾಗುತ್ತಾನೆ.

ಕ್ರಿಯಾಯೋಗೇ ಚ ಭೇದಾಖ್ಯೇ ಬಹು ಸಂಕ್ಷಿಪ್ಯತೇ ಕ್ವಚಿತ್ ।
ವಸುರುದ್ರಗಣಾದ್ಯೇಷು ಸ್ವಾನುಭೋಗೇನ ಭೋಗತಃ ॥ ೧೭ ॥

ಭೇದವೆಂಬ ವಸ್ತುವಿನಲ್ಲಿ ಜೀವರ ನಿಯಮನ ರೂಪವಾದ ಕ್ರಿಯೆಗಳಿಗೆ ಉಪಾಯವು ಭಗವಂತನಿಂದ ನಿರೂಪಿತವಾಗಿದೆ. ಭಗವಂತನಾದರೂ ವಸುಗಣ,

ರುದ್ರಗಣ ಮುಂತಾದ ಬಹುಜೀವರಲ್ಲಿ ವ್ಯಾಪ್ತನಾಗಿದ್ದಾನೆ. ನಾರಾಯಣನೆಂಬ ಪರಬ್ರಹ್ಮನು ಸೃಷ್ಟಿ ಕಾಲದಲ್ಲಿ ತನ್ನ ರೂಪವನ್ನು ಸೂಕ್ಷ್ಮವಾಗಿಸಿರುತ್ತಾನೆ. ತನಗೆ ಅನುಕೂಲವಾದ ಭೋಗದಿಂದ ಅರ್ಥಾತ್ ತನ್ನ ಇಚ್ಛೆಯಿಂದ ಸುಖಮಾತ್ರ ಭೋಗವುಳ್ಳವನಾಗಿ ಜೀವರಲ್ಲಿ ವಿಹರಿಸುತ್ತಾನೆ.

ಏವಮೇಷ ಪರಸ್ತತ್ತ್ವೋ ನಾನಾರೂಪೇಣ ಸಂಸ್ಥಿತಃ ।
ಸಂಕ್ಷಿಪ್ತೋ ದೃಶ್ಯತೇ ಪಶ್ಚಾದೇಕರೂಪೇಣ ವಿಷ್ಠಿತಃ ॥ ೧೮ ॥

ಇಂತಹ ಸ್ವತಂತ್ರತತ್ತ್ವರೂಪನಾದ ಭಗವಂತನು ಅನಂತಜೀವರ ಹೃದಯದಲ್ಲಿ ಅನಂತ ರೂಪದಿಂದ ನೆಲೆಸಿದ್ದಾನೆ. ಪ್ರಳಯಕಾಲದಲ್ಲಿ ಆ ಅನಂತರೂಪಗಳನ್ನು ಒಂದುಗೂಡಿಸಿ ವಟಪತ್ರಶಾಯಿಯಾಗಿ ಕಾಣಿಸುತ್ತಾನೆ. ಹೀಗೆ ಭಗವಂತನ ಸೃಷ್ಟಿ, ಸಂಹಾರ ಮೊದಲಾದ ವ್ಯಾಪಾರಗಳನ್ನು ತಿಳಿಸುವ ನಾಲ್ಕು ವೇದಗಳನ್ನು ಅಧ್ಯಯನ ಮಾಡಬೇಕು. ಆ ವೇದಗಳಲ್ಲಿ ಆವೃತನಾದ ಭಗವಂತನು ಅಧ್ಯಯನಶೀಲನಿಗೆ ಗೋಚರಿಸುತ್ತಾನೆ.

ವಾಯುರ್ವಿಧೋ ಯಥಾ ಭಾನುರ್ವಿಪ್ರಕಾಶಂ ಗಮಿಷ್ಯತಿ ।

ಈ ರೀತಿಯಾಗಿ ಭಗವಂತನನ್ನು ಚೆನ್ನಾಗಿ ಅರಿತವನು ಅಂತ್ಯಕಾಲದಲ್ಲಿ ಮೋಹವನ್ನು ಹೊಂದುವುದಿಲ್ಲ. ವಾಯುವಿನಿಂದ ಮೇಘಗಳು ಚದುರಿದಾಗ ಸೂರ್ಯನು ವಿಶೇಷ ಪ್ರಕಾಶವನ್ನು ಹೊಂದುವಂತೆ ಹೃದಯದಲ್ಲಿ ಕಾಮ-ಕ್ರೋಧಗಳನ್ನು ತೊರೆದು ಭಗವಂತನ ಬಗ್ಗೆ ತಿಳಿದಾಗ ಭಗವಂತನು ಗೋಚರನಾಗುತ್ತಾನೆ.

ಶ್ರಿಯಂ ದಿವ್ಯಾಮಭಿಪ್ರೇಪ್ಸುರ್ವರ್ಷ್ಮವಾನ್ ಮನಸಾ ಶುಚಿಃ ।
ಶಾರೀರೈರ್ನಿಯಮೈರುಗ್ರೈಶ್ಚರೇನ್ನಿಷ್ಕಲ್ಮಷಂ ತಪಃ ॥ ೧೯ ॥

ದಿವ್ಯಸಂಪತ್ತನ್ನು ಬಯಸುವವನು ಮನಶ್ಶುದ್ಧಿಯಿಂದಲೂ, ಶರೀರಕ್ಕೆ ಸಂಬಂಧಿಸಿದ ಕಠಿಣ ನಿಯಮಗಳಿಂದಲೂ ಫಲಾಕಾಂಕ್ಷೆಯಿಲ್ಲದೆ ನಿಷ್ಕಲ್ಮಶವಾದ ತಪಸ್ಸನ್ನು ಮಾಡಬೇಕು.

ತ್ರೈಲೋಕ್ಯಂ ತಪಸಾ ವ್ಯಾಪ್ತಮಂತರ್ಭೂತೇನ ಭಾಸ್ವತಾ ।
ಸೂರ್ಯಶ್ಚ ಚಂದ್ರಮಾಶ್ಚೈವ ಭಾಸತಸ್ತಪಸಾ ದಿವಿ ॥ ೨೦ ॥

ಈ ಯೋಗಶಕ್ತಿ ಎಂಬುದು ತ್ರೈಲೋಕ್ಯವನ್ನು ವ್ಯಾಪಿಸಿ ಅದರೊಳಗಿನ ಸಮಸ್ತವನ್ನೂ ಪ್ರಕಾಶಿಸುತ್ತದೆ. ಆ ತಪಸ್ಸು ಎಂಬ ಯೋಗದಿಂದಲೇ ಸೂರ್ಯನು, ಚಂದ್ರನು ಆಕಾಶದಲ್ಲಿ ಬೆಳಗುತ್ತಿದ್ದಾರೆ.

ತಸ್ಮಾಚ್ಚತುಷ್ಟಯಂ ವೇದ್ಯಮೇತೈರ್ಹೇತುಭಿರಾಚಿತಮ್ ।
ಯಥಾಸಂಜ್ಞೋ ಹ್ಯಯಂ ಸಮ್ಯಗಂತಕಾಲೇ ನ ಮುಹ್ಯತಿ ॥ ೨೦ ॥

ಶ್ರಿಯಂ ದಿವ್ಯಾಮಭಿಪ್ರೇಪ್ಸುರ್ಬ್ರಹ್ಮ ವಾಙ್ಮನಸಾ ಶುಚಿಃ ।
ಶಾರೀರೈರ್ನಿಯಮೈರುಗ್ರೈಶ್ಚರೇನ್ನಿಷ್ಕಲ್ಮಷಂ ತಪಃ ॥ ೨೧ ॥

ಅನ್ಯಚ್ಚ ಧರ್ಮಸಾಮ್ಯಂ ಯತ್ ತಪಸ್ತತ್ಕೀರ್ತ್ಯತೇ ಪುನಃ ।
ಪ್ರಾಪ್ತಸ್ತಪಸೋ ಜ್ಞಾನಂ ಲೋಕೇ ಸಂಶಬ್ದಿತಂ ತಪಃ ॥ ೨೩ ॥

ರಜಸ್ತಮೋಘ್ನಂ ಯತ್ಕರ್ಮ ತಪಸಸ್ತತ್ ಸ್ವಲಕ್ಷಣಮ್ ।
ತ್ರಿತಯಂ ಹ್ಯೇತದಾಖ್ಯಾತಂ ಯದ್ ಯಸ್ಮಾದ್ ಭಾಸಿತುಂ ಪುನಃ ॥೨೪॥

ಎಲ್ಲಾ ಧರ್ಮಗಳ ಫಲವು ತಪಸ್ಸಿನಲ್ಲೇ ಅಡಕವಾಗಿದೆ. ಯೋಗಕ್ಕೆ ಫಲವು ಜ್ಞಾನವೇ ಆಗಿದೆ. ಆದರೆ ರಜಸ್ಸು, ತಮಸ್ಸುಗಳನ್ನು ನೀಗಿದ ಜ್ಞಾನವೇ ಯೋಗಕ್ಕೆ ನಿಜವಾದ ಫಲವೆನಿಸುತ್ತದೆ. ಲೋಕದಲ್ಲಿ ಯೋಗವನ್ನು ಎಲ್ಲದಕ್ಕಿಂತಲೂ ಮಹತ್ತಾದದ್ದೆನ್ನುತ್ತಾರೆ. ಜೀವ-ಪರಮಾತ್ಮ-ಪ್ರಕೃತಿ ಎಂಬ ಮೂರರ ಬಗ್ಗೆ ಹೇಳಲ್ಪಟ್ಟಿದೆ. ಜ್ಞಾನಲಕ್ಷಣ ಯೋಗದಿಂದ ಇವುಗಳನ್ನು ತಿಳಿಯಬಹುದು.

ಸ್ವಭಾಸಾ ಭಾಸಯಂಶ್ಚಾಪಿ ಚಂದ್ರಮಾ ಹ್ಯತ್ರ ವರ್ತತೇ ।
ಸೂರ್ಯಯೋಗೇ ತು ಯಃ ಸಂಧಿಸ್ತಪಃ ಸರ್ವಂ ಪ್ರದೀಪ್ಯತೇ ॥ ೨೫ ॥

ಚಂದ್ರನು ತನ್ನ ಬೆಳಕಿನಿಂದಲೇ ಬೆಳಗುವವನಾಗಿದ್ದರೂ ಸೂರ್ಯನ ಮುಂದೆ ಚಂದ್ರನೇ ಸೂರ್ಯನ ಬೆಳಕಿನಿಂದ ಬೆಳಗುತ್ತಾನೆ. ಇದರಂತೆ ತಪಸ್ಸಿನಿಂದ ಎಲ್ಲವೂ ಬೆಳಗುತ್ತದೆ.

ಬ್ರಹ್ಮಚರ್ಯಮಹಿಂಸಾ ಚ ಶಾರೀರಂ ತಪ ಉಚ್ಯತೇ ।
ವಾಙ್ಮನೋನಿಯಮಃ ಸಾಮ್ಯಂ ಮಾನಸಂ ತಪ ಉಚ್ಯತೇ ॥ ೨೬ ॥

ಬ್ರಹ್ಮಚರ್ಯ-ಅಹಿಂಸಾ ಇವುಗಳು ಶಾರೀರಿಕ ತಪಸ್ಸು ಎನಿಸುತ್ತವೆ. ಮಾತು, ಮನಸ್ಸುಗಳ ನಿಗ್ರಹವು ಮಾನಸಿಕ ತಪಸ್ಸು ಎನಿಸುತ್ತದೆ.

ವಿಧಿಜ್ಞೇಭ್ಯೋ ದ್ವಿಜಾತಿಭ್ಯೋ ಗ್ರಾಹ್ಯಮನ್ನಂ ವಿಶಿಷ್ಯತೇ ।
ಆಹಾರನಿಯಮೇನಾಸ್ಯ ಪಾಪ್ಮಾ ನಶ್ಯತಿ ರಾಜಸಃ ॥ ೨೭ ॥

ವಿಧಿ-ನಿಷೇಧಗಳನ್ನು ಚೆನ್ನಾಗಿ ಅರಿತ ಬ್ರಾಹ್ಮಣರಿಂದ ಸ್ವೀಕರಿಸಲ್ಪಟ್ಟ ಅನ್ನವು ಶ್ರೇಷ್ಠವೆನಿಸುತ್ತದೆ. ಆಹಾರವನ್ನು ಯೋಗ್ಯರಿಂದಲೇ ಸ್ವೀಕರಿಸಬೇಕು. ಇದರಿಂದ ಮನುಷ್ಯನಲ್ಲಿರುವ ರಜೋಗುಣಗಳು ಪರಿಹಾರವನ್ನು ಹೊಂದುತ್ತವೆ.

ವೈಮನಸ್ಯಂ ಚ ವಿಷಯೇ ಯಾಂತ್ಯಸ್ಯ ಕರಣಾನಿ ಚ ।
ತಸ್ಮಾತ್ತನ್ಮಾತ್ರಮಾದದ್ಯಾದ್ ಯಾವದತ್ರ ಪ್ರಯೋಜನಮ್ ॥ ೨೮ ॥

ಶುದ್ಧವಾದ ಆಹಾರದಿಂದ ವಿಷಯಪದಾರ್ಥಗಳಲ್ಲಿ ಮನಸ್ಸು ಸಾಗುವುದಿಲ್ಲ. ಮನಸ್ಸು ನಿಗ್ರಹಕ್ಕೆ ಬಂದಲ್ಲಿ ಇಂದ್ರಿಯಗಳು ಸರಿಯಾದ ಮಾರ್ಗದಲ್ಲಿಯೇ ಚಲಿಸುತ್ತವೆ. ಆದ್ದರಿಂದ ದೇಹಧಾರಣೆಗೆ ಯೋಗ್ಯವಾದಷ್ಟು ಆಹಾರವನ್ನು ವಿಧಿ-ನಿಷೇಧಗಳನ್ನು ತಿಳಿದ ಬ್ರಾಹ್ಮಣರಿಂದ ಸ್ವೀಕರಿಸಬೇಕು.

ಅಂತಕಾಲೇ ವಯೋತ್ಕರ್ಷಾಚ್ಚನ್ನೈಃ ಕುರ್ಯಾದನಾತುರಃ ।
ಏವಂ ಯುಕ್ತೇನ ಮನಸಾ ಜ್ಞಾನಂ ತದುಪಪದ್ಯತೇ ॥ ೨೯ ॥

ಅವಸಾನ ಕಾಲದಲ್ಲಿ ಪ್ರಯತ್ನಪೂರ್ವಕವಾಗಿ ಮನಸ್ಸನ್ನು ಯೋಗದಲ್ಲಿ ನೆಲೆಗೊಳಿಸಬೇಕು. ಅದರಿಂದ ಕ್ರಮವಾಗಿ ಉತ್ತಮ ಜ್ಞಾನ ಉಂಟಾಗುವಂತೆ ಮಾಡಿಕೊಳ್ಳಬೇಕು.

ರಜಸಾ ಚಾಪ್ಯಯಂ ದೇಹೀ ದೇಹವಾನ್ ಶಬ್ದವಚ್ಚರೇತ್ ।
ಕಾರ್ಯೈರವ್ಯಾಹತಮತಿರ್ವೈರಾಗ್ಯಾತ್ ಪ್ರಕೃತೌ ಸ್ಥಿತಃ ।
ಆ ದೇಹಾದಪ್ರಮಾದಾಚ್ಚ ದೇಹಾಂತಾದ್ ವಿಪ್ರಮುಚ್ಯತೇ ॥ ೩೦ ॥

ಜೀವನು ರಜೋಗುಣದಿಂದ ಮುಕ್ತನಾದರೂ ಕೂಡಲೇ ಮುಕ್ತಿಗೆ ಹೋಗದೆ ಸೂಕ್ಷ್ಮ ಶರೀರವುಳ್ಳವನಾಗಿ ಶಬ್ದದಂತೆ ತಿಳಿಯದವನಾಗಿ ಸಂಚರಿಸುತ್ತಾನೆ. ಆಗ ಅವನು ಕರ್ಮದಿಂದ ಕಳವಳಗೊಳ್ಳದ ಬುದ್ಧಿಯುಳ್ಳವನಾಗಿದ್ದರೆ ರಜೋಗುಣ ಮುಕ್ತನಾದುದರಿಂದ ಪ್ರಕೃತಿಯಲ್ಲಿದ್ದರೂ ವಿರಕ್ತನಾಗಿಯೇ ಇರುತ್ತಾನೆ. ಪ್ರಕೃತಿಯ ಸಂಬಂಧವನ್ನು ಹೊಂದುವುದಿಲ್ಲ.

ಹೇತುಯುಕ್ತಃ ಸದೋತ್ಸರ್ಗೋ ಭೂತಾನಾಂ ಪ್ರಲಯಸ್ತಥಾ ।
ಪರಪ್ರತ್ಯಯಸರ್ಗೇ ತು ನಿಯತಂ ನಾತಿವರ್ತತೇ ॥ ೩೧ ॥

ದೇಹವಿರುವ ತನಕ ವಿಷಯಗಳಿಗೆ ತುತ್ತಾಗದೆ ಇರುವವನು, ಪ್ರಮಾದಕ್ಕೆ ಈಡಾಗದೇ ಇರುವವನು ದೇಹದ ಕೊನೆಯಲ್ಲಿ ಬಿಡುಗಡೆಯನ್ನು ಹೊಂದುತ್ತಾನೆ. ಸಮಸ್ತ ಜೀವರಿಗೆ ಸೃಷ್ಟಿ-ಪ್ರಳಯಗಳು ಅಜ್ಞಾನದಿಂದ ಉಂಟಾಗುತ್ತಿರುತ್ತವೆ.

ಏವಂ ಪ್ರಜ್ಞಾಂ ಧಾರಯಂತೇ ಆಸತೇ ಯೇ ವಿಪರ್ಯಯೇ ।

ಯಾವಾಗ ಜೀವಾತ್ಮನಿಗೆ ಪರಮಾತ್ಮನ ಜ್ಞಾನೋದಯವು ಉಂಟಾಗುತ್ತದೋ, ಆ ಭಗವದ್‌ಜ್ಞಾನದ ನಿಯಮದಿಂದ ಸೃಷ್ಟಿಮತ್ತು ಪ್ರಳಯಗಳನ್ನು ಮೀರಿ ನಿಲ್ಲುತ್ತಾನೆ.

ಧೃತ್ಯಾ ದೇಹಾನ್ ಧಾರಯಂತೋ ಬುದ್ಧಿಸಂಕ್ಷಿಪ್ತಮಾನಸಾಃ ।
ಸ್ಥಾನೇಭ್ಯೋ ಧ್ವಂಸಮಾನಾಶ್ಚ ಸೂಕ್ಷ್ಮತ್ವಾತ್ತಾನುಪಾಸತೇ ॥ ೩೨ ॥

ಯೋಗಧಾರಣೆಯಿಂದ ದೇಹವನ್ನು ಧರಿಸಿದವರಾಗಿ, ಬುದ್ಧಿಯಿಂದ ವಿಷಯಗಳನ್ನು ಸಂಕೋಚಗೊಳಿಸಿಕೊಂಡು, ಸೂಕ್ಷ್ಮಬುದ್ಧಿಯಿಂದ ಪ್ರಕೃತಿಯ ಸ್ಥಾನಗಳನ್ನು ಪರಿಹರಿಸಿಕೊಂಡು ಭಗವಂತನನ್ನೇ ಉಪಾಸನೆ ಮಾಡುತ್ತಾರೆ.

ಯಥಾಗಮಂ ಚ ತತ್ ಸರ್ವಂ ಬುದ್ಧ್ಯಾ ತನ್ನೈವ ಬುಧ್ಯತೇ ।
ದೇಹಾಂತಂ ಕಶ್ಚಿದನ್ವಾಸ್ತೇ ಭಾವಿತಾತ್ಮಾ ನಿರಾಶ್ರಯಃ ॥ ೩೩ ॥

ಆ ಸಾಧಕರು ಆಗಮಗಳಲ್ಲಿ ಹೇಗಿದೆಯೋ ಹಾಗೆ ಶ್ರೇಷ್ಠವಾದ ಬುದ್ಧಿಯಿಂದ ಭಗವಂತನ ಚರಿತ್ರೆಗಳನ್ನು ಚೆನ್ನಾಗಿ ತಿಳಿದು ಅವನಿಗಿಂತ ಮಿಗಿಲಾದ ಯಾವ ವಿಚಾರಗಳಲ್ಲಿಯೂ ಆಸಕ್ತಿಯನ್ನು ಹೊಂದುವುದಿಲ್ಲ. ಭಗವಂತನಲ್ಲಿಯೇ ಮನಸ್ಸಿಟ್ಟ ಅವರು ಭಗವಂತನನ್ನೇ ಆಶ್ರಯಿಸಿ ದೇಹಾವಸಾನದಲ್ಲಿ ಭಗವಂತನನ್ನೇ ಹೊಂದುತ್ತಾರೆ.

ಯುಕ್ತೋ ಧಾರಣಯಾ ಕಶ್ಚಿತ್ ಸತ್ತಾಂ ಕೇಚಿದುಪಾಸತೇ ।
ಅಭ್ಯಸ್ಯಂತಿ ಪರಂ ದೇವಂ ವಿದ್ಯಾಸಂಶಬ್ದಿತಾಕ್ಷರಮ್ ॥ ೩೪ ॥

ಭಗವಂತನನ್ನು ತಿಳಿಸಿಕೊಡುವ ಪ್ರತಿಭೆಯಿಂದ ಕೂಡಿದ ಅವರು ಎಲ್ಲೆಡೆಯೂ ಭಗವಂತನ ಇರುವಿಕೆಯನ್ನೇ ಉಪಾಸನೆ ಮಾಡುತ್ತಾರೆ. ಎಷ್ಟು ವೇದಾಕ್ಷರಗಳನ್ನು ಪಠಿಸುತ್ತೇವೋ ಆ ಎಲ್ಲಾ ಅಕ್ಷರಗಳಿಂದಲೂ ಪ್ರತಿಪಾದ್ಯನಾದವನು ಭಗವಂತನೇ ಎಂಬ ಆ ಪರತತ್ತ್ವವನ್ನೇ ಚೆನ್ನಾಗಿ ಅಭ್ಯಾಸ ಮಾಡುತ್ತಾರೆ.

ಅಂತಕಾಲೇ ಹ್ಯುಪಾಸನಾಸ್ತಪಸಾ ದಗ್ಧಕಿಲ್ಬಿಷಾಃ ।
ಸರ್ವ ಏತೇ ಮಹಾತ್ಮಾನೋ ಗಚ್ಛಂತಿ ಪರಮಾಂ ಗತಿಮ್ ॥ ೩೫ ॥

ಭಗವತತ್ತ್ವದ ಉಪಾಸನೆಯ ತಪಸ್ಸಿನಿಂದ ಕಾಮ-ಕ್ರೋಧಾದಿ ಮಲಿನಗಳನ್ನು ತೊಳೆದುಕೊಂಡು ಅಂತ್ಯಕಾಲದಲ್ಲಿಯೂ ಭಗವಂತನನ್ನೇ ಉಪಾಸನೆ ಮಾಡುತ್ತಾರೆ. ಈ ರೀತಿಯಾದ ಮಹಾತ್ಮರೆಲ್ಲರೂ ಪರಮಗತಿಯನ್ನು ಹೊಂದುತ್ತಾರೆ.

ಸೂಕ್ಷ್ಮಂ ವಿಶೇಷಣಂ ತೇಷಾಮವೇಕ್ಷೇಚ್ಛಾಸ್ತ್ರಚಕ್ಷುಷಾ ।
ದೇಹಂ ತು ಪರಮಂ ವಿದ್ಯಾದ್ ವಿಮುಕ್ತಮಪರಿಗ್ರಹಮ್ ॥ ೩೬ ॥

ಭಗವಂತನ ಗುಣಗಳ ಮಧ್ಯದಲ್ಲಿ ಅಣುತ್ವ, ಮಹತ್ವ, ಕರ್ತೃತ್ವ, ನಿರ್ಲೇಪತ್ವಾದಿ ಸೂಕ್ಷ್ಮಗುಣಗಳನ್ನು ಶಾಸ್ತ್ರಚಕ್ಷುಸ್ಸಿನಿಂದ ಈ ಸಾಧಕರು ನೋಡುತ್ತಾರೆ. ಮುಕ್ತಿಯಲ್ಲಿ ಹೊಂದುವ ದೇಹವನ್ನು ಉತ್ಕೃಷ್ಟವಾದ ದೇಹವೆಂದು ತಿಳಿದಿರುತ್ತಾರೆ.

ಅಂತರಿಕ್ಷಾದನ್ಯತರಂ ಧಾರಣಾಸಕ್ತಮಾನಸಮ್ ।
ಮರ್ತ್ಯಲೋಕಾದ್ ವಿಮುಚ್ಯಂತೇ ವಿದ್ಯಾಸಂಯುಕ್ತಮಾನಸಾಃ ॥೩೭॥

ಬಿಂಬಭೂತನಾದ ಪರಮಾತ್ಮನಿಂದ ಅತ್ಯಂತ ಭಿನ್ನವಾದ ಈ ದೇಹ, ಪ್ರಕೃತಿ, ಜಗತ್ತನ್ನು ತಮ್ಮ ಧಾರಣಾಸಕ್ತವಾದ ಮನಸ್ಸಿನಿಂದ ತಿಳಿದ ಸಾಧಕರು ಭಗವತತ್ತ್ವದಲ್ಲಿಯೇ ಆಸಕ್ತ ಮನಸ್ಸುಳ್ಳವರಾಗಿ ಈ ಮರಣಶೀಲವಾದ ಲೋಕದಿಂದ ಬಿಡುಗಡೆಯನ್ನು ಹೊಂದುತ್ತಾರೆ.

ಬ್ರಹ್ಮಭೂತಾ ವಿರಜಸಸ್ತತೋ ಯಾಂತಿ ಪರಾಂ ಗತಿಮ್ ।
ಕಷಾಯವರ್ಜಿತಂ ಜ್ಞಾನಂ ಯೇಷಾಮುತ್ಪದ್ಯತೇऽಚಲಮ್ ॥ ೩೮ ॥

ಬ್ರಹ್ಮನಲ್ಲೇ ಮನಸ್ಸಿಟ್ಟಿರುವ ಆ ಸಾಧಕರು ರಜೋಗುಣರಹಿತರಾಗಿ ಪರಮ ಗತಿಯನ್ನು ಹೊಂದುತ್ತಾರೆ. ಆದ್ದರಿಂದ ವೇದಜ್ಞರಾದ ಜನರು, ಧರ್ಮವು ಒಂದೇ ಆಶ್ರಯವುಳ್ಳದ್ದು. ಪರಮಾತ್ಮಜ್ಞಾನವನ್ನು ಆಶ್ರಯಿಸುವ ಧರ್ಮವೇ ಧರ್ಮ ಎಂದು ಹೇಳುತ್ತಾರೆ.

ತೇ ಯಾಂತಿ ಪರಮಾಂಲ್ಲೋಕಾನ್ ವಿಶುದ್ಧ್ಯಂತೋ ಯಥಾಬಲಮ್ ।
ಭಗವಂತಮಜಂ ದಿವ್ಯಂ ವಿಷ್ಣುಮವ್ಯಕ್ತಸಂಜ್ಞಿತಮ್ ।
ಭಾವೇನ ಯಾಂತಿ ಶುದ್ಧಾ ಯೇ ಜ್ಞಾನತೃಪ್ತಾ ನಿರಾಶಿಷಃ ॥ ೩೯ ॥

ಆ ಭಗವಂತನ ಜ್ಞಾನವನ್ನೇ ಉಪಾಸನೆ ಮಾಡುತ್ತಾ ಸಾಧಕರೆಲ್ಲರೂ ಪರಮ ಗತಿಯನ್ನು ಹೊಂದುತ್ತಾರೆ. ಮನಸ್ಸಿನ ಕಾಮ-ಕ್ರೋಧಾದಿಗಳೆಲ್ಲವೂ ಈ ಉಪಾಸನೆಯಿಂದ ಪರಿಹೃತವಾಗಿ ಹೃದಯವು ನಿರ್ಮಲವಾಗುತ್ತದೆ. ಭಗವಂತನನ್ನೇ ಚಿಂತಿಸಿದ ಇಂತಹ ಸಾಧಕರು ತಮ್ಮ ಯೋಗ್ಯತೆಗೆ ತಕ್ಕಂತೆ ಅವನ ಅನುಗ್ರಹದಿಂದ ಶುದ್ಧಿಯನ್ನು ಹೊಂದುತ್ತಾರೆ.

ಯಾರು ಅವ್ಯಕ್ತ ಎಂಬ ಶಬ್ದದಿಂದ ಕರೆಸಿಕೊಳ್ಳುವ ವಿಷ್ಣುವನ್ನು, ಷಡ್ಗುಣೈಶ್ವರ್ಯ ಸಂಪನ್ನನನ್ನೂ, ಹುಟ್ಟಿಲ್ಲದವನನ್ನು, ಬೆಳಗುವ ವ್ಯಕ್ತಿತ್ವ ಉಳ್ಳವನನ್ನು ಜ್ಞಾನತೃಪ್ತರಾಗಿ ಆಸೆಗಳನ್ನು ತೊರೆದು ಶುದ್ಧವಾದ ಹೃದಯದಿಂದ ಚಿಂತಿಸುತ್ತಾರೋ ಅವರು ಅವನ ಪಾದವನ್ನೇ ಸೇರುತ್ತಾರೆ.

ಜ್ಞಾತ್ವಾತ್ಮಸ್ಥಂ ಹರಿಂ ಚೈವ ನಿವರ್ತಂತೇ ನ ತೇऽವ್ಯಯಾಃ ।
ಪ್ರಾಪ್ಯ ತತ್ ಪರಮಂ ಸ್ಥಾನಂ ಮೋದಂತೇऽಕ್ಷರಮವ್ಯಯಮ್ ॥೪೦॥

ಹೃದಯದಲ್ಲಿರುವ ಪರಮಾತ್ಮನನ್ನು ಚಿಂತಿಸಿದ ಸಾಧಕರು ಅವ್ಯಯ ಎನಿಸಿದ ಮುಕ್ತಿಯಿಂದ ಪುನಃ ತಿರುಗಿ ಬರುವುದಿಲ್ಲ. ಅಕ್ಷರನಾದ ಅವ್ಯಯನಾದ ಪರಮಾತ್ಮನನ್ನು ಹೊಂದಿದ ಆ ಸಾಧಕರು ಮೋಕ್ಷವನ್ನು ಪಡೆದು ಸುಖವನ್ನು ಹೊಂದುತ್ತಾರೆ.

ಏತಾವದೇತದ್ ವಿಜ್ಞಾನಮೇತದಸ್ತಿ ಚ ನಾಸ್ತಿ ಚ ।
ತೃಷ್ಣಾಬದ್ಧಂ ಜಗತ್ ಸರ್ವಂ ಚಕ್ರವತ್ ಪರಿವರ್ತತೇ ॥ ೪೧ ॥

ಸಮಸ್ತ ಜ್ಞಾನದ ಸಾರವು ಇಷ್ಟೇ ಆಗಿದೆ. ಈ ಪರಮಾತ್ಮ ತತ್ತ್ವವನ್ನು ತಿಳಿದವರಿಗೆ ಈ ಜ್ಞಾನಸಾರವು ಅನುಭವಕ್ಕೆ ಬರುತ್ತದೆ. ಇಲ್ಲದಿದ್ದರೆ ಇಲ್ಲ. ಸಾಮಾನ್ಯವಾಗಿ ಜಗತ್ತೆಲ್ಲವೂ ಆಸೆಗಳಿಂದ ಬದ್ಧವಾಗಿ ಚಕ್ರದಂತೆ ಸುತ್ತುತ್ತಿರುತ್ತದೆ.

ಬಿಸತಂತುರ್ಯಥೈವಾಯಮಂತಃಸ್ಥಃ ಸರ್ವತೋ ಬಿಸೇ ।
ತೃಷ್ಣಾತಂತುರನಾದ್ಯಂತಸ್ತಥಾ ದೇಹಗತಃ ಸದಾ ॥ ೪೨ ॥

ತಾವರೆದಂಟಿನಲ್ಲಿರುವ ನೂಲೆಳೆಗಳು ಆ ದಂಟಿನಲ್ಲಿರುವ ಒಂದು ಭಾಗವನ್ನು ವ್ಯಾಪಿಸಿರುವಂತೆ ತೃಷ್ಣಾ(ಆಶೆ)ತಂತುಗಳು ಕೊನೆ-ಮೊದಲು ಇಲ್ಲದಂತೆ ದೇಹದ ಸಮಗ್ರ ಭಾಗವನ್ನೂ ಆವರಿಸಿಕೊಂಡಿರುತ್ತವೆ.

ಸೂಚ್ಯಾ ಸೂತ್ರಂ ಯಥಾ ವಸ್ತ್ರೇ ಸಂಸಾರಯತಿ ವಾಯಕಃ ।
ತದ್ವತ್ ಸಂಸಾರಸೂತ್ರಂ ಹಿ ತೃಷ್ಣಾಸೂಚ್ಯಾ ನಿಬಧ್ಯತೇ ॥ ೪೩ ॥

ಬಟ್ಟೆಗಳನ್ನು ಹೊಲಿಯುವವನು ಸೂಜಿಯ ಮೂಲಕವಾಗಿ ನೂಲನ್ನು ಹೊಲಿಸುವಂತೆ ಆಸೆಯೆಂಬ ಸೂಜಿಯಿಂದ ಸಂಸಾರವೆಂಬ ನೂಲು ಹೊಲಿಯಲ್ಪಡುತ್ತದೆ. ಸಂಸಾರದಲ್ಲಿ ಅತ್ತಿಂದಿತ್ತ ಜನನ-ಮರಣಗಳಲ್ಲಿ ಹೊರಳಾಡಿಸುತ್ತಾ ಆಸೆಯು ಜೀವನ ಸ್ವರೂಪವನ್ನೇ ಮರೆಮಾಚಿಬಿಡುತ್ತದೆ.

ಇತಸ್ತತಃ ಸಮಾಹೃತ್ಯ ರೂಪಂ ನಿರ್ವರ್ತಯಿಷ್ಯತಿ ।
ವಿಕಾರಂ ಪ್ರಕೃತಿಂ ಚೈವ ಪುರುಷಂ ಚ ಸನಾತನಮ್ ॥ ೪೪ ॥

ಪ್ರಕೃತಿಯನ್ನು, ಅದರ ವಿಕಾರವನ್ನು, ಭಗವಂತನನ್ನು, ಜೀವನನ್ನು ಎಲ್ಲವನ್ನೂ ಮುಚ್ಚುವ ಸಾಮರ್ಥ್ಯ ಆಸೆಗೆ ಇದೆ.

ಯೋ ಯಥಾವದ್ ವಿಜಾನಾತಿ ಸ ವಿತೃಷ್ಣೋ ವಿಮುಚ್ಯತೇ ।
ಯಾತಿ ನಿತ್ಯಂ ಸ ಸದ್ಭಾವಮಾತ್ಮನೋ ವೈ ಮಹದ್ಭವಮ್ ॥ ೪೫ ॥ ।

ಯಾವನು ಕಾರ್ಯ-ಕಾರಣರೂಪವಾದ ಪ್ರಪಂಚವನ್ನು, ಸನಾತನನಾದ ಭಗವಂತನನ್ನು ಚೆನ್ನಾಗಿ ತಿಳಿಯಬಲ್ಲನೋ ಅವನು ತೃಷ್ಣೆಯನ್ನು ಜಯಿಸಬಲ್ಲನು. ಬಳಿಕ ತನ್ನೊಳಗೆ ಭಗವಂತನನ್ನು ಧ್ಯಾನಿಸಿ ಶಾಶ್ವತವಾದ ಮಹತ್ತಾದ ಸ್ಥಾನವನ್ನು ಹೊಂದುತ್ತಾನೆ.

ಭೀಷ್ಮಃ

ಪ್ರಕಾಶಂ ಭಗವಾನೇತದೃಷಿರ್ನಾರಾಯಣೋಽಮೃತಮ್ ।
ಭೂತಾನಾಮನುಕಂಪಾರ್ಥಂ ಜಗಾದ ಜಗತೋ ಹಿತಮ್ ॥ ೪೬ ॥

ಭೀಷ್ಮ– ಈ ರೀತಿಯಾದ ಅಮೃತಮಯವಾದ ತತ್ತ್ವಜ್ಞಾನದ ಉಪದೇಶವನ್ನು ಭಗವಾನ್ ನಾರಾಯಣ ಋಷಿಯು ಜಗತ್ತಿಗೆ ಹಿತವಾಗಲೆಂದು ಪ್ರಾಣಿಗಳ ಮೇಲಿನ ದಯೆಯಿಂದ ಹೇಳಿರುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಸಪ್ತಚತ್ವಾರಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನಲವತ್ತೇಳನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೆಂಟನೆಯ ಅಧ್ಯಾಯ

ಪಂಚಶಿಖಿನಿಗೂ ಜನಕನಿಗೂ ನಡೆದ ಸಂವಾದವನ್ನು, ನಾಸ್ತಿಕಮತ ಖಂಡನೆಯನ್ನು ಯುಧಿಷ್ಠಿರನಿಗೆ ಭೀಷ್ಮರು ತಿಳಿಸಿದುದು.

ಯುಧಿಷ್ಠಿರಃ

ಕೇನ ವೃತ್ತೇನ ವೃತ್ತಜ್ಞೋ ಜನಕೋ ಮಿಥಿಲಾಧಿಪಃ ।
ಜಗಾಮ ಮೋಕ್ಷಂ ಧರ್ಮಜ್ಞೋ ಭೋಗಾನುತ್ಸೃಜ್ಯ ಮಾನುಷಾನ್ ॥೧॥

ಯುಧಿಷ್ಠಿರ– ಪಿತಾಮಹನೇ, ಸಚ್ಚಾರಿತ್ರ್ಯವನ್ನರಿತ ಮಿಥಿಲಾಧಿಪತಿಯಾದ ಜನಕ ಮಹಾರಾಜನು ಯಾವ ಸಚ್ಚಾರಿತ್ರ್ಯದಿಂದ ಧರ್ಮಜ್ಞನಾಗಿ ಮನುಷ್ಯಲೋಕಕ್ಕೆ ಸಂಬಂಧಿಸಿದ ಭೋಗಗಳನ್ನೆಲ್ಲ ತೊರೆದು ಮೋಕ್ಷಕ್ಕೆ ಹೋದನು?

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಯೇನ ವೃತ್ತೇನ ವೃತ್ತಜ್ಞಃ ಸ ಜಗಾಮ ಮಹತ್ ಸುಖಮ್ ॥ ೨ ॥

ಭೀಷ್ಮ– ಯುಧಿಷ್ಠಿರನೇ, ಇದಕ್ಕೂ ಪುರಾತನವಾದ ಒಂದು ಇತಿಹಾಸವನ್ನು ಉದಾಹರಿಸುತ್ತಾರೆ. ಯಾವ ಸಚ್ಚಾರಿತ್ರ್ಯದಿಂದ ಚಾರಿತ್ರ್ಯವನ್ನು ಅರಿತ ರಾಜನು ಮಹತ್ತರವಾದ ಸುಖಸ್ಥಾನವನ್ನು ಹೊಂದಿದನು ಎಂಬುದರ ಬಗ್ಗೆ ಇತಿಹಾಸವಿದೆ.

ಜನಕೋ ಜನದೇವಸ್ತು ಮಿಥಿಲಾಯಾಂ ಜನಾಧಿಪಃ ।
ಔರ್ಧ್ವದೇಹಿಕಧರ್ಮಾಣಾಮಾಸೀದ್ಯುಕ್ತೋ ವಿಚಿಂತನೇ ॥ ೩ ॥

ಮಿಥಿಲಾಪಟ್ಟಣಕ್ಕೆ ಜನದೇವ ಎಂಬ ಜನಕನು ರಾಜನಾಗಿದ್ದನು. ಅವನು ನಿರಂತರ ದೇಹಾವಸಾನದಲ್ಲಿ ನಡೆಸಬೇಕಾದ ಚಿಂತನೆಗಳೇನೆಂಬುದನ್ನೇ ಮನಸ್ಸಿನಲ್ಲಿ ಯೋಚಿಸುತ್ತಿದ್ದನು. ಅದರಲ್ಲೇ ಅವನಿಗೆ ಆಸಕ್ತಿ ಇದ್ದಿತು.

ತಸ್ಯ ಸ್ಮ ಶತಮಾಚಾರ್ಯಾ ವಸಂತಿ ಸತತಂ ಗೃಹೇ ।
ದರ್ಶಯಂತಃ ಪೃಥಗ್ಧರ್ಮಾನ್ನಾನಾಪಾಷಂಡವಾದಿನಃ ॥ ೪ ॥

ಆದರೆ ಅವನ ಮನೆಯಲ್ಲಿ ಬೇರೆ ಬೇರೆ ಧರ್ಮಗಳನ್ನು ಯಾವಾಗಲೂ ಉಪನ್ಯಾಸ ಮಾಡುತ್ತಿದ್ದ ಪಾಷಂಡ ಮತಗಳನ್ನು ಅವಲಂಬಿಸಿದ ನಾನಾ ವಿಧರಾದ ನೂರು ಮಂದಿ ಆಚಾರಪುರುಷರು ವಾಸ ಮಾಡುತ್ತಿದ್ದರು.

ಸ ತೇಷಾಂ ಪ್ರೇತ್ಯಭಾವೇ ಚ ಪ್ರೇತ್ಯಜಾತೌ ವಿನಿಶ್ಚಯೇ ।
ಆಗಮಸ್ಥಃ ಸ ಭೂಯಿಷ್ಠಮಾತ್ಮತತ್ತ್ವೇನ ತುಷ್ಯತಿ ॥ ೫ ॥

ಜನಕರಾಜನಾದರೂ ವೈದಿಕ ಧರ್ಮದಲ್ಲಿ ನಿಷ್ಠೆಯುಳ್ಳವನಾಗಿದ್ದನು. ಆದ್ದರಿಂದ ಆ ಮತಾಚಾರ್ಯರು ಆತ್ಮಸ್ವರೂಪ ವಿಷಯವಾಗಿ, ಪುನರ್ಜನ್ಮ ವಿಷಯವಾಗಿ ದೇಹದೊಡನೆ ಆತ್ಮವೂ ನಾಶವಾಗುತ್ತದೆ ಎಂದು ಹೇಳುತ್ತಿದ್ದ ಸಿದ್ಧಾಂತಗಳೆಲ್ಲವೂ ರಾಜನ ಮನಸ್ಸಿಗೆ ಹಿಡಿಸದೆ ಹೋಯಿತು. ರಾಜನಾದರೂ ಪರಮಾತ್ಮ ತತ್ತ್ವದಲ್ಲಿಯೇ ಬಹಳವಾದ ನಂಬಿಕೆಯುಳ್ಳವನಾಗಿದ್ದನು.

ತತ್ರ ಪಂಚಶಿಖೋ ನಾಮ ಕಾಪಿಲೇಯೋ ಮಹಾಮುನಿಃ ।
ಪರಿಧಾವನ್ಮಹೀಂ ಕೃತ್ಸ್ನಾಂ ಜಗಾಮ ಮಿಥಿಲಾಮಪಿ ॥ ೬ ॥

ಹೀಗಿರುವಾಗ ಒಮ್ಮೆ ಕಪಿಲಕುಮಾರನಾದ ಪಂಚಶಿಖನೆಂಬ ಮಹರ್ಷಿಯು ಭೂಮಿಯಲ್ಲಿ ಸಂಚರಿಸುತ್ತಾ ಮಿಥಿಲೆಗೆ ಬಂದು ಸೇರಿದನು.

ಸರ್ವಸಂನ್ಯಾಸಧರ್ಮಾಣಾಂ ತತ್ತ್ವಜ್ಞಾನವಿನಿಶ್ಚಯೇ ।
ಸುಪರ್ಯವಸಿತಾರ್ಥಶ್ಚ ನಿರ್ದ್ವಂದ್ವೋ ನಷ್ಟಸಂಶಯಃ ॥ ೭ ॥

ಆ ಪಂಚಶಿಖನು ಸಮಸ್ತ ಸಂನ್ಯಾಸ ಧರ್ಮಗಳ ತತ್ತ್ವಗಳನ್ನು ತಿಳಿದಿದ್ದನು. ಬೇರೆ ಬೇರೆ ಸಿದ್ಧಾಂತಗಳ ನಿರ್ಣಯವನ್ನು ಬಲ್ಲವನಾಗಿದ್ದನು. ಸುಖದುಃಖಾದಿ ದ್ವಂದ್ವಗಳನ್ನು ಜಯಿಸಿದ್ದನು. ಎಲ್ಲಾ ವಿಷಯಗಳನ್ನು ವಿಮರ್ಶಿಸಿ ಸಂಶಯಗಳನ್ನು ಪರಿಹರಿಸಿಕೊಂಡು ಯಥಾರ್ಥ ಜ್ಞಾನವನ್ನು ಹೊಂದಿದ್ದನು.

ಋಷೀಣಾಮಾಹುರೇಕಂ ಯಂ ಕಾಮಾದವಸಿತಂ ನೃಷು ।
ಶಾಶ್ವತಂ ಸುಖಮತ್ಯಂತಮನ್ವಿಚ್ಛನ್ ಸ ಸುದುರ್ಲಭಮ್ ॥ ೮ ॥

ಇಷ್ಟಬಂದ ಕಡೆಯಲ್ಲಿ ಯಥೇಷ್ಟವಾಗಿ ಸಂಚರಿಸುವ ಮಹರ್ಷಿ ಶ್ರೇಷ್ಠನು ಎಂದು ಪ್ರಸಿದ್ಧಿಯನ್ನು ಹೊಂದಿದ್ದನು. ಅವನು ದುರ್ಲಭವೂ, ಶಾಶ್ವತವೂ ಆದ ಆತ್ಯಂತಿಕ ಸುಖಕ್ಕಾಗಿಯೇ ಅನ್ವೇಷಣೆ ಮಾಡುತ್ತಿದ್ದನು.

ಯಮಾಹುಃ ಕಪಿಲಂ ಸಾಂಖ್ಯಾಃ ಪರಮರ್ಷಿಂ ಪ್ರಜಾಪತಿಮ್ ।
ಸ ಮನ್ಯೇ ತೇನ ರೂಪೇಣ ವಿಸ್ಮಾಪಯತಿ ಹಿ ಸ್ವಯಮ್ ॥ ೯ ॥

ಅವನು ಸಾಂಖ್ಯರಿಂದ ಕಪಿಲ ಪ್ರಜಾಪತಿ ಎಂದು ಕರೆಯಲ್ಪಡುವ ಮಹರ್ಷಿಯ ಸ್ವರೂಪದಂತೆ ಕಾಣಿಸುತ್ತಿದ್ದನು. ಲೋಕದ ಜನರನ್ನೆಲ್ಲ ವಿಸ್ಮಯಗೊಳಿಸುತ್ತಾ ಸಂಚರಿಸುತ್ತಿದ್ದನು.

ಆಸುರೇಃ ಪ್ರಥಮಂ ಶಿಷ್ಯಂ ಯಮಾಹುಶ್ಚಿರಜೀವಿನಮ್ ।
ಪಂಚಸ್ರೋತಸಿ ಯಃ ಸತ್ರಮಾಸ್ತೇ ವರ್ಷಸಹಸ್ರಿಕಮ್ ॥ ೧೦ ॥

ಇವನು ಆಸುರಿ ಎಂಬ ಹೆಸರುಳ್ಳ ಕಪಿಲರೂಪಿ ಭಗವಂತನ ಮೊದಲನೆಯ ಶಿಷ್ಯನು (ಕಪಿಲರೂಪಿ ಭಗವಂತನ ಮೊದಲನೆಯ ಶಿಷ್ಯನು ಆಸುರಿ. ಅವನ ಶಿಷ್ಯನು ಪಂಚಶಿಖನು). ಇವನಿಗೆ ಚಿರಜೀವಿ ಎಂದು ಹೆಸರು. ಆಸುರಿಯು ಪಂಚಸ್ರೋತಸ್ (ಪಂಜಾಬ್) ಎಂಬ ಸ್ಥಳದಲ್ಲಿ ಸಹಸ್ರವರ್ಷಗಳ ಕಾಲ ಸತ್ರಯಾಗವನ್ನು ನಡೆಸಿದ್ದನು.

ತಂ ಸಮಾಸೀನಮಾಗಮ್ಯ ಮಂಡಲಂ ಕಾಪಿಲಂ ಮಹತ್ ।
ಪುರುಷಾವಸ್ಥಮವ್ಯಕ್ತಂ ಪರಮಾರ್ಥಂ ನಿಬೋಧಯತ್ ॥ ೧೧ ॥

ಅವನು ಅಲ್ಲಿನ ಪಂಚಪ್ರವಾಹ ಸಂಗಮಸ್ಥಳದಲ್ಲಿ ನಿತ್ಯಕರ್ಮಗಳನ್ನಾಚರಿಸುತ್ತಾ ಕಪಿಲ ರೂಪಿಯಾದ ಪರಮಾತ್ಮನು ಉಪದೇಶಿಸಿದ ಉಪಾಸನೆಯನ್ನು ಮಾಡಿದವನು.

ಅವ್ಯಕ್ತನೂ, ಸಮಸ್ತ ಜೀವರ ಅಂತರ್ಯಾಮಿಯೂ, ಪರಮಾರ್ಥನೂ ಆದ ಭಗವಂತನನ್ನು ಕುರಿತು ಎಲ್ಲರಿಗೂ ಉಪದೇಶಿಸಿದ್ದನು.

ಇಷ್ಟಿಸತ್ರೇಣ ಸಂಸಿದ್ಧೋ ಭೂಯಶ್ಚ ತಪಸಾ ಮುನಿಃ ।
ಕ್ಷೇತ್ರಕ್ಷೇತ್ರಜ್ಞಯೋರ್ವ್ಯಕ್ತಿಂ ಬುಬುಧೇ ದೇವದರ್ಶನಃ ॥ ೧೨ ॥

ಆ ಸತ್ರಯಾಗವನ್ನು ಮಾಡಿ ಅಧಿಕವಾದ ತಪಸ್ಸನ್ನು ಹೊಂದಿದ ಮುನಿಯು ಕ್ಷೇತ್ರ-ಕ್ಷೇತ್ರಜ್ಞರ ಸ್ವರೂಪವನ್ನು ಚೆನ್ನಾಗಿ ತಿಳಿದಿದ್ದನು. ಭಗವಂತನನ್ನೇ ನೋಡಿದವನಾಗಿದ್ದನು.

ಯತ್ತದೇಕಾಕ್ಷರಂ ಬ್ರಹ್ಮ ನಾನಾರೂಪಂ ಪ್ರದೃಶ್ಯತೇ ।
ಆಸುರಿರ್ಮಂಡಲೇ ತಸ್ಮಿನ್ ಪ್ರತಿಪೇದೇ ತದವ್ಯಯಮ್ ॥ ೧೩ ॥

ಏಕಾಕ್ಷರನೆನಿಸಿದ ಗುಣಪರಿಪೂರ್ಣನಾದ ಭಗವಂತನೇ ಅನೇಕ ಜೀವರಲ್ಲಿ ಅನೇಕ ರೂಪದಿಂದ ಇವನಿಗೆ ತೋರುತ್ತಿದ್ದನು. ಅಂತಹ ಆಸುರಿಯು ಯಜ್ಞಮಂಡಲದಲ್ಲಿ ಅವ್ಯಯನಾದ ಭಗವಂತನನ್ನೇ ಚಿಂತಿಸುತ್ತಾ ಅವನನ್ನು ಹೊಂದಿದನು.

ತಸ್ಯ ಪಂಚಶಿಖಿಃ ಶಿಷ್ಯೋ ಮಾನುಷ್ಯಾ ಪಯಸಾ ಭೃತಃ ।
ಬ್ರಾಹ್ಮಣೇ ಕಪಿಲಾ ನಾಮ ಕಾಚಿದಾಸೀತ್ ಕುಟುಂಬಿನೀ ॥ ೧೪ ॥

ಆ ಆಸುರಿಗೆ ಪಂಚಶಿಖನು ಶಿಷ್ಯನು. ಈ ಪಂಚಶಿಖನು ಕಪಿಲೆ ಎಂಬ ಹೆಸರುಳ್ಳ ಬ್ರಾಹ್ಮಣಗೃಹಿಣಿಗೆ ಸಾಕುಮಗನಾಗಿ ಅವಳ ಸ್ತನ್ಯಪಾನವನ್ನು ಮಾಡಿ ಬೆಳೆದನು.

ತಸ್ಯಾಃ ಪುತ್ರತ್ವಮಾಗಮ್ಯ ಸ್ತ್ರಿಯಾಃ ಸ ಪಿಬತಿ ಸ್ತನೌ ।
ತತಃ ಸ ಕಾಪಿಲೇಯತ್ವಂ ಲೇಭೇ ಬುದ್ಧಿಂ ಚ ನೈಷ್ಠಿಕೀಮ್ ॥ ೧೫ ॥

ಅವಳಿಗೆ ಮಗನಾಗಿ ಅವಳ ಸ್ತನ್ಯಪಾನವನ್ನೇ ಮಾಡಿದ್ದರಿಂದ ಅವನಿಗೆ ಕಾಪಿಲೇಯ ಎಂಬ ಹೆಸರು ಉಂಟಾಯಿತು. ಅವನಲ್ಲಿ ಬುದ್ಧಿಯು ಜ್ಞಾನವಾಗಿಯೂ ದೃಢವಾಗಿ ನೆಲೆಗೊಂಡಿದ್ದವು.

ಏತನ್ಮೇ ಭಗವಾನಾಹ ಕಾಪಿಲೇಯಾಯ ಸಂಭವಮ್ ।
ತಸ್ಯ ತತ್ ಕಾಪಿಲೇಯತ್ವಂ ಸರ್ವವಿತ್ತ್ವಮನುತ್ತಮಮ್ ॥ ೧೬ ॥

ಈ ಪಂಚಶಿಖನು ಬೆಳೆದ ವೃತ್ತಾಂತವನ್ನು ನನಗೆ ಭಗವಂತನೇ ಹೇಳಿದನು. ಆ ಕಾಪಿಲೇಯನ ಅನುತ್ತಮವಾದ ಸರ್ವಜ್ಞತ್ವವನ್ನು ಅವನೇ ನನಗೆ ಬೋಧಿಸಿದನು.

ಸಾಮಾನ್ಯಂ ಕಪಿಲೋ ಜ್ಞಾತ್ವಾ ಧರ್ಮಜ್ಞಾನಾಮನುತ್ತಮಮ್ ।
ಉಪೇತ್ಯ ಶತಮಾಚಾರ್ಯಾನ್ಮೋಹಯಾಮಾಸ ಹೇತುಭಿಃ ॥ ೧೭ ॥

ಕಪಿಲರೂಪಿಯಾದ ಭಗವಂತನಿಂದ ಅನುತ್ತಮವಾದ ಧರ್ಮಜ್ಞಾನಗಳನ್ನು ಹೊಂದಿರುವ ಈ ಪಂಚಶಿಖನು ಧರ್ಮಜ್ಞನಾದ ಜನದೇವನ ಬಳಿಗೆ ಆಗಮಿಸಿ ಅವನ ಬಳಿ ಇರುವ ನೂರು ಮಂದಿ ಚಾರ್ವಾಕ ಮತಾಚಾರ್ಯರನ್ನು ಯುಕ್ತಿವಾದಗಳಿಂದ ಮೋಹಗೊಳಿಸಿದನು.

ಜನಕಸ್ತ್ವಭಿಸಂರಕ್ತಃ ಕಾಪಿಲೇಯಾನುದರ್ಶನಾತ್ ।
ಉತ್ಸೃಜ್ಯ ಶತಮಾಚಾರ್ಯಾನ್ ಪೃಷ್ಠತೋಽನುಜಗಾಮ ತಮ್ ॥೧೮॥

ಆ ಆಚಾರ್ಯರೆಲ್ಲರನ್ನೂ ನಿರಾಕರಿಸುವಂತೆ ಜನಕನಿಗೂ ಸಯುಕ್ತಿಕವಾದ ಅನೇಕ ಕಾರಣಗಳನ್ನು ವಿವರಿಸಿದಾಗ ಜನಕನಾದ ಜನದೇವನಿಗೆ ಪಂಚಶಿಖನ ಸಾಮರ್ಥ್ಯವನ್ನು ನೋಡಿ ಅವನಲ್ಲಿ ಗೌರವಭಾವವು ಹೆಚ್ಚಾಯಿತು. ಬಳಿಕ ಜನಕನು ತನ್ನ ಬಳಿ ಇರುವ ನೂರುಮಂದಿ ಮತಾಚಾರ್ಯರನ್ನು ನಿರಾಕರಿಸಿ ಪಂಚಶಿಖನ ಮತವನ್ನೇ ಅನುಸರಿಸಿದನು. ಪಂಚಶಿಖನ ಶಿಷ್ಯನಾಗಿ ಹೊರಟನು.

ತಸ್ಮೈ ಪರಮಕಲ್ಪಾಯ ಪ್ರಣತಾಯ ಚ ಧರ್ಮತಃ ।
ಅಬ್ರವೀತ್ ಪರಮಂ ಮೋಕ್ಷಂ ಯತ್ತತ್ ಸಾಂಖ್ಯಂ ವಿಧೀಯತೇ ॥೧೯॥

ಪಂಚಶಿಖನಾದರೂ ತನ್ನಲ್ಲಿ ವಿಧೇಯನಾಗಿ ತನ್ನ ಉಪದೇಶಗಳನ್ನು ಸ್ವೀಕರಿಸುವುದರಲ್ಲಿ ಸಮರ್ಥನಾದ ರಾಜನಿಗೆ ಯಥಾರ್ಥವೆನಿಸಿದ ಸಾಂಖ್ಯದಲ್ಲಿ ಹೇಳಿದ ಮೋಕ್ಷಸ್ವರೂಪವನ್ನು ಚೆನ್ನಾಗಿ ತಿಳಿಸಿದನು.

ಜಾತಿನಿರ್ವೇದಮುಕ್ತ್ವಾ ಹಿ ಕರ್ಮನಿರ್ವೇದಮಬ್ರವೀತ್ ।
ಕರ್ಮನಿರ್ವೇದಮುಕ್ತ್ವಾ ಚ ಸರ್ವನಿರ್ವೇದಮಬ್ರವೀತ್ ॥ ೨೦ ॥

ಪಂಚಶಿಖನು ಮೊದಲಿಗೆ ಜಾತಿಗಳ ಪದ್ಧತಿಯನ್ನು, ಆ ಜಾತಿಗಳಿಗನುಗುಣವಾದ ಕರ್ಮದ ವಿಧಿ-ವಿಧಾನಗಳನ್ನು, ಹೀಗೆ ಕರ್ಮದ ವಿಧಿ-ವಿಧಾನಗಳ ಬಳಿಕ ಸಮಸ್ತ ಕರ್ತವ್ಯಗಳನ್ನು ಉಪದೇಶಿಸಿದನು.

ಯದರ್ಥಂ ಕರ್ಮಸಂಸರ್ಗಃ ಕರ್ಮಣಾಂ ಚ ಫಲೋದಯಃ ।
ತದನಾಶ್ವಾಸಿಕಂ ಮೋಘಂ ವಿನಾಶಿ ಚಲಮಧ್ರುವಮ್ ॥ ೨೧ ॥

ಯಾವುದಕ್ಕಾಗಿ ಕರ್ಮಗಳನ್ನು ವಿಧಿಸಿದ್ದಾರೆಂದು, ಕರ್ಮಗಳಿಗಿರುವ ಫಲವೇನೆಂಬುದನ್ನು, ಕರ್ಮಫಲದಿಂದುಂಟಾಗುವ ದುಃಖಗಳನ್ನು, ವ್ಯರ್ಥವಾದ ವಿನಾಶಿಯಾದ, ಅನಿಶ್ಚಿತವಾದ, ವಿಶ್ವಾಸ ಅರ್ಹವಲ್ಲದ ಕರ್ಮಗಳನ್ನು ಬೋಧಿಸಿದನು.

ದೃಶ್ಯಮಾನೇ ವಿನಾಶೇ ಚ ಪ್ರತ್ಯಕ್ಷೇ ಲೋಕಸಾಕ್ಷಿಕೇ ।
ಆಗಮಾತ್ ಪರಮಸ್ತೀತಿ ಬ್ರುವನ್ನಪಿ ಪರಾಜಿತಃ ॥ ೨೨ ॥

ಎಲ್ಲರಿಗೂ ದೇಹದ ನಾಶವು ಪ್ರತ್ಯಕ್ಷವಾಗಿ ಕಾಣಿಸುತ್ತಿರಲು ಪಾಂಚಭೌತಿಕ ದೇಹವು ಮಾತ್ರ ನಾಶವಾಗುತ್ತದೆ. ವಿನಾಶದ ಬಳಿಕ ಪರಲೋಕ ಗಮನವು ಜೀವನಿಗೆ ಇದೆ. ಆಗಮಪ್ರಮಾಣವನ್ನು ಅವಲಂಬಿಸಿಕೊಂಡು ಪರಲೋಕವಿದೆ ಎಂದು ಉಪದೇಶಿಸುತ್ತಾ, ಪಂಚಶಿಖನು ಆ ಚಾರ್ವಾಕ ವಾದಿಗಳ ಅಬದ್ಧವಾದ ಮತಗಳನ್ನು ನಿರಾಕರಿಸಿ ಸನ್ಮತವನ್ನು ಬೋಧಿಸಿದನು.

ಅನಾತ್ಮಾ ಹ್ಯಾತ್ಮನೋ ಮೃತ್ಯುಃ ಕ್ಲೇಶೋ ಮೃತ್ಯುರ್ಜರಾಮಯಃ ।
ಆತ್ಮಾನಂ ಮನ್ಯತೇ ಮೋಹಾತ್ತದಸಮ್ಯಕ್ತರಂ ಮತಮ್ ॥ ೨೩ ॥

ಚಾರ್ವಾಕಮತವಾದಿಗಳು-ದೇಹಕ್ಕೆ ವಿನಾಶವೆಂಬುದು ಪ್ರತ್ಯಕ್ಷವು. ಪ್ರತ್ಯಕ್ಷ ಪ್ರಮಾಣಕ್ಕೆ ಲೋಕವೇ ಸಾಕ್ಷಿ. ಆದ್ದರಿಂದ ಕೇವಲ ಆಗಮ-ಪ್ರಮಾಣಗಳಿಂದ ಶರೀರಕ್ಕಿಂತ ಬೇರೆಯಾದ ಆತ್ಮ ಇದ್ದಾನೆಂದು ಹೇಳುವ ವಾದವು ಸರಿಯಲ್ಲ. ಆದ್ದರಿಂದ ಜೀವ ಎಂಬುವವನೇ ಇಲ್ಲ. ಜೀವನಿಗೆ ದುಃಖ-ವ್ಯಾಧಿ-ಜರಾ-ಮರಣಗಳೆಲ್ಲವೂ ಸಹಜವಾದವುಗಳು. ಇದನ್ನು ಅರಿಯದೆ ದೇಹಕ್ಕಿಂತ ಅತಿರಿಕ್ತನಾದ ಜೀವನಿದ್ದಾನೆಂದು ಮೋಹದಿಂದ ತಪ್ಪು ತಿಳಿದಿದ್ದಾರೆ.

ಅಥ ಚೇದೇವಮಪ್ಯಸ್ತಿ ಯಲ್ಲೋಕೇ ನೋಪಪದ್ಯತೇ ।
ಅಜರೋಽಯಮಮೃತ್ಯುಶ್ಚ ರಾಜಾಸೌ ಮನ್ಯತೇ ತಥಾ ॥ ೨೪ ॥

ದೇಹವು ಹೋದ ಬಳಿಕ ಆತ್ಮವು ಉಳಿದಿರುತ್ತದೆ ಎಂಬ ವಾದವು ಸರಿಯಲ್ಲ. ಲೋಕದಲ್ಲಿ ಯುಕ್ತಿಗೆ ಅನುಕೂಲವಾಗಿ ಇರದಿದ್ದರೂ ಜನರು ಅದನ್ನು ಸಾಧಿಸುತ್ತಾರೆ. ಆದರೆ ಇದು ಯುಕ್ತವಾದುದಲ್ಲ. ಜಗತ್ತಿನ ಜನರು ಜೀವತತ್ತ್ವ, ಪರಮಾತ್ಮ ತತ್ತ್ವ ಎಂಬ ಎರಡು ತತ್ತ್ವಗಳನ್ನು ಅಂಗೀಕರಿಸಿಲ್ಲ. ಹೀಗಿದ್ದರೂ ಜೀವಾತ್ಮ-ಪರಮಾತ್ಮರು ಅಜರರು, ಮೃತ್ಯುರಹಿತರು ಎಂದು ಇಬ್ಬರೂ ಇದ್ದಾರೆಂದು ಜನಕರಾಜನು ತಿಳಿದಿದ್ದಾನೆ.

ಅಸ್ತಿ ನಾಸ್ತೀತಿ ಚಾಪ್ಯೇತತ್ತಸ್ಮಿನ್ನಸತಿ ಲಕ್ಷಣೇ ।
ಕಿಮಧಿಷ್ಠಾಯ ತದ್ ಬ್ರೂಯಾಲ್ಲೋಕಯಾತ್ರಾವಿನಿಶ್ಚಯಮ್ ॥ ೨೫ ॥

ಪರಲೋಕ ಇದೆ ಎನ್ನಲು ಪ್ರತ್ಯಕ್ಷ-ಪ್ರಮಾಣ ಇಲ್ಲದಿದ್ದಾಗಲೂ ಕೆಲವರು ಪರಲೋಕ ಇದೆ ಎನ್ನುವುದು ಎಷ್ಟು ಸರಿ? ಕೆಲವರು ಪರಲೋಕ ಇಲ್ಲ ಎನ್ನುತ್ತಾರೆ. ಆತ್ಮನು ಪರಲೋಕಕ್ಕೆ ಸಾಗಿದ ಎಂದು ತಿಳಿಸಲು ಯಾವ ಪ್ರಮಾಣವು ಆಧಾರವಾಗುತ್ತದೆ?

ಪ್ರತ್ಯಕ್ಷಂ ಹ್ಯೇತಯೋರ್ಮೂಲಂ ಕೃತಾಂತೈತಿಹ್ಯಯೋರಪಿ ।
ಪ್ರತ್ಯಕ್ಷೋ ಹ್ಯಾಗಮೋಽಭಿನ್ನಃ ಕೃತಾಂತೋ ವಾ ನ ಕಿಂಚನ ॥ ೨೬ ॥

ಯತ್ರ ತತ್ರಾನುಮಾನೇಽಸ್ತಿ ಕೃತಂ ಭಾವಯತೇಽಪಿ ವಾ ।
ಅನ್ಯೋ ಜೀವಃ ಶರೀರಸ್ಯ ನಾಸ್ತಿಕಾನಾಂ ಮತೇ ಸ್ಮೃತಃ ॥ ೨೭ ॥

ಸಿದ್ಧಾಂತ, ಇತಿಹಾಸಗಳಿಗೆ ಪ್ರತ್ಯಕ್ಷವೇ ಮೂಲವಾಗಿದೆ. ಪ್ರತ್ಯಕ್ಷಕ್ಕಿಂತ ಭಿನ್ನವಾದ ಆಗಮವೂ ಇರುವುದಿಲ್ಲ, ಸಿದ್ಧಾಂತವೂ ಇರುವುದಿಲ್ಲ. ಆದ್ದರಿಂದ ಯಾವ ಪ್ರಮಾಣದ ಆಧಾರದಲ್ಲಿ ಪರಲೋಕ ಯಾತ್ರೆಯ ನಿಶ್ಚಯವನ್ನು ಹೇಳಲು ಸಾಧ್ಯ ? ಎಂದು ಚಾರ್ವಾಕ ಮತಾನುವಾದವು. ಅಲ್ಲದೇ ಆಗಮಕ್ಕಾಗಲೀ, ಅನುಮಾನಕ್ಕಾಗಲೀ ಪ್ರತ್ಯಕ್ಷವೇ ಮೂಲವೆನಿಸಿರುತ್ತದೆ. ಅನೇಕ ವೇಳೆ ಆಗಮಗಳು ಪ್ರತ್ಯಕ್ಷದಿಂದ ಬಾಧಿಸಲ್ಪಡುತ್ತವೆ. ಅನುಮಾನದಿಂದಲೇ ನಿಶ್ಚಯವೆಂಬುದು ದೃಢವಾದುದಲ್ಲ. ವಿಷಯವು ಎಂತಹದ್ದಾಗಿದ್ದರೂ ಅನುಮಾನದಿಂದ ಸಾಧಿಸಬೇಕಾಗಿಲ್ಲ. ಆದ್ದರಿಂದ ಶರೀರಕ್ಕಿಂತಲೂ

ಬೇರೆಯಾದ ಆತ್ಮ ಇದ್ದಾನೆಂದು ಹೇಳಲು ಅವಕಾಶವೇ ಇರುವುದಿಲ್ಲ. ಈ ಶರೀರವನ್ನೇ ಜೀವ ಎನ್ನುತ್ತಾರೆ. ಈ ರೀತಿಯಾದ ವಾದವು ನಾಸ್ತಿಕ ಮತದವರಲ್ಲಿ ಪ್ರಸಿದ್ಧವಾಗಿದೆ.

ರೇತೋ ಧಾತುರ್ವಟಕಣಿಕಾ ಘೃತಪಾಕಾಧಿವಾಸನಮ್ ।
ಜಾತಿಸ್ಮೃತಿರಯಸ್ಕಾಂತಃ ಸೂರ್ಯಕಾಂತೋಽಂಬುಭಕ್ಷಣಮ್ ॥ ೨೮ ॥

ಪ್ರೇತ್ಯ ಭೂತಾತ್ಯಯಶ್ಚೈವ ದೇವತಾಭ್ಯುಪಯಾಚನಮ್ ।
ಮೃತೇ ಕರ್ಮನಿವೃತ್ತಿಶ್ಚ ಪ್ರಮಾಣಮಿತಿ ನಿಶ್ಚಯಃ ॥ ೨೯ ॥

ರೇತಸ್ಸು, ವಾತ-ಪಿತ್ತಾದಿ ಧಾತುಗಳು, ಆಲದ ಮರದ ಬೀಜ, ತುಪ್ಪ, ಹೊಗೆಯ ಮೂಲಿಕೆ, ಜನ್ಮಾಂತರ ಸ್ಮರಣೆ, ಅಯಸ್ಕಾಂತ, ಸೂರ್ಯಕಾಂತಮಣಿ, ಜಲಪಾನ, ಸತ್ತ ಬಳಿಕ ಶರೀರವು ಪಂಚಭೂತಗಳಲ್ಲಿ ಸೇರಿಕೊಳ್ಳುವುದು, ದೇವತಾಪ್ರಾರ್ಥನೆ, ಸತ್ತ ಬಳಿಕ ಶರೀರದಲ್ಲಿ ಕ್ರಿಯಾನಿವೃತ್ತಿ- ಇದರಿಂದ ಕಣ್ಣಿಗೆ ಕಾಣದ ಅಲೌಕಿಕ ವಿಷಯಗಳನ್ನು ಊಹಿಸಬಹುದು. ಆದ್ದರಿಂದ ನಾಸ್ತಿಕ್ಯವಾದವು ಸರಿಯಾದುದಲ್ಲ.

ವ್ಯಾಖ್ಯಾನ ವಿಶೇಷ- ಬ್ರಹ್ಮಸೂತ್ರದ ಶಾಸ್ತ್ರಯೋನಿತ್ವಾಧಿಕರಣದಲ್ಲಿ ಈ ಮೋಕ್ಷದಲ್ಲಿ ಬರುವ ವಚನಗಳನ್ನು ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಉಲ್ಲೇಖಿಸುತ್ತಾ ಅತೀಂದ್ರಿಯ ವಸ್ತುಗಳೇ ಇಲ್ಲವೆಂದ ಬಳಿಕ ಶಾಸ್ತ್ರದಿಂದ ಪರಮಾತ್ಮನ ಅಸ್ತಿತ್ವವು ಸಿದ್ಧವಾಗುವುದಿಲ್ಲ ಎಂಬ ಆಕ್ಷೇಪಕ್ಕೆ ಉತ್ತರವಾಗಿ ಆಸ್ತಿಕ್ಯವಾದವನ್ನು ಸಮರ್ಥಿಸುವ ಈ ಪ್ರಸಂಗವನ್ನು ಉಲ್ಲೇಖಿಸಿದ್ದಾರೆ.

ರೇತಸ್ಸು- ಸ್ತ್ರೀ ಶರೀರದಲ್ಲಿ ವಿಸರ್ಜಿತವಾದ ಪುರುಷನ ರೇತಸ್ಸಿನಿಂದ ಗರ್ಭಧಾರಣೆ ಆಗುತ್ತದೆ. ಆದರೆ ಇದು ಕಣ್ಣಿಗೆ ಕಾಣಿಸುವುದಿಲ್ಲ. ಮುಂದೆ ಈ ಸ್ತ್ರೀಯ ಗರ್ಭದಲ್ಲಿ ಶಿಶುವಿದೆ ಎಂಬುದನ್ನು ಸ್ಥೂಲೋದರತ್ವವೇ ಮೊದಲಾದ ಪ್ರಾಮಾಣಿಕ ಅನುಮಾನಗಳಿಂದ ನಿರ್ಣಯಿಸಿಕೊಳ್ಳುತ್ತೇವೆ. ಮೃತಶರೀರದಲ್ಲಿ ಗರ್ಭವು ಉತ್ಪನ್ನವಾಗುವುದಿಲ್ಲ. ಆದ್ದರಿಂದ ಶರೀರ ಭಿನ್ನನಾದ ಜೀವನಿದ್ದಾನೆಂಬುದು ನಿರ್ಣಯವಾಗುತ್ತದೆ. ಇಷ್ಟೇ ಅಲ್ಲದೆ ಎಲ್ಲಾ ಸ್ತ್ರೀ ಶರೀರದಲ್ಲಿಯೂ ಗರ್ಭಧಾರಣೆಯು ಆಗುವುದಿಲ್ಲ. ಆದ್ದರಿಂದ ಅದೃಷ್ಟ-ಈಶ್ವರಾದಿಗಳ ಸಿದ್ಧಿಯಾಗುತ್ತದೆ. ಕೆಲವರಲ್ಲಿ ಮಾತ್ರ ಗರ್ಭಧಾರಣೆ. ಕೆಲವರಲ್ಲಿ ಆಗುವುದಿಲ್ಲ ಎಂಬುದರಿಂದ ಭಗವಂತನೂ, ಪುಣ್ಯ-ಪಾಪಗಳೂ ಸಿದ್ಧವಾಗುತ್ತವೆ.

ರೇತೋಧಾತು- ವಾತ-ಪಿತ್ತ-ಕಫಗಳೆಂಬುವು ಮೂರು ಧಾತುಗಳು. ಈ ಧಾತುಗಳು ಅಪಥ್ಯಾಚರಣೆಯಿಂದ ಜೀವಿಸಿರುವ ಜೀವನ ಶರೀರದಲ್ಲಿ ಕೆರಳುತ್ತವೆ. ಈ ಧಾತುಗಳಾದರೂ ಪ್ರತ್ಯಕ್ಷದಿಂದ ತಿಳಿಯಲಾರವು, ಅನುಮಾನದಿಂದಲೇ ತಿಳಿಯಬೇಕು. ಮೃತಶರೀರದಲ್ಲಿ ಈ

ಧಾತುಗಳ ಪರಿಣಾಮವು ಇರುವುದಿಲ್ಲ. ಆದ್ದರಿಂದ ಶರೀರಾತಿರಿಕ್ತ ಜೀವನಿದ್ದಾನೆ ಎಂಬುದು ಸಿದ್ಧವಾಗುತ್ತದೆ. ಜೀವಂತವಾದ ಶರೀರದಲ್ಲಿಯೂ ಎಲ್ಲ ಕಡೆಯಲ್ಲಿಯೂ ಈ ಧಾತುಗಳ ವಿಕಾರವು ಉಂಟಾಗುವುದಿಲ್ಲ. ಕೆಲವು ಕಡೆ ಮಾತ್ರ ಈ ಧಾತುಗಳು ಕೆರಳುತ್ತವೆ. ಇದರಿಂದ ಈಶ್ವರ-ಅದೃಷ್ಟ ಎರಡೂ ಸಿದ್ಧವಾಗುತ್ತವೆ.

ವಟಕಣಿಕ- ಆಲದ ಬೀಜದಿಂದ ಆಲದ ಮರವು ಹುಟ್ಟುತ್ತದೆ. ಹುರಿದ ಬೀಜದಿಂದ ಮೊಳಕೆ ಬರುವುದಿಲ್ಲ. ಹುರಿಯದೇ ಇರುವ ಎಲ್ಲಾ ಬೀಜಗಳಿಂದಲೂ ಮರಗಳು ಹುಟ್ಟುವುದಿಲ್ಲ.

ಘೃತ- ತುಪ್ಪದಿಂದ ದೇಹವು ಬೆಳೆಯುತ್ತದೆ. ಮೃತಶರೀರವು ಬೆಳೆಯುವುದಿಲ್ಲ. ಜೀವಚ್ಛರೀರವು ಕೆಲವೊಂದು ಎಷ್ಟು ತುಪ್ಪ ತಿಂದರೂ ಪುಷ್ಟಿಯನ್ನು ಹೊಂದುವುದಿಲ್ಲ.

ಧೂಮಾದಿವಾಸನ- ಕೆಲವು ಮರಗಳು ಹೂಬಿಡಲು ಹೊಗೆ ಹಾಕಬೇಕಾಗುತ್ತದೆ. ಹೊಗೆ ಹಾಕಿದ ಬಳಿಕ ಆ ಮರದಲ್ಲಿ ಹೂ ಮೊದಲಾದವುಗಳು ಉಂಟಾಗುತ್ತವೆ. ಒಣಗಿದ ಮರದಲ್ಲಿ ಹೂಗಳು ಉಂಟಾಗುವುದಿಲ್ಲ. ಜೀವಂತವಾದ ಎಲ್ಲಾ ಮರಗಳಲ್ಲಿಯೂ ಹೂಗಳು ಉಂಟಾಗುವುದಿಲ್ಲ. ಇದರಿಂದ ಜೀವ, ಅದೃಷ್ಟಗಳು ಸಿದ್ಧವಾಗುತ್ತವೆ.

ಜಾತಿಸ್ಮೃತಿ- ಕೆಲವರಿಗೆ ತಪಸ್ಸೇ ಮೊದಲಾದ ಸಾಧನ ವಿಶೇಷಗಳಿಂದ ಪೂರ್ವಜನ್ಮದ ಸ್ಮರಣೆ ಉಂಟಾಗುತ್ತದೆ. ಮೃತನಾದ ವ್ಯಕ್ತಿಗೆ ಜಾತಿಸ್ಮರಣೆ ಇರುವುದಿಲ್ಲ. ಇರುವ ವ್ಯಕ್ತಿಗಳೆ ಎಲ್ಲರಿಗೂ ಉಂಟಾಗುವುದಿಲ್ಲ. ಆದ್ದರಿಂದ ಇಲ್ಲಿಯೂ ಈಶ್ವರ-ಪೂರ್ವಪುಣ್ಯಗಳನ್ನು ಕಾರಣವೆಂದು ಹೇಳಬೇಕು.

ಅಯಸ್ಕಾಂತ- ಅಯಸ್ಕಾಂತವು ಕಬ್ಬಿಣವನ್ನು ಸೆಳೆಯುತ್ತದೆ. ಅಚೇತನದಲ್ಲಿ ಇಂತಹ ವಿಚಿತ್ರವಾದ ಶಕ್ತಿಯು ಎಲ್ಲಿಯೂ ಕಂಡಿಲ್ಲ. ಆದ್ದರಿಂದ ಇಂಥ ವಿಶೇಷ ಶಕ್ತಿಯನ್ನು ತುಂಬಿದ ಭಗವಂತನನ್ನು ಇಲ್ಲಿಯೂ ಚಿಂತಿಸಬೇಕು. ಇದರಿಂದ ಈಶ್ವರನ ಸಿದ್ಧಿಯಾಗುತ್ತದೆ.

ಸೂರ್ಯಕಾಂತ- ಸೂರ್ಯಕಾಂತಶಿಲೆಯಿಂದ ಅಗ್ನಿಯು ಉತ್ಪತ್ತಿಯಾಗುತ್ತದೆ. ಕೇವಲ ಜಡಪದಾರ್ಥಗಳಲ್ಲಿ ಈ ಶಕ್ತಿಯು ಕಂಡಿರುವುದಿಲ್ಲ. ಈ ರೀತಿಯಾದ ಶಕ್ತಿಯ ವೈಚಿತ್ರ್ಯಕ್ಕೆ ಈಶ್ವರನು ಪ್ರೇರಕನಾಗಿದ್ದಾನೆಂದು ಇಲ್ಲಿಯೂ ಅಂಗೀಕರಿಸಬೇಕು.

ಅಂಬುಭಕ್ಷಣ- ನೀರು ಕುಡಿದಾಗ ಬಾಯಾರಿಕೆಯು ಪರಿಹಾರವಾಗುತ್ತದೆ. ಮೃತಶರೀರದಲ್ಲಿ ಹೀಗೆ ಆಗುವುದಿಲ್ಲ. ಆದ್ದರಿಂದ ಇದರಿಂದಲೂ ಜೀವನು ಸಿದ್ಧನಾಗುತ್ತಾನೆ.

ಪ್ರೇತ್ಯಭೂತಾಪ್ಯಯ- ಮೃತಶರೀರವು ಮಣ್ಣಾಗುತ್ತದೆ. ಮರಣಾನಂತರ ದೇಹದಲ್ಲಿರುವ ಪಂಚಭೂತಗಳು ನಾಶಹೊಂದುತ್ತವೆ. ಜೀವಚ್ಛರೀರದಲ್ಲಿ ಹೀಗಾಗುವುದಿಲ್ಲ. ನಾವು ಬಯಸಿದರೂ ಅದು ಮಣ್ಣಾಗುವುದಿಲ್ಲ.

ದೇವತಾಭ್ಯುಪಯಾಚನಮ್– ದೇವತಾ ಪ್ರಾರ್ಥನೆಯಿಂದ ಕೆಲವರಿಗೆ ಭಾಗ್ಯವು ದೊರೆಯುತ್ತದೆ. ಮೃತನಾದವನು ದೇವತಾ ಯಾಚನೆ ಮಾಡಲು ಸಾಧ್ಯವಿಲ್ಲ. ಇದರಿಂದ ದೇವತಾ ಸಿದ್ಧಿಯು, ಜೀವಸಿದ್ಧಿಯು ಉಂಟಾಗುತ್ತದೆ.

ಮೃತೇ ಕರ್ಮನಿವೃತ್ತಿ– ಮೃತಶರೀರದಲ್ಲಿ ಹಸ್ತಚಲನಾದಿ ಕರ್ಮವು ಉಂಟಾಗುವುದಿಲ್ಲ. ಜೀವಚ್ಛರೀರದಲ್ಲೇ ಉಂಟಾಗುತ್ತದೆ. ಇದರಿಂದ ಜೀವನ ಸಿದ್ಧಿಯಾಗುತ್ತದೆ.

ನ ತ್ವೇತೇ ಹೇತವಃ ಸಂತಿ ಯೇ ಕೇಚಿನ್ಮೂರ್ತಿಸಂಸ್ಥಿತಾಃ ।
ಅಮರ್ತ್ಯಸ್ಯ ಹಿ ಮರ್ತ್ಯೇನ ಸಾಮಾನ್ಯಂ ನೋಪಪದ್ಯತೇ ॥ ೩೦ ॥

ಹೀಗೆ ರೇತಸ್ಸು, ಧಾತು ಮುಂತಾದವುಗಳ ಕಾರ್ಯೋತ್ಪತ್ತಿ, ಕಾರ್ಯ ಅನುತ್ಪತ್ತಿ, ಹೇತುಗಳು ದೇಹದಲ್ಲಿ ಇರುವುದಿಲ್ಲ. ಆದ್ದರಿಂದ ದೇಹಾತಿರಿಕ್ತವಾದ ಅದೃಷ್ಟಾದಿಗಳು ನಿಯಾಮಕವೆಂದು ಹೇಳಬೇಕು. ಅಮೂರ್ತವೆನಿಸಿದ ದೇಹವ್ಯತಿರಿಕ್ತವಾದ ಅದೃಷ್ಟಾದಿಗಳಿಗೂ, ಮೂರ್ತವೆನಿಸಿದ ದೇಹಕ್ಕೂ ಸಾಮ್ಯವನ್ನು ಹೇಳುವುದು ಸರಿಯಾಗುವುದಿಲ್ಲ. ಅದೃಷ್ಟದ ಶಕ್ತಿಯೇ ಬೇರೆ, ದೇಹದ ಶಕ್ತಿಯೇ ಬೇರೆ.

ಅವಿದ್ಯಾಕರ್ಮಚೇಷ್ಟಾನಾಂ ಕೇಚಿದಾಹುಃ ಪುನರ್ಭವಮ್ ।
ಕಾರಣಂ ಲೋಭಮೋಹೌ ತು ದೋಷಾಣಾಂ ಚ ನಿಷೇವಣಮ್ ॥

ಅವಿದ್ಯೆ, ಕರ್ಮ, ಆಸೆ, ಲೋಭ, ಮೋಹ ಇವುಗಳು ದೋಷಗಳು. ಈ ದೋಷಗಳನ್ನು ಸೇವಿಸುವುದು ಪುನರ್ಜನ್ಮಕ್ಕೆ ಕಾರಣವಾಗುತ್ತದೆಂದು ಕೆಲವು ವಿದ್ವಾಂಸರು ಹೇಳುತ್ತಾರೆ.

ಅವಿದ್ಯಾಂ ಕ್ಷೇತ್ರಮಾಹುರ್ಹಿ ಕರ್ಮ ಬೀಜಂ ತಥಾ ಕೃತಮ್ ।
ತೃಷ್ಣಾಸಂಜನನಂ ಸ್ನೇಹ ಏಷ ತೇಷಾಂ ಪುನರ್ಭವಃ ॥ ೩೨ ॥

ಆ ವಿದ್ವಾಂಸರು ಅವಿದ್ಯೆಯನ್ನು ಕ್ಷೇತ್ರವೆಂದು ಕರೆಯುತ್ತಾರೆ. ಪೂರ್ವಜನ್ಮದಲ್ಲಿ ಮಾಡಿರುವ ಶುಭಾಶುಭ ಕರ್ಮಗಳೇ ಬೀಜವಾಗಿರುತ್ತದೆ. ತೃಷ್ಣೆ ಎಂಬುದು ಬೀಜದಲ್ಲಿ ಅಂಕುರವನ್ನುಂಟು ಮಾಡುವ ಸ್ನೇಹ ಅಥವಾ ಜಲ ಎನಿಸಿದೆ. ಇವರ ಅಭಿಪ್ರಾಯದಲ್ಲಿ ಇವುಗಳೇ ಪುನರ್ಜನ್ಮಕ್ಕೆ ಕಾರಣವಾಗಿರುತ್ತವೆ.

ತಸ್ಮಿನ್ ವ್ಯೂಢೇ ಚ ದಗ್ಧೇ ಚ ಚಿತ್ತೇ ಮರಣಧರ್ಮಿಣಿ ।
ಅನ್ಯೋಽನ್ಯಾಜ್ಜಾಯತೇ ದೇಹಸ್ತಮಾಹುಃ ಸತ್ತ್ವಸಂಕ್ಷಯಮ್ ॥ ೩೩ ॥

ಸಾಯುವ ಧರ್ಮವುಳ್ಳ ಈ ದೇಹವನ್ನು ಮಣ್ಣಿನಲ್ಲಿ ಹೂತು ಹಾಕಿದರೂ, ಬೆಂಕಿಯಲ್ಲಿ ಸುಟ್ಟರೂ, ಶಸ್ತ್ರದಿಂದ ಛೇದಿಸಿದರೂ ಪುನಃ ಶುಭಾಶುಭಕರ್ಮಗಳಿಂದ ಮತ್ತೊಂದು ದೇಹವು ಉಂಟಾಗುತ್ತದೆ. ಆ ಕರ್ಮದ ಬೀಜವು ಭಗವಜ್ಜ್ಞಾನದಿಂದ ನಾಶ ಹೊಂದಿದರೆ ಮರುಹುಟ್ಟು ನಾಶಹೊಂದುತ್ತದೆ.

ಯತಃ ಸ್ವರೂಪತಶ್ಚಾನ್ಯೋ ಜಾತಿತಃ ಶ್ರುತಿತೋಽರ್ಥತಃ ।
ಕಥಮಸ್ಮಿ ಸ ಇತ್ಯೇವ ಸಂಬಂಧಃ ಸ್ಯಾದಸಂಹಿತಃ ॥ ೩೪ ॥

ಯಾವ ಕಾರಣದಿಂದ ಜೀವನು ಅಣುಸ್ವರೂಪನಾಗಿದ್ದಾನೆ? ಶರೀರವು ಸ್ಥೂಲ ರೂಪವನ್ನು ಹೊಂದಿದೆ? ಅಣುತ್ವ, ಸ್ಥೂಲತ್ವ ಎಂಬ ವಿರುದ್ಧ ಧರ್ಮಗಳಿಂದ ಈ ಚೇತನತ್ವ, ಜಡತ್ವ ಎಂಬ ಜಾತಿಗಳಿಂದ ಜೀವನಿದ್ದಾನೆ, ದೇಹವಿದೆ ಎಂದು ಪ್ರತಿಪಾದಿಸುವ ಶ್ರುತಿಗಳಿರುವುದರಿಂದ, ಜೀವನು ಸುಖಭೋಕ್ತವು, ದೇಹವು ಸುಖ ಭೋಕ್ತವಲ್ಲ ಎಂಬ ಪ್ರಯೋಜನವಿರುವುದರಿಂದ, ಜೀವಕ್ಕಿಂತ ಭಿನ್ನವಾದ ದೇಹವು ಇದೆ. ಆದಕಾರಣದಿಂದ ಆ ದೇಹವೇ ನಾನಾಗಿದ್ದೇನೆ ಎಂಬುದು ಎಷ್ಟು ಮಾತ್ರಕ್ಕೂ ಸರಿಯಾಗದು.

ಏವಂ ಸತಿ ಚ ಕಾ ಪ್ರೀತಿರ್ದಾನವಿದ್ಯಾತಪೋಬಲೈಃ ।
ಯದನ್ಯಾಚರಿತಂ ಕರ್ಮ ಸರ್ವಮನ್ಯಃ ಪ್ರಪದ್ಯತೇ ॥ ೩೫ ॥

ಈ ರೀತಿಯಾಗಿದ್ದಾಗಲೂ ಚಾರ್ವಾಕ ಸಿದ್ಧಾಂತವನ್ನೇ ಮಾನ್ಯ ಮಾಡುವುದಾದರೆ ವಿದ್ಯೆ, ದಾನ, ತಪಸ್ಸು, ಬಲ ಇವುಗಳಲ್ಲಿ ಯಾರಿಗೂ ಪ್ರೀತಿಯುಂಟಾಗಲಾರದು. ಒಬ್ಬರು ಮಾಡಿದ ಕರ್ಮಫಲವನ್ನು ಮತ್ತೊಬ್ಬನು ಉಪಭೋಗಿಸುತ್ತಾನೆ. ಹೀಗಾದರೆ ಮನುಷ್ಯನಿಗೆ ಕರ್ಮ ಮಾಡುವ ಆಸಕ್ತಿಯಾದರೂ ಹೇಗೆ ಉಂಟಾಗುತ್ತದೆ?

ಯದಾ ಹ್ಯಯಮಿಹೈವಾನ್ಯೈಃ ಪ್ರಾಕೃತೈರ್ದುಃಖಿತೋ ಭವೇತ್ ।
ಸುಖಿತೈರ್ದುಃಖಿತೈರ್ವಾಪಿ ದೃಶ್ಯೋಽಪ್ಯಸ್ಯ ವಿನಿರ್ಣಯಃ ॥ ೩೬ ॥

ಈ ಚಾರ್ವಾಕ ಮತವನ್ನೇ ಅಂಗೀಕರಿಸಿದಲ್ಲಿ ಇವನು ಮತ್ತೊಬ್ಬನಿಂದ, ಮತ್ತೊಬ್ಬನು ಇವನಿಂದ ದುಃಖಿತನಾಗುತ್ತಾನೆ. ಪ್ರಕೃತಿಯನ್ನು ಮಾತ್ರ ಹೊಂದಿರುವ ಇವರು ಧರ್ಮಾಧರ್ಮಗಳ ಎಚ್ಚರವಿಲ್ಲದೆ ಹಿಂಸಿಸಬಹುದು. ಸುಖ-ದುಃಖಗಳಿಗೆಲ್ಲ ನಿರ್ಣಯವೇ ಇಲ್ಲ ಎಂದಾಗುತ್ತದೆ. ಯಾವನೋ ಮಾಡಿದ ಕರ್ಮಕ್ಕೆ ಯಾರೋ ಸುಖವನ್ನು, ಕಷ್ಟವನ್ನು ಅನುಭವಿಸಬೇಕಾಗುತ್ತದೆ.

ತಥಾ ಹಿ ಮುಸಲೈರ್ಹನ್ಯುಃ ಶರೀರಂ ತತ್ ಪುನರ್ಭವೇತ್ ।
ಪೃಥಗ್ಜ್ಞಾನಂ ಯದನ್ಯಚ್ಚ ತೇನೈವಂ ಸೋಪಪದ್ಯತೇ ॥ ೩೭ ॥

ಈ ಉಚ್ಛೃಂಖಲೆಯಿಂದ ಪುಣ್ಯ-ಪಾಪಗಳ ಭಯವಿಲ್ಲದೆ ಕೆಲವರು ಒನಕೆಗಳಿಂದಲೇ ಹೊಡೆದು ಸಂಹರಿಸಬಹುದು. ಸಂಹರಿಸಿದಾಗಲೂ ಸತ್ತ ಮನುಷ್ಯನು ಪುನಃ ಪ್ರೇತನಾಗಿ ಹುಟ್ಟುತ್ತಾನೆ. ಪ್ರೇತನಾಗಿ ಹುಟ್ಟಿದಾಗ ಆ ಜೀವನಿಗೆ ಇವನೇ ನನ್ನ ತಲೆಯನ್ನು ಒಡೆದವನು ಎಂಬ ಜ್ಞಾನವಿದೆ. ಆದ್ದರಿಂದ ದೇಹವೇ ಜೀವ ಎಂದು ಹೇಳಿದಲ್ಲಿ ಪ್ರೇತಗಳು ವಿರೋಧಿಸುತ್ತವೆ. ಆದ್ದರಿಂದ ಚಾರ್ವಾಕ ಮತವು ಅಪ್ರಾಮಾಣಿಕವಾಗಿದೆ.

ಋತುಃ ಸಂವತ್ಸರಾಸ್ತಿಥ್ಯಃ ಶೀತೋಷ್ಣೇ ಚ ಪ್ರಿಯಾಪ್ರಿಯೇ ।
ಯಥಾತೀತಾನಿ ಪಶ್ಯಂತಿ ತಾದೃಶಃ ಸತ್ತ್ವಸಂಕ್ಷಯಃ ॥ ೩೮ ॥

ಋತು, ಸಂವತ್ಸರ, ತಿಥಿಗಳು, ಯುಗ, ಚಳಿಗಾಲ, ಬೇಸಿಗೆಕಾಲ, ಪ್ರಿಯ-ಅಪ್ರಿಯ ಎಲ್ಲವೂ ಬರುತ್ತಿರುತ್ತವೆ. ಆದ್ದರಿಂದ ಕಾಲವು ನಾಶವನ್ನು ಹೊಂದುವುದಿಲ್ಲ. ಅದರಂತೆ ಜೀವನು ನಿತ್ಯನಾಗಿರುತ್ತಾನೆ. ಜೀವನಿಗೆ ಎಂದೂ ನಾಶವಿರುವುದಿಲ್ಲ.

ಜರಯಾ ಹಿ ಪರೀತಸ್ಯ ಮೃತ್ಯುನಾ ವಾ ವಿನಾಶಿನಾ ।
ದುರ್ಬಲಂ ದುರ್ಬಲಂ ಪೂರ್ವಂ ಗೃಹಸ್ಯೇವ ವಿನಶ್ಯತಿ ॥ ೩೯ ॥

ಯಾವ ರೀತಿಯಾಗಿ ಹಳೆಯ ಮನೆಯು ಮರಮಟ್ಟುಗಳು ದುರ್ಬಲವಾಗಿ ನಾಶವನ್ನು ಹೊಂದುತ್ತದೋ ಅದರಂತೆ ಈ ಜೀವನಿಗೆ ಸಂಬಂಧಿಸಿದ ಶರೀರವು ಜರಾಗ್ರಸ್ಥವಾಗಿ, ಮೃತ್ಯುವಿನಿಂದ ಆಕ್ರಾಂತವಾಗಿ, ಅಂಗಾಂಗಗಳಲ್ಲಿ ದೌರ್ಬಲ್ಯ ಉಂಟಾಗಿ ನಾಶವನ್ನು ಹೊಂದುತ್ತದೆ.

ಇಂದ್ರಿಯಾಣಿ ಮನೋ ವಾಯುಃ ಶೋಣಿತಂ ಮಾಂಸಮಸ್ಥಿ ಚ ।
ಆನುಪೂರ್ವ್ಯಾ ವಿನಶ್ಯಂತಿ ಸ್ವಂ ಧಾತುಮುಪಯಾಂತಿ ಚ ॥ ೪೦ ॥

ಇಂದ್ರಿಯಗಳು, ಮನಸ್ಸು, ಪ್ರಾಣ, ರಕ್ತ, ಮಾಂಸ, ಮೂಳೆ ಇವು ಕ್ರಮವಾಗಿ ವಿನಾಶ ಹೊಂದುತ್ತವೆ. ಬಳಿಕ ಇವುಗಳು ಕಾರಣಭೂತಗಳಾದ ಪೃಥಿವ್ಯಾದಿ ಪಂಚಭೂತಗಳಲ್ಲಿ ಸೇರಿಹೋಗುತ್ತವೆ.

ಲೋಕಯಾತ್ರಾವಿಧಾನಂ ಚ ದಾನಧರ್ಮಫಲಾಗಮಃ ।
ಯದರ್ಥಂ ವೇದಶಬ್ದಾಶ್ಚ ವ್ಯವಹಾರಾಶ್ಚ ಲೌಕಿಕಾಃ ॥ ೪೧ ॥

ಇತಿಸಮ್ಯಕ್ ಮನಸ್ಯೇತೇ ಬಹವಃ ಸಂತಿಹೇತವಃ ।
ಏತದಸ್ತೀದಮಸ್ತೀತಿ ನ ಕಿಂಚಿತ್ತತ್ತಿದೃಶ್ಯತೇ ॥ ೪೨ ॥

ಶರೀರಭಿನ್ನನಾದ ಆತ್ಮನನ್ನು ಅಂಗೀಕರಿಸದಿದ್ದರೆ ಲೋಕದ ವ್ಯವಹಾರವೇ ನಿರ್ವಹಿಸಲಾಗುವುದಿಲ್ಲ. ದಾನ-ಧರ್ಮಗಳಿಂದ ಫಲವನ್ನು ಪಡೆದುಕೊಳ್ಳುವ ಆಸಕ್ತಿಯು ಯಾರಿಗೂ ಇರುವುದಿಲ್ಲ. ವೈದಿಕ ಶಬ್ದಗಳು ಲೋಕದ ವ್ಯವಹಾರಗಳೆಲ್ಲವೂ ಆತ್ಮನ ಸುಖಕ್ಕಾಗಿಯೇ ಹೊರಟಿದ್ದಾವೆ. ಈ ರೀತಿಯಾಗಿ ಮನಸ್ಸಿನಲ್ಲಿಯೇ ಅನೇಕ ಹೇತುಗಳಿದ್ದಾವೆ. ಇದು ಪಾರಲೌಕಿಕ, ಇದು ಐಹಿಕವು ಎಂದು ಹೇಳುವುದರಿಂದಲೇ ಏನನ್ನೂ ಹೊಂದುವುದಿಲ್ಲ.

ತೇಷಾಂ ವಿಮೃಶತಾಮೇವಂ ತತ್ತತ್ಸಮಭಿಧಾವತಾಮ್ ।
ಕ್ವಚಿನ್ನಿವಿಶತೇ ಬುದ್ಧಿಸ್ತತ್ರ ಜೀರ್ಯತಿ ವೃಕ್ಷವತ್ ॥ ೪೩ ॥

ಈ ರೀತಿಯಾಗಿ ಆತ್ಮನ ಅಸ್ತಿತ್ವವನ್ನು ವಿಮರ್ಶಿಸುತ್ತಾ ಆಯಾ ವಿಷಯಗಳನ್ನು ಚರ್ಚಿಸುತ್ತಾ ಸಾಗುವ ಬುದ್ಧಿಗೆ ಒಂದು ಕಡೆ ದಾರ್ಢ್ಯವು ಹುಟ್ಟುತ್ತದೆ. ಆ ಸಿದ್ಧಾಂತವನ್ನೇ ಹೊಂದಿ ವೃಕ್ಷದಂತೆ ಬುದ್ಧಿಯು ಜೀರ್ಣವಾಗುತ್ತದೆ.

ಏವಮರ್ಥೈರನರ್ಥೈಶ್ಚ ದುಃಖಿತಾಃ ಸರ್ವಜಂತವಃ ।
ಆಗಮೈರಪಕೃಷ್ಯಂತಿ ಹಸ್ತಿನೋ ಹಸ್ತಿಪರ್ಯಥಾ ॥ ೪೪ ॥

ಹೀಗೆ ಎಲ್ಲಾ ಪ್ರಾಣಿಗಳು ವಿಶೇಷವಾದ ಅಭಿಲಾಷೆಗಳಿಂದಲೂ, ಪ್ರಯೋಜನವಿಲ್ಲದ ವಿಷಯಗಳಿಂದಲೂ ದುಃಖಿತರಾಗಿರುತ್ತಾರೆ. ಮಾವುತನು

ಆನೆಯನ್ನು ಅಂಕುಶದಿಂದ ನಿಯಂತ್ರಿಸುವಂತೆ ಶಾಸ್ತ್ರಗಳು ಮಾತ್ರ ಮನುಷ್ಯನನ್ನು ಸನ್ಮಾರ್ಗದಲ್ಲಿ ನಿಯಂತ್ರಿಸುತ್ತವೆ.

ಅರ್ಥಾಂಸ್ತಥಾऽತ್ಯಂತದುಃಖಾವಹಾಂಶ್ಚ
ಲಿಪ್ಯಂತ ಏಕೇ ಬಹವೋ ವಿಶುಷ್ಕಾಃ ।
ಮಹತ್ತರಂ ದುಃಖಮಭಿಪ್ರಪನ್ನಾ
ಹಿತ್ವಾ ಸುಖಂ ಮೃತ್ಯುವಶಂ ಪ್ರಯಾಂತಿ ॥ ೪೫ ॥

ಉದ್ದೇಶವೇ ಇಲ್ಲದ ಮನುಷ್ಯರು ಅತ್ಯಂತ ಸುಖವೆಂದು ಭಾವಿಸುವ ವಿಷಯ ಸುಖಗಳನ್ನು ಅಪೇಕ್ಷಿಸುತ್ತಿರುತ್ತಾರೆ. ಆದರೆ ಇವರ ಆಸೆ ಎಂದಿಗೂ ನಿಲ್ಲದೆ ಇನ್ನೂ ದುಃಖವನ್ನೇ ಎದುರಿಸುತ್ತಾರೆ. ಕೊನೆಗೆ ಸಮಸ್ತ ಸುಖಭೋಗಗಳನ್ನೂ ಕಳೆದುಕೊಂಡು ಮೃತ್ಯುವಶರಾಗುತ್ತಾರೆ.

ವಿನಾಶಿನೋ ಹ್ಯಧ್ರುವಜೀವಿತಸ್ಯ ಕಿಂ ಬಂಧುಭಿರ್ಮಂತ್ರ ಪರಿಗ್ರಹೈಶ್ಚ ।
ವಿಹಾಯ ಯೋ ಗಚ್ಛತಿ ಸರ್ವಮೇವ ಕ್ಷಣೇನ ಗತ್ವಾ ನ ನಿವರ್ತತೇ ಚ ॥

ನಾಶಹೊಂದುವ ಸ್ವಭಾವವುಳ್ಳ ಅನಿತ್ಯವಾದ ಜೀವನವುಳ್ಳ ಈ ಜೀವನಿಗೆ ಹೆಂಡತಿ, ಮಕ್ಕಳಿಂದಾಗಲೀ, ಬಂಧುಗಳಿಂದಾಗಲೀ, ಗೃಹ-ಸಂಪತ್ತು ಮೊದಲಾದವುಗಳ ಸಂಗ್ರಹದಿಂದಾಗಲೀ ಏನು ಪ್ರಯೋಜನವಿದೆ? ಇದನ್ನು ಅರಿತು ಸರ್ವಸ್ವವನ್ನೂ ಕ್ಷಣ ಮಾತ್ರದಲ್ಲಿ ಪರಿತ್ಯಾಗ ಮಾಡಿ, ಅಧ್ಯಾತ್ಮಮಾರ್ಗವನ್ನು ಹಿಡಿದು ಯಾರು ಹೊರಡುತ್ತಾರೋ ಅವರು ಪುನರ್ಜನ್ಮವನ್ನು ಹೊಂದುವುದಿಲ್ಲ.

ಖಂ ಭೂಮಿತೋಯಾನಲವಾಯವೋ ಹಿ
ಸದಾ ಶರೀರಂ ಪ್ರತಿಪಾಲಯಂತಿ ।
ಇತೀದಮಾಲಕ್ಷ್ಯ ಕುತೋ ರತಿರ್ಭವೇತ್
ವಿನಾಶಿನೋ ಹ್ಯಸ್ಯ ನ ಕರ್ಮ ವಿದ್ಯತೇ ॥ ೪೭ ॥

ಭೂಮಿ, ಆಕಾಶ, ನೀರು, ಅಗ್ನಿ, ವಾಯುಗಳು (ಅದರ ಅಭಿಮಾನಿ ದೇವತೆಗಳು) ಸರ್ವಕಾಲದಲ್ಲಿಯೂ ಶರೀರವನ್ನು ಪಾಲಿಸುತ್ತಿರುತ್ತಾರೆ. ಪಂಚಭೂತಗಳಿಂದಲೇ ರಕ್ಷಣೆಯಾಗುತ್ತಿದೆ ಎಂಬುದನ್ನು ಅರ್ಥೈಸಿಕೊಂಡರೆ ಹೇಗೆ ಈ ಶರೀರದಲ್ಲಿ ಅನುರಾಗವು ಹುಟ್ಟುತ್ತದೆ? ನಷ್ಟವಾಗುವ ಈ ಶರೀರದಿಂದ ಯಾವ ಸುಖವೂ ದೊರೆಯದು.

ಇದಮನುಪಧಿವಾಕ್ಯಮಚ್ಛಲಂ
ಪರಮನಿರಾಮಯಮಾತ್ಮಸಾಕ್ಷಿಕಮ್ ।
ನರಪತಿಮನುವೀಕ್ಷ್ಯ ವಿಸ್ಮಿತಃ
ಪುನರನುಯೋಕ್ತಮಿದಂ ಪ್ರಚಕ್ರಮೇ ॥ ೪೮ ॥

ಧರ್ಮಜನೇ, ಜನಕನೆನಿಸಿದ ಜನದೇವರಾಜನು ಭ್ರಮೆಯನ್ನು ಪರಿಹರಿಸುವ, ವಂಚನೆಯಿಂದ ರಹಿತವಾದ, ದೋಷರಹಿತವಾದ, ಆತ್ಮಸಾಕ್ಷಾತ್ಕಾರವನ್ನು ಹೊಂದಿಸುವ ಪಂಚಶಿಖಿನ ಉಪದೇಶವನ್ನು ಕೇಳಿ ಆಶ್ಚರ್ಯವನ್ನು ಹೊಂದಿದವನಾಗಿ ಪುನಃ ಇನ್ನೂ ಅನೇಕ ಪ್ರಶ್ನೆಗಳನ್ನು ಕೇಳಲು ಆರಂಭಿಸಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಅಷ್ಟಚತ್ವಾರಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನಲವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ನಲವತ್ತೊಂಬತ್ತನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಪಂಚಶಿಖಿನು ಜನಕರಾಜನಿಗೆ ಹೇಳಿದ ಉಪದೇಶಗಳನ್ನು ತಿಳಿಸಿದುದು.

ಭೀಷ್ಮಃ

ಜನಕೋ ನರದೇವಸ್ತು ಜ್ಞಾಪಿತಃ ಪರಮರ್ಷಿಣಾ ।
ಪುನರೇವಾನುಪಪ್ರಚ್ಛ ಸಾಂಪರಾಯೇ ಭವಾಭವೌ ॥ ೧ ॥

ಭೀಷ್ಮ– ನರದೇವನಾದ ಜನಕರಾಜನು ಪರಮರ್ಷಿಯಾದ ಪಂಚಶಿಖಿನಿಂದ ತತ್ತ್ವೋಪದೇಶವನ್ನು ಹೊಂದಿದವನಾಗಿ ಪುನಃ ಮೋಕ್ಷದ ಬಗ್ಗೆ, ಹುಟ್ಟು-ಸಾವುಗಳ ಬಗ್ಗೆ ಪ್ರಶ್ನಿಸಿದನು.

ಭಗವನ್ ಯದಿದಂ ಪ್ರೇತ್ಯ ಸಂಜ್ಞಾ ಭವತಿ ಕಸ್ಯಚಿತ್ ।
ಏವಂ ಸತಿ ಕಿಮಜ್ಞಾನಂ ಜ್ಞಾನಂ ವಾ ಕಿಂ ಕರಿಷ್ಯತಿ ॥ ೨ ॥

ಪೂಜ್ಯರೇ, ಯಾವಾಗ ಸಾಧಕನಾದ ಜೀವನು ಪರಮಾತ್ಮನ ಜ್ಞಾನವನ್ನು ಪಡೆದು ತತ್ತ್ವಜ್ಞಾನವನ್ನು ಹೊಂದಿರುತ್ತಾನೋ ಆವಾಗ ಮೊದಲಿರುವ ಅಜ್ಞಾನ ಅಥವಾ ಲೋಕ ವಿಷಯ ಜ್ಞಾನಗಳು ಏನು ಮಾಡುತ್ತವೆ? ಅವುಗಳ ವ್ಯಾಪಾರವೇನು?

ವಿವಾದಾದೇವ ಸಿದ್ಧೋಽಸೌ ಕಾರಣಸ್ಯೇವ ವೇದನಾ ।
ಚೇತನೋ ವಿದ್ಯತೇ ಹ್ಯತ್ರ ಹೈತುಕಂ ಚ ಮನೋಗತಮ್ ॥ ೩ ॥

ವೇದನೆಯ ಕಾರಣವು ಚರ್ಚೆಯಿಂದ, ವಿಚಾರದಿಂದ ಹೇಗೆ ಸಿದ್ಧವಾಗುತ್ತದೋ ಅದರಂತೆ ಆತ್ಮನು ವಿಮರ್ಶೆಯಿಂದಲೇ, ಗುರು-ಶಿಷ್ಯರ ಚರ್ಚೆಯಿಂದಲೇ ಸಿದ್ಧನಾಗುತ್ತಾನೆ. ಅವನ ಮನಸ್ಸಿನಲ್ಲಿರುವ ಪುಣ್ಯ-ಪಾಪಾದಿ ಕಾರಣಗಳು ಚೇತನನಿದ್ದಾನೆ ಎನ್ನಲು ಪ್ರಮಾಣವಾಗುತ್ತವೆ.

ಆಗಮಾದೇವ ಸಿದ್ಧೋಽಸೌ ಸ್ವತಃಸಿದ್ಧಾ ಇತಿ ಶ್ರುತಿಃ ।
ವರ್ತತೇ ಪೃಥಗನ್ಯೋನ್ಯಂ ನ ಹ್ಯಪಃಶ್ರಿತ್ಯ ಕರ್ಮಸು ॥ ೪ ॥

ವೇದಗಳಿಂದಲೇ ಭಗವಂತನು ಸಿದ್ಧನಾಗುತ್ತಾನೆ. ಸ್ವತಃಸಿದ್ಧನಾದವನು ಭಗವಂತನು ಎಂದು ಶ್ರುತಿ ಇದೆ. ಜೀವ-ಪರಮಾತ್ಮರು ಭಿನ್ನರಾಗಿದ್ದರೂ ಜೀವನು ಪರಮಾತ್ಮನನ್ನು ಆಶ್ರಯಿಸಿದ್ದಾನೆ. ಅನ್ಯೋನ್ಯ ಸಂಬಂಧ ಇವರಿಗಿದೆ. ಕರ್ಮಗಳಲ್ಲಿ ಒಬ್ಬನ ವ್ಯಾಪಾರವೇ ನಡೆಯುವುದಿಲ್ಲ. ಭಗವತ್ಪ್ರೇರಣೆಯಿಂದಲೇ ಜೀವನು ವರ್ತಿಸುತ್ತಾನೆ.

ಚೇತನೋ ಹ್ಯಂಶವಸ್ತತ್ರ ಸ್ವಮೂರ್ತಂ ಧಾರಯಂತ್ಯತಃ ।
ಸ್ವಭಾವಂ ಪೌರುಷಂ ಕರ್ಮ ಹ್ಯಾತ್ಮಾನಂ ತಮುಪಾಶ್ರಿತಾಃ ।
ತಮಾಶ್ರಿತ್ಯ ಪ್ರವರ್ತಂತೇ ದೇಹಿನೋ ದೇಹಬಂಧನಾಃ ॥ ೫ ॥

ಚೇತನನ ಅಂಶಗಳೇ ಕ್ರಿಯೆಗಳನ್ನು ಧರಿಸಿರುತ್ತವೆ. ಪುರುಷನಿಂದ ನಡೆಯುವ ಕರ್ಮಗಳು ಸ್ವಭಾವವನ್ನನುಸರಿಸಿರುತ್ತವೆ. ಪರಮಾತ್ಮನನ್ನು ಆಶ್ರಯಿಸಿರುವ ಜೀವರು ಪರಮಾತ್ಮನನ್ನು ಆಶ್ರಯಿಸಿಕೊಂಡೇ ದೇಹಬಂಧನಾದಿಗಳಲ್ಲಿ ಪ್ರವೃತ್ತಿಯನ್ನು ಹೊಂದುತ್ತಾರೆ.

ಗುಣಜ್ಞಾನಮಭಿಜ್ಞಾನಂ ತಸ್ಯ ಲಿಂಗಾನಿ ಶಬ್ದವತ್ ।
ಪೃಥಿವ್ಯಾದಿಷು ಭೂತೇಷು ತತ್ತದಾಹುರ್ನಿದರ್ಶನಮ್ ॥ ೬ ॥

ಪರಮಾತ್ಮನ ಪ್ರಕಾಶಾದಿ ಗುಣಜ್ಞಾನವು 'ಸೋಽಯಂ' ಎಂಬ ಪ್ರತ್ಯಭಿಜ್ಞಾ ಪ್ರತ್ಯಕ್ಷವು ವೇದದಂತೆ ಜ್ಞಾಪಕಗಳು. ಪೃಥಿವ್ಯಾದಿ ಪಂಚಭೂತಗಳಲ್ಲಿ ಪ್ರತ್ಯಭಿಜ್ಞಾ ಪ್ರತ್ಯಕ್ಷಗಳೇ ಭಗವಂತನ ಅಸ್ತಿತ್ವಕ್ಕೆ ಜ್ಞಾಪಕಗಳಾಗಿವೆ.

ಆತ್ಮಾऽಸೌ ವರ್ತತೇ ಭಿನ್ನಸ್ತತ್ರ ತತ್ರ ಸಮನ್ವಿತಃ ।
ಪರಮಾತ್ಮಾ ತಥೈವೈಕೋ ದೇಹೇऽಸ್ಮಿನ್ನಿತಿ ವೈ ಶ್ರುತಿಃ ॥ ೭ ॥

ಎಲ್ಲಕಡೆಯೂ ಅಂತರ್ಯಾಮಿಯಾಗಿರುವ ಪರಮಾತ್ಮನು ಆಯಾ ವಸ್ತುಗಳಿಂದ ಭಿನ್ನನೇ ಆಗಿದ್ದಾನೆ. ಪರಮಾತ್ಮನು, ಜೀವಾತ್ಮನು ಈ ದೇಹದಲ್ಲಿದ್ದಾರೆ ಎಂದು ಹೇಳಲು 'ದ್ವಾಸುಪರ್ಣಾ' ಶ್ರುತಿಯು ಪ್ರಮಾಣವಾಗಿದೆ.

ಆಕಾಶಂ ವಾಯುರೂಷ್ಮಾ ಚ ಸ್ನೇಹೇ ಯಚ್ಚಾಪಿ ಪಾರ್ಥಿವಮ್ ।
ಯಥಾ ತ್ರಿಧಾ ಪ್ರವರ್ತಂತೇ ತಥಾऽಸೌ ಪುರುಷಃ ಸ್ಮೃತಃ ॥ ೮ ॥

ಆಕಾಶ, ವಾಯು, ತೇಜಸ್ಸು, ಜಲ, ಪೃಥಿವಿ - ಈ ಪಂಚಭೂತಗಳು ಜಲೀಯ, ತೈಜಸ, ಪಾರ್ಥಿವ ಶರೀರಗಳಲ್ಲಿ ಮೂರುಪ್ರಕಾರಗಳಿಂದ ಹೇಗೆ ಪ್ರವೃತ್ತಿಯನ್ನು ಹೊಂದುತ್ತವೋ, ಪಾರ್ಥಿವ ಶರೀರದಲ್ಲಿ ಪೃಥಿವಿಯು ಅಧಿಕವಾಗಿರುತ್ತದೆ. ಜಲೀಯ ಶರೀರದಲ್ಲಿ ನೀರಿನ ಅಂಶವು ಅಧಿಕವಾಗಿರುತ್ತದೆ. ತೈಜಸ ಶರೀರದಲ್ಲಿ ತೇಜಸ್ಸಿನ ಅಂಶವು ಅಧಿಕವಾಗಿರುತ್ತದೆ. ಆಯಾ ಶರೀರಗಳಿಗೆ ಪಂಚಭೂತಗಳು ಹೇಗೆ ಪ್ರೇರಕವಾಗಿದ್ದಾವೋ ಹಾಗೆ ಈ ಜೀವರಿಗೆ ಭಗವಂತನು ಪ್ರೇರಕನಾಗಿರುತ್ತಾನೆ.

ಪಯಸ್ಯಂತರ್ಹಿತಂ ಯದ್ವತ್ತದ್ವದ್ ವ್ಯಾಪ್ತಂ ಮಹಾತ್ಮಕಮ್ ।
ಪೂರ್ವಂ ನೈಶ್ವರ್ಯಯೋಗೇನ ತಸ್ಮಾದೇತನ್ನ ಶೇಷವಾನ್ ॥ ೯ ॥

ಹಾಲಿನಲ್ಲಿ ತುಪ್ಪವು ಹೇಗೆ ಸೇರಿಕೊಂಡಿದೆಯೋ, ವ್ಯಾಪ್ತವಾಗಿದೆಯೋ ಹಾಗೆ ಮಹಾತ್ಮಕವಾದ ಭಗವತತ್ತ್ವವು ಎಲ್ಲೆಡೆಯೂ ವ್ಯಾಪ್ತವಾಗಿದೆ. ಇವನನ್ನು ತಿಳಿಯಲು ಐಶ್ವರ್ಯಶಕ್ತಿಯು ಬೇಕು. ಐಶ್ವರ್ಯಶಕ್ತಿಯು ಇಲ್ಲದಿದ್ದಾಗ ಇವನನ್ನು ತಿಳಿಯಲಾಗದು.

ಶಬ್ದಃ ಕಾಲಃ ಕ್ರಿಯಾ ದೇಹೋ ಮಮೈಕಸ್ಯೈವ ಕಲ್ಪನಾ ।
ಸ್ವಭಾವಂ ತನ್ಮಯಂ ತ್ವೇತತ್ ಮಾಯಾರೂಪಂ ತು ಭೇದವತ್ ॥ ೧೦ ॥

ಶಬ್ದವು, ಕಾಲವು, ಕ್ರಿಯೆಯು, ದೇಹವು ಎಲ್ಲವೂ ನನ್ನಿಂದ ಒಂದೇ ಆಗಿದೆ ಎನ್ನುವುದು ಭ್ರಾಂತಿಯಾಗಿದೆ. ನಾನಾ ಸ್ವಭಾವಗಳಾಗಲೀ, ಪ್ರಕೃತಿರೂಪವಾದ ಜಗತ್ತಾಗಲೀ ನಾರಾಯಣನಿಂದಲೇ ವ್ಯಾಪ್ತವಾಗಿದೆ. ನಾರಾಯಣನಿಂದ ಅತ್ಯಂತ ಭಿನ್ನವಾಗಿದೆ. ಶಬ್ದ-ಕಾಲಾದಿಗಳಲ್ಲಿ ಪರಸ್ಪರ ಭೇದವಿದೆ.

ನಾನಾಖ್ಯಂ ಪರಮಂ ಶುದ್ಧಂ ನಿರ್ವಿಕಲ್ಪಂ ಪರಾತ್ಮಕಮ್ ।
ಲಿಂಗಾದಿ ದೇವಮಧ್ಯಾಸ್ತೇ ಜ್ಞಾನಂ ದೇವಸ್ಯ ತತ್ತಥಾ ॥ ೧೧ ॥

ಪರಮಾತ್ಮನೆಂಬ ವಸ್ತುವು ಭೇದದಿಂದ ಕೂಡಿದೆ. ಅರ್ಥಾತ್ ಜಗತ್ತಿಗಿಂತ ವಿಲಕ್ಷಣವಾಗಿದೆ. ಸರ್ವೋತ್ತಮವಾಗಿದೆ. ಪ್ರಾಕೃತಿಕ ಗುಣರಹಿತವಾದುದರಿಂದ ಶುದ್ಧವಾಗಿದೆ. ಸಂಶಯರಹಿತವಾದುದರಿಂದ ನಿರ್ವಿಕಲ್ಪ ಎನಿಸಿದೆ. ಸರ್ವೋತ್ತಮ-ವಾದುದರಿಂದ ಪರಾತ್ಮಕ ಎನಿಸಿದೆ. ಈ ಪರಬ್ರಹ್ಮನ ಜ್ಞಾನವನ್ನು ಅನುಮಾನ, ಶ್ರುತ್ಯಾದಿಗಳಿಂದ ಹೊಂದಬೇಕಾಗಿದೆ. ಪ್ರತ್ಯಕ್ಷದಿಂದ ತಿಳಿಯಲಾಗದು.

ಚಿನ್ಮಯೋಽಯಂ ಹಿ ನಾದಾಖ್ಯಃ ಶಬ್ದಶ್ಚಾಸೌ ಮನೋ ಮಹಾನ್ ।
ಗತಿಮಾನುತ ಸಂಧತ್ತೇ ವರ್ಣಮತ್ತತ್ಪದಾನ್ವಿತಮ್ ॥ ೧೨ ॥

ಈ ಭಗವಂತನು ಚಿನ್ಮಯನಾಗಿದ್ದಾನೆ. ಪ್ರಣವವೆಂಬ ನಾದದಿಂದ ಉಪಾಸ್ಯನಾಗಿದ್ದಾನೆ. ವೇದಪ್ರತಿಪಾದ್ಯನಾದುದರಿಂದ ಶಬ್ದನೆನಿಸಿದ್ದಾನೆ. ಮನಸ್ಸಿನಲ್ಲಿ ಚಿಂತಿಸಲು ಅರ್ಹನಾಗಿರುವುದರಿಂದ ಮನ ಎನಿಸಿದ್ದಾನೆ, ಮಹಾನ್ ಎನಿಸಿದ್ದಾನೆ. ಊರ್ಧ್ವಗತಿಯುಳ್ಳಂತಹ ಸಾಧಕನು ಕೈಕಾಲುಗಳಿಂದ ಕೂಡಿರುವಂತಹ ಭಗವಂತನ ಸುಂದರರೂಪವನ್ನು ಅನುಸಂಧಾನ ಮಾಡುತ್ತಾನೆ.

ಕಾಯೋ ನಾಸ್ತಿ ಚ ತೇಷಾಂ ವೈ ಅವಕಾಶಸ್ತಥಾ ಪರಮ್ ।
ಏತೇನೋಢಾ ಇತಿ ಖ್ಯಾತಾಃ ಸರ್ವೇ ತೇ ಧರ್ಮದೂಷಕಾಃ ॥ ೧೩ ॥

ಭಗವಂತನಿಗೆ ದೇಹವು ಇರುವುದಿಲ್ಲ. ಇತ್ಯಾದಿಯಾಗಿ ಪ್ರಮಾಣವಿಲ್ಲದೆ ಮಾತನಾಡುವವರಿಗೆ ಉತ್ತಮವಾದ ಅವಕಾಶವು ಇಲ್ಲಿ ಇರುತ್ತದೆ. ಇಂತಹ ವಿಚಾರಗಳಿಂದಲೇ ಇವರು ಪ್ರಸಿದ್ಧರು. ಇವರೆಲ್ಲರೂ ಧರ್ಮದೂಷಕರು.

ಅನುಬಂಧಾನ್ನ ವಿಜ್ಞಾನಂ ಜ್ಞಾನತೋ ಧ್ರುವಮವ್ಯಯಮ್ ।
ನಾನಾಭೇದವಿಕಲ್ಪೇನ ಯೇಷಾಮಾತ್ಮಾ ಸ್ಮೃತಃ ಸದಾ ॥ ೧೪ ॥

ಪ್ರಕೃತೇರಪರಸ್ತೇಷಾಂ ಬಹವೋ ಹ್ಯಾತ್ಮವಾದಿನಃ ॥ ೧೫ ॥

ದೇಹದಲ್ಲಿಯೇ ಸ್ನೇಹವಿರುವುದರಿಂದ ನಮ್ಮ ಜ್ಞಾನದಿಂದ ವಿಶಿಷ್ಟ ಜ್ಞಾನವು ಉಂಟಾಗುವುದಿಲ್ಲ. ಆದ್ದರಿಂದಲೇ ನಾಶರಹಿತವಾದ ಮೋಕ್ಷವು ಉಂಟಾಗುವುದಿಲ್ಲ ಎಂದು ಹೇಳುವವರ ಮತದಲ್ಲಿಯೂ ಪ್ರಕೃತಿಗಿಂತ ಉತ್ತಮನಾದ ಜೀವನು ಇದ್ದಾನೆ ಎಂದು ಹೇಳಲೇಬೇಕು. ಆತ್ಮವಾದಿಗಳು ಬಹಳ ಮಂದಿ ಇರುವುದರಿಂದ ಇದನ್ನು ಅಂಗೀಕರಿಸಲೇಬೇಕು. ಅನೇಕ ವಿಧವಾದ ವಿಕಲ್ಪಗಳಿಂದ ಆತ್ಮ ಇದ್ದಾನೆಂದ ಹೇಳಿದ್ದಾರೆ. ಆತ್ಮನನ್ನೇ ಅಂಗೀಕರಿಸದೆ ಆತ್ಮನಲ್ಲಿ ಅಜ್ಞಾನವಿದೆ ಎಂದು ಹೇಳುವುದು ವಿರುದ್ಧವಾಗುತ್ತದೆ. ಆತ್ಮನನ್ನು ಅಂಗೀಕರಿಸಿ ಪರಮಾತ್ಮನನ್ನು ಅಂಗೀಕರಿಸದಿದ್ದಲ್ಲಿ ಅವರು ವೇದಬಾಹ್ಯರೆನಿಸಿ ನಿಂದಿತರಾಗುತ್ತಾರೆ.

ಏಕಾನೇಕಾತ್ಮಕಂ ತೇಷಾಂ ಪ್ರತಿಷೇಧೋ ಹಿ ಭೇದನುತ್ ।
ತಸ್ಮಾದ್ವೇದಸ್ಯ ಹೃದಯಂ ನ ದ್ವೈಧ್ಯಮಿತಿ ವಿದ್ಧಿ ತತ್ ॥ ೧೬ ॥

ಭೇದವನ್ನು ಸಾಧನೆ ಮಾಡುವ ವಾದಿಯು ಜೀವನು ಒಬ್ಬನೋ ಇಬ್ಬರೋ ಎಂದು ಚರ್ಚಿಸಿದ್ದಾನೆ ವಿನಾ ಚಾರ್ವಾಕ ಮತಕ್ಕೆ ಸಂಬಂಧಿಸಿದಂತೆ ಅಥವಾ ವೇದಬಾಹ್ಯರ ಮತಕ್ಕೆ ಸಂಬಂಧಿಸಿದಂತೆ ಚರ್ಚಿಸಿರುವುದಿಲ್ಲ. ವೇದದ ಹೃದಯವು ಜೀವರ ಏಕತ್ವ, ಬಹುತ್ವಗಳ ಚರ್ಚೆಯ ಬಗ್ಗೆ ವಿನಾ ಚಾರ್ವಾಕಾದಿ ಮತಗಳನ್ನು ವೇದವು ಅಂಗೀಕರಿಸಿರುವುದೇ ಇಲ್ಲ.

ವೇದಾದೃಷ್ಟೇರಯಂ ಲೋಕಃ ಸರ್ವಾರ್ಥೇಷು ಪ್ರವರ್ತತೇ ।
ತಸ್ಮಾಚ್ಚ ಸ್ಮೃತಯೋ ಜಾತಾಃ ಸೇತಿಹಾಸಾಃ ಪೃಥಗ್ವಿಧಾಃ ॥ ೧೭ ॥

ಸಮಸ್ತ ಪದಾರ್ಥಗಳಲ್ಲಿಯೂ ಈ ಜಗತ್ತು ವೇದ-ಅದೃಷ್ಟಗಳನ್ನು ಅವಲಂಬಿಸಿಕೊಂಡು ಪ್ರವರ್ತಿಸುತ್ತಿದೆ. ಆ ವೇದಗಳಿಂದಲೇ ಸ್ಮೃತಿಗಳು, ಬೇರೆ ಬೇರೆ ವಿಧವಾದ ಇತಿಹಾಸಗಳು ಉತ್ಪನ್ನವಾಗಿವೆ.

ನ ಯನ್ನ ಸಾಧ್ಯಂ ತದ್ಬ್ರಹ್ಮ ನಾದಿಮಧ್ಯಂ ನ ಚಾಂತವತ್ ।
ಇಂದ್ರಿಯಾಣಿ ಸಭೂತಾನಿ ಪರಾ ಚ ಪ್ರಕೃತಿರ್ಮನಃ ॥ ೧೮ ॥

ಆತ್ಮಾ ಚ ಪರಮಃ ಶುದ್ಧಃ ಪ್ರೋಕ್ತೋಽಸೌ ಪರಮಃ ಪುಮಾನ್ ॥ ೧೯॥

ಪರಬ್ರಹ್ಮವಸ್ತುವನ್ನು ಪ್ರತ್ಯಕ್ಷ, ಅನುಮಾನ, ಆಗಮಗಳಿಂದ 'ಇದಮಿತ್ಥಂ' ಎಂದು ನಿರ್ಣಯಿಸಿ ಹೇಳಲಾಗದು. ಆದಿ, ಮಧ್ಯ, ಅಂತಗಳು ಇಲ್ಲದೇ ಇರುವ ಪದಾರ್ಥವು. ಇಂದ್ರಿಯಗಳು, ಪಂಚಭೂತಗಳು, ಪರ ಎನಿಸಿದ ಪ್ರಕೃತಿ, ಮನಸ್ಸು, ಆತ್ಮ ಅರ್ಥಾತ್ ಜೀವ ಇವರೆಲ್ಲರಿಗಿಂತಲೂ, ಜಡಾಜಡಪ್ರಪಂಚಕ್ಕಿಂತಲೂ ಭಗವಂತನು ಉತ್ತಮನಾಗಿದ್ದಾನೆ, ಶುದ್ಧನೆನಿಸಿದ್ದಾನೆ.

ಉತ್ಪತ್ತಿಲಕ್ಷಣಂ ಚೇದಂ ವಿಪರೀತಮಥೋಭಯೋಃ ।
ಯೋ ವೇತ್ತಿ ಪ್ರಕೃತಿಂ ನಿತ್ಯಂ ತಥಾ ಚೈವಾತ್ಮನಸ್ತು ತಾಮ್ ।
ಪ್ರದಹತ್ಯೇಷ ಕರ್ಮಾಖ್ಯಂ ದಾವೋದ್ಭೂತ ಇವಾನಲಃ ॥ ೨೦ ॥

ಜಡ-ಜೀವರ ಅಥವಾ ಜಗತ್ತು-ಬ್ರಹ್ಮನ ಉತ್ಪತ್ತಿ ಲಕ್ಷಣಗಳನ್ನು ಚೆನ್ನಾಗಿ ಅರಿತವರು, ಅನುತ್ಪತ್ತಿ ಲಕ್ಷಣಗಳನ್ನು ಯಾರು ಅರಿತಿರುತ್ತಾರೋ, ಜೀವಾತ್ಮ-ಪರಮಾತ್ಮ ಪ್ರಕೃತಿಗಳ ನಿತ್ಯತ್ವವನ್ನು ಯಾರು ಅರಿತಿರುತ್ತಾರೋ ಅವರು ಕರ್ಮಬಂಧನಗಳನ್ನು ದಹಿಸುತ್ತಾರೆ. ಅರಣ್ಯದಲ್ಲಿ ಉತ್ಪನ್ನವಾದ ಕಾಡ್ಗಿಚ್ಚು ಅರಣ್ಯವನ್ನೇ ದಹಿಸುವಂತೆ ಈ ಜ್ಞಾನವು ಸಂಸಾರದ ಕರ್ಮಬಂಧನವನ್ನೇ ದಹಿಸುತ್ತದೆ.

ಚಿನ್ಮಾತ್ರಪರಮಃ ಶುದ್ಧಃ ಸರ್ವಾಕೃತಿಷು ವರ್ತತೇ ॥ ೨೧ ॥

ಜ್ಞಾನಾನಂದಾತ್ಮಕನಾದ, ಸರ್ವೋತ್ತಮನಾದ, ಶುದ್ಧನಾದ ಭಗವಂತನು ಪ್ರತಿಯೊಂದು ಪದಾರ್ಥಗಳ ಒಳಗಡೆಯೂ ಅಂತರ್ಯಾಮಿಯಾಗಿ ಇದ್ದಾನೆ.

ಆಕಾಶಕಲ್ಪಂ ವಿಮಲಂ ನಾನಾಶಕ್ತಿಸಮನ್ವಿತಮ್ ।
ತಾಪನಂ ಸರ್ವಭೂತಾನಾಂ ಜ್ಯೋತಿಷಾಂ ಮಧ್ಯಮಸ್ಥಿತಿಮ್ ।
ದುಃಖಮಾಸ್ತೇ ಸ ನಿರ್ದುಃಖಃ ತದ್ವಿದ್ವಾನ್ನ ಚ ಲಿಪ್ಯತಿ ॥ ೨೨ ॥

ಆಕಾಶದಂತೆ ಅಸಂಗನಾಗಿ, ನಿರ್ಮಲನಾಗಿ, ನಾನಾಶಕ್ತಿಗಳಿಂದ ಕೂಡಿದವನಾಗಿ, ಸಮಸ್ತ ಜೀವರಿಗೂ ತಾಪದಾಯಕನೂ, ಜ್ಯೋತಿರ್ಮಂಡಲದ ಮಧ್ಯದಲ್ಲಿ

ಇರುವವನಾದ ಇಂತಹ ಭಗವಂತನು ದುಃಖಭರಿತವಾದ ಜೀವರ ದೇಹದಲ್ಲಿ ಸಾಕ್ಷಿಯಾಗಿದ್ದಾನೆ ಎಂದು ತಿಳಿಯುವವನು ಕರ್ಮಗಳಿಂದ ಲಿಪ್ತನಾಗುವುದಿಲ್ಲ.

ಅಸಾವಶ್ನಾತಿ ಯದ್ವತ್ತದ್ ಭ್ರಮರೋಽಶ್ನಾತಿ ಯನ್ಮಧು ।
ಏವಮೇಷ ಮಹಾನಾತ್ಮಾ ನಾತ್ಮಾ ತಮವಬುಧ್ಯತೇ ॥ ೨೩ ॥

ದುಂಬಿಯು ಹೂಗಳಲ್ಲಿ ತುಂಬಿದ ಸಾರಭೂತವಾದ ಮಕರಂದವನ್ನು ಮಾತ್ರ ಸ್ವೀಕರಿಸುತ್ತದೆ. ಅದರಂತೆ ಸಮಸ್ತ ಜೀವರ ಅಂತರ್ಯಾಮಿಯಾದ ಭಗವಂತನು ಶುಭರಸವನ್ನು ಮಾತ್ರ ಸ್ವೀಕರಿಸುತ್ತಾನೆ. ಇಂತಹ ಪರಮಾತ್ಮನು ಸರ್ವೋತ್ತಮನಾಗಿದ್ದಾನೆ. ಇವನನ್ನು ಜೀವಾತ್ಮನು ತನ್ನ ಹೃದಯಗುಹೆಯಲ್ಲಿದ್ದಾನೆ ಎಂದು ತಿಳಿಯುವುದಿಲ್ಲ.

ಏವಂಭೂತಸ್ತ್ವಮಿತ್ಯತ್ರ ಸ್ವಾಧಿತೋ ಬುದ್ಧ್ಯತೇ ಪರಮ್ ।
ಬುಧಸ್ಯ ಬೋಧನಂ ತತ್ರ ಕ್ರಿಯತೇ ಸದ್ಭಿರಿತ್ಯುತ ।
ನಬುಧಸ್ಯೇತಿ ವೈ ಕಶ್ಚಿನ್ನ ತಥಾವಚ್ಛೃಣುಷ್ವ ಮೇ ॥ ೨೪ ॥

ಈ ರೀತಿಯಾದ ನೀನು ಜೀವ-ಪರಮಾತ್ಮರ ನಡುವೆ ಗುರುಮುಖದಿಂದ ಅಧ್ಯಯನ ಮಾಡಿದಾಗ ಸರ್ವೋತ್ತಮನಾದ ಭಗವಂತನು ತಿಳಿಯುತ್ತಾನೆ. ಮಿಥ್ಯಾಜ್ಞಾನಿಯಾದವನು, ಭಗವಂತನ ಸ್ವರೂಪವು ಹೇಗಿದೆಯೋ ಅದರಂತೆ ನಿನಗೆ ತಿಳಿಸುತ್ತೇನೆ. ಆ ಭಗವಂತನನ್ನು ತಿಳಿದುಕೊ ಎಂದು ಯಾರಿಗೂ ಬೋಧಿಸುವುದಿಲ್ಲ.

ಶೋಕಮಸ್ಯ ನ ಗತ್ವಾ ತೇ ಶಾಸ್ತ್ರಾಣಾಂ ಶಾಸ್ತ್ರದರ್ಶಿವಃ ।
ಲೋಕಂ ನಿಘ್ನಂತಿ ಸಂಭಿನ್ನಾ ಜ್ಞಾತಿನೋಽತ್ರ ವದಂತ್ಯುತ ॥ ೨೫ ॥

ಶಾಸ್ತ್ರಗಳ ಈ ಮರ್ಮವನ್ನು ಅರಿಯದೆ ಶಾಸ್ತ್ರಕಳ್ಳರೆನಿಸಿದ ಚಾರ್ವಾಕಾದಿಗಳು ತಪ್ಪಾದ ತಿಳಿವಳಿಕೆಯಿಂದ ಲೋಕವನ್ನೇ ಕೊಲ್ಲುತ್ತಾರೆ.

ಏವಂ ತಸ್ಯ ವಿಭೋ ಕೃತ್ಯಂ ಧಾತುರಸ್ಯ ಮಹಾತ್ಮನಃ ।
ಕ್ಷಮಂತಿ ತೇ ಮಹಾತ್ಮಾನಂ ಸರ್ವದ್ವಂದ್ವವಿವರ್ಜಿತಾಃ ॥ ೨೬ ॥

ಎಲೈ ಜನಕರಾಜನೇ, ದುರ್ಜನರು ಇರುವಂತೆ ತತ್ತ್ವವನ್ನು ಬೋಧಿಸದಿದ್ದರೂ ವಿರುದ್ಧವಾದ ತತ್ತ್ವಗಳನ್ನು ಹೇಳಿದರೂ ಕೂಡ ದುರ್ಜನರ ಈ ಕ್ರಿಯೆಗಳನ್ನು ದ್ವಂದ್ವಗಳನ್ನು ಬಿಟ್ಟಿರುವ ನಾರಾಯಣನ ಭಕ್ತರು ಕ್ಷಮಿಸುತ್ತಾರೆ.

ಅತೋಽನ್ಯಥಾ ಮಹಾತ್ಮಾನಮನ್ಯಥಾ ಪ್ರತಿಪದ್ಯತೇ ।
ಕಿಂ ತೇನ ನ ಕೃತಂ ಪಾಪಂ ಚೋರೇಣಾತ್ಮಾಪಹಾರಿಣಾ ॥ ೨೭ ॥

ಈ ಕಾರಣದಿಂದ ಜಗತ್ತಿಗಿಂತ ವಿಲಕ್ಷಣನಾಗಿ ಸರ್ವೋತ್ತಮನಾಗಿ ಇರುವ ನಾರಾಯಣನನ್ನು ತಪ್ಪಾಗಿ ಬೋಧಿಸುವ ಇಂತಹ ದುರಾತ್ಮರಿಂದ ಭಗವಂತನ ಗುಣಗಳನ್ನೇ ಕಳ್ಳತನ ಮಾಡುವ ಕಳ್ಳರಿಂದ ಯಾವ ಪಾಪಕಾರ್ಯವು ಮಾಡಲ್ಪಟ್ಟಿಲ್ಲ? ಎಲ್ಲ ವಿಧವಾದ ಅಪರಾಧಗಳೂ ಅವರಿಂದ ಆಚರಿಸಲ್ಪಟ್ಟಂತಾಯಿತು.

ತಸ್ಯ ಸಂಯೋಗಯೋಗೇನ ಶುಚಿರಪ್ಯಶುಚಿರ್ಭವೇತ್ ।
ಅಶುಚಿಶ್ಚ ಶುಚಿಶ್ಚಾಪಿ ಜ್ಞಾನಜ್ಞೇಯಾದಯೋ ಯಥಾ ॥ ೨೮ ॥

ಅಶುದ್ಧನಿಗೆ ಜ್ಞಾನ-ಜ್ಞೇಯಾದಿಗಳ ಲಾಭವಾದಲ್ಲಿ ಜ್ಞಾನ-ಜ್ಞೇಯಗಳೂ ಅಶುಚಿಯಾಗುತ್ತವೆ. ಶುದ್ಧನಿಗೆ ಜ್ಞಾನ-ಜ್ಞೇಯಾದಿಗಳು ಲಾಭವಾದರೆ ಜ್ಞಾನ-ಜ್ಞೇಯಗಳೂ ಶುಚಿಯಾಗುತ್ತವೆ. ಇದರಂತೆ ಅಶುದ್ಧನು ಆಚರಿಸಿದ ಕರ್ಮ ಅಶುದ್ಧವೇ ಆಗುತ್ತದೆ. ಶುದ್ಧನು ಆಚರಿಸಿದ ಕರ್ಮ ಶುದ್ಧವೇ ಆಗುತ್ತದೆ. ಇದನ್ನೇ ಮುಂದೆ ಸ್ಪಷ್ಟಪಡಿಸುತ್ತಾರೆ.

ದೃಶ್ಯಂ ನ ಚೈವ ದೃಷ್ಟಂ ಸ್ಯಾದ್ ದೃಷ್ಟಂ ದೃಶ್ಯಂ ತು ನೈವ ಚ ॥ ೨೯ ॥

ಅಶುಚಿಯಾದ ಪುರುಷನಿಗೆ ದರ್ಶನಯೋಗ್ಯವಾದ ಶುದ್ಧಬ್ರಹ್ಮವಸ್ತುವು ಎಂದಿಗೂ ಗೋಚರವಾಗುವುದಿಲ್ಲ ಹೊರತು ಅಶುದ್ಧಿ ಎನಿಸಿದ ದೇಹ, ಗೇಹ, ಕಳತ್ರಾದಿಗಳೇ ಕಾಣಿಸುತ್ತವೆ. ಶುದ್ಧನಾದ ಪುರುಷನಿಗೆ ಅಶುದ್ಧವಾದ ದೇಹ, ಗೇಹ, ಕಳತ್ರಾದಿಗಳು ಎಂದಿಗೂ ದರ್ಶನಯೋಗ್ಯವೆನಿಸುವುದಿಲ್ಲ. ಶುದ್ಧಬ್ರಹ್ಮನೇ ದರ್ಶನ ಯೋಗ್ಯನೆನಿಸುತ್ತಾನೆ.

ಅತೀತತ್ರಿತಯಃ ಸಿದ್ಧೋ ಜ್ಞಾನರೂಪೇಣ ಸರ್ವದಾ ।
ಏವಂ ನ ಪ್ರತಿಪದ್ಯಂತೇ ರಾಗಮೋಹಮದಾನ್ವಿತಾಃ ॥ ೩೦ ॥

ಮೂರುಗುಣಗಳಿಂದ ಅತೀತನಾದ ಬ್ರಹ್ಮಜ್ಞಾನಿಯೂ ಯಾವಾಗಲೂ ಬ್ರಹ್ಮಜ್ಞಾನದಿಂದಲೇ ಪ್ರವೃತ್ತಿಯನ್ನು ಮಾಡುತ್ತಿರುತ್ತಾನೆ. ಆದರೆ ರಾಗ-ಮೋಹ-ಮದಗಳಿಂದ ಕೂಡಿದ ವ್ಯಕ್ತಿಯು ಬ್ರಹ್ಮಜ್ಞಾನವನ್ನು ಎಂದಿಗೂ ಹೊಂದುವುದಿಲ್ಲ.

ವೇದಬಾಹ್ಯಾ ದುರಾತ್ಮಾನಃ ಸಂಸಾರೇ ದುಃಖಭಾಗಿನಃ ।
ಆಗಮಾನುಗತಜ್ಞಾನಾ ಬುದ್ಧಿಯುಕ್ತಾಃ ಭವಂತಿ ತೇ ॥ ೩೧ ॥

ವೇದಬಾಹ್ಯರಾದ ದುರಾತ್ಮರು ನಿತ್ಯವೂ ಸಂಸಾರದಲ್ಲಿ ದುಃಖಭಾಗಿಗಳಾಗಿರುತ್ತಾರೆ. ಆದರೆ ಜ್ಞಾನಿಗಳು ಆಗಮಾನುಗತವಾದ ಜ್ಞಾನವುಳ್ಳವರಾಗಿ ಭಗವಂತನಲ್ಲೇ ಬುದ್ಧಿಯನ್ನು ಹೊಂದಿದವರಾಗಿ ಇರುತ್ತಾರೆ.

ಬುದ್ಧ್ಯಾ ಭವತಿ ಬುದ್ಧ್ಯಾತ್ತಂ ಯದ್ಬುದ್ಧಂ ಚಾತ್ಮರೂಪವತ್ ।
ತಮಸ್ಯಂಧೇ ನಸಂದೇಹಾತ್ ಪರಂ ಯಾಂತಿ ನ ಸಂಶಯಃ ॥ ೩೨ ॥

ಪರಮಾತ್ಮನ ರೂಪದಂತಿರುವ ಶುದ್ಧಜ್ಞಾನಾತ್ಮಕವಾದ ಯಾವ ರೂಪವಿದೆಯೋ ಅದೇ ರೂಪದಿಂದ ಆ ಪರಮಾತ್ಮನನ್ನು ಜೀವರ ಅಂತರ್ಯಾಮಿಯಾಗಿದ್ದಾನೆಂದು ವಿವೇಕದ ಬುದ್ಧಿಯಿಂದ ತಿಳಿಯಬೇಕು. ಇದರಲ್ಲಿ ನಿಶ್ಚಯಜ್ಞಾನವು ಇರಬೇಕು. ಅವರು ಉತ್ತಮ ಪದವಿಯನ್ನು ಹೊಂದುತ್ತಾರೆ. ಯಾರು ವಿಪರೀತವಾಗಿ ಪರಮಾತ್ಮನ ಸ್ವರೂಪವನ್ನು ಜೀವರಲ್ಲೇ ಆರೋಪಿಸಿ ತಿಳಿಯುತ್ತಾರೋ ಅವರು ನಿಸ್ಸಂದೇಹವಾಗಿ ಅಂಧಂತಮಸ್ಸಿನಲ್ಲಿ ಬೀಳುತ್ತಾರೆ.

ನಿತ್ಯನೈಮಿತ್ತಿಕಾನ್ ಕೃತ್ವಾ ಪಾಪಹಾನಿಮವಾಪ್ಯ ಚ ।
ಶುದ್ಧಸತ್ವಾ ಮಹಾತ್ಮಾನೋ ಜ್ಞಾನನಿರ್ಧೂತಕಲ್ಮಷಾಃ ॥ ೩೩ ॥

ಅಸಕ್ತಾಃ ಪರಿವರ್ತಂತೇ ಸಂಸರಂತ್ಯಥ ವಾಯುವತ್ ।
ನ ಯುಜ್ಯಂತೇऽಥವಾ ಕ್ಲೇಶೈರಹಂಭಾವೋದ್ಭವೈಃ ಸಹ ॥ ೩೪ ॥

ಶುದ್ಧಸತ್ವರಾದ ಮಹಾತ್ಮರು ನಿತ್ಯನೈಮಿತ್ತಿಕ ಕರ್ಮಗಳನ್ನು ಆಚರಿಸುತ್ತಾ ಪಾಪಗಳನ್ನು ತೊಡೆದುಕೊಳ್ಳುತ್ತಾರೆ. ಭಗವದ್‌ಜ್ಞಾನದಿಂದ ಮನಸ್ಸಿನ ಕಷ್ಮಲಗಳನ್ನು ಪರಿಹರಿಸಿಕೊಳ್ಳುತ್ತಾರೆ. ವಾಯುವು ಅಸಂಗವಾಗಿ ಹೇಗೆ ಸಂಚರಿಸುತ್ತದೋ ಅದರಂತೆ ವಿಷಯಗಳ ಮಧ್ಯದಲ್ಲಿದ್ದರೂ ಅಸಂಗರಾಗಿ ಸಂಚರಿಸುತ್ತಾರೆ. ಅಹಂಕಾರ-ಮಮಕಾರಗಳಿಂದ ಉಂಟಾಗುವ ದುಃಖಗಳಿಗೆ ಈ ಸಾತ್ವಿಕಪುರುಷರು ಎಂದಿಗೂ ಈಡಾಗುವುದಿಲ್ಲ.

ಇತಸ್ತತಃ ಸಮಾಹೃತ್ಯ ಜ್ಞಾನಂ ನಿರ್ವರ್ಣಯಂತ್ಯುತ ।
ಜ್ಞಾನಾನ್ವಿತಸ್ತಮೋ ಹನ್ಯಾದರ್ಕವತ್ಸ ಮಹಾಮತಿಃ ॥ ೩೫ ॥

ಜ್ಞಾನಿಗಳು ಈಚೆ-ಆಚೆಯಲ್ಲಿ ಸಂಚರಿಸಿದರೂ ಆ ಭಗವದ್‌ಜ್ಞಾನವನ್ನೇ ಮನಸ್ಸಿನಲ್ಲಿ ತಂದುಕೊಂಡು ಸಾತ್ವಿಕರಲ್ಲಿ ಆ ಬ್ರಹ್ಮಜ್ಞಾನವನ್ನೇ ವರ್ಣಿಸಿ ಹೇಳುತ್ತಾರೆ. ಭಗವದ್ ಜ್ಞಾನದಿಂದ ಕೂಡಿದ ಅವರು ಮಹಾಮತಿಗಳಾಗಿ ಸೂರ್ಯನು ಕತ್ತಲೆಯನ್ನು ಕೊಲ್ಲುವಂತೆ ಅಜ್ಞಾನವನ್ನು ಪರಿಹರಿಸಿಕೊಳ್ಳುತ್ತಾರೆ.

ಏವಮಾತ್ಮಾನಮನ್ವೀಕ್ಷ್ಯ ನಾನಾದುಃಖಸಮನ್ವಿತಮ್ ।
ದೇಹಂ ಪಂಕಮಲೇ ಮಗ್ನಂ ನಿರ್ಮಲಂ ಪರಮಾರ್ಥತಃ ॥ ೩೬ ॥

ಈ ರೀತಿಯಾಗಿ ಜೀವಾತ್ಮನು ಸ್ವಯಂ ಜ್ಞಾನಾನಂದಗಳಿಂದ ಕೂಡಿದ್ದರೂ ಸಾಂಸಾರಿಕವಾದ ನಾನಾ ದುಃಖಗಳಿಂದ ಕ್ಲೇಶವನ್ನು ಹೊಂದುತ್ತಿದ್ದಾನೆ. ದೇಹವೆಂಬ ಕೆಸರಿನಲ್ಲಿ ಸಿಲುಕಿದ್ದಾನೆ. ವಾಸ್ತವಿಕವಾಗಿ ಜೀವಾತ್ಮನು ನಿರ್ಮಲನಾಗಿದ್ದಾನೆ.

ತಮೇವಂ ಸರ್ವದುಃಖಾತ್ತು ಮೋಚಯೇತ್ ಪರಮಾತ್ಮವಾನ್ ।
ಬ್ರಹ್ಮಚರ್ಯವ್ರತೋಪೇತಃ ಸರ್ವಸಂಗಬಹಿಷ್ಕೃತಃ ।
ಲಘ್ವಾಹಾರೋ ವಿಶುದ್ಧಾತ್ಮಾ ಪರಂ ನಿರ್ವಾಣಮೃಚ್ಛತಿ ॥ ೩೭ ॥

ಈ ರೀತಿ ಶುದ್ಧನಾದ ಚೇತನನು ಪರಮಾತ್ಮನ ಜ್ಞಾನವನ್ನು ಹೊಂದಿ, ಪರಮಾತ್ಮನ ಭಕ್ತನಾಗಿದ್ದು ಸಮಸ್ತ ದುಃಖಗಳನ್ನು ಪರಿಹರಿಸಿಕೊಳ್ಳಬೇಕು. ಬ್ರಹ್ಮಚರ್ಯ ವ್ರತನಿಷ್ಠನಾಗಿ ಸಮಸ್ತ ಸಂಗಗಳಿಂದಲೂ ದೂರವಿದ್ದು, ಅಲ್ಪಾಹಾರಿಯೂ, ಶುದ್ಧವಾದ ಅಂತಃಕರಣವುಳ್ಳವನೂ ಆಗಿ ಪರಬ್ರಹ್ಮನನ್ನು ಧ್ಯಾನಿಸುತ್ತಿದ್ದರೆ ಅವನು ಉತ್ತಮವಾದ ಶಾಂತಿಯನ್ನು ಹೊಂದುತ್ತಾನೆ.

ಇಂದ್ರಿಯಾಣಿ ಮನೋ ವಾಯುಃ ಶೋಣಿತಂ ಮಾಂಸಮಸ್ಥಿ ಚ ।
ಆನುಪೂರ್ವಾದ್ ವಿನಶ್ಯಂತಿ ಸ್ವಂ ಧಾತುಮುಪಯಾಂತಿ ಚ ॥ ೩೮ ॥

ಜೀವನಿಗೆ ಅಂಟಿದ ಬಾಹ್ಯೇಂದ್ರಿಯಗಳು, ವಾಯು, ರಕ್ತ, ಮಾಂಸ, ಅಸ್ಥಿ ಇವೆಲ್ಲವೂ ಕ್ರಮವಾಗಿ ಬ್ರಹ್ಮಜ್ಞಾನವನ್ನು ಹೊಂದಿದ ಬಳಿಕ ನಾಶ ಹೊಂದುತ್ತವೆ. ಎಲ್ಲವೂ ಆಕಾಶತತ್ತ್ವದಲ್ಲಿ ಸೇರಿಕೊಳ್ಳುತ್ತವೆ.

ಕಾರಣಾನುಗತಂ ಕಾರ್ಯಂ ಯದಿ ತಚ್ಚ ವಿನಶ್ಯತಿ ।
ಅಲಿಂಗಸ್ಯ ಕಥಂ ಲಿಂಗಂ ಯುಜ್ಯತೇ ತನ್ಮೃಷಾ ದೃಢಮ್ ॥ ೩೯ ॥

ಕಾರಣವನ್ನು ಅನುಸರಿಸಿ ಕಾರ್ಯವು ನಡೆಯುತ್ತದೆ. ಕಾರಣವೇ ನಾಶ ಹೊಂದಿದರೆ ಕಾರ್ಯವು ನಡೆಯದು. ಆದ್ದರಿಂದ ಜೀವಾತ್ಮನಿಗೆ ಲಿಂಗದೇಹದ ಕಾರಣದಿಂದ ಸ್ಥೂಲದೇಹದಲ್ಲಿ ಅವಸ್ಥಾನವು. ಸ್ಥೂಲದೇಹದ ಕಾರ್ಯವು ಲಿಂಗದೇಹವೇ ನಾಶವಾದ ಬಳಿಕ ನಿಂತುಹೋಗುತ್ತದೆ. ಜೀವನಿಗೆ ಅನಾದಿ ಕಾಲದಿಂದಲೂ ಲಿಂಗದೇಹದ ಸಂಬಂಧವು, ಇದ್ದರೂ ಅದು ಜೀವನ ಸ್ವರೂಪಕ್ಕೆ ಸಂಬಂಧಿಸಿದುದಲ್ಲ.

ನ ತ್ವೇವ ಹೇತವಃ ಸಂತಿ ಯೇ ಕೇಚಿನ್ಮೂರ್ತಿಸಂಸ್ಥಿತಾಃ ।
ಅಮರ್ತ್ಯಸ್ಯ ಚ ಮರ್ತ್ಯೇನ ಸಾಮಾನ್ಯಂ ನೋಪಪದ್ಯತೇ ॥ ೪೦ ॥

ಇದರಂತೆ ಈ ಸ್ಥೂಲಶರೀರದಲ್ಲಿರುವಂತಹ ಯಾವ ದುಃಖಕಾರಣಗಳಿದ್ದಾವೋ ಅವುಗಳು ಬ್ರಹ್ಮಜ್ಞಾನ ಪಡೆದ ಬಳಿಕ ದೂರವಾಗುತ್ತವೆ. ಮರಣಶೀಲನಲ್ಲದ ಜೀವನಿಗೆ ಮರಣಶೀಲವಾದ ದೇಹದ ಸಂಬಂಧವು ಆ ದೇಹದ ಕಾರಣದಿಂದುಂಟಾಗುವ ದುಃಖಗಳು ಕೂಡುವುದಿಲ್ಲ.

ಲೋಕದೃಷ್ಟೋ ಯಥಾ ಜಾತೇಃ ಸ್ವೇದಜಃ ಪುರುಷಃ ಸ್ತ್ರಿಯಾಮ್ ।
ಕೃತಾನುಸ್ಮರಣಾತ್ ಸಿದ್ಧೋ ವೇದಗಮ್ಯಃ ಪರಃ ಪುಮಾನ್ ॥ ೪೧ ॥

ಸ್ತ್ರೀ-ಪುರುಷರಲ್ಲಿರುವ ಶುಕ್ರ (ವೀರ್ಯ)ಗಳಿಂದಲೇ ಮನುಷ್ಯನ ಶಾರೀರಿಕ ಜಾತಿಯು ನಿರ್ಣಯವಾಗುತ್ತದೆ ಎಂಬುದು ಲೋಕದಲ್ಲಿ ಕಂಡಿದೆ. ಇದರಂತೆ ಭಗವಂತನ ಸೃಷ್ಟ್ಯಾದಿ ಕರ್ಮಾನು ಸ್ಮರಣೆಯಿಂದ ಸರ್ವೋತ್ತಮನಾದ ಭಗವಂತನು ವೇದಗಮ್ಯನು ಎಂದು ಸಿದ್ಧವಾಗುತ್ತದೆ.

ಪ್ರತ್ಯಕ್ಷಾನುಗತೋ ವೇದೋ ನಾಮಹೇತುಭಿರಿಷ್ಯತೇ ।
ಯಥಾ ಶಾಖಾ ಹಿ ವೈ ಶಾಖಾ ತರೋಃ ಸಂಬದ್ಧ್ಯತೇ ತದಾ ॥ ೪೨ ॥

ಪ್ರತ್ಯಕ್ಷಕ್ಕೆ ಅನುಗುಣವಾಗಿ ಇರುವ ವೇದವು ನಾಮಗಳಿಂದಲೂ, ಯುಕ್ತಿಗಳಿಂದಲೂ ಭಗವಂತನನ್ನು ಪ್ರತಿಪಾದಿಸುತ್ತಿದೆ. ಭಗವಂತನ ಪ್ರತಿಪಾದನೆಗೆ

ಮೂಲವಾದುದು ವೇದವೇ ಆಗಿದೆ. ಒಂದು ಶಾಖೆಯಂತೆ ಮರದ ಇನ್ನೊಂದು ಶಾಖೆಯು ಕಾಣಿಸುತ್ತಿದ್ದರೆ ಆ ಎಲ್ಲಾ ಶಾಖೆಗಳಿಗೂ ಮೂಲಕಾರಣವಾದದ್ದು ವೃಕ್ಷವು ಹೇಗೋ ಹಾಗೆ ಜಗತ್ತಿನಲ್ಲಿ ಪ್ರತ್ಯಕ್ಷವಾಗಿ ಕಾಣುವ ಎಲ್ಲಾ ಸ್ಥಾವರ-ಜಂಗಮಗಳಿಗೂ ಭಗವಂತನೇ ಕಾರಣನಾಗಿದ್ದಾನೆ. ಇದಕ್ಕೆ ಮೂಲ ವೇದವಾಗಿದೆ.

ಶ್ರುತ್ಯಾ ತಥಾಪರೋಪ್ಯಾತ್ಮಾ ದೃಶ್ಯತೇ ಸೋಽಪ್ಯಲಿಂಗವಾನ್ ।
ಅಲಿಂಗಸಾಧ್ಯಂ ತದ್ ಬ್ರಹ್ಮ ಬಹವಃ ಸಂತಿ ಹೇತವಃ ॥ ೪೩ ॥

ಜೀವಾತ್ಮನಿಗಿಂತ ಭಿನ್ನನಾದ ಪರಮಾತ್ಮನು ವೇದಗಳಿಂದ ತಿಳಿಯಲ್ಪಡುತ್ತಾನೆ. ಆ ಪರಮಾತ್ಮನಾದರೂ ಅಲಿಂಗಸಾಧ್ಯನಾಗಿದ್ದಾನೆ. ಎಂದರೆ ಕಾರಣಗಳಿಂದ ಅವನನ್ನು ತಿಳಿಯಲಾಗದು. ವೇದಗಮ್ಯನೇ ಆಗಿದ್ದಾನೆ. ಒಮ್ಮೆಲೆ ಭಗವಂತನಲ್ಲಿ ಅಣುತ್ವ, ಮಹತ್ವ ಎಂಬ ಗುಣಗಳಿರುವುದರಿಂದ ಜಗತ್ತಿನ ಯುಕ್ತಿಗಳಿಂದ ಪರಬ್ರಹ್ಮನೆಂಬ ವಸ್ತುವನ್ನು ತಿಳಿಯಲಾಗದು. ಜಗತ್ತಿನಲ್ಲಿ ಅಣುತ್ವವಿದ್ದಲ್ಲಿ ಮಹತ್ವವಿರುವುದಿಲ್ಲ. ಉಷ್ಣತ್ವ ಇದ್ದಲ್ಲಿ ಅನುಷ್ಣತ್ವವು ವಿರುದ್ಧವೆನಿಸಿದೆ. ಭಗವಂತನಲ್ಲಿ ಏಕಕಾಲದಲ್ಲಿಯೇ ವಿಶೇಷಗಳನ್ನವಲಂಬಿಸಿ ವಿರುದ್ಧ ಧರ್ಮಗಳು ಇರುವುದರಿಂದ ಲೋಕಲಿಂಗಗಳಿಂದ ಪರಮಾತ್ಮನನ್ನು ತಿಳಿಯಲು ಬರುವುದಿಲ್ಲ. ಆದ್ದರಿಂದ ವೇದಗಳಿಂದಲೇ ಪರಮಾತ್ಮನನ್ನು ತಿಳಿಯಬೇಕು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ಏಕೋನಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ನಲವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೊಂದನೆಯ ಅಧ್ಯಾಯ

ಪಂಚಶಿಖನು ಜನಕಮಹಾರಾಜನಿಗೆ ಮೋಕ್ಷತತ್ತ್ವವನ್ನು ಉಪದೇಶಿಸಿದ ಬಗೆಯನ್ನು ಯುಧಿಷ್ಠಿರನಿಗೆ ಭೀಷ್ಮರು ತಿಳಿಸಿದುದು.

ಭೀಷ್ಮಃ

ಜನಕೋ ನರದೇವಸ್ತು ಜ್ಞಾಪಿತಃ ಪರಮರ್ಷಿಣಾ ।
ಪುನರೇವಾನುಪಪ್ರಚ್ಛ ಸಾಂಪರಾಯೇ ಭವಾಭವೌ ॥೧॥

ಭೀಷ್ಮ– ಯುಧಿಷ್ಠಿರನೇ, ಮಹರ್ಷಿಯಾದ ಪಂಚಶಿಖನು ಜನದೇವನೆನಿಸಿದ ಜನಕರಾಜನಿಗೆ ಉಪದೇಶಿಸಿದ ತರುವಾಯ, ಜನಕರಾಜನು ಮಹರ್ಷಿಯನ್ನು ಕುರಿತು, ಮೋಕ್ಷಜ್ಞಾನದ ವಿಷಯದಲ್ಲಿ ಯೋಗ್ಯವ್ಯಾಪಾರಗಳು ಯಾವುದು? ಪ್ರತಿಬಂಧಕವಾದ ವ್ಯಾಪಾರಗಳು ಯಾವುವು? ಎಂದು ಪ್ರಶ್ನಿಸಿದನು.

ಭಗವನ್ ಯದಿದಂ ಪ್ರೇತ್ಯ ಸಂಜ್ಞಾ ಭವತಿ ಕಸ್ಯಚಿತ್ ।
ಏವಂ ಸತಿ ಕಿಮಜ್ಞಾನಂ ಜ್ಞಾನಂ ವಾ ಕಿಂ ಕರಿಷ್ಯತಿ ॥೨॥

ಪೂಜ್ಯರೇ, ಮರಣಾನಂತರದಲ್ಲಿ ಯಾರಿಗೂ ಯಾವ ವಿಧವಾದ ಜ್ಞಾನವು ಇಲ್ಲದಿರುವಾಗ ಆ ಸಮಯದಲ್ಲಿ ಅಜ್ಞಾನವಾಗಲೀ, ಜ್ಞಾನವಾಗಲೀ ಏನು ಮಾಡೀತು?

ಸರ್ವಮುಚ್ಛೇದನಿಷ್ಠಂ ಸ್ಯಾತ್ ಪಶ್ಯ ಚೈತದ್ ದ್ವಿಜೋತ್ತಮ ।
ಅಪ್ರಮತ್ತಃ ಪ್ರಮತ್ತೋ ವಾ ಕಿಂ ವಿಶೇಷಂ ಕರಿಷ್ಯತಿ ॥೩॥

ವಿಪ್ರಶ್ರೇಷ್ಠನೇ, ಮನುಷ್ಯನು ಮರಣದ ತನಕ ಏನೆಲ್ಲ ಸಾಧನೆಯನ್ನು ಮಾಡಿದ್ದಾನೋ ಅವುಗಳು ಮರಣದ ಜೊತೆಗೆ ನಾಶವನ್ನು ಹೊಂದುತ್ತವೆ. ಮರಣದ ಸಮಯದಲ್ಲಿ ಜ್ಞಾನವೇ ಇಲ್ಲವೆಂದಾದ ಬಳಿಕ ಸುಖ-ದುಃಖ ಭೋಗಾದಿಗಳೆಲ್ಲವೂ ನಾಶವಾದಂತೆ ಆಯಿತು. ಆ ಸಮಯದಲ್ಲಿ ಅವನು ಪ್ರಮತ್ತನಾಗಿರಲಿ, ಅಪ್ರಮತ್ತನಾಗಿರಲಿ, ಯಾವ ಕಾರ್ಯವನ್ನು ಮಾಡಲು ಸಾಧ್ಯ ?

ಅಸಂಸರ್ಗೋ ಹಿ ಭೂತೇಷು ಸಂಸರ್ಗೋ ವಾ ವಿನಾಶಿಷು ।
ಕಸ್ಮೈ ಕ್ರಿಯೇತ ಕಲ್ಪೇನ ನಿಶ್ಚಯಃ ಕೋऽತ್ರ ತತ್ತ್ವತಃ ॥೪॥

ಪರಲೋಕವೆಂಬ ಫಲ ಇಲ್ಲದಿದ್ದರೂ ಪುತ್ರ-ಮಿತ್ರ-ಕಳತ್ರವೆಂಬ ಅವರ ಸಂಬಂಧ ರೂಪವಾದ ಫಲಕ್ಕಾಗಿ ಕರ್ಮದ ಪ್ರವೃತ್ತಿಯುಂಟಾಗಬಹುದಲ್ಲವೇ ಎಂದರೆ ಉತ್ತರಿಸುತ್ತಾರೆ. ಮರಣಾನಂತರದಲ್ಲಿ ವಿನಾಶ ಹೊಂದುವ ಪಂಚಭೂತಗಳಿಗೂ ಜೀವಾತ್ಮನಿಗೂ ಸಂಬಂಧವು ಏರ್ಪಡುವುದಿಲ್ಲ. ಇರುವ ಸಂಬಂಧವು ನಾಶವಾಗುತ್ತದೆ. ಪಂಚಭೂತಗಳ ಜೊತೆಗೆ ಆತ್ಮನೂ ನಾಶವಾಗುತ್ತಾನೆ ಎಂದರೆ ಅವನು ಯಾವ ದೃಷ್ಟಿಯಿಂದ ಕರ್ಮವನ್ನು ಮಾಡಬೇಕು? ಇದರಲ್ಲಿ ನಮ್ಮ ತತ್ತ್ವವನ್ನು ಹೇಗೆ ನಿಶ್ಚಯಿಸಿಕೊಳ್ಳಬೇಕು?

ತಮಸಾ ಹಿ ಪ್ರತಿಚ್ಛನ್ನಂ ವಿಭ್ರಾಂತಮಿವ ಚಾತುರಮ್ ।
ಪುನಃ ಪ್ರಶಮಯನ್ವಾಕ್ಯೈಃ ಕವಿಃ ಪಂಚಶಿಖೋಽಬ್ರವೀತ್ ॥೫॥

ವಿದ್ವಾಂಸನಾದ ಪಂಚಶಿಖಿನು, ಅಜ್ಞಾನಾಂಧಕಾರದಿಂದ ಮುಳುಗಿರುವ ಆತ್ಮ ವಿಷಯಕವಾಗಿ ಭ್ರಾಂತನಾಗಿರುವಂತೆ ಕಾಣುತ್ತಿರುವ, ಆದ್ದರಿಂದಲೇ ಅತ್ಯಂತ ಕಳವಳಗೊಂಡಿರುವ ಜನಕನನ್ನು ಕುರಿತು ಸಮಾಧಾನದ ಮಾತುಗಳನ್ನು ಹೇಳಿದನು.

ಉಚ್ಛೇದನಿಷ್ಠಾ ನೇಹಾಸ್ತಿ ಭಾವನಿಷ್ಠಾ ನ ವಿದ್ಯತೇ ।
ಅಯಂ ಹ್ಯಪಿ ಸಮಾಹಾರಃ ಶರೀರೇಂದ್ರಿಯಚೇತಸಾಮ್ ।
ವರ್ತತೇ ಪೃಥಗನ್ಯೋನ್ಯಮಪ್ಯಪಾಶ್ರಿತ್ಯ ಕರ್ಮಸು ॥೬॥

ಜನಕ ಮಹಾರಾಜನೇ, ಮರಣಾನಂತರದಲ್ಲಿ ಜೀವನು ಅಲ್ಲಿಯ ತನಕ ಮಾಡಿದ ಸತ್ಕರ್ಮಗಳಾಗಲೀ, ದುಷ್ಕರ್ಮಗಳಾಗಲೀ ನಾಶವನ್ನು ಹೊಂದುವುದಿಲ್ಲ. ಅವನು ಇಲ್ಲಿಯ ತನಕ ಮಾಡಿದ ಸತ್ಕರ್ಮದ ಫಲವಾಗಿ ಮುಕ್ತಿಯಲ್ಲಿ ಸುಖದ ಭೋಗವನ್ನು ಅನುಭವಿಸುತ್ತಾನೆ, ದುಷ್ಕರ್ಮದ ಫಲವಾಗಿ ಅಂಧಂತಮಸ್ಸಿನಲ್ಲಿ ದುಃಖಭೋಗವನ್ನು ಅನುಭವಿಸುತ್ತಾನೆ.

'ನ ಪ್ರೇತ್ಯ ಸಂಜ್ಞಾ ಅಸ್ತಿ' ಎಂಬ ಶ್ರುತಿಯಲ್ಲಿ ಅನಿತ್ಯಜ್ಞಾನವನ್ನೇ ನಿಷೇಧ ಮಾಡಿದ್ದಾರೆ ಹೊರತು ನಿತ್ಯಜ್ಞಾನವನ್ನಲ್ಲ. ಶರೀರ, ಇಂದ್ರಿಯ, ಮನಸ್ಸು ಇವುಗಳು ಪ್ರತ್ಯೇಕವಾಗಿರುವಂತೆ ಕಂಡುಬಂದರೂ ಇವುಗಳು ಪರಸ್ಪರ ಆಶ್ರಯಿಸಿಕೊಂಡು ಕರ್ಮದಲ್ಲಿ ಪ್ರವೃತ್ತಿಯನ್ನು ಹೊಂದುತ್ತವೆ. ಇವುಗಳ ಫಲವನ್ನು ಜೀವನು ಮುಂದೆ ಅನುಭವಿಸುತ್ತಾನೆ.

ಧಾತವಃ ಪಂಚಶಾಖೋಽಯಂ ಖಂ ವಾಯುರ್ಜ್ಯೋತಿರಂಬು ಭೂಃ ।
ತೇ ಸ್ವಭಾವೇನ ತಿಷ್ಠಂತಿ ವಿಯುಜ್ಯಂತೇ ಸ್ವಭಾವತಃ ॥೭॥

ಪ್ರಾಣಿಗಳ ಶರೀರದಲ್ಲಿ ಆಕಾಶ, ವಾಯು, ತೇಜಸ್ಸು, ಜಲ, ಪೃಥಿವಿ ಎಂಬ ಪಂಚಭೂತಗಳಿವೆ. ಅವುಗಳು ಸ್ವಭಾವದಿಂದಲೇ ಸ್ವಾಭಾವಿಕವಾಗಿ ಸೇರುತ್ತವೆ, ಸ್ವಾಭಾವಿಕವಾಗಿ ವಿಯೋಗವನ್ನು ಹೊಂದುತ್ತವೆ.

ಆಕಾಶಂ ವಾಯುರೂಷ್ಮಾ ಚ ಸ್ನೇಹೋ ಯಚ್ಚಾಪಿ ಪಾರ್ಥಿವಮ್ ।
ಏಷ ಪಂಚಸಮಾಹಾರಃ ಶರೀರಮಿತಿ ನೈಕಧಾ ॥೮॥

ಆಕಾಶ, ವಾಯು, ಅಗ್ನಿ, ಜಲ, ಪೃಥಿವಿ- ಈ ಪಂಚತತ್ತ್ವಗಳ ಸಮ್ಮೇಳನದಿಂದಲೇ ಅನೇಕ ವಿಧವಾಗಿ ಶರೀರಗಳು ನಿರ್ಮಾಣವನ್ನು ಹೊಂದುತ್ತವೆ.

ಅಹಂ ವಾಚ್ಯಂ ದ್ವಿಜಾನಾಂ ಯದ್ ವಿಶಿಷ್ಟಂ ಬುದ್ಧಿರೂಪವತ್ ।
ವಾಚಾಮಗೋಚರಂ ನಿತ್ಯಂ ಜ್ಞೇಯಮೇವಂ ಭವಿಷ್ಯತಿ ॥೯॥

ಭಗವಂತನು ಅಹೇಯನಾದುದರಿಂದ 'ಅಹಂ' ಎಂದು ಕರೆಸಿಕೊಳ್ಳುತ್ತಾನೆ. ಅಂತಹ 'ಅಹಂ' ಎಂಬ ಶಬ್ದಕ್ಕೆ ಮುಖ್ಯವಾಚ್ಯನಾಗಿರುವುದರಿಂದ ಭಗವಂತನ ಜ್ಞಾನವನ್ನು ಪಡೆದವನು ಉತ್ತಮ ಬ್ರಾಹ್ಮಣ್ಯ ಸಂಪಾದಿಸಿದವನಾಗುತ್ತಾನೆ. ಆ ಭಗವಂತನು ಮಾತುಗಳಿಗೆ ನಿಲುಕದವನು, ನಿತ್ಯವೆನಿಸಿದ್ದಾನೆ. ಅವನೇ ಜ್ಞೇಯನಾಗಿದ್ದಾನೆ ಎಂದು ತಿಳಿ.

ಜ್ಞಾನಂ ಜ್ಞೇಯಂ ತಥಾ ಜ್ಞಾನಂ ತ್ರಿವಿಧಂ ಜ್ಞಾನಮುಚ್ಯತೇ ।
ಜ್ಞಾನಮೂಷ್ಮಾ ಚ ವಾಯುಶ್ಚ ತ್ರಿವಿಧಃ ಕರ್ಮಸಂಗ್ರಹಃ ॥೧೦॥

ಸಾಮಾನ್ಯ ಜ್ಞಾನವೆನಿಸಿದ ಪರೋಕ್ಷಜ್ಞಾನ, ಜ್ಞಾನ ವಿಷಯನಾದ ಬ್ರಹ್ಮ, ಈ ಬ್ರಹ್ಮ ವಿಷಯಕವಾದ ಜ್ಞಾನವನ್ನು ವಿಶಿಷ್ಟ ಜ್ಞಾನ, ಅಪರೋಕ್ಷ ಜ್ಞಾನ ಎಂದು ಕರೆಯುತ್ತಾರೆ. ಹೀಗೆ ಸಾಮಾನ್ಯ ಜ್ಞಾನ, ಅಪರೋಕ್ಷಜ್ಞಾನ, ಆ ಜ್ಞಾನನಾದ ಭಗವಂತ - ಈ ಮೂರನ್ನು ಜ್ಞಾನ ಎಂದೇ ಕರೆಯುತ್ತಾರೆ. ಜ್ಞಾನವು ಜಠರಾಗ್ನಿ, ಪ್ರಾಣಾದಿ ಪಂಚವಾಯುಗಳು, ಕರ್ಮಗಳು ಈ ಮೂರಕ್ಕೂ ಅಂಗವೆನಿಸಿರುತ್ತವೆ. ಇಲ್ಲಿ ಕರ್ಮಕಾಂಡ ಜ್ಞಾನ, ಅಗ್ನಿ, ಅಗ್ನಿವೃತ್ತಾಪಕನಾದ ವಾಯು - ಈ ಮೂರು ಜ್ಞಾನಕ್ಕೆ ಅಂಗವೆನಿಸಿದೆ. ಅರ್ಥಾತ್ ಕರ್ಮದ ದ್ವಾರಾ ಜ್ಞಾನವನ್ನು ಸಂಪಾದಿಸಬೇಕು.

ಇಂದ್ರಿಯಾಣೀಂದ್ರಿಯಾರ್ಥಾಶ್ಚ ಸ್ವಭಾವಶ್ಚೇತನಾ ಮನಃ ।
ಪ್ರಾಣಾಪಾನೌ ವಿಕಾರಶ್ಚ ಧಾತವಶ್ಚಾತ್ರ ನಿಃಸೃತಾಃ ॥೧೧॥

ಇವುಗಳಿಂದಲೇ ಇಂದ್ರಿಯಗಳು, ಇಂದ್ರಿಯಗಳ ವಿಷಯಗಳು, ಸತ್ವ-ರಜಸ್-ತಮೋಗುಣಗಳು, ಚೈತನ್ಯ, ಮನಸ್ಸು, ಪ್ರಾಣ, ಅಪಾನ, ವಿಕಾರಗಳು, ಧಾತುಗಳು ಪ್ರಕಟವಾಗುತ್ತವೆ.

ಶ್ರವಣಂ ಸ್ಪರ್ಶನಂ ಜಿಹ್ವಾ ದೃಷ್ಟಿರ್ನಾಸಾ ತಥೈವ ಚ ।
ಇಂದ್ರಿಯಾಣೀತಿ ಪಂಚೈತೇ ಚಿತ್ತಪೂರ್ವಂಗಮಾ ಗುಣಾಃ ॥೧೨॥

ಶ್ರವಣ, ಚರ್ಮ, ನಾಲಿಗೆ, ಕಣ್ಣು, ಮೂಗು - ಈ ಐದು ಪಂಚಜ್ಞಾನೇಂದ್ರಿಯಗಳಾಗಿವೆ. ಶಬ್ದಾದಿ ಗುಣಗಳು ಚಿತ್ತದ ಜೊತೆಗೆ ಬೆರೆತು ಇಂದ್ರಿಯಗಳಿಗೆ ವಿಷಯವಾಗುತ್ತವೆ.

ತತ್ರ ವಿಜ್ಞಾನಸಂಯುಕ್ತಾ ತ್ರಿವಿಧಾ ಚೇತನಾ ಧ್ರುವಾ ।
ಸುಖದುಃಖೇತಿ ಯಾಮಾಹುರದುಃಖೇತ್ಯಸುಖೇತಿ ಚ ॥೧೩॥

ವಿಜ್ಞಾನಯುಕ್ತವಾದ ಶಾಶ್ವತವಾದ ಮನಸ್ಸು ಸಾತ್ವಿಕ-ರಾಜಸ-ತಾಮಸ ಭೇದದಿಂದ ಮೂರುವಿಧವಾಗಿದೆ. ಸುಖ-ದುಃಖಗಳ ಮಿಶ್ರಣವು ಮಧ್ಯಮ ಜೀವರಲ್ಲಿಯೂ, ನಿತ್ಯಸುಖವು ಉತ್ತಮ ಜೀವರಲ್ಲಿಯೂ, ನಿತ್ಯದುಃಖವು ಅಧಮ ಜೀವರಲ್ಲಿಯೂ ಉಂಟಾಗುತ್ತದೆ ಎಂದು ಹೇಳುತ್ತಾರೆ.

ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗಂಧಶ್ಚ ಮೂರ್ತ್ಯಥ ।
ಏತೇ ಹ್ಯಾಮರಣಾತ್ ಪಂಚ ಷಡ್ಗುಣಾ ಜ್ಞಾನಸಿದ್ಧಯೇ ॥೧೪॥

ಶಬ್ದ, ಸ್ಪರ್ಶ, ರೂಪ, ರಸ, ಗಂಧ ಮತ್ತು ಮನಸ್ಸು ಎಂಬ ಆರು ಜ್ಞಾನೇಂದ್ರಿಯಗಳಿಗೆ ಸಾಧಕಗಳಾದ ಗುಣಗಳಾಗಿವೆ. ಜೀವನಿಗೆ ಜ್ಞಾನದ ಸಿದ್ಧಿಗಾಗಿ ಈ ಆರು ಜ್ಞಾನಕ್ಕೆ ವಿಷಯಗಳಾಗಿ ಮರಣದ ತನಕವೂ ಜೀವನ ಜೊತೆಗೆ ಇರುತ್ತವೆ.

ತೇಷು ಕರ್ಮವಿಸರ್ಗಶ್ಚ ಸರ್ವತತ್ತ್ವಾರ್ಥನಿಶ್ಚಯಃ ।
ತಮಾಹುಃ ಪರಮಂ ಶುಕ್ರಂ ಪಾರೇ ಚ ರಜಸಃ ಪ್ರಭುಮ್ ॥೧೫॥

ಕರ್ಮೇಂದ್ರಿಯಗಳಲ್ಲಿ ಕರ್ಮಫಲ ತ್ಯಾಗರೂಪವಾದ ಸಂನ್ಯಾಸವು, ಸರ್ವ ತತ್ತ್ವಾರ್ಥಗಳಲ್ಲಿ ನಿಶ್ಚಯವು ಉಂಟಾಗುತ್ತದೆ. ಈ ಸರ್ವತತ್ತ್ವಾರ್ಥ ನಿಶ್ಚಯವನ್ನೇ ಮೋಕ್ಷಕ್ಕೆ ಬೀಜ ಎಂದು ವಿದ್ವಾಂಸರು ಹೇಳುತ್ತಾರೆ. ಈ ಜ್ಞಾನವೇ ರಜೋಗುಣವನ್ನು ಮೆಟ್ಟುವ ಪ್ರಭು ಎಂದು ಹೇಳುತ್ತಾರೆ.

ವಿರಾಗಾದ್ ವರ್ತತೇ ತಸ್ಮಿನ್ ಮನೋ ರಜಸಿ ನಿತ್ಯಗಮ್ ।
ತಸ್ಮಿನ್ ಪ್ರಸನ್ನೇ ಸಂಪಶ್ಯೇದ್ ಬುದ್ಧಿರಿತ್ಯವ್ಯಯಂ ಮಹತ್ ॥೧೬॥

ರಜೋಗುಣದಲ್ಲಿ ಆಸಕ್ತವಾದ ಮನಸ್ಸು ನಿತ್ಯವೂ ವಾಮ ಮಾರ್ಗದಲ್ಲಿಯೇ ಸಾಗುತ್ತದೆ. ಭಗವಂತನು ಪ್ರಸನ್ನನಾದಾಗ ಯಾವ ಜೀವನ ವಿಷಯದಲ್ಲಿ ಭಗವಂತನು ಪ್ರಸನ್ನತೆಯನ್ನು ಹೊಂದಿದ್ದಾನೋ ಆಗ ಅವನ ಬುದ್ಧಿಯು ಹಿಂದೆ-ಮುಂದೆ ಹೇಳಿದ ಗುಣಗಳಿಂದ ತುಂಬಿದ ಭಗವಂತನನ್ನು ನೋಡುತ್ತದೆ.

ಇಮಂ ಗುಣಸಮಾಹಾರಮಾತ್ಮಭಾವೇನ ಪಶ್ಯತಃ ।
ಅಸಮ್ಯಗ್ದರ್ಶನೈರ್ದುಃಖಮನಂತಂ ನೋಪಶಾಮ್ಯತಿ ॥೧೭॥

ಜ್ಞಾನಾದಿ ಗುಣಗಳಿಂದ ಪೂರ್ಣನಾದ ಈ ಪರಮಾತ್ಮನನ್ನು ಯಾವ ಜೀವನು ತನ್ನ ಸ್ವರೂಪವೆಂದು ಅಭೇದ ಬುದ್ಧಿಯಿಂದ ಚಿಂತಿಸುತ್ತಾನೋ ಅಂತಹ ಜ್ಞಾನಹೀನನಾದ, ತಪ್ಪಾಗಿ ತಿಳಿವಳಿಕೆಯನ್ನು ಹೊಂದಿದ ಆ ಜೀವನು ಅನಂತ ದುಃಖಕ್ಕೆ ಗುರಿಯಾಗುತ್ತಾನೆ.

ತಸ್ಮಾದೇತೇಷು ಮೇಧಾವೀ ನ ಪ್ರಸಜ್ಯೇತ ಬುದ್ಧಿಮಾನ್ ।
ಅನಾತ್ಮೇತಿ ಚ ಯದ್ದುಷ್ಟಂ ತನ್ನಾಹಂ ನ ಮಮೇತ್ಯಪಿ ॥೧೮॥

ಆದ್ದರಿಂದ ಜ್ಞಾನಿಯಾದವನು ಐಕ್ಯಜ್ಞಾನಿಗಳ ಸಹವಾಸವನ್ನು ಮಾಡಬಾರದು.

ಅನಾತ್ಮೇತಿ ಚ ಯದ್ ದೃಷ್ಟಂ ತೇನಾಹಂ ನ ಮಮೇತ್ಯಪಿ ।
ವರ್ತತೇ ಕಿಮಧಿಷ್ಠಾನಾ ಪ್ರಸಕ್ತಾ ದುಃಖಸಂತತಿಃ ॥೧೯॥

ಪರಮಾತ್ಮನು ಜೀವಾತ್ಮನು ಆಗಲಾರ ಎಂದು 'ದ್ವಾಸುಪರ್ಣಾ' ಮುಂತಾದ ಶ್ರುತಿಗಳಲ್ಲಿ ದೃಷ್ಟವಾಗಿದೆ. ಆದ್ದರಿಂದ ಆ ಬ್ರಹ್ಮಸ್ವರೂಪನು ನಾನಲ್ಲ. ನನ್ನ ಸ್ವರೂಪನು ಆ ಬ್ರಹ್ಮನಲ್ಲ ಎಂದು ಯಾವ ಜ್ಞಾನಿಯು ತಿಳಿದಿದ್ದಾನೋ ಆ ಜ್ಞಾನಿಯ ದುಃಖ ಸಂತತಿಗಳಿಗೆ ಅಧಿಷ್ಠಾನವೇ ಇಲ್ಲದಂತಾಗುತ್ತದೆ. ಅರ್ಥಾತ್ ಅವನು ದುಃಖವನ್ನು ಹೊಂದಲಾರ.

ತತ್ರ ಸಮ್ಯಜ್ಞನೋ ನಾಮ ತ್ಯಾಗಮಾತ್ರಮನುತ್ತಮಮ್ ।
ಶೃಣು ಯತ್ ತವ ಮೋಕ್ಷಾಯ ಭಾಷ್ಯಮಾಣಂ ಭವಿಷ್ಯತಿ ॥೨೦॥

ಯಾವ ಮನಸ್ಸು ವಿಷಯಪದಾರ್ಥಗಳನ್ನು ತ್ಯಜಿಸಲು ಬಯಸುತ್ತದೋ ಅದೇ ಉತ್ತಮವಾದ ಮನಸ್ಸೆನಿಸಿದೆ. ನಿನ್ನ ಮೋಕ್ಷಕ್ಕೆ ಕಾರಣವಾದುದು ಯಾವುದು ಎಂಬುದನ್ನು ಮುಂದೆ ಹೇಳುತ್ತೇನೆ, ಕೇಳಿಸಿಕೊ.

ತ್ಯಾಗ ಏವ ಹಿ ಸರ್ವೇಷಾಮುಕ್ತಾನಾಮಪಿ ಕರ್ಮಣಾಮ್ ।
ನಿತ್ಯಂ ಮಿಥ್ಯಾವಿನೀತಾನಾಂ ಶ್ಲೇಷೋ ದುಃಖಾವಹೋ ಮತಃ ॥೨೧॥

ಮೋಕ್ಷಾರ್ಥಿಗಳಿಗೆಲ್ಲ ಕರ್ಮದ ಫಲತ್ಯಾಗವು ಸುಖಕರವಾಗಿದೆ. ನಿತ್ಯ ದುಃಖಗಳಿಗೆಲ್ಲ ನೆಲೆಯಾದುದು ಕರ್ಮದ ಫಲ ಸಂಬಂಧವು ಎಂದು ತಿಳಿಯಬೇಕು. ಯಾರಿಗೆ ಕರ್ಮಫಲದ ಸಂಬಂಧದ ವಿಷಯದಲ್ಲಿ ಅಹಂಕಾರವಿದೆಯೋ ಅವರ ಕರ್ಮಗಳೆಲ್ಲವೂ ವ್ಯರ್ಥವೇ.

ದ್ರವ್ಯತ್ಯಾಗೇ ತು ಕರ್ಮಾಣಿ ಭೋಗತ್ಯಾಗೇ ವ್ರತಾನ್ಯಪಿ ।
ಸುಖತ್ಯಾಗೇ ತಪೋಯೋಗಃ ಸರ್ವತ್ಯಾಗೇ ಸಮಾಪನಾ ॥೨೨॥

ದ್ರವ್ಯವನ್ನು ತ್ಯಾಗ ಮಾಡಿದಾಗ ಯಜ್ಞಕರ್ಮಾದಿಗಳು ಉಂಟಾಗುತ್ತವೆ. ಭೋಗ ತ್ಯಾಗವನ್ನು ಮಾಡಿದಾಗ ವ್ರತ, ಚಾಂದ್ರಾಯಣಾದಿ ಫಲಗಳು ಉಂಟಾಗುತ್ತವೆ. ದೈಹಿಕ ಸುಖಗಳನ್ನು ತ್ಯಾಗ ಮಾಡಿದಾಗ ತಪೋಯೋಗವು ಉಂಟಾಗುತ್ತದೆ. ಐಹಿಕ, ಆಮುಷ್ಮಿಕ, ಸಕಲ ಭೋಗಗಳ ಆಸೆಯನ್ನು ತ್ಯಜಿಸಿದಾಗ ಭಗವತ್ಪ್ರಾಪ್ತಿಯು ಉಂಟಾಗುತ್ತದೆ.

ತಸ್ಯ ಮಾರ್ಗೋಯಮದ್ವೈಧಃ ಸರ್ವತ್ಯಾಗಸ್ಯ ದರ್ಶಿತಃ ।
ವಿಪ್ರಹಾಣಾಯ ದುಃಖಸ್ಯ ದುರ್ಗತಿರ್ಹ್ಯನ್ಯಥಾ ಭವೇತ್ ॥೨೩॥

ವಿರುದ್ಧಗಳಾದ ಎರಡು ಪ್ರಕಾರಗಳನ್ನು ಅವಲಂಬಿಸಿದ ಕರ್ಮ ಮಾರ್ಗಗಳನ್ನು ನಿನಗೆ ತಿಳಿಸಿಕೊಟ್ಟಿದ್ದೇನೆ. ಸರ್ವತ್ಯಾಗಿಯಾದವನಿಗೆ ಸಿಗುವ ಫಲವೇನೆಂಬುದನ್ನು ಹೇಳಿದ್ದೇನೆ. ಇದಕ್ಕೆ ವಿಪರೀತವಾಗಿ ವರ್ತಿಸುವವನಿಗೆ ದುರ್ಗತಿಯೇ ಪ್ರಾಪ್ತವಾಗುತ್ತದೆ.

ಶೇತೇ ಜರಾಮೃತ್ಯುಭಯೈರ್ವಿಮುಕ್ತಃ
ಕ್ಷೀಣೇ ಪುಣ್ಯೇ ವಿಗತೇ ಚ ಪಾಪೇ ।

ತಪೋನಿಮಿತ್ತೇ ವಿಗತೇ ಚ ನಿಷ್ಠೇ
ಫಲೇ ಯಥಾಕಾಶಮಲಿಂಗ ಏವ ॥೨೪॥

ತಾನು ಮಾಡಿದ ಪುಣ್ಯಗಳೆಲ್ಲ ಕ್ಷೀಣಿಸಿ, ಪಾಪಗಳೆಲ್ಲವೂ ನಶಿಸಿ, ತಪೋನಿಷ್ಠೆಯು ತೀರಿದ ಬಳಿಕ ಮನುಷ್ಯನು ಜರಾ-ಮರಣ ಭಯಗಳಿಂದ ಮುಕ್ತನಾಗಿ ಆಕಾಶದಂತೆ ಲಿಂಗಶರೀರ ರಹಿತನಾಗಿ ಸುಖವಾಗಿ ಇರುತ್ತಾನೆ.

ಪಂಚ ಜ್ಞಾನೇಂದ್ರಿಯಾಣ್ಯುಕ್ತ್ವಾ ಮನಃಷಷ್ಠಾನಿ ಚೇತಸಿ ।
ಮನಃಷಷ್ಠಾನಿ ವಕ್ಷ್ಯಾಮಿ ಪಂಚ ಕರ್ಮೇಂದ್ರಿಯಾಣಿ ತು ॥೨೫॥

ಬುದ್ಧಿಯಲ್ಲಿರುವ ಮನಸ್ಸಿನಿಂದ ಯುಕ್ತವಾದ ಐದು ಜ್ಞಾನೇಂದ್ರಿಯಗಳ ವಿಷಯವನ್ನು ಹೇಳಿದ ಬಳಿಕ ಐದು ಕರ್ಮೇಂದ್ರಿಯಗಳ ವಿಷಯವನ್ನು ಹೇಳುತ್ತೇನೆ. ಅದರೊಡನೆ ಆರನೆಯ ಮನಸ್ಸಿನ ವಿಷಯವನ್ನು ಹೇಳುತ್ತೇನೆ.

ಹಸ್ತೌ ಕರ್ಮೇಂದ್ರಿಯಂ ಜ್ಞೇಯಮಥ ಪಾದೌ ಗತೀಂದ್ರಿಯಮ್ ।
ಪ್ರಜನಾನಂದಯೋಃ ಶೇಫೋ ವಿಸರ್ಗೇ ಪಾಯುರಿಂದ್ರಿಯಮ್ ॥೨೬॥

ಎರಡು ಕೈಗಳು ಕೆಲಸವನ್ನು ಮಾಡುವ ಕರ್ಮೇಂದ್ರಿಯವೆನಿಸಿವೆ. ಎರಡು ಪಾದಗಳು ನಡೆದಾಡುವ ಕರ್ಮೇಂದ್ರಿಯಗಳು. ಲಿಂಗವು ಸಂತಾನೋತ್ಪಾದಕವಾದ ಮೈಥುನದಿಂದ ಆನಂದವನ್ನುಂಟು ಮಾಡುವ ಕರ್ಮೇಂದ್ರಿಯವು. ಗುದವು ಮಲವನ್ನು ಹೊರಹಾಕುವ ಕರ್ಮೇಂದ್ರಿಯವು.

ವಾಕ್ತು ಶಬ್ದವಿಶೇಷಾರ್ಥಂ ಗತಿಂ ಪಂಚಾನ್ವಿತಾಂ ವಿದುಃ ।
ಏವಮೇಕಾದಶೈತಾನಿ ಬುದ್ಧ್ಯಾ ತ್ವವಸೃಜೇನ್ಮನಃ ॥೨೭॥

ಮಾತು ಶಬ್ದವಿಶೇಷವನ್ನು ಉಚ್ಚರಿಸುವ ಕರ್ಮೇಂದ್ರಿಯವು. ಈ ಐದು ಕರ್ಮೇಂದ್ರಿಯವು ಐದು ವಿಧವಾದ ಕರ್ಮಗಳನ್ನು ಹೊಂದಿವೆ ಎಂದು ವಿದ್ವಾಂಸರು ಹೇಳುತ್ತಾರೆ. ಮನಸ್ಸಿನಿಂದ ಕೂಡಿದ ಹನ್ನೊಂದು ಇಂದ್ರಿಯಗಳನ್ನು, ಅವುಗಳಿಗೆ ಸಂಬಂಧಿಸಿದ ವಿಷಯಗಳನ್ನು ಶೀಘ್ರವಾಗಿ ಬುದ್ಧಿಯಿಂದಲೇ ತ್ಯಜಿಸಬೇಕು.

ಕರ್ಣೌ ಶಬ್ದಶ್ಚ ಚಿತ್ತಂ ಚ ತ್ರಯಃ ಶ್ರವಣಸಂಗ್ರಹೇ ।
ತಥಾ ಸ್ಪರ್ಶೇ ತಥಾ ರೂಪೇ ತಥೈವ ರಸಗಂಧಯೋಃ ॥೨೮॥

ಶ್ರವಣಕಾಲದಲ್ಲಿ ಶ್ರೋತ್ರೇಂದ್ರಿಯಕ್ಕೂ, ಶಬ್ದರೂಪವಾದ ವಿಷಯಕ್ಕೂ, ಚಿತ್ತಕ್ಕೂ ಸಂಯೋಗ ಉಂಟಾಗುತ್ತದೆ. ಈ ಕರ್ಮದಲ್ಲಿಯೇ ಸ್ಪರ್ಶದ ಸಮಯದಲ್ಲಿ ತ್ವಗಿಂದ್ರಿಯ, ವಿಷಯ, ಚಿತ್ತ; ಕಣ್ಣಿನಿಂದ ನೋಡುವಾಗ ನೇತ್ರ , ನೇತ್ರಕ್ಕೆ ವಿಷಯವಾದ ರೂಪ, ಅದನ್ನು ಗ್ರಹಿಸುವ ಚಿತ್ತ ಇವುಗಳಿಗೆ ಸಂಯೋಗವಿದೆ. ರುಚಿ ನೋಡುವಾಗ ಜಿಹ್ವೆ, ರಸ, ಚಿತ್ತ ; ಆಘ್ರಾಣಿಸುವಾಗ ನಾಸಿಕ, ಗಂಧ, ಚಿತ್ತ ಹೀಗೆ ಪರಸ್ಪರ ಸಂಯೋಗವಿದೆ.

ಏವಂ ಪಂಚತ್ರಿಕಾ ಹ್ಯೇತೇ ಗುಣಾಸ್ತದುಪಲಬ್ಧಯೇ ।
ಯೇನ ಯಸ್ತ್ರಿವಿಧೋ ಭಾವಃ ಪರ್ಯಾಯಾತ್ ಸಮುಪಸ್ಥಿತಃ ॥೨೯॥

ಹೀಗೆ ಮೂರು ಮೂರರಂತೆ ಐದು ಗುಂಪುಗಳಿವೆ. ಇದಕ್ಕೆ ಗುಣಗಳೆನ್ನುತ್ತಾರೆ. ಈ ಗುಣಗಳಿಂದ ಶಬ್ದಾದಿ ವಿಷಯಗಳ ಗ್ರಹಣವಾಗುತ್ತದೆ. ಅನುಭವವನ್ನು ತಿಳಿಸುವ ಕಾರಣದಿಂದ ಇವು ಕರ್ತ, ಕರ್ಮ, ಕರಣ ಎಂದು ಮೂರು ವಿಧವಾದ ಭಾವವನ್ನು ಹೊಂದಿವೆ. ಅವು ಕ್ರಮವಾಗಿ ಉಪಸ್ಥಿತವಾಗುತ್ತವೆ.

ಸಾತ್ತ್ವಿಕೋ ರಾಜಸಶ್ಚೈವ ತಾಮಸಶ್ಚೈವ ತೇ ತ್ರಯಃ ।
ತ್ರಿವಿಧಾ ವೇದನಾ ಯೇಷು ಪ್ರಸೂತಾ ಸರ್ವಸಾಧನಾ ॥೩೮॥

ಗುಣಗಳಲ್ಲಿಯೂ ಸಾತ್ವಿಕ, ರಾಜಸ, ತಾಮಸ ಎಂದು ಮೂರು ಭೇದವಿದೆ. ಇವುಗಳಿಂದ ದೊರಕುವ ಅನುಭವವು ಹರ್ಷ, ಪ್ರೀತಿ, ವಿಷಾದ ಎಂದು ಮೂರು ಪ್ರಕಾರವಾಗಿದೆ. ಇವು ಎಲ್ಲ ಸಾಧನೆಗಳನ್ನು ಉಂಟುಮಾಡುತ್ತವೆ.

ಪ್ರಹರ್ಷಃ ಪ್ರೀತಿರಾನಂದಃ ಸುಖಂ ಸಂಶಾಂತಚಿತ್ತತಾ ।
ಅಕುತಶ್ಚಿತ್ ಕುತಶ್ಚಿದ್ವಾ ಚಿತ್ತತಃ ಸಾತ್ತ್ವಿಕೋ ಗುಣಃ ॥೩೧॥

ಹರ್ಷ, ಪ್ರೀತಿ, ಆನಂದ, ಚಿತ್ತಶಾಂತಿ ಇವುಗಳು ಕಾರಣದಿಂದಲೋ, ಅಕಾರಣದಿಂದಲೋ ಉಂಟಾಗಲಿ. ಇವುಗಳೆಲ್ಲವನ್ನೂ ಸಾತ್ವಿಕಗುಣವೆನ್ನುತ್ತಾರೆ.

ಅತುಷ್ಟಿಃ ಪರಿತಾಪಶ್ಚ ಶೋಕೋ ಲೋಭಸ್ತಥಾಕ್ಷಮಾ ।
ಲಿಂಗಾನಿ ರಜಸಸ್ತಾನಿ ದೃಶ್ಯಂತೇ ಹೇತ್ವಹೇತುತಃ ॥೩೨॥

ಅಸಂತೋಷ, ಸಂತಾಪ, ಶೋಕ, ಲೋಭ, ಅಸಹನಶೀಲತೆ - ಇವುಗಳು ನಮಗೆ ತಿಳಿಯದ ಕಾರಣದಿಂದಲಾಗಲೀ ಉಂಟಾದಲ್ಲಿ ಇವುಗಳನ್ನು ರಾಜಸ ಗುಣದ ಕಾರ್ಯ ಎನ್ನುತ್ತಾರೆ.

ಅವಿವೇಕಸ್ತಥಾ ಮೋಹಃ ಪ್ರಮಾದಃ ಸ್ವಪ್ನತಂದ್ರಿತಾ ।
ಕಥಂಚಿದಪಿ ವರ್ತಂತೇ ವಿವಿಧಾಸ್ತಾಮಸಾ ಗುಣಾಃ ॥೩೩॥

ಅವಿವೇಕ, ಮೋಹ, ಪ್ರಮಾದ, ಸ್ವಪ್ನ, ಆಲಸ್ಯ - ಇವುಗಳು ಯಾವುದೇ ಕಾರಣದಿಂದ ಉಂಟಾಗಲಿ, ಉಂಟಾಗದಿರಲಿ, ಇವೆಲ್ಲವೂ ತಮೋಗುಣದ ಕಾರ್ಯವೆನಿಸಿದೆ.

ತತ್ರ ಯತ್ ಪ್ರೀತಿಸಂಯುಕ್ತಂ ಕಾಯೇ ಮನಸಿ ವಾ ಭವೇತ್ ।
ವರ್ತತೇ ಸಾತ್ತಿ ್ವಕೋ ಭಾವ ಇತ್ಯಪೇಕ್ಷೇತ ತತ್ತಥಾ ॥೩೪॥

ಅವುಗಳಲ್ಲಿ ಯಾವುದು ಶರೀರದಲ್ಲಿ, ಮನಸ್ಸಿನಲ್ಲಿ ಪ್ರೀತಿಯ ಸಂಯೋಗದಿಂದ ಹುಟ್ಟುತ್ತದೊ ಅದು ಸಾತ್ವಿಕವೆನಿಸಿದೆ. ಯಾವಾಗಲೂ ಹರ್ಷಚಿತ್ತನಾಗಿರುವುದು ಸಾತ್ವಿಕ ಗುಣಾಧಿಕ್ಯವುಳ್ಳವನ ಲಕ್ಷಣ.

ಯತ್ತು ಸಂತಾಪಸಂಯುಕ್ತಮಪ್ರೀತಿಕರಮಾತ್ಮನಃ ।
ಪ್ರವೃತ್ತಂ ರಜ ಇತ್ಯೇವ ತತಸ್ತದಭಿಚಿಂತಯೇತ್ ॥೩೫॥

ರಜೋಗುಣವು ಅಸಂತೋಷದಿಂದ ಕೂಡಿದ್ದು. ಮನಸ್ಸಿಗೆ ಅಪ್ರಿಯವನ್ನುಂಟು ಮಾಡತಕ್ಕದ್ದು. ಯಾವಾಗಲೂ ಅಸಂತೋಷ, ಅಪ್ರೀತಿಗಳಿದ್ದರೆ ರಜೋಗುಣದ ಅಭಿವೃದ್ಧಿಯನ್ನು ಚಿಂತಿಸಬೇಕು.

ಅಥ ಯನ್ಮೋಹಸಂಯುಕ್ತಂ ಕಾಯೇ ಮನಸಿ ವಾ ಭವೇತ್ ।
ಅಪ್ರತರ್ಕ್ಯಮವಿಜ್ಞೇಯಂ ತಮಸ್ತದುಪಧಾರಯೇತ್ ॥೩೬॥

ಶರೀರದಲ್ಲಿ, ಮನಸ್ಸಿನಲ್ಲಿ ಹೇಳಲಾಗದ ಮೋಹಭಾವವು ಉಂಟಾದಲ್ಲಿ ತಿಳಿಯಲಾಗದ ಇದಕ್ಕೆ ತಮೋಗುಣದ ಅಭಿವೃದ್ಧಿ ಎಂದು ತಿಳಿಯಬೇಕು.

ತದ್ಧಿ ಶ್ರೋತ್ರಾಶ್ರಯಂ ಭೂತಂ ಶಬ್ದಃ ಶ್ರೋತ್ರಂ ಸಮಾಶ್ರಿತಃ ।
ನೋಭಯಂ ಶಬ್ದವಿಜ್ಞಾನೇ ವಿಜ್ಞಾನಸ್ಯೇತರಸ್ಯ ವಾ ॥೩೭॥

ಶ್ರೋತ್ರಕ್ಕೆ ಆಶ್ರಯವೆನಿಸಿದ ಭೂತವು ಶಬ್ದವು. ಶ್ರೋತ್ರೇಂದ್ರಿಯವನ್ನು ಶಬ್ದವು ಆಶ್ರಯಿಸಿದೆ. ಶ್ರೋತ್ರೇಂದ್ರಿಯವು ಕೇವಲ ಶಬ್ದವಿಜ್ಞಾನದಲ್ಲಿಯೇ

ಶ್ರವಣಕಾಲದಲ್ಲಿ ಶ್ರೋತ್ರೇಂದ್ರಿಯಕ್ಕೂ, ಶಬ್ದರೂಪವಾದ ವಿಷಯಕ್ಕೂ, ಚಿತ್ತಕ್ಕೂ ಸಂಯೋಗ ಉಂಟಾಗುತ್ತದೆ. ಈ ಕರ್ಮದಲ್ಲಿಯೇ ಸ್ಪರ್ಶದ ಸಮಯದಲ್ಲಿ ತ್ವಗಿಂದ್ರಿಯ, ವಿಷಯ, ಚಿತ್ತ; ಕಣ್ಣಿನಿಂದ ನೋಡುವಾಗ ನೇತ್ರ, ನೇತ್ರಕ್ಕೆ ವಿಷಯವಾದ ರೂಪ, ಅದನ್ನು ಗ್ರಹಿಸುವ ಚಿತ್ತ ಇವುಗಳಿಗೆ ಸಂಯೋಗವಿದೆ. ರುಚಿ ನೋಡುವಾಗ ಜಿಹ್ವೆ, ರಸ, ಚಿತ್ತ; ಆಘ್ರಾಣಿಸುವಾಗ ನಾಸಿಕ, ಗಂಧ, ಚಿತ್ತ ಹೀಗೆ ಪರಸ್ಪರ ಸಂಯೋಗವಿದೆ.

ಏವಂ ಪಂಚತ್ರಿಕಾ ಹ್ಯೇತೇ ಗುಣಾಸ್ತದುಪಲಬ್ಧಯೇ ।
ಯೇನ ಯಸ್ತ್ರಿವಿಧೋ ಭಾವಃ ಪರ್ಯಾಯಾತ್ ಸಮುಪಸ್ಥಿತಃ ॥೨೯॥

ಹೀಗೆ ಮೂರು ಮೂರರಂತೆ ಐದು ಗುಂಪುಗಳಿವೆ. ಇದಕ್ಕೆ ಗುಣಗಳೆನ್ನುತ್ತಾರೆ. ಈ ಗುಣಗಳಿಂದ ಶಬ್ದಾದಿ ವಿಷಯಗಳ ಗ್ರಹಣವಾಗುತ್ತದೆ. ಅನುಭವವನ್ನು ತಿಳಿಸುವ ಕಾರಣದಿಂದ ಇವು ಕರ್ತ, ಕರ್ಮ, ಕರಣ ಎಂದು ಮೂರು ವಿಧವಾದ ಭಾವವನ್ನು ಹೊಂದಿವೆ. ಅವು ಕ್ರಮವಾಗಿ ಉಪಸ್ಥಿತವಾಗುತ್ತವೆ.

ಸಾತ್ತ್ವಿಕೋ ರಾಜಸಶ್ಚೈವ ತಾಮಸಶ್ಚೈವ ತೇ ತ್ರಯಃ ।
ತ್ರಿವಿಧಾ ವೇದನಾ ಯೇಷು ಪ್ರಸೂತಾ ಸರ್ವಸಾಧನಾ ॥೩೮॥

ಗುಣಗಳಲ್ಲಿಯೂ ಸಾತ್ತ್ವಿಕ, ರಾಜಸ, ತಾಮಸ ಎಂದು ಮೂರು ಭೇದವಿದೆ. ಇವುಗಳಿಂದ ದೊರಕುವ ಅನುಭವವು ಹರ್ಷ, ಪ್ರೀತಿ, ವಿಷಾದ ಎಂದು ಮೂರು ಪ್ರಕಾರವಾಗಿದೆ. ಇವು ಎಲ್ಲ ಸಾಧನೆಗಳನ್ನು ಉಂಟುಮಾಡುತ್ತವೆ.

ಪ್ರಹರ್ಷಃ ಪ್ರೀತಿರಾನಂದಃ ಸುಖಂ ಸಂಶಾಂತಚಿತ್ತತಾ ।
ಅಕುತಶ್ಚಿತ್ ಕುತಶ್ಚಿದ್ವಾ ಚಿತ್ತತಃ ಸಾತ್ತ್ವಿಕೋ ಗುಣಃ ॥೩೧॥

ಹರ್ಷ, ಪ್ರೀತಿ, ಆನಂದ, ಚಿತ್ತಶಾಂತಿ ಇವುಗಳು ಕಾರಣದಿಂದಲೋ, ಅಕಾರಣದಿಂದಲೋ ಉಂಟಾಗಲಿ. ಇವುಗಳೆಲ್ಲವನ್ನೂ ಸಾತ್ತ್ವಿಕಗುಣವೆನ್ನುತ್ತಾರೆ.

ಅತುಷ್ಟಿಃ ಪರಿತಾಪಶ್ಚ ಶೋಕೋ ಲೋಭಸ್ತಥಾಕ್ಷಮಾ ।
ಲಿಂಗಾನಿ ರಜಸಸ್ತಾನಿ ದೃಶ್ಯಂತೇ ಹೇತ್ವಹೇತುತಃ ॥೩೨॥

ಅಸಂತೋಷ, ಸಂತಾಪ, ಶೋಕ, ಲೋಭ, ಅಸಹನಶೀಲತೆ - ಇವುಗಳು ನಮಗೆ ತಿಳಿಯದ ಕಾರಣದಿಂದಲಾಗಲೀ ಉಂಟಾದಲ್ಲಿ ಇವುಗಳನ್ನು ರಾಜಸ ಗುಣದ ಕಾರ್ಯ ಎನ್ನುತ್ತಾರೆ.

ಅವಿವೇಕಸ್ತಥಾ ಮೋಹಃ ಪ್ರಮಾದಃ ಸ್ವಪ್ನತಂದ್ರಿತಾ ।
ಕಥಂಚಿದಪಿ ವರ್ತಂತೇ ವಿವಿಧಾಸ್ತಾಮಸಾ ಗುಣಾಃ ॥೩೩॥

ಅವಿವೇಕ, ಮೋಹ, ಪ್ರಮಾದ, ಸ್ವಪ್ನ, ಆಲಸ್ಯ - ಇವುಗಳು ಯಾವುದೇ ಕಾರಣದಿಂದ ಉಂಟಾಗಲಿ, ಉಂಟಾಗದಿರಲಿ, ಇವೆಲ್ಲವೂ ತಮೋಗುಣದ ಕಾರ್ಯವೆನಿಸಿದೆ.

ತತ್ರ ಯತ್ ಪ್ರೀತಿಸಂಯುಕ್ತಂ ಕಾಯೇ ಮನಸಿ ವಾ ಭವೇತ್ ।
ವರ್ತತೇ ಸಾತ್ತ್ವಿಕೋ ಭಾವ ಇತ್ಯಪೇಕ್ಷೇತ ತತ್ತಥಾ ॥೩೪॥

ಅವುಗಳಲ್ಲಿ ಯಾವುದು ಶರೀರದಲ್ಲಿ, ಮನಸ್ಸಿನಲ್ಲಿ ಪ್ರೀತಿಯ ಸಂಯೋಗದಿಂದ ಹುಟ್ಟುತ್ತದೊ ಅದು ಸಾತ್ವಿಕವೆನಿಸಿದೆ. ಯಾವಾಗಲೂ ಹರ್ಷಚಿತ್ತನಾಗಿರುವುದು ಸಾತ್ವಿಕ ಗುಣಾಧಿಕ್ಯವುಳ್ಳವನ ಲಕ್ಷಣ.

ಯತ್ತು ಸಂತಾಪಸಂಯುಕ್ತಮಪ್ರೀತಿಕರಮಾತ್ಮನಃ ।
ಪ್ರವೃತ್ತಂ ರಜ ಇತ್ಯೇವ ತತಸ್ತದಭಿಚಿಂತಯೇತ್ ॥೩೫॥

ರಜೋಗುಣವು ಅಸಂತೋಷದಿಂದ ಕೂಡಿದ್ದು. ಮನಸ್ಸಿಗೆ ಅಪ್ರಿಯವನ್ನುಂಟು ಮಾಡತಕ್ಕದ್ದು. ಯಾವಾಗಲೂ ಅಸಂತೋಷ, ಅಪ್ರೀತಿಗಳಿದ್ದರೆ ರಜೋಗುಣದ ಅಭಿವೃದ್ಧಿಯನ್ನು ಚಿಂತಿಸಬೇಕು.

ಅಥ ಯನ್ಮೋಹಸಂಯುಕ್ತಂ ಕಾಯೇ ಮನಸಿ ವಾ ಭವೇತ್ ।
ಅಪ್ರತರ್ಕ್ಯಮವಿಜ್ಞೇಯಂ ತಮಸ್ತದುಪಧಾರಯೇತ್ ॥೩೬॥

ಶರೀರದಲ್ಲಿ, ಮನಸ್ಸಿನಲ್ಲಿ ಹೇಳಲಾಗದ ಮೋಹಭಾವವು ಉಂಟಾದಲ್ಲಿ ತಿಳಿಯಲಾಗದ ಇದಕ್ಕೆ ತಮೋಗುಣದ ಅಭಿವೃದ್ಧಿ ಎಂದು ತಿಳಿಯಬೇಕು.

ತದ್ಧಿ ಶ್ರೋತ್ರಾಶ್ರಯಂ ಭೂತಂ ಶಬ್ದಃ ಶ್ರೋತ್ರಂ ಸಮಾಶ್ರಿತಃ ।
ನೋಭಯಂ ಶಬ್ದವಿಜ್ಞಾನೇ ವಿಜ್ಞಾನಸ್ಯೇತರಸ್ಯ ವಾ ॥೩೭॥

ಶ್ರೋತ್ರಕ್ಕೆ ಆಶ್ರಯವೆನಿಸಿದ ಭೂತವು ಶಬ್ದವು. ಶ್ರೋತ್ರೇಂದ್ರಿಯವನ್ನು ಶಬ್ದವು ಆಶ್ರಯಿಸಿದೆ. ಶ್ರೋತ್ರೇಂದ್ರಿಯವು ಕೇವಲ ಶಬ್ದವಿಜ್ಞಾನದಲ್ಲಿಯೇ

ಕಾರಣವಾಗಿರುವುದಿಲ್ಲ. ಕೆಲವೊಮ್ಮೆ ಅಜ್ಞಾನಕ್ಕೂ ಕಾರಣವಾಗುತ್ತದೆ. ಸುಷುಪ್ತಿ ದೆಸೆಯಲ್ಲಿ ಶ್ರೋತ್ರವು ಅಜ್ಞಾನಕ್ಕೂ, ಜಾಗ್ರದವಸ್ಥೆಯಲ್ಲಿ ವಿಜ್ಞಾನಕ್ಕೂ ಕಾರಣವಾಗುತ್ತದೆ ಎಂದು ಭಾವ.

ಏವಂ ತ್ವಕ್ಚಕ್ಷುಷೀ ಜಿಹ್ವಾ ನಾಸಿಕಾ ಚೈವ ಪಂಚಮೀ ।
ಸ್ಪರ್ಶೇ ರೂಪೇ ರಸೇ ಗಂಧೇ ವಾಚಿ ಚೇತೋ ಮನಶ್ಚ ಯತ್ ॥೩೮॥

ಹೀಗೆ ಚರ್ಮ, ಕಣ್ಣು, ನಾಲಿಗೆ, ಮೂಗು ಇವುಗಳು ಕ್ರಮವಾಗಿ ಸ್ಪರ್ಶ, ರೂಪ, ರಸ, ಗಂಧಗಳಿಗೆ ಆಶ್ರಯಗಳಾಗಿವೆ. ಆದರೆ ಇವುಗಳೆಲ್ಲದಕ್ಕೂ ಎಲ್ಲ ಕಡೆಯೂ ಸಂಕಲ್ಪ-ವಿಕಲ್ಪಗಳಿಗೆ ಕಾರಣವು ಮನಸ್ಸೇ ಆಗಿದೆ.

ಸ್ವಕರ್ಮಯುಗಪದ್ಭಾವೋ ದಶಸ್ವೇತೇಷು ತಿಷ್ಠತಿ ।
ಚಿತ್ತಮೇಕಾದಶಂ ವಿದ್ಧಿ ಬುದ್ಧಿರ್ದ್ವಾದಶಮೀ ಭವೇತ್ ॥೩೯॥

ಹತ್ತು ಇಂದ್ರಿಯಗಳಿಗೂ ತಮ್ಮ ತಮ್ಮ ವ್ಯಾಪಾರಗಳಲ್ಲಿ ಯೌಗಪದ್ಯವು ಎಂದರೆ ಕೇಳುತ್ತೇನೆ, ನೋಡುತ್ತೇನೆ, ಹೋಗುತ್ತೇನೆ, ಧರಿಸುತ್ತೇನೆ, ಕುಡಿಯುತ್ತೇನೆ ಎಂಬ ಭಾವವನ್ನು ಮನಸ್ಸು ಜೀವನಿಗೆ ಹುಟ್ಟಿಸುತ್ತದೆ. ಆದ್ದರಿಂದ ಹತ್ತು ಇಂದ್ರಿಯಗಳ ಜೊತೆಗೂ ಏಕಕಾಲದಲ್ಲಿ ವ್ಯಾಪಾರ ಮಾಡುವ ಸಾಮರ್ಥ್ಯವು ಮನಸ್ಸಿನದ್ದು. ಇದು ಹನ್ನೊಂದನೆಯ ಇಂದ್ರಿಯವೆನಿಸಿದರೆ, ಇದನ್ನು ನಿಯಮಿಸುವ ಬುದ್ಧಿಯು ಹನ್ನೆರಡನೆಯ ಇಂದ್ರಿಯ ಎನಿಸಿದೆ.

ತೇಷಾಮಯುಗಪದ್ಭಾವೇ ಉಚ್ಚೇದೋ ನಾಸ್ತಿ ತಾಮಸಃ ।
ಆಸ್ಥಿತೋ ಯುಗಪದ್ಭಾವೇ ವ್ಯವಹಾರಃ ಸ ಲೌಕಿಕಃ ॥೪೦॥

ತಮೋಗುಣ ಜನಿತವಾದ ಸುಷುಪ್ತಿಕಾಲದಲ್ಲಿ ಇಂದ್ರಿಯಗಳೆಲ್ಲವೂ ಮನಸ್ಸಿನಲ್ಲಿ ಲಯ ಹೊಂದಿರುವುದರಿಂದ ಮನಸ್ಸು ವಿಷಯಗಳನ್ನು ಗ್ರಹಿಸುವುದಿಲ್ಲ. ಆದ್ದರಿಂದ ಆ ಸುಷುಪ್ತಿಯ ಸಮಯದಲ್ಲಿ ಕ್ಲೇಶವು ಇರುವುದಿಲ್ಲ. ಇಂದ್ರಿಯಗಳು ವಿಷಯಗಳನ್ನು ಏಕಕಾಲದಲ್ಲಿ ಗ್ರಹಣ ಮಾಡುತ್ತವೆ ಎಂಬುದು ಲೌಕಿಕ ವ್ಯವಹಾರದಲ್ಲಿಯೇ ಕಂಡು ಬರುತ್ತದೆ.

ಇಂದ್ರಿಯಾಣ್ಯವಸೃಜ್ಯಾಪಿ ದೃಷ್ಟಾ ಪೂರ್ವಂ ಶ್ರುತಾಗಮಮ್ ।
ಚಿಂತಯನ್ನಾನುಪಯೇ೯ತಿ ತ್ರಿಭಿರೇವಾನ್ವಿತೋ ಗುಣೈಃ ॥೪೧॥

ಜಾಗ್ರದವಸ್ಥೆಯಲ್ಲಿ ಶಬ್ದಾದಿ ವಿಷಯಗಳ ಪ್ರಾಪ್ತಿಯು ಉಂಟಾಗುವುದರಿಂದ ಸ್ವಪ್ನಾವಸ್ಥೆಯಲ್ಲಿಯೂ ಪುರುಷನು ಸೂಕ್ಷ್ಮ ಇಂದ್ರಿಯಗಳ ಮೂಲಕ ವಿಷಯಾಸಕ್ತಿಯನ್ನು ಹೊಂದಿ ಮೂರುಗುಣಗಳಿಂದ ಯುಕ್ತನಾಗಿ ಶರೀರದಲ್ಲಿ ಸಂಚರಿಸುತ್ತಾನೆ.

ಯತ್ತಮೋಪಹತಂ ಚಿತ್ತಮಾಶು ಸಂಚಿರಮಧ್ರುವಮ್ ।
ಕರೋತ್ಯುಪರಮಂ ಕಾಲೇ ತದಾಹುಸ್ತಾಮಸಂ ಸುಖಮ್ ॥೪೨॥

ಸುಷುಪ್ತಿಕಾಲದಲ್ಲಿ ಮನಸ್ಸು ತಮೋಗುಣದಿಂದ ಕೂಡಿ ತನ್ನ ಪ್ರವೃತ್ತಿಗಳನ್ನು ಉಪಸಂಹರಿಸಿ ಸಂತೋಷವನ್ನು ಹೊಂದುತ್ತದೆ. ಅದನ್ನು ತಾಮಸ ಸುಖ ಎನ್ನುತ್ತಾರೆ ವಿದ್ವಾಂಸರು.

ಯದ್ಯದಾಗಮಸಂಯುಕ್ತಂ ನ ಕೃತ್ಸ್ನಮುಪಶಾಮ್ಯತಿ ।
ಅಥ ತತ್ರಾಪ್ಯುಪಾದತ್ತೇ ತಮೋ ವ್ಯಕ್ತಮಿವಾನೃತಮ್ ॥೪೩॥

ಮನುಷ್ಯನು ಕನಸ್ಸಿನಲ್ಲಿ ಕಾಣುವ ಕಷ್ಟಗಳನ್ನು ಸುಷುಪ್ತಿಯ ಕಾಲದಲ್ಲಿ ಕಾಣುವುದಿಲ್ಲ. ಸುಷುಪ್ತಿ ಕಾಲದಲ್ಲಿಯೂ ಅಂಧಕಾರದಂತೆ ವ್ಯಾಪಿಸಿದ ತಮೋಗುಣದಿಂದ ಬದ್ಧನಾಗಿ ಜೀವನು ಮಿಥ್ಯಾಸುಖವನ್ನು ಅನುಭವಿಸುತ್ತಾನೆ.

ಏವಮೇಷ ಪ್ರಸಂಖ್ಯಾತಃ ಸ್ವಕರ್ಮಪ್ರತ್ಯಯೋ ಗುಣಃ ।
ಕಥಂಚಿದ್ ವರ್ತತೇ ಸಮ್ಯಕ್ ಕೇಷಾಂಚಿದ್ ವಾ ನಿವರ್ತತೇ ॥೪೪॥

ಹೀಗೆ ಕರ್ಮಾನುಸಾರವಾಗಿ ಗುಣವು ಪ್ರಾಪ್ತವಾಗುವ ಬಗೆಯನ್ನು ಹೇಳಿಯಾಯಿತು. ಅಜ್ಞಾನಿಗಳಾದ ತಾಮಸರಲ್ಲಿ ತಮೋಗುಣವು ಬೃಹದ್ರೂಪದಲ್ಲಿರುತ್ತದೆ. ಜ್ಞಾನಿಗಳಿಂದ ದೂರವಾಗಿರುತ್ತದೆ.

ಅಹಮಿತ್ಯೇಷ ವೈ ಭಾವೋ ನಾನ್ಯತ್ರ ಪ್ರತಿತಿಷ್ಠತಿ ।
ಯಸ್ಯ ಭಾವೋ ಹ್ಯಜೇ ನಿತ್ಯಂ ಸ ವೈ ವಿದ್ವಾನ್ನಚೇತರಃ ॥೪೫॥

ಯಾವ ಪುರುಷನು ಅಹಂ ಎಂಬ ಭಾವವನ್ನು ತನ್ನಲ್ಲಿ ಬಿಟ್ಟು ಬೇರೆ ಕಡೆ ತಿಳಿಯುವುದಿಲ್ಲವೋ, ನಾನು ಬ್ರಹ್ಮನು, ಸರ್ವ ಜೀವರು ನಾನೇ ಆಗಿದ್ದೇನೆ ಎಂದು ಯಾರ ಬುದ್ಧಿಯು ಕೆಲಸ ಮಾಡುವುದಿಲ್ಲವೋ, ಯಾರ ಬುದ್ಧಿಯಲ್ಲಿ ಪರಮಾತ್ಮನ ವಿಷಯಕವಾದ ಭಕ್ತಿಯು ದೃಢವಾಗಿರುತ್ತದೋ ಅವನೇ ವಿದ್ವಾಂಸನೆನಿಸುತ್ತಾನೆ, ಬೇರೆಯವನಲ್ಲ.

ದೇಹಧರ್ಮಸ್ತಥಾ ನಿತ್ಯಂ ಸರ್ವಭೂತೇಷು ವೈ ದೃಢಃ ।
ಏತೇನೈವಾನುಮಾನೇನ ತ್ಯಾಜ್ಯೋ ಧರ್ಮಸ್ತಥಾ ಹ್ಯಸೌ ॥೪೬॥

ಜೀವರಲ್ಲಿ ದೇಹಧರ್ಮಗಳಾದ ಸುಖ-ದುಃಖಾದಿಗಳು ಚಿತ್ರವಿಚಿತ್ರವಾಗಿ ಹೇಗೆ ಕಾಣಿಸುತ್ತವೋ ಪ್ರತಿಯೊಬ್ಬರ ಸುಖ-ದುಃಖಗಳು ಭಿನ್ನಭಿನ್ನವೋ ಇದೇ ಯುಕ್ತಿಯಿಂದ ಜೀವಾತ್ಮ-ಪರಮಾತ್ಮರು ಅತ್ಯಂತ ಭಿನ್ನರೇ ಆಗಿದ್ದಾರೆ. ಹಿಮ-ಅಗ್ನಿಗಳಲ್ಲಿ ಹೇಗೆ ಅಭೇದವು ತ್ಯಾಜ್ಯವೊ ಹಾಗೆ ಜೀವ-ಪರಮಾತ್ಮರಲ್ಲಿಯೂ ಅಭೇದವು ತ್ಯಾಜ್ಯವಾಗಿದೆ.

ಜ್ಞಾನೇನ ಮುಚ್ಯತೇ ಜಂತುರ್ಧರ್ಮಾತ್ಮಾ ಜ್ಞಾನವಾನ್ ಭವೇತ್ ।
ಧರ್ಮೇಣ ಧಾರ್ಯತೇ ಲೋಕಃ ಸರ್ವಂ ಧರ್ಮೇ ಪ್ರತಿಷ್ಠಿತಮ್ ॥

ಭಗವಂತನ ಜ್ಞಾನದಿಂದಲೇ ಜಂತುವು ಬಿಡುಗಡೆಯನ್ನು ಹೊಂದುತ್ತಾನೆ. ಧರ್ಮಾತ್ಮನಾದ ವ್ಯಕ್ತಿಯು ಭಗವದ್‌ಜ್ಞಾನವನ್ನು ಹೊಂದುತ್ತಾನೆ. ಧರ್ಮದಿಂದ ಲೋಕವೇ ಧರಿಸಲ್ಪಟ್ಟಿದೆ. ಎಲ್ಲವೂ ಧರ್ಮದಲ್ಲೇ ಪ್ರತಿಷ್ಠಿತವಾಗಿದೆ.

ಸರ್ವಾರ್ಥಜನಕಶ್ಚೈವ ಧರ್ಮಃ ಸರ್ವಸ್ಯ ಕಾರಣಮ್ ।
ಸರ್ವೋ ಹಿ ದೃಶ್ಯತೇ ಲೋಕೇ ನ ಸರ್ವಾರ್ಥಃ ಕಥಂಚನ ॥೪೮॥

ಸಮಸ್ತ ಪುರುಷಾರ್ಥಗಳನ್ನು ಹುಟ್ಟಿಸುವುದು ಧರ್ಮವೇ ಆಗಿದೆ. ಆದ್ದರಿಂದ ಎಲ್ಲದಕ್ಕೂ ಕಾರಣವಾದುದು ಧರ್ಮವು. ಜಗತ್ತಿನಲ್ಲಿ ಎಲ್ಲವೂ ಕಾಣಿಸುತ್ತದೆ. ಆದರೆ ಯಾವುದನ್ನೂ ಜೀವನು ಪುರುಷಾರ್ಥವೆಂದು ಭಾವಿಸಬಾರದು.

ಸರ್ವತ್ಯಾಗೇ ಕೃತೇ ತಸ್ಮಾತ್ ಪರಮಾತ್ಮಾ ಪ್ರಸೀದತಿ ।
ವ್ಯಕ್ತಾದವ್ಯಕ್ತಮತುಲಂ ಲೋಕೇಷು ಪರಿವರ್ತತೇ ॥೪೯॥

ಸಮಸ್ತವನ್ನೂ ತ್ಯಜಿಸಿದ ಬಳಿಕ ಅದರಿಂದ ಪರಮಾತ್ಮನು ಪ್ರಸನ್ನನಾಗುತ್ತಾನೆ. ಕ್ಷಿತ್ಯಾದಿ ಕಾರ್ಯಕ್ಕಿಂತಲೂ ಅವ್ಯಕ್ತನಾದ ಅರ್ಥಾತ್ ಅದೃಶ್ಯನಾದ ಬ್ರಹ್ಮನು ಲೋಕದಲ್ಲಿ ಅಂತರ್ಯಾಮಿಯಾಗಿದ್ದು ಎಲ್ಲರನ್ನೂ ನಿಯಮಿಸುತ್ತಿದ್ದಾನೆ.

ಏವಮಾಹುಃ ಸಮಾಹಾರಂ ಕ್ಷೇತ್ರಮಧ್ಯಾತ್ಮಚಿಂತಕಾಃ ।
ಸ್ಥಿತೋ ಮನಸಿ ಯೋ ಭಾವಃ ಸ ವೈ ಕ್ಷೇತ್ರಜ್ಞ ಉಚ್ಯತೇ ॥೫೦॥

ಜ್ಞಾನಿಗಳು, ಅಧ್ಯಾತ್ಮಚಿಂತಕರು, ಸ್ವದೇಹದಲ್ಲಿರುವ ಪರಮಾತ್ಮನನ್ನು ಚಿಂತಿಸುವ ವ್ಯಕ್ತಿಗಳು ಇದನ್ನು ಸಮಾಹಾರವೆನ್ನುತ್ತಾರೆ. ಸಮಸ್ತ ದೇಹವ್ಯಾಪಾರ ಎಂದು ತಿಳಿಯುವವನು ಕ್ಷೇತ್ರಜ್ಞ ನೆನಿಸಿದ ಜೀವನಾಗಿದ್ದಾನೆ.

ಏವಂ ಸತಿ ಕ ಉಚ್ಛೇದಃ ಶಾಶ್ವತೋ ವಾ ಕಥಂ ಭವೇತ್ ।
ಸ್ವಭಾವಾದ್ ವರ್ತಮಾನೇಷು ಸರ್ವಭೂತೇಷು ಹೇತುಷು ॥೫೧॥

ಹೀಗಿರುತ್ತಿರಲು ಮರಣಾನಂತರದಲ್ಲಿ ಮೋಕ್ಷದಲ್ಲಿ ಜ್ಞಾನವು ಇರುವುದಿಲ್ಲ. ಎಂದರೆ ಅಪ್ರಾಕೃತ ಜ್ಞಾನವನ್ನು ಪಡೆದಾಗ ಪ್ರಾಕೃತ ಜ್ಞಾನವು ಇರುವುದಿಲ್ಲ ಎಂದೇ ಹೇಳಬೇಕು. 'ಏವಂ ಸತಿ' ಎಂದರೆ ಪರಮಾತ್ಮನ ಉದರವನ್ನು ಹೊಂದುತ್ತಿರಲು ಹೇಗೆ ಜ್ಞಾನವಿಲ್ಲವಾಗುತ್ತದೆ ಎಂದರೆ ಅಪ್ರಾಕೃತಜ್ಞಾನ ಉಂಟಾಗುತ್ತದೆ, ಪ್ರಾಕೃತಜ್ಞಾನ ಇಲ್ಲವಾಗುತ್ತದೆ ಎಂದೇ ಅರ್ಥ. ಏಕೆಂದರೆ ಸಕಲ ಪ್ರಾಕೃತ ದೇಹೇಂದ್ರಿಯಾದಿಗಳೆಲ್ಲವೂ ಆತ್ಮನ ವಿಷಯದಲ್ಲಿ ನಾಶ ಹೊಂದಿರುತ್ತವೆ. ಸಮಸ್ತ ದೇಹೇಂದ್ರಿಯಾದಿಗಳನ್ನು ಸಂಹರಿಸಿಕೊಂಡು ಭಗವಂತನು ಜೀವನನ್ನು ಅನುಗ್ರಹಿಸುತ್ತಿರಲು ಲೌಕಿಕ ಜ್ಞಾನವು ಉಂಟಾಗುವುದಿಲ್ಲ. ಶಾಶ್ವತವಾದ ಅಪ್ರಾಕೃತ ಜ್ಞಾನವೇ ಜೀವನಿಗೆ ಲಭಿಸುತ್ತದೆ. ಆದ್ದರಿಂದ ಪ್ರಕೃತಿಗೆ ಅನುಸಾರವಾದ ಜ್ಞಾನವು ಶಾಶ್ವತ ಹೇಗೆ ಆಗುತ್ತದೆ? ಜೀವನ ಸ್ವರೂಪಭೂತವಾದ ಗುಣಗಳು ಸಮಸ್ತ ಜೀವರಲ್ಲೂ ಇರುವುದರಿಂದ ಈಗಿರುವ ಜ್ಞಾನವು ನಿತ್ಯಜ್ಞಾನವೆನಿಸುವುದಿಲ್ಲ. ಜೀವನ ಸ್ವರೂಪಭೂತವಾದ ಗುಣಗಳೇ ನಿತ್ಯವೆನಿಸಿವೆ ಎಂದು ತಾತ್ಪರ್ಯ.

ಯಥಾರ್ಣವಗತಾ ನದ್ಯೋ ವ್ಯಕ್ತೀರ್ಜಹತಿ ನಾಮ ಚ ।
ನ ಚ ಸ್ವತಾಂ ನಿಯಚ್ಛಂತಿ ತಾದೃಶಃ ಸತ್ತ್ವಸಂಕ್ಷಯಃ ॥೫೨॥

ನದಿಗಳು ಸಮುದ್ರದೊಡನೆ ಸೇರಿ ತಮ್ಮ ವ್ಯಕ್ತಿತ್ವವನ್ನು, ಹೆಸರನ್ನು ಹೇಗೆ ಕಳೆದುಕೊಳ್ಳುತ್ತವೋ, ಎಲ್ಲ ನದಿಗಳು ಸಮುದ್ರದಲ್ಲಿ ಸೇರಿದಾಗ ತಮ್ಮ ಹೆಸರು ನಾಮಗಳನ್ನು ಬಿಡುವಂತೆ ಸಾತ್ವಿಕರು ತಮ್ಮ ಮೂಲಕಾರಣದಲ್ಲಿ ಸೇರಿದಾಗ ಪ್ರಕೃತಿ ವ್ಯವಹಾರದಲ್ಲಿರುವ ನಾಮಗಳನ್ನು ಬುದ್ಧಿಯು ಬಿಡುತ್ತದೆ. ಸ್ವರೂಪಭೂತವಾದ ಗುಣಗಳನ್ನು ಸಂಗ್ರಹಿಸಿಕೊಳ್ಳುತ್ತದೆ.

ವ್ಯಾಖ್ಯಾನ ವಿಶೇಷ– ನದಿಗಳು ಸಮುದ್ರವನ್ನು ಸೇರಿದಾಗ ಗಂಗಾ, ಯಮುನಾ, ಸರಸ್ವತಿ ಎಂಬ ವ್ಯವಹಾರ ಇಲ್ಲದೇ ಇದ್ದರೂ ಸಮುದ್ರರಾಜನಿಗೆ ಈ ಸಮಸ್ತ ನದಿಗಳ ಸ್ವರೂಪಜ್ಞಾನವು ಇದೆ. ಜಗತ್ತಿನ ಲೋಕವ್ಯವಹಾರ ನಿಲ್ಲುತ್ತದೆ ಎಂಬುದಷ್ಟುಮಾತ್ರ ಸತ್ಯವೇ ವಿನಾ ನದಿಗಳ ಸ್ವರೂಪವೇ ನಾಶವಾಗುತ್ತದೆ ಎಂದು ಅರ್ಥವಲ್ಲ. ಇದರಂತೆ ಜೀವನ ಪ್ರಾಕೃತಜ್ಞಾನಗಳು ನಾಶವಾದರೂ ಸ್ವರೂಪಭೂತಜ್ಞಾನಗಳು ಅಭಿವ್ಯಕ್ತಿಯನ್ನು ಹೊಂದುತ್ತವೆ ಎಂದೇ ಅರ್ಥ.

ಏವಂ ಸತಿ ಕುತಃ ಸಂಜ್ಞಾ ಪ್ರೇತ್ಯಭಾವೇ ಪುನರ್ಭವೇತ್ ।
ಪ್ರತಿಸಂಮಿಶ್ರಿತೇ ಜೀವೇ ಗೃಹ್ಯಮಾಣೇ ಚ ಸರ್ವತಃ ॥೫೩॥

ಈ ರೀತಿಯಾಗಿರಲು ಮರಣಾನಂತರ ಈ ಲೌಕಿಕವಾದ ಪ್ರಜ್ಞೆಯನ್ನು ಜೀವನು ಹೇಗೆ ಹೊಂದಲು ಸಾಧ್ಯ? ಭಗವಂತನು ಜೀವನ ಜೊತೆಗೆ ಮಿಶ್ರಣವಾದ ಲೌಕಿಕ ಗುಣಗಳನ್ನು ಸಂಹರಿಸಿ ಸ್ವರೂಪಭೂತವಾದ ಗುಣಗಳನ್ನು ಸ್ವೀಕರಿಸಿದ್ದರಿಂದ ಲೌಕಿಕ ಜ್ಞಾನವಿಲ್ಲವೆಂದೇ ಹೇಳಬೇಕು.

ಇಮಾಂ ತು ಯೋ ವೇದ ವಿಮೋಕ್ಷಬುದ್ಧಿ-
ಮಾತ್ಮಾನಮನ್ವಿಚ್ಛತಿ ಚಾಪ್ರಮತ್ತಃ ।
ನ ಲಿಪ್ಯತೇ ಕರ್ಮಫಲೈರನಿಷ್ಟೈಃ
ಪತ್ರಂ ಬಿಸಸ್ಯೇವ ಜಲೇನ ಸಿಕ್ತಮ್ ॥೫೪॥

ಯಾವನು ಇಂತಹ ಮೋಕ್ಷವಿದ್ಯೆಯನ್ನು ತಿಳಿಯುತ್ತಾನೋ ಅವನು ಅಪ್ರಮತ್ತನಾಗಿ ಆತ್ಮತತ್ತ್ವವನ್ನು ಅನುಸಂಧಾನ ಮಾಡಿದ ಕಾರಣದಿಂದ ನೀರಿನಿಂದ ಕೂಡಿರುವ ತಾವರೆಯ ಎಲೆಯಂತೆ ಅನಿಷ್ಟವಾದ ಕರ್ಮಫಲದಿಂದ ಯುಕ್ತನಾಗುವುದಿಲ್ಲ.

ದೃಢೈಶ್ಚ ಪಾಶೈರ್ಬಹುಭಿರ್ವಿಮುಕ್ತಃ
ಪ್ರಜಾನಿಮಿತ್ತೈರಪಿ ದೈವತೈಶ್ಚ ।

ಯದಾ ಹ್ಯಸೌ ಸುಖದುಃಖೇ ಜಹಾತಿ
ಮುಕ್ತಸ್ತದಾಗ್ರ್ಯಂ ಗತಿಮೇತ್ಯಲಿಂಗಃ ॥೫೫॥

ದೃಢವಾದ ಪಾಶವೆನಿಸಿದ ಅವಿದ್ಯಾ ಕಾಮಕರ್ಮಗಳಿಂದ ಮುಕ್ತನಾದ ಜೀವನು ಪುತ್ರ , ಕಳತ್ರಾದಿ ನಿಮಿತ್ತಗಳಿಂದ ಮುಕ್ತನಾದ ಕಾರಣದಿಂದ, ದೇವತಾನಿಮಿತ್ತವಾದ ಕರ್ಮಗಳನ್ನೂ ತ್ಯಜಿಸಿದ್ದರಿಂದ, ಬಾಹ್ಯವಾದ ಸುಖ-ದುಃಖಗಳನ್ನೆಲ್ಲ ಲಿಂಗದೇಹವನ್ನು ಕಳೆದುಕೊಂಡು ಪರಿಹರಿಸಿಕೊಂಡಿರುವ ಕಾರಣದಿಂದ ಮುಕ್ತನಾಗಿರುವ ಚೇತನನು ಶ್ರೇಷ್ಠವಾದ ಸ್ಥಿತಿಯನ್ನು ಹೊಂದುತ್ತಾನೆ.

ಶ್ರುತಿಪ್ರಮಾಣಾಗಮಮಂಗಲೈಶ್ಚ
ಶೇತೇ ಜರಾಮೃತ್ಯುಭಯಾದತೀತಃ ॥೫೬॥

ಬ್ರಹ್ಮನನ್ನು ಕೊಂಡಾಡುವ ಶ್ರುತಿ-ಪ್ರಮಾಣಗಳನ್ನು ಸರಿಯಾಗಿ ತಿಳಿದು ಸಾಗಿದಾಗ ಜರಾ-ಮರಣಗಳಿಂದ ಅತೀತನಾಗಿ ಶಾಂತಿಯಿಂದ ನಿದ್ರಿಸುತ್ತಾನೆ.

ಕ್ಷೀಣೇ ಚ ಪುಣ್ಯೇ ವಿಗತೇ ಚ ಪಾಪೇ
ತತೋನಿಮಿತ್ತೇ ಚ ಫಲೇ ವಿನಷ್ಟೇ ।
ಅಲೇಪಮಾಕಾಶಮಲಿಂಗಮೇವ-
ಮಾಸ್ಥಾಯ ಪಶ್ಯಂತಿ ಮಹದ್ವ್ಯಸಕ್ತಾಃ ॥೫೭॥

ಅನಿಷ್ಟಪುಣ್ಯಗಳು ನಾಶವಾದ ಬಳಿಕ, ಪಾಪಗಳೂ ನಾಶವಾದ ಬಳಿಕ, ಅದರಿಂದ ಉಂಟಾದ ಸುಖ-ದುಃಖಾದಿ ಫಲಗಳೂ ನಾಶವಾದ ಬಳಿಕ ಲಿಂಗದೇಹರಹಿತನಾದ, ಆಕಾಶದಂತೆ ನಿರ್ಲಿಪ್ತನಾದ ಜೀವನು ತನ್ನ ಸ್ವರೂಪವನ್ನು ಹೊಂದಿ ಸಂಸಾರದಲ್ಲಿ ನಿರಾಸಕ್ತಿಯನ್ನು ಹೊಂದುತ್ತಾನೆ. ಸ್ವರೂಪೇಂದ್ರಿಯಗಳಿಂದಲೇ ಎಲ್ಲವನ್ನೂ ನೋಡುತ್ತಾನೆ.

ಯಥೋರ್ಣನಾಭಿಃ ಪರಿವರ್ತಮಾನ-
ಸ್ತಂತುಕ್ಷಯೇ ತಿಷ್ಠತಿ ಪಾತ್ಯಮಾನಃ ।
ತಥಾ ವಿಮುಕ್ತಃ ಪ್ರಜಹಾತಿ ದುಃಖಂ
ವಿಧ್ವಂಸತೇ ಲೋಷ್ಟ ಇವಾದ್ರಿಮರ್ಚ್ಚನ್ ॥೫೮॥

ಯಾವ ರೀತಿಯಾಗಿ ಜೇಡರ ಹುಳುವು ತಾನೇ ಕಲ್ಪಿಸಿಕೊಂಡ ಬಲೆಯಲ್ಲಿ ಸೇರಿಕೊಂಡಿರುತ್ತದೆ. ತನ್ನ ಗೂಡನ್ನು ಬಿಟ್ಟು ಹೊರಗೆ ಬಂದಾಗ ಬಲೆಯಿಂದ ಮುಕ್ತವಾಗುತ್ತದೆ. ಇದರಂತೆ ಮುಕ್ತಾತ್ಮನು ಕಲ್ಲಿನ ಪರ್ವತದಿಂದ ಬಿದ್ದ ಹೆಂಟೆಯು ಪುಡಿಪುಡಿಯಾಗುವಂತೆ ಸಮಸ್ತ ದುಃಖಬಂಧನಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ.

ಯಥಾ ರುರುಃ ಶೃಂಗಮಧೋ ಪುರಾಣಂ
ಹಿತ್ವಾ ತ್ವಚಂ ವಾಪ್ಯುರಗೋ ಯಥಾವತ್ ।
ವಿಹಾಯ ಗಚ್ಛತ್ಯನವೇಕ್ಷಮಾಣ-
ಸ್ತಥಾ ವಿಮುಕ್ತೋ ವಿಜಹಾತಿ ದುಃಖಮ್ ॥೫೯॥

ಹಾವು ತನ್ನ ಪೊರೆಯನ್ನು ಸುಲಿದುಕೊಂಡು ತೆಗೆದ ಮೇಲೆ ತನ್ನ ಅವಯವ ಎನಿಸಿದ ಪೊರೆಯನ್ನು ಕಣ್ಣೆತ್ತಿಯೂ ನೋಡದೆ ಹೊರಟು ಹೋಗುತ್ತದೋ ಮನುಷ್ಯನು ತನ್ನ ಸಮಸ್ತ ಭೌತಿಕ ಸಂಗಗಳನ್ನು ಬಿಟ್ಟು ದುಃಖಗಳನ್ನೆಲ್ಲ ನೀಗಿದ ಬಳಿಕ ಮೋಹ ವಿಮುಕ್ತನಾಗಿ ದುಃಖವನ್ನು ಕಳೆದುಕೊಂಡು ಸುಖವನ್ನು ಅನುಭವಿಸುತ್ತಾನೆ.

ದ್ರುಮಂ ಯಥಾ ವಾಪ್ಯುದಕೇ ಪತಂತ-
ಮುತ್ಸೃಜ್ಯ ಪಕ್ಷೀ ಪ್ರಪತತ್ಯಸಕ್ತಃ ।
ತಥಾ ಹ್ಯಸೌ ಸುಖದುಃಖೇ ವಿಹಾಯ
ಮುಕ್ತಃ ಪರಾರ್ಧ್ಯಾಂ ಗತಿಮೇತ್ಯಲಿಂಗಃ ॥೬೦॥

ಒಂದು ಮರದ ಮೇಲೆ ಕುಳಿತಿರುವ ಪಕ್ಷಿಯು ಆ ಮರವು ನೀರಿನಲ್ಲಿ ಮುಳುಗಿ ಹೋಗುವ ಸ್ಥಿತಿ ಬಂದಾಗ ಕೂಡಲೇ ಅದನ್ನು ಬಿಟ್ಟು ಅದರ ಚಿಂತೆಯೇ ಇಲ್ಲದೆ ಹೇಗೆ ಓಡಿಹೋಗುತ್ತದೋ, ಮುಕ್ತಾತ್ಮನು ಇದರಂತೆ ಲಿಂಗಶರೀರವನ್ನು ಬಿಟ್ಟು ಸುಖ-ದುಃಖಗಳ ಸಂಬಂಧವಿಲ್ಲದೇ ಅತ್ಯಂತ ಶ್ರೇಯಸ್ಕರವಾದ ಗತಿಯನ್ನು ಹೊಂದುತ್ತಾನೆ.

ಇಮಾನ್ ಸ್ವಲೋಕಾನನುಪಶ್ಯ ಸರ್ವಾನ್
ವ್ರಜತ್ಯಥಾಕಾಶಮಿವಾಪ್ತುಕಾಮಃ ।

ಇಮಾಂ ಹಿ ಗಾಥಾಂ ಪ್ರಲಪನ್ ಯಥಾಸ್ತಿ
ಸಮಸ್ತಸಂಕಲ್ಪವಿಶೇಷಮುಕ್ತಃ ॥೬೧॥

ಅಯಂ ಹಿ ಸರ್ವಂ ಕಿಲ ಸರ್ವಭಾವೇ
ಹ್ಯಹಂ ತದಂತರ್ಹ್ಯಹಮೇವ ಭೋಕ್ತಾ ॥೬೨॥

ಈ ತಮ್ಮ ಲೋಕಗಳನ್ನು ನೋಡುತ್ತಿರುವ ಸಾಧಕನು ಎಲ್ಲಾ ಲೋಕಗಳನ್ನು ಸುತ್ತುತ್ತಾ ಇವುಗಳಲ್ಲಿರುವ ನಶ್ವರತೆಯನ್ನು ಕಂಡು ಆಕಾಶನಾಮಕನಾದ ಭಗವಂತನನ್ನೇ ಹೊಂದಲು ಹೇಗೆ ಬಯಸುತ್ತಾನೋ ಅವನು ಮದಾಧಾರಭೂತನಾದ ಪರಮಾತ್ಮನೇ ಸರ್ವ ಎನಿಸಿದ್ದಾನೆ. ಸಮಸ್ತ ಜೀವರನ್ನು ಸೃಷ್ಟಿಸುವುದರಿಂದ ಸರ್ವಭಾವನೆನಿಸಿದ್ದಾನೆ. ಸರ್ವವ್ಯಾಪ್ತನಾದ ಸರ್ವಶಬ್ದವಾಚ್ಯನಾದ ಭಗವಂತನೇ ಅಹಂ ಎನಿಸಿದ್ದಾನೆ. ಮುಕ್ತಿಯಲ್ಲಿಯೂ ಆ ಪರಮಾತ್ಮನ ಉದರದಲ್ಲಿ ಸೇರಿದವನು ನಾನು. ಎಂದಿಗೂ ಅವನ ಜೊತೆ ಐಕ್ಯವನ್ನು ಹೊಂದಲಿಲ್ಲ. ನನ್ನ ಯೋಗ್ಯತೆಗನುಗುಣವಾಗಿ ನಾನು ಸುಖವನ್ನು ಅನುಭವಿಸುತ್ತೇನೆ. ಹೀಗೆ ತಿಳಿಯುತ್ತಾ ಸಮಸ್ತ ಬಾಹ್ಯ ಸಂಕಲ್ಪದಿಂದಲೂ ಮುಕ್ತನಾಗಿ ಭಗವಂತನ ಅನುಗ್ರಹದ ಬಗ್ಗೆಯೇ ಮಾತನಾಡುತ್ತಿರುತ್ತಾನೆ.

ಅಪಿ ಚ ಭವತಿ ಮೈಥಿಲೇನ ಗೀತಂ
ನಗರಮುಪಾಹಿತಮಗ್ನಿನಾಭಿವೀಕ್ಷ್ಯ ।
ನ ಖಲು ಮಮ ತುಷೋಽಪಿ ದಹ್ಯತೇಽತ್ರ
ಸ್ವಯಮಿದಮಾಹ ಕಿಲ ಸ್ಮ ಭೂಮಿಪಾಲಃ ॥೬೩॥

ಹಿಂದೊಮ್ಮೆ ಮಿಥಿಲಾದಿಪತಿಯಾದ ಜನಕನು ತನ್ನ ನಗರವೆಲ್ಲವೂ ಸುಡುತ್ತಿರುವುದನ್ನು ನೋಡಿ ನನ್ನ ಪಟ್ಟಣವೆಲ್ಲವೂ ದಗ್ಧವಾದರೂ ನನ್ನದೊಂದೂ ಸುಡಲಿಲ್ಲ ಎಂದು ವಿರಕ್ತನಾಗಿ ಹೇಳಿದನಂತೆ.

ಇದಮಮೃತಪದಂ ವಿದೇಹರಾಜಃ
ಸ್ವಯಮಿಹ ಪಂಚಶಿಖೇನ ಭಾಷ್ಯಮಾಣಃ ।
ನಿಖಿಲಮಭಿಸಮೀಕ್ಷ್ಯ ನಿಶ್ಚಿತಾರ್ಥಂ
ಪರಮಸುಖೀ ವಿಜಹಾರ ವೀತಶೋಕಃ ॥೬೪॥

ಪಂಚಶಿಖನು ಹೇಳಿದ ಅಮೃತಮಯವಾದ ಜ್ಞಾನೋಪದೇಶವನ್ನು ಕೇಳಿ ಜನದೇವನೆನಿಸಿದ ಜನಕನು ನಿಶ್ಚಿತವಾದ ಸಿದ್ಧಾಂತಕ್ಕೆ ಬಂದನು. ಪಂಚಶಿಖನು ಹೇಳಿದ್ದೆಲ್ಲವನ್ನೂ ಮನಸ್ಸಿನಲ್ಲಿಯೇ ವಿಚಾರ ಮಾಡುತ್ತಾ ಅದೇ ನಿಜವಾದ ತತ್ತ್ವವೆಂದು ನಿಶ್ಚಯಿಸಿ ಪರಮಸುಖದಿಂದಿದ್ದನು.

ಇಮಂ ಹಿ ಯಃ ಪಠತಿ ವಿಮೋಕ್ಷನಿಶ್ಚಯಂ
ನ ಹೀಯತೇ ಸತತಮವೇಕ್ಷತೇ ತಥಾ ।
ಉಪದ್ರವಾನ್ನಾನುಭವತ್ಯದುಃಖಿತಃ
ಪ್ರಮುಚ್ಯತೇ ಕಪಿಲಮಿವೈತ್ಯ ಮೈಥಿಲಃ ॥೬೫॥

ಯುಧಿಷ್ಠಿರನೇ, ಮೋಕ್ಷವಿಚಾರವಾದ ಈ ಸಂವಾದವನ್ನು ಯಾರು ಬಾಯಿಂದ ಪಠಿಸುತ್ತಾರೋ, ಮನಸ್ಸಿನಿಂದ ಚಿಂತಿಸುತ್ತಾರೋ ಅವರು ಸಮಸ್ತ ದುಃಖಗಳಿಂದ ಮುಕ್ತರಾಗಿ ಮಿಥಿಲಾಧಿಪತಿಯಾದ ಜನಕನಂತೆ ಮೋಕ್ಷಕ್ಕೆ ಭಾಗಿಯಾಗುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಏಕಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಐವತ್ತೊಂದನೆಯ ಅಧ್ಯಾಯ ಮುಗಿಯಿತು.

॥ ಪಂಚಶಿಖಿವಾಕ್ಯಂ ಸಮಾಪ್ತಮ್ ॥

★ ★ ★ ★ ★

ಐವತ್ತೆರಡನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಜನಕನ ಉಪಾಖ್ಯಾನವನ್ನು ಹೇಳಿದುದು.

ಯುಧಿಷ್ಠಿರಃ

ಕಿಂ ಕಾರಣಂ ಮಹಾಪ್ರಾಜ್ಞ ದಹ್ಯಮಾನಸ್ಯ ಮೈಥಿಲಃ ।
ಮಿಥಿಲಾಂ ನೇಹ ಧರ್ಮಾತ್ಮಾ ಪ್ರಾಹ ವೀಕ್ಷ್ಯ ವಿದಾಹಿತಾಮ್ ॥೧॥

ಯುಧಿಷ್ಠಿರ– ಮಹಾಪ್ರಾಜ್ಞನಾದ ಭೀಷ್ಮನೇ, ಜನಕ ಮಹಾರಾಜನು ತನ್ನ ಮಿಥಿಲಾ ಪಟ್ಟಣವು ಭಸ್ಮವಾಗುತ್ತಿರಲು ತನ್ನದ್ದೇನು ನಾಶವಾಗಲಿಲ್ಲವೆಂದು ಹೇಳಿದ ಎಂದು ಕೇಳಿಸಿಕೊಂಡಿದ್ದೇನೆ. ಜನಕರಾಜನು ಹೀಗೆ ಹೇಳಲು ಕಾರಣವೇನು?

ಭೀಷ್ಮಃ

ಶ್ರೂಯತಾಂ ನೃಪಶಾರ್ದೂಲ ಯದರ್ಥಂ ದೀಪಿತಾ ಪುರಾ ।
ವಹ್ನಿನಾ ದೀಪಿತಾ ಸಾ ತು ತನ್ಮೇ ಶೃಣು ಮಹಾಮತೇ ॥೨॥

ಭೀಷ್ಮ- ರಾಜಶ್ರೇಷ್ಠನೇ, ನನ್ನ ಮಾತನ್ನು ಕೇಳಿಸಿಕೊ. ಜನಕ ಕುಲದ ಜನದೇವನು ತನ್ನಲ್ಲಿ ತಾನೇ ಕರ್ಮಗಳನ್ನು ಕುರಿತು ವಿಚಾರ ಮಾಡುತ್ತಾ, ಅದೇ ಧ್ಯಾನದಿಂದ ಇರುವಾಗ ಯಾವ ಕಾರಣದಿಂದ ಪಟ್ಟಣವು ಬೆಂಕಿಯಿಂದ ಸುಟ್ಟಿತೋ ಅದಕ್ಕೆ ಸಂಬಂಧಿಸಿದಂತಹ ವಿಚಾರವನ್ನು ಹೇಳುತ್ತೇನೆ, ಕೇಳಿಸಿಕೊ.

ಜನಕೋ ಜನದೇವೈಸ್ತು ಕರ್ಮಾಣ್ಯಾಧ್ಯಾಯ ಚಾತ್ಮನಿ ।
ಸರ್ವಭಾವಮನುಪ್ರಾಪ್ಯ ಭಾವೇನ ವಿಚಚಾರ ಸಃ ॥೩॥

ಜನದೇವನಾದ ಜನಕ ಮಹಾರಾಜನು ತನ್ನಲ್ಲಿ ತಾನೇ ಕರ್ಮಗಳನ್ನು ವಿಚಾರ ಮಾಡುತ್ತಾ, ಎಲ್ಲರನ್ನೂ ಸೃಷ್ಟಿಸಿದ ಭಗವಂತನಲ್ಲಿಯೇ ಏಕಾಗ್ರಚಿತ್ತದಿಂದ ಧ್ಯಾನ ಮಾಡುತ್ತಾ ಆ ಧ್ಯಾನದಿಂದಲೇ ಸಂಚರಿಸುತ್ತಿದ್ದನು.

ಯಜನ್ ದದಂಸ್ತಥಾ ಜುಹ್ವನ್ ಪಾಲಯನ್ ಪೃಥಿವೀಮಿಮಾಮ್ ।
ಅಧ್ಯಾತ್ಮವಿನ್ಮಹಾಪ್ರಾಜ್ಞಸ್ತನ್ಮಯತ್ವೇನ ನಿಷ್ಠಿತಃ ॥೪॥

ಯಜ್ಞವನ್ನು ಮಾಡುವಾಗ, ದಾನಾದಿ ಕರ್ಮಗಳನ್ನು ಮಾಡುವಾಗ, ಭೂಮಿಯನ್ನು ಪಾಲಿಸುವಾಗ ಎಲ್ಲಾ ಕಾಲಗಳಲ್ಲಿಯೂ ಭಗವಂತನ ವಿಷಯದಲ್ಲಿಯೇ ಜನಕ ಮಹಾರಾಜನು ಮಗ್ನನಾಗಿರುತ್ತಿದ್ದನು.

ಸ ತಸ್ಯ ಹೃದಿ ಸಂಕಲ್ಪಂ ಜ್ಞಾತುಮೈಚ್ಛತ್ ಸ್ವಯಂ ಪ್ರಭುಃ ।
ಸರ್ವಲೋಕಾಧಿಪಸ್ತತ್ರ ದ್ವಿಜರೂಪೇಣ ಸಂಯುತಃ ॥೫॥

ಸರ್ವೇಶ್ವರನಾದ ಭಗವಂತನು ಸ್ವಯಂ ತಾನೇ ಜನಕ ಮಹಾರಾಜನ ಮನಸ್ಸನ್ನು ಪರೀಕ್ಷಿಸಬೇಕೆಂದು ಸಂಕಲ್ಪಿಸಿ ಬ್ರಾಹ್ಮಣ ವೇಷದಿಂದ ಮಿಥಿಲೆಗೆ ಆಗಮಿಸಿದನು.

ಮಿಥಿಲಾಯಾಂ ಮಹಾಬುದ್ಧಿರ್ವ್ಯಲೀಕಂ ಕಿಂಚಿದಾಚರನ್ ।
ಸ ಗೃಹೀತ್ವಾ ದ್ವಿಜಶ್ರೇಷ್ಠೈಃ ನೃಪಾಯ ಪ್ರತಿವೇದಿತಃ ॥೬॥

ಆ ಬ್ರಾಹ್ಮಣ ವೇಷದಲ್ಲಿ ಆಗಮಿಸಿದ ಭಗವಂತನು ಮಹಾಜಾಣನಾಗಿದ್ದರೂ ಮಿಥಿಲಾ ಪಟ್ಟಣದಲ್ಲಿ ಏನೋ ಒಂದು ತಪ್ಪನ್ನು ರಾಜನಿಗೆ ತಿಳಿಯುವಂತೆ ಮಾಡಿದನು. ಆ ತಪ್ಪಿಗಾಗಿ ಬ್ರಾಹ್ಮಣರೆಲ್ಲರೂ ಒಟ್ಟಾಗಿ ತಪ್ಪು ಮಾಡಿದ ಬ್ರಾಹ್ಮಣವೇಷದ ಭಗವಂತನನ್ನು ಬಂಧಿಸಿ ರಾಜನ ಮುಂದೆ ತಂದೊಪ್ಪಿಸಿದರು.

ಅಪರಾಧಂ ಸಮುದ್ದಿಶ್ಯ ತಂ ರಾಜಾ ಪ್ರತ್ಯಭಾಷತ ।
ನ ತ್ವಾಂ ಬ್ರಾಹ್ಮಣ ದಂಡೇನ ನಿಯೋಕ್ಷ್ಯಾಮಿ ಕಥಂಚನ ॥೭॥

ತಪ್ಪು ಮಾಡಿದ ಬ್ರಾಹ್ಮಣನನ್ನು ಉದ್ದೇಶಿಸಿ ರಾಜನು ಪ್ರತಿಯಾಗಿ ಹೀಗೆ ಹೇಳಿದನು: ವಿಪ್ರೋತ್ತಮನೇ, ನೀನು ಅಪರಾಧಿಯಾಗಿದ್ದರೂ ನಾನು ನಿನಗೆ ಕಠಿಣವಾದ ದಂಡನೆಯನ್ನು ಯಾವುದೇ ಕಾರಣದಿಂದ ನೀಡುವುದಿಲ್ಲ.

ಮಮ ರಾಜ್ಯಾದ್ ವಿನಿರ್ಗಚ್ಛ ಯಾವತ್ತೀಮಾ ಭುವೋ ಮಮ ।
ತಚ್ಛ್ರುತ್ವಾ ಬ್ರಾಹ್ಮಣೋ ಗತ್ವಾ ರಾಜಾನಂ ಪ್ರತ್ಯುವಾಚ ಹ ॥೮॥

ನೀನು ಈ ಅಪರಾಧದಿಂದಾಗಿ ನನ್ನ ರಾಜ್ಯದ ಸೀಮೆಯನ್ನು ದಾಟಿ ಹೊರಟು ಹೋಗು ಎಂದು ಹೇಳಿದನು. ಆಗ ಬ್ರಾಹ್ಮಣನು ರಾಜನನ್ನು ಕುರಿತು ಹೇಳುತ್ತಾನೆ.

ಕರಿಷ್ಯೇ ವಚನಂ ರಾಜನ್ ಬ್ರವೀಹಿ ಮಮ ಜಾನತಃ ।
ಕಾ ಸೀಮಾ ತವ ಭೂಮೇಸ್ತು ಬ್ರೂಹಿ ಧರ್ಮಂ ಮಮಾದ್ಯ ವೈ ॥೯॥

ಪ್ರಭು, ನಿನ್ನ ಆಜ್ಞೆಯಂತೆ ನಾನು ನಡೆದುಕೊಳ್ಳುತ್ತೇನೆ. ಆದರೆ ನನಗೆ ತಿಳಿದ ಒಂದು ಅಭಿಪ್ರಾಯವನ್ನು ನಿನ್ನ ಮುಂದೆ ಹೇಳಲು ಇಚ್ಛಿಸುತ್ತೇನೆ. ಈ ನಿನ್ನ ರಾಜ್ಯದ ಸೀಮೆ ಯಾವುದು ಎಂಬುದನ್ನು ಪ್ರಾಮಾಣಿಕವಾಗಿ, ಧರ್ಮದಿಂದ ನನಗೆ ತಿಳಿಸಿಕೊಡು ಎಂದು ಹೇಳಿದನು.

ತಚ್ಛ್ರುತ್ವಾ ಮೈಥಿಲೋ ರಾಜಾ ಲಜ್ಜಯಾವನತಾನನಃ ।
ನೋವಾಚ ವಚನಂ ವಿಪ್ರಂ ತತ್ವಬುದ್ಧ್ಯಾ ಸಮೀಕ್ಷ್ಯ ತತ್ ॥೧೦॥

ಬ್ರಾಹ್ಮಣನ ಈ ಮಾತನ್ನು ಕೇಳಿಸಿಕೊಂಡ ಜನಕರಾಜನು ಬ್ರಾಹ್ಮಣನ ಮಾತಿನ ಆಂತರ್ಯವನ್ನು ತಿಳಿದು, ತಾತ್ವಿಕವಾದ ಅವನ ಮಾತಿನಿಂದ ಲಜ್ಜಿತನಾಗಿ ತಲೆ ತಗ್ಗಿಸಿದನು. ಏನನ್ನೂ ಹೇಳದೆ ಮೌನವಹಿಸಿದನು.

ಪುನಃ ಪುನಶ್ಚ ತಂ ವಿಪ್ರಶ್ಚೋದಯಾಮಾಸ ಸತ್ವರಮ್ ।
ಬ್ರೂಹಿ ರಾಜೇಂದ್ರ ಗಚ್ಛಾಮಿ ತವ ರಾಜ್ಯಾದ್ ವಿವಾಸಿತಃ ॥೧೧॥

ಆದರೆ ಮೌನಿಯಾದ ರಾಜನನ್ನು ವಿಪ್ರನಾದರೂ ಪುನಃ ಪುನಃ ಹೇಳು ಹೇಳು ಎಂದು ಪ್ರಚೋದಿಸಿದನು. ರಾಜನೇ, ನಿನ್ನ ರಾಜ್ಯದ ಸೀಮೆಯನ್ನು ದಾಟಿ ನಾನು ಎಲ್ಲಿಗೆ ಹೋಗಲಿ? ನನಗೆ ಹೇಳು ಎಂದು ಒತ್ತಾಯಿಸಿದನು.

ತತೋ ನೃಪೋ ವಿಚಾರ್ಯೈವಮಾಹ ಬ್ರಾಹ್ಮಣಪುಂಗವಮ್ ।
ಆವಾಸೋ ವಾ ನ ಮೇಽಸ್ಯತ್ರ ಸರ್ವಾ ವಾ ಪೃಥಿವೀ ಮಮ ।
ಗಚ್ಛ ವಾ ತಿಷ್ಠ ವಾ ಬ್ರಹ್ಮನ್ನಿತಿ ಮೇ ನಿಶ್ಚಿತಾ ಮತಿಃ ॥೧೨॥

ಈ ಬ್ರಾಹ್ಮಣನ ಮಾತನ್ನು ಕೇಳಿಸಿಕೊಂಡ ಜನಕರಾಜನು ವಿಚಾರ ಮಾಡಿ ಬ್ರಾಹ್ಮಣ ಶ್ರೇಷ್ಠನನ್ನು ಕುರಿತು ಹೇಳುತ್ತಾನೆ- 'ಬ್ರಾಹ್ಮಣನೇ, ಈ ಜಗತ್ತಿನ ಯಾವ ಒಂದು ಭೂಮಿಯ ತುಣುಕೂ ನನ್ನದ್ದಲ್ಲ. ಆದರೆ ಈ ಸಮಗ್ರ ಭೂಮಂಡಲವು ಸದ್ಯದಲ್ಲಿ ನನ್ನ ಆಳ್ವಿಕೆಗೆ ಒಳಪಟ್ಟಿದೆ. ನೀನು ಈ ಸ್ಥಳದಿಂದ ಹೊರಡಬಹುದು ಅಥವಾ ಇಲ್ಲಿಯೇ ಇರಬಹುದು. ನಿನ್ನನ್ನು ನಿರ್ಬಂಧಿಸುವ ಅಧಿಕಾರ ನನಗಿಲ್ಲ ಎಂದು ನನ್ನ ಬುದ್ಧಿಯು ನಿಶ್ಚಿತವಾಗಿ ಹೇಳುತ್ತಿದೆ'.

ಇತ್ಯುಕ್ತಃ ಸ ತಥಾ ತೇನ ಮೈಥಿಲೇನ ದ್ವಿಜೋತ್ತಮಃ ।
ಅಬ್ರವೀತ್ ತಂ ಮಹಾತ್ಮಾನಂ ರಾಜಾನಂ ಮಂತ್ರಿಭಿರ್ವೃತಮ್ ॥೧೩॥

ಈ ರೀತಿಯಾಗಿ ಜನಕಮಹಾರಾಜನು ಬ್ರಾಹ್ಮಣನನ್ನು ಕುರಿತು ಹೇಳುತ್ತಿರಲು ದ್ವಿಜಶ್ರೇಷ್ಠನು ಮಹಾತ್ಮನಾದ ರಾಜನನ್ನು ಕುರಿತು, ಮಂತ್ರಿಗಳಿಂದ ಸಹಿತನಾಗಿರುವ ರಾಜನಿಗೆ ಹೀಗೆ ಹೇಳಿದನು.

ತ್ವಮೇವಂ ಪದ್ಮನಾಭಸ್ಯ ನಿತ್ಯಂ ಪಕ್ಷಪದಾಹಿತಃ ।
ಅಹೋ ಸಿದ್ಧಾರ್ಥರೂಪೋಽಸಿ ಗಮಿಷ್ಯೇ ಸ್ವಸ್ತಿ ತೇಽಸ್ತು ವೈ ॥೧೪॥

ರಾಜನೇ, ನೀನು ಪ್ರತಿದಿನವೂ ಪದ್ಮನಾಭರೂಪಿಯಾದ ಪರಮಾತ್ಮನ ಪಾದಾವಲಂಬಿಯಾಗಿ ಅವನ ಸಿದ್ಧಾಂತವನ್ನು ಅನುಸರಿಸಿ ರಾಜ್ಯಭಾರವನ್ನು ನಡೆಸುತ್ತಿರುವಿ. ನೀನು ಸಾಧನೆಯ ಮಜಲಿನ ಎತ್ತರವನ್ನು ಏರಿರುತ್ತಿ. ನಿನಗೆ ಮಂಗಳವಾಗಲಿ, ನಾನು ಹೋಗಿ ಬರುತ್ತೇನೆ.

ಇತ್ಯುಕ್ತ್ವಾ ಪ್ರಯಯೌ ವಿಪ್ರಸ್ತಜ್ಜಿಜ್ಞಾಸುರ್ದ್ವಿಜೋತ್ತಮಮ್ ।
ಅದಹಚ್ಚಾಗ್ನಿನಾ ತಸ್ಯ ಮಿಥಿಲಾಂ ಭಗವಾನ್ ಸ್ವಯಮ್ ॥೧೫॥

ಈ ರೀತಿಯಾಗಿ ಬ್ರಾಹ್ಮಣನು ಹೇಳಿ ಹೊರಟನು. ಅಲ್ಲಿ ನೆರೆದಿರುವ ಬ್ರಾಹ್ಮಣರೆಲ್ಲರಿಗೂ ಜನಕ ಮಹಾರಾಜನ ಮನೋದಾರ್ಢ್ಯವೇನೆಂಬುದನ್ನು ತಿಳಿಯ ಪಡಿಸಲು ಕಣ್ಮರೆಯಾದನು. ಮಾತ್ರವಲ್ಲದೆ ಸ್ವಲ್ಪ ಹೊತ್ತಿನ ಬಳಿಕ ಭಗವಂತನು ಜನಕನ ರಾಜಧಾನಿಯಾದ ಮಿಥಿಲೆಗೆ ಬೆಂಕಿಯನ್ನೊಡ್ಡಿದನು.

ಪ್ರದೀಪ್ಯಮಾನಾಂ ಮಿಥಿಲಾಂ ದೃಷ್ಟ್ವಾ ರಾಜಾ ನ ಕಮ್ಪಿತಃ ।
ಜನ್ಯೈಃ ಸ ಪರಿಪೃಷ್ಟಸ್ತು ವಾಕ್ಯಮೇತದುವಾಚ ಹ ॥೧೬॥

ಜನಕನ ಪುರವು ಸುಟ್ಟು ಹೋಗುತ್ತಿರುವುದನ್ನು ನೋಡಿಯೂ ಜನಕರಾಜನು ಎದೆಗುಂದದೆ ನಿಶ್ಚಲವಾಗಿದ್ದನು. ಜನರೆಲ್ಲರೂ ಬಂದು ರಾಜನಲ್ಲಿ ಮಿಥಿಲೆಗೆ ಬೆಂಕಿ ಬಿದ್ದಿದೆ, ಆದರೂ ಮೌನವಹಿಸಿರುವಿ ಏಕೆ? ಎಂದು ಕೇಳಲು ಜನಕರಾಜನು ಹೀಗೆ ಹೇಳಿದನು.

ಅನಂತಂ ಬತ ಮೇ ವಿತ್ತಂ ಭಾವ್ಯಂ ಮೇ ನಾಸ್ತಿ ಕಿಂಚನ ।
ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ಕಿಂಚನ ದಹ್ಯತೇ ॥೧೭॥

ಪ್ರಪಂಚದಲ್ಲಿ ನನ್ನ ಧನವು ಎಂದಿಗೂ ನಾಶವನ್ನು ಹೊಂದುವುದಿಲ್ಲ. ಮಹಾಜನರೇ, ಈ ಪ್ರಪಂಚದಲ್ಲಿನನ್ನದ್ದು ಎಂದು ಭಾವಿಸುವ ಯಾವ ಪದಾರ್ಥವೂ ಇರುವುದಿಲ್ಲ. ಮಿಥಿಲಾ ಪಟ್ಟಣವೇ ಭಸ್ಮವಾಗಿ ಹೋದರೂ ನನಗೆ ಸಂಬಂಧಪಟ್ಟ ಯಾವುದೂ ಭಸ್ಮವಾಗುವುದಿಲ್ಲ ಎಂದು ಹೇಳಿದನು.

ತದಸ್ಯ ಭಾಷಮಾಣಸ್ಯ ಶ್ರುತ್ವಾ ಶ್ರುತ್ವಾ ಹೃದಿ ಸ್ಥಿತಮ್ ।
ಪುನಃ ಸಂಜೀವಯಾಮಾಸ ಮಿಥಿಲಾಂ ತಾಂ ದ್ವಿಜೋತ್ತಮಃ ॥೧೮॥

ರಾಜನ ಈ ದೃಢಸಂಕಲ್ಪವನ್ನು ಕೇಳಿ ಎಲ್ಲರೂ ಆಶ್ಚರ್ಯಚಕಿತರಾದರು. ಪುನಃ ಬ್ರಾಹ್ಮಣವೇಷದಿಂದ ಆಗಮಿಸಿದ ಭಗವಂತನು ಮಿಥಿಲಾನಗರವನ್ನು ಮೊದಲಿನಂತೆಯೇ ಉದ್ಧಾರ ಮಾಡಿ ಜನಕನ ಮುಂದೆ ಪ್ರತ್ಯಕ್ಷವಾಗಿ ನಿಂತನು.

ಆತ್ಮಾನಂ ದರ್ಶಯಾಮಾಸ ವರಂ ಚಾಸ್ಮೈ ದದೌ ಪುನಃ ।
ಧರ್ಮೇ ತಿಷ್ಠತು ಸದ್ಭಾವೋ ಬುದ್ಧಿಸ್ತೇಽರ್ಥೇ ನರಾಧಿಪ ॥೧೯॥

ತನ್ನ ಪ್ರತ್ಯಕ್ಷ ದರ್ಶನವನ್ನು ಜನಕನಿಗೆ ನೀಡಿ ಆ ಜನಕನಿಗೆ ಪುನಃ ವರವನ್ನು ನೀಡಿದನು. ಜನಕರಾಜನೇ, ನಿನಗೆ ಇದೇ ರೀತಿಯಾಗಿ ನಿರಂತರವೂ ಯಥಾರ್ಥವಾದ ಬುದ್ಧಿಯು ಧರ್ಮದಲ್ಲಿ ನೆಲೆಯಾಗಿರಲಿ. ಪರಮಾತ್ಮನಲ್ಲಿ ಎಂದಿಗೂ ಬುದ್ಧಿಯು ಪ್ರವರ್ತಿಸುತ್ತಿರಲಿ. ಅರ್ಥದಲ್ಲಿಯೂ ನಿನ್ನ ಬುದ್ಧಿಯು ಪ್ರವರ್ತಿಸುತ್ತಿರಲಿ.

ಸತ್ಯೇ ತಿಷ್ಠಸ್ವ ನಿರ್ವಿಣ್ಣಃ ಸ್ವಸ್ತಿ ತೇಽಸ್ತು ವ್ರಜಾಮ್ಯಹಮ್ ।
ಇತ್ಯುಕ್ತ್ವಾ ಭಗವಾಂಶ್ಚೈನಂ ತತ್ರೈವಾಂತರಧೀಯತ ।
ಏತತ್ ತೇ ಕಥಿತಂ ರಾಜನ್ ಕಿಂ ಭೂಯಃ ಶ್ರೋತುಮಿಚ್ಛಸಿ ॥೨೦॥

ಸತ್ಯದ ವಿಷಯದಲ್ಲಿ ನೆಲೆಗೊಂಡು ಇರುವ ನಿನಗೆ ಮಂಗಳವಾಗಲಿ. ನಾನು ಹೋಗಿ ಬರುತ್ತೇನೆ ಎಂದು ಭಗವಂತನು ಹೇಳಿ ಅಲ್ಲಿಯೇ ಅದೃಶ್ಯನಾದನು. ಧರ್ಮರಾಜನೇ, ನೀನು ಕೇಳಿದ ಪ್ರಶ್ನೆಗೆ ಉತ್ತರಿಸಿದ್ದೇನೆ. ಮತ್ತೂ ಏನನ್ನು ಕೇಳಲು ಬಯಸುತ್ತಿ?

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ದ್ವಿಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಐವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ಮೂರನೆಯ ಅಧ್ಯಾಯ

ಗೃಹಸ್ಥಾಶ್ರಮದಲ್ಲಿಯೂ ಮೋಕ್ಷಸಾಧನೆಯನ್ನು ಮಾಡಿಕೊಳ್ಳಬಹುದು ಎಂದು ತಿಳಿಸಲು ಭೀಷ್ಮರು ಯುಧಿಷ್ಠಿರನಿಗೆ ಸುವರ್ಚಲೋಪಾಖ್ಯಾನವನ್ನು ಹೇಳಿದುದು.

ಯುಧಿಷ್ಠಿರಃ

ಅಸ್ತಿ ಕಶ್ಚಿದ್ ಯದಿ ವಿಭೋ ಸದಾರೋ ನಿಯತೋ ಗೃಹೇ ।
ಅತೀತಸರ್ವಸಂಸಾರಃ ಸರ್ವದ್ವಂದ್ವವಿವರ್ಜಿತಃ ।
ತಂ ಮೇ ಬ್ರೂಹಿ ಮಹಾಪ್ರಾಜ್ಞ ದುರ್ಲಭಃ ಪುರುಷೋ ಮಹಾನ್ ॥೧॥

ಯುಧಿಷ್ಠಿರ– ಪಿತಾಮಹನೇ, ಜಗತ್ತಿನಲ್ಲಿ ಪತ್ನೀಸಹಿತನಾಗಿ ಇರುವ ಗೃಹಸ್ಥಾಶ್ರಮಿಯು ತನ್ನ ಆಶ್ರಮದಲ್ಲಿಯೇ ಇದ್ದುಕೊಂಡು, ಸಂಸಾರವನ್ನು ದಾಟಿ ಸುಖ-ದುಃಖಗಳೆಂಬ ದ್ವಂದ್ವಗಳನ್ನು ಜಯಿಸಲು ಸಾಧ್ಯವೇ? ಈ ರೀತಿಯಾಗಿ ಜಯಿಸಿದ ಮನುಷ್ಯನು ಯಾವನಾದರೂ ಇದ್ದಾನೆಯೇ? ಅಂತಹ ಮಹಾತ್ಮರು ದುರ್ಲಭ ಎಂದು ನನಗೆ ತೋರುತ್ತಿದೆ.

ಭೀಷ್ಮಃ

ಶೃಣು ರಾಜನ್ ಯಥಾವೃತ್ತಂ ಯನ್ಮಾಂ ತ್ವಂ ಪೃಷ್ಟವಾನಸಿ ।
ಇತಿಹಾಸಮಿಮಂ ಶುದ್ಧಂ ಸಂಸಾರಭಯಭೇಷಜಮ್ ॥೨॥

ಭೀಷ್ಮ– ಯುಧಿಷ್ಠಿರನೇ, ಇದಕ್ಕೂ ಒಂದು ಇತಿಹಾಸವಿದೆ. ನೀನು ನನ್ನ ಬಳಿ ಪ್ರಶ್ನೆಯನ್ನು ಕೇಳಿರುತ್ತಿ. ಸಂಸಾರಭಯಕ್ಕೆ ಔಷಧಿಯಂತಿರುವ ಈ ಶುದ್ಧವಾದ ಇತಿಹಾಸವನ್ನು ಕೇಳಿಸಿಕೊ.

ದೇವಲೋ ನಾಮ ವಿಪ್ರರ್ಷಿಃ ಸರ್ವಶಾಸ್ತ್ರಾರ್ಥಕೋವಿದಃ ।
ಕ್ರಿಯಾವಾನ್ ಧಾರ್ಮಿಕೋ ನಿತ್ಯಂ ದೇವಬ್ರಾಹ್ಮಣಪೂಜಕಃ ॥೩॥

ಹಿಂದೆ ದೇವಲ ಎಂಬ ಬ್ರಹ್ಮರ್ಷಿಯೊಬ್ಬನಿದ್ದನು. ಅವನು ಸಮಸ್ತ ಶಾಸ್ತ್ರಗಳಲ್ಲಿ ಜ್ಞಾನಿಯಾಗಿದ್ದನು. ಆಚಾರಶೀಲನೂ, ಧಾರ್ಮಿಕನೂ, ನಿತ್ಯವೂ ದೇವ-ಬ್ರಾಹ್ಮಣ-ಪೂಜಕನೂ ಆಗಿದ್ದನು.

ಸುತಾ ಸುವರ್ಚಲಾ ನಾಮ ತಸ್ಯ ಕಲ್ಯಾಣಲಕ್ಷಣಾ ।
ನಾತಿಹ್ರಸ್ವಾ ನಾತಿಕೃಶಾ ನಾತಿದೀರ್ಘಾ ಯಶಸ್ವಿನೀ ॥೪॥

ಇಂತಹ ಶ್ರೇಷ್ಠನಾದ ಬ್ರಾಹ್ಮಣನಿಗೆ ಕಲ್ಯಾಣಲಕ್ಷಣಗಳಿಂದ ಕೂಡಿರುವ ಸುವರ್ಚಲೆ ಎಂಬ ಮಗಳಿದ್ದಳು. ಅವಳು ಆಕಾರದಲ್ಲಿ ಅತಿ ಉದ್ದವೂ ಇಲ್ಲದೆ, ಅತೀ ಗಿಡ್ಡಳೂ ಅಲ್ಲದೆ, ಅತ್ಯಂತ ಕೃಶಳೂ ಅಲ್ಲದೆ ಯಶಸ್ವಿನಿಯಾಗಿ, ಲಕ್ಷಣಸಂಪನ್ನೆಯಾಗಿ ಇದ್ದಳು. ಅವಳಿಗೆ ಒಂದು ಬಾರಿ ಯೋಗ್ಯವಾದ ವಯಸ್ಸು ಬಂದಿರುವುದನ್ನು ಕಂಡು ತಂದೆಯಾದ ದೇವಲನು ಯೋಚಿಸಿದನು, ಚಿಂತಿಸಿದನು.

ಅಸ್ಯಾಃ ಪತಿಃ ಕುತೋ ವೇತಿ ಬ್ರಾಹ್ಮಣಃ ಶ್ರೋತ್ರಿಯಃ ಪರಃ ।
ವಿದ್ವಾನ್ ವಿಪ್ರೋ ಹ್ಯಕುಟುಂಬಃ ಪ್ರಿಯವಾದೀ ಮಹಾತಪಾಃ ॥೫॥

ಈ ನನ್ನ ಮಗಳಿಗೆ ಯೋಗ್ಯನಾದ ಪತಿಯು ಎಲ್ಲಿದ್ದಾನೆ? ಶುದ್ಧನಾದ, ಶಾಸ್ತ್ರೀಯ ಸಂಪನ್ನನಾದ, ಶ್ರೋತ್ರಿಯನಾದ ಬ್ರಾಹ್ಮಣನು ಎಲ್ಲಿ ದೊರಕುತ್ತಾನೆ? ಈ ರೀತಿಯಾದ ಬ್ರಾಹ್ಮಣೋತ್ತಮನೂ ಪ್ರಿಯವಾದಿಯೂ, ವಿದ್ವಾಂಸನೂ ಆದ ಬ್ರಹ್ಮಚಾರಿಗೆ ಈಕೆಯನ್ನು ಕೊಟ್ಟು ವಿವಾಹ ಮಾಡಬೇಕೆಂದು ಚಿಂತಿಸಿದನು.

ವ್ಯಾಖ್ಯಾನ ವಿಶೇಷ– **'ವಿದ್ವಾನ್ ವಿಪ್ರೋ ಹ್ಯಕುಟುಂಬಃ'** ವ್ಯಾಸರ ಮಾತು. ಹ್ಯಕೂಟುಂಬಃ ಎಂದು ದೀರ್ಘವಾದಲ್ಲಿ ಛಂದೋಭಂಗವಾಗದು. ಅಕುಟುಂಬಃ ಎಂದು ಛಂದೋಭಂಗವಾಗದಂತೆ ವ್ಯಾಸರು ಪ್ರಯೋಗಿಸಿದ್ದಾರೆ. **'ಅಪಿ ಮಾಷಂ ಮಷಂ ಕುರ್ಯಾತ್ ಛಂದೋಭಂಗಂ ನ ಕಾರಯೇತ್'** ಎಂಬ ಪ್ರಮಾಣದ ಆಧಾರದಲ್ಲಿ ಅಕೂಟುಂಬಃ ಎಂದು ಹೇಳುವ ಬದಲು ಅಕುಟುಂಬಃ ಎಂದು ಹೇಳಿದ್ದಾರೆ.

ಇತ್ಯೇವಂ ಚಿಂತಯಾನಂ ತಂ ರಹಸ್ಯಾಹ ಸುವರ್ಚಲಾ ॥೬॥

ಅಂಧಾಯ ಮಾಂ ಮಹಾಪ್ರಾಜ್ಞ ದೇಹ್ಯನಂಧಾಯ ವೈ ಪಿತಃ ।
ಏವಂ ಸ್ಮರ ಸದಾ ವಿದ್ವನ್ ಮಮೇದಂ ಪ್ರಾರ್ಥಿತಂ ಮುನೇ ॥೭॥

ಈ ರೀತಿಯಾಗಿ ತಂದೆಯು ಚಿಂತಿಸುತ್ತಿರಲು ಸುವರ್ಚಲೆಯು ಏಕಾಂತದಲ್ಲಿ ತಂದೆಯನ್ನು ಕುರಿತು ಹೀಗೆ ಹೇಳಿದಳು. ಜನಕನೇ, ನೀನು ನನ್ನನ್ನು ಕುರಿತು ವಿವಾಹ ಮಾಡುವುದಾದರೆ ಕುರುಡನಾಗಿಯೂ, ಕುರುಡನಲ್ಲದೆಯೂ ಇರುವ ವ್ಯಕ್ತಿಗೆ ನನ್ನನ್ನು ಕೊಡು. ಈ ಅಂಶವನ್ನು ನೆನಪಿನಲ್ಲಿಟ್ಟುಕೊಂಡು ವರಾನ್ವೇಷಣೆಯನ್ನು ಮಾಡು. ಈ ರೀತಿಯಾದ ವರನೇ ಬೇಕೆಂಬ ನನ್ನ ಬಯಕೆ ಇದೆ ಎಂದು ರಹಸ್ಯವಾಗಿ ತಿಳಿಸಿದಳು.

ಪಿತಾ

ನ ಶಕ್ಯಂ ಪ್ರಾರ್ಥಿತಂ ವತ್ಸೇ ತ್ವಯಾಽದ್ಯ ಪ್ರತಿಭಾತಿ ಮೇ ।
ಅಂಧತಾನಂಧತಾ ಚೇತಿ ವಿಕಾರೋ ಮಮ ಜಾಯತೇ ॥೮॥

ಪಿತಾ– ಮಗಳೇ, ಏನು ಹೇಳುತ್ತಿರುವೆ? ನಿನ್ನ ಅಪೇಕ್ಷೆಯನ್ನು ನಡೆಸುವುದು ಅಸಂಭವವು. ಒಬ್ಬನೇ ಮನುಷ್ಯನು ಕುರುಡನಾಗಿಯೂ, ಕುರುಡನಲ್ಲದೆಯೂ ಇರಲು ಹೇಗೆ ಸಾಧ್ಯ ? ನನ್ನ ಮನಸ್ಸಿನಲ್ಲಿ ನಿನ್ನ ಮಾತಿನ ಅರ್ಥವು ಕಳವಳಗೊಳ್ಳುತ್ತಿದೆ.

ಉನ್ಮತ್ತೇವಾಶುಭಂ ವಾಕ್ಯಂ ಭಾಷಸೇ ಶುಭಲೋಚನೇ ॥೯॥

ಹುಚ್ಚಿಯಂತೆ ಅಶುಭವಾದ ಮಾತನ್ನು ಶುಭಲೋಚನೆಯಾದ ನೀನು ಹೇಳುತ್ತಿರುವಿ.

ಸುವರ್ಚಲಾ

ನಾಹಮುನ್ಮತ್ತಭೂತಾऽದ್ಯ ಬುದ್ಧಿಪೂರ್ವಂ ಬ್ರವೀಮಿ ತೇ ।
ವಿದ್ಯತೇ ಚೋತ್ಪತಿಸ್ತಾದೃಕ್ ಸ ಮಾಂ ಭರತಿ ವೇದವಿತ್ ॥೧೦॥

ಸುವರ್ಚಲೆ– ತಂದೆಯೇ ನಾನು ಹುಚ್ಚಿಯಲ್ಲ. ಯೋಚಿಸಿ ಬುದ್ಧಿಪೂರ್ವಕವಾಗಿ ಈ ಮಾತನ್ನು ಆಡುತ್ತಿದ್ದೇನೆ. ಈ ರೀತಿಯಾದ ಪತಿಯೇ ನನ್ನನ್ನು ವರಿಸಲು ಅರ್ಹನಾಗಿದ್ದಾನೆ. ಅವನೇ ನಿಜವಾದ ವೇದಜ್ಞನು ಎಂದು ಭಾವಿಸಿದ್ದೇನೆ.

ಯೇಭ್ಯಸ್ತ್ವಂ ಮನ್ಯಸೇ ದಾತುಂ ಮಾಮಿಹಾನಯ ತಾನ್ ದ್ವಿಜಾನ್ ।
ತಾದೃಶಂ ತಂ ಪತಿಂ ತೇಷು ವರಯಿಷ್ಯೇ ಯಥಾತಥಮ್ ॥೧೧॥

ನೀನು ಯಾವ ಬ್ರಾಹ್ಮಣನಿಗೆ ನನ್ನನ್ನು ಕೊಟ್ಟು ವಿವಾಹ ಮಾಡಲು ಬಯಸುತ್ತೀಯೋ ಅವನನ್ನು ನನ್ನ ಬಳಿ ಕರೆದುಕೊಂಡು ಬಾ. ನೀನು ಕರೆದುತಂದ ವ್ಯಕ್ತಿಗಳಲ್ಲಿ ಆ ರೀತಿಯಾದ ಪತಿಯನ್ನೇ ಆರಿಸಿ ನಾನು ಹಿಂದೆ ಹೇಳಿದಂತೆ ವರಿಸುತ್ತೇನೆ.

ಭೀಷ್ಮಃ

ತಥೇತಿ ಚೋಕ್ತ್ವಾ ತಾಂ ಕನ್ಯಾಮೃಷಿಃ ಶಿಷ್ಯಾನುವಾಚ ಹ ।
ಬ್ರಾಹ್ಮಣಾನ್ ವೇದಸಂಪನ್ನಾನ್ ಯೋನಿಗೋತ್ರವಿಶೋಧಿತಾನ್ ॥೧೨॥

ಮಾತೃತಃ ಪಿತೃತಃ ಶುದ್ಧಾನ್ ಶುದ್ಧಾನಾಚರತಃ ಶುಭಾನ್ ।
ಅರೋಗಾನ್ ಬುದ್ಧಿಸಂಪನ್ನಾನ್ ಶೀಲಸತ್ವಗುಣಾನ್ವಿತಾನ್ ॥೧೩॥

ಅಸಂಕೀರ್ಣಾಂಶ್ಚ ಗೋತ್ರೇಷು ವೇದವ್ರತಸಮನ್ವಿತಾನ್ ।
ಬ್ರಾಹ್ಮಣಾನ್ ಸ್ನಾತಕಾನ್ ಶೀಘ್ರಂ ಮಾತಾಪಿತೃಸಮನ್ವಿತಾನ್ ।
ನಿವೇಷ್ಟುಕಾಮಾನ್ ಕನ್ಯಾಂ ಮೇ ದೃಷ್ಟ್ವಾऽऽನಯತ ಶಿಷ್ಯಕಾಃ ॥೧೪॥

ಭೀಷ್ಮ– ದೇವಲರು ಹಾಗೆಯೇ ಆಗಲೆಂದು ಮಗಳಿಗೆ ಹೇಳಿ, ತನ್ನ ಶಿಷ್ಯರನ್ನು ಕುರಿತು ಹೇಳುತ್ತಾರೆ- ಶಿಷ್ಯರೇ, ಜಾತಿ-ಗೋತ್ರಗಳನ್ನು, ಕುಲಾಚಾರಗಳನ್ನು ವಿಚಾರ

ಮಾಡಿ ವೇದಸಂಪನ್ನರಾದ ಬ್ರಾಹ್ಮಣರನ್ನು ತಂದೆಯಿಂದಲೂ, ತಾಯಿಯಿಂದಲೂ ಶುದ್ಧವಾದ ಪರಂಪರೆಯಲ್ಲಿ ಆಗಮಿಸಿರುವ, ಆಚಾರದಿಂದ ಶುದ್ಧರಾಗಿರುವ, ನೋಡಲು ಮಂಗಳ ಸ್ವರೂಪರಾದ, ರೋಗರಹಿತರಾದ, ಬುದ್ಧಿಸಂಪನ್ನರಾದ, ಶೀಲ-ಸತ್ವಗುಣಗಳಿಂದ ತುಂಬಿರುವ, ನಮ್ಮ ಗೋತ್ರದಿಂದ ಭಿನ್ನರಾಗಿರುವ, ವೇದವ್ರತಗಳಲ್ಲಿ ಆಸಕ್ತರಾಗಿರುವ, ಸ್ನಾತಕರಾದ, ತಂದೆ-ತಾಯಿಗಳಿಂದ ಕೂಡಿರುವ ಬ್ರಾಹ್ಮಣರನ್ನು ಕೂಡಲೇ ಕರೆದುಕೊಂಡು ಬನ್ನಿರಿ. ನನ್ನ ಮಗಳಿಗೆ ಇಷ್ಟವಾಗುವಂತಹ ಪುರುಷರು ಅವರು ಆಗಿರಬೇಕು ಎಂದು ಹೇಳಿದರು.

ತಚ್ಛ್ರುತ್ವಾ ತ್ವರಿತಾಃ ಶಿಷ್ಯಾ ಹ್ಯಾಶ್ರಮೇಷು ತತಸ್ತತಃ ।
ಗ್ರಾಮೇಷು ಚ ತತೋ ಗತ್ವಾ ಬ್ರಾಹ್ಮಣೇಭ್ಯೋ ನ್ಯವೇದಯನ್ ॥೧೫॥

ಒಡನೆಯೇ ಶಿಷ್ಯರು ಅಲ್ಲಲ್ಲಿ ಆಶ್ರಮಗಳಲ್ಲಿಯೂ, ಗ್ರಾಮಗಳಲ್ಲಿಯೂ ಸುತ್ತಾಡಿ ಅಲ್ಲಲ್ಲಿನ ಬ್ರಾಹ್ಮಣರಿಗೆ ಈ ಅಂಶಗಳನ್ನು ಹೇಳಿದರು.

ಋಷೇಃ ಪ್ರಭಾವಂ ಮತ್ವಾ ತೇ ಕನ್ಯಾಯಾಶ್ಚ ದ್ವಿಜೋತ್ತಮಾಃ ।
ಅನೇಕಮುನಯೋ ರಾಜನ್ ಸಂಪ್ರಾಪ್ತಾ ದೇವಲಾಶ್ರಮಮ್ ॥೧೬॥

ದೇವಲರ ಪ್ರಭಾವವನ್ನು, ಆ ದೇವಲರ ಮಗಳಾದ ಸುವರ್ಚಲೆಯ ಪ್ರಭಾವವನ್ನು ತಿಳಿದಿರುವ ಅನೇಕ ಬ್ರಾಹ್ಮಣಕುಮಾರರು, ಅನೇಕ ಮುನಿಗಳು ದೇವಲರ ಆಶ್ರಮಕ್ಕೆ ಈ ಸುದ್ದಿಯನ್ನು ಕೇಳಿ ಆಗಮಿಸಿದರು.

ಅನುಮಾನ್ಯ ಯಥಾನ್ಯಾಯಂ ಮುನೀನ್ ಮುನಿಕುಮಾರಕಾನ್ ।
ಅಭ್ಯರ್ಚ್ಯ ವಿಧಿವತ್ ತತ್ರ ಕನ್ಯಾ ಪ್ರಾಹ ಪಿತಾ ಮಹಾನ್ ॥೧೭॥

ಆಶ್ರಮಕ್ಕೆ ಆಗಮಿಸಿದ ವ್ಯಕ್ತಿಗಳನ್ನೆಲ್ಲ ದೇವಲರು ಅತ್ಯಂತ ಗೌರವದಿಂದ ಬರಮಾಡಿಕೊಂಡು ಅವರನ್ನು ವಿಧಿವತ್ತಾಗಿ ಪೂಜಿಸಿ ಶ್ರೇಷ್ಠ ತಂದೆಯಾದ ದೇವಲರು ಕನ್ಯೆಯನ್ನು ಕುರಿತು ಹೇಳಿದರು.

ಏತೇಽಪಿ ಮುನಯೋ ವತ್ಸೇ ಸ್ವಪುತ್ರೈಕಮತಾ ಇಹ ।
ವೇದವೇದಾಂಗಸಂಪನ್ನಾಃ ಕುಲೀನಾಃ ಶೀಲಸಮ್ಮತಾಃ ॥೧೮॥

ವತ್ಸೇ, ಇಲ್ಲಿ ನೋಡು. ಆಗಮಿಸಿರುವ ಋಷಿಕುಮಾರರನ್ನು ಅವಲೋಕಿಸು. ಇವರೆಲ್ಲರೂ ತಮ್ಮ ಮಕ್ಕಳಲ್ಲಿಯೇ ಅಭಿಪ್ರಾಯವುಳ್ಳವರಾಗಿ ಅರ್ಥಾತ್ ಉತ್ತಮ ಸಂತಾನಾರ್ಥಿಗಳಾಗಿ ಆಗಮಿಸಿದ್ದಾರೆ. ಎಲ್ಲರೂ ವೇದವೇದಾಂಗ ಸಂಪನ್ನರು, ಕುಲೀನರು, ಶೀಲಸಂಪನ್ನರು.

ಯೇಽಮೀ ತೇಷು ವರಂ ಭದ್ರೇ ತ್ವಮಿಚ್ಛಸಿ ಮಹಾವ್ರತಮ್ ।
ತಂ ಕುಮಾರಂ ವೃಣೀಷ್ವಾದ್ಯ ತಸ್ಮೈ ದಾಸ್ಯಾಮ್ಯಹಂ ಶುಭೇ ॥೧೯॥

ಇಲ್ಲಿ ಆಗಮಿಸಿರುವ ಕುಮಾರರಲ್ಲಿ ಇಷ್ಟಬಂದವರನ್ನು ನೀನು ವರಿಸಬಹುದು. ನೀನು ಒಪ್ಪಿದವನಿಗೆ ನಿನ್ನನ್ನು ವಿವಾಹ ಮಾಡಿಕೊಡಲು ನಾನು ಸಿದ್ಧನಾಗಿದ್ದೇನೆ ಎಂದು ಹೇಳಿದರು.

ತಥೇತಿ ಚೋಕ್ತ್ವಾ ಕಲ್ಯಾಣೀ ತಪ್ತಹೇಮನಿಭಾ ತದಾ ।
ಸರ್ವಲಕ್ಷಣಸಂಪನ್ನಾ ವಾಕ್ಯಮಾಹ ಯಶಸ್ವಿನೀ ॥೨೦॥

ವಿಪ್ರಾಣಾಂ ಸಮಿತೀರ್ದೃಷ್ಟ್ವಾ ಪ್ರಣಿಪತ್ಯ ತಪೋಧನಾನ್ ।
ಯದ್ಯಸ್ತಿ ಸಮಿತೌ ವಿಪ್ರೋ ಹ್ಯಂಧೋಽನಂಧಃ ಸ ಮೇ ವರಃ ॥೨೧॥

ಬ್ರಾಹ್ಮಣನ ಮಾತಿಗೆ ಆಗಲೆಂದು ಹೇಳಿದ ಸುವರ್ಚಲೆಯು ಸರ್ವಲಕ್ಷಣ ಸಂಪನ್ನೆಯಾಗಿ ಚಲಿಸುವ ಬಂಗಾರದಂತಹ ದೇಹಚ್ಛಾಯೆಯನ್ನು ಹೊಂದಿದ್ದಳು. ಆ ಬ್ರಾಹ್ಮಣರ ಮುಂದೆ ಆಗಮಿಸಿ ನಮಸ್ಕರಿಸಿ ಯಶಸ್ವಿನಿಯಾದ ಸುವರ್ಚಲೆಯು ಹೀಗೆ ಹೇಳಿದಳು- 'ಓ ಮಹಾತ್ಮರೇ, ನಿಮ್ಮಲ್ಲಿ ಅಂಧನೂ ಅಂಧನಲ್ಲದೇ ಇರುವವನೂ ಆದ ವ್ಯಕ್ತಿಯು ನನಗೆ ವರನಾಗಬಹುದು' ಎಂದು ಹೇಳಿದಳು.

ತತ್ ಶ್ರುತ್ವಾ ಮುನಯಸ್ತತ್ರ ವೀಕ್ಷಮಾಣಾಃ ಪರಸ್ಪರಮ್ ।
ನೋಚುರ್ವಿಪ್ರಾ ಮಹಾಭಾಗಾಃ ಕನ್ಯಾಂ ಮತ್ತ್ವಾ ಹ್ಯವೇದಿಕಾಮ್ ॥

ಆಗಮಿಸಿದ ಬ್ರಾಹ್ಮಣರು ಕನ್ಯೆಯ ಈ ಮಾತುಗಳನ್ನು ಕೇಳಿಸಿಕೊಂಡು ಕನ್ಯೆಯು ಅಪ್ರಬುದ್ಧಳಾಗಿದ್ದಾಳೆ ಎಂದು ತಿಳಿದು ಮಹಾಭಾಗರಾದ ಅವರೆಲ್ಲರೂ ಪರಸ್ಪರ ತಮ್ಮ ಮುಖಗಳನ್ನೇ ನೋಡಿಕೊಂಡರು. ಏನನ್ನೂ ಹೇಳಲಿಲ್ಲ.

ಕುತ್ಸಯಿತ್ವಾ ಮುನಿಂ ತತ್ರ ಮನಸಾ ಮುನಿಸತ್ತಮಾಃ ।
ಯಥಾಗತಂ ಯಯುಃ ಕ್ರುದ್ಧಾ ನಾನಾದೇಶನಿವಾಸಿನಃ ॥೨೩॥

ಮನಸ್ಸಿನಿಂದಲೇ ಆ ಬ್ರಾಹ್ಮಣಶ್ರೇಷ್ಠರೆಲ್ಲರೂ ದೇವಲಮುನಿಯನ್ನು ನಿಂದಿಸಿಕೊಂಡು, ಬಂದ ದಾರಿಯನ್ನೇ ಅನುಸರಿಸಿ ಹೊರಟರು. ನಾನಾ ದೇಶಗಳಿಂದ ಆಗಮಿಸಿದ ಎಲ್ಲರೂ ಕ್ರುದ್ಧರಾಗಿ ಹೊರಟು ಹೋದರು.

ಕನ್ಯಾ ಚ ಸಂಸ್ಥಿತಾ ತತ್ರ ಪಿತೃವೇಶ್ಮನಿ ಭಾಮಿನೀ ॥೨೪॥

ಬಳಿಕ ಸ್ವಲ್ಪ ದಿನಗಳ ತನಕವೂ ಸುವರ್ಚಲೆಯು ತಂದೆಯ ಮನೆಯಲ್ಲಿಯೇ ವಾಸ ಮಾಡುತ್ತಿದ್ದಳು.

ತತಃ ಕದಾಚಿದ್ ಬ್ರಹ್ಮಣ್ಯೋ ವಿದ್ವಾನ್ ನ್ಯಾಯವಿಶಾರದಃ ।
ಊಹಾಪೋಹವಿಧಾನಜ್ಞೋ ಬ್ರಹ್ಮವರ್ಚಸಮನ್ವಿತಃ ॥೨೫॥

ಸ್ವಲ್ಪ ದಿನಗಳ ಬಳಿಕ ಶ್ವೇತಕೇತು ಎಂಬ ಋಷಿಕುಮಾರನಿಗೆ ಇಲ್ಲಿ ನಡೆದ ಸಮಾಚಾರವು ತಿಳಿಯಿತು. ಆತನಾದರೂ ಬ್ರಾಹ್ಮಣಪ್ರಿಯನು, ಊಹಾಪೋಹ ವಿದ್ವಾಂಸನು, ನ್ಯಾಯಶಾಸ್ತ್ರ ಪಂಡಿತನೂ, ಸ್ಥಿರವಾದ ಬ್ರಹ್ಮಚರ್ಯದಲ್ಲಿ ರತನೂ ಆಗಿದ್ದನು.

ವೇದವಿದ್ ವೇದತತ್ತ್ವಜ್ಞಃ ಕ್ರಿಯಾಕಲ್ಪವಿಶಾರದಃ ।
ಆತ್ಮತತ್ತ್ವವಿಭಾಗಜ್ಞಃ ಪಿತೃಮಾನ್ ಗುಣಸಾಗರಃ ॥೨೬॥

ವೇದಗಳನ್ನು, ವೇದದ ರಹಸ್ಯಗಳನ್ನು, ಕರ್ಮಸ್ವರೂಪಗಳನ್ನು, ಅವುಗಳ ಫಲಗಳನ್ನು, ಪರಮಾತ್ಮನ ಸ್ವರೂಪವನ್ನು, ಪರಮಾತ್ಮನಿಗೂ ತನಗೂ ಇರುವ ಭೇದವನ್ನು ಇವೆಲ್ಲವನ್ನೂ ಚೆನ್ನಾಗಿ ಬಲ್ಲವನಾಗಿದ್ದನು. ತಂದೆಯುಳ್ಳವನಾಗಿದ್ದನು. ಗುಣಗಳ ಸಾಗರನಾಗಿದ್ದನು.

ಶ್ವೇತಕೇತುರಿತಿ ಖ್ಯಾತಃ ಶ್ರುತ್ವಾ ವೃತ್ತಾಂತಮಾದರಾತ್ ।
ಕನ್ಯಾರ್ಥಂ ದೇವಲಂ ಚಾಪಿ ಶೀಘ್ರಂ ತತ್ರಾಗತೋಽಭವತ್ ॥೨೭॥

ಶ್ವೇತಕೇತು ಎಂದು ಹೆಸರನ್ನು ಹೊಂದಿದ ಈ ಋಷಿಕುಮಾರನು ಸಂತೋಷದಿಂದ

ಈ ವೃತ್ತಾಂತವನ್ನು ಕೇಳಿಸಿಕೊಂಡು ಕನ್ಯಾರ್ಥಿಯಾಗಿ ಶೀಘ್ರವಾಗಿ ದೇವಲರ ಆಶ್ರಮಕ್ಕೆ ಆಗಮಿಸಿದನು.

ಉದ್ದಾಲಕಸುತಂ ದೃಷ್ಟ್ವಾ ಶ್ವೇತಕೇತುಂ ಮಹಾವ್ರತಮ್ ।
ಯಥಾನ್ಯಾಯಂ ಚ ಸಂಪೂಜ್ಯ ದೇವಲಃ ಪ್ರತ್ಯಭಾಷತ ॥೨೮॥

ಮಹಾವ್ರತನಿಷ್ಠನಾದ, ಉದ್ದಾಲಕರ ಸುತನಾದ ಶ್ವೇತಕೇತುವು ತನ್ನ ಆಶ್ರಮಕ್ಕೆ ಆಗಮಿಸಿದ್ದನ್ನು ಕಂಡು ಅವನನ್ನು ಸತ್ಕರಿಸಿ ಅವನನ್ನು ಕುರಿತು ಹೇಳಿದರು.

ಕನ್ಯೇ ಏಷ ಮಹಾಭಾಗ ಪ್ರಾಪ್ತೋ ಋಷಿಕುಮಾರಕಃ ।
ವರಯೈನಂ ಮಹಾಪ್ರಾಜ್ಞಂ ವೇದವೇದಾಂಗಪಾರಗಮ್ ॥೨೯॥

ಭಾಗ್ಯಶಾಲಿನಿಯಾದ ಸುವರ್ಚಲೆಯೇ, ಋಷಿಕುಮಾರನಾದ ಶ್ವೇತಕೇತುವು ಆಗಮಿಸಿದ್ದಾನೆ. ವೇದವೇದಾಂಗ ಪಾರಗನಾದ ಮಹಾಪ್ರಾಜ್ಞನನ್ನು ನೀನು ವರಿಸು.

ತಚ್ಛ್ರುತ್ವಾ ಕುಪಿತಾ ಕನ್ಯಾ ಋಷಿಪುತ್ರಮುದೈಕ್ಷತ ।
ತಾಂ ಕನ್ಯಾಮಾಹ ವಿಪ್ರರ್ಷಿಃ ಸೋಽಹಂ ಭದ್ರೇ ಸಮಾಗತಃ ॥೩೦॥

ತಂದೆಯ ಮಾತನ್ನು ಕೇಳಿದ ಕನ್ಯೆಯು ಸಿಟ್ಟಿನಿಂದಲೇ ಋಷಿಪುತ್ರನನ್ನು ನೋಡಿದಳು. ಬ್ರಾಹ್ಮಣಶ್ರೇಷ್ಠನು ಆ ಕನ್ಯೆಯನ್ನು ಕುರಿತು ಮಂಗಳೆಯೇ, ನಾನೇ ಶ್ವೇತಕೇತುವು, ಆಗಮಿಸಿದ್ದೇನೆ ಎಂದು ಹೇಳಿದನು.

ಅಂಧೋಽಹಮತ್ರ ತತ್ತ್ವಂ ಹಿ ತಥಾ ಮನ್ಯೇ ಚ ಸರ್ವದಾ ।
ವಿಶಾಲನಯನಂ ವಿದ್ಧಿ ತಥಾ ಮಾಂ ಹೀನಸಂಶಯಮ್ ॥೩೧॥

ಎಲೈ ಭದ್ರೆಯೇ, ಇದೋ ನಾನು ನಿನ್ನ ವಿವಾಹಕ್ಕಾಗಿ ಬಂದಿದ್ದೇನೆ. ನಿನ್ನ ಶಪಥದಂತೆ ನಾನು ಈ ಸಂಸಾರದಲ್ಲಿ ನಿಜವಾಗಿಯೂ ಕುರುಡನಾಗಿದ್ದೇನೆ. ನಿನ್ನ ಭಾವನೆಗೆ ಅನುಗುಣವಾದ ಭಾವ ನನ್ನಲ್ಲಿದೆ. ಆದರೆ ನನಗೆ ಸಂಶಯರಹಿತವಾದ ಭಗವದ್ ಜ್ಞಾನವು ವಿಶಾಲವಾಗಿರುವುದರಿಂದ ನನ್ನ ಕಣ್ಣುಗಳು ಸ್ಪಷ್ಟವಾಗಿವೆ ಎಂದು ತಿಳಿ. ಆದ್ದರಿಂದ ನಿನ್ನ ಉದ್ದೇಶದಂತೆ ಅಂಧನೂ, ನಿರಂಧನೂ ಆಗಿರುವ ನನ್ನನ್ನು ಉತ್ತಮಳಾದ ನೀನು ಸ್ವೀಕರಿಸು. ನಾನು ನಿನ್ನನ್ನು ಪ್ರೀತಿಯಿಂದಲೇ ಸ್ವೀಕರಿಸುತ್ತೇನೆ.

ಯೇನೇದಂ ವೀಕ್ಷತೇ ನಿತ್ಯಂ ವೃಣೋತಿ ಸ್ಪೃಶತೇಽಥವಾ ।
ಘ್ರಾಯತೇ ವಕ್ತಿ ಸತತಂ ಯೇನೇದಂ ಸಾರ್ಯತೇ ಪುನಃ ॥೩೨॥

ಯಾವ ಪರಮಾತ್ಮನಿಂದ ಈ ಜೀವನು ನೋಡಲ್ಪಡುತ್ತಾನೋ, ನಿತ್ಯವೂ ಜೀವನು ಶ್ರವಣ, ಸ್ಪರ್ಶನ, ಘ್ರಾಣಾದಿಗಳನ್ನು ಅನುಭವಿಸುತ್ತಾನೋ, ಯಾವ ಭಗವಂತನ ಅನುಗ್ರಹದಿಂದ ಕರ್ಮಗಳನ್ನು ಆಚರಿಸುತ್ತಾನೋ,

ಯೇನೇದಂ ಮನ್ಯತೇ ತತ್ತ್ವಂ ಯೇನ ಬುಧ್ಯತಿ ವಾ ಪುನಃ ।
ನ ಚಕ್ಷುರ್ವಿದ್ಯತೇ ಹ್ಯೇಷಃ ಸ ವೈ ಭೂತಾಂಧ ಉಚ್ಯತೇ ॥೩೩॥

ಯಾವ ಭಗವಂತನ ಅನುಗ್ರಹದಿಂದ ತತ್ತ್ವಗಳನ್ನು ತಿಳಿಯುತ್ತಾನೋ, ಯಾವ ಭಗವಂತನ ಅನುಗ್ರಹದಿಂದಲೇ ಪುನಃ ಪುನಃ ಅರ್ಥಮಾಡಿಕೊಳ್ಳುತ್ತಾನೋ, ಅಂಥ ಈ ಜೀವಾತ್ಮನಿಗೆ ಪರಮಾತ್ಮನೇ ಚಕ್ಷುಸ್ಸೆನಿಸಿದ್ದಾನೆ. ಭಗವಂತನೆಂಬ ಕಣ್ಣು ಯಾರಿಗಿಲ್ಲವೋ ಅವನು ಪ್ರಾಣಿ ಪ್ರಪಂಚದಲ್ಲೇ ಅಂಧ ಎಂದು ಕರೆಸಿಕೊಳ್ಳುತ್ತಾನೆ.

ಯಸ್ಮಿನ್ ಪ್ರವರ್ತತೇ ಚೇದಂ ಪಶ್ಯನ್ ಶೃಣ್ವನ್ ಸ್ಪೃಶನ್ನಪಿ ।
ಜಿಘ್ರಂಶ್ಚ ರಸಯಂಸ್ತದ್ವದ್ ವರ್ತತೇ ಯೇನ ಚಕ್ಷುಷಾ ॥೩೪॥

ಜಗತ್ತಿನಂತೆ ಯಾವ ಪರಮಾತ್ಮನಿಂದ ಈ ಜಗತ್ತಿನಲ್ಲಿ ಪ್ರವೃತ್ತಿಯನ್ನು ಹೊಂದುತ್ತದೋ ಅದರಂತೆ ಜೀವನು ಭಗವಂತನ ಅಧೀನವಾಗಿಯೇ ಇರುತ್ತಾನೆ. ನೋಡುವ ಕಣ್ಣು ನನ್ನದಲ್ಲ. ಈ ಜಗತ್ತನ್ನು ನೋಡಲು ನಾನು ಅಂಧನೇ ಆಗಿದ್ದೇನೆ. ಆದ್ದರಿಂದ ನನ್ನನ್ನು ಅಂಧನೆಂದೇ ಭಾವಿಸಬಹುದು. ನೋಡುತ್ತಲೂ, ಕೇಳುತ್ತಲೂ, ಸ್ಪರ್ಶಿಸುತ್ತಲೂ, ಘ್ರಾಣಿಸುತ್ತಲೂ, ರಸವನ್ನು ಸವಿಯುತ್ತಲೂ ಇರುವ ವಿಷಯದ ಕಣ್ಣು ನನಗೆ ಇರುವುದಿಲ್ಲ.

ತನ್ಮೇ ನಾಸ್ತಿ ತತೋ ಹ್ಯಂಧೋ ವೃಣು ಭದ್ರೇಽದ್ಯ ಮಾಮತಃ ।
ಲೋಕದೃಷ್ಟ್ಯಾ ಕರೋಮೀಹ ನಿತ್ಯನೈಮಿತ್ತಿಕಾದಿಕಮ್ ॥೩೫॥

ಆತ್ಮದೃಷ್ಟ್ಯಾ ಚ ತತ್ಸರ್ವಂ ವಿಲಿಪ್ಯಾಮಿ ಚ ನಿತ್ಯಶಃ ।
ಸ್ಥಿತೋಽಹಂ ನಿರ್ಭರಃ ಶಾಂತಃ ಕಾರ್ಯಕಾರಣಭಾವನಃ ॥೩೬॥

ಆದ್ದರಿಂದ ಈ ವಿಷಯದಲ್ಲಿ ನಾನು ಅಂಧನೇ ಆಗಿದ್ದೇನೆ. ತತ್ತ್ವಜ್ಞಾನದಲ್ಲಿ ಸಂಶಯರಹಿತನಾಗಿದ್ದೇನೆ. ನನ್ನ ಕಣ್ಣುಗಳು ಸ್ವಚ್ಛವಾಗಿಯೂ ಇವೆಯೆಂದು ತಿಳಿ. ನನ್ನನ್ನು ನೀನು ವರಿಸಬಹುದು. ಪರಮಾತ್ಮನಲ್ಲಿಯೇ ಜ್ಞಾನವುಳ್ಳ ನಾನು ಜಗತ್ತಿನ ಕರ್ಮವನ್ನು ಮಾಡುತ್ತಿದ್ದರೂ ನಿತ್ಯವೂ ಅವುಗಳ ಲೇಪವನ್ನು ಹೊಂದದಂತೆ ಎಚ್ಚರವನ್ನು ವಹಿಸುತ್ತೇನೆ. (ಪರಮಾತ್ಮನಲ್ಲಿ ದೃಷ್ಟಿಯುಳ್ಳವರಲ್ಲಿ ಕರ್ಮವು ಲೇಪಿಸವು ಎಂದು ಭಾವ). ನಿತ್ಯವೂ ನಾನು ಕಾರ್ಯರೂಪವಾದ ಪ್ರಪಂಚಕ್ಕೆ ಕಾರಣನೆನಿಸಿದ ಪರಮಾತ್ಮನನ್ನೇ ಧ್ಯಾನಿಸುತ್ತಾ ನಿರ್ಭರನಾಗಿ ಶಾಂತನಾಗಿರುತ್ತೇನೆ.

ಅವಿದ್ಯಯಾ ತರನ್ ಮೃತ್ಯುಂ ವಿದ್ಯಯಾ ತಂ ತಥಾऽಮೃತಮ್ ।
ಯಥಾಪ್ರಾಪ್ತಂ ತು ಸಂದೃಶ್ಯ ವಸಾಮೀಹ ವಿಮತ್ಸರಃ ।
ಕ್ರೀತೇ ವ್ಯವಸಿತಂ ಭದ್ರೇ ಭರ್ತಾऽಹಂ ತೇ ವೃಣೀಷ್ವ ಮಾಮ್ ॥೩೭॥

ನಿಂದಿತವಾದ ದುಶ್ಶಾಸ್ತ್ರಗಳನ್ನು ನಾನು ಖಂಡಿಸುತ್ತಾ ಭಗವಂತನ ಪ್ರಸಾದಕ್ಕೆ ಪಾತ್ರನಾಗಿ, ಮೃತ್ಯುವನ್ನು ಜಯಿಸುತ್ತಾ, ಭಗವಂತನ ವಿದ್ಯೆಯಿಂದ ಮೋಕ್ಷರೂಪವಾದ ಸಂಪತ್ತನ್ನು ಹೊಂದುತ್ತಾ, ಅಸೂಯಾರಹಿತನಾಗಿ ಯಥಾಯೋಗ್ಯನಾಗಿ ಈ ಜಗತ್ತನ್ನು ನೋಡುತ್ತಾ ವಾಸಿಸಿದ್ದೇನೆ. ಎಲೈ ಭದ್ರೆಯೇ, ನಿನ್ನ ಶಪಥದಂತೆ ಈಗ ನೀನು ನನಗೆ ವಿಕ್ರಯಿಸಲ್ಪಟ್ಟವಳಾಗಿರುವಿ. ನಾನು ನಿನ್ನ ಗಂಡನು. ನೀನು ನನ್ನನ್ನು ಇನ್ನು ಸ್ವೀಕರಿಸಬೇಕು ಎಂದು ಹೇಳಿದನು.

ಭೀಷ್ಮಃ

ತತಃ ಸುವರ್ಚಲಾ ದೃಷ್ಟ್ವಾ ಪ್ರಾಹ ತಂ ದ್ವಿಜಸತ್ತಮಮ್ ।
ಮನಸಾऽಪಿ ವೃತೋ ವಿದ್ವನ್ ಶೇಷಕರ್ತಾ ಪಿತಾ ಮಮ ।
ವೃಣೀಷ್ವ ಪಿತರಂ ಮಹ್ಯಮೇಷ ವೇದವಿಧಿಕ್ರಮಃ ॥೩೮॥

ಭೀಷ್ಮ– ಬಳಿಕ ಸುವರ್ಚಲೆಯು ಬ್ರಾಹ್ಮಣನನ್ನು ನೋಡುತ್ತಾ ಹೀಗೆ ಹೇಳಿದಳು- ಎಲೈ ಪ್ರಾಜ್ಞನೇ, ಹಾಗಿದ್ದರೆ ನಾನು ನಿನ್ನನ್ನು ಮನಸ್ಸಿನಿಂದ ವರಿಸಿದ್ದೇನೆ. ಮುಂದಿನ ಕಾರ್ಯಗಳನ್ನು ನಡೆಸಬೇಕಾದವನು ನನ್ನ ತಂದೆಯು. ಆದ್ದರಿಂದ ನನ್ನ ವಿಷಯವನ್ನು ಕುರಿತು ನನ್ನ ತಂದೆಯ ಬಳಿ ಹೋಗಿ ಪ್ರಾರ್ಥಿಸು. ಇದು ಶಾಸ್ತ್ರದಲ್ಲಿ ವಿಧಿಸಿದ ರೀತಿಯು ಎಂದು ಹೇಳಿದಳು.

ತದ್ ವಿಜ್ಞಾಯ ಪಿತಾ ತಸ್ಯಾ ದೇವಲೋ ಮುನಿಸತ್ತಮಃ ।
ಶ್ವೇತಕೇತುಂ ಚ ಸಂಪೂಜ್ಯ ತಥೈವೋದ್ದಾಲಕೇನ ತಮ್ ॥೩೯॥

ಈ ಅಭಿಪ್ರಾಯವನ್ನು ತಿಳಿದ ಮಹಾಜ್ಞಾನಿಯಾದ ಅವಳ ತಂದೆ ದೇವಲನು ಶ್ವೇತಕೇತುವನ್ನು ಗೌರವದಿಂದ ಸತ್ಕರಿಸಿ ಶ್ವೇತಕೇತುವಿನ ವಿವಾಹವನ್ನಾಚರಿಸಲು ಅವನ ತಂದೆಯಾದ ಉದ್ದಾಲಕನನ್ನು ಕರೆಸಿದನು.

ಮುನೀನಾಮಗ್ರತಃ ಕನ್ಯಾಂ ಪ್ರದದೌ ಜಲಪೂರ್ವಕಮ್ ।
ಉದಾಹರಂತಿ ವೈ ತತ್ರ ಶ್ವೇತಕೇತುಂ ನಿರೀಕ್ಷ್ಯ ತಮ್ ॥೪೦॥

ಹೃತ್ಪುಂಡರೀಕನಿಲಯಃ ಸರ್ವಭೂತಾತ್ಮಕೋ ಹರಿಃ ।
ಶ್ವೇತಕೇತುಸ್ವರೂಪೇಣ ಸ್ಥಿತೋಽಸೌ ಮಧುಸೂದನಃ ॥೪೧॥

ಸಮಸ್ತ ಮುನಿಗಳ ನಡುವೆ ಧಾರಾಪೂರ್ವಕವಾಗಿ ತನ್ನ ಕನ್ಯೆಯನ್ನು ಶ್ವೇತಕೇತುವಿಗೆ ಧಾರೆ ಎರೆದುಕೊಟ್ಟನು. ಆಗ ಅಲ್ಲಿರುವವರು ಶ್ವೇತಕೇತುವನ್ನು ನೋಡಿ- ಇವನು ಸಾಮಾನ್ಯ ಮುನಿಯಲ್ಲ, ಹೃತ್ಪುಂಡರೀಕನಿಲಯನಾದ, ಸರ್ವಭೂತಾತ್ಮಕನಾದ ಮಧುಸೂದನನೇ ಶ್ವೇತಕೇತುವಿನ ಅಂತರ್ಯಾಮಿಯಾಗಿ ನಿಂತು ಇಲ್ಲಿಗೆ ಆಗಮಿಸಿದ್ದಾನೆ. ಈ ರೀತಿಯಾದ ವ್ಯಾಪಾರವನ್ನು ಮಾಡಿದ್ದಾನೆ ಎಂದು ಮಾತನಾಡಿಕೊಳ್ಳುತ್ತಿದ್ದರು.

ಪ್ರೀಯತಾಂ ಮಾಧವೋ ದೇವಃ ಪತ್ನೀ ಚೇಯಂ ಸುತಾ ಮಮ ।
ಪ್ರತಿಪಾದಯಾಮಿ ತೇ ಕನ್ಯಾಂ ಸಹಧರ್ಮಚರೀಂ ಶುಭಾಮ್ ।
ಇತ್ಯುಕ್ತ್ವಾ ಪ್ರದದೌ ತಸ್ಮೈ ದೇವಲೋ ಮುನಿಪುಂಗವಃ ॥೪೨॥

ದೇವದೇವನಾದ ಮಾಧವನು ನನ್ನ ವಿಷಯದಲ್ಲಿ ಪ್ರೀತನಾಗಲಿ. ನನ್ನ ಮಗಳು ನಿನ್ನ ಪತ್ನಿಯಾಗಿದ್ದಾಳೆ. ಇವಳನ್ನು ನಿನಗೆ ಸಹಧರ್ಮಚಾರಿಣಿಯಾಗಿ ಒಪ್ಪಿಸಿದ್ದೇನೆ ಎಂದು ಹೇಳಿ ಆ ಕನ್ಯೆಯನ್ನು ಶ್ವೇತಕೇತುವಿನ ಕೈಗೆ ಮುನಿಪುಂಗವನಾದ ದೇವಲನು ಒಪ್ಪಿಸಿದನು.

ಪ್ರತಿಗೃಹ್ಯ ಚ ತಾಂ ಕನ್ಯಾಂ ಶ್ವೇತಕೇತುರ್ಮಹಾಯಶಾಃ ।
ಉಪಯಮ್ಯ ಯಥಾನ್ಯಾಯಮತ್ರ ಕೃತ್ವಾ ಯಥಾವಿಧಿ ॥೪೩॥

ಶ್ವೇತಕೇತುವು ಆ ಕನ್ಯೆಯ ಪಾಣಿಗ್ರಹಣವನ್ನು ಮಾಡಿ ಶಾಸ್ತ್ರೋಕ್ತವಿಧಿಯಿಂದ ವಿವಾಹ ಮಾಡಿಕೊಂಡನು.

ಸಮಾಪ್ಯ ತಂತ್ರಂ ಮುನಿಭಿರ್ವೈವಾಹಿಕಮನುತ್ತಮಮ್ ।
ಸ ಗಾರ್ಹಸ್ಥ್ಯೇ ವಸನ್ ಧೀಮಾನ್ ಭಾರ್ಯಾಂ ತಾಮಿದಮಬ್ರವೀತ್ ॥

ಅನೇಕ ಋಷಿ-ಮುನಿಗಳನ್ನು ಮುಂದಿಟ್ಟುಕೊಂಡು ವಿವಾಹಕಾರ್ಯವನ್ನು ನಡೆಸಿಕೊಂಡ ಅವನು ಅವಳೊಡನೆ ಗೃಹಸ್ಥಾಶ್ರಮದಲ್ಲಿರುತ್ತಿದ್ದನು. ಒಂದು ಬಾರಿ ಸುವರ್ಚಲೆಯನ್ನು ಕುರಿತು ಶ್ವೇತಕೇತುವು ಹೀಗೆ ಇರುತ್ತಿರಲು ಒಂದು ಮಾತನ್ನು ಹೇಳಿದನು.

ಯಾನಿ ಚೋಕ್ತಾನಿ ವೇದೇಷು ತತ್ಸರ್ವಂ ಕುರು ಶೋಭನೇ ।
ಮಯಾ ಸಹ ಯಥಾನ್ಯಾಯಂ ಸಹಧರ್ಮಚರೀ ಮಮ ॥೪೫॥

ಶುಭಗೇ, ನೀನು ನನ್ನ ಸಹಧರ್ಮಚಾರಿಣಿಯಾಗಿರುವಿ. ಆದ್ದರಿಂದ ವೇದೋಕ್ತ ಮಾರ್ಗದಲ್ಲಿ ನ್ಯಾಯರೀತಿಯಲ್ಲಿ ನೀನು ಸಹಾಯಕಳಾಗಿರಬೇಕು. ವೇದವಿಧಿಗೆ ಅನುಗುಣವಾಗಿ ನೀನು ನನಗೆ ಸಹಧರ್ಮಚಾರಿಣಿಯಾಗಿರು.

ಅಹಮಿತ್ಯೇವ ಭಾವೇನ ಸ್ಥಿತಸ್ತ್ವಮತಥೈವ ಚ ।
ತಸ್ಮಾತ್ ಕರ್ಮಾಣಿ ಕುರ್ವೀಥಾಃ ಕುರ್ಯಾಂ ತೇ ಚ ತತಃ ಪರಮ್ ॥

ನಾನಾದರೂ ತಂದೆಯಾದ ಉದ್ದಾಲಕರ ಉಪದೇಶದಿಂದ ಸರ್ವಜ್ಞಾದಿಗುಣ ವಿಶಿಷ್ಟನಾದ ಭಗವಂತನು ನಾನಲ್ಲ ಎಂಬುದನ್ನು ಅರ್ಥಮಾಡಿಕೊಂಡಿದ್ದೇನೆ. ಮೊದಲು ಅಹಂಕಾರ ಹೊಂದಿದ ನಾನು ಉಪದೇಶದಿಂದ ಈ ಅಹಂಕಾರ ತ್ಯಜಿಸಿದ್ದೇನೆ. ನೀನು ನನ್ನಂತೆಯೇ ಭಗವತ್ತತ್ತ್ವಜ್ಞೆಯನ್ನು ರೂಪಿಸಿಕೊಂಡು ಸತ್ಕರ್ಮಗಳನ್ನು ಆಚರಿಸು. ಬಳಿಕ ನಾನು ನಿನಗೆ ಹಿತವನ್ನು ಮಾಡುತ್ತೇನೆ.

ನ ಮಮೇತಿ ಚ ಭಾವೇನ ಜ್ಞಾನಾಗ್ನಿನಿಲಯೇನ ಚ ।
ಅನಂತರಂ ತಥಾ ಕುರ್ಯಾಸ್ತಾನಿ ಕರ್ಮಾಣಿ ಭಸ್ಮಸಾತ್ ॥೪೭॥

ನಾನು ಆಚರಿಸುವ ಕರ್ಮ ನಾನು ಮಾಡುತ್ತಿಲ್ಲ. ಭಗವಂತನೇ ಈ ಕರ್ಮಗಳನ್ನು ನನ್ನ ಮೂಲಕ ಮಾಡಿಸುತ್ತಿದ್ದಾನೆ. ಈ ರೀತಿಯಾದ ಜ್ಞಾನದ ಸಂಬಂಧದಿಂದ

ಕರ್ಮಗಳಿಂದುಂಟಾಗುವ ದೋಷಗಳನ್ನು ಭಸ್ಮ ಮಾಡಿಕೊಳ್ಳಬೇಕು. ನಾನು ಹಾಗೆ ಆಚರಿಸುತ್ತಿದ್ದೇನೆ.

ಏವಂ ತ್ವಯಾ ಚ ಕರ್ತವ್ಯಂ ಸರ್ವದಾ ದುರ್ಭಗಾ ಮಯಾ ।
ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।
ತಸ್ಮಾಲ್ಲೋಕಸ್ಯ ಸಿದ್ಧ್ಯರ್ಥಂ ಕರ್ತವ್ಯಂ ಚಾತ್ಮಸಿದ್ಧಯೇ ॥೪೮॥

ನಿನ್ನಿಂದಲೂ ಯಾವಾಗಲೂ ದುಷ್ಟವಾದ ಭಾವಗಳನ್ನು ತ್ಯಜಿಸಿ ಇದರಂತೆ ಕರ್ತವ್ಯಗಳು ಮಾಡಲ್ಪಡಬೇಕು. ಸತ್ಪುರುಷರು ಯಾವುದನ್ನು ಆಚರಿಸುತ್ತಾರೋ ಇತರರೂ ಅದನ್ನೇ ಆಚರಿಸುತ್ತಾರೆ. ಆದ್ದರಿಂದ ಲೋಕದ ಸನ್ನಡತೆಯ ಸಿದ್ಧಿಗಾಗಿ, ಪರಮಾತ್ಮನ ಪ್ರಾಪ್ತಿಗಾಗಿ ಕರ್ತವ್ಯಗಳನ್ನು ಮಾಡಬೇಕು.

ಉಕ್ತ್ವೈವಂ ಸ ಮಹಾಪ್ರಾಜ್ಞಃ ಸರ್ವಜ್ಞಾನೈಕಭಾಜನಃ ।
ಪುತ್ರಾನುತ್ಪಾದ್ಯ ತಸ್ಯಾಂ ಚ ಯಜ್ಞೈಃ ಸಂತರ್ಪ್ಯ ದೇವತಾಃ ॥೪೯॥

ಮಹಾಬುದ್ಧಿವಂತನಾದ, ಸರ್ವಜ್ಞನಾದ ಭಗವಂತನಲ್ಲಿಯೇ ರತನಾದ ಶ್ವೇತಕೇತುವು ತನ್ನ ಹೆಂಡತಿಯನ್ನು ಅಧ್ಯಾತ್ಮಿಕವಾಗಿ ಹೀಗೆ ನಡೆಸಿಕೊಂಡು, ದೇವತೆಗಳನ್ನೆಲ್ಲ ಯಜ್ಞದ ಮೂಲಕ ಸಂತೋಷಪಡಿಸಿ, ಅವಳ ಮೂಲಕ ಅನೇಕ ಸಂತತಿಯನ್ನು ಪಡೆದನು.

ಆತ್ಮಯೋಗಪರೋ ನಿತ್ಯಂ ನಿರ್ದ್ವಂದ್ವೋ ನಿಷ್ಪರಿಗ್ರಹಃ ।
ಭಾರ್ಯಾಂ ತಾಂ ಸದೃಶೀಂ ಪ್ರಾಪ್ಯ ಬುದ್ಧಿಂ ಕ್ಷೇತ್ರಜ್ಞಯೋರಿವ ॥೫೦॥

ನಿತ್ಯವೂ ಪರಮಾತ್ಮನ ಯೋಗದಲ್ಲಿಯೇ ರತನಾದ, ಸುಖ-ದುಃಖಗಳನ್ನು ಮೀರಿರುವ, ಪರಿಗ್ರಹವನ್ನು ಮೀರಿರುವ ಶ್ವೇತಕೇತುವು ಜೀವ-ಪರಮಾತ್ಮರಲ್ಲಿರುವ ಭೇದಬುದ್ಧಿಯಂತೆ ತನ್ನಂತೆ ಸಮಾನ ಮನಸ್ಕಳಾದ ಬುದ್ಧಿಯನ್ನು ಹೊಂದಿರುವ, ಜೀವ-ಪರಮಾತ್ಮರ ಜ್ಞಾನವನ್ನು ಹೊಂದಿರುವ ಸುವರ್ಚಲೆಯಲ್ಲಿ ಸಂತಾನವನ್ನು ಹೊಂದಿದನು.

ಲೋಕಮನ್ಯಮನುಪ್ರಾಪ್ತೌ ಭಾರ್ಯಾ ಭರ್ತಾ ತಥೈವ ಚ ।
ಸಾಕ್ಷಿಭೂತೌ ಜಗತ್ಯಸ್ಮಿಂಶ್ಚರಮಾಣೌ ಮುದಾऽನ್ವಿತೌ ॥೫೧॥

ಈ ಇಬ್ಬರು ದಂಪತಿಗಳು ಸಂತೋಷದಿಂದ ಈ ಲೋಕಕ್ಕೆ ಸಾಕ್ಷಿಭೂತರಾಗಿದ್ದು, ಲೋಕದಲ್ಲಿದ್ದಾಗಲೂ ಲೋಕಾಂತರರಂತೆ ಇರುತ್ತಿದ್ದರು.

ತತಃ ಕದಾಚಿದ್ ಭರ್ತಾರಂ ಶ್ವೇತಕೇತುಂ ಸುವರ್ಚಲಾ ।
ಪಪ್ರಚ್ಛ ಕೋ ಭವಾನತ್ರ ಬ್ರೂಹಿ ಮೇ ತದ್ ದ್ವಿಜೋತ್ತಮ ॥೫೨॥

ಹೀಗೆ ಇರುವಾಗ ಒಮ್ಮೆ ಸುವರ್ಚಲೆಯು ತನ್ನ ಪತಿಯಾದ ಶ್ವೇತಕೇತುವನ್ನು ಕುರಿತು ಬ್ರಾಹ್ಮಣೋತ್ತಮನೇ, ನೀನು ಯಾರು? ನನಗೆ ನಿನ್ನ ಬಗ್ಗೆ ತಿಳಿಸಬೇಕು ಎಂದು ಪ್ರಶ್ನಿಸಿದಳು.

ತಾಮಾಹ ಭಗವಾನ್ ವಾಗ್ಮೀ ತಯಾ ಜ್ಞಾತೋ ನ ಸಂಶಯಃ ।
ದ್ವಿಜೋತ್ತಮೇತಿ ಮಾಮುಕ್ತ್ವಾ ಪುನಃ ಕಮನುಪೃಚ್ಛಸಿ ॥೫೩॥

ಆಗ ಶ್ವೇತಕೇತುವು ನಸುನಗುತ್ತಾ- 'ಎಲೈ ಪ್ರಿಯತಮೆ, ಈಗಲೇ ನೀನು ನನ್ನನ್ನು ಬ್ರಾಹ್ಮಣೋತ್ತಮ ಎಂದು ಕರೆದೆಯಲ್ಲವೆ? ಆದ್ದರಿಂದ ನಾನು ನಿನಗೆ ಯಾರೆಂದು ತಿಳಿದಂತಾಯಿತಲ್ಲವೆ? ಪುನಃ ನೀನು ಏಕೆ ಪ್ರಶ್ನಿಸುತ್ತಿ?' ಎಂದು ಕೇಳಿದನು.

ಸಾ ತಮಾಹ ಮಹಾತ್ಮಾನಂ ಪೃಚ್ಛಾಮಿ ಹೃದಿ ಶಾಯಿನಮ್ ।
ತಚ್ಛ್ರುತ್ವಾ ಪ್ರತ್ಯುವಾಚೈನಾಂ ಸ ನ ವಕ್ಷ್ಯತಿ ಭಾಮಿನಿ ॥೫೪॥

ಆಗ ಸುವರ್ಚಲೆಯು- 'ನಾಥನೇ, ಹಾಗಲ್ಲ. ನಿನ್ನ ಹೃದಯದಲ್ಲಿ ಅಡಗಿರುವ ಆತ್ಮವನ್ನು ಕುರಿತು ನಾನು ಪ್ರಶ್ನಿಸುತ್ತಿದ್ದೇನೆ'. ಈ ರೀತಿಯಾಗಿ ಹೇಳಲು ಅವಳ ಮಾತನ್ನು ಕೇಳಿದ ಶ್ವೇತಕೇತುವು ಹೇಳುತ್ತಾನೆ- 'ಪ್ರಿಯೆ, ಆ ಆತ್ಮನು ಮಾತನಾಡಲಾರನು'.

ನಾಮಗೋತ್ರಸಮಾಯುಕ್ತಮಾತ್ಮಾನಂ ಮನ್ಯಸೇ ಯದಿ ।
ತನ್ಮಿಥ್ಯಾ ಗೋತ್ರಸದ್ಭಾವೇ ವರ್ತತೇ ದೇಹಬಂಧನಮ್ ॥೫೫॥

ಸುವರ್ಚಲೆಯೇ, ಆತ್ಮಕ್ಕೆ ನಾಮ, ಗೋತ್ರಗಳು ಇವೆಯೆಂದು ನೀನು ಭಾವಿಸುವ ಪಕ್ಷದಲ್ಲಿ ಅದು ತಪ್ಪಾದ ತಿಳಿವಳಿಕೆಯಾಗಿದೆ. ಆತ್ಮನಿಗೆ ನಾಮ-ಗೋತ್ರಾದಿಗಳು ಅನಿತ್ಯವು, ವ್ಯರ್ಥವು ಆಗಿವೆ. ಈ ಅನಿತ್ಯವಾದ ಗೋತ್ರಾದಿಗಳಿಂದ ದೇಹಬಂಧನವು ಉಂಟಾಗಿದೆ.

ಅಹಮಿತ್ಯೇಷ ಭಾವೋಽತ್ರ ತ್ವಯಿ ಚಾಪಿ ಸಮಾಹಿತಃ ।
ತ್ವಮಪ್ಯಹಮಹಂ ಸರ್ವಮಹಮಿತ್ಯೇವ ವರ್ತತೇ ।
ನಾತ್ರ ತತ್ಪರಮಾರ್ಥಂ ವೈ ಕಿಮರ್ಥಮನುಪೃಚ್ಛಸಿ ॥೫೬॥

ಸುವರ್ಚಲೆಯೇ, ನೀನು ಅಹಂ ಎಂದೇ ಭಾವಿಸುತ್ತಿರುವಿ. ಆ ಅಹಂಭಾವವು ನನ್ನಲ್ಲಿಯೂ ಇದೆ. ಸಮಸ್ತ ಜಗತ್ತು ಅಹಂಭಾವದಿಂದಲೇ ವರ್ತಿಸುತ್ತಿದೆ. ನಾವೆಲ್ಲರೂ ಅಹಂಕಾರಿಗಳೇ ಆಗಿದ್ದೇವೆ. ಅಹಂಕಾರಿ ಪುರುಷರಲ್ಲಿ ಪರಮಾರ್ಥರೂಪವಾದ ಪರಬ್ರಹ್ಮವಸ್ತುವು ಮಾತನಾಡುವುದಿಲ್ಲ. ಆದ್ದರಿಂದ ಏಕಾಗಿ ಪ್ರಶ್ನಿಸುತ್ತಿರುವಿ?

ತತಃ ಪ್ರಹಸ್ಯ ಸಾ ಹೃಷ್ಟಾ ಭರ್ತಾರಂ ಧರ್ಮಚಾರಿಣೀ ।
ಉವಾಚ ವಚನಂ ಕಾಲೇ ಸ್ಮಯಮಾನಾ ತದಾ ನೃಪ ॥೫೭॥

ಆ ಸಮಯದಲ್ಲಿ ಮಂದಹಾಸವನ್ನು ಬೀರುತ್ತಾ ಸಂತುಷ್ಟಳಾದ, ಧರ್ಮಚಾರಿಣಿಯಾದ ಸುವರ್ಚಲೆಯು ನಸುನಗುತ್ತಲೇ ಗಂಡನನ್ನು ಕುರಿತು ಹೀಗೆ ಹೇಳಿದಳು.

ಕಿಮನೇಕಪ್ರಕಾರೇಣ ವಿರೋಧೇನ ಪ್ರಯೋಜನಮ್ ।
ಕ್ರಿಯಾಕಲಾಪೈರ್ಬ್ರಹ್ಮರ್ಷೇ ಜ್ಞಾನನಷ್ಟೋಽಸಿ ಸರ್ವದಾ ॥೫೮॥

ಶ್ವೇತಕೇತುವೇ, ಸಂಬಂಧವಿಲ್ಲದ ಈ ರೀತಿಯಾದ ವಿರುದ್ಧವಾದ ಮಾತುಗಳಿಂದ ನನಗೇನು ಪ್ರಯೋಜನ? ನೀನು ನಿರಂತರವೂ ಕರ್ಮನಿರತನಾಗಿ ಜ್ಞಾನದ ನಾಶವನ್ನು ಹೊಂದಿರುತ್ತಿ . ಮಹಾಜಾಣನಾದ ನೀನು, ನಾನು ನಿನ್ನನ್ನು ಅನುಸರಿಸಿ ಹೇಗಿರಬೇಕೆಂಬುದನ್ನು ನನಗೆ ತಿಳಿಸಿಕೊಡು.

ಶ್ವೇತಕೇತು

ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।
ವರ್ತತೇ ತೇನ ಲೋಕೋಽಯಂ ಸಂಕೀರ್ಣಶ್ಚ ಭವಿಷ್ಯತಿ ॥೫೯॥

ಶ್ವೇತಕೇತು– ಸತ್ಪುರುಷರು ಏನನ್ನು ಆಚರಿಸುತ್ತಾರೋ ಇತರ ಪುರುಷರೂ ಅದನ್ನೇ ಆಚರಿಸುತ್ತಾರೆ. ಜಗತ್ತೆಲ್ಲವೂ ಆ ಆಚರಣೆಗಳಿಂದಲೇ ಸಂಕೀರ್ಣವಾಗಿ ನಡೆಯುತ್ತಿದೆ.

ಸಂಕೀರ್ಣೇ ಚ ತಥಾ ಧರ್ಮೇ ವರ್ಣಃ ಸಂಕರಮೇತಿ ಚ ।
ಸಂಕರೇ ಚ ಪ್ರವೃತ್ತೇ ತು ಮಾತ್ಸ್ಯೋ ನ್ಯಾಯಃ ಪ್ರವರ್ತತೇ ॥೬೦॥

ಧರ್ಮದಲ್ಲಿ ಸಾಂಕರ್ಯ ಉಂಟಾದಾಗ ಜಾತಿ ಸಾಂಕರ್ಯವು ಏರ್ಪಡುತ್ತದೆ. ಸಾಂಕರ್ಯದಿಂದಾಗಿ ಧರ್ಮವು ಮುನ್ನಡೆಯುತ್ತಿರಲು ಸಣ್ಣ ಮೀನನ್ನು ದೊಡ್ಡ ಮೀನು ನುಂಗುವಂತೆ, ದೊಡ್ಡ ಮೀನನ್ನು ಅದಕ್ಕಿಂತಲೂ ಮಿಗಿಲಾದ ಮೀನು ನುಂಗುತ್ತದೆ. ಹೀಗೆ ಧರ್ಮಗಳೆಲ್ಲವೂ ನಾಶ ಹೊಂದುತ್ತವೆ.

ತದನಿಷ್ಟಂ ಹರೇರ್ಭದ್ರೇ ಧಾತುರಸ್ಯ ಮಹಾತ್ಮನಃ ।
ಪರಮೇಶ್ವರಸಂಕ್ರೀಡಾ ಲೋಕಸೃಷ್ಟಿರಿಯಂ ಶುಭೇ ॥೬೧॥

ಈ ರೀತಿಯಾಗಿ ಜಗತ್ತು ನಡೆಯುವುದು ಹರಿಗೆ ಇಷ್ಟವಾಗಿರುವುದಿಲ್ಲ. ಜಗತ್ತೆಂಬುದು ಭಗವಂತನ ಲೀಲೆಯಾಗಿದೆ.

ಯಾವತ್ ಪಾಂಸವ ಉದ್ದಿಷ್ಟಾಸ್ತಾವತ್ಯೋಽಸ್ಯ ವಿಭೂತಯಃ ।
ತಾವತ್ಯಶ್ಚೈವ ಮಾಯಾಸ್ತು ತಾವತ್ಯೋಽಸ್ಯಾಶ್ಚ ಶಕ್ತಯಃ ॥೬೨॥

ಏವಂ ಸುಗಹ್ವರೇ ಯುಕ್ತೋ ಯತ್ರ ಮೇ ತದ್ಭವಾಭವಮ್ ।
ಛಿತ್ವಾ ಜ್ಞಾನಾಸಿನಾ ಗಚ್ಛೇತ್ ಸ ವಿದ್ವಾನ್ ಸ ಚ ಮೇ ಪ್ರಿಯಃ ।
ಸೋಽಹಮೇವ ನ ಸಂದೇಹಃ ಪ್ರತಿಜ್ಞಾ ಇತಿ ತಸ್ಯ ವೈ ॥೬೩॥

ಭಗವಂತನ ವಿಭೂತಿಗಳು ಈ ಭೂಮಿಯಲ್ಲಿ ಧೂಳಿನ ಕಣಗಳು ಹೇಗೆ ಅಸಂಖ್ಯಾತವಾದವುಗಳೋ ಅದರಂತೆ ಭಗವಂತನ ಮಾಹಾತ್ಮ್ಯಗಳು ಗಣಿಸಲು ಸಾಧ್ಯವಾದವುಗಳಲ್ಲ. ಅಸಂಖ್ಯ ಮಹಿಮಾ ಸಂಪನ್ನನು ಭಗವಂತನು. ಭಗವಂತನು ಭಕ್ತರನ್ನು ಕುರಿತು ಹೀಗೆ ಪ್ರತಿಜ್ಞೆ ಮಾಡಿ ಹೇಳುತ್ತಾನೆ- ಯಾವ ವ್ಯಕ್ತಿಯು ಸಂಸಾರದಲ್ಲಿದ್ದಾಗಲೂ ಭಗವಂತನಿಂದುಂಟಾಗುವ ಹುಟ್ಟು-ಸಾವುಗಳನ್ನು ಜ್ಞಾನದ ಖಡ್ಗದಿಂದ ತುಂಡರಿಸಿ ಸಾಗುತ್ತಾನೋ ಅವನೇ ನನಗೆ ಪ್ರೀತಿಪಾತ್ರನು. ಅನಂತ ಐಶ್ವರ್ಯಸಂಪನ್ನನಾದವನು ಭಗವಂತನೇ ಆಗಿದ್ದಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ ಎಂದು ಭಗವಂತನೇ ಪ್ರತಿಜ್ಞೆ ಮಾಡಿ ಹೇಳಿರುತ್ತಾನೆ. ಅಥವಾ 'ತತ್' 'ತ್ವಂ' ಎಂಬ ಪದಗಳಲ್ಲಿ ತತ್ಪರವಾಚ್ಯನಾದವನು ಭಗವಂತನೇ ಆಗಿದ್ದಾನೆ. ಜೀವನು

ಅತತ್ಪದವಾಚ್ಯನಾಗಿದ್ದಾನೆ. ನನ್ನ ಐಕ್ಯವು ಜೀವನಿಗೆ ಎಂದಿಗೂ ಕೂಡುವುದಿಲ್ಲ. ಅವನು ತನ್ನ ಜ್ಞಾನದಿಂದಲೇ ಬಿಡುಗಡೆ ಹೊಂದುತ್ತಾನೆ ಎಂದು ಭಗವಂತನು ಪ್ರತಿಜ್ಞೆ ಮಾಡುತ್ತಾನೆ.

ಯೇ ಮೂಢಾಸ್ತೇ ದುರಾತ್ಮಾನೋ ಧರ್ಮಸಂಕರಕಾರಕಾಃ ।
ಮರ್ಯಾದಾಭೇದಕಾ ನೀಚಾ ನರಕೇ ಯಾಂತಿ ಜಂತವಃ ॥೬೪॥

ಮೂಢರು, ದುರಾತ್ಮರು ಧರ್ಮಸಂಕರದಲ್ಲಿ ಪ್ರವರ್ತಿಸಿ, ಲೋಕ ಮರ್ಯಾದೆಯನ್ನು ತಿದ್ದುವವರು ಆದ ನೀಚರು ನರಕದಲ್ಲಿಯೇ ಬೀಳುತ್ತಾರೆ.

ಆಸುರೀಂ ಯೋನಿಮಾಪನ್ನಾ ಇತಿ ದೇವಾನುಶಾಸನಮ್ ॥೬೫॥

ಆಸುರ ಜನ್ಮವನ್ನು ಹೊಂದುತ್ತಾರೆ ಎಂದು ದೇವಾನುಶಾಸನವಿದೆ.

ಭಗವತ್ಯಾ ತಥಾ ಲೋಕೇ ರಕ್ಷಿತವ್ಯಂ ನ ಸಂಶಯಃ ।
ಮರ್ಯಾದಾಲೋಕರಕ್ಷಾರ್ಥಮೇವಮಸ್ಮಿ ತಥಾ ಸ್ಥಿತಃ ॥೬೬॥

ಆದ್ದರಿಂದ ಪ್ರಾಚೀನರಾದ ಜ್ಞಾನಿಗಳ ಕ್ರಮವನ್ನು, ಲೋಕ ಮರ್ಯಾದೆಯನ್ನು ನೀನೂ ರಕ್ಷಿಸಬೇಕು, ನಾನೂ ರಕ್ಷಿಸಬೇಕು. ಇಬ್ಬರೂ ಈ ಲೋಕದ ಸದಾಚಾರ ರಕ್ಷಣೆಗೆ ಕಟಿಬದ್ಧರಾಗಿ ನಿಲ್ಲಬೇಕು. ಇದರಲ್ಲಿ ಯಾವ ಸಂಶಯವೂ ಇಲ್ಲ.

ಸುವರ್ಚಲಾ

ಶಬ್ದಃ ಕೋಽತ್ರ ಇತಿ ಖ್ಯಾತಸ್ತಥಾರ್ಥಂ ಚ ಮಹಾಮುನೇ ।
ಆಕೃತ್ಯಾ ಪತಯೋ ಬ್ರೂಹಿ ಲಕ್ಷಣೇನ ಪೃಥಕ್ ಪೃಥಕ್ ॥೬೭॥

ಸುವರ್ಚಲಾ– ಮಹರ್ಷಿಯೇ, ಲೋಕದಲ್ಲಿ ಶಬ್ದ ಎಂದರೆ ಏನು? ಅರ್ಥ ಎಂಬುದು ಯಾವುದು? ಪರಮಾತ್ಮ ಪ್ರತಿಪಾದಕವಾದ ಶಬ್ದಗಳ ಗುಣ-ಸ್ವರೂಪ-ಲಕ್ಷಣ ಭೇದಗಳನ್ನು ನನಗೆ ತಿಳಿಸು.

ವ್ಯತ್ಯಯೇನ ಚ ವರ್ಣಾನಾಂ ಪರಿವಾದಿಕೃತೋ ಹಿ ಯಃ ।
ಸ ಶಬ್ದ ಇತಿ ವಿಜ್ಞೇಯಸ್ತನ್ನಿಪಾತೋಽರ್ಥ ಉಚ್ಯತೇ ॥೬೮॥

ಶ್ವೇತಕೇತು– ಪ್ರಿಯೇ, ವರ್ಣಗಳನ್ನು ಹಿಂದೆ ಮುಂದೆ, ಮೇಲೆ-ಕೆಳಗೆ ಜೋಡಿಸಿ ಹೇಳುವುದರಿಂದ ಶಬ್ದಗಳು ಸರ್ವವಿಧದಿಂದಲೂ ಪರಮಾತ್ಮನೆಂಬ ಅರ್ಥವನ್ನೇ ಹೇಳುತ್ತವೆ. ಈ ಶಬ್ದಗಳು ಪರಮಾತ್ಮ ಪ್ರತಿಪಾದಕಗಳು ಹೇಗಿದ್ದಾವೆಂಬುದನ್ನು ಬ್ರಹ್ಮ ಮೀಮಾಂಸಾ ಶಾಸ್ತ್ರವು ತುಂಬಾ ಚೆನ್ನಾಗಿ ಸಾಧಿಸಿದೆ. ಆದ್ದರಿಂದಲೇ ಅದು ಪರಿವಾದಿ ಎನಿಸಿದೆ. ಹೊರತು ಕಚಟಪಾದಿ ವರ್ಣಮಾಲೆಗಳು ಎಂದು ಅರ್ಥವಲ್ಲ. ಆ ಶಬ್ದಗಳ ಸಮುದಾಯದಿಂದ ಭಗವಂತನೇ ಪ್ರತಿಪಾದಿಸಲ್ಪಡುವ ಅರ್ಥವೆನಿಸಿದ್ದಾನೆ.

ಸುವರ್ಚಲಾ

ಶಬ್ದಾರ್ಥಯೋರ್ಹಿ ಸಂಬಂಧಸ್ತ್ವನಯೋರಸ್ತಿ ವಾ ನ ವಾ ।
ತನ್ಮೇ ಬ್ರೂಹಿ ಯಥಾ ತತ್ತ್ವಂ ಶಬ್ದಸ್ಥಾನೇಽರ್ಥ ಏವ ಚೇತ್ ॥೬೯॥

ಸುವರ್ಚಲಾ– ಶಬ್ದವಿದ್ದಬಳಿಕ ಅದಕ್ಕೆ ಅರ್ಥದ ಜೊತೆಗೆ ಸಂಬಂಧ ನಿಯಮೇನ ಉಂಟಾಗುತ್ತದಲ್ಲವೆ? ಶಬ್ದವಿದ್ದ ಕಡೆಯೆಲ್ಲ ಅರ್ಥವಿದ್ದ ಪಕ್ಷದಲ್ಲಿ ಶಬ್ದಾರ್ಥಗಳಿಗಿರುವ ಸಂಬಂಧವೆಂತಹದ್ದು? ಇದನ್ನು ಯಥಾರ್ಥವಾಗಿ ತಿಳಿಸು.

ಶ್ವೇತಕೇತುಃ

ಶಬ್ದಾರ್ಥಯೋರ್ನ ಚೈವಾಸ್ತಿ ಸಂಬಂಧೋಽತ್ಯಂತ ಏವ ಹಿ ।
ಪುಷ್ಕರೇ ಚ ಯಥಾ ತೋಯಂ ತಥಾಽಸ್ಮೀತಿ ಚ ವೇತ್ಥ ತತ್ ॥೭೦॥

ಶ್ವೇತಕೇತು– ಸುವರ್ಚಲೆಯೇ, ವೇದರೂಪ ಶಬ್ದಕ್ಕೂ, ಅರ್ಥರೂಪನೆನಿಸಿದ ಭಗವಂತನಿಗೂ ಪ್ರತಿಪಾದಕ-ಪ್ರತಿಪಾದ್ಯ ರೂಪವಾದ ಸಂಬಂಧವು ಇರುತ್ತದೆ. ಈ ಸಂಬಂಧವು ಪದ್ಮಪತ್ರದಲ್ಲಿ ಬಿದ್ದ ನೀರಿನ ಹನಿಯಂತೆ ಎಂದು ತಿಳಿಯಬೇಕು.

ಸುವರ್ಚಲಾ

ಅರ್ಥೇ ಸ್ಥಿತಿರ್ಹಿ ಶಬ್ದಸ್ಯ ನಾನ್ಯಥಾ ಚ ಸ್ಥಿತಿರ್ಭವೇತ್ ।
ವಿದ್ಯತೇ ಚೇನ್ಮಹಾಪ್ರಾಜ್ಞ ವಿನಾಽರ್ಥಂ ಬ್ರೂಹಿ ಸತ್ತಮ ॥೭೧॥

ಸುವರ್ಚಲಾ– ಶಬ್ದದ ಸ್ಥಿತಿಯು ಅರ್ಥದಿಂದಲೇ ಅಲ್ಲವೆ? ಸ್ಥಿತಿಯು ಸಂಬಂಧವಿಲ್ಲದೆ ಇರಲು ಸಾಧ್ಯವಿಲ್ಲ. ಅರ್ಥದಲ್ಲಿ ಸಂಬಂಧವಿಲ್ಲದ ಶಬ್ದವಿದ್ದಲ್ಲಿ ಅದನ್ನು ನನಗೆ ವಿವರಿಸು.

ಶ್ವೇತಕೇತುಃ

ಸ ಸಂಸರ್ಗೋಽತಿಮಾತ್ರಸ್ತು ವಾಚಕತ್ವೇನ ವರ್ತತೇ ।
ಅಸ್ತಿ ಚೇದ್ವರ್ತತೇ ನಿತ್ಯಂ ವಿಕಾರೋಚ್ಚಾರಣೇನ ವೈ ॥೭೨॥

ಶ್ವೇತಕೇತು– ಸಂಬಂಧವು ಶಬ್ದಾರ್ಥಗಳಿಗೆ ವಿಶೇಷವಾಗಿದ್ದ ಪಕ್ಷದಲ್ಲಿ ಅದು ಅರ್ಥವನ್ನು ಭೋಗಿಸುವ ಸಂಬಂಧವೆಂದು ತಿಳಿ. ಅರ್ಥ ಇದೆ ಎಂದಾದಲ್ಲಿ ವಿವಿಧಾಕಾರ ಉಚ್ಚಾರವುಳ್ಳ ಶಬ್ದವು ಇದೆ ಎಂಬುದೇ ನಿಶ್ಚಯವು.

ಸುವರ್ಚಲಾ

ಶಬ್ದಸ್ಥಾನೋಽತ್ರ ಇತ್ಯುಕ್ತಸ್ತಥಾಽರ್ಥ ಇತಿ ಮೇ ಕೃತಮ್ ।
ಅರ್ಥಾಸ್ಥಿತೋ ನ ತಿಷ್ಠೇಚ್ಚ ವಿರೂಢಮಿಹ ಭಾಷಿತಮ್ ॥೭೩॥

ಸುವರ್ಚಲಾ– ವೇದಗಳಿಗೆ ಆಧಾರಭೂತವಾದುದು ಪರಬ್ರಹ್ಮರೂಪ ಅರ್ಥವು. ಅದನ್ನು ನಾನು ಅಂಗೀಕರಿಸುತ್ತೇನೆ. ವೇದವು ಪರಬ್ರಹ್ಮರೂಪ ಅರ್ಥವನ್ನು ಆಶ್ರಯಿಸದೆ ವೇದವು ಇರಲು ಸಾಧ್ಯವಿಲ್ಲ. ಇದು ನಿನ್ನ ಮಾತಿನ ನಿಶ್ಚಿತ ಅಭಿಪ್ರಾಯವೆಂದು ಭಾವಿಸಿದ್ದೇನೆ.

ಶ್ವೇತಕೇತುಃ

ನ ವಿಕೂಲೋಽತ್ರ ಕಥಿತೋ ನಾಕಾಶಂ ಹಿ ವಿನಾ ಜಗತ್ ।
ಸಂಬಂಧಸ್ತತ್ರ ನಾಸ್ತೀವ ತದ್ವದಿತ್ಯೇಷ ಮನ್ಯತಾಮ್ ॥೭೪॥

ಶ್ವೇತಕೇತು– ತಾವರೆ ಎಲೆಯಂತೆ ಎಂದು ಶಬ್ದಕ್ಕೂ ಅರ್ಥಕ್ಕೂ ಸಂಬಂಧವು ಇರುವುದಿಲ್ಲ ಎಂದು ದೃಷ್ಟಾಂತವನ್ನು ಹೇಳಿರುವುದು ತಪ್ಪಾದ ದೃಷ್ಟಾಂತವೇನಲ್ಲ. ಲೋಕವು ಆಕಾಶವನ್ನು ಬಿಟ್ಟಿರಲಾರದು. ಲೋಕಕ್ಕೂ ಆಕಾಶಕ್ಕೂ ಸಮಗ್ರವಾದ ಸಂಬಂಧವಿದ್ದರೂ ಆಕಾಶವು ಲೋಕದ ಸಂಬಂಧದಿಂದ ನಿರ್ಲಿಪ್ತವಾಗಿದೆ. ಹಾಗೆಯೇ ವೈದಿಕವಾದ ಸಮಸ್ತ ಶಬ್ದಗಳು ಭಗತ್ತತ್ತ್ವಪ್ರತಿಪಾದಕವಾಗಿದ್ದರೂ ಭಗವಂತನು ಆ ಶಬ್ದದ ಸಂಬಂಧವಾದ ಶಬ್ದವನ್ನು ಆಶ್ರಯಿಸಿಕೊಂಡು ಭಗವಂತನು ಇರುವುದಿಲ್ಲ. ಅಸಂಗನಾಗಿದ್ದಾನೆ.

ಸುವರ್ಚಲಾ

ಸದಾऽಹಂಕಾರಶಬ್ದೋऽಯಂ ವ್ಯಕ್ತಮಾತ್ಮನಿ ಸಂಶ್ರಿತಃ ।
ನ ವಾಚಸ್ತತ್ರ ವರ್ತಂತೇ ಇತಿ ಮಿಥ್ಯಾ ಭವಿಷ್ಯತಿ ॥೭೫॥

ಸುವರ್ಚಲಾ– ಅಹಂ ಎಂದು ಕರೆಸಿಕೊಳ್ಳುವ ಅಹಂ ಶಬ್ದವಾಚ್ಯನಾದ ಜೀವನು ಪರಮಾತ್ಮನ ಸ್ವರೂಪದಲ್ಲಿ ಎಲ್ಲ ಕಡೆಯೂ ಆಶ್ರಿತನಾಗಿದ್ದಾನೆ. ಆದ್ದರಿಂದ ಅಹಂ ಶಬ್ದವು ಸಮಗ್ರವಾಗಿ ಪ್ರವೃತ್ತಿಯನ್ನು ಹೊಂದುವುದಿಲ್ಲ ಎಂಬ ಮಾತು ಸುಳ್ಳಾಗುವುದಿಲ್ಲವೆ? ಅಹಂ ಎಂಬ ಶಬ್ದವು ಸ್ವಪ್ರಕಾಶಮಾನವಾದ ಆಕಾಶದಲ್ಲಿ ಎಲ್ಲ ಕಡೆಯಲ್ಲಿಯೂ ಇರುವುದರಿಂದ ಎಲ್ಲೆಡೆಯೂ ಅದರ ಸಂಬಂಧ ಇರುವಿಕೆಯು. ಶಬ್ದದ ಸಂಬಂಧವು ಪರಮಾತ್ಮನೆಂಬ ಅರ್ಥದ ಜೊತೆಗೆ ಇರುವುದಿಲ್ಲ ಎಂಬುದು ಹೇಗೆ ಕೂಡುತ್ತದೆ?

ಶ್ವೇತಕೇತುಃ

ಅಹಂಶಬ್ದೋ ಹ್ಯಹಂಭಾವೋ ನಾತ್ಮಭಾವೇ ಶುಭವ್ರತೇ ।
ನ ವರ್ತತೇ ಪರೇऽಚಿಂತ್ಯೇ ವಾಚಃ ಸಗುಣಲಕ್ಷಣಾಃ ॥೭೬॥

ಶ್ವೇತಕೇತು– ಸುವರ್ಚಲೆಯೇ, ಅಹಂ ಎಂಬ ಶಬ್ದವು ಪರಮಾತ್ಮನ ಸ್ವಭಾವ ಭೂತವಾದ ಅನಂತ ಗುಣಸಮುದಾಯವನ್ನು ಹೇಳುವುದಿಲ್ಲ. ಆದ್ದರಿಂದ ಅಹಂ ಎಂಬ ಶಬ್ದವು ಭಗವಂತನೆಂಬ ಪದಾರ್ಥದಲ್ಲಿ ಏಕದೇಶದ ಗುಣ ಪ್ರತಿಪಾದಕ ಸಂಬಂಧವನ್ನು ಹೊಂದಿದೆ ವಿನಾ ಸಮಸ್ತೇನ ಭಗವತ್ಪ್ರತಿಪಾದಕ ಎದು ಆಗಲಿಲ್ಲ. ಹಾಗಾಗಿ ಶಬ್ದಕ್ಕೂ, ಪದಾರ್ಥಕ್ಕೂ ಸಮಸ್ತ ಸಂಬಂಧವಿಲ್ಲ ಎಂಬುದನ್ನೇ ತಿಳಿಯಬೇಕು. ಯಾವ ಶಬ್ದವು ಯಾವ ಗುಣವನ್ನು ಹೇಳುತ್ತಿದೆಯೋ ಆ ಶಬ್ದಕ್ಕೆ ಆ ಗುಣದ ಜೊತೆಗೆ ಮಾತ್ರ ಸಂಬಂಧವನ್ನು ಹೇಳಬಹುದು. ಆಕಾಶ ಶಬ್ದವು ಎಲ್ಲ ದಿಕ್ಕಿನಲ್ಲಿಯೂ ಪ್ರಕಾಶಿಸುತ್ತಾನೆ ಎಂಬ ಅರ್ಥವನ್ನು ಹೇಳುತ್ತದೆ. ಆನಂದಮಯ ಶಬ್ದವು ಭಗವಂತನ ಆನಂದಪೂರ್ಣತ್ವವನ್ನು ಹೇಳುತ್ತದೆ. ಈ ಆನಂದಮಯ, ಆಕಾಶ ಎಂಬ ಶಬ್ದಗಳಿಗೆ ಭಗವಂತನ ಬೇರೆ ಗುಣಗಳನ್ನು ಪ್ರತಿಪಾದಿಸುವ ಶಕ್ತಿ ಇರುವುದಿಲ್ಲ. ಆದ್ದರಿಂದ ಸರ್ವಗುಣಪ್ರತಿಪಾದಕವಾದ ಒಂದು ಶಬ್ದವೆಂಬುದು ಇರುವುದಿಲ್ಲ. ಅನಂತ ಶಬ್ದಸ್ವರೂಪವಾದ ವೇದಗಳು ವೇದದಲ್ಲಿ ಇಲ್ಲದೆ ಇರುವ ಭಗವಂತನ ಗುಣಗಳನ್ನು

ಹೇಳಲು ಸಮರ್ಥವಾಗುವುದಿಲ್ಲ. ಆದ್ದರಿಂದಲೇ ಭಗವಂತನು ಅಚಿಂತ್ಯನೆನಿಸಿದ್ದಾನೆ. ಆದ್ದರಿಂದ ನಾನು ಹೇಳಿದಂತೆ ಶಬ್ದಕ್ಕೂ, ಭಗವತ್ಪದಾರ್ಥಕ್ಕೂ ಸಮಗ್ರವಾದ ಸಂಬಂಧವನ್ನು ಹೇಳಲಾಗದು.

ಸುವರ್ಚಲಾ

ಅಹಂ ಗಾತ್ರೈಕತಃಶ್ಯಾಮಾ ಭವಾನಪಿ ತಥೈವ ಚ ।
ತನ್ಮೇ ಬ್ರೂಹಿ ಯಥಾನ್ಯಾಯಮೇವಂ ಚೇನ್ಮನಿಸತ್ತಮ ॥೭೭॥

ಸುವರ್ಚಲಾ– ನಾನು ಒಂದು ಶರೀರವನ್ನು ಧರಿಸಿದಾಗ ಶ್ಯಾಮಲ ವರ್ಣದವಳಾಗಿರುತ್ತೇನೆ. ಬೇರೆ ಜನ್ಮದಲ್ಲಿ ಇನ್ನೊಂದು ವರ್ಣವನ್ನು ಹೊಂದಿರುತ್ತೇನೆ. ರೇತಸ್ಸಿನಿಂದ ವಿಕಾರವನ್ನು ಹೊಂದುವ ಶರೀರದಲ್ಲಿ ಇದೇ ರೀತಿಯ ಬಣ್ಣ ಎಂದು ನಿಶ್ಚಯಿಸಲು ಬರುವುದಿಲ್ಲ. ಇದರಂತೆ ನಿನ್ನ ಸ್ಥಿತಿಯು. ಹೀಗಿದ್ದಾಗ ಪರಮಾತ್ಮನು ನಮ್ಮಂತೆ ಬದಲಾವಣೆಯನ್ನು ಹೊಂದುತ್ತಾನೋ? ಹೊಂದುವುದಿಲ್ಲವೋ? ಈ ವಿಷಯದಲ್ಲಿ ನನಗೆ ಉತ್ತರಿಸು.

ಶ್ವೇತಕೇತು

ಮೃಣ್ಮಯೇ ಹಿ ಘಟೇ ಭಾವಸ್ತಾದೃಗ್ಭಾವ ಇಹೇಷ್ಯತೇ ।
ಅಯಂ ಭಾವಃ ಪರೇಽಚಿಂತ್ಯೇ ಹ್ಯಾತ್ಮಭಾವೋ ಯಥಾ ಚ ಮೃತ್ ॥

ಶ್ವೇತಕೇತು– ಸುವರ್ಚಲೆಯೇ, ಪರಮಾತ್ಮನ ಸ್ವರೂಪವು ಎಂದಿಗೂ ವ್ಯತ್ಯಾಸವಾಗದು. ಮಣ್ಣಿನಿಂದ ಮಾಡಿದ ಪದಾರ್ಥಗಳನ್ನು ಘಟ, ಶರಾವ ಮೊದಲಾದ ಶಬ್ದಗಳಿಂದ ಕರೆಯುತ್ತೇವೆ. ಮಣ್ಣು ಮಡಿಕೆಯಾಗಲಿ, ಶರಾವವಾಗಲಿ ಮಣ್ಣಿನ ಅಂಶದ ಸ್ವರೂಪವು ನಾಶವಾಗುವುದಿಲ್ಲ. ಅದರಂತೆ ಅಚಿಂತ್ಯನಾದ ಪರಮಾತ್ಮ ನಮ್ಮೆಲ್ಲರ ಅಂತರ್ಯಾಮಿಯಾಗಿದ್ದಾನೆ. ಆ ಪರಮಾತ್ಮನ ಸ್ವರೂಪವು ಮಣ್ಣಿನಂತೆ ಒಂದೇ ರೀತಿಯಾಗಿರುತ್ತದೆ.

ಅಹಂ ತ್ವಮೇತದಿತ್ಯೇವ ಪರೇ ಸಂಕಲ್ಪನಾಮ ಯಾ ।
ತಸ್ಮಾದ್ ವಾಚೋ ನ ವರ್ತಂತ ಇತಿ ನೈವ ವಿರುದ್ಧ್ಯತೇ ॥೭೯॥

ತಸ್ಮಾದ್ ವಾಚೋ ನ ವರ್ತಂತೇ ಇತಿ ನೈವ ವಿರುದ್ಧ್ಯತೇ ।
ತಸ್ಮಾದ್ ವಾಮೇನ ವರ್ತಂತೇ ಮನಸಾ ಭೀರು ಸರ್ವಶಃ ॥೮೦॥

ಅಹಂ, ತ್ವಂ , ಈಶಃ ಇತ್ಯಾದಿ ಶಬ್ದಗಳು ಭಗವಂತನಲ್ಲಿ ವಿರುದ್ಧಗಳಾಗುವುದಿಲ್ಲ. 'ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ' ಎಂಬಲ್ಲಿ ಅಹಂ ಶಬ್ದವು ಪರಮಾತ್ಮನಲ್ಲಿ ಪ್ರಯೋಗಿಸಲ್ಪಟ್ಟಿದೆ. 'ಅನಂತವೀರ್ಯಾಮಿತವಿಕ್ರಮಸ್ತ್ವಮ್' ಎಂಬಲ್ಲಿ ತ್ವಂ ಎಂಬ ಶಬ್ದವು ಪರಮಾತ್ಮನಲ್ಲಿ ಪ್ರಯೋಗಿಸಲ್ಪಟ್ಟಿದೆ. 'ಏಷ ಆತ್ಮೇತಿ ಹೋ ವಾಚ' ಎಂಬಲ್ಲಿ ಏಷ ಶಬ್ದದಿಂದ ಪರಮಾತ್ಮನು ಪ್ರತಿಪಾದ್ಯನಾಗಿದ್ದಾನೆ. 'ಅಹಂ ಏಷಃ ತ್ವಮ್,' ಇತ್ಯಾದಿ ಶಬ್ದಗಳು ಪರಮಾತ್ಮನ ಸ್ವಲ್ಪ ಗುಣಗಳನ್ನು ಪ್ರತಿಪಾದಿಸುತ್ತವೆ ಹೊರತು ಸರ್ವನಾಮ ಶಬ್ದಗಳು ಭಗವಂತನ ಸರ್ವಗುಣಪ್ರತಿಪಾದಕವಾದವುಗಳಲ್ಲ. ಆದ್ದರಿಂದ 'ಯತೋವಾಚೋ ನಿವರ್ತಂತೇ' ಎಂಬ ಶಬ್ದವು ಭಗವಂತನ ಗುಣಗಳನ್ನು ಹೇಳುವುದಿಲ್ಲ ಎಂಬ ಅರ್ಥವಲ್ಲ. ಸಮಗ್ರವಾಗಿ ಭಗವಂತನ ಗುಣಪ್ರತಿಪಾದಕವಾಗುವುದಿಲ್ಲ ಎಂದು ಅರ್ಥ. ಹಾಗಾಗಿ ವಾಚ್ಯತ್ವ, ಅವಾಚ್ಯತ್ವ ಶಬ್ದಗಳಲ್ಲಿ ವಿರೋಧವಿರುವುದಿಲ್ಲ. ಆದ್ದರಿಂದ ಭಗವಂತನ ಗುಣಗಳನ್ನು ಮನಃಪೂರ್ವಕವಾಗಿ ಸಮಗ್ರವಾಗಿ ಕೊಂಡಾಡಲು ವೇದಗಳು ಹೆದರುತ್ತವೆ. ಎಂದರೆ ಸಾಕಲ್ಯೇನ ಹೇಳಲಾಗುವುದಿಲ್ಲ ಎಂದೇ ಅರ್ಥ. ಆಕಾಶವು ವಿಶ್ವದಲ್ಲಿ ಎಲ್ಲ ಕಡೆ ವ್ಯಾಪಿಸಿದೆ ಎಂದು ಕಾಣಿಸಿದರೂ ಆಕಾಶದ ವ್ಯಾಪ್ತಿ ಹೇಗೆ ತಿಳಿಯಲಾಗದೋ ಅದರಂತೆ ಭಗವಂತ ಎಲ್ಲ ಶಬ್ದಗಳಿಂದ ಪ್ರತಿಪಾದ್ಯನಾಗಿದ್ದರೂ ಅವನ ಸ್ವರೂಪವನ್ನು ಶಬ್ದಗಳಿಗೆ ಸಾಕಲ್ಯೇನ ಬೋಧಿಸಲು ಸಾಧ್ಯವಾಗುವುದಿಲ್ಲ.

ಸಂಸರ್ಗೇ ಸತಿ ಸಂಬಂಧಾತ್ ತದ್ವಿಕಾರಃ ಭವಿಷ್ಯತಿ ।
ಅನಾಕಾಶಗತಂ ಸರ್ವಂ ವಿಕಾರೇ ಚ ಸದಾ ಗತಮ್ ॥೮೧॥

ಪದಾರ್ಥಗಳು ಆಕಾಶದಲ್ಲಿ ಸಂಬಂಧ ಹೊಂದಿದಂತೆ ಕಾಣುತ್ತವೆ. ಶಬ್ದಗಳು ಭಗವಂತನಲ್ಲಿ ಸಂಬಂಧ ಹೊಂದಿದಂತೆ ಕಾಣಿಸುವುದಿಲ್ಲ. ಆದ್ದರಿಂದ ಭಗವಂತನು ವಿಕಾರ ಎನಿಸಿದ್ದಾನೆ. ವಿಲಕ್ಷಣ ಆಕಾರ ಎಂದು ಇದರ ಅರ್ಥ. ಆಕಾಶದ ಸಮಗ್ರ ಸಂಬಂಧವನ್ನು ಪದಾರ್ಥಗಳು ಹೇಗೆ ಹೊಂದಿಲ್ಲವೋ ಹಾಗೆ ಶಬ್ದಗಳು ಸಮಗ್ರವಾಗಿ ಭಗವಂತನ ಸಂಬಂಧವನ್ನು ಹೊಂದಿರುವುದಿಲ್ಲ.

ತದ್ ಬ್ರಹ್ಮ ಪರಮಂ ಶುದ್ಧಮನೌಪಮ್ಯಂ ನ ಶಕ್ಯತೇ ।
ನ ದೃಶ್ಯತೇ ತಥಾ ತಚ್ಚ ದೃಶ್ಯತೇ ಚ ಮತಿರ್ಮಮ ॥೮೨॥

ಆ ಪರಬ್ರಹ್ಮನಾದರೂ ಸರ್ವೋತ್ತಮನಾಗಿದ್ದಾನೆ. ಪ್ರಕೃತಿಗುಣ ರಹಿತನಾಗಿದ್ದಾನೆ. ಉಪಮೆಗೆ ನಿಲುಕದವನಾಗಿದ್ದಾನೆ. ಅಗೋಚರನಾಗಿದ್ದರೂ ಜ್ಞಾನಚಕ್ಷುಸ್ಸಿಗೆ ಗೋಚರನಾಗಿದ್ದಾನೆ ಎಂದೇ ನನ್ನ ಭಾವ.

ಸುವರ್ಚಲಾ

ನಿರ್ವಿಕಾರಂ ಹ್ಯಮೂರ್ತಿಂ ಚ ನಿರಯಂ ಸರ್ವಗಂ ತಥಾ ।
ದೃಶ್ಯತೇ ಚ ವಿಯನ್ನಿತ್ಯಂ ದೃಗಾತ್ಮಾ ತೇನ ದೃಶ್ಯತೇ ॥೮೩॥

ಸುವರ್ಚಲಾ– ಆಕಾಶವು ನಿರ್ವಿಕಾರವು. ಮೂರ್ತಿ ಇಲ್ಲದುದು. ನಾಶವಿಲ್ಲದುದು, ವ್ಯಾಪ್ತವಾದುದು. ಈ ರೀತಿಯಾಗಿ ಆಕಾಶವು ಇರುವಂತೆ ಜ್ಞಾನ ಸ್ವರೂಪಿಯಾದ ಭಗವಂತನು ಹೀಗೆಯೇ ಆಗಿರುತ್ತಾನೆಯೇ?

ಶ್ವೇತಕೇತುಃ

ತ್ವಚಾ ಸ್ಪೃಶತಿ ವೈ ವಾಯುಮಾಕಾಶಸ್ಥಂ ಪುನಃ ಪುನಃ ।
ತತ್ಸ್ಥಂ ಗಂಧಂ ತಥಾಘ್ರಾತಿ ಜ್ಯೋತಿಃ ಪಶ್ಯತಿ ಚಕ್ಷುಷಾ ॥೮೪॥

ಶ್ವೇತಕೇತು– ಪ್ರಿಯೆ, ಆಕಾಶದಲ್ಲಿರುವ ವಾಯುವನ್ನು ನನ್ನ ತ್ವಗಿಂದ್ರಿಯವು ಮುಟ್ಟಿ ತಿಳಿಯುತ್ತದೆ. ಗಾಳಿಯಲ್ಲಿರುವ ವಾಸನೆಯನ್ನು ಮೂಗು ಮೂಸಿ ತಿಳಿಯುತ್ತದೆ. ತೇಜಸ್ಸಿನಲ್ಲಿರುವ ಬೆಳಕಿನ ಕಿರಣಗಳನ್ನು ಕಣ್ಣು ತಿಳಿಯುತ್ತದೆ.

ತಮೋರಶ್ಮಿಗಣಶ್ಚೈವ ಮೇಘಜಾಲಂ ತಥೈವ ಚ ।
ವರ್ಷಂ ತಾರಾಗಣಂ ಚೈವ ನಾಕಾಶಂ ದೃಶ್ಯತೇ ಪುನಃ ॥೮೫॥

ಕತ್ತಲೆ, ಕಿರಣ ಸಮೂಹಗಳು, ಮೇಘಸಮೂಹಗಳು, ನಕ್ಷತ್ರಗಳು, ಮಳೆ ಇವುಗಳೆಲ್ಲವೂ ನನ್ನ ಕಣ್ಣಿಗೆ ಕಾಣಿಸುತ್ತವೆ. ಆದರೆ ಆಕಾಶವು ನಮ್ಮ ಕಣ್ಣಿಗೆ ಕಾಣಿಸುವುದಿಲ್ಲ.

ಆಕಾಶಸ್ಯಾಪ್ಯಥಾಕಾಶಂ ಸದ್ರೂಪಮಿತಿ ನಿಶ್ಚಿತಮ್ ।
ತದರ್ಥೇ ಕಲ್ಪಿತಾ ಹ್ಯೇತೇ ತತ್ಸ್ತ್ರೋ ವಿಷ್ಣೋರೇವ ಚ ।
ಯಾನಿ ನಾಮಾನಿ ಗೌಣಾನಿ ಹ್ಯುಪಚಾರಾತ್ ಪರಾತ್ಮನಿ ॥೮೬॥

ಆಕಾಶವು ಅಸ್ತಿತ್ವವನ್ನು ಹೊಂದುವ ಪದಾರ್ಥವಾಗಿದ್ದರೂ ಹೇಗೆ ಕಣ್ಣಿಗೆ ಕಾಣಿಸುವುದಿಲ್ಲವೋ ಅದರಂತೆ ಅವಕಾಶಪ್ರದವಾದ ಆಕಾಶದಂತೆ ಪರಮಾತ್ಮನ ಸದೃಶವಾದ ರೂಪವು ಕಣ್ಣಿಗೆ ಕಾಣಿಸುವುದಿಲ್ಲ. ಕಣ್ಣಿಗೆ ಕಾಣಿಸದ ಮಾತ್ರಕ್ಕೆ ಆಕಾಶದ ಅಸ್ತಿತ್ವವು ಹೇಗೆ ಅಪ್ರಾಮಾಣಿಕವಲ್ಲವೋ ಹಾಗೆ ಸದ್ರೂಪನಾದ ಭಗವಂತನ ರೂಪವು ಅಪ್ರಾಮಾಣಿಕವಾದುದಲ್ಲ. ಯಾವ ಭಗವಂತನ ನಾಮಗಳು ಇವೆಯೋ ಅವೆಲ್ಲವೂ ಭಗವಂತನ ಗುಣಗಳನ್ನು ಹೇಳುವುದರಲ್ಲಿ ಪ್ರವೃತ್ತಿಯನ್ನು ಹೊಂದುತ್ತವೆ.

ನ ಚಕ್ಷುಷಾ ನ ಮನಸಾ ನ ಚಾನ್ಯೇನ ಪರೋ ವಿಭುಃ ।
ಚಿಂತ್ಯತೇ ಸೂಕ್ಷ್ಮಯಾ ಬುದ್ಧ್ಯಾ ವಾಚಾ ವಕ್ತುಂ ನ ಶಕ್ಯತೇ ॥೮೭॥

ಏತತ್ಪನ್ನಮಖಿಲಂ ತಸ್ಮಿನ್ ಸರ್ವಂ ಪ್ರತಿಷ್ಠಿತಮ್ ।
ಮಹಾಘಟೋಽಲ್ಪಕಶ್ಚೈವ ಯಥಾ ಮಹ್ಯಾಂ ಪ್ರತಿಷ್ಠಿತೌ ॥೮೮॥

ಈ ಪರಮಾತ್ಮನು ಬಾಹ್ಯಕಣ್ಣಿಗಾಗಲಿ, ಜಡವಾದ ಮನಸ್ಸಿಗಾಗಲಿ, ಬೇರೆ ಸಾಧನಗಳಿಂದಾಗಲಿ ತಿಳಿಯಲು ಸಾಧ್ಯನಲ್ಲ. ಸೂಕ್ಷ್ಮವಾದ ಬುದ್ಧಿಯಿಂದಲೇ ಅವನನ್ನು ತಿಳಿಯಬೇಕು. ಬಾಯಿಂದ ಹೇಳಿ ತಿಳಿಸಲು ಸಾಧ್ಯನಲ್ಲ. ಭೂಮಿಯಲ್ಲಿ ಮಣ್ಣಿನಿಂದಲೇ ಸಣ್ಣ, ದೊಡ್ಡ ಗಡಿಗೆಗಳೆಲ್ಲ ಹುಟ್ಟುವಂತೆ ಸಮಸ್ತ ಪ್ರಪಂಚವು ಪರಮಾತ್ಮನಿಂದಲೇ ಉತ್ಪತ್ತಿಯನ್ನು ಹೊಂದುತ್ತಿದೆ. ಪ್ರಪಂಚವೆಲ್ಲವೂ ಪರಮಾತ್ಮನಲ್ಲೇ ಶರಣು ಹೊಂದಿದೆ.

ನ ಚ ಸ್ತ್ರೀ ನ ಪುಮಾಂಶ್ಚೈವ ಯಶ್ಚೈವ ನ ನಪುಂಸಕಃ ।
ಕೇವಲಜ್ಞಾನಮಾತ್ರಂ ತತ್ ತಸ್ಮಿನ್ ಸರ್ವಂ ಪ್ರತಿಷ್ಠಿತಮ್ ॥೮೯॥

ಭಗವಂತನು ಜಗತ್ತಿನಲ್ಲಿರುವ ಸ್ತ್ರೀಯರಂತೆ ರಾಗಾದಿಗಳಿಂದ ಆಕಾಂಕ್ಷಿತನಲ್ಲ. ಜಗತ್ತಿನಲ್ಲಿರುವ ಪುರುಷರಂತೆ ಕಾಮಾದಿಗಳಿಂದಲೂ ಆಸಕ್ತನಲ್ಲ. ಜಗತ್ತಿನ ನಪುಂಸಕರಂತೆ ನಿರ್ವೀರ್ಯನೂ ಅಲ್ಲ. ಕೇವಲ ಜ್ಞಾನರೂಪಿಯಾದ ಭಗವಂತನಲ್ಲಿ ಜಗತ್ತೆಲ್ಲವೂ ಆಶ್ರಯವನ್ನು ಹೊಂದಿದೆ.

ಭೂಮಿಸಂಸ್ಥಾನಯೋಗೇನ ವಸ್ತುಸಂಸ್ಥಾನಯೋಗತಃ ।
ರಸಭೇದಾ ಯಥಾ ತೋಯೇ ಪ್ರಕೃತ್ಯಾಮಾತ್ಮನಸ್ತಥಾ ॥೯೦॥

ಭೂಮಿಯ ಗುಣದಿಂದ, ಪದಾರ್ಥಗಳ ಸಂಬಂಧದಿಂದ ನೀರಿನಲ್ಲಿ ಹೇಗೆ ರಸಭೇದವು ತೋರುತ್ತದೋ ಹಾಗೆ ಪರಮಾತ್ಮಾಧೀನವಾದ ಜಡಪ್ರಕೃತಿಯಲ್ಲಿ ಈ ಭಿನ್ನ ಜಗತ್ತು ತೋರುತ್ತಿದೆ.

ತದಾಶ್ವಸ್ಯಸ್ಮರಣಾನ್ನಿತ್ಯಂ ತೃಪ್ತಿಂ ವಾರಿ ಪಿಬನ್ನಿವ ।
ಪ್ರಾಪ್ನೋತಿ ಜ್ಞಾನಮಖಿಲಂ ತೇನ ತತ್ಸುಖಮೇಧತೇ ॥೯೧॥

ಭಗವಂತನ ಸ್ಮರಣೆಯಿಂದ ಭಗವದ್ಭಕ್ತನು ತೃಷಿಕನಾದವನು ಜಲಪಾನ ಮಾಡಿದಾಗ ತೃಪ್ತಿಯನ್ನು ಹೊಂದುವಂತೆ ಸಂತೃಪ್ತಿಯನ್ನು ಹೊಂದುತ್ತಾನೆ. ಭಗವಂತನ ಜ್ಞಾನವನ್ನು ಹೊಂದಿದ ಜಗತ್ತು ಸ್ವರೂಪ ಸುಖವನ್ನು ಅನುಭವಿಸಲು ಸಮರ್ಥವಾಗುತ್ತದೆ.

ಸುವರ್ಚಲಾ

ಅನೇನ ಸಾಧ್ಯಂ ಕಿಂ ಸ್ಯಾದ್ವೈ ಶಬ್ದೇನೇತಿ ಮತಿರ್ಮಮ ।
ವೇದಗಮ್ಯಃ ಪರೋಽಚಿಂತ್ಯ ಇತಿ ಪೌರಾಣಿಕಾ ವಿದುಃ ॥೯೨॥

ಸುವರ್ಚಲಾ– ಶ್ವೇತಕೇತುವೇ, ಅಚಿಂತ್ಯನಾದ ಪರಮಾತ್ಮನನ್ನು ವೇದಗಳು ಖಂಡಶಃ ಹೇಳುತ್ತವೆ. ಸಾಕಲ್ಯೇನ ಹೇಳಲಾಗುವುದಿಲ್ಲ ಎಂದು ನೀನು ನಿರೂಪಿಸಿರುತ್ತಿ. ಹೀಗಿದ್ದಾಗ ವೇದಗಳು ಭಗವಂತನ ಒಂದೊಂದು ಗುಣಗಳನ್ನು ಮಾತ್ರ ಹೇಳುವುದರಿಂದ ಪುರಾಣಿಕರು ಹೇಳುವಂತೆ ಅಚಿಂತ್ಯನಾದ, ಸರ್ವೋತ್ತಮನಾದ ಭಗವಂತನು ವೇದಗಮ್ಯನು ಹೇಗೆ ಆಗುತ್ತಾನೆ?

ನಿರರ್ಥಕೋ ಯಥಾ ಲೋಕೇ ತದ್ವತ್ತ್ವಾಸ್ಯೇತಿ ಮೇ ಮತಿಃ ।
ನಿರೀಕ್ಷ್ಯೈವಂ ಯಥಾನ್ಯಾಯಂ ವಕ್ತುಮರ್ಹಸಿ ಮೇಽನಘ ॥೯೩॥

ಹೊಟ್ಟೆಹಸಿದು ಊಟಕ್ಕೆ ಕುಳಿತ ವ್ಯಕ್ತಿಯು ಹೊಟ್ಟೆತುಂಬಲೆಂದು ಒಂದೊಂದೇ ತುತ್ತನ್ನು ತಿಂದರೆ ಆ ತುತ್ತುಗಳು ಹೇಗೆ ನಿರರ್ಥಕವೋ ಹಾಗೆ ಭಗವಂತನ ಒಂದೊಂದೇ ಗುಣಗಳಿಂದ ಅವನ ಪೂರ್ಣತೆಯನ್ನು ಬೋಧಿಸಿದಂತೆ ಆಗುವುದಿಲ್ಲ. ನೀನು ಹೇಳಿದ ಈ ಉಪದೇಶವನ್ನು ಮತ್ತೊಮ್ಮೆ ವಿಮರ್ಶಿಸಿ ಯೋಗ್ಯವಾದ ಉತ್ತರವನ್ನು ನಿರ್ದುಷ್ಟನೇ, ನನಗೆ ಬೋಧಿಸು.

ಶ್ವೇತಕೇತುಃ

ವೇದಗಮ್ಯಂ ಪರಂ ಶುದ್ಧಮಿತಿ ಸತ್ಯಾ ಪರಾ ಶ್ರುತಿಃ ।
ವ್ಯಾವೃತ್ತ್ಯಾ ನೈತದಿತ್ಯಾಹ ತೂಪಲಿಂಗೇ ಚ ವರ್ತತೇ ॥೯೪॥

ಶ್ವೇತಕೇತು– ಪ್ರಿಯೆ, ಪೌರಾಣಿಕರು ಪರಮಾತ್ಮನ ಸ್ವರೂಪವನ್ನು ವೇದದಿಂದ ತಿಳಿಯಬೇಕೆಂದು ಹೇಳುವುದು ಯಥಾರ್ಥವೇ. ಭಗವಂತನು ವೇದಗಮ್ಯನು, ಸರ್ವೋತ್ತಮನು, ಶುದ್ಧನು ಆಗಿದ್ದಾನೆ. 'ಯತೋ ವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ' ಎಂದು ಶ್ರುತಿಯು ಹೇಳಿರುವುದು ಭಗವಂತನು ವೇದಗಮ್ಯನೆಂದು ಹೇಳಿರುವುದನ್ನು ನಿರಾಕರಿಸುವ ದೃಷ್ಟಿಯಿಂದ ಅಲ್ಲ. ಸಾಕಲ್ಯೇನ ಎಂಬ ಅಭಿಪ್ರಾಯದಲ್ಲಿ ಹೇಳಿದ್ದು ಸರಿಯಾಗಿದೆ.

ನಿರರ್ಥಕೋ ನ ಚೈವಾಸ್ತಿ ಶಬ್ದೋ ಲೌಕಿಕ ಉತ್ತಮೇ ।
ಅನನ್ವಯಾಃ ಸ್ಮೃತಾಃ ಶಬ್ದಾ ನಿರರ್ಥಾ ಇತಿ ಲೌಕಿಕೈಃ ॥೯೫॥

ಸರ್ವೋತ್ತಮನಾದ ಭಗವಂತನ ವಿಷಯದಲ್ಲಿ ಯಾವ ಲೌಕಿಕ ಶಬ್ದಗಳೂ ವ್ಯರ್ಥವಾದವುಗಳಲ್ಲ. 'ಗೌರಶ್ವಃ ಪುರುಷೋ ಹಸ್ತೀ' ಎಂಬ ಲೌಕಿಕ ಶಬ್ದಗಳಲ್ಲಿ ಅನ್ವಯವೂ ಇರುವುದಿಲ್ಲ. ಇದರಂತೆ ಪರಮಾತ್ಮನ ವಿಷಯದಲ್ಲಿ ವೈದಿಕ ಶಬ್ದಗಳು ಅನ್ವಯ ರಹಿತವಾದವುಗಳಾಗಿ ಇರುವುದಿಲ್ಲ. ಒಂದೊಂದು ಭಗವಂತನ ಗುಣಗಳನ್ನು ಹೇಳುವುದರಲ್ಲಿ ವೈದಿಕವಾದ ಶಬ್ದಗಳಿಗೆ ತಾತ್ಪರ್ಯವಿದೆ.

ಗೃಹ್ಯಂತೇ ತದ್ವದಿತ್ಯೇವ ನ ವರ್ತಂತೇ ಪರಾತ್ಮನಿ ।
ಅಗೋಚರತ್ವಂ ವಚಸಾಂ ಯುಕ್ತಮೇವಂ ತಥಾ ಶುಭೇ ॥೯೬॥

ಬ್ರಹ್ಮಮೀಮಾಂಸ ಕರ್ತೃಗಳಾದ ವ್ಯಾಸರೇ ಮೊದಲಾದವರು ಭಗವಂತನ ಗುಣಗಳು ವೇದಗಳಿಂದ ಗಮ್ಯವಾಗಿವೆ ಎಂದೇ ಹೇಳಿದ್ದಾರೆ. 'ಯತೋ ವಾಚೋ ನಿ ವರ್ತಂತೇ' ಎಂಬ ಶ್ರುತಿಯು ಸಾಕಲ್ಯೇನ ಭಗವಂತನು ಶಬ್ದವಾಚ್ಯನಲ್ಲ ಎಂದು ಹೇಳುತ್ತಿದೆ. ಆದ್ದರಿಂದ ಮಂಗಳಸ್ವರೂಪಿಯೇ, ಈ ನನ್ನ ಮಾತಿನಲ್ಲಿ ಸಮಂಜಸವೇ ಇದೆ. ಯಾವ ವಿರೋಧವೂ ಇರುವುದಿಲ್ಲ.

ಸಾಧನಸ್ಯೋಪದೇಶಾಚ್ಚ ಹ್ಯುಪಾಯಸ್ಯ ಚ ಸೂಚನಾತ್ ।
ಉಪಲಕ್ಷಣಯೋಗೇನ ವ್ಯಾವೃತ್ತ್ಯಾ ಚ ಪ್ರದರ್ಶನಾತ್ ।
ವೇದಗಮ್ಯಃ ಪರಃ ಶುದ್ಧ ಇತಿ ಮೇ ಧೀಯತೇ ಮತಿಃ ॥೯೭॥

'ಆಕಾಶಸ್ತಲ್ಲಿಂಗಾತ್' ಮೊದಲಾದ ಸೂತ್ರಗಳಲ್ಲಿ ಭಗವಂತನು ಆಕಾಶ ಶಬ್ದದಿಂದ ವಾಚ್ಯನಾಗಿದ್ದಾನೆ ಎಂದು ವ್ಯಾಸರು ಉಪದೇಶಿಸಿದ್ದಾರೆ. ಅದೇ ಆಕಾಶ ಶಬ್ದವು ಪಂಚಭೂತದಲ್ಲಿ ಇರುವ ಆಕಾಶವನ್ನು ಹೇಳುತ್ತಿದೆ ಎಂದು ಸೂಚಿಸಿದ್ದಾರೆ. 'ಅದೃಶ್ಯತ್ವಾದಿಗುಣಕೋ ಧರ್ಮೋಕ್ತೇಃ' ಎಂಬ ಸೂತ್ರದಲ್ಲಿ ಆದಿಪದದಿಂದ ಅದೃಶ್ಯಕ್ಕಿಂತ ಬೇರೆಯಾದ ಗುಣಗಳನ್ನು ಸಂಗ್ರಹ ಮಾಡಬೇಕೆಂದು ಉಪಾಯವನ್ನು ಸೂಚಿಸಿದ್ದಾರೆ. 'ನೇತಿ ನೇತ್ಯಾತ್ಮಾ ಅದೃಶ್ಯ' ಎಂಬ ಶ್ರುತಿಯಲ್ಲಿ ಭಗವಂತನು ಜಡದಂತೆ ಅಲ್ಲ, ಜೀವನಂತೆ ಅಲ್ಲ, ಸಕಲ ಜಗತ್ತಿಗಿಂತ ವಿಲಕ್ಷಣನು ಎಂದು ವೇದವ್ಯಾಸದೇವರು ತೋರಿಸಿರುವುದರಿಂದ ಪರಮನಾದ, ಶುದ್ಧನಾದ ಭಗವಂತನು ವೇದಗಮ್ಯನಾಗಿದ್ದಾನೆ ಎಂಬುದೇ ನನ್ನ ಬುದ್ಧಿಯು.

ಅಧ್ಯಾತ್ಮಧ್ಯಾನಸಂಭೂತಮಭೂತಂ ಭೂತವತ್ ಸ್ಫುಟಮ್ ।
ಜ್ಞಾನಂ ವಿದ್ಧಿ ಶುಭಾಚಾರೇ ತೇನ ಯಾಂತಿ ಪರಾಂ ಗತಿಮ್ ॥೯೮॥

ಪರಮಾತ್ಮನು ಶ್ರೇಷ್ಠವಾದ ಅತ್ಮವಾಗಿರುವುದರಿಂದ ಅಧ್ಯಾತ್ಮ ಎನಿಸಿದ್ದಾನೆ. ಇಂತಹ ಪರಮಾತ್ಮನು ನಿಧಿಧ್ಯಾಸನರೂಪವಾದ ಧ್ಯಾನದಿಂದ ಗೋಚರನಾಗುತ್ತಾನೆ. 'ಉಪನಿಷದೇಕ ಸಮಧಿಗಮ್ಯ'ನಾಗಿರುವುದರಿಂದ ಅವನನ್ನು ನಮ್ಮ ಶಕ್ತಿಯಿಂದ ತಿಳಿಯಲಾಗದು. ಆದ್ದರಿಂದ ಅಭೂತನೆನಿಸಿದ್ದಾನೆ. ಬ್ರಹ್ಮಾದಿ ದೇವತೆಗಳಲ್ಲಿ ಅಪರೋಕ್ಷ ಜ್ಞಾನದಲ್ಲಿ ಗಮ್ಯನಾಗಿರುವುದರಿಂದ ಭೂತನೆನಿಸಿದ್ದಾನೆ. ಇಂತಹ ಭಗವಂತನ ಜ್ಞಾನವನ್ನು ಹೊಂದಿದವರು ಪರಮಪದವಿಯನ್ನು ಹೊಂದುತ್ತಾರೆ ಎಂಬುದನ್ನು ಶುಭಾಚಾರ ಸಂಪನ್ನಳೇ, ತಿಳಿದುಕೊ.

ನಾನಾರೂಪವದಸ್ಯೈವಮೈಶ್ವರ್ಯಂ ದೃಶ್ಯತೇ ಶುಭೇ ।
ನ ವಾಯುಸ್ತಂ ನ ಸೂರ್ಯಸ್ತಂ ನಾಗ್ನಿಸ್ತತ್ತು ಪರಂ ಪದಮ್ ॥೧೦೦॥

ಭಗವಂತನ ಐಶ್ವರ್ಯವು, ವಿಭೂತಿಗಳು ಹಲವು ಬಗೆಗಳಿಂದ ಇವೆ. ವಾಯುವಾಗಲೀ, ಸೂರ್ಯನಾಗಲೀ, ಅಗ್ನಿಯಾಗಲೀ ಆ ಭಗವಂತನ ಸ್ವರೂಪವನ್ನು

ತಿಳಿಸಲಾರರು.

ಅನೇನ ಪೂರ್ಣಮೇತದ್ಧಿ ಹೃದಿ ಭೂತಮಿಹೇಷ್ಯತೇ ।
ಏತಾವದಾತ್ಮವಿಜ್ಞಾನಮೇತಾವದ್ ಯದಹಂ ಸ್ಮೃತಮ್ ।
ಆವಯೋರ್ನ ಚ ಸತ್ವೇ ವೈ ತಸ್ಮಾದಜ್ಞಾನಬಂಧನಮ್ ॥೧೦೧॥

ಈ ಭಗವಂತನಿಂದಲೇ ಜಗತ್ತೆಲ್ಲವೂ ವ್ಯಾಪ್ತವಾಗಿದೆ. ಅವನೇ ನಮ್ಮ ಮನಸ್ಸಿನಲ್ಲಿ ನೆಲೆಗೊಂಡು ಪ್ರಕಾಶಿಸುತ್ತಿದ್ದಾನೆ. ಆತ್ಮಜ್ಞಾನವೆಂಬುದು ಇಷ್ಟೆ. ನಾನು ಇಷ್ಟನ್ನು ಮಾತ್ರ ತಿಳಿದಿದ್ದೇನೆ. ಪರಮಾತ್ಮನಲ್ಲಿ ನಮ್ಮಿಬ್ಬರಿಗೆ ಸರಿಯಾದ ಜ್ಞಾನವು ಇನ್ನೂ ದೃಢವಾಗಿಲ್ಲದ ಕಾರಣ ಈ ಅಜ್ಞಾನಬಂಧನದಲ್ಲಿ ಸಿಲುಕಿದ್ದೇವೆ.

ಭೀಷ್ಮಃ

ಏವಂ ಸುವರ್ಚಲಾ ಹೃಷ್ಟಾ ಪ್ರೋಕ್ತಾ ಭರ್ತ್ರಾ ಯಥಾರ್ಥವತ್ ।
ಪರಿಚರ್ಯಮಾಣಾ ಹ್ಯನಿಶಂ ತತ್ವಬುದ್ಧಿಸಮನ್ವಿತಾ ॥೧೦೨॥

ಭರ್ತಾ ಚ ತಾಮನುಪ್ರೇಕ್ಷ್ಯ ನಿತ್ಯನೈಮಿತ್ತಿಕಾನ್ವಿತಃ ।
ಪರಮಾತ್ಮನಿ ಗೋವಿಂದೇ ವಾಸುದೇವೇ ಮಹಾತ್ಮನಿ ॥೧೦೩॥

ಭೀಷ್ಮ– ಈ ರೀತಿಯಾಗಿ ಸುವರ್ಚಲೆಯು ಪ್ರಿಯನಾದ ಶ್ವೇತಕೇತುವು ಹೇಳಿದ ಯಥಾರ್ಥ ಭಗವದ್‌ವಿಜ್ಞಾನದಿಂದ ಸಂತೋಷಗೊಂಡು, ಯಾವಾಗಲೂ ತನ್ನ ಪತಿಯಾದ ಶ್ವೇತಕೇತುವಿನ ಸೇವೆಯಲ್ಲಿಯೇ ನಿರತಳಾಗಿ, ತತ್ತ್ವಜ್ಞಾನವನ್ನು ಹೊಂದಿದ್ದಳು. ಗಂಡನಾದ ಶ್ವೇತಕೇತುವಾದರೂ ಪತ್ನಿಯಾದ ಸುವರ್ಚಲೆಯ ಜೊತೆ ನಿತ್ಯ ನೈಮಿತ್ತಿಕಕರ್ಮಗಳನ್ನು ಅನುಷ್ಠಾನ ಮಾಡುತ್ತಾ, ಸರ್ವೋತ್ತಮನಾದ ವಾಸುದೇವನಾದ ಮಹಾತ್ಮನಾದ ಗೋವಿಂದನಲ್ಲಿ ಸಮಸ್ತ ಕರ್ಮಗಳನ್ನು ಅವನ ಪೂಜಾರೂಪವಾಗಿ ಸಮರ್ಪಿಸುತ್ತಾ, ವಿಸ್ತಾರವಾದ ಕಾಲದಿಂದ ಭಗವತ್ಪೂಜಾ ರೂಪವನ್ನು ಮಾಡಿ ಪರಮಗತಿಯನ್ನು ಹೊಂದಿದನು.

ಸಮಾಧಾಯ ಚ ಕರ್ಮಾಣಿ ತನ್ಮಯತ್ವೇನ ಭಾವಿತಃ ।
ಕಾಲೇನ ಮಹತಾ ರಾಜನ್ ಯಸ್ಮಾತ್ ತ್ವಂ ಪರಿಪೃಚ್ಛಸಿ ।
ಗಾರ್ಹಸ್ಥ್ಯಂ ಚ ಸಮಾಸ್ಥಾಯ ಗತೌ ಜಾಯಾಪತೀ ಪರಮ್ ॥೧೦೫॥

ಹೀಗೆ ಗಂಡ-ಹೆಂಡಂದಿರು ಗಾರ್ಹಸ್ಥ್ಯಧರ್ಮವನ್ನು ಹೊಂದಿಯೇ ಭಗವಂತನನ್ನು ಧ್ಯಾನಿಸಿ ಮೋಕ್ಷಕ್ಕೆ ಹೋದ ದೃಷ್ಟಾಂತವಿದೆ. ನೀನು ಪ್ರಶ್ನಿಸಿದ ನಿನ್ನ ಪ್ರಶ್ನೆಗೆ ಅನುಗುಣವಾಗಿ ಅದೆಲ್ಲವನ್ನು ಉತ್ತರಿಸಿದ್ದೇನೆ.

॥ ಇತಿ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ತ್ರಿಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಐವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ನಾಲ್ಕನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನಿಗೆ ದಮದ ಮಹಿಮೆಯನ್ನು ಬೋಧಿಸಿದುದು.

ಯುಧಿಷ್ಠಿರಃ

ಕಿಂ ಕುರ್ವನ್ ಸುಖಮಾಪ್ನೋತಿ ಕಿಂ ಕುರ್ವನ್ ದುಃಖಮಾಪ್ನುತೇ ।
ಕಿಂ ಕುರ್ವನ್ನಿರ್ಭಯೋ ಲೋಕೇ ಸಿದ್ಧಶ್ಚರತಿ ಭಾರತ ॥೧॥

ಯುಧಿಷ್ಠಿರ– ಪಿತಾಮಹನೇ, ಮನುಷ್ಯನು ಯಾವ ಅನುಷ್ಠಾನದಿಂದ ಸುಖವನ್ನು ಹೊಂದುತ್ತಾನೆ? ಯಾವ ಕರ್ಮವನ್ನು ಮಾಡುವುದರಿಂದ ದುಃಖವನ್ನು ಹೊಂದುತ್ತಾನೆ? ಯಾವ ಕರ್ಮದಿಂದ ನಿರ್ಭಯನಾಗಿ ಸಿದ್ಧಪುರುಷನಂತೆ ಸಂಚರಿಸುತ್ತಾನೆ?

ಭೀಷ್ಮಃ

ದಮಮೇವ ಪ್ರಶಂಸಂತಿ ವೃದ್ಧಾಃ ಶ್ರುತಿಸಮಾಧಯಃ ।
ಸರ್ವೇಷಾಮೇವ ವರ್ಣಾನಾಂ ಬ್ರಾಹ್ಮಣಸ್ಯ ವಿಶೇಷತಃ ॥೨॥

ಭೀಷ್ಮ– ಯುಧಿಷ್ಠಿರನೇ, ವೇದವಿಚಾರಗಳಲ್ಲಿ ಸಿದ್ಧರಾದ ಪುರುಷರು ಸಾಮಾನ್ಯವಾಗಿ ಎಲ್ಲ ವರ್ಣದವರಿಗೂ, ಅದರಲ್ಲಿಯೂ ಬ್ರಾಹ್ಮಣನಿಗೆ ಬೇಕಾಗಿರುವ ಗುಣ ದಮ ಎಂಬ ಗುಣ ಎಂದು ಪ್ರಶಂಸೆ ಮಾಡುತ್ತಾರೆ.

ನಾದಾಂತಸ್ಯ ಕ್ರಿಯಾಸಿದ್ಧಿರ್ಯಥಾವದುಪಲಭ್ಯತೇ ।
ಕ್ರಿಯಾ ತಪಶ್ಚ ವೇದಾಶ್ಚ ದಮೇ ಸರ್ವಂ ಪ್ರತಿಷ್ಠಿತಮ್ ॥೩॥

ಇಂದ್ರಿಯಗಳ ಸಂಯಮವಿಲ್ಲದ ವ್ಯಕ್ತಿಗೆ ಮಾಡುವ ಕಾರ್ಯಗಳು ಯಥಾವತ್ತಾಗಿ ಸಿದ್ಧಿಸುವುದಿಲ್ಲ. ಕಾರಣ ಕ್ರಿಯೆ, ತಪಸ್ಸು, ಸತ್ಯ - ಈ ಮೂರು ದಮದಲ್ಲಿ ಪ್ರತಿಷ್ಠಿತವಾಗಿವೆ.

ದಮಸ್ತೇಜೋ ವರ್ಧಯತಿ ಪವಿತ್ರಂ ದಮ ಉಚ್ಯತೇ ।
ವಿಪಾಪ್ಮಾ ನಿರ್ಭಯೋ ದಾಂತಃ ಪುರುಷೋ ವಿಂದತೇ ಮಹತ್ ॥೪॥

ದಮ ತೇಜಸ್ಸನ್ನು ವರ್ಧಿಸುತ್ತದೆ. ಅತ್ಯಂತ ಪವಿತ್ರವಾದುದು. ಆತ್ಮಸಂಯಮ ಉಳ್ಳವನು ಪಾಪರಹಿತನಾಗಿ, ಭಯರಹಿತನಾಗಿ ಮಹಾಫಲವನ್ನು ಹೊಂದುತ್ತಾನೆ.

ಸುಖಂ ದಾಂತಃ ಪ್ರಸ್ವಪಿತಿ ಸುಖಂ ಚ ಪ್ರತಿಬುಧ್ಯತೇ ।
ಸುಖಂ ಲೋಕೇ ವಿಪರ್ಯೇತಿ ಮನಶ್ಚಾಸ್ಯ ಪ್ರಸೀದತಿ ॥೫॥

ಇಂದ್ರಿಯನಿಗ್ರಹವನ್ನು ಹೊಂದಿರುವ ಮನುಷ್ಯನು ಸುಖವಾಗಿ ನಿದ್ರಿಸುತ್ತಾನೆ. ಸುಖವಾಗಿ ಎಚ್ಚರಗೊಳ್ಳುತ್ತಾನೆ. ಸುಖವಾಗಿ ಲೋಕದಲ್ಲಿ ಸಂಚರಿಸುತ್ತಾನೆ. ಅವನ ಮನಸ್ಸು ಯಾವಾಗಲೂ ಪ್ರಸನ್ನವಾಗಿರುತ್ತದೆ.

ತೇಜೋ ದಮೇನ ಧ್ರಿಯತೇ ನ ತತ್ ತೀಕ್ಷ್ಣೋಽಧಿಗಚ್ಛತಿ ।
ಅಮಿತ್ರಾಂಶ್ಚ ಬಹೂನಿತ್ಯಂ ಪೃಥಗಾತ್ಮನಿ ಪಶ್ಯತಿ ॥೬॥

ತೇಜಸ್ಸು ಇಂದ್ರಿಯನಿಗ್ರಹದಿಂದಲೇ ಧರಿಸಲ್ಪಟ್ಟಿದೆ. ದಮವಿಲ್ಲದ ಪುರುಷನು ತೇಜಸ್ಸನ್ನು ಹೊಂದುವುದಿಲ್ಲ. ಇಂದ್ರಿಯನಿಗ್ರಹವಿಲ್ಲದ ವ್ಯಕ್ತಿಯ ಹೃದಯದಲ್ಲಿ ಕಾಮ-ಕ್ರೋಧ ಮೊದಲಾದ ಅನೇಕ ಶತ್ರುಗಳನ್ನು ಆತನು ಕಾಣುತ್ತಾನೆ.

ಕ್ರವ್ಯಾದ್ಭ್ಯ ಇವ ಭೂತಾನಾಮದಾಂತೇಭ್ಯಃ ಸದಾ ಭಯಮ್ ।
ತೇಷಾಂ ವಿಪ್ರತಿಷೇಧಾರ್ಥಂ ರಾಜಾ ಸೃಷ್ಟಃ ಸ್ವಯಂಭುವಾ ॥೭॥

ಮಾಂಸವನ್ನು ತಿನ್ನುವ ಹುಲಿ ಮೊದಲಾದವುಗಳಿಂದ ಜಿಂಕೆ ಮೊದಲಾದವುಗಳಿಗೆ ಭಯವುಂಟಾಗುವಂತೆ ಇಂದ್ರಿಯಗಳನ್ನು ನಿಗ್ರಹಿಸದೆ ಇರುವ ಮನುಷ್ಯರಿಗೆ ವಿಷಯ ಪದಾರ್ಥಗಳ ಭಯವಿದೆ. ಆದ್ದರಿಂದ ಮನುಷ್ಯರ ಮನಸ್ಸನ್ನು ನಿಗ್ರಹಿಸಿಕೊಳ್ಳುವ ದೃಷ್ಟಿಯಿಂದಲೇ ಬ್ರಹ್ಮನು ರಾಜರನ್ನು ಸೃಷ್ಟಿಸಿರುತ್ತಾನೆ.

ಆಶ್ರಮೇಷು ಚ ಸರ್ವೇಷು ದಮ ಏವ ವಿಶಿಷ್ಯತೇ ।
ಯಚ್ಚ ತೇಷು ಫಲಂ ಧರ್ಮೇ ಭೂಯೋ ದಾಂತೇ ತದುಚ್ಯತೇ ॥೮॥

ನಾಲ್ಕು ಆಶ್ರಮಗಳಲ್ಲಿ ದಮ ಎಂಬ ಗುಣವೇ ಶ್ರೇಷ್ಠವಾಗಿದೆ. ನಾಲ್ಕು ಆಶ್ರಮ ಧರ್ಮಗಳನ್ನು ಪಾಲಿಸುವುದರಿಂದ ಲಭಿಸುವ ಫಲಗಳಲ್ಲಿ ಇಂದ್ರಿಯನಿಗ್ರಹವು ಶ್ರೇಷ್ಠವಾದ ಫಲವೆನಿಸಿದೆ.

ತೇಷಾಂ ಲಿಂಗಾನಿ ವಕ್ಷ್ಯಾಮಿ ಯೇಷಾಂ ಸಮುದಯೋ ದಮಃ ।
ಅಕಾರ್ಪಣ್ಯಮಸಂರಂಭಃ ಸಂತೋಷಃ ಶ್ರದ್ದಧಾನತಾ ॥೯॥

ದಮದಿಂದ ಒದಗಿ ಬರುವ ಅನೇಕ ಗುಣಗಳ ಪಟ್ಟಿಯನ್ನು ಹೇಳುತ್ತೇನೆ. ಈ ಗುಣಗಳ ಸಮುದಾಯವೇ ದಮ ಎನಿಸಿದೆ. ಕೃಪಣತೆ ಇಲ್ಲದಿರುವುದು, ಸಂಭ್ರಮ ಇಲ್ಲದೇ ಇರುವುದು, ಯಾವಾಗಲೂ ಸಂತೋಷದಿಂದಿರುವುದು, ಶ್ರದ್ಧೆಯಿಂದ ಇರುವುದು.

ಅಕ್ರೋಧ ಆರ್ಜವಂ ನಿತ್ಯಂ ನಾತಿವಾದೋ ನ ಮಾನಿತಾ ।
ಗುರುಪೂಜಾನಸೂಯಾ ಚ ದಯಾ ಭೂತೇಷ್ವಪೈಶುನಮ್ ॥೧೦॥

ಸಿಟ್ಟಿಲ್ಲದಿರುವುದು, ಸರಳತನ, ನಿತ್ಯವೂ ಮಿತಭಾಷಣ, ಅಭಿಮಾನ ತ್ಯಾಗ, ಗುರು-ಹಿರಿಯರ ಸೇವೆ, ಯಾರಲ್ಲಿಯೂ ದೋಷವನ್ನೆಣಿಸದಿರುವುದು (ಅಸೂಯೆ ಇಲ್ಲದಿರುವುದು) ಭೂತದಯಾ, ಚಾಡಿ ಹೇಳದಿರುವಿಕೆ.

ಜನವಾದಮೃಷಾವಾದಸ್ತುತಿನಿಂದಾವಿವರ್ಜನಮ್ ।
ಸಾಧುಕಾಮಶ್ಚಾಸ್ಪಹಯನ್ನಾಯಾತಿ ಪ್ರತ್ಯಯಂ ನೃಷು ॥೧೧॥

ಲೋಕಾಪವಾದಕ್ಕೆ ಗುರಿಯಾಗದಿರುವುದು, ಸುಳ್ಳು ಹೇಳದಿರುವುದು, ಇತರರ ಸ್ತುತಿಯನ್ನಾಗಲೀ, ನಿಂದನೆಯನ್ನಾಗಲೀ ಮಾಡದಿರುವುದು, ಸತ್ಪುರುಷರ ಸಹವಾಸವನ್ನು ಇಚ್ಛಿಸುವುದು, ಮುಂದೆ ಬರುವ ಸುಖಕ್ಕೋಸ್ಕರ ಹಂಬಲಿಸದಿರುವುದು, ದುಃಖಕ್ಕಾಗಿ ಚಿಂತೆಗೀಡಾಗದಿರುವುದು - ಇವು ದಾಂತನ ಲಕ್ಷಣಗಳಾಗಿವೆ.

ಅವೈರಕೃತ್ ಸೂಪಚಾರಃ ಸಮೋ ನಿಂದಾಪ್ರಶಂಸಯೋಃ ।
ಸುವೃತ್ತಃ ಶೀಲಸಂಪನ್ನಃ ಪ್ರಸನ್ನಾತ್ಮಾತ್ಮವಾನ್ ಶುಚಿಃ ॥೧೨॥

ಪ್ರಾಪ್ಯ ಲೋಕೇ ಚ ಸತ್ಕಾರಂ ಸ್ವರ್ಗಂ ವೈ ಪ್ರೇತ್ಯ ಗಚ್ಛತಿ ।
ದುರ್ಗಮಂ ಸರ್ವಭೂತಾನಾಂ ಪ್ರಾಪಯನ್ ಮೋದತೇ ಸುಖೀ ॥೧೩॥

ಇಂದ್ರಿಯನಿಗ್ರಹವುಳ್ಳವನು ಯಾರಲ್ಲಿಯೂ ದ್ವೇಷವನ್ನು ಕಟ್ಟಿಕೊಳ್ಳಲಾರ. ಎಲ್ಲರೊಡನೆ ಸದ್ವ್ಯವಹಾರವನ್ನೇ ಮಾಡುತ್ತಾನೆ. ನಿಂದಾ-ಸ್ತುತಿಗಳ ವಿಷಯದಲ್ಲಿ ಸಮಭಾವ ಹೊಂದಿರುತ್ತಾನೆ. ಸದಾಚಾರ ತತ್ಪರನಾಗಿರುತ್ತಾನೆ. ಶೀಲವಂತನೂ, ಪ್ರಸನ್ನಚಿತ್ತನೂ, ಧೈರ್ಯವಂತನೂ, ತನ್ನಲ್ಲಿರುವ ದೋಷವನ್ನು ದಮನ ಮಾಡುವ ಸಾಮರ್ಥ್ಯವುಳ್ಳವನು ಆಗಿರುತ್ತಾನೆ. ಇಂತಹ ದಾಂತಪುರುಷನು ಇಹಲೋಕದಲ್ಲಿ ಸಮ್ಮಾನಿತನಾಗಿ ಸತ್ತ ಬಳಿಕ ಸ್ವರ್ಗವನ್ನು ಹೊಂದುತ್ತಾನೆ.

ಸರ್ವಭೂತಹಿತೇ ಯುಕ್ತೋ ನ ಸ್ಮಯಾದ್ ದ್ವೇಷ್ಟಿ ವೈ ಜನಮ್ ।
ಮಹಾಹ್ರದ ಇವಾಕ್ಷೋಭ್ಯ ಪ್ರಜ್ಞಾತೃಪ್ತಃ ಪ್ರಸೀದತಿ ॥೧೪॥

ದಾಂತನಾದ ಪುರುಷನು ಸಮಸ್ತ ಜೀವರ ಹಿತದಲ್ಲಿ ಆಸಕ್ತನಾಗಿ ಯಾರನ್ನೂ ದ್ವೇಷಿಸದೆ ದೊಡ್ಡ ಜಲಾಶಯದಂತೆ ಯಾವಾಗಲೂ ಗಂಭೀರನಾಗಿರುತ್ತಾನೆ. ಜ್ಞಾನತೃಪ್ತನಾದ ಈತನ ಮನಸ್ಸು ಯಾವಾಗಲೂ ಸಂತೋಷದಿಂದಿರುತ್ತದೆ.

ಅಭಯಂ ಸರ್ವಭೂತೇಭ್ಯಃ ಸರ್ವೇಷಾಮಭಯಂ ಯತಃ ।
ನಮಸ್ಯಃ ಸರ್ವಭೂತಾನಾಂ ದಾಂತೋ ಭವತಿ ಜ್ಞಾನವಾನ್ ॥೧೫॥

ದಾಂತನಾದವನು ಎಲ್ಲಪ್ರಾಣಿಗಳಿಗೂ ಅಭಯದಾನ ಮಾಡಿ, ತಾನೂ ಪ್ರಾಣಿಗಳ ದೆಸೆಯಿಂದ ಅಭಯವನ್ನು ಹೊಂದಿರುತ್ತಾನೆ. ಜ್ಞಾನಿಯಾದ ದಾಂತ ಪುರುಷನು ಸಮಸ್ತ ಭೂತಗಳಿಂದ ನಮಸ್ಕಾರ ಅರ್ಹನಾಗಿರುತ್ತಾನೆ.

ನ ಹೃಷ್ಯತಿ ಮಹತ್ಯರ್ಥೇ ವ್ಯಸನೇ ಚ ನ ಶೋಚತಿ ।
ಸ ವೈ ಪರಿಮಿತಪ್ರಜ್ಞಃ ಸ ದಾಂತೋ ದ್ವಿಜ ಉಚ್ಯತೇ ॥೧೬॥

ದಾಂತನು ಮಹಾಸಂಪತ್ತಿನಿಂದ ಸಂತುಷ್ಟನಾಗುವುದಿಲ್ಲ. ಮಹಾದುಃಖವು ಒದಗಿ ಬಂದರೆ ಚಿಂತಿಸುವುದಿಲ್ಲ. ಇಂತವಹನನ್ನು ಪರಿಮಿತಪ್ರಜ್ಞೆಯುಳ್ಳ ದಾಂತನಾದ ದ್ವಿಜ ಎಂದು ಕರೆಯುತ್ತಾರೆ.

ಕರ್ಮಭಿಃ ಶ್ರುತಸಂಪನ್ನಃ ಸದ್ಭಿರಾಚರಿತೈಃ ಶುಭೈಃ ।
ಸದೈವ ದಮಸಂಯುಕ್ತಸ್ತಸ್ಯ ಭುಂಕ್ತೇ ಮಹತ್ಫಲಮ್ ॥೧೭॥

ವೇದಶಾಸ್ತ್ರಸಂಪನ್ನನಾದ ದಾಂತನು ಸತ್ಪುರುಷರು ಆಚರಿಸಿದ ಕರ್ಮಗಳನ್ನು ಆಚರಿಸುತ್ತಾನೆ. ಯಾವಾಗಲೂ ದಮಸಂಯುಕ್ತನಾದ ವ್ಯಕ್ತಿಯು ಮಹತ್ತರವಾದ ಫಲವನ್ನೇ ಅನುಭವಿಸುತ್ತಾನೆ.

ಅನಸೂಯಾ ಕ್ಷಮಾ ಶಾಂತಿಃ ಸಂತೋಷಃ ಪ್ರಿಯವಾದಿತಾ ।
ಸತ್ಯಂ ದಾನಮನಾಯಾಸೋ ನೈಷ ಮಾರ್ಗೋ ದುರಾತ್ಮನಾಮ್ ॥೧೮॥

ಅಸೂಯೆ ಪಡದಿರುವುದು, ಕ್ಷಮೆ, ಶಾಂತಿ, ಸಂತೋಷ, ಪ್ರಿಯವಾದ ಮಾತು, ಸತ್ಯಭಾಷಣ, ದಾನಶೀಲತೆ, ಬಾಹ್ಯ ಸುಖಕ್ಕೆ ಆಯಾಸ ಪಡದಿರುವುದು - ಇವುಗಳು ದಾಂತನ ಗುಣಗಳು. ದುರಾತ್ಮರಿಗೆ ಇವು ರುಚಿಸವು.

ಕಾಮಕ್ರೋಧೌ ಚ ಲೋಭಶ್ಚ ಪರಸ್ಯಾರ್ಥೇ ವಿಕತ್ಥನಾ ।
ಅತುಷ್ಟಿರನೃತಂ ಮೋಹ ಏಷ ಮಾರ್ಗೋ ದುರಾತ್ಮನಾಮ್ ॥೧೯॥

ಕಾಮಕ್ರೋಧೌ ವಶೇ ಕೃತ್ವಾ ಬ್ರಹ್ಮಚಾರೀ ಜಿತೇಂದ್ರಿಯಃ ।
ವಿಕ್ರಮ್ಯ ಘೋರೇ ತಪಸಿ ಬ್ರಾಹ್ಮಣಃ ಸಂಶಿತವ್ರತಃ ।
ಕಾಲಾಕಾಂಕ್ಷೀ ಚರೇಲ್ಲೋಕಾನ್ನಿರಪಾಯ ಇವಾತ್ಮವಾನ್ ॥೨೦॥

ಅದಾಂತನಾದ ಪುರುಷನು ಕಾಮ-ಕ್ರೋಧ-ಲೋಭಗಳಿಗೆ ಬಲಿಯಾಗಿ ಅರ್ಥವು ದೊರೆತಾಗ ಮತ್ತೊಬ್ಬರನ್ನು ಅವಮಾನಿಸುತ್ತಾನೆ. ಜಿತೇಂದ್ರಿಯನಾದ ಬ್ರಹ್ಮಚಾರಿಯು ಕಾಮ-ಕ್ರೋಧಗಳನ್ನು ವಶದಲ್ಲಿಟ್ಟುಕೊಂಡು ಘೋರವಾದ ತಪಸ್ಸಿನಲ್ಲಿ ತೊಡಗಿಸಿಕೊಂಡು ಮೃತ್ಯುಕಾಲವನ್ನು ನಿರೀಕ್ಷಿಸುತ್ತಾ ಯಾವ ವಿಧವಾದ ಅಪಾಯವೂ ಇಲ್ಲದಂತೆ ಧೈರ್ಯದಿಂದ ಕೂಡಿದವನಾಗಿ ಲೋಕದಲ್ಲಿ ಸಂಚರಿಸುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಚತುಃಪಂಚಾಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಐವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೈದನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ವ್ರತ-ತಪಸ್ಸು-ಉಪವಾಸ-ಬ್ರಹ್ಮಚರ್ಯ-ಅತಿಥಿಸೇವೆ ಮೊದಲಾದವುಗಳ ಬಗ್ಗೆ ತಿಳಿಸಿದುದು.

ಯುಧಿಷ್ಠಿರಃ

ದ್ವಿಜಾತಯೋ ವ್ರತೋಪೇತಾ ಯದಿದಂ ಭುಂಜತೇ ಹವಿಃ ।
ಅನ್ನಂ ಬ್ರಾಹ್ಮಣಕಾಮಾಯ ಕಥಮೇತತ್ ಪಿತಾಮಹ ॥೧॥

ಯುಧಿಷ್ಠಿರ- ಪಿತಾಮಹನೇ, ವ್ರತವನ್ನು ಸಂಕಲ್ಪಿಸಿರುವ ಕೆಲವು ಬ್ರಾಹ್ಮಣರು ಇತರರ ಮನೆಗಳಲ್ಲಿ ಆಹ್ವಾನಿಸಲ್ಪಟ್ಟು ಹವಿಷ್ಯದ ಅನ್ನವನ್ನು ಭುಂಜಿಸುತ್ತಾರೆ. ವ್ರತದೀಕ್ಷಿತರು ಹೀಗೆ ಮಾಡುವುದು ಸರಿಯೇ?

ಭೀಷ್ಮಃ

ಅವೇದೋಕ್ತವ್ರತೋಪೇತಾ ಭುಂಜಾನಾಃ ಕಾರ್ಯಕಾರಿಣಃ ।
ವೇದೋಕ್ತೇಷು ಚ ಭುಂಜಾನಾ ವ್ರತಲುಪ್ತಾ ಯುಧಿಷ್ಠಿರ ॥೨॥

ಭೀಷ್ಮ- ಯುಧಿಷ್ಠಿರನೇ, ವೇದವಿಹಿತರಲ್ಲದಿರುವ ವ್ರತದೀಕ್ಷಿತರು ಪರಾನ್ನ ಭೋಜನ ಮಾಡುವುದು ಅಪ್ರಾಮಾಣಿಕವೆನಿಸಿದೆ. ವೇದೋಕ್ತವ್ರತಗಳನ್ನು ಕೈಗೊಂಡವರೂ ಕೂಡ ಇತರರ ಮನೆಗಳಲ್ಲಿ ಭುಂಜಿಸಿದರೆ ಅವರನ್ನೂ ವ್ರತಭ್ರಷ್ಟರು ಎಂದೇ ಹೇಳುತ್ತಾರೆ.

ಯುಧಿಷ್ಠಿರಃ

ಯದಿದಂ ತಪ ಇತ್ಯಾಹುರುಪವಾಸಂ ಪೃಥಗ್ಜನಾಃ ।
ಏತತ್ ತಪೋ ಮಹಾರಾಜ ಉತಾಹೋ ಕಿಂ ತಪೋ ಭವೇತ್ ॥೩॥

ಯುಧಿಷ್ಠಿರ- ಮಹಾರಾಜನೇ, ಪ್ರಪಂಚದ ಸಾಮಾನ್ಯ ಜನರು ಉಪವಾಸ ವ್ರತವನ್ನು ತಪಸ್ಸೆಂದು ಹೇಳುತ್ತಾರೆ. ಉಪವಾಸವು ತಪಸ್ಸಾಗುವುದು ಹೇಗೆ? ಅಥವಾ ಉಪವಾಸಕ್ಕಿಂತ ಉತ್ಕೃಷ್ಟವಾದ ತಪಸ್ಸು ಇದೆಯೇ?

ಭೀಷ್ಮಃ

ಮಾಸಪಕ್ಷೋಪವಾಸೇನ ಮನ್ಯಂತೇ ಯತ್ ತಪೋ ಜನಾಃ ।
ಆತ್ಮತಂತ್ರೋಪಘಾತಸ್ಯ ನ ತಪಸ್ತತ್ ಸತಾಂ ಮತಮ್ ।
ತ್ಯಾಗಶ್ಚ ಸನ್ನತಿಶ್ಚೈವ ಶಿಷ್ಯತೇ ತಪ ಉತ್ತಮಮ್ ॥೪॥

ಭೀಷ್ಮ– ಮಾಸ ಅಥವಾ ಪಕ್ಷಕಾಲ ಮಾಡುವ ಉಪವಾಸವನ್ನು ತಪಸ್ಸೆಂದು ಯಾವ ಜನರು ತಿಳಿದಿರುತ್ತಾರೋ ಅದು ನಿಜವಾದ ತಪಸ್ಸೆನಿಸುವುದಿಲ್ಲ. ಇದು ಕೇವಲ ಪರಮಾತ್ಮನ ಪೂಜೆಗೆ ಪ್ರತಿಬಂಧಕವಾಗಿ ದೇವಬ್ರಾಹ್ಮಣ-ಪೂಜಾದಿ ನಿತ್ಯನೈಮಿತ್ತಿಕ ಕರ್ಮಗಳನ್ನು ಬಿಟ್ಟಂತೆ ಪಾಪಕ್ಕೆ ಕಾರಣವಾಗುತ್ತದೆ. ಆದ್ದರಿಂದ ಸತ್ಪುರುಷರ ಅಭಿಪ್ರಾಯದಲ್ಲಿ ತ್ಯಾಗ ಮತ್ತು ವಿನಯಗಳೇ ನಿಜವಾದ ತಪಸ್ಸೆನಿಸಿವೆ.

ಸದೋಪವಾಸೀ ಚ ಭವೇದ್ ಬ್ರಹ್ಮಚಾರೀ ಸದೈವ ಚ ।
ಮುನಿಶ್ಚ ಸ್ಯಾತ್ ಸದಾ ವಿಪ್ರೋ ದೈವತಂ ಚ ಸದಾ ಭಜೇತ್ ॥೫॥

ತ್ಯಾಗಶೀಲನೂ, ವಿನಯಶೀಲನೂ ಆದ ಪುರುಷನು ನಿತ್ಯೋಪವಾಸಿ, ಬ್ರಹ್ಮಚಾರಿ ಎಂದೇ ಕರೆಸಿಕೊಳ್ಳಲ್ಪಡುತ್ತಾನೆ. ತ್ಯಾಗಿಯೂ, ವಿನಯಶೀಲನೂ ಆಗಿರುವ ಬ್ರಾಹ್ಮಣನು ಮುನಿಯೂ ದೇವತೆಯೂ ಆಗಿರುತ್ತಾನೆ.

ಕುಟುಂಬಿಕೋ ಧರ್ಮಕಾಮಃ ಸದಾಸ್ವಪ್ನಶ್ಚ ಭಾರತ ।
ಅಮಾಂಸಾಶೀ ಸದಾ ಚ ಸ್ಯಾತ್ ಪವಿತ್ರಂ ಚ ಸದಾ ಜಪೇತ್ ॥೬॥

ಅವನು ಸಂಸಾರಿಯಾಗಿದ್ದರೂ ಧರ್ಮವನ್ನೇ ಬಯಸುವವನಾಗಿ ಇರುವುದರಿಂದ ನಿದ್ರಾಲಸ್ಯಗಳನ್ನು ತೊರೆದವನಾಗಿರುತ್ತಾನೆ. ಎಂದಿಗೂ ಮಾಂಸವನ್ನು ಭುಂಜಿಸನು. ಸದಾ ಪರಿಶುದ್ಧನಾಗಿರುತ್ತಾನೆ.

ಅಮೃತಾಶೀ ಸದಾ ಚ ಸ್ಯಾನ್ನ ಚ ಸ್ಯಾದ್ ವಿಷಭೋಜನಃ ।
ವಿಘಸಾಶೀ ಸದಾ ಚ ಸ್ಯಾತ್ ಸದಾ ಚೈವಾತಿಥಿಪ್ರಿಯಃ ॥೭॥

ಅನಿಷಿದ್ಧವಾದ ಪದಾರ್ಥಗಳನ್ನು ಸ್ವೀಕರಿಸುವ ವ್ಯಕ್ತಿಯು ಎಂದೂ ದೇವರಿಗೆ ಸಮರ್ಪಿಸದೆ ಇರುವ ವಿಷಸದೃಶವಾದ ಅನ್ನವನ್ನು ತಿನ್ನನು. ಯಜ್ಞಶೇಷವನ್ನೇ ಭುಂಜಿಸುತ್ತಾನೆ. ನಿರಂತರವೂ ಅತಿಥಿಪ್ರಿಯನಾಗಿರುತ್ತಾನೆ.

ಯುಧಿಷ್ಠಿರಃ

ಕಥಂ ಸದೋಪವಾಸೀ ಸ್ಯಾದ್ ಬ್ರಹ್ಮಚಾರೀ ಕಥಂ ಭವೇತ್ ।
ವಿಘಸಾಶೀ ಕಥಂ ಚ ಸ್ಯಾತ್ ಸದಾ ಚೈವಾತಿಥಿಪ್ರಿಯಃ ॥೮॥

ಯುಧಿಷ್ಠಿರ– ಪಿತಾಮಹನೇ, ಸದೋಪವಾಸಿಯು ಹೇಗೆ ಆಗುತ್ತಾನೆ?

ಬ್ರಹ್ಮಚಾರಿಯು ಹೇಗೆ ಆಗುತ್ತಾನೆ? ಯಜ್ಞಶೇಷವನ್ನು ತಿನ್ನುವವನು ಹೇಗೆ ಆಗುತ್ತಾನೆ? ಅತಿಥಿಪ್ರಿಯನು ಹೇಗೆ ಆಗುತ್ತಾನೆ?

ಭೀಷ್ಮಃ

ಅಂತರಾ ಪ್ರಾತರಾಶಂ ಚ ಸಾಯಮಾಶಂ ತಥೈವ ಚ ।
ಸದೋಪವಾಸೀ ಚ ಭವೇದ್ಯೋ ನ ಭುಂಕ್ತೇ ಕಥಂಚನ ॥೯॥

ಭೀಷ್ಮ– ಮಹಾರಾಜನೇ, ಪ್ರಾತಃಕಾಲ ಮತ್ತು ಸಾಯಂಕಾಲ ಭೋಜನದ ಮಧ್ಯದಲ್ಲಿ ಯಾವಾತನು ಏನನ್ನೂ ಸ್ವೀಕರಿಸುವುದಿಲ್ಲವೋ, ಯಾವ ಕಾರಣದಿಂದಲೂ ಏನನ್ನೂ ಭುಂಜಿಸುವುದಿಲ್ಲವೋ ಅವನು ನಿತ್ಯೋಪವಾಸಿ ಎಂದೇ ಕರೆಸಿಕೊಳ್ಳಲ್ಪಡುತ್ತಾನೆ.

ಭಾರ್ಯಾಂ ಗಚ್ಛನ್ ಬ್ರಹ್ಮಚಾರೀ ಋತೌ ಭವತಿ ಬ್ರಾಹ್ಮಣಃ ।
ಋತವಾದೀ ಸದಾ ಚ ಸ್ಯಾಜ್ಜ್ಞಾನನಿತ್ಯಶ್ಚ ಯೋ ನರಃ ॥೧೦॥

ಯಾವ ಗೃಹಸ್ಥನು ಋತುಕಾಲ ಸನ್ನಿಹಿತವಾದಾಗ ಮಾತ್ರ ಭಾರ್ಯೆಯೊಡನೆ ಸಮಾಗಮವನ್ನು ಮಾಡುತ್ತಾನೋ ಅವನು ಬ್ರಹ್ಮಚಾರಿ ಎನಿಸಿಕೊಳ್ಳುತ್ತಾನೆ. ಯಾವಾಗಲೂ ಸತ್ಯವನ್ನು ಹೇಳುವವನು, ಭಗವದ್ಜ್ಞಾನದಲ್ಲಿಯೇ ರತನಾದವನೂ ಬ್ರಹ್ಮಚಾರಿ ಎನಿಸುತ್ತಾನೆ.

ಅಭಕ್ಷಯನ್ ವೃಥಾಮಾಂಸಮಮಾಂಸಾಶೀ ಭವತ್ಯುತ ।
ದಾನನಿತ್ಯಃ ಪವಿತ್ರಶ್ಚ ಅಸ್ವಪ್ನಶ್ಚ ದಿವಾಸ್ವಪನ್ ॥೧೧॥

ವ್ಯರ್ಥವಾಗಿ ಸುಖಕ್ಕೋಸ್ಕರವಾಗಿ ಮಾಂಸವನ್ನು ತಿನ್ನದೆ ಇರುವವನು ಮಾಂಸಾಹಾರಿ ಎನಿಸುವುದಿಲ್ಲ. ನಿತ್ಯವೂ ದಾನರತನಾದವನು ಪವಿತ್ರನಾಗಿರುತ್ತಾನೆ. ಹಗಲು ಮಲಗದೆ ಇರುವವನು ಜಾಗರಣೆ ಮಾಡಿದವನು ಎನಿಸುತ್ತಾನೆ.

ಭೃತ್ಯಾತಿಥಿಷು ಯೋ ಭುಂಕ್ತೇ ಭುಕ್ತವತ್ಸು ಸದಾ ಸ ಹ ।
ಅಮೃತಂ ಸಕಲಂ ಭುಂಕ್ತ ಇತಿ ವಿದ್ಧಿ ಯುಧಿಷ್ಠಿರ ॥೧೨॥

ಯಾವ ವ್ಯಕ್ತಿಯು ಭೃತ್ಯಾತಿಥಿಗಳು ಭುಂಜಿಸಿದ ಬಳಿಕ ಊಟ ಮಾಡುತ್ತಾನೋ ಅವನು ಸಕಲ ವಿಧವಾದ ಅಮೃತವನ್ನೂ ಅನುಭವಿಸುತ್ತಾನೆ ಎಂದೇ ಯುಧಿಷ್ಠಿರನೇ, ತಿಳಿದುಕೊ.

ಅಭುಕ್ತವತ್ಸು ನಾಶ್ನಾನಃ ಸತತಂ ಯಸ್ತು ವೈ ದ್ವಿಜಃ ।
ಅಭೋಜನೇನ ತೇನಾಸ್ಯ ಜಿತಃ ಸ್ವರ್ಗೋ ಭವತ್ಯುತ ॥೧೩॥

ಯಾವ ಬ್ರಾಹ್ಮಣನು ಭೃತ್ಯಾತಿಥಿಗಳು ಊಟ ಮಾಡದೆ ಊಟ ಮಾಡುವುದಿಲ್ಲವೋ ಇಂತಹ ಭೋಜನವ್ರತದಿಂದ ಅವನು ಸ್ವರ್ಗವನ್ನೇ ಜಯಿಸಿರುತ್ತಾನೆ.

ದೇವತಾಭ್ಯಃ ಪಿತೃಭ್ಯಶ್ಚ ಭೃತ್ಯೇಭ್ಯೋಽತಿಥಿಭಿಃ ಸಹ ।
ಅವಶಿಷ್ಟಂ ತು ಯೋಶ್ನಾತಿ ತಮಾಹುರ್ವಿಘಸಾಶಿನಮ್ ॥೧೪॥

ದೇವತೆಗಳಿಗೆ, ಪಿತೃಗಳಿಗೆ, ಭೂತಗಳಿಗೆ, ಅತಿಥಿಗಳಿಗೆ ಕೊಟ್ಟ ಬಳಿಕ ಯಾವಾತನು ಊಟ ಮಾಡುತ್ತಾನೋ ಅವನನ್ನು ಯಜ್ಞಶೇಷ ಉಂಡವನು ಎನ್ನುತ್ತಾರೆ.

ತೇಷಾಂ ಲೋಕಾ ಹ್ಯಪರ್ಯಂತಾಃ ಸದನೇ ಬ್ರಹ್ಮಣಾ ಸಹ ।
ಉಪಸ್ಥಿತಾಶ್ಚಾಪ್ಸರೋಭಿಃ ಪರಿಯಾಂತಿ ದಿವೌಕಸಃ ॥೧೫॥

ಇಂತಹ ಪುರುಷರಿಗೆ ಅಕ್ಷಯವಾದ ಲೋಕಗಳು ದೊರೆಯುತ್ತವೆ. ಬ್ರಹ್ಮನಿಂದಲೂ, ಅಪ್ಸರೆಯರಿಂದಲೂ ಸಹಿತರಾದ ದೇವತೆಗಳು ಅವನ ಮನೆಯಲ್ಲಿಯೇ ತಿರುಗುತ್ತಿರುತ್ತಾರೆ.

ದೇವತಾಭಿಶ್ಚ ಯೇ ಸಾರ್ಧಂ ಪಿತೃಭಿಶ್ಚೋಪಭುಂಜತೇ ।
ರಮಂತೇ ಪುತ್ರಪೌತ್ರೈಶ್ಚ ತೇಷಾಂ ಗತಿರನುತ್ತಮಾ ॥೧೬॥

ಯಾರು ದೇವತೆಗಳೊಡನೆ, ಪಿತೃಗಳೊಡನೆ ಭೋಜನ ಮಾಡುತ್ತಾರೋ ಅರ್ಥಾತ್ ಅವರಿಗೆ ಸಮರ್ಪಿಸಿದ ಬಳಿಕ ಭುಂಜಿಸುತ್ತಾರೋ ಅವರು ಮಕ್ಕಳು-ಮೊಮ್ಮಕ್ಕಳೊಡನೆ ಆನಂದದಿಂದಿರುತ್ತಾರೆ. ಅವರಿಗೆ ಉತ್ತಮ ಗತಿ ದೊರೆಯುತ್ತದೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಪಂಚಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಐವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತಾರನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಭಗವತ್ಸ್ವರೂಪನಿರೂಪವನ್ನು ನಿರೂಪಿಸುವ ಸನತ್ಕುಮಾರಮುನಿಗಳ ಸಂವಾದವನ್ನು ತಿಳಿಸಿದುದು.

ಯುಧಿಷ್ಠಿರಃ

ಕೇಚಿದಾಹುರ್ದ್ವಿಧಾ ಲೋಕೇ ತ್ರಿಧಾ ರಾಜನ್ನನೇಕಧಾ ।
ನ ಪ್ರತ್ಯಯೋ ನ ಚಾನ್ಯಚ್ಚ ದೃಶ್ಯತೇ ಬ್ರಹ್ಮ ನೈವ ತತ್ ॥೧॥

ಯುಧಿಷ್ಠಿರ– ಪಿತಾಮಹನೇ, ಕೆಲವರು ಜಗತ್ತಿನಲ್ಲಿ ಜೀವ-ಜಡ ಎಂಬ ಎರಡು ಪ್ರಕಾರಗಳನ್ನು ಹೇಳುತ್ತಾರೆ. ಕೆಲವರು ಜೀವರಲ್ಲಿಯೇ ದೇವ-ಅಸುರ-ಮನುಷ್ಯ ಎಂಬ ಮೂರು ಭೇದವಿದೆ ಎನ್ನುತ್ತಾರೆ. ಕೆಲವರು ಜಡದಲ್ಲಿ ತೇಜಸ್ಸು, ಜಲ, ಅನ್ನವೆಂಬ ಭೇದವನ್ನು ಹೇಳುತ್ತಾರೆ. ಇನ್ನು ಕೆಲವರು ಪಂಚಭೂತಾತ್ಮಕವಾದುದು ಎಂದು ಅನೇಕ ಪ್ರಕಾರವನ್ನು ಹೇಳುತ್ತಾರೆ. ಇವುಗಳಲ್ಲಿ ಯಾವುದರಲ್ಲಿಯೂ ವಿಶ್ವಾಸವು ಕಾಣಿಸುವುದಿಲ್ಲ. ಸರ್ವಥಾ ಅವಿಶ್ವಾಸವೂ ತೋರುವುದಿಲ್ಲ. ಹೇಳಲ್ಪಟ್ಟ ಈ ಯಾವುದು ಪರಬ್ರಹ್ಮನಂತೂ ಆಗಿರುವುದಿಲ್ಲ.

ನಾನಾವಿಧಾನಿ ಶಾಸ್ತ್ರಾಣಿ ಉಕ್ತಾಶ್ಚೈವ ಪೃಥಗ್ವಿಧಾಃ ।
ಕಿಮಧಿಷ್ಠಾಯ ತಿಷ್ಠಾಮಿ ತನ್ಮೇ ಬ್ರೂಹಿ ಪಿತಾಮಹ ॥೨॥

ನಾನಾ ವಿಧವಾದ ಶಾಸ್ತ್ರಗಳು ಹೇಳಲ್ಪಟ್ಟಿರುತ್ತವೆ. ಅನೇಕ ವಿಧವಾದ ದೇವತಾ ಸಮುದಾಯವೂ ಹೇಳಲ್ಪಟ್ಟಿವೆ. ಯಾವ ತತ್ತ್ವವನ್ನು ಆಶ್ರಯಿಸಿ ನಾನು ವರ್ತಿಸಬೇಕೆಂಬುದನ್ನು ತಿಳಿಸು.

ಭೀಷ್ಮಃ

ಸ್ವೇ ಸ್ವೇ ಯುಕ್ತಾ ಮಹಾತ್ಮಾನಃ ಶಾಸ್ತ್ರೇಷು ಪ್ರಭವಿಷ್ಣವಃ ।
ವರ್ತಂತೇ ಪಂಡಿತಾ ಲೋಕೇ ಕೋ ವಿದ್ವಾನ್ ಕಶ್ಚ ಪಂಡಿತಃ ॥೩॥

ಭೀಷ್ಮ– ಯುಧಿಷ್ಠಿರನೇ, ಸ್ವಧರ್ಮನಿರತರಾಗಿ ಶಾಸ್ತ್ರದಲ್ಲಿ ನಿಪುಣರಾಗಿ, ಮಹಾತ್ಮರೆನಿಸಿರುವ ಪಂಡಿತರು ಲೋಕದಲ್ಲಿ ಎಷ್ಟೋ ಮಂದಿ ಇದ್ದಾರೆ. ಆದರೆ ಅವರಲ್ಲಿ ನಿಜವಾದ ವಿದ್ವಾಂಸರು ಯಾರು? ತತ್ತ್ವಜ್ಞರು ಯಾರು? ಎಂಬುದನ್ನು ವಿಮರ್ಶಿಸಬೇಕು.

ಸರ್ವೇಷಾಂ ತತ್ವಮಜ್ಞಾಯ ಯಥಾರುಚಿ ತಥಾ ಭವೇತ್ ।
ಅಸ್ಮಿನ್ನರ್ಥೇ ಪುರಾಭೂತಮಿತಿಹಾಸಂ ಪುರಾತನಮ್ ॥೪॥

ನಿಯಮೇನ ಎಲ್ಲರೂ ತತ್ತ್ವಜ್ಞರೆನಿಸಲು ಸಾಧ್ಯವಿಲ್ಲ. ವಿಮರ್ಶೆಯಿಂದ ಹೇಗೆ ತೋರುತ್ತದೋ ಅದರಂತೆ ವರ್ತಿಸಬೇಕು. ಈ ವಿಷಯದಲ್ಲಿ ಹಿಂದೆ ನಡೆದ ಒಂದು ಪುರಾತನ ಇತಿಹಾಸವಿದೆ.

ಮಹಾವಿವಾದಸಂಯುಕ್ತಮೃಷೀಣಾಂ ಭಾವಿತಾತ್ಮನಾಮ್ ।
ಹಿಮವತ್ಪಾರ್ಶ್ವ ಆಸೀನಾ ಋಷಯಃ ಸಂಶಿತವ್ರತಾಃ ॥೫॥

ಜ್ಞಾನನಿಷ್ಠರೂ, ಧೀಮಂತರೂ ಆದ ಋಷಿಗಳಲ್ಲಿ ಹಿಂದೆ ಒಂದು ದೊಡ್ಡ ವಿವಾದವು ಏರ್ಪಟ್ಟಿತು. ಹಿಮವದ್ ಪರ್ವತದ ಪಾರ್ಶ್ವದಲ್ಲಿ ದೃಢವ್ರತರಾದ ಅನೇಕ ಮಹರ್ಷಿಗಳು ಸೇರಿದ್ದರು.

ಷಣ್ಣಾಂ ತಾನಿ ಸಹಸ್ರಾಣಿ ಋಷೀಣಾಂ ಗಣಮಾಹಿತಮ್ ।
ತತ್ರ ಕೇಚಿದ್ ಧ್ರುವಂ ವಿಶ್ವಂ ಸೇಶ್ವರಂ ತು ನಿರೀಶ್ವರಮ್ ॥೬॥

ಅಲ್ಲಿ ಆರುಸಾವಿರ ಮಂದಿ ಮುನಿಗಳು ಗುಂಪಾಗಿ ಸೇರಿದ್ದರು. ಆ ಗುಂಪಿನಲ್ಲಿ ಕೆಲವರು ಲೋಕವನ್ನು ಶಾಶ್ವತವೆಂದು, ಇನ್ನು ಕೆಲವರು ಜಗತ್ತೆಲ್ಲವೂ ಈಶ್ವರನಿಂದ ನಿಯಮ್ಯವೆಂದು, ಇನ್ನು ಕೆಲವರು ಜಗತ್ತಿಗೆ ಈಶ್ವರನು ಕಾರಣನಲ್ಲವೆಂದು ಹೇಳುತ್ತಿದ್ದರು.

ಪ್ರಾಕೃತಂ ಕಾರಣಂ ನಾಸ್ತಿ ಸರ್ವಂ ನೈವಮಿದಂ ಜಗತ್ ।
ಅನೇನ ಚಾಪರೇ ವಿಪ್ರಾಃ ಸ್ವಭಾವಂ ಕರ್ಮ ಚಾಪರೇ ॥೭॥

ಇನ್ನು ಕೆಲವರು ಜಗತ್ತಿಗೆ ಪ್ರಕೃತಿಯು ಕಾರಣವಲ್ಲ, ನಮ್ಮ ಅಜ್ಞಾನವೇ ಕಾರಣವಾಗಿದೆ. ಕಣ್ಣಿಗೆ ಕಾಣುವಂತಹ ಜಗತ್ತು ಅಪ್ರಾಮಾಣಿಕವಾದುದು. ಶೂನ್ಯವಾದುದೇ ಜಗತ್ತು. ಇನ್ನು ಕೆಲವರು ಪ್ರಕೃತಿಯಿಂದಲೇ ಈ ಜಗತ್ತು ನಿರ್ಮಾಣವಾಗಿದೆ. ಇನ್ನು ಕೆಲವರು ಜಗತ್ತು ಸ್ವಾಭಾವಿಕವೆಂದು, ಇನ್ನು ಕೆಲವರು ಕರ್ಮವೆಂದು ವಾದಗಳನ್ನು ಮುಂದಿಟ್ಟರು.

ಪೌರುಷಂ ಕರ್ಮ ದೈವಂ ಚ ಯಃ ಸ್ವಭಾವಾದಿರೇವ ತಮ್ ।
ನಾನಾಹೇತುಶತೈರ್ಯುಕ್ತಾ ನಾನಾಶಾಸ್ತ್ರಪ್ರವರ್ತಕಾಃ ॥೮॥

ಮತ್ತೆ ಕೆಲವರು ಪುರುಷಪ್ರಯತ್ನದಿಂದ ನಿರ್ಮಿತವಾದುದೆಂದು, ಕೆಲವರು ಪುಣ್ಯ-ಪಾಪಗಳ ಸಂಬಂಧದಿಂದ ಒದಗಿಬಂದಿರುವುದೆಂದು, ಇನ್ನು ಕೆಲವರು ಸ್ವಭಾವ, ಪ್ರಯತ್ನ, ದೈವ - ಈ ಮೂರರಿಂದ ನಿರ್ಮಿತವಾಗಿರುವುದೆಂದು ಹೇಳತೊಡಗಿದರು. ಅವರೆಲ್ಲರೂ ಅನೇಕ ವಿಧವಾದ ನೂರಾರು ಯುಕ್ತಿಗಳಿಂದ ಸಂಪನ್ನರಾಗಿದ್ದರು. ನಾನಾ ಶಾಸ್ತ್ರಗಳ ಪ್ರವರ್ತಕರೂ ಆಗಿದ್ದರು.

ಸ್ವಭಾವಾದ್ ಬ್ರಾಹ್ಮಣಾ ರಾಜನ್ ಜಿಗೀಷಂತಃ ಪರಸ್ಪರಮ್ ।
ತತಸ್ತು ಮೂಲಮುದ್ಭೂತಂ ವಾದಿಪ್ರತ್ಯರ್ಥಿಸಂಯುತಮ್ ॥೯॥

ರಾಜನೇ, ಇವರಲ್ಲಿ ಎಲ್ಲರೂ ಸ್ವಾಭಾವಿಕವಾಗಿ ಒಬ್ಬರನ್ನೊಬ್ಬರು ಗೆಲ್ಲಬೇಕೆಂಬ ಹಠದಿಂದ ಪ್ರತಿವಾದಿಗಳ ಬಳಿ ವಾದಿಸುತ್ತಿದ್ದರು.

ಪಾತ್ರದಂಡವಿಘಾತಂ ಚ ವಲ್ಕಲಾಜಿನವಾಸಸಮ್ ।
ಏಕೇ ಮನ್ಯುಸಮಾಪನ್ನಾಸ್ತತಃ ಶಾಂತಾ ದ್ವಿಜೋತ್ತಮಾಃ ॥೧೦॥

ಕೆಲವರು ವಾದದ ಭರದಲ್ಲಿ ಒಬ್ಬರ ಮೇಲೆ ಒಬ್ಬರು ಎರಗುತ್ತಾ, ಅವರು ಧರಿಸಿರುವ ಭಿಕ್ಷಾಪಾತ್ರೆಗಳನ್ನು, ದಂಡಗಳನ್ನು ಹೊಡೆದು ತುಂಡರಿಸುತ್ತಿದ್ದರು. ಅವರು ಧರಿಸಿರುವ ನಾರುಮಡಿಗಳನ್ನು, ಅಜಿನಗಳನ್ನು, ಬಟ್ಟೆಗಳನ್ನು ಹರಿದು ಹಾಕುತ್ತಿದ್ದರು. ಇನ್ನು ಕೆಲವರು ಸಿಟ್ಟಿನಿಂದಾಗಿ ಮತ್ತೊಬ್ಬರನ್ನು ನಿಂದಿಸುತ್ತಿದ್ದರು. ಇದರಂತೆ ಶಾಂತ ಸ್ವಭಾವದವರೂ ಅಲ್ಲಿದ್ದರು.

ವಸಿಷ್ಠಮಬ್ರುವನ್ ಸರ್ವೇ ತ್ವಂ ನೋ ಬ್ರೂಹಿ ಸನಾತನಮ್ ।
ನಾಹಂ ಜಾನಾಮಿ ವಿಪ್ರೇಂದ್ರಾಃ ಪ್ರತ್ಯುವಾಚ ಸ ತಾನ್ ಪ್ರಭುಃ ॥೧೧॥

ಆ ಸಂದರ್ಭದಲ್ಲಿ ಪ್ರತಿಯೊಬ್ಬರು ಕೊನೆಗೆ ಶಾಂತರಾಗಿದ್ದು, ವಸಿಷ್ಠರ ಬಳಿ ಬಂದು ಸನಾತನವಾದ ನಿಜವಾದ ಧರ್ಮ ಯಾವುದೆಂಬುದನ್ನು ನಮಗೆ ತಿಳಿಸಿ ಎಂದು ಕೇಳಿದರು. ಆದರೆ ಪ್ರಭುಗಳಾದ ವಸಿಷ್ಠರು ವಿಪ್ರೇಂದ್ರರೇ, ಆ ತತ್ತ್ವವನ್ನು ನಾನು ತಿಳಿದಿರುವುದಿಲ್ಲ ಎಂದು ಉತ್ತರಿಸಿದರು.

ತೇ ಸರ್ವೇ ಸಹಿತಾ ವಿಪ್ರಾಃ ನಾರದಮ್ ಋಷಿಮಬ್ರುವನ್ ।
ತ್ವಂ ನೋ ಬ್ರೂಹಿ ಮಹಾಭಾಗ ತತ್ವವಿಜ್ಞ ಭವಾನಸಿ ॥೧೨॥

ಅವರಿಂದ ಉತ್ತರವನ್ನು ಪಡೆಯದೆ ಇರುವ ಬ್ರಾಹ್ಮಣರೆಲ್ಲರೂ ನಾರದ ಋಷಿಗಳ ಬಳಿ ಕೇಳಿದರು. ನಾರದರೇ, ಮಹಾಭಾಗರೇ, ನೀವು ತತ್ತ್ವಜ್ಞರಾಗಿರುತ್ತೀರಿ. ಸನಾತನ ಧರ್ಮ ಯಾವುದೆಂಬುದನ್ನು ನಮಗೆ ತಿಳಿಸಿ.

ನಾಹಂ ದ್ವಿಜಾ ವಿಜಾನಾಮಿ ಕ್ವ ಹಿ ಗಚ್ಛಾಮ ಸಮ್ಮತಾಃ ।
ಇತಿ ತಾನಾಹ ಭಗವಾಂಸ್ತತಃ ಪ್ರಾಹ ಚ ಸ ದ್ವಿಜಾನ್ ॥೧೩॥

ನಾರದರು ನಾನೂ ಆ ತತ್ತ್ವವನ್ನು ತಿಳಿದಿರುವುದಿಲ್ಲ ಎಂದು ಹೇಳಿದಾಗ ಬ್ರಾಹ್ಮಣರೆಲ್ಲರೂ ಹಾಗಾದರೆ ನಾವು ಈ ತತ್ತ್ವವನ್ನು ತಿಳಿಯಲು ಎಲ್ಲಿಗೆ ಹೋಗಬೇಕು ಎಂದು ನಾರದರನ್ನೇ ಪ್ರತಿಯಾಗಿ ಪ್ರಶ್ನಿಸಿದರು. ಅವರನ್ನು ಕುರಿತು ಆ ಪ್ರಸಂಗದಲ್ಲಿ ಒಂದು ಅಶರೀರವಾಣಿ ಹೀಗೆ ಕೇಳಿಸಿತು.

ಕೋ ವಿದ್ವಾನಿಹ ಲೋಕೇಽಸ್ಮಿನ್ ನ ಮೋಹೋಽಮೃತಮದ್ಭುತಮ್ ।
ತಚ್ಚ ತೇ ಶುಶ್ರುವುರ್ವಾಕ್ಯಂ ಬ್ರಾಹ್ಮಣಾ ಹ್ಯಶರೀರಿಣಃ ॥೧೪॥

ಈ ಜಗತ್ತಿನಲ್ಲಿ ವಿದ್ವಾಂಸರು ಯಾರಿದ್ದಾರೆ? ಶಾಶ್ವತವಾದ, ಅದ್ಭುತವಾದ ವಿಚಾರದಲ್ಲಿ ಯಾರಿಗೆ ಮೋಹವು ಇರುವುದಿಲ್ಲ? ಎಂದು ಜಿಜ್ಞಾಸೆ ಮಾಡುತ್ತಿರಲು ಆ ಬ್ರಾಹ್ಮಣರ ನಡುವೆ ಒಂದು ಅಶರೀರವಾಣಿ ಕೇಳಿಸಿತು. ಎಲ್ಲರೂ ಆ ವಾಕ್ಯವನ್ನು ಕೇಳಿಸಿಕೊಂಡರು.

ಸನದ್ಧಾಮ ದ್ವಿಜಾ ಗತ್ವಾ ಪೃಚ್ಛಧ್ವಂ ಸ ಚ ವಕ್ಷ್ಯತಿ ॥೧೫॥

ಬ್ರಾಹ್ಮಣರೇ, ಸನತ್ಕುಮಾರನೆಂಬ ಬ್ರಾಹ್ಮಣನು ಇರುತ್ತಾನೆ. ಅವನ ಮನೆಗೆ ಹೋಗಿ ನಿಮ್ಮ ಮನಸ್ಸಿನಲ್ಲಿರುವ ಸಂಶಯವನ್ನು ಪ್ರಶ್ನಿಸಿರಿ. ಅವನು ನಿಮಗೆ ಉತ್ತರಿಸುತ್ತಾನೆ ಎಂದು ಅಶರೀರವಾಣಿಯು ನುಡಿಯಿತು.

ತಮಾಹ ಕಶ್ಚಿದ್ ದ್ವಿಜವರ್ಯಸತ್ತಮೋ
ವಿಭಾಂಡಕೋ ಮಂಡಿತವೇದರಾಶಿಃ ।

ಕಸ್ತ್ವಂ ಭವಾನರ್ಥವಿಭೇದಮಧ್ಯೇ
ನ ದೃಶ್ಯತೇ ವಾಕ್ಯಮುದೀರಯಂಶ್ಚ ॥೧೬॥

ಹೀಗೆ ಅಶರೀರವಾಣಿಯು ಕೇಳಿದ ಬಳಿಕ, ಆ ಗುಂಪಿನಲ್ಲಿ ವಾಸಿಸುತ್ತಿರುವ ಸಮಸ್ತ ವೇದಗಳ ಸಮುದಾಯವನ್ನು ಬಲ್ಲವನಾದ ವಿಭಾಂಡಕಮುನಿಯು ಆ ಅಶರೀರ ವಾಣಿಯನ್ನು ನುಡಿದ ಪುರುಷನನ್ನು ಕುರಿತು ಪ್ರಶ್ನಿಸುತ್ತಾರೆ- ನಾವೆಲ್ಲರೂ ಶಾಸ್ತ್ರಾರ್ಥ ನಿಮಿತ್ತದಿಂದ ಕಲಹ ಮಾಡುತ್ತಿರುವಾಗ ಮಧ್ಯದಲ್ಲಿ ಕಣ್ಣಿಗೆ ಕಾಣದಂತೆ ನುಡಿದ ನೀನು ಯಾರು? ನಮ್ಮ ಕಣ್ಣಿಗೇಕೆ ಕಾಣಿಸುತ್ತಿಲ್ಲ?

ಅಥಾಹೇದಂ ತಂ ಭಗವಾನ್ ಸನಂತಂ
ಮಹಾಮುನೇ ವಿದ್ಧಿ ಮಾಂ ಪಂಡಿತೋಽಸಿ ।
ಋಷಿಂ ಪುರಾಣಂ ಸತತೈಕರೂಪಂ
ಯಮಕ್ಷಯಂ ವೇದವಿದೋ ವದಂತಿ ॥೧೭॥

ಆ ಅದೃಶ್ಯ ಪುರುಷನು 'ಎಲೈ ಮಹರ್ಷಿಯೇ, ನೀನು ಸಮಸ್ತ ವೇದಗಳನ್ನು ತಿಳಿದವನು, ಪಂಡಿತನು. ವೇದಜ್ಞರು ಯಾವನನ್ನು ಏಕರೂಪನೆಂದು, ಅಕ್ಷಯನೆಂದು, ಪುರಾತನ ಋಷಿ ಎಂದು ಹೇಳುತ್ತಾರೋ ಅಂತಹ ಸನತ್ಕುಮಾರ ಋಷಿಯೇ ನಾನಾಗಿದ್ದೇನೆ' ಎಂದನು.

ಪುನಸ್ತಮಾಹೇದಮಸೌ ಮಹಾತ್ಮಾ
ಸ್ವರೂಪಸಂಸ್ಥಂ ವದ ಆಹ ಪಾರ್ಥ ।
ತ್ವಮೇಕೋಽಸ್ಮದೃಷಿಪುಂಗವಾಯ
ನಸತ್ಸ್ವರೂಪಮಥವಾ ಪುನಃ ಕಿಮ್ ॥೧೮॥

ಆಗ ವಿಭಾಂಡಕ ಮುನಿಗಳು ಪುನಃ ಹಾಗಿದ್ದರೆ ನಿನ್ನ ಸ್ವರೂಪ ಯಾವುದು? ನಿನ್ನ ಸ್ಥಿತಿಯು ಎಂತಹದ್ದು? ಎಲೈ ಮುನಿಸತ್ತಮನೇ, ಲೋಕಕ್ಕೆಲ್ಲ ನೀನೊಬ್ಬನೇ ಇರುವಿಯಷ್ಟೆ? ಈ ಕಾರಣಸ್ವರೂಪ ಸತ್ತೋ, ಅಸತ್ತೋ ? ನಿನಗಿಂತ ಬೇರೆಯೋ, ಒಂದೆಯೋ? ಯಾವ ವಿಧವಾಗಿದೆ? ತಿಳಿಸು.

ಅಥಾಹ ಗಂಭೀರತರಾನುವಾದಂ
ವಾಕ್ಯಂ ಮಹಾತ್ಮಾ ಹ್ಯಶರೀರ ಆದಿಃ ।

ನ ತೇ ಮುನೇ ಶ್ರೋತ್ರಮುಖೇಽಪಿ ಚಾಸ್ಯಂ
ನ ಪಾದಹಸ್ತೌ ಪ್ರಪದಾತ್ಮಕೇ ನ ॥೧೯॥

ಬಳಿಕ ಆ ಪುರುಷನು ಗಂಭೀರವಾಕ್ಯದಿಂದ- 'ಮಹರ್ಷಿಯೇ, ನನಗೆ ಕಣ್ಣು, ಮೂಗು, ಕಿವಿ, ಕೈ, ಕಾಲು, ಪಾದಾಗ್ರ, ಯಾವುದೂ ಇರುವುದಿಲ್ಲ. ನನ್ನ ಸ್ವರೂಪವೇ ಈ ರೀತಿಯಾಗಿದೆ' ಎಂದು ಹೇಳಿದನು.

ಬ್ರುವನ್ ಮುನೀನ್ ಸತ್ಯಮಥೋ ನಿರೀಕ್ಷ್ಯ
ಸ್ವಮಾಹ ವಿದ್ವಾನ್ ಮನಸಾ ನಿಗಮ್ಯ ।
ಋಷೇ ಕಥಂ ವಾಕ್ಯಮಿದಂ ಬ್ರವೀಷಿ
ನ ಚಾಸ್ಯ ಮಂತಾ ನ ಚ ವಿದ್ಯತೇ ಚೇತ್ ॥೨೦॥

ಆಗ ಋಷಿಗಳು- 'ಎಲೈ ಮಹಾತ್ಮನೇ, ಹಾಗಿದ್ದಲ್ಲಿ ನೀನು ಹೇಗೆ ಮಾತನಾಡುತ್ತಿರುವಿ? ನಿನಗೆ ಯೋಚಿಸಲು ಮನಸ್ಸೂ ಇಲ್ಲ. ಮನಸ್ಸಿನ ಭಾವನೆಯನ್ನು ತೋರಿಸುವ ಯೋಗ್ಯವಾದ ಅಂಗವೂ ಇಲ್ಲ. ಹೀಗಿದ್ದ ಮೇಲೆ ಮಾತುಗಳು ನಿನ್ನಿಂದ ಹೇಗೆ ಹೊರ ಹೊರಡುತ್ತವೆ?' ಎಂದರು.

ನ ಶುಶ್ರುವುಸ್ತತಸ್ತತ್ತು ಪ್ರತಿವಾಕ್ಯಂ ದ್ವಿಜೋತ್ತಮಾಃ ।
ನಿರೀಕ್ಷಮಾಣಾ ಆಕಾಶಂ ಪ್ರಹಸಂತಸ್ತತಸ್ತತಃ ॥೨೧॥

ಬ್ರಾಹ್ಮಣೋತ್ತಮರಿಗೆ ಮುಂದೆ ಪ್ರತ್ಯುತ್ತರವೇ ಕೇಳಿಸದೆ ಹೋಯಿತು. ಆಗ ಮುನಿಗಳು ಕೇವಲ ಆಕಾಶವನ್ನು ನೋಡುತ್ತಾ, ಒಬ್ಬರ ಮುಖವನ್ನು ಒಬ್ಬರು ನೋಡಿ ನಸುನಕ್ಕರು.

ಆಶ್ಚರ್ಯಮಿತಿ ಮತ್ವಾ ತೇ ಯಯುರ್ಹೈಮಂ ಮಹಾಗಿರಿಮ್ ।
ಸನತ್ಕುಮಾರಸಂಕಾಶಂ ಸಗಣಾ ಮುನಿಸತ್ತಮಾಃ ॥೨೨॥

ಇದೇನಾಶ್ಚರ್ಯವೆಂದು ತಮ್ಮಲ್ಲಿ ತಾವೇ ವಿಸ್ಮಿತರಾದರು. ಬಳಿಕ ಎಲ್ಲರೂ ಒಂದಾಗಿ ಸೇರಿ ಹಿಮಗಿರಿಯ ಹತ್ತಿರದಲ್ಲಿ ಇರುವಂಥ ಸನತ್ಕುಮಾರರು ಇದ್ದ ಸ್ಥಳಕ್ಕೆ ಹೋದರು.

ತಂ ಪರ್ವತಂ ಸಮಾರುಹ್ಯ ದದೃಶುರ್ಧ್ಯಾನಮಾಶ್ರಿತಾಃ ।
ಕುಮಾರಂ ದೇವಮರ್ಹಂತಂ ವೇದಪಾರಾವಿವರ್ಜಿತಮ್ ॥೨೩॥

ಕಸ್ತ್ವಂ ಭವಾನರ್ಥವಿಭೇದಮಧ್ಯೇ
ನ ದೃಶ್ಯತೇ ವಾಕ್ಯಮುದೀರಯಂಶ್ಚ ॥೧೬॥

ಹೀಗೆ ಅಶರೀರವಾಣಿಯು ಕೇಳಿದ ಬಳಿಕ, ಆ ಗುಂಪಿನಲ್ಲಿ ವಾಸಿಸುತ್ತಿರುವ ಸಮಸ್ತ ವೇದಗಳ ಸಮುದಾಯವನ್ನು ಬಲ್ಲವನಾದ ವಿಭಾಂಡಕಮುನಿಯು ಆ ಅಶರೀರ ವಾಣಿಯನ್ನು ನುಡಿದ ಪುರುಷನನ್ನು ಕುರಿತು ಪ್ರಶ್ನಿಸುತ್ತಾರೆ- ನಾವೆಲ್ಲರೂ ಶಾಸ್ತ್ರಾರ್ಥ ನಿಮಿತ್ತದಿಂದ ಕಲಹ ಮಾಡುತ್ತಿರುವಾಗ ಮಧ್ಯದಲ್ಲಿ ಕಣ್ಣಿಗೆ ಕಾಣದಂತೆ ನುಡಿದ ನೀನು ಯಾರು? ನಮ್ಮ ಕಣ್ಣಿಗೇಕೆ ಕಾಣಿಸುತ್ತಿಲ್ಲ?

ಅಥಾಹೇದಂ ತಂ ಭಗವಾನ್ ಸನಂತಂ
ಮಹಾಮುನೇ ವಿದ್ಧಿ ಮಾಂ ಪಂಡಿತೋಽಸಿ ।
ಋಷಿಂ ಪುರಾಣಂ ಸತತೈಕರೂಪಂ
ಯಮಕ್ಷಯಂ ವೇದವಿದೋ ವದಂತಿ ॥೧೭॥

ಆ ಅದೃಶ್ಯ ಪುರುಷನು 'ಎಲೈ ಮಹರ್ಷಿಯೇ, ನೀನು ಸಮಸ್ತ ವೇದಗಳನ್ನು ತಿಳಿದವನು, ಪಂಡಿತನು. ವೇದಜ್ಞರು ಯಾವನನ್ನು ಏಕರೂಪನೆಂದು, ಅಕ್ಷಯನೆಂದು, ಪುರಾತನ ಋಷಿ ಎಂದು ಹೇಳುತ್ತಾರೋ ಅಂತಹ ಸನತ್ಕುಮಾರ ಋಷಿಯೇ ನಾನಾಗಿದ್ದೇನೆ' ಎಂದನು.

ಪುನಸ್ತಮಾಹೇದಮಸೌ ಮಹಾತ್ಮಾ
ಸ್ವರೂಪಸಂಸ್ಥಂ ವದ ಆಹ ಪಾರ್ಥ ।
ತ್ವಮೇಕೋಽಸ್ಮದೃಷಿಪುಂಗವಾಯ
ನಸತ್ಸ್ವರೂಪಮಥವಾ ಪುನಃ ಕಿಮ್ ॥೧೮॥

ಆಗ ವಿಭಾಂಡಕ ಮುನಿಗಳು ಪುನಃ ಹಾಗಿದ್ದರೆ ನಿನ್ನ ಸ್ವರೂಪ ಯಾವುದು? ನಿನ್ನ ಸ್ಥಿತಿಯು ಎಂತಹದ್ದು? ಎಲೈ ಮುನಿಸತ್ತಮನೇ, ಲೋಕಕ್ಕೆಲ್ಲ ನೀನೊಬ್ಬನೇ ಇರುವಿಯಷ್ಟೆ? ಈ ಕಾರಣಸ್ವರೂಪ ಸತ್ತೋ, ಅಸತ್ತೋ ? ನಿನಗಿಂತ ಬೇರೆಯೋ, ಒಂದೆಯೋ? ಯಾವ ವಿಧವಾಗಿದೆ? ತಿಳಿಸು.

ಅಥಾಹ ಗಂಭೀರತರಾನುವಾದಂ
ವಾಕ್ಯಂ ಮಹಾತ್ಮಾ ಹ್ಯಶರೀರ ಆದಿಃ ।

ನ ತೇ ಮುನೇ ಶ್ರೋತ್ರಮುಖೇಽಪಿ ಚಾಸ್ಯಂ
ನ ಪಾದಹಸ್ತೌ ಪ್ರಪದಾತ್ಮಕೇ ನ ॥೧೯॥

ಬಳಿಕ ಆ ಪುರುಷನು ಗಂಭೀರವಾಕ್ಯದಿಂದ- 'ಮಹರ್ಷಿಯೇ, ನನಗೆ ಕಣ್ಣು, ಮೂಗು, ಕಿವಿ, ಕೈ, ಕಾಲು, ಪಾದಾಗ್ರ, ಯಾವುದೂ ಇರುವುದಿಲ್ಲ. ನನ್ನ ಸ್ವರೂಪವೇ ಈ ರೀತಿಯಾಗಿದೆ' ಎಂದು ಹೇಳಿದನು.

ಬ್ರುವನ್ ಮುನೀನ್ ಸತ್ಯಮಥೋ ನಿರೀಕ್ಷ್ಯ
ಸ್ವಮಾಹ ವಿದ್ವಾನ್ ಮನಸಾ ನಿಗಮ್ಯ ।
ಋಷೇ ಕಥಂ ವಾಕ್ಯಮಿದಂ ಬ್ರವೀಷಿ
ನ ಚಾಸ್ಯ ಮಂತಾ ನ ಚ ವಿದ್ಯತೇ ಚೇತ್ ॥೨೦॥

ಆಗ ಋಷಿಗಳು- 'ಎಲೈ ಮಹಾತ್ಮನೇ, ಹಾಗಿದ್ದಲ್ಲಿ ನೀನು ಹೇಗೆ ಮಾತನಾಡುತ್ತಿರುವಿ? ನಿನಗೆ ಯೋಚಿಸಲು ಮನಸ್ಸೂ ಇಲ್ಲ. ಮನಸ್ಸಿನ ಭಾವನೆಯನ್ನು ತೋರಿಸುವ ಯೋಗ್ಯವಾದ ಅಂಗವೂ ಇಲ್ಲ. ಹೀಗಿದ್ದ ಮೇಲೆ ಮಾತುಗಳು ನಿನ್ನಿಂದ ಹೇಗೆ ಹೊರ ಹೊರಡುತ್ತವೆ?' ಎಂದರು.

ನ ಶುಶ್ರುವುಸ್ತತಸ್ತತ್ತು ಪ್ರತಿವಾಕ್ಯಂ ದ್ವಿಜೋತ್ತಮಾಃ ।
ನಿರೀಕ್ಷಮಾಣಾ ಆಕಾಶಂ ಪ್ರಹಸಂತಸ್ತತಸ್ತತಃ ॥೨೧॥

ಬ್ರಾಹ್ಮಣೋತ್ತಮರಿಗೆ ಮುಂದೆ ಪ್ರತ್ಯುತ್ತರವೇ ಕೇಳಿಸದೆ ಹೋಯಿತು. ಆಗ ಮುನಿಗಳು ಕೇವಲ ಆಕಾಶವನ್ನು ನೋಡುತ್ತಾ, ಒಬ್ಬರ ಮುಖವನ್ನು ಒಬ್ಬರು ನೋಡಿ ನಸುನಕ್ಕರು.

ಆಶ್ಚರ್ಯಮಿತಿ ಮತ್ವಾ ತೇ ಯಯುರ್ಹೈಮಂ ಮಹಾಗಿರಿಮ್ ।
ಸನತ್ಕುಮಾರಸಂಕಾಶಂ ಸಗಣಾ ಮುನಿಸತ್ತಮಾಃ ॥೨೨॥

ಇದೇನಾಶ್ಚರ್ಯವೆಂದು ತಮ್ಮಲ್ಲಿ ತಾವೇ ವಿಸ್ಮಿತರಾದರು. ಬಳಿಕ ಎಲ್ಲರೂ ಒಂದಾಗಿ ಸೇರಿ ಹಿಮಗಿರಿಯ ಹತ್ತಿರದಲ್ಲಿ ಇರುವಂಥ ಸನತ್ಕುಮಾರರು ಇದ್ದ ಸ್ಥಳಕ್ಕೆ ಹೋದರು.

ತಂ ಪರ್ವತಂ ಸಮಾರುಹ್ಯ ದದೃಶುರ್ಧ್ಯಾನಮಾಶ್ರಿತಾಃ ।
ಕುಮಾರಂ ದೇವಮರ್ಹಂತಂ ವೇದಪಾರಾವಿವರ್ಜಿತಮ್ ॥೨೩॥

ತತಃ ಸಂವತ್ಸರೇ ಪೂರ್ಣೇ ಪ್ರಕೃತಿಸ್ಥಂ ಮಹಾಮುನಿಮ್ ।
ಸನತ್ಕುಮಾರಂ ರಾಜೇಂದ್ರ ಪ್ರಣಿಪತ್ಯ ದ್ವಿಜಾಃ ಸ್ಥಿತಾಃ ॥೨೪॥

ಆ ಪರ್ವತದಲ್ಲಿ ಕೇವಲ ಧ್ಯಾನನಿಷ್ಠರಾಗಿ, ವೇದಾಂತವಿಚಾರದಲ್ಲಿಯೇ ಮಗ್ನರಾಗಿರುವ ಸನತ್ಕುಮಾರ ಮುನಿಯನ್ನು ಕಂಡರು. ಬಳಿಕ ಅವರೆಲ್ಲರೂ ಒಂದು ವರ್ಷ ಕಾಲದ ತನಕ ಅವನ ಎಚ್ಚರವನ್ನೇ ನಿರೀಕ್ಷಿಸುತ್ತಾ ಆ ಸುಂದರವಾದ ಪ್ರಕೃತಿಯ ನಡುವೆ ಇರುವ ಸನತ್ಕುಮಾರನನ್ನು ಸಾಷ್ಟಾಂಗ ನಮಸ್ಕರಿಸಿ ಅವನ ಬಳಿ ನಿಂತರು.

ಆಗತಾನ್ ಭಗವಾನಾಹ ಜ್ಞಾನನಿರ್ಧೂತಕಲ್ಮಷಃ ।
ಜ್ಞಾತಂ ಮಯಾ ಮುನಿಗಣಾ ವಾಕ್ಯಂ ತದಶರೀರಿಣಃ ।
ಕಾರ್ಯಮದ್ಯ ಯಥಾಕಾಮಂ ಪೃಚ್ಛಧ್ವಂ ಮುನಿಪುಂಗವಾಃ ॥೨೫॥

ತಪಸ್ಸಿನಿಂದ ಸಮಸ್ತ ಪಾಪಗಳನ್ನು ಸುಟ್ಟುಕೊಂಡಿರುವ ಸನತ್ಕುಮಾರರು ಆ ಬ್ರಾಹ್ಮಣರನ್ನು ನೋಡಿ, ಮುನೀಂದ್ರರೇ ನೀವು ಕೇಳಿದ ಅಶರೀರ ಮಾತಿನ ವಿಚಾರವನ್ನು ನಾನು ಬಲ್ಲೆನು. ನಿಮಗೆ ಯಾವ ಸಂದೇಹವಿದ್ದರೂ ನನ್ನಲ್ಲಿ ಕೇಳಬಹುದು ಎಂದು ಹೇಳಿದರು.

ತಮಬ್ರುವನ್ ಪ್ರಾಂಜಲಯೋ ಮಹಾಮುನಿಂ
ದ್ವಿಜೋತ್ತಮಂ ಜ್ಞಾನನಿಧಿಂ ಸುನಿರ್ಮಲಮ್ ।
ಕಥಂ ವಯಂ ಜ್ಞಾನನಿಧಿಂ ವರೇಣ್ಯಂ
ಯಕ್ಷ್ಯಾಮಹೇ ವಿಶ್ವರೂಪಂ ಕುಮಾರ ॥೨೬॥

ಜ್ಞಾನನಿಧಿಯೂ, ಮಹಾತ್ಮನೂ ಆದ ಬ್ರಾಹ್ಮಣನ ಮುಂದೆ ಮಹರ್ಷಿಗಳು ಕೈಮುಗಿದು ನಿಂತು ಹೀಗೆ ಹೇಳಿದರು- ಮಹಾತ್ಮನೇ, ವಿಶ್ವಸ್ವರೂಪನಾದ ಈಶ್ವರನನ್ನು ನಾವು ಉಪಾಸಿಸುವುದು ಹೇಗೆ?

ಪ್ರಸೀದ ನೋ ಭಗವನ್ ಜ್ಞಾನಲೇಶಂ
ಮಧುಪ್ರಯಾತಾಯ ಸುಖಾಯ ಸಂತಃ ।
ಯತ್ ತತ್ಪದಂ ವಿಶ್ವರೂಪಂ ಮಹಾಮುನೇ
ತದ್ ಬ್ರೂಹಿ ಕಿಂ ಕುತ್ರ ಮಹಾನುಭಾವ ॥ ೨೭॥

ಈ ವಿಚಾರದಲ್ಲಿ ಜ್ಞಾನಪ್ರಸಾದವನ್ನು ನಮಗೆ ನೀಡಬೇಕು. ಸಾಧುಗಳು ಜೇನಿನಂತೆ ಪ್ರಿಯವಾದ ಮೋಕ್ಷಸುಖಕ್ಕಾಗಿ, ವಿಶ್ವರೂಪಿಯಾದ ಯಾವ ರೀತಿಯಾದ ವಸ್ತುವನ್ನು ಹೊಂದಲು ಅಪೇಕ್ಷಿಸುತ್ತಾರೋ ಆ ಪರವಸ್ತುವಿನ ಬಗ್ಗೆ ಮಹಾನುಭಾವನೇ, ನಮಗೆ ತಿಳಿಸು.

ಸ ತೈರ್ವಿಯುಕ್ತೋ ಭಗವಾನ್ ಮಹಾತ್ಮಾ
ಯಃ ಸಂಗವಾನ್ ಸತ್ಯವಿತ್ ತಚ್ಛೃಣುಷ್ವ ।
ಅನೇಕ ಸಾಹಸ್ರಕಲೇಷು ಚೈವ
ಪ್ರಸನ್ನಧಾತುಂ ಚ ಶುಭಾಜ್ಞಯಾ ಸತ್ ॥೨೮॥

ಆ ಸನತ್ಕುಮಾರರಾದರೂ ಸಾವಿರಾರು ಕಲೆಗಳನ್ನು ಅರಿತಿದ್ದರು. ಸತ್ಯವಾದ ವಸ್ತುವನ್ನು ತಿಳಿದಿದ್ದರು. ಅದರಲ್ಲಿಯೇ ದೃಢವಾದ ಬುದ್ಧಿಯುಳ್ಳವರಾಗಿದ್ದರು. ಅಂತಹ ಮಹಾತ್ಮರಾದ ಸನತ್ಕುಮಾರರು ಪರಮಾತ್ಮನ ಅನುಜ್ಞೆಯನ್ನು ಪ್ರಾರ್ಥನೆ ಮಾಡಿ ಋಷಿಗಳನ್ನುದ್ದೇಶಿಸಿ- 'ಮುನೀಂದ್ರರೇ, ಆ ಪರಮಾತ್ಮನ ವಿಷಯವನ್ನು ತಿಳಿಸುತ್ತೇನೆ, ಕೇಳಿರಿ'.

ಯಥಾಹ ಪೂರ್ವಂ ಯುಷ್ಮಾಸು ಹ್ಯಶರೀರೀ ದ್ವಿಜೋತ್ತಮಾಃ ।
ತಥೈವ ವಾಕ್ಯಂ ತತ್ಸತ್ಯಮಜಾನಂತಶ್ಚ ಕೀರ್ತಿತಮ್ ॥೨೯॥

ಹಿಂದೆ ಅದೃಶ್ಯ ಪುರುಷನು ಸೂಕ್ಷ್ಮವಾಗಿ ನಿಮಗೆ ಯಾವ ವಿಚಾರವನ್ನು ಸೂಚಿಸಿದ್ದನೋ ಅದೆಲ್ಲವೂ ಸತ್ಯವಾಗಿದೆ. ಅವನು ಕೊಟ್ಟ ಉತ್ತರವು ನಿಮಗೆ ಅರ್ಥವಾಗಿಲ್ಲವೆಂದು ತೋರುತ್ತದೆ.

ಅಹನ್ಯಹನಿ ಪಾಕವಿಶೇಷೋ ದೃಶ್ಯತೇ ।
ತೇನ ಮಿಶ್ರಂ ಸರ್ವಂ ಮಿಶ್ರಯತೇ ।
ಯಥಾ ಮಂಡಲೀ ದೃಶಿ ಸರ್ವೇಷಾಮಸ್ತಿ ನಿದರ್ಶನಮ್ ।
ಅಸ್ತಿ ಚಕ್ಷುಷ್ಮತಾಮಸ್ತಿ ಜ್ಞಾನೇ ಸ್ವರೂಪಂ ಪಶ್ಯತಿ ।
ತಥಾ ದರ್ಪಣಾಂತಂ ನಿದರ್ಶನಮ್ ॥೩೦॥

ಈ ಲೋಕಕ್ಕೆ ಪ್ರಧಾನವಾದ ಕಾರಣವೊಂದಿದೆ. ಅದನ್ನು ತಿಳಿಯುವುದು ಹೇಗೆ ಎಂದು ನೀವು ಪ್ರಶ್ನಿಸಬಹುದು. ಲೋಕದಲ್ಲಿ ಪ್ರತಿದಿನವೂ ಈ ಶರೀರದಲ್ಲಿ ಅಥವಾ

ಧನ-ಧಾನ್ಯ-ಫಲಾದಿಗಳಲ್ಲಿ ಪರಿಪಾಕವಿಶೇಷವು ಕಾಣಿಸುತ್ತಿದೆ. ಇಂತಹ ಪಾಕದಿಂದಲೇ ಜಗತ್ತನ್ನು ನಾವು ಕಾಣುತ್ತಿದ್ದೇವೆ. ಇಂತಹ ಪಾಕಕ್ಕೆ ಕಾರಣವಾದದ್ದೇ ಕಾರಣವಸ್ತುವೆನಿಸುತ್ತದೆ. ಕಣ್ಣುಳ್ಳ ಪುರುಷರಿಗೆ ಪದಾರ್ಥಗಳನ್ನು ಕಣ್ಣು ನೋಡುವಾಗ ಆ ಕಣ್ಣಿನಲ್ಲಿ ಸಾಕ್ಷಿಭೂತನಾದ ಪುರುಷನು ಬೇರೆಯಾಗಿರುವಂತೆ ಈ ಲೋಕವನ್ನೆಲ್ಲ ನಿಯಮಿಸುವ ಪುರುಷನು ಅಂತರ್ಯಾಮಿಯಾಗಿ ಬೇರೆಯಾಗಿದ್ದಾನೆ. ಜ್ಞಾನಿಯಾದವನು ಜ್ಞಾನಕ್ಕೆ ವಿಷಯನಾದ ಭಗವಂತನ ಯಾವ ಸ್ವರೂಪವಿದೆಯೋ ಆ ಸ್ವತಂತ್ರನಾದ ಪರಮಾತ್ಮನ ರೂಪವನ್ನೇ ಈ ಜಗತ್ತಿನಲ್ಲಿ ಕಾಣುತ್ತಾನೆ. ಕನ್ನಡಿಯಲ್ಲಿ ಪ್ರತಿಬಿಂಬವು ಕಂಡಾಗ ಅವಿವೇಕಿಯಾದವನು ಪ್ರತಿಬಿಂಬವನ್ನು ಮಾತ್ರ ಕಾಣುತ್ತಾನೆ. ವಿವೇಕಿಯಾದವನು ಪ್ರತಿಬಿಂಬಕ್ಕೆ ನಿಯಾಮಕವಾದ ಬಿಂಬಭೂತವಾದ ಮುಖವನ್ನು ನೋಡುತ್ತಾನೆ. ಇದರಂತೆ ಜಗತ್ತಿನಲ್ಲಿ ಅವಿವೇಕಿ ಪುರುಷರು ಜಗತ್ತನ್ನು ಮಾತ್ರ ಕಾಣುತ್ತಾರೆ. ಅಲ್ಲಿಯೇ ಕಾರಣಗಳನ್ನು ಹುಡುಕುವ ಪ್ರಯತ್ನವನ್ನು ಮಾಡುತ್ತಾರೆ. ವಿವೇಕಿಯಾದ ಜ್ಞಾನಿಗಳು ಜಗತ್ತಿಗೆಲ್ಲ ನಿಯಾಮಕನಾದ, ಬಿಂಬರೂಪಿಯಾದ ಪರಮಾತ್ಮನನ್ನು ಕಾಣುತ್ತಾರೆ.

ಸ ಏವ ಸರ್ವಂ ವಿದ್ವಾನ್ನ ಬಿಭೇತಿ ನ ಗಚ್ಛತಿ । ಕುತ್ರಾಹಂ ಕಸ್ಯ ನಾಹಂ
ಕೇನ ಕೇನೇತ್ಯವರ್ತಮಾನೋ ವಿಜಾನಾತಿ ॥ ೩೧॥

ಸಮಗ್ರ ಈ ಜಗತ್ತೆಲ್ಲವನ್ನು ಅರ್ಥ ಮಾಡಿಕೊಂಡಿರುವ ಆ ಪರಮಾತ್ಮನೊಬ್ಬನು ಭಯವನ್ನು ಹೊಂದಲಾರ. ಅವನು ವ್ಯಾಪ್ತನಾಗಿರುವುದರಿಂದ ಎಲ್ಲಿಗೂ ಹೋಗಲಾರ. 'ಕಿಂಸ್ವಿದಾಸೀದಧಿಷ್ಠಾನಮ್' ಎಂಬ ಶ್ರುತಿಯಂತೆ ಭಗವಂತನು ಯಾವ ಆಧಾರದಲ್ಲಿದ್ದಾನೆ ಎಂದರೆ ಜಗತ್ತಿಗೆ ಆಧಾರನಾದ ಇವನಿಗೆ ಯಾವ ಆಧಾರವೂ ಇಲ್ಲ. 'ನ ಋತೇ ತ್ವತ್ಕ್ರಿಯತೇ ಕಿಂಚನ' ಎಂಬ ಶ್ರುತಿಯಂತೆ ಜಗತ್ತನ್ನೆಲ್ಲ ನಿಯಮಿಸುವ ಅವನಿಗೆ ಯಾವನೂ ನಿಯಾಮಕನಿರುವುದಿಲ್ಲ. 'ಆರಂಭಣಂ ಕತಮತ್ಸ್ವಿತ್' ಎಂಬ ಶ್ರುತಿಯಂತೆ ಯಾವ ಯಾವ ಸಾಧನಗಳನ್ನು ಉಪಯೋಗಿಸಿಕೊಂಡು ಜಗತ್ತನ್ನು ಸೃಷ್ಟಿಸುತ್ತಾನೆ. ಅರ್ಥಾತ್ ಯಾರ ಅವಲಂಬನೆಯು ಇಲ್ಲದೆ ಸ್ವತಂತ್ರನಾಗಿ ಭಗವಂತನು ಆಯಾ ಪದಾರ್ಥಗಳನ್ನು ನೆಪ ಮಾಡಿಕೊಂಡು ಜಗತ್ತನ್ನು ಸೃಷ್ಟಿಸುತ್ತಾನೆ. ಈ ರೀತಿಯಾಗಿಯೇ ಭಗವಂತನು ಜಗತ್ತಿನ ಬಗ್ಗೆ ನಿತ್ಯ ತಿಳಿದಿರುವುದರಿಂದ ಅವನು ಹೆದರುವುದಿಲ್ಲ.

ಸ ಯುಗತೋ ವ್ಯಾಪೀ । ಸ ಪೃಥಕ್ ಸ್ಥಿತಃ । ತದಪರಮಾರ್ಥಮ್ ॥

ಆ ಭಗವಂತನು ಜಗತ್ತಿನ ಬಲ ಬದಿಯಲ್ಲಿ, ಎಡ ಬದಿಯಲ್ಲಿ, ಎಲ್ಲಕಡೆಯಲ್ಲಿಯೂ ವ್ಯಾಪಿಸಿದ್ದಾನೆ. ಸರ್ವತ್ರ ವ್ಯಾಪ್ತನಾದವನು. ಆ ಭಗವಂತನೇ ಪ್ರತ್ಯೇಕವಾಗಿ ಜೀವ-ಜಡಾತ್ಮಕವಾದ ಪ್ರಪಂಚಕ್ಕಿಂತ ಅತ್ಯಂತ ಭಿನ್ನನಾಗಿ ಇದ್ದಾನೆ. ಆ ಭಗವಂತನ ದೆಸೆಯಿಂದ ಬೇರೆಯಾದ ಜಗತ್ತು ತನ್ನ ಪುರುಷಾರ್ಥವಶದಿಂದಲೇ ಹುಟ್ಟಿರುವುದಿಲ್ಲ. ಭಗವಂತನಂತೆ ಜಗತ್ತು ಪೂರ್ಣವಾಗಿಯೂ ಇರುವುದಿಲ್ಲ.

ಯಥಾ ವಾಯುರೇಕಃ ಸನ್ ಬಹುಧೇರಿತಃ । ಆಶ್ರಯವಿಶೇಷೋ ವಾ ಯಸ್ಯಾಶ್ರಯೋ ವಾ । ಯಥಾವದ್ ದ್ವಿಜೇ ಮೃಗೇ ವ್ಯಾಘ್ರೇ ಚ ಮನುಜೇ ವೇಣುಸಂಶ್ರಯೋ ಭಿದ್ಯತೇ ವಾಯುರಥೈಕಃ । ಆತ್ಮಾ ತಥಾಸೌ ಪರಮಾತ್ಮಾಸಾವನ್ಯ ಇವ ಭಾತಿ ॥೩೩॥

ಭಗವಂತನು ವಾಯುವಿನಂತೆ ಇದ್ದಾನೆ. ವಾಯುವು ಒಂದೇ ಆಗಿದ್ದರೂ ಅನೇಕ ರೂಪಗಳನ್ನು ತಾಳಿ ಹೇಗೆ ಪ್ರೇರಿಸುತ್ತದೋ ಅದರಂತೆ ಒಬ್ಬನೇ ಆದ ಭಗವಂತನು ಅನಂತ ಭಿನ್ನತೆಯಿಂದ ಕೂಡಿದ ಈ ಜಗತ್ತಿನ ಒಳಗಡೆ ಅಂತರ್ಯಾಮಿಯಾಗಿ ಪ್ರೇರಕನಾಗಿದ್ದಾನೆ. ಪಕ್ಷಿಗಳಲ್ಲಿ, ಮೃಗಗಳಲ್ಲಿ, ವ್ಯಾಘ್ರಗಳಲ್ಲಿ, ಮನುಷ್ಯರಲ್ಲಿ, ಬಿದಿರಿನಲ್ಲಿ ಸೇರಿರುವ ಒಂದೇ ಆದ ವಾಯುವು ಆಯಾ ಸ್ಥಾನಗಳಿಂದ ಭಿನ್ನವಾಗಿ ಹೇಗೆ ತೋರುತ್ತದೋ ಅದರಂತೆ ಒಬ್ಬನೇ ಆದ ಪರಮಾತ್ಮನು ಜಗತ್ತಿನ ಅಂತರ್ಯಾಮಿಯಾಗಿ ಇದ್ದಾನೆ. ಬೇರೆ ಬೇರೆಯವರಲ್ಲಿ ವ್ಯಾಪಾರ ಮಾಡುವಾಗ ಭಿನ್ನನಂತೆ ತೋರುತ್ತಾನೆ. ಭಗವಂತನ ಅಂತರ್ಯಾಮಿ ರೂಪಗಳಿಗೆ ಭೇದವಿರುವುದಿಲ್ಲ.

ಏವಮಾತ್ಮಾ ಸ ಏವ ಗಚ್ಛತಿ ಸರ್ವಮಾತ್ಮಾಪಶ್ಯನ್
ಶೃಣೋತಿ ನ ಜಿಘ್ರತಿ ನ ಭಾಷತೇ ॥೩೪॥

ಈ ವಾಯುವಿನಂತೆ ಜಗತ್ತಿನ ಅಂತರ್ಯಾಮಿಯಾದ ಪರಮಾತ್ಮನು ಎಲ್ಲ ಕಡೆಯೂ ಸಂಚರಿಸುತ್ತಾನೆ, ಎಲ್ಲವನ್ನೂ ನೋಡುತ್ತಾನೆ. ಆದರೆ ಜಗತ್ತಿನ ಪುರುಷರಂತೆ ಕೆಟ್ಟದ್ದನ್ನು ನೋಡುವುದಿಲ್ಲ. ಎಲ್ಲವನ್ನೂ ಕೇಳುತ್ತಾನೆ, ಆದರೆ ಕೆಟ್ಟದ್ದನ್ನು ಕೇಳುವುದಿಲ್ಲ. ದುರ್ಗಂಧವನ್ನು ಆಘ್ರಾಣಿಸುವುದಿಲ್ಲ. ದುರ್ಜನರ ಜೊತೆ ಮಾತನಾಡುವುದಿಲ್ಲ.

ಚಕ್ರೇಽಸ್ಯ ತಂ ಮಹಾತ್ಮಾನಂ ಪರಿತೋ ದಶ ರಶ್ಮಯಃ ।
ವಿನಿಷ್ಕ್ರಮ್ಯ ಯಥಾ ಸೂರ್ಯಮನುಗಚ್ಛಂತಿ ತಂ ಪ್ರಭುಮ್ ॥೩೫॥

ಸುದರ್ಶನ ಚಕ್ರದಿಂದ ಹೊರಹೊಮ್ಮಿದ ಅನೇಕ ಕಿರಣಗಳು ಸೂರ್ಯನನ್ನೇ ಅನುಸರಿಸಿ ಹೋಗುವಂತೆ ಜೀವರ ಹತ್ತು ಇಂದ್ರಿಯಗಳು ಆ ಪರಮಾತ್ಮನನ್ನು ಅನುಸರಿಸಿ ಹೋಗುತ್ತವೆ.

ದಿನೇ ದಿನೇಽಸ್ತಮಭ್ಯೇತಿ ಪುನರುದ್ಗಚ್ಛತೇ ದಿಶಃ ।
ತಾವುಭೌ ನ ರವೌ ಚಾಸ್ತಾಂ ತಥಾ ವಿತ್ತ ಶರೀರಿಣಮ್ ॥೩೬॥

ಪ್ರತಿದಿವಸವೂ ಸೂರ್ಯನು ಅಸ್ತಮಾನ ಹೊಂದುತ್ತಾನೆ. ಪುನಃ ದಿಕ್ಕುಗಳಲ್ಲಿ ಉದಯಿಸುತ್ತಾನೆ. ಈ ಉದಯಾಸ್ತಮಾನಗಳು ಸೂರ್ಯನಲ್ಲಿ ಇರುವುದಿಲ್ಲ. ಅವನು ನಿತ್ಯವೂ ಉದಿತನಾಗಿಯೇ ಇರುತ್ತಾನೆ. ಮನುಷ್ಯರ ದೃಷ್ಟಿಯಿಂದ ಈ ಉದಯಾಸ್ತಮಾನಗಳು ಕಾಣಿಸುತ್ತವೆ. ಸೂರ್ಯನು ಅಸ್ತಮಾನವಾಗುವುದೂ ಇಲ್ಲ, ಉದಯಿಸುವುದೂ ಇಲ್ಲ. ಒಂದೇ ರೀತಿಯಲ್ಲಿ ಇರುತ್ತಾನೆ. ಇದರಂತೆ ಜೀವರು ಹುಟ್ಟು-ಸಾವುಗಳನ್ನು ಪಡೆಯುತ್ತಿದ್ದರೂ ಪರಮಾತ್ಮನು ನಿರಂತರವೂ ಒಂದೇ ರೀತಿ ಇರುತ್ತಾನೆ. ಆದ್ದರಿಂದ ಈ ಶರೀರದಲ್ಲಿ ಅಂತರ್ಯಾಮಿಯಾದವನು ನಾರಾಯಣನೆಂದು ತಿಳಿಯಿರಿ.

ಪತಿತೇ ವಿತ್ತ ವಿಪ್ರೇಂದ್ರಾಃ ಭಕ್ಷಣೇ ಚರಣೇ ಪರಃ ।
ಊರ್ಧ್ವಮೇಕಸ್ತಥಾಧಸ್ತಾದೇಕಸ್ತಿಷ್ಠತಿ ಚಾಪರಃ ॥೩೭॥

ಬ್ರಾಹ್ಮಣರೇ, ಜೀವರಲ್ಲಿ ಪತನ-ಭಕ್ಷಣ-ಸಂಚರಣ-ಊರ್ಧ್ವಗಮನ-ಅಧೋಗಮನ ಎಂಬ ಆರು ಅಲೆಗಳಿವೆ. ಈ ಆರು ಅಲೆಗಳನ್ನು ಜೀವರಲ್ಲಿ ನಿಂತು ಭಗವಂತನೇ ಪ್ರೇರಿಸುತ್ತಾನೆ. ಭಗವಂತನನ್ನು ಹೊರತು ಬೇರೆ ಯಾರೂ ಪ್ರೇರಕರು ಸುಮ್ಮನಿರುವ ಈ ಜೀವನಿಗೆ ಇರುವುದಿಲ್ಲ.

ಹಿರಣ್ಯಸದನಂ ಜ್ಞೇಯಂ ಸಮೇತ್ಯ ಪರಮಂ ಪದಮ್ ।
ಆತ್ಮನಾ ಹ್ಯಾತ್ಮದೀಪಂ ತಮಾತ್ಮನಿ ಹ್ಯಾತ್ಮಪೂರುಷಮ್ ॥೩೮॥

ವಿಪ್ರೇಂದ್ರರೇ, ಭಗವಂತನನ್ನು ಜೀವರು ಸುಖಸ್ವರೂಪಿ ಎಂದು ತಿಳಿಯಬೇಕು. ಅಥವಾ ಕಿರೀಟಾದಿ ಅಲಂಕಾರಕ್ಕೆ ಅರ್ಹವಾದ ಸುವರ್ಣವೇ ಸದನವಾಗಿ ಉಳ್ಳವನು ಎಂದು ತಿಳಿಯಬೇಕು. ಜೀವರನ್ನೆಲ್ಲ ಹಿರಣ್ಯನಂತೆ ಬೆಳಗುವವನು ಇವನೇ ಆಗಿದ್ದಾನೆ. ಸಮಸ್ತ ಜೀವರ ಅಂತರ್ಯಾಮಿ ಪುರುಷನಾಗಿದ್ದಾನೆ. ಇಂತಹ ಪರಮಾತ್ಮನನ್ನು ಹೃದಯದಲ್ಲಿ ಕಂಡು ಪರಮಪದವನ್ನು ಹೊಂದಬೇಕು.

ಸಂಚಿತಂ ಸಂಚಿತಂ ಪೂರ್ವಂ ಭ್ರಮರೋ ವರ್ತತೇ ಭ್ರಮನ್ ।
ಯೋಽಭಿಮಾನೀವ ಜಾನಾತಿ ನ ಮುಹ್ಯತಿ ನ ಹೀಯತೇ ॥೩೯॥

ದುಂಬಿಯು ಮಧುವನ್ನು ಪುನಃ ಪುನಃ ಸಂಗ್ರಹಿಸುತ್ತಾ ಸಂಗ್ರಹಿಸುತ್ತಾ ಆ ಮಧುವಿನಲ್ಲೇ ಆಸಕ್ತವಾಗಿರುತ್ತದೆ. ತಾನು ಮಧುವನ್ನು ಸಂಗ್ರಹಿಸಿದ ಸ್ಥಳಗಳನ್ನು ಸರಿಯಾಗಿ ಅರಿತಿರುತ್ತದೆ. ದುಂಬಿಯಂತೆ ಜೀವರಿಗೆ ನಿಯಾಮಕನಾದ ಭಗವಂತನು ಎಲ್ಲ ಜೀವರ, ಜಗತ್ತಿನ, ಜಡಗಳ ಸ್ವರೂಪವನ್ನು ತಿಳಿದಿರುತ್ತಾನೆ. ಅವನಿಗೆ ಎಂದಿಗೂ ಮೋಹವಿಲ್ಲ. ಎಂದಿಗೂ ನಾಶವಿಲ್ಲ.

ನ ಚಕ್ಷುಷಾ ಪಶ್ಯತಿ ಕಶ್ಚನೈನಂ
ಹೃದಾ ಮನೀಷಾ ಪಶ್ಯತಿ ರೂಪಮಸ್ಯ ।
ನ ಶುಕ್ಲಂ ನ ಕೃಷ್ಣಂ ಪರಮಾರ್ಥಭಾವಂ
ಗುಹಾಶಯಂ ಜ್ಞಾನದೇವೀಕರಸ್ಥಮ್ ॥೪೦॥

ಈ ಭಗವಂತನನ್ನು ಜಡವಾದ ಕಣ್ಣಿನಿಂದ ಯಾರೂ ನೋಡಲಾರರು. ಈ ಜಡವಾದ ಬುದ್ಧಿಗೂ ಅವನು ನಿಲುಕನು. ಅವನು ಪ್ರಕೃತಿಗೆ ಸಂಬಂಧಿಸಿದಂತೆ ಶುಕ್ಲ-ಕೃಷ್ಣ ರೂಪಗಳಿಂದ ಕೂಡಿದವನಲ್ಲ. ಸಮಸ್ತ ಜೀವರ ಅಂತರ್ಯಾಮಿಯಾಗಿ ಅವರ ಹೃದಯಗುಹೆಯಲ್ಲಿರುವ ಭಗವಂತನ ಪರಮಾರ್ಥ ಸ್ವರೂಪವನ್ನು, ಜ್ಞಾನದೇವಿಯ ಕೈಯಲ್ಲಿರುವ ಭಗವಂತನನ್ನು ಅರ್ಥಮಾಡಿಕೊಳ್ಳಬೇಕು.

ಬ್ರಾಹ್ಮಣಸ್ಯ ನ ಸಾದೃಶ್ಯೇ ವರ್ತತೇ ಸೋಽಪಿ ಕಿಂ ಪುನಃ ।
ಇಜ್ಯತೇ ಯಸ್ತು ಮಂತ್ರೇಣ ಯಜಮಾನೋ ದ್ವಿಜೋತ್ತಮಃ ॥೪೧॥

ಯಾಗಶೀಲನೂ, ಮಂತ್ರವಚನಗಳಿಂದ ಪೂಜಿಸುವವನೂ ಆದ ಬ್ರಾಹ್ಮಣೋತ್ತಮನು ಕೂಡ ಬ್ರಹ್ಮಜ್ಞಾನಿಗೆ ಸಮಾನವಾದ ಸ್ತುತಿಯನ್ನು ಹೊಂದಲಾರನು. ಹೀಗಿರಲು ಬೇರೆಯವರ ಪಾಡೇನು?

ನೈವ ಧರ್ಮೀ ನ ಚಾಧರ್ಮೀ ದ್ವಂದ್ವಾತೀತೋ ವಿಮತ್ಸರಃ ।
ಜ್ಞಾನತೃಪ್ತಃ ಸುಖಂ ಶೇತೇ ಹ್ಯಮೃತಾತ್ಮಾ ನ ಸಂಶಯಃ ॥೪೨॥

ಬಂಧಕಗಳಾದ ಧರ್ಮಾಧರ್ಮಗಳನ್ನು ನೀಗಿ, ಸುಖ-ದುಃಖಗಳ ದ್ವಂದ್ವಗಳನ್ನು ತೊರೆದು, ಮಾತ್ಸರ್ಯರಹಿತನಾಗಿ ಭಗವಂತನ ಜ್ಞಾನದಲ್ಲಿಯೇ ತೃಪ್ತನಾದವನು ಮೋಕ್ಷದಲ್ಲಿ ಮುಕ್ತನಾಗಿ ಸುಖವಾಗಿ ವಿಹರಿಸುತ್ತಾನೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಏವಮೇಷ ಜಗತ್ಸೃಷ್ಟಿಂ ಕುರುತೇ ಮಾಯಯಾ ಪ್ರಭುಃ ।
ನ ಜಾನಾತಿ ವಿರೂಢಾತ್ಮಾ ಕಾರಣಂ ಚಾತ್ಮನೋ ಹ್ಯಸೌ ॥೪೩॥

ಹೀಗೆ ಭಗವಂತನು ಜಗತ್ತಿನ ಸೃಷ್ಟಿಯನ್ನು ತನ್ನ ಸಂಕಲ್ಪದಿಂದ ಸಮಗ್ರವಾಗಿ ಮಾಡುತ್ತಲೇ ಇದ್ದಾನೆ. ವಿಶೇಷವಾದ ಪ್ರಾದುರ್ಭೂತಸ್ವರೂಪವುಳ್ಳ ಪರಮಾತ್ಮನು ತನಗೆ ಮತ್ತೊಂದು ಕಾರಣವೇ ಇಲ್ಲದಿರುವುದರಿಂದ ತನಗೊಂದು ಕಾರಣವಿದೆ ಎಂದು ಎಂದಿಗೂ ತಿಳಿಯುವುದಿಲ್ಲ. ಯಾವಾಗಲೂ ಭಗವಂತನು ಒಂದೇ ರೀತಿಯಾಗಿ ಇರುತ್ತಾನೆ.

ಧ್ಯಾತಾ ದ್ರಷ್ಟಾ ತಥಾ ಮಂತಾ ಬೋದ್ಧಾ ದೃಷ್ಟಾನ್ ಸ ಏವ ಸಃ ।
ಕೋ ವಿದ್ವಾನ್ ಪರಮಾತ್ಮಾನಮನಂತಂ ಶ್ಲೋಕಭಾವನಮ್ ।
ಯತ್ ತು ಶಕ್ಯಂ ಮಯಾ ಪ್ರೋಕ್ತಂ ಗಚ್ಛಧ್ವಂ ಮುನಿಪುಂಗವಾಃ ॥೪೪॥

ಯಾವನು ಈ ಭಗವಂತನನ್ನೇ ಧ್ಯಾನಿಸುತ್ತಾ, ನೋಡುತ್ತಾ, ಮನನ ಮಾಡುತ್ತಾ ತಿಳಿಯುತ್ತಾ ಇರುತ್ತಾನೋ ಅವನು ಆ ಭಗವಂತನಂತೆ ಸಾದೃಶ್ಯವನ್ನು ಹೊಂದುತ್ತಾನೆ. ಸಮಸ್ತ ಜೀವರ ಉತ್ಪತ್ತಿಗೆ ಕಾರಣನಾದ ಈ ಅನಂತನಾದ ಭಗವಂತನನ್ನು ಯಾರು ತಾನೇ ತಿಳಿಯಲು ಸಾಧ್ಯ ? ನಾನು ಹೇಳಿದ ಈ ಭಗವತ್ತತ್ತ್ವವನ್ನು ಯಾರಿಂದಲೂ ತಿಳಿಯಲಾಗದು. ಮುನಿಪುಂಗವರೇ, ನೀವೆಲ್ಲರೂ ಬಂದ ದಾರಿಯನ್ನು ಅನುಸರಿಸಿರಿ.

ಭೀಷ್ಮಃ

ಏವಂ ಪ್ರಣಮ್ಯ ವಿಪ್ರೇಂದ್ರಾ ಜ್ಞಾನಸಾಗರಸಂಭವಮ್ ।
ಸನತ್ಕುಮಾರಂ ಸಂದೃಷ್ಟಾ ಜಗ್ಮುಸ್ತೇ ರುಚಿರಂ ಪುನಃ ॥೪೫॥

ಭೀಷ್ಮ– ಆಗ ಮುನಿಗಳೆಲ್ಲರೂ ಜ್ಞಾನನಿಧಿಯಾದ ಸನತ್ಕುಮಾರರನ್ನು ನಮಸ್ಕರಿಸಿ ಮನಬಂದಲ್ಲಿ ಹೊರಟು ಹೋದರು.

ತಸ್ಮಾತ್ ತ್ವಮಪಿ ಕೌಂತೇಯ ಜ್ಞಾನಯೋಗಪರೋ ಭವ ।
ಜ್ಞಾನಮೇವಂ ಮಹಾರಾಜ ಸರ್ವದುಃಖವಿನಾಶನಮ್ ॥೪೬॥

ಆದ್ದರಿಂದ ಯುಧಿಷ್ಠಿರನೇ, ನೀನು ಆ ಭಗವಜ್ಜ್ಞಾನವನ್ನು ಪ್ರಧಾನವೆಂದು ತಿಳಿದು ಅವನನ್ನೇ ಅನುಸರಿಸು. ಆ ಭಗವಜ್ಜ್ಞಾನವೇ ನಿನ್ನ ಸಮಸ್ತ ದುಃಖಗಳನ್ನು ಪರಿಹರಿಸುತ್ತದೆ.

ಇದಂ ಮಹಾದುಃಖಸಮಾಕರಣಾಂ
ನೃಣಾಂ ಪರಿತ್ರಾಣವಿನಿರ್ಮಿತಂ ಪುರಾ ।
ಪುರಾಣಪುಂಸಾ ಋಷಿಣಾ ಮಹಾತ್ಮನಾ
ಮಹಾಮುನೀನಾಂ ಪ್ರವರೇಣ ತದ್ಭುವಮ್ ॥೪೭॥

ಇಂತಹ ಶ್ರೇಷ್ಠವಾದ ವಿಚಾರವನ್ನು ಪುರಾತನ ಮಹರ್ಷಿಯು ಸಮಸ್ತ ಜೀವರ ಮಹತ್ತಾದ ದುಃಖವನ್ನು ಪರಿಹರಿಸಲು, ಅವರನ್ನು ಉದ್ಧರಿಸಲು ಮುನಿಗಳಲ್ಲೇ ಶ್ರೇಷ್ಠರಾದ ಸನತ್ಕುಮಾರರಿಂದ ಶಾಶ್ವತವಾದ ವಿಚಾರವು ಹೇಳಲ್ಪಟ್ಟಿದೆ.

॥ ಇತಿ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಷಟ್‌ಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಐವತ್ತಾರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೇಳನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ತಪಃಶಬ್ದಕ್ಕೆ ಅನೇಕ ಅರ್ಥವನ್ನು ಹೇಳುವ ಮೂಲಕ ತಮ್ಮ ಮತದ ಪ್ರಕಾರ ತಪಃಶಬ್ದಕ್ಕೆ ಜ್ಞಾನವೆಂಬ ಅರ್ಥವನ್ನು ಹೇಳಿದುದು. ಜ್ಞಾನವು ಮೋಕ್ಷಸಾಧನವೆಂದು ದೃಷ್ಟಾಂತವನ್ನು ತಿಳಿಸಲು ಸುವರ್ಚಲಾ ಚರಿತ್ರವನ್ನು ಪುನಃ ಹೇಳಿದುದು.

ಯುಧಿಷ್ಠಿರಃ

ಯದಿದಂ ತಪ ಇತ್ಯಾಹುಃ ಕಿಂ ತಪಃ ಸಂಪ್ರಕೀರ್ತಿತಮ್ ।
ಉಪವಾಸಮಥಾನ್ಯತ್ ತು ವೇದಾಚಾರಮಥೋ ನು ಕಿಮ್ ।
ಶಾಸ್ತ್ರಂ ತಪೋ ಮಹಾಪ್ರಾಜ್ಞ ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಪಿತಾಮಹನೇ, ತಪಸ್ಸು ಎಂದು ಏನನ್ನು ಹೇಳುತ್ತಾರೋ ಆ ತಪಸ್ಸೆಂದರೆ ಏನು? ತಪಸ್ಸೆಂದರೆ ಉಪವಾಸವೇ ಅಥವಾ ವೇದಾಧ್ಯಯನವೇ ಅಥವಾ ಇದೆಲ್ಲಕ್ಕಿಂತಲೂ ವಿಲಕ್ಷಣವೇ? ಶಾಸ್ತ್ರವನ್ನೂ ತಪಸ್ಸೇ ಎಂದು ಹೇಳುತ್ತಾರೆ. ಪಿತಾಮಹನೇ, ಇದನ್ನು ವಿವರಿಸು.

ಭೀಷ್ಮಃ

ಪಕ್ಷಮಾಸೋಪವಾಸಾದೀನ್ ಮನ್ಯಂತೇ ವೈ ತಪೋಧನಾಃ ।
ವೇದವ್ರತಾದೀನಿ ತಪ ಅಪರೇ ವೇದಪಾರಗಾಃ ।
ವೇದಪಾರಾಯಣಂ ಚಾನ್ಯೇ ಚಾಹುಸ್ತತ್ತ್ವಮಥಾಪರೇ ॥೨॥

ಭೀಷ್ಮ– ಪಕ್ಷ, ಮಾಸಗಳಲ್ಲಿ ಆಚರಿಸುವ ಕೆಲವು ಉಪವಾಸಗಳನ್ನು ತಪೋಧನರು ತಪಸ್ಸು ಎನ್ನುತ್ತಾರೆ. ವೇದಾಧ್ಯಯನವನ್ನು ವೇದಪಾರಗರು ತಪಸ್ಸು ಎನ್ನುತ್ತಾರೆ. ಇನ್ನು ಕೆಲವರು ವೇದಪಾರಾಯಣವನ್ನೇ ತಪಸ್ಸು ಎನ್ನುತ್ತಾರೆ. ಇನ್ನು ಕೆಲವರು ಭಗವತತ್ತ್ವವನ್ನು ತಪಸ್ಸು ಎನ್ನುತ್ತಾರೆ.

ಯಥಾವಿಹಿತಮಾಚಾರಸ್ತಪಃ ಸರ್ವಂ ವ್ರತಂ ಗತಾಃ ।
ಆತ್ಮವಿದ್ಯಾವಿಧಾನಂ ಯತ್ ತತ್ ತಪಃ ಪರಿಕೀರ್ತಿತಮ್ ॥೩॥

ವಿಧಿಬದ್ಧವಾಗಿ ಆಚಾರದಲ್ಲಿ ರತರಾದವರು ಹಿಂದೆ ಹೇಳಿದ ಸಮಸ್ತ ವೇದಾಧ್ಯಯನಾದಿ ಅನುಷ್ಠಾನ ರೂಪವಾದ ತಪಸ್ಸನ್ನು ಆಚರಿಸಿದವರು ಭಗವತತ್ತ್ವದ

ವಿಧಾನವನ್ನು ಯಾವುದರಿಂದ ಅರ್ಥಮಾಡಿಕೊಳ್ಳುತ್ತಾರೋ ನಿಜವಾಗಿಯೂ ಅದೇ ತಪಸ್ಸೆಂದು ಹೇಳಲ್ಪಟ್ಟಿದೆ.

ತ್ಯಾಗಸ್ತಪಸ್ತಥಾ ಶಾಂತಿಸ್ತಪ ಇಂದ್ರಿಯನಿಗ್ರಹಃ ।
ಬ್ರಹ್ಮಚರ್ಯಂ ತಪಃ ಪ್ರೋಕ್ತಮಾಹುರೇವಂ ದ್ವಿಜಾತಯಃ ॥೪॥

ಕೆಲವರು ತ್ಯಾಗವನ್ನು, ಕೆಲವರು ಶಾಂತಿಯನ್ನು, ಕೆಲವರು ಇಂದ್ರಿಯನಿಗ್ರಹವನ್ನು, ಬ್ರಾಹ್ಮಣರು ಬ್ರಹ್ಮಚರ್ಯವನ್ನು ತಪಸ್ಸು ಎಂದು ಹೇಳಿದ್ದಾರೆ.

ಸದೋಪವಾಸೋ ಯೋ ವಿದ್ವಾನ್ ಬ್ರಹ್ಮಚಾರೀ ಸದಾ ಭವೇತ್ ॥೫॥

ಯಾವಾಗಲೂ ಭಗವಂತನನ್ನೇ ಧ್ಯಾನಿಸುವವನು ನಿತ್ಯೋಪವಾಸಿ ಎಂದೇ ಎನಿಸಿಕೊಳ್ಳುತ್ತಾನೆ.

ಯೋ ಮುನಿಶ್ಚ ಸದಾ ಧೀಮಾನ್ ವಿಘಸಾಶೀ ವಿಮತ್ಸರಃ ।
ತತಸ್ತ್ವನಂತಮಪ್ಯಾಹುರ್ಯೋ ನಿತ್ಯಮತಿಥಿಪ್ರಿಯಃ ॥೬॥

ಯಾವಾತನು ನಿಷಿದ್ಧ ಆಹಾರವನ್ನು ಸ್ವೀಕರಿಸದೆ ಮಾತ್ಸರ್ಯರಹಿತನಾಗಿ, ನಿತ್ಯವೂ ಅತಿಥಿಪ್ರಿಯನಾಗಿ ಇದ್ದಾನೋ ಅವನನ್ನೇ ಭಗವಂತನ ಭಕ್ತರೆನ್ನುತ್ತಾರೆ.

ನಾಂತರಾಶೀಸ್ತತೋ ನಿತ್ಯಮುಪವಾಸೀ ಮಹಾವ್ರತಃ ।
ಋತುಗಾಮೀ ತಥಾ ಪ್ರೋಕ್ತೋ ವಿಘಸಾಶೀ ಸ್ಮೃತೋ ಬುಧೈಃ ॥೭॥

ಮಧ್ಯಾಹ್ನ, ರಾತ್ರಿ ಭೋಜನಗಳ ನಡುವೆ ಯಾವನು ಯಾವ ಆಹಾರಗಳನ್ನು ಸ್ವೀಕರಿಸುವುದಿಲ್ಲವೋ ಅವನೇ ಉಪವಾಸವೆಂಬ ಮಹಾವ್ರತವನ್ನು ಆಚರಿಸಿದವನು. ಋತುಕಾಲದಲ್ಲಿ ಭಾರ್ಯೆಯ ಸಮಾಗಮವನ್ನು ಮಾಡುವವನು, ನಿಷಿದ್ಧವಾದ ಪದಾರ್ಥಗಳನ್ನು ಸ್ವೀಕರಿಸದವನು ಮಹಾವ್ರತನೆನಿಸಿದ್ದಾನೆ.

ಭೃತ್ಯಶೇಷಂ ತು ಯೋ ಭುಂಕ್ತೇ ಯಜ್ಞಶೇಷಂ ತಥಾऽಮೃತಮ್ ।
ಏವಂ ನಾನಾರ್ಥಸಂಯೋಗಂ ತಪಃ ಶಶ್ವದುದಾಹೃತಮ್ ॥೮॥

ಯಾವನು ಅತಿಥಿ-ಭೃತ್ಯರು ಉಂಡ ಬಳಿಕ ಭೋಜನ ಮಾಡುತ್ತಾನೋ ಯಜ್ಞಶೇಷವನ್ನು ಭುಂಜಿಸುತ್ತಾನೋ, ಈ ರೀತಿಯಾಗಿ ಅನೇಕ ವಿಧವಾಗಿ ತಪಸ್ಸಿನ ಅರ್ಥವನ್ನು ವರ್ಣಿಸುತ್ತಾರೆ.

ಯೇಽಪಿ ಕರ್ಮಮಯಂ ಪ್ರಾಹುಸ್ತೇ ದ್ವಿಜಾ ಬ್ರಾಹ್ಮಣಾಃ ಸ್ಮೃತಾಃ ।
ರಮಂತೇ ದಿವ್ಯಭೋಗೈಶ್ಚ ಪೂಜಿತಾ ಹ್ಯಪ್ಸರೋಗಣೈಃ ॥೯॥

ಯಾವ ಬ್ರಾಹ್ಮಣರು ನಿತ್ಯ-ನೈಮಿತ್ತಿಕ ಕರ್ಮಗಳನ್ನು ಆಚರಿಸುತ್ತಾ ಸತ್ಯವ್ರತರಾಗಿರುತ್ತಾರೋ ಅವರಿಗೆ ಕೊನೆಯಿಲ್ಲದ ಲೋಕಗಳು ದೊರೆಯುತ್ತವೆ. ಅವರೇ ನಿಜವಾದ ಬ್ರಾಹ್ಮಣರೆಂದು ಕರೆಸಿಕೊಳ್ಳುತ್ತಾರೆ. ಅವರು ಅಪ್ಸರೋಗಣಗಳಿಂದ ಪೂಜಿತರಾಗಿ ದಿವ್ಯಭೋಗಗಳಿಂದ ರಮಣ ಮಾಡುತ್ತಾರೆ.

ಜ್ಞಾನಾತ್ಮಕಂ ತಪಶ್ಶಬ್ದಂ ಯೇ ವದಂತಿ ವಿನಿಶ್ಚಿತಾಃ ।
ತೇ ಹ್ಯಂತರಾऽऽತ್ಮಸದ್ಭಾವಂ ಪ್ರಪನ್ನಾ ನೃಪಸತ್ತಮ ॥೧೦॥

ಜ್ಞಾನಿಗಳಾದವರು ಪರಮಾತ್ಮನ ಜ್ಞಾನವನ್ನು ತಪಸ್ಸು ಎನ್ನುತ್ತಾರೆ. ಪರಮಾತ್ಮನು ಅಂತರ್ಯಾಮಿಯಾಗಿ ನಿಯಾಮಕನಾಗಿದ್ದಾನೆ ಎಂದು ಅವನಲ್ಲಿ ಮಾಡುವ ಸದ್ಭಕ್ತಿಯು ತಪಸ್ಸು ಎನಿಸಿದೆ.

ಏತತ್ತೇ ನೃಪಶಾರ್ದೂಲ ಪ್ರೋಕ್ತಂ ಯತ್ ಪೃಷ್ಟವಾನಸಿ ।
ಯಥಾವಸ್ತೂನಿ ಸಂಜ್ಞಾನಿ ವಿವಿಧಾನಿ ಭವಂತ್ಯುತ ॥೧೧॥

ರಾಜಶ್ರೇಷ್ಠನೇ, ಯಾವ ತಪಸ್ಸಿನ ಬಗ್ಗೆ ನೀನು ಪ್ರಶ್ನಿಸಿದೆಯೋ, ಯಾವ ತಪಸ್ಸು ವಿಧವಿಧವಾಗಿ ಅನೇಕ ಸಂಜ್ಞೆಗಳನ್ನು ಹೊಂದಿದೆಯೋ ಅದೆಲ್ಲವನ್ನೂ ನಿನಗೆ ಹೇಳಿರುತ್ತೇನೆ.

ಯುಧಿಷ್ಠಿರಃ

ಪಿತಾಮಹ ಮಹಾಪ್ರಾಜ್ಞ ರಾಜಾಧೀನಾ ನೃಪಾಃ ಪುನಃ ।
ಅನ್ಯಾನಿ ಚ ಸಹಸ್ರಾಣಿ ನಾಮಾನಿ ವಿವಿಧಾನಿ ಚ ॥೧೨॥

ಯುಧಿಷ್ಠಿರ– ಪಿತಾಮಹನೇ, ಮಹಾಪ್ರಾಜ್ಞನೇ, ರಾಜನ ಅಧೀನರಾದ ರಾಜರೆಲ್ಲರೂ ಸಾವಿರಾರು ಬೇರೆ ಬೇರೆ ನಾಮಗಳನ್ನು ಹೊಂದಿರುತ್ತಾರೆ.

ಪ್ರತಿಯೋಗೀನಿ ವೈ ತೇಷಾಂ ಛನ್ನಾನ್ಯಸ್ತಮಿತಾನಿ ಚ ।
ದೃಢಂ ಸರ್ವಂ ಪ್ರಾಕೃತಕಮಿದಂ ಸರ್ವತ್ರ ಪಶ್ಯ ವೈ ॥೧೩॥

ನಿಗೂಢವಾದ, ಗುಹ್ಯಭಾಷೆಯಲ್ಲಿ ಹೇಳಿದ, ಮಹಾತ್ಮರು ಮೊದಲಾದ ನಾಮಗಳು ಬಾಲಕ, ಯುವಕ, ಸ್ಥವಿರ (ವೃದ್ಧ) ಮೊದಲಾದ ನಾಮಗಳು ಮುಂದಿನ ಮುಂದಿನ ಅವಸ್ಥೆಗಳು ದೊರೆತಾಗ ಹಿಂದಿನ ನಾಮಗಳು ಅಸ್ತಮಿತವಾಗುತ್ತವೆ. ಆದ್ದರಿಂದ ಸಾವಿರಾರು ನಾಮಗಳಿಂದ ಬದಲಾವಣೆಯನ್ನು ಹೊಂದುತ್ತಿರುವ ಈ ಜಗತ್ತನ್ನು ಕಂಡಾಗ ಎಲ್ಲವೂ ಪ್ರಾಕೃತ ಎಂದೇ ಅನಿಸುತ್ತಿದೆ. ನೀನೂ ಇದನ್ನು ಎಲ್ಲರಂತೆ ನೋಡಬಹುದು.

ತಸ್ಮಾದ್ ಯಥಾಗತಂ ರಾಜನ್ ಯಥಾರುಚಿ ನೃಣಾಂ ಭವೇತ್ ।
ಅಸ್ಮಿನ್ನರ್ಥೇ ಪುರಾವೃತ್ತಂ ಶೃಣು ರಾಜನ್ ಯುಧಿಷ್ಠಿರ ॥೧೪॥

ಹೀಗೆ ಹೇಳಿದಾಗ ಭೀಷ್ಮರು ಹೇಳುತ್ತಾರೆ- ರಾಜನೇ, ಈ ಜಗತ್ತು ಹೇಗೆ ಬಂದಿದೆ ಎನ್ನುವುದರ ವಿಷಯದಲ್ಲಿ ಹಿಂದೆ ನಡೆದ ಒಂದು ಸಮಾಚಾರವನ್ನು ಹೇಳುತ್ತೇನೆ, ಕೇಳಿಸಿಕೊ.

ಬ್ರಾಹ್ಮಣಾನಾಂ ಸಮೂಹೇ ತು ಯದುವಾಚ ಸುವರ್ಚಲಾ ।
ದೇವಲಸ್ಯ ಸುತಾ ವಿದ್ವನ್ ಸರ್ವಲಕ್ಷಣಶೋಭಿತಾ ॥೧೫॥

ಸರ್ವಲಕ್ಷಣ ಸಂಪನ್ನೆಯಾದ, ದೇವಲಋಷಿಗಳ ಮಗಳಾದ ಸುವರ್ಚಲೆಯು ಬ್ರಾಹ್ಮಣರ ಸಮೂಹದಲ್ಲಿ ಏನನ್ನು ಹೇಳಿದ್ದಾಳೋ ಅದನ್ನು ನಿನಗೆ ತಿಳಿಸುತ್ತೇನೆ.

ಕನ್ಯಾ ಸುವರ್ಚಲಾ ನಾಮ ಯೋಗಭಾವಿತಚೇತನಾ ।
ಹೇತುನಾ ಕೇನ ಜಾತಾ ಸಾ ನಿರ್ದ್ವಂದ್ವಾ ನಷ್ಟಸಂಶಯಾ ॥೧೬॥

ಸುವರ್ಚಲಾ ಎಂಬ ಕನ್ಯೆಯು ಯೋಗದಲ್ಲೇ ನಿಷ್ಠಳಾದ ಮನಸ್ಸಿನಿಂದ ಕೂಡಿದವಳಾಗಿ, ಯಾವ ಕಾರಣದಿಂದ ಅವಳಲ್ಲಿರುವ ದ್ವಂದ್ವಗಳನ್ನು, ಸಂಶಯಗಳನ್ನು ಪರಿಹರಿಸಿಕೊಂಡಳು ಎಂಬುದನ್ನು ಹೇಳುತ್ತೇನೆ.

ಸಾऽಬ್ರವೀತ್ ಪಿತರಂ ವಿಪ್ರಂ ವರಾನ್ವೇಷಣತತ್ಪರಾ ॥೧೭॥

ಸುವರ್ಚಲೆಯು ತಂದೆಯು ತನಗೆ ವರನನ್ನು ಅನ್ವೇಷಣೆ ಮಾಡುವುದರಲ್ಲಿ ತತ್ಪರನಾಗಿರುವುದನ್ನು ಕಂಡು ಅವನನ್ನು ಕುರಿತು ಹೀಗೆ ಹೇಳಿದಳು.

ಅಂಧಾಯ ಮಾಂ ಮಹಾಪ್ರಾಜ್ಞ ದೇಹಿ ವೀಕ್ಷ್ಯ ಸುಲೋಚನಮ್ ।
ಏವಂ ಸ್ಮ ಚ ಪಿತಃ ಶಶ್ವನ್ಮಯೀದಂ ಪ್ರಾರ್ಥಿತಂ ಮುನೇ ॥೧೮॥

ಮಹಾಪ್ರಾಜ್ಞನಾದ ತಂದೆಯೇ, ಕಣ್ಣುಗಳಿರುವ ಅಂಧನಿಗೆ ನೀನು ನೀಡು ಎಂದು ಸುವರ್ಚಲೆಯು ತಂದೆಯ ಬಳಿ ತನ್ನ ಪ್ರಾರ್ಥನೆಯನ್ನು ಮುಂದಿಟ್ಟಳು.

ಪಿತಾ

ನ ಶಕ್ಯಂ ಪ್ರಾರ್ಥಿತುಂ ವತ್ಸೇ ತ್ವಯಾಽದ್ಯ ಪ್ರತಿಭಾತಿ ಮೇ ।
ಅಂಧತಾಽನಂಧತಾ ಚೇತಿ ವಿಚಾರೋ ಮಮ ಜಾಯತೇ ।
ಉನ್ಮತ್ತೇವ ಸುತೇ ವಾಕ್ಯಂ ಭಾಷಸೇ ಪೃಥುಲೋಚನೇ ॥೧೯॥

ಪಿತಾ– ಮಗಳೇ, ಈ ರೀತಿಯಾಗಿ ನೀನು ಪ್ರಾರ್ಥಿಸುವುದು ತರವಲ್ಲ ಎಂದು ನನಗೆ ತೋರುತ್ತಿದೆ. ನಿನ್ನ ಪತಿಯು ಅಂಧನಾಗಿರಬೇಕು, ಅನಂಧನೂ ಆಗಿರಬೇಕು ಎಂಬ ನಿನ್ನ ಮಾತನ್ನು ಕೇಳುತ್ತಾ, ಹುಚ್ಚು ಹಿಡಿದವರಂತೆ ಮಾತನ್ನು ಹೇಳುತ್ತಿರುವಿ ಎಂದೆನಿಸುತ್ತಿದೆ.

ಕನ್ಯಾ

ನಾಹಮುನ್ಮತ್ತಭೂತಾಽದ್ಯ ಬುದ್ಧಿಪೂರ್ವಂ ಬ್ರವೀಮಿ ತೇ ।
ವಿದ್ಧಿ ವೈ ತಾದೃಶಂ ಲೋಕೇ ಸ ಮಾಂ ಭಜತಿ ವೇದವಿತ್ ॥೨೦॥

ಕನ್ಯಾ– ತಂದೆಯೇ, ನಾನು ಹುಚ್ಚು ಹಿಡಿದು ಈ ಮಾತನ್ನಾಡುತ್ತಿಲ್ಲ. ಬುದ್ಧಿ ಪೂರ್ವಕವಾಗಿ ಹೇಳುತ್ತಿದ್ದೇನೆ. ಈ ರೀತಿಯಾದ ಪುರುಷನೇ ವೇದಜ್ಞನಾಗಿರುತ್ತಾನೆ. ಅಂತಹ ಅಂಧನು, ಅನಂಧನೂ ಆದ ವ್ಯಕ್ತಿಯೇ ನನ್ನನ್ನು ಹೊಂದಲು ಅರ್ಹನಾಗಿರುತ್ತಾನೆ.

ಯಾನ್ಯಾಂಸ್ತ್ವಂ ಮನ್ಯಸೇ ದಾತುಂ ಮಾಂ ದ್ವಿಜೋತ್ತಮ ತಾನಿಹ ।
ಆನಯಾನ್ಯಾನ್ ಮಹಾಭಾಗ ಹ್ಯಹಂ ದ್ರಕ್ಷ್ಯಾಮಿ ತೇಷು ತಮ್ ॥೨೧॥

ನೀನು ಯಾವ ಪುರುಷರಿಗೆ ನನ್ನನ್ನು ಕೊಡಲು ಇಚ್ಛಿಸುತ್ತೀಯೋ ಅವನನ್ನು ನಮ್ಮ ಆಶ್ರಮಕ್ಕೆ ಬರಹೇಳು. ಅವನು ನನ್ನನ್ನು ವರಿಸಲು ಯೋಗ್ಯನಾಗಿದ್ದಾನೋ ಎಂಬುದನ್ನು ನಾನೇ ತಿಳಿದುಕೊಳ್ಳುತ್ತೇನೆ.

ತಥೇತಿ ಚೋಕ್ತ್ವಾ ತಾಂ ವಿಪ್ರಃ ಪ್ರೇಷಯಾಮಾಸ ಶಿಷ್ಯಕಾನ್ ।
ಋಷೇಃ ಪ್ರಭಾವಂ ದೃಷ್ಟ್ವಾ ತೇ ಕನ್ಯಾಯಾಶ್ಚ ದ್ವಿಜೋತ್ತಮಾಃ ॥೨೨॥

ದೇವಲನು ಮಗಳ ಮಾತಿನಂತೆ ಹಾಗೇ ಆಗಲೆಂದು ಹೇಳಿ, ಶಿಷ್ಯರನ್ನೆಲ್ಲ ವರಗಳನ್ನು ಕರೆದು ತರಲು ಕಳುಹಿಸಿಕೊಟ್ಟರು. ದೇವಲರ ಪ್ರಭಾವವನ್ನೂ, ಕನ್ಯೆಯ ಪ್ರಭಾವವನ್ನೂ ಕೇಳಿ ತಿಳಿದ ಅನೇಕ ದ್ವಿಜೋತ್ತಮರು ಬಹುಸಂಖ್ಯೆಯಿಂದ ದೇವಲರ ಆಶ್ರಮಕ್ಕೆ ಆಗಮಿಸಿದರು.

ತಾನಾಗತಾನಥಾಭ್ಯರ್ಚ್ಯ ಕನ್ಯಾಮಾಹ ಪಿತಾ ಮಹಾನ್ ।
ಯದೀಚ್ಛಸಿ ವರಂ ಭದ್ರೇ ತಂ ವಿಪ್ರಂ ವರಯ ಸ್ವಯಮ್ ॥೨೩॥

ಆ ಆಗಮಿಸಿದ ಋಷಿಕುಮಾರರನ್ನೆಲ್ಲ ಆರಾಧಿಸಿದ ದೇವಲರು ತನ್ನ ಮಗಳನ್ನು ಕುರಿತು ಹೇಳಿದರು- ಮಗಳೇ, ನಿನಗೆ ಯೋಗ್ಯನಾದ ವರನು ಇಲ್ಲಿದ್ದರೆ ಅವನನ್ನು ನಿನ್ನ ಪತಿಯನ್ನಾಗಿ ಸ್ವೀಕರಿಸು.

ತಥೇತಿ ಚೋಕ್ತ್ವಾ ಕಲ್ಯಾಣೀ ತಪ್ತಹೇಮನಿಭಾನನಾ ।
ಕರಸಮ್ಮಿತಮಧ್ಯಾಂಗೀ ವಾಕ್ಯಮಾಹ ತಪೋಧನಾನ್ ॥೨೪॥

ಪುಟಕ್ಕಿಟ್ಟ ಬಂಗಾರದಂತೆ ಶೋಭೆಯುಳ್ಳ ಕಲ್ಯಾಣಿ ಸುವರ್ಚಲೆಯು ಹಾಗೆ ಆಗಲೆಂದು ಹೇಳುತ್ತಾ, ಮುಷ್ಟಿಯಲ್ಲಿ ಹಿಡಿಯಬಹುದಾದ ನಡುದೇಹವುಳ್ಳ ಸುವರ್ಚಲೆಯು (ಸುಂದರಿಯಾದ) ತಪೋಧನರನ್ನು ಕುರಿತು ಹೇಳಿದಳು.

ಯದ್ಯಸ್ತಿ ಸಮ್ಮತೋ ವಿಪ್ರೋ ಹ್ಯಂಧೋಽನಂಧಃ ಸ ಮೇ ವರಃ ।
ನೋಚುರ್ವಿಪ್ರಾ ಮಹಾಭಾಗಾಂ ಪ್ರತಿವಾಕ್ಯಂ ಯಯುಶ್ಚ ತೇ ॥೨೫॥

ತಪೋಧನರೇ, ನಿಮ್ಮಲ್ಲಿ ಅಂಧರು, ಅನಂಧರೂ ಆದ ವ್ಯಕ್ತಿಗಳು ಯಾರಾದರೂ ಇದ್ದಲ್ಲಿ ಅವರು ನನ್ನನ್ನು ವರಿಸಲು ಅರ್ಹರಾಗುತ್ತಾರೆ ಎಂದು ಹೇಳಿದಾಗ ಮಹಾಭಾಗಳಾದ ಸುವರ್ಚಲೆಗೆ ಋಷಿಕುಮಾರರು ಏನನ್ನೂ ಉತ್ತರಿಸದೆ, ಬಂದ ದಾರಿಯನ್ನು ಅನುಸರಿಸಿದರು.

ಕನ್ಯಾ ಚ ತಿಷ್ಠತಾಮತ್ರ ಪಿತುರ್ವೇಶ್ಮನಿ ಭಾರತ ॥೨೬॥

ಭಾರತನೇ, ಕನ್ಯೆಯಾದರೂ ಬಹಳ ಕಾಲ ತಂದೆಯ ಮನೆಯಲ್ಲಿಯೇ ವಾಸ ಮಾಡುತ್ತಿದ್ದಳು.

ಶ್ವೇತಕೇತುಃ ಕಹೋಲಸ್ಯ ಶ್ಯಾಲಃ ಪರಮಧರ್ಮವಿತ್ ।
ಶ್ರುತ್ವಾ ಬ್ರಹ್ಮಾ ತದಾಗಮ್ಯ ಕನ್ಯಾಮಾಹ ಮಹೀಪತೇ ॥೨೭॥

ಈ ಪ್ರಸಂಗದಲ್ಲಿ ಕಹೋಲನ ಅಳಿಯನಾದ, ಪರಮಧರ್ಮಜ್ಞನಾದ ಶ್ವೇತಕೇತುವು ಈ ವಾರ್ತೆಯನ್ನು ಕೇಳಿಸಿಕೊಂಡು, ದೇವಲರ ಮನೆಗೆ ಆಗಮಿಸಿ ಕನ್ಯೆಯನ್ನು ಕುರಿತು ಹೀಗೆ ಹೇಳಿದನು.

ಸೋಹಂ ಭದ್ರೇ ಸಮಾವೃತ್ತಸ್ತ್ವಯೋಕ್ತೋ ಯಃ ಪುರಾ ದ್ವಿಜಃ ।
ವಿಶಾಲನಯನಂ ವಿದ್ಧಿ ಮಾಮಂಧೋಽಹಂ ವೃಣೀಷ್ವ ಮಾಮ್ ॥೨೮॥

ಪರಮಮಂಗಳೆಯೇ, ನಾನು ಶ್ವೇತಕೇತುವು. ಹಿಂದೆ ನೀನು ಅಂಧರು, ಅನಂಧರನ್ನು ಸ್ವೀಕರಿಸುತ್ತೇನೆಂದು ತಿಳಿಸಿರುವಿಯಷ್ಟೆ! ನಾನು ವಿಶಾಲನಯನನೂ ಆಗಿದ್ದೇನೆ, ಅಂಧನೂ ಆಗಿದ್ದೇನೆ. ನನ್ನನ್ನು ಸ್ವೀಕರಿಸು ಎಂದನು.

ಸುವರ್ಚಲಾ

ಕಥಂ ವಿಶಾಲನೇತ್ರೋಽಸಿ ಕಥಂ ವಾ ತ್ವಮಲೋಚನಃ ।
ಬ್ರೂಹಿ ಪಶ್ಚಾದಹಂ ವಿದ್ವನ್ ಪರೀಕ್ಷೇ ತ್ವಾಂ ದ್ವಿಜೋತ್ತಮ ॥೨೯॥

ಸುವರ್ಚಲೆ– ಶ್ವೇತಕೇತುವೇ, ನೀನು ವಿಶಾಲನೇತ್ರನೂ ಅಂಧನೂ ಹೇಗೆ ಆಗಿರುತ್ತಿ ಎಂಬುದನ್ನು ಮೊದಲು ತಿಳಿಸು. ನಿನ್ನನ್ನು ಪರೀಕ್ಷೆಮಾಡಿದ ಬಳಿಕ ನಾನು ಸ್ವೀಕರಿಸುತ್ತೇನೆ.

ದ್ವಿಜಃ

ಶಬ್ದೇ ಸ್ಪರ್ಶೇ ತಥಾ ರೂಪೇ ರಸೇ ಗಂಧೇ ಸಹೇತುಕಮ್ ।
ನ ಮೇ ಪ್ರವರ್ತತೇ ಚೇತೋ ನ ಪ್ರತ್ಯಕ್ಷಂ ಹಿ ತೇಷು ಮೇ ।
ಅಲೋಚನೋಽಹಂ ತಸ್ಮಾದ್ಧಿ ನ ಗತಿರ್ವಿದ್ಯತೇ ಯತಃ ॥೩೦॥

ದ್ವಿಜ– ನನ್ನ ಮನಸ್ಸು ಶಬ್ದ-ಸ್ಪರ್ಶ-ರೂಪ-ಗಂಧಗಳಲ್ಲಿ ಬುದ್ಧಿಪೂರ್ವಕವಾಗಿ ಚಲಿಸುವುದಿಲ್ಲ. ಆದ್ದರಿಂದ ಕಣ್ಣಿಗೆ ಪದಾರ್ಥಗಳು ಕಾಣಿಸುತ್ತಿದ್ದರೂ ನನ್ನ ಮನಸ್ಸಿನ

ಪ್ರವೃತ್ತಿ ಅವುಗಳಲ್ಲಿ ಇಲ್ಲದಿರುವುದರಿಂದ ನಾನು ಕಣ್ಣಿದ್ದು ವಿಷಯ ಪದಾರ್ಥಗಳಲ್ಲಿ ಕುರುಡಾಗಿದ್ದೇನೆ. ನನಗೆ ಆ ವಿಷಯಗಳಲ್ಲಿ ಆಸಕ್ತಿ ಇರುವುದಿಲ್ಲ.

ಯೇನ ಪಶ್ಯತಿ ಸುಶ್ರೋಣಿ ಭಾಷತೇ ಸ್ಪೃಶತೇ ಪುನಃ ।
ಭುಜ್ಯತೇ ಘ್ರಾಯತೇ ನಿತ್ಯಂ ಶೃಣೋತಿ ಮನುತೇ ಯಥಾ ॥೩೧॥

ತಚ್ಚಕ್ಷುರ್ವಿದ್ಯತೇ ಮಹ್ಯಂ ಯೇನ ಪಶ್ಯತಿ ವೈ ಸ್ಫುಟಮ್ ।
ಸುಲೋಚನೋಽಹಂ ಭದ್ರೇ ವೈ ಪೃಚ್ಛ ವಾ ಕಿಂ ವದಾಮಿ ತೇ ।
ಸರ್ವಮಸ್ಮಿನ್ನ ಮೇಽವಿದ್ಯಾ ವಿದ್ವಾನ್ ಹಿ ಪರಮಾರ್ಥತಃ ॥೩೨॥

ನಾನು ನೋಡುವ ಪದಾರ್ಥಗಳನ್ನೆಲ್ಲ ಯಾವ ಭಗವಂತನ ಅನುಗ್ರಹದಿಂದ ನೋಡುತ್ತೇನೋ, ಮುಟ್ಟುತ್ತೇನೋ, ತಿನ್ನುತ್ತೇನೋ, ಆಘ್ರಾಣಿಸುತ್ತೇನೋ, ಕೇಳುತ್ತೇನೋ, ಮನನ ಮಾಡುತ್ತೇನೋ ಅಂತಹ ಭಗವಂತನನ್ನು ನೋಡಲು ನಾನು ಅಶಕ್ತನಾಗಿದ್ದೇನೆ. ಅವನು ನನ್ನನ್ನು ನೋಡುತ್ತಿದ್ದಾನೆ. ಆದ್ದರಿಂದ ಆ ಭಗವಂತನ ವಿಷಯದಲ್ಲಿ ನಾನು ಅಂಧನೇ ಆಗಿದ್ದೇನೆ. ಜಗತ್ತಿನ ವಿಷಯದಲ್ಲಿ ನನಗೆ ದೃಷ್ಟಿ ಇಲ್ಲ. ಹಿಂದೆ ಭಗವಂತನನ್ನು ನೋಡಲು ನಾನು ಅಂಧನಾಗಿದ್ದೆ. ಜಗತ್ತನ್ನು ಚೆನ್ನಾಗಿ ನೋಡುತ್ತಿದ್ದೆ. ತತ್ತ್ವಜ್ಞಾನವನ್ನು ತಂದೆಯಿಂದ ಪಡೆದ ಬಳಿಕ ಜಗತ್ತಿನ ವಿಷಯದಲ್ಲಿ ಅಂಧನಾಗಿದ್ದೇನೆ, ಭಗವಂತನ ವಿಷಯದಲ್ಲಿ ನಾನು ಕಣ್ಣುಳ್ಳವನಾಗಿದ್ದೇನೆ. ಆದ್ದರಿಂದ ಅಂಧತ್ವ, ಅನಂಧತ್ವಗಳ ವಿಭಾಗವನ್ನು ನಾನು ತಿಳಿದಿದ್ದೇನೆ. ಪರಮಾತ್ಮನ ವಿಷಯದಲ್ಲಿ ಜಗತ್ತೆಲ್ಲವೂ ನೆಲೆಗೊಂಡಿದೆ. ಇದನ್ನು ಅರ್ಥೈಸಿಕೊಂಡ ನನಗೆ 'ಅಹಂ ಮಮತಾದಿ ರೂಪ' ಅಹಂಕಾರ-ಮಮಕಾರಗಳು ಇರುವುದಿಲ್ಲ. ನಾನು ಎಲ್ಲವನ್ನೂ ಸರಿಯಾಗಿ ಭಗವಂತನ ವಿಷಯದಲ್ಲಿ ಅರ್ಥಮಾಡಿಕೊಂಡಿದ್ದೇನೆ. ನಿನಗೆ ಮತ್ತೂ ಏನನ್ನು ಹೇಳಲಿ? ತಿಳಿಸು.

ವ್ಯಾಖ್ಯಾನ ವಿಶೇಷ– ಈ ಅಧ್ಯಾಯದ ವಿಚಾರಗಳು ೫೩ನೇ ಅಧ್ಯಾಯದಲ್ಲಿ ೭ನೇ ಶ್ಲೋಕದಿಂದ ಹೇಳಲ್ಪಟ್ಟಿವೆ. ಹೀಗಿದ್ದರೂ ಭಗವತ್‌ಪ್ರಜ್ಞೆಯ ಚಕ್ಷುಸ್ಸು ತುಂಬಾ ಮುಖ್ಯವಾದುದು ಎಂದು ತಿಳಿಸಲು ಪುನಃ ಈ ಅಭಿಪ್ರಾಯವನ್ನು ಸಂಕ್ಷಿಪ್ತವಾಗಿ ಭೀಷ್ಮರು ಹೇಳಿದ್ದಾರೆ ಎಂದು ಭಾವಿಸಬೇಕು. ಕೆಲವು ಮಾತೃಕೆಗಳಲ್ಲಿ ಈ ಅಧ್ಯಾಯವು ಇರುವುದಿಲ್ಲ. ಆದರೆ ಇದು ಪ್ರಧಾನವಾದ ತತ್ತ್ವ ಎಂದು ತಿಳಿಸಲು ವ್ಯಾಸರು ಇದನ್ನು ಆವೃತ್ತಿ ಮಾಡಿದ್ದಾರೆ ಎಂಬುದಾಗಿ ಲಕ್ಷಾಲಂಕಾರದಲ್ಲಿ ವಾದಿರಾಜ ಗುರುಸಾರ್ವಭೌಮರು ತಿಳಿಸಿರುತ್ತಾರೆ. ಆದ್ದರಿಂದ ಈ ಅಧ್ಯಾಯವನ್ನು ಪ್ರಕ್ಷಿಪ್ತವೆಂದು ಭಾವಿಸಬಾರದು.

ಸಾ ವಿಶುದ್ಧಾ ತತೋ ಭೂತ್ವಾ ಶ್ವೇತಕೇತುಂ ಮಹಾಮುನಿಮ್ ।
ಪ್ರಣಮ್ಯ ಪೂಜಯಾಮಾಸ ತಾಂ ಭಾರ್ಯಾಂ ಸ ಚ ಲಬ್ಧವಾನ್ ॥೩೩॥

ಸುವರ್ಚಲೆಯು ಶ್ವೇತಕೇತುವಿನ ಅಭಿಪ್ರಾಯವನ್ನು ತಿಳಿದು, ತುಂಬಾ ಸಂತುಷ್ಟಳಾಗಿ ಮಹಾಮುನಿಯನ್ನು ನಮಸ್ಕರಿಸಿ ಪೂಜಿಸಿದಳು. ಪತಿಯನ್ನಾಗಿ ವರಿಸುವ ಸಂಕಲ್ಪವನ್ನು ಮಾಡಿದಳು. ಶ್ವೇತಕೇತುವಾದರೂ ಅವಳನ್ನು ಭಾರ್ಯೆಯನ್ನಾಗಿ ಸ್ವೀಕರಿಸಿದನು.

ವೈರಾಗ್ಯಸಂಯುತಾ ಕನ್ಯಾ ತಾದೃಶಂ ಪತಿಮುತ್ತಮಮ್ ।
ಪ್ರಾಪ್ತಾ ರಾಜನ್ ಮಹಾಪ್ರಾಜ್ಞ ತಸ್ಮಾದರ್ಥಃ ಪೃಥಕ್‌ಪೃಥಕ್ ॥೩೪॥

ವೈರಾಗ್ಯಸಂಯುತಳಾದ ಕನ್ಯೆಯು ಶ್ವೇತಕೇತುವಿನಂಥ ಉತ್ತಮ ಪತಿಯನ್ನು ಸ್ವೀಕರಿಸಿದಳು. ಆದ್ದರಿಂದ ಒಂದೊಂದು ಶಬ್ದಕ್ಕೂ ಬೇರೆ ಬೇರೆಯಾದ ಅರ್ಥವಿರುತ್ತದೆ ಎನ್ನಲು ಇವಳ ಮಾತೇ ದೃಷ್ಟಾಂತವಾಗಿದೆ.

ಏತತ್ ತೇ ಕಥಿತಂ ರಾಜನ್ ಕಿಂ ಭೂಯಃ ಶ್ರೋತುಮಿಚ್ಛಸಿ ॥೩೫॥

ಈ ರೀತಿಯಾಗಿ ನಿನ್ನ ಪ್ರಶ್ನೆಗೆ ಅನುಗುಣವಾಗಿ ಉತ್ತರಿಸಿದ್ದೇನೆ. ಧರ್ಮರಾಜನೇ, ಪುನಃ ಏನನ್ನು ಕೇಳಲು ಬಯಸುತ್ತಿ ?

॥ ಇತಿ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಸಪ್ತಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಐವತ್ತೇಳನೆಯ ಅಧ್ಯಾಯ ಮುಗಿಯಿತು

★ ★ ★ ★ ★

ಐವತ್ತೆಂಟನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು ಜ್ಞಾನವೇ ಮೋಕ್ಷಸಾಧನವೆಂದು ತಿಳಿಸಲು ಇಂದ್ರ-ಪ್ರಹ್ಲಾದರ ಸಂವಾದವನ್ನು ನಿರೂಪಿಸಿದುದು.

ಯುಧಿಷ್ಠಿರಃ

ಯದಿದಂ ಕರ್ಮ ಲೋಕೇಽಸ್ಮಿನ್ ಶುಭಂ ವಾ ಯದಿ ವಾಽಶುಭಮ್ ।
ಪುರುಷಂ ಯೋಜಯತ್ಯೇವ ಫಲಯೋಗೇನ ಭಾರತ ॥೧॥

ಕರ್ತಾ ಸ್ವಿತ್ ತಸ್ಯ ಪುರುಷ ಉತಾಹೋ ನೇತಿ ಸಂಶಯಃ ।
ಏತದಿಚ್ಛಾಮಿ ತತ್ತ್ವೇನ ತ್ವತ್ತಃ ಶ್ರೋತುಂ ಪಿತಾಮಹ ॥೨॥

ಯುಧಿಷ್ಠಿರ– ಪಿತಾಮಹನೇ, ಲೋಕದಲ್ಲಿ ಶುಭಾಶುಭ ಕರ್ಮಗಳು ಪುರುಷನನ್ನು ಸುಖ-ದುಃಖಗಳಲ್ಲಿ ಬಂಧಿಸುತ್ತವೆ. ಆದರೆ ಈ ಶುಭಾಶುಭ ಕರ್ಮಗಳಿಗೆ ಪುರುಷನು ಕರ್ತೃವಾಗಿದ್ದಾನೋ ಇಲ್ಲವೋ ಎಂಬ ವಿಷಯದಲ್ಲಿ ನನಗೆ ಸಂಶಯವುಂಟಾಗಿದೆ. ಇದನ್ನು ಯಥಾರ್ಥವಾಗಿ ನಿನ್ನಿಂದ ತಿಳಿಯಲು ಬಯಸುತ್ತೇನೆ.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಪ್ರಹ್ಲಾದಸ್ಯ ಚ ಸಂವಾದಮಿಂದ್ರಸ್ಯ ಚ ಯುಧಿಷ್ಠಿರ ॥೩॥

ಭೀಷ್ಮ– ಯುಧಿಷ್ಠಿರನೇ, ಈ ವಿಷಯದಲ್ಲಿ ಪ್ರಹ್ಲಾದನಿಗೂ ಮತ್ತು ಇಂದ್ರನಿಗೂ ನಡೆದ ಪುರಾತನವಾದ, ಇತಿಹಾಸರೂಪವಾದ ಸಂವಾದವನ್ನು ಉದಾಹರಿಸುತ್ತಾರೆ. ಅದನ್ನು ನಿನಗೂ ತಿಳಿಸುತ್ತೇನೆ, ಕೇಳು.

ಅಸಕ್ತಂ ಧೂತಪಾಪ್ಮಾನಂ ಕುಲೇ ಜಾತಂ ಬಹುಶ್ರುತಮ್ ।
ಅಸ್ತಂಭಮನಹಂಕಾರಂ ಸತ್ತ್ವಸ್ಥಂ ಸಮಯೇ ರತಮ್ ॥೪॥

ಒಂದು ಕಾಲದಲ್ಲಿ ಪಾಪಗಳನ್ನು ಪರಿಹರಿಸಿಕೊಂಡವನು, ಯಾವ ವಿಷಯದಲ್ಲಿಯೂ ಸಂಗ ಇಲ್ಲದವನು, ಸತ್ಕುಲಪ್ರಸೂತನೂ, ಬಹುಶ್ರುತನೂ, ಅಹಂಕಾರ-ಮಮಕಾರಗಳಿಂದ ರಹಿತನಾದವನು, ಧರ್ಮದ ಮರ್ಯಾದೆಯನ್ನು ರಕ್ಷಿಸುವವನು, ಸತ್ತ್ವಗುಣದಲ್ಲಿಯೇ ಆಸಕ್ತನಾದವನು,

ತುಲ್ಯನಿಂದಾಸ್ತುತಿಂ ದಾಂತಂ ಶೂನ್ಯಾಗಾರನಿವೇಶನಮ್ ।
ಚರಾಚರಾಣಾಂ ಭೂತಾನಾಂ ವಿದಿತಪ್ರಭವಾಪ್ಯಯಮ್ ॥೫॥

ಸ್ತುತಿ-ನಿಂದೆಗಳನ್ನು ಸಮಾನವಾಗಿ ಕಾಣುವವನು, ಇಂದ್ರಿಯನಿಗ್ರಹವನ್ನು ಹೊಂದಿದವನು, ಏಕಾಂತದಲ್ಲಿ ವಾಸ ಮಾಡುವವನು, ಸಮಸ್ತ ಜೀವರ ಸೃಷ್ಟಿ-ಲಯಗಳನ್ನು ಅರಿತವನು,

ಅಕ್ರುದ್ಧ್ಯಂತಮಹೃಷ್ಯಂತಮಪ್ರಿಯೇಷು ಪ್ರಿಯೇಷು ಚ ।
ಕಾಂಚನೇ ವಾಥ ಲೋಷ್ಟೇ ವಾ ಉಭಯೋಃ ಸಮದರ್ಶನಮ್ ॥೬॥

ಅಪ್ರಿಯವಾದುದರಲ್ಲಿ ಸಿಟ್ಟುಗೊಳ್ಳದೆ, ಅತಿಯಾಗಿ ಸಂತೋಷಗೊಳ್ಳದೆ, ಪ್ರಿಯವಾದುದರಲ್ಲಿ ಹರ್ಷಗೊಳ್ಳದೆ, ಸುವರ್ಣವನ್ನು ಮಣ್ಣಿನ ಹೆಂಟೆಯನ್ನು ಎರಡನ್ನೂ ಸಮಾನವಾಗಿ ಕಾಣುವವನು,

ಆತ್ಮನಿಃಶ್ರೇಯಸಜ್ಞಾನೇ ಧೀರಂ ನಿಶ್ಚಿತನಿಶ್ಚಯಮ್ ।
ಪರಾವರಜ್ಞಂ ಭೂತಾನಾಂ ಸರ್ವಜ್ಞಂ ಸಮದರ್ಶನಮ್ ॥೭॥

ತನಗೆ ಒಳಿತನ್ನು ಮಾಡುವ ಪರಮಾತ್ಮನ ಜ್ಞಾನದಲ್ಲಿ ನಿಶ್ಚಿತವಾದ ಬುದ್ಧಿಯುಳ್ಳವನು, ಜೀವರಲ್ಲಿ ಅಧಮರು ಯಾರು, ಉತ್ತಮರು ಯಾರು ಎಂಬುದನ್ನು ತಿಳಿದವನು, ಸರ್ವಜ್ಞನು, ಸಮದರ್ಶಿಯೂ,

ಅವ್ಯಕ್ತಾತ್ಮನಿ ಗೋವಿಂದೇ ವಾಸುದೇವೇ ಮಹಾತ್ಮನಿ ।
ಹೃದಯೇನ ಸಮಾವಿಷ್ಟಂ ಸರ್ವಭಾವಪ್ರಿಯಂಕರಮ್ ॥೮॥

ಅವ್ಯಕ್ತ ಸ್ವಭಾವದವನಾದ ಗೋವಿಂದನಲ್ಲಿ; ಮಹಾತ್ಮನಾದ ವಾಸುದೇವನಲ್ಲಿ ಮನಸ್ಸನ್ನು ನೆಲೆಗೊಳಿಸಿ ಎಲ್ಲ ಭೂತಗಳಿಗೂ ಪ್ರಿಯವನ್ನುಂಟು ಮಾಡುವವನು,

ಭಕ್ತಂ ಭಾಗವತಂ ನಿತ್ಯಂ ನಾರಾಯಣಪರಾಯಣಮ್ ।
ಧ್ಯಾಯಂತಂ ಪರಮಾತ್ಮಾನಂ ಹಿರಣ್ಯಕಶಿಪೋಃ ಸುತಮ್ ॥೯॥

ಭಗವದ್ ಭಕ್ತನಾದ, ನಿತ್ಯವೂ ಪಾರಾಯಣನಲ್ಲಿಯೇ ಆಸಕ್ತವಾದ ಮನಸ್ಸುಳ್ಳ, ಪರಮಾತ್ಮನ ಧ್ಯಾನರತನಾದ ಹಿರಣ್ಯಕಸಿಪುವಿನ ಮಗನಾದ,

ಶಕ್ರಃ ಪ್ರಹ್ಲಾದಮಾಸೀನಮೇಕಾಂತೇ ಸಂಯತೇಂದ್ರಿಯಮ್ ।
ಬುಭುತ್ಸಮಾನಸ್ತತ್ ಪ್ರಜ್ಞಾಮಭಿಗಮ್ಯೇದಮಬ್ರವೀತ್ ॥೧೦॥

ಜಿತೇಂದ್ರಿಯನೂ ಆದ, ಏಕಾಂತದಲ್ಲಿ ಕುಳಿತಿರುವ ಪ್ರಹ್ಲಾದನನ್ನು ಇಂದ್ರದೇವನು ತತ್ತ್ವವನ್ನು ತಿಳಿಯುವ ದೃಷ್ಟಿಯಿಂದ ಅವನ ಜ್ಞಾನವನ್ನು ಗೌರವಿಸಿ, ಪ್ರಹ್ಲಾದನ ಬಳಿ ಆಗಮಿಸಿ ಹೀಗೆ ಹೇಳಿದನು.

ಯೈಃ ಕೈಶ್ಚಿತ್ ಸಮ್ಮತೋ ಲೋಕೇ ಗುಣೈಃ ಸ್ಯಾತ್ ಪುರುಷೋ ನೃಷು ।
ಭವತ್ಯನಪಗಾನ್ ಸರ್ವಾಂಸ್ತಾನ್ ಗುಣಾಲ್ಲಕ್ಷಯಾಮಹೇ ॥೧೧॥

ದೈತ್ಯರಾಜನೇ, ಲೋಕದಲ್ಲಿ ಪುರುಷನು ಯಾವ ಗುಣಗಳಿಂದ ಜನರಿಂದ ಸನ್ಮಾನಿತನಾಗುತ್ತಾನೆ? ಆ ಎಲ್ಲ ಗುಣಗಳು ನಿನ್ನಲ್ಲಿ ಸ್ಥಿರವಾಗಿ ಇರುವುದನ್ನು ನಾನು ಕಾಣುತ್ತಿದ್ದೇನೆ.

ಅಥ ತೇ ಲಕ್ಷ್ಯತೇ ಬುದ್ಧಿಃ ಸಮಾ ಬಾಲಜನೈರಿಹ ।
ಆತ್ಮಾನಂ ಮನ್ಯಮಾನಃ ಸಂಶ್ರೇಯಃ ಕಿಮಿಹ ಮನ್ಯಸೇ ॥೧೨॥

ಬಾಲಜನರ ಬುದ್ಧಿಯು ಹೇಗೆ ರಾಗ-ದ್ವೇಷಗಳಿಂದ ರಹಿತವಾಗಿರುತ್ತದೋ ಹಾಗೆನಿನ್ನ ಬುದ್ಧಿಯು ಕಾಣಿಸುತ್ತಿದೆ. ನೀನು ಪರಮಾತ್ಮನನ್ನು ಚೆನ್ನಾಗಿ ತಿಳಿದು ಈ ಪರಮಾತ್ಮನ ಜ್ಞಾನಕ್ಕೆ ಶ್ರೇಷ್ಠವಾದ ಸಾಧನ ಯಾವುದೆಂದು ಭಾವಿಸಿರುವಿ?

ಬದ್ಧಃ ಪಾಶೈಶ್ಚ್ಯುತಃ ಸ್ಥಾನಾದ್ವಿಷತಾಂ ವಶಮಾಗತಃ ।
ಶ್ರಿಯಾ ವಿಹೀನಃ ಪ್ರಹ್ಲಾದ ಶೋಚಿತವ್ಯೇ ನ ಶೋಚಸಿ ॥೧೩॥

ನೀನೀಗ ಪಾಶಗಳಿಂದ ಬಂಧಿಸಲ್ಪಟ್ಟಿರುವಿ. ಚಕ್ರವರ್ತಿಯ ಸ್ಥಾನದಿಂದ ಚ್ಯುತನಾಗಿರುವಿ. ಶತ್ರುಗಳ ವಶನಾಗಿರುವಿ.ಸಂಪತ್ತಿನಿಂದ ಹೀನನಾಗಿರುವಿ. ಹೀಗಿದ್ದರೂ ದುಃಖಪಡುತ್ತಿಲ್ಲ. ಇದು ಹೇಗೆ ಸಾಧ್ಯವಾಗುತ್ತಿದೆ?

ಪ್ರಜ್ಞಾಲಾಭಾತ್ ತು ದೈತೇಯ ಉತಾಹೋ ಧೃತಿಮತ್ತಯಾ ।
ಪ್ರಹ್ಲಾದ ಸ್ವಸ್ಥರೂಪೋಽಸಿ ಪಶ್ಯನ್ ವ್ಯಸನಮಾತ್ಮನಃ ॥೧೪॥

ಪ್ರಹ್ಲಾದನೇ, ವ್ಯಸನಗಳನ್ನು ಪ್ರತ್ಯಕ್ಷವಾಗಿ ಕಾಣುತ್ತಿದ್ದರೂ ನೀನು ಹೇಗೆ ನಿಶ್ಚಿಂತನಾಗಿರುವಿ. ದೈತ್ಯರಾಜನೇ, ನಿನ್ನ ವ್ಯಸನವಾದ ಸಮಸ್ಥಿತಿಗೆ ಪರಮಾತ್ಮನ ಜ್ಞಾನವು ಕಾರಣವೆ? ಅಥವಾ ಧೈರ್ಯವು ಕಾರಣವೆ?

ಭೀಷ್ಮಃ

ಇತಿ ಸಂಚೋದಿತಸ್ತೇನ ಧೀರೋ ನಿಶ್ಚಿತನಿಶ್ಚಯಃ ।
ಉವಾಚ ಶ್ಲಕ್ಷ್ಣಯಾ ವಾಚಾ ಸ್ವಾಂ ಪ್ರಜ್ಞಾಮನುವರ್ಣಯನ್ ॥೧೫॥

ಈ ರೀತಿಯಾಗಿ ಇಂದ್ರನು ಉತ್ತರಿಸುವಂತೆ ಕೇಳಿದ ಬಳಿಕ ಬ್ರಹ್ಮಜ್ಞಾನವನ್ನು ನಿಶ್ಚಯವಾಗಿ ತಿಳಿದಿದ್ದ ಧೀರನಾದ ಪ್ರಹ್ಲಾದನು ತನ್ನಲ್ಲಿರುವ ಪರಮಾತ್ಮನ ಪ್ರಜ್ಞೆಯನ್ನು ವರ್ಣಿಸುತ್ತಾ ಗಂಭೀರವಾದ ಮಾತಿನಿಂದ ಹೀಗೆ ಹೇಳಿದನು.

ಪ್ರಹ್ಲಾದಃ

ಪ್ರವೃತ್ತಿಂ ಚ ನಿವೃತ್ತಿಂ ಚ ಭೂತಾನಾಂ ಯೋ ನ ಬುಧ್ಯತೇ ।
ತಸ್ಯ ಸ್ತಂಭೋ ಭವೇದ್ ಬಾಲ್ಯಾನ್ನಾಸ್ತಿ ಸ್ತಂಭೋನುಪಶ್ಯತಃ ॥೧೬॥

ದೇವರಾಜನೇ, ಸಮಸ್ತ ಪ್ರಾಣಿಗಳ ಪ್ರವೃತ್ತಿ ನಿವೃತ್ತಿಗಳ ರಹಸ್ಯವನ್ನು ಯಾರು ಅರಿತಿಲ್ಲವೋ ಅವನಿಗೆ ಬಾಲ್ಯದಿಂದ ಗರ್ವವು ಉತ್ಪನ್ನವಾಗುತ್ತದೆ. ದೇವದಿಂದಲೇ ಎಲ್ಲವೂ ನಡೆಯುತ್ತಿದೆ ಎಂದು ಅರಿತವನಿಗೆ ಗರ್ವವು ಉಂಟಾಗುವುದಿಲ್ಲ.

ಗಹನಂ ಸರ್ವಭೂತಾನಾಂ ಧ್ಯೇಯಂ ನಿತ್ಯಂ ಸನಾತನಮ್ ।
ಅನಿಗ್ರಹಮನೌಪಮ್ಯಂ ಸರ್ವಾಕಾರಂ ಪರಾತ್ ಪರಮ್ ॥೧೭॥

ಎಲ್ಲ ಜೀವರಲ್ಲಿ ಅಡಗಿದ ನಿತ್ಯವೂ ಸನಾತನವೂ ಆದ ಹರಿಯನ್ನು ಧ್ಯಾನಿಸಬೇಕು. ಶ್ರೀಹರಿಯನ್ನು ಯಾರಿಂದಲೂ ನಿಗ್ರಹಿಸಲಾಗದು. ಉಪಮಾನರಹಿತನು, ಎಲ್ಲ ವಸ್ತುಗಳಲ್ಲಿ ಅಂತರ್ಯಾಮಿಯಾಗಿದ್ದು ಆಯಾ ಆಕಾರ ನೀಡಿದವನು, ಪರಾತ್ಪರನು.

ಸರ್ವಾವರಣಸಂಭೂತಂ ತಸ್ಮಾದೇತತ್ ಪ್ರವರ್ತತೇ ।
ತನ್ಮಯಾ ಅಪಿ ಸಂಪಶ್ಯ ನಾನಾಲಕ್ಷಣಲಕ್ಷಿತಾಃ ॥೧೮॥

ಸಮಸ್ತ ವಿಶ್ವದ ಆವರಣಗಳಿಂದ ಕೂಡಿರುವ ಹರಿಯಿಂದಲೇ ಎಲ್ಲವೂ ನಡೆಯುತ್ತದೆ. ಎಲ್ಲರೂ ಶ್ರೀಹರಿಯಿಂದಲೇ ಅನೇಕ ಲಕ್ಷಣಗಳನ್ನು ಹೊಂದಿದ್ದಾರೆ. ನನ್ನನ್ನೂ ಹೀಗೆಯೇ ತಿಳಿ.

ಸ ವೈ ಪಾತಿ ಜಗತ್ಸ್ರಷ್ಟಾ ವಿಷ್ಣುರಿತ್ಯಭಿಶಬ್ದಿತಃ ।
ಪುನರ್ದಂಶತಿ ಸಂಪ್ರಾಪ್ತೇ ಅವಸಾನೇ ಸುರೇಶ್ವರಃ ॥೧೯॥

ಜಗತ್ತನ್ನು ಸೃಷ್ಟಿಸಿದ ವಿಷ್ಣು ಶಬ್ದವಾಚ್ಯನಾದ ಶ್ರೀಹರಿಯೇ ಜಗತ್ತನ್ನು ಪರಿಪಾಲಿಸುತ್ತಾನೆ. ಪ್ರಳಯಕಾಲ ಬಂದಾಗ ಜಗತ್ತನು ಶ್ರೀಹರಿಯು ಭುಂಜಿಸಿ ಲಯಗೊಳಿಸುತ್ತಾನೆ.

ಸ್ವಭಾವಾತ್ ಸಂಪ್ರವರ್ತಂತೇ ನಿವರ್ತಂತೇ ತಥೈವ ಚ ।
ಸರ್ವೇ ಭಾವಾಸ್ತಥಾಭಾವಾಃ ಪುರುಷಾರ್ಥೋ ನ ವಿದ್ಯತೇ ॥೨೦॥

ಈ ವಿಧವಾದ ಸಮಸ್ತ ಜೀವರ ಹುಟ್ಟು-ಸಾವುಗಳು ಭಗವಂತನ ದೆಸೆಯಿಂದಲೇ ನಡೆಯುತ್ತಿದೆ ಹೊರತು ಈ ಕಣ್ಣಿಗೆ ಕಾಣುವ ಪುರುಷರಿಂದ ಯಾವ ಪ್ರಯತ್ನವು ನಡೆಯುವುದಿಲ್ಲ.

ಪುರುಷಾರ್ಥಸ್ಯ ಚಾಭಾವೇ ನಾಸ್ತಿ ಕಶ್ಚಿತ್ ಸ್ವಕಾರಕಃ ।
ಸ್ವಯಂ ತು ಕುರ್ವತಸ್ತಸ್ಯ ಜಾತು ಮಾನೋ ಭವೇದಿಹ ॥೨೧॥

ಪುರುಷನು ತನ್ನ ಪ್ರಯತ್ನದಿಂದ ಕೆಲಸ ಮಾಡದಿದ್ದಾಗ ಅವನು ಆ ಕ್ರಿಯೆಗಳಿಗೆ ಕರ್ತೃವಾಗುವುದಿಲ್ಲ. ಹೀಗಿದ್ದರೂ ಯಾವುದನ್ನೂ ಮಾಡದೆ ಈ ಜಗತ್ತಿನಲ್ಲಿ ವಾಸ ಮಾಡುತ್ತಾ ಕೆಲವರು ನಾನು ಮಾಡಿದೆನೆಂಬ ಅಭಿಮಾನಕ್ಕೆ ತುತ್ತಾಗುತ್ತಾರೆ.

ಯಸ್ತು ಕರ್ತಾರಮಾತ್ಮಾನಂ ಮನ್ಯತೇ ಸಾಧ್ವಸಾಧುನೋಃ ।
ತಸ್ಯ ದೋಷವತೀ ಪ್ರಜ್ಞಾ ಸ್ವಮೂರ್ತ್ಯಜ್ಞೇತಿ ಮೇ ಮತಿಃ ॥೨೨॥

ಯಾರು ಶುಭಾಶುಭ ಕರ್ಮಗಳಿಗೆ ಸ್ವತಂತ್ರನಾಗಿ ತಾನೇ ಕರ್ತೃವೆಂದು ಭಾವಿಸಿದ್ದಾನೋ ಅವನ ಬುದ್ಧಿಯು ದೋಷಲಿಪ್ತವಾಗಿ ತತ್ತ್ವಜ್ಞಾನರಹಿತವಾಗಿರುತ್ತದೆ.

ಯದಿ ಸ್ಯಾತ್ ಪುರುಷಃ ಕರ್ತಾ ಶಕ್ತಾತ್ಮಶ್ರೇಯಸೇ ಧ್ರುವಮ್ ।
ಆರಂಭಾಸ್ತಸ್ಯ ಸಿದ್ಧ್ಯೇರನ್ನ ಚ ಜಾತು ಪರಾಭವೇತ್ ॥೨೩॥

ಒಂದು ವೇಳೆ ಪರಮ ಪುರುಷನಾದ ಭಗವಂತನಂತೆ ಜೀವನು ಸ್ವತಂತ್ರಕರ್ತೃವಾಗಿದ್ದರೆ ಆಗ ತನ್ನ ಕಲ್ಯಾಣಕ್ಕಾಗಿ ನಿಶ್ಚಯವಾಗಿ ಪ್ರಯತ್ನ ಮಾಡುತ್ತಿದ್ದನು. ಅವನ ಪ್ರಯತ್ನವೆಲ್ಲವೂ ಸಿದ್ಧಿಸುತ್ತಿದ್ದವು. ಎಂದಿಗೂ ಪರಾಭವ ಹೊಂದುತ್ತಿರಲಿಲ್ಲ.

ಅನಿಷ್ಟಸ್ಯ ಹಿ ನಿರ್ವೃತ್ತಿರನಿವೃತ್ತಿಃ ಪ್ರಿಯಸ್ಯ ಚ ।
ಲಕ್ಷ್ಯತೇ ಯತಮಾನಾನಾಂ ಪುರುಷಾರ್ಥಸ್ತತಃ ಕುತಃ ॥೨೪॥

ಆದರೆ ಜೀವನು ಅನಿಷ್ಟದಲ್ಲಿ ನಿರಂತರ ಪ್ರವೃತ್ತಿಯುಳ್ಳವನಾಗಿದ್ದಾನೆ. ಪ್ರಿಯದಲ್ಲಿ ಪ್ರವೃತ್ತಿಯನ್ನು ಹೊಂದುತ್ತಿಲ್ಲ. ಆದ್ದರಿಂದ ಪ್ರಯತ್ನಶೀಲನಾದ ಈ ಜೀವನಿಗೆ ತನ್ನ ಇಚ್ಛೆಯಿಂದಲೇ ಪುರುಷಾರ್ಥವು ಹೇಗೆ ಲಭಿಸುತ್ತಿದೆ?

ಅನಿಷ್ಟಸ್ಯಾಭಿನಿರ್ವೃತ್ತಿಮಿಷ್ಟಸಂವೃತ್ತಿಮೇವ ಚ ।
ಅಪ್ರಯತ್ನೇನ ಪಶ್ಯಾಮಃ ಕೇಷಾಂಚಿತ್ತತ್ಸ್ವಭಾವತಃ ॥೨೫॥

ಇನ್ನು ಕೆಲವರಿಗೆ ಭಗವಂತನ ಸ್ವಾತಂತ್ರ್ಯ ಸ್ವಭಾವದಿಂದ ಪ್ರಯತ್ನವಿಲ್ಲದೆ ಅನಿಷ್ಟವು ನಿವಾರಣೆಯಾಗುತ್ತಿದೆ. ಇಷ್ಟವು ಪ್ರಯತ್ನವಾಗಿಯೇ ಪ್ರಾಪ್ತವಾಗುತ್ತಿದೆ. ಇದನ್ನು ನೋಡುತ್ತಿದ್ದೇವೆ. ಈ ಎರಡು ಭಗವಂತನ ಸ್ವಾತಂತ್ರ್ಯ ಗುಣದಿಂದಲೇ ನಡೆಯುತ್ತಿದೆ ಎಂದು ತಿಳಿಯಬೇಕು.

ಪ್ರತಿರೂಪಧರಾಃ ಕೇಚಿದ್ ದೃಶ್ಯಂತೇ ಬುದ್ಧಿಸತ್ತಮಾಃ ।
ವಿರೂಪೇಭ್ಯೋಲ್ಪಬುದ್ಧಿಭ್ಯೋ ಲಿಪ್ಸಮಾನಾ ಧನಾಗಮಮ್ ॥೨೬॥

ಕೆಲವರು ಹೆಚ್ಚು ಬುದ್ಧಿವಂತರಾದ ಸುಂದರ ಪುರುಷರು ಕುರೂಪಿಗಳಾದ ಅಲ್ಪ ಬುದ್ಧಿಯವರಿಂದ ಹಣವನ್ನು ಕಿತ್ತುಕೊಳ್ಳಲು ಅಪೇಕ್ಷಿಸುತ್ತಾರೆ.

ಸ್ವಭಾವಪ್ರೇರಿತಾಃ ಸರ್ವೇ ನಿವಿಶಂತೇ ಗುಣಾ ಯದಾ ।
ಶುಭಾಶುಭಾಸ್ತದಾ ತತ್ರ ತಸ್ಯ ಕಿಂ ಮಾನಕಾರಣಮ್ ॥೨೭॥

ಎಲ್ಲಾ ಗುಣಗಳು, ಎಲ್ಲಾ ಕರ್ಮಗಳು ಸ್ವಭಾವದಿಂದಲೇ ಪ್ರೇರಿತವಾಗಿ ನಿರ್ವಾಹವಾಗುತ್ತವೆ ಎನ್ನುವುದಾದರೆ ಅದನ್ನು ನಾನೇ ಮಾಡಿದೆನೆಂದು ಅಭಿಮಾನ ಪಡಲು ಯಾವ ಕಾರಣವಿದೆ? ಯೋಚಿಸು.

ಸ್ವಭಾವಾದೇವ ತತ್ ಸರ್ವಮಿತಿ ಮೇ ನಿಶ್ಚಿತಾ ಮತಿಃ ।
ಆತ್ಮಪ್ರತಿಷ್ಠಿತಾ ಪ್ರಜ್ಞಾ ಮಮ ನಾಸ್ತಿ ತತೋಽನ್ಯಥಾ ॥೨೮॥

ಭಗವಂತನ ಅನುಗ್ರಹದಿಂದ ಜೀವನಿಷ್ಟವಾದ ಕರ್ಮಗಳೇ ಪ್ರವೃತ್ತಿಯನ್ನು ಹೊಂದುತ್ತವೆ ಎಂದು ನನ್ನ ನಿಶ್ಚಿತವಾದ ಅಭಿಪ್ರಾಯವಾಗಿದೆ. ಪರಮಾತ್ಮನಲ್ಲಿ ದೃಢವಾದ ಪ್ರಜ್ಞೆಯುಳ್ಳ ನನಗೆ ಅದಕ್ಕಿಂತ ಬೇರೆಯಾದ ಪ್ರೇರಕ ಶಕ್ತಿಯು ಕಾಣಿಸುವುದಿಲ್ಲ.

ಕರ್ಮಜಂ ತ್ವಿಹ ಮನ್ಯೇಽಹಂ ಫಲಯೋಗಂ ಶುಭಾಶುಭಮ್ ।
ಕರ್ಮಣಾಂ ವಿಷಯಂ ಕೃತ್ಸ್ನಮಹಂ ವಕ್ಷ್ಯಾಮಿ ತಚ್ಛೃಣು ॥೨೯॥

ಶುಭಾಶುಭ ಫಲಪ್ರಾಪ್ತಿಗೆ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳು ಕಾರಣವೆಂದು

ನಾನು ಭಾವಿಸುತ್ತೇನೆ. ಮುಂದೆ ಈ ಕರ್ಮಗಳ ವಿಷಯದಲ್ಲಿ ಸಮಗ್ರವಾಗಿ ಹೇಳುತ್ತೇನೆ, ಕೇಳು.

ಯಥಾ ವೇದಯತೇ ಕಶ್ಚಿದೋದನಂ ಪಾಯಸಂ ತ್ವದನ್ ।
ಏವಂ ಸರ್ವಾಣಿ ಕರ್ಮಾಣಿ ಸ್ವಭಾವಸ್ಯೈವ ಲಕ್ಷಣಮ್ ॥೩೦॥

ಯಾವ ರೀತಿ ಒಬ್ಬನು ಪಾಯಸದ ಅನ್ನವನ್ನೇ ತಿನ್ನುತ್ತಾ ತನ್ನ ಹಲ್ಲುಗಳಿಂದ ತನ್ನ ನಾಲಿಗೆಯನ್ನೇ ಕಚ್ಚಿಕೊಂಡು ದುಃಖವನ್ನು ಹೊಂದುತ್ತಾನೆ ಇದರಿಂದ ಭಗವಂತನೇ ಸ್ವತಂತ್ರನು. ಅವನ ಸಂಕಲ್ಪದಂತೆ ಎಲ್ಲಾ ಕರ್ಮಗಳು ನಡೆಯುತ್ತವೆ ಎಂಬುದನ್ನು ತಿಳಿಯಬಹುದು.

ವಿಕಾರಾನೇವ ಯೋ ವೇದ ನ ವೇದ ಪ್ರಕೃತಿಂ ಪರಾಮ್ ।
ತಸ್ಯ ಸ್ತಂಭೋ ಭವೇದ್ ಬಾಲ್ಯಾನ್ನಾಸ್ತಿ ಸ್ತಂಭೋನುಪಶ್ಯತಃ ॥೩೧॥

ಯಾವ ಮನುಷ್ಯನು ಕಾರ್ಯಗಳಾಗುವುದಕ್ಕೆ ಕಾರಣವೇನೆಂಬುದನ್ನು ತಿಳಿಯದೆ ಕಾರ್ಯವನ್ನು ಮಾತ್ರ ತಿಳಿದಿರುತ್ತಾನೋ ಮೂಲಪ್ರಕೃತಿಯೆನಿಸಿದ ನಾರಾಯಣನನ್ನು, ಕಾರಣನನ್ನು ತಿಳಿದಿಲ್ಲವೋ ಅವನಿಗೆ ಬಾಲ್ಯದಿಂದಲೇ ಗರ್ವವು ಉಂಟಾಗುತ್ತದೆ. ಕಾರಣ ಪುರುಷನಾದ ಭಗವಂತನನ್ನು ಕಾಣುವವನಿಗೆ ಗರ್ವವು ಉಂಟಾಗುವುದಿಲ್ಲ.

ಸ್ವಭಾವಭಾವಿನೋ ಭಾವಾನ್ ಸರ್ವಾನೇವೇಹ ನಿಶ್ಚಯೇ ।
ಬುದ್ಧ್ಯಮಾನಸ್ಯ ದರ್ಪೋ ವಾ ಮಾನೋ ವಾ ಕಿಂ ಕರಿಷ್ಯತಿ ॥೩೨॥

ಸಮಸ್ತ ಕ್ರಿಯೆಗಳು ಸ್ವಭಾವದಿಂದಲೇ ಉಂಟಾಗುತ್ತವೆ. ಯಾರು ಈ ವಿಷಯವನ್ನು ನಿಶ್ಚಯ ಜ್ಞಾನದಿಂದ ತಿಳಿದಿರುತ್ತಾರೋ ಅವರಿಗೆ ದರ್ಪವಾಗಲಿ, ಅಭಿಮಾನವಾಗಲಿ ಏನು ಮಾಡೀತು?

ವೇದ ಧರ್ಮವಿಧಿಂ ಕೃತ್ಸ್ನಂ ಭೂತಾನಾಂ ಚಾಪ್ಯನಿತ್ಯತಾಮ್ ।
ತಸ್ಮಾಚ್ಚಕ್ರ ನ ಶೋಚಾಮಿ ಸರ್ವಂ ಹ್ಯೇವೇದಮಂತವತ್ ॥೩೩॥

ಇಂದ್ರನೇ, ನಾನು ಸಮಗ್ರವಾಗಿ ಧರ್ಮವಿಧಿಗಳನ್ನು, ಸಮಸ್ತ ಪ್ರಾಣಿಗಳ ಅನಿತ್ಯತೆಯನ್ನು ಅರಿತಿದ್ದೇನೆ. ಎಲ್ಲವೂ ನಾಶವುಳ್ಳ ಸ್ವಭಾವವುಳ್ಳದ್ದು ಎಂದು ತಿಳಿದು ನಾನು ಈ ರಾಜೈಶ್ವರ್ಯಗಳಿಗೆ ಹಲುಬುತ್ತಿಲ್ಲ, ಶೋಕವನ್ನೂ ಪಡುತ್ತಿಲ್ಲ.

ನಿರ್ಮಮೋ ನಿರಹಂಕಾರೋ ನಿರೀಹೋ ಮುಕ್ತಬಂಧನಃ ।
ಸ್ವಸ್ಥೋಽವ್ಯಪೇತಃ ಪಶ್ಯಾಮಿ ಭೂತಾನಾಂ ಪ್ರಭವಾಪ್ಯಯೌ ॥೩೪॥

ಅಹಂಕಾರ-ಮಮಕಾರಗಳನ್ನು ತೊರೆದು, ಎಲ್ಲವಿಧ ಬಂಧನಗಳಿಂದ ಮುಕ್ತನಾಗಿ, ಅಸಂಗನಾಗಿ, ಭಗವಂತನಲ್ಲಿ ಬುದ್ಧಿಯುಳ್ಳವನಾಗಿ, ಪ್ರಾಣಿಗಳ ಉದಯ, ಅಸ್ತಮಾನಗಳನ್ನು ನೋಡುತ್ತಿದ್ದೇನೆ.

ಕೃತಪ್ರಜ್ಞಸ್ಯ ದಾಂತಸ್ಯ ವಿತೃಷ್ಣಸ್ಯ ನಿರಾಶಿಷಃ ।
ನಾಯಾಸೋ ವಿದ್ಯತೇ ಶಕ್ರ ಪಶ್ಯತೋ ಲೋಕವಿದ್ಯಯಾ ॥೩೫॥

ಸಂಸ್ಕೃತ ಬುದ್ಧಿಯನ್ನು ಹೊಂದಿರುವ ಇಂದ್ರಿಯನಿಗ್ರಹವನ್ನು ಸಂಪಾದಿಸಿರುವ, ಆಸೆಯಿಂದ ಮುಕ್ತನಾಗಿ ಯಾವುದನ್ನೂ ಅಪೇಕ್ಷಿಸದಿರುವ ನನಗೆ ಯಾವುದೇ ವಿಧವಾದ ಆಯಾಸವು ಇರುವುದಿಲ್ಲ. ಜಗತ್ತಿನ ಸಹಜವಾದ ಧರ್ಮಗಳನ್ನು ನಾನು ನೋಡುತ್ತಿರುತ್ತೇನೆ.

ಪ್ರಕೃತೌ ಚ ವಿಕಾರೇ ಚ ನ ಮೇ ಪ್ರೀತಿರ್ನ ಚ ದ್ವಿಷೇ ।
ದ್ವೇಷ್ಟಾರಂ ನ ಚ ಪಶ್ಯಾಮಿ ಯೋ ಮಮಾದ್ಯ ಮಮಾಯತೇ ॥೩೬॥

ಪ್ರಕೃತಿ ಮತ್ತು ಅದರ ಕಾರ್ಯಗಳ ವಿಷಯದಲ್ಲಿ ನನಗೆ ಪ್ರೀತಿಯೂ ಇಲ್ಲ, ದ್ವೇಷವೂ ಇಲ್ಲ. ನಾನು ಯಾರನ್ನೂ ನನ್ನ ದ್ವೇಷಿ ಎಂದಾಗಲೀ, ನನ್ನ ಮೋಹದ ವಸ್ತುವೆಂದಾಗಲೀ ತಿಳಿಯುವುದಿಲ್ಲ.

ನೋರ್ಧ್ವಂ ನಾವಾ ನ ತಿರ್ಯಕ್ಚ ನ ಕ್ವಚಿಚ್ಚಕ್ರ ಕಾಮಯೇ ।
ನ ವಿಜ್ಞಾನೇ ನ ಹಿ ಜ್ಞೇಯೇ ನಾಜ್ಞಾನೇ ಶರ್ಮ ವಿದ್ಯತೇ ॥೩೭॥

ನಾನು ಮೇಲಾಗಲಿ, ಕೆಳಗಾಗಲಿ, ಅಡ್ಡವಾಗಲಿ, ಯಾವುದೇ ಸ್ಥಳದಲ್ಲಾಗಲೀ ಏನನ್ನೂ ಬಯಸುವುದಿಲ್ಲ. ರೂಪ-ರಸಾದಿಗಳ ಜ್ಞಾನದಲ್ಲಿಯಾಗಲಿ, ವಿಜ್ಞಾನದಲ್ಲೇ ಆಗಲಿ, ನನಗೆ ಯಾವುದೇ ರೀತಿಯಾದ ಆಯಾಸವಿರುವುದಿಲ್ಲ. ಅವುಗಳ ಪ್ರಲೋಭನೆಗೆ ನಾನು ಸಿಲುಕಿರುವುದಿಲ್ಲ ಎಂದು ಭಾವ.

ಶಕ್ರಃ

ಯೇನೈಷಾ ಲಭ್ಯತೇ ಪ್ರಜ್ಞಾ ಯೇನ ಶಾಂತಿರವಾಪ್ಯತೇ ।
ಪ್ರಬ್ರೂಹಿ ತಮುಪಾಯಂ ಮೇ ಸಮ್ಯಕ್ ಪ್ರಹ್ಲಾದ ಪೃಚ್ಛತೇ ॥೩೮॥

ಇಂದ್ರ– ಪ್ರಹ್ಲಾದನೇ, ಯಾವ ಉಪಾಯದಿಂದ ಈ ಪ್ರಜ್ಞೆಯು ಲಭಿಸುತ್ತದೆ? ಯಾವ ಉಪಾಯದಿಂದ ಮನಶ್ಶಾಂತಿಯು ಲಭಿಸುತ್ತದೆ. ಈ ಉಪಾಯವನ್ನು ನನಗೆ ತಿಳಿಸು.

ಪ್ರಹ್ಲಾದಃ

ಆರ್ಜವೇನಾಪ್ರಮಾದೇನ ಪ್ರಸಾದೇನಾತ್ಮವತ್ತಯಾ ।
ವೃದ್ಧಶುಶ್ರೂಷಯಾ ಶಕ್ರ ಪುರುಷೋ ಲಭತೇ ಮಹತ್ ॥೩೯॥

ಪ್ರಹ್ಲಾದ– ದೇವೇಂದ್ರನೇ, ಋಜುಭಾವ, ಅಪ್ರಮಾದ, ಬುದ್ಧಿಯ ನೈರ್ಮಲ್ಯ, ಭಗವತ್ಪಜ್ಞೆ, ವೃದ್ಧರ ಸೇವೆ ಇವುಗಳಿಂದ ಪುರುಷನು ಮಹತ್ತ್ವವನ್ನು ಹೊಂದುತ್ತಾನೆ.

ಸ್ವಭಾವಾಲ್ಲಭತೇ ಪ್ರಜ್ಞಾಂ ಶಾಂತಿಮೇತಿ ಸ್ವಭಾವತಃ ।
ಸ್ವಭಾವಾದೇವ ತತ್ ಸರ್ವಂ ಯತ್ಕಿಂಚಿದನುಪಶ್ಯಸಿ ॥೪೦॥

ಸ್ವತಂತ್ರನಾದ ನಾರಾಯಣನಿಂದ ಒಳ್ಳೆಯ ಪ್ರಜ್ಞೆಯನ್ನು, ಶಾಂತಿಯನ್ನು ಜೀವನು ಹೊಂದುತ್ತಾನೆ. ನಾರಾಯಣನಿಂದಲೇ ಎಲ್ಲವೂ ಲಭಿಸುತ್ತದೆ. ಏನೆಲ್ಲ ನೋಡಲು ಬಯಸುತ್ತೀಯೋ ಅದೆಲ್ಲವೂ ನಾರಾಯಣನ ಅನುಗ್ರಹದಿಂದಲೆ.

ನೈವಾಂತರಂ ವಿಜಾನಾತಿ ಶ್ರುತ್ವಾ ಗುರುಮುಖಾತ್ ತತಃ ।
ವಾಕ್ಯಂ ವಾಕ್ಯಾರ್ಥವಿಜ್ಞಾನಮಾಲೋಕ್ಯ ಮನಸಾ ಯತಿಃ ॥೪೧॥

ಯಾವನು ಗುರುಮುಖದಿಂದ ವಾಕ್ಯವನ್ನು, ವಾಕ್ಯಾರ್ಥವನ್ನು, ಅದರ ವಿಜ್ಞಾನವನ್ನು ಚೆನ್ನಾಗಿ ತಿಳಿದಿದ್ದಾನೋ ಅವನು ಮನಸ್ಸಿನಿಂದ ಪಕ್ವತೆಯನ್ನು ಪಡೆದ ಕಾರಣದಿಂದ ಭಗವಂತನ ವ್ಯಾಪಾರಗಳಲ್ಲಿ ಭೇದಗಳನ್ನು ತಿಳಿಯಲಾರನು.

ವಿವೇಕಪ್ರತ್ಯಯಾಪನ್ನಮಾತ್ಮಾನಮನುಪಶ್ಯತಿ ।
ವಿರಜ್ಯತಿ ತತೋ ಭೀತ್ಯಾ ಪರಮೇಶ್ವರಮೃಚ್ಛತಿ ॥೪೨॥

ವಿವೇಕದಿಂದ ಜ್ಞಾನವನ್ನು ಹೊಂದಿದ ವ್ಯಕ್ತಿಯು ಪರಮಾತ್ಮನನ್ನು ಹೃದಯದಲ್ಲಿ ನೋಡುತ್ತಾನೆ. ವಿಷಯಪದಾರ್ಥಗಳಿಂದ ವಿರಕ್ತನಾಗುತ್ತಾನೆ. ಪರಮಾತ್ಮನನ್ನೇ ಬಯಸುತ್ತಾನೆ.

ತ್ರಾತಾರಂ ಸರ್ವದುಃಖಾನಾಂ ತತ್ಸುಖಾನ್ವೇಷಣಂ ತತಃ ।
ಕರೋತಿ ಸದ್ಭಿಃ ಸಂಸರ್ಗಮಲಂ ಸಂತಃ ಸುಖಾಯ ವೈ ॥೪೩॥

ಸಮಸ್ತ ದುಃಖಗಳಿಂದ ರಕ್ಷಿಸುವ ಭಗವಂತನಿಂದಲೇ ಸುಖವನ್ನು ಬಯಸುತ್ತಾನೆ. ಸಜ್ಜನರ ಸಂಗವನ್ನು ಮಾಡುತ್ತಾನೆ. ಅನಂತ ಸುಖಕ್ಕೋಸ್ಕರ ಭಗವನ್ನಿಷ್ಠನಾಗಿಯೇ ಇರುತ್ತಾನೆ.

ಸತಾಂ ಸಕಾಶಾದಾಜ್ಞಾಯ ಮಾರ್ಗಂ ಲಕ್ಷಣವತ್ತಯಾ ।
ಸರ್ವಸಂಗವಿನಿರ್ಮುಕ್ತಃ ಪರಮಾತ್ಮಾನಮೃಚ್ಛತಿ ॥೪೪॥

ಸಜ್ಜನರ ಸಹವಾಸದಿಂದ ಭಗವಂತನ ಲಕ್ಷಣಗಳನ್ನು, ಅವನ ಮಾರ್ಗಗಳನ್ನು ಚೆನ್ನಾಗಿ ತಿಳಿದು, ಸರ್ವಸಂಗಗಳಿಂದ ಮುಕ್ತನಾಗಿ ಪರಮಾತ್ಮನನ್ನೇ ಹೊಂದುತ್ತಾನೆ.

ವಿಷಯೇಚ್ಛಾಕೃತೋ ಧರ್ಮಂ ಸರಜಸ್ಕೋ ಭಯಾವಹಃ ।
ಧರ್ಮಹಾನಿಮವಾಪ್ನೋತಿ ಕ್ರಮಾತ್ ತೇನ ನರಃ ಪುನಃ ॥೪೫॥

ಯಾವನು ವಿಷಯಪದಾರ್ಥಗಳನ್ನೇ ಬಯಸುತ್ತಾ ರಜೋಗುಣದಿಂದ ಧರ್ಮವನ್ನು ತ್ಯಜಿಸುತ್ತಾನೋ ಅವನು ಧರ್ಮಹಾನಿಯನ್ನು ಹೊಂದಿದವನಾಗಿ, ಭಯವನ್ನು ಹೊಂದಿದವನಾಗಿ ಪುನಃ ಪುನಃ ಈ ಜಗತ್ತಿನ ಹಾನಿಗಳಿಗೆ ತುತ್ತಾಗುತ್ತಾನೆ.

ಭಕ್ತಿಹೀನೋ ಭವತ್ಯೇವ ಪರಮಾತ್ಮನಿ ಚಾಚ್ಯುತ ।
ವಾಚಕೇ ವಾऽಪಿ ಚ ಸ್ಥಾನಂ ನ ಹಂತ್ಯೇವ ವಿಮೋಚಿತಃ ॥೪೬॥

ವಿಷಯಪದಾರ್ಥಗಳ ಸಂಗದಿಂದ ಭಗವಂತನಲ್ಲಿ ಅವನು ಭಕ್ತಿಹೀನನಾಗುತ್ತಾನೆ. ಸದ್ವಿಚಾರವನ್ನು ಉಪದೇಶಿಸುವ ಆಚಾರ್ಯರ ವಚನಗಳು ಬಂಧನ ಬಿಡುಗಡೆಗಾಗಿ ಪ್ರಯತ್ನಿಸಿದರೂ ವಿಷಯಾಸಕ್ತನ ಬಂಧನಗಳು ಪರಿಹಾರವಾಗುವುದಿಲ್ಲ.

ಸಾಕ್ಷ್ಯೇ ಚಾಸ್ಯ ರತಿರ್ನಿತ್ಯಂ ಸಂಸಾರೇ ಚ ರತಿರ್ಭವೇತ್ ।
ತಸ್ಯ ನಿತ್ಯಮವಿಜ್ಞಾನಾದಾತ್ಮಾ ಚೈವ ನ ಸಿದ್ಧ್ಯತಿ ॥೪೭॥

ಇಂದ್ರಿಯಗೋಚರಗಳಾದ ವಿಷಯಗಳಲ್ಲಿಯೇ ಅವನಿಗೆ ಪ್ರೀತಿಯು ಹೆಚ್ಚುತ್ತದೆ. ಸಂಸಾರದಲ್ಲಿ ರತಿ ಹುಟ್ಟುತ್ತದೆ. ಅಜ್ಞಾನದ ಮುದ್ದೆಯಾದ ಅವನಿಗೆ ಪರಮಾತ್ಮನ ಜ್ಞಾನವು ಸಿದ್ಧಿಸದು.

ಉನ್ಮತ್ತವೃತ್ತಿರ್ಭವತಿ ಕ್ರಮಾದೇವಂ ಪ್ರವರ್ತತೇ ।
ಆಶೌಚಂ ವರ್ಧತೇ ನಿತ್ಯಂ ನ ಶಾಮ್ಯತಿ ಕಥಂಚನ ॥೪೮॥

ಅವನು ವಿಷಯಗಳಲ್ಲಿಯೇ ಆಸಕ್ತನಾಗಿ ಹುಚ್ಚನಂತೆ ಆಗುತ್ತಾನೆ. ಅವನಿಗೆ ಆತ್ಮಶುದ್ಧಿಯೂ ಇಲ್ಲ, ಶಾಂತಿಯೂ ಇಲ್ಲ. ವಿಷಯಗಳ ತೃಷ್ಣೆಯು ಎಂದಿಗೂ ಉಪಶಮನ ಹೊಂದುವುದಿಲ್ಲ.

ವಿಷಯೇ ಚಾನ್ವಿತಸ್ಯಾಸ್ಯ ಮೋಕ್ಷವಾಂಛಾ ನ ಜಾಯತೇ ।
ಹೇತ್ವಾಭಾಸೇಷು ಸಂಲೀನಃ ಸ್ತೌತಿ ವೈಷಯಿಕಾನ್ ಗುಣಾನ್ ॥೪೯॥

ವಿಷಯ ಪದಾರ್ಥಗಳಿಂದಲೇ ಆಸಕ್ತನಾದವನಿಗೆ ಮೋಕ್ಷದ ವಿಷಯದ ಅಪೇಕ್ಷೆಯೇ ಹುಟ್ಟುವುದಿಲ್ಲ. ನಿಜವಾದ ಕಾರಣಗಳಲ್ಲದ ವಿಷಯಗಳಲ್ಲಿ ಕಾರಣತ್ವವನ್ನು ಚಿಂತಿಸುತ್ತಾ, ಆ ವಿಷಯಗಳನ್ನೇ ಸ್ತುತಿಸುತ್ತಾ ವಿಷಯ ಗುಣಗಳಲ್ಲಿಯೇ ಮುಳುಗಿ ಹೋಗುತ್ತಾನೆ.

ನ ಶಾಸ್ತ್ರಾಣಿ ಶೃಣೋತ್ಯೇವ ಮಾನದರ್ಪಸಮನ್ವಿತಃ ।
ಸ್ವತಃ ಸಿದ್ಧಂ ನ ಭೋಗಸ್ತಂ ಸ್ವತಃಸಿದ್ಧಂ ನ ವೇತ್ತಿ ಚ ।
ಚಿದ್ರೂಪಧಾರಣಂ ಚೈವ ಪರಸ್ಪಷ್ಟಮಥಾವ್ಯಯಮ್ ॥೫೦॥

ಮಾನದರ್ಪಗಳಿಂದ ಕೂಡಿದವನು ಶಾಸ್ತ್ರಗಳನ್ನು ಕೇಳುವುದೇ ಇಲ್ಲ. ಭಗವಂತನಿಂದ ಯಾವ ಸುಖಗಳನ್ನು ಅನುಭವಿಸಲಾರ. ಭಗವಂತನನ್ನೂ ತಿಳಿಯಲಾರ. ಅವನಿಗೆ ಜ್ಞಾನರೂಪಿಯಾದ ಪರಮಾತ್ಮನ ಜ್ಞಾನವು ಉಂಟಾಗುವುದಿಲ್ಲ. ನಾಶರಹಿತವಾದ ಅವನ ಸೃಷ್ಟ್ಯಾದಿ ವ್ಯಾಪಾರಗಳು ತಿಳಿಯುವುದಿಲ್ಲ.

ನಾನಾಯೋನಿಗತಸ್ತೇನ ಭ್ರಾಮ್ಯಮಾಣಃ ಸ್ವಕರ್ಮಭಿಃ ।
ತೀರ್ಣಪಾರಂ ನ ಜಾನಾತಿ ಮಹಾಮೋಹಸಮನ್ವಿತಃ ।
ಆಚಾರ್ಯಸಂಶ್ರಯಾದ್ ವಿದ್ಯಾದ್ ವಿನಯಂ ಸಮುಪಾಗತಃ ॥೫೧॥

ಆತನು ತನ್ನ ಕರ್ಮಗಳಿಂದಲೇ ಅನೇಕ ಯೋನಿಗಳಲ್ಲಿ ಹುಟ್ಟುತ್ತಾ, ಮಹಾಮೋಹಗಳಲ್ಲಿ ಸಿಲುಕಿ ಬಿದ್ದು ಸಂಸಾರವನ್ನು ದಾಟಿಸುವ ಯಾವ ಮಹಾತ್ಮರನ್ನೂ

ಕಾಣಲಾರನು. ಇಂದ್ರನೇ, ಆಚಾರ್ಯಪುರುಷರನ್ನು ಆಶ್ರಯಿಸಿಯೇ ಬ್ರಹ್ಮಜ್ಞಾನವನ್ನು ಸಂಪಾದಿಸಬೇಕು.

ಅನುಕೂಲೇಷು ಧರ್ಮೇಷು ಚಿನೋತ್ಯೇನಂ ತತಸ್ತತಃ ।
ಆಚಾರ್ಯ ಇತಿ ಚ ಖ್ಯಾತಸ್ತೇನಾಸೌ ಬಲವೃತ್ರಹನ್ ॥೫೨॥

ಆ ಆಚಾರ್ಯಪುರುಷನೇ ಸಾಧಕನನ್ನು ಅನುಕೂಲವಾದ ಧರ್ಮಗಳಲ್ಲಿ ಪ್ರವೃತ್ತಿಯನ್ನು ಹೊಂದುವಂತೆ ಮಾಡುತ್ತಾನೆ. ಅಧರ್ಮದಲ್ಲಿ ಅವನ ಮನಸ್ಸು ಪ್ರವರ್ತಿಸದಂತೆ ಮಾಡುತ್ತಾನೆ.

ನಿಯತೇನೈವ ಸದ್ಭಾವಸ್ತೇನ ಜನ್ಮಾಂತರಾದಿಷು ।
ಕರ್ಮಸಂಚಯತೂಲೌಘಃ ಕ್ಷಿಪ್ಯತೇ ಜ್ಞಾನವಾಯುನಾ ॥೫೩॥

ಆ ಆಚಾರ್ಯ ಪುರುಷನು ಮೂಡಿಸಿದ ಭಗವದ್‌ಜ್ಞಾನವೆಂಬ ವಾಯುವು ಆ ಸಾಧಕಪುರುಷನ ಜನ್ಮಾಂತರಕ್ಕೆ ಕಾರಣವಾದ ಪ್ರಾರಬ್ಧಕರ್ಮವೆಂಬ ಹತ್ತಿಯ ರಾಶಿಯನ್ನು ತೂರಿಬಿಡುತ್ತದೆ.

ಏವಂ ಯುಕ್ತಸಮಾಚಾರಃ ಸಂಸಾರವಿನಿವರ್ತಕಃ ।
ಅನುಕೂಲವೃತ್ತಿಂ ಸತತಂ ಛಿನತ್ತ್ಯೇವ ಭೃಗುರ್ಯಥಾ ॥೫೪॥

ಹೀಗೆ ಸದಾಚಾರಪರನಾಗಿ ಸಂಸಾರವನ್ನು ನೀಗಿಸಿಕೊಳ್ಳುವ ವ್ಯಕ್ತಿಯು ಈ ಲೋಕದಲ್ಲಿ ಭೃಗು ಋಷಿಯು ಶಾಪದಿಂದ ಅಗ್ನಿಯನ್ನು ಹೇಗೆ ನಾಶ ಮಾಡಿದನೋ (ಆದಿಪರ್ವದಲ್ಲಿ ಬರುವ ಕಥೆ) ಅದರಂತೆ ಜ್ಞಾನಿಯು ಸಂಸಾರವೆಂಬ ಅಗ್ನಿಯನ್ನು ನಾಶ ಮಾಡುತ್ತಾನೆ.

ಯೇನ ಚಾಯಂ ಸಮಾಪನ್ನೋ ವೈತೃಷ್ಣ್ಯಂ ನಾಧಿಗಚ್ಛತಿ ।
ಆಭ್ಯಂತರಃ ಸ್ಮೃತಃ ಶಕ್ರ ತತ್ತಾಮ್ಯಂ ಪರಿವರ್ಜಯೇತ್ ॥೫೫॥

ಈ ಸಂಸಾರದಿಂದ ಪ್ರಾಪ್ತವಾದ ತೃಷ್ಣೆಯನ್ನು ಜೀವನು ಭಗವಂತನ ಅನುಗ್ರಹದಿಂದ ಪರಿಹರಿಸಿಕೊಳ್ಳುತ್ತಾನೆ. ಹೃದಯದಲ್ಲಿ ಅಂತರ್ಯಾಮಿಯಾದ ನಾರಾಯಣನನ್ನು ಧ್ಯಾನಿಸಬೇಕು. ಎಂದಿಗೂ ಜೀವನು ಅವನಿಗೆ ಸಮಾನನೆಂದು ಭಾವಿಸಬಾರದು.

ಪ್ರಥಮಂ ತತ್ಕೃತೇನೈವ ಕರ್ಮಣಾ ಪರಿಮುಚ್ಯತಿ ।
ದ್ವಿತೀಯಂ ಸ್ವಪ್ನಯೋಗಂ ಚ ಕರ್ಮಣಾ ಪರಿಗಚ್ಛತಿ ॥೫೬॥

ಮೊದಲನೆಯ ಅವಸ್ಥೆ ಎನಿಸಿದ ಜಾಗೃದವಸ್ಥೆಗೆ ಭಗವಂತನೇ ಪ್ರೇರಕನೆಂದು ಸಾಧಕನು ತಿಳಿದುಕೊಳ್ಳುತ್ತಾನೆ. ಸ್ವಪ್ನಾವಸ್ಥೆಯ ವ್ಯಾಪಾರಗಳಿಗೂ ಭಗವಂತನೇ ಕಾರಣನು ಎಂದು ಸಾಧಕನು ತಿಳಿದುಕೊಳ್ಳುತ್ತಾನೆ.

ಏತೈರಕ್ಷೈಃ ಸಮಾಪನ್ನಃ ಪ್ರತ್ಯಕ್ಷೋಽಸೌ ಸಮಾಸ್ಥಿತಃ ।
ಸುಷುಪ್ತ್ಯಾಖ್ಯಸ್ತುರೀಯೋಽಸೌ ನ ಚ ಹ್ಯಾವರಣಾನ್ವಿತಃ ॥೫೭॥

ಈ ರೀತಿಯಾದ ಜಾಗೃತ್-ಸ್ವಪ್ನಾವಸ್ಥೆಗಳಿಗೆ ನಿಯಾಮಕನಾಗಿ ಭಗವಂತನಿದ್ದಾನೆ ಎಂದು ಪ್ರತ್ಯಕ್ಷವಾಗಿ ಅರ್ಥಮಾಡಿಕೊಳ್ಳುವ ಸಾಧಕನು ಸುಷುಪ್ತಿ ಎಂಬ ಅವಸ್ಥೆಗೂ ಭಗವಂತನೇ ನಿಯಾಮಕನೆಂದು ಅಜ್ಞಾನವಿಲ್ಲದೆ ತಿಳಿದುಕೊಳ್ಳುತ್ತಾನೆ.

ಲೋಕವೃತ್ತ್ಯಾ ತಮೀಶಾನಂ ಯಜನ್ ಜುಹ್ವನ್ ಯಮೀ ಭವೇತ್ ।
ಆತ್ಮನ್ಯಾಯಾಸಯೋಗೇನ ನಿಷ್ಠಿಯಂ ಸ ಪರಾತ್ಪರಮ್ ॥೫೮॥

ಆಯಾಮೇ ತಾಂ ವಿಜಾನಾತಿ ಮಾಯೈಷಾ ಪರಮಾತ್ಮನಃ ।
ಪ್ರಾತಿಭಾಸಿಕಸಾಮಾನ್ಯಾದುದ್ಭೇರ್ಯಾ ಸಂವಿದಾತ್ಮಿಕಾ ॥೫೯॥

ಯಾವನು ಭಗವಂತನನ್ನೇ ಯಜಿಸುತ್ತಾ, ಹೋಮಿಸುತ್ತಾ ಜಿತೇಂದ್ರಿಯನಾಗಿ ಧ್ಯಾನಿಸುತ್ತಿರುತ್ತಾನೋ, ತನ್ನಲ್ಲಿರುವ ಕ್ಲೇಶ ಸಂಬಂಧದಿಂದ ದೂರನಾಗಿ ಭಗವಂತನನ್ನು ಹೊಂದುತ್ತಾನೆ. ಯೋಗದ ಪಕ್ವತೆಯಲ್ಲಿ ಈ ಎಲ್ಲವೂ ಭಗವಂತನ ಇಚ್ಛೆಯಿಂದಲೇ ನಡೆಯುತ್ತದೆ ಎಂದು ತಿಳಿಯುತ್ತಾನೆ. ಪ್ರತಿಭಾಸ ಯೋಗ್ಯವಾದ ವಸ್ತುವನ್ನು ಬುದ್ಧಿಯು ತೋರಿಸುತ್ತಿದೆ ಎಂದು ಎಚ್ಚರಗೊಂಡು ನಿರ್ಲಿಪ್ತನಾಗಿರುತ್ತಾನೆ.

ಸ್ಥೂಲಿಂಗಸತ್ತ್ವಸದೃಶಾದಗ್ನಿಭಾವೋ ಯಥಾ ಭವೇತ್ ।
ಶಿಶೂನಾಮೇವಮಜ್ಞಾನಾಮಾತ್ಮಭಾವೋಽನ್ಯಥಾ ಸ್ಮೃತಃ ॥೬೦॥

ಅಗ್ನಿಯು ತೃಣಾದಿಗಳಲ್ಲಿ ಸೇರಿದಾಗ ತೃಣಾದಿಗಳು ಅಗ್ನಿಯಂತೆ ಹೇಗೆ ಕಾಣುತ್ತವೋ ಅದರಂತೆ ತನ್ನದಲ್ಲದೇ ಇರುವ ದೇಹಾದಿಗಳಲ್ಲಿ ಜೀವನು ತನ್ನದ್ದೆಂದು

ಭ್ರಾಂತನಾಗಿ ತಿಳಿದುಕೊಳ್ಳುತ್ತಾನೆ. ಅರಿಯದ ಬಾಲಕರಿಗೆ ತಪ್ಪಾದ ತಿಳುವಳಿಕೆ ಇಲ್ಲದೆ ಇರುವಂತೆ ಜೀವನು ತನ್ನದ್ದಲ್ಲದೇ ಇರುವ ಪದಾರ್ಥಗಳಲ್ಲಿ ಅನ್ಯಥಾ ತಿಳಿದವನಾಗಿದ್ದಾನೆ.

ಸಾಧ್ಯೇಽಪ್ಯವಸ್ತುಭೂತಾಖ್ಯೇ ಮಿತ್ರಾಮಿತ್ರಾದಯಃ ಕುತಃ ।
ತದಭಾವೇ ತು ಶೋಕಾದ್ಯಾ ನ ವರ್ತಂತೇ ಸುರೇಶ್ವರ ॥೬೧॥

ಯಾವ ವಸ್ತುಗಳು ತನ್ನದ್ದಲ್ಲ, ತನ್ನಿಂದ ಪಡೆಯಲು ಸಾಧ್ಯವಿಲ್ಲ ಎಂದು ನಿಶ್ಚಯ ಜ್ಞಾನ ಹುಟ್ಟಿದ ಬಳಿಕ ಮಿತ್ರತ್ವ, ಶತ್ರುತ್ವಾದಿಗಳು ಏಕೆ? ಅವುಗಳನ್ನು ತೊರೆದವನಿಗೆ ಹರ್ಷ-ಶೋಕಾದಿಗಳು ಇರುವುದಿಲ್ಲ.

ಏವಂ ಬುಧ್ಯಸ್ವ ಭಗವನ್ ಸಮಬುದ್ಧಿಂ ಸಮನ್ವಿಯಾತ್ ।
ಉಪಾಯಮೇತದಾಖ್ಯಾತಂ ಮಾ ವಕ್ರಂ ಗಚ್ಛ ದೇವಪ ॥೬೨॥

ಜ್ಞಾನೇನ ಪಶ್ಯತೇ ಕರ್ಮ ಜ್ಞಾನಿನಾಂ ನ ಪ್ರವರ್ತಕಮ್ ।
ಯಾವದಾರಬ್ಧಮಸ್ಯೇಹ ತಾವನ್ನೈವೋಪಶಾಮ್ಯತಿ ॥೬೩॥

ದೇವೇಂದ್ರನೇ, ಆದ್ದರಿಂದ ಸಮಬುದ್ಧಿಯೇ ಮನಶ್ಶಾಂತಿಗೆ ಉಪಾಯವೆಂದು ತಿಳಿದುಕೊ. ಅದನ್ನು ತಿಳಿದು ವಕ್ರವಾದ ದಾರಿಯಲ್ಲಿ ಸಾಗಬಾರದು. ನಿನ್ನ ಪ್ರಜ್ಞೆಯಿಂದಲೇ ಇದನ್ನು ವಿಚಾರ ಮಾಡಿ ನೋಡು. ಪರಮವು ಜ್ಞಾನಿಗಳಿಗೆ ಪ್ರವೃತ್ತಿಯನ್ನು ಹುಟ್ಟಿಸದು. ಹಾಗಿದ್ದರೂ ಪ್ರಾರಬ್ಧಕರ್ಮವು ಮುಗಿಯುವ ತನಕ ಕರ್ಮಬಂಧನವನ್ನು ಬಿಡಿಸಿಕೊಳ್ಳಲಾಗದು.

ತದಂತೇ ತಂ ಪ್ರಯಾತ್ಯೇವ ನ ವಿದ್ವಾನಿತಿ ಮೇ ಮತಿಃ ।
ಯದಸ್ಯ ವಾಚಕಂ ವಕ್ಷ್ಯೇ ತಸ್ಮಾದೇತದ್ ಭವೇತ್ ಸದಾ ॥೬೪॥

ಪರಮಾತ್ಮನನ್ನು ಹೇಳುವ ರಾಮ-ಕೃಷ್ಣಾದಿ ನಾಮಗಳು ಏನಿವೆಯೋ ಅವುಗಳನ್ನು ಕೊಂಡಾಡುವ ಇಂದ್ರಿಯಗಳಿಂದ ಸಹಿತನಾದ ಜೀವನು ಸಂಸಾರದ ಕಷ್ಟಗಳನ್ನು ದಾಟುತ್ತಾನೆ. ಭಗವಂತನ ನಾಮಸಂಕೀರ್ತನೆಯ ಉಪಾಯದಿಂದ ಸಂಸಾರವನ್ನು ನೀಗಬಹುದು. ಅಲ್ಲಿಯ ಭಗವಂತನ ಪ್ರಜ್ಞೆಯು ಜಾಗೃತವಾಗದ ತನಕ ಸಾಧಕನು ವಿದ್ವಾಂಸನಾಗುವುದಿಲ್ಲ ಎಂದೇ ನನ್ನ ಮತಿಯು.

ತೇನ ತೇನ ಚ ಭಾವೇನ ಅಪಾಯಂ ತತ್ರ ಪಶ್ಯತಿ ।
ಸ್ಥಾನಭೇದೇಷು ವಾಗೇಷಾ ತಾಲುಸಂಸ್ಥಾ ಯಥಾ ತಥಾ ॥೬೫॥

ಆಯಾ ಪದಾರ್ಥಗಳಲ್ಲಿಯೇ ಆಸಕ್ತವಾದಾಗ ಆ ಪದಾರ್ಥಗಳಿಂದಲೇ ಅಪಾಯವು ಒದಗಿಬರುತ್ತದೆ. ತಾಲುವಿನಲ್ಲಿರುವ ವಾಗಿಂದ್ರಿಯವು ಸ್ಥಾನಭೇದಗಳನ್ನು ಮುಟ್ಟಿದಾಗ ಯಾವ ರೀತಿಯಾಗಿ ಬೇರೆ ಬೇರೆ ಶಬ್ದಪ್ರಯೋಗಗಳಿಂದ ಅಪಾಯವನ್ನು ಹೊಂದುತ್ತದೋ ಆ ರೀತಿಯಾಗಿ ಮನಸ್ಸಿನಲ್ಲಿ ಭಾವಿಸುವ ತಪ್ಪಾದ ವಿಷಯಗಳ ಅಭಿಲಾಷೆಯು ಅಪಾಯವನ್ನೇ ಹುಟ್ಟಿಸುತ್ತದೆ. ನಾಲಿಗೆ ಇದ್ದರೂ ಬೇರೆ ಬೇರೆ ಸ್ಥಾನಗಳಲ್ಲಿ ನಾಲಿಗೆಯ ಸ್ಪರ್ಶವಾಗಿ ಶಬ್ದೋಚ್ಚಾರಣೆಯಾದಾಗ ತಪ್ಪಾದ ಶಬ್ದಗಳ ಪ್ರಯೋಗದಿಂದ ಇದೇ ನಾಲಿಗೆಯಿಂದಲೇ ಅಪಾಯ ಒದಗಿಬರುತ್ತದೆ. ಇದೇ ನಾಲಿಗೆಯಲ್ಲಿ ರಾಮ-ಕೃಷ್ಣಾದಿ ನಾಮಗಳನ್ನು ಉಚ್ಚರಿಸಿದಾಗ ಯೋಗಕ್ಕೆ ಇದೇ ನಾಲಿಗೆ ಉಪಾಯವೂ ಆಗುತ್ತದೆ ಎಂದು ಭಾವ.

ತದ್ವದ್ ಬುದ್ಧಿಗತಾ ಹ್ಯರ್ಥಾ ಬುದ್ಧಿಮಾತ್ಮಗತಃ ಸದಾ ॥೬೬॥

ಇದರಂತೆ ಪದಾರ್ಥಗಳೆಲ್ಲವೂ ಬುದ್ಧಿಯನ್ನು ಆಶ್ರಯಿಸಿವೆ. ಆ ಬುದ್ಧಿಯು ಪರಮಾತ್ಮನಲ್ಲಿ ಸ್ಥಿರವಾಗಿ ಯಾವಾಗಲೂ ಇದೆ.

ಸಮಸ್ತಸಂಕಲ್ಪವಿಶೇಷಯುಕ್ತಂ
ಪರಂ ಪರಾಣಾಂ ಪರಮಂ ಮಹಾತ್ಮಾ ।
ತ್ರಯ್ಯಂತವಿದ್ಭಿಃ ಪರಿಗೀಯತೇಽಸೌ
ವಿಷ್ಣುರ್ವಿಭುರ್ವಾಸ್ತಿ ಗುಣೋ ನ ನಿತ್ಯಮ್ ॥೬೭॥

ಎಲ್ಲ ರೀತಿಯಾದ ಸಂಕಲ್ಪಗಳಿಂದ ಮುಕ್ತನಾಗಿ ಪರಾತ್ಪರನೂ, ಪರಮಾತ್ಮನೂ, ಸರ್ವವ್ಯಾಪಕನೂ, ಮಹಾತ್ಮನೂ ಆದ ವಿಷ್ಣುವಿನ ಸ್ವರೂಪವನ್ನು ವೇದಾಂತಿಗಳು ಈ ರೀತಿಯಾಗಿ ನಿರೂಪಿಸಿದ್ದಾರೆ. ಅವನಲ್ಲಿ ತ್ರಿಗುಣಗಳ ಸಂಬಂಧವು ಇರುವುದಿಲ್ಲ.

ವರ್ಣೇಷು ಲೋಕೇಷು ವಿಶೇಷಣೇಷು
ಸ ವಾಸುದೇವೋ ವಸನಾನ್ಮಹಾತ್ಮಾ ।
ಗುಣಾನುರೂಪಂ ಸ ಚ ಕರ್ಮರೂಪಂ
ದದಾತಿ ಸರ್ವಸ್ಯ ಸಮಸ್ತರೂಪಮ್ ।

ನ ಸಂದೃಶೇ ತಿಷ್ಠತಿ ರೂಪಮಸ್ಯ
ನ ಚಕ್ಷುಷಾ ಪಶ್ಯತಿ ಕಶ್ಚಿದೇನಮ್ ॥೬೮॥

ಅವನು ಲೋಕದೊಳಗಿನ ಸಮಸ್ತ ಜಾತಿಗಳಲ್ಲಿಯೂ, ಅವುಗಳನ್ನು ಅನುಸರಿಸಿದ ವಿಶೇಷ ವಸ್ತುಗಳಲ್ಲಿಯೂ ಅಂತರ್ಯಾಮಿಯಾಗಿದ್ದಾನೆ. ಆದ್ದರಿಂದಲೇ ವಾಸುದೇವನೆಂದು ಕರೆಯಲ್ಪಡುತ್ತಾನೆ. ಗುಣಗಳಿಂದ, ಕರ್ಮಗಳಿಗೆ ಅನುಸಾರವಾಗಿ ಸಮಸ್ತ ಫಲಗಳನ್ನು ಜಗತ್ತಿಗೆ ನೀಡುತ್ತಾನೆ. ಅವುಗಳನ್ನು ಚೆನ್ನಾಗಿ ನೋಡಲು ಕಣ್ಣಿನಿಂದ ಸಾಧ್ಯವಿಲ್ಲ. ಯಾರೂ ಅವನನ್ನು ಕಣ್ಣಿನಿಂದ ನೋಡಲಾರರು.

ಭಕ್ತ್ಯಾ ಚ ಧೃತ್ಯಾ ಚ ಸಮಾಹಿತಾತ್ಮಾ
ಜ್ಞಾನಸ್ವರೂಪಂ ಪರಿಪಶ್ಯತೀಹ ।
ವದಂತಿ ತನ್ಮೇ ಭಗವಾನ್ ದದೌ ಸ
ಸ ಏವ ಶೇಷಂ ಮಘವಾನ್ ಮಹಾತ್ಮಾ ॥೬೯॥

ಏವಂ ಮಮೋಪಾಯಮವೈಹಿ ಶಕ್ರ
ತಸ್ಮಾಲ್ಲೋಕೋ ನಾಸ್ತಿ ಮಹ್ಯಂ ಸದೈವ ॥೭೦॥

ಭಗವಂತನಲ್ಲೇ ನೆಲೆಗೊಂಡಿರುವ ಧೃತಿಯಿಂದ, ಭಕ್ತಿಯಿಂದ ಜ್ಞಾನಸ್ವರೂಪಿಯಾದ ಭಗವಂತನನ್ನು ಕಾಣಬಲ್ಲರು. ಈ ರೀತಿಯಾಗಿ ಗುರುಗಳು ನನಗೆ ಉಪದೇಶಿಸಿದ್ದಾರೆ. ಭಗವಂತನೇ ಅಂತಹ ಗುರುಗಳನ್ನು ಒದಗಿಸಿದ್ದಾನೆ. ಇಂದ್ರದೇವನೇ, ಕೊನೆಗೆ ಸ್ಥಿರವಾಗಿ ಉಳಿಯುವ ಪದಾರ್ಥ ಭಗವಂತನೊಬ್ಬನೇ ಆಗಿದ್ದಾನೆ. ಈ ರೀತಿಯಾಗಿ ನಾನು ಹೇಳುವ ಉಪಾಯಗಳನ್ನು ಇಂದ್ರನೇ ನೀನು ತಿಳಿದುಕೋ ಆದ್ದರಿಂದ ಅವನಿಗಿಂತ ಅಧಿಕವಾದ ಪದಾರ್ಥವು ಈ ಜಗತ್ತಿನಲ್ಲಿ ಇರುವುದಿಲ್ಲ.

ಭೀಷ್ಮಃ

ಇತ್ಯುಕ್ತೋ ದೈತ್ಯಪತಿನಾ ಶಕ್ರೋ ವಿಸ್ಮಯಮಾಗಮತ್ ।
ಪ್ರೀತಿಮಾಂಶ್ಚ ತದಾ ರಾಜಂಸ್ತದ್ವಾಕ್ಯಂ ಪ್ರತ್ಯಪೂಜಯತ್ ॥೭೧॥

ಭೀಷ್ಮ– ದೈತ್ಯಪತಿಯಾದ ಪ್ರಹ್ಲಾದನು ಈ ರೀತಿಯಾಗಿ ಉಪದೇಶಿಸಲು ಇಂದ್ರನು ಆಶ್ಚರ್ಯವನ್ನು ಹೊಂದಿದನು. ಅವನಲ್ಲಿ ಪ್ರೀತಿಯುಳ್ಳವನೂ ಆದನು. ಅವನು ಹೇಳಿದ ವಿಚಾರವನ್ನು ಅಭಿನಂದಿಸಿದನು.

ಸ ತದಾಭ್ಯರ್ಚ್ಯ ದೈತ್ಯೇಂದ್ರಂ ತ್ರೈಲೋಕ್ಯಪತಿರೀಶ್ವರಃ ।
ಅಸುರೇಂದ್ರಮುಪಾಮಂತ್ರ್ಯ ಜಗಾಮ ಸ್ವಂ ನಿವೇಶನಮ್ ॥೭೨॥

ತ್ರೈಲೋಕ್ಯಪತಿಯಾದ ಇಂದ್ರನು ಈ ಮಾತುಗಳಿಂದ ಸಂತುಷ್ಟನಾಗಿ ಪ್ರಹ್ಲಾದನನ್ನು ಆರಾಧಿಸಿ, ಪ್ರಹ್ಲಾದನನ್ನು ತನ್ನ ಲೋಕಕ್ಕೆ ಆಹ್ವಾನಿಸಿ ತನ್ನ ಮನೆಯನ್ನು ಕುರಿತು ಹೊರಟನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಅಷ್ಟಪಂಚಾಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಐವತ್ತೆಂಟನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಐವತ್ತೊಂಬತ್ತನೆಯ ಅಧ್ಯಾಯ

ಇಂದ್ರ ಮತ್ತು ಬಲಿಯ ಸಂವಾದ. ಇಂದ್ರನು ತನ್ನನ್ನು ಅವಮಾನವಾಗುವಂತೆ ಮಾತನಾಡಿದ ಎಂದು ಕತ್ತೆ ರೂಪದಿಂದ ಬಲಿಯು ಆಗಮಿಸಿ, ಅವನಿಗೆ ಗರ್ವಭಂಗವಾಗುವಂತೆ ಉತ್ತರವನ್ನು ನೀಡಿದ ಪ್ರಸಂಗವನ್ನು ಯುಧಿಷ್ಠಿರನಿಗೆ ಭೀಷ್ಮರು ನಿರೂಪಿಸಿದುದು.

ಯುಧಿಷ್ಠಿರಃ

ಯಯಾ ಬುದ್ಧ್ಯಾ ಮಹೀಪಾಲೋ ಭ್ರಷ್ಟಶ್ರೀರ್ವಿಚರೇನ್ಮಹೀಮ್ ।
ಕಾಲದಂಡವಿನಿಷ್ಪಿಷ್ಟಸ್ತನ್ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ಪಿತಾಮಹನೇ, ರಾಜನಿಗೆ ಯಾವ ರೀತಿಯಾದ ಬುದ್ಧಿಯು ಇದ್ದರೆ ಕಾಲದಂಡದಿಂದ ಹಿಂಡಲ್ಪಟ್ಟವನಾದರೂ, ರಾಜ್ಯಭ್ರಷ್ಟನಾದರೂ ಭೂಮಿಯಲ್ಲಿ ಓಡಾಡುತ್ತಾನೆ? ಈ ವಿಷಯವನ್ನು ನನಗೆ ತಿಳಿಸು.

ಭೀಷ್ಮಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ವಾಸವಸ್ಯ ಚ ಸಂವಾದಂ ಬಲೇರ್ವೈರೋಚನಸ್ಯ ಚ ॥೨॥

ಭೀಷ್ಮ– ಯುಧಿಷ್ಠಿರನೇ, ಈ ವಿಷಯದಲ್ಲಿ ಇಂದ್ರನಿಗೂ ಮತ್ತು ವಿರೋಚನನ ಮಗನಾದ ಬಲಿಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಪಿತಾಮಹಮುಪಾಗಮ್ಯ ಪ್ರಣಿಪತ್ಯ ಕೃತಾಂಜಲಿಃ ।
ಸರ್ವಾನೇವಾಸುರಾನ್ ಜಿತ್ವಾ ಬಲಿಂ ಪಪ್ರಚ್ಛ ವಾಸವಃ ॥೩॥

ಒಮ್ಮೆ ಇಂದ್ರನು ಎಲ್ಲ ಅಸುರರನ್ನು ಜಯಿಸಿ, ಪಿತಾಮಹರಾದ ಬ್ರಹ್ಮನ ಬಳಿ ಬಂದು ಬದ್ಧಾಂಜಲಿಯಾಗಿ ನಮಸ್ಕರಿಸಿ, ತನ್ನ ರಾಜ್ಯಭರಣದ ಕಾಲದಲ್ಲಿ ಬಲಿಯು ಕಾಣಿಸದೆ ಇದ್ದಾಗ ಬಲಿ ಚಕ್ರವರ್ತಿಯು ಇದ್ದಾನೆಯೇ ಎಂದು ಬ್ರಹ್ಮದೇವರ ಬಳಿ ಪ್ರಶ್ನಿಸಿದನು.

ಯಸ್ಯ ಸ್ಮ ದದತೋ ವಿತ್ತಂ ನ ಕದಾಚನ ಹೀಯತೇ ।
ತಂ ಬಲಿಂ ನಾಧಿಗಚ್ಛಾಮಿ ಬ್ರಹ್ಮನ್ನಾಚಕ್ಷ್ವ ಮೇ ಬಲಿಮ್ ॥೪॥

ಬ್ರಹ್ಮದೇವ, ಯಾವ ವ್ಯಕ್ತಿಯು ದಾನ ಮಾಡುತ್ತಿದ್ದರೂ ಅವನ ಬೊಕ್ಕಸವು ಎಂದಿಗೂ ಬರಿದಾಗಲಿಲ್ಲವೋ ಅಂತಹ ಬಲಿಚಕ್ರವರ್ತಿಯನ್ನು ನಾನು ಎಷ್ಟು ಹುಡುಕಿದರೂ ಕಾಣದವನಾಗಿದ್ದಾನೆ. ಅವನೆಲ್ಲಿದ್ದಾನೆಂಬುದನ್ನು ನನಗೆ ತಿಳಿಸಿ.

ಸ ಏವ ಹ್ಯಸ್ತಮಯತೇ ಸ ಸ್ಮ ವಿದ್ಯೋತತೇ ದಿಶಃ ।
ಸ ವರ್ಷತಿ ಸ್ಮ ವರ್ಷಾಣಿ ಯಥಾಕಾಲಮತಂದ್ರಿತಃ ।
ತಂ ಬಲಿಂ ನಾಧಿಗಚ್ಛಾಮಿ ಬ್ರಹ್ಮನ್ನಾಚಕ್ಷ್ವ ಮೇ ಬಲಿಮ್ ॥೫॥

ಯಾವ ಬಲಿಯು ಸೂರ್ಯನಾಗಿ ದಿಕ್ಕುಗಳನ್ನೆಲ್ಲ ಬೆಳಗಿ ಅಸ್ತಮಿಸುತ್ತಿದ್ದನೋ ಅವನೇ ಸಕಾಲಕ್ಕೆ ಪ್ರಾಣಿಗಳಿಗಾಗಿ ಮಳೆ ಸುರಿಸುತ್ತಿದ್ದನು. ಅಂತಹ ಬಲಿಯು ಈಗ ಕಣ್ಣಿಗೂ ಕಾಣಿಸುತ್ತಿಲ್ಲವಲ್ಲ. ಈಗ ಅವನು ಎಲ್ಲಿ ಅವಿತುಕೊಂಡಿದ್ದಾನೆ? ನನಗೆ ತಿಳಿಸಿರಿ.

ಸ ವಾಯುರ್ವರುಣಶ್ಚೈವ ಸ ರವಿಃ ಸ ಚ ಚಂದ್ರಮಾಃ ।
ಸೋऽಗ್ನಿಸ್ತಪತಿ ಭೂತಾನಿ ಪೃಥಿವೀ ಚ ಭವತ್ಯುತ ।
ತಂ ಬಲಿಂ ನಾಧಿಗಚ್ಛಾಮಿ ಬ್ರಹ್ಮನ್ನಾಚಕ್ಷ್ವ ಮೇ ಬಲಿಮ್ ॥೬॥

ನನ್ನ ಅಧಿಕಾರಕ್ಕಿಂತ ಮೊದಲು ಯಾವ ಬಲಿಯು ವಾಯುವಾಗಿ, ವರುಣನಾಗಿ ಬೆಳಕನ್ನು ಕೊಡುವ ಸೂರ್ಯ-ಚಂದ್ರರಾಗಿಯೂ, ಉಷ್ಣವನ್ನು ಕೊಡುವ ಅಗ್ನಿಯಾಗಿಯೂ, ಜಲವಾಗಿಯೂ, ಪೃಥಿವಿಯಾಗಿಯೂ ಇರುತ್ತಿದ್ದನೋ ಅಂತಹ ಬಲಿಯ ಸುಳಿವನ್ನೇ ನಾನು ಕಾಣುತ್ತಿಲ್ಲ. ಈಗ ಅವನು ಎಲ್ಲಿದ್ದಾನೆ?

ಬ್ರಹ್ಮಾ

ನೈತತ್ ತೇ ಸಾಧು ಮಘವನ್ ಯದೇತದನುಪೃಚ್ಛಸಿ ।
ಪೃಷ್ಟಸ್ತು ನಾನೃತಂ ಬ್ರೂಯಾತ್ತಸ್ಮಾದ್ ವಕ್ಷ್ಯಾಮಿ ತೇ ಬಲಿಮ್ ॥೭॥

ಬ್ರಹ್ಮಾ– ಇಂದ್ರನೇ, ನೀನು ಗರ್ವದಿಂದ ಈ ರೀತಿಯಾಗಿ ಮಾತುಗಳನ್ನಾಡುವುದು ಯೋಗ್ಯವಾಗುವುದಿಲ್ಲ. ಆದರೆ ಪ್ರಶ್ನೆ ಮಾಡಿದವನಿಗೆ ಸುಳ್ಳು ಹೇಳಬಾರದು ಎಂಬ ಕಾರಣದಿಂದ ನಿನಗೆ ರಹಸ್ಯವನ್ನು ಹೇಳುತ್ತೇನೆ.

ಉಷ್ಟ್ರೇಷು ಯದಿ ವಾ ಗೋಷು ಖರೇಷ್ವಶ್ವೇಷು ವಾ ಪುನಃ ।
ವರಿಷ್ಠೋ ಭವಿತಾ ಜಂತುಃ ಶೂನ್ಯಾಗಾರೇ ಶಚೀಪತೇ ॥೮॥

ಈಗ ಬಲಿಯು ಹಸು, ಕತ್ತೆ, ಕುದುರೆ ಇವುಗಳಲ್ಲಿ ಯಾವುದೋ ಒಂದು ಜಂತುವಾಗಿ ಆ ಜಾತಿಯವರಿಗೆ ಮುಖ್ಯನೆನಿಸಿಕೊಂಡು ಒಂದು ಹಾಳು ಮನೆಯನ್ನು ಸೇರಿರುತ್ತಾನೆ ಎಂದು ಉತ್ತರಿಸಿದರು.

ಶಕ್ರಃ

ಯದಿ ಸ್ಮ ಬಲಿನಾ ಬ್ರಹ್ಮನ್ ಶೂನ್ಯಾಗಾರೇ ಸಮೇಯಿವಾನ್ ।
ಹನ್ಯಾಮೇನಂ ನ ವಾ ಹನ್ಯಾಂ ತದ್ ಬ್ರಹ್ಮನ್ನನುಶಾಧಿ ಮಾಮ್ ॥೯॥

ಇಂದ್ರ– ಹಾಗಾದರೆ ಶೂನ್ಯಗೃಹದಲ್ಲಿ ಬಲಿಯು ಇರುವುದಾದರೆ ಅವನನ್ನು ನಾನು ಈಗಲೇ ಕೊಂದು ಬರಲೆ? ಅಥವಾ ಹಾಗೆ ಬಿಡಲೆ? ಈ ವಿಷಯದಲ್ಲಿ ನಿಮ್ಮ ಆದೇಶವೇನು? ನನಗೆ ಹೇಳಿರಿ.

ಬ್ರಹ್ಮಾ

ಮಾ ಸ್ಮ ಶಕ್ರ ಬಲಿಂ ಹಿಂಸೀರ್ನ ಬಲಿರ್ವಧಮರ್ಹತಿ ।
ನ್ಯಾಯಾಂಸ್ತು ಶಕ್ರ ಪ್ರಷ್ಟವ್ಯಸ್ತ್ವಯಾ ವಾಸವ ಕಾಮ್ಯಯಾ ॥೧೦॥

ಬ್ರಹ್ಮಾ– ದೇವೇಂದ್ರನೇ, ಆ ಬಲಿಯನ್ನು ಎಂದಿಗೂ ನೀನು ವಧೆ ಮಾಡಬೇಡ. ನೀನು ಅವನನ್ನು ಸಂಧಿಸುವ ಪಕ್ಷದಲ್ಲಿ ನಿನಗೆ ಬೇಕಾದ ಧರ್ಮಗಳನ್ನು ನೀನು ಅವನಿಂದ ಕೇಳಿ ತಿಳಿಯುವುದು ಯೋಗ್ಯ ಎಂದು ನನಗೆ ಅನಿಸುತ್ತದೆ.

ಭೀಷ್ಮಃ

ಏವಮುಕ್ತೋ ಭಗವತಾ ಮಹೇಂದ್ರಃ ಪೃಥಿವೀಂ ತದಾ ।
ಚಚಾರೈರಾವತಸ್ಕಂಧಮಧಿರುಹ್ಯ ಶ್ರಿಯಾ ವೃತಃ ॥೧೧॥

ಭೀಷ್ಮ– ಈ ರೀತಿಯಾಗಿ ಚತುರ್ಮುಖ ಬ್ರಹ್ಮದೇವರು ಹೇಳಿದ ಕೂಡಲೇ ಇಂದ್ರನು ಅಟ್ಟಹಾಸವನ್ನು ಮಾಡುತ್ತಾ ಐರಾವತದ ಬೆನ್ನನ್ನೇರಿ ಬಹಳ ವೈಭವದೊಡನೆ ಬಲಿಯನ್ನು ಭೂಮಿಯಲ್ಲಿ ಹುಡುಕುತ್ತಾ ಹೊರಟನು.

ತತೋ ದದರ್ಶ ಸ ಬಲಿಂ ಖರವೇಷೇಣ ಸಂವೃತಮ್ ।
ಯಥಾಖ್ಯಾತಂ ಭಗವತಾ ಶೂನ್ಯಾಗಾರಕೃತಾಲಯಮ್ ॥೧೨॥

ಆ ಸಂದರ್ಭದಲ್ಲಿ ಬ್ರಹ್ಮನು ಹೇಳಿದಂತೆ ಹಾಳಾದ ಮನೆಯೊಂದರಲ್ಲಿ ಕತ್ತೆ ರೂಪದಿಂದ ವಾಸಿಸುತ್ತಿದ್ದ ಬಲಿಯನ್ನು ಕಂಡನು. ಆಗ ಇಂದ್ರನು ಕತ್ತೆಯನ್ನು ನೋಡಿ ಹೇಳುತ್ತಾನೆ.

ಶಕ್ರಃ

ಖರಯೋನಿಮನುಪ್ರಾಪ್ತಸ್ತುಷಭಕ್ಷೋऽಸಿ ದಾನವ ।
ಇಯಂ ತೇ ಯೋನಿರಧಮಾ ಶೋಚಸ್ಯಾಹೋ ನ ಶೋಚಸಿ ॥೧೩॥

ಇಂದ್ರ– ಎಲೈ ದಾನವನೇ, ಈಗ ನೀನು ಕತ್ತೆಯ ಜನ್ಮವನ್ನೆತ್ತಿ ಧಾನ್ಯದ ಹೊಟ್ಟನ್ನು ತಿಂದು ಜೀವಿಸುತ್ತಿರುವಿ. ಎಂದಿಗೂ ಈ ಜೀವನವು ಯೋಗ್ಯವಾದುದಲ್ಲ. ಇದರಿಂದ ಬಹಳ ದುಃಖವನ್ನು ಹೊಂದಿರುತ್ತೀಯಲ್ಲವೆ?

ಅದೃಷ್ಟಂ ಬತ ಪಶ್ಯಾಮಿ ದ್ವಿಷತಾಂ ವಶಮಾಗತಮ್ ।
ಶ್ರಿಯಾ ವಿಹೀನಂ ಮಿತ್ರೈಶ್ಚ ಭ್ರಷ್ಟವೀರ್ಯಪರಾಕ್ರಮಮ್ ॥೧೪॥

ಅದೃಷ್ಟದ ವ್ಯಾಪಾರವನ್ನು ನಾನು ನೋಡುತ್ತಿದ್ದೇನೆ. ಐಶ್ವರ್ಯವನ್ನೆಲ್ಲ ಕಳೆದುಕೊಂಡು, ಮಿತ್ರರನ್ನು ತೊರೆದು, ಶತ್ರುವಶನಾಗಿ, ನಿರ್ವೀರ್ಯನಾಗಿ, ಪರಾಕ್ರಮವನ್ನೆಲ್ಲ ಕಳೆದುಕೊಂಡು ಶೋಚನೀಯ ಅವಸ್ಥೆಯಲ್ಲಿರುವೆ.

ಯತ್ತದ್ ಯಾನಸಹಸ್ರೇಣ ಜ್ಞಾತಿಭಿಃ ಪರಿವಾರಿತಃ ।
ಲೋಕಾನ್ ಪ್ರತಾಪಯನ್ ಸರ್ವಾನ್ ಯಾಸ್ಯಸ್ಮಾನವಿತರ್ಕಯನ್ ॥

ಹಿಂದೆ ನೀನು ಅನುಭವಿಸಿದ ವೈಭವಗಳೆಷ್ಟು? ನೀನು ಹೊರಟರೆ ಸಾವಿರಾರು ವಾಹನಗಳು ನಿನ್ನ ಹಿಂದೆ ಬರುತ್ತಿದ್ದವು. ಎಷ್ಟೋ ಮಂದಿ ಜ್ಞಾತಿಗಳು ನಿನ್ನನ್ನು ಹಿಂಬಾಲಿಸುತ್ತಿದ್ದರು. ನೀನು ನಿನ್ನ ಪರಾಕ್ರಮದಿಂದ ಲೋಕಗಳನ್ನೆಲ್ಲ ತಾಪಗೊಳಿಸುತ್ತಾ ದೇವತೆಗಳಾದ ನಮ್ಮನ್ನು ಲಕ್ಷ್ಯಮಾಡದೆ ಸುತ್ತುತ್ತಿದ್ದೆ.

ತ್ವನ್ಮುಖಾಶ್ಚೈವ ದೈತೇಯಾ ವ್ಯತಿಷ್ಠಂಸ್ತವ ಶಾಸನೇ ।
ಅಕೃಷ್ಟಪಚ್ಯಾ ಪೃಥಿವೀ ತವೈಶ್ವರ್ಯೇ ಬಭೂವ ಹ ।
ಇದಂ ಚ ತೇಽದ್ಯ ವ್ಯಸನಂ ಶೋಚಸ್ಯಾಹೋ ನ ಶೋಚಸಿ ॥೧೬॥

ದೈತ್ಯರೆಲ್ಲರು ನಿನ್ನನ್ನು ಪ್ರಭುವನ್ನಾಗಿ ಭಾವಿಸಿ ನಿನ್ನ ಶಾಸನಕ್ಕೆ ಬದ್ಧರಾಗಿದ್ದರು. ನಿನ್ನ ಐಶ್ವರ್ಯದಲ್ಲಿ ಭೂಮಿಯು ಕೃಷಿ ಮಾಡದೆ ಫಲ ನೀಡುತ್ತಿತ್ತು. ಅಂತಹ ನಿನಗೆ ಈ ಅವಸ್ಥೆ ಒದಗಿತಲ್ಲ! ಇದಕ್ಕಾಗಿ ನೀನು ದುಃಖಪಡುತ್ತಿದ್ದೀಯೋ ಅಥವಾ ದುಃಖ ಪಡುತ್ತಿಲ್ಲವೋ?

ಯದಾತಿಷ್ಠಃ ಸಮುದ್ರಸ್ಯ ಪೂರ್ವಕೂಲೇ ವಿಲೇಲಿಹನ್ ।
ಜ್ಞಾತಿಭ್ಯೋ ವಿಭಜನ್ ವಿತ್ತಂ ತದಾಸೀತ್ತೇ ಮನಃ ಕಥಮ್ ॥೧೭॥

ಹಿಂದೆ ನೀನು ಸಮುದ್ರದ ಪೂರ್ವತೀರದಲ್ಲಿ ವಾಸ ಮಾಡುತ್ತಾ, ನಿನ್ನ ಬಂಧುಗಳಿಗೆಲ್ಲ ಧನವನ್ನು ಯಥೇಚ್ಛವಾಗಿ ಹಂಚಿಕೊಡುವಾಗ ನಿನ್ನ ಮನಸ್ಸು ಹೇಗಿತ್ತು? ಈಗ ಹೇಗಿದೆ?

ಯತ್ತೇ ಸಹಸ್ರಸಮಿತಾ ನನೃತುರ್ದೇವಯೋಷಿತಃ ।
ಬಹೂನಿ ವರ್ಷಪೂಗಾನಿ ವಿಹಾರೇ ದೀಪ್ಯತಃ ಶ್ರಿಯಾ ॥೧೮॥

ಹಿಂದೆ ನೀನು ಐಶ್ವರ್ಯದಿಂದ ಬೆಳಗುತ್ತಿರುವಾಗ ಸಾವಿರಾರು ಮಂದಿ ಅಪ್ಸರಾಸ್ತ್ರೀಯರು ಕಾಂತಿಯಿಂದ ಬೆಳಗುತ್ತಾ ನಿನ್ನ ಮುಂದೆ ನರ್ತನ ಮಾಡುತ್ತಿರುವುದನ್ನು ನೋಡಿದಾಗ ನಿನ್ನ ಮನಸ್ಸು ಹೇಗಿತ್ತು? ಈಗ ಹೇಗಿದೆ?

ಸರ್ವಾಃ ಪುಷ್ಕರಮಾಲಿನ್ಯಃ ಸರ್ವಾಃ ಕಾಂಚನಸಪ್ರಭಾಃ ।
ಕಥಮದ್ಯ ತದಾ ಚೈವ ಮನಸ್ತೇ ದಾನವೇಶ್ವರ ॥೧೯॥

ಪದ್ಮಮಾಲೆಗಳನ್ನು ಧರಿಸಿ, ಬಂಗಾರದ ಪ್ರಭೆಗಳಿಂದ ಬೆಳಗುವ ಅಂತಹ ಸ್ತ್ರೀಯರು ಇಲ್ಲದಿರುವಾಗ ಸ್ಥಿತಿ ಹೇಗಿದೆ? ಇದ್ದಾಗ ಸ್ಥಿತಿ ಹೇಗಿತ್ತು ?

ಛತ್ರಂ ತವಾಸೀತ್ ಸುಮಹತ್ ಸೌವರ್ಣಂ ಮಣಿಭೂಷಿತಮ್ ।
ನನೃತುರ್ಯತ್ರ ಗಂಧರ್ವಾಃ ಷಟ್ ಹಸ್ರಾಣಿ ಸಪ್ತಧಾ ॥೨೦॥

ನಿನಗೆ ಶ್ರೇಷ್ಠವಾದ, ಮಣಿಭೂಷಿತವಾದ ಬಂಗಾರದ ಛತ್ರವು ಹಿಂದೆ ಇತ್ತು. ನಲವತ್ತೆರಡು ಸಾವಿರ ಮಂದಿ ಗಂಧರ್ವರು ನಿನ್ನ ಮುಂದೆ ಗಾನ-ನರ್ತನಗಳನ್ನು ಮಾಡುತ್ತಿದ್ದರು.

ಯೂಪಸ್ತವಾಸೀತ್ ಸುಮಹಾನ್ಯಜತಃ ಸರ್ವಕಾಂಚನಃ ।
ಯತ್ರಾದದಃ ಸಹಸ್ರಾಣಾಮಯುತಾನಿ ಗವಾಂ ದಶ ॥೨೧॥

ನೀನು ಯಜ್ಞವನ್ನು ಮಾಡಿದಾಗ ಬಂಗಾರದ ಗಟ್ಟಿಯಿಂದಲೇ ಯೂಪಸ್ತಂಭಗಳನ್ನು ಮಾಡಿಸುತ್ತಿದ್ದೆ. ಲಕ್ಷೋಪಲಕ್ಷ ಗೋವುಗಳನ್ನು ದಾನ ಮಾಡಿರುವಿ.

ಯದಾ ತು ಪೃಥಿವೀಂ ಸರ್ವಾಂ ಯಜಮಾನೋಽನುಪರ್ಯಯಾಃ ।
ಶಮ್ಯಾಕ್ಷೇಪೇಣ ವಿಧಿನಾ ತದಾಸೀತ್ ಕಿಂ ನು ತೇ ಹೃದಿ ॥೨೨॥

ಸಮಗ್ರ ಭೂಮಂಡಲಕ್ಕೆ ನೀನು ಯಜಮಾನನಾಗಿ ಮೆರೆಯುತ್ತಿದ್ದಾಗ ಶಮ್ಯಾಕ್ಷೇಪಣ ಎಂಬ ವಿಧಿಯಿಂದ ಅದ್ಭುತವಾದ ಯಾಗಗಳನ್ನು ಮಾಡುತ್ತಿದ್ದಿ. ಅಂತಹ ಯಾಗಗಳನ್ನು ಅನುಷ್ಠಾನ ಮಾಡುವಾಗ ನಿನ್ನ ಹೃದಯ ಹೇಗಿತ್ತು ? ಈಗ ಹೇಗಿರುವಿ?

ವ್ಯಾಖ್ಯಾನ ವಿಶೇಷ– ಶಮ್ಯಾಕ್ಷೇಪಣ ವಿಧಿ ಎಂದರೆ ಬನ್ನಿಮರದ ಸಮಿತ್ತನ್ನು ಯಜ್ಞದ ರಕ್ಷಣೆಗಾಗಿ ಹತ್ತುದಿಕ್ಕುಗಳಲ್ಲೂ ಬಲಾಢ್ಯನೊಬ್ಬನು ಬೀಸಿ ಎಸೆದು, ಮಧ್ಯದಲ್ಲಿ ಯಜ್ಞವನ್ನು ಮಾಡುತ್ತಿದ್ದರು. ಇದಕ್ಕೆ ದೇವ-ಯಜನ ಎಂದು ಹೆಸರು. ಈ ವಿಧಿಯಿಂದ ಬಲಿಚಕ್ರವರ್ತಿಯು ಅನೇಕ ಯಾಗಗಳನ್ನು ಆಚರಿಸಿರುತ್ತಾನೆ.

ನ ತೇ ಪಶ್ಯಾಮಿ ಭೃಂಗಾರಂ ನ ಛತ್ರಂ ವ್ಯಜನಂ ನ ಚ ।
ಬ್ರಹ್ಮದತ್ತಾಂ ಚ ತೇ ಮಾಲಾಂ ನ ಪಶ್ಯಾಮ್ಯಸುರಾಧಿಪ ॥೨೩॥

ಆ ಪ್ರಸಂಗದಲ್ಲಿ ನಿನ್ನ ಬಳಿ ಇದ್ದ ಚಿನ್ನದ ಗಿಣಿಯಾಗಲೀ, ಶ್ವೇತಚ್ಛತ್ರವಾಗಲೀ, ರಾಜಚಿಹ್ನೆ ಎನಿಸಿದ ಚಾಮರವಾಗಲೀ ಯಾವುದೂ ನಿನ್ನ ಬಳಿ ಕಾಣಿಸುತ್ತಿಲ್ಲ. ಹಿಂದೆ ಬ್ರಹ್ಮನಿಂದ ಕೊಡಲ್ಪಟ್ಟ ದಿವ್ಯಮಾಲೆಯನ್ನೂ ನಾನು ಈಗ ಕಾಣುತ್ತಿಲ್ಲ.

ಭೀಷ್ಮಃ

ತತಃ ಪ್ರಸಹ್ಯ ಚ ಬಲಿರ್ವಾಸವೇನ ಸಮೀರಿತಮ್ ।
ನಿಶಾಮ್ಯ ಮಾನಂ ಗಂಭೀರಂ ಸುರರಾಜಮಥಾಬ್ರವೀತ್ ॥೨೪॥

ಅಹೋ ಹಿ ತವ ಬಾಲಿಶ್ಯಮಿಹ ದೇವಗಣಾಧಿಪ ।
ಅಯುಕ್ತಂ ದೇವರಾಜಸ್ಯ ತವ ಕಷ್ಟಮಿದಂ ವಚಃ ॥೨೫॥

ಭೀಷ್ಮ– ಇಂದ್ರನ ಮಾತನ್ನು ಕೇಳುತ್ತಾ ಬಲಿಯು ನಸುನಗುತ್ತಾ ಇಂದ್ರನನ್ನು ಕುರಿತು- 'ಎಲೈ ಇಂದ್ರನೇ, ನಿನ್ನ ಅವಿವೇಕಕ್ಕೆ ನಾನೇನೆಂದು ಹೇಳಲಿ? ನೀನು ನನ್ನೊಡನೆ ಇಂತಹ ಕಠಿಣವಾದ ಮಾತುಗಳನ್ನಾಡಬಾರದು ಎಂದು ಇಂದ್ರನ ಗರ್ವದ ನುಡಿಗಳನ್ನು ಕೇಳಿಸಿಕೊಂಡು ಬಲಿಯು ಗಂಭೀರವಾಗಿ ನುಡಿದನು.

ಬಲಿಃ

ನ ತ್ವಂ ಪಶ್ಯಸಿ ಭೃಂಗಾರಂ ನ ಛತ್ರಂ ವ್ಯಜನಂ ನ ಚ ।
ಬ್ರಹ್ಮದತ್ತಾಂ ಚ ಮೇ ಮಾಲಾಂ ನ ತ್ವಂ ದ್ರಕ್ಷ್ಯಸಿ ವಾಸವ ॥೨೬॥

ಬಲಿ– ಇಂದ್ರನೇ, ಈಗ ನೀನು ನನ್ನ ಬಂಗಾರದ ಗಿಂಡಿಯನ್ನಾಗಲೀ, ನನ್ನ ಶ್ವೇತಚ್ಛತ್ರವನ್ನಾಗಲೀ, ಚಾಮರವನ್ನಾಗಲೀ, ಬ್ರಹ್ಮನು ಕೊಟ್ಟ ದಿವ್ಯಮಾಲೆಯನ್ನಾಗಲಿ ನೋಡಲಾರೆ.

ಗುಹಾಯಾಂ ನಿಹಿತಾನಿ ತ್ವಂ ಮಮ ರತ್ನಾನಿ ಪೃಚ್ಛಸಿ ।
ಯದಾ ಮೇ ಭವಿತಾ ಕಾಲಸ್ತದಾ ತ್ವಂ ತಾನಿ ದ್ರಕ್ಷ್ಯಸಿ ॥೨೭॥

ಆ ಉತ್ತಮ ವಸ್ತುಗಳೆಲ್ಲ ತಾತ್ಕಾಲಿಕವಾಗಿ ಒಂದು ಗುಹೆಯಲ್ಲಿ ಮುಚ್ಚಿಡಲ್ಪಟ್ಟಿವೆ. ಪುನಃ ಕಾಲ ಬಂದಾಗ ಅವೆಲ್ಲವನ್ನೂ ಇದೇ ನಿನ್ನ ಕಣ್ಣಿನಿಂದ ನನ್ನ ಬಳಿ ನೋಡುತ್ತೀಯೆ.

ನ ತ್ವೇತದನುರೂಪಂ ತೇ ಯಶಸೋ ವಾ ಕುಲಸ್ಯ ವಾ ।
ಸಮೃದ್ಧಾರ್ಥೋ೯ಸಮೃದ್ಧಾರ್ಥಂ ಯನ್ಮಾಂ ಕತ್ಥಿತುಮಿಚ್ಛಸಿ ॥೨೮॥

ಆದರೆ ಈಗಿನ ನಿನ್ನ ನಡತೆಯು ನಿನ್ನ ಯಶಸ್ಸಿಗೂ, ನಿನ್ನ ಕುಲಕ್ಕೂ ಯೋಗ್ಯವಾದುದಲ್ಲ. ಈಗ ಐಶ್ವರ್ಯದಿಂದ ಮೆರೆಯುತ್ತಿರುವ ನೀನು ಐಶ್ವರ್ಯಭ್ರಷ್ಟನಾದ ನನ್ನನ್ನು ನೋಡಿ ಹಾಸ್ಯ ಮಾಡಲು ಬಯಸುತ್ತಿರುವೆ.

ನ ಹಿ ದುಃಖೇಷು ಶೋಚಂತಿ ನ ಪ್ರಹೃಷ್ಯಂತಿ ಚರ್ದ್ಧಿಷು ।
ಕೃತಪ್ರಜ್ಞಾ ಜ್ಞಾನತೃಪ್ತಾಃ ಕ್ಷಾಂತಾಃ ಸಂತೋ ಮನೀಷಿಣಃ ॥೨೯॥

ಒಳ್ಳೆಯ ಪ್ರಜ್ಞಾವಂತರಾದ, ಶಾಂತರಾದ, ಜ್ಞಾನತೃಪ್ತರಾದ ವ್ಯಕ್ತಿಗಳು ಎಂದಿಗೂ ದುಃಖಕ್ಕಾಗಿ ಶೋಕಿಸುವುದಿಲ್ಲ. ಸಂಪತ್ತಿಗಾಗಿ ಸಂತೋಷಿಸುವುದೂ ಇಲ್ಲ.

ತ್ವಂ ತು ಪ್ರಾಕೃತಯಾ ಬುದ್ಧ್ಯಾ ಪುರಂದರ ವಿಕತ್ಥಸೇ ।
ಯದಾಹಮಿವ ಭಾವೀ ತ್ವಂ ತದಾ ನೈವಂ ವದಿಷ್ಯಸಿ ॥೩೦॥

ನೀನಾದರೂ ಅಲ್ಪಬುದ್ಧಿಯಿಂದ ಹೀಗೆ ಗರ್ವದಿಂದ ಮಾತನಾಡುತ್ತಿರುವೆ. ನನ್ನ ಸ್ಥಿತಿಯು ನಿನಗೆ ಬಂದಾಗ ನೀನು ಈ ರೀತಿಯಾಗಿ ಮಾತನಾಡಲಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಏಕೋನಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಐವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತನೆಯ ಅಧ್ಯಾಯ

ಇಂದ್ರ-ಬಲಿಯ ಸಂವಾದ. ಬಲಿಯು ಕಾಲದ ಮಹಿಮೆಯನ್ನು ಪ್ರತಿಪಾದಿಸುತ್ತಾ ಇಂದ್ರನನ್ನು ನಿಂದಿಸಿದುದು.

ಭೀಷ್ಮಃ

ಪುನರೇವ ತು ತಂ ಶಕ್ರಃ ಪ್ರಹಸನ್ನಿದಮಬ್ರವೀತ್ ।
ನಿಃಶ್ವಸಂತಂ ಯಥಾ ನಾಗಂ ಪ್ರತ್ಯಾಹಾರಾಯ ಭಾರತ ॥೧॥

ಭೀಷ್ಮ- ಯುಧಿಷ್ಠಿರನೇ, ಹೀಗೆ ಹೇಳಿ ಸರ್ಪದಂತೆ ಭುಸುಗುಟ್ಟುತ್ತಿರುವ ಬಲಿಚಕ್ರವರ್ತಿಯನ್ನು ನೋಡಿದ ಇಂದ್ರನು ಗಹಗಹಿಸಿ ನಗುತ್ತಾ ಪುನಃ ಅವನಿಗೆ ನೆನಪಿಸಲು ಇಂತಹ ಮಾತುಗಳನ್ನಾಡಿದನು.

ಯತ್ ತದ್ಯಾನಸಹಸ್ರೇಣ ಜ್ಞಾತಿಭಿಃ ಪರಿವಾರಿತಃ ।
ಲೋಕಾನ್ ಪ್ರತಾಪಯನ್ ಸರ್ವಾನ್ನಾಸ್ಯಸ್ಮಾನವಿತರ್ಕಯನ್ ॥೨॥

ದೃಷ್ಟ್ವಾ ಸುಕೃಪಣಾಂ ಚೇಮಾಮವಸ್ಥಾಮಾತ್ಮನೋ ಬಲೇ ।
ಜ್ಞಾತಿಮಿತ್ರಪರಿತ್ಯಕ್ತಃ ಶೋಚಸ್ಯಾಹೋ ನ ಶೋಚಸಿ ॥೩॥

ಬಲಿಯೇ, ಹಿಂದೆ ನೀನು ಸಾವಿರಾರು ವಾಹನಗಳಿಂದ, ವಾಹನದಲ್ಲಿರುವ ಬಂಧುಗಳಿಂದ ಕೂಡಿದವನಾಗಿ ಎಲ್ಲಾ ಲೋಕಗಳಲ್ಲಿಯೂ ಪ್ರಭಾವವನ್ನು ಬೀರುತ್ತಿದ್ದೆ. ದೇವತೆಗಳಾದ ನಮ್ಮನ್ನು ನೀನು ಗಣನೆಗೆ ತರುತ್ತಿರಲಿಲ್ಲ. ಇಂದು ಜ್ಞಾತಿ-ಮಿತ್ರರಿಂದ ಪರಿತ್ಯಕ್ತನಾದ ನೀನು ಅತ್ಯಂತ ದೈನ್ಯಾವಸ್ಥೆಯನ್ನು ಹೊಂದಿರುವಿ. ಈಗ ಶೋಕ ಪಡುತ್ತಿದ್ದೀಯೋ? ಇಲ್ಲವೋ?

ಪ್ರೀತಿಂ ಪ್ರಾಪ್ಯಾತುಲಾಂ ಪೂರ್ವಂ ಲೋಕಾಂಶ್ಚಾತ್ಮವಶೇ ಸ್ಥಿತಾನ್ ।
ವಿನಿಪಾತಮಿಮಂ ಚಾದ್ಯ ಶೋಚಸ್ಯಾಹೋ ನ ಶೋಚಸಿ ॥೪॥

ಅಪಾರವಾದ ಸಂತೋಷವನ್ನು ಹಿಂದೆ ಅನುಭವಿಸಿದ ನೀನು ಸಮಸ್ತ ಲೋಕಗಳನ್ನು ವಶಪಡಿಸಿಕೊಂಡಿದ್ದೆ. ಆದರೆ ಬಾಹ್ಯಜಗತ್ತಿನಲ್ಲಿ ಇಂದು ಅಧಃಪತನಕ್ಕೆ ತುತ್ತಾಗಿ ಶೋಕಪಡುತ್ತಿರುವಿಯೋ ಇಲ್ಲವೋ?

ಬಲಿಃ

ಅನಿತ್ಯಮುಪಲಕ್ಷ್ಯೇದಂ ಕಾಲಪರ್ಯಾಯಮಾತ್ಮನಃ ।
ತಸ್ಮಾಚ್ಛಕ್ರ ನ ಶೋಚಾಮಿ ಸರ್ವಂ ಹ್ಯೇವೇದಮಂತವತ್ ॥೫॥

ಅಂತವಂತ ಇಮೇ ದೇಹಾ ಭೂತಾನಾಮಮರಾಧಿಪ ।
ತೇನ ಶಕ್ರ ನ ಶೋಚಾಮಿ ನಾಪರಾಧಾದಿದಂ ಮಮ ॥೬॥

ಬಲಿ– ಇಂದ್ರನೇ, ಕಾಲಚಕ್ರವು ಪರಿವರ್ತನಶೀಲವಾಗಿದೆ. ಲೋಕದಲ್ಲಿರುವ ಎಲ್ಲವೈಭೋಗಗಳು ಅನಿತ್ಯವಾದವುಗಳೇ. ಪ್ರಪಂಚದ ಈ ಅನಿತ್ಯತೆಯನ್ನು ನೋಡಿ ಈ ದುಸ್ಥಿತಿಗೆ ನಾನು ದುಃಖವನ್ನು ಪಡುತ್ತಿಲ್ಲ. ಇಂದ್ರದೇವನೇ, ಇಂದಲ್ಲ ನಾಳೆ ಸಮಸ್ತ ಪ್ರಾಣಿಗಳ ಶರೀರಗಳಿಗೂ ಮರಣವು ನಿಶ್ಚಿತವಾಗಿ ಒದಗಿ ಬರುತ್ತದೆ. ಇಷ್ಟೇ ಅಲ್ಲದೆ,

ನನ್ನ ಅಪರಾಧದಿಂದ ಈ ಶರೀರವು ನನಗೆ ಬಂದಿರುವುದಿಲ್ಲ. ಆದ್ದರಿಂದ ನಾನು ಶೋಕಕ್ಕೆ ತುತ್ತಾಗುವುದಿಲ್ಲ.

ಜೀವಿತಂ ಚ ಶರೀರಂ ಚ ಪ್ರೇತ್ಯ ವೈ ಸಹ ಜಾಯತೇ ।
ಉಭೇ ಸಹ ವಿವರ್ಧೇತೇ ಉಭೇ ಸಹ ವಿನಶ್ಯತಃ ॥೭॥

ನನ್ನ ಬದುಕು, ನನ್ನ ಶರೀರ ಜೊತೆ ಜೊತೆಯಲ್ಲಿಯೇ ಹುಟ್ಟುತ್ತವೆ. ಜೊತೆಯಲ್ಲೇ ವೃದ್ಧಿಯನ್ನು ಹೊಂದುತ್ತವೆ. ಜೊತೆಯಲ್ಲಿಯೇ ವಿನಾಶವನ್ನು ಹೊಂದುತ್ತವೆ.

ತದೀದೃಶಮಿದಂ ಭಾವಮವಶಃ ಪ್ರಾಪ್ಯ ಕೇವಲಮ್ ।
ಯದ್ಯೇವಮಭಿಜಾನಾಮಿ ಕಾ ವ್ಯಥಾ ಮೇ ವಿಜಾನತಃ ॥೮॥

ನಾನು ಈ ಕತ್ತೆಯ ಶರೀರವನ್ನು ಹೊಂದಿದ್ದರೂ ನಾನು ದುಃಖಿಯಾಗಿರುವುದಿಲ್ಲ. ನನ್ನ ಪರಿಚಯ ನನಗೆ ಚೆನ್ನಾಗಿ ಇದೆ. ದೇಹದ ಅನಿತ್ಯತೆಯನ್ನು, ಆತ್ಮದ ನಿತ್ಯತೆಯನ್ನು ತಿಳಿದಿರುವ ನಾನು ಏಕೆ ದುಃಖಪಡಲಿ?

ಭೂತಾನಾಂ ನಿಧನಂ ನಿಷ್ಠಾ ಸ್ರೋತಸಾಮಿವ ಸಾಗರಃ ।
ನೈತತ್ ಸಮ್ಯಗ್ವಿಜಾನಂತೋ ನರಾ ಮುಹ್ಯಂತಿ ವಜ್ರಭೃತ್ ॥೯॥

ನದಿಗಳಿಗೆಲ್ಲ ಸಮುದ್ರವು ಹೇಗೋ ಹಾಗೆ ಸಮಸ್ತ ಪ್ರಾಣಿಗಳಿಗೂ ಮೃತ್ಯುವು ಕೊನೆಯ ಆಶ್ರಯವಾಗಿದೆ. ಇದನ್ನು ಅರಿತ ನಾನು ಮೋಹಗೊಳ್ಳುವುದಿಲ್ಲ. ಇದನ್ನು ಅರಿಯದ ಮನುಷ್ಯರು ಮೋಹಗೊಳ್ಳುತ್ತಾರೆ.

ಯೇ ತ್ವೇವಂ ನಾಭಿಜಾನಂತಿ ರಜೋಮೋಹಪರಾಯಣಾಃ ।
ತೇ ಕೃಚ್ಛ್ರಂ ಪ್ರಾಪ್ಯ ಸೀದಂತಿ ಬುದ್ಧಿರ್ಯೇಷಾಂ ಪ್ರಣಶ್ಯತಿ ॥೧೦॥

ಯಾರು ಈ ಅಸ್ಥಿರತೆಯನ್ನು ಅರ್ಥಮಾಡಿಕೊಳ್ಳರೋ ಅವರು ರಜೋಗುಣ, ತಮೋಗುಣಗಳಿಗೆ ಅಧೀನರಾಗಿರುತ್ತಾರೆ. ಕಷ್ಟ ಬಂದಾಗ ಬುದ್ಧಿಗೆಟ್ಟು ನಾಶ ಹೊಂದುತ್ತಾರೆ.

ಬುದ್ಧಿಲಾಭೇ ಹಿ ಪುರುಷಃ ಸರ್ವಂ ನುದತಿ ಕಿಲ್ಬಿಷಮ್ ।
ವಿಪಾಪ್ಮಾ ಲಭತೇ ಸತ್ತ್ವಂ ಸತ್ತ್ವಸ್ಥಃ ಸಂಪ್ರಸೀದತಿ ॥೧೧॥

ಬುದ್ಧಿಯ ಲಾಭವನ್ನು ಹೊಂದಿದ ಪುರುಷನು ಎಲ್ಲ ಪಾಪಗಳನ್ನು ಸತ್ಕರ್ಮಗಳ ಮೂಲಕ ಕಳೆದುಕೊಳ್ಳುತ್ತಾನೆ. ಪಾಪಹೀನನಾಗಿ ಸತ್ತ್ವಗುಣಸಂಪನ್ನನಾಗುತ್ತಾನೆ. ಸತ್ತ್ವಗುಣವನ್ನೇ ಆಶ್ರಯಿಸಿದವನಾಗಿ ಪ್ರಸನ್ನತೆಯನ್ನು ಹೊಂದುತ್ತಾನೆ.

ತತಸ್ತು ಯೇ ನಿವರ್ತಂತೇ ಜಾಯಂತೇ ವಾ ಪುನಃ ಪುನಃ ।
ಕೃಪಣಾಃ ಪರಿತಪ್ಯಂತೇ ತೇಽನರ್ಥೈಃ ಪರಿಚೋದಿತಾಃ ॥೧೨॥

ಸತ್ತ್ವಗುಣವನ್ನು ಆಶ್ರಯಿಸದ ಜೀವರು ಪುನಃ ಪುನಃ ಹುಟ್ಟುತ್ತಾ ರಜೋಗುಣದ ಪ್ರಭಾವದಿಂದ ಮೋಹಕ್ಕೆ ತುತ್ತಾಗಿ ಪರಿತಪಿಸುತ್ತಾರೆ.

ಅರ್ಥಸಿದ್ಧಿಮನರ್ಥಂ ಚ ಜೀವಿತಂ ಮರಣಂ ತಥಾ ।
ಸುಖದುಃಖಫಲಂ ಚೈವ ನ ದ್ವೇಷ್ಮಿ ನ ಚ ಕಾಮಯೇ ॥೧೩॥

ಇಷ್ಟಾರ್ಥವು ಲಭಿಸಲಿ, ಲಭಿಸದಿರಲಿ, ಜೀವನವು ದೊರೆಯಲಿ ಅಥವಾ ಮರಣವೇ ಒದಗಿ ಬರಲಿ, ಸುಖ-ದುಃಖಗಳೆಂಬ ಫಲಗಳು ಬರಲಿ, ಬರದಿರಲಿ, ನಾನು ಅವುಗಳನ್ನು ಬಯಸುವುದಿಲ್ಲ, ಬೇಡವೆಂದು ದ್ವೇಷಿಸುವುದೂ ಇಲ್ಲ.

ಹತಂ ಹಂತಿ ಹತೋ ಹ್ಯೇವ ಯೋ ನರೋ ಹಂತಿ ಕಂಚನ ।
ಉಭೌ ತೌ ನ ವಿಜಾನೀತೋ ಯಶ್ಚ ಹಂತಿ ಹತಶ್ಚ ಯಃ ॥೧೪॥

ಒಬ್ಬನು ಮತ್ತೊಬ್ಬನನ್ನು ಕೊಂದರೆ ಕೊಂದ ವ್ಯಕ್ತಿಯನ್ನೇ ಕೊಂದಂತೆ. ಏಕೆಂದರೆ ಅವನು ಕಾಲದಿಂದ ಹತನಾದವನೆ. ಹಾಗೆ ಕೊಂದ ಅವನೂ ಕಾಲವಶನಾಗುತ್ತಾನೆ. ಆದ್ದರಿಂದ ಕೊಂದವನಾಗಲಿ, ಕೊಲೆಗೆ ತುತ್ತಾದವನಾಗಲಿ ಇಬ್ಬರೂ ಕೊಲೆಗೆ ಕರ್ತೃವೆಂದು ಕಾಲನು ತಿಳಿಯುವುದಿಲ್ಲ. ಕಾಲನೇ ಇವರಿಬ್ಬರಿಗೂ ಕರ್ತೃವೆನಿಸಿದ್ದಾನೆ.

ಹತ್ವಾ ಜಿತ್ವಾ ಚ ಮಘವನ್ಯಃ ಕಶ್ಚಿತ್ ಪುರುಷಾಯತೇ ।
ಅಕರ್ತಾ ಹ್ಯೇವ ಭವತಿ ಕರ್ತಾ ತ್ವೇವ ಕರೋತಿ ತತ್ ॥೧೫॥

ಯಾವ ವ್ಯಕ್ತಿಯು ಒಬ್ಬನನ್ನು ಕೊಂದು ಅಥವಾ ಜಯಿಸಿ ಆ ಕಾರ್ಯವನ್ನು ನಾನೇ ಮಾಡಿದ್ದೇನೆಂದು ಗರ್ವ ಪಡುತ್ತಾನೋ ಅವನು ಕರ್ತೃವೆನಿಸುವುದಿಲ್ಲ. ಅವನಿಗೂ ಕರ್ತೃವಾದ ಕಾಲನಾಮಕನಾದ ಭಗವಂತನೇ ಅದೆಲ್ಲವನ್ನೂ ಮಾಡಿಸಿದ್ದಾನೆ.

ಕೋ ಹಿ ಲೋಕಸ್ಯ ಕುರುತೇ ವಿನಾಶಪ್ರಭವಾವುಭೌ ।
ಕೃತಂ ಹಿ ತತ್ಕೃತೇನೈವ ಕರ್ತಾ ತಸ್ಯಾಪಿ ಚಾಪರಃ ॥೧೬॥

ಜಗತ್ತಿನ ಸಂಹಾರ, ಸೃಷ್ಟಿ ಇದೆರಡನ್ನೂ ಯಾರಿಂದ ಮಾಡಲು ಸಾಧ್ಯ ? ಸೃಷ್ಟಿ-ಸಂಹಾರಗಳಿಗೆ ನಾನು ನಿಯಾಮಕ ಎಂದು ಬೀಗುವುದು ಸರಿಯಲ್ಲ. ಇವುಗಳಿಗೆ ಜೀವನು ಕರ್ತೃವೇ ಆಗಲಾರ. ಇವನಿಗೂ ಕರ್ತೃವಾದವನು ನಾರಾಯಣನೇ ಆಗಿದ್ದಾನೆ.

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಂಚಮಮ್ ।
ಏತದ್ಯೋನೀನಿ ಭೂತಾನಿ ತತ್ರ ಕಾ ಪರಿದೇವನಾ ॥೧೭॥

ಪೃಥಿವಿ, ವಾಯು, ಆಕಾಶ, ಜಲ, ಜ್ಯೋತಿ ಹೀಗೆ ಪಂಚಭೂತಗಳು ಎಲ್ಲ ಜೀವರ ಶರೀರಕ್ಕೂ ಕಾರಣಗಳಾಗಿವೆ. ಹೀಗಿರುವಾಗ ನಾನು ಕತ್ತೆಯ ಶರೀರದಲ್ಲಿರುವುದಕ್ಕೆ ಏಕೆ ದುಃಖಿಸಬೇಕು?

ಮಹಾವಿದ್ಯೋಽಲ್ಪವಿದ್ಯಶ್ಚ ಬಲವಾನ್ ದುರ್ಬಲಶ್ಚ ಯಃ ।
ದರ್ಶನೀಯೋ ವಿರೂಪಶ್ಚ ಸುಭಗೋ ದುರ್ಭಗಶ್ಚ ಯಃ ॥೧೮॥

ಸರ್ವಂ ಕಾಲಃ ಸಮಾದತ್ತೇ ಗಂಭೀರಃ ಸ್ವೇನ ತೇಜಸಾ ।
ತಸ್ಮಿನ್ ಕಾಲವಶಂ ಪ್ರಾಪ್ತೇ ಕಾ ವ್ಯಥಾ ಮೇ ವಿಜಾನತಃ ॥೧೯॥

ಮಹಾವಿದ್ಯಾ ಸಂಪನ್ನನಾದ ವಿದ್ವಾಂಸನಾಗಲಿ, ಅಲ್ಪವಿದ್ಯೆ ಇರುವವನಾಗಲಿ, ಬಲಿಷ್ಠನಾಗಲಿ, ದುರ್ಬಲನಾಗಲಿ, ಸುಂದರನಾಗಲಿ, ಕುರೂಪಿಯಾಗಲಿ, ಸುಭಗನಾಗಲಿ, ದುರ್ಭಗನಾಗಲಿ ಎಲ್ಲರನ್ನೂ ಗಂಭೀರನಾದ ಕಾಲ ಪುರುಷನು ತನ್ನ ತೇಜಸ್ಸಿನಿಂದ ಸೆಳೆದುಕೊಳ್ಳುತ್ತಾನೆ. ಹೀಗೆ ಜಗತ್ತೆಲ್ಲ ಕಾಲನಾಮಕನಾದ ಭಗವಂತನ ವಶವಾಗಿರುವಾಗ ಇದನ್ನರಿತಿರುವ ನನಗೆ ವ್ಯಥೆ ಎಲ್ಲಿಯದು?

ದಗ್ಧಮೇವಾನುದಹತಿ ಹತಮೇವಾನುಹಂತಿ ಚ ।
ನಶ್ಯತೇ ನಷ್ಟಮೇವಾಗ್ರೇ ಲಬ್ಧವ್ಯಂ ಲಭತೇ ನರಃ ॥೨೦॥

ಕಾಲ ಸುಟ್ಟಿದ್ದನ್ನು ಬಳಿಕ ಜನರು ದಹಿಸುತ್ತಾರೆ, ಕಾಲವು ಕೊಂದಿದ್ದನ್ನು ಬಳಿಕ ಜನರು ಕೊಲ್ಲುತ್ತಾರೆ. ಮೊದಲೇ ಯಾವುದು ನಷ್ಟವಾಗಿದೆಯೋ ಜನರು ಅದನ್ನು

ಪುನಃ ನಾಶಪಡಿಸುತ್ತಾರೆ. ಯಾವುದು ಜನರಿಗೆ ಲಭಿಸಬೇಕೆಂದು ಮೊದಲೇ ನಿಶ್ಚಿತವಾಗಿದೆಯೋ ಅದನ್ನು ಮನುಷ್ಯ ಪಡೆದುಕೊಳ್ಳುತ್ತಾನೆ. ಎಲ್ಲವೂ ಕಾಲನಾಮಕನಾದ ಭಗವಂತನ ಸಂಕಲ್ಪಾನುಸಾರ ನಡೆಯುತ್ತಿದೆ. ಮನುಷ್ಯನ ಕರ್ತೃತ್ವ ಈ ವಿಷಯದಲ್ಲಿ ಇರುವುದಿಲ್ಲ.

ನಾಸ್ಯ ದ್ವೀಪಃ ಕುತಃ ಪಾರಂ ನಾವಾರಃ ಸಂಪ್ರದೃಶ್ಯತೇ ।
ನಾಂತಮಸ್ಯ ಪ್ರಪಶ್ಯಾಮಿ ವಿಧೇರ್ದಿವ್ಯಸ್ಯ ಚಿಂತಯನ್ ॥೨೧॥

ನಾನು ಎಷ್ಟೇ ಯೋಚಿಸಿದರೂ ಈ ಸಂಸಾರಸಮುದ್ರದ ಕೊನೆಯನ್ನು ಕಾಣುತ್ತಿಲ್ಲ. ದೇವಸಂಬಂಧಿಯಾದ ವಿಧಿಯ ಅಂತ್ಯವು ಎಲ್ಲಿದೆ ಎಂಬುದನ್ನು ನಾನು ಕಾಣುತ್ತಿಲ್ಲ. ಹೀಗಿರಲು ಈಚೆಯ ದಡ, ಆಚೆಯ ದಡ ಕಾಣದಿರುವ ನನಗೆ ದಡವೆಲ್ಲಿ ದೊರೆತೀತು?

ಯದಿ ಮೇ ಪಶ್ಯತಃ ಕಾಲೋ ಭೂತಾನಿ ನ ವಿನಾಶಯೇತ್ ।
ಸ್ಯಾನ್ಮೇ ಹರ್ಷಶ್ಚ ದರ್ಪಶ್ಚ ಕ್ರೋಧಶ್ಚೈವ ಶಚೀಪತೇ ॥೨೨॥

ಶಚೀಪತಿಯೇ, ನಾನು ನೋಡುತ್ತಿರುವಾಗ ಕಾಲನು ಪ್ರಾಣಿಗಳನ್ನು ಸಾಯಿಸದಿದ್ದಲ್ಲಿ ನನಗೆ ಸಂತೋಷ ಉಂಟಾಗುತ್ತಿತ್ತು. ಗರ್ವವು ಉಂಟಾಗುತ್ತಿತ್ತು. ಕ್ರೂರಿಯಾದ ಕಾಲನ ಮೇಲೆ ಕೋಪವು ಉಂಟಾಗುತ್ತಿತ್ತು. ಆದರೆ ಕಾಲನು ನನ್ನ ಕಣ್ಣಿಗೆ ಕಾಣಿಸದೆ ಇದ್ದು ಈ ವ್ಯಾಪಾರವನ್ನು ಮಾಡುತ್ತಿರುವಾಗ ಕಾಣದ ವಸ್ತುವಿನಲ್ಲಿ ಕ್ರೋಧವನ್ನು ಹೇಗೆ ತೋರಲಿ?

ತುಷಭಕ್ಷಂ ತು ಮಾಂ ಜ್ಞಾತ್ವಾ ಪ್ರವಿವಿಕ್ತಜನೇ ಗೃಹೇ ।
ಬಿಭ್ರತಂ ಗಾರ್ದಭಂ ರೂಪಮಾದಿಶ್ಯ ಪರಿಗರ್ಹಸೇ ॥೨೩॥

ಇದೆಲ್ಲವನ್ನೂ ಅರಿತ ನೀನು ಕತ್ತೆರೂಪವನ್ನು ಧರಿಸಿ, ಯಾರೂ ಇಲ್ಲದೆ ಇರುವ ಏಕಾಂತದ ಮನೆಯಲ್ಲಿ ಧಾನ್ಯದ ಹೊಟ್ಟನ್ನು ತಿಂದು ಬದುಕುತ್ತಿರುವ ನನ್ನ ಬಳಿ ಬಂದು ನನ್ನನ್ನು ಹೀಗೆ ನಿಂದಿಸುತ್ತಿರುವುದು ಸರಿಯೇ ಅಥವಾ ಯೋಗ್ಯವೆ?

ಇಚ್ಛನ್ನಹಂ ವಿಕುರ್ಯಾಂ ಹಿ ರೂಪಾಣಿ ಬಹುಧಾತ್ಮನಃ ।
ವಿಭೀಷಣಾನಿ ಯಾನೀಕ್ಷ್ಯ ಪಲಾಯೇಥಾಸ್ತ್ವಮೇವ ಮೇ ॥೨೪॥

ನಾನು ಬಯಸಿದರೆ ಅನೇಕ ರೂಪಗಳನ್ನು ಧರಿಸಬಲ್ಲೆ. ನೀನು ಪಲಾಯನ ಮಾಡುವಷ್ಟು ಭಯಾನಕ ರೂಪವನ್ನೂ ಧರಿಸಬಲ್ಲೆನು.

ಕಾಲಃ ಸರ್ವಂ ಸಮಾದತ್ತೇ ಕಾಲಃ ಸರ್ವಂ ಪ್ರಯಚ್ಛತಿ ।
ಕಾಲೇನ ವಿಧೃತಂ ಸರ್ವಂ ಮಾ ಕೃಥಾಃ ಶಕ್ರ ಪೌರುಷಮ್ ॥೨೫॥

ಕಾಲವೇ ಎಲ್ಲವನ್ನೂ ನುಂಗುತ್ತದೆ. ಕಾಲವೇ ಎಲ್ಲವನ್ನೂ ಕೊಡುತ್ತದೆ. ಕಾಲದಿಂದ ಪ್ರಪಂಚದ ಆಗು-ಹೋಗುಗಳೆಲ್ಲ ನಿರ್ಣಯಿಸಲ್ಪಟ್ಟಿದೆ. ಕಾಲದಿಂದಲೇ ಎಲ್ಲವೂ ಮಾಡಲ್ಪಡುತ್ತದೆ. ಆದ್ದರಿಂದ ನಿನ್ನ ಪೌರುಷದಿಂದ ಗರ್ವಪಡಬೇಡ.

ಪುರಾ ಸರ್ವಂ ಪ್ರವ್ಯಥತೇ ಮಯಿ ಕ್ರುದ್ಧೇ ಪುರಂದರ ।
ಅವೈಮಿ ತ್ವಸ್ಯ ಲೋಕಸ್ಯ ಧರ್ಮಂ ಶಕ್ರ ಸನಾತನಮ್ ॥೨೬॥

ಪುರಂದರನೇ, ಹಿಂದೆ ನಾನು ಕುಪಿತನಾಗಿದ್ದಲ್ಲಿ ಪ್ರಪಂಚವೇ ದುಃಖಿಸುತ್ತಿತ್ತು. ಲೋಕದ ವೃದ್ಧಿ-ಕ್ಷಯಧರ್ಮವನ್ನು ಚೆನ್ನಾಗಿ ತಿಳಿದುಕೊಂಡಿರುತ್ತೇನೆ.

ತ್ವಮಪ್ಯೇವಮಪೇಕ್ಷಸ್ವ ಮಾತ್ಮನಾ ವಿಸ್ಮಯಂ ಗಮಃ ।
ಪ್ರಭವಶ್ಚ ಪ್ರಭಾವಶ್ಚ ನಾತ್ಮಸಂಸ್ಥಃ ಕದಾಚನ ॥೨೭॥

ನೀನೂ ಹೀಗೆ ತಿಳಿದುಕೊ. ನಿನ್ನ ವಿಷಯದಲ್ಲಿ ಗರ್ವ ಬೇಡ. ಉತ್ಪತ್ತಿ, ಪ್ರಭುತ್ವ ಯಾವುದೂ ನಮ್ಮ ಅಧೀನವಲ್ಲ.

ಕೌಮಾರಮೇವ ತೇ ಚಿತ್ತಂ ತಥೈವಾದ್ಯ ಯಥಾ ಪುರಾ ।
ಸಮವೇಕ್ಷಸ್ವ ಮಘವನ್ ಬುದ್ಧಿಂ ವಿಂದಸ್ವ ನೈಷ್ಕಿಕೀಮ್ ॥೨೮॥

ನೀನು ದೇವತೆಗಳಿಗೆ ಒಡೆಯನಾದಾಗಲೂ ಬಾಲಬುದ್ಧಿಯವನೇ ಆಗಿರುವೆ. ಹಿಂದೆ ನಿನ್ನ ಬುದ್ಧಿ ಹೇಗಿತ್ತೋ ಈಗಲೂ ಹಾಗೆಯೇ ಇದೆ. ಪುನಃ ಪರ್ಯಾಲೋಚಿಸಿ ಸ್ಥಿರ ಬುದ್ಧಿಯನ್ನು ಹೊಂದು.

ದೇವಾ ಮನುಷ್ಯಾಃ ಪಿತರೋ ಗಂಧರ್ವೋರಗರಾಕ್ಷಸಾಃ ।
ಆಸನ್ ಸರ್ವೇ ಮಮ ವಶೇ ತತ್ ಸರ್ವಂ ವೇತ್ಥ ವಾಸವ ॥೨೯॥

ಇಂದ್ರನೇ, ದೇವತೆಗಳು, ಮನುಷ್ಯರು, ಪಿತೃಗಳು, ಗಂಧರ್ವರು, ಸರ್ಪಗಳು, ರಾಕ್ಷಸರು ಎಲ್ಲರೂ ನನ್ನ ಅಧೀನದಲ್ಲಿದ್ದರು. ಈ ವಿಷಯವು ನಿನಗೂ ಚೆನ್ನಾಗಿ ತಿಳಿದಿದೆ.

ನಮಸ್ತಸ್ಮೈ ದಿಶೇಽಪ್ಯಸ್ತು ಯಸ್ಯಾಂ ವೈರೋಚನೋ ಬಲಿಃ ।
ಇತಿ ಮಾಮಭ್ಯಪದ್ಯಂತ ಬುದ್ಧಿಮಾತ್ಸರ್ಯಮೋಹಿತಾಃ ॥೩೦॥

ನನ್ನ ಶತ್ರುಗಳು ಬುದ್ಧಿಯಿಂದ ವಿಮೋಹಿತರಾಗಿ ದ್ವೇಷ ಮಾಡುತ್ತಿದ್ದರೂ ವಿರೋಚನನ ಮಗನಾದ ಬಲಿಯು ಯಾವ ದಿಕ್ಕಿನಲ್ಲಿದ್ದರೂ ಆ ದಿಕ್ಕಿಗೆ ನಮಸ್ಕಾರ ಎಂದು ಹೇಳಿಕೊಂಡು ನನ್ನ ಬಳಿಗೆ ಬರುತ್ತಿದ್ದರು.

ನಾಹಂ ತದನುಶೋಚಾಮಿ ನಾತ್ಮಭ್ರಂಶಂ ಶಚೀಪತೇ ।
ಏವಂ ಮೇ ನಿಶ್ಚಿತಾ ಬುದ್ಧಿಃ ಶಾಸ್ತುಸ್ತಿಷ್ಠಾಮ್ಯಹಂ ವಶೇ ॥೩೧॥

ನಾನಿಂದು ರಾಜ್ಯ ಕಳೆದುಕೊಂಡೆ ಎಂದು ಖಂಡಿತಾ ಶೋಕಿಸುವುದಿಲ್ಲ. ಯಾವಾಗಲೂ ಎಲ್ಲರಿಗೂ ನಿಯಾಮಕನಾದ ಕಾಲಪುರುಷನ ಅಧೀನನಾಗಿಯೇ ನಾನು ಇರುತ್ತೇನೆ. ಇದನ್ನು ಬುದ್ಧಿಯಿಂದ ನಿಶ್ಚಯಿಸಿಕೊಂಡಿದ್ದೇನೆ.

ದೃಶ್ಯತೇ ಹಿ ಕುಲೇ ಜಾತೋ ದರ್ಶನೀಯಃ ಪ್ರತಾಪವಾನ್ ।
ದುಃಖಂ ಜೀವನ್ ಸಹಾಮಾತ್ಯೋ ಭವಿತವ್ಯಂ ಹಿ ತತ್ತಥಾ ॥೩೨॥

ಒಬ್ಬನು ಸತ್ಕುಲಪ್ರಸೂತನಾಗಿರುತ್ತಾನೆ, ಸುಂದರನಾಗಿರುತ್ತಾನೆ, ಪ್ರತಾಪವಂತನಾಗಿರುತ್ತಾನೆ. ಹೀಗಿದ್ದರೂ ಅವನು ತನ್ನ ಒಡನಾಡಿಗಳೊಡನೆ ದುಃಖದಿಂದಲೇ ಕಾಲ ಕಳೆಯುತ್ತಾನೆ. ಇದು ವಿಧಿಯ ಪ್ರಭಾವ.

ದೌಷ್ಕುಲೇಯಸ್ತಥಾ ಮೂಢೋ ದುರ್ಜಾತಃ ಶಕ್ರ ದೃಶ್ಯತೇ ।
ಸುಖಂ ಜೀವನ್ ಸಹಾಮಾತ್ಯೋ ಭವಿತವ್ಯಂ ಹಿ ತತ್ತಥಾ ॥೩೩॥

ಮತ್ತೊಬ್ಬ ದುಷ್ಟಕುಲದಲ್ಲಿ ಹುಟ್ಟಿರುತ್ತಾನೆ. ಮೂರ್ಖನಾಗಿರುತ್ತಾನೆ. ಹೀನ ಜಾತಿಯವನಾಗಿರುತ್ತಾನೆ. ಅಂತಹವನು ಒಡನಾಡಿಗಳ ಜೊತೆ ಸುಖದಿಂದ ಜೀವಿಸುತ್ತಾನೆ. ಇದು ಕಾಲದ ಸಂಕಲ್ಪವೆ.

ಕಲ್ಯಾಣೀ ರೂಪಸಂಪನ್ನಾ ದುರ್ಭಗಾ ಶಕ್ರ ದೃಶ್ಯತೇ ।
ಅಲಕ್ಷಣಾ ವಿರೂಪಾ ಚ ಸುಭಗಾ ಶಕ್ರ ದೃಶ್ಯತೇ ॥೩೪॥

ಒಬ್ಬಳು ಕಲ್ಯಾಣರೂಪವುಳ್ಳವಳಾಗಿರುತ್ತಾಳೆ. ಅವಳು ದೌರ್ಭಾಗ್ಯದಿಂದ ದುಃಖಿಸುತ್ತಾಳೆ. ಮತ್ತೊಬ್ಬಳು ದುರ್ಲಕ್ಷಣಗಳಿಂದ ಕುರೂಪಿಯಾಗಿರುತ್ತಾಳೆ, ಸುಭಗಳಂತೆ ಮೆರೆಯುತ್ತಾಳೆ.

ನೈತದಸ್ಮತ್ಕೃತಂ ಶಕ್ರ ನೈತಚ್ಚಕ್ರ ತ್ವಯಾ ಕೃತಮ್ ।
ಯತ್ತ್ವಮೇವಂಗತೋ ವಜ್ರಿನ್ಯದ್ವಾಪ್ಯೇವಂಗತಾ ವಯಮ್ ॥೩೫॥

ನೀನಿಂದು ಸಂಪತ್ತಿನ ಸಮೃದ್ಧಿಯನ್ನು ಹೊಂದಿರುವೆ. ನಾನಿಂದು ರಾಜ್ಯಲಕ್ಷ್ಮ್ಯಿಯಿಂದ ಭ್ರಷ್ಟನಾಗಿದ್ದೇನೆ. ನಾನು ಮಾಡಿದ ಅಪರಾಧವೂ ಅಲ್ಲ. ನೀನು ತೋರಿದ ಪೌರುಷವೂ ಇಲ್ಲಿ ಕಾರಣವಲ್ಲ.

ನ ಕರ್ಮ ತವ ನಾನ್ಯೇಷಾಂ ಕುತೋ ಮಮ ಶತಕ್ರತೋ ।
ಋದ್ಧಿರ್ವಾಪ್ಯಥ ವಾ ನರ್ದ್ಧಿಃ ಪರ್ಯಾಯಕೃತಮೇವ ತತ್ ॥೩೬॥

ಇಂದ್ರನೇ, ನಾನು ಮಾಡಿದ ಕರ್ಮದಿಂದ ಈ ದುಃಸ್ಥಿತಿಯಲ್ಲ. ಸಂಪತ್ತು, ದಾರಿದ್ರ್ಯ ಇವು ಪರ್ಯಾಯವಾಗಿ ಬರುತ್ತಿರುತ್ತವೆ. ಯಾವುದೂ ಶಾಶ್ವತವಲ್ಲ.

ಪಶ್ಯಾಮಿ ತ್ವಾ ವಿರಾಜಂತಂ ದೇವರಾಜಮವಸ್ಥಿತಮ್ ।
ಶ್ರೀಮಂತಂ ದ್ಯುತಿಮಂತಂ ಚ ಗರ್ಜಂತಂ ಚ ಮಮೋಪರಿ ॥೩೭॥

ನೀನು ಈ ಸಮಯದಲ್ಲಿ ಇಂದ್ರ ಪದವಿಯಲ್ಲಿ ಪ್ರತಿಷ್ಠಿತನಾಗಿರುವಿ. ಕಾಂತಿಯಿಂದ ಬೆಳಗುತ್ತಿರುವಿ. ತೇಜಸ್ಸಿನಿಂದ ಕೂಡಿರುವಿ. ನನ್ನ ಮೇಲೆ ಗರ್ವದಿಂದ ಗರ್ಜಿಸುತ್ತಿರುವುದನ್ನು ನೋಡುತ್ತಿದ್ದೇನೆ.

ಏತಚ್ಚೈವಂ ನ ಚೇತ್ ಕಾಲೋ ಮಾಮಾಕ್ರಮ್ಯ ಸ್ಥಿತೋ ಭವೇತ್ ।
ಪಾತಯೇಯಮಹಂ ತ್ವಾದ್ಯ ಸವಜ್ರಮಪಿ ಮುಷ್ಟಿನಾ ॥೩೮॥

ಕಾಲದ ಅತಿಕ್ರಮವಿಲ್ಲದಿದ್ದರೆ ನಾನು ಹಿಂದಿನ ಬಲಿಯೇ ಆಗಿರುತ್ತಿದ್ದೆ. ನೀನು ವಜ್ರಾಯುಧವನ್ನು ಧರಿಸಿದ್ದರೂ ಮುಷ್ಟಿಪ್ರಹಾರದಿಂದಲೇ ನಿನ್ನನ್ನು ಸಂಹರಿಸುತ್ತಿದ್ದೆ.

ನ ತು ವಿಕ್ರಮಕಾಲೋಽಯಂ ಕ್ಷಮಾಕಾಲೋಽಯಮಾಗತಃ ।
ಕಾಲಃ ಸ್ಥಾಪಯತೇ ಸರ್ವಂ ಕಾಲಃ ಪಚತಿ ವೈ ತಥಾ ॥೩೯॥

ಆದರೆ ಇಂದು ನನಗೆ ಪರಾಕ್ರಮವನ್ನು ತೋರಿಸುವ ಕಾಲವಿಲ್ಲ. ಶಾಂತಿಯಿಂದ ಇರುವ ಕಾಲವಾಗಿದೆ. ಕಾಲವೇ ಎಲ್ಲರನ್ನೂ ಬೇರೆ ಬೇರೆ ಅವಸ್ಥೆಗಳಲ್ಲಿ ಸ್ಥಾಪಿಸುತ್ತದೆ. ಕಾಲವೇ ಕಾಲಾಂತರದಲ್ಲಿ ಪ್ರಾಣಿಗಳನ್ನು ಕ್ಷೀಣಗೊಳಿಸುತ್ತದೆ.

ಮಾಂ ಚೇದಭ್ಯಾಗತಃ ಕಾಲೋ ದಾನವೇಶ್ವರಮೂರ್ಜಿತಮ್ ।
ಗರ್ಜಂತಂ ಪ್ರತಪಂತಂ ಚ ಕಮನ್ಯಂ ನಾಗಮಿಷ್ಯತಿ ॥೪೦॥

ದಾನವಶ್ರೇಷ್ಠರಿಂದ ಪೂಜಿಸಲ್ಪಡುತ್ತಿದ್ದ, ಗರ್ಜಿಸುತ್ತಿದ್ದ, ಶತ್ರುಗಳನ್ನು ಪರಿತಾಪಗೊಳಿಸುತ್ತಿದ್ದ, ನನ್ನ ಮೇಲೆ ಕಾಲವು ಆಕ್ರಮಿಸಿದೆ ಎಂದ ಬಳಿಕ ಯಾರನ್ನು ಕಾಲವು ಬಿಡುತ್ತದೆ?

ದ್ವಾದಶಾನಾಂ ಹಿ ಭವತಾಮಾದಿತ್ಯಾನಾಂ ಮಹಾತ್ಮನಾಮ್ ।
ತೇಜಾಂಸ್ಯೇಕೇನ ಸರ್ವೇಷಾಂ ದೇವರಾಜ ಹೃತಾನಿ ಮೇ ॥೪೧॥

ದೇವರಾಜನೇ, ಹಿಂದೆ ಮಹಾತ್ಮರಾದ ಹನ್ನೆರಡು ಮಂದಿ ಆದಿತ್ಯರೆಲ್ಲರ ತೇಜಸ್ಸನ್ನು ನಾನೊಬ್ಬನೇ ನುಂಗಿ ಹಾಕಿದ್ದೆನು.

ಅಹಮೇವೋದ್ವಹಾಮ್ಯಾಪೋ ವಿಸೃಜಾಮಿ ಚ ವಾಸವ ।
ತಪಾಮಿ ಚೈವ ತ್ರೈಲೋಕ್ಯಂ ವಿದ್ಯೋತಾಮ್ಯಹಮೇವ ಚ ॥೪೨॥

ನಾನೇ ಆದಿತ್ಯರೂಪನಾಗಿ ಭೂಮಿಯಲ್ಲಿರುವ ನೀರನ್ನು ನನ್ನ ಕಿರಣಗಳ ಮೂಲಕ ಮೇಲೆ ಎತ್ತುತ್ತಿದ್ದೆ. ಮೇಘರೂಪದಿಂದ ಮಳೆ ಸುರಿಸುತ್ತಿದ್ದೆ. ಮೂರು ಲೋಕಗಳಿಗೂ ಅಗ್ನಿಯಾಗಿ ಶಾಖ ನೀಡುತ್ತಿದ್ದೆ, ಬೆಳಕನ್ನೂ ನೀಡುತ್ತಿದ್ದೆ.

ಸಂರಕ್ಷಾಮಿ ವಿಲುಂಪಾಮಿ ದದಾಮ್ಯಹಮಥಾದದೇ ।
ಸಂಯಚ್ಛಾಮಿ ನಿಯಚ್ಛಾಮಿ ಲೋಕೇಷು ಪ್ರಭುರೀಶ್ವರಃ ॥೪೩॥

ಪ್ರಜೆಗಳನ್ನು ರಕ್ಷಿಸುತ್ತಿದ್ದೆ, ದರೋಡೆಕೋರರನ್ನು ಸಂಹರಿಸಿ ಐಶ್ವರ್ಯವನ್ನು ಅಪಹರಿಸುತ್ತಿದ್ದೆ. ಸತ್ಪಾತ್ರರಿಗೆ ದಾನ ಮಾಡುತ್ತಿದ್ದೆ. ಪ್ರಜೆಗಳಿಂದ ಕಪ್ಪ ಕಾಣಿಕೆಯನ್ನು ಸ್ವೀಕರಿಸುತ್ತಿದ್ದೆ. ಲೋಕದಲ್ಲಿ ಪ್ರಭುವೂ ಈಶ್ವರನೂ ಆಗಿ ಶಾಸನ ಮಾಡುತ್ತಿದ್ದೆ.

ತದದ್ಯ ವಿನಿವೃತ್ತಂ ಮೇ ಪ್ರಭುತ್ವಮಮರಾಧಿಪ ।
ಕಾಲಸೈನ್ಯಾವಗಾಢಸ್ಯ ಸರ್ವಂ ನ ಪ್ರತಿಭಾತಿ ಮೇ ॥೪೪॥

ಅಮರೇಶ್ವರನೇ, ಇಂದು ನನ್ನ ಆ ಪ್ರಭುತ್ವವು ಇಲ್ಲವಾಗಿದೆ. ಕಾಲನ ಸೈನಿಕರು ನನ್ನನ್ನು ಆಕ್ರಮಿಸಿದ್ದಾರೆ. ನನ್ನ ಐಶ್ವರ್ಯವೆಲ್ಲ ತೇಜೋಹೀನವಾಗಿದೆ.

ನಾಹಂ ಕರ್ತಾ ನ ಚೈವ ತ್ವಂ ನಾನ್ಯಃ ಕರ್ತಾ ಶಚೀಪತೇ ।
ಪರ್ಯಾಯೇಣ ಹಿ ಭುಜ್ಯಂತೇ ಲೋಕಾಃ ಶಕ್ರ ಯದೃಚ್ಛಯಾ ॥೪೫॥

ಶಚೀಪತಿಯೇ, ಈಗಿನ ನನ್ನ ಸ್ಥಿತಿಗೆ ನಾನು ಕಾರಣನಲ್ಲ. ನಿನ್ನ ಸ್ಥಿತಿಗೆ ನೀನೂ ಕಾರಣನಲ್ಲ. ಬೇರೆ ಯಾರೂ ಕಾರಣರಲ್ಲ. ಕಾಲನಾಮಕನಾದ ಭಗವಂತನ ಸಂಕಲ್ಪದಂತೆ ಲೋಕದಲ್ಲಿ ಪರ್ಯಾಯವಾಗಿ ರಾಜರಿಂದ ಅನುಭವಿಸಲ್ಪಡುತ್ತವೆ.

ಮಾಸಾರ್ಧಮಾಸವೇಶ್ಮಾನಮಹೋರಾತ್ರಾಭಿಸಂವೃತಮ್ ।
ಋತುದ್ವಾರಂ ವರ್ಷಮುಖಮಾಹುರ್ವೇದವಿದೋ ಜನಾಃ ॥೪೬॥

ಮಾಸ, ಪಕ್ಷ, ಇವುಗಳನ್ನು ವೇದಜ್ಞರು ಕಾಲ ಪುರುಷನ ಶರೀರವೆನ್ನುತ್ತಾರೆ. ದಿನ ರಾತ್ರಿಗಳನ್ನು ಕಾಲನ ಹೊದಿಯುವ ವಸ್ತ್ರವೆನ್ನುತ್ತಾರೆ. ಋತುಗಳು ಕಾಲ ಪುರುಷನ ದ್ವಾರ ರೂಪವಾದ ಮನಸ್ಸು ಮತ್ತು ಇಂದ್ರಿಯಗಳಾಗಿವೆ. ವರ್ಷವೇ ಅವನ ಮುಖ. ಅಂತಹ ಕಾಲನು ಆಯುಃಸ್ವರೂಪನಾಗಿದ್ದಾನೆ.

ಆಹುಃ ಸರ್ವಮಿದಂ ಚಿಂತ್ಯಂ ಜನಾಃ ಕೇಚಿನ್ಮನೀಷಯಾ ।
ಅನಿತ್ಯಂ ಪಂಚವರ್ಷಾಣಿ ಷಷ್ಠೋ ದೃಶ್ಯತಿ ದೇಹಿನಾಮ್ ।
ಅಸ್ಯಾಃ ಪಂಚೈವ ಚಿಂತಾಯಾಃ ಪರ್ಯೇಷ್ಯಾಣಿ ಚ ಪಂಚಧಾ ॥೪೭॥

ಈ ಕಾಲನ ಸ್ವರೂಪವನ್ನು ಎಲ್ಲ ಜನರು ತಮ್ಮ ಬುದ್ಧಿಯಿಂದಲೇ ಸರಿಯಾಗಿ ಯೋಚಿಸಬೇಕು. ಹುಟ್ಟಿದ ಬಳಿಕ ಐದು ವರ್ಷಗಳ ತನಕ ಅವನು ಬದುಕುತ್ತಾನೋ, ಇಲ್ಲವೋ ಎಂಬುದೇ ನಿರ್ಣಯವಾಗುವುದಿಲ್ಲ. ಐದು ವರ್ಷದ ಒಳಗೆ ದೈವದಿಂದ ಮರಣವೂ ಉಂಟಾಗಬಹುದು. ಬಳಿಕ ಆರನೆಯ ವರ್ಷ ಆರಂಭವಾಗುತ್ತದೆ. ಆರನೆಯ ವರ್ಷದ ತನಕವೂ ತಂದೆ-ತಾಯಂದಿರೇ ಮಕ್ಕಳ ಬಾಯಿಗೆ ತುತ್ತನ್ನು ಹಾಕುತ್ತಾರೆ. ನಂತರದ ಆರು ವರ್ಷಗಳಲ್ಲಿಯೂ ಅವರೇ ರಕ್ಷಿಸುತ್ತಾರೆ. ಹನ್ನೆರಡು-ಹದಿಮೂರನೆಯ ವರ್ಷದ ಬಳಿಕ ಹೊಟ್ಟೆ ತುಂಬಿಸುವ ಉಪಾಯವೇನು ಎಂಬ ಚಿಂತೆಯು ಆರಂಭವಾಗುತ್ತದೆ. ಹದಿನೈದು ದಾಟಿದ ಬಳಿಕ ಮದುವೆಯಾಗಲು ಆ

ಕಾಲವು ತಲುಪಿಸುತ್ತದೆ. ಹದಿನಾರನೆಯ ವರ್ಷದ ಬಳಿಕ ಆಯುಷ್ಯವು ಹೇಗೆ ಕಳೆಯುತ್ತದೆ ಎಂಬುದನ್ನು ಯಾರಿಗೂ ತಿಳಿಯಲಾಗುವುದಿಲ್ಲ. ಅದೊಂದು ರೀತಿ ಉನ್ಮಾದದ ದೆಸೆ. ಅದರ ವೇಗವನ್ನು ಯಾರಿಂದಲೂ ತಿಳಿಯಲಾಗದು. ಹೀಗೆ ಮನುಷ್ಯನ ಜೀವಿತವು ಕಾಲನ ಪ್ರಭಾವದಿಂದ ಅನೇಕ ರೀತಿ ವಿಭಕ್ತವಾಗಿದೆ.

ಗಂಭೀರಂ ಗಹನಂ ಬ್ರಹ್ಮ ಮಹತ್ತೋಯಾರ್ಣವಂ ಯಥಾ ।
ಅನಾದಿನಿಧನಂ ಚಾಹುರಕ್ಷರಂ ಪರಮೇವ ಚ ॥೪೮॥

ಕಾಲನಿಯಾಮಕವಾದ ಪರಬ್ರಹ್ಮವು ದೊಡ್ಡದಾದ ಅನಂತ ಜಲರಾಶಿಯಿಂದ ತುಂಬಿರುವ ಮಹಾಸಾಗರದಂತೆ ಗಂಭೀರವೂ ಗಹನವೂ ಆಗಿದೆ. ಇದಕ್ಕೆ ಆದಿಯಾಗಲಿ, ಅಂತ್ಯವಾಗಲಿ ಇರುವುದಿಲ್ಲ. ಇದನ್ನೇ ಅಕ್ಷರವೂ, ಉತ್ತಮವೂ ಎಂದು ವಿದ್ವಾಂಸರು ಹೇಳುತ್ತಾರೆ.

ಸತ್ತ್ವೇಷು ಲಿಂಗಮಾವೇಶ್ಯ ನಲಿಂಗಮಪಿ ತತ್ಸ್ವಯಮ್ ।
ಮನ್ಯಂತೇऽಧ್ರುವಮೇವೈನಂ ಯೇ ನರಾಸ್ತತ್ತ್ವದರ್ಶಿನಃ ॥೪೯॥

ಕಾಲರೂಪವಾದ ಆ ಪರಬ್ರಹ್ಮನು ತಾನು ಸ್ವಯಂ ನಿರ್ವಿಕಾರನಾಗಿದ್ದರೂ ಜೀವರಿಗೆ ಸ್ತ್ರೀ-ಪುಂ ಎಂಬ ಸ್ಥಿತಿಯನ್ನು ನೀಡುತ್ತಾನೆ. ತತ್ತ್ವದರ್ಶಿಗಳಾದ ಜ್ಞಾನಿಗಳು ಈ ಜೀವನನ್ನು ಅಧ್ರುವ ಎಂದೇ ಹೇಳುತ್ತಾರೆ. ಮರಣಶೀಲನೆಂದೇ ಕರೆಯುತ್ತಾರೆ.

ಭೂತಾನಾಂ ತು ವಿಪರ್ಯಾಸಂ ಮನ್ಯತೇ ಗತವಾನಿತಿ ।
ನ ಹ್ಯೇತಾವದ್ ಭವೇದ್ ಗ್ರಾಹ್ಯಂ ನ ಯಸ್ಯಾಃ ಪ್ರಕೃತೇಃ ಪುನಃ ॥೫೦॥

ಕಾಲನಾಮಕನಾದ ಭಗವಂತನೇ ಸಮಸ್ತ ಪ್ರಾಣಿಗಳ ಅವಸ್ಥೆಗಳಲ್ಲಿಯೂ ವಿಪರ್ಯಾಸವನ್ನುಂಟು ಮಾಡುತ್ತಾನೆ. ಪಂಚಭೂತಗಳ ವಿಪರ್ಯಾಸವನ್ನೇ ನೋಡುತ್ತಾ ಜೀವನುಗತಿಸಿದ ಎನ್ನುತ್ತಾರೆ. ಇಷ್ಟನ್ನೇ ತಿಳಿಯಬಾರದು. ಸತ್ತಪ್ರಕೃತಿ ಪುನಃ ಹುಟ್ಟದು. ನಿತ್ಯನಾದ ಜೀವನು ಪುನಃ ಆವಿರ್ಭವಿಸುತ್ತಾನೆ.

ಗತಿಂ ಹಿ ಸರ್ವಭೂತಾನಾಮಗತ್ವಾ ಕ್ವ ಗಮಿಷ್ಯಸಿ ।
ಯೋ ಧಾವತಾ ನ ಹಾತವ್ಯಸ್ತಿಷ್ಠನ್ನಪಿ ನ ಹೀಯತೇ ।
ತಮಿಂದ್ರಿಯಾಣಿ ಸರ್ವಾಣಿ ನಾನುಪಶ್ಯಂತಿ ಪಂಚಧಾ ॥೫೧॥

ಸರ್ವಪ್ರಾಣಿಗಳಿಗೂ ರಕ್ಷಕವಾದ ಕಾಲವನ್ನು (ಹರಿಯನ್ನು) ಆಶ್ರಯಿಸದೆ ಪ್ರಾಣಿಯು ಎಲ್ಲಿಗೆ ಹೋಗಬಲ್ಲನು? ಮನುಷ್ಯನು ಓಡಿ ಹೋದರೂ ಅವನನ್ನು ಕಾಲವು ಬಿಡುವುದಿಲ್ಲ. ಅವನು ಒಂದು ಕಡೆ ಸ್ಥಿರವಾಗಿ ನಿಂತರೂ ಕಾಲವು ಅವನನ್ನು ಬಿಟ್ಟು ಹೋಗುವುದಿಲ್ಲ. ಪಂಚಜ್ಞಾನೇಂದ್ರಿಯಗಳು ಐದು ಬಗೆಯಾಗಿ ಅವನನ್ನು ಹುಡುಕಿದರೂ ಆ ಕಾಲನು ಅವನಿಗೆ ಕಾಣಲಾರ.

ಆಹುಶ್ಚೈನಂ ಕೇಚಿದಗ್ನಿಂ ಕೇಚಿದಾಹುಃ ಪ್ರಜಾಪತಿಮ್ ।
ಋತುಮಾಸಾರ್ಧಮಾಸಾಂಶ್ಚ ದಿವಸಾಂಸ್ತು ಕ್ಷಣಾಂಸ್ತಥಾ ॥೫೨॥

ಕೆಲವರು ಈ ಕಾಲನನ್ನು ಅಗ್ನಿ ಎನ್ನುತ್ತಾರೆ. ಕೆಲವರು ಪ್ರಜಾಪತಿ ಎನ್ನುತ್ತಾರೆ. ಇನ್ನು ಕೆಲವರು ಋತು, ಮಾಸ, ಪಕ್ಷ, ದಿನ ಎನ್ನುತ್ತಾರೆ.

ಪೂರ್ವಾಹ್ಣಮಪರಾಹ್ಣಂ ಚ ಮಧ್ಯಾಹ್ನಮಪಿ ಚಾಪರೇ ।
ಮುಹೂರ್ತಮಪಿ ಚೈವಾಹುರೇಕಂ ಸಂತಮನೇಕಧಾ ।
ತಂ ಕಾಲಮವಜಾನೀಹಿ ಯಸ್ಯ ಸರ್ವಮಿದಂ ವಶೇ ॥೫೩॥

ಇನ್ನು ಕೆಲವರು ಪೂರ್ವಾಹ್ಣ, ಅಪರಾಹ್ಣ, ಮಧ್ಯಾಹ್ನ ಎಂದು ಕರೆಯುತ್ತಾರೆ. ಮುಹೂರ್ತವೆಂದೂ ಕರೆಯುತ್ತಾರೆ. ಹೀಗೆ ಕಾಲವು ಒಂದೇ ಆಗಿದ್ದರೂ ಜನರು ಅನೇಕ ವಿಧವಾಗಿ ಕರೆಯುತ್ತಾರೆ. ಇಂದ್ರನೇ, ಜಗತ್ತೆಲ್ಲವೂ ಯಾರ ಅಧೀನದಲ್ಲಿದೆಯೋ ಅದನ್ನೇ ಕಾಲ ಎನ್ನುತ್ತಾರೆ.

ಬಹೂನೀಂದ್ರಸಹಸ್ರಾಣಿ ಸಮತೀತಾನಿ ವಾಸವ ।
ಬಲವೀರ್ಯೋಪಪನ್ನಾನಿ ಯಥೈವ ತ್ವಂ ಶಚೀಪತೇ ॥೫೪॥

ಇಂದ್ರನೇ, ನಿನ್ನಂತೆ ಬಲ-ವೀರ್ಯಸಂಪನ್ನರಾದ ಸಾವಿರಾರು ಇಂದ್ರರು ಆಗಿ ಹೋಗಿದ್ದಾರೆ ಎಂಬ ಎಚ್ಚರವಿರಲಿ.

ತ್ವಾಮಪ್ಯತಿಬಲಂ ಶಕ್ರಂ ದೇವರಾಜಂ ಬಲೋತ್ಕಟಮ್ ।
ಪ್ರಾಪ್ತೇ ಕಾಲೇ ಮಹಾವೀರ್ಯಃ ಕಾಲಃ ಸಂಶಮಯಿಷ್ಯತಿ ॥೫೫॥

ಇಂದ್ರನೇ, ನಿನ್ನನ್ನು ಬಲದಿಂದ ಶ್ರೇಷ್ಠನು ಎಂದು ಭಾವಿಸಿಕೊಂಡಿರುವೆ. ಆದರೆ ಕಾಲವು ಪ್ರಾಪ್ತವಾದಾಗ ಬಲಿಷ್ಠನಾದ ನಿನ್ನನ್ನೂ ಶಮನಗೊಳಿಸುತ್ತದೆ.

ಯ ಇದಂ ಸರ್ವಮಾದತ್ತೇ ತಸ್ಮಾಚ್ಛಕ್ರ ಸ್ಥಿರೋ ಭವ ।
ಮಯಾ ತ್ವಯಾ ಚ ಪೂರ್ವೈಶ್ಚ ನ ಸ ಶಕ್ಯೋಽತಿವರ್ತಿತುಮ್ ॥೫೬॥

ಕಾಲವೇ ಸಂಪೂರ್ಣವಾದ ಜಗತ್ತನ್ನು ತನ್ನ ವಶಕ್ಕೆ ಪಡೆದುಕೊಂಡಿರುತ್ತದೆ. ಆದ್ದರಿಂದ ನೀನು ಸ್ಥಿರಚಿತ್ತನಾಗು. ನನ್ನಿಂದಾಗಲೀ, ನಿನ್ನಿಂದಾಗಲೀ ಕಾಲವನ್ನು ಅತಿಕ್ರಮಿಸಲು ಸಾಧ್ಯವಿಲ್ಲ. ಹಿಂದಿನವರಿಂದಲೂ ಸಾಧ್ಯವಾಗಿಲ್ಲ.

ಯಾಮೇತಾಂ ಪ್ರಾಪ್ಯ ಜಾನೀಷೇ ರಾಜಶ್ರಿಯಮನುತ್ತಮಾಮ್ ।
ಸ್ಥಿತಾ ಮಯೀತಿ ತನ್ಮಿಥ್ಯಾ ನೈಷಾ ಹ್ಯೇಕತ್ರ ತಿಷ್ಠತಿ ॥೫೭॥

ಇಂದ್ರನೇ, ಅತ್ಯಂತ ಶ್ರೇಷ್ಠವಾದ ರಾಜ್ಯಸಂಪತ್ತನ್ನು ಪಡೆದಿರುವ ನೀನು ರಾಜ್ಯಲಕ್ಷ್ಮಿಯು ಸ್ಥಿರವಾಗಿ ನಿನ್ನಲ್ಲೇ ಉಳಿದುಕೊಳ್ಳುವಳು ಎಂದು ಭಾವಿಸಿರುವಿ. ಆದರೆ ಇದು ಸುಳ್ಳು. ಅವಳು ಚಂಚಲೆಯು. ಯಾರ ಬಳಿಯೂ ಸ್ಥಿರವಾಗಿ ನಿಲ್ಲಳು.

ಸ್ಥಿತಾ ಹೀಂದ್ರಸಹಸ್ರೇಷು ತ್ವದ್ವಿಶಿಷ್ಟತಮೇಷ್ವಿಯಮ್ ।
ಮಾಂ ಚ ಲೋಲಾ ಪರಿತ್ಯಜ್ಯ ತ್ವಾಮಗಾದ್ ವಿಬುಧಾಧಿಪ ॥೫೮॥

ಇಂದ್ರನೇ, ಇಂತಹ ಸಂಪತ್ತು ನಿನಗಿಂತಲೂ ಶ್ರೇಷ್ಠರಾದ ಸಾವಿರಾರು ಇಂದ್ರರ ಬಳಿ ಹಿಂದೆ ಇತ್ತು. ಚಂಚಲಳಾದ ಆ ರಾಜ್ಯಲಕ್ಷ್ಮಿಯು ನನ್ನ ಬಳಿಯೂ ಇದ್ದಳು. ಈಗ ನನ್ನನ್ನು ಬಿಟ್ಟು ನಿನ್ನನ್ನು ಸೇರಿದ್ದಾಳೆ.

ಮೈವಂ ಶಕ್ರ ಪುನಃ ಕಾರ್ಷೀಃ ಶಾಂತೋ ಭವಿತುಮರ್ಹಸಿ ।
ತ್ವಾಮಪ್ಯೇವಂಗತಂ ತ್ಯಕ್ತ್ವಾ ಕ್ಷಿಪ್ರಮನ್ಯಂ ಗಮಿಷ್ಯತಿ ॥೫೯॥

ಶಕ್ರನೇ, ಇನ್ನು ಮುಂದಾದರೂ ನೀನು ಇಷ್ಟು ಗರ್ವಿಯಾಗಿ ವರ್ತಿಸಬೇಡ. ಶಾಂತಿಯಿಂದ ಇರುವುದು ಯೋಗ್ಯವಾಗಿದೆ. ನಿನ್ನ ಈ ಕ್ರಮದ ಹೀನಬುದ್ಧಿಯನ್ನು ತಿಳಿದ ಕೂಡಲೇ ರಾಜ್ಯಲಕ್ಷ್ಮಿಯು ಬೇರೆ ವ್ಯಕ್ತಿಯ ಬಳಿ ಹೊರಟು ಹೋಗುತ್ತಾಳೆ, ಎಚ್ಚರವಿರಲಿ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ಷಷ್ಟಿತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಅರವತ್ತನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೊಂದನೆಯ ಅಧ್ಯಾಯ

ಇಂದ್ರನಿಗೆ ಲಕ್ಷ್ಮೀ ಮಾಡಿದ ಅನುಗ್ರಹ

ಭೀಷ್ಮಃ

ಶತಕ್ರತುರಥಾಪಶ್ಯದ್ ಬಲೇರ್ದೀಪ್ತಾಂ ಮಹಾತ್ಮನಃ ।
ಸ್ವರೂಪಿಣೀಂ ಶರೀರಾದ್ಧಿ ತದಾ ನಿಷ್ಕ್ರಾಮತೀಂ ಶ್ರಿಯಮ್ ॥೧॥

ಈ ಸಂಭಾಷಣಗಳು ಮುಗಿಯುವಷ್ಟರಲ್ಲಿ, ಆ ಬಲಿಯ ದೇಹದಿಂದ ದಿವ್ಯಕಾಂತಿಯಿಂದ ಬೆಳಗುವ ಒಂದು ಸ್ತ್ರೀವ್ಯಕ್ತಿಯು ಮೇಲೆ ಹೊರಟಿತು.

ತಾಂ ದೀಪ್ತಾಂ ಪ್ರಭಯಾ ದೃಷ್ಟ್ವಾ ಭಗವಾನ್ ಪಾಕಶಾಸನಃ ।
ವಿಸ್ಮಯೋತ್ಫುಲ್ಲನಯನೋ ಬಲಿಂ ಪಪ್ರಚ್ಛ ವಾಸವಃ ॥೨॥

ಕಾಂತಿವಿಹಿಷ್ಟವಾದ ಆ ಸ್ತ್ರೀವ್ಯಕ್ತಿಯನ್ನು ನೋಡಿ ಇಂದ್ರನು ಆಶ್ಚರ್ಯಗೊಂಡು, ನಟ್ಟಕಣ್ಣಿಂದ ನೋಡುತ್ತ ಬಲಿಯನ್ನು ಪ್ರಶ್ನೆ ಮಾಡಿದನು.

ಬಲೇ ಕೇಯಮಪಕ್ರಾಂತಾ ರೋಚಮಾನಾ ಶಿಖಂಡಿನೀ ।
ತ್ವತ್ತಃ ಸ್ಥಿತಾ ಸಕೇಯೂರಾ ದೀಪ್ಯಮಾನಾ ಸ್ವತೇಜಸಾ ॥೩॥

'ಓ ದೈತ್ಯರಾಜಾ! ಯಾರೀ ಹೆಂಗಸು? ದಿವ್ಯಕಾಂತಿಯಿಂದ ಬೆಳಗುತ್ತ, ತೋಳ್ಬಳೆಯನ್ನೂ, ಕಿರೀಟವನ್ನೂ ಧರಿಸಿರುವಳು. ಇಂತಹ ಸ್ತ್ರೀವ್ಯಕ್ತಿಯು ನಿನ್ನನ್ನು ಬಿಟ್ಟು ಬಂದ ಕಾರಣವೇನು?' ಎಂದನು.

ಬಲಿಃ

ನ ಹೀಮಾಮಾಸುರೀಂ ವೇದ್ಮಿ ನ ದೈವೀಂ ನ ಚ ಮಾನುಷೀಮ್ ।
ತ್ವಮೇವೈನಾಂ ಪೃಚ್ಛ ಮಾ ವಾ ಯಥೇಷ್ಟಂ ಕುರು ವಾಸವ ॥೪॥

ಅದಕ್ಕೆ ಆ ಬಲಿಯು 'ಇಂದ್ರಾ! ಅದೊಂದನ್ನೂ ನಾನರಿಯೆನು. ಅವಳು ದೇವಸ್ತ್ರೀಯೋ, ದೈತ್ಯರಮಣಿಯೋ, ಮನುಷ್ಯಕಾಂತೆಯೋ ಅದೂ ನನಗೆ ತಿಳಿಯದು! ಬೇಕಾದರೆ ಅವಳನ್ನೇ ಕೇಳು! ಬೇಡವಾದರೆ ಬಿಡು! ನಿನ್ನ ಇಷ್ಟದಂತೆ ಮಾಡು' ಎಂದನು.

ಶಕ್ರಃ

ಕಾ ತ್ವಂ ಬಲೇರಪಕ್ರಾಂತಾ ರೋಚಮಾನಾ ಶಿಖಂಡಿನೀ ।
ಅಜಾನತೋ ಮಮಾಚಕ್ಷ್ವ ನಾಮಧೇಯಂ ಶುಚಿಸ್ಮಿತೇ ॥೫॥

ಕಾ ತ್ವಂ ತಿಷ್ಠಸಿ ಮಾಯೇವ ದೀಪ್ಯಮಾನಾ ಸ್ವತೇಜಸಾ ।
ಹಿತ್ವಾ ದೈತ್ಯೇಶ್ವರಂ ಸುಭ್ರು ತನ್ಮಮಾಚಕ್ಷ್ವ ತತ್ತ್ವತಃ ॥೬॥

ಆಗ ಇಂದ್ರನು 'ಅಮ್ಮಾ! ದಿವ್ಯಕಾಂತಿಯಿಂದ ಬೆಳಗುತ್ತಿರುವ ನೀನು ಯಾರೆಂದು ತಿಳಿಯಲಿಲ್ಲ. ನಿನ್ನ ಹೆಸರನ್ನು ತಿಳಿಸು. ಈ ಬಲಿಯ ದೇಹದಿಂದ ಹೊರಟು ನನ್ನ ಬಳಿಯಲ್ಲಿ ನೀನು ನಿಂತ ಕಾರಣವೇನು? ಎಂದನು.

ಶ್ರೀಃ

ನ ಮಾ ವಿರೋಚನೋ ವೇದ ನ ಮಾ ವೈರೋಚನೋ ಬಲಿಃ ।
ಆಹುರ್ಮಾಂ ದುಃಸಹೇತ್ಯೇವಂ ವಿಧಿತ್ಸೇತಿ ಚ ಮಾಂ ವಿದುಃ ॥೭॥

ಅದಕ್ಕೆ ಆ ಲಕ್ಷ್ಮಿಯು 'ನನ್ನನ್ನು ಈ ಬಲಿಯಾಗಲಿ, ಇವನ ಆಪ್ತನಾಗಲಿ ತಿಳಿಯನು. ನನ್ನನ್ನು ದುಸ್ಸಹೆಯೆಂದೂ, ವಿಧಿತ್ಸೆಯೆಂದೂ ಕರೆಯುವರು.

ಭೂತಿರ್ಲಕ್ಷ್ಮೀತಿ ಮಾಮಾಹುಃ ಶ್ರೀರಿತ್ಯೇವಂ ಚ ವಾಸವ ।
ತ್ವಂ ಮಾಂ ಶಕ್ರ ನ ಜಾನೀಷೇ ಸರ್ವೇ ದೇವಾ ನ ಮಾಂ ವಿದುಃ ॥೮॥

ನನಗೆ ಭೂತಿಯೆಂದೂ, ಲಕ್ಷ್ಮಿಯೆಂದೂ, ಶ್ರೀಯೆಂದೂ ಇನ್ನೂ ಎಷ್ಟೋ ಹೆಸರುಗಳುಮ್ಟು. ನೀನೂ ನನ್ನನ್ನು ತಿಳಿಯಲಾರೆ. ನಿನ್ನ ಕಡೆಯ ದೇವತೆಗಳಾರೂ ನನ್ನನ್ನು ಅರಿಯರು!' ಎಂದಳು.

ಶಕ್ರಃ

ಕಿಮಿದಂ ತ್ವಂ ಮಮ ಕೃತೇ ಉತಾಹೋ ಬಲಿನಃ ಕೃತೇ ।
ದುಃಸಹೇ ವಿಜಹಾಸ್ಯೇನಂ ಚಿರಸಂವಾಸಿನೀ ಸತೀ ॥೯॥

ಆಗ ಇಂದ್ರನು 'ಲಕ್ಷ್ಮೀ! ಬಹುಕಾಲದಿಂದ ಬಲಿಯಲ್ಲಿದ್ದ ನೀನು ಈಗ ಅವನನ್ನು ಬಿಟ್ಟು ಹೋಗುವುದೇಕೆ? ನೀನು ಅವನನ್ನು ತ್ಯಜಿಸಿ ನನ್ನಲ್ಲಿಗೆ ಬಂದ ಕಾರಣವೇನು?

ಅರವತ್ತೊಂದನೆಯ ಅಧ್ಯಾಯ

ಇಂದ್ರನಿಗೆ ಲಕ್ಷ್ಮೀ ಮಾಡಿದ ಅನುಗ್ರಹ

ಭೀಷ್ಮಃ

ಶತಕ್ರತುರಥಾಪಶ್ಯದ್ ಬಲೇರ್ದೀಪ್ತಾಂ ಮಹಾತ್ಮನಃ ।
ಸ್ವರೂಪಿಣೀಂ ಶರೀರಾದ್ಧಿ ತದಾ ನಿಷ್ಕ್ರಾಮತೀಂ ಶ್ರಿಯಮ್ ॥೧॥

ಈ ಸಂಭಾಷಣಗಳು ಮುಗಿಯುವಷ್ಟರಲ್ಲಿ, ಆ ಬಲಿಯ ದೇಹದಿಂದ ದಿವ್ಯಕಾಂತಿಯಿಂದ ಬೆಳಗುವ ಒಂದು ಸ್ತ್ರೀವ್ಯಕ್ತಿಯು ಮೇಲೆ ಹೊರಟಿತು.

ತಾಂ ದೀಪ್ತಾಂ ಪ್ರಭಯಾ ದೃಷ್ಟ್ವಾ ಭಗವಾನ್ ಪಾಕಶಾಸನಃ ।
ವಿಸ್ಮಯೋತ್ಫುಲ್ಲನಯನೋ ಬಲಿಂ ಪಪ್ರಚ್ಛ ವಾಸವಃ ॥೨॥

ಕಾಂತಿವಿಹಿಷ್ಪವಾದ ಆ ಸ್ತ್ರೀವ್ಯಕ್ತಿಯನ್ನು ನೊಡಿ ಇಂದ್ರನು ಆಶ್ಚರ್ಯಗೊಂಡು, ನಟ್ಟಕಣ್ಣಿಂದ ನೋಡುತ್ತ ಬಲಿಯನ್ನು ಪ್ರಶ್ನೆ ಮಾಡಿದನು.

ಬಲೇ ಕೇಯಮಪಕ್ರಾಂತಾ ರೋಚಮಾನಾ ಶಿಖಂಡಿನೀ ।
ತ್ವತ್ತಃ ಸ್ಥಿತಾ ಸಕೇಯೂರಾ ದೀಪ್ಯಮಾನಾ ಸ್ವತೇಜಸಾ ॥೩॥

'ಓ ದೈತ್ಯರಾಜಾ! ಯಾರೀ ಹೆಂಗಸು? ದಿವ್ಯಕಾಂತಿಯಿಂದ ಬೆಳಗುತ್ತ, ತೋಳ್ಬಳೆಯನ್ನೂ, ಕಿರೀಟವನ್ನೂ ಧರಿಸಿರುವಳು. ಇಂತಹ ಸ್ತ್ರೀವ್ಯಕ್ತಿಯು ನಿನ್ನನ್ನು ಬಿಟ್ಟು ಬಂದ ಕಾರಣವೇನು?' ಎಂದನು.

ಬಲಿಃ

ನ ಹೀಮಾಮಾಸುರೀಂ ವೇದ್ಮಿ ನ ದೈವೀಂ ನ ಚ ಮಾನುಷೀಮ್ ।
ತ್ವಮೇವೈನಾಂ ಪೃಚ್ಛ ಮಾ ವಾ ಯಥೇಷ್ಟಂ ಕುರು ವಾಸವ ॥೪॥

ಅದಕ್ಕೆ ಆ ಬಲಿಯು 'ಇಂದ್ರಾ! ಅದೊಂದನ್ನೂ ನಾನರಿಯೆನು. ಅವಳು ದೇವಸ್ತ್ರೀಯೋ, ದೈತ್ಯರಮಣಿಯೋ, ಮನುಷ್ಯಕಾಂತೆಯೋ ಅದೂ ನನಗೆ ತಿಳಿಯದು! ಬೇಕಾದರೆ ಅವಳನ್ನೇ ಕೇಳು! ಬೇಡವಾದರೆ ಬಿಡು! ನಿನ್ನ ಇಷ್ಟದಂತೆ ಮಾಡು' ಎಂದನು.

ಶಕ್ರಃ

ಕಾ ತ್ವಂ ಬಲೇರಪಕ್ರಾಂತಾ ರೋಚಮಾನಾ ಶಿಖಂಡಿನೀ ।
ಅಜಾನತೋ ಮಮಾಚಕ್ಷ್ವ ನಾಮಧೇಯಂ ಶುಚಿಸ್ಮಿತೇ ॥೫॥

ಕಾ ತ್ವಂ ತಿಷ್ಠಸಿ ಮಾಯೇವ ದೀಪ್ಯಮಾನಾ ಸ್ವತೇಜಸಾ ।
ಹಿತ್ವಾ ದೈತ್ಯೇಶ್ವರಂ ಸುಭ್ರು ತನ್ಮಮಾಚಕ್ಷ್ವ ತತ್ತ್ವತಃ ॥೬॥

ಆಗ ಇಂದ್ರನು 'ಅಮ್ಮಾ! ದಿವ್ಯಕಾಂತಿಯಿಂದ ಬೆಳಗುತ್ತಿರುವ ನೀನು ಯಾರೆಂದು ತಿಳಿಯಲಿಲ್ಲ. ನಿನ್ನ ಹೆಸರನ್ನು ತಿಳಿಸು. ಈ ಬಲಿಯ ದೇಹದಿಂದ ಹೊರಟು ನನ್ನ ಬಳಿಯಲ್ಲಿ ನೀನು ನಿಂತ ಕಾರಣವೇನು? ಎಂದನು.

ಶ್ರೀಃ

ನ ಮಾ ವಿರೋಚನೋ ವೇದ ನ ಮಾ ವೈರೋಚನೋ ಬಲಿಃ ।
ಆಹುರ್ಮಾಂ ದುಃಸಹೇತ್ಯೇವಂ ವಿಧಿತ್ಸೇತಿ ಚ ಮಾಂ ವಿದುಃ ॥೭॥

ಅದಕ್ಕೆ ಆ ಲಕ್ಷ್ಮಿಯು 'ನನ್ನನ್ನು ಈ ಬಲಿಯಾಗಲಿ, ಇವನ ಆಪ್ತನಾಗಲಿ ತಿಳಿಯನು. ನನ್ನನ್ನು ದುಸ್ಸಹೆಯೆಂದೂ, ವಿಧಿತ್ಸೆಯೆಂದೂ ಕರೆಯುವರು.

ಭೂತಿರ್ಲಕ್ಷ್ಮೀತಿ ಮಾಮಾಹುಃ ಶ್ರೀರಿತ್ಯೇವಂ ಚ ವಾಸವ ।
ತ್ವಂ ಮಾಂ ಶಕ್ರ ನ ಜಾನೀಷೇ ಸರ್ವೇ ದೇವಾ ನ ಮಾಂ ವಿದುಃ ॥೮॥

ನನಗೆ ಭೂತಿಯೆಂದೂ, ಲಕ್ಷ್ಮಿಯೆಂದೂ, ಶ್ರೀಯೆಂದೂ ಇನ್ನೂ ಎಷ್ಟೋ ಹೆಸರುಗಳುಮ್ಟು. ನೀನೂ ನನ್ನನ್ನು ತಿಳಿಯಲಾರೆ. ನಿನ್ನ ಕಡೆಯ ದೇವತೆಗಳಾರೂ ನನ್ನನ್ನು ಅರಿಯರು!' ಎಂದಳು.

ಶಕ್ರಃ

ಕಿಮಿದಂ ತ್ವಂ ಮಮ ಕೃತೇ ಉತಾಹೋ ಬಲಿನಃ ಕೃತೇ ।
ದುಃಸಹೇ ವಿಜಹಾಸ್ಯೇನಂ ಚಿರಸಂವಾಸಿನೀ ಸತೀ ॥೯॥

ಆಗ ಇಂದ್ರನು 'ಲಕ್ಷ್ಮೀ! ಬಹುಕಾಲದಿಂದ ಬಲಿಯಲ್ಲಿದ್ದ ನೀನು ಈಗ ಅವನನ್ನು ಬಿಟ್ಟು ಹೋಗುವುದೇಕೆ? ನೀನು ಅವನನ್ನು ತ್ಯಜಿಸಿ ನನ್ನಲ್ಲಿಗೆ ಬಂದ ಕಾರಣವೇನು?

ಇದು ಅವನ ಪಾಪಕರ್ಮದಿಂದಲೋ, ಅಥವಾ ನನ್ನ ಪುಣ್ಯಕರ್ಮದಿಂದಲೋ, ಯಥಾರ್ಥವನ್ನು ಹೇಳು' ಎಂದನು.

ಶ್ರೀಃ

ನ ಧಾತಾ ನ ವಿಧಾತಾ ಮಾಂ ವಿದಧಾತಿ ಕಥಂಚನ ।
ಕಾಲಸ್ತು ಶಕ್ರ ಪರ್ಯಾಯಾನ್ಮೈನಂ ಶಕ್ರಾವಮನ್ಯಥಾಃ ॥೧೦॥

ಅದಕ್ಕೆ ಆ ಲಕ್ಷ್ಮಿಯು 'ಧಾತನಾಗಲಿ, ವಿಧಾತನಾಗಲಿ ನನ್ನನ್ನು ನಿಯಮಿಸಿ ನಡೆಸಲು ಶಕ್ತನಲ್ಲ. ಕಾಲವೇ ನನ್ನನ್ನು ಸ್ಥಳದಿಂದ ಸ್ಥಳಕ್ಕೆ ಸುತ್ತಿಸುತ್ತಿರುವುದು. ಆದುದರಿಂದ ದೇವೇಂದ್ರಾ! ನೀನು ಈ ಬಲಿಯನ್ನು ಅವಮಾನಗೊಳಿಸಿ ಮಾತನಾಡಬಾರದು' ಎಂದಳು.

ಶಕ್ರಃ

ಕಥಂ ತ್ವಯಾ ಬಲಿಸ್ಯಕ್ತಃ ಕಿಮರ್ಥಂ ವಾ ಶಿಖಂಡಿನಿ ।
ಕಥಂ ಚ ಮಾಂ ನ ಜಹ್ಯಾಸ್ತ್ವಂ ತನ್ಮೇ ಬ್ರೂಹಿ ಶುಚಿಸ್ಮಿತೇ ॥೧೧॥

ಆಗ ಇಂದ್ರನು 'ಅಮ್ಮಾ! ಈಗ ನೀನು ಬಲಿಯನ್ನು ಬಿಟ್ಟುದಕ್ಕೆ ಕಾರಣವೇನು? ಹೀಗೆಯೇ ನೀನು ಮುಂದೆ ನನ್ನನ್ನೂ ಬಿಡುವೆಯಾ? ನನ್ನನ್ನು ಬಿಡದೆ ಯಾವಾಗಲೂ ನನ್ನಲ್ಲಿಯೇ ನೀನು ಸ್ಥಿರವಾಗಿ ನಿಲ್ಲಬೇಕಾದರೆ ಅದಕ್ಕೆ ಉಪಾಯವೇನು? ಅದನ್ನು ನನಗೆ ತಿಳಿಸಬೇಕು' ಎಂದನು.

ಶ್ರೀಃ

ಸತ್ಯೇ ಸ್ಥಿತಾಸ್ಮಿ ದಾನೇ ಚ ವ್ರತೇ ತಪಸಿ ಚೈವ ಹಿ ।
ಪರಾಕ್ರಮೇ ಚ ಧರ್ಮೇ ಚ ಪರಾಚೀನಸ್ತತೋ ಬಲಿಃ ॥೧೨॥

ಆಗ ಲಕ್ಷ್ಮಿಯು 'ಇಂದ್ರಾ! ನಾನು ಸತ್ಯದಲ್ಲಿ ಸ್ಥಿರವಾಗಿರುವೆನು. ಹಾಗೆಯೆ ವ್ರತದಲ್ಲಿರುವೆನು. ತಪಸ್ಸಿನಲ್ಲಿರುವೆನು. ಪರಾಕ್ರಮದಲ್ಲಿಯೂ, ಧರ್ಮದಲ್ಲಿಯೂ ನಾನು ನೆಲೆಗೊಂಡಿರುವೆನು. ಈಗ ಬಲಿಯು ಅವೆಲ್ಲವನ್ನೂ ಬಿಟ್ಟುಬಿಟ್ಟನು.

ಬ್ರಹ್ಮಣ್ಯೋಽಯಂ ಸದಾ ಭೂತ್ವಾ ಸತ್ಯವಾದೀ ಜಿತೇಂದ್ರಿಯಃ ।
ಅಭ್ಯಸೂಯದ್ ಬ್ರಾಹ್ಮಣಾನ್ ವೈ ಉಚ್ಚಿಷ್ಟಶ್ಚಾಸ್ಪಶದ್ ಧೃತಮ್ ॥೧೩॥

ಹಿಂದೆ ಇವನು ಬ್ರಾಹ್ಮಣರಲ್ಲಿ ಭಕ್ತಿಯುಳ್ಳವನಾಗಿದ್ದನು. ಈಚೆಗೆ ಇವನಿಗೆ ಬ್ರಾಹ್ಮಣರಲ್ಲಿ ಅಸೂಯೆ ಹುಟ್ಟಿತು. 'ಎಂಜಲು ಕೈಯಿಂದ ಘೃತವನ್ನು ಸ್ಪರ್ಶಿಸಿದನು.

ಯಜ್ಞಶೀಲಃ ಪುರಾ ಭೂತ್ವಾ ಮಾಮೇವ ಯಜತೇತ್ಯಯಮ್ ।
ಪ್ರೋವಾಚ ಲೋಕಾನ್ ಮೂಢಾತ್ಮಾ ಕಾಲೇನೋಪನಿಪೀಡಿತಃ ॥೧೪॥

ಹಿಂದೆ ಇವನು ಯಜ್ಞಶೀಲನಾಗಿದ್ದು, ಈಗ ಧನಾಶೆಯಿಂದ ಎಲ್ಲವನ್ನೂ ಬಿಟ್ಟು ಮೂಢಾತ್ಮನಾಗಿ ಕಾಲಪೀಡಿತನಾದನು.

ಅಪಾಕೃತಾ ತತಃ ಶಕ್ರ ತ್ವಯಿ ವತ್ಸ್ಯಾಮಿ ವಾಸವ ।
ಅಪ್ರಮತ್ತೇನ ಧಾರ್ಯಾಸ್ಮಿ ತಪಸಾ ವಿಕ್ರಮೇಣ ಚ ॥೧೫॥

ಇದಕ್ಕಾಗಿಯೇ ನಾನು ಅವನನ್ನು ಬಿಟ್ಟೆನು. ಈಗ ನಾನು ನಿನ್ನಲ್ಲಿ ಸೇರುವೆನು. ಇನ್ನು ಮೇಲೆ ನೀನು ಎಚ್ಚರತಪ್ಪದಿದ್ದರೆ ತಪಸ್ಸಿನಿಂದಲೂ, ಪರಾಕ್ರಮದಿಂದಲೂ ನನ್ನನ್ನು ದೃಢವಾಗಿ ನಿಲ್ಲಿಸಿಕೊಳ್ಳಬಹುದು' ಎಂದಳು.

ಶಕ್ರಃ

ಅಸ್ತಿ ದೇವಮನುಷ್ಯೇಷು ಸರ್ವಭೂತೇಷು ವಾ ಪುಮಾನ್ ।
ಯಸ್ತಾ ತ್ವಮೇಕೋ ವಿಷಹಿತುಂ ಶಕ್ನುಯಾತ್ ಕಮಲಾಲಯೇ ॥೧೬॥

ದೇವೇಂದ್ರನು 'ದೇವೀ! ಅದು ಸಾಧ್ಯವೆಂದು ನನಗೆ ತೋರಲಿಲ್ಲ. ದೇವ, ಗಂಧರ್ವ, ದೈತ್ಯ, ರಾಕ್ಷಸರಲ್ಲಿ ಯಾವನೊಬ್ಬನೂ ನಿನ್ನನ್ನು ಸ್ಥಿರವಾಗಿ ನಿಲ್ಲಿಸಿಕೊಂಡವನಿಲ್ಲವಷ್ಟೆ?'

ಶ್ರೀಃ

ನೈವ ದೇವೋ ನ ಗಂಧರ್ವೋ ನಾಸುರೋ ನ ಚ ರಾಕ್ಷಸಃ ।
ಯೋ ಮಾಮೇಕೋ ವಿಷಹಿತುಂ ಶಕ್ತಃ ಕಶ್ಚಿತ್ ಪುರಂದರ ॥೧೭॥

ಇಂದ್ರಾ! ವಾಸ್ತವವೇ! ದೇವ, ದಾನವ, ಗಂಧರ್ವ, ರಾಕ್ಷಸರಲ್ಲಿ ನನ್ನನ್ನು ಸ್ಥಿರವಾಗಿ ನಿಲ್ಲಿಸಿಕೊಂಡವನು ಯಾವನೂ ಇಲ್ಲ'.

ಶಕ್ರಃ

ತಿಷ್ಠೇಥಾ ಮಯಿ ನಿತ್ಯಂ ತ್ವಂ ಯಥಾ ತದ್ ಬ್ರೂಹಿ ಮೇ ಶುಭೇ ।
ತತ್ ಕರಿಷ್ಯಾಮಿ ತೇ ವಾಕ್ಯಮೃತಂ ತ್ವಂ ವಕ್ತುಮರ್ಹಸಿ ॥೧೮॥

'ನೀನು ನನ್ನಲ್ಲಿಯೇ ಸ್ಥಿರವಾಗಿ ನಿಲ್ಲುವಂತೆ ಮಾಡಿಕೊಳ್ಳಬೇಕಾದರೆ ಹೇಗೆ ನಡೆದುಕೊಳ್ಳಬೇಕು? ಆ ವಿಷಯದಲ್ಲಿ ನಿನ್ನ ಆಜ್ಞೆಯಂತೆ ನಡೆಯುವೆನು. ನೀನು ಮಾತ್ರ ಸತ್ಯವನ್ನು ಹೇಳಬೇಕು'.

ಶ್ರೀಃ

ಸ್ಥಾಸ್ಯಾಮಿ ನಿತ್ಯಂ ದೇವೇಂದ್ರ ಯಥಾ ತ್ವಯಿ ನಿಬೋಧ ತತ್ ।
ವಿಧಿನಾ ವೇದದೃಷ್ಟೇನ ಚತುರ್ಧಾ ವಿಭಜಸ್ವ ಮಾಮ್ ॥೧೯॥

'ಇಂದ್ರಾ! ನಾನು ನಿನ್ನಲ್ಲಿ ನಿತ್ಯವಾಗಿ ನೆಲೆಸಿರುವುದಕ್ಕೆ ಉಪಾಯವನ್ನು ತಿಳಿಸುವೆನು, ಕೇಳು. ವೇದೋಕ್ತವಿಧಿಯಿಂದ ನನ್ನನ್ನು ನಾಲ್ಕುಕಡೆಯಲ್ಲಿ ವಿಭಾಗಿಸಿಡಬೇಕು'.

ಶಕ್ರಃ

ಅಹಂ ವೈ ತ್ವಾ ನಿಧಾಸ್ಯಾಮಿ ಯಥಾಶಕ್ತಿ ಯಥಾಬಲಮ್ ।
ನ ತು ಮೇಽತಿಕ್ರಮಃ ಸ್ಯಾದ್ವೈ ಸದಾ ಲಕ್ಷ್ಮಿ ತವಾಂತಿಕೇ ॥೨೦॥

ಭೂಮಿರೇವ ಮನುಷ್ಯೇಷು ಧಾರಣೇ ಭೂತಭಾವಿನೀ ।
ಸಾ ತೇ ಪಾದಂ ತಿತಿಕ್ಷೇತ ಸಮರ್ಥಾ ಹೀತಿ ಮೇ ಮತಿಃ ॥೨೧॥

'ದೇವೀ! ಹಾಗೆಯೇ ಆಗಲಿ! ನಾನು ನಿನ್ನನ್ನು ಶಕ್ತಿಗೂ, ಬಲಕ್ಕೂ ತಕ್ಕಂತೆ ಆಯಾ ಸ್ಥಳದಲ್ಲಿರಿಸುವೆನು. ಆದರೆ ನಿನ್ನಲ್ಲಿ ನಾನು ತಪ್ಪಿ ನಡೆಯಬಾರದು. ಮನುಷ್ಯರಲ್ಲಿ ಎಲ್ಲರಿಗೂ ಉತ್ಪತ್ತಿಕಾರಿಣಿಯಾದ ಈ ಭೂಮಿಯು ನಿನ್ನ ಒಂದು ಭಾಗವನ್ನು ಧರಿಸಬಲ್ಲವಳು. ಆದುದರಿಂದ ಅವಳಲ್ಲಿ ನಿನ್ನ ನಾಲ್ಕನೇ ಒಂದು ಭಾಗಕ್ಕೆ ಸ್ಥಳ ಮಾಡುವೆನು'.

ಶ್ರೀಃ

ಏಷ ಮೇ ನಿಹಿತಃ ಪಾದೋ ಯೋಽಯಂ ಭೂಮೌ ಪ್ರತಿಷ್ಠಿತಃ ।
ದ್ವಿತೀಯಂ ಶಕ್ರ ಪಾದಂ ಮೇ ತಸ್ಮಾತ್ ಸುನಿಹಿತಂ ಕುರು ॥೨೨॥

'ಹಾಗೆಯೇ ನನ್ನ ಒಂದು ಪಾದವನ್ನು ಭೂಮಿಯಲ್ಲಿಡುವೆನು. ಉಳಿದ ಭಾಗಗಳಿಗೆ ತಕ್ಕ ಆಧಾರವನ್ನು ಏರ್ಪಡಿಸು!'

ಶಕ್ರಃ

ಆಪ ಏವ ಮನುಷ್ಯೇಷು ದ್ರವಂತ್ಯಃ ಪರಿಚಾರಿಕಾಃ ।
ತಾಸ್ತೇ ಪಾದಂ ತಿತಿಕ್ಷಂತಾಮಲಮಾಪಸ್ತಿತಿಕ್ಷಿತುಮ್ ॥೨೩॥

'ದೇವೀ! ಜಲವು ದ್ರವರೂಪದಿಂದ ಮನುಷ್ಯರಿಗೆ ಅನೇಕ ಕಾರ್ಯಗಳಿಗೆ ಉಪಯೋಗ ಪಡುವುದು. ನಿನ್ನ ಮತ್ತೊಂದು ಪಾದವನ್ನು ಅದು ಧರಿಸಬಲ್ಲದು'.

ಶ್ರೀಃ

ಏಷ ಮೇ ನಿಹಿತಃ ಪಾದೋ ಯೋಽಯಮಪ್ಸು ಪ್ರತಿಷ್ಠಿತಃ ।
ತೃತೀಯಂ ಶಕ್ರ ಪಾದಂ ಮೇ ತಸ್ಮಾತ್ ಸುನಿಹಿತಂ ಕುರು ॥೨೪॥

'ಅದರ ಮೇಲೆಯೂ ಒಂದು ಪಾದವನ್ನು ಇಟ್ಟೆನು. ಇನ್ನು ಮೂರನೇ ಪಾದಕ್ಕೆ ಆಧಾರ ಯಾವುದು?'

ಶಕ್ರಃ

ಯಸ್ಮಿನ್ ದೇವಾಶ್ಚ ಯಜ್ಞಾಶ್ಚ ಯಸ್ಮಿನ್ ವೇದಾಃ ಪ್ರತಿಷ್ಠಿತಾಃ ।
ತೃತೀಯಂ ಪಾದಮಗ್ನಿಸ್ತೇ ಸುಧೃತಂ ಧಾರಯಿಷ್ಯತಿ ॥೨೫॥

'ದೇವೀ! ಅಗ್ನಿಯು ನಿನ್ನ ಮೂರನೆಯ ಪಾದವನ್ನು ಧರಿಸಲಿ! ಅದರಲ್ಲಿ ಇಂದ್ರನೂ, ವೇದಗಳೂ, ಯಜ್ಞಗಳೂ, ಇತರ ದೇವತೆಗಳೂ ನೆಲೆಗೊಂಡಿರುವರು'.

ಶ್ರೀಃ

ಏಷ ಮೇ ನಿಹಿತಃ ಪಾದೋ ಯೋಽಯಮಗ್ನೌ ಪ್ರತಿಷ್ಠಿತಃ ।
ಚತುರ್ಥಂ ಶಕ್ರ ಪಾದಂ ಮೇ ತಸ್ಮಾತ್ ಸುನಿಹಿತಂ ಕುರು ॥೨೬॥

'ಇಂದ್ರಾ! ಅಗ್ನಿಯಲ್ಲಿ ಮೂರನೇ ಪಾದವನ್ನಿಟ್ಟೆನು. ಇನ್ನು ನಾಲ್ಕನೇ ಪಾದಕ್ಕೆ ಸ್ಥಳ ಯಾವುದು?'

ಶಕ್ರಃ

ಯೇ ವೈ ಸಂತೋ ಮನುಷ್ಯೇಷು ಬ್ರಹ್ಮಣ್ಯಾಃ ಸತ್ಯವಾದಿನಃ ।
ತೇ ತೇ ಪಾದಂ ತಿತಿಕ್ಷಂತಾಮಲಂ ಸಂತಸ್ತಿತಿಕ್ಷಿತುಮ್ ॥೨೭॥

'ಅಮ್ಮಾ! ಮನುಷ್ಯರಲ್ಲಿ ಸಾಧುಗಳಾಗಿ, ಸತ್ಯವಾದಿಗಳಾಗಿ, ಬ್ರಾಹ್ಮಣಭಕ್ತಿ ಉಳ್ಳವರು ಆ ನಿನ್ನ ನಾಲ್ಕನೇ ಪಾದವನ್ನು ಧರಿಸಲಿ'.

ಶ್ರೀಃ

ಏಷ ಮೇ ನಿಹಿತಃ ಪಾದೋ ಯೋಯಂ ಸತ್ಸು ಪ್ರತಿಷ್ಠಿತಃ ।
ಏವಂ ವಿನಿಹಿತಾಂ ಶಕ್ರ ಭೂತೇಷು ಪರಿಧತ್ಸ್ವ ಮಾಮ್ ॥೨೮॥

'ಸಾಧುಗಳ ಮೇಲೆ ನೆಲೆಗೊಳಿಸತಕ್ಕ ಆ ನಾಲ್ಕನೇ ಪಾದವನ್ನು ಅಲ್ಲಿಯೇ ಇಡುವೆನು. ಹೀಗೆ ಭೂಲೋಕದಲ್ಲಿ ಇಟ್ಟು ನನ್ನ ನಾಲ್ಕು ಪಾದಗಳನ್ನೂ ನೀನು ಪಾಲಿಸುತ್ತಿರು'.

ಶಕ್ರಃ

ಭೂಮಿಶುದ್ಧಿಂ ತತಃ ಕೃತ್ವಾ ಅದ್ಭಿಃ ಸಂತರ್ಪಯಂತಿ ಯೇ ।
ಭೂತಾನಿ ಚ ಯಜಂತ್ಯಗ್ನೌ ತೇಷಾಂ ತ್ವಮನಪಾಯಿನೀ ॥೨೯॥

ಯೇ ಕ್ರಿಯಾಭಿಃ ಸುರಕ್ತಾಭಿರ್ಹೇತುಯುಕ್ತಾಃ ಸಮಾಹಿತಾಃ ।
ಜ್ಞಾನವಂತೋ ವಿವತ್ಸಾಯಾಂ ಲಬ್ಧಾ ಮಾದ್ಯಂತಿ ಯೋಗಿನಃ ॥೩೦॥

'ದೇವೀ! ಯಾರು ಭೂಮಿಯನ್ನು ಶುದ್ಧಿಮಾಡಿ, ಜಲದಿಂದ ಪ್ರಾಣಿಗಳಿಗೆ ತೃಪ್ತಿ ಉಂಟುಮಾಡುತ್ತ, ಅಗ್ನಿಯಲ್ಲಿ ಸಂತೋಷದಿಂದ ಹೋಮಮಾಡುವರೋ, ಅವರಿಗೆ ನೀನು ಎಂದೆಂದಿಗೂ ಪ್ರಸನ್ನಳಾಗಿ ಅವರಲ್ಲಿ ನೆಲೆಗೊಂಡಿರಬೇಕು.

ಭೂತಾನಾಮಿಹ ವೈ ಯಸ್ತ್ವಾ ಮಯಾ ವಿನಿಹಿತಾಂ ಸತೀಮ್ ।
ಉಪಹನ್ಯಾತ್ ಸ ಮೇ ದ್ವಿಷ್ಯಾತ್ತಥಾ ಶೃಣ್ವಂತು ಮೇ ವಚಃ ॥೩೧॥

ಹೀಗೆ ಭೂತಗಳಲ್ಲಿ ನಾನು ನಿನ್ನನ್ನು ವಿಭಾಗಿಸಿರುವೆನು. ನೀನಿರತಕ್ಕ ಸ್ಥಳಕ್ಕೆ ವಿರೋಧವನ್ನು ಮಾಡುವವರನ್ನು ನಾನು ದಂಡಿಸುವೆನು' ಎಂದನು.

ಭೀಷ್ಮಃ

ತಥೇತಿ ಚೋಕ್ತ್ವಾ ಸಾ ವತ್ಸಾ ಸರ್ವಲೋಕನಮಸ್ಕೃತಾ ।
ವಾಸವಂ ಪಾಲಯಾಮಾಸ ಸಾ ದೇವೀ ಕಮಲಾಲಯಾ ॥೩೨॥

ಹಾಗೆಯೇ ಆಗಲೆಂದು ಶ್ರೀವತ್ಸ ರೂಪಳಾದ ಸರ್ವಲೋಕ ನಮಸ್ಕೃತಳಾದ ಲಕ್ಷ್ಮಿಯು ಹೇಳಿ ಬಲಿಯನ್ನು ಬಿಟ್ಟು ಬಂದು ಇಂದ್ರನಿಗೆ ಪ್ರಸನ್ನಳಾದಳು.

ತತಸ್ತ್ಯಕ್ತಃ ಶ್ರಿಯಾ ರಾಜಾ ದೈತ್ಯಾನಾಂ ಬಲಿರಬ್ರವೀತ್ ।
ಯಾವತ್ ಪುರಸ್ತಾತ್ ಪ್ರತಪೇತ್ತಾವದ್ವೈ ದಕ್ಷಿಣಾಂ ದಿಶಮ್ ॥೩೩॥

ಹೀಗೆ ಲಕ್ಷ್ಮಿಯಿಂದ ತ್ಯಜಿಸಲ್ಪಟ್ಟ ಬಲಿಯು ಹೀಗೆಂದು ಹೇಳುವನು. 'ಈಗ ಸೂರ್ಯನು ಪಶ್ಚಿಮದಲ್ಲಿ ಹೇಗೋ ಹಾಗೇ ಪೂರ್ವದಲ್ಲಿಯೂ, ಉತ್ತರದಲ್ಲಿ ಹೇಗೋ ಹಾಗೆ ದಕ್ಷಿಣದಲ್ಲಿಯೂ ಮೇರುವಿನ ಸುತ್ತಲೂ ಪ್ರಕಾಶಿಸುವನು.

ಪಶ್ಚಿಮಾಂ ತಾವದೇವಾಪಿ ತಥೋದೀಚೀಂ ದಿವಾಕರಃ ।
ತಥಾ ಮಧ್ಯಂದಿನೇ ಸೂರ್ಯೋ ಅಸ್ತಮೇತಿ ಯದಾ ತದಾ ।
ಪುನರ್ದೇವಾಸುರಂ ಯುದ್ಧಂ ಭಾವಿ ಜೇತಾಸ್ಮಿ ವಸ್ತದಾ ॥೩೪॥

ಉದಿಸಿದ ಸೂರ್ಯನು ನಾಲ್ಕು ದಿಕ್ಕುಗಳನ್ನು ಬೆಳಗುತ್ತಾ ಮಧ್ಯಾಹ್ನಕಾಲದಲ್ಲಿ ಅಲ್ಪ ಪ್ರಭೆಯನ್ನು ಹೊಂದಿದ ವಿಪರೀತ ಕಾಲವು ಅಸುರಜಯಕಾಲವು ಆಗ ದೇವತೆಗಳಿಗೂ, ಅಸುರರಿಗೂ ತಿರುಗಿ ಮಹಾಯುದ್ಧವು ಪ್ರಾಪ್ತವಾಗುವುದು.

ಸರ್ವಲೋಕಾನ್ ಯದಾದಿತ್ಯೋ ಹ್ಯೇಕಸ್ಥಾಸ್ತಾಪಯಿಷ್ಯತಿ ।
ತದಾ ದೇವಾಸುರೇ ಯುದ್ಧೇ ಜೇತಾಹಂ ತ್ವಾಂ ಶತಕ್ರತೋ ॥೩೫॥

ಯಾವಾಗ ಸೂರ್ಯ ಉದಯಾಸ್ತಮಾನ ಕಾಲಗಳಂತೆ ಮಧ್ಯಾಹ್ನ ಕಾಲದಲ್ಲಿಯೂ ತೋರುತ್ತಾನೋ ಆಗ ಇಂದ್ರನೇ ದೇವಾಸುರ ಯುದ್ಧದಲ್ಲಿ ನಿಮ್ಮನ್ನು ಸೋಲಿಸುತ್ತಾನೆ. ಆ ಯುದ್ಧದಲ್ಲಿ ನಾನು ದೇವತೆಗಳಾದ ನಿಮ್ಮೆಲ್ಲರನ್ನೂ ಜಯಿಸಿ ಓಡಿಸುವೆನು' ಎಂದನು.

ಶಕ್ರಃ

ಬ್ರಹ್ಮಣಾಸ್ಮಿ ಸಮಾದಿಷ್ಟೋ ನ ಹಂತವ್ಯೋ ಭವಾನಿತಿ ।
ತೇನ ತೇಹಂ ಬಲೇ ವಜ್ರಂ ನ ವಿಮುಂಚಾಮಿ ಮೂರ್ಧನಿ ॥೩೬॥

ಆಗ ದೇವೇಂದ್ರನು ಬಲಿಯನ್ನು ನೋಡಿ 'ದೈತ್ಯರಾಜಾ! ಬ್ರಹ್ಮನು ನನಗೆ ನಿನ್ನನ್ನು ಕೊಲ್ಲಬಾರದೆಂದೇ ಆಜ್ಞಾಪಿಸಿರುವನು. ಅದರಿಂದಲೇ ನಾನು ನಿನ್ನ ತಲೆಯಮೇಲೆ ನನ್ನ ವಜ್ರಾಯುಧವನ್ನು ಪ್ರಯೋಗಿಸದೆ ಬಿಟ್ಟೆನು.

ಯಥೇಷ್ಟಂ ಗಚ್ಛ ದೈತ್ಯೇಂದ್ರ ಸ್ವಸ್ತಿ ತೇಽಸ್ತು ಮಹಾಸುರ ।
ಆದಿತ್ಯೋ ನಾವತಪಿತಾ ಕದಾಚಿನ್ಮಧ್ಯತಃ ಸ್ಥಿತಃ ॥೩೭॥

ಇನ್ನು ನೀನು ನಿನ್ನ ಇಷ್ಟದಂತೆ ಹೋಗಬಹುದು. ನಿನಗೆ ಮಂಗಳವಾಗಲಿ, ಸೂರ್ಯನು ಎಲ್ಲ ದಿಕ್ಕುಗಳನ್ನೂ ಬಿಟ್ಟು ಮೇರುಮಧ್ಯದಲ್ಲಿ ಮಾತ್ರ ಪ್ರಕಾಶಿಸುವ ಸಂಭವವೇ ಇರದು.

ಸ್ಥಾಪಿತೋ ಹ್ಯಸ್ಯ ಸಮಯಃ ಪೂರ್ವಮೇವ ಸ್ವಯಂಭುವಾ ।
ಅಜಸ್ರಂ ಪರಿಯಾತ್ಯೇಷ ಸತ್ಯೇನಾವತಪನ್ ಪ್ರಜಾಃ ॥೩೮॥

ಭಗವಂತನು ಮೊದಲೇ ಈ ಸೂರ್ಯಗತಿಯನ್ನು ಹೀಗೆಯೇ ಇರಬೇಕೆಂದು ಕಟ್ಟಳೆ ಮಾಡಿರುವನು. ಎಲ್ಲಾ ಪ್ರಾಣಿಗಳಿಗೂ ಉಷ್ಣವನ್ನೂ, ಬೆಳಕನ್ನೂ ಕೊಡುವುದಕ್ಕಾಗಿ ಸೂರ್ಯನು ಎಡೆಬಿಡದೆ ಸುತ್ತುತ್ತಲೇ ಇರಬೇಕು.

ಅಯನಂ ತಸ್ಯ ಷಣ್ಮಾಸಾ ಉತ್ತರಂ ದಕ್ಷಿಣಂ ತಥಾ ।
ಯೇನ ಸಂಯಾತಿ ಲೋಕೇಷು ಶೀತೋಷ್ಣೇ ವಿಸೃಜನ್ ರವಿಃ ॥೩೯॥

ಆರುತಿಂಗಳು ಉತ್ತರಮಾರ್ಗವಾಗಿಯೂ, ಇನ್ನಾರು ತಿಂಗಳು ದಕ್ಷಿಣ ಮಾರ್ಗವಾಗಿಯೂ ಸುತ್ತುವನು. ಈ ಪರ್ಯಾಯಗತಿಗಳಿಂದ ಭೂಮಿಗೆ ಶೀತೋಷ್ಣಗಳನ್ನೂ, ಋತುಭೇದಗಳನ್ನೂ ಉಂಟುಮಾಡುವವನೂ ಅವನೇ' ಎಂದನು.

ಭೀಷ್ಮಃ

ಏವಮುಕ್ತಸ್ತು ದೈತ್ಯೇಂದ್ರೋ ಬಲಿರಿಂದ್ರೇಣ ಭಾರತ ।
ಜಗಾಮ ದಕ್ಷಿಣಾಮಾಶಾಮುದೀಚೀಂ ತು ಪುರಂದರಃ ॥೪೦॥

ಇತ್ಯೇತದ್ ಬಲಿನಾ ಗೀತಮನಹಂಕಾರಸಂಜ್ಞಿತಮ್ ।
ವಾಕ್ಯಂ ಶ್ರುತ್ವಾ ಸಹಸ್ರಾಕ್ಷಃ ಖಮೇವಾರುರುಹೇ ತದಾ ॥೪೧॥

ಈ ಮಾತನ್ನು ಕೇಳಿ ಬಲಿಯು ಇಂದ್ರನನ್ನು ಬಿಟ್ಟು ಅತ್ತಲಾಗಿ ದಕ್ಷಿಣ ದಿಕ್ಕಿಗೆ ಹೋದನು. ಇತ್ತಲಾಗಿ ಇಂದ್ರನೂ ಉತ್ತರದಿಕ್ಕಿಗೆ ಹೋದನು. ಬಲಿಯು ಹೇಳಿದ ನಿರಹಂಕಾರ ಗೀತೆಯೆಂಬ ಈ ನೀತಿ ವಾಕ್ಯಗಳನ್ನು ಕೇಳಿ ಇಂದ್ರನು ವಿಸ್ಮಿತನಾಗಿ ಅಂತರಿಕ್ಷಕ್ಕೆ ಹಾರಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಏಕಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಅರವತ್ತೊಂದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೆರಡನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನಿಗೆ ಇಂದ್ರ-ನಮುಚಿಗಳ ಸಂವಾದವನ್ನು ನಿರೂಪಿಸಿದುದು.

ಭೀಷ್ಮಃ

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್ ।
ಶತಕ್ರತೋಶ್ಚ ಸಂವಾದಂ ನಮುಚೇಶ್ಚ ಯುಧಿಷ್ಠಿರ ॥೧॥

ಭೀಷ್ಮ- ಅನಹಂಕಾರ ಎಂಬ ಹೆಸರಿನಿಂದ ಇಂದ್ರನಿಗೂ ನಮುಚಿಗೂ ನಡೆದ ಸಂಭಾಷಣರೂಪವಾದ ಪುರಾತನವಾದ ಇತಿಹಾಸವನ್ನು ಪುರಾತನರು ಹೇಳುತ್ತಾರೆ.

ಶ್ರಿಯಾ ವಿಹೀನಮಾಸೀನಮಕ್ಷೋಭ್ಯಮಿವ ಸಾಗರಮ್ ।
ಭವಾಭವಜ್ಞಂ ಭೂತಾನಾಮಿತ್ಯುವಾಚ ಪುರಂದರಃ ॥೨॥

ಹಿಂದೊಮ್ಮೆ ಇಂದ್ರನು ಸಂಪತ್ತಿನಿಂದ ಭ್ರಷ್ಟನಾಗಿದ್ದು, ಪ್ರಶಾಂತವಾದ ಮಹಾಸಮುದ್ರದಂತೆ ಯಾವ ವಿಧವಾದ ಕ್ಷೋಭೆಗೂ ತುತ್ತಾಗದೆ ಕುಳಿತಿರುವಾಗ ದೈತ್ಯರಾಜನಾದ ನಮುಚಿಗೆ ಕಾಲಿಕವಾಗಿ ಸಂಭವಿಸುವ ಜನನ-ಮರಣಗಳ ರಹಸ್ಯವನ್ನು ಇಂದ್ರನು ಹೇಳಿದನು.

ಬದ್ಧಃ ಪಾಶೈಶ್ಚ್ಯುತಃ ಸ್ಥಾನಾದ್ದ್ವಿಷತಾಂ ವಶಮಾಗತಃ ।
ಶ್ರಿಯಾ ವಿಹೀನೋ ನಮುಚೇ ಶೋಚಸ್ಯಾಹೋ ನ ಶೋಚಸಿ ॥೩॥

ನಮುಚಿಯೇ, ನೀನು ಪಾಶಗಳಿಂದ ಬಂಧಿಸಲ್ಪಟ್ಟಿರುವಿ. ರಾಜ್ಯಭ್ರಷ್ಟನಾಗಿರುವಿ. ಶತ್ರುಗಳ ವಶನಾಗಿರುವಿ. ಧನಸಂಪತ್ತಿನಿಂದಲೂ ವಿಹೀನನಾಗಿರುವಿ. ಇಂತಹ ನಿನ್ನ ದುರವಸ್ಥೆಗೆ ನೀನು ಶೋಚಿಸುತ್ತೀಯೋ ಇಲ್ಲವೋ?

ನಮುಚಿಃ

ಅನವಾಪ್ಯಂ ಚ ಶೋಕೇನ ಶರೀರಂ ಚೋಪತಪ್ಯತೇ ।
ಅಮಿತ್ರಾಶ್ಚ ಪ್ರಹಷ್ಯಂತಿ ನಾಸ್ತಿ ಶೋಕೇ ಸಹಾಯತಾ ॥೪॥

ನಮುಚಿ– ದೇವರಾಜನೇ, ಶೋಕವನ್ನು ನಾನು ತಡೆದುಕೊಳ್ಳದಿದ್ದರೆ ಅದು ನನ್ನ ಶರೀರಕ್ಕೆ ತಾಪವನ್ನುಂಟು ಮಾಡುತ್ತದೆ. ಶತ್ರುಗಳು ಶೋಕವನ್ನು ನೋಡಿ ಸಂತೋಷಗೊಳ್ಳುತ್ತಾರೆ. ಶೋಕದಿಂದ ನನ್ನ ವಿಪತ್ತು ದೂರವಾಗುತ್ತದೆಯೇ? ಶೋಕದಿಂದ ಯಾವ ಉಪಯೋಗವೂ ಇಲ್ಲ.

ತಸ್ಮಾಚ್ಛಕ್ರ ನ ಶೋಚಾಮಿ ಸರ್ವಂ ಹ್ಯೇವೇದಮಂತವತ್ ।
ಸಂತಾಪಾದ್ ಭ್ರಶ್ಯತೇ ರೂಪಂ ಧರ್ಮಶ್ಚೈವ ಸುರೇಶ್ವರ ॥೫॥

ಆದ್ದರಿಂದಲೇ ಈ ಕಾರಣಗಳಿಂದ ನಾನು ಶೋಕಪಡುವುದಿಲ್ಲ. ವೈಭವವು ನಾಶ ಹೊಂದುವ ಸ್ವಭಾವವುಳ್ಳದ್ದಾಗಿದೆ. ಇದನ್ನು ಅರ್ಥಮಾಡಿಕೊಂಡ ನಾನು ಸಂತಾಪಗೊಂಡಲ್ಲಿ ನನ್ನ ರೂಪವು ಹಾಳಾಗುತ್ತದೆ. ನನ್ನ ಧರ್ಮವು, ಆಯುಷ್ಯವು ಕ್ಷಯವಾಗುತ್ತದೆ.

ವಿನೀಯ ಖಲು ತದ್ ದುಃಖಮಾಗತಂ ವೈಮನಸ್ಯಜಮ್ ।
ಧ್ಯಾತವ್ಯಂ ಮನಸಾ ಹೃದ್ಯಂ ಕಲ್ಯಾಣಂ ಸಂವಿಜಾನತಾ ॥೬॥

ಈ ರಹಸ್ಯವನ್ನು ಅರ್ಥಮಾಡಿಕೊಂಡಿರುವ ಪುರುಷನು ವೈಮನಸ್ಯದಿಂದ ಉತ್ಪನ್ನವಾದ ದುಃಖವನ್ನು ದೂರೀಕರಿಸಿ ಹೃದಯಸ್ಥಮಾನವಾಗಿರುವ ಕಲ್ಯಾಣಮಯ ಪರಮಾತ್ಮನನ್ನು ಮನಸ್ಸಿನಲ್ಲಿ ಧ್ಯಾನ ಮಾಡಬೇಕು.

ಯಥಾ ಯಥಾ ಹಿ ಪುರುಷಃ ಕಲ್ಯಾಣೇ ಕುರುತೇ ಮನಃ ।
ತದೈವಾಸ್ಯ ಪ್ರಸೀದಂತಿ ಸರ್ವಾರ್ಥಾ ನಾತ್ರ ಸಂಶಯಃ ॥೭॥

ಯಾವ ರೀತಿಯಾಗಿ ಪುರುಷನು ಕಲ್ಯಾಣ ಸ್ವರೂಪಿಯಾದ ಪರಮಾತ್ಮನ ಧ್ಯಾನವನ್ನು ಮಾಡುತ್ತಾನೋ, ಅವನಲ್ಲಿಯೇ ಮನಸ್ಸನ್ನು ಸಂಯೋಜಿಸುತ್ತಾನೋ ಆಗಲೇ ಸಮಸ್ತ ಪುರುಷಾರ್ಥಗಳು ಸಿದ್ಧಿಸುತ್ತವೆ. ಇದರಲ್ಲಿ ಸಂಶಯವಿಲ್ಲ.

ಏಕಃ ಶಾಸ್ತಾ ನ ದ್ವಿತೀಯೋಽಸ್ತಿ ಶಾಸ್ತಾ
ಗರ್ಭೇ ಶಯಾನಂ ಪುರುಷಂ ಶಾಸ್ತಿ ಶಾಸ್ತಾ ।
ತೇನಾನುಶಿಷ್ಟಃ ಪ್ರವಣಾದಿವೋದಕಂ
ಯಥಾ ನಿಯುಕ್ತೋಽಸ್ಮಿ ತಥಾ ವಹಾಮಿ ॥೮॥

ಜಗತ್ತನ್ನು ಶಾಸನ ಮಾಡುವವನು ಆ ಪರಮಾತ್ಮನೇ ಆಗಿದ್ದಾನೆ. ಬೇರೆಯವನಿಲ್ಲ. ಆ ಭಗವಂತನು ಗರ್ಭದಲ್ಲಿ ಮಲಗಿರುವ ಜೀವರಿಗೂ ಶಾಸಕನಾಗಿದ್ದಾನೆ. ಇಳಿಜಾರಿನ ಪ್ರದೇಶದಲ್ಲಿ ನೀರು ಸಹಜವಾಗಿ ಹರಿದು ಹೋಗುವಂತೆ ಆ ಭಗವಂತನಿಂದಲೇ ಪ್ರೇರಿತನಾದ ಜೀವನು ಅವನ ಸಂಕಲ್ಪವನ್ನು ಅನುಸರಿಸಿ ನಡೆಯುತ್ತಾನೆ. ಆ ಭಗವಂತನ ಶಾಸನದ ಆದೇಶದಂತೆ ಸಮಸ್ತ ಕಾರ್ಯಭಾರಗಳನ್ನು ಹೊರುತ್ತಿದ್ದೇನೆ.

ಭಾವಾಭಾವಾವಭಿಜಾನನ್ ಗರೀಯೋ
ಜಾನಾಮಿ ಶ್ರೇಯೋ ನ ತು ತತ್ ಕರೋಮಿ ।
ಆಶಾಃ ಸುಶಮ್ಯಾಃ ಸುಹೃದಾಂ ಸುಕುರ್ವನ್
ಯಥಾ ನಿಯುಕ್ತೋಽಸ್ಮಿ ತಥಾ ವಹಾಮಿ ॥೯॥

ಪ್ರಾಣಿಗಳ ಬಂಧ-ಮೋಕ್ಷಗಳ ತತ್ತ್ವವನ್ನು ತಿಳಿದಿರುತ್ತೇನೆ. ಶ್ರೇಷ್ಠವಾದ ತತ್ತ್ವವು ಯಾವುದೆಂಬುದನ್ನು ತಿಳಿದಿರುತ್ತೇನೆ. ಜ್ಞಾನದಿಂದಲೇ ಶ್ರೇಯಸ್ಸು ಎಂಬುದು ಅರ್ಥವಾಗಿದೆ. ಹೀಗಿದ್ದರೂ ನಾನು ಜ್ಞಾನ ಮಾರ್ಗದಲ್ಲೇ ನಡೆದುಕೊಳ್ಳುತ್ತಿಲ್ಲ. ಜ್ಞಾನಕ್ಕೆ ವಿಪರೀತವಾದ ಕಾಮ್ಯಕರ್ಮಗಳಲ್ಲಿ ನನ್ನ ಅಂತರ್ಯಾಮಿಯ ಪ್ರೇರಣೆಯು ನನಗೆ ಉಂಟಾಗುತ್ತಿದೆ. ಆದ್ದರಿಂದ ಆ ಪ್ರೇರಣೆಯಂತೆ ಕಾರ್ಯಭಾರವನ್ನು ನಡೆಸುತ್ತಿದ್ದೇನೆ.

ಯಥಾ ಯಥಾಸ್ಯ ಪ್ರಾಪ್ತವ್ಯಂ ಪ್ರಾಪ್ನೋತ್ಯೇವ ತಥಾ ತಥಾ ।
ಭವಿತವ್ಯಂ ಯಥಾ ಯಚ್ಚ ಭವತ್ಯೇವ ತಥಾ ತಥಾ ॥೧೦॥

ಯಾವ ರೀತಿಯಲ್ಲಿ ಯಾವ ವಸ್ತುವು ಹೊಂದಬೇಕೋ ಆದೇ ರೀತಿ ಆ ವಸ್ತುವು ಲಭಿಸುತ್ತದೆ. ಯಾವುದು ಹೇಗೆ ನಡೆಯಬೇಕೋ ಹಾಗೆ ನಡೆಯುತ್ತದೆ.

ಯತ್ರ ಯತ್ರೈವ ಸಂಯುಂಕ್ತೇ ಧಾತಾ ಗರ್ಭಂ ಪುನಃ ಪುನಃ ।
ತತ್ರ ತತ್ರೈವ ವಸತಿ ನ ಯತ್ರ ಸ್ವಯಮಿಚ್ಛತಿ ॥೧೧॥

ಬ್ರಹ್ಮನು ಯಾವ ಯಾವ ಗರ್ಭದಲ್ಲಿ ಯಾರನ್ನು ವಾಸಿಸಲು ಪ್ರೇರಿಸುತ್ತಾನೋ ಆಯಾ ಗರ್ಭದಲ್ಲಿ ಜೀವನು ವಾಸಿಸುತ್ತಾನೆ. ತನ್ನ ಸಂಕಲ್ಪಕ್ಕನುಗುಣವಾಗಿ ಗರ್ಭವನ್ನು ಹೊಂದಲಾರನು.

ಭಾವೋ ಯೋಽಯಮನುಪ್ರಾಪ್ತೋ ಭವಿತವ್ಯಮಿದಂ ಮಮ ।
ಇತಿ ಯಸ್ಯ ಸದಾ ಭಾವೋ ನ ಸ ಮುಹ್ಯೇತ್ ಕದಾಚನ ॥೧೨॥

ನನಗೆ ಯಾವ ಈ ಅವಸ್ಥೆಯು ಒದಗಿ ಬಂದಿದೆಯೋ ಇದು ಅವನ ಸಂಕಲ್ಪಾನುಸಾರವಾಗಿಯೇ ಬಂದಿದೆ. ಹೀಗೆ ಯಾರು ಚಿಂತಿಸುತ್ತಾರೋ ಅವನು ತನಗೆ ಪ್ರಾಪ್ತವಾದ ದುಃಖದ ವಿಷಯದಲ್ಲಿ ಮೋಹಗೊಳ್ಳುವುದಿಲ್ಲ.

ಪರ್ಯಾಯೈರ್ಹನ್ಯಮಾನಾನಾಮಭಿಷಂಗೋ ನ ವಿದ್ಯತೇ ।
ದುಃಖಮೇತತ್ತು ಯದ್ ದ್ವೇಷ್ಟಾ ಕರ್ತಾಹಮಿತಿ ಮನ್ಯತೇ ॥೧೩॥

ಬೇರೆ ಬೇರೆ ಕ್ರಮದಲ್ಲಿ ನಿರಂತರ ಬರುವ ಕಷ್ಟಗಳಿಂದ ಪೀಡಿತರಾದವರು ಒಂದೇ ದುಃಖದಲ್ಲಿ ಕುಳಿತು ಎಂದೂ ಇರುವುದಿಲ್ಲ. ಯಾರು ದುಃಖವನ್ನೇ ದ್ವೇಷಿಸುತ್ತಾರೋ ಆ ಕಷ್ಟಕ್ಕೆ ತಾನೇ ಕರ್ತೃವೆಂದು ಭಾವಿಸುತ್ತಾರೆ. ಇದು ಮತ್ತೂ ದುಃಖಕ್ಕೆ ಕಾರಣವಾಗುತ್ತದೆ.

ಋಷೀಂಶ್ಚ ದೇವಾಂಶ್ಚ ಮಹಾಸುರಾಂಶ್ಚ
ತ್ರೈವಿದ್ಯವೃದ್ಧಾಂಶ್ಚ ವನೇ ಮುನೀಂಶ್ಚ ।
ಕಾನ್ನಾಪದೋ ನೋಪನಮಂತಿ ಲೋಕೇ
ಪರಾವರಜ್ಞಾಸ್ತು ನ ಸಂಭ್ರಮಂತಿ ॥೧೪॥

ಋಷಿಗಳು, ದೇವತೆಗಳು, ಮಹಾಸುರರು, ಮೂರು ವೇದಜ್ಞರಾದ ಜ್ಞಾನಿಗಳು, ಅರಣ್ಯಸ್ಥ ಮುನಿಗಳು ಇವರೆಲ್ಲರಿಗೂ ಆಪತ್ತು ಒದಗುತ್ತದೆ. ವಿವೇಕಿಗಳಾದವರು ಈ ಆಪತ್ತಿನಿಂದ ಭ್ರಾಂತರಾಗುವುದಿಲ್ಲ.

ನ ಪಂಡಿತಃ ಕ್ರುಧ್ಯತಿ ನಾಪಿ ಸಜ್ಜತೇ
ನ ಚಾಪಿ ಸಂಸೀದತಿ ನ ಪ್ರಹಷ್ಯತಿ ।
ನ ಚಾರ್ಥಕೃಚ್ಛ್ರವ್ಯಸನೇಷು ಶೋಚತಿ
ಸ್ಥಿತಃ ಪ್ರಕೃತ್ಯಾ ಹಿಮವಾನಿವಾಚಲಃ ॥೧೫॥

ಪಂಡಿತನು ಕೋಪಗೊಳ್ಳುವುದಿಲ್ಲ. ಅತಿಯಾದ ಆಸಕ್ತಿಯನ್ನಿಟ್ಟುಕೊಳ್ಳುವುದಿಲ್ಲ. ಆಪತ್ತಿನಿಂದ ಕುಗ್ಗುವುದಿಲ್ಲ. ಸುಖದಿಂದ ಹಿಗ್ಗುವುದಿಲ್ಲ. ನಿರ್ಧನನಾದಾಗ, ವ್ಯಸನಿಯಾದಾಗ ಶೋಕಿಸುವುದಿಲ್ಲ. ಹಿಮದಂತೆ ಸ್ಥಿರವಾದ ಸ್ವಭಾವವುಳ್ಳವನಾಗಿರುತ್ತಾನೆ.

ಯಮರ್ಥಸಿದ್ಧಿಃ ಪರಮಾ ನ ಹರ್ಷಯೇತ್
ತಥೈವ ಕಾಲೇ ವ್ಯಸನಂ ನ ಮೋಹಯೇತ್ ।
ಸುಖಂ ಚ ದುಃಖಂ ಚ ತಥೈವ ಮಧ್ಯಮಂ
ನಿಷೇವತೇ ಯಃ ಸ ಧುರಂಧರೋ ನರಃ ॥೧೬॥

ಮಹತ್ತರವಾದ ಅರ್ಥಸಿದ್ಧಿಯು ಯಾವಾತನನ್ನು ಮೋಹಗೊಳಿಸುವುದಿಲ್ಲವೋ, ಕಾಲಾನುಗುಣವಾಗಿ ಬಂದಿರುವ ದುಃಖವೂ ಯಾವನನ್ನು ಮೋಹಗೊಳಿಸುವುದಿಲ್ಲವೋ, ಸುಖ-ದುಃಖಗಳನ್ನು ಸಮಾನವಾಗಿ ಯಾವಾತನು ಕಾಣುತ್ತಾನೋ ಅವನು ಮಹಾಭಾರವನ್ನು ಸಾಧಿಸುವ ಶ್ರೇಷ್ಠ ಪುರುಷನೆನಿಸುತ್ತಾನೆ.

ಯಾಂ ಯಾಮವಸ್ಥಾಂ ಪುರುಷೋಽಧಿಗಚ್ಛೇತ್
ತಸ್ಯಾಂ ರಮೇತಾಪರಿತಪ್ಯಮಾನಃ ।
ಏವಂ ಪ್ರವೃದ್ಧಂ ಪ್ರಣುದೇನ್ಮನೋಜಂ
ಸಂತಾಪಮಾಯಾಸಕರಂ ಶರೀರಾತ್ ॥೧೭॥

ಪುರುಷನು ಯಾವುದೇ ಸ್ಥಿತಿಯನ್ನು ಹೊಂದಿದರೂ ತನ್ನ ಸ್ಥಿತಿಗಾಗಿ ದುಃಖಗೊಳ್ಳಬಾರದು. ಸಂತಾಪವನ್ನುಂಟು ಮಾಡುವ, ದಿನದಿನಕ್ಕೂ ವರ್ಜಿಸುವ ಎಲ್ಲಾ ಕಾಮನೆಗಳನ್ನು ಶರೀರದಿಂದಲೂ, ಮನಸ್ಸಿನಿಂದಲೂ ದೂರಗೊಳಿಸಿ ತಾನು ಇರುವ ಸ್ಥಿತಿಯಲ್ಲಿಯೇ ಸಂತೋಷ ಹೊಂದಬೇಕು.

ತತ್ ಸದಃ ಸ ಪರಿಷತ್ಸಭಾಸದಃ
ಪ್ರಾಪ್ಯ ಯೋ ನ ಕುರುತೇ ಸಭಾಭಯಮ್ ।
ಧರ್ಮತತ್ತ್ವಮವಗಾಹ್ಯ ಬುದ್ಧಿಮಾನ್
ಯೋಽಭ್ಯುಪೈತಿ ಸ ಪುಮಾನ್ ಧುರಂಧರಃ ॥೧೮॥

ಯಾವ ಧಾರ್ಮಿಕ ಸಭೆಯಲ್ಲಿ ಮನುಷ್ಯನು ಧರ್ಮ-ಮರ್ಯಾದೆಗೆ ಭಯ ಹೊಂದುವುದಿಲ್ಲವೋ ಅದು ಸತ್ಸಭೆಯಲ್ಲ. ಧರ್ಮ-ಮರ್ಯಾದೆಗೆ ಭಯಪಟ್ಟು ನಡೆದರೆ ಅದು ಸತ್ಸಭೆ ಎನ್ನುತ್ತಾರೆ. ಬುದ್ಧಿವಂತನಾದ ಮನುಷ್ಯನು ಧರ್ಮತತ್ತ್ವದಲ್ಲಿ ಮುಳುಗಿ ಅದನ್ನು ಅನುಷ್ಠಾನ ಮಾಡುತ್ತಾನೋ ಅವನೇ ಮಹಾಭಾರವನ್ನು ಧರಿಸಲು ಸಮರ್ಥನಾದ ಪುರುಷನು.

ಪ್ರಾಜ್ಞಸ್ಯ ಕರ್ಮಾಣಿ ದುರನ್ವಯಾನಿ
ನ ವೈ ಪ್ರಾಜ್ಞೋ ಮುಹ್ಯತಿ ಮೋಹಕಾಲೇ ।
ಸ್ಥಾನಾಚ್ಚ್ಯುತಶ್ಚೇನ್ನ ಮುಮೋಹ ಗೌತಮ-
ಸ್ತಾವತ್ಕೃಚ್ಛ್ರಮಾಪದಂ ಪ್ರಾಪ್ಯ ವೃದ್ಧಃ ॥೧೯॥

ಪ್ರಾಜ್ಞನ ಕಾರ್ಯಗಳು ಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಮೋಹದ ಕಾಲದಲ್ಲಿಯೂ ಪ್ರಾಜ್ಞನು ಮೋಹಗೊಳ್ಳುವುದಿಲ್ಲ. ವೃದ್ಧನಾದ ಗೌತಮನು ಸ್ಥಾನದಿಂದ ಚ್ಯುತನಾದರೂ ಮೋಹವಶನಾಗಲಿಲ್ಲ. ಎಷ್ಟು ಆಪತ್ತುಗಳನ್ನು ಅನುಭವಿಸಿದರೂ ಮೋಹಗೊಳ್ಳದೆ ಎದುರಿಸಿದನು.

ನ ಮಂತ್ರಬಲವೀರ್ಯೇಣ ಪ್ರಜ್ಞಯಾ ಪೌರುಷೇಣ ವಾ ।
ಅಲಭ್ಯಂ ಲಭತೇ ಮರ್ತ್ಯಸ್ತತ್ರ ಕಾ ಪರಿದೇವನಾ ॥೨೦॥

ಮನುಷ್ಯನು ಅಲಭ್ಯವಾದ ವಸ್ತುಗಳನ್ನು ಮಂತ್ರದಿಂದಾಗಲಿ, ಬಲದಿಂದಾಗಲಿ, ಪರಾಕ್ರಮದಿಂದಾಗಲಿ, ಬುದ್ಧಿಯಿಂದಾಗಲಿ, ಪುರುಷಪ್ರಯತ್ನದಿಂದಾಗಲಿ ಪಡೆದುಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ಇದರಲ್ಲಿ ಶೋಕಪಡಬೇಕಾದ ಕಾರಣವಿಲ್ಲ.

ಯದೇವಮನುಜಾತಸ್ಯ ಧಾತಾರೋ ವಿದಧುಃ ಪುರಾ ।
ತದೇವಾನುಭವಿಷ್ಯಾಮಿ ಕಿಂ ಮೇ ಮೃತ್ಯುಃ ಕರಿಷ್ಯತಿ ॥೨೧॥

ಹೀಗೆ ಕರ್ಮಾನುಗುಣವಾಗಿ ಹುಟ್ಟಿರುವ ನನಗೆ ಸೃಷ್ಟಿಕರ್ತರು ಏನನ್ನು ಪಡೆಯಬೇಕೆಂದು ನಿಯಮಿಸಿದ್ದಾರೋ ಅದನ್ನೇ ಅನುಸರಿಸಿ ವಿಧಾತನ ಶಾಸನ ಒಂದನ್ನೇ ನಂಬಿ ನಡೆಯುತ್ತಿದ್ದೇನೆ. ನನ್ನನ್ನು ಮೃತ್ಯುವು ಏನು ಮಾಡಿಯಾನು?

ಲಬ್ಧವ್ಯಾನ್ಯೇವ ಲಭತೇ ಗಂತವ್ಯಾನ್ಯೇವ ಗಚ್ಛತಿ ।
ಪ್ರಾಪ್ತವ್ಯಾನ್ಯೇವ ಪ್ರಾಪ್ನೋತಿ ದುಃಖಾನಿ ಚ ಸುಖಾನಿ ಚ ॥೨೨॥

ವಿಧಾತೃವಿನ ಶಾಸನದಂತೆ ಯಾವನು ಯಾವುದನ್ನು ಹೊಂದಬೇಕೋ ಅದನ್ನು ಹೊಂದಿಯೇ ತೀರುತ್ತಾನೆ. ಎಲ್ಲಿಗೆ ಹೋಗಬೇಕೋ ಅಲ್ಲಿಗೆ ಹೋಗಿಯೇ ತೀರುತ್ತಾನೆ. ದುಃಖದ ಪ್ರಾಪ್ತಿ ಇದ್ದರೆ ದುಃಖವನ್ನು ಅನುಭವಿಸುತ್ತಾನೆ. ಸುಖದ ಪ್ರಾಪ್ತಿ ಇದ್ದರೆ ಸುಖವನ್ನು ಅನುಭವಿಸುತ್ತಾನೆ.

ಏತದ್ ವಿದಿತ್ವಾ ಕಾರ್ತ್ಸ್ನ್ಯೇನ ಯೋ ನ ಮುಹ್ಯತಿ ಮಾನವಃ ।
ಕುಶಲಃ ಸುಖದುಃಖೇಷು ಸ ವೈ ಸರ್ವಧನೇಶ್ವರಃ ॥೨೩॥

ಈ ರಹಸ್ಯವನ್ನು ಸಮಗ್ರವಾಗಿ ತಿಳಿದು ಯಾವ ಮನುಷ್ಯನು ಪರ್ಯಾಯವಾಗಿ ಬರುವ ಸುಖ-ದುಃಖಗಳ ವಿಷಯದಲ್ಲಿ ಮೋಹಗೊಳ್ಳುವುದಿಲ್ಲವೋ ಅವನು ದುಃಖದಲ್ಲಿಯೂ ಕುಶಲಿಯಾಗಿರುತ್ತಾನೆ. ಸಮಗ್ರವಾದ ಐಶ್ವರ್ಯವನ್ನು ಪಡೆಯುವವನಾಗುತ್ತಾನೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ದ್ವಿಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಅರವತ್ತೆರಡನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ಮೂರನೆಯ ಅಧ್ಯಾಯ

ಭೀಷ್ಮರು ಯುಧಿಷ್ಠಿರನನ್ನು ಕುರಿತು, ವಿಪತ್ತಿನಲ್ಲಿ ಧೈರ್ಯವನ್ನು ಅವಲಂಬಿಸಲು ಸುಖ ಸಾಧನವನ್ನು ಪ್ರತಿಪಾದಿಸುವ ಬಲಿ-ಶಕ್ರರ ಸಂವಾದವನ್ನು ನಿರೂಪಿಸಿದುದು.

ಯುಧಿಷ್ಠಿರಃ

ಮಗ್ನಸ್ಯ ವ್ಯಸನೇ ಕೃಚ್ಛ್ರೇ ಕಿಂ ಶ್ರೇಯಃ ಪುರುಷಸ್ಯ ಹಿ ।
ಬಂಧುನಾಶೇ ಮಹೀಪಾಲ ರಾಜ್ಯನಾಶೇऽಪಿ ವಾ ಪುನಃ ॥೧॥

ಯುಧಿಷ್ಠಿರ– ಪಿತಾಮಹನೇ, ಬಂಧುಗಳ ನಾಶದಿಂದ ಅಥವಾ ರಾಜ್ಯನಾಶದಿಂದ ಮಹಾಸಂಕಟದಲ್ಲಿ ಬೀಳುವ ಮನುಷ್ಯನಿಗೆ ಯಾವುದರಿಂದ ಪುನಃ ಶ್ರೇಯಸ್ಸು ಲಭಿಸುತ್ತದೆ?

ತ್ವಂ ಹಿ ನಃ ಪರಮೋ ವಕ್ತಾ ಲೋಕೇಽಸ್ಮಿನ್ ಭರತರ್ಷಭ ।
ಏತದ್ಭವಂತಂ ಪೃಚ್ಛಾಮಿ ತನ್ಮೇ ವಕ್ತುಮಿಹಾರ್ಹಸಿ ॥೨॥

ಈ ಪ್ರಪಂಚದಲ್ಲಿ ನಮ್ಮ ಶ್ರೇಷ್ಠ ಬೋಧಕನು ನೀನೇ ಆಗಿರುವಿ. ಆದ್ದರಿಂದಲೇ ನಿನ್ನನ್ನು ಪ್ರಶ್ನಿಸುತ್ತಿದ್ದೇನೆ. ಉತ್ತರವನ್ನು ಹೇಳುವ ಕೃಪೆ ತೋರು.

ಭೀಷ್ಮಃ

ಪುತ್ರದಾರೈಃ ಸುಖೈಶ್ಚೈವ ವಿಯುಕ್ತಸ್ಯ ಧನೇನ ಚ ।
ಮಗ್ನಸ್ಯ ವ್ಯಸನೇ ಕೃಚ್ಛ್ರೇ ಧೃತಿಃ ಶ್ರೇಯಸ್ಕರೀ ನೃಪ ॥೩॥

ಭೀಷ್ಮ– ಯುಧಿಷ್ಠಿರನೇ, ಯಾರು ಮಡದಿ, ಮಕ್ಕಳು ಮೊದಲಾದ ಬಂಧುವರ್ಗವನ್ನು, ಸಂಪತ್ತನ್ನು ಕಳೆದುಕೊಂಡು, ಸುಖಗಳಿಂದ ವಂಚಿತರಾಗಿ ಅಗಾಧವಾದ ದುಃಖವನ್ನು ಹೊಂದುತ್ತಾರೋ ಅವರು ಧೈರ್ಯವನ್ನೇ ಅವಲಂಬಿಸಬೇಕು. ಅದೇ ಶ್ರೇಯಸ್ಕರವಾದುದು.

ಧೈರ್ಯೇಣ ಯುಕ್ತಸ್ಯ ಸತಃ ಶರೀರಂ ನ ವಿಶೀರ್ಯತೇ ।
ಆರೋಗ್ಯಾಚ್ಚ ಶರೀರಸ್ಯ ಸ ಪುನರ್ವಿಂದತೇ ಶ್ರಿಯಮ್ ॥೪॥

ಧೈರ್ಯದಿಂದ ಕೂಡಿರುವ ವ್ಯಕ್ತಿಯ ಶರೀರವು ಕ್ಷೀಣಿಸುವುದಿಲ್ಲ. ಆರೋಗ್ಯವು ಚೆನ್ನಾಗಿದ್ದರೆ ಅವನು ಪುನಃ ಸಂಪತ್ತನ್ನು ಪಡೆದುಕೊಳ್ಳಬಹುದು.

ಯಸ್ಯ ರಾಜ್ಞೋ ನರಾಸ್ತಾತ ಸಾತ್ತ್ವಿಕೀಂ ವೃತ್ತಿಮಾಸ್ಥಿತಾಃ ।
ತಸ್ಯ ಸ್ಫೈರ್ಯಂ ಚ ಧೈರ್ಯಂ ಚ ವ್ಯವಸಾಯಶ್ಚ ಕರ್ಮಸು ॥೫॥

ಯಾವ ಮನುಷ್ಯನು ಪ್ರಾಜ್ಞನಾಗಿ ಸಾತ್ವಿಕವೃತ್ತಿಯನ್ನೇ ಆಶ್ರಯಿಸಿ ವ್ಯವಹರಿಸುತ್ತಾನೋ ಅವನಿಗೆ ಐಶ್ವರ್ಯವು ಲಭಿಸುತ್ತದೆ, ಧೈರ್ಯವೂ ಇರುತ್ತದೆ. ಅಂತಹವನು ಕಾರ್ಯಗಳಲ್ಲಿ ನಿಶ್ಚಯ ಬುದ್ಧಿಯುಳ್ಳವನಾಗಿರುತ್ತಾನೆ.

ಅತ್ರೈವೋದಾಹರಂತೀಮಮಿತಿಹಾಸಂ ಪುರಾತನಮ್ ।
ಬಲಿವಾಸವಸಂವಾದಂ ಪುನರೇವ ಯುಧಿಷ್ಠಿರ ॥೬॥

ಇದೇ ವಿಷಯದಲ್ಲಿ ಹಿಂದೆ ಬಲಿಗೂ ಇಂದ್ರನಿಗೂ ನಡೆದ ಇತಿಹಾಸ ರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ, ಕೇಳು.

ವೃತ್ತೇ ದೇವಾಸುರೇ ಯುದ್ಧೇ ದೈತ್ಯದಾನವಸಂಕ್ಷಯೇ ।
ವಿಷ್ಣುಕ್ರಾಂತೇಷು ಲೋಕೇಷು ದೇವರಾಜೇ ಶತಕ್ರತೌ ॥೭॥

ಹಿಂದೆ ದೇವತೆಗಳಿಗೂ ಅಸುರರಿಗೂ ಯುದ್ಧವು ಏರ್ಪಟ್ಟಿತು. ದೈತ್ಯ-ದಾನವರು ವಿನಾಶ ಹೊಂದಿದರು. ಬಲಿಚಕ್ರವರ್ತಿಯಿಂದ ವಾಮನನು ಮೂರು ಪಾದಗಳನ್ನು ಕೇಳಿ, ತ್ರಿವಿಕ್ರಮನಾಗಿ ಬೆಳೆದು ಮೂರು ಹೆಜ್ಜೆಗಳಿಂದ ಮೂರು ಲೋಕಗಳನ್ನು ಆಕ್ರಮಿಸಿದನು. ಬಳಿಕ ಇಂದ್ರನು ದೇವತೆಗಳಿಗೆ ಅಧಿಪತಿಯಾದನು.

ಇಜ್ಯಮಾನೇಷು ದೇವೇಷು ಚಾತುರ್ವರ್ಣ್ಯೇ ವ್ಯವಸ್ಥಿತೇ ।
ಸಮೃಧ್ಯಮಾನೇ ತ್ರೈಲೋಕ್ಯೇ ಪ್ರೀತಿಯುಕ್ತೇ ಸ್ವಯಂಭುವಿ ॥೮॥

ದೇವತೆಗಳ ಪ್ರೀತ್ಯರ್ಥವಾಗಿ ಯಾಗಾದಿಗಳು ಆರಂಭವಾದವು. ಚತುರಾಶ್ರಮಿಗಳು ತಮ್ಮ ಧರ್ಮವನ್ನು ಅನುಷ್ಠಾನ ಮಾಡಿದರು. ಇದರಿಂದ ಮೂರು ಲೋಕಗಳು ಸಮೃದ್ಧಿಯನ್ನು ಹೊಂದಿದವು. ಅದನ್ನು ನೋಡಿ ಬ್ರಹ್ಮನಿಗೆ ಸಂತೋಷ ಉಂಟಾಯಿತು.

ರುದ್ರೈರ್ವಸುಭಿರಾದಿತ್ಯೈರಶ್ವಿಭ್ಯಾಮಪಿ ಚರ್ಷಿಭಿಃ ।
ಗಂಧರ್ವೈರ್ಭುಜಗೇಂದ್ರೈಶ್ಚ ಸಿದ್ಧೈಶ್ಚಾನ್ಯೈರ್ವೃತಃ ಪ್ರಭುಃ ॥೯॥

ಚತುರ್ದಂತಂ ಸುದಾಂತಂ ಚ ವಾರಣೇಂದ್ರಂ ಶ್ರಿಯಾ ವೃತಮ್ ।
ಆರುಹ್ಯೈರಾವತಂ ಶಕ್ರಸ್ತ್ರೈಲೋಕ್ಯಮನುಸಂಯಯೌ ॥೧೦॥

ಹೀಗೆ ಇರುತ್ತಿರಲು ರುದ್ರ-ವಸು-ಆದಿತ್ಯ-ಅಶ್ವಿನಿ-ಋಷಿ-ಗಂಧರ್ವ-ಸಿದ್ಧ-ಚಾರಣ ಮೊದಲಾದವರಿಂದ ಕೂಡಿಕೊಂದು, ಸುಂದರವಾದ ನಾಲ್ಕು ದಂತಗಳಿಂದ ಕಂಗೊಳಿಸುವ ಐರಾವತವೆಂಬ ಆನೆಯನ್ನು ಹತ್ತಿ ದೇವೇಂದ್ರನು ಲೋಕಯಾತ್ರೆಗಾಗಿ ಹೊರಟನು.

ಸ ಕದಾಚಿತ್ ಸಮುದ್ರಾಂತೇ ಕಸ್ಮಿಂಶ್ಚಿದ್ ಗಿರಿಗಹ್ವರೇ ।
ಬಲಿಂ ವೈರೋಚನಿಂ ವಜ್ರೀ ದದರ್ಶೋಪಸಸರ್ಪ ಚ ॥೧೧॥

ಹೀಗೆ ಪ್ರಯಾಣ ಮಾಡುತ್ತಿದ್ದಾಗ ಇಂದ್ರನು ಸಮುದ್ರ ತೀರದಲ್ಲಿರುವ ಒಂದು ಸಮುದ್ರದ ಗುಹೆಯಲ್ಲಿ ವಿರೋಚನನ ಮಗನಾದ ಬಲಿಯನ್ನು ನೋಡಿ ಅವನ ಬಳಿ ಸಾಗಿದನು.

ತಮೈರಾವತಮೂರ್ಧಸ್ಥಂ ಪ್ರೇಕ್ಷ್ಯ ದೇವಗಣೈರ್ವೃತಮ್ ।
ಸುರೇಂದ್ರಮಿಂದ್ರಂ ದೈತ್ಯೇಂದ್ರೋ ನ ಶುಶೋಚ ನ ವಿವ್ಯಥೇ ॥೧೨॥

ದೇವಗಣಗಳಿಂದ ಆವೃತನಾಗಿ ಐರಾವತದ ತಲೆಯ ಮೇಲೆ ಕುಳಿತಿರುವ ಇಂದ್ರನನ್ನು ನೋಡಿ ದೈತ್ಯೇಂದ್ರನು ಶೋಕಿಸಲೂ ಇಲ್ಲ, ವ್ಯಥೆಯನ್ನೂ ಹೊಂದಲಿಲ್ಲ.

ದೃಷ್ಟ್ವಾ ತಮವಿಕಾರಸ್ಥಂ ತಿಷ್ಠಂತಂ ನಿರ್ಭಯಂ ಬಲಿಮ್ ।
ಅಧಿರೂಢೋ ದ್ವಿಪಶ್ರೇಷ್ಠಮಿತ್ಯುವಾಚ ಶತಕ್ರತುಃ ॥೧೩॥

ಬಲಿಚಕ್ರವರ್ತಿಯು ನಿರ್ವಿಕಾರನಾಗಿದ್ದನು, ನಿರ್ಭೀತಿಯಿಂದಿದ್ದನು. ಇಂತಹ ಬಲಿಯನ್ನು ಕುರಿತು ಐರಾವತದ ಮೇಲೆ ಕುಳಿತೇ ಇಂದ್ರನು ಹೀಗೆ ಪ್ರಶ್ನಿಸಿದನು.

ದೈತ್ಯ ನ ವ್ಯಥಸೇ ಶೌರ್ಯಾದಥ ವಾ ವೃದ್ಧಸೇವಯಾ ।
ತಪಸಾ ಭಾವಿತತ್ವಾದ್ವಾ ಸರ್ವಥೈತತ್ ಸುದುಷ್ಕರಮ್ ॥೧೪॥

ದೈತ್ಯೇಂದ್ರನೇ, ಶತ್ರುವಿನ ಸಮೃದ್ಧಿಯನ್ನು ಕಂಡು ನೀನು ದುಃಖ ಪಡುತ್ತಿಲ್ಲ. ಇಂತಹ ಸ್ಥಿತಿಯು ಸಾಮಾನ್ಯ ಮನುಷ್ಯರಿಗೆ ದುಷ್ಕರವು. ಈ ಗುಣವನ್ನು ನೀನು ಶೌರ್ಯದಿಂದ ಅಥವಾ ವೃದ್ಧರ ಸೇವೆಯಿಂದ ಅಥವಾ ತಪಸ್ಸಿನ ಫಲದ ಪ್ರಭಾವದಿಂದ ಮೈಗೂಡಿಸಿಕೊಂಡಿರುವೆಯಾ? ಈ ಗುಣವು ಹೇಗೆ ಬಂದಿತು?

ಶತ್ರುಭಿರ್ವಶಮಾನೀತೋ ಹೀನಃ ಸ್ಥಾನಾದನುತ್ತಮಾತ್ ।
ವೈರೋಚನೇ ಕಿಮಾಶ್ರಿತ್ಯ ಶೋಚಿತವ್ಯೇ ನ ಶೋಚಸಿ ॥೧೫॥

ಬಲಿಯೇ, ನೀನು ಶತ್ರುವಶನಾಗಿರುವಿ. ಉತ್ತಮ ಸ್ಥಾನದಿಂದ ಚ್ಯುತನಾಗಿರುವಿ. ಇಂತಹ ಸ್ಥಿತಿಯಲ್ಲಿಯೂ ಶೋಕ ಹೊಂದದಿರಲು ಯಾರನ್ನು ಆಶ್ರಯಿಸಿರುವಿ? ಶೋಕ ಪಡದೇ ಇರಲು ಏನು ಕಾರಣ?

ಶ್ರೈಷ್ಠ್ಯಂ ಪ್ರಾಪ್ಯ ಸ್ವಜಾತೀನಾಂ ಭುಕ್ತ್ವಾ ಭೋಗಾನನುತ್ತಮಾನ್ ।
ಹೃತಸ್ವಬಲರಾಜ್ಯಸ್ತ್ವಂ ಬ್ರೂಹಿ ಕಸ್ಮಾನ್ನ ಶೋಚಸಿ ॥೧೬॥

ನೀನು ಸಜಾತೀಯರಲ್ಲೇ ಶ್ರೇಷ್ಠತೆಯನ್ನು ಗಳಿಸಿದ್ದಿ. ಉತ್ತಮ ಭೋಗಗಳನ್ನು ಅನುಭವಿಸಿದ್ದಿ. ಈಗ ನಿನ್ನ ಐಶ್ವರ್ಯ, ರತ್ನ, ರಾಜ್ಯ ಎಲ್ಲವನ್ನೂ ಕಳೆದುಕೊಂಡಿರುವಿ. ಹೀಗಿದ್ದರೂ ಶೋಕಿಸುತ್ತಿಲ್ಲ. ಇದು ಹೇಗೆ?

ಈಶ್ವರೋ ಹಿ ಪುರಾ ಭೂತ್ವಾ ಪಿತೃಪೈತಾಮಹೇ ಪದೇ ।
ತತ್ತ್ವಮದ್ಯ ಹೃತಂ ದೃಷ್ಟ್ವಾ ಸಪತ್ನೈಃ ಕಿಂ ನ ಶೋಚಸಿ ॥೧೭॥

ನೀನು ನಿನ್ನ ತಾತ-ಮುತ್ತಾತರು ಕುಳಿತ ಸಿಂಹಾಸನದಲ್ಲಿ ಕುಳಿತು ಮೂರು ಲೋಕಗಳಿಗೂ ಈಶ್ವರನಾಗಿ ರಾಜ್ಯಭಾರವನ್ನು ನಡೆಸುತ್ತಿದ್ದೆ. ಇಂದು ಅದು ಶತ್ರುವಶವಾಗಿದೆ. ಇದು ದುಃಖದ ಸಂಗತಿ. ಆದರೂ ನೀನು ಶೋಕಿಸುತ್ತಿಲ್ಲ, ಹೇಗೆ?

ಬದ್ಧಶ್ಚ ವಾರುಣೈಃ ಪಾಶೈರ್ವಜ್ರೇಣ ಚ ಸಮಾಹತಃ ।
ಹೃತದಾರೋ ಹೃತಧನೋ ಬ್ರೂಹಿ ಕಸ್ಮಾನ್ನ ಶೋಚಸಿ ॥೧೮॥

ನೀನು ವರುಣನ ಪಾಶಗಳಿಂದ ಬಂಧಿತನಾಗಿರುವಿ. ವಜ್ರಾಯುಧದ ಪೆಟ್ಟಿನಿಂದ ದುಃಖಿತನಾಗಿರುವಿ. ಪತ್ನಿ-ಸಂಪತ್ತು ಎಲ್ಲವನ್ನೂ ಕಳೆದುಕೊಂಡಿರುವಿ. ಹೀಗಿದ್ದರೂ ದುಃಖಿಸದಿರಲು ಕಾರಣವೇನು?

ಭ್ರಷ್ಟಶ್ರೀರ್ವಿಭವಭ್ರಷ್ಟೋ ಯನ್ನ ಶೋಚಸಿ ದುಷ್ಕರಮ್ ।
ತ್ರೈಲೋಕ್ಯರಾಜ್ಯನಾಶೇ ಹಿ ಕೋನ್ಯೋ ಜೀವಿತುಮುತ್ಸಹೇತ್ ॥೧೯॥

ರಾಜ್ಯಲಕ್ಷ್ಮಿಯು ನಷ್ಟವಾಗಿದ್ದಾಳೆ. ಧನವೈಭವದಿಂದ ಭ್ರಷ್ಟನಾಗಿರುವಿ. ಹೀಗಿದ್ದರೂ ಶೋಕಿಸುತ್ತಿಲ್ಲ. ಮೂರು ಲೋಕದ ರಾಜ್ಯವನ್ನು ಕಳೆದುಕೊಂಡ ಬಳಿಕ ನಿನ್ನನ್ನು ಹೊರತು ಬೇರೆ ಯಾರಿಗೂ ಜೀವಿಸಲು ಉತ್ಸಾಹ ಬಾರದು.

ಏತಚ್ಚಾನ್ಯಚ್ಚ ಪರುಷಂ ಬ್ರುವಂತಂ ಪರಿಭೂಯ ತಮ್ ।
ಶ್ರುತ್ವಾ ಸುಖಮಸಂಭ್ರಾಂತೋ ಬಲಿರ್ವೈರೋಚನೋಽಬ್ರವೀತ್ ॥೨೦॥

ಈ ರೀತಿಯಾಗಿ ಅನೇಕ ಕಠಿಣವಾದ ಮಾತುಗಳನ್ನು ತಿರಸ್ಕರಿಸಿ ಹೇಳುತ್ತಿರುವ ಇಂದ್ರನ ಮಾತನ್ನು ಬಲಿಚಕ್ರವರ್ತಿಯು ಕೇಳಿಸಿಕೊಂಡು, ಯಾವುದೇ ಕಳವಳಕ್ಕೆ ತುತ್ತಾಗದೆ ಇಂದ್ರನನ್ನು ಕುರಿತು ಉತ್ತರ ಹೇಳಿದನು.

ನಿಗೃಹೀತೇ ಮಯಿ ಭೃಶಂ ಶಕ್ರ ಕಿಂ ಕತ್ಥಿತೇನ ತೇ ।
ವಜ್ರಮುದ್ಯಮ್ಯ ತಿಷ್ಠಂತಂ ಪಶ್ಯಾಮಿ ತ್ವಾಂ ಪುರಂದರ ॥೨೧॥

ಪುರಂದರನೇ, ಶತ್ರುಗಳಿಂದ, ಕಾಲನಿಂದ ದಹಿಸಲ್ಪಟ್ಟಿದ್ದೇನೆ. ಪುನಃ ಪುನಃ ನನ್ನನ್ನು ಹೀಗಳೆಯುವುದರಿಂದ ನಿನಗಾಗುವ ಲಾಭವೇನು? ವಜ್ರಾಯುಧ ಪಾಣಿಯಾಗಿರುವ ನಿನ್ನನ್ನು ನಾನು ಕಾಣುತ್ತಿದ್ದೇನೆ.

ಅಶಕ್ತಃ ಪೂರ್ವಮಾಸೀಸ್ತ್ವಂ ಕಥಂಚಿಚ್ಛಕ್ತತಾಂ ಗತಃ ।
ಕಸ್ತ್ವದನ್ಯ ಇಮಾ ವಾಚಃ ಸುಕ್ರೂರಾ ವಕ್ತುಮರ್ಹತಿ ॥೨೨॥

ಹಿಂದೆ ನೀನು ನನ್ನ ಮುಂದೆ ಅಶಕ್ತನಾಗಿದ್ದಿ. ಕಷ್ಟದಿಂದ ಶಕ್ತಿವಂತನಾದೆ. ಹೀಗಿದ್ದರೂ ರಾಜ್ಯಭ್ರಷ್ಟನಾಗಿರುವ ಶತ್ರುವಿನ ಮುಂದೆ ನಿಂತು ನೀನಲ್ಲದೆ ಯಾವನು ಇಂತಹ ನಿಷ್ಠುರವಾದ ಮಾತುಗಳನ್ನಾಡಲು ಸಾಧ್ಯ ?

ಯಸ್ತು ಶತ್ರೋರ್ವಶಸ್ಥಸ್ಯ ಶಕ್ತೋಽಪಿ ಕುರುತೇ ದಯಾಮ್ ।
ಹಸ್ತಪ್ರಾಪ್ತಸ್ಯ ವೀರಸ್ಯ ತಂ ಚೈವ ಪುರುಷಂ ವಿದುಃ ॥೨೩॥

ಮಹಾಶಕ್ತಿಶಾಲಿಯಾಗಿದ್ದರೂ ತನ್ನ ಕೈವಶನಾಗಿರುವ ಶತ್ರುವಿನ ವಿಷಯದಲ್ಲಿ ಯಾವನು ದಯೆ ತೋರುತ್ತಾನೋ ಅವನನ್ನೇ ಉತ್ತಮ ಪುರುಷನೆಂದು ವಿದ್ವಾಂಸರು ಹೇಳುತ್ತಾರೆ.

ಅನಿಶ್ಚಯೋ ಹಿ ಯುದ್ಧೇಷು ದ್ವಯೋರ್ವಿವದಮಾನಯೋಃ ।
ಏಕಃ ಪ್ರಾಪ್ನೋತಿ ವಿಜಯಮೇಕಶ್ಚೈವ ಪರಾಭವಮ್ ॥೨೪॥

ಯುದ್ಧದಲ್ಲಿ ಜಯ-ಪರಾಜಯಗಳು ಅನಿಶ್ಚಿತವು. ಯುದ್ಧ ಮಾಡುವ ವಿಷಯದಲ್ಲಿ ಒಬ್ಬನಿಗೆ ವಿಜಯ, ಮತ್ತೊಬ್ಬನಿಗೆ ಪರಾಜಯ ಸಹಜವಾದುದು. ಇಬ್ಬರೂ ಜಯಶಾಲಿಯಾಗಲಾರರು, ಇಬ್ಬರೂ ಪರಾಜಿತರಾಗಲಾರರು.

ಮಾ ಚ ತೇ ಭೂತ್ಸ್ವಭಾವೋಽಯಂ ಮಯಾ ದೈವತಪುಂಗವ ।
ಈಶ್ವರಃ ಸರ್ವಭೂತಾನಾಂ ವಿಕ್ರಮೇಣ ಜಿತೋ ಬಲಾತ್ ॥೨೫॥

ಸುರಶ್ರೇಷ್ಠನೇ, ಎಲ್ಲ ಪ್ರಾಣಿಗಳಿಗೂ ನಾನೇ ಒಡೆಯ. ನನ್ನ ಪರಾಕ್ರಮದಿಂದ ಬಲಿಯನ್ನು ಜಯಿಸಿದ್ದೇನೆ ಎಂಬ ಅಹಂಕಾರವು ನಿನಗೆ ಉಂಟಾಗದಿರಲಿ.

ನೈತದಸ್ಮತ್ಕೃತಂ ಶಕ್ರ ನೈತಚ್ಛಕ್ರ ತ್ವಯಾ ಕೃತಮ್ ।
ಯತ್ತ್ವಮೇವಂಗತೋ ವಜ್ರಿನ್ ಯದ್ವಾಪ್ಯೇವಂ ಗತಾ ವಯಮ್ ॥೨೬॥

ವಜ್ರಪಾಣಿಯೇ, ನೀನು ಇಂದು ರಾಜ್ಯಸಂಪತ್ತನ್ನು ಪಡೆದು ವೈಭವದಿಂದ ಕೂಡಿರುವುದಕ್ಕೂ, ನಾನು ರಾಜ್ಯಭ್ರಷ್ಟನಾಗಿರುವುದಕ್ಕೂ ನಾವೀರ್ವರೂ ಕಾರಣರಲ್ಲ.

ಅಹಮಾಸಂ ಯಥಾದ್ಯ ತ್ವಂ ಭವಿತಾ ತ್ವಂ ಯಥಾ ವಯಮ್ ।
ಮಾವಮಂಸ್ಥಾ ಮಯಾ ಕರ್ಮ ದುಷ್ಕೃತಂ ಕೃತಮಿತ್ಯುತ ॥೨೭॥

ನೀನು ಇಂದು ಹೇಗೆ ವೈಭವವನ್ನು ಹೊಂದಿರುವೆಯೋ ಇದೇ ವೈಭವದಿಂದ ಹಿಂದೆ ನಾನು ಇದ್ದೆನು. ಈಗಿನ ನನ್ನ ಸ್ಥಿತಿಯು ಮುಂದೆ ನಿನಗೂ ಬರುತ್ತದೆ. ಅತ್ಯಂತ ಕಷ್ಟಕರವಾದ ಸಾಹಸವನ್ನು ತೋರಿ ಶತ್ರುವನ್ನು ದಮನ ಮಾಡಿದ್ದೇನೆ ಎಂದು ದರ್ಪವನ್ನು ತೋರಿ ಅಹಂಕಾರದಿಂದ ನನ್ನನ್ನು ಅಪಮಾನಿಸಬೇಡ.

ಸುಖದುಃಖೇ ಹಿ ಪುರುಷಃ ಪರ್ಯಾಯೇಣಾಧಿಗಚ್ಛತಿ ।
ಪರ್ಯಾಯೇಣಾಸಿ ಶಕ್ರತ್ವಂ ಪ್ರಾಪ್ತಃ ಶಕ್ರ ನ ಕರ್ಮಣಾ ॥೨೮॥

ಪ್ರತಿಯೊಬ್ಬ ಮನುಷ್ಯನು ಸುಖ-ದುಃಖಗಳನ್ನು ಕ್ರಮವಾಗಿ ಹೊಂದುತ್ತಾನೆ. ಸುಖದ ನಂತರ ಕಷ್ಟ, ಕಷ್ಟದ ನಂತರ ಸುಖ. ಈ ಕ್ರಮದಲ್ಲಿಯೇ ನಿನಗೆ ಇಂದ್ರ ಪದವಿಯು ಬಂದಿದೆ. ನಿನ್ನ ಪರಾಕ್ರಮದಿಂದ ನೀನು ಇಂದ್ರಪದವಿಯನ್ನು ಪಡೆದಿರುವುದಿಲ್ಲ.

ಕಾಲಃ ಕಾಲೇ ನಯತಿ ಮಾಂ ತ್ವಾಂ ಚ ಕಾಲೋ ನಯತ್ಯಯಮ್ ।
ತೇನಾಹಂ ತ್ವಂ ಯಥಾ ನಾದ್ಯ ತ್ವಂ ಚಾಪಿ ನ ಯಥಾ ವಯಮ್
॥೨೯॥

ಕಾಲನಾಮಕನಾದ ಭಗವಂತನೇ ತನ್ನ ವಶದಿಂದ ಇಂಥಿಂಥ ಗತಿಗಳನ್ನು ಒದಗಿಸುತ್ತಾನೆ. ಆ ಕಾಲನಿಂದ ನಿನಗೆ ಈ ಗತಿ ಬಂದಿದೆ. ಆದ್ದರಿಂದ ನಿನ್ನಂತೆ ನಾನು ಸಾರ್ವಭೌಮನಾಗಿರುವುದಿಲ್ಲ. ಮುಂದೆ ನನ್ನಂತೆ ನೀನಿರಲು ಸಾಧ್ಯವಿಲ್ಲ.

ನ ಮಾತೃಪಿತೃಶುಶ್ರೂಷಾ ನ ಚ ದೈವತಪೂಜನಮ್ ।
ನಾನ್ಯೋ ಗುಣಸಮಾಚಾರಃ ಪುರುಷಸ್ಯ ಸುಖಾವಹಃ ॥೩೦॥

ಕಾಲನಿಂದ ಪೀಡಿತನಾದ ಮನುಷ್ಯನಿಗೆ ತಂದೆ-ತಾಯಿಗಳ ಸೇವೆ, ದೇವತಾ ಪೂಜೆ, ಸದ್ಗುಣ-ಸಮಾಚಾರಗಳು ಸುಖವನ್ನುಂಟು ಮಾಡವು. ಅವನನ್ನು ರಕ್ಷಿಸವು.

ನ ವಿದ್ಯಾ ನ ತಪೋ ದಾನಂ ನ ಮಿತ್ರಾಣಿ ನ ಬಾಂಧವಾಃ ।
ಶಕ್ನುವಂತಿ ಪರಿತ್ರಾತುಂ ನರಂ ಕಾಲೇನ ಪೀಡಿತಮ್ ॥೩೧॥

ವಿದ್ಯೆ, ತಪಸ್ಸು, ದಾನ, ಬಂಧು, ಮಿತ್ರ, ಹೀಗೆ ಯಾರೂ ಕಾಲಪೀಡಿತನನ್ನು ರಕ್ಷಿಸಲು ಸಮರ್ಥರಾಗುವುದಿಲ್ಲ.

ನಾಗಾಮಿನಮನರ್ಥಂ ಹಿ ಪ್ರತಿಘಾತಶತೈರಪಿ ।
ಶಕ್ನುವಂತಿ ಪ್ರತಿವ್ಯೋಢುಮೃತೇ ಬುದ್ಧಿಬಲಾನ್ನರಾಃ ॥೩೨॥

ಮನುಷ್ಯರು ಕಾಲಾಕ್ರಾಂತರಾದಾಗ ಬುದ್ಧಿಬಲದ ಜೊತೆಗೆ ನೂರಾರು ಪ್ರತೀಕಾರ ಕ್ರಮಗಳನ್ನು ಅನುಸರಿಸಿದರೂ ಅನರ್ಥವನ್ನು ನಿವಾರಿಸಿಕೊಳ್ಳಲು ಸಮರ್ಥರಾಗಲಾರರು.

ಪರ್ಯಾಯೈರ್ಹನ್ಯಮಾನಾನಾಂ ಪರಿತ್ರಾತಾ ನ ವಿದ್ಯತೇ ।
ಇದಂ ತು ದುಃಖಂ ಯಚ್ಚಕ್ರ ಕರ್ತಾಹಮಿತಿ ಮನ್ಯತೇ ॥೩೩॥

ಅವರವರ ಸರದಿಗೆ ತಕ್ಕಂತೆ ಹಿಂಸೆಗೆ ತುತ್ತಾಗುವವರನ್ನು ಯಾರೂ ರಕ್ಷಿಸಲಾರರು. ಹೀಗಿರುವಾಗ ಬಲಿಯ ದುರ್ಗತಿಗೆ ನಾನೇ ಕಾರಣನು ಎಂಬ ನಿನ್ನ ಅಹಂಕಾರವು ಶೋಚನೀಯವಾಗಿದೆ.

ಯದಿ ಕರ್ತಾ ಭವೇತ್ ಕರ್ತಾ ನ ಕ್ರಿಯೇತ ಕದಾಚನ ।
ಯಸ್ಮಾತ್ ಏಕ್ರಿಯತೇ ಕರ್ತಾ ತಸ್ಮಾತ್ ಕರ್ತಾಪ್ಯನೀಶ್ವರಃ ॥೩೪॥

ಒಂದು ವೇಳೆ ಕಾರ್ಯವನ್ನು ಮಾಡುವವನು ನಿಜವಾದ ಜೀವನೇ ಆಗಿದ್ದರೆ ಅಂತಹ ಜೀವನನ್ನು ಸೃಷ್ಟಿಸುವವರು ಬೇರೆ ಯಾರೂ ಇರುತ್ತಿರಲಿಲ್ಲ. ಇಂತಹ ಜೀವನಿಗೂ ಕಾರಣನಾದ ಭಗವಂತನು ಇರುವುದರಿಂದ, ಜೀವನು ಎಂದಿಗೂ ಈಶ್ವರನಾಗಲಾರ.

ಕಾಲೇನ ತ್ವಾಹಮಜಯಂ ಕಾಲೇನಾಹಂ ಜಿತಸ್ತ್ವಯಾ ।
ಗಂತಾ ಗತಿಮತಾಂ ಕಾಲಃ ಕಾಲಃ ಕಲಯತಿ ಪ್ರಜಾಃ ॥೩೫॥

ಕಾಲದ ಯೋಗದಿಂದ ನಾನು ನಿನ್ನನ್ನು ಜಯಿಸಿದ್ದೆ. ಅದೇ ಯೋಗದಿಂದ ನಾನು ನಿನ್ನಿಂದ ಪರಾಜಿತನಾದೆ. ಮುನ್ನಡೆಯುತ್ತಿರುವ ಪ್ರಾಣಿಗಳ ಜೊತೆಗೆ ಕಾಲವು ಸಾಗುತ್ತದೆ. ನಡೆಯುವ ಶಕ್ತಿಯನ್ನು ಕಾಲವೇ ನೀಡುತ್ತದೆ. ಎಲ್ಲವನ್ನೂ ಕೊಂಡೊಯ್ಯುವುದು ಕಾಲವೇ ಆಗಿದೆ. ಪ್ರಜೆಗಳ ಸಂಹಾರವನ್ನು ಕಾಲವೇ ಮಾಡುತ್ತದೆ.

ಇಂದ್ರ ಪ್ರಾಕೃತಯಾ ಬುದ್ಧ್ಯಾ ಪ್ರಲಪನ್ನಾವಬುಧ್ಯಸೇ ।
ಕೇಚಿತ್ತ್ವಾಂ ಬಹು ಮನ್ಯಂತೇ ಶೈಷ್ಯಂ ಪ್ರಾಪ್ತಂ ಸ್ವಕರ್ಮಣಾ ॥೩೬॥

ಇಂದ್ರನೇ, ಸಾಧಾರಣ ಬುದ್ಧಿಯುಳ್ಳವನು ನೀನು. ಆದ್ದರಿಂದ ನಿವಾರಿಸಲಾಗದ ವಿನಾಶದ ಬಗ್ಗೆ ತಿಳುವಳಿಕೆಯನ್ನು ಹೊಂದಿರುವುದಿಲ್ಲ. ಕೆಲವರು ಅಜ್ಞಾನಿಗಳು ಇಂದ್ರನು ತನ್ನ ಪರಾಕ್ರಮದಿಂದಲೇ ಔನ್ನತ್ಯವನ್ನು ಹೊಂದಿದ್ದಾನೆಂದು ಭಾವಿಸಿ ಗೌರವಿಸುತ್ತಾರೆ.

ಕಥಮಸ್ಮದ್ವಿಧೋ ನಾಮ ಜಾನಲ್ಲೋಕಪ್ರವತ್ತಯಃ ।
ಕಾಲೇನಾಭ್ಯಾಹತಃ ಶೋಚೇನ್ಮುಹ್ಯೇದ್ ವಾಪ್ಯರ್ಥಸಂಭ್ರಮೇ ॥೩೭॥

ಲೋಕದ ಪ್ರವೃತ್ತಿಗಳನ್ನು ಚೆನ್ನಾಗಿ ತಿಳಿದ ನನ್ನಂಥವನು ಕಾಲಪೀಡಿತನಾದ ನಿನ್ನ ವಿಷಯದಲ್ಲಿ ಅಥವಾ ನನ್ನ ವಿಷಯದಲ್ಲಿ ಶೋಕಿಸುವುದೂ ಇಲ್ಲ, ಮೋಹಕ್ಕೂ ತುತ್ತಾಗಲಾರ, ಭ್ರಾಂತನೂ ಆಗಲಾರ.

ನಿತ್ಯಂ ಕಾಲಪರೀತಸ್ಯ ಮಮ ವಾ ಮದ್ವಿಧಸ್ಯ ವಾ ।
ಬುದ್ಧಿರ್ವ್ಯಸನಮಾಸಾದ್ಯ ಭಿನ್ನಾ ನೌರಿವ ಸೀದತಿ ॥೩೮॥

ನಾನೇ ಆಗಲಿ, ಯಾರೇ ಆಗಲಿ, ಕಾಲಪೀಡಿತರಾದಾಗ ಅವರ ಬುದ್ಧಿಯು ದುಃಖದಲ್ಲಿ ಸಿಲುಕಿ ಭಿನ್ನವಾದ ಹಡಗಿನಂತೆ ಶಿಥಿಲವಾಗುತ್ತದೆ.

ಅಹಂ ಚ ತ್ವಂ ಚ ಯೇ ಚಾನ್ಯೇ ಭವಿಷ್ಯಂತಿ ಸುರಾಧಿಪಾಃ ।
ತೇ ಸರ್ವೇ ಶಕ್ರ ಯಾಸ್ಯಂತಿ ಮಾರ್ಗಮಿಂದ್ರಶತೈರ್ಗತಮ್ ॥೩೯॥

ನಾನೇ ಆಗಲಿ, ನೀನೇ ಆಗಲಿ, ಬೇರೆ ಯಾರೇ ಆಗಲಿ, ಒಳ್ಳೆಯ ಕಾಲ ಒದಗಿದಾಗ ದೇವತೆಗಳಿಗೆ ಅಧಿಪತಿಗಳಾಗುತ್ತಾರೆ. ಅವರೆಲ್ಲರೂ ಕಾಲಪೀಡಿತರಾಗಿ ಹಿಂದಿನ ನೂರಾರು ಇಂದ್ರರು ಹೋದ ಮಾರ್ಗವನ್ನೇ ಅನುಸರಿಸಿ ಹೋಗುತ್ತಾರೆ.

ತ್ವಾಮಪ್ಯೇವಂ ಸುದುರ್ಧರ್ಷಂ ಜ್ವಲಂತಂ ಪರಯಾ ಶ್ರಿಯಾ ।
ಕಾಲೇ ಪರಿಣತೇ ಕಾಲಃ ಕಾಲಯಿಷ್ಯತಿ ಮಾಮಿವ ॥೪೦॥

ನೀನು ಇಂದು ಶತ್ರುಗಳಿಂದ ಎದುರಿಸಲು ಅಸಾಧ್ಯನಾಗಿರುವಿ. ಶ್ರೇಷ್ಠವಾದ ಸಂಪತ್ತಿನಿಂದ ಜ್ವಲಿಸುತ್ತಿರುವಿ. ಆದರೆ ಕಾಲವು ಪಕ್ವವಾದ ಕೂಡಲೇ ಕಾಲ ಪುರುಷನು ನನ್ನನ್ನು ನಾಶಗೊಳಿಸಿದಂತೆ ನಿನ್ನನ್ನೂ ವಿನಾಶಗೊಳಿಸುತ್ತಾನೆ.

ಬಹೂನೀಂದ್ರಸಹಸ್ರಾಣಿ ದೈತೇಯಾನಾಂ ಯುಗೇ ಯುಗೇ ।
ಅಭ್ಯತೀತಾನಿ ಕಾಲೇನ ಕಾಲೋ ಹಿ ದುರತಿಕ್ರಮಃ ॥೪೧॥

ಪ್ರತಿಯುಗಗಳಲ್ಲಿಯೂ ಅರ್ಥಾತ್ ಪ್ರತಿ ಮನ್ವಂತರಗಳಲ್ಲಿಯೂ ನಿನ್ನಂತಹ ಇಂದ್ರರು ವ್ಯತ್ಯಾಸ ಹೊಂದುತ್ತಲೇ ಇರುತ್ತಾರೆ. ಇಲ್ಲಿಯ ತನಕ ದೇವತೆಗಳ ಗುಂಪಿಗೆ ನಿನ್ನಂತಹ ಸಾವಿರಾರು ಇಂದ್ರರು ರಾಜರಾಗಿ ಕಾಲವಶರಾಗಿ ಹೋಗಿದ್ದಾರೆ. ಕಾಲವನ್ನು ಅತಿಕ್ರಮಿಸಲು ನಿಶ್ಚಯವಾಗಿಯೂ ಅಸಾಧ್ಯವು.

ಇದಂ ತು ಲಬ್ಧ್ವಾ ತ್ವಂ ಸ್ಥಾನಮಾತ್ಮಾನಂ ಬಹು ಮನ್ಯಸೇ ।
ಸರ್ವಭೂತಭವಂ ದೇವಂ ಬ್ರಹ್ಮಾಣಮಿವ ಶಾಶ್ವತಮ್ ॥೪೨॥

ನ ಚೇದಮಚಲಂ ಸ್ಥಾನಮನಂತಂ ವಾಪಿ ಕಸ್ಯಚಿತ್ ।
ತ್ವಂ ತು ಬಾಲಿಶಯಾ ಬುದ್ಧ್ಯಾ ಮಮೇದಮಿತಿ ಮನ್ಯಸೇ ॥೪೩॥

ಇಂತಹ ಅಶಾಶ್ವತ ಸ್ಥಾನ ಗಳಿಸಿರುವ ನೀನು ನಿನ್ನನ್ನು ಸೃಷ್ಟಿಕರ್ತನಾದ, ದೇವದೇವನಾದ, ಶಾಶ್ವತನಾದ ಬ್ರಹ್ಮನಂತೆ ಮಹಾತ್ಮನೆಂದು ಭಾವಿಸಿಕೊಂಡಿರುವಿ. ಈ ಇಂದ್ರಪದವಿಯು ಯಾರಿಗೂ ಸ್ಥಿರವಾದುದಲ್ಲ. ಅನಂತಕಾಲೀನವಲ್ಲ. ನೀನು ಮೂಢಬುದ್ಧಿಯಿಂದ ಇಂದ್ರಪದವಿಯು ಶಾಶ್ವತವೆಂದು ಭಾವಿಸಿರುವಿ.

ಅವಿಶ್ವಾಸ್ಯೇ ವಿಶ್ವಸಿಷಿ ಮನ್ಯಸೇ ಚಾಧ್ರುವಂ ಧ್ರುವಮ್ ।
ಮಮೇಯಮಿತಿ ಮೋಹಾತ್ತ್ವಂ ರಾಜಶ್ರಿಯಮಭೀಪ್ಸಸಿ ॥೪೪॥

ಎಲ್ಲಿ ವಿಶ್ವಾಸವಿಡಬಾರದೋ ಅಲ್ಲಿ, ಅಂತಹ ವೈಭವದ ವಿಷಯದಲ್ಲಿ ವಿಶ್ವಾಸವನ್ನಿಟ್ಟಿರುವಿ. ಅಶಾಶ್ವತ ಇಂದ್ರಪದವಿಯನ್ನು ಶಾಶ್ವತವೆಂದು ಭಾವಿಸಿರುವಿ. ಕಾಲಪುರುಷನಿಂದ ಆಕ್ರಾಂತನಾದ ವ್ಯಕ್ತಿಯು ಈ ರೀತಿ ವಿಪರೀತ ಭ್ರಮೆಗೆ ತುತ್ತಾಗುತ್ತಾನೆ.

ನೇಯಂ ತವ ನ ಚಾಸ್ಮಾಕಂ ನ ಚಾನ್ಯೇಷಾಂ ಸ್ಥಿರಾ ಮತಾ ।
ಅತಿಕ್ರಮ್ಯ ಬಹೂನನ್ಯಾಂಸ್ತ್ವಯಿ ತಾವದಿಯಂ ಸ್ಥಿತಾ ॥೪೫॥

ಈ ರಾಜಶ್ರೀಯು ನಿನ್ನದ್ದಲ್ಲ, ನನ್ನದ್ದೂ ಅಲ್ಲ. ಇತರರಲ್ಲಿಯೂ ಇರುವುದಲ್ಲ. ಚಂಚಲ ಸ್ವಭಾವದ ರಾಜ್ಯಲಕ್ಷ್ಮಿಯು ಅನೇಕ ಇಂದ್ರರನ್ನು ಅತಿಕ್ರಮಿಸಿ ಈಗ ನಿನ್ನ ಬಳಿ ಬಂದಿರುತ್ತಾಳೆ.

ಕಂಚಿತ್ ಕಾಲಮಿಯಂ ಸ್ಥಿತ್ವಾ ತ್ವಯಿ ವಾಸವ ಚಂಚಲಾ ।
ಗೌರ್ನಿಪಾನಮಿವೋತ್ಸೃಜ್ಯ ಪುನರನ್ಯಂ ಗಮಿಷ್ಯತಿ ॥೪೬॥

ಸ್ವಲ್ಪ ಸಮಯ ನಿನ್ನ ಬಳಿ ಇದ್ದು ಹಸುವು ನೀರುಂಡ ಬಳಿಕ ಜಲಾಶಯವನ್ನು ತೊರೆದು ಹೋಗುವಂತೆ ನಿನ್ನನ್ನು ತ್ಯಜಿಸಿ ಮತ್ತೊಬ್ಬರ ಬಳಿ ಹೋಗುತ್ತಾಳೆ.

ರಾಜಲೋಕಾ ಹ್ಯತಿಕ್ರಾಂತಾ ಯಾನ್ನ ಸಂಖ್ಯಾತುಮುತ್ಸಹೇ ।
ತ್ವತ್ತೋ ಬಹುತರಾಶ್ಚಾನ್ಯೇ ಭವಿಷ್ಯಂತಿ ಪುರಂದರ ॥೪೭॥

ರಾಜ್ಯಲಕ್ಷ್ಮಿಯು ಇಲ್ಲಿಯ ತನಕ ಎಷ್ಟು ಮಂದಿ ರಾಜರನ್ನು ಬಿಟ್ಟು ಹೋಗಿದ್ದಾಳೆಂದು ಎಣಿಕೆ ಮಾಡಲಾಗದು. ನಿನ್ನ ಬಳಿಕವೂ ಅನೇಕ ಇಂದ್ರರು ಸಾಲಾಗಿ ನಿಂತಿದ್ದಾರೆ.

ಸವೃಕ್ಷೌಷಧಿರತ್ನೇಯಂ ಸಸರಿತ್ಪರ್ವತಾಕರಾ ।
ತಾನಿದಾನೀಂ ನ ಪಶ್ಯಾಮಿ ಯೈರ್ಭುಕ್ತೇಯಂ ಪುರಾ ಮಹೀ ॥೪೮॥

ವೃಕ್ಷಗಳಿಂದ, ಔಷಧಿ ಲತೆಗಳಿಂದ, ಅನೇಕ ವಿಧ ವಜ್ರ-ವೈಡೂರ್ಯಾದಿಗಳಿಂದ, ಪ್ರಾಣಿಗಳಿಂದ, ವನಗಳಿಂದ ಸಮೃದ್ಧಳಾದ ಈ ಭೂಮಿಯನ್ನು ಉಪಭೋಗಿಸಿದ

ಸಾವಿರಾರು ರಾಜರು ಈಗ ಕಾಣಿಸುತ್ತಿಲ್ಲ. ಆದರೆ ಕೆಲವರ ಹೆಸರನ್ನು ಮಾತ್ರ ಹೇಳುತ್ತೇನೆ.

ಪೃಥುರ್ಐಲೋ ಮಯೋ ಭೌಮೋ ನರಕಃ ಶಂಬರಸ್ತಥಾ ।
ಅಶ್ವಗ್ರೀವಃ ಪುಲೋಮಾ ಚ ಸ್ವರ್ಭಾನುರಮಿತಧ್ವಜಃ ॥೪೯॥

ಪ್ರಹ್ಲಾದೋ ನಮುಚಿರ್ದಕ್ಷೋ ವಿಪ್ರಚಿತ್ತಿರ್ವಿರೋಚನಃ ।
ಹ್ರೀನಿಷೇಧಃ ಸುಹೋತ್ರಶ್ಚ ಭೂರಿಹಾ ಪುಷ್ಪವಾನ್ ವೃಷಃ ॥೫೦॥

ಸತ್ಯೇಷುರ್ಋಷಭೋ ರಾಹುಃ ಕಪಿಲಾಶ್ವೋ ವಿರೂಪಕಃ ।
ಬಾಣಃ ಕಾರ್ತಸ್ವರೋ ವಹ್ನಿರ್ವಿಶ್ವದಂಷ್ಟ್ರೋಽಥ ನೈರ್ಋತಃ ॥೫೧॥

ರಿತ್ಥಾಹುತ್ಥೌ ವೀರತಾಮ್ರೌ ವರಾಹಾಶ್ವೋ ರುಚಿಃ ಪ್ರಭುಃ ।
ವಿಶ್ವಜಿತ್ ಪ್ರತಿಶೌರಿಶ್ಚ ವೃಷಾಂಡೋ ವಿಷ್ಕರೋ ಮಧುಃ ॥೫೨॥

ಹಿರಣ್ಯಕಶಿಪುಶ್ಚೈವ ಕೈಟಭಶ್ಚೈವ ದಾನವಃ ।
ದೈತ್ಯಾಶ್ಚ ಕಾಲಖಂಜಶ್ಚ ಸರ್ವೇ ತೇ ನೈರ್ಋತೈಃ ಸಹ ॥೫೩॥

ಪೃಥು, ಇಲಾ ಪುತ್ರನಾದ ಪುರೂರವ, ಮಯ, ಭೀಮ, ನರಕಾಸುರ, ಶಂಬರಾಸುರ, ಅಶ್ವಗ್ರೀವ, ಪುಲೋಮ, ಸ್ವರ್ಭಾನು, ಅಮಿತಧ್ವಜ, ಪ್ರಹ್ಲಾದ, ನಮುಚಿ, ದಕ್ಷ, ವಿಪ್ರಚಿತ್ತಿ , ವಿರೋಚನ, ಹ್ರೀನಿಷೇಧ, ಸುಹೋತ್ರ , ಭೂರಿಹಾ, ಪುಷ್ಪವಂತ, ವೃಷ, ಸತ್ಯೇಷು, ಋಷಭ, ರಾಹು, ಕಪಿಲಾಶ್ವ, ವಿರೂಪಕ, ಬಾಣ, ಕಾರ್ತಸ್ವರ, ವಹ್ನಿ, ವಿಶ್ವದಂಷ್ಟ್ರ, ನೈರ್ಋತಿ, ರಿತ್ಥ, ಆಹುತ್ಥ, ವೀರ, ತಾಮ್ರ , ವರಾಹಾಶ್ವ, ರುಚಿ, ವಿಶ್ವಜಿತ್, ಪ್ರತಿಶೌರಿ, ವೃಷಾಂಡ, ವಿಷ್ಕರ, ಮಧು, ಹಿರಣ್ಯಕಶಿಪು, ಕೈಟಭ- ಇವರು ಇನ್ನೂ ಅನೇಕ ದೈತ್ಯ-ದಾನವ ರಾಕ್ಷಸರು ಈ ಭೂಮಿಗೆ ಒಡೆಯರಾಗಿದ್ದರು.

ಏತೇ ಚಾನ್ಯೇ ಚ ಬಹವಃ ಪೂರ್ವೇ ಪೂರ್ವತರಾಶ್ಚ ಯೇ ।
ದೈತ್ಯೇಂದ್ರಾ ದಾನವೇಂದ್ರಾಶ್ಚ ಯಾಂಶ್ಚಾನ್ಯಾನನುಶುಶ್ರುಮ ॥೫೪॥

ಬಹವಃ ಪೂರ್ವದೈತ್ಯೇಂದ್ರಾಃ ಸಂತ್ಯಜ್ಯ ಪೃಥಿವೀಂ ಗತಾಃ ।
ಕಾಲೇನಾಭ್ಯಾಹತಾಃ ಸರ್ವೇ ಕಾಲೋ ಹಿ ಬಲವತ್ತರಃ ॥೫೫॥

ಹಿಂದೆ ಮತ್ತು ಅದಕ್ಕಿಂತಲೂ ಹಿಂದಿನ ರಾಜರೇ ಅಲ್ಲದೆ ನಾವು ಕೇಳಿದ ಅನೇಕ ದೈತ್ಯೇಂದ್ರರು, ದಾನವೇಂದ್ರರು ಕಾಲಪೀಡಿತರಾಗಿ ಪೃಥಿವಿಯನ್ನು ಬಿಟ್ಟು ಹೋಗಿದ್ದಾರೆಂದು ಕೇಳಿದ್ದೇವೆ. ಕಾಲವು ಮಹಾಬಲಿಷ್ಠವಾದುದು. ಯಾರನ್ನೂ ಶಾಶ್ವತವಾಗಿ ಈ ಭೂಮಿಯಲ್ಲಿರಲು ಬಿಡುವುದಿಲ್ಲ.

ಸರ್ವೈಃ ಕ್ರತುಶತೈರಿಷ್ಟಂ ನ ತ್ವಮೇಕಃ ಶತಕ್ರತುಃ ।
ಸರ್ವೇ ಧರ್ಮಪರಾಶ್ಚಾಸನ್ ಸರ್ವೇ ಸತತಸತ್ರಿಣಃ ॥೫೬॥

ಇಂದ್ರನೇ, ನೂರು ಅಶ್ವಮೇಧ ಯಾಗಗಳನ್ನು ನಾನೊಬ್ಬನೇ ಮಾಡಿದ್ದೇನೆಂದು ಭಾವಿಸಬೇಡ. ನಾನು ಹೇಳಿದ ಇವರೆಲ್ಲರೂ ನೂರು ಅಶ್ವಮೇಧ ಯಾಗಗಳನ್ನು ಮಾಡಿದವರೇ ಆಗಿದ್ದಾರೆ. ಎಲ್ಲರೂ ಧರ್ಮಪರಾಯಣರಾಗಿದ್ದವರು. ಎಲ್ಲರೂ ನಿರಂತರ ಸತ್ರಯಾಗದಲ್ಲಿಯೇ ನಿರತರಾದವರು.

ಅಂತರಿಕ್ಷಚರಾಃ ಸರ್ವೇ ಸರ್ವೇऽಭಿಮುಖಯೋಧಿನಃ ।
ಸರ್ವೇ ಸಂಹನನೋಪೇತಾಃ ಸರ್ವೇ ಪರಿಘಬಾಹವಃ ॥೫೭॥

ಎಲ್ಲರೂ ಅಂತರಿಕ್ಷದಲ್ಲಿ ಪ್ರಯಾಣ ಮಾಡುವ ಸಾಮರ್ಥ್ಯವನ್ನು ಹೊಂದಿದ್ದರು. ಶತ್ರುಗಳಿಗೆ ಅಭಿಮುಖವಾಗಿ ನಿಂತು ಯುದ್ಧವನ್ನು ಮಾಡುತ್ತಿದ್ದರು. ಅವರು ಶರೀರ ದಾರ್ಢ್ಯವುಳ್ಳವರಾಗಿದ್ದರು. ಬಾಹುಗಳೆಲ್ಲ ಪರಿಘಾಯುಧಕ್ಕೆ ಸಮಾನವಾಗಿದ್ದವು.

ಸರ್ವೇ ಮಾಯಾಶತಧರಾಃ ಸರ್ವೇ ತೇ ಕಾಮಚಾರಿಣಃ ।
ಸರ್ವೇ ಸಮರಮಾಸಾದ್ಯ ನ ಶ್ರೂಯಂತೇ ಪರಾಜಿತಾಃ ॥೫೮॥

ಎಲ್ಲರೂ ನೂರಾರು ಮಾಯೆಗಳನ್ನು ತಿಳಿದವರಾಗಿದ್ದರು. ತಮಗೆ ಬೇಕಾದಂತಹ ರೂಪಗಳನ್ನು ಧರಿಸುವವರಾಗಿದ್ದರು. ಎಲ್ಲರೂ ಯುದ್ಧವನ್ನು ಹೊಂದಿ ಪರಾಜಿತರೇ ಆಗಿ ಹೋಗಿದ್ದರು ಎಂದು ಕೇಳಿದ್ದೇವೆ.

ಸರ್ವೇ ಸತ್ಯವ್ರತಪರಾಃ ಸರ್ವೇ ಕಾಮವಿಹಾರಿಣಃ ।
ಸರ್ವೇ ವೇದವ್ರತಪರಾಃ ಸರ್ವೇ ಚಾಸನ್ ಬಹುಶ್ರುತಾಃ ॥೫೯॥

ಎಲ್ಲರೂ ಸತ್ಯವ್ರತನಿಷ್ಠರಾಗಿದ್ದರು. ಇಚ್ಛಾನುಸಾರಿಗಳಾಗಿ ಮನಬಂದಂತೆ ಸಂಚರಿಸುತ್ತಿದ್ದರು. ವೇದವ್ರತಪರರೂ, ಅನೇಕ ಶಾಸ್ತ್ರವಿದ್ವಾಂಸರೂ ಆಗಿದ್ದರು.

ಸರ್ವೇ ಸಂಹತಮೈಶ್ವರ್ಯಮೀಶ್ವರಾಃ ಪ್ರತಿಪೇದಿರೇ ।
ನ ಚೈಶ್ವರ್ಯಮದಸ್ತೇಷಾಂ ಭೂತಪೂರ್ವೋ ಮಹಾತ್ಮನಾಮ್ ॥೬೦॥

ಲೋಕೇಶ್ವರರಾದ ಅವರೆಲ್ಲರೂ ಮನಸ್ಸಿನಲ್ಲಿ ಬಯಸಿದ ಐಶ್ವರ್ಯವನ್ನು ಹೊಂದಿದವರಾಗಿದ್ದರು. ಆದರೆ ಮಹಾತ್ಮರಾದ ಅವರಿಗೆ ಐಶ್ವರ್ಯಮದವೆಂಬುದು ಬಂದಿರಲಿಲ್ಲ.

ಸರ್ವೇ ಯಥಾರ್ಹದಾತಾರಃ ಸರ್ವೇ ವಿಗತಮತ್ಸರಾಃ ।
ಸರ್ವೇ ಸರ್ವೇಷು ಭೂತೇಷು ಯಥಾವತ್ ಪ್ರತಿಪೇದಿರೇ ॥೬೧॥

ಅವರೆಲ್ಲರೂ ಯಥಾಯೋಗ್ಯವಾಗಿ ದಾನವನ್ನು ಮಾಡುತ್ತಿದ್ದರು. ಮಾತ್ಸರ್ಯದಿಂದ ದೂರವಾಗಿದ್ದರು. ಎಲ್ಲಾ ಪ್ರಾಣಿಗಳ ವಿಷಯದಲ್ಲಿ ಯೋಗ್ಯವಾಗಿ ವ್ಯವಹರಿಸುತ್ತಿದ್ದರು.

ಸರ್ವೇ ದಾಕ್ಷಾಯಣೇಪುತ್ರಾಃ ಪ್ರಾಜಾಪತ್ಯಾ ಮಹಾಬಲಾಃ ।
ಜ್ವಲಂತಃ ಪ್ರತ್ತಪಂತಶ್ಚ ಕಾಲೇನ ಪ್ರತಿಸಂಹೃತಾಃ ॥೬೨॥

ಅವರೆಲ್ಲರೂ ದಕ್ಷಕನ್ಯೆಯರ ಗರ್ಭದಲ್ಲೇ ಜನ್ಮವನ್ನು ತಾಳಿದ್ದರು. ಮಹಾಬಲಿಷ್ಠರಾದ ಅವರೆಲ್ಲರೂ ಕಶ್ಯಪ ಪ್ರಜಾಪತಿಯ ಸುತರಾಗಿದ್ದರು.

ತ್ವಂ ಚೈವೇಮಾಂ ಯದಾ ಭುಕ್ತ್ವಾ ಪೃಥಿವೀಂ ತ್ಯಕ್ಷ್ಯಸೇ ಪುನಃ ।
ನ ಶಕ್ಷ್ಯಸಿ ತದಾ ಶಕ್ರ ನಿಯಂತುಂ ಶೋಕಮಾತ್ಮನಃ ॥೬೩॥

ಮುಂಚೇಚ್ಛಾಂ ಕಾಮಭೋಗೇಷು ಮುಂಚೇಮಂ ಶ್ರೀಭವಂ ಮದಮ್ ।
ಏವಂ ಸ್ವರಾಜ್ಯನಾಶೇ ತ್ವಂ ಶೋಕಂ ಸಂಪ್ರಸಹಿಷ್ಯಸಿ ॥೬೪॥

ಎಲ್ಲಾ ರಾಜರೂ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದರು. ಶತ್ರುಗಳಿಗೆ ದುಃಖವನ್ನುಂಟು ಮಾಡುತ್ತಿದ್ದರು. ಅವರೆಲ್ಲರೂ ಕಾಲಿಕವಾಗಿ ಕಾಲನ ಪ್ರಭಾವದಿಂದ ಸಂಹೃತರಾದರು. ನೀನಾದರೂ ಈ ವಿಸ್ತಾರವಾದ ರಾಜ್ಯವನ್ನು ಉಪಭೋಗಿಸುತ್ತಿರುವಿ. ಕಾಲನ ಅತಿಕ್ರಮಣ ಆದಾಗ ನೀನೂ ಬಿಡಬೇಕಾಗುತ್ತದೆ. ಇದನ್ನು ಅರ್ಥ ಮಾಡಿಕೊಂಡು ಸಂಪತ್ತಿನಿಂದ ಉತ್ಪನ್ನವಾಗುವ ಮದವನ್ನು ತ್ಯಜಿಸು. ಇದನ್ನು ಅರ್ಥಮಾಡಿಕೊಳ್ಳಲಾಗಿದ್ದಲ್ಲಿ ನಿನ್ನ ಹೃದಯದಲ್ಲಿ ಹುಟ್ಟುವ ದುಃಖವನ್ನು

ನಿಯಂತ್ರಿಸಿಕೊಳ್ಳಲು ನೀನು ಸಮರ್ಥನಾಗುವುದಿಲ್ಲ. ನಿನ್ನ ರಾಜ್ಯನಾಶವಾದಾಗ ನೀನೂ ಶೋಕದಲ್ಲಿ ಬೆಂದು ಹೋಗುತ್ತಿ.

ಶೋಕಕಾಲೇ ಶುಚೋ ಮಾ ತ್ವಂ ಹರ್ಷಕಾಲೇ ಚ ಮಾ ಹೃಷಃ ।
ಅತೀತಾನಾಗತೇ ಹಿತ್ವಾ ಪ್ರತ್ಯುತ್ಪನ್ನೇನ ವರ್ತಯ ॥೬೫॥

ಶೋಕಕಾಲವು ಬಂದಾಗ ದುಃಖವನ್ನು ಹೊಂದಬೇಡ. ಹರ್ಷಕಾಲದಲ್ಲಿ ಸಂತೋಷ ಹೊಂದಬೇಡ. ಕಳೆದದ್ದನ್ನು, ಬಾರದಿದ್ದನ್ನು ಯೋಚಿಸದೆ ವರ್ತಮಾನ ಕಾಲದಲ್ಲಿ ಸಿಕ್ಕಿದ್ದರೆ ಪ್ರಾಮಾಣಿಕವಾಗಿ ವರ್ತಿಸು.

ಮಾಂ ಚೇದಭ್ಯಾಗತಃ ಕಾಲಃ ಸದಾಯುಕ್ತಮತಂದ್ರಿತಮ್ ।
ಕ್ಷಮಸ್ವ ನಚಿರಾದಿಂದ್ರ ತ್ವಾಮಪ್ಯುಪಗಮಿಷ್ಯತಿ ॥೬೬॥

ನಾನು ನಿದ್ರಾಲಸ್ಯಗಳಿಲ್ಲದೆ ಸದಾ ಸತ್ಕರ್ಮಗಳಲ್ಲಿಯೇ ರತನಾಗಿದ್ದೆನು. ಆದರೂ ಕಾಲನು ನನ್ನನ್ನು ಅತಿಕ್ರಮಿಸಿದನು. ಇಂದ್ರನೇ, ನೀನೂ ತಡೆದುಕೊ. ನಿನ್ನನ್ನೂ ಕಾಲವು ಅತಿಕ್ರಮಿಸುತ್ತದೆ.

ತ್ರಾಸಯನ್ನಿವ ದೇವೇಂದ್ರ ವಾಗ್ಭಿಸ್ತಕ್ಷಸಿ ಮಾಮಿಹ ।
ಸಂಯತೇ ಮಯಿ ನೂನಂ ತ್ವಮಾತ್ಮಾನಂ ಬಹು ಮನ್ಯಸೇ ॥೬೭॥

ದೇವೇಂದ್ರನೇ, ಸಂತಾಪವನ್ನುಂಟು ಮಾಡುವ ಮಾತುಗಳಿಂದ ನೀನು ನನ್ನನ್ನು ಚುಚ್ಚುತ್ತಿರುವೆ. ನಾನು ನನ್ನ ಮನಸ್ಸನ್ನು ನಿಗ್ರಹಿಸಿಕೊಂಡು ಶಾಂತನಾಗಿದ್ದೇನೆ. ಇದರಿಂದಲೇ ನೀನು ನನ್ನನ್ನು ಮಹಾಮಹಿಮನೆಂದು ಭಾವಿಸಿಕೊಳ್ಳುತ್ತಿರುವೆ.

ಕಾಲಃ ಪ್ರಥಮಮಾಯಾನ್ಮಾಂ ಪಶ್ಚಾತ್ತ್ವಾಮನುಧಾವತಿ ।
ತೇನ ಗರ್ಜಸಿ ದೇವೇಂದ್ರ ಪೂರ್ವಂ ಕಾಲಹತೇ ಮಯಿ ॥೬೮॥

ಕಾಲನು ಮೊದಲು ನನ್ನನ್ನು ಅತಿಕ್ರಮಿಸಿದ್ದಾನೆ. ಅದೇ ಕಾಲನು ನಿನ್ನನ್ನು ಬೆನ್ನಟ್ಟಿ ಬರುತ್ತಾನೆ. ಕಾಲಪೀಡಿತನಾಗಿಯೇ ನಿಂತ ನನ್ನ ಬಳಿ ನೀನು ಗರ್ಜನೆ ಮಾಡುತ್ತಿರುವಿ.

ಕೋ ಹಿ ಸ್ಥಾತುಮಲಂ ಲೋಕೇ ಕ್ರುದ್ಧಸ್ಯ ಮಮ ಸಂಯುಗೇ ।
ಕಾಲಸ್ತು ಬಲವಾನ್ ಪ್ರಾಪ್ತಸ್ತೇನ ತಿಷ್ಠಸಿ ವಾಸವ ॥೬೯॥

ಇಂದ್ರನೇ, ಕ್ರುದ್ಧನಾಗಿ ಯುದ್ಧಕ್ಕೆ ನಿಂತ ನನ್ನ ಮುಂದೆ ಯಾರು ತಾನೇ ನಿಲ್ಲಲು ಸಮರ್ಥರಾಗಿದ್ದರು? ಆದರೆ ಕಾಲನು ಮಹಾಬಲಿಷ್ಠನು. ಅವನು ನನ್ನ ಬಲ ಪರಾಕ್ರಮಗಳನ್ನು ನಾಶ ಮಾಡಿದ್ದಾನೆ. ಆದ್ದರಿಂದಲೇ ನೀನು ನನ್ನ ಮುಂದೆ ಧೈರ್ಯವಾಗಿ ನಿಂತಿರುವಿ.

ಯತ್ತದ್ವರ್ಷಸಹಸ್ರಾಂತಂ ಪೂರ್ಣಂ ಭವಿತುಮರ್ಹತಿ ।
ಯಥಾ ಮೇ ಸರ್ವಗಾತ್ರಾಣಿ ನಸ್ವಸ್ಥಾನಿ ಹತೌಜಸಃ ॥೭೦॥

ದೇವತೆಗಳ ಒಂದು ಸಾವಿರ ವರ್ಷ ಮುಗಿಯುವ ತನಕ ನೀನು ಇಂದ್ರಪದವಿಯಲ್ಲಿ ಇರಲು ಅರ್ಹನಾಗಿರುವಿ. ಬಳಿಕ ಕಾಲನ ಪ್ರಭಾವದಿಂದ ಮಹಾಪರಾಕ್ರಮಿಯಾದ ನನ್ನ ಅಂಗಾಂಗಗಳು ಶೈಥಿಲ್ಯವನ್ನು ಹೊಂದಿದ್ದಾವೋ, ತೇಜಸ್ಸಿನಿಂದ ಹೀನವಾಗಿದ್ದಾವೋ;

ಅಹಮೈಂದ್ರಚ್ಚ್ಯುತಃ ಸ್ಥಾನಾತ್ತ್ವಮಿಂದ್ರಃ ಪ್ರಕೃತೋ ದಿವಿ ।
ಸುಚಿತ್ರೇ ಜೀವಲೋಕೇಽಸ್ಮಿನ್ನುಪಾಸ್ಯಃ ಕಾಲಪರ್ಯಯಾತ್ ॥೭೧॥

ಇಂದ್ರಪದವಿಯಿಂದ ನಾನು ಹೇಗೆ ಚ್ಯುತನಾಗಿದ್ದೇನೋ ಇದರಂತೆ ಇಂದ್ರ ಪದವಿಯಲ್ಲಿರುವ ನಿನಗೂ ಈ ಅವಸ್ಥೆಗಳು ಒದಗಿ ಬರುತ್ತವೆ. ವಿಚಿತ್ರವಾದ ಈ ಜೀವಲೋಕದಲ್ಲಿ ಕಾಲದ ವೈಪರೀತ್ಯದಿಂದಲೇ ನೀನು ಎಲ್ಲರಿಂದಲೂ ಆರಾಧ್ಯನಾಗಿರುವಿ.

ಕಿಂ ಹಿ ಕೃತ್ವಾ ತ್ವಮಿಂದ್ರೋಽದ್ಯ ಕಿಂ ಹಿ ಕೃತ್ವಾ ಚ್ಯುತಾ ವಯಮ್ ।
ಕಾಲಃ ಕರ್ತಾ ವಿಕರ್ತಾ ಚ ಸರ್ವಮನ್ಯದಕಾರಣಮ್ ॥೭೨॥

ಇಂದ್ರನೇ, ನೀನು ಯಾವ ಸತ್ಕರ್ಮದಿಂದ ಈ ಇಂದ್ರಪದವಿಯನ್ನು ಹೊಂದಿರುವಿ ಬಲ್ಲೆಯಾ? ನಾವು ಯಾವ ಅಸತ್ಕರ್ಮದಿಂದ ಇಂದ್ರಪದವಿಯಿಂದ ಪತನ ಹೊಂದಿದೆವು, ಬಲ್ಲೆಯಾ? ಮನುಷ್ಯರ ಅಭ್ಯುದಯ- ಪತನಗಳಿಗೆ ಕಾಲನೇ ಕರ್ತೃವಾಗಿದ್ದಾನೆ. ಬೇರೆ ಎಲ್ಲವೂ ಕೇವಲ ನಿಮಿತ್ತ ಮಾತ್ರ. ಕರ್ತಾ, ವಿಕರ್ತಾ ಎಲ್ಲವೂ ಕಾಲನೇ ಆಗಿದ್ದಾನೆ.

ನಾಶಂ ವಿನಾಶಮೈಶ್ವರ್ಯಂ ಸುಖದುಃಖೇ ಭವಾಭವೌ ।
ವಿದ್ವಾನ್ ಪ್ರಾಪ್ಯೈವಮತ್ಯರ್ಥಂ ನ ಪ್ರಹಷ್ಯೇನ್ನ ಚ ವ್ಯಥೇತ್ ॥೭೩॥

ವಿದ್ವಾಂಸರು ನಾಶ, ವಿನಾಶ, ಐಶ್ವರ್ಯ, ಸುಖ-ದುಃಖ, ಹುಟ್ಟು-ಸಾವು ಇವುಗಳನ್ನು ಹೊಂದುತ್ತಿರಲು ಬಹಳ ಸಂತೋಷಕ್ಕೂ ಅಣಿಯಾಗಬಾರದು, ಬಹಳ ಶೋಕಿಸಲೂ ಬಾರದು.

ತ್ವಮೇವ ಹೀಂದ್ರ ವೇತ್ಥಾಸ್ಮಾನ್ ವೇದಾಹಂ ತ್ವಾಂ ಚ ವಾಸವ ।
ವಿಕತ್ಥಸೇ ಮಾಂ ಕಿಂ ಬದ್ಧಂ ಕಾಲೇನ ನಿರಪತ್ರಪ ॥೭೪॥

ಇಂದ್ರನೇ, ನಾವು ಯಾರೆಂಬುದನ್ನು ನೀನು ಚೆನ್ನಾಗಿ ತಿಳಿದಿರುವಿ. ನೀನು ಯಾರೆಂಬುದನ್ನು ನಾವು ಬಲ್ಲೆವು. ಹೀಗಿದ್ದರೂ ನೀನು ನಾಚಿಕೆಯಿಲ್ಲದೆ ಗರ್ವ ಪಡುತ್ತಿರುವಿ. ನೀನು ಕಾಲನಿಂದ ಬದ್ಧನಲ್ಲವೆ? ಯೋಚಿಸು.

ತ್ವಮೇವ ಹಿ ಪುರಾ ವೇತ್ಥ ಯತ್ತದಾ ಪೌರುಷಂ ಮಮ ।
ಸಮರೇಷು ಚ ವಿಕ್ರಾಂತಂ ಪರ್ಯಾಪ್ತಂ ತನ್ನಿದರ್ಶನಮ್ ॥೭೫॥

ನನ್ನಲ್ಲಿ ಯಾವ ಪೌರುಷವಿತ್ತು ಎಂಬುದನ್ನು ನೀನೇ ಅರಿತಿರುವಿ. ನಾನು ಸಮರದಲ್ಲಿ ಪರಾಕ್ರಮಿಯಾಗಿದ್ದೆ ಎನ್ನಲು ಒಂದು ನಿದರ್ಶನ ಸಾಕು.

ಆದಿತ್ಯಾಶ್ಚೈವ ರುದ್ರಾಶ್ಚ ಸಾಧ್ಯಾಶ್ಚ ವಸುಭಿಃ ಸಹ ।
ಮಯಾ ವಿನಿರ್ಜಿತಾಃ ಸರ್ವೇ ಮರುತಶ್ಚ ಶಚೀಪತೇ ॥೭೬॥

ತ್ವಮೇವ ಶಕ್ರ ಜಾನಾಸಿ ದೇವಾಸುರಸಮಾಗಮೇ ।
ಸಮೇತಾ ವಿಬುಧಾ ಭಗ್ನಸ್ತರಸಾ ಸಮರೇ ಮಯಾ ॥೭೭॥

ಶಚೀಪತಿಯೇ, ದೇವ-ದೈತ್ಯರಿಗೆ ಯುದ್ಧ ನಡೆದಾಗ ನಾನು ಏಕಾಕಿಯಾಗಿ ದ್ವಾದಶಾದಿತ್ಯರನ್ನು, ಏಕಾದಶ ರುದ್ರರನ್ನು, ಸಾಧ್ಯರನ್ನು, ವಸುಗಳನ್ನು, ಮರುತ್ತುಗಳನ್ನು ಪರಾಜಯಗೊಳಿಸಿದ್ದೆನು. ಅದು ನಿನಗೂ ತಿಳಿದಿದೆ. ಒಟ್ಟಾಗಿ ಯುದ್ಧಕ್ಕೆ ಬಂದಿದ್ದ ಎಲ್ಲಾ ದೇವತೆಗಳು ನನ್ನಿಂದ ಭಗ್ನಗೊಂಡ ವಿಷಯ ನಿನಗೂ ತಿಳಿದಿದೆ.

ಪರ್ವತಾಶ್ಚಾಸಕೃತ್ ಕ್ಷಿಪ್ತಾಃ ಸವನಾಃ ಸವನೌಕಸಃ ।
ಸಟಂಕಶಿಖರಾ ಘೋರಾಃ ಸಮರೇ ಮೂರ್ಧ್ನಿ ತೇ ಮಯಾ ॥೭೮॥

ವನಗಳಿಂದಲೂ, ವನವಾಸಿಗಳಿಂದಲೂ ಕೂಡಿದ ನೂರಾರು ಪರ್ವತಗಳನ್ನೇ ಎತ್ತಿ ನಾನು ದೇವತೆಗಳ ಕಡೆ ಎಸೆಯುತ್ತಿದ್ದೆನು. ಆ ಸಮಯದಲ್ಲಿ ನಿನ್ನ ತಲೆಯ ಮೇಲೆ ಅಪ್ಪಳಿಸಿದ ಎಷ್ಟೋ ಶಿಖರಗಳು ಭಿನ್ನವಾಗಿ ಹೋಗಿವೆ.

ಕಿಂ ನು ಶಕ್ಯಂ ಮಯಾ ಕರ್ತುಂ ಯತ್ಕಾಲೋ ದುರತಿಕ್ರಮಃ ।
ನ ಹಿ ತ್ವಾಂ ನೋತ್ಸಹೇ ಹಂತುಂ ಸವಜ್ರಮಪಿ ಮುಷ್ಟಿನಾ ॥೭೯॥

ಆದರೆ ಈಗ ನಾನು ಏನು ತಾನೇ ಮಾಡಲು ಸಾಧ್ಯ ? ಕಾಲವೆಂಬುದು ದಾಟಲು ಅಸಾಧ್ಯವು. ನೀನು ವಜ್ರಾಯುಧವನ್ನು ಹಿಡಿದು ಬಂದಿದ್ದರೂ ಮುಷ್ಟಿಯಿಂದಲೇ ನಾನು ನಿನ್ನನ್ನು ಹೊಡೆದು ಸಂಹರಿಸಬಹುದು. ಆದರೆ ಇದು ಆ ಕಾಲವಲ್ಲ ಎಂದು ನಾನು ಉತ್ಸಾಹವನ್ನು ಹೊಂದುತ್ತಿಲ್ಲ.

ನ ತು ವಿಕ್ರಮಕಾಲೋಯಂ ಕ್ಷಮಾಕಾಲೋऽಯಮಾಗತಃ ।
ತೇನ ತ್ವಾ ಮರ್ಷಯೇ ಶಕ್ರ ದುರ್ಮರ್ಷಣತರಸ್ತ್ವಯಾ ॥೮೦॥

ಪರಾಕ್ರಮವನ್ನು ತೋರುವ ಕಾಲವು ಇದಾಗಿರುವುದಿಲ್ಲ. ಕ್ಷಮೆಯಿಂದ ವರ್ತಿಸುವ ಕಾಲವು ನನಗೆ ಒದಗಿ ಬಂದಿದೆ. ಆದ್ದರಿಂದ ನೀನು ಮಾಡಿದ ಅಪರಾಧವನ್ನೆಲ್ಲ ನಾನು ಸಹಿಸಿಕೊಂಡಿರುತ್ತೇನೆ.

ತ್ವಂ ಮಾ ಪರಿಣತೇ ಕಾಲೇ ಪರೀತಂ ಕಾಲವಹ್ನಿನಾ ।
ನಿಯತಂ ಕಾಲಪಾಶೇನ ಬದ್ಧಂ ಶಕ್ರ ವಿಕತ್ಥಸೇ ॥೮೧॥

ನಾನು ಕಾಲಾಗ್ನಿಯಿಂದ ಸುತ್ತುವರಿಯಲ್ಪಟ್ಟಿದ್ದೇನೆ. ಕಾಲಪಾಶದಿಂದ ಬದ್ಧನಾದ ನನ್ನ ಬಳಿ ಬಂದು ನೀನು ಆತ್ಮಶ್ಲಾಘನೆಯನ್ನು ಮಾಡಿಕೊಳ್ಳುತ್ತಿರುವಿ.

ಅಯಂ ಸ ಪುರುಷಃ ಶ್ಯಾಮೋ ಲೋಕಸ್ಯ ದುರತಿಕ್ರಮಃ ।
ಬದ್ಧ್ವಾ ತಿಷ್ಠತಿ ಮಾಂ ರೌದ್ರಃ ಪಶುಂ ರಶನಯಾ ಯಥಾ ॥೮೨॥

ಪುರುಷನು ಯಜ್ಞಪಶುವನ್ನು ಪಾಶದಿಂದ ಬಂಧಿಸುವಂತೆ ಶ್ಯಾಮಲ ವರ್ಣನಾಗಿರುವ, ಲೋಕದ ಜನರಿಂದ ದಾಟಲು ದುಸ್ಸಾಧ್ಯನಾದ, ಭಯಂಕರನಾದ ಕಾಲಪುರುಷನು ಪಾಶಗಳಿಂದ ನನ್ನನ್ನು ಬಂಧಿಸಿಟ್ಟಿದ್ದಾನೆ.

ಲಾಭಾಲಾಭೌ ಸುಖಂ ದುಃಖಂ ಕಾಮಕ್ರೋಧೌ ಭವಾಭವೌ ।
ವಧೋ ಬಂಧಃ ಪ್ರಮೋಕ್ಷಶ್ಚ ಸರ್ವಂ ಕಾಲೇನ ಲಭ್ಯತೇ ॥೮೩॥

ಲಾಭ-ನಷ್ಟಗಳು, ಸುಖ-ದುಃಖಗಳು, ಕಾಮ-ಕ್ರೋಧಗಳು, ಹುಟ್ಟು-ಸಾವುಗಳು, ವಧೆ, ಬಂಧ-ಮೋಕ್ಷಗಳು ಎಲ್ಲವೂ ಕಾಲಾನುಸಾರವಾಗಿಯೇ ಮನುಷ್ಯರಿಗೆ ಪ್ರಾಪ್ತವಾಗುತ್ತವೆ.

ನಾಹಂ ಕರ್ತಾ ನ ಕರ್ತಾ ತ್ವಂ ಕರ್ತಾ ಯಸ್ತು ಸದಾ ಪ್ರಭುಃ ।
ಸೋಽಯಂ ಪಚತಿ ಕಾಲೋ ಮಾಂ ವೃಕ್ಷೇ ಫಲಮಿವಾಗತಮ್ ॥೮೪॥

ಈ ನನ್ನ ದುರವಸ್ಥೆಗೆ ನಾನು ಕರ್ತೃವಲ್ಲ. ನೀನೂ ಕರ್ತೃವಲ್ಲ. ನಿತ್ಯವೂ ಯಾವಾಗಲೂ ಯಾವನು ಪ್ರಭುವಾಗಿದ್ದಾನೋ ಅಂತಹ ಕಾಲಪುರುಷನೇ ವೃಕ್ಷದಲ್ಲಿ ಹಣ್ಣನ್ನು ಪಾಕ (ಪಕ್ವ) ಮಾಡುವಂತೆ ನಮ್ಮನ್ನು ಪಾಕ (ಪಕ್ವ) ಮಾಡುತ್ತಾನೆ.

ಯಾನ್ಯೇವ ಪುರುಷಃ ಕುರ್ವನ್ ಸುಖೈಃ ಕಾಲೇನ ಯುಜ್ಯತೇ ।
ಪುನಸ್ತಾನ್ಯೇವ ಕುರ್ವಾಣೋ ದುಃಖೈಃ ಕಾಲೇನ ಯುಜ್ಯತೇ ॥೮೫॥

ಪುರುಷ ಕಾರ್ಯವನ್ನು ಮಾಡಿದಾಗ ಕಾಲಪುರುಷನು ಆ ಕಾರ್ಯಗಳ ಪರವಾಗಿ ಪುರುಷನಿಗೆ ಸುಖವುಂಟಾಗುವಂತೆ ಮಾಡುತ್ತಾನೆ. ಮತ್ತೊಮ್ಮೆ ಅದೇ ವಿಧವಾದ ಕಾರ್ಯವನ್ನು ಮಾಡಿದಾಗ ದುಃಖವುಂಟಾಗುವಂತೆಯೂ ಮಾಡುತ್ತಾನೆ.

ನ ಚ ಕಾಲೇನ ಕಾಲಜ್ಞಃ ಸ್ಪೃಷ್ಟಃ ಶೋಚಿತುಮರ್ಹತಿ ।
ತೇನ ಶಕ್ರ ನ ಶೋಚಾಮಿ ನಾಸ್ತಿ ಶೋಕೇ ಸಹಾಯತಾ ॥೮೬॥

ಕಾಲನ ಪ್ರಭಾವವನ್ನು ಅರಿತಿರುವ ವ್ಯಕ್ತಿಯು ಕಾಲಾಕ್ರಾಂತನಾಗಿದ್ದರೂ ಶೋಕಿಸುವುದಿಲ್ಲ. ಶೋಕದಿಂದ ಯಾವ ಲಾಭವೂ ಇಲ್ಲ. ಆದ್ದರಿಂದ ನಾನು ನನ್ನ ಸ್ಥಿತಿಗೆ ಎಂದೂ ದುಃಖಪಡುವುದಿಲ್ಲ.

ಯದಾ ಹಿ ಶೋಚತಾಂ ಶೋಕೋ ವ್ಯಸನಂ ನಾಪಕರ್ಷತಿ ।
ಸಾಮರ್ಥ್ಯಂ ಶೋಚತೋ ನಾಸ್ತಿ ನಾದ್ಯ ಶೋಚಾಮ್ಯಹಂ ತತಃ ॥೮೭॥

ಮನುಷ್ಯನು ಶೋಕಪಡುತ್ತಿದ್ದರೆ ಆ ಶೋಕವು ಹೃದಯದಿಂದ ಹೊರ ಹೋಗುವುದಿಲ್ಲ. ಶೋಕದಿಂದ ದುಃಖವನ್ನು ಪರಿಹರಿಸಿಕೊಳ್ಳಲು ಅವನು

ಅಸಮರ್ಥನಾಗಿದ್ದಾನೆ. ಆದ್ದರಿಂದ ನಾನು ಶೋಕ ಪಡಬಾರದೆಂದೇ ನಾನು ನಿಶ್ಚಯ ಮಾಡಿಕೊಂಡಿದ್ದೇನೆ.

ಏವಮುಕ್ತಃ ಸಹಸ್ರಾಕ್ಷೋ ಭಗವಾನ್ ಪಾಕಶಾಸನಃ ।
ಪ್ರತಿಸಂಹೃತ್ಯ ಸಂರಂಭಮಿತ್ಯುವಾಚ ಶತಕ್ರತುಃ ॥೮೮॥

ಯುಧಿಷ್ಠಿರನೇ, ಬಲಿಯಿಂದ ಈ ರೀತಿಯಾದ ಮಾತನ್ನು ಕೇಳಿಸಿಕೊಂಡ ಸಹಸ್ರಾಕ್ಷನಾದ ಭಗವಾನ್ ಇಂದ್ರನು ಬಲಿಯ ಮೇಲೆ ಉಂಟಾಗಿದ್ದ ತನ್ನ ಕೋಪವನ್ನು ಉಪಸಂಹರಿಸಿಕೊಂಡು ಶಾಂತನಾಗಿ ಬಲಿಯನ್ನು ಕೇಳುತ್ತಾನೆ.

ಸವಜ್ರಮುದ್ಯತಂ ಬಾಹುಂ ದೃಷ್ಟ್ವಾ ಪಾಶಾಂಶ್ಚ ವಾರುಣಾನ್ ।
ಕಸ್ಯೇಹ ನ ವ್ಯಥೇದ್ ಬುದ್ಧಿರ್ಮೃತ್ಯೋರಪಿ ಜಿಘಾಂಸತಃ ॥೮೯॥

ದೈತ್ಯರಾಜನೇ, ವಜ್ರಾಯುಧ ಸಹಿತನಾಗಿ ಮೇಲಕ್ಕೆತ್ತಿದ ನನ್ನ ಬಾಹುಗಳನ್ನು, ವರುಣಪಾಶಗಳನ್ನು ನೋಡಿದ ವ್ಯಕ್ತಿಯು ಪ್ರಾಣಾಪಹಾರಿಯಾದ ಮೃತ್ಯುವೇ ಆಗಿದ್ದರೂ ಅವನಿಗೂ ಭಯವುಂಟಾಗಿ ಬುದ್ಧಿಯು ವ್ಯಸನಕ್ಕೆ ತುತ್ತಾಗುತ್ತದೆ.

ಸಾ ತೇ ನ ವ್ಯಥತೇ ಬುದ್ಧಿರಚಲಾ ತತ್ತ್ವದರ್ಶಿನೀ ।
ಬ್ರುವನ್ನ ವ್ಯಥಸೇ ಸ ತ್ವಂ ವಾಕ್ಯಂ ಸತ್ಯಪರಾಕ್ರಮ ॥೯೦॥

ಆದರೆ ಇಂತಹ ನನ್ನನ್ನು ನೋಡಿಯೂ ನಿನ್ನ ಬುದ್ಧಿಯು ಅಚಲವಾಗಿಯೇ ಇದೆ. ಇದಕ್ಕೆ ಕಾರಣ ನಿನ್ನ ಬುದ್ಧಿಯು ನಿಷ್ಫಲವಾದ ಭಗವತ್ತತ್ತ್ವವನ್ನು ಅರಿತುಕೊಂಡಿದೆ. ಆದಕಾರಣದಿಂದಲೇ ನೀನು ನಿನ್ನ ಸ್ಥಿತಿಗೆ ದುಃಖಪಡುತ್ತಿಲ್ಲ.

ಕೋ ಹಿ ವಿಶ್ವಾಸಮರ್ಥೇಷು ಶರೀರೇ ವಾ ಶರೀರಭೃತ್ ।
ಕರ್ತುಮುತ್ಸಹತೇ ಲೋಕೇ ದೃಷ್ಟ್ವಾ ಸಂಪ್ರಸ್ಥಿತಂ ಜಗತ್ ॥೯೧॥

ಪ್ರಪಂಚವೇ ನಾಶದ ಕಡೆ ಸಾಗುತ್ತಿರುವಾಗ ಇದನ್ನು ಕಂಡ ಶರೀರಧಾರಿಯಾದ ಪುರುಷನು ತನ್ನ ಶರೀರದಲ್ಲಾಗಲೀ, ಧನ-ವೈಭವ ವಿಷಯ ಭೋಗಗಳಲ್ಲಾಗಲೀ ವಿಶ್ವಾಸವನ್ನಿಡುವ ಉತ್ಸಾಹವನ್ನು ತಾಳಲಾರನು.

ಅಹಮಪ್ಯೇವಮೇವೈನಂ ಲೋಕಂ ಜಾನಾಮ್ಯಶಾಶ್ವತಮ್ ।
ಕಾಲಾಗ್ನಾವಾಹಿತಂ ಘೋರೇ ಗುಹ್ಯೇ ಸತತಗೇ ಕ್ಷರೇ ॥೯೨॥

ನಿನ್ನಂತೆ ನಾನೂ ಸರ್ವವ್ಯಾಪಿಯಾದ, ಅವಿನಾಶಿಯಾದ, ಘೋರವಾದ, ನಿಗೂಢವಾದ ಕಾಲಾಗ್ನಿಯಿಂದಲೇ ದಹಿಸಲ್ಪಡುವ ಈ ಲೋಕವು ಅಶಾಶ್ವತವೆಂಬುದಾಗಿ ತಿಳಿದಿರುತ್ತೇನೆ.

ನ ಚಾತ್ರ ಪರಿಹಾರೋಽಸ್ತಿ ಕಾಲಸ್ಪೃಷ್ಟಸ್ಯ ಕಸ್ಯಚಿತ್ ।
ಸೂಕ್ಷ್ಮಾಣಾಂ ಮಹತಾಂ ಚೈವ ಭೂತಾನಾಂ ಪರಿಪಚ್ಯತಾಮ್ ॥೯೩॥

ಕಾಲನ ಅಧೀನನಾಗಿರುವ ವ್ಯಕ್ತಿಗೆ ಪರಿಹಾರವೆಂಬುದಿಲ್ಲ. ಸೂಕ್ಷ್ಮ ಪ್ರಾಣಿಯಾಗಲಿ, ಮಹಾಪ್ರಾಣಿಯಾಗಲೀ ಯಾವ ತಾರತಮ್ಯವೂ ಇಲ್ಲದೆ ಕಾಲಾಗ್ನಿಯು ಎಲ್ಲರನ್ನೂ ದಹಿಸುತ್ತದೆ. ಯಾರಿಗೂ ಅದನ್ನು ಬಿಡಿಸಿಕೊಳ್ಳಲು ಸಾಧ್ಯವಿಲ್ಲ.

ಅನೀಶಸ್ಯಾಪ್ರಮತ್ತಸ್ಯ ಭೂತಾನಿ ಪಚತಃ ಸದಾ ।
ಅನಿವೃತ್ತಸ್ಯ ಕಾಲಸ್ಯ ಕ್ಷಯಂ ಪ್ರಾಪ್ತೋ ನ ಮುಚ್ಯತೇ ॥೯೪॥

ಕಾಲನನ್ನು ನಿಯಂತ್ರಿಸುವವರು ಯಾರೂ ಇಲ್ಲ. ಅವರಿಗೆ ಬೇರೊಬ್ಬ ಸ್ವಾಮಿಯಿಲ್ಲ. ಸ್ವಯಂ ಪ್ರಭುವಾಗಿದ್ದಾನೆ. ಯಾವಾಗಲೂ ಜಾಗರೂಕನಾಗಿದ್ದು ಪ್ರಾಣಿಗಳನ್ನು ದುಃಖವೆಂಬ ಬೆಂಕಿಯಲ್ಲಿ ಸುಡುತ್ತಾನೆ. ಯಾವುದೇ ಕಾರಣದಿಂದ ಹಿಂದಿರುಗದೆ ಇರುವ ಮನೆಯನ್ನು ಸೇರಿದ ಪ್ರಾಣಿಯು ಅವನಿಂದ ಬಿಡಿಸಿಕೊಳ್ಳಲಾರದು.

ಅಪ್ರಮತ್ತಃ ಪ್ರಮತ್ತೇಷು ಕಾಲೋ ಜಾಗರ್ತಿ ದೇಹಿಷು ।
ಪ್ರಯತ್ನೇನಾಪ್ಯತಿಕ್ರಾಂತೋ ದೃಷ್ಟಪೂರ್ವೋ ನ ಕೇನಚಿತ್ ॥೯೫॥

ಅಪ್ರಮತ್ತನಾದ ಕಾಲಪುರುಷನು ಪ್ರಮತ್ತರಾದ ಜನರ ವಿಷಯದಲ್ಲಿ ಜಾಗೃತನಾಗಿರುತ್ತಾನೆ. ಈ ಕಾಲನನ್ನು ಪ್ರಯತ್ನಪೂರ್ವಕವಾಗಿ ದಾಟಿದ ವ್ಯಕ್ತಿ ಯಾವೊಬ್ಬನನ್ನೂ ನಾನು ಕಂಡಿರುವುದಿಲ್ಲ.

ಪುರಾಣಃ ಶಾಶ್ವತೋ ಧರ್ಮಃ ಸರ್ವಪ್ರಾಣಭೃತಾಂ ಸಮಃ ।
ಕಾಲೋ ನ ಪರಿಹಾರ್ಯಶ್ಚ ನ ಚಾಸ್ಯಾಸ್ತಿ ವ್ಯತಿಕ್ರಮಃ ॥೯೬॥

ಕಾಲನು ಪುರಾಣನು, ಶಾಶ್ವತನು, ಧರ್ಮಸ್ವರೂಪನು. ಪ್ರಪಂಚದಲ್ಲಿರುವ ಸಮಸ್ತ ಪ್ರಾಣಿಗಳನ್ನು ಸಮಾನನಾಗಿ ಕಾಣುವವನು. ಅವನನ್ನು ದೂರೀಕರಿಸಲು ಸಾಧ್ಯವಿಲ್ಲ. ಅವನನ್ನು ನಿರಾಕರಿಸಲಂತೂ ಸಾಧ್ಯವೇ ಇಲ್ಲ.

ಅಹೋರಾತ್ರಾಂಶ್ಚ ಮಾಸಾಂಶ್ಚ ಕ್ಷಣಾಂಕಾಷ್ಠಾಃ ಕಲಾ ಲವಾನ್ ।
ಸಂಪಿಂಡಯತಿ ನಃ ಕಾಲೋ ವೃದ್ಧಿಂ ವಾರ್ಧುಷಿಕೋ ಯಥಾ ॥೯೭॥

ಯಾವ ರೀತಿ ಬಡ್ಡಿಯಿಂದಲೇ ಜೀವಿಸುವ ವ್ಯಕ್ತಿಯು ಒಂದು ಬಿಡಿಗಾಸನ್ನೂ ಬಿಡದೆ ಲೆಕ್ಕ ಹಾಕಿ ಬಡ್ಡಿಯನ್ನು ವಸೂಲಿ ಮಾಡುವನೋ ಅದರಂತೆ ಕಾಲನು ಹಗಲು-ರಾತ್ರಿ -ಮಾಸ-ಕ್ಷಣ-ಕಾಷ್ಠ-ಕಲ-ಲವ ಎಲ್ಲವನ್ನೂ ಲೆಕ್ಕಹಾಕಿ ಪ್ರಾಣಿಗಳನ್ನು ಪೀಡಿಸುತ್ತಾನೆ.

ಇದಮದ್ಯ ಕರಿಷ್ಯಾಮಿ ಶ್ವಃ ಕರ್ತಾಸ್ಮೀತಿ ವಾದಿನಮ್ ।
ಕಾಲೋ ಹರತಿ ಸಂಪ್ರಾಪ್ತೋ ನದೀವೇಗ ಇವೋಡುಪಮ್ ॥೯೮॥

ಈ ಕೆಲಸವನ್ನು ಇಂದು ಮಾಡುತ್ತೇನೆ, ಆ ಕೆಲಸವನ್ನು ನಾಳೆ ಮಾಡುತ್ತೇನೆ ಎಂದು ಚಿಂತಿಸುತ್ತಿರುವ ಮನುಷ್ಯನನ್ನು ನದಿ ಪ್ರವಾಹವು ತೀರದಲ್ಲಿರುವ ಸಣ್ಣ ದೋಣಿಗಳನ್ನು ಕೊಚ್ಚಿಕೊಂಡು ಹೋಗುವಂತೆ ಇವನನ್ನು ಅಪಹರಿಸಿಕೊಂಡು ಹೋಗುತ್ತಾನೆ.

ಇದಾನೀಂ ತಾವದೇವಾಸೌ ಮಯಾ ದೃಷ್ಟಃ ಕಥಂ ಮೃತಃ ।
ಇತಿ ಕಾಲೇನ ಹ್ರಿಯತಾಂ ಪ್ರಲಾಪಃ ಶ್ರೂಯತೇ ನೃಣಾಮ್ ॥೯೯॥

ನಾನು ಈಗ ತಾನೆ ಇವನನ್ನು ನೋಡಿದ್ದೆನು. ಇಷ್ಟು ಬೇಗ ಇವನು ಸತ್ತುಹೋದನು. ಅಯ್ಯೋ ಆಶ್ಚರ್ಯವು! ಹೀಗೆ ಕಾಲನಿಂದ ಅಪಹೃತರಾದವರ ವಿಷಯವಾಗಿ ಬೇರೆ ಮನುಷ್ಯರು ಮಾತನಾಡುವುದನ್ನು ಕೇಳುತ್ತಲೇ ಇರುತ್ತೇವೆ.

ನಶ್ಯಂತ್ಯರ್ಥಾಸ್ತಥಾ ಭೋಗಾಃ ಸ್ಥಾನಮೈಶ್ವರ್ಯಮೇವ ಚ ।
ಅನಿತ್ಯಮಧ್ರುವಂ ಸರ್ವಂ ವ್ಯವಸಾಯೋ ಹಿ ದುಷ್ಕರಃ ।
ಉಚ್ಛ್ರಾಯಾ ವಿನಿಪಾತಾಂತಾ ಭಾವೋಽಭಾವಸ್ಥ ಏವ ಚ ॥೧೦೦॥

ನಾವು ಗಳಿಸಿದ ಧನ-ಕನಕಾದಿಗಳು, ಸಮಸ್ತ ಭೋಗಗಳು, ಸ್ಥಾನ-ಐಶ್ವರ್ಯಗಳು, ಜೀವಲೋಕದ ಜೀವಿತವು ನಿಯಮೇನ ಒಯ್ಯಲ್ಪಡುತ್ತವೆ. ಉಚ್ಛ್ರಾಯ ಸ್ಥಿತಿಯು ಅಧಃಪತನದಲ್ಲಿ ಪರ್ಯವಸಾನ ಹೊಂದುತ್ತದೆ. ಭಾವ-ಅಭಾವ ಎಲ್ಲದಕ್ಕೂ ಕಾಲನೇ ನಿಯಾಮಕನು.

ಸಾ ತೇ ನ ವ್ಯಥತೇ ಬುದ್ಧಿರಚಲಾ ತತ್ತ್ವದರ್ಶಿನೀ ।
ಅಹಮಾಸಂ ಪುರಾ ಚೇತಿ ಮನಸಾಪಿ ನ ಬುದ್ಧ್ಯಸೇ ॥೧೦೧॥

ದೈತ್ಯರಾಜನೇ, ನಿನ್ನ ಬುದ್ಧಿಯು ಈ ತತ್ತ್ವವನ್ನು ತಿಳಿದುಕೊಂಡಿದೆ. ಆದ್ದರಿಂದಲೇ ಸ್ಥಿರವಾಗಿದೆ. ಆದುದರಿಂದಲೇ ಇಂತಹ ಸ್ಥಿತಿಯಲ್ಲಿಯೂ ದುಃಖಿಸುತ್ತಿಲ್ಲ. ನಾನು ಹಿಂದೆ ಐಶ್ವರ್ಯವಂತನಾಗಿದ್ದೆನು ಎನ್ನುವುದನ್ನು ಮನಸ್ಸಿನಲ್ಲಿಯೂ ಸ್ಮರಿಸಿಕೊಳ್ಳುತ್ತಿಲ್ಲ.

ಕಾಲೇನಾಕ್ರಮ್ಯ ಲೋಕೇಽಸ್ಮಿನ್ ಪಚ್ಯಮಾನೇ ಬಲೀಯಸಾ ।
ಅಜ್ಯೇಷ್ಠಮಕನಿಷ್ಠಂ ಚ ಕ್ಷಿಪ್ಯಮಾಣೋ ನ ಬುದ್ಧ್ಯಸೇ ॥೧೦೨॥

ಅತ್ಯಂತ ಬಲಿಷ್ಠವಾದ ಕಾಲವು ಈ ಲೋಕವೆಲ್ಲವನ್ನೂ ಆಕ್ರಮಿಸಿ ಶ್ರೇಷ್ಠ, ಕನಿಷ್ಠ ಎಂಬ ವ್ಯತ್ಯಾಸವಿಲ್ಲದೆ ತನ್ನೊಳಗೆ ತೂರಿಸಿಕೊಂಡು ಬೇಯಿಸುತ್ತಿದ್ದರೂ ಯಾರಿಗೂ ಇದು ಕಾಲನ ಪ್ರಭಾವ, ಅವನ ನಡೆ ಎಂಬುದು ಅರ್ಥವೇ ಆಗುವುದಿಲ್ಲ.

ಈರ್ಷ್ಯಾಭಿಮಾನಲೋಭೇಷು ಕಾಮಕ್ರೋಧಭಯೇಷು ಚ ।
ಸ್ಪೃಹಾಮೋಹಾಭಿಮಾನೇಷು ಲೋಕಃ ಸಕ್ತೋ ವಿಮುಹ್ಯತಿ ॥೧೦೩॥

ಜನರೆಲ್ಲ ಹೊಟ್ಟೆಕಿಚ್ಚು, ಅಭಿಮಾನ, ಲೋಭ, ಕಾಮ, ಕ್ರೋಧ, ಭಯ, ಆಸೆ, ಮೋಹ ಇವುಗಳಲ್ಲಿಯೇ ಆಸಕ್ತರಾಗಿ, ವಿವೇಕಭ್ರಷ್ಟರಾಗಿ ಭ್ರಾಂತರಾಗಿದ್ದಾರೆ.

ಭವಾಂಸ್ತು ಭಾವತತ್ತ್ವಜ್ಞೋ ವಿದ್ವಾನ್ ಜ್ಞಾನತಪೋನ್ವಿತಃ ।
ಕಾಲಂ ಪಶ್ಯತಿ ಸುವ್ಯಕ್ತಂ ಪಾಣಾವಾಮಲಕಂ ಯಥಾ ॥೧೦೪॥

ದೈತ್ಯೇಂದ್ರನೇ, ನೀನಾದರೂ ಭಗವಂತನ ಅಭಿಪ್ರಾಯವನ್ನು ಚೆನ್ನಾಗಿ ತಿಳಿದಿರುವಿ. ವಿದ್ವಾಂಸನಾಗಿರುವಿ. ಜ್ಞಾನ-ತಪಸ್ಸಿನಿಂದ ಕೂಡಿರುವಿ. ಕೈಯಲ್ಲಿರುವ ಸ್ವಚ್ಛವಾದ ನೀರಿನಂತೆ ಅಥವಾ ನೆಲ್ಲೀಕಾಯಿಯಂತೆ ಕಾಲನ ಅತಿಕ್ರಮಣವನ್ನು ತುಂಬಾ ಚೆನ್ನಾಗಿ ನೋಡುತ್ತಿರುವಿ.

ಕಾಲಚಾರಿತ್ರತತ್ತ್ವಜ್ಞಃ ಸರ್ವಶಾಸ್ತ್ರವಿಶಾರದಃ ।
ವೈರೋಚನೇ ಕೃತಾತ್ಮಾಸಿ ಸ್ಪೃಹಣೀಯೋ ವಿಜಾನತಾಮ್ ॥೧೦೫॥

ಕಾಲನ ಸ್ವರೂಪವನ್ನು ಚೆನ್ನಾಗಿ ತಿಳಿದಿರುವ ಸರ್ವಶಾಸ್ತ್ರವಿಶಾರದನಾದ ವಿರೋಚನನ ಮಗನೇ, ಜ್ಞಾನಿಗಳಿಗೆ ನೀನು ಇಷ್ಟನಾಗಿರುವಿ.

ಸರ್ವಲೋಕೋ ಹ್ಯಯಂ ಮನ್ಯೇ ಬುದ್ಧ್ಯಾ ಪರಿಗತಸ್ತ್ವಯಾ ।
ವಿಹರನ್ ಸರ್ವತೋ ಮುಕ್ತೋ ನ ಕ್ವಚಿತ್ ಪರಿಷಜ್ಜಸೇ ॥೧೦೬॥

ನೀನು ನಿನ್ನ ಬುದ್ಧಿಯಿಂದ ಸಮಸ್ತಲೋಕಗಳ ತತ್ತ್ವಗಳನ್ನು ತಿಳಿದಿದ್ದಿ ಎಂದು ಭಾವಿಸಿದ್ದೇನೆ. ಮುಕ್ತನಾಗಿ ಎಲ್ಲ ಕಡೆಯಲ್ಲಿಯೂ ವಿಹರಿಸುವ ನೀನು ಯಾವ ಕಡೆಯಲ್ಲಿಯೂ ಆಸಕ್ತನಾಗಿಲ್ಲ.

ರಜಶ್ಚ ಹಿ ತಮಶ್ಚ ತ್ವಾ ಸ್ಪೃಶತೋ ನ ಜಿತೇಂದ್ರಿಯಮ್ ।
ನಿಷ್ಪ್ರೀತಿಂ ನಷ್ಟಸಂತಾಪಂ ತ್ವಮಾತ್ಮಾನಮುಪಾಸಸೇ ॥೧೦೭॥

ಜಿತೇಂದ್ರಿಯನಾದ ನಿನ್ನ ಬಳಿ ರಜಸ್ಸು, ತಮಸ್ಸುಗಳು ಸುಳಿಯುತ್ತಿಲ್ಲ. ಯಾವುದು ಹರ್ಷರಹಿತವಾಗಿದೆಯೋ ದುಃಖರಹಿತವಾಗಿದೆಯೋ ಅಂತಹ ಪರಮಾತ್ಮನನ್ನು ನೀನು ಉಪಾಸನೆ ಮಾಡುತ್ತಿರುವಿ.

ಸುಹೃದಂ ಸರ್ವಭೂತಾನಾಂ ನಿರ್ವೈರಂ ಶಾಂತಮಾನಸಮ್ ।
ದೃಷ್ಟ್ವಾ ತ್ವಾಂ ಮಮ ಸಂಜಾತಾ ತ್ವಯ್ಯನುಕ್ರೋಶಿನೀ ಮತಿಃ ॥೧೦೮॥

ಸಮಸ್ತ ಜೀವರಲ್ಲಿಯೂ ಸುಹೃದ್ಭಾವನೆಯಿಂದ, ವೈರರಹಿತವಾಗಿರುವ, ಶಾಂತ ಮನಸ್ಸಿನಿಂದ ಕೂಡಿರುವ ನಿನ್ನನ್ನು ನೋಡಿದೊಡನೆ ನನಗೆ ಸಿಟ್ಟು ದೂರವಾಗಿ ದಯಾಪೂರ್ಣವಾದ ಬುದ್ಧಿಯು ಉಂಟಾಗಿದೆ.

ನಾಹಮೇತಾದೃಶಂ ಬುದ್ಧಂ ಹಂತುಮಿಚ್ಛಾಮಿ ಬಂಧನೇ ।
ಆನೃಶಂಸ್ಯಂ ಪರೋ ಧರ್ಮೋ ಅನುಕ್ರೋಶಸ್ತಥಾ ತ್ವಯಿ ॥೧೦೯॥

ಇಂತಹ ಜ್ಞಾನಿಯನ್ನು ಬಂಧಿಸಲು ಅಥವಾ ಸಂಹರಿಸಲು ನಾನು ಇಷ್ಟಪಡುವುದಿಲ್ಲ. ಯಾರೊಡನೆಯೂ ಕಾಠಿಣ್ಯದಿಂದ ವ್ಯವಹರಿಸದೆ ಇರುವುದೇ ಪರಮಧರ್ಮವಾಗಿದೆ. ನಿನ್ನ ಮೇಲೆ ಸಂಪೂರ್ಣ ಕರುಣೆಯುಂಟಾಗಿದೆ.

ಮೋಕ್ಷ್ಯಂತೇ ವಾರುಣಾಃ ಪಾಶಾಸ್ತವೇಮೇ ಕಾಲಪರ್ಯಯಾತ್ ।
ಪ್ರಜಾನಾಮಪಚಾರೇಣ ಸ್ಪೃಷ್ಟಿ ತೇಽಸ್ತು ಮಹಾಸುರ ॥೧೧೦॥

ನಾನು ನಿನ್ನನ್ನು ಬಂಧಿಸಿರುವ ವರುಣಪಾಶಗಳು ಸ್ವಲ್ಪಕಾಲದಲ್ಲಿಯೇ ತಾವಾಗಿಯೇ ಕಳಚಿ ಬೀಳುತ್ತವೆ. ಪ್ರಜೆಗಳು ಯಾವಾಗ ಧರ್ಮವಿರುದ್ಧವಾಗಿ ವ್ಯವಹರಿಸುತ್ತಾರೋ ಆಗ ನಿನಗೆ ಕಲ್ಯಾಣವುಂಟಾಗುತ್ತದೆ.

ಯದಾ ಶ್ವಶ್ರೂಂ ಸ್ನುಷಾ ವೃದ್ಧಾಂ ಪರಿಚಾರೇಣ ಯೋಕ್ಷ್ಯತೇ ।
ಪುತ್ರಶ್ಚ ಪಿತರಂ ಮೋಹಾತ್ ಪ್ರೇಷಯಿಷ್ಯತಿ ಕರ್ಮಸು ॥೧೧೧॥

ಬ್ರಾಹ್ಮಣೈಃ ಕಾರಯಿಷ್ಯಂತಿ ವೃಷಲಾಃ ಪಾದಧಾವನಮ್ ।
ಶೂದ್ರಾಶ್ಚ ಬ್ರಾಹ್ಮಣೀಂ ಭಾರ್ಯಾಮುಪಯಾಸ್ಯಂತಿ ನಿರ್ಭಯಾಃ ॥

ವಿಯೋನಿಷು ಚ ಬೀಜಾನಿ ಮೋಕ್ಷ್ಯಂತೇ ಪುರುಷಾ ಯದಾ ।
ಸಂಕರಂ ಕಾಂಸ್ಯಭಾಂಡೈಶ್ಚ ಬಲಿಂ ಚಾಪಿ ಕುಪಾತ್ರಕೈಃ ॥೧೧೩॥

ಚಾತುರ್ವರ್ಣ್ಯಂ ಯದಾ ಕೃತ್ಸ್ನಮುನ್ಮರ್ಯಾದಂ ಭವಿಷ್ಯತಿ ।
ಏಕೈಕಸ್ತೇ ತದಾ ಪಾಶಃ ಕ್ರಮಶಃ ಪ್ರತಿಮೋಕ್ಷ್ಯತೇ ॥೧೧೪॥

ಯಾವಾಗ ಸೊಸೆಯು ಅತ್ತೆಯನ್ನೇ ಸೇವೆ ಮಾಡಲು ಹೇಳುತ್ತಾಳೋ, ಮಗನು ಅಜ್ಞಾನದಿಂದ ತಂದೆಯ ಬಳಿ ಮನೆಕೆಲಸ ಮಾಡುವಂತೆ ಆಜ್ಞಾಪಿಸುತ್ತಾನೋ, ಬ್ರಾಹ್ಮಣರಿಂದ ಶೂದ್ರರು ಯಾವಾಗ ಕಾಲುಗಳನ್ನು ತೊಳೆಸಿಕೊಳ್ಳುತ್ತಾರೋ, ಶೂದ್ರರು ಯಾವಾಗ ಭಯರಹಿತರಾಗಿ ಬ್ರಾಹ್ಮಣಕನ್ಯೆಯರನ್ನು ವಿವಾಹವಾಗುತ್ತಾರೋ, ಮನುಷ್ಯರು ಲಜ್ಜಾರಹಿತರಾಗಿ ವಿರುದ್ಧಯೋನಿಗಳಲ್ಲಿ ವೀರ್ಯಸೇಚನೆ ಮಾಡುತ್ತಾರೋ, ಉಚ್ಚ-ನೀಚ ಜಾತಿ ಭೇದವಿಲ್ಲದೆ ಒಂದೇ ಕಡೆ ಕುಳಿತು, ಒಂದೇ ಕಂಚಿನ ತಟ್ಟೆಯಲ್ಲಿ ಎಲ್ಲರೂ ಊಟ ಮಾಡುತ್ತಾರೋ, ನಾನಾ ವರ್ಣದವರಿಗೂ ಒಂದೇ ಪಂಕ್ತಿಯಲ್ಲಿ ಕೂಡಿಸಿ ಅನ್ನದಾನ ಮಾಡುತ್ತಾರೋ, ಊಟ ಮಾಡುವ ಅಪವಿತ್ರವಾದ ಪಾತ್ರೆಗಳಲ್ಲೇ ದೇವತೆಗಳಿಗೆ ನೈವೇದ್ಯವನ್ನು ಅರ್ಪಿಸುತ್ತಾರೋ, ಈ ರೀತಿಯಾಗಿ ವರ್ಣಾಶ್ರಮ ಧರ್ಮಗಳೆಲ್ಲವೂ ಮರ್ಯಾದೆಯನ್ನು ಮೀರಿದಾಗ ನಾನು ನಿನ್ನನ್ನು ಬಂಧಿಸಿರುವ ವರುಣನ ಪಾಶಗಳು ಒಂದೊಂದಾಗಿ ಕಳಚಿ ಬೀಳುತ್ತವೆ.

ವ್ಯಾಖ್ಯಾನ ವಿಶೇಷ– ಒಂದೊಂದೇ ಪಾಶಗಳು ಎಂದರೆ ಧನವಿರೋಧಿಯಾದ ಕಾಲಪಾಶ, ಧಾನ್ಯವಿರೋಧಿಯಾದ ಪಾಶ, ಭಾಗ್ಯವಿರೋಧಿಯಾದ ಪಾಶ, ರಾಜ್ಯ ವಿರೋಧಿಯಾದ ಪಾಶ ಎಂದು ಅನೇಕ ಪಾಶಗಳಿವೆ. ಆ ಎಲ್ಲಾ ಪಾಶಗಳು ಕಳಚುತ್ತವೆ ಎಂದು ಅರ್ಥ.

ಅಸ್ಮತ್ತಸ್ತೇ ಭಯಂ ನಾಸ್ತಿ ಸಮಯಂ ಪ್ರತಿಪಾಲಯ ।
ಸುಖೀ ಭವ ನಿರಾಬಾಧಃ ಸ್ವಸ್ಥಚೇತಾ ನಿರಾಮಯಃ ॥೧೧೫॥

ದೈತ್ಯೇಂದ್ರನೇ, ನಮ್ಮಿಂದ ನಿನಗೆ ಯಾವ ವಿಧವಾದ ಭಯವೂ ಇರುವುದಿಲ್ಲ. ಸಮಯವನ್ನು ಪ್ರತೀಕ್ಷಿಸುತ್ತಿರು. ಯಾವ ವಿಧವಾದ ಬಾಧೆಗಳು ಇಲ್ಲದೆ ಸ್ವಸ್ಥ ಚಿತ್ತನಾಗಿ ಸುಖವಾಗಿರು.

ಭೀಷ್ಮಃ

ತಮೇವಮುಕ್ತ್ವಾ ಭಗವಾನ್ ಶತಕ್ರತುಃ
ಪ್ರತಿಪ್ರಯಾತೋ ಗಜರಾಜವಾಹನಃ ।
ವಿಜಿತ್ಯ ಸರ್ವಾನಸುರಾನ್ ಸುರಾಧಿಪೋ
ನನಂದ ಹರ್ಷೇಣ ಬಭೂವ ಚೈಕರಾಟ್ ॥೧೧೬॥

ಭೀಷ್ಮ– ಯುಧಿಷ್ಠಿರನೇ, ಐರಾವತ ವಾಹನದಲ್ಲಿ ಏರಿದ, ಶತಕ್ರತುವು ಆದ ಇಂದ್ರನು ಬಲಿಯ ಬಳಿ ಹೀಗೆ ಹೇಳಿ, ಐರಾವತದಲ್ಲಿ ಕುಳಿತು ತನ್ನ ಸ್ಥಾನಕ್ಕೆ ಹೊರಟು ಹೋದನು. ಸುರಾಧಿಪನಾದ ಇಂದ್ರನು ಸಮಸ್ತ ಅಸುರರನ್ನು ದಹಿಸಿ, ಮೂರು ಲೋಕಗಳಿಗೂ ಏಕಚಕ್ರಾಧಿಪತಿಯಾಗಿ ಸಂತೋಷದಿಂದ ಆನಂದ ಹೊಂದಿದನು.

ಮಹರ್ಷಯಸ್ತುಷ್ಟುವುರಂಜಸಾ ಚ ತಂ
ವೃಷಾಕಪಿಂ ಸರ್ವಚರಾಚರೇಶ್ವರಮ್ ।
ಹಿಮಾಪಹೋ ಹವ್ಯಮುದಾವಹಂಸ್ತ್ವರಂ-
ಸ್ತಥಾಮೃತಂ ಚಾರ್ಪಿತಮೀಶ್ವರಾಯ ಹ ॥೧೧೭॥

ಅಂತಹ ಇಂದ್ರನನ್ನು ಕಂಡು, ಅವನ ಅಂತರ್ಯಾಮಿಯಾದ ವೃಷಾಕಪಿಯನ್ನು ಉದ್ದೇಶಿಸಿಕೊಂಡು ಅಥವಾ ಸ್ವರ್ಗದಲ್ಲಿರುವ ಉಪೇಂದ್ರನಾಮಕ ವಿಷ್ಣುವನ್ನು ಚಿಂತಿಸುತ್ತಾ ಋಷಿಗಳೆಲ್ಲರೂ ಸರ್ವಚರಾಚರ ಪ್ರಪಂಚಕ್ಕೆ ಈಶ್ವರನಾದ ಭಗವಂತನನ್ನೇ ಎಲ್ಲ ವಿಧವಾಗಿ ಪ್ರಶಂಸಿಸಿದರು. ಯಜ್ಞೇಶ್ವರನು ಯಜ್ಞಗಳಲ್ಲಿ ಅರ್ಪಿಸುತ್ತಿದ್ದ ಹವಿಸ್ಸುಗಳನ್ನು ಆಯಾ ದೇವತೆಗಳಿಗೆ ತಂದೊಪ್ಪಿಸಿದನು. ದೇವೇಶ್ವರನಾದ ಇಂದ್ರನು ತನಗೆ ಅರ್ಪಿಸಿದ ಅಮೃತವನ್ನು ಪಾನ ಮಾಡಿದನು.

ದ್ವಿಜೋತ್ತಮೈಃ ಸರ್ವಗತೈರಭಿಷ್ಟುತೋ
ವಿದೀಪ್ತತೇಜಾ ಗತಮನ್ಯುರೀಶ್ವರಃ ।
ಪ್ರಶಾಂತಚೇತಾ ಮುದಿತಃ ಸ್ವಮಾಲಯಂ
ತ್ರಿವಿಷ್ಟಪಂ ಪ್ರಾಪ್ಯ ಮುಮೋದ ವಾಸವಃ ॥೧೧೮॥

ಹೀಗೆ ಬ್ರಾಹ್ಮಣಶ್ರೇಷ್ಠರಿಂದ ಎಲ್ಲೆಡೆಯಿಂದಲೂ ಸ್ತೋತ್ರ ಮಾಡಲ್ಪಟ್ಟ, ಪ್ರದೀಪ್ತವಾದ ತೇಜಸ್ಸಿನಿಂದ ಕೂಡಿದ್ದ, ಕೋಪರಹಿತನಾಗಿ ಶಾಂತಚಿತ್ತನಾದ ಇಂದ್ರನು ಪರಮಸಂತುಷ್ಟನಾಗಿ ತನ್ನ ನಿಜಸ್ಥಾನವಾದ ಸ್ವರ್ಗವನ್ನು ಸೇರಿ ಆನಂದ ಹೊಂದಿದನು.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ
ಶಾಂತಿಪರ್ವಣಿ ಮೋಕ್ಷಧರ್ಮೇ ತ್ರಿಷಷ್ಟಿತಮೋऽಧ್ಯಾಯಃ ॥
ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಅರವತ್ಮೂರನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ನಾಲ್ಕನೆಯ ಅಧ್ಯಾಯ

ಗಂಗಾತೀರದಲ್ಲಿದ್ದ ಇಂದ್ರ-ನಾರದರ ಬಳಿಗೆ ಲಕ್ಷ್ಮಿಯು ಬಂದು,
ತಾನು ಸೇರಿರುವ ಪುರುಷನಲ್ಲಿ ಇರಬೇಕಾಗಿರುವ ಗುಣಗಳನ್ನು,
ಕಾರಣಗಳಾದ ದೋಷಗಳನ್ನು ಅವರಿಗೆ ತಿಳಿಸಿದುದು.

ಯುಧಿಷ್ಠಿರಃ

ಪೂರ್ವರೂಪಾಣಿ ಮೇ ರಾಜನ್ ಪುರುಷಸ್ಯ ಭವಿಷ್ಯತಃ ।
ಪರಾಭವಿಷ್ಯತಶ್ಚೈವ ತ್ವಂ ಮೇ ಬ್ರೂಹಿ ಪಿತಾಮಹ ॥೧॥

ಯುಧಿಷ್ಠಿರ– ರಾಜನಾದ ಭೀಷ್ಮನೇ, ಪಿತಾಮಹನೇ, ಉನ್ನತಿಯನ್ನು ಹೊಂದಲಿರುವ ಪುರುಷನ ಮತ್ತು ಪರಾಭವವನ್ನು ಹೊಂದುವಂತಹ ಪುರುಷನ ಭಾಗ್ಯೋದಯಕ್ಕೂ ಪರಾಭವಕ್ಕೂ ಕಾರಣಗಳಾದ ಪೂರ್ವಕರ್ಮಗಳು ಯಾವವು ಎಂಬುದನ್ನು ನನಗೆ ತಿಳಿಸಿ. ಯಾವ ಕಾರಣದಿಂದ ಜಯವಾಗುತ್ತದೆ, ಯಾವ ಕಾರಣದಿಂದ ಪರಾಜಯವಾಗುತ್ತದೆ ಎಂಬುದನ್ನೂ ನನಗೆ ತಿಳಿಸಿ.

ಭೀಷ್ಮಃ

ಮನ ಏವ ಮನುಷ್ಯಸ್ಯ ಪೂರ್ವರೂಪಾಣಿ ಶಂಸತಿ ।
ಭವಿಷ್ಯತಶ್ಚ ಭದ್ರಂ ತೇ ತಥೈವ ನಭವಿಷ್ಯತಃ ॥೨॥

ಭೀಷ್ಮ– ಯುಧಿಷ್ಠಿರನೇ, ಮುಂಗಳವಾಗಲಿ, ಯಾವ ಮನುಷ್ಯನು ಭಾಗ್ಯೋದಯವನ್ನು ಅಥವಾ ಪರಾಭವವನ್ನು ಹೊಂದಲಿದ್ದಾನೋ ಅದಕ್ಕೆ ಅವನ ಮನಸ್ಸೇ ಪೂರ್ವಕಾರಣಗಳು ಏನೆಂಬುದನ್ನು ನಿರ್ಣಯಿಸುತ್ತದೆ.

ವ್ಯಾಖ್ಯಾನ ವಿಶೇಷ– ದೋಷಗಳನ್ನು ತ್ಯಜಿಸಿ ಕೇವಲ ಗುಣಗಳಲ್ಲಿಯೇ ಆಸಕ್ತನಾದ ವ್ಯಕ್ತಿಯ ಮನಸ್ಸನ್ನು ನೋಡಿ ಅಥವಾ ಗುಣಗಳನ್ನೆಲ್ಲ ತ್ಯಜಿಸಿ ಕೇವಲ ದೋಷಗಳಲ್ಲಿಯೇ ಆಸಕ್ತನಾದ ವ್ಯಕ್ತಿಯ ಮನಸ್ಸನ್ನು ನೋಡಿ, ಮೊದಲನೆಯವನಿಗೆ ಲಕ್ಷ್ಮಿಯು ಒಲಿಯುತ್ತಾಳೆ, ನಂತರದವನಿಗೆ ಪರಾಭವವನ್ನು ನೀಡುತ್ತಾಳೆ ಎಂಬುದನ್ನು ವಿಸ್ತಾರವಾಗಿ ಹೇಳಲು ಆರಂಭಿಸುತ್ತಾರೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಶ್ರಿಯಾ ಶಕ್ರಸ್ಯ ಸಂವಾದಂ ತನ್ನಿಬೋಧ ಯುಧಿಷ್ಠಿರ ॥೩॥

ಧರ್ಮಜನೇ, ಈ ನಿನ್ನ ಪ್ರಶ್ನೆಗೆ ಸಂಬಂಧಿಸಿದಂತೆ ಲಕ್ಷ್ಮಿ ಮತ್ತು ಇಂದ್ರರಿಗೆ ನಡೆದ ಪುರಾತನವಾದ ಇತಿಹಾಸರೂಪವಾದ ಸಂಭಾಷಣೆಯನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನು ನಿನಗೆ ತಿಳಿಸುತ್ತೇನೆ, ಕೇಳು.

ಮಹತಸ್ತಪಸೋ ವ್ಯುಷ್ಟ್ಯಾ ಪಶ್ಯಲ್ಲೋಕೌ ಪರಾವರೌ ।
ಸಾಮಾನ್ಯಮೃಷಿಭಿರ್ಗತ್ವಾ ಬ್ರಹ್ಮಲೋಕನಿವಾಸಿಭಿಃ ॥೪॥

ಬ್ರಹ್ಮೈವಾಮಿತದೀಪ್ತೌಜಾಃ ಶಾಂತಪಾಪ್ಮಾ ಮಹಾತಪಾಃ ।
ವಿಚಚಾರ ಯಥಾಕಾಮಂ ತ್ರಿಷು ಲೋಕೇಷು ನಾರದಃ ॥೫॥

ಹಿಂದೊಮ್ಮೆ ಮಹಾತಪಸ್ವಿಗಳಾದ, ಪಾಪರಹಿತರಾದ, ಬ್ರಹ್ಮನಂತೆ ಅಮಿತವಾದ ತೇಜಸ್ಸಿನಿಂದ ಬೆಳಗುತ್ತಿದ್ದ, ಬ್ರಹ್ಮಲೋಕದ ನಿವಾಸಿಗಳೊಡನೆ ಬೆರೆತಿದ್ದ ನಾರದ ಮಹರ್ಷಿಗಳು ತಮ್ಮ ಮಹತ್ತಾದ ತಪಸ್ಸಿನ ಸಮುದಾಯದಿಂದ ಮೇಲಿನ ಮತ್ತು ಕೆಳಗಿನ ಲೋಕಗಳನ್ನು, ಬ್ರಹ್ಮಲೋಕ ನಿವಾಸಿಗಳಾದ ಋಷಿಗಳಿಂದ ಕೂಡಿಕೊಂಡು ಸಂಚರಿಸಿದರು. ತಮಗೆ ಇಷ್ಟಬಂದಲ್ಲಿ ಮೂರುಲೋಕಗಳಲ್ಲಿಯೂ ಪ್ರಯಾಣ ಮಾಡಿದರು.

ಕದಾಚಿತ್ ಪ್ರಾತರುತ್ಥಾಯ ಪಿಸ್ಪೃಕ್ಷುಃ ಸಲಿಲಂ ಶುಚಿ ।
ಧ್ರುವದ್ವಾರಭವಾಂ ಗಂಗಾಂ ಜಗಾಮಾವತತಾರ ಚ ॥೬॥

ಒಮ್ಮೆ ನಾರದರು ಬೆಳಗಾಗುತ್ತಲೇ ಮೇಲೆದ್ದು, ಪವಿತ್ರವಾದ ನೀರನ್ನು ಮುಟ್ಟಿ ಸ್ನಾನ ಮಾಡಬೇಕೆಂಬ ಅಪೇಕ್ಷೆಯಿಂದ ಧ್ರುವದ್ವಾರದಿಂದ ಹುಟ್ಟಿದ ಅರ್ಥಾತ್ ಉತ್ತರ ದಿಕ್ಕಿನಲ್ಲಿ ಹುಟ್ಟುವ ಗಂಗಾನದಿಯ ತೀರಕ್ಕೆ ಸ್ನಾನಕ್ಕಾಗಿ ಆಗಮಿಸಿದರು.

ಮೇರುಪಾದೋದ್ಭವಾಂ ಗಂಗಾಂ ನಾರಾಯಣಪದಚ್ಯುತಾಮ್ ।
ಸ ವೀಕ್ಷಮಾಣೋ ಹೃಷ್ಟಾತ್ಮಾ ತಂ ದೇಶಮಭಿಜಗ್ಮಿವಾನ್ ॥೭॥

ಯಂ ತು ದೇವಜವಾಕೀರ್ಣಂ ಸೂಕ್ಷ್ಮಕಾಂಚನವಾಲುಕಮ್ ।
ಗಂಗಾದ್ವೀಪಂ ಸಮಾಸಾದ್ಯ ನಾನಾವೃಕ್ಷೈರಲಂಕೃತಮ್ ॥೮॥

ಗಂಗೆಯು ಮೇರುಪಾದದಿಂದ ಹುಟ್ಟಿದವಳು. ನಾರಾಯಣನ ಪಾದಕಮಲಗಳಿಂದ ಚ್ಯುತಳಾದವಳು. ಅಂತಹ ಗಂಗೆಯನ್ನು ನೋಡಿದ ನಾರದರು ಸಂತುಷ್ಟರಾಗಿ ಆ ಪ್ರದೇಶಕ್ಕೆ ಆಗಮಿಸಿದರು. ಆ ಗಂಗಾತೀರದಲ್ಲಿಯಾದರೂ ತಣ್ಣನೆಯ ಗಾಳಿಯು ಬೀಸುತ್ತಿತ್ತು. ಸೂಕ್ಷ್ಮವಾದ ಬಂಗಾರದಂತಹ ಉಸುಕಿನ ಕಣಗಳಿಂದ ತುಂಬಿತ್ತು. ನಾನಾ ವೃಕ್ಷಗಳಿಂದ ಅಲಂಕೃತವಾಗಿತ್ತು. ಇಂತಹ ಗಂಗಾದ್ವೀಪವನ್ನು ಸಮೀಪಿಸಿದರು.

ಸಾಲತಾಲಾಶ್ವಕರ್ಣಾನಾಂ ಚಂದನಾನಾಂ ಚ ರಾಜಿಭಿಃ ।
ಮಂಡಿತಂ ವಿವಿಧೈಃ ಪುಷ್ಪೈರ್ಹಂಸಕಾರಂಡವಾಯುತಮ್ ॥೯॥

ಗಂಗೆಯ ಪಾರ್ಶ್ವಗಳಲ್ಲಿ ಸಾಲ, ತಾಳೆ, ಅಶ್ವಕರ್ಣ ಮೊದಲಾದ ವೃಕ್ಷಗಳು ವಿರಾಜಮಾನವಾಗಿದ್ದವು. ನಾನಾ ವಿಧವಾದ ಪುಷ್ಪಗಳಿಂದಲೂ, ಹಂಸ, ಕಾರಂಡವ ಪಕ್ಷಿಗಳಿಂದಲೂ ಶೋಭಾಯಮಾನವಾಗಿತ್ತು.

ನದೀಪುಲಿನಮಾಸಾದ್ಯ ಸ್ನಾತ್ವಾ ಸಂತರ್ಪ್ಯ ದೇವತಾಃ ।
ಜಜಾಪ ಜಪ್ಯಂ ಧರ್ಮಾತ್ಮಾ ತನ್ಮಯತ್ವೇನ ಭಾಸ್ವತಾ ॥೧೦॥

ಇಂತಹ ನದಿಯ ತೀರದಲ್ಲಿ ಸ್ನಾನ ಮಾಡಿ ಕುಳಿತು ದೇವತೆಗಳಿಗೆಲ್ಲ ತರ್ಪಣವನ್ನು ನೀಡಿ, ಮನಸ್ಸಿನಲ್ಲಿ ಭಗವಂತನೇ ಪ್ರಧಾನನೆಂದು ಚಿಂತಿಸುತ್ತಾ ಧರ್ಮಾತ್ಮರಾದ ನಾರದರು ಜಪಿಸಿದರು.

ಸಹಸ್ರನಯನಶ್ಚಾಪಿ ವಜ್ರೀ ಶಂಬರಪಾಕಹಾ ।
ತಸ್ಯಾ ದೇವರ್ಷಿಜುಷ್ಟಾಯಾಸ್ತೀರಮಭ್ಯಾಜಗಾಮ ಹ ॥೧೧॥

ಇದೇ ಪ್ರಸಂಗದಲ್ಲಿ ಸಹಸ್ರಾಕ್ಷನಾದ ಇಂದ್ರನು ಸ್ನಾನಕ್ಕೆಂದು ಆ ನದಿತೀರಕ್ಕೆ ಆಗಮಿಸಿದನು. ಯಾವ ಭಾಗದಲ್ಲಿ ದೇವರ್ಷಿ ನಾರದರು ಜಪಾನುಷ್ಠಾನ ಮಾಡುತ್ತಿದ್ದರೋ ಅದೇ ಜಾಗಕ್ಕೆ ಶಂಬರ, ಪಾಕ ಎಂಬ ಅಸುರರನ್ನು ಸಂಹರಿಸಿದ, ವಜ್ರಾಯುಧವನ್ನು ಧರಿಸಿದ ಇಂದ್ರದೇವನು ಆಗಮಿಸಿದನು.

ತಾವಾಪ್ಲುತ್ಯ ಯತಾತ್ಮಾನೌ ಕೃತಜಪ್ಯೌ ಸಮಾಸತುಃ ।
ನದ್ಯಾಃ ಪುಲಿನಮಾಸಾದ್ಯ ಸೂಕ್ಷ್ಮಕಾಂಚನವಾಲುಕಮ್ ॥೧೨॥

ಪುಣ್ಯಕರ್ಮಭಿರಾಖ್ಯಾತಾ ದೇವರ್ಷಿಕಥಿತಾಃ ಕಥಾಃ ।
ಚಕ್ರತುಸ್ತೌ ಕಥಾಶೀಲೌ ಶುಚಿಸಂಹೃಷ್ಟಮಾನಸೌ ।
ಪೂರ್ವವೃತ್ತವ್ಯಪೇತಾನಿ ಕಥಯಂತೌ ಸಮಾಹಿತೌ ॥೧೩॥

ಬಳಿಕ ಇಂದ್ರ-ನಾರದರು ಇಬ್ಬರು ಗಂಗಾನದಿಯಲ್ಲಿ ಸ್ನಾನ ಮಾಡಿ ಏಕಾಗ್ರಚಿತ್ತರಾಗಿ ಜಪಾದಿಗಳನ್ನು ಮುಗಿಸಿ, ಸೂಕ್ಷ್ಮವಾದ ಮತ್ತು ಸುವರ್ಣಮಯವಾದ ಕಣಗಳಿಂದ ಕೂಡಿರುವ ನದಿಯ ಮರಳಿನ ಮೇಲೆ ಕುಳಿತು, ಪುಣ್ಯಾತ್ಮರಿಂದಲೂ, ದೇವರ್ಷಿಗಳಿಂದಲೂ, ಮಹರ್ಷಿಗಳಿಂದಲೂ ಹೇಳಲ್ಪಟ್ಟ ಕಥೆಗಳನ್ನು ಪರಸ್ಪರ ಹೇಳಿಕೊಳ್ಳುತ್ತಿದ್ದರು. ಹೀಗೆ ಹಿಂದೆ ನಡೆದ ಚರಿತ್ರೆಗಳನ್ನು ಅನ್ಯೋನ್ಯವಾಗಿ ಹೇಳಿಕೊಳ್ಳುವ ಸಂದರ್ಭದಲ್ಲಿ,

ಅಥ ಭಾಸ್ಕರಮುದ್ಯಂತಂ ರಶ್ಮಿಜಾಲಪುರಸ್ಕೃತಮ್ ।
ಪೂರ್ಣಮಂಡಲಮಾಲೋಕ್ಯ ತಾವುತ್ಥಾಯೋಪತಸ್ಥತುಃ ॥೧೪॥

ಅನೇಕ ಕಿರಣಗಳ ಸಮುದಾಯದೊಡನೆ ಉದಯಮಾನನಾಗುತ್ತಿದ್ದ ಸೂರ್ಯನ ಪೂರ್ಣಮಂಡಲವು ಕಾಣಿಸಿತು. ಕೂಡಲೇ ಎದ್ದುನಿಂತು ಸೂರ್ಯೋಪಸ್ಥಾನವನ್ನು ಮಾಡಿದರು.

ಅಭಿತಸ್ತೂದಯಂತಂ ತಮರ್ಕಮರ್ಕಮಿವಾಪರಮ್ ।
ಆಕಾಶೇ ದದೃಶೇ ಜ್ಯೋತಿರುದ್ಯತಾರ್ಚಿಃಸಮಪ್ರಭಮ್ ॥೧೫॥

ಅದೇ ಸಂದರ್ಭದಲ್ಲಿ ಸೂರ್ಯನಂತೆ ಬೆಳಗುವ, ಎಲ್ಲ ಕಡೆಯೂ ಪ್ರಕಾಶದಿಂದ ತುಂಬಿರುವ, ಅಗ್ನಿಯ ಜ್ವಾಲೆಗೆ ಸಮಾನವಾದ ಪ್ರಭೆಗಳಿಂದ ಕಂಗೊಳಿಸುವ ದಿವ್ಯವಾದ ವಿಮಾನ ಒಂದನ್ನು ಆಕಾಶದಲ್ಲಿ ನೋಡಿದರು.

ತಯೋಃ ಸಮೀಪಂ ಸಂಪ್ರಾಪ್ತಂ ಪ್ರತ್ಯದೃಶ್ಯತ ಭಾರತ ।
ತತ್ ಸುಪರ್ಣಾರ್ಕಚರಿತಮಾಸ್ಥಿತಂ ವೈಷ್ಣವಂ ಪದಮ್ ।
ಭಾಭಿರಪ್ರತಿಮಂ ಭಾತಿ ತ್ರೈಲೋಕ್ಯಮವಭಾಸಯತ್ ॥೧೬॥

ಆ ವಿಮಾನವು ಕ್ರಮವಾಗಿ ಇಂದ್ರ-ನಾರದರ ಸಮೀಪಕ್ಕೆ ಆಗಮಿಸುತ್ತಿರುವಂತೆ ಕಾಣಿಸುತ್ತಿತ್ತು. ಗರುಡ ಮತ್ತು ಸೂರ್ಯರ ಮಾರ್ಗವನ್ನೇ ಅನುಸರಿಸಿ ಹೋಗುತ್ತಿದ್ದ ಆ ವಿಮಾನವು ಆಕಾಶದ ನಡುವೆ ತನ್ನ ಕಾಂತಿಯಿಂದ ಅಪ್ರತಿಮವಾಗಿ ಬೆಳಗುತ್ತಿತ್ತು. ಮೂರುಲೋಕಗಳನ್ನೇ ತನ್ನ ಬೆಳಕಿನಿಂದ ಬೆಳಗಿಸುತ್ತಿತ್ತು.

ದಿವ್ಯಾಭಿರೂಪಶೋಭಾಭಿರಪ್ಸರೋಭಿಃ ಪುರಸ್ಕೃತಾಮ್ ।
ಬೃಹತೀಮಂಶುಮತ್ಪ್ರಖ್ಯಾಂ ಬೃಹದ್ಭಾನೋರಿವಾರ್ಚಿಷಮ್ ॥೧೭॥

ದೇವಲೋಕದಿ ಬೆಳಗುವ ಅಪ್ಸರಾಸ್ತ್ರೀಯರಿಂದ ಪುರಸ್ಕೃತವಾಗಿತ್ತು. ಶ್ರೇಷ್ಠವಾದ ಅಂಶುಮಾಲಿಯಾದ ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿರುವ,

ನಕ್ಷತ್ರಕಲ್ಪಾಭರಣಾಂ ತಾರಾಪಂಕ್ತಿಸಮಸ್ರಜಮ್ ।
ಶ್ರಿಯಂ ದದೃಶತುಃ ಪದ್ಮಾಂ ಸಾಕ್ಷಾತ್ ಪದ್ಮತಲಸ್ಥಿತಾಮ್ ॥೧೮॥

ನಕ್ಷತ್ರ ಸದೃಶವಾದ ಆಭರಣಗಳಿಂದ ಅಲಂಕೃತಳಾಗಿರುವ, ನಕ್ಷತ್ರ ಪಂಕ್ತಿಯಂತೆ ವಿರಾಜಿಸುವ ಮಾಲೆಯನ್ನು ಧರಿಸಿರುವ, ಕಮಲದ ದಳಗಳ ನಡುವೆ ನಿಂತಿರುವ ಶ್ರೀರೂಪಿಣಿಯಾದ ಪದ್ಮಾ ಎನಿಸಿದ ಸಾಕ್ಷಾತ್ ಮಹಾಲಕ್ಷ್ಮಿಯನ್ನು ಇವರೀರ್ವರು ನೋಡಿದರು.

ಸಾವರುಹ್ಯ ವಿಮಾನಾಗ್ರಾದಂಗನಾನಾಮನುತ್ತಮಾ ।
ಅಭ್ಯಗಚ್ಛತ್ ತ್ರಿಲೋಕೇಶಂ ಶಕ್ರಂ ಚರ್ಷಿಂ ಚ ನಾರದಮ್ ॥೧೯॥

ಅಂಗನೆಯರಲ್ಲೇ ಅನುತ್ತಮಳಾದ ಲಕ್ಷ್ಮೀದೇವಿಯು ವಿಮಾನದಿಂದ ಕೆಳಗಿಳಿದು ತ್ರಿಲೋಕೇಶನಾದ ಇಂದ್ರನನ್ನು, ಋಷಿಗಳಾದ ನಾರದರನ್ನು ಸಮೀಪಿಸಿದರು.

ನಾರದಾನುಗತಃ ಸಾಕ್ಷಾನ್ಮಘವಾಂಸ್ತಾಮುಪಾಗಮತ್ ।
ಕೃತಾಂಜಲಿಪುಟೋ ದೇವೀಂ ನಿವೇದ್ಯಾತ್ಮಾನಮಾತ್ಮನಾ ॥೨೦॥

ನಾರದರಿಂದ ಕೂಡಿದ ಸಾಕ್ಷಾತ್ ಇಂದ್ರನು ಲಕ್ಷ್ಮಿಯನ್ನು ಸಮೀಪಿಸಿದನು. ಮನಃಪೂರ್ವಕವಾಗಿ ಭಕ್ತಿಯಿಂದ ಕೈಮುಗಿದು ದೇವಿಯ ಬಳಿ ನಿಂತನು.

ಚಕ್ರೇ ಚಾನುಪಮಾಂ ಪೂಜಾಂ ತಸ್ಯಾಶ್ಚಾಪಿ ಸ ಸರ್ವವಿತ್ ।
ದೇವರಾಜಃ ಶ್ರಿಯಂ ರಾಜನ್ ವಾಕ್ಯಂ ಚೇದಮುವಾಚ ಹ ॥೨೧॥

ಅಸದೃಶವಾದ ಪೂಜೆಯನ್ನು ಆ ಲಕ್ಷ್ಮೀದೇವಿಗೆ ಸಲ್ಲಿಸಿದನು. ಉತ್ತಮರ ಸೇವೆಯನ್ನು ಇಂದ್ರನು ಚೆನ್ನಾಗಿ ಬಲ್ಲವನಾಗಿದ್ದನು. ಬಳಿಕ ಇಂದ್ರನು ಲಕ್ಷ್ಮಿಯನ್ನು ಕುರಿತು ಈ ಮುಂದಿನ ಮಾತನ್ನು ಹೇಳಿದನು.

ಕಾ ತ್ವಂ ಕೇನ ಚ ಕಾರ್ಯೇಣ ಸಂಪ್ರಾಪ್ತಾ ಚಾರುಹಾಸಿನಿ ।
ಕುತಶ್ಚಾಗಮ್ಯತೇ ಸುಭ್ರು ಗಂತವ್ಯಂ ಕ್ವ ಚ ತೇ ಶುಭೇ ॥೨೨॥

ಚಾರುಹಾಸಿನಿಯೇ, ನೀನು ಯಾರು? ಯಾವ ಕಾರ್ಯಕ್ಕಾಗಿ ಇಲ್ಲಿಗೆ ಆಗಮಿಸಿರುವಿ. ಏಕೆ ಇಲ್ಲಿಗೆ ಆಗಮಿಸಿರುವಿ? ಸುಂದರವಾದ ಹುಬ್ಬುಳ್ಳವಳೇ, ಪರಮಮಂಗಳೆಯೇ, ನೀನು ಈಗ ಎಲ್ಲಿಗೆ ಹೋಗುವವಳಿದ್ದಿ?

ಶ್ರೀಃ

ಪುಣ್ಯೇಷು ತ್ರಿಷು ಲೋಕೇಷು ಸರ್ವೇ ಸ್ಥಾವರಜಂಗಮಾಃ ।
ಮಮಾತ್ಮಭಾವಮಿಚ್ಛಂತೋ ಯತಂತೇ ಪರಮಾತ್ಮನಾ ॥೨೩॥

ಲಕ್ಷ್ಮಿ – ಪುಣ್ಯತಮಗಳಾದ ಮೂರುಲೋಕಗಳಲ್ಲಿಯೂ ಇರುವ ಸಮಸ್ತ ಚರಾಚರ ಪ್ರಾಣಿಗಳು ನನ್ನ ಅನುಗ್ರಹವನ್ನು ಪಡೆಯಬೇಕೆಂಬ ಇಚ್ಛೆಯಿಂದ ಬಹಳ ಉತ್ಸಾಹ ಪೂರ್ವಕವಾಗಿ ಪ್ರಯತ್ನಗಳನ್ನು ಮಾಡುತ್ತಿರುತ್ತಾರೆ.

ಸಾಹಂ ವೈ ಪಂಕಜೇ ಜಾತಾ ಸೂರ್ಯರಶ್ಮಿವಿಬೋಧಿತೇ ।
ಭೂತ್ಯರ್ಥಂ ಸರ್ವಭೂತಾನಾಂ ಪದ್ಮಾ ಶ್ರೀಃ ಪದ್ಮಮಾಲಿನೀ ॥೨೪॥

ಅಂತಹ ಪ್ರಾಣಿಗಳಿಗೂ ಸಮಸ್ತ ವಿಧವಾದ ಐಶ್ವರ್ಯಗಳನ್ನು ಕೊಡುವ ಕಾರಣಗಳಿಂದ ನಾನು ಸೂರ್ಯನ ಕಿರಣಗಳಿಂದ ಹುಟ್ಟಿದವಳು. ನಾನೇ ಪದ್ಮೆಯೂ, ಶ್ರೀಯು, ಪದ್ಮಮಾಲೆಯನ್ನು ಧರಿಸಿದವಳು.

ಅಹಂ ಲಕ್ಷ್ಮೀರಹಂ ಭೂತಿಃ ಶ್ರೀಶ್ಚಾಹಂ ಬಲಸೂದನ ।
ಅಹಂ ಶ್ರದ್ಧಾ ಚ ಮೇಧಾ ಚ ಸನ್ನತಿರ್ವಿಜಿತಿಃ ಸ್ಥಿತಿಃ ॥೨೫॥

ಬಲಸೂದನನೇ, ಲಕ್ಷ್ಮಿಯು ನಾನೇ. ಭೂತಿಯೂ ನಾನೇ. ಶ್ರೀ ಎನ್ನುವವಳೂ ನಾನೇ. ಶ್ರದ್ಧಾ, ಮೇಧಾ, ಸನ್ನತಿ, ವಿಜಿತಿ, ಸ್ಥಿತಿಯೂ ನಾನೇ ಆಗಿದ್ದೇನೆ.

ಅಹಂ ಧೃತಿರಹಂ ಸಿದ್ಧಿರಹಂ ತ್ವಿಡ್ಭೂತಿರೇವ ಚ ।
ಅಹಂ ಸ್ವಾಹಾ ಸ್ವಧಾ ಚೈವ ಸಂಸ್ತುತಿರ್ನಿಯತಿಃ ಕೃತಿಃ ॥೨೬॥

ನಾನೇ ಧೃತಿ, ಸಿದ್ಧಿ, ಕಾಂತಿ, ಭೂತಿ, ಸ್ವಾಹಾ, ಸ್ವಧಾ, ಸಂಸ್ತುತಿ, ನಿಯತಿ, ಕೃತಿ ಮೊದಲಾದ ನಾಮಗಳಿಂದ ಭೂಷಿತಳಾಗಿದ್ದೇನೆ.

ರಾಜ್ಞಾಂ ವಿಜಯಮಾನಾನಾಂ ಸೇನಾಗ್ರೇಷು ಧ್ವಜೇಷು ಚ ।
ನಿವಾಸೇ ಧರ್ಮಶೀಲಾನಾಂ ವಿಷಯೇಷು ಪುರೇಷು ಚ ॥೨೭॥

ವಿಜಯವನ್ನು ಬಯಸುವ ರಾಜರ ಸೇನಾಗ್ರಗಳಲ್ಲಿ, ಪತಾಕೆಗಳಲ್ಲಿ ಧರ್ಮಶೀಲರಾದ ಶ್ರೇಷ್ಠ ಪುರುಷರ ನಿವಾಸ ಸ್ಥಾನಗಳಲ್ಲಿ ಅಂತಹ ಧರ್ಮಶೀಲತೆ ಇರುವ ದೇಶಗಳಲ್ಲಿ, ಪಟ್ಟಣಗಳಲ್ಲಿಯೂ ನಾನು ಯಾವಾಗಲೂ ವಾಸ ಮಾಡುತ್ತೇನೆ.

ಜಿತಕಾಶಿನಿ ಶೂರೇ ಚ ಸಂಗ್ರಾಮೇಷ್ವನಿವರ್ತಿನಿ ।
ನಿವಸಾಮಿ ಮನುಷ್ಯೇಂದ್ರೇ ಸದೈವ ಬಲಸೂದನ ॥೨೮॥

ಬಲಸೂದನನೇ, ಯುದ್ಧಭೂಮಿಯಿಂದ ವಿಮುಖನಾಗಿ ಹಿಂದಿರುಗದೆ ವಿಜಯದಿಂದ ಬೆಳಗುವ ಶೂರನಾದ ರಾಜನಲ್ಲಿಯೂ ನಾನು ವಾಸ ಮಾಡುತ್ತೇನೆ.

ಧರ್ಮನಿತ್ಯೇ ಮಹಾಬುದ್ಧೌ ಬ್ರಹ್ಮಣ್ಯೇ ಸತ್ಯವಾದಿನಿ ।
ಪ್ರಶ್ರಿತೇ ದಾನಶೀಲೇ ಚ ಸದೈವ ನಿವಸಾಮ್ಯಹಮ್ ॥೨೯॥

ನಿತ್ಯವೂ ಧರ್ಮದಲ್ಲಿ ರತನಾಗಿರುವ ಮಹಾಬುದ್ಧಿಶಾಲಿಯಾದ, ಬ್ರಾಹ್ಮಣ ಪ್ರಿಯನಾದ, ಸತ್ಯವಾದಿಯಾದ, ವಿನಯಶೀಲನಾದ, ದಾನಶೀಲನಾದ ಪುರುಷನಲ್ಲಿ ನಾನು ಯಾವಾಗಲೂ ವಾಸ ಮಾಡುತ್ತೇನೆ.

ಅಸುರೇಷ್ವವಸಂ ಪೂರ್ವಂ ಸತ್ಯಧರ್ಮನಿಬಂಧನಾ ।
ವಿಪರೀತಾಂಸ್ತು ತಾನ್ ಬುದ್ಧ್ವಾ ತ್ವಯಿ ವಾಸಮರೋಚಯಮ್ ॥೩೦॥

ಅಸುರರಲ್ಲಿದ್ದ ಸತ್ಯ-ಧರ್ಮಗಳಿಂದ ಬಂಧಿಸಲ್ಪಟ್ಟವಳಾಗಿ ನಾನು ಈ ಮೊದಲು ಅಸುರರಲ್ಲಿಯೇ ವಾಸ ಮಾಡಿದ್ದೆನು. ಆದರೆ ಅವರು ಸತ್ಯ-ಧರ್ಮಗಳನ್ನು ಅತಿಕ್ರಮಿಸಿದರೆಂದು ತಿಳಿದು ನಿನ್ನಲ್ಲಿ ವಾಸ ಮಾಡಬೇಕೆಂದು ಅಪೇಕ್ಷಿಸಿದ್ದೇನೆ.

ಶಕ್ರಃ

ಕಥಂವೃತ್ತೇಷು ದೈತ್ಯೇಷು ತ್ವಮವಾತ್ಸೀರ್ವರಾನನೇ ।
ದೃಷ್ಟ್ವಾ ಚ ಕಿಮಿಹಾಗಾಸ್ತ್ವಂ ಹಿತ್ವಾ ದೈತೇಯದಾನವಾನ್ ॥೩೧॥

ಸುಮುಖಿಯೇ, ಯಾವ ವಿಧವಾದ ಆಚಾರ-ವ್ಯವಹಾರಗಳನ್ನಿಟ್ಟುಕೊಂಡಿದ್ದ ದೈತ್ಯರಲ್ಲಿ ನೀನು ವಾಸ ಮಾಡಿಕೊಂಡಿದ್ದೆ? ನೀನು ಆ ದೈತ್ಯ-ದಾನವರನ್ನು ತ್ಯಜಿಸಿ ಬರಲು ಕಂಡ ದುರ್ಗುಣಗಳೇನು?

ಶ್ರೀಃ

ಸ್ವಧರ್ಮಮನುತಿಷ್ಠತ್ಸು ಧೈರ್ಯಾದಚಲಿತೇಷು ಚ ।
ಸ್ವರ್ಗಮಾರ್ಗಾಭಿರಾಮೇಷು ಸತ್ತ್ವೇಷು ನಿರತಾ ಹ್ಯಹಮ್ ॥೩೨॥

ಇಂದ್ರನೇ, ಯಾರು ತಮ್ಮ ಧರ್ಮಗಳಲ್ಲಿ ನಿರತರಾಗಿರುತ್ತಾರೋ, ಧೈರ್ಯದಿಂದ ವಿಲಚಿತರಾಗುವುದಿಲ್ಲವೋ, ಸ್ವರ್ಗಮಾರ್ಗಗಳಲ್ಲಿ ಆಸಕ್ತರಾಗಿರುತ್ತಾರೋ ಅಂತಹ ಸತ್ತ್ವಯುತರಲ್ಲಿ ನಾನು ವಾಸ ಮಾಡುತ್ತೇನೆ.

ದಾನಾಧ್ಯಯನಯಜ್ಞೇಜ್ಯಾ ಗುರುದೈವತಪೂಜನಮ್ ।
ವಿಪ್ರಾಣಾಮತಿಥೀನಾಂ ಚ ತೇಷಾಂ ನಿತ್ಯಮವರ್ತತ ॥೩೩॥

ಹಿಂದೆ ದೈತ್ಯರು ದಾನ, ಅಧ್ಯಯನ, ಯಜ್ಞ, ಗುರು-ದೇವತಾಪೂಜೆ, ವಿಪ್ರರುಗಳಿಗೆ ಅತಿಥಿಗಳಿಗೆ ಆರಾಧನೆ, ಇವುಗಳನ್ನು ನಿತ್ಯವೂ ಮಾಡುತ್ತಿದ್ದರು.

ಸುಸಮ್ಮೃಷ್ಟಗೃಹಾಶ್ಚಾಸನ್ ಜಿತಸ್ತ್ರೀಕಾ ಹುತಾಗ್ನಯಃ ।
ಗುರುಶುಶ್ರೂಷವೋ ದಾಂತಾ ಬ್ರಹ್ಮಣ್ಯಾಃ ಸತ್ಯವಾದಿನಃ ॥೩೪॥

ಚೆನ್ನಾಗಿ ಗುಡಿಸಿ, ಸಾರಿಸಿದ ಶುದ್ಧವಾದ ಮನೆಗಳಲ್ಲಿ ಇರುತ್ತಿದ್ದರು. ಪತ್ನಿಯರನ್ನು ತಮ್ಮ ಅಂತಃಕರಣದಿಂದ ಜಯಿಸಿಕೊಂಡಿದ್ದರು. ಅಗ್ನಿಹೋತ್ರಿಗಳಾಗಿದ್ದರು. ಗುರು ಶುಶ್ರೂಷೆಯಲ್ಲಿ ಆಸಕ್ತರಾಗಿದ್ದರು. ಇಂದ್ರಿಯನಿಗ್ರಹಶೀಲರು, ಬ್ರಾಹ್ಮಣಪ್ರಿಯರು, ಸತ್ಯವಾದಿಗಳು ಆಗಿದ್ದರು.

ಶ್ರದ್ದಧಾನಾ ಜಿತಕ್ರೋಧಾ ದಾನಶೀಲಾನಸೂಯಕಾಃ ।
ಭೃತಪುತ್ರಾ ಭೃತಾಮಾತ್ಯಾ ಭೃತದಾರಾ ಹ್ಯನೀರ್ಷವಃ ॥೩೫॥

ಶ್ರದ್ಧಾವಂತರು, ಜಿತಕ್ರೋಧರು, ದಾನಶೀಲರು, ಅಸೂಯಾ ರಹಿತರಾಗಿ, ಮಕ್ಕಳು, ಮಂತ್ರಿಗಳು, ಹೆಂಡಂದಿರು ಇವರನ್ನು ಚೆನ್ನಾಗಿ ಪೋಷಿಸುತ್ತಿದ್ದರು. ಯಾರಲ್ಲಿಯೂ ಈರ್ಷ್ಯೆಯನ್ನು ಹೊಂದುತ್ತಿರಲಿಲ್ಲ.

ಅಮರ್ಷಣಾ ನ ಚಾನ್ಯೋನ್ಯಂ ಸ್ಪೃಹಯಂತಿ ಕದಾಚನ ।
ನ ಚ ಜಾತೂಪತಪ್ಯಂತೇ ಧೀರಾಃ ಪರಸಮೃದ್ಧಿಭಿಃ ॥೩೬॥

ಸಿಟ್ಟಿನಿಂದ ಮತ್ತೊಬ್ಬರು ಇನ್ನೊಬ್ಬರ ಸಂಪತ್ತಿಗೆ ಆಸೆ ಪಡುತ್ತಿರಲಿಲ್ಲ. ಯಾವಾಗಲೂ ಬೇರೆಯವರ ಸಮೃದ್ಧಿಯಿಂದ ಪರಿತಾಪ ಪಡುತ್ತಿರಲಿಲ್ಲ.

ದಾತಾರಃ ಸಂಗೃಹೀತಾರ ಆರ್ಯಾಃ ಕರುಣವೇದಿನಃ ।
ಮಹಾಪ್ರಸಾದಾ ಋಜವೋ ದೃಢಭಕ್ತಾ ಜಿತೇಂದ್ರಿಯಾಃ ॥೩೭॥

ದಾನಬುದ್ಧಿಯುಳ್ಳವರಾಗಿದ್ದರು. ಸನ್ಮಾರ್ಗದಿಂದ ಸಂಪಾದಿಸುತ್ತಿದ್ದರು. ಪೂಜ್ಯರಾಗಿದ್ದರು. ಕರುಣಾಹೃದಯಿಗಳಾಗಿದ್ದರು. ಇತರರಲ್ಲಿ ಉತ್ತಮ ಬುದ್ಧಿಯುಳ್ಳವರಾಗಿದ್ದರು. ಸರಳ ಸ್ವಭಾವದವರು, ದೃಢಭಕ್ತರು, ಜಿತೇಂದ್ರಿಯರೂ ಆಗಿದ್ದರು.

ಸಂತುಷ್ಟಭೃತ್ಯಸಚಿವಾಃ ಕೃತಜ್ಞಾಃ ಪ್ರಿಯವಾದಿನಃ ।
ಯಥಾರ್ಹಮಾನಾರ್ಹಕರಾ ಹ್ರೀನಿಷೇವಾ ಯತವ್ರತಾಃ ॥೩೮॥

ಭೃತ್ಯರು, ಮಂತ್ರಿಗಳು ಸಂತುಷ್ಟರಾಗಿರುವಂತೆ ನೋಡಿಕೊಳ್ಳುತ್ತಿದ್ದರು. ಕೃತಜ್ಞತೆ, ಪ್ರಿಯವಾದಿತ್ವ, ಯೋಗ್ಯರಿಗೆ ಸನ್ಮಾನ, ಲಜ್ಜೆ, ವ್ರತನಿಯಮಗಳು ಇವುಗಳಲ್ಲಿ ರತರಾಗಿದ್ದರು.

ನಿತ್ಯಂ ಪರ್ವಸು ಸುಸ್ನಾತಾಃ ಸ್ವನುಲಿಪ್ತಾಃ ಸ್ವಲಂಕೃತಾಃ ।
ಉಪವಾಸತಪಃಶೀಲಾಃ ಪ್ರತೀತಾ ಬ್ರಹ್ಮವಾದಿನಃ ॥೩೯॥

ಯಾವಾಗಲೂ ಪರ್ವದಿವಸಗಳಲ್ಲಿ ವಿಶೇಷವಾಗಿ ಸ್ನಾನ ಮಾಡಿ, ಗಂಧವನ್ನು ಹಚ್ಚಿಕೊಂಡು, ತಮ್ಮ ಶರೀರವನ್ನು ತುಂಬಾ ಚೆನ್ನಾಗಿ ಅಲಂಕರಿಸಿಕೊಳ್ಳುತ್ತಿದ್ದರು. ಉಪವಾಸ, ತಪಸ್ಸುಗಳಲ್ಲಿ ಆಸಕ್ತರಾಗಿದ್ದರು. ಬ್ರಹ್ಮವಾದಿಗಳೆಂದೇ ಪ್ರಸಿದ್ಧರಾಗಿದ್ದರು.

ನೈನಾನಭ್ಯುದಿಯಾತ್ ಸೂರ್ಯೋ ನ ಚಾಪ್ಯಾಸನ್ ಪ್ರಗೇನಿಶಾಃ ।
ರಾತ್ರೌ ದಧಿ ಚ ಸಕ್ತೂಂಶ್ಚ ನಿತ್ಯಮೇವ ವ್ಯವರ್ಜಯನ್ ॥೪೦॥

ದೈತ್ಯರು ಏಳುವ ಮೊದಲು ಸೂರ್ಯನು ಉದಯಿಸುತ್ತಿರಲಿಲ್ಲ. ಅರ್ಥಾತ್ ಸೂರ್ಯೋದಯಕ್ಕಿಂತ ಮೊದಲು ಏಳುತ್ತಿದ್ದರು. ರಾತ್ರಿಯಲ್ಲಿ ಮೊಸರನ್ನಾಗಲೀ, ಹುರಿ ಹಿಟ್ಟನ್ನಾಗಲೀ ನಿತ್ಯವೂ ತ್ಯಾಗ ಮಾಡಿದ್ದರು.

ಕಾಲ್ಯಂ ಘೃತಂ ಚಾನ್ವವೇಕ್ಷನ್ ಪ್ರಯತಾ ಬ್ರಹ್ಮಚಾರಿಣಃ ।
ಮಂಗಲಾನಪಿ ಚಾಪಶ್ಯನ್ ಬ್ರಾಹ್ಮಣಾಂಶ್ಚಾಪ್ಯಪೂಜಯನ್ ॥೪೧॥

ಜಿತೇಂದ್ರಿಯರು, ಬ್ರಹ್ಮಚಾರಿಗಳು ಆಗಿ ಪ್ರಾತಃಕಾಲದಲ್ಲಿ ಎದ್ದು ತುಪ್ಪದಲ್ಲಿ ಮುಖವನ್ನು ನೋಡಿಕೊಳ್ಳುತ್ತಿದ್ದರು. ಹಾಗೆ ಮಂಗಳವಸ್ತುಗಳನ್ನು ಸಂದರ್ಶಿಸುತ್ತಿದ್ದರು. ಬ್ರಾಹ್ಮಣರನ್ನು ಪೂಜಿಸುತ್ತಿದ್ದರು.

ಸದಾ ಹಿ ದದತಾಂ ಧರ್ಮಃ ಸದಾ ಚಾಪ್ರತಿಗೃಹ್ಣತಾಮ್ ।
ಅರ್ಧಂ ಚ ರಾತ್ರ್ಯಾಃ ಸ್ವಪತಾಂ ದಿವಾ ಚಾಸ್ವಪತಾಂ ತಥಾ ॥೪೨॥

ಯಾವಾಗಲೂ ಧರ್ಮವನ್ನು ಧರಿಸಿದ್ದರು. ದಾನ ತೆಗೆದುಕೊಳ್ಳುತ್ತಿರಲಿಲ್ಲ. ರಾತ್ರಿಯ ಅರ್ಧಭಾಗವು ಕಳೆದ ಬಳಿಕ ಮಲಗುತ್ತಿದ್ದರು. ಹಗಲಿನಲ್ಲಿ ಮಲಗುತ್ತಿರಲಿಲ್ಲ.

ಕೃಪಣಾನಾಥವೃದ್ಧಾನಾಂ ದುರ್ಬಲಾತುರಯೋಷಿತಾಮ್ ।
ದಾಯಂ ಚ ಸಂವಿಭಾಗಂ ಚ ನಿತ್ಯಮೇವಾನುಮೋದತಾಮ್ ॥೪೩॥

ಕೃಪಣರ, ಅನಾಥರ, ವೃದ್ಧರ, ದುರ್ಬಲರ, ಸ್ತ್ರೀಯರ ವಿಷಯದಲ್ಲಿ ದಯೆಯನ್ನು ತೋರಿಸುತ್ತಿದ್ದರು. ಅವರಿಗೆ ಬೇಕಾದ ಅನ್ನ-ವಸ್ತ್ರಗಳನ್ನು ವಿಭಾಗಿಸಿಕೊಡುತ್ತಿದ್ದರು. ನಿತ್ಯವೂ ಇಂತಹ ಸತ್ಕಾರ್ಯಗಳನ್ನು ಅನುಮೋದನೆ ಮಾಡುತ್ತಿದ್ದ ದಾನವೇಂದ್ರರಲ್ಲಿ ನಾನು ವಾಸಿಸುತ್ತಿದ್ದೆನು.

ವಿಷಣ್ಣಂ ತ್ರಸ್ತಮುದ್ವಿಗ್ನಂ ಭಯಾರ್ತಂ ವ್ಯಾಧಿಪೀಡಿತಮ್ ।
ಹೃತಸ್ವಂ ವ್ಯಸನಾರ್ತಂ ಚ ನಿತ್ಯಮಾಶ್ವಾಸಯಂತಿ ತೇ ॥೪೪॥

ದುಃಖಿತನೂ, ಹೆದರಿದವನೂ, ಉದ್ವೇಗಿಯೂ, ದುಃಖಿತನೂ, ವ್ಯಾಧಿ ಪೀಡಿತನೂ, ಸಂಪತ್ತನ್ನು ಕಳೆದುಕೊಂಡವನೂ, ವ್ಯಸನದಿಂದ ದುಃಖಿತನೂ ಇವರನ್ನು ನಿತ್ಯವೂ ಸಂತೈಸುತ್ತಿದ್ದರು.

ಧರ್ಮಮೇವಾನ್ವವರ್ತಂತ ನ ಹಿಂಸಂತಿ ಪರಸ್ಪರಮ್ ।
ಅನುಕೂಲಾಶ್ಚ ಕಾರ್ಯೇಷು ಗುರುವೃದ್ಧೋಪಸೇವಿನಃ ॥೪೫॥

ಯಾವಾಗಲೂ ಧರ್ಮಮಾರ್ಗವನ್ನೇ ಅನುಸರಿಸಿ ನಡೆಯುತ್ತಿದ್ದರು. ಒಬ್ಬರು ಮತ್ತೊಬ್ಬರನ್ನು ಹಿಂಸಿಸುತ್ತಿರಲಿಲ್ಲ. ಪರಸ್ಪರ ಸಹಕಾರವುಳ್ಳವರಾಗಿದ್ದರು. ಗುರು-ವೃದ್ಧರನ್ನು ಸೇವಿಸುತ್ತಿದ್ದರು.

ಪಿತೃದೇವಾತಿಥೀಂಶ್ಚೈವ ಯಥಾವತ್ತೇಭ್ಯಪೂಜಯನ್ ।
ಅವಶೇಷಾಣಿ ಚಾಶ್ನಂತಿ ನಿತ್ಯಂ ಸತ್ಯತಪೋರತಾಃ ॥೪೬॥

ಪಿತೃಗಳು, ದೇವತೆಗಳು, ಅತಿಥಿಗಳು ಇವರನ್ನು ವಿಧಿವತ್ತಾಗಿ ಪೂಜಿಸುತ್ತಿದ್ದರು. ಅವರಿಗೆ ನೀಡಿ, ಉಳಿದ ಪದಾರ್ಥವನ್ನು ಸತ್ಯ-ತಪಸ್ಸಿನಲ್ಲಿ ನಿರತರಾದ ಅವರು ನಿತ್ಯವೂ ಸೇವಿಸುತ್ತಿದ್ದರು.

ನೈಕೇಽಶ್ನಂತಿ ಸುಸಂಪನ್ನಂ ನ ಗಚ್ಛಂತಿ ಪರಸ್ತ್ರಿಯಮ್ ।
ಸರ್ವಭೂತೇಷ್ವವರ್ತಂತ ಯಥಾತ್ಮನಿ ದಯಾಂ ಪ್ರತಿ ॥೪೭॥

ಎಂದಿಗೂ ಮೃಷ್ಟಾನ್ನವನ್ನು ಒಬ್ಬರೇ ಉಣ್ಣುತ್ತಿರಲಿಲ್ಲ. ಬಂಧು-ಬಾಂಧವರೊಂದಿಗೆ ಸೇರಿಕೊಂಡು ಭೋಜನ ಮಾಡುತ್ತಿದ್ದರು. ಪರಸ್ತ್ರೀ ಸಂಗವನ್ನು ಮಾಡುತ್ತಿರಲಿಲ್ಲ. ಇತರರನ್ನು ತಮ್ಮಂತೆ ಕಂಡು ಎಲ್ಲಾ ಪ್ರಾಣಿಗಳ ವಿಷಯದಲ್ಲಿ ದಯೆ ತೋರುತ್ತಿದ್ದರು.

ನೈವಾಕಾಶೇ ನ ಪಶುಷು ನಾಯೋನೌ ನ ಚ ಪರ್ವಸು ।
ಇಂದ್ರಿಯಸ್ಯ ವಿಸರ್ಗಂ ತೇऽರೋಚಯಂತ ಕದಾಚನ ॥೪೮॥

ಆಕಾಶದಲ್ಲಾಗಲೀ, ಪಶುಗಳಲ್ಲಾಗಲೀ, ನೀಚಯೋನಿಗಳಲ್ಲಾಗಲೀ, ಪರ್ವ ಸಮಯಗಳಲ್ಲಾಗಲೀ, ವೀರ್ಯೋತ್ಸರ್ಜನೆಯನ್ನು ಮಾಡಲು ಅವರು ಇಷ್ಟ ಪಡುತ್ತಿರಲಿಲ್ಲ.

ನಿತ್ಯಂ ದಾನಂ ತಥಾ ದಾಕ್ಷ್ಯಮಾರ್ಜವಂ ಚೈವ ನಿತ್ಯದಾ ।
ಉತ್ಸಾಹಶ್ಚಾನಹಂಕಾರಃ ಪರಮಂ ಸೌಹೃದಂ ಕ್ಷಮಾ ॥೪೯॥

ಯಾವಾಗಲೂ ದಾನ, ಇಂದ್ರಿಯನಿಗ್ರಹ, ಸರಳತೆ, ಉತ್ಸಾಹ, ಅನಹಂಕಾರ, ಶ್ರೇಷ್ಠ ಸೌಹಾರ್ದ, ಕ್ಷಮೆ ಇವುಗಳಲ್ಲಿ ನಿರತರಾಗಿದ್ದರು.

ಸತ್ಯಂ ದಾನಂ ತಪಃ ಶೌಚಂ ಕಾರುಣ್ಯಂ ವಾಗನಿಷ್ಠುರಾ ।
ಮಿತ್ರೇಷು ಚಾನಭಿದ್ರೋಹಃ ಸರ್ವಂ ತೇಷ್ವಭವತ್ ಪ್ರಭೋ ॥೫೦॥

ಸತ್ಯ, ದಾನ, ತಪಸ್ಸು, ಶೌಚ, ಕಾರುಣ್ಯ, ಮೃದುಮಾತು, ಮಿತ್ರರಲ್ಲಿ ಅದ್ರೋಹ - ಇವೆಲ್ಲ ಗುಣಗಳು ಹಿಂದೆ ಅವರಲ್ಲಿದ್ದವು.

ನಿದ್ರಾ ತಂದ್ರೀರಸಂಪ್ರೀತಿರಸೂಯಾ ಚಾನವೇಕ್ಷಿತಾ ।
ಅರತಿಶ್ಚ ವಿಷಾದಶ್ಚ ನ ಸ್ಪೃಹಾ ಚಾವಿಶಂತ ತಾನ್ ॥೫೧॥

ನಿದ್ರೆ, ಆಲಸ್ಯ, ಅಪ್ರಸನ್ನತೆ, ಅಸೂಯೆ, ದೋಷದೃಷ್ಟಿ, ಅವಿವೇಕ, ಅಪ್ರೀತಿ, ವಿಷಾದ, ಕಾಮನೆ ಈ ಯಾವ ದುರ್ಗುಣಗಳೂ ಅವರನ್ನು ಪ್ರವೇಶಿಸುತ್ತಿರಲಿಲ್ಲ.

ಸಾಹಮೇವಂಗುಣೇಷ್ವೇವ ದಾನವೇಷ್ವವಸಂ ಪುರಾ ।
ಪ್ರಜಾಸರ್ಗಮುಪಾದಾಯ ನೈಕಂ ಯುಗವಿಪರ್ಯಯಮ್ ॥೫೨॥

ಹೀಗೆ ಅನೇಕ ಗುಣಗಳನ್ನು ಹೊಂದಿದ್ದ ದಾನವರ ಬಳಿಯಲ್ಲಿ, ಸೃಷ್ಟಿಯ ಆರಂಭದಿಂದ ಇಲ್ಲಿಯ ತನಕ ಅನೇಕ ಯುಗಗಳ ಪರ್ಯಂತ ವಾಸ ಮಾಡಿದ್ದೆನು.

ತತಃ ಕಾಲವಿಪರ್ಯಾಸೇ ತೇಷಾಂ ಗುಣವಿಪರ್ಯಯಾತ್ ।
ಅಪಶ್ಯಂ ವಿಗತಂ ಧರ್ಮಂ ಕಾಮಕ್ರೋಧವಶಾತ್ಮನಾಮ್ ॥೫೩॥

ಬಳಿಕ ಕಾಲವ್ಯತ್ಯಾಸದಿಂದ ದೈತ್ಯರಲ್ಲಿದ್ದ ಗುಣಗಳೆಲ್ಲ ವ್ಯತ್ಯಾಸ ಹೊಂದಿದವು. ಒಳ್ಳೆಯ ಗುಣಗಳು ಕೆಟ್ಟ ಗುಣಗಳಾದವು. ಕಾಲ ವಿಪರ್ಯಾಸದಿಂದ ಕಾಮ, ಕ್ರೋಧ ವಶರಾದ ಅವರಿಂದ ಧರ್ಮವು ದೂರ ಸರಿಯಿತು. ಇದನ್ನು ನಾನು ಕಂಡೆನು.

ಸಭಾಸದಾಂ ತೇ ವೃದ್ಧಾನಾಂ ಸತ್ಯಾಃ ಕಥಯತಾಂ ಕಥಾಃ ।
ಪ್ರಾಹಸನ್ನಭ್ಯಸೂಯಂಶ್ಚ ಸರ್ವವೃದ್ಧಾನ್ ಗುಣಾವರಾಃ ॥೫೪॥

ರಾಜಸಭೆಗಳಲ್ಲಿ ವೃದ್ಧರು ನೀತಿಯುಕ್ತವಾದ ಕಥೆಗಳನ್ನು ಹೇಳಿದರೆ ಅವುಗಳನ್ನು ಅಧಮರಾದ ರಾಕ್ಷಸರು ಅಪಹಾಸ್ಯ ಮಾಡಿ ತಿರಸ್ಕರಿಸುತ್ತಿದ್ದರು. ವೃದ್ಧ ಸಮ್ಮತವಾದ ಮಾತುಗಳಲ್ಲಿ ದೋಷಗಳನ್ನೇ ಈಗ ಕಾಣುತ್ತಿದ್ದಾರೆ.

ಯೂನಃ ಸಹಸಮಾಸೀನಾನ್ ವೃದ್ಧಾನಭಿಗತಾನ್ ಸತಃ ।
ನಾಭ್ಯುತ್ಥಾನಾಭಿವಾದಾಭ್ಯಾಂ ಯಥಾಪೂರ್ವಮಪೂಜಯನ್ ॥೫೫॥

ಸಣ್ಣವರಾದ ವ್ಯಕ್ತಿಗಳು, ವೃದ್ಧರು ಮುಂದೆ ಬಂದಾಗ ಆಸನದಿಂದ ಎದ್ದು ನಿಂತು ಗೌರವಿಸುವುದಿಲ್ಲ. ಹಿಂದಿನಂತೆ ಎದ್ದು ನಿಂತು ಅಭಿವಾದನ ಮಾಡಿ ಅವರನ್ನು ಪೂಜಿಸುವ ಸ್ವಭಾವವನ್ನು ಮರೆತಿದ್ದಾರೆ.

ವರ್ತಯಂತ್ಯೇವ ಪಿತರಿ ಪುತ್ರಾಃ ಪ್ರಭವತಾऽऽತ್ಮನಃ ।
ಅಮಿತ್ರಭೃತ್ಯತಾಂ ಪ್ರಾಪ್ಯ ಖ್ಯಾಪಯಂತೋऽನಪತ್ರಪಾಃ ॥೫೬॥

ತಂದೆಯು ಬದುಕಿದ್ದಾಗಲೇ ಮಗನೇ ಯಜಮಾನನಾಗುತ್ತಾನೆ. ಶತ್ರುವಿನ ದಾಸನಾಗುವುದರ ಜೊತೆಗೆ ಆ ದಾಸ್ಯವನ್ನು ನಾಚಿಕೆಯಿಲ್ಲದೆ ಬೇರೆಯವರ ಬಳಿ ಹೇಳಿಕೊಳ್ಳುತ್ತಾರೆ.

ತಥಾ ಧರ್ಮಾದಪೇತೇನ ಕರ್ಮಣಾ ಗರ್ಹಿತೇನ ಯೇ ।
ಮಹತಃ ಪ್ರಾಪ್ನುವಂತ್ಯರ್ಥಾಂಸ್ತೇಷ್ವೇಷಾಮಭವತ್ ಸ್ಪೃಹಾ ॥೫೭॥

ಧರ್ಮವಿರುದ್ಧವಾದ, ನಿಂದಿತವಾದ ವೃತ್ತಿಗಳಿಂದ ಧನ ಸಂಪಾದಿಸುತ್ತಿದ್ದಾರೆ. ಈ ಧನ ಸಂಗ್ರಹದಿಂದ ಅವರ ಅಭಿಲಾಷೆಯು ಮತ್ತೂ ಅಧಿಕವಾಗುತ್ತಿದೆ.

ಉಚ್ಚೈಶ್ಚಾಪ್ಯವದನ್ ರಾತ್ರೌ ನೀಚೈಸ್ತತ್ರಾಗ್ನಿರಜ್ವಲತ್ ।
ಪುತ್ರಾಃ ಪಿತ್ರ್ಯಾನಭ್ಯವದನ್ ಭಾರ್ಯಾಶ್ಚಾಭ್ಯವದನ್ ಪತೀನ್ ॥೫೮॥

ದೈತ್ಯರು ರಾತ್ರಿ ಸಮಯದಲ್ಲಿ ಜೋರಾಗಿ ಕಿರುಚುತ್ತಾರೆ. ಅಗ್ನಿಹೋತ್ರಕ್ಕೆ ಸಂಬಂಧಿಸಿದ ಅಗ್ನಿಯು ಶಾಂತವಾಗಿ ನಶಿಸುತ್ತಿದೆ. ಮಕ್ಕಳು ತಂದೆಯನ್ನು, ಸ್ತ್ರೀಯರು ಪತಿಯನ್ನು ಅತಿಕ್ರಮಿಸಿ ವರ್ತಿಸುತ್ತಿದ್ದಾರೆ.

ಮಾತರಂ ಪಿತರಂ ವೃದ್ಧಮಾಚಾರ್ಯಮತಿಥಿಂ ಗುರುಮ್ ।
ಗುರುವನ್ನಾಭ್ಯನಂದಂತ ಕುಮಾರಾನ್ನಾನ್ವಪಾಲಯನ್ ॥೫೯॥

ತಂದೆ-ತಾಯಿಗಳನ್ನು, ವೃದ್ಧರನ್ನು, ಆಚಾರ್ಯರನ್ನು, ಅತಿಥಿಗಳನ್ನು, ಗುರುಗಳನ್ನು ಕಿರಿಯರಿಂದು ಗೌರವಿಸುತ್ತಿಲ್ಲ. ಮಕ್ಕಳ ಲಾಲನೆ-ಪಾಲನೆಗಳನ್ನು ಸರಿಯಾಗಿ ಮಾಡುತ್ತಿಲ್ಲ.

ಭಿಕ್ಷಾಂ ಬಲಿಮದತ್ವಾ ಚ ಸ್ವಯಮನ್ನಾನಿ ಭುಂಜತೇ ।
ಅನಿಷ್ಟ್ವಾ ಸಂವಿಭಜ್ಯಾಥ ಪಿತೃದೇವಾತಿಥೀನ್ ಗುರೂನ್ ॥೬೦॥

ಭಿಕ್ಷೆಯನ್ನಾಗಲೀ, ವೈಶ್ವದೇವ- ಬಲಿಯನ್ನಾಗಲೀ ಕೊಡದೆ, ಯಜ್ಞವನ್ನು ಮಾಡದೆ, ಪಿತೃ-ದೇವ-ಗುರುಗಳಿಗೆ ಸಲ್ಲಿಸಬೇಕಾದ್ದನ್ನು ವಿಭಾಗ ಮಾಡಿಕೊಡದೆ ದೈತ್ಯರು ಮೃಷ್ಟಾನ್ನವನ್ನು ತಾವೇ ಉಣ್ಣಲು ಪ್ರಾರಂಭಿಸಿದ್ದಾರೆ.

ನ ಶೌಚಮನುರುದ್ಧ್ಯಂತ ತೇಷಾಂ ಸೂದಜನಾಸ್ತಥಾ ।
ಮನಸಾ ಕರ್ಮಣಾ ವಾಚಾ ಭಕ್ತಮಾಸೀದನಾವೃತಮ್ ॥೬೧॥

ದೈತ್ಯರು ಮತ್ತು ಅವರಿಗೆ ಅಡುಗೆ ಮಾಡುವವರು ಶೌಚಾಚಾರಗಳನ್ನು ಅನುಷ್ಠಾನ ಮಾಡುತ್ತಿಲ್ಲ. ಮಾತು, ಮನಸ್ಸು, ಕೃತಿಗಳಿಂದ ತಪ್ಪುಗಳನ್ನು ಮಾಡುತ್ತಿದ್ದಾರೆ. ತಿನ್ನುವ ಪದಾರ್ಥಗಳನ್ನು ಮುಚ್ಚಿಡುವ ಪದ್ಧತಿಗಳನ್ನು ಬಿಟ್ಟಿದ್ದಾರೆ. ಎಲ್ಲರ ದೃಷ್ಟಿ ಬೀಳುವ ಪದಾರ್ಥಗಳನ್ನು ತಿನ್ನುತ್ತಿದ್ದಾರೆ ಎಂದು ಭಾವ.

ವಿಪ್ರಕೀರ್ಣಾನಿ ಧಾನ್ಯಾನಿ ಕಾಕಮೂಷಕಭೋಜನಮ್ ।
ಅಪಾವೃತಂ ಪಯೋಽತಿಷ್ಠದುಚ್ಚಿಷ್ಟಾಶ್ಚಾಸ್ಪೃಶನ್ ಘೃತಮ್ ॥೬೨॥

ದೈತ್ಯರ ಮನೆಗಳಲ್ಲಿ ಧಾನ್ಯಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುತ್ತವೆ. ಆ ಬಿದ್ದಿರುವ ಧಾನ್ಯಗಳನ್ನು ಕಾಗೆಗಳು ತಿನ್ನುತ್ತವೆ. ಹಾಲಿನ ಪಾತ್ರೆಯನ್ನು ಮುಚ್ಚಿಡುತ್ತಿಲ್ಲ. ಎಂಜಲು ಕೈಯಿಂದ ತುಪ್ಪವನ್ನು ಮುಟ್ಟುತ್ತಾರೆ.

ಕುದ್ದಾಲಪಾಟೀಪಿಟಕಂ ಪ್ರಕೀರ್ಣಂ ಕಾಂಸ್ಯಭಾಜನಮ್ ।
ದ್ರವ್ಯೋಪಕರಣಂ ಸರ್ವಂ ನಾನವೈಕ್ಷತ್ ಕುಟುಂಬಿನೀ ॥೬೩॥

ಹಾರೆ, ಗುದ್ದಲಿ, ಕುಕ್ಕಲಿ, ಮರ, ಕಂಚಿನ ಪಾತ್ರೆ ಮೊದಲಾದ ಮನೆಯ ಪದಾರ್ಥಗಳನ್ನೆಲ್ಲ ಮನೆಯಲ್ಲಿ ಅಲ್ಲಲ್ಲಿ ಬಿಸಾಡಿರುತ್ತಾರೆ. ಗೃಹಿಣಿಯಾದರೂ ಅದನ್ನು ಕರ್ತವ್ಯದಿಂದ ಎತ್ತಿಡುತ್ತಿಲ್ಲ.

ಪ್ರಾಕಾರಾಗಾರವಿಧ್ವಂಸಾನ್ನ ಸ್ಮ ತೇ ಪ್ರತಿಕುರ್ವತೇ ।
ನಾದ್ರಿಯಂತೇ ಪಶೂನ್ ಬದ್ಧ್ವಾ ಯವಸೇನೋದಕೇನ ಚ ॥೬೪॥

ಬಿದ್ದುಹೋದ ಪ್ರಾಕಾರಗಳನ್ನಾಗಲೀ, ಮುರಿದು ಬಿದ್ದಿರುವ ಮನೆಗಳನ್ನಾಗಲೀ ದೈತ್ಯರು ಸರಿಪಡಿಸುತ್ತಿಲ್ಲ. ಗೋಶಾಲೆಯಲ್ಲಿ ಕಟ್ಟಿಹಾಕಿರುವ ಹಸು ಮೊದಲಾದ ಪ್ರಾಣಿಗಳಿಗೆ ಮೇವು ಹಾಕಿ, ನೀರು ಕುಡಿಸಿ ಉಪಚರಿಸುತ್ತಿಲ್ಲ.

ಬಾಲಾನಾಂ ಪ್ರೇಕ್ಷಮಾಣಾನಾಂ ಸ್ವಯಂ ಭಕ್ಷಾನಭಕ್ಷಯನ್ ।
ತಥಾ ಭೃತ್ಯಜನಂ ಸರ್ವಂ ಪರ್ಯಶ್ನಂತಿ ಚ ದಾನವಾಃ ॥೬೫॥

ಮಕ್ಕಳು ನೋಡುತ್ತಿರುವಂತೆ ಅವರಿಗೆ ತಿನ್ನಲು ಕೊಡದೆ, ಅವರ ಮುಂದೆ ಭಕ್ಷ್ಯವನ್ನು ತಿನ್ನುತ್ತಾರೆ. ದೇವತೆಗಳನ್ನಾಗಲೀ, ಪರಿವಾರದವರನ್ನಾಗಲೀ ತೃಪ್ತಿಗೊಳಿಸದೆ ತಾವು ಮಾತ್ರ ಸುಖಭೋಗಗಳಲ್ಲಿ ಆಸಕ್ತರಾಗಿದ್ದಾರೆ.

ಪಾಯಸಂ ಕೃಸರಂ ಮಾಂಸಮಪೂಪಾನಥ ಶಷ್ಕುಲೀಃ ।
ಅಪಾಚಯನ್ನಾತ್ಮನೋಽರ್ಥೇ ವೃಥಾಮಾಂಸಾನ್ಯಭಕ್ಷಯನ್ ॥೬೬॥

ಪಾಯಸ, ಎಳ್ಳನ್ನ, ಮಾಂಸ, ಅಪೂಪ, ಚಕ್ಕುಲಿ ಇವುಗಳನ್ನು ಜಿಹ್ವಾ ಚಾಪಲ್ಯದಿಂದ ತಾವು ತಿನ್ನಲು ಮಾಡಿಸಿಕೊಳ್ಳುತ್ತಾರೆ. ಕಾರಣವಿಲ್ಲದೆ ಚಾಪಲ್ಯದಿಂದಲೇ ಮಾಂಸವನ್ನೂ ತಿನ್ನುತ್ತಾರೆ.

ಉತ್ಸೂರ್ಯಶಾಯಿನಶ್ಚಾಸನ್ ಸರ್ವೇ ಚಾಸನ್ನಹರ್ನಿಶಾಃ ।
ಅವರ್ತನ್ ಕಲಹಾಶ್ಚಾತ್ರ ದಿವಾರಾತ್ರಂ ಗೃಹೇ ಗೃಹೇ ॥೬೭॥

ಸೂರ್ಯೋದಯವಾದಾಗಲೂ ಮಲಗಿರುತ್ತಾರೆ. ಪ್ರಾತಃಕಾಲವನ್ನು ರಾತ್ರಿ ಎಂದು ಭಾವಿಸುತ್ತಾರೆ. ಪ್ರತಿ ದೈತ್ಯರಿಗೂ ಯಾವುದೋ ಕಾರಣದಿಂದ ಹಗಲು-ರಾತ್ರಿ ಎನ್ನದೆ ಕಲಹಗಳು ನಡೆಯುತ್ತಿರುತ್ತವೆ.

ಅನಾರ್ಯಾಶ್ಚಾರ್ಯಮಾಸೀನಂ ಪರ್ಯುಪಾಸನ್ನ ತತ್ರ ಹ ।
ಆಶ್ರಮಸ್ಥಾನ್ ವಿಕರ್ಮಸ್ಥಾಃ ಪ್ರದ್ವಿಷಂತಿ ಪರಸ್ಪರಮ್ ।
ಸಂಕರಾಶ್ಚಾಪ್ಯವರ್ತಂತ ನ ಚ ಶೌಚಮವರ್ತತ ॥೬೮॥

ಅನಾರ್ಯರಾದ ದೈತ್ಯರು ಮನೆಯಲ್ಲಿರುವ ಆರ್ಯಪುರುಷರನ್ನು ಸೇವಿಸುವುದಿಲ್ಲ. ಅಧರ್ಮಪರಾಯಣರಾದ ಅವರು ಒಬ್ಬರನ್ನೊಬ್ಬರು ದ್ವೇಷಿಸುತ್ತಾರೆ. ಆಶ್ರಮವಾಸಿಗಳಾದ ಮಹಾತ್ಮರನ್ನು ದ್ವೇಷಿಸುತ್ತಾರೆ. ದೈತ್ಯರಲ್ಲಿ ವರ್ಣಸಂಕರವಾಗ ತೊಡಗಿದೆ. ಯಾರಲ್ಲಿಯೂ ಪಾವಿತ್ರ್ಯವಿಲ್ಲ.

ಯೇ ಚ ವೇದವಿದೋ ವಿಪ್ರಾ ವಿಸ್ಪಷ್ಟಮನೃಚಶ್ಚ ಯೇ ।
ನಿರಂತರವಿಶೇಷಾಸ್ತೇ ಬಹುಮಾನಾವಮಾನಯೋಃ ॥೬೯॥

ವೇದಾಧ್ಯಯನ ಮಾಡಿರುವ ಬ್ರಾಹ್ಮಣರಲ್ಲಿಯೂ, ವೇದಾಧ್ಯಯನವನ್ನು ಮಾಡದೆ ಇರುವ ವ್ಯಕ್ತಿಗಳಲ್ಲಿಯೂ ದೈತ್ಯರು ವ್ಯತ್ಯಾಸವನ್ನು ತಿಳಿಯುತ್ತಿಲ್ಲ.

ಹಾವಮಾಭರಣಂ ವೇಷಂ ಗತಿಂ ಸ್ಥಿತಿಮವೇಕ್ಷಿತುಮ್ ।
ಅಸೇವಂತ ಭುಜಿಷ್ಯಾ ವೈ ದುರ್ಜನಾಚರಿತಂ ವಿಧಿಮ್ ॥೭೦॥

ಮನೆಯಲ್ಲಿರುವ ದಾಸಿಯರು ಕೆಟ್ಟ ನಡತೆಯುಳ್ಳವರಾಗಿ, ಹಾವ-ಭಾವಗಳಿಂದ ಸುವರ್ಣಾದಿ ಆಭರಣಗಳನ್ನು ಧರಿಸಿ, ಉತ್ತಮ ವೇಷ, ಇಷ್ಟಬಂದ ಗತಿ, ಇಷ್ಟ

ಬಂದ ಸ್ಥಿತಿ ಇವುಗಳಿಂದ ಕೂಡಿರುತ್ತಾರೆ. ಹೆಂಗಸರು ಸಿಂಗರಿಸಿಕೊಂಡು ಸ್ವಚ್ಛಂದರಾಗಿ ಯುವಕರಿದ್ದಲ್ಲಿ ಕಣ್ಣು ಹಾಯಿಸುತ್ತಾರೆ. ದುರ್ಜನರಿಂದ ಆಚರಿಸಲ್ಪಡುವ ವ್ಯಭಿಚಾರ ವಿಧಿಯನ್ನು ಅನುಸರಿಸುತ್ತಿದ್ದಾರೆ.

ಸ್ತ್ರಿಯಃ ಪುರುಷವೇಷೇಣ ಪುಂಸಃ ಸ್ತ್ರೀವೇಷಧಾರಿಣಃ ।
ಕ್ರೀಡಾರತಿವಿಹಾರೇಷು ಪರಾಂ ಮುದಮವಾಪ್ನುವನ್ ॥೭೧॥

ಸ್ತ್ರೀಯರು ಆಟ-ಪಾಠಗಳಲ್ಲಿಯೂ ರತಿಕಾಲಗಳಲ್ಲಿಯೂ, ವಿಹಾರದ ಸಮಯದಲ್ಲಿಯೂ ಪುರುಷವೇಷವನ್ನು, ಪುರುಷರು ಸ್ತ್ರೀವೇಷವನ್ನು ಧರಿಸಿ ಪರಸ್ಪರ ಪರಮಾನಂದವನ್ನು ಪಡುತ್ತಿದ್ದಾರೆ.

ಪ್ರಭವದ್ಭಿಃ ಪುರಾ ದಾಯಾನಹೇ೯ಭ್ಯಃ ಪ್ರತಿಪಾದಿತಾನ್ ।
ನಾಭ್ಯವರ್ತಂತ ನಾಸ್ತಿಕ್ಯಾದ್ವರ್ತಂತಃ ಸಂಭವೇಷ್ವಪಿ ॥೭೨॥

ಕೆಲವು ದಾನವರು, ತಮ್ಮ ಹಿಂದಿನವರು ಯೋಗ್ಯ ಬ್ರಾಹ್ಮಣರಿಗೆ ಉಂಬಳಿಯಾಗಿ ನೀಡಿದ ಭೂಮಿ, ಕಾಣಿಕೆಗಳನ್ನು ನಾಸ್ತಿಕ್ಯಬುದ್ಧಿಯಿಂದ ಅವರ ಬಳಿ ಇರಬಾರದೆನ್ನುತ್ತಿದ್ದಾರೆ. ಜೀವನನಿರ್ವಹಣೆಗೆ ಬೇರೆ ಅವಕಾಶವಿದ್ದರೂ ಆ ಉಂಬಳಿಗಳನ್ನು ಬ್ರಾಹ್ಮಣರಿಂದ ಅಪಹರಿಸುತ್ತಿದ್ದಾರೆ.

ಮಿತ್ರೇಣಾಭ್ಯರ್ಥಿತಂ ಮಿತ್ರಮರ್ಥೇ ಸಂಶಯಿತೇ ಕ್ವಚಿತ್ ।
ಪಾಲಕಾಭ್ಯಗ್ರಮಾತ್ರೇಣ ಸ್ವಾರ್ಥೇನಾಘ್ನತ ತದ್ವಸು ॥೭೩॥

ಭೂಮಿ, ಅರ್ಥಸಂಕಟದಲ್ಲಿ ಒಬ್ಬನು ವ್ಯಾಜ್ಯವನ್ನು ಪರಿಹರಿಸೆಂದು ಮಿತ್ರನಲ್ಲಿ ಕೇಳಿದಾಗ ಆತನು ಕೂದಲಿನ ತುದಿಗೆ ಸಮಾನವಾದ ಸ್ವಾರ್ಥದಿಂದಲೇ ಅವನ ಸ್ವತ್ತನ್ನು ಯುಕ್ತಿಯಿಂದ ಇವನೇ ಲಪಟಾಯಿಸುತ್ತಾನೆ. ಇಂತಹ ಸ್ವಾರ್ಥವು ದೈತ್ಯರಲ್ಲುಂಟಾಗಿದೆ.

ಪರಸ್ವಾದಾನರುಚಯೋ ವಿಪಣ್ಯವ್ಯವಹಾರಿಣಃ ।
ಅದೃಶ್ಯಂತಾರ್ಯವರ್ಣೇಷು ಶೂದ್ರಾಶ್ಚಾಪಿ ತಪೋಧನಾಃ ॥೭೪॥

ಪರಸ್ಪರ ಸ್ವತ್ತಿನಲ್ಲಿ ಆಸಕ್ತರಾದ ದೈತ್ಯರು ಮತ್ತೊಬ್ಬರ ಸ್ವತ್ತನ್ನು ಅಪಹರಿಸುವಲ್ಲಿ ಆಸಕ್ತಿಯುಳ್ಳವರಾಗಿದ್ದಾರೆ. ಅಂಗಡಿ-ಮುಂಗಟ್ಟುಗಳಲ್ಲಿ ವ್ಯವಹಾರ

ಮಾಡುವವರಾಗಿದ್ದಾರೆ. ಆರ್ಯರ ನಾಲ್ಕು ವರ್ಣಗಳಲ್ಲಿ ಶೂದ್ರರು ತಪೋಧನರಾಗ ತೊಡಗಿದ್ದಾರೆ.

ಅಧೀಯಂತೇऽವ್ರತಾಃ ಕೇಚಿದ್ ವೃಥಾವ್ರತಮಥಾಪರೇ ।
ಅಶುಶ್ರೂಷುರ್ಗುರೋಃ ಶಿಷ್ಯಃ ಕಶ್ಚಿಚ್ಚಿಷ್ಯಸಖೋ ಗುರುಃ ॥೭೫॥

ಬ್ರಹ್ಮಚರ್ಯವನ್ನು ಪರಿಪಾಲನೆ ಮಾಡದೆ ವೇದಾಧ್ಯಯನ ಮಾಡುತ್ತಾರೆ. ಕೆಲವರು ಬ್ರಹ್ಮಚರ್ಯದಲ್ಲಿದ್ದರೂ ವೇದಾಧ್ಯಯನ ಮಾಡುತ್ತಿಲ್ಲ. ಶಿಷ್ಯನು ಗುರು ಸೇವೆಯನ್ನು ಮಾಡಲು ಬಯಸುವುದಿಲ್ಲ. ಕೆಲವು ಕಡೆ ಶಿಷ್ಯನು ಗುರುವಿನ ಬಳಿ ಮಿತ್ರನಂತೆ ವ್ಯವಹರಿಸುತ್ತಾನೆ.

ಪಿತಾ ಚೈವ ಜನಿತ್ರೀ ಚ ಶ್ರಾಂತೌ ವೃತ್ತೋತ್ಸವಾವಿವ ।
ಅಪ್ರಭುತ್ವೇ ಸ್ಥಿತೌ ವೃದ್ಧಾವನ್ನಂ ಪ್ರಾರ್ಥಯತಃ ಸುತಾನ್ ॥೭೬॥

ತಂದೆ-ತಾಯಿಗಳು ಕಳೆದು ಹೋದ ಉತ್ಸವಗಳಂತೆ ಇವರ ಮನೆಗಳಲ್ಲಿ ಬಳಲಿದ್ದಾರೆ. ಅವರಿಗೆ ಯಾವ ಅಧಿಕಾರವೂ ಇಲ್ಲದೆ ಇರುವುದರಿಂದ ವೃದ್ಧರು ಅನ್ನಕ್ಕಾಗಿ ಮಕ್ಕಳನ್ನು ಬೇಡುವ ಸ್ಥಿತಿಯು ದಾನವರ ಮನೆಗಳಲ್ಲುಂಟಾಗಿದೆ.

ತತ್ರ ವೇದವಿದಃ ಪ್ರಾಜ್ಞಾ ಗಾಂಭೀರ್ಯೇ ಸಾಗರೋಪಮಾಃ ।
ಕೃಷ್ಯಾದಿಷ್ವಭವನ್ ಸಕ್ತಾ ಮೂರ್ಖಾಃ ಶ್ರಾದ್ಧಾನ್ಯಭುಂಜತ ॥೭೭॥

ದಾನವರ ನಗರಗಳಲ್ಲಿ ವೇದಜ್ಞರಾದ, ಪ್ರಾಜ್ಞರಾದ, ಗಾಂಭೀರ್ಯದಲ್ಲಿ ಸಾಗರದಂತಿರುವ ಪುರುಷರು ಕೃಷಿಯೇ ಮೊದಲಾದ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಇದಕ್ಕಿಂತಲೂ ಮಿಗಿಲಾಗಿ ಮೂರ್ಖರಾಗಿ ಶ್ರಾದ್ಧಾನ್ನಗಳನ್ನು ತಿನ್ನಲು ಆರಂಭಿಸಿದ್ದಾರೆ.

ಪ್ರಾತಃ ಪ್ರಾತಶ್ಚ ಸುಪ್ರಶ್ನಂ ಕಲ್ಪನಂ ಪ್ರೇಷಣಕ್ರಿಯಾಃ ।
ಶಿಷ್ಯಾನುಪ್ರಹಿತಾಸ್ತಸ್ಮಿನ್ನಕುರ್ವನ್ ಗುರವಶ್ಚ ಹ ॥೭೮॥

ಗುರುಗಳಾದವರು ಪ್ರತಿದಿನವೂ ಪ್ರಾತಃಕಾಲದಲ್ಲಿ ಶಿಷ್ಯರ ಮನೆಗೆ ಹೋಗಿ ಕುಶಲ ಪ್ರಶ್ನೆಗಳನ್ನು ಮಾಡುತ್ತಿದ್ದಾರೆ. ಸೇವಕರು ಮಾಡುವ ಕೆಲಸಗಳನ್ನು ಗುರುಗಳೇ ಶಿಷ್ಯರಿಗೆ

ಮಾಡುತ್ತಿದ್ದಾರೆ. ಶಿಷ್ಯರ ಪ್ರೀತಿಗಾಗಿ ಗುರುಗಳೇ ವಾರ್ತಾವಾಹಕರಾಗಿ ಕೆಲಸಗಳನ್ನು ಮಾಡುತ್ತಿದ್ದಾರೆ.

ಶ್ವಶ್ರೂಶ್ವಶುರಯೋರ್ಮಧ್ಯೇ ಭರ್ತಾರಂ ಕೃತಕಂ ಯಥಾ ।
ಪ್ರೇಕ್ಷಯಂತಿ ಚ ನಿರ್ಲಜ್ಜಾ ನಾರ್ಯಃ ಕುಲಜಲಕ್ಷಣಾಃ ॥೭೯॥

ಸೊಸೆಯು ಅತ್ತೆ-ಮಾವಂದಿರ ಮುಂದೆ ದಾರ್ಢ್ಯದಿಂದ ಅಪ್ಪಣೆ ಮಾಡುತ್ತಾಳೆ. ಪತಿಗೂ ಆಜ್ಞೆ ನೀಡುತ್ತಾಳೆ. ಪತಿಯ ಹೆಸರನ್ನು ಹಿಡಿದು ಅವನೊಡನೆ ಎಲ್ಲರ ಸಮಕ್ಷಮದಲ್ಲಿ ಹರಟೆ ಹೊಡೆಯುತ್ತಾಳೆ.

ಪ್ರಯತ್ನೇನಾಪಿ ಚಾರಕ್ಷಚ್ಚಿತ್ತಂ ಪುತ್ರಸ್ಯ ವೈ ಪಿತಾ ।
ವ್ಯಭಜಂಶ್ಚಾಪಿ ಸಂರಂಭಾದ್ದುಃಖಿವಾಸಂ ತಥಾವಸನ್ ॥೮೦॥

ತಂದೆಯಾದವನು ಪ್ರಯತ್ನಪೂರ್ವಕವಾಗಿ ಮಗನ ಮನಸ್ಸು ಸಿಟ್ಟಾಗಬಾರದಂತೆ ವ್ಯವಹರಿಸುತ್ತಿದ್ದಾನೆ. ಮಕ್ಕಳ ಕೋಪಕ್ಕೆ ಹೆದರಿ ತನ್ನ ಸರ್ವಸ್ವವನ್ನೂ ಕೊಡುತ್ತಿದ್ದಾನೆ. ಹೀಗೆ ತಂದೆಯು ಬಹಳ ದುಃಖದಿಂದಲೇ ಅಸುರರ ಮನೆಯಲ್ಲಿ ಕಾಲ ಕಳೆಯಬೇಕಾಗಿದೆ.

ಅಗ್ನಿದಾಹೇನ ಚೋರೈರ್ವಾ ರಾಜಭಿರ್ವಾ ಹೃತಂ ಧನಮ್ ।
ದೃಷ್ಟ್ವಾ ದ್ವೇಷಾತ್ ಪ್ರಾಹಸಂತ ಸುಹೃತ್ಸಂಭಾವಿತಾ ಹ್ಯಪಿ ॥೮೧॥

ಸುಹೃದರು, ಹಿತೈಷಿಗಳು ಎಂದು ತಿಳಿದ ವ್ಯಕ್ತಿಗಳು ಮಿತ್ರರ ಮನೆಯ ಒಡವೆ-ವಸ್ತುಗಳು ಸುಟ್ಟುಹೋದರೆ, ಕಳ್ಳ-ಕಾಕರಿಂದ ಅಪಹೃತವಾದರೆ ಈ ವಿಷಯವನ್ನು ಕೇಳಿ ದ್ವೇಷದಿಂದ ಸಂಭ್ರಮಿಸುತ್ತಾರೆ.

ಕೃತಘ್ನಾ ನಾಸ್ತಿಕಾಃ ಪಾಪಾ ಗುರುದಾರಾಭಿಮರ್ಶಿನಃ ।
ಅಭಕ್ಷ್ಯಭಕ್ಷಣರತಾ ನಿರ್ಮರ್ಯಾದಾ ಹತತ್ವಿಷಃ ॥೮೨॥

ದೈತ್ಯರು ಕೃತಘ್ನರಾಗಿದ್ದಾರೆ, ನಾಸ್ತಿಕರಾಗಿದ್ದಾರೆ, ಪಾಪಿಗಳಾಗಿದ್ದಾರೆ, ಗುರುಪತ್ನಿಯ ಸಮಾಗಮ ಮಾಡುತ್ತಾರೆ, ತಿನ್ನಬಾರದ್ದನ್ನು ತಿನ್ನುತ್ತಾರೆ, ಧರ್ಮದ ಮರ್ಯಾದೆಯನ್ನು ಮೀರಿ ಮನಬಂದಂತೆ ವರ್ತಿಸುತ್ತಾರೆ. ಆದ್ದರಿಂದಲೇ ಅವರು ಕಾಂತಿಹೀನರಾಗಿದ್ದಾರೆ.

ಬಾಲಾನಾಂ ಪ್ರೇಕ್ಷಮಾಣಾನಾಂ ಭಕ್ತಾನ್ಯಶ್ನಂತಿ ಮೋಹಿತಾಃ ।
ಏಕೋ ದಾಸೋ ಭವೇತ್ ತೇಷಾಂ ದಾಸೀದ್ವಯಂ ತಥಾ ॥೮೩॥

ಮಕ್ಕಳು ನೋಡುತ್ತಿರುವಾಗಲೂ ಆ ಮಕ್ಕಳ ಕೈಗೆ ಆಹಾರವನ್ನು ಕೊಡದೆ ದೊಡ್ಡವರೇ ತಿನ್ನುತ್ತಿದ್ದಾರೆ. ಅವರಲ್ಲಿ ಒಬ್ಬನಿಗೆ ಒಬ್ಬನೇ ದಾಸನು, ಇಬ್ಬರು ದಾಸಿಯರು ಇರುತ್ತಿದ್ದಾರೆ.

ತ್ರಿಗವಾ ದಾನವಾಃ ಕೇಚಿತ್ ಚತುರೋಜಾಸ್ತಥಾ ಪರೇ ।
ಷಡಶ್ವಾಃ ಸಪ್ತಮಾತಂಗಾಃ ಪಂಚಮಾಹಿಷಿಕಾಃ ಪರೇ ॥೮೪॥

ಕೆಲವರು ದಾನವರು ಮೂರು ಹಸುಗಳನ್ನು ಹೊಂದಿದ್ದಾರೆ. ಕೆಲವರು ನಾಲ್ಕು ಮೇಕೆಗಳನ್ನು, ಕೆಲವರು ಐದು ಎಮ್ಮೆಗಳನ್ನು, ಕೆಲವರು ಆರು ಕುದುರೆಗಳನ್ನು, ಕೆಲವರು ಏಳು ಆನೆಗಳನ್ನು ಹೊಂದಿದ್ದಾರೆ.

ರಾತ್ರೌ ದಧಿ ಚ ಸಕ್ತೂಂಶ್ಚ ನಿತ್ಯಮೇವಾವಿವರ್ಜಿತಾಃ ।
ಅಂತರ್ದಶಾಹೇ ಚಾಶ್ನಂತಿ ಗವಾಂ ಕ್ಷೀರಂ ವಿಚೇತನಾಃ ॥೮೫॥

ರಾತ್ರಿಯಲ್ಲಿ ಅವರು ಮೊಸರನ್ನವನ್ನು ತಿನ್ನದೆ ಇರುತ್ತಿಲ್ಲ. ಕರು ಹಾಕಿದ ಹತ್ತು ದಿನಗಳ ಒಳಗೆ ಹಸುಗಳ ಹಾಲನ್ನು ಕರೆದು ಕುಡಿಯುತ್ತಿದ್ದಾರೆ.

ಕ್ರಮದೋಹಂ ನ ಕುರ್ವಂತಿ ವತ್ಸಸ್ತನ್ಯಾನಿ ಭುಂಜತೇ ।
ಅನಾಥಾಂ ಕೃಪಣಾಂ ಭಾರ್ಯಾಂ ಘ್ನಂತಿ ನಿತ್ಯಂ ಶಪಂತಿ ಚ ॥೮೬॥

ದೈತ್ಯರು ಹೊತ್ತಿಗೆ ಸರಿಯಾಗಿ ಹಸುವಿನ ಹಾಲನ್ನು ಕರೆಯುತ್ತಿರಲಿಲ್ಲ. ಅಳತೆಗೆ ಸರಿಯಾಗಿಯೂ ಕರೆಯುತ್ತಿಲ್ಲ. ಕರುಗಳಿಗೆ ಸ್ವಲ್ಪವೂ ಹಾಲನ್ನೂ ಬಿಡದೆ ತಾವೇ ಕರೆದು ಕುಡಿದು ಬಿಡುತ್ತಿದ್ದಾರೆ. ಅನಾಥೆಯಾದ ಹೆಂಡತಿಯನ್ನು ಯಾವಾಗಲೂ ಹೊಡೆದು, ಬಡಿದು ಹಿಂಸಿಸುತ್ತಿದ್ದಾರೆ. ಅವರನ್ನು ನಿಂದಿಸುತ್ತಿದ್ದಾರೆ.

ಮಾರ್ಜಾರಕುಕ್ಕುಟಶ್ವಾನೈಃ ಕ್ರೀಡಾಂ ಕುರ್ವಂತಿ ಮಾನವಾಃ ।
ಗೃಹೇ ಕಂಟಕಿನೋ ವೃಕ್ಷಾಸ್ತೇಷಾಮಾಸನ್ ದುರಾತ್ಮನಾಮ್ ॥೮೭॥

ಮನೆಯಲ್ಲಿ ದೈತ್ಯರು ಬೆಕ್ಕು, ನಾಯಿ, ಕೋಳಿ ಇವುಗಳನ್ನು ಸಾಕುತ್ತಾ ಅವುಗಳೊಡನೆ ಆಟವಾಡುತ್ತಿದ್ದಾರೆ. ಅವರ ಮನೆಯಲ್ಲಿ ಮುಳ್ಳು ಗಿಡಗಳು ಅವರೇ, ಮೊದಲಾದ ಗಿಡಗಳು ಬೆಳೆಯಲು ಆರಂಭಿಸಿವೆ.

ಯಜ್ಞಿಯಾಶ್ಚ ತಥಾ ವೃಶ್ಚ್ಯಾಸ್ತೇಷಾಮಾಸನ್ ದುರಾತ್ಮನಾಮ್ ।
ಕೂಪಸ್ನಾನರತಾ ನಿತ್ಯಂ ಪರ್ವಮೈಥುನಗಾಮಿನಃ ॥೮೮॥

ದೈತ್ಯರು ಯಜ್ಞಯೋಗ್ಯವಾದ ಅಶ್ವತ್ಥ ಮೊದಲಾದ ವೃಕ್ಷಗಳನ್ನು ತುಂಡರಿಸುತ್ತಿದ್ದಾರೆ. ಪ್ರತಿದಿನವೂ ಕೂಪಸ್ನಾನವನ್ನು ಮಾಡುತ್ತಿದ್ದಾರೆ. ಪರ್ವಕಾಲದಲ್ಲಿ ಮೈಥುನ ರತರಾಗಿದ್ದಾರೆ.

ತಿಲಾನಶ್ನಂತಿ ರಾತ್ರೌ ಚ ತೈಲಾಭ್ಯಕ್ತಾಶ್ಚ ಶೇರತೇ ।
ವಿಭೀತಕಕರಂಜನಾಂ ಛಾಯಾಮೂಲನಿವಾಸಿನಃ ॥೮೯॥

ರಾತ್ರಿಯಲ್ಲಿ ಎಳ್ಳನ್ನು ತಿನ್ನುತ್ತಾರೆ. ಎಣ್ಣೆ ಹಚ್ಚಿಕೊಂಡು ಸ್ನಾನ ಮಾಡಿ ಮಲಗುತ್ತಾರೆ. ತಾಳೆ ಗಿಡ, ಹೊಂಗೆ ಗಿಡಗಳ ನೆರಳಿನಲ್ಲಿ ಮಲಗುತ್ತಾರೆ.

ಕರವೀರಂ ಚ ತೇ ಪುಷ್ಪಂ ಧಾರಯಂತಿ ಚ ಮೋಹಿತಾಃ ।
ಪದ್ಮಬೀಜಾನಿ ಖಾದಂತಿ ಪುಷ್ಪಂ ಜಿಘ್ರಂತಿ ಮೋಹಿತಾಃ ॥೯೦॥

ಕಣಗಿಲೆಯ ಹೂವನ್ನು ಮುಡಿಯುತ್ತಾರೆ. ತಾವರೆಬೀಜಗಳನ್ನು ತಿನ್ನುತ್ತಾರೆ. ಹೂವುಗಳನ್ನು ವಿಷ್ಣುವಿಗೆ ಅರ್ಪಿಸದೆ ಮೂಸಿ ನೋಡುತ್ತಾರೆ.

ನ ಭೋಕ್ಷ್ಯಂತಿ ತಥಾ ನಿತ್ಯಂ ದೈತ್ಯಾಃ ಕಾಲೇನ ಮೋಹಿತಾಃ ।
ನಿಂದಂತಿ ಸ್ತವನಂ ವಿಷ್ಣೋಸ್ತಸ್ಯ ನಿತ್ಯದ್ವಿಷೋ ಜನಾಃ ॥೯೧॥

ಅತಿಥಿಗಳಿಗೆ ಭೋಜನವನ್ನು ಮಾಡಿಸುವುದಿಲ್ಲ. ಕಾಲದಿಂದ ದೈತ್ಯರೆಲ್ಲರೂ ಮೋಹಿತರಾಗಿದ್ದಾರೆ. ಅವರಲ್ಲಿ ವಿಷ್ಣುದ್ವೇಷವು ಹೆಚ್ಚಾಗಿದೆ. ಭಗವಂತನ ಮಹಿಮೆಯನ್ನು ನಿಂದಿಸತೊಡಗಿದ್ದಾರೆ.

ಹೋಮಧೂಮೋ ನ ತತ್ರಾಸೀದ್ ವೇದಘೋಷಸ್ತಥೈವ ಚ ।
ಯಜ್ಞಾಶ್ಚ ನ ಪ್ರವರ್ತಂತೇ ಯಥಾಪೂರ್ವಂ ಗೃಹೇಗೃಹೇ ॥೯೨॥

ಶಿಷ್ಯಾಚಾರ್ಯಕ್ರಮೋ ನಾಸೀತ್ ಪುತ್ರೈರಾತ್ಮಪಿತುಃ ಪಿತಾ ।
ವಿಷ್ಣುಂ ಬ್ರಹ್ಮಣ್ಯದೇವೇಶಂ ಹಿತ್ವಾ ಪಾಷಂಡಮಾಶ್ರಿತಾಃ ॥೯೩॥

ಮೊದಲಿನಂತೆ ಅವರ ಮನೆಯಲ್ಲಿ ಹೋಮಧೂಮಗಳಿಲ್ಲ. ವೇದಘೋಷಗಳಿಲ್ಲ. ಯಾಗಗಳಿಲ್ಲ. ಆಚಾರ್ಯ-ಶಿಷ್ಯರೆಂಬ ಭಾವನೆಯೂ ಇರುವುದಿಲ್ಲ. ಪಿತಾ-ಪುತ್ರ ಸಂಬಂಧವಿರುವುದಿಲ್ಲ. ವಿಷ್ಣುವನ್ನು ನಿರಾಕರಿಸಿ ಪಾಖಂಡಿಗಳನ್ನು ಆಶ್ರಯಿಸಿದ್ದಾರೆ.

ಹವ್ಯಕವ್ಯವಿಹೀನಾಶ್ಚ ಜ್ಞಾನಾಧ್ಯಯನವರ್ಜಿತಾಃ ।
ದೇವಸ್ವಾದಾನರುಚಯೋ ಬ್ರಹ್ಮಸ್ವರುಚಯಸ್ತಥಾ ॥೯೪॥

ಹವ್ಯ-ಕವ್ಯದ ಚಿಂತೆಯೇ ಅವರಿಗಿರುವುದಿಲ್ಲ. ಜ್ಞಾನ-ಅಧ್ಯಯನದಲ್ಲಿ ಆಸಕ್ತಿ ಇಲ್ಲ. ದೇವತೆಗಳ ಮತ್ತು ಬ್ರಾಹ್ಮಣರ ಧನವನ್ನು ಸಂಗ್ರಹಿಸುವುದರಲ್ಲಿ ಅವರಿಗೆ ಆಸೆಯು ಅಧಿಕವಾಗಿದೆ. ದೇವಾಲಯಗಳಲ್ಲಿ ವೇದಪಠನಗಳು, ಮಂಗಳವಾದ್ಯಗಳು ದೈತ್ಯರಿಂದ ನಿಲ್ಲಿಸಲ್ಪಟ್ಟಿವೆ.

ಉಭಾಭ್ಯಾಮೇವ ಪಾಣಿಭ್ಯಾಂ ಶಿರಃಕಂಡೂಯನಾನ್ವಿತಾಃ ।
ಗೃಹಜಾಲಾಭಿಸಂಸ್ಥಾನಾ ಹ್ಯಾಸಂಸ್ತತ್ರ ಸ್ತ್ರಿಯಃ ಪುನಃ ॥೯೫॥

ಹೆಂಗಸರು ಎರಡು ಕೈಗಳಿಂದ ತಲೆಯನ್ನು ತುರಿಸಿಕೊಳ್ಳುತ್ತಿದ್ದಾರೆ. ಮನೆಯ ಹೆಬ್ಬಾಗಿಲಿನಲ್ಲಿ ನಿಂತು ಇಂತಹ ವಿಕೃತವಾದ ಚರ್ಯೆಯಲ್ಲಿ ರತರಾಗಿದ್ದಾರೆ.

ತೇಷ್ವೇವಮಾದೀನಾಚಾರಾನಾಚರತ್ಸು ವಿಪರ್ಯಯೇ ।
ನಾಹಂ ದೇವೇಂದ್ರ ವತ್ಸ್ಯಾಮಿ ದಾನವೇಷ್ವಿತಿ ಮೇ ಮತಿಃ ॥೯೬॥

ಶಚೀಪತಿಯೇ, ಕಾಲವಿಪರ್ಯಾಸದಿಂದ ದೈತ್ಯರು ಹೀಗೆ ಅನೇಕ ದುರಾಚಾರಗಳಲ್ಲಿ ನಿರತರಾಗಿರಲು, ಅವರ ಬಳಿ ಇರಬಾರದೆಂದು ನಾನು ನಿಶ್ಚಯಿಸಿದ್ದೇನೆ.

ತಾಂ ಮಾಂ ಸ್ವಯಮನುಪ್ರಾಪ್ತಮಭಿನಂದ ಶಚೀಪತೇ ।
ತ್ವಯಾರ್ಚಿತಾಂ ಮಾಂ ದೇವೇಶ ಪುರೋಧಾಸ್ಯಂತಿ ದೇವತಾಃ ॥೯೭॥

ನೀನು ನನ್ನನ್ನು ಅಭಿನಂದಿಸು. ನಿನ್ನ ಬಳಿ ಆಗಮಿಸಿದ್ದೇನೆ. ನಿನ್ನಿಂದ ಸಮ್ಮಾನಿತಳಾದ ನನ್ನನ್ನು ದೇವತೆಗಳು ಸಮ್ಮಾನಿಸುತ್ತಾರೆ.

ಯತ್ರಾಹಂ ತತ್ರ ಮತ್ಕಾಂತಾ ಮದ್ವಿಶಿಷ್ಟಾ ಮದರ್ಪಣಾಃ ।
ಸಪ್ತ ದೇವ್ಯೋ ಮಯಾಷ್ಟಮ್ಯೋ ವಾಸಂ ಚೇಷ್ಯಂತಿ ಮೇಽಷ್ಟಧಾ ॥೯೮॥

ನಾನು ಎಲ್ಲಿರುತ್ತೇನೋ ನನ್ನ ಜೊತೆಗೆ ನನಗೆ ಸಮರ್ಪಿಸಿಕೊಂಡ ಏಳು ಜನ ದೇವಿಯರು ಜಯಾ ಎಂಬ ಎಂಟನೆ ದೇವಿಯು ವಾಸ ಮಾಡುತ್ತಾರೆ. ಎಲ್ಲರೂ ಅಷ್ಟಲಕ್ಷ್ಮಿಯರು ಸರ್ವಸ್ವವನ್ನು ನನಗೆ ಅರ್ಪಿಸಿಕೊಳ್ಳುತ್ತಾರೆ.

ಆಶಾ ಶ್ರದ್ಧಾ ಧೃತಿಃ ಕಾಂತಿರ್ವಿಜಿತಿಃ ಸನ್ನತಿಃ ಕ್ಷಮಾ ।
ಅಷ್ಟಮೀ ವೃತ್ತಿರೇತಾಸಾಂ ಪುರೋಗಾ ಪಾಕಶಾಸನ ॥೯೯॥

ಇಂದ್ರನೇ, ಪುಣ್ಯಗಳಲ್ಲಿ ಆಸೆಯನ್ನು ಹುಟ್ಟಿಸುವ ಆಶಾ ಎನ್ನುವವಳು, ಶ್ರದ್ಧಾ, ಧೃತಿ, ಕಾಂತಿ, ವಿಜಿತಿ, ಸನ್ನತಿ, ಕ್ಷಮಾ, ಇವರು ಎಂಟನೆಯವಳಾದ ವೃತ್ತಿ ಎಂಬವಳು ಎಲ್ಲರಿಗೂ ಪ್ರಮುಖಳೆನಿಸಿದ್ದಾಳೆ.

ತಾಶ್ಚಾಹಂ ಚಾಸುರಾಂಸ್ಯಕ್ತ್ವಾ ಯುಷ್ಮದ್ವಿಷಯಮಾಗತಾ ।
ತ್ರಿದಶೇಷು ನಿವತ್ಸ್ಯಾಮೋ ಧರ್ಮನಿಷ್ಠಾಂತರಾತ್ಮಸು ॥೧೦೦॥

ಆ ಎಂಟು ಭಾಗ್ಯಲಕ್ಷ್ಮಿಯರಿಂದ ಕೂಡಿದ ನಾನು ಅಸುರರನ್ನು ತ್ಯಜಿಸಿ ನಿನ್ನ ಬಳಿ ಆಗಮಿಸಿದ್ದೇನೆ. ಧರ್ಮನಿಷ್ಠವಾದ ಅಂತರಾತ್ಮವುಳ್ಳ ದೇವತೆಗಳಲ್ಲಿ ನಾವು ಇನ್ನು ವಾಸ ಮಾಡುತ್ತೇವೆ.

ಭೀಷ್ಮಃ

ಇತ್ಯುಕ್ತವಚನಾಂ ದೇವೀಮತ್ಯರ್ಥಂ ತೌ ನನಂದತುಃ ।
ನಾರದಶ್ಚ ತ್ರಿಲೋಕರ್ಷಿರ್ವೃತ್ರಹಂತಾ ಚ ವಾಸವಃ ॥೧೦೧॥

ಲಕ್ಷ್ಮೀದೇವಿಯು ಹೀಗೆ ಹೇಳಿದ ಬಳಿಕ ದೇವರ್ಷಿಗಳಾದ ನಾರದರು ಮತ್ತು ವೃತ್ರಹಂತಕನಾದ ಇಂದ್ರನು ದೇವಿಯನ್ನು ಪ್ರಸನ್ನಗೊಳಿಸುವ ಸಲುವಾಗಿ ಅಭಿನಂದಿಸಿದರು.

ತತೋಽನಲಸಖೋ ವಾಯುಃ ಪ್ರವವೌ ದೇವವೇಶ್ಮಸು ।
ಇಷ್ಟಗಂಧಃ ಸುಖಸ್ಪರ್ಶಃ ಸರ್ವೇಂದ್ರಿಯಸುಖಾವಹಃ ॥೧೦೨॥

ಆ ಸಮಯದಲ್ಲಿ ಇಷ್ಟವಾದ ಗಂಧದಿಂದ ಕೂಡಿದ್ದ, ಸರ್ವೇಂದ್ರಿಯಗಳಿಗೂ ಸುಖವನ್ನು ನೀಡುವ, ಸ್ಪರ್ಶಮಾತ್ರದಿಂದ ಸುಖವನ್ನುಂಟು ಮಾಡುವ ಅಗ್ನಿಮಿತ್ರನಾದ ವಾಯುದೇವನು ಮೆಲ್ಲಮೆಲ್ಲನೆ ಬೀಸಲಾರಂಭಿಸಿದನು.

ಶುಚೌ ಚಾಭ್ಯರ್ಚಿತೇ ದೇಶೇ ತ್ರಿದಶಾಃ ಪ್ರಾಯಶಃ ಸ್ಥಿತಾಃ ।
ಲಕ್ಷ್ಮ್ಯಾ ಸಹಿತಮಾಸೀನಂ ಮಘವಂತಂ ದಿದೃಕ್ಷವಃ ॥೧೦೩॥

ಪರಮಪವಿತ್ರವಾದ, ಮನಸ್ಸಿಗೆ ಇಷ್ಟಾರ್ಥಪ್ರದವಾದ ಪ್ರದೇಶದಲ್ಲಿ ಲಕ್ಷ್ಮ್ಯಾಯಿಂದ ಕೂಡಿಕೊಳ್ಳುತ್ತಿರುವ ಇಂದ್ರನನ್ನು ನೋಡುವ ಬಯಕೆಯಿಂದ ಸಮಸ್ತ ದೇವತೆಗಳು ಪ್ರಾಯಶಃ ಅಲ್ಲಿಗೆ ಆಗಮಿಸಿದರು.

ತತೋ ದಿವಂ ಪ್ರಾಪ್ಯ ಸಹಸ್ರಲೋಚನಃ
ಶ್ರಿಯೋಪಪನ್ನಃ ಸುಹೃದಾ ಸುರರ್ಷಿಣಾ ।
ರಥೇನ ಹರ್ಯಶ್ವಯುಜಾ ಸುರರ್ಷಭಃ
ಸದಃ ಸುರಾಣಾಮಭಿಸತ್ಕೃತೋ ಯಯೌ ॥೧೦೪॥

ಬಳಿಕ ಸಹಸ್ರಾಕ್ಷನಾದ, ಸುರಶ್ರೇಷ್ಠನಾದ ಇಂದ್ರನು ಲಕ್ಷ್ಮೀದೇವಿಯಿಂದಲೂ ಸುಹೃದರಾದ ನಾರದರಿಂದಲೂ ಕೂಡಿಕೊಂಡು ಹರಿತಬಣ್ಣದ ಕುದುರೆಗಳಿಂದ ಕೂಡಿದ ರಥದಲ್ಲಿ ಕುಳಿತು ಸ್ವರ್ಗದ ರಾಜಧಾನಿಗೆ ಹೋಗಿ ದೇವತೆಗಳಿಂದ ಸತ್ಕೃತನಾಗಿ ದೇವಸಭೆಗೆ ಹೋದನು.

ಅಥೇಂಗಿತಂ ವಜ್ರಧರಸ್ಯ ನಾರದಃ
ಶ್ರಿಯಾಶ್ಚ ದೇವ್ಯಾ ಮನಸಾ ವಿಚಾರಯನ್ ।
ಶ್ರಿಯೈ ಶಶಂಸಾಮರದೃಷ್ಟಪೌರುಷಃ
ಶಿವೇನ ತತ್ಸಾಗಮನಂ ಮಹರ್ದ್ಧಿಮತ್ ॥೧೦೫॥

ಇಂದ್ರನು ಲಕ್ಷ್ಮ್ಯಾಯೊಡನೆ ಸಿಂಹಾಸನದಲ್ಲಿ ಕುಳಿತ ಬಳಿಕ, ದೇವತೆಗಳ ಪೌರುಷವನ್ನು ಪ್ರತ್ಯಕ್ಷವಾಗಿ ನೋಡಿದ ನಾರದರು ಇಂದ್ರ-ಲಕ್ಷ್ಮ್ಯಾರ ಅಭಿಪ್ರಾಯವನ್ನು ತಿಳಿದು, ಅಲ್ಲಿಗೆ ಆಗಮಿಸಿರುವ ಋಷಿಗಳ ಬಳಿ ಇಂದ್ರ ಮಾಡಿದ ಪುಣ್ಯವನ್ನು, ಇಂದ್ರನ

ಮನೆಯಲ್ಲಿ ಲಕ್ಷ್ಮೀದೇವಿಯು ಬಂದು ವೃದ್ಧಿಯನ್ನು ಹೊಂದಿರುವುದನ್ನು ವಿಶೇಷವಾಗಿ ಪ್ರಶಂಸಿಸಿದರು.

ತತೋಽಮೃತಂ ದ್ಯೌಃ ಪ್ರವವರ್ಷ ಭಾಸ್ವತೀ
ಪಿತಾಮಹಸ್ಯಾಯತನೇ ಸ್ವಯಂಭುವಃ ।
ಅನಾಹತಾ ದುಂದುಭಯಶ್ಚ ನೇದಿರೇ
ತಥಾ ಪ್ರಸನ್ನಾಶ್ಚ ದಿಶಶ್ಚಕಾಶಿರೇ ॥೧೦೬॥

ಬಳಿಕ ನಿರ್ಮಲವಾದ, ಪ್ರಕಾಶಪೂರ್ಣವಾದ ಆಕಾಶಮಂಡಲವು ಪಿತಾಮಹನಾದ ಬ್ರಹ್ಮನ ಲೋಕದಲ್ಲಿ ಅಮೃತವನ್ನು ಸುರಿಸಿತು. ಬಾರಿಸದೆ ಇದ್ದರೂ ದೇವ-ದುಂದುಭಿಗಳು ಮೊಳಗಿದವು. ಎಲ್ಲಾ ದಿಕ್ಕುಗಳು ಪ್ರಸನ್ನತೆಯಿಂದ ಕಂಗೊಳಿಸಿದವು.

ಯಥರ್ತು ಸಸ್ಯೇಷು ವವರ್ಷ ವಾಸವೋ
ನ ಧರ್ಮಮಾರ್ಗಾದ್ ವಿಚಚಾಲ ಕಶ್ಚನ ।
ಅನೇಕರತ್ನಾಕರಭೂಷಣಾ ಚ ಭೂಃ
ಸುಘೋಷಘೋಷಾ ಭುವನೌಕಸಾಂ ಜಯೇ ॥೧೦೭॥

ಲಕ್ಷ್ಮಿಯು ಸ್ವರ್ಗದಲ್ಲಿ ವಾಸ ಮಾಡಿದ ಬಳಿಕ ಇಂದ್ರನು ಋತುಧರ್ಮಕ್ಕೆ ಅನುಗುಣವಾಗಿ ಪ್ರಪಂಚದಲ್ಲಿರುವ ಸಸ್ಯಗಳ ಮೇಲೆ ಮಳೆ ಸುರಿಸುತ್ತಿದ್ದನು. ಯಾರೂ ಧರ್ಮಭ್ರಷ್ಟರಾಗುತ್ತಿರಲಿಲ್ಲ. ರತ್ನಾಕರಗಳಿಂದ ಅಲಂಕೃತವಾದ ಭೂಮಿಯು ದೇವತೆಗಳ ವಿಜಯಸೂಚಕವಾಗಿ ಸಮುದ್ರಗಳ ಗರ್ಜನೆಯ ರೂಪದಲ್ಲಿ ಜಯಘೋಷಗಳನ್ನು ಮೊಳಗಿಸಿತು.

ಕ್ರಿಯಾಭಿರಾಮಾ ಮನುಜಾ ಯಶಸ್ವಿನೋ
ಬಭುಃ ಶುಭೇ ಪುಣ್ಯಕೃತಾಂ ಪಥಿ ಸ್ಥಿತಾಃ ।
ನರಾಮರಾಃ ಕಿನ್ನರಯಕ್ಷರಾಕ್ಷಸಾಃ
ಸಮೃದ್ಧಿಮಂತಃ ಸುಖಿನೋ ಯಶಸ್ವಿನಃ ॥೧೦೮॥

ಆ ಸಮಯದಲ್ಲಿ ಮನನಶೀಲರಾದ ಮಾನವರು ಪುಣ್ಯಾತ್ಮರ ಮಂಗಳ-ಮಯವಾದ ಮಾರ್ಗವನ್ನೇ ಆಶ್ರಯಿಸಿ, ಸತ್ಕರ್ಮಗಳನ್ನು ಆಚರಿಸುತ್ತಾ, ಕಾಂತಿಯಿಂದ ಪ್ರಕಾಶಿಸಿದರು. ಅದೇ ರೀತಿ ದೇವತೆಗಳು, ಕಿನ್ನರ, ಯಕ್ಷ-ರಾಕ್ಷಸ-ಮಾನವರು, ಸಮೃದ್ಧಶಾಲಿಗಳು, ಸುಖಿಗಳು, ಕೀರ್ತಿಸಂಪನ್ನರೂ ಆದರು.

ನ ಜಾತ್ವಕಾಲೇ ಕುಸುಮಂ ಕುತಃ ಫಲಂ
ಪಪಾತ ವೃಕ್ಷಾತ್ ಪವನೇರಿತಾದಪಿ ।
ರಸಪ್ರದಾಃ ಕಾಮದುಘಾಶ್ಚ ಧೇನವೋ
ನ ದಾರುಣಾ ವಾಗ್ವಿಚಚಾರ ಕಸ್ಯಚಿತ್ ॥೧೦೯॥

ಅಕಾಲದಲ್ಲಿ ಗಾಳಿಯಿಂದ ಹತವಾಗುತ್ತಿದ್ದರೂ ವೃಕ್ಷದಿಂದ ಕುಸುಮವು ಬೀಳುತ್ತಿರಲಿಲ್ಲ. ಕುಸುಮವೇ ಬೀಳದಿದ್ದ ಬಳಿಕ ಅಕಾಲದಲ್ಲಿ ಫಲಗಳು ಭೂಮಿಗೆ ಕಳಚಿ ಬೀಳಲು ಹೇಗೆ ಸಾಧ್ಯ ? ಹಸುಗಳು ಸತ್ವಪೂರ್ಣವಾದ ಹಾಲನ್ನು ಯಥೇಷ್ಟವಾಗಿ ನೀಡುತ್ತಿದ್ದವು. ಯಾರಿಂದಲೂ ಕಠೋರವಾದ ಮಾತು ಹೊರಹೊಮ್ಮುತ್ತಿರಲಿಲ್ಲ.

ಇಮಾಂ ಸಪರ್ಯಾಂ ಸಹ ಸರ್ವಕಾಮದೈಃ
ಶ್ರಿಯಾಶ್ಚ ಶಕ್ರಪ್ರಮುಖೈಶ್ಚ ದೈವತೈಃ ।
ಪಠಂತಿ ಯೇ ವಿಪ್ರಸದಃ ಸಮಾಗಮೇ
ಸಮೃದ್ಧಕಾಮಾಃ ಶ್ರಿಯಮಾಪ್ನುವಂತಿ ತೇ ॥೧೧೦॥

ಸಕಲ ವಿಧವಾದ ಇಷ್ಟಾರ್ಥಗಳನ್ನು ದಯಪಾಲಿಸುವ, ಇಂದ್ರನೇ ಮೊದಲಾದ ದೇವತೆಗಳಿಂದ ಸ್ತುತಿಸಲ್ಪಟ್ಟ ಲಕ್ಷ್ಮಿಯ ಈ ಪೂಜಾ ಪ್ರಕರಣವನ್ನು ಯಾರು ಬ್ರಾಹ್ಮಣರ ಸಭೆಗೆ ಬಂದು ಪಠನ ಮಾಡುತ್ತಾರೋ ಅವರು ಸಮಸ್ತ ಇಷ್ಟಾರ್ಥಗಳನ್ನು ಪಡೆದು ಸಂಪತ್ತನ್ನು ಹೊಂದುತ್ತಾರೆ.

ತ್ವಯಾ ಕುರೂಣಾಂ ವರ ಯತ್ ಪ್ರಚೋದಿತಂ
ಭವಾಭವಸ್ಯೇಹ ಪರಂ ನಿದರ್ಶನಮ್ ।
ತದದ್ಯ ಸರ್ವಂ ಪರಿಕೀರ್ತಿತಂ ಮಯಾ
ಪರೀಕ್ಷ್ಯ ತತ್ತ್ವಂ ಪರಿಗಂತುಮರ್ಹಸಿ ॥೧೧೧॥

ಕುರುಶ್ರೇಷ್ಠನೇ, ಯುಧಿಷ್ಠಿರನೇ, ನೀನು ಪ್ರಶ್ನಿಸಿದ ಉನ್ನತಿ ಮತ್ತು ಅಧೋಗತಿಗಳ ಪೂರ್ವಕಾರಣಗಳನ್ನು ಅನೇಕ ದೃಷ್ಟಾಂತಗಳೊಡನೆ ಹೇಳಿದ್ದೇನೆ. ನೀನೇ ಎಲ್ಲಾ ಹೇಳಿದ ವಿಚಾರಗಳನ್ನು ಪರೀಕ್ಷಿಸಿ, ತತ್ತ್ವವನ್ನು ನಿಶ್ಚಯಿಸಲು ಅರ್ಹನಾಗಿರುವಿ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಚತುಃಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಅರವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ಅರವತ್ತೈದನೆಯ ಅಧ್ಯಾಯ

ಬ್ರಹ್ಮಜ್ಞಾನಿಗಳ ಲಕ್ಷಣಗಳನ್ನು ಕುರಿತು ದೇವಲಋಷಿಗೂ, ಜೈಗೀಷವ್ಯರಿಗೂ ನಡೆದ ಸಂವಾದ. ಶಿವ-ಪಾರ್ವತಿಯರು ಜೈಗೀಷವ್ಯರನ್ನು ಪರೀಕ್ಷಿಸಿದುದು.

ಯುಧಿಷ್ಠಿರಃ

ಕಿಂಶೀಲಃ ಕಿಂಸಮಾಚಾರಃ ಕಿಂವಿದ್ಯಃ ಕಿಂಪರಾಯಣಃ ।
ಪ್ರಾಪ್ನೋತಿ ಬ್ರಹ್ಮಣಃ ಸ್ಥಾನಂ ಯತ್ ಪರಂ ಪ್ರಕೃತೇರ್ಧ್ರುವಮ್ ॥೧॥

ಪಿತಾಮಹನೇ, ಮನುಷ್ಯನು ಯಾವ ಶೀಲದಿಂದ, ಯಾವ ಆಚಾರದಿಂದ, ಯಾವ ವಿದ್ಯೆಯಿಂದ ಅಥವಾ ಯಾವ ಪ್ರಯತ್ನದಿಂದ ಪ್ರಕೃತಿಗಿಂತಲೂ ಉತ್ತಮನಾದ, ಅರ್ಥಾತ್ ಪ್ರಕೃತಿಯ ಅಭಿಮಾನಿಯಾದ ಲಕ್ಷ್ಮೀದೇವಿಗಿಂತಲೂ ಉತ್ತಮನಾದ ಭಗವಂತನ ಸ್ಥಾನವನ್ನು ಹೊಂದುತ್ತಾನೆ?

ಭೀಷ್ಮಃ

ಮೋಕ್ಷಧರ್ಮೇಷು ನಿಯತೋ ಲಘ್ವಾಹಾರೋ ಜಿತೇಂದ್ರಿಯಃ ।
ಪ್ರಾಪ್ನೋತಿ ಬ್ರಹ್ಮಣಃ ಸ್ಥಾನಂ ಯತ್ ಪರಂ ಪ್ರಕೃತೇರ್ಧ್ರುವಮ್ ॥೨॥

ಧರ್ಮರಾಜನೇ, ಕೇಳು. ಯಾವನು ಮುಕ್ತಿಗೆ ಸಾಧನವೆನಿಸಿದ ನಿವೃತ್ತಿ ಮಾರ್ಗವನ್ನು ಆಶ್ರಯಿಸಿ ಜಿತೇಂದ್ರಿಯನಾಗಿ ಅಲ್ಪ ಆಹಾರವನ್ನು ಸ್ವೀಕರಿಸುತ್ತಾ ಸಾಧನೆಯ ಮಾರ್ಗದಲ್ಲಿ ನಡೆಯುವನೋ ಅವನು ಪ್ರಕೃತಿಗಿಂತಲೂ ಉತ್ತಮನೆನಿಸಿದ ಭಗವಂತನ ಸ್ಥಾನವನ್ನು ಹೊಂದುತ್ತಾನೆ.

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಜೈಗೀಷವ್ಯಸ್ಯ ಸಂವಾದಮಸಿತಸ್ಯ ಚ ಭಾರತ ॥೩॥

ಇದೇ ವಿಷಯದಲ್ಲಿ ದೇವಲ ಋಷಿಗೂ, ಜೈಗೀಷವ್ಯರಿಗೂ ನಡೆದ ಸಂವಾದ ರೂಪವಾದ ಇತಿಹಾಸವನ್ನು ಉದಾಹರಿಸುತ್ತಾರೆ.

ಮಹಾದೇವಾಂತರೇ ವೃತ್ತಂ ದೇವ್ಯಾಶ್ಚೈವಾಂತರೇ ತಥಾ ।
ಯಥಾವಚ್ಛೃಣು ರಾಜೇಂದ್ರ ಜ್ಞಾನದಂ ಪಾಪನಾಶನಮ್ ॥೪॥

ಶಿವ-ಪಾರ್ವತಿಯರಿಗೆ ಒಮ್ಮೆ ಅವಕಾಶವು ದೊರೆತಾಗ ಅವರಿಬ್ಬರೇ ಪರಸ್ಪರವಾಗಿ ಸಂವಾದವನ್ನು ನಡೆಸಿದ ಒಂದು ಜ್ಞಾನಪ್ರದವಾದ, ಪಾಪನಾಶಕವಾದ ಇತಿಹಾಸವಿದೆ. ಅದನ್ನು ಕೇಳು.

ಜೈಗೀಷವ್ಯಂ ಮಹಾಪ್ರಾಜ್ಞಂ ಧರ್ಮಾಣಾಮಾಗತಾಗಮಮ್ ।
ಅಕ್ರುದ್ಧ್ಯಂತಮಹೃಷ್ಯಂತಮಸಿತೋ ದೇವಲೋಽಬ್ರವೀತ್ ॥೫॥

ಒಮ್ಮೆ ಅಸಿತನೆಂಬ ಹೆಸರುಳ್ಳ ದೇವಲಮುನಿಯು ಮಹಾಪ್ರಾಜ್ಞನೂ, ಧರ್ಮಜ್ಞನೂ ಆದ ಜೈಗೀಷವ್ಯಮುನಿಯನ್ನು ಕುರಿತು ಹೀಗೆ ಪ್ರಶ್ನೆ ಮಾಡಿದನು.

ನ ಪ್ರೀಯಸೇ ವಂದ್ಯಮಾನೋ ನಿಂದ್ಯಮಾನೋ ನ ಕುಪ್ಯಸಿ ।
ಕಾ ತೇ ಪ್ರಜ್ಞಾ ಕುತಶ್ಚೈಷಾ ಕಿಂ ಚೈತಸ್ಯಾಃ ಪರಾಯಣಮ್ ॥೬॥

ಜೈಗೀಷವ್ಯರೇ, ಮಹಾತ್ಮರೇ, ನೀವು ಸ್ತೋತ್ರ ಮಾಡಿದಾಗ ಹಿಗ್ಗುವುದಿಲ್ಲ, ನಿಂದಿಸಿದಾಗ ಕುಪಿತರಾಗುವುದಿಲ್ಲ. ಇದಕ್ಕೆ ಕಾರಣವಾದ ಜ್ಞಾನ ಎಲ್ಲಿಂದ ಲಭಿಸಿತು? ಇದರ ಉತ್ತರವೇನು? ಎಂದು ಪ್ರಶ್ನಿಸಿದರು.

ಭೀಷ್ಮಃ

ಇತಿ ತೇನಾನುಯುಕ್ತಃ ಸ ತಮುವಾಚ ಮಹಾತಪಾಃ ।
ಮಹದಾಖ್ಯಮಸಂದಿಗ್ಧಂ ಪುಷ್ಕಲಾರ್ಥಪದಂ ಶುಚಿ ॥೭॥

ಈ ರೀತಿಯಾಗಿ ದೇವಲರು ಪ್ರಶ್ನಿಸಿದಾಗ ಮಹಾತಪಸ್ವಿಗಳಾದ ಜೈಗೀಷವ್ಯರು ಅನಂತ ಅರ್ಥಗಳನ್ನು ನೀಡುವ ಶ್ರುತಿಯಾದ, ಸಂಶಯರಹಿತವಾದ ಶ್ರೇಷ್ಠವಾದ ವಾಕ್ಯವನ್ನು ದೇವಲರನ್ನು ಕುರಿತು ಹೇಳಿದರು.

ಜೈಗೀಷವ್ಯಃ

ಯಾ ಗತಿರ್ಯಾ ಪರಾ ನಿಷ್ಠಾ ಯಾ ಶಾಂತಿಃ ಪುಣ್ಯಕರ್ಮಣಾಮ್ ।
ತಾಂ ತೇಽಹಂ ಸಂಪ್ರವಕ್ಷ್ಯಾಮಿ ಯನ್ಮಾಂ ಪೃಚ್ಛಸಿ ವೈ ದ್ವಿಜ ॥೮॥

ಎಲೈ ಬ್ರಾಹ್ಮಣನೇ, ಪುಣ್ಯಶೀಲರಿಗೆ ಯಾವುದು ಉತ್ತಮ ಗತಿಗೂ ದೊಡ್ಡ ನಿಷ್ಠೆಗೂ, ಶಾಂತಿ ಎನಿಸುವುದೋ ಅದನ್ನು ನಿನಗೆ ತಿಳಿಸುತ್ತೇನೆ, ಕೇಳು.

ನಿಂದತ್ಸು ಚ ಸಮೋ ನಿತ್ಯಂ ಪ್ರಶಂಸತ್ಸು ಚ ದೇವಲ ।
ನಿಹ್ನುವಂತಿ ಚ ಯೇ ತೇಷಾಂ ಸಮಯಂ ಸುಕೃತಂ ಚ ಯತ್ ॥೯॥

ಲೋಕದಲ್ಲಿ ತನ್ನನ್ನು ನಿಂದಿಸುವವರನ್ನು, ಸ್ತುತಿಸುವವರನ್ನು ಸಮ ಬುದ್ಧಿಯಿಂದಲೇ ಭಾವಿಸಬೇಕು. ನಿಂದಿಸುವವರ ಮಧ್ಯದಲ್ಲಿ ಯಾರು ಅಪಲಾಪ ಮಾಡುತ್ತಾರೋ ಅವರ ವಿಷಯದಲ್ಲಿ ಮೌನ ವಹಿಸಬೇಕು. ತಮ್ಮ ಸತ್ಕರ್ಮಗಳನ್ನು ಗೌಪ್ಯವಾಗಿರಿಸಿಕೊಳ್ಳಬೇಕು.

ಉಕ್ತಾಶ್ಚ ನ ವಿವಕ್ಷಂತಿ ವಕ್ತಾರಮಹಿತೇ ರತಮ್ ।
ಪ್ರತಿಹಂತುಂ ನ ಚೇಚ್ಛಂತಿ ಹಂತಾರಂ ವೈ ಮನೀಷಿಣಃ ॥೧೦॥

ಇನ್ನೊಬ್ಬರು ಅಹಿತವಾದುದನ್ನು ಹೇಳುತ್ತಿದ್ದರೂ ಯಾರು ಎದುರು ಮಾತನಾಡುವುದಿಲ್ಲವೋ, ತನ್ನನ್ನು ಹೊಡೆದವನನ್ನು ಹಿಂತಿರುಗಿ ಹೊಡೆಯಲು ಪ್ರಯತ್ನಿಸುವುದಿಲ್ಲವೋ ಇದೇ ಉತ್ತಮ ಪ್ರಜ್ಞೆ ಎನಿಸುತ್ತದೆ.

ನಾಪ್ರಾಪ್ತಮನುಶೋಚಂತಿ ಪ್ರಾಪ್ತಕಾಲಾನಿ ಕುರ್ವತೇ ।
ನ ಚಾತೀತಾನಿ ಶೋಚಂತಿ ನ ಚೈನಾನ್ ಪ್ರತಿಜಾನತೇ ॥೧೧॥

ಒದಗಿ ಬಂದುದ್ದರಲ್ಲಿ ಸಂತೋಷವನ್ನು ಪಡುತ್ತಾರೆ. ಕಳೆದುಹೋದುದ್ದಕ್ಕಾಗಿ ಚಿಂತಿಸುವುದಿಲ್ಲ. ಅದರ ಬಗ್ಗೆ ಮನಸ್ಸಿನಲ್ಲಿ ಶೋಕವನ್ನು ಪುನಃ ಪುನಃ ಎಣಿಸುವುದಿಲ್ಲ.

ಸಂಪ್ರಾಪ್ತಾನಾಂ ಚ ಪೂಜ್ಯಾನಾಂ ಕಾಮಾದರ್ಥೇಷು ದೇವಲ ।
ಯಥೋಪಪತ್ತಿಂ ಕುರ್ವಂತಿ ಶಕ್ತಿಮಂತಃ ಕೃತವ್ರತಾಃ ॥೧೨॥

ಯಾರು ಧೀರರಾಗಿ, ದೃಢವ್ರತರಾಗಿದ್ದು ತಮ್ಮ ಬಳಿ ಅರ್ಥಿಗಳಾಗಿ ಆಗಮಿಸುತ್ತಾರೋ ಅವರಿಗೆ ತಮ್ಮಿಂದ ಸಾಧ್ಯವಾದಷ್ಟು ಉಪಕಾರವನ್ನು ಮಾಡುತ್ತಾರೋ;

ಪಕ್ವವಿದ್ಯಾ ಮಹಾಪ್ರಾಜ್ಞಾ ಜಿತಕ್ರೋಧಾ ಜಿತೇಂದ್ರಿಯಾಃ ।
ಮನಸಾ ಕರ್ಮಣಾ ವಾಚಾ ನಾಪರಾದ್ಧ್ಯಂತಿ ಕಸ್ಯಚಿತ್ ॥೧೩॥

ಅವರು ವಿದ್ಯೆಯ ಪಕ್ವತೆಯನ್ನು ಪಡೆದವರು, ಮಹಾಪ್ರಾಜ್ಞರು, ಜಿತಕ್ರೋಧರು, ಜಿತೇಂದ್ರಿಯರು ಎನಿಸುತ್ತಾರೆ. ಮನೋವಾಕ್-ಕಾಯಗಳಿಂದಲೂ ಯಾರಿಗೂ ಅವರು ವಿರೋಧವನ್ನು ಮಾಡುವವರಲ್ಲ.

ಅನೀರ್ಷವೋ ನ ಚಾನ್ಯೋನ್ಯಂ ವಿಹಿಂಸಂತಿ ಕದಾಚನ ।
ನ ಚ ಜಾತೂಪತಪ್ಯಂತೇ ಧೀರಾಃ ಪರಸಮೃದ್ಧಿಭಿಃ ॥೧೪॥

ಅಸೂಯಾರಹಿತರಾಗಿ, ಬೇರೆ ಯಾರ ಮನಸ್ಸನ್ನು ಎಂದಿಗೂ ನೋಯಿಸದೆ, ಮತ್ತೊಬ್ಬರ ಸಮೃದ್ಧಿಯನ್ನು ಕಂಡು ಎಂದಿಗೂ ಅಸೂಯೆಯನ್ನು ಹೊಂದದೆ ಇರುವವರು ಧೀರ ಪುರುಷರೆನಿಸುತ್ತಾರೆ.

ನಿಂದಾಪ್ರಶಂಸೇ ಚಾತ್ಯರ್ಥಂ ನ ವದಂತಿ ಪರಸ್ಯ ಯೇ ।
ನ ಚ ನಿಂದಾಪ್ರಶಂಸಾಭ್ಯಾಂ ವಿಕ್ರಿಯಂತೇ ಕದಾಚನ ॥೧೫॥

ಪರನಿಂದನೆಯನ್ನು ಅಥವಾ ಮತ್ತೊಬ್ಬರ ಅತಿಯಾದ ಪ್ರಶಂಸೆಯನ್ನು ಇವರು ಎಂದಿಗೂ ಮಾಡಲು ಹೋಗುವುದಿಲ್ಲ. ಅಥವಾ ಇನ್ನೊಬ್ಬರು ಮಾಡುವ ನಿಂದನೆ ಅಥವಾ ಪ್ರಶಂಸೆಗಳಿಂದ ಮಾನಸಿಕ ವಿಕಾರಗಳಿಗೆ ಎಂದಿಗೂ ತುತ್ತಾಗುವುದಿಲ್ಲ.

ಸರ್ವತಶ್ಚ ಪ್ರಶಾಂತಾ ಯೇ ಸರ್ವಭೂತಹಿತೇ ರತಾಃ ।
ನ ಕ್ರುದ್ಧ್ಯಂತಿ ನ ಹೃಷ್ಯಂತಿ ನಾಪರಾದ್ಧ್ಯಂತಿ ಕಸ್ಯಚಿತ್ ।
ವಿಮುಚ್ಯ ಹೃದಯಗ್ರಂಥೀಂಶ್ಚಂಕ್ರಮ್ಯಂತೇ ಯಥಾಸುಖಮ್ ॥೧೬॥

ಯಾರು ಎಲ್ಲ ವಿಧದಲ್ಲಿಯೂ ಶಾಂತಸ್ವಭಾವದವರಾಗಿರುತ್ತಾರೋ, ಸಮಸ್ತ ಪ್ರಾಣಿಗಳ ಹಿತದಲ್ಲಿ ಆಸಕ್ತರಾಗಿರುತ್ತಾರೋ, ಕ್ರೋಧವನ್ನು ಹೊಂದುವುದಿಲ್ಲವೋ,

ಸಂತುಷ್ಟರಾಗಿರುತ್ತಾರೋ, ಯಾರ ವಿಷಯದಲ್ಲಿ ಅಪರಾಧವನ್ನು ಎಸಗುವುದಿಲ್ಲವೋ, ಇವರು ತಮ್ಮ ಹೃದಯಗ್ರಂಥಿಗಳನ್ನೆಲ್ಲ ನಿಸ್ಸಂದೇಹವಾಗಿ ಅರ್ಥಾತ್ ಸಂಶಯಗಳನ್ನೆಲ್ಲ ನಿಸ್ಸಂದೇಹವಾಗಿ ಬಿಡಿಸಿಕೊಂಡು ಸುಖದಿಂದ ಸಂಚರಿಸುತ್ತಾರೆ.

ನ ಯೇಷಾಂ ಬಾಂಧವಾಃ ಸಂತಿ ಯೇ ಚಾನ್ಯೇಷಾಂ ನ ಬಾಂಧವಾಃ ।
ಅಮಿತ್ರಾಶ್ಚ ನ ಸಂತ್ಯೇಷಾಂ ಯೇ ಚಾಮಿತ್ರಾ ನ ಕಸ್ಯಚಿತ್ ॥೧೭॥

ಯಾವ ಬಂಧು-ಬಾಂಧವರಲ್ಲಿಯೂ ಅತಿಯಾದ ಸ್ನೇಹವಿಲ್ಲ, ಇವರಲ್ಲಿಯೂ ಇತರ ಬಂಧುಗಳಿಗೆ ಅತಿಯಾದ ಸ್ನೇಹವಿಲ್ಲ.

ಯ ಏವಂ ಕುರ್ವತೇ ಮರ್ತ್ಯಾಃ ಸುಖಂ ಜೀವಂತಿ ಸರ್ವದಾ ।
ಯೇ ಧರ್ಮಂ ಚಾನುರುಧ್ಯಂತೇ ಧರ್ಮಜ್ಞಾ ದ್ವಿಜಸತ್ತಮಾಃ ।
ಯೇ ಹ್ಯತೋ ವಿಚ್ಯುತಾ ಮಾರ್ಗಾತ್ ತೇ ಹೃಷ್ಯಂತ್ಯುದ್ವಿಜಂತಿ ಚ॥೧೮॥

ಇವರಿಗೆ ಮತ್ತೊಬ್ಬರ ಶತ್ರುತ್ವವಿಲ್ಲ. ಇವರಿಗೆ ಶತ್ರುಗಳಿಲ್ಲ. ಈ ರೀತಿಯಾಗಿ ಯಾವ ಮನುಷ್ಯರು ವರ್ತಿಸುತ್ತಾರೋ ಅವರು ಯಾವಾಗಲೂ ಸುಖದಿಂದ ಜೀವಿಸುತ್ತಾರೆ. ಯಾವ ಬ್ರಾಹ್ಮಣಶ್ರೇಷ್ಠರು ಧರ್ಮವನ್ನು ವಿರೋಧಿಸುತ್ತಾರೋ, ಯಾರು ಧರ್ಮದಿಂದ ಚ್ಯುತರಾಗಿ ಮತ್ತೊಬ್ಬರನ್ನು ಉದ್ವೇಗಕ್ಕೆ ತುತ್ತಾಗುವಂತೆ ಮಾಡುತ್ತಾರೋ, ಇದರಿಂದ ತೃಪ್ತರಾಗುತ್ತಾರೋ, ಅವರು ದುಃಖಕ್ಕೆ ಭಾಗಿಗಳಾಗುತ್ತಾರೆ.

ಆಸ್ಥಿತಸ್ತಮಹಂ ಮಾರ್ಗಮಸೂಯಿಷ್ಯಾಮಿ ಕಂ ಕಥಮ್ ।
ನಿಂದ್ಯಮಾನಃ ಪ್ರಶಂಸ್ತೋ ವಾ ಹೃಷ್ಯೇಯಂ ಕೇನ ಹೇತುನಾ ॥೧೯॥

ನಾನು ಇಂತಹ ಧರ್ಮವಿರುದ್ಧವಾದ ಮಾರ್ಗಗಳನ್ನು ದ್ವೇಷಿಸುತ್ತೇನೆ. ಆದ್ದರಿಂದ ಯಾರ ಸ್ತುತಿ-ನಿಂದೆಗಳಿಂದಾಗಲೀ ನನ್ನ ಮನಸ್ಸು ಸ್ವಲ್ಪವೂ ಕದಡುವುದಿಲ್ಲ.

ಯದ್ ಯದಿಚ್ಛಂತಿ ತತ್ ತಸ್ಮಾದಧಿಗಚ್ಛಂತಿ ಮಾನವಾಃ ।
ನ ಮೇ ನಿಂದಾಪ್ರಶಂಸಾಭ್ಯಾಂ ಹ್ರಾಸವೃದ್ಧೀ ಭವಿಷ್ಯತಃ ॥೨೦॥

ಯಾರು ಯಾವುದನ್ನು ಬಯಸುತ್ತಾರೋ ಅದರಿಂದ ಆ ಮಾನವರು ಅದಕ್ಕೆ ಸಂಬಂಧಪಟ್ಟ ಸುಖ-ದುಃಖಗಳನ್ನು ಹೊಂದುತ್ತಾರೆ. ನನಗೆ ನಿಂದಾ-ಪ್ರಶಂಸೆಗಳ ಅಗತ್ಯವೇ ಇರುವುದಿಲ್ಲವಾದ್ದರಿಂದ ಹ್ರಾಸವೂ ವೃದ್ಧಿಯೂ ಇರುವುದಿಲ್ಲ.

ಅಮೃತಸ್ಯೇವ ಸಂತೃಪ್ಯೇದವಮಾನಸ್ಯ ತತ್ತ್ವವಿತ್ ।
ವಿಷಸ್ಯೇವೋದ್ವಿಜೇನ್ನಿತ್ಯಂ ಸಮ್ಮಾನಸ್ಯ ವಿಚಕ್ಷಣಃ ॥೨೧॥

ತತ್ತ್ವಜ್ಞನಾದ ವ್ಯಕ್ತಿಯು ತನಗುಂಟಾದ ಅವಮಾನವನ್ನು ಅಮೃತದಂತೆ ಭಾವಿಸಬೇಕು. ಸನ್ಮಾನವನ್ನು ವಿಷದಂತೆ ಭಾವಿಸಿ ಅಲಕ್ಷ್ಯ ಮಾಡಬೇಕು.

ಅವಜ್ಞಾತಃ ಸುಖಂ ಶೇತೇ ಇಹ ಚಾಮುತ್ರ ಚೋಭಯೋಃ ।
ವಿಮುಕ್ತಃ ಸರ್ವಪಾಪೇಭ್ಯೋ ಯೋಽವಮಂತಾ ಸ ಬದ್ಧ್ಯತೇ ॥೨೨॥

ಯಾವನು ಈ ಸನ್ಮಾನ-ಅವಮಾನಗಳನ್ನು ದಾಟಿರುತ್ತಾನೋ ಅವನು ಅವಮಾನಿತನಾದರೂ ಸುಖವಾಗಿ ನಿದ್ರಿಸುತ್ತಾನೆ. ಅವನನ್ನು ಅವಮಾನಗೊಳಿಸಿದವನೆ ಕಷ್ಟಕ್ಕೀಡಾಗುತ್ತಾನೆ. ಇಹಲೋಕದಲ್ಲಿ ಪರಲೋಕದಲ್ಲಿಯೂ ಸಮಸ್ತ ಪಾಪಗಳಿಂದ ವಿಮುಕ್ತನಾಗಿ ಸುಖವನ್ನೇ ಹೊಂದುತ್ತಾನೆ.

ಪರಾಂ ಗತಿಂ ಚ ಯೇ ಕೇಚಿತ್ ಪ್ರಾರ್ಥಯಂತಿ ಮನೀಷಿಣಃ ।
ಏತದ್ ವ್ರತಂ ಸಮಾಶ್ರಿತ್ಯ ಸುಖಮೇಧಂತಿ ತೇ ಜನಾಃ ॥೨೩॥

ಪರಗತಿಯನ್ನು ಬಯಸುವ ಪ್ರಾಜ್ಞರು ಇಂತಹ ವ್ರತವನ್ನೇ ಪ್ರಾರ್ಥಿಸುತ್ತಾರೆ. ಇಂದ್ರಿಯಗಳಿಂದ ಇಂತಹ ವ್ರತವನ್ನೇ ಆಶ್ರಯಿಸಿ ಸುಖವನ್ನೇ ಹೊಂದುತ್ತಾರೆ.

ಸರ್ವತಶ್ಚ ಸಮಾಹೃತ್ಯ ಕ್ರತೂನ್ ಸರ್ವಾನ್ ಜಿತೇಂದ್ರಿಯಃ ।
ಪ್ರಾಪ್ನೋತಿ ಬ್ರಹ್ಮಣಃ ಸ್ಥಾನಂ ಯತ್ ಪರಂ ಪ್ರಕೃತೇರ್ಧ್ರುವಮ್ ॥೨೪॥

ಇಂದ್ರಿಯಗಳನ್ನು ಜಯಿಸಿದವನೇ ಎಲ್ಲ ಯಜ್ಞಗಳನ್ನು ನಡೆಸಿದವನಾಗುತ್ತಾನೆ. ಅಂತಹವನು ಪ್ರಕೃತಿಗಿಂತಲೂ ಉತ್ತಮನೆನಿಸಿದ ಶಾಶ್ವತನಾದ ಭಗವಂತನನ್ನು ಹೊಂದುತ್ತಾನೆ.

ನಾಸ್ಯ ದೇವಾ ನ ಗಂಧರ್ವಾ ನ ಪಿಶಾಚಾ ನ ರಾಕ್ಷಸಾಃ ।
ಪದಮನ್ವವರೋಹಂತಿ ಪ್ರಾಪ್ತಸ್ಯ ಪರಮಾಂ ಗತಿಮ್ ॥೨೫॥

ಇಂತಹ ಉತ್ತಮ ಪದವಿಯು ದೇವತೆಗಳಿಗಾಗಲೀ, ಗಂಧರ್ವಗಳಿಗಾಗಲೀ, ರಾಕ್ಷಸ, ಪಿಶಾಚಿಗಳಿಗಾಗಲೀ ಯಾರಿಗೇ ಆದರೂ ಲಭಿಸಲು ಸಾಧ್ಯವಿಲ್ಲ.

ಏತಚ್ಛ್ರುತ್ವಾ ಮುನೇಸ್ತಸ್ಯ ವಚನಂ ದೇವಲಸ್ತಥಾ ।
ತದಧೀನೋ ಭವಚ್ಛಿಷ್ಯಃ ಸರ್ವದ್ವಂದ್ವವಿನಿಷ್ಠಿತಃ ॥೨೬॥

ಈ ಮಾತನ್ನು ಮೊದಲು ಕೇಳಿಸಿಕೊಂಡವನು ದೇವಲನು. ಆತನು ಈ ಮಾತಿನಿಂದ ದ್ವಂದ್ವಗಳನ್ನೆಲ್ಲ ಪರಿಹರಿಸಿಕೊಂಡು ಜೈಗೀಷವ್ಯನ ಶಿಷ್ಯನಾಗಿದ್ದಾನೆ.

ಅಥಾನ್ಯತ್ ತು ಪುರಾವೃತ್ತಂ ಜೈಗೀಷವ್ಯಸ್ಯ ಧೀಮತಃ ।
ಶೃಣು ರಾಜನ್ನವಹಿತಃ ಸರ್ವಜ್ಞಾನಸಮನ್ವಿತಃ ॥೨೭॥

ಇದೇ ಜೈಗೀಷವ್ಯನ ವಿಷಯದಲ್ಲಿ ಇನ್ನೊಂದು ವೃತ್ತಾಂತವೂ ಇದೆ. ಸಮಸ್ತ ಜ್ಞಾನಗಳಿಗೆ ಸಾರವೆನಿಸಿದ ಆ ವಿಚಾರವನ್ನು ಕೇಳು.

ಯಮಾಹುಃ ಸರ್ವಲೋಕೇಶಂ ಸರ್ವಲೋಕನಮಸ್ಕೃತಮ್ ।
ಅಷ್ಟಮೂರ್ತಿಂ ಜಗನ್ಮೂರ್ತಿಮಿಷ್ಟಸಂಧಿವಿಭೂಷಿತಮ್ ।
ಯಂ ಪ್ರಾಪ್ತಾ ನ ವಿಷೀದಂತಿ ನ ಶೋಚಂತ್ಯುದ್ವಿಜಂತಿ ಚ ॥೨೮॥

ಸಮಸ್ತ ಲೋಕಗಳಿಗೆ ಈಶನೆಂದು, ಸರ್ವಲೋಕ ನಮಸ್ಕೃತನೆಂದು, ಅಷ್ಟಮೂರ್ತಿ ಎಂದು, ಜಗನ್ಮೂರ್ತಿ ಎಂದು, ಭಕ್ತಾಭೀಷ್ಟಪ್ರದನೆಂದು, ಯಾವ ಈಶ್ವರನನ್ನು ನಂಬಿರುತ್ತಾರೋ ಅವರು ಭಯಶೋಕಾದಿಗಳಿಗೆ ಈಡಾಗುವುದಿಲ್ಲ, ಉದ್ವೇಗಕ್ಕೂ ತುತ್ತಾಗುವುದಿಲ್ಲ.

ಯಸ್ಯ ಸ್ವಾಭಾವಿಕೀ ಶಕ್ತಿರಿದಂ ವಿಶ್ವಂ ಚರಾಚರಮ್ ।
ಯಾತಿ ಸಜ್ಜತಿ ಸರ್ವಾತ್ಮಾ ಸ ದೇವಃ ಪರಮೇಶ್ವರಃ ॥೨೯॥

ಯಾವ ಈಶ್ವರನ ಸ್ವಾಭಾವಿಕವಾದ ಶಕ್ತಿಯಿಂದಲೇ ಈ ಚರಾಚರ ಪ್ರಪಂಚವೆಲ್ಲವೂ ನಡೆಯುತ್ತಿದೆಯೋ ಅಂತಹ ಸರ್ವಾತ್ಮನಾದ, ದೇವದೇವನಾದ ಪರಮೇಶ್ವರನನ್ನು ಸಾಧಕನು ಹೊಂದುತ್ತಾನೆ.

ಮೇರೋರುತ್ತರಪೂರ್ವೇ ತು ಸರ್ವರತ್ನವಿಭೂಷಿತೇ ।
ಅಚಿಂತ್ಯೇ ವಿಮಲೇ ಸ್ಥಾನೇ ಸರ್ವರ್ತುಕುಸುಮಾನ್ವಿತೇ ॥೩೦॥

ಅಂತಹ ಪರಮೇಶ್ವರನು ಒಮ್ಮೆ ಮೇರುಪರ್ವತದ ಉತ್ತರದಲ್ಲಿ ಸಕಲ ರತ್ನ ಸಮೃದ್ಧವಾದ ಒಂದು ಸ್ಥಾನಕ್ಕೆ ಹೋದನು. ಅವನು ಸಮಸ್ತ ಋತುಗಳಲ್ಲಿ ಉಂಟಾಗುವ ಫಲ-ಪುಷ್ಪಗಳ ಸಮೃದ್ಧಿಯಿಂದ ಕೂಡಿತ್ತು.

ವೃಕ್ಷೈಶ್ಚ ಶೋಭಿತೇ ನಿತ್ಯಂ ದಿವ್ಯವಾಯುಸಮೀರಿತೇ ।
ನಾನಾಭೂತಗಣೈರ್ಯುಕ್ತಃ ಸರ್ವದೇವನಮಸ್ಕೃತಃ ॥೩೧॥

ನಾನಾ ವೃಕ್ಷಗಳಿಂದ ಶೋಭಿತವಾದ, ನಿತ್ಯವೂ ದಿವ್ಯವಾದ ವಾಯುವಿನಿಂದ ಪೂರಿತವಾದ, ನಾನಾ ಭೂತಗಣಗಳಿಂದ ಕೂಡಿದ, ಸರ್ವದೇವನಮಸ್ಕೃತನಾದ ಪರಮೇಶ್ವರನು ಅಲ್ಲಿ ವಿಹರಿಸುತ್ತಿದ್ದನು.

ತತ್ರ ವಿದ್ಯಾಧರಗಣಾ ಗಂಧರ್ವಾಪ್ಸರಸಾಂ ಗಣಾಃ ।
ಲೋಕಪಾಲಾಃ ಸಮುದ್ರಾಶ್ಚ ನದ್ಯಃ ಶೈಲಾಃ ಸರಾಂಸಿ ಚ ॥೩೨॥

ವಿದ್ಯಾಧರಗಣಗಳು, ಗಂಧರ್ವಾಪ್ಸರ ಸ್ತ್ರೀಯರ ಗಣಗಳು, ಲೋಕಪಾಲಕರು, ಸಮುದ್ರಗಳು, ನದಿಗಳು, ಪರ್ವತಗಳು ಮತ್ತು ಸರೋವರಗಳು;

ಋಷಯೋ ವಾಲಖಿಲ್ಯಾಶ್ಚ ಯಜ್ಞಾಃ ಸ್ತೋಭಾಹ್ವಯಾಸ್ತಥಾ ।
ಉಪಾಸಾಂಚಕ್ರಿರೇ ದೇವಂ ಪ್ರಜಾನಾಂ ಪತಯಸ್ತಥಾ ॥೩೩॥

ವಾಲಖಿಲ್ಯಾದಿ ಋಷಿಗಳು, ಯಜ್ಞಗಳು, ಹಾಹುವಾ ಇತ್ಯಾದಿ ಸ್ತೋಭಮಂತ್ರಗಳು, ಸೃಷ್ಟಿಕರ್ತರು ಎಲ್ಲರೂ ಅಲ್ಲಿಗೆ ಬಂದು ಸಾಕ್ಷಾತ್ತಾಗಿ ಪರಮೇಶ್ವರನನ್ನು ಉಪಾಸಿಸುತ್ತಿದ್ದರು.

ತತ್ರ ರುದ್ರೋ ಮಹಾದೇವೋ ದೇವ್ಯಾ ಚೈವ ಸಹೋಮಯಾ ।
ಆಸ್ತೇ ವೃಷಧ್ವಜಃ ಶ್ರೀಮಾನ್ ಸೋಮಸೂರ್ಯಾಗ್ನಿಲೋಚನಃ ॥೩೪॥

ಅಲ್ಲಿ ಮಹಾದೇವನಾದ ರುದ್ರನು ಪಾರ್ವತಿಯಿಂದ ಕೂಡಿಕೊಂಡು, ಚಂದ್ರ-ಸೂರ್ಯ-ಅಗ್ನಿಯ ಕಣ್ಣುಗಳುಳ್ಳವನಾಗಿ ವೃಷಭಧ್ವಜನಾಗಿ ಶೋಭಿಸುತ್ತಿದ್ದಾನೆ.

ತತ್ರೈವಂ ದೇವಮಾಲೋಕ್ಯ ದೇವೀ ಧಾತ್ರೀ ವಿಭಾವರೀ ।
ಉಮಾ ದೇವೀ ಪರೇಶಾನಮಪೃಚ್ಛದ್ ವಿನಯಾನ್ವಿತಾ ॥೩೫॥

ಆ ಮಹಾದೇವನೊಡನೆ ಅಲ್ಲಿಯೇ ಕ್ರೀಡಿಸುತ್ತಿರುವ, ಭೂರೂಪಿಣಿಯಾದ ಉಮಾದೇವಿಯು ಒಮ್ಮೆ ತನ್ನ ಪತಿಯನ್ನು ಕುರಿತು 'ನಾಥನೇ, ಅರ್ಥ ಎಂಬುದು ಯಾವುದು? ಅರ್ಥದ ಶಕ್ತಿ ಏನು? ಪೂಜ್ಯನೇ, ನನ್ನ ಪ್ರಾರ್ಥನೆಗನುಗುಣವಾಗಿ ಇದನ್ನು ನೀನು ತಿಳಿಸಬೇಕು'. ಅದಕ್ಕೆ ರುದ್ರದೇವರು ಅವಳು ಕೇಳಿದಾಗ ಹೀಗೆ ಉತ್ತರಿಸಿದರು.

ಅರ್ಥೋಽಹಮರ್ಥಶಕ್ತಿಸ್ತ್ವಂ ಭೋಕ್ತಾಽಹಂ ಭೋಜ್ಯಮೇವ ಚ ।
ರೂಪಂ ವಿದ್ಧಿ ಮಹಾಭಾಗೇ ಪ್ರಕೃತಿಸ್ತ್ವಂ ಪರೋ ಹ್ಯಹಮ್ ॥೩೬॥

ದೇವಿಯೇ, ನಾನು ಅರ್ಥ, ನೀನು ಅರ್ಥಶಕ್ತಿ. ನಾನು ಭೋಕ್ತ, ನೀನು ಭೋಜ್ಯ ವಸ್ತು. ನೀನು ಪ್ರಕೃತಿ, ನಾನು ಪ್ರಕೃತಿಗಿಂತಲೂ ಪರ(ಶ್ರೇಷ್ಠ)ನಾದವನು ಎಂದು ರುದ್ರನು ಉತ್ತರಿಸಿದನು.

ವ್ಯಾಖ್ಯಾನ ವಿಶೇಷ– ರುದ್ರದೇವರು ಪಾರ್ವತಿದೇವಿಯು ಪ್ರಶ್ನಿಸಿದಾಗ, ತನ್ನನ್ನೇ ಪರಮೇಶ್ವರನೆಂದು ಸಮಸ್ತ ದೇವತಾ, ಋಷಿ ಗಣಗಳ ಮಧ್ಯದಲ್ಲಿ ಹೇಳಿಕೊಳ್ಳುತ್ತಾನೆ. ಆದರೆ ಈ ಪ್ರಸಂಗದಲ್ಲಿಯೂ ಯಾವ ಅಪೇಕ್ಷೆಯೂ ಇಲ್ಲದ ಮುನಿಗಳು ತತ್ತ್ವ ವಿಷಯದಲ್ಲಿ ವಿಷ್ಣುವು ಸರ್ವೋತ್ತಮನಾಗಿದ್ದಾನೆ. ಆದ್ದರಿಂದ ರುದ್ರದೇವರು ಇಂತಹ ವಚನಗಳನ್ನು ಹೇಳಿದರೂ ಅವರು ಅದನ್ನು ನಿರಾಕರಿಸುತ್ತಾರೆ ಎಂಬುದನ್ನು ತೋರಿಸಲು ಮಾಯಾವಾದವನ್ನು ಇಲ್ಲಿ ಅನುವಾದ ಮಾಡುತ್ತಾರೆ. ಆದ್ದರಿಂದ ಇಲ್ಲಿ ಹೇಳಿದ ರುದ್ರದೇವರ ವಚನಗಳು ದರ್ಶನ ಭಾಷೆಯಲ್ಲಿ ಹೇಳಿದ ವಚನವಾಗಿವೆ ಎಂದು ಭಾವಿಸಬೇಕು.

ಅಹಂ ವಿಷ್ಣುರಹಂ ಬ್ರಹ್ಮಾ ಹ್ಯಹಂ ಯಜ್ಞಸ್ತಥೈವ ಚ ।
ಆವಯೋರ್ನ ಚ ಭೇದೋಽಸ್ತಿ ಪರಮಾರ್ಥಸ್ತತೋಽಬಲೇ ।
ತಥಾಪಿ ವಿದ್ಮಸ್ತೇ ಭೇದಂ ಕಿಂ ಮಾಂ ತ್ವಂ ಪರಿಪೃಚ್ಛಸಿ ॥೩೭॥

ನಾನೇ ವಿಷ್ಣುವೂ ಆಗಿದ್ದೇನೆ. ನಾನು ಬ್ರಹ್ಮನಾಗಿದ್ದೇನೆ. ಯಜ್ಞವೂ ನಾನೇ ಆಗಿದ್ದೇನೆ. ನಮ್ಮಿರ್ವರಲ್ಲಿ ಯಾವ ಭೇದವೂ ಇಲ್ಲ, ಅಗಲಿಕೆಯೂ ಇಲ್ಲ. ಇದೇ ಪರಮಾರ್ಥವು. ಹೀಗಿದ್ದರೂ ನನಗೂ, ನಿನಗೂ ಭೇದವಿರುವಂತೆ ಕಾಣಿಸುತ್ತಿದೆ. ಇಷ್ಟು ನಿನ್ನ ಪ್ರಶ್ನೆಗೆ ಉತ್ತರಿಸಿರುವೆ. ಇನ್ನೂ ಏನನ್ನು ಪ್ರಶ್ನಿಸುತ್ತಿ ಹೇಳು.

ಏವಮುಕ್ತಾ ತತಃ ಪ್ರಾಹ ಹ್ಯಧಿಕಂ ಹ್ಯೇತಯೋರ್ವದ ।
ಶ್ರೇಷ್ಠಂ ವೇದ ಮಹಾದೇವ ನಮ ಇತ್ಯೇವ ಭಾಮಿನೀ ॥೩೮॥

ಈ ರೀತಿಯಾಗಿ ರುದ್ರದೇವರು ಹೇಳಿದಾಗ ಪಾರ್ವತಿಯು ಹೇಳುತ್ತಾಳೆ– 'ಕಾಂತನೇ, ಅರ್ಥ-ಶಕ್ತಿ ಇವುಗಳಲ್ಲಿ ಶ್ರೇಷ್ಠವಾದುದು ಯಾವುದು? ಕೈಮುಗಿದು ಪ್ರಾರ್ಥಿಸುತ್ತೇನೆ. ಮಹಾದೇವನೇ ತಿಳಿಸು'.

ತದಂತರೇ ಸ್ಥಿತೋ ವಿದ್ವಾನ್ ವಸುರೂಪೋ ಮಹಾಮುನಿಃ ।
ಜೈಗೀಷವ್ಯಃ ಸ್ಮಯನ್ ಪ್ರಾಹ ಹ್ಯರ್ಥ ಇತ್ಯೇವ ನಾದಯನ್ ॥೩೯॥

ಇದೇ ಸಮಯದಲ್ಲಿ ಅವರಿಬ್ಬರ ನಡುವೆ ಇದ್ದ ವಸುರೂಪಿಯಾದ, ತತ್ತ್ವಜ್ಞಾನವೆಂಬ ಧನವನ್ನೇ ವಸು ಎಂದು ಭಾವಿಸಿರುವ, ತಪ್ಪಾದ ಮಾತುಗಳನ್ನು ಕೇಳಿಸಿಕೊಂಡಿರುವ, ಅಪಹಾಸ್ಯವನ್ನು ಮಾಡುತ್ತಾ, ಸಕಲ ವೇದಾರ್ಥಭೂತನಾದ ಭಗವಂತನನ್ನು ಬಿಟ್ಟು, ಅಸುರಜನರ ಮೋಹಕ್ಕೋಸ್ಕರ ನನ್ನನ್ನೇ ವಿಷ್ಣು ಎಂದು ಹೇಳಿರುವಂತಹ ರುದ್ರನನ್ನು ನೋಡುತ್ತಾ ಗಟ್ಟಿಯಾಗಿ ನಸುನಕ್ಕು ಹೀಗೆ- ಸಕಲ ವೇದಾರ್ಥಭೂತನಾದ ಭಗವಂತನೇ ಶ್ರೇಷ್ಠ ಎನ್ನುತ್ತಾ ಉತ್ತರಿಸುತ್ತಾನೆ.

ಶ್ರೇಷ್ಠೋಽನ್ಯೋಽಸ್ಮಾನ್ಮಹೀಪಿಂಡಾ ತಲ್ಲೀನಾ ಶಕ್ತಿರಾಪರಾ ।
ಮುದ್ರಿಕಾದಿವಿಶೇಷೇಣ ವಿಸ್ಪತಾ ಸಂಭೃತೇತಿ ಚ ॥೪೦॥

ಪಾರ್ವತಿಯೇ, ರುದ್ರದೇವನು ಹೇಳಿದಂತೆ ನಿನ್ನ ಪತಿಯಾದ ರುದ್ರನು ಅರ್ಥನೆನಿಸುವುದಿಲ್ಲ. ಅರ್ಥಶಬ್ದವಾಚ್ಯಳು ಪರಮಾತ್ಮನು ಎಲ್ಲಿಯ ತನಕ ಇರುತ್ತಾನೋ ಅಲ್ಲಿಯ ತನಕ ಇರುವ, ಪರಮಾತ್ಮನ ಜೊತೆಯಲ್ಲಿ ಯಾವಾಗಲೂ ಇರುವ ಲಕ್ಷ್ಮೀದೇವಿಯೇ ಅರ್ಥಶಕ್ತಿ ಎನಿಸಿದ್ದಾಳೆ ಎನ್ನುತ್ತಾ ಎಲ್ಲರಿಗೂ ಕೇಳಿಸುವಂತೆ ಉಚ್ಚಸ್ವರದಿಂದ ಮಾತನಾಡಿದನು. ಪ್ರಳಯಕಾಲದಲ್ಲಿಯೂ ವಿದ್ಯಮಾನನಾದ ವೇದದ ಅರ್ಥವು ನಾರಾಯಣನೇ ಆಗಿದ್ದಾನೆ. ಅರ್ಥಶಕ್ತಿಯು ಲಕ್ಷ್ಮಿಯೇ ಆಗಿದ್ದಾಳೆ. ಶಿವ-ಪಾರ್ವತಿಯರು ಪ್ರಳಯ ಕಾಲದಲ್ಲಿ ನಿದ್ರಿಸುವುದರಿಂದ ಇಬ್ಬರೂ ಅರ್ಥರೂ ಅಲ್ಲ, ಅರ್ಥಶಕ್ತಿ ಉಳ್ಳವರೂ ಅಲ್ಲ. ಆದ್ದರಿಂದ ಮೋಸಕ್ಕೋಸ್ಕರ ಹೇಳಿದ ಶಿವನ ವಚನವನ್ನು ನೀವ್ಯಾರು ವಿಶ್ವಾಸ ಮಾಡಬೇಡಿರಿ. ಭಗವಂತನ ಶರೀರದಲ್ಲಿ ಅಂಗುಲಿ

ಮೊದಲಾದವುಗಳಲ್ಲಿ ಆಭರಣದ ರೂಪದಲ್ಲಿ ವಿಸ್ತೃತಳಾಗಿ ವ್ಯಾಪಿಸಿಕೊಂಡಿರುವ ಲಕ್ಷ್ಮೀದೇವಿಯು ಭಗವಂತನ ವಕ್ಷಸ್‌ಸ್ಥಲದಲ್ಲಿ ಪ್ರಲಯಕಾಲದಲ್ಲಿಯೂ ಧರಿಸಲ್ಪಟ್ಟಿರುತ್ತಾಳೆ. ಆದ್ದರಿಂದ ನಿತ್ಯವೂ ಅರ್ಥನು ಪರಮಾತ್ಮನೇ ಆಗಿದ್ದಾನೆ. ಅರ್ಥಶಕ್ತಿಯು ಲಕ್ಷ್ಮಿಯೇ ಆಗಿದ್ದಾಳೆ.

ತಚ್ಛ್ರುತ್ವಾ ವಚನಂ ದೇವೀ ಕೋऽಸಾವಿತ್ಯಬ್ರವೀದ್ ರುಷಾ ।
ವಾಕ್ಯಮಸ್ಯಾದ್ಯ ಸ್ತಂಭಿತ್ವಾ ಪ್ರೋಕ್ತವಾನಿತಿ ಶಂಕರಮ್ ॥೪೧॥

ಈ ರೀತಿಯಾಗಿ ಉಚ್ಚಸ್ವರದಿಂದ ಜೈಗೀಷವ್ಯರು ಉತ್ತರವನ್ನು ನೀಡುತ್ತಿರಲು, ತನ್ನ ವಿಚಾರದ ನಡುವೆ ಬಾಯಿ ಹಾಕಿ ಉಚ್ಚಕಂಠದಿಂದ ಉತ್ತರವನ್ನು ನೀಡಿದ ಈ ವ್ಯಕ್ತಿಯು ಯಾರು ಎಂದು ಶಂಕರನನ್ನು ಕುರಿತು ಕೇಳಿದರು.

ತಚ್ಛ್ರುತ್ವಾ ನಿರ್ಗತೋ ಧೀಮಾನಾಶ್ರಮಂ ಸ್ವಂ ಮಹಾಮುನಿಃ ।
ಸ್ಥಾನಾತ್ ಸ್ವರ್ಗಗಣೇ ವಿದ್ವಾನ್ ಯೋಗೈಶ್ವರ್ಯಸಮನ್ವಿತಃ ॥೪೨॥

ಈ ಪಾರ್ವತಿಯ ಮಾತನ್ನು ಕೇಳಿಸಿಕೊಂಡು ಧೀಮಂತನಾದ ಮಹಾಮುನಿಯು ಆ ಆಶ್ರಮದಿಂದ ಹೊರಟನು. ಯೋಗೈಶ್ವರ್ಯಸಮನ್ವಿತನಾಗಿ ಸ್ವರ್ಗಸ್ಥಾನವನ್ನು ಏರಿದನು.

ತತಃ ಪ್ರಹಸ್ಯ ಭಗವಾನ್ ಸರ್ವಪಾಪಹರೋ ಹರಃ ।
ಪ್ರಾಹ ದೇವೀಂ ಪ್ರಶಾಂತಾತ್ಮಾ ಜೈಗೀಷವ್ಯೋ ಮಹಾಮುನಿಃ ॥೪೩॥

ಬಳಿಕ ಪೂಜ್ಯನಾದ, ಸರ್ವಪಾಪಗಳನ್ನು ಪರಿಹರಿಸುವ ಹರನು ನಸುನಕ್ಕು ಪಾರ್ವತಿಯನ್ನು ಕುರಿತು ಹೇಳಿದನು- ಉಚ್ಚಕಂಠದಿಂದ ನಡುವೆ ಮಾತನಾಡಿದ ವ್ಯಕ್ತಿಯು ಮಹಾಮುನಿಯಾದ, ಪ್ರಶಾಂತಾತ್ಮನಾದ ಜೈಗೀಷವ್ಯನು ಎಂದು.

ಭಕ್ತೋ ಮಮ ಸಖಾ ಚೈವ ಶಿಷ್ಯಶ್ಚಾತ್ರ ಮಹಾಮುನಿಃ ।
ಜೈಗೀಷವ್ಯ ಇತಿ ಖ್ಯಾತಃ ಪ್ರೋಕ್ತ್ವಾऽಸೌ ನಿರ್ಗತಃ ಶುಭೇ ॥೪೪॥

ಪಾರ್ವತಿಯೇ, ಇವನು ನನ್ನ ಭಕ್ತನಾಗಿದ್ದಾನೆ. ನನ್ನ ಸ್ನೇಹಿತನಾಗಿದ್ದಾನೆ. ನನ್ನ ಶಿಷ್ಯನೂ ಆಗಿದ್ದಾನೆ. ವೇದಾಂತದ ಸಮಯದಲ್ಲಿ ನಾನೇ ಇವನಿಗೆ

ಸರ್ವೋತ್ತಮನಾದವನು ಭಗವಂತ ಎಂದು ಉಪದೇಶಿಸಿದ್ದೇನೆ. ಆದ್ದರಿಂದ ಅಸುರ ಜನ ಮೋಹಕ್ಕೋಸ್ಕರ ಹೇಳಿದ ಈ ನನ್ನ ಕಥೆಯನ್ನು ಅವನು ಹೇಗೆ ತಾನೆ ಸಹಿಸುತ್ತಾನೆ? ಆದ್ದರಿಂದ ನಡುವೆ ಬಾಯಿಹಾಕಿ ಜೈಗೀಷವ್ಯ ಎಂಬ ಮುನಿಯು ನನ್ನ ಅಸುರಜನ ಮೋಹಕ್ಕೋಸ್ಕರ ಹೇಳಿದ ಮಾತನ್ನು ನಿರಾಕರಿಸಿ ಇಲ್ಲಿಂದ ಹೊರಟಿದ್ದಾನೆ.

ತಚ್ಛ್ರುತ್ವಾ ಸಾऽಥ ಸಂಕ್ರುದ್ಧಾ ನ ನ್ಯಾಯ್ಯಂ ತೇನ ವೈ ಕೃತಮ್ ।
ವಿಕೃತಾऽಹಂ ತ್ವಯಾ ದೇವ ಮುನಿನಾ ಚ ತಥಾಕೃತಾ ॥೪೫॥

ರುದ್ರದೇವರ ಈ ಮಾತನ್ನು ಕೇಳಿಸಿಕೊಂಡು ಪಾರ್ವತಿಯು ಹೇಳುತ್ತಾಳೆ- ಇದು ನ್ಯಾಯವಲ್ಲ. ಜೈಗೀಷವ್ಯ ಮುನಿಯು ಹೀಗೆ ಮಾಡಿದ್ದು ಧರ್ಮಸಮ್ಮತವಲ್ಲ. ನನ್ನ ಮಾತನ್ನು ನೀನೂ ಮುನಿ ಇಬ್ಬರೂ ಸೇರಿಕೊಂಡು ವ್ಯರ್ಥ ಮಾಡಿರುವಿರಿ.

ಅತಜ್ಞಾ ದಯ ದೇವೇಶ ಮಧ್ಯೇ ಪ್ರಾಪ್ತಂ ನ ತಚ್ಛ್ರುತಮ್ ।
ತಚ್ಛ್ರುತ್ವಾ ಭಗವಾನಾಹ ಮಹಾದೇವಃ ಪಿನಾಕಧೃತ್ ॥೪೬॥

ಅದಿರಲಿ, ನಮ್ಮ ಮಾತಿನ ನಡುವೆ ಅಡ್ಡಬಂದ ಆ ಮುನಿಯ ಮಾತು ನನಗೆ ಸರಿಯಾಗಿ ಕೇಳಿಸಲಿಲ್ಲ. ಅದನ್ನು ವಿವರಿಸಿ, ಅವನ ಅಭಿಪ್ರಾಯವನ್ನೇ ತಿಳಿಸಿ ಎಂದು ಕೇಳಿದಳು. ಪಿನಾಕಧಾರಿಯಾದ ಮಹಾದೇವನು ಪಾರ್ವತಿಗೆ ಉತ್ತರಿಸಿದನು.

ನಿರಪೇಕ್ಷೋ ಮುನಿರ್ಯೋಗೀ ಮಾಮುಪಾಶ್ರಿತ್ಯ ಸಂಸ್ಥಿತಃ ।
ನಿರ್ದ್ವಂದ್ವಃ ಸತತಂ ಧೀಮಾನ್ ಸಮರೂಪಸ್ವಭಾವಧೃತ್ ॥೪೭॥

ದೇವಿ, ಜೈಗೀಷವ್ಯ ಮುನಿಯು ಆಸೆಗಳನ್ನೆಲ್ಲ ಜಯಿಸಿದ್ದಾನೆ. ನನ್ನನ್ನೇ ಮೊರೆ ಹೊಕ್ಕಿದವನು. ದ್ವಂದ್ವಗಳನ್ನು ನೀಗಿದವನು. ಯಾವಾಗಲೂ ನಿಶ್ಚಲವಾದ ಒಂದೇ ಸ್ವಭಾವದಲ್ಲಿ ನೆಲೆಗೊಂಡವನು.

ತಸ್ಮಾತ್ ಕ್ಷಮಸ್ವ ತಂ ದೇವಿ ರಕ್ಷಿತವ್ಯಸ್ತ್ವಯಾ ಚ ಸಃ ॥೪೮॥

ಆದ್ದರಿಂದ ಅವನ ಮಾತನ್ನು ಮನ್ನಿಸಿ ಅವನನ್ನು ರಕ್ಷಿಸಬೇಕು ಎಂದು ಹೇಳಿದನು.

ಇತ್ಯುಕ್ತಾ ಪ್ರಾಹ ಸಾ ದೇವೀ ಮುನೇಸ್ತಸ್ಯ ಮಹಾತ್ಮನಃ ।
ನಿರಾಶತ್ವಮಹಂ ದ್ರಷ್ಟುಮಿಚ್ಛಾಮ್ಯಂತಕನಾಶನ ॥೪೯॥

ಈ ರೀತಿಯಾಗಿ ಹೇಳಿದ ಬಳಿಕ ಪಾರ್ವತಿಯು ನಾಥನೇ, ಹಾಗಿದ್ದರೆ ಮಹರ್ಷಿಯ ನಿರಾಶಿತ್ವವನ್ನು ನಾನೇ ಪರೀಕ್ಷಿಸಿ ತಿಳಿಯಬೇಕೆಂದುಕೊಂಡಿದ್ದೇನೆ ಎಂದು ಹೇಳಿದಳು.

ತಥೇತಿ ಚೋಕ್ತ್ವಾ ತಾಂ ದೇವೋ ವೃಷಮಾರುಹ್ಯ ಸತ್ವರಮ್ ।
ದೇವಗಂಧರ್ವಸಂಘೈಶ್ಚ ಸ್ತೂಯಮಾನೋ ಜಗತ್ಪತಿಃ ॥೫೦॥

ರುದ್ರದೇವರು ಸರಿ, ಅದರಂತೆಯೇ ಆಗಲಿ ಎಂದು ಹೇಳಿದರು. ಒಡನೆಯೇ ವೃಷಭವನ್ನೇರಿ, ದೇವ-ಗಂಧರ್ವಾದಿಗಳಿಂದ ಸ್ತುತಿಸಲ್ಪಟ್ಟ ಮಹಾರುದ್ರನು ಜೈಗೀಷವ್ಯರ ಬಳಿ ಆಗಮಿಸಿದನು.

ಅಜರಾಮರಶುದ್ಧಾತ್ಮಾ ಯತ್ರಾಸ್ತೇ ಸ ಮಹಾಮುನಿಃ ।
ಇತಸ್ತತಃ ಸಮಾಹೃತ್ಯ ವೀರಸಂಘೈರ್ಮಹಾಯಶಾಃ ॥೫೧॥

ನಾರಾಯಣನಲ್ಲಿಯೇ ಮನಸ್ಸನ್ನಿಟ್ಟು ಶುದ್ಧಾತ್ಮನಾಗಿರುವ, ಮಹಾಕೀರ್ತಿಸಂಪನ್ನನಾದ, ಜ್ಞಾನಿಗಳ ಸಂಗದಲ್ಲಿಯೇ ಸಂಚರಿಸುವ ಆ ಜೈಗೀಷವ್ಯ ಮುನಿಯು ದೇಹದ ಸ್ಥಿತಿಗಾಗಿ ಆಚೆ-ಈಚೆ ಓಡಾಡುತ್ತಿದ್ದನು.

ದೇಹಪ್ರಾವರಣಾರ್ಥಂ ವೈ ಸಂಸರನ್ ಸ ತದಾ ಮುನಿಃ ।
ಪ್ರತ್ಯುದ್ಗಮ್ಯ ಮಹಾದೇವಂ ಯಥಾರ್ಹಂ ಪ್ರತಿಪೂಜ್ಯ ಚ ।
ಪುನಃ ಸ ಪೂರ್ವವತ್ ಕಥಾಂ ಸೂಚ್ಯಾ ಸೂತ್ರೇಣ ಸೂಚಯನ್ ॥೫೨॥

ಮಹಾದೇವನನ್ನು ಕಂಡ ಕೂಡಲೇ ಎದ್ದು ನಿಂತು, ಯಥೋಚಿತವಾಗಿ ಅವನನ್ನು ಎದುರುಗೊಂಡು ಸತ್ಕರಿಸಿ, ಹಿಂದಿನ ಅಭಿಪ್ರಾಯವನ್ನೇ ತಿಳಿಸುವಂತೆ ಒಂದು ಸೂಚಿ, ಒಂದು ದಾರವನ್ನು ತಂದು ಚಿಂದಿಯ ಬಟ್ಟೆಗಳನ್ನು ಹೊಲಿಯುತ್ತಾ ಕುಳಿತನು.

ತಮಾಹ ಭಗವಾನ್ ಶಂಭುಃ ಕಿಂ ಪ್ರದಾಸ್ಯಾಮಿ ತೇ ಮುನೇ ।
ವೃಣೀಷ್ವ ಮತ್ತಃ ಸರ್ವಂ ತ್ವಂ ಜೈಗೀಷವ್ಯ ಯದೀಚ್ಛಸಿ ॥೫೩॥

ಆ ಪ್ರಸಂಗದಲ್ಲಿ ರುದ್ರನು ಜೈಗೀಷವ್ಯನನ್ನು ಕುರಿತು 'ಮಹರ್ಷಿಯೇ, ನಾನು ನಿನಗೆ ಏನನ್ನು ದಯಪಾಲಿಸಲಿ? ಬೇಕಾದ್ದನ್ನೆಲ್ಲ ನೀಡುತ್ತೇನೆ, ಕೇಳಿಕೊ' ಎಂದನು.

ನಾವಲೋಕಯಮಾನಸ್ತು ದೇವದೇವಂ ಮಹಾಮುನಿಃ ।
ಅನವಾಪ್ತಂ ನ ಪಶ್ಯಾಮಿ ತ್ವತ್ತೋ ಗೋವೃಷಭಧ್ವಜ ।
ಕೃತಾರ್ಥಃ ಪರಿಪೂರ್ಣೋSಹಂ ಯತ್ ತೇ ಕಾರ್ಯಂ ತು ಗಮ್ಯತಾಮ್॥

ಆದರೆ ಮಹಾಮುನಿಯು ದೇವನೇ, ನಿನ್ನಿಂದ ದುರ್ಲಭವಾದುದೊಂದೂ ಇಲ್ಲವೆಂದು ನಾನು ಬಲ್ಲೆ. ಆದರೆ ಈಗ ನಾನು ಕೃತಾರ್ಥನು. ನಾನು ಹೊಂದದೆ ಇರುವುದು ಯಾವುದೂ ಇಲ್ಲ. ಆದ್ದರಿಂದ ನೀನು ಹೋಗಬಹುದು ಎಂದು ಹೇಳಿದನು.

ಪ್ರಹಸಂಸ್ತು ಪುನಃ ಶರ್ವೋ ವೃಣೀಷ್ವೇತಿ ತಮಬ್ರವೀತ್ ।
ಅವಶ್ಯಂ ಹಿ ವರೋ ಮತ್ತಃ ಶ್ರಾವ್ಯಂ ವರಮನುತ್ತಮಮ್ ॥೫೫॥

ಮುನೀಂದ್ರನೇ, ನೀನು ಅವಶ್ಯವಾಗಿ ನನ್ನಿಂದ ವರವನ್ನು ಕೇಳಬೇಕು. ಅನುತ್ತಮವಾದ ವರಗಳನ್ನು ಕೊಡಲು ಸಿದ್ಧನಾಗಿದ್ದೇನೆ ಎಂದು ಹೇಳಿದನು.

ಜೈಗೀಷವ್ಯಸ್ತಮಾಹೇದಂ ಶ್ರೋತವ್ಯಂ ಚ ತ್ವಯಾ ಮಮ ।
ಸೂಚೀಮನು ಮಹದೇವ ಸೂತ್ರಂ ಸಮನುಗಚ್ಛತಃ ॥೫೬॥

ದೇವನೇ, ನಾನು ಈ ಸೂಚಿಯೊಳಗಿನ ನೂಲನ್ನೇ ಹಿಂಬಾಲಿಸುತ್ತಿದ್ದೇನೆ. ನನ್ನ ಮಾತನ್ನು ಕೇಳಿಸಿಕೊ ಎಂದು ಹೇಳಿದನು.

ತತಃ ಪ್ರಹಸ್ಯ ಭಗವಾನ್ ಗೌರೀಮಾಲೋಕ್ಯ ಶಂಕರಃ ।
ಸ್ವಸ್ಥಾನಂ ಪ್ರಯಯೌ ಹೃಷ್ಟಃ ಸರ್ವದೇವನಮಸ್ಕೃತಃ ॥೫೭॥

ಅವನ ಮಾತನ್ನು ಕೇಳಿ ರುದ್ರದೇವರು ಉಮಾದೇವಿಯನ್ನು ನೋಡುತ್ತಾ ನಸುನಕ್ಕು ಸರ್ವದೇವ ನಮಸ್ಕೃತನಾದ ಶಂಕರನು ತನ್ನ ಸ್ಥಾನಕ್ಕೆ ಹೊರಟು ಹೋದನು.

ಏತತ್ ತೇ ಕಥಿತಂ ರಾಜನ್ ಯಸ್ಮಾತ್ ತ್ವಂ ಪರಿಪೃಚ್ಛಸಿ ।
ನಿರ್ದ್ವಂದ್ವಾ ಯೋಗಿನೋ ನಿತ್ಯಾಃ ಸರ್ವಶಸ್ತೇ ಸ್ವಯಂಭುವಃ ॥೫೮॥

ರಾಜನೇ, ಯೋಗಿಗಳಾದವರು ತಮ್ಮ ಸಂಕಲ್ಪಾನುಸಾರವಾಗಿ ಸನ್ಮಾರ್ಗದಲ್ಲಿ ಹೋಗುತ್ತಾರೆ. ಇನ್ನೊಬ್ಬರನ್ನು ಸಂತೋಷ ಪಡಿಸಲು ಅನಿವಾರ್ಯವಾಗಿಯೂ ದುರ್ಮಾರ್ಗದಲ್ಲಿ ಸಂಚರಿಸರು ಎನ್ನಲು ಇದೇ ದೊಡ್ಡ ದೃಷ್ಟಾಂತವಾಗಿದೆ.

ದ್ವಂದ್ವಗಳನ್ನೆಲ್ಲ ಅತಿಕ್ರಮಿಸಿದವರಾಗಿ, ಮನಸ್ಸಿಗೆ ಯೋಗ್ಯವಾಗುವಂತೆ ನಡೆಯುವವರಾಗಿರುತ್ತಾರೆ.

॥ ಇತಿ ಶ್ರೀಮಹಾಭಾರತೇ ಶತಸಹಸ್ರಿಕಾಯಾಂ ಸಂಹಿತಾಯಾಂ ವೈಯಾಸಿಕ್ಯಾಂ ಶಾಂತಿಪರ್ವಣಿ ಮೋಕ್ಷಧರ್ಮೇ ಪಂಚಷಷ್ಟಿತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ಶಾಂತಿಪರ್ವದಲ್ಲಿ ಅರವತ್ತೈದನೆಯ ಅಧ್ಯಾಯ ಮುಗಿಯಿತು.

★ ★ ★ ★ ★

ವಿನಾಶಿನೋ ಹ್ಯಧ್ರುವಜೀವಿತಸ್ಯ
ಕಿಂ ಬಂಧುಭಿರ್ಮಂತ್ರ ಪರಿಗ್ರಹೈಶ್ಚ ।
ವಿಹಾಯಯೋಗಚ್ಛತಿ
ಸರ್ವಮೇವಕ್ಷಣೇನಗತ್ವಾ ನ ನಿವರ್ತತೇಚ ? ॥

ವಿನಾಶಹೊಂದುವ ಸ್ವಭಾವವುಳ್ಳ, ಅನಿತ್ಯವಾದ
ಜೀವನವುಳ್ಳ, ಈ ಜೀವನಿಗೆ ಹೆಂಡತಿ, ಮಕ್ಕಳಿಂದಾಗಲೀ,
ಬಂಧುಗಳಿಂದಾಗಲೀ, ಗೃಹ–ಸಂಪತ್ತು ಮೊದಲಾದವುಗಳ
ಸಂಗ್ರಹದಿಂದಾಗಲೀ ಏನು ಪ್ರಯೋಜನವಿದೆ?
ಇದನ್ನು ಅರಿತು ಸರ್ವಸ್ವವನ್ನೂ ಕ್ಷಣಮಾತ್ರದಲ್ಲಿ
ಪರಿತ್ಯಾಗ ಮಾಡಿ, ಅಧ್ಯಾತ್ಮಮಾರ್ಗವನ್ನು
ಹಿಡಿದು ಯಾರು ಹೊರಡುತ್ತಾರೋ ಅವರು
ಪುನರ್ಜನ್ಮವನ್ನು ಹೊಂದುವುದಿಲ್ಲ.

ISBN: 978-93-88813-32-7